
UNIVERSAL LIBRARY
OU_200758
UNIVERSAL LIBRARY

# ಶ್ರೀ ಗಜಾನನ ಮಹಾರಾಜರು



ಜನ್ಮಸ್ಥಳ :- ಯವತಮಾಳ, ವರ್ಹಾಡ.

ಜನ್ಮದಿನ :- ಶ್ರಾವಣ ವದ್ಯ ಅಷ್ಟಮಿ ಶಕೆ ೧೮೧೪

ರಾತ್ರಿ ೧೧-೫. ೧೫ ಆಗಸ್ಟ ೧೮೯೨.

# ಅನುಕ್ರಮಣಿಕೆ.


| | | ಪುಟ |
|---|---|---|
| ೧ | ಮುನ್ನುಡಿ .... .... | I |
| ೨ | ಶ್ರೀ ನಾಗೇಶ ವಾಸುದೇವ ಗುಣಾಜಿ ಇವರು ಬರೆದ ಪ್ರಸ್ತಾವನೆ | II |
| ೩ | ಶ್ರೀ ರಾಮಚಂದ್ರ ಕೃಷ್ಣ ಕಾಮತ ಇವರು ಬರೆದ ಉಪೋದ್ಘಾತ | XVI |
| ೪ | ಒಂದನೇ ಪ್ರಕರಣ ನಾಥಪಂಥ .... .... | ೧ |
| ೫ | ಎರಡನೇ ಪ್ರಕರಣ ಯೋಗ .... ... | ೧೪ |
| ೬ | ಮೂರನೇ ಪ್ರಕರಣ ಶ್ರೀಗಜಾನನ ಮಹಾರಾಜರ ಚರಿತ್ರ .... | ೬೦ |
| ೭ | ನಾಲ್ಕನೇ ಪ್ರಕರಣ ಮಹತ್ವದ ಸಂವಾದಗಳು .... | ೧೭೨ |
| ೮ | ಐದನೇ ಪ್ರಕರಣ ಶಿಷ್ಯರ ಪರಮಾರ್ಥದೊಳಗಿನ ಅನುಭವಗಳು .... | ೨೪೧ |
| ೧ | ಶ್ರೀ. ಎಸ್. ಎಸ್. ಗಡಕರಿ .... .... | ೨೪೧ |
| ೨ | ,, ಸದಾಶಿವ ಒಂ. ಗರುಡೆ .... .... | ೨೪೮ |
| ೩ | ,, ವಿನಾಯಕ ಶಾ. ಜೋಶಿ ... .... | ೨೫೧ |
| ೪ | ,, ಪ್ರಿ. ಟಿ. ಪಾಟಣಕರ ... .... | ೨೫೨ |
| ೫ | ,, ಭವಾನಿ ಚರಣ ಸಿದ್ಧಾಂತ .... .... | ೨೬೨ |
| ೬ | ,, ಗಣೇಶ ರಾ. ಭಿಡೆ ... .... | ೨೬೫ |
| ೭ | ,, ಮಾಧವರಾವ ವೈದ್ಯ ... .... | ೨೬೭ |
| ೮ | ,, ಡಿ. ಡಿ. ಭಾವೆ .... .... | ೨೬೯ |
| ೯ | ,, ವಿಷ್ಣುಪಂತ ಚಾಫೇಕರ .... .... | ೨೮೩ |
| ೧೦ | ,, ಮಧುಕರ ದಾ. ಚಿಟಣೀಸ .... .... | ೨೮೬ |
| ೧೧ | ,, ಸೌ. ಆನಂದಿಬಾಯಿ ಎಸ್. ಗುಪ್ತೆ ... .... | ೨೯೬ |
| ೧೨ | ರಾವಸಾಹೇಬ ಶಂಕರ ಎಸ್. ಗುಪ್ತೆ .... .... | ೨೯೮ |
| ೧೩ | ಶ್ರೀ. ಪಿ. ಎಲ್. ಇನಾಮದಾರ .... .... | ೩೦೧ |
| ೧೪ | ,, ವಾಮನ ಕೆ. ಮಾಹೆಗಾಂವಕರ ... .... | ೩೦೬ |
| ೧೫ | ,, ವಸಂತ ನಾ. ಶಿರೋಡಕರ .... ... | ೩೧೧ |
| ೧೬ | ,, ಗೋವಿಂದ ಎ. ಏಕಬೋಟೆ .... ... | ೩೧೩ |
| ೧೭ | ,, ಭಾರ್ಗವ ವಾ. ಪರಚುರೆ .. .... | ೩೧೬ |
| ೧೮ | ,, ದತ್ತಾತ್ರಯ ಶಂಕರ ಸಾಕ್ರೀಕರ .... .... | ೩೨೦ |
| ೧೯ | ,, ಭಾವುಸಾಹೇಬ ರಾಜೆ .... .... | ೩೨೧ |
| ೨೦ | ,, ಶಂಕರ ಮು. ಸಂತ ... ... | ೩೨೩ |
| ೨೧ | ,, ಶಂಕರ ತ್ರಿಂ. ನಾಯಗಾಂವಕರ .... ... | ೩೨೬ |
| ೨೨ | ,, ವಿಶ್ವನಾಥ ಗೋಪಾಳ ವೈದ್ಯ .... .... | ೩೩೫ |
| ೨೩ | .. ಪಾಂಡುರಂಗ ಲ. ಭಾಗವತ .... .... | ೩೪೪ |

೨೪ ,, ಬಾಳಕೃಷ್ಣ ವ್ಹಿ. ದೇಶಮುಖ ... ... ೩೪೫
೨೫ ,, ಬಾಳಕೃಷ್ಣ ಮ. ಗಡಕರಿ .... .... ೩೪೬
೨೬ ,, ಕೆ. ಕೆ. ಪ್ರಧಾನ .... .... ೩೪೮
೨೭ ,, ಕಾಶೀನಾಥ ರಾಮಚಂದ್ರ ಗಾಂಡೇಕರ .... .... ೩೫೨
೨೮ ಸೌ. ಜಾನಕಿಬಾಯಿ ಸ. ಪ್ರಧಾನ .... .... ೩೬೪
೨೯ ಶ್ರೀ. ಶಂಕರ ಕೇಶವ ಫಣಸಳಕರ .... .... ೩೬೬
೩೦ ,, ದತ್ತಾತ್ರೇಯ ಕೇಶವ ಭಟ .... .... ೩೬೮
೩೧ ,, ಕಾಶೀನಾಥ ಭಿ. ಸೂರ್ಯವಂಶಿ ... .... ೩೭೨
೩೨ ,, ದಗಡು ಧಾಕು ಸೋನಾರ .... .... ೩೭೭
೩೩ ,, ಚೌಕಕರ .... .... .... ೩೭೯
೩೪ ,, ಜಿ. ಡಿ. ಮಾಂಡವಗಣೆ ಮತ್ತು ಅವರ ಪತ್ನಿ
ಸೌ. ಗೋದಾವರಿಬಾಯಿ .... .... ೩೮೧
೩೫ ,, ಕೃ. ಗೊ. ಕುರ್ಡುಕರ ( ವೈದ್ಯ ) .... .... ೩೮೩
೩೬ ,, ಹಣಮಂತ ಪಿ. ಖುಮಜೀ ... .... ೩೯೧
೩೭ ,, ಗಣೇಶ ರಂ. ಆಂಜೇಕರ .... .... ೩೯೨
೩೮ ,, ಕೃಷ್ಣರಾವ ದಾ. ಪಾತಾರೆ ಮತ್ತು ಅವರ ಪತ್ನಿ
ಸೌ. ರಾಧಾಬಾಯಿ .... ... ೩೯೩
೩೯ ಶ್ರೀಮತಿ ಆನಂದಿಬಾಯಿ ಠಕಾರ ... .... ೩೯೫
೪೦ ಶ್ರೀ. ಶಂಕರರಾವ ದಪ್ತರದಾರ .... .... ೩೯೬
೪೧ ,, ಮಂಗೇಶರಾವ ಉಳ್ಳಾಲ .... .... ೩೯೯
೪೨ ,, ಪಿ. ಎಸ್. ನಾಬರ ವಕೀಲ ... .... ೪೦೫
೪೩ ,, ರಾಮಚಂದ್ರ ಶಿ. ಸಹಸ್ರಬುದ್ಧೆ .... .... ೪೦೬
೪೪ ,, ದತ್ತಾತ್ರಯ ಎಸ್. ಮೋಹಿತೆ ... .... ೪೧೨
೪೫ ಸೌ. ಸುಂದರಾಬಾಯಿ ಭಾಸ್ಕರ ಅಮ್ಮೆಂಬಳ .... ೪೨೧
೪೬ ಶ್ರೀ. ಶಿವಶಂಕರ ದಾ. ಪಾತಾರೆ .... .... ೪೨೮
೪೭ ,, ವ್ಹಿ. ಎಸ್. ವೈದ್ಯ (ಡೆಂಟಿಸ್ಟ) .... .... ,,
೪೮ ,, ಬಾ. ಬಾ. ವೈದ್ಯ .... .... ೪೩೨
೪೯ ಸೌ. ಶಾಂತಾ ಶಂಕರ ಅಭಂಗ .... .... ೪೩೫

# ಮುನ್ನುಡಿ

ಶ್ರೀ ಗಜಾನನ ಮಹಾರಾಜರ ಚರಿತ್ರವಾಗಿರುವ ಈ ಗ್ರಂಥವನ್ನು ಮೂಲದಲ್ಲಿ ಶ್ರೀಮಾನ್ ಸಿರೋಡಕರ ಎಂಬವರು ಇಂಗ್ಲಿಷ ಭಾಷೆಯಲ್ಲಿ ಬರೆದಿದ್ದು, ಮುಂದೆ ಅದು ಮರಾಠಿ, ಗುಜರಾಥಿ ಮತ್ತು ಹಿಂದಿ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿತು. ಅದೀಗ ಕನ್ನಡ ಭಾಷೆಯಲ್ಲಿಯೂ ಭಾಷಾಂತರಿಸಲ್ಪಡಬೇಕೆಂದು ಮೊದಲು ಈ ವಿಜಾಪುರದಲ್ಲಿದ್ದು ಪ್ರಕೃತದಲ್ಲಿ ಮುಂಬಯಿಯಲ್ಲಿರುವ ಶ್ರೀಮಾನ ಮಂಗೇಶರಾವ ಉಕ್ಕಾಲಿ ಇವರು ಸಂಕಲ್ಪಿಸಿದರು. ಇವರು ಶ್ರೀ ಮಹಾರಾಜರಿಗೆ ಭೆಟ್ಟಿಯಾದ ಪ್ರಸಂಗ, ಅನುಗ್ರಹ ಮೊದಲಾದ ವಿವರಗಳು ಈ ಗ್ರಂಥದಲ್ಲಿ ಬಂದಿರುತ್ತವೆ. ಅವರು ಲೋಕೋಪಕಾರಕ್ಕೆ ಅನುವಾಗಿರುವ ತಮ್ಮ ಸಂಕಲ್ಪವನ್ನು ನನಗೆ ತಿಳಿಸಿ ಈ ಭಾಷಾಂತರ ಕಾರ್ಯವನ್ನು ಮಾಡಲಿಕ್ಕೆ ನನಗೆ ಪ್ರೇರೇಪಿಸಿದರು. ನಾನಾದರೂ ಮಹಾತ್ಮರ ಸೇವೆ ವ ಕನ್ನಡಿಗರ ಅಲ್ಪಸ್ವಲ್ಪ ಸೇವೆಯೂ ಪ್ರಾಪ್ತವಾದ್ದಕ್ಕೆ ಕುತೂಹಲ ಪಟ್ಟು ಬಹಳ ಉತ್ಸಾಹದಿಂದ ಈ ಕಾರ್ಯವನ್ನು ಪೂರೈಸಿದೆನು. ಈ ಪ್ರಕಾರ ಮಹಾತ್ಮರ ಸೇವೆ ಘಟಿಸಿದ್ದಕ್ಕೆ ಶ್ರೀ. ಮಂಗೇಶರಾಯರ ಆಭಾರವನ್ನು ಮನ್ನಿಸುವೆನು.

ಮೇಲೆ ಹೇಳಿದಂತೆ ಮಹಾರಾಜರ ಚರಿತ್ರ ಗ್ರಂಥಗಳನ್ನು ಛಾಪಿಸುವ ವ್ಯವಸ್ಥೆಯನ್ನು ಮಾಡಲಿಕ್ಕೆ ಅವರ ಪ್ರೇಮಳ ಭಕ್ತರು ಕೆಲವರು ಕೂಡಿ "ಸೋಹಂ ಗ್ರಂಥ ಪ್ರಸಾರಕ ಮಂಡಳಿ" ಎಂಬುದನ್ನು ಸ್ಥಾಪಿಸಿದರು. ಅದರಲ್ಲಿ ಶ್ರೀಮಾನ್ ಮಂಗೇಶರಾಯರು ಮೆಂಬರರಿದ್ದು ಅವರ ಯತ್ನಗಳಿಂದಲೇ ಇದರ ಮುದ್ರಣ ಕಾರ್ಯವು ನೆರವೇರಿತು.

ಇಲ್ಲಿಯ ರಾಧಾ ಪ್ರಿಂಟಿಂಗ ಛಾಪಖಾನೆಯ ಮ್ಯಾನೇಜರರಾದ ಶ್ರೀ. ಕೇಶವರಾವ ನಾಯಕರು ಇದರ ಮುದ್ರಣ ಪ್ರೂಫ ವಗೈರೆ ತಪಾಸಿಸುವ ಎಲ್ಲ ಕಾರ್ಯಗಳ ಜವಾಬದಾರಿಯನ್ನು ತಾವೇ ವಹಿಸಿಕೊಂಡು ಮುದ್ರಣದ ಕಾರ್ಯವನ್ನು ಜರುಗಿಸಿದ್ದಕ್ಕೆ ಅವರ ಆಭಾರವನ್ನು ಮನ್ನಿಸುವೆನು

ವಿಜಾಪುರ

ತಾ. ೨೧—೨—೪೯.

ಶಿವರಾಮ ಲಕ್ಷ್ಮಣ ಚಂದ್ರಗಿರಿ

# ಪ್ರಸ್ತಾವನೆ

" ನಾಥಪಂಥಕಾ ಬಾಣಾಯಾರೋಂ ಸಬಮೇನಿಯಾಸೆ ನ್ಯಾರಾ ಹೈ "

( ಪ್ರಿಯ ಬಂಧುಗಳೇ, ನಾಥಪಂಥದ ಭಾವವು ಜಗತ್ತಿನೊಳಗಿನ ಎಲ್ಲಾ ಮತಗಳಿಗಿಂತ ಬೇರೆ ಇರುವದು. )

## ನಾಥ ಸಾಂಪ್ರದಾಯವು

ಈ ಲೇಖದ ಮುಖ್ಯ ವಿಷಯವಾಗಿರುವ ಶ್ರೀಗಜಾನನ ಮಹಾರಾಜರು ನಾಥಸಾಂಪ್ರದಾಯದ ಅನುಯಾಯಿಗಳಿರುತ್ತಾರೆ. ಈ ಸಾಂಪ್ರದಾಯದ ಪೂರ್ವಚರಿತ್ರವೂ ಅನಂತರದ ಇತಿಹಾಸವೂ ಗೂಢವಾಗಿರುತ್ತದೆ; ಆದ್ದರಿಂದ ಇದಕ್ಕೆ ಸೇರಿದ ಮುಖ್ಯ ಮುಖ್ಯ ಮಹಾತ್ಮರ ವಿಷಯ ಸಂಗತಿಗಳೇನೂ ಗೊತ್ತಾಗಲಿಲ್ಲ. ಆದರೂ ಅಲ್ಲಲ್ಲಿ ಈ ಸಾಂಪ್ರದಾಯದ ಸಂಬಂಧ ಕೆಲವೇ ಸಂಗತಿಗಳು ತಿಳಿದು ಬಂದು, ಇವರ ಮಹತ್ವ, ಗೌರವ, ಪ್ರಯೋಜನಾದಿಗಳು ಲಕ್ಷಕ್ಕೆ ಬರುತ್ತವೆ. ಒಂದು ಉದಾಹರಣೆಯೆಂದರೆ:— ಮಹಾರಾಷ್ಟ್ರದ ಮುಖ್ಯ ಸಂತರೂ ಅವತಾರಿಕರೂ ಅನಿಸಿಕೊಳ್ಳುವ ಜ್ಞಾನದೇವರು ಭಗವದ್ಗೀತೆಯ ಮೇಲೆ ಭಾವಾರ್ಥ ದೀಪಿಕೆ ಎಂಬ ಟೀಕೆಯನ್ನು ಬರೆದದ್ದಲ್ಲದೆ, ಅಮೃತಾನುಭವವೆಂಬ ಸ್ವತಂತ್ರ ಉತ್ತಮ ಪ್ರಕಾರದ ತತ್ತ್ವಜ್ಞಾನ ಬೋಧಕ ಗ್ರಂಥವನ್ನು ಬರೆದಿರುವರು. ಇವರು ಈ ನಾಥಸಾಂಪ್ರದಾಯದ ಉತ್ಕೃಷ್ಟವಾದ ಪಕ್ವಫಲವಾಗಿದ್ದಾರೆ. ಅವರು ತಾವು ಬರೆದ ಜ್ಞಾನೇಶ್ವರಿ ಅಥವಾ ಭಾವಾರ್ಥ ದೀಪಿಕೆಯೆಂಬ ಗ್ರಂಥದ ಪೀಠಿಕೆಯಲ್ಲಿ ಈ ಸಾಂಪ್ರದಾಯದ ಮೂಲ ಮತ್ತು ಪೂರ್ವ ಇತಿಹಾಸವನ್ನು ಹೀಗೆ ಕೊಟ್ಟಿರುತ್ತಾರೆ: –

" ಒಂದಾನೊಂದು ಕಾಲದಲ್ಲಿ ( ಯಾವಾಗ್ಗೆ ಅಂತ ನನಗೆ ನಿಶ್ಚಯವಾಗಿ ಗೊತ್ತಿಲ್ಲ) ಆದಿನಾಥ ಅಥವಾ ಶ್ರೀಶಂಕರರು ತಮ್ಮ ಪತ್ನಿಯಾದ ಶಕ್ತಿ ಅಥವಾ ಉಮಾದೇವಿಯವರಿಗೆ ಕ್ಷೀರಸಾಗರದಲ್ಲಿರುವಾಗ ತತ್ತ್ವಜ್ಞಾನವನ್ನು ಬೋಧಿಸುತ್ತಿದ್ದರು. ಆಗ ಅಲ್ಲೇ ಒಂದು ದೊಡ್ಡ ಮೀನಿನ ಹೊಟ್ಟೆಯೊಳಗೆ ಅಡಗಿಕೊಂಡು ಕೂತಿದ್ದ ಮತ್ಸ್ಯೇಂದ್ರನಾಥರು ಈ ಬೋಧೆಯನ್ನು ಕೇಳಿಕೊಂಡರು. ಆ ಮೇಲೆ ಮತ್ಸ್ಯೇಂದ್ರನಾಥರು ನಾಶಿಕದಿಂದ ಇಪ್ಪತ್ತೈದು ಮೈಲು ದೂರ ಇರುವ ಸಪ್ತಶೃಂಗಿ ಪರ್ವತದ ಮೇಲೆ ಚೌರಂಗಿನಾಥನೆಂಬ ಅವಯವ ಭಂಗವಾಗಿದ್ದ ಪುರುಷನಿಗೆ ಈ ತತ್ವಜ್ಞಾನವನ್ನು ಉಪದೇಶಿಸಿದರು; ಆದರಿಂದ ಆತನು ಅವಯವ ಪೂರ್ಣನಾದನು. ಆ ಮೇಲೆ ಅವರು ತಮ್ಮ ಆನಂದಾನುಭವವನ್ನು ಪಡೆಯುವಗೋಸ್ಕರ ಈ ತತ್ವಜ್ಞಾನದ ಗೂಢವನ್ನು ಈ ಸಾಂಪ್ರದಾಯದಲ್ಲಿ ಅತಿ ಮಹಾನ್ ಪುರುಷನೆನಿಸಲ್ಪಟ್ಟ ಗೋರಕ್ಷನಾಥನಿಗೆ ಉಪದೇಶಿಸಿದರು. ಆತನಿಂದ ಆ ಗುಪ್ತಜ್ಞಾನವು ಗಹಿನಿನಾಥನಿಗೆ ಪ್ರಾಪ್ತವಾಗಿ ಈತನಿಂದ ನಿವೃತ್ತಿನಾಥನು ಪಡೆದು ಆತನಿಂದ ಪ್ರಸಿದ್ಧ ಪುರುಷರಾದ ಜ್ಞಾನದೇವರು ಹೊಂದಿದರು."

## ವಾರಕರಿ ಸಾಂಪ್ರದಾಯವು

ಜ್ಞಾನದೇವರ ಕಾಲದಲ್ಲಿ (ಇಸವಿ ೧೨೭೧ ರಿಂದ ೧೨೯೬ ವರೆಗೆ) ಪಂಢರಪುರದ ವಾರಕರಿ ಸಾಂಪ್ರದಾಯವೆಂಬದು ಪ್ರಸಿದ್ಧಿಗೆ ಬಂದಿತ್ತು. ಜ್ಞಾನದೇವರು ನಾಮದೇವರ ಕೂಡ ದೇಶದಲ್ಲೆಲ್ಲ ಸಂಚಾರ ಮಾಡಿ ಭಾಗವತ ಧರ್ಮವೆನಿಸುವ ಈ ವಾರಕರಿ ಸಾಂಪ್ರದಾಯವನ್ನು ಇಷ್ಟು ವಿಶೇಷ ರೀತಿಯಿಂದ ಪ್ರಚಾರ ಮಾಡಿದರಲ್ಲ, ಅವರು ಈ ವಾರಕರಿ ಸಾಂಪ್ರದಾಯದ ಸ್ಥಾಪಕರೇ ಎಂದು ಸರ್ವರೂ ತಿಳಿಯುತ್ತಿದ್ದರು. ನಾಮದೇವರ ನಂತರ ಏಕನಾಥ ತುಕಾರಾಮ ಇವರು ಈ ಭಾಗವತ ಧರ್ಮವನ್ನೇ ಮತ್ತಷ್ಟು ಪ್ರಸಿದ್ಧಿಗೆ ತಂದರು. ಹೀಗೆ ಈ ನಾಲ್ಕು ಮಂದಿ ಸಂತ ಕವಿಗಳು ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ ಇವರು ಈ ಸಾಂಪ್ರದಾಯದ ಮುಖ್ಯ ಆಧಾರಸ್ತಂಭಗಳಾದರು. ತುಕಾರಾಮನ ಒಂದು ಅಭಂಗದಲ್ಲಿ ಸುಂದರವಾಗಿ ಹೇಳಿದಂತೆ:— ಜ್ಞಾನದೇವನು ಈ ದೇವಾಲಯದ ತಳಹದಿ ಹಾಕಿದನು, ನಾಮದೇವನು ಇಮಾರತ ಏರಿಸಿದನು, ಏಕನಾಥನು ಧ್ವಜವನ್ನು ಕಟ್ಟಿದನು, ತುಕಾರಾಮನು ಕಲಶವನ್ನು ಕೂಡ್ರಿಸಿದನು. ಈ ನಾಲ್ಕು ಮಹಾನ ಸಂತರ ಯತ್ನ ಮೂಲಕ ಭಾಗವತ ಧರ್ಮದ ತತ್ವಗಳು ಇಡೀ ಮಹಾರಾಷ್ಟ್ರದಲ್ಲೆಲ್ಲ ತಳವೂರಿದವು ಮತ್ತು ಆ ಸಾಂಪ್ರದಾಯಸ್ಥರು ಈಗ ಲಕ್ಷಗಟ್ಟಲೆ ಆಗಿದ್ದಾರೆ. ಆದರೆ ಈ ವಾರಕರಿ ಸಾಂಪ್ರದಾಯಕ್ಕೆ ಬಂದ ಶಕ್ತಿಯು ನಾಥಸಾಂಪ್ರದಾಯದಿಂದ ಬಂದಿತ್ತೆಂಬದು ಮರೆಯಬಾರದು. ವಾರಕರಿ ಸಾಂಪ್ರದಾಯದವರು ನಾಥಸಾಂಪ್ರದಾಯದ ಅದ್ವೈತ ಮತ್ತು ಯೋಗ ತತ್ವಗಳನ್ನು ಸಂಪೂರ್ಣವಾಗಿ ಪಡೆದಷ್ಟಲ್ಲದೆ ಅದಕ್ಕೆ ಭಕ್ತಿಯನ್ನು ಸೇರಿಸಿರುತ್ತಾರೆ.

ಆದ್ದರಿಂದ ಜ್ಞಾನದೇವನ ಕಾಲದಿಂದ ಈ ನಾಥಪಂಥವು ಗುಪ್ತಪ್ರಾಯವಾಯಿತು. ವಾರಕರಿ ಸಾಂಪ್ರದಾಯವು ಪ್ರಗಟವಾಗಿ ನಡೆಯುತ್ತಿರುವಾಗ ಮೂಲ ನಾಥಪಂಥವು ಗುಪ್ತರೀತಿಯಿಂದ ವರ್ತಿಸುತ್ತಿತ್ತು. ಕೆಲವು ಪ್ರಮಾಣಗಳಿಂದ ಜ್ಞಾನದೇವನ ನಾಥ ಪಂಥದ ಸಾಂಪ್ರದಾಯಿಕರು ಯಾರಂದರೆ— ಸತ್ಯಾಮಲನಾಥ, ಗೈಬನಾಥ, ಗುಪ್ತನಾಥ, ಉದ್ಬೋಧನಾಥ, ಕೇಸರಿನಾಥ, ಶಿವದಿನಕೇಸರಿ, ನರಹರಿನಾಥ, ಮಹಿಪತಿನಾಥ ಕಾಶೀನಾಥ, ಲಕ್ಷ್ಮಣನಾಥ ಮೊದಲಾದವರು. ಈ ಪಂಥದ ಅನಂತರದ ಅನುಯಾಯಿಗಳು ಯಾರೆಂಬದು ತಿಳಿಯುವದಿಲ್ಲ; ಆದ್ದರಿಂದ ಆ ಸಾಂಪ್ರದಾಯಿಕರನ್ನು ತಪ್ಪದೆ ಶ್ರೀಗಜಾನನ ಮಹಾರಾಜರ ತನಕ ನಾವು ಕಂಡುಹಿಡಿಯಲಾರೆವು.

## ನಾಥಪಂಥದಲ್ಲಿ ಶ್ರೀಗಜಾನನ ಮಹಾರಾಜರ ಸ್ಥಾನವು

ಶ್ರೀಗಜಾನನ ಮಹಾರಾಜರ ಗುರು ಶ್ರೀಪರಮಾನಂದರು ಮತ್ತು ಇವರ ಗುರುಗಳು ಶ್ರೀನಾರಾಯಣ ಸರಸ್ವತಿ. ನಾರಾಯಣಸರಸ್ವತಿಯವರು ಸಮಾಧಿಸ್ಥರಾಗುವಾಗ್ಗೆ ತಮ್ಮ ಶಿಷ್ಯ ಪರಮಾನಂದರನ್ನು ಕರೆದು ತಮ್ಮ ಸಾಂಪ್ರದಾಯ

ವನ್ನು ನಡಿಸಲಿಕ್ಕೂ ನಾಥಪಂಥದ ತತ್ವಗಳನ್ನು ಜನರಿಗೆ ಬೋಧಿಸಲಿಕ್ಕೂ ತಮ್ಮ ಹೆಸರಾದ ನಾರಾಯಣಸರಸ್ವತಿ ಎಂಬ ಹೆಸರನ್ನೆ ಧಾರಣೆ ಮಾಡಿ ತಮ್ಮ ಸ್ಥಾನದಲ್ಲಿರಲಿಕ್ಕೆ ಹೇಳಿದರು. ಆದ್ದರಿಂದ ಶ್ರೀಪರಮಾನಂದರಿಗೂ ನಾರಾಯಣ ಸರಸ್ವತಿ ಎಂಬ ಹೆಸರು ಬಂತು. ಮೊದಲಿನ ನಾರಾಯಣ ಸರಸ್ವತಿಯವರ ಗುರುವಿನ ಹೆಸರು ನಮಗೆ ಗೊತ್ತಾಗಲಿಲ್ಲ. ಆದ್ದರಿಂದ ಶ್ರೀಗಜಾನನ ಮಹಾರಾಜರ ದೀಕ್ಷಾ ವಂಶಸ್ಥರಲ್ಲಿ ಮೇಲೆ ಹೇಳಿದ ಪೂರ್ವ ಮಹಾತ್ಮರ ಸಂಬಂಧವನ್ನು ನಾವು ತಿಳಿಯಲಾರೆವು. ನಾಥಪಂಥದ ಮತ್ತೊಂದು ಶಾಖೆಯಲ್ಲಿ ಜಾಲಂದರನಾಥ ( ಶ್ರೀ ದತ್ತಾತ್ರೇಯರಿಂದ ದೀಕ್ಷಾ ಪಡೆದಂಥ ಜಲಂದರನಾಥನ ಶಿಷ್ಯ ) ಇವರದು ಮತ್ಸ್ಯೇಂದ್ರನಾಥರ ಶಾಖೆಯಿಂದ ಪ್ರತ್ಯೇಕವಾಗಿರುವದು; ಆದರೆ ಈ ಜಾಲಂದರನಾಥರ ಶಾಖೆಯವರಲ್ಲಿ ಕಾನೀಫನಾಥ ಮತ್ತು ಗೋಪಿಚಂದನ ತಾಯಿ ಮೈನಾವತಿಯ ಹೊರತು ಮತ್ಯಾರ ಹೆಸರೂ ಗೊತ್ತಾಗಲಿಲ್ಲ. ಇವೆರಡು ಶಾಖೆಗಳ ಪೈಕಿ ಗಜಾನನ ಮಹಾರಾಜರು ಮತ್ಸ್ಯೇಂದ್ರನಾಥರ ಶಾಖೆಯವರಿದ್ದು ಚೌರಂಗಿನಾಥರ ಅವತಾರವೆಂತಲೂ ನಮಗೆ ತಿಳಿದಿರುವದು, ಯಾಕೆಂದರೆ ಚೌರಂಗಿನಾಥರಂತೆ ಇವರಾದರೂ ಭಂಗಾರಯುವಿಗಳಿದ್ದು, ಅವರಂತೆ ಮತ್ಸ್ಯೇಂದ್ರನಾಥರಿಂದಲೇ ದೀಕ್ಷಾ ಗ್ರಹಣ ಮಾಡಿದ್ದರು. ಈ ದೀಕ್ಷಾಗ್ರಹಣದ ಇತಿಹಾಸವು ಸಂಕ್ಷಿಪ್ತವಾಗಿ ಹೀಗಿರುತ್ತದೆ.

ಗಜಾನನ ಮಹಾರಾಜರು ಹದಿನಾಲ್ಕು ವರ್ಷ ವಯಸ್ಸಿನವರಾಗಿರುವಾಗ ಅವರ ಚಿಗಪ್ಪನು ಅವನನ್ನು ಚಿಖಲಿ (ವರ್‍ಹಾಡಪ್ರಾಂತ) ಸಮೀಪದ ಅಂತ್ರಿಯಿಂಬಲ್ಲಿಗೆ ನಾರಾಯಣ ಸರಸ್ವತಿಯವರ ದರ್ಶನಕ್ಕಾಗಿ ಕರಕೊಂಡು ಹೋದನು. ಅವರು ಅಲ್ಲಿಯ ಒಂದು ಗವಿಯಲ್ಲಿ ವಸ್ತಿಮಾಡಿರುವಾಗ ಗಜಾನನ ಮಹಾರಾಜರಿಗೆ ಅರ್ಧ ನಿದ್ರೆ ಅರ್ಧ ಜಾಗೃತ ಅವಸ್ಥೆಯಲ್ಲಿರುವಾಗ ಒಂದು ದೃಶ್ಯವು ತೋರಿತು. ಅವರು ತಾವು ಒಂದು ಉದ್ದವಾದ ಗುಹೆಯೊಳಗಿಂದ ಗಾಳಿ-ಮಳೆಯೊಳಗೆ ಹೋಗುತ್ತಾ ಇರುವಾಗ ಒಂದು ಸುಂದರವಾದ ಪುಷ್ಪಗಳಿಂದ ಅಲಂಕರಿಸಿದ ಸಮಾಧಿಯನ್ನು ಕಂಡರು. ಆಗ ಅವರು ಆ ಸಮಾಧಿಯೊಳಗೆ ನಿದ್ರಿಸ್ತನಾದ ಸತ್ಪುರುಷನು ತನಗ ಆಶೀರ್ವದಿಸಬೇಕೆಂದು ಬೇಡಿಕೊಂಡ ಕೂಡಲೇ, ಆ ಸಮಾಧಿಯು ಎರಡು ಹೋಳಾಗಿ ಅದರೊಳಗಿಂದ ಮತ್ಸ್ಯೇಂದ್ರನಾಥರು ಹೊರಟು ಬಂದರು. ಗಜಾನನ ಮಹಾರಾಜರು ಕಣ್ಣುತೆರೆದು ನೋಡಿದಂತೆ ಸ್ಪಷ್ಟವಾಗಿ ಆ ಮೂರ್ತಿಯನ್ನು ಕಂಡರು. ದರ್ಶನವಾಗುತ್ತಲೇ ಅವರ ಮುಖದಿಂದ 'ಓಂ ಹಂಸಃ ಸೋಽಹಂ' ಈ ಶಬ್ದಗಳು ಹೊರಟು, ಗಜಾನನ ಮಹಾರಾಜರ ಶ್ರೋತ್ರಗಳಲ್ಲಿ ಪುನಃ ಪುನಃ ಪ್ರತಿಧ್ವನಿತವಾದವು. ಎಚ್ಚರವಾದ ಕೂಡಲೇ ಈ ದೃಶ್ಯದ ಸಂಗತಿಯನ್ನು ತಮ್ಮ ಚಿಗಪ್ಪನಿಗೆ ತಿಳಿಸುತ್ತಲೇ ಶ್ರೀನಾರಾಯಣ ಸರಸ್ವತಿಯವರ ಕಡೆ ಇಬ್ಬರೂ ಹೋಗಿ ನಡೆದ ಸಂಗತಿಯನ್ನು ತಿಳಿಸಿದರು. ಅವರು ಇದನ್ನು ಕೇಳಿ ಬಹಳ ಸಂತೋಷಪಟ್ಟು,

ಗಜಾನನ ಮಹಾರಾಜರಿಗೆ ಯಥಾಪ್ರಕಾರ ದೀಕ್ಷಾಗ್ರಹಣ ಮಾಡಿಸಿದರು. ಈ ಘಟನೆಯಿಂದ ಶ್ರೀಗಜಾನನ ಮಹಾರಾಜರು ನಾಥ ಸಾಂಪ್ರದಾಯದವರೊಳಗೆ ಉಚ್ಚ ಸ್ಥಾನದಲ್ಲಿ ಇರುವರೆಂಬುದು ತೋರುವದು.

## ಶ್ರೀಗಜಾನನ ಮಹಾರಾಜರ ಚರಿತ್ರದೊಳಗಿನ ಮುಖ್ಯಾಂಶಗಳು.

ಈ ಚರಿತ್ರದಲ್ಲಿ ಮುಂದೆ ವಾಚಕರು ಶ್ರೀಗಜಾನನ ಮಹಾರಾಜರ ಪೂರ್ಣ ಜನ್ಮಕಥನವನ್ನು ಓದಬಹುದು. ಇಲ್ಲಿ ಅದರ ಮುಖ್ಯಾಂಶಗಳನ್ನು ಮಾತ್ರ ನಿವೇದಿಸುವೆನು.

ಜನ್ಮ ವ ವಂಶ :— ಶ್ರೀಗಜಾನನ ಮಹಾರಾಜರು ಗುಪ್ತೆ ಎಂಬ ಕುಲದವರು. ಅವರ ಹಿರಿಯರಿಗೆ ಕುಲಾಬಾ ಜಿಲ್ಹೆಯೊಳಗಿನ ಪೇಣ ರಾಸಿ, ವಗ್ಯೆರೆ ಹಳ್ಳಿಗಳ ಕುಲಕರ್ಣೀ ವತನ ಇತ್ತು. ಕಳೆದ ಶತಮಾನದ ಮಧ್ಯಕಾಲದಲ್ಲಿ ಆ ಕುಟುಂಬದ ಸ್ಥಿತಿಯು ಅವನತಿಗೆ ಬಂದು ಗಜಾನನ ಮಹಾರಾಜರ ತಂದೆಯಾದ ಮುರಲೀಧರ ಬಾಜೀರಾಯರು ಆ ಜಿಲ್ಹೆಯನ್ನು ಬಿಟ್ಟು ವಹ್ಹಾಡದೊಳಗಿನ ಮಲ್ಕಾಪುರಕ್ಕೆ ಹೋಗಿ ಅಲ್ಲಿ ಸರಕಾರಿ ನೌಕರಿಯನ್ನು ಮಾಡಲಾರಂಭಿಸಿದರು. ಸಂಬಳವು ಮನೆ ಖರ್ಚಿಗೆ ಸಾಲುವದಿಲ್ಲವೆಂತ ಅವರು ಕಾಯಿದೆಗಳನ್ನು ಅಭ್ಯಾಸಿಸಿ, ಪರೀಕ್ಷೆ ಪಾಸಾಗಿ ಯವತಮಾಳದಲ್ಲಿ ವಕೀಲಿ ಕೆಲಸವನ್ನು ನಡಿಸಿದರು. ಈ ವೃತ್ತಿಯಲ್ಲಿ ಅವರು ಬೇಗನೆ ಯಶಸ್ವಿಯಾದರು ಅವರ ಪತ್ನಿಯ ಹೆಸರು ರಾಜುಬಾಯಿ. ಈ ದಂಪತಿಗಳಿಗೆ ಎಂಟುಮಂದಿ ಮಕ್ಕಳು ಹುಟ್ಟಿದರು; ಮೂರು ಹೆಣ್ಣು ಮತ್ತು ಐದು ಗಂಡು; ಹಿರೇಯವನು ನಾರಾಯಣರಾವ; ಈತನು ಮುಂದೆ ಕವಿಯೆಂಬದಾಗಿ ಪ್ರಸಿದ್ಧನಾದನು. ಈತನು ಬರೆದ “ ಪುಷ್ಪಾಂಜಲಿ ” ಎಂಬ ಗ್ರಂಥವು ‘ಬಿ’ ಕವಿಯಿಂದ ರಚಿತವಾದ್ದೆಂತ ಪ್ರಸಿದ್ಧವಾಗಿತ್ತು. ಇವರ ಕಡೇ ಮಗನೇ ಈ ಗ್ರಂಥ ನಾಯಕರಾದ ಶ್ರೀಗಜಾನನ ಮಹಾರಾಜರು.

ಬಾಲ್ಯ:— ಗಜಾನನ ಮಹಾರಾಜರು ಯವತಮಾಳದಲ್ಲಿ ಸನ್ [illegible]ನೇ ಇಸವಿಯಲ್ಲಿ ಹುಟ್ಟಿದರು. ಅವರ ಮೂರನೇ ವಯಸ್ಸಿನಲ್ಲಿ ಅವರಿಗೆ ದೇವಿ ಬಂದು ಕಾಲುಗಳ ಶಕ್ತಿ ಹೋಯಿತು. ಇದರಿಂದ ತಂದೆ ತಾಯಿ ವ ಇತರ ಆಪ್ತರಿಗೆ ಬಹಳ ದುಃಖವಾಯಿತು. ಇದಾದ ಸ್ವಲ್ಪಕಾಲದಲ್ಲಿಯೇ ಅವರ ತಂದೆ ತಾಯಿ ತೀರಿಕೊಂಡರು. ತಾಯಿಯ ಮೃತ್ಯುಕಾಲದಲ್ಲಿ ಗಜಾನನನನ್ನು ಅವರ ಚಿಗಪ್ಪ ಬಾಲುಬಾಯಿಯ ಸ್ವಾಧೀನ ಮಾಡಿದ್ದರು. ಈ ಬಾಲುಬಾಯಿಯು ಚಿಕ್ಕಂದಿನಿಂದ ವಿಧವೆಯಾಗಿದ್ದು, ಮತ್ಯಾರೂ ಆಪ್ತರಿಲ್ಲದ್ದಕ್ಕೆ ತನ್ನ ಅಕ್ಕನ ಕೂಡಿಯೇ ಇರುತ್ತಿದ್ದಳು. ಈಗ ಕುಟುಂಬದ ಪೂರಾ ಭಾರವು ನಾರಾಯಣರಾಯನಮೇಲೆ ಬಿದ್ದಿತ್ತು

ಗಜಾನನ ಮಹಾರಾಜರು ಏನಾದರೂ ನಿಮಿತ್ತ ಹೇಳಿ ಅದನ್ನು ನಿರಾಕರಿಸಿದರು. ಈ ಸಂಗತಿಯು ಸನ್ ೧೯೧೮ ರಲ್ಲಿ ನಡೆಯಿತು. ಆ ಕಾಲದಿಂದ ಗಜಾನನ ಮಹಾರಾಜರು ಯೋಗ್ಯ ಅಧಿಕಾರಿ ಜನರನ್ನು ಪರಮಾರ್ಥ ಮಾರ್ಗಕ್ಕೆ ಸೇರಿಸುವ ಉದ್ದಿಶ್ಯ ಅವರ ಮೇಲೆ ಅನುಗ್ರಹ ಮಾಡುವ ಕಾರ್ಯವನ್ನು ಕೈಕೊಂಡು ಇನ್ನೂ ತನಕ ಆ ಕಾರ್ಯವನ್ನು ನಡಿಸುತ್ತಾ ಇದ್ದಾರೆ.

## ಶ್ರೀಗಜಾನನ ಮಹಾರಾಜರ ಪರಿಚಯವು.

ಈ ಮುಂದೆ ಹೇಳುವ ಪ್ರಕಾರ ನನಗೆ ಗಜಾನನ ಮಹಾರಾಜರ ಸಂಪರ್ಕವಾಯಿತು. ಸನ್ ೧೯೩೭ ರಲ್ಲಿ ಗಜಾನನ ಮಹಾರಾಜರ ಇತಿಹಾಸವನ್ನೂ ಅವರ ಶಿಷ್ಯರ ಅನುಭವಗಳನ್ನೂ ವರ್ಣಿಸಿ ಬರೆದ "ಗುರುಶಿಷ್ಯ ವಿಜ್ಞಾನ ದೀಪಿಕೆ" ಎಂಬ ಒಂದು ಸಣ್ಣ ಮರಾಠಿ ಪುಸ್ತಕವನ್ನು ರಾ. ಕೃ. ಕಾಮತ ಎಂಬ ನನ್ನ ಮಿತ್ರರ ಕೈಯಲ್ಲಿ ನಾನು ನೋಡಿದೆ. ನಾನು ಸಹಜವಾಗಿ ಅದರೊಳಗಿನ ಕೆಲವು ಪಾನುಗಳನ್ನು ಓದಿದ ಕೂಡಲೆ ನನ್ನ ಮನಸ್ಸು ಅದರಿಂದ ಬಹಳ ರಮಿಸಿತು. ಆ ಮೇಲೆ ನಾನು ಅದನ್ನು ಪ್ರಸಿದ್ಧಿಸಿದ ಗಜಾನನ ಮಹಾರಾಜರ ಶಿಷ್ಯರಾದ ಶ್ರೀ. ಜಿ. ವೈದ್ಯ ಇವರಿಗೆ ಬರೆದು ಒಂದು ಪುಸ್ತಕವನ್ನು ತರಿಸಿಕೊಂಡೆನು, ಮತ್ತು ಪುನಃ ಪುನಃ ಓದಿದೆನು. ಅನಂತರ ನಾನು ಆ ಶಿಷ್ಯರಿಗೂ ಗುರುಗಳಿಗೂ ಪತ್ರಗಳನ್ನು ಬರೆದು ಅವರ ಅಧಿಕ ಪರಿಚಯವನ್ನು ಬೆಳಸಿದೆನು. ಪುಣೆಯ ಒಂದು ಮರಾಠಿ ಪತ್ರಿಕೆಯಾದ 'ಗೋರಕ್ಷಣ' ವೆಂಬದರಲ್ಲಿ ಶ್ರೀಗಜಾನನ ಮಹಾರಾಜರ ಸ್ತುತಿಪರವಾದ ಒಂದು ಮರಾಠಿ ಲೇಖನವನ್ನು ಕೊಟ್ಟೆನು. ಈ ವರ್ಷದ ಆರಂಭದಲ್ಲಿ ನನ್ನ ಮಿತ್ರರಾದ ಕಾಮತರು ಗಜಾನನ ಮಹಾರಾಜರಿಗೆ ಭೆಟ್ಟಿಯಾದಾಗ ಅವರು ನಾನೂ ಅವರಿಗೆ ಭೆಟ್ಟಿಯಾಗಬೇಕೆಂತ ಇಚ್ಛೆಯನ್ನು ತೋರಿಸಿದರು. ಗಜಾನನ ಮಹಾರಾಜರಂಥ ಮಹಾನ್ ಯೋಗಿಗಳು ಇಂಥ ಇಚ್ಛೆಯನ್ನು ಪ್ರದರ್ಶಿಸಿದರೆ ಬದು ಅನರ್ಹನಾದ ನನಗೊಂದು ಮಾನಕೊಟ್ಟಂತೆ ನಾನು ಭಾವಿಸುತ್ತೇನೆ. ಹೋದ (೧೯೩೯) ಜುಲಾಯಿ ತಿಂಗಳ ಮಧ್ಯಕಾಲದಲ್ಲಿ ಒಂದು ವ್ಯವಹಾರ ನಿಮಿತ್ತ ಠಾಣೆಗೆ ಹೋದಾಗ ಅಲ್ಲಿಂದಲೇ ನಾನು ನಾಶಿಕಕ್ಕೆ ಹೋಗಿ ಗಜಾನನ ಮಹಾರಾಜರ ಪಾದಕ್ಕೆ ಬಿದ್ದೆನು. ಗಜಾನನ ಮಹಾರಾಜರೂ ಅವರ ಶಿಷ್ಯರೆಲ್ಲರೂ ನನಗೆ ಬಹಳ ಪ್ರೇಮಪೂರ್ವಕ ಆದರಿಸಿದ್ದಕ್ಕಾಗಿ ನಾನು ಅವರೆಲ್ಲರ ಆಭಾರವನ್ನು ಮನ್ನಿಸುತ್ತೇನೆ.

## ಶ್ರೀಗಜಾನನ ಮಹಾರಾಜರ ವ್ಯಕ್ತಿತ್ವ (Personality)

ಗಜಾನನ ಮಹಾರಾಜರಲ್ಲಿ ಯೋಗಿತ್ವದ ಯಾವದೊಂದೂ ಚಿನ್ಹವಿಲ್ಲದೆ ಅವರು ಒಳ್ಳೆ ಸೊಗಸಿನ ರೀತಿಯಿಂದ ಶರ್ಟ, ಕೋಟು, ನೆಕಟಾಯಿ ಮುಂತಾದ್ದರಿಂದ ಕೂಡಿದ ಮೇಲದರ್ಜೆಯ ಪೋಷಾಕ ಮಾಡುವದರಿಂದ ಎಷ್ಟೋ ಜನರು

ಅವರು ಸಾಮಾನ್ಯ ಮನುಷ್ಯರೆಂದು ತಿಳಿಯುವರ ; ಆದರೆ ಅವರ ಕೂಡ ಸಮೀಪ ಸಂಸರ್ಗ ಮಾಡಿದವರಿಗೆ ಅವರ ನಿಜವಾದ ಮಹತ್ವವು ಮನವರಿಕೆ ಆಗುವದು. ಗಜಾನನ ಮಹಾರಾಜರು ಡೌಲು ಇಲ್ಲದೆ ಸಾದಾ ಸ್ಥಿತಿಯನುಸರಿಸ್ದು ವಿನೋದ ಮಾಡುವದರಲ್ಲಿ ಕುಶಲರಿದ್ದಾರೆ; ಆದರೆ ತನ್ನ ಶಿಷ್ಯರಿಗಾದರೋ ಪ್ರಗಟವಾಗಿ ದೂಷಿಸುತ್ತಾರೆ, ಮತ್ತು ಸ್ವಲ್ಪವಾದರೂ ಮಾನ ಕಾಯುವದಿಲ್ಲ. ಅವರ ವಿನೋದ ಮತ್ತು ದೂಷಣೆಗಳನ್ನು ವಿಚಾರ ಮಾಡಿ ನೋಡಿದರೆ, ಅವಕ್ಕೆ ಗುರಿಯಾದವರಿಗೆ ಒಳ್ಳೆ ಉಪದೇಶರೂಪವಾಗಿರುವವು. ಗಜಾನನ ಮಹಾರಾಜರು ಅಕೃತ್ರಿಮ ಮತ್ತು ನಿರಹಂಕಾರಿಗಳಾದ್ದರಿಂದ ಅವರು ಬೇಗನೆ ಸರ್ವರ ಪ್ರೀತಿಗೆ ಪಾತ್ರರಾಗುತ್ತಾರೆ, ಇಷ್ಟೇ ಅಲ್ಲ, ಜನರು ಅವರಿಗೆ ಅತ್ಯಂತ ಮನ್ನಿಸುತ್ತಾರೆ. ಅವರು ತನ್ನನ್ನು ‘ ಕೇರಸುಣಿ ’ ( ಕಸಬರಿಕೆ ) ಅನ್ನಿಸಿಕೊಂಡು ಹಾಗೆಯೇ ಸಹಿ ಮಾಡುತ್ತಿರುತ್ತಾರೆ, ಯಾಕಂದರೆ ಅವರು ತಮ್ಮ ಶಿಷ್ಯಭಕ್ತರ ಮನಸ್ಸುಗಳನ್ನು ಸ್ವಚ್ಛ ಮಾಡಿ ಅವರನ್ನು ಆತ್ಮಸಾಕ್ಷಾತ್ಕಾರಕ್ಕೆ ಸಿದ್ಧಮಾಡುತ್ತಾರೆ. ಅವರ ದಿನಚರ್ಯೆಯು ಬಹಳ ಸಾಮಾನ್ಯವಿರುತ್ತದೆ ಅವರು ಉಣ್ಣುವದು ಬಹಳ ಅಪರೂಪ. ಯಾರಾದರೂ ಅತಿಥಿಗಳಿದ್ದರೆ ಅವರ ಕೂಡ ಅವರು ಊಟಕ್ಕೆ ಕೂಡ್ರುವರು, ಮತ್ತು ಏನಾದರೂ ವಿಶೇಷ ಪಕ್ವಾನ್ನ ತಯಾರಿಸಿದರೆ ಸಹಾ ಅವರು ಪಾತ್ರದೊಳಗಿಂದ ಅತ್ಯಲ್ಪ ಪದಾರ್ಥಗಳನ್ನು ಸೇವಿಸುವರು. ಸಹಜವಾಗಿ ಅವರು ಬಹಳ ದಿವಸತನಕ ಆಹಾರ ಸೇವಿಸದೆ ಇರುವರು. ಅವರು ದಿನದಲ್ಲಿ ಬಹಳ ಸಾರಿ ಚಹಾ ತಕ್ಕೊಳ್ಳುತ್ತಾರೆ. ಮತ್ತು ದಿನದಲ್ಲೆಲ್ಲ ಸಿಗಾರೇಟುಗಳನ್ನು ಸೇದುವರು ಖರೇ ಯೋಗಿಯಂತೆ ಅವರಿಗೆ ಸ್ತ್ರೀ ಧನ ಮತ್ತು ಮಾನ ಇವು ಸೇರದು ನಾಣ್ಯಗಳನ್ನು ಕೊಟ್ಟರೆ ಅವರು ತಿರಿಗಿಕೊಡುವರು. ಅವರು ಖರೇ ಬ್ರಹ್ಮಚಾರಿಗಳಿದ್ದು ಸ್ತ್ರೀಸಂಬಂಧ ವಿಷ್ಯೊಂದೂ ಮೋಹ ಹೊಂದಲಾರರು. ಅವರಿಗೆ ಸ್ತ್ರೀಭಕ್ತರು ಬಹಳ ಕಡಿಮೆ. ಅವರು ಸ್ವಾಭಾವಿಕವಾಗಿ ನಿರಾಭಿಮಾನಿ ಮತ್ತು ನಿಗರ್ವಿಯಾದ್ದರಿಂದ ಗೌರವ ಮತ್ತು ಪ್ರಸಿದ್ಧಿಯನ್ನು ತ್ಯಜಿಸಿ ತಮ್ಮ ಕಾರ್ಯವನ್ನು ಗುಪ್ತಸ್ಥಿತಿಯಲ್ಲಿಯೇ ಮಾಡಲಿಚ್ಛಿಸುವರು.

## ಗಜಾನನ ಮಹಾರಾಜರು ಕಲಿಸುವ ಧ್ಯಾನಯೋಗವು.

ನಾಥಪಂಥದಲ್ಲಿ ಧ್ಯಾನಯೋಗ ಅಥವಾ ರಾಜಯೋಗವು ಮುಖ್ಯವಾಗಿರುತ್ತದೆ. ಗಜಾನನ ಮಹಾರಾಜರು ಯೋಜಿಸುವ ಯೋಗವು ಬಹಳ ಸುಲಭವಾಗಿದ್ದು ಈ ಪ್ರಕಾರವಿರುತ್ತದೆ:—

ಅಧಿಕಾರಿಯಾದ ಶಿಷ್ಯನಿಗೆ ಅವರು ಮೊದಲು ಸುಖಾಸೀನನಾಗಿ ಕೂತುಕೊಳ್ಳಲಿಕ್ಕೆ ಹೇಳುತ್ತಾರೆ. ಆ ಸಾಧಕನು ಪದ್ಮಾಸನದಂಥ ಯಾವದೊಂದು

ಆಸನವನ್ನು ಹಾಕಿ ಕೂತಿರಲಿಕ್ಕೆ ಬರುವವನಾದರೆ ಅದು ಅತ್ಯುತ್ತಮ. ಆಮೇಲೆ ಅವನಿಗೆ ಜಾಲಂಧರ ಬಂಧ ( ಅಂದರೆ ಗಡ್ಡವನ್ನು ಎದೆಯ ಮೇಲೆ ಒತ್ತುವದು ) ಹಾಕಿಕೊಂಡು ಅಜಪಾಜಪ ( ಸೋಹಂ ) ಆರಂಭಿಸಿ ಲಕ್ಷವನ್ನು ಷಡಚಕ್ರಗಳ ಪೈಕಿ ಯಾವವಾದರೊಂದು ಚಕ್ರದ ಮೇಲೆ ಇಡಲಿಕ್ಕೆ ಹೇಳುತ್ತಾರೆ. ಷಡಚಕ್ರಗಳೆಂದರೆ, ೧ ಮೂಲಾಧಾರ, ೨ ಸ್ವಾಧಿಷ್ಠಾನ, ೩ ಮಣಿಪುರ, ೪ ಅನಾಹತ, ೫ ವಿಶುದ್ಧ, ೬ ಆಜ್ಞಾ ಇವುಗಳ ಪೈಕಿ ಸಾಧಕನಿಗೆ ಲಕ್ಷಿಸಲಿಕ್ಕೆ ಸುಲಭವಾದ ಯಾವದೊಂದು ಚಕ್ರದ ಮೇಲೆ ಲಕ್ಷವಿಡಬೇಕು ಅವನು ಶ್ವಾಸಾದಿಗಳ ಕಡೆಗೆ ಮನಸ್ಸು ಕೊಡದೆ ತನ್ನ ಮನಸ್ಸನ್ನು ಚಕ್ರದಮೇಲೆ ಪೂರ್ಣವಾಗಿ ಇಡತಕ್ಕದ್ದು. ಸಾಧಕನು ಆಸೀನನಾಗಿ ಏಕಾಗ್ರತೆಯನ್ನು ಸಾಧಿಸಿದ ಕೂಡಲೆ, ಗಜಾನನ ಮಹಾರಾಜರು ತಮ್ಮ ವರದಹಸ್ತವನ್ನು ಆತನ ಮಸ್ತಕದ ಮೇಲೆ ಇಟ್ಟು ಅವನಿಗೆ ಆತ್ಮಸಾಕ್ಷಾತ್ಕಾರವಾಗುವಂತೆ ಅನುಮೋದಿಸುವರು. ಗುರುಗಳ ಈ ಪ್ರಕಾರದ ಅನುಗ್ರಹದಿಂದ ಸಾಧಕನು ಪರಮಾರ್ಥಮಾರ್ಗದಲ್ಲಿ ಬೇಗನೆ ಮುಂದರಿಸುವನು ಈ ರೀತಿಯಿಂದ ಅನೇಕ ಸಾಧಕರನ್ನು ಅನುಗ್ರಹಿಸುವದರಲ್ಲಿಯೇ ಗಜಾನನ ಮಹಾರಾಜರ ಅಧಿಕ ಮಹತ್ವವಿರುವದು ಅವರ ಕೆಲವು ಶಿಷ್ಯರು ತಮ್ಮ ಅನುಭವಗಳನ್ನು ಬರೆದಿಟ್ಟದ್ದು ಈ ಪುಸ್ತಕದಲ್ಲಿ ಸೇರಿಸಿರುತ್ತದೆ.

## ಅವರ ಶಿಷ್ಯರ ಅನುಭವಗಳು.

ಅವರ ಶಿಷ್ಯರು ತಮ್ಮ ಅಭ್ಯಾಸಕಾಲದಲ್ಲಿ ತಮಗೆ ಬಂದ ಅನುಭವಗಳನ್ನು ಪತ್ರರೂಪದಿಂದ ಮಹಾರಾಜರಿಗೆ ತಿಳಿಸುತ್ತಾರೆ. ಅವುಗಳಲ್ಲಿ ಬಹುತೇಕ ಎಲ್ಲ ಪತ್ರಗಳು ಮರಾಠಿ ಭಾಷೆಯಲ್ಲಿ ಬರೆದಿದ್ದವು. ಅವನ್ನು ರಾ. ಡಿ. ಎಲ್. ಸಿರೋಡಕರ ಇವರು ಸ್ಪಷ್ಟ ಮತ್ತು ಮನೋಹರವಾಗಿ ಇಂಗ್ಲಿಷ ಭಾಷೆಯಲ್ಲಿ ತರ್ಜಿಮೆ ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ ಈ ಪ್ರಕಾರ ಪತ್ರಗಳನ್ನು ಬರೆದ ಶಿಷ್ಯರ ಪೈಕಿ ನಾಲ್ಕುಮಂದಿ ಮುಂಬಯಿದಿಂದ, ಒಬ್ಬನು ಕಲಕತ್ತೆಯಿಂದ, ಇಬ್ಬರು ಧುಳೆಯಿಂದ, ಮೂವರು ಪುಣೆಯಿಂದ ಮತ್ತು ಬಾಕಿಯವರು ನಾಶಿಕದಿಂದ ಬರೆದಿರುತ್ತಾರೆ. ೧೯೪೦ ಇಸವಿಯ ನಂತರ ಹೆಚ್ಚಿಗೆ ನಾಲ್ಕು ಅನುಭವ ಲೇಖನಗಳು ಬಂದಿದ್ದು ಅವನ್ನು ಸೇರಿಸಿದೆ. ನಾಶಿಕದ ಅನೇಕ ಶಿಷ್ಯರನ್ನು ನಾನು ಭೆಟ್ಟಿಯಾದಲ್ಲಿ ಅವರು ತಮ್ಮ ಅನುಭವಗಳ ಸತ್ಯತ್ವವನ್ನು ಒಪ್ಪಿಕೊಂಡಿದ್ದಾರೆ ನಾಶಿಕದಲ್ಲಿ ಸಾಲೆಗೆ ಹೋಗುತ್ತಿರುವ ಮಧುಕರ ಚಿಟಣಿಸ ಎಂಬ ಹುಡುಗನನ್ನು ನಾನು ಕಂಡಿದ್ದೆ. ಅವನು ಸಮಾಧಿಯಲ್ಲಿ ಸುಮಾರು ಒಂದು ತಾಸು ತನಕ ಇದ್ದದ್ದನ್ನು ನಾನು ಸ್ವತಃ ನೋಡಿದ್ದೇನೆ. ಆದ್ದರಿಂದ ಅವನ ಹೇಳಿಕೆಯ ಸತ್ಯತ್ವದ ಕುರಿತು ನನಗೆ ಪೂರ್ಣಮನವರಿಕೆಯಾಗಿದೆ. ಇತರ ಅನುಭವಗಳನ್ನು ನೋಡಿದರೂ ಅವುಗಳು ಒಂದೇ ಪ್ರಕಾರದವಿಲ್ಲ; ಅವು ಒಂದಕ್ಕೊಂದು

ಭಿನ್ನತೆಯುಳ್ಳದ್ದೆಂತ ತೋರಿದರೂ ಕೆಲವಂಶಗಳಲ್ಲಿ ಅವು ಸಮಾನವಿರುವವು. ಪ್ರತಿ ಒಬ್ಬನ ಧ್ಯಾನಕಾಲದ ಅನುಭವಕ್ಕನುಸರಿಸಿರುವದರಿಂದ ಆತನ ಹೇಳಿಕೆಯು ಅವನ ವಿಶಿಷ್ಟ ಗುಣಗಳಿಗನುಸರಿಸಿರುವದು.

ಯಾರು ಆತ್ಮಸಾಕ್ಷಾತ್ಕಾರದ ಅನುಭವಿಗಳು ಇರುವರೋ ಅವರಿಗೆ ಈ ಹೇಳಿಕೆಗಳು ಕಾಲ್ಪನಿಕವೆಂದ ತೋರುವವು ಮತ್ತು ಅವುಗಳಲ್ಲಿ ವರ್ಣಿಸಿದ ದೃಶ್ಯಗಳು ಸ್ವಪ್ನಪ್ರಾಯವೆಂದೆನಿಸುವವು; ಆದರೆ ಅವು ಹಾಗಲ್ಲ. ಆ ಸಾಧಕರು ಆತ್ಮಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಅನುಭವಗಳನ್ನು ವರ್ಣಿಸುತ್ತಾರೆ, ಮತ್ತು ಅಂಥವು ಪ್ರಶ್ನೆಗೂ ತರ್ಕಕ್ಕೂ ಒಳಪಡುವಂಥವುಗಳಲ್ಲವೆಂಬದು ಸರ್ವಮಾನ್ಯ ಸತ್ಯವಾಗಿರುತ್ತದೆ. ಮತ್ತು ಸತ್ಯವು ಸುಳ್ಳಿನಕಿಂತ ಆಶ್ಚರ್ಯಕರವಾಗಿರುವದರಿಂದ ಈ ಅನುಭವಗಳು ಕಾಲ್ಪನಿಕ ವ ಆಶ್ಚರ್ಯಕರವೆಂತ ತೋರಿದರೂ ಅವು ಸತ್ಯವಾದವುಗಳಿರುತ್ತವೆ.

## ಅಂತರ್ದೃಷ್ಟ್ಯನುಭವಗಳ ಪ್ರಕಾರಗಳು.

ಒಂದು ಶೋಚನೀಯ ಸಂಗತಿಯಾವದೆಂದರೆ ಅರ್ವಾಚೀನ ಹಿಂದು ಜನರು ತಮ್ಮ ಪೂರ್ವಜರ ಪಾರಮಾರ್ಥಿಕ ಪರಂಪರೆಯನ್ನು ಸಂಪೂರ್ಣ ಮರೆತು ಬಿಟ್ಟು ಇರುವದರಿಂದ ಅವರಿಗೆ ಪರಮಾರ್ಥಮಾರ್ಗದೊಳಗಿನ ಅಂತರ್ದೃಷ್ಟ್ಯನುಭವಗಳ ಮಹತ್ವವನ್ನು ತಿಳಿಯುವದಕ್ಕೂ ಅವಕ್ಕೆ ಯೋಗ್ಯ ಬೆಲೆಯನ್ನು ಕಟ್ಟುವದಕ್ಕೂ ಅಶಕ್ಯವಾಗಿರುವದು. ನಮ್ಮ ಪೂರ್ವಜರು ಅಂದರ ಉಪನಿಷತ್ತುಗಳ ದೃಷ್ಟಗಳಾದ ಋಷಿಗಳು ಇಂಥ ಅನುಭವಗಳನ್ನು ಕ್ರಿಸ್ತನು ಹುಟ್ಟುವ ಸಾವಿರಾರು ವರ್ಷಗಳ ಮೊದಲೆ ಹೊಂದಿ ಅವನ್ನು ಯೋಗ್ಯರೀತಿಯಿಂದ ಸ್ಪಷ್ಟೀಕರಿಸಿ ವರ್ಗೀಕರಣ ಮಾಡಿದ್ದರು. ಕಾಲದಾರಂಭದಲ್ಲಿ ರಚಿಸಲ್ಪಟ್ಟ ಅಂತದೃಷ್ಟ್ಯನುಭವಯುಕ್ತವಾದ ಉಪನಿಷತ್ತುಗಳಲ್ಲಿ ನಾವು ಹುಡುಕಿದ್ದಾದರೆ, ಅವುಗಳಲ್ಲಿ ಅಲ್ಲಲ್ಲಿ ನಾಲ್ಕು ಪ್ರಕಾರದ ತತ್ತ್ವಜ್ಞಾನದ ಅನುಭವಗಳು ಕಂಡು ಬರುವವು. ಈ ನಾಲ್ಕು ಪ್ರಕಾರದ ಅನುಭವಗಳೆಂದರೆ, ಆಕೃತಿ, ವರ್ಣ, ಶಬ್ದ ಮತ್ತು ಪ್ರಕಾಶ ಇವುಗಳಿಗೆ ಸಂಬಂಧಿಸಿದವಿರುತ್ತವೆ, ಮತ್ತು ಇವನ್ನು ಆ ಶಿಷ್ಯರು ತಮ್ಮ ಪರಮಾರ್ಥ ಸಾಧನ ಕಾಲದಲ್ಲಿ ಅನುಭವಿಸಿರುವರು. ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡುವೆವು. ಶ್ವೇತಾಶ್ವತಾರೋಪನಿಷತ್ತಿನ ಅಧ್ಯಾಯ ೨ ಮಂತ್ರ ೧೧ನೇದರಲ್ಲಿ ಶಿಷ್ಯನು ಸಾಧನಕಾಲದಲ್ಲಿ ಕಾಣುತ್ತಿದ್ದ ಆಕಾರ ಮತ್ತು ಪ್ರಕಾಶಗಳನ್ನು ಕುರಿತು ಹೇಳಿರುತ್ತದೆ. ಅಲ್ಲಿ 'ಇಬ್ಬನಿ, ಹೊಗೆ, ಸೂರ್ಯ, ಅಗ್ನಿ, ಗಾಳಿ, ಮಿಂಚುಹುಳ, ಮಿಂಚು, ಸ್ಫಟಿಕ ಮತ್ತು ಚಂದ್ರ' ಇವೆ ಎಲ್ಲ ಬ್ರಹ್ಮಸಾಕ್ಷಾತ್ಕಾರದ ಪೂರ್ವಚಿಹ್ನಗಳೆಂದು ಹೇಳಿರುತ್ತದೆ. ಹಾಗೆಯೇ ಬ್ರಹ್ಮಮಾಣ್ಡ್ಯಕೋಪ

ನಿಷತ್ತಿನಲ್ಲಿ (೧೧-೩-೬) ಹೇಳುವದೇನಂದರೆ, ಪರಮಾರ್ಥಪಥದಲ್ಲಿ ಮುಂದರಿಸುವ ಶಿಷ್ಯನಿಗೆ, ಕ್ರ್ಯಾವಿಬಟ್ಟೆ, ಬಿಳಿಉಣ್ಣೆ, ಕೆಂಪು ಇಂದ್ರಗೋಪಹುಳ, ಅಗ್ನಿಯ ಜ್ವಾಲೆ, ಕಮಲಪುಷ್ಪ ಮತ್ತು ವಿದ್ಯುತ್‌ಪ್ರಕಾಶ, ಇವೇ ಮೊದಲಾದವುಗಳು ಕಾಣುತ್ತವೆ. ಇವುಗಳನ್ನು ಕಂಡವನು ಗೌರವಕ್ಕೆ ಪಾತ್ರನು. ಈ ಪವಿತ್ರ ಗ್ರಂಥಗಳಿಂದ ಇದೇ ಪ್ರಕಾರದ ಅನೇಕ ದೃಷ್ಟಾಂತಗಳನ್ನು ತಕ್ಕೊಳ್ಳಬಹುದು; ಆದರೆ ಹಾಗೆ ಮಾಡುವ ಅವಶ್ಯಕತೆ ಇಲ್ಲ.

ಈಗ ಮೇಲೆ ಹೇಳಿದ ಉಪನಿಷದ್ ವಾಕ್ಯಗಳ ಸಂಬಂಧ ಕೆಲವು ಶಿಷ್ಯರ ಆ ಪ್ರಕಾರದ ಅನುಭವಗಳನ್ನು ತಕ್ಕೊಳ್ಳೋಣ.

(೧) ರಾ. ಎಸ್. ಎಮ್. ಗಡಕರಿ—ಇವರು ಹೇಳುತ್ತಾರೆ:—ಜಪವನ್ನು ಆರಂಭಿಸಿದ ಕೂಡಲೆ ಅನೇಕ ವರ್ಣದ ಮೇಘಗಳು ಕಾಣಿಸುತ್ತಿದ್ದು ಶಾಂತಿಯು ಮೆಲ್ಲನೆ ನನ್ನೊಳಗೆ ಪ್ರವೇಶಿಸಿತು. ಒಂದುದಿನ ನಾನು ಶ್ರೀಗಣಪತಿ, ಕೆಲವು ಸಿತಾನಿಗಳು, ಆ ಮೇಲೆ ಒಂದು ವೀಣೆ ಇವುಗಳನ್ನು ಕಂಡೆನು; ಮತ್ತು ಆ ವೀಣೆಯನ್ನು ಹೊತ್ತ ಸರಸ್ವತಿಯನ್ನು ನೋಡಿದೆನು.

(೨) ರಾ. ವಿನಾಯಕ ಕಾಶೀನಾಥ ಖಳೆ, ದಾದರ.

ನಾನು ಜಪ ಮಾಡುತ್ತಿರುವಾಗ, ತಲೆಯೊಳಗಿಂದ ಹೊರಡುವ ಒಂದು ನಾದವನ್ನು ಕೇಳಿದೆ ಮತ್ತು ಕೂಡಲೇ ಬಿಳೀವರ್ಣದ ಒಂದು ಜ್ಯೋತಿಯನ್ನು ಕಂಡೆ, ಅದು ಅನಂತರ ಕೆಂಪುವರ್ಣದ ಒಂದು ಗೋಲಕವಾಯಿತು. ಆಗ ಮನಸ್ಸಿನ ಏಕಾಗ್ರತೆಯು ಚಲಿಸದೆ ಇದ್ದು ನನಗೆ ಒಂದು ಪ್ರಕಾರದ ಆನಂದವು ತೋರಿತು. ಕೆಲವು ದಿನಗಳನಂತರ ನೀಲ ಮತ್ತು ಕೆಂಪು ಚೌರಸಗಳು ಕಂಡವು ಮತ್ತು ಈಗಲೂ ಅವು ಕಾಣುತ್ತಿರುತ್ತವೆ. ಲೌಕಿಕ ತೊಂದರೆಗಳಿಂದ ಅತ್ಯಂತ ಮುಚಿತವಾದ ನನ್ನ ಮನಸ್ಸು ಈಗ ಶಾಂತವಾಗಿದೆ; ಇದು ಸದ್ಗುರುಗಳ ಕೃಪಾಪ್ರಸಾದವಾಗಿರುತ್ತದೆ, ಎಂಬದಕ್ಕೆ ಸಂಶಯವಿಲ್ಲ.

(೩) ರಾ. ವಿಶ್ವನಾಥ ಟಿ. ಪಾಟಣಕರ ಬಿ ಎ. ಎಲ್‌ಎಲ್. ಬಿ. ದಾದರ

ಒಳಗಡೆಯಲ್ಲಿ ನೀಲವರ್ಣದ ಒಂದು ದೊಡ್ಡ ಸಮುದ್ರವು ತೋರಿತು. ಅದರಲ್ಲಿ ದೊಡ್ಡ ತೆರೆಗಳು ಉರುಳುತ್ತಿದ್ದವು. ಇದರಲ್ಲಿ ನಾನು 'ಸೋಹಂ' (ಅವನೇ ನಾನು) ಎಂಬ ದೋಣಿಯನ್ನು ಕಂಡೆನು, ಮತ್ತು ನನ್ನ ಗುರುವಾದ ನೀವು ಅದರಲ್ಲಿ ಚುಕ್ಕಾಣಿಯನ್ನು ಹಿಡಿದು ಅದನ್ನು ನಡಿಸುವದನ್ನು ನೋಡಿದೆನು. ಆ ಸ್ಥಳದ ಸಮೀಪದಲ್ಲಿ ಪರಮಗುರುಗಳಾದ ನಾರಾಯಣ ಸರಸ್ವತಿಯವರು ಸಂಧ್ಯಾವಂದನವನ್ನು ಮಾಡುತ್ತಿರುವದನ್ನು ಕಂಡೆನು.

ಆನಂತರ ಆ ಡೋಣಿಯಲ್ಲಿ ಅನೇಕ ಮಂದಿ ಸಂತರನ್ನು ಕಂಡೆ (ಅವರ ಹೆಸರುಗಳು ಅವರ ಪೂರ್ಣ ಹೇಳಿಕೆಯಲ್ಲಿರುತ್ತವೆ); ಅವರು ನನಗೆ ಆಶೀರ್ವಾದ ಗಳನ್ನು ಕೊಟ್ಟರು.

(೪) ರಾ. ಭವಾನಿ ಚರಣ ಸಿಡ್ಧಾಂತಿ, ಕಲಕತ್ತೆ.

ಅವರು ನನಗೆ ' ಸೋಹಂ ' ಮಂತ್ರವನ್ನು ಕೊಟ್ಟರು ಮತ್ತು ತಮ್ಮ ಹಸ್ತವನ್ನು ನನ್ನ ಮಸ್ತಕದ ಮೇಲೆ ಇಟ್ಟರು. ಅವರು ಹಾಗೆ ಮಾಡಿದಾಕ್ಷಣ ' ಸೋಹಂ ' ಎಂಬದೊಂದು ದೊಡ್ಡ ಧ್ವನಿಯಾಯಿತು. ನನ್ನ ಮನಸ್ಸು ಏಕಾಗ್ರ ವಾಗಿ ಭಾವನಾರಹಿತವಾಯಿತು, ಮತ್ತು ಅಪಾರ ಆನಂದದ ಲಹರಿಯು ನನ್ನ ಹೃದಯದಲ್ಲಿ ಉದ್ಭವಿಸಿತು.

(೫) ಶ್ರೀಮತಿ ಆನಂದಿಬಾಯಿ ಗುಪ್ತೆ, ನಾಶಿಕ.

ನಾನು ಜಪವನ್ನು ಮಾಡುತ್ತಿರುವಾಗ ತೇಜೋಮಯವಾದ ಮೂರು ರೂಪಗಳನ್ನು ಕಂಡೆನು. ನನ್ನ ಕಣ್ಣುಗಳು ಕುಕ್ಕುತ್ತಿದ್ದದರಿಂದ ಅವುಗಳ ಗುರ್ತು ಹಿಡಿಯಲಿಕ್ಕೆ ಶಕ್ಯವಾಗಲಿಲ್ಲ.

(೬) ರಾವಸಾಹೇಬ ಗುಪ್ತೆ ಎಲ್. ಸಿ ಇ. ನಾಶಿಕ.

ಅಜಪಾಜಪವು ಹ್ಯಾಗೆ ನಡಿಯುತ್ತದೆ ಮತ್ತು ಮನಸ್ಸು ಹ್ಯಾಗೆ ಅದರೊಳಗೆ ಲೀನವಾಗುತ್ತದೆ ಎಂಬದು ನನಗೆ ಈಗ ಮನವರಿಕೆಯಾಯಿತು. ನನ್ನ ಸದ್ಗುರುಗಳ ಕೃಪೆಯಿಂದ ಒಂದು ತೇಜೋಬಿಂದುವನ್ನು ಆಗಾಗ್ಗೆ ನೋಡುತ್ತಿದ್ದೇನೆ.

ಈ ಸಂಬಂಧ ನಾನು ಮಹಾರಾಜರಿಗೆ ಕೇಳಿದಾಗ್ಗೆ ಅವರಂದರು, ಈ ದೃಶ್ಯಗಳು ಆತ್ಮಾನಂದದ ಕಡೆಗೆ ಸಾಧಕನನ್ನು ಕರಕೊಂಡು ಹೋಗುವಂಥವುಗಳಾಗಿರುತ್ತವೆ. ಈ ಅಂತರ್ದೃಶ್ಯಗಳೇ ಸತ್ಯವಲ್ಲ. ಇವು ಮುಂದೆ ಅದೃಶ್ಯವಾಗಿ ಸಾಧಕನಿಗೆ ಆತ್ಮನ ಆನಂದದ ಅನುಭವವಾಗುತ್ತದೆ. ಇದೇ ಮನುಷ್ಯ ಜೀವನದ ಸತ್ಯವಾದ ಗುರಿಯಾಗಿದೆ.

(೭) ರಾ. ವಿ. ಕೆ. ಮಾಹೆಗಾಂವಕರ, ನಾಶಿಕ.

ಅವರು ನನಗೆ ಅನುಗ್ರಹಿಸಿದರು. ಮತ್ತು ಧ್ಯಾನದ ಅಭ್ಯಾಸವನ್ನು ಮಾಡಿಸಿದರು. ಅಂದಿನಿಂದ ನಾನು ಧ್ಯಾನಕಾಲದಲ್ಲಿ ವಿವಿಧ ದೃಶ್ಯಗಳನ್ನು ಕಾಣುತ್ತಲಿದ್ದೇನೆ. ನನ್ನ ಇಷ್ಟ ದೇವತೆಯಾದ ಶ್ರೀದತ್ತ, ನನ್ನ ಮೊದಲಿನ ಗುರು ಶ್ರೀ ನಾರಾಯಣ ಮಹಾರಾಜ, ಕೇಡಗಾಂವಕರ, ಶ್ರೀಗಜಾನನ ಮಹಾರಾಜ ಶೇ

ನೂರುಮಂದಿ ನನಗೆ ಧ್ಯಾನದಲ್ಲಿ ನಿತ್ಯ ಕಾಣಲಾರಂಭಿಸಿದರು, ಮತ್ತು ನಾನು ಅವರನ್ನು ಮನಸ್ಸಿನಲ್ಲಿ ಪೂಜಿಸುತ್ತಿರುವೆನು.

ಮಾಹೆಗಾಂವಕರರು ಗಜಾನನ ಮಹಾರಾಜರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಅವುಗಳ ಪೈಕಿ ನಾಲ್ಕನೇ ಪ್ರಶ್ನೆ ಮತ್ತು ಉತ್ತರ ಮಹತ್ವದ್ದಾದ್ದರಿಂದ ಅವನ್ನು ಕೆಳಗೆ ಕೊಟ್ಟಿರುವೆನು.

೪ನೇ ಪ್ರಶ್ನೆ:— ದೃಶ್ಯಗಳನ್ನು ಕಾಣುವಿಕೆಯು ಆತ್ಮಜ್ಞಾನದ ನಿಜನಾದ ಚಿನ್ಹವೋ ?

ಉತ್ತರ:— ಅಲ್ಲ. ದೃಶ್ಯಗಳನ್ನು ಕಾಣುವದು ಆತ್ಮಜ್ಞಾನವಲ್ಲ. ಆದರೆ ಈ ದೃಶ್ಯಗಳು ದೇವರ ಕಡೆಗೆ ಮುಟ್ಟಿಸುವ ಜ್ಞಾನಮಾರ್ಗದಲ್ಲಿ ಗುರುತಿನ ಸ್ತಂಭಗಳಂತಿರುತ್ತವೆ. ಅವನ್ನು ಕಾಣುತ್ತಿರುವಾಗ ಅವು ಸತ್ಯಸ್ವರೂಪವಲ್ಲವೆಂತಲೇ ತಿಳಿಯತಕ್ಕದ್ದು. ಇವು ಮೆಲ್ಲಮೆಲ್ಲಗೆ ಅದೃಶ್ಯವಾಗುವವು. ಇನ್ನೊಂದು ರೀತಿಯಿಂದ ಹೇಳುವದಾದರೆ ಆ ದೃಶ್ಯಗಳೆಲ್ಲ ಭ್ರಾಮಕ ಮತ್ತು ಮಿಥ್ಯಾಗಿರುತ್ತವೆ. ಕಟ್ಟಕಡೆಗೆ ಈ ಜಗತ್ತೆಲ್ಲವು ಬ್ರಹ್ಮದ ಹೊರತು ಮತ್ತೇನೂ ಇಲ್ಲ ಎಂಬದು ಮನವರಿಕೆಯಾಗಿ ಸಾಧಕನು ಆ ಪರಬ್ರಹ್ಮದಲ್ಲಿ ಲೀನನಾಗುವನು. ಅದೇ ನಿಜವಾದ ಆನಂದ, ಅದೇ ಶಾಂತಿ, ಮತ್ತು ಅದೇ ಸತ್ಯತತ್ತ್ವವಾಗಿರುತ್ತದೆ

(೮) ರಾ ವಿ. ಜಿ ವೈದ್ಯ ಪೆನ್ಶನರ. ನಾಶಿಕ.

ನಾನು 'ಸೋಽಹಂ' ಜಪವನ್ನು ಮಾಡಲಾರಂಭಿಸಿದೆನು. ಮತ್ತು ಕೂಡಲೆ ಅರ್ಧಜಾಗೃತಿ ಅರ್ಧನಿದ್ರೆಯುಂಬಂತಿರುವಾಗ್ಗೆ ನನಗೆ ಉಚ್ಚಸ್ವರದಿಂದ 'ಸೋಽಹಂ' ಮಂತ್ರವು ಕೇಳಿಸಿತು ಮತ್ತು ಗಂಟೆಯ ಶಬ್ದವು ಕೇಳಬಂತು. ಈ ಗಂಟೆ ಶಬ್ದವು ಏನದು ಎಂದು ನಾನು ಗಜಾನನ ಮಹಾರಾಜರಿಗೆ ಕೇಳಿದೆ: ಅದಕ್ಕೆ ಅವರು ಒಂದು ದಿನಚರಿಯ ಉದಾಹರಣೆಯನ್ನು ಕೊಟ್ಟು ಹೇಳಿದರು.—ನಾವು ಒಂದು ದೇವಾಲಯಕ್ಕೆ ಹೋದೆವೆಂದರೆ ಮೊದಲು ಗಂಟೆಗಳನ್ನು ಬಾರಿಸುತ್ತೇವೆ. ಆಮೇಲೆ ದೇವದರ್ಶನ ಮಾಡುತ್ತೇವೆ. ಅದೇ ಪ್ರಕಾರ ನಿಮ್ಮ ಕಿವಿಗಳಲ್ಲಿ ಕೇಳಿಸುವ ಈ ಘಂಟಾನಾದವು ಬ್ರಹ್ಮದ ಧ್ವನಿಯಾಗಿದೆ. ಇದಲ್ಲದೆ ಹತ್ತುಪ್ರಕಾರದ ನಾದಗಳಿರುತ್ತವೆ. ಅವೂ ನಿಮ್ಮ ಅನುಭವಕ್ಕೆ ಬರುವವು. ಈ ಎಲ್ಲ ನಾದಗಳನ್ನು ಕೇಳಿದ ಬಳಿಕ ನೀವು ಬ್ರಹ್ಮರಂಧ್ರದಲ್ಲಿ ಪ್ರವೇಶಿಸಿ ಅಲ್ಲಿ ಪರಬ್ರಹ್ಮದ ದರ್ಶನವನ್ನು ಪಡೆಯುವಿರಿ.

## ಚಮತ್ಕಾರಗಳು.

ಈ ಅನುಭವದ ಹೇಳಿಕೆಗಳಲ್ಲಿ ಗಜಾನನ ಮಹಾರಾಜರು ಸಿಗಾರೇಟ ಸೇದುವಾಗ ಸುಗಂಧ ಹೊರಡುವದು, ಬುಕ್ಕಾ ಮೇಲಿಂದ ಸುರಿಯುವದು, ಮಧ್ಯವನ್ನು ಹಾಲು ಮಾಡುವದು, ಕುದಿಸಿದ ತತ್ತಿಯನ್ನು ಬಟಾಟೆಯಾಗಿ ಮಾಡುವದು, ಇತ್ಯಾದಿ ಚಮತ್ಕಾರಗಳು ಹೇಳಲ್ಪಟ್ಟಿವೆ. ಆದರೆ ಗಜಾನನ ಮಹಾರಾಜರು ಇಂಥ ಘಟನೆಗಳಿಗೆ ಸ್ವಲ್ಪವೂ ಮಹತ್ವವನ್ನು ಕೊಡುವದಿಲ್ಲ; ಅವೆಲ್ಲ ಭೂತಚೇಷ್ಟೆಗಳೆಂದು ನಿರಾಕರಿಸುವರು. ಈ ಚಮತ್ಕಾರ ಅಥವಾ ಸಿದ್ಧಿಗಳು, ಸಾಧಕನು ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ಸರಿಯಾಗಿ ಮುಂದರಿಸಿದರೆ ತಾವಾಗಿ ಪ್ರಾಪ್ತವಾಗುವವು. ಆದರೆ ಅವುಗಳು ತನ್ನನ್ನು ಆ ಮಾರ್ಗದಿಂದ ತಪ್ಪಿಸದಂತೆ ಮಾತ್ರ ಸಾಧಕನು ಎಚ್ಚರವಿದ್ದು, ಅವುಗಳಿಂದ ತನ್ನ ಮುಂದುವರಿಕೆ ಕುಂಠಿತವಾಗದಂತೆ ನಡಿಯತಕ್ಕದ್ದು.

## ಕಡೇ ನಿರ್ಣಯ.

ಕಟ್ಟಕಡೆಗೆ ನಾವು ಗಜಾನನ ಮಹಾರಾಜರ ಶಿಷ್ಯರಿಗೆ ಹೀಗೆ ಹೇಳುತ್ತೇವೆ:—" ಬಂಧುಗಳೇ, ದೇವರು ನಿಮಗೆ ಸಹಾಯವಾಗಲಿ! ಮುಂದೆ ನಡೆಯಿರಿ ನೀವು ಸತ್ಯಮಾರ್ಗದಲ್ಲಿದ್ದೀರಿ, ನೀವು ಆತ್ಮಸಾಕ್ಷಾತ್ಕಾರದ ಗುರಿ ಮುಟ್ಟುವತನಕ ತಡೆಯಬೇಡಿರಿ " ಈ ಚಿಕ್ಕ ಗ್ರಂಥವನ್ನು ಓದಿ ಕೌತುಕ ಪಡುವವರಿಗೆ ಮತ್ತು ಇತರರಿಗೆ ಉಪನಿಷದ್ ದ್ರಷ್ಟೃಗಳ ಶಬ್ದಗಳಿಂದ ನಾವು ಹೇಳುವದೇನಂದರೆ:—ಏಳಿರಿ, ಎಚ್ಚರವಾಗಿರಿ, ಮತ್ತು ಗಜಾನನ ಮಹಾರಾಜರಂಥ ಯೋಗ್ಯ ಮತ್ತು ಮಹಾನ್ ಸತ್ಪುರುಷರನ್ನು ಸಮೀಪಿಸಿ ಜ್ಞಾನವನ್ನು ಹೊಂದಿರಿ. ಈ ಆತ್ಮಜ್ಞಾನವನ್ನು ಈ ಜನ್ಮದಲ್ಲಿಯೇ ಹೊಂದಲಿಕ್ಕೆ ತಪ್ಪಿದರೆ ಮಹಾ ಘಾತವಾದೀತು; ಆದರೆ ಅದನ್ನು ನೀವು ಇಲ್ಲೇ ಈಗಲೇ ಪಡೆದಿರಂದರೆ ನೀವು ತ್ರಿವಾರ ಶುಭಮಂಗಲ ಹೊಂದುವಿರಿ.

ಸರ್ವೇ ಶಾಂತಿರಸ್ತು.

ತಾ ೮-೮-೩೯.

ಟಿಳಕವಾಡಿ, ಬೆಳಗಾಂವ

**ನಾಗೇಶ ವಾಸುದೇವ ಗುಣಾಜಿ**

# ಉಪೋದ್ಘಾತ.

## "ಜ್ಞಾನಿಯು ಜಗದ್ವೃಕ್ಷದ ಅತ್ಯಂತ ಪಕ್ವಫಲವಾಗಿರುವನು"

—ಪ್ರಬುದ್ಧ ಭಾರತ.

"ಸಂಪೂರ್ಣ ಆತ್ಮಾನಂದವನ್ನು ಅನುಭವಿಸುವ ಸತ್ಪುರುಷರಿಗೆ ನಮಸ್ಕಾರವಿರಲಿ. ಈ ಸಂಸಾರದ ತಾಪದಿಂದ ಬೆಂದು ಬೇಸತ್ತ ಜೀವಾತ್ಮರನ್ನು ಶಾಂತಗೊಳಿಸತಕ್ಕ ಆತ್ಮಾನಂದದ ಜಲವನ್ನು ಆ ಸತ್ಪುರುಷರು ಮಳೆಗರೆಯುತ್ತಾರೆ. ಅವರು ಚೈತನ್ಯಕ್ಕೆ ಶೃಂಗಾರರೂಪರಾಗಿರುವರು, ಅವರು ಬ್ರಹ್ಮವಿದ್ಯೆಯನ್ನು ಶೋಧಿಸುವರು, ಮತ್ತು ಶಾಶ್ವತನಾದ ಪರಮಾತ್ಮನು ವಾಸಿಸುವ ಅರಮನೆಯೇ ಅವರು ಆಗಿರುವರು. ಅವರ ಕಡೆಗೆ ಬರುವಂಥ ಜನರು ಸಾಧನಚತುಷ್ಟಯ ಸಂಪನ್ನರಾಗಬೇಕೆಂತಾಗಲಿ, ಶಾಸ್ತ್ರದಲ್ಲಿ ಪ್ರಾವಿಣ್ಯ ಉಳ್ಳವರಾಗಬೇಕೆಂತಾಗಲಿ ಅವರು ಬಯಸುವದಿಲ್ಲ. ಜನರಿಗೆ ವಿಶ್ವಾಸವಿದ್ದರೆ ಸಾಕು, ಆ ಸತ್ಪುರುಷರು ಅವರಿಗೆ ಪ್ರಕಾಶವನ್ನು ತೋರಿಸುವರು."

—ಏಕನಾಥಿ ಭಾಗವತ

ಮನುಷ್ಯ ಜೀವನದ ಕಡೇ ಗುರಿಯು ದೇವರನ್ನು ಸಾಕ್ಷಾತ್ಕರಿಸಿಕೊಂಡು ಅವನಲ್ಲಿ ಐಕ್ಯವಾಗುವದು. ಇದಕ್ಕೂ ಹೆಚ್ಚಿಗೆ ಸ್ಪಷ್ಟವಾಗಿ ಹೇಳುವದೆಂದರೆ, ಇದು ಪ್ರತಿಒಬ್ಬ ಮನುಷ್ಯನ ಹುಟ್ಟುಹಕ್ಕಾಗಿರುತ್ತದೆ. ಸ್ವರಾಜ್ಯವೂ ನಮ್ಮ ಜನ್ಮ ಹಕ್ಕಾಗಿರುತ್ತದೆ. ಆದರೆ ನಾವು ಕಳಕೊಂಡ ಸ್ವರಾಜ್ಯವನ್ನು ತಿರಿಗಿ ಪಡೆಯುವದಕ್ಕೆ ಅತ್ಯಧಿಕ ಪ್ರಯತ್ನಗಳು ಬೇಕಾಗುತ್ತವೆ. ಸ್ವರಾಜ್ಯವು ನಮ್ಮ ಸ್ವಂತದ್ದಿದ್ದರೂ, ಅದನ್ನು ಪಡೆಯಲಿಕ್ಕೆ ದಾರಿಯಲ್ಲಿರುವ ಅಡಚಣಿಗಳನ್ನು ದೂರ ಮಾಡಲಿಕ್ಕೆ ಭಾರಿ ಯುದ್ಧವನ್ನು ಮಾಡಬೇಕಾಗುತ್ತದೆ, ಮತ್ತು ಆ ಯುದ್ಧವನ್ನು ಜನ್ಮ ಜನ್ಮಾಂತರಗಳಲ್ಲಿ ನಡಿಸತಕ್ಕದ್ದಾಗಿರುವದು. ಹಾಗೆಯೇ ಜೀವಾತ್ಮನ ಸಂಗತಿಯಲ್ಲಿ ಸಹಾ ಮುಕ್ತಿ ಅಥವಾ ಪೂರ್ಣಸ್ವತಂತ್ರವು ಹೊರಗಿನಿಂದ ಬರತಕ್ಕ ಅಥವಾ ಪಡೆಯತಕ್ಕ ವಸ್ತುವಲ್ಲ. ಅದು ಸನಾತಕಾಲದಲ್ಲಿ ಜೀವನಲ್ಲಿಯೇ ಇರುವದು. ಆದರೆ ಜೀವನು ತನ್ನ ದೋಷಗಳ ಮೂಲಕ ಆ ಸ್ವತಂತ್ರತೆಯನ್ನು ಕಳಕೊಂಡಿದ್ದಾನೆ. ಆ ಜೀವನು ಪ್ರಕೃತಿಯ ಗುಲಾಮನಾಗಿ ಆ ಪ್ರಕೃತಿಯನ್ನೇ ಅವಲಂಬಿಸಿಕೊಂಡಿರುತ್ತಾನೆ. ಸರ್ವ ಶಾಸ್ತ್ರಗಳು ಇಂಥ ಜೀವಾತ್ಮನನ್ನು ಗುಲಾಮಗಿರಿಯೊಳಗಿಂದ ಬಿಡಿಸುವ ಉದ್ದಿಶ್ಯ ಸಿದ್ಧನಾಗಿ ನಿಂತಿರುವವು. ಆದರೆ ಶಾಸ್ತ್ರಗಳು ತೀಕ್ಷ್ಣವಾದ ಆಯುಧಗಳಂತಿವೆ. ಆಯುಧಗಳ ವಿನಹಾ ಬಂಧನಗಳನ್ನು ಛೇದಿಸಲಿಕ್ಕೆ ಶಕ್ಯವಿಲ್ಲವೆಂತ ಅನ್ನುವ ಜನರೂ ಇದ್ದಾರೆ. ಹಾಗೆ ಹೇಳುವದು ಸುಲಭವಾಗಿದೆ. ಆದರೆ ಕಾರ್ಯದಲ್ಲಿ ತರುವದು ಮಾತ್ರ ಕಠಿಣವದೆ. ಯಾಕೆಂದರೆ

ಎಷ್ಟೋ ಜನ್ಮಾಂತರಗಳಲ್ಲಿ ಆಯುಧಗಳ ಉಪಯೋಗ ಮಾಡಲೇ ಇಲ್ಲ. ಶಾಸ್ತ್ರಗಳದೂ ಇದೇ ಗತಿ. ಮನುಷ್ಯ ಜೀವಿಯು ಈ ಜನ್ಮದಲ್ಲಿ ಮಾತ್ರವಲ್ಲ, ಹಿಂದಿನ ಅನೇಕ ಜನ್ಮಗಳಲ್ಲಿ ಸಹಾ ಈ ಶಾಸ್ತ್ರಗಳನ್ನು ಅರಿಯುತ್ತಿರಲಿಲ್ಲ.

ಪಶುವನ್ನು ಮನುಷ್ಯನಾಗಿ ಮಾಡುವದೂ, ಮನುಷ್ಯನನ್ನು ದೇವರಾಗಿ ಮಾಡುವದೂ ಶಾಸ್ತ್ರಗಳಲ್ಲಿ ಶಕ್ತಿಯಿದೆ. ಸಾಧನ ಚತುಷ್ಟಯ ಸಂಪನ್ನತೆಯು ಪರಾವಲಂಬನೆಯನ್ನು ನಾಶಮಾಡುವ ನಿರ್ಭ್ರಾಂತ ಆಯುಧವಾಗಿರುತ್ತದೆ; ಅದು ಮೋಕ್ಷವನ್ನು ಸಾಧಿಸಿಕೊಡುತ್ತದೆ. ಆದರೆ ಈ ಆಯುಧವನ್ನು ಹಿಡಿಯುವದೇ ಕಠಿಣವಾದದ್ದು, ಅದನ್ನು ಉಪಯೋಗಿಸಲಿಕ್ಕೆ ಹ್ಯಾಗಾಗುವದು? ಈ ಆಯುಧವನ್ನು ಹ್ಯಾಗೆ ಉಪಯೋಗ ಮಾಡಬೇಕೆಂತ ಕಲಿಯಲಿಕ್ಕೆ ಕೆಲವು ಜನ್ಮಗಳೇ ಬೇಕಾದಾವು.

**ಮೋಕ್ಷಸಾಧನವಾದ ಸಾಧನಚತುಷ್ಟಯಗಳು ಯಾವವೆಂದರೆ–**

(೧) ಆತ್ಮಾನಾತ್ಮ ವಿವೇಕ

(೨) ಈ ಲೋಕದ ಮತ್ತು ಪರಲೋಕದ ಭೋಗಗಳಲ್ಲಿ ವೈರಾಗ್ಯ.

(೩) ಷಟ್‌ಸಂಪತ್ತಿ, ಶಮ, ದಮ, ತಿತಿಕ್ಷಾ, ಉಪರತಿ, ಶ್ರದ್ಧಾ ಸಮಾಧಾನ.

(೪) ತೀವ್ರ ಮೋಕ್ಷದ ಇಚ್ಛೆ.

ಇವುಗಳಲ್ಲಿ ಪ್ರಥಮದಲ್ಲಿ ಶಾಶ್ವತ ಅಶಾಶ್ವತ ಪದಾರ್ಥಗಳ ವಿವೇಚನ, ನಿತ್ಯ ಮತ್ತು ಕ್ಷಣಿಕ, ಆತ್ಮ ಮತ್ತು ಅನಾತ್ಮ ಇವುಗಳೊಳಗಿನ ಭೇದವನ್ನು ಸ್ಪಷ್ಟವಾಗಿ ತಿಳಿಯುವದಾಗಿರುತ್ತದೆ. ಎರಡನೆ ಸಾಧನವೆಂದರೆ, ಈ ಲೋಕದ ಧನ, ಸ್ತ್ರೀ ಇತ್ಯಾದಿ ಭೋಗೋಪಯೋಗಿ ವಸ್ತುಗಳು, ಹಾಗು ಸ್ವರ್ಗದೊಳಗಿನ ಅಪ್ಸರ ದೇವಕನ್ನಿಕೆ, ನಂದನವನ ಮೊದಲಾದ ಸುಖೋಪಭೋಗಗಳು, ಇವೆಲ್ಲವುಗಳ ವಿಷಯದಲ್ಲಿ ಅತ್ಯಂತ ಹೇಯ ಬುದ್ಧಿಯು. ಷಟ್‌ಸಂಪತ್ತಿಯೆಂದರೆ (೧) ಅಂತಃಕರಣದ ಶಾಂತಿ (೨) ಬಾಹ್ಯೇಂದ್ರಿಯ ದಮನ (೩) ಎಂಥ ದುಃಖಬಂದರೂ ಸ್ವಸ್ಥ ಚಿತ್ತದಿಂದ ಸಹಿಸುವಿಕೆ. (೪) ವಿಷಯ ಪರಾಙ್ಮುಖತೆ. (೫) ಶ್ರದ್ಧೆ (೬) ಸಂತೋಷ ಅಥವಾ ಸಮಾಧಾನ. ಒಂದು ವಾರದ ತನಕ ಉಪವಾಸವಿದ್ದ ಮನುಷ್ಯನು ಹ್ಯಾಗೆ ಆಹಾರದ ಕಾಂಕ್ಷೆ ಮಾಡುವನೋ ಅದೇ ಪ್ರಕಾರ ಮೋಕ್ಷವನ್ನು ತೀವ್ರ ಲವಲವಿಕೆಯಿಂದ ಬಯಸುವದೇ ಮುಮುಕ್ಷುತ್ವ ಅಥವಾ ನಾಲ್ಕನೇ ಸಾಧನವಾಗಿರುತ್ತದೆ.

ಈ ಸಾಧನಗಳನ್ನು ಸಂಪೂರ್ಣವಾಗಿ ಸಂಪಾದಿಸಿದ ಮೇಲೆ, ಸಾಧಕನು ಸದ್ಗುರುವಿನ ಸನ್ನಿಧಿಯಲ್ಲಿ ಪ್ರಾಪ್ತನಾಗಿ ಆತನಿಗೆ ನಮಸ್ಕರಿಸತಕ್ಕದ್ದು; ಆ ಸದ್ಗುರುವು ಎಂಥವನೆಂದರೆ ಬ್ರಹ್ಮಜ್ಞಾನಿಯೂ, ಮೋಕ್ಷಶಾಸ್ತ್ರದಲ್ಲಿ ಕುಶಲನಾದವನೂ ಇದ್ದು, ಶಿಷ್ಯರಿಗೆ ಸ್ಪಷ್ಟವಾಗಿ ಬೋಧಿಸಬಲ್ಲವನಾಗಿರಬೇಕು. ಅನಂತರ ಸದ್ಗುರುವು ಶಿಷ್ಯನ ದೃಢತೆಯನ್ನು ಅನೇಕ ರೀತಿಯಿಂದ ಪರೀಕ್ಷಿಸಿ, ಕಡೆಗೆ ಆತನ ಮೇಲೆ ದಯೆಹೊಂದಿ ಅವನಿಗೆ ' ತತ್ತ್ವಮಸಿ ' ( ಅದು ನೀನು ಇದ್ದಿ ) ಈ ಮಹಾವಾಕ್ಯವನ್ನು ಬೋಧಿಸುವನು. ಶಿಷ್ಯನು ಆ ಮಹಾವಾಕ್ಯಾರ್ಥವನ್ನು ಅನಂತರ ಕಾರ್ಯದಲ್ಲಿ ತರತಕ್ಕದ್ದು. ಕಟ್ಟಕಡೆಗೆ ಅವನಿಗೆ ಪೂರ್ಣಜ್ಞಾನವಾಗಿ ಮೋಕ್ಷವನ್ನು ಪಡೆಯುವನು ಇವೆಲ್ಲವುಗಳಲ್ಲಿ ಎಷ್ಟು ದುಃಸಾಧ್ಯ ತೊಂದರೆಗಳಿವೆ ! ಈ ನಾಲ್ಕು ಸಾಧನೆಗಳ ಪೈಕಿ ಯಾವದಾದರೂ ಒಂದು ಸಾಧನವನ್ನು ಕುರಿತು ವಿಚಾರ ಮಾಡಿದರೆ, ಅದರ ಭಯಂಕರ ವಿಸ್ತಾರವನ್ನೂ ಕಠಿಣತೆಯನ್ನೂ ಕಂಡು ಭ್ರಾಂತರಾಗುವೆವು. ಆದರೆ, ನಾಲ್ಕನೆಯ ಸಾಧನದ ಮಟ್ಟಿಗೆ ಪ್ರತಿಯೊಬ್ಬನಿಗೂ ಹೆಚ್ಚು ಕಡಿಮೆ ಪ್ರಮಾಣದಿಂದ ಮೋಕ್ಷಾಪೇಕ್ಷೆಯು ಇರುವದು. ಕಾರಣವೇನಂದರೆ ಯಾರಿಗೂ ಬಂಧನ ಬೇಕಾಗಿರುವದಿಲ್ಲ, ಯಾಕಂದರೆ ಬಂಧನದಿಂದ ದುಃಖವು ಮತ್ತು ಸ್ವಾತಂತ್ರ್ಯತೆಯಿಂದ ಸುಖವು ಪ್ರಾಪ್ತವಾಗುವವು. ಮುಂದರಿಸಿ ಹೇಳುವದಾದರೆ ಸ್ವಾತಂತ್ರ್ಯತೆಯೇ ಸುಖವು. ವೇದಾಂತದಲ್ಲಿ ಮೋಕ್ಷವೆಂದರೆ ದುಃಖದ ನಿವೃತ್ತಿ ಮತ್ತು ಪರಮಾನಂದ ಪ್ರಾಪ್ತಿ ಎಂದು ಹೇಳಿರುತ್ತದೆ. ಸಾಂಖ್ಯರು ದುಃಖನಿವೃತ್ತಿಯೇ ಸುಖವೆಂದೆನ್ನುವರು. ಆದ್ದರಿಂದ ಕೆಲವು ತಜ್ಞರು ಹೇಳುವದೇನಂದರೆ, ವೇದಾಂತದ ಪ್ರಕಾರ ಮೋಕ್ಷವು ನಿಶ್ಚಿತ ವಸ್ತು ಹಾಗೂ ಸಾಂಖ್ಯದ ಪ್ರಕಾರ ಅದು ಅನಿಶ್ಚಿತವಾದದ್ದು.

ಯಾವಾತನು ಮೋಕ್ಷವನ್ನು ತೀವ್ರ ಆಕಾಂಕ್ಷೆಯಿಂದ ಬಯಸುವನೋ ಅವನೇ ಆ ಮೋಕ್ಷ ಅಥವಾ ಪರಮಾನಂದವನ್ನು ಹೊಂದುವನು ಈ ತೀವ್ರ ಆಕಾಂಕ್ಷೆಯು ಯಾವಾಗ ಹುಟ್ಟುವದು ? ಯಾವಾಗ ಸಂಸಾರ ಬಂಧನದಿಂದ ಪ್ರಾಪ್ತವಾಗುವ ದುಃಖವು ಅತ್ಯಂತ ಅಸಹ್ಯವಾದ್ದೆಂತ ಮನವರಿಕೆಯಾಗುವದೋ ಆಗ ಈ ಮೋಕ್ಷಾಕಾಂಕ್ಷೆಯು ಹುಟ್ಟುವದು. ಯಾವನೊಬ್ಬ ಮನುಷ್ಯನಿಗೆ ಅತ್ಯಂತ ದುಃಖ ಯಾವಾಗ ಪ್ರಾಪ್ತಿಯಾಗುವದೋ ಆಗಲೆ ಅದರಿಂದ ಬಿಡುಗಡೆ ಹೊಂದಬೇಕೆಂತ ಅವನಿಗೆ ಇಚ್ಛೆಯು ಹುಟ್ಟುವದು. ಸಂಸಾರ ದುಃಖದೊಳಗಿಂದ ಪಾರಾಗಬೇಕೆಂತ ಹುಟ್ಟಿದ ಇಚ್ಛೆಗೆ ಮುಮುಕ್ಷತ್ವವೆನ್ನುತ್ತಾರೆ.

ಈ ಮುಮುಕ್ಷತ್ವವಾದರೂ ಮೊದಲಿನ ಮೂರು ಸಾಧನಗಳು ಸಾಧಿಸಿದ ವಿನಹಾ ಉದ್ಭವಿಸಲಾರದು. ಇವೆಲ್ಲ ಸಂಗತಿಗಳನ್ನು ವಿಚಾರ ಮಾಡಿದರೆ, ಮನುಷ್ಯಜೀವನು ಇಷ್ಟು ಅದ್ಭುತ ಕಾರ್ಯಗಳನ್ನು ಸಾಧಿಸುವದಕ್ಕೆ ನಿರಾಶೆ

ಪಡುವನು ಎಂಬದು ಆಶ್ಚರ್ಯವಲ್ಲ. ಮನುಷ್ಯಜೀವನು ಬಂಧನದಿಂದ ತಪ್ಪ ಬೇಕೆಂದೂ ನಿತ್ಯಾನಂದವನ್ನು ಹೊಂದಬೇಕೆಂದೂ ಬಯಸುವನು ಎಂಬದರಲ್ಲಿ ಸಂಶಯವಿಲ್ಲ; ಆದರೆ ಅವನು ಈ ಕಾರ್ಯಸಾಧನೆಗೆ ಬೇಕಾಗುವ ಕಷ್ಟ ವ ತೊಂದರೆಗಳನ್ನು ಅನುಭವಿಸಲಿಕ್ಕೆ ತಾನು ಶಕ್ತನಲ್ಲವೆಂತ ತಿಳಿಯುವನು.

ಇಂಥ ಅಶಕ್ತ ವ ಪಾಪಿ ಜೀವರನ್ನು ಉದ್ಧರಿಸುವದಕ್ಕಾಗಿಯೇ ಸಾಧು ಸತ್ಪುರುಷರು ಈ ಲೋಕದಲ್ಲಿ ಅವತರಿಸುವರು. ಅವರು ಮೇಲೆ ಹೇಳಿದ ನಾಲ್ಕು ಸಾಧನೆಗಳ ಪರೀಕ್ಷೆ ಮಾಡುವದಿಲ್ಲ. ಶ್ರದ್ಧೆಯೇ ಅವರಿಗೆ ಸಾಕಾಗು ವದು ಅವರು ದಯಾಸಾಗರಿರುವದರಿಂದ ಇಂಥ ಬಡ ಜೀವಾತ್ಮರನ್ನು ಉದ್ಧರಿ ಸುವ ಕಾರ್ಯವನ್ನು ಕೈಕೊಳ್ಳುವರು. ಅವರು ಚೈತನ್ಯದ ಆಭರಣಗಳಂತಿರು ವರು ಅವರು ಬ್ರಹ್ಮವಿದ್ಯೆಯ ಅಲಂಕಾರವಾಗಿದ್ದು, ದೇವರ ವಾಸ್ತವ್ಯಕ್ಕೆ ಸುಂದ ರವಾದ ಅರಮನೆಯಂತಿರುವರು ಮೇಲೆ ಬರೆದಂತೆ ಶ್ರೀ ಏಕನಾಥ ಮಹಾರಾಜ ರಾವರೂ ಇದೇ ಮಾತನ್ನು ಹೇಳಿರುತ್ತಾರೆ.

ಶ್ರೀಜ್ಞಾನೇಶ್ವರ ಮಹಾರಾಜರಾದರೂ ಒಂದು ಕಡೆಯಲ್ಲಿ ಸತ್ಪುರುಷರ ವರ್ಣನೆ ಮಾಡುತ್ತಿರುವಾಗ ಅವರ ವಿಷಯದಲ್ಲಿ ಕೆಲವು ಸುಂದರ ಭಾವನೆಗಳನ್ನು ಪ್ರಯೋಗಿಸಿರುವರು. ಅವರು ಹೇಳುತ್ತಾರೆ, " ಪವಿತ್ರವಾದ ಕಾಶಿಕ್ಷೇತ್ರವು ಮೋಕ್ಷವನ್ನು ಕೊಡುವದರಲ್ಲಿ ಬಹಳ ಉದಾರವಾಗಿದೆ, ಎಂಬದರಲ್ಲಿ ಸಂಶಯ ವಿಲ್ಲ. ಆದರೆ ಇದಕ್ಕಾಗಿ ಅಲ್ಲಿ ಸಾಯಬೇಕಾಗಿದೆ. ಭಾಗೀರಥಿಯಾದರೂ ಪಾಪ ವ ದುಃಖಗಳನ್ನು ನಿವಾರಿಸುತ್ತದೆಂಬದು ನಿಶ್ಚಯವು, ಆದರೆ ಅದರಲ್ಲಿ ಮುಳುಗು ವದು ಅವಶ್ಯವಾಗಿದೆ. ಆದರೆ ಸಾಧುಸಂತರು ದಯಾಸಾಗರರು ಮತ್ತು ಪವಿತ್ರ ತೀರ್ಥರೂಪರು ಇದ್ದರೂ, ಮತ್ತು ಅವರ ಗೂಢತೆ ಬಹು ಆಳವಾಗಿದ್ದರೂ ಭಕ್ತ ಜನರು ಸಾಯುವದೂ ಮುಳುಗುವದೂ ಅವಶ್ಯವಿಲ್ಲ. ಅವರು ಬಹಳ ಆಳವಿದ್ದರೂ ಭಕ್ತರು ಮುಳುಗುವದಿಲ್ಲ, ಆದರೆ ಸಾಯಬೇಕಾಗಿಲ್ಲದೆ ಕೂಡಲೇ ಮೋಕ್ಷವನ್ನು ಹೊಂದುವರು. "

ಮುಖ್ಯ ತಾತ್ಪರ್ಯವೆಂದರೆ ಸಾಧುಸಂತರ ಮಹತ್ವವು ಸಾಮಾನ್ಯ ಜನ ರಿಗೆ ಕಲ್ಪನಾತೀತವಾಗಿರುತ್ತದೆ. ಯಾವಾತನಾದರೂ ನಮ್ರಭಾವದಿಂದ ಅವ ರಿಗೆ ಶರಣಾಗತನಾದರೆ ಅವನು ನಾಲ್ಕುಸಾಧನೆಗಳನ್ನು ಸಂಪಾದಿಸಿದ್ದಾನೋ, ಇಲ್ಲವೋ ಎಂತ ಕೇಳುವದಿಲ್ಲ. ಅವನಿಗೆ ಪೂರ್ಣಶ್ರದ್ಧೆ ಇರುವದೋ, ಇಲ್ಲವೋ ಎಂಬದಷ್ಟೆ ಅವರು ನೋಡುತ್ತಾರೆ. ಅದು ಶಿಷ್ಯನಲ್ಲಿತ್ತೆಂದರೆ ಅವರು ಸುಲಭ ವಾಗಿ ಅವನನ್ನು ಆತ್ಮಸಾಕ್ಷಾತ್ಕಾರದ ಅತ್ಯುಚ್ಚ ಅವಸ್ಥೆಗೆ ಮುಟ್ಟಿಸುತ್ತಾರೆ. ಯಜ್ಞಗಳಿಂದಲೂ ಯೋಗಾಭ್ಯಾಸದಿಂದಲೂ ಹೊಂದಲಿಕ್ಕೆ ಅಸಾಧ್ಯವಾದಂಥ

ಅನುಭವಗಳು ಶಿಷ್ಯನಿಗೆ ಸಹಜವಾಗಿ ಬರುವಂತೆ ಅವರು ಮಾಡುತ್ತಾರೆ. ಶ್ರೀಗಜಾನನ ಮಹಾರಾಜರ ಚರಿತ್ರದಲ್ಲಿ ಇದೇ ಪ್ರಕಾರದ ಉದಾಹರಣೆಗಳಿವೆ ತಾವು ಸರಿಯಾಗಿ ಅನುಭವಗಳನ್ನು ಪಡೆದುದಲ್ಲದೆ ಬೇರೆಯವರಿಗೆ ಸಹಾ ಆತ್ಮ ಸಾಕ್ಷಾತ್ಕಾರದ ಅನುಭವಗಳನ್ನು ಮಾಡಿಸಿಕೊಡುವವರು ಬಹಳೇ ಅಪರೂಪ. ಅಂಥ ಸಂತರ ದರ್ಶನವಾಗುವದಕ್ಕೆ ಅನೇಕ ಜನ್ಮದ ಪುಣ್ಯದ ಸಂಚಯ ಬೇಕು. ಹಾಗಿಲ್ಲದಿದ್ದರೆ ಸಂತರು ಸಮೀಪದಲ್ಲಿದ್ದರೂ ಅವರ ಮಹತ್ವವನ್ನು ತಿಳಿದು ಅವರ ಭೆಟ್ಟಿಯ ಇಚ್ಛೆಯಾಗುವದು ಬಹಳ ಕಠಿಣವದೆ. ಯಾಕಂದರೆ ಈಗಿನ ಕಾಲದಲ್ಲಿ ಬಹಳ ಪ್ರಸಿದ್ಧಿಗೆ ಬಂದಿರುವ ಮತ್ತೊಂದು ಕಾರಣವೂ ಅದೆ.

## ಬುವಾಬಾಜಿಯ ಭೂತ ( ಸುಳ್ಳು ಸಂತರು )

ಈ ಭೂತವು ಈಗ ಎಲ್ಲ ಜನರ ಕಣ್ಣುಮುಂದೆ ಕುಣಿದಾಡುತ್ತದೆ. ಮಹಾರಾಷ್ಟ್ರದಲ್ಲಿ ಈ ಭೂತವು ಅನೇಕರನ್ನು ಹೊಂದಿಕೊಂಡಿರುತ್ತದೆಂತಲೂ ಅನ್ನಬಹುದು. ಜನರನ್ನು ಮೋಸಗೊಳಿಸುವ ಸುಳ್ಳು ಸಂತರು ಹಿಂದಿನಕಾಲದಲ್ಲಿ ಇದ್ದರು, ಅವರು ಈಗಲೂ ಇದ್ದಾರೆ. ಮುಂದಿನ ಕಾಲದಲ್ಲಿಯೂ ಇರುವರು. ಯಾರೂ ಅವರ ಖರೆತನವನ್ನು ಮನ್ನಿಸಲಾರರು ಅಥವಾ ಅವರ ಸಲುವಾಗಿ ಚಲೊ ಮಾತು ಅನ್ನಲಾರರು. ಏಕನಾಥ, ತುಕಾರಾಮರಂಥ ಸತ್ಪುರುಷರು ಇಂಥ ಸುಳ್ಳು ಸಾಧುಗಳ ವಿಷಯ ಬಹಳ ತೀಕ್ಷ್ಣವಚನಗಳನ್ನು ನುಡಿದಿದ್ದಾರೆ. ಆದರೆ ನನ್ನ ಅಂಬೋಣವೇನಂದರೆ, ಅವರಿಂದಲೂ ಅವರಲ್ಲಿ ವಿಶ್ವಾಸವಿಟ್ಟ ಜನರ ಮುರ್ಖತನದಿಂದಲೂ ಸಮಾಜವು ಕೆಟ್ಟಸ್ಥಿತಿಗೆ ಬಂತೆಂಬ ಗುಲ್ಲು, ಯೋಗ್ಯವಿರುವದಕ್ಕಿಂತ ಅಧಿಕವಾಗಿದೆ. ನನ್ನ ಅಭಿಮತದಿಂದ ಸಮಾಜವು ಇತರ ಅನೇಕ ಪ್ರಕಾರದ ವ್ಯಸನಗಳಿಂದ ಹೆಚ್ಚು ದೂಷಿತವಾಗಿದೆ ನಾವು ಸತ್ಯಶೋಧಕ ಬುದ್ಧಿಯಿಂದ ಸಮಾಜವು ಇತರ ವ್ಯಸನಗಳಿಂದ ಹೆಚ್ಚಿಗೆ ಕೆಟ್ಟದ್ದೊ ಮತ್ತು ಇಂಥ ಸಂತರ ಕಾರ್ಯಗಳಿಂದ ಅಧಿಕ ಕೆಟ್ಟದ್ದೊ ಎಂಬದು ವಿವೇಚನ ಮಾಡಿನೋಡಿದರೆ ಸಂತರ ಜವಾಬದಾರಿಯು ಅಲ್ಪವೇ ಸರಿ. ಮದ್ಯಪಾನ, ಜೂಜಾಟ, ಮೋಸಗಾರಿಕೆ ಮುಂತಾದ ವ್ಯಸನಗಳು ಸಮಾಜವೃಕ್ಷದ ಬೇರುಗಳನ್ನೇ ಭಕ್ಷಿಸುತ್ತಿವೆ. ಇವುಗಳ ಪೈಕಿ ಮೋಸಗಾರಿಕೆಯು ಎಲ್ಲ ವ್ಯವಹಾರಗಳಲ್ಲಿ ವ್ಯಾಪಿಸಿದೆ, ವ್ಯಾಪಾರಿಗಳು ಅನೇಕ ರೀತಿಯಿಂದ ಗಿರಾಕಿಗಳನ್ನು ಮೋಸಪಡಿಸುವದು ವರ್ಣಿಸಲಾಗದು. ಇಂಥ ಸಂತರನ್ನು ದೂಷಣೆಗೆ ಪಾತ್ರಮಾಡಿ ಬಹಿಷ್ಕಾರ ಮಾಡುವದಕ್ಕೆ ಸಂಘಗಳನ್ನು ಏರ್ಪಡಿಸುವದಕ್ಕಿಂತ, ಸಮಾಜದ ಮೇಲೆ ಹೇಳಿದ ದುಷ್ಟವ್ಯಸನಗಳನ್ನು ಹೋಗಲಾಡಿಸುವದಕ್ಕೆ ಸಂಘಗಳನ್ನು ಸ್ಥಾಪಿಸಿದರೆ ಎಷ್ಟೋ ಲೋಕೋಪಕಾರವಾದೀತು.

ಸುಳ್ಳು ಸಂತರಿಂದ ಸಮಾಜಕ್ಕೆ ಆಗುವ ಹಾವಳಿಯು ಅತ್ಯಲ್ಪವಾಗಿರುವದೆಂದು ನಾನು ತೋರಿಸಲಿಚ್ಛಿಸುತ್ತೇನೆ. ಗೀತೆಯಲ್ಲಿ ಹೇಳಿದೆ, "ಸಾವಿರಾರು ಮನುಷ್ಯರಲ್ಲಿ ಒಬ್ಬನು ಪರಮಾರ್ಥ ಮಾರ್ಗದಲ್ಲಿ ನಡೆಯಲಿಕ್ಕೆ ಯತ್ನಿಸುವನು" ಇದರಿಂದ ಗೊತ್ತಾಗುವದೇನಂದರೆ, ಸಮಾಜದ ಸಾವಿರದಲ್ಲಿ ಒಂದಂಶವೂ ಸಂತರ ಕಡೆಗೆ ಹೋಗುವದಿಲ್ಲ. ನಾವು ಇದಕ್ಕೂ ಹೆಚ್ಚಿನ ಪ್ರಮಾಣದಿಂದ ಎಣಿಸೋಣ. ಹತ್ತುಸಾವಿರ ವಸ್ತಿಯುಳ್ಳ ಊರೊಳಗಿನ ಒಂದು ನೂರು ಮಂದಿ ಪರಮಾರ್ಥಿಕರಿರುತ್ತಾರೆಂದು ತಿಳಿಯುವಾ. ಈ ನೂರರೊಳಗೆ ಯಾವನಾದರೊಬ್ಬನು ಸಂತಸ್ಥಿತಿಗೆ ಮುಟ್ಟಿರುವನು. ಸಹಜ ರೀತಿಯಿಂದ ಒಬ್ಬ ಸಂತನಿಗೆ ಸಾವಿರಕ್ಕಿಂತ ಹೆಚ್ಚಿಗೆ ಜನರು ಶಿಷ್ಯರಾಗಿರುತ್ತಾರೆ ಈ ಸಾವಿರ ಜನರೂ ಎಲ್ಲಾ ಮೂರ್ಖರೂ ಬುದ್ಧಿಗೇಡಿಗಳೂ ಇರುವದಿಲ್ಲ. ಅವರ ಪೈಕಿ ಕೆಲವರು ಈ ಬುವಾಬಾಜಿಯ ಪೋಷಕರಿಗಿಂತ ಎಷ್ಟೋ ಕುಶಲರೂ, ವಿದ್ಯಾವಂತರೂ ಇರುವರು. ಈ ವಿದ್ಯಾವಂತರೂ, ಕುಶಲರೂ ಆದವರೆಲ್ಲಾ ಹುಚ್ಚರೂ, ಮೋಸಗೊಂಡವರೂ ಎಂದು ತಿಳಿದು ಜ್ಞಾನವೆಲ್ಲಾ ತನ್ನ ಪಾಲಿನದೇ ಎಂತ ತಿಳಿಯುವಂಥವರ ಸ್ಥಿತಿಯಾದರೂ ಸಂಶಯಾಸ್ಪದವಾಗಿರುತ್ತದೆ. ಸಂತರ ಬೆನ್ನು ಹತ್ತಿದ ಈ ನೂರು ಮಂದಿಯ ವಿಚಾರವನ್ನು ಒತ್ತಟ್ಟಿಗಿಟ್ಟು ಉಳಿದ ಒಂಭತ್ತುಸಾವಿರದ ಒಂಭತ್ತುನೂರು ಜನರೊಳಗೆ ಮೇಲೆ ಹೇಳಿದ ವ್ಯಸನಗಳು ಎಷ್ಟು ಹಾವಳಿ ಮಾಡುವವೆಂಬದು ವಿಚಾರ ಮಾಡತಕ್ಕ ವಿಷಯವಾಗಿದೆ

ನನ್ನ ತರುಣ ವಯಸ್ಸಿನ ಆಪ್ತನೊಬ್ಬನು ಯಾವಾಗಲೂ ಸಂತರ ನಿಂದೆ ಮಾಡುವದರಲ್ಲಿ ಸಂತೋಷಪಡುತ್ತಿದ್ದು, ಒಮ್ಮೆ ನೌಕರಿ ಸಲುವಾಗಿ ಮುಂಬಯಿಗೆ ಬಂದಿದ್ದನು. ಅವನು ಸುರೂಪನೂ, ಗಾಯನಪ್ರಿಯನೂ ಇದ್ದು, ಗಾಯನದಲ್ಲಿ ವಿಶೇಷ ಕುಶಲತೆಯನ್ನು ಪಡೆದಿದ್ದನು. ಅವನು ಸಿನೇಮಾ ಕಂಪನಿಯವರ ಒಂದೆರಡು ಜಾಹೀರಾತುಗಳನ್ನು ನೋಡಿ, ಮಾಲಕರಿಗೆ ಭೆಟ್ಟಿಯಾದನು. ಗಾಯನ ವ ಸಂಭಾಷಣಗಳಲ್ಲಿ ಅವನ ಪರೀಕ್ಷೆ ತಕ್ಕೊಳ್ಳಲಾಯಿತು ಒಂದು ಪ್ರಸಿದ್ಧ ಕಂಪನಿಯ ಮಾಲಕನು ಅವನಿಗೆ ಒಳ್ಳೇ ಆಶೆಯನ್ನು ತೋರಿಸಿದನು. ಪ್ರತಿ ದಿವಸ ಅವನು ಆ ಮಾಲಕನ ಕಡೆಗೆ ಹೋಗಿ ಮೂರುನಾಲ್ಕು ತಾಸು ಕಳೆಯುತ್ತಿದ್ದನು. ಆ ಮಾಲಕನು ಇವನನ್ನು ಬಹಳ ಆದರದಿಂದ ನಡಿಸುತ್ತಿದ್ದನು. ಮತ್ತು ಇಂಥಾದೊಂದು ತಾರೀಖಿನಿಂದ ಇವನನ್ನು ನೌಕರಿಯ ಮೇಲೆ ತಕ್ಕೊಳ್ಳುವೆನೆಂದು ಒಮ್ಮೆ ಹೇಳಿದನು. ಆ ತರುಣನು ಈ ವರ್ತಮಾನವನ್ನು ಬಹಳ ಆನಂದದಿಂದ ತನ್ನ ಮಿತ್ರರಿಗೆಲ್ಲ ತಿಳಿಸಿದಾಗ ಅವರು ಈ ಆನಂದ ಸಂಗತಿಯ ಸಲುವಾಗಿ ತಮಗೆಲ್ಲ ಒಂದು ಔತಣ ಮಾಡಿಸಬೇಕೆಂದರು, ಮತ್ತು ಅವನೂ ಆ ಪ್ರಕಾರ ವಚನ ಕೊಟ್ಟನು. ಆದರೆ ಆ ನೇಮಿಸಿದ ದಿವಸ ಅವನಿಗೆ ಆ ನೌಕರಿ

ಕೊಡಲಿಲ್ಲ. ಮುಂದೆ ಒಂದು ದಿನ ನೇಮಿಸಲ್ಪಟ್ಟಿತು. ಈ ಪ್ರಕಾರ ನೇಮಣೂಕಿಯ ದಿವಸವು ಮುಂದೆ ಮುಂದೆ ಹಾಕಲ್ಪಟ್ಟಿತು. ಆಗ ಅವನ ಮಿತ್ರರಂದರು, "ಆ ಮಾಲಕನು ಮೋಸ ಮಾಡುವನು ಮತ್ತು ಅವನು ವಚನವನ್ನು ನಡಿಸುವನೊ ಇಲ್ಲವೊ ಎಂತ ನೋಡುತ್ತಾ ಇದ್ದರೆ, ಎಂದೆಂದಿನ ತನಕ ಕಾಯಬೇಕಾದೀತು ಮತ್ತು ಇತರ ಕಡೆಯಲ್ಲಿ ನೌಕರಿ ಸಿಗುವದೂ ತಪ್ಪೀತು." ಆಗ ಆ ತರುಣನಂದನು "ಇಲ್ಲ, ಇಲ್ಲ. ಆ ಮನುಷ್ಯನು ಅಂಥವನಲ್ಲ. ಅವನು ಎರಡು ಸಲ ದಿವಾಳಿ ತೆಗೆದಿರುವನು, ಮತ್ತು ಪ್ರತಿ ಸರ್ತಿ ಅವನ ಸಾಲವು ಹತ್ತುಲಕ್ಷ ರೂಪಾಯಿಗಳಾಗಿದ್ದವು. ಆದರೆ ತನ್ನ ದಿವಾಳಿಯ ನಿರ್ಣಯ ಆಗುವ ಮೊದಲು ತನ್ನ ಇಬ್ಬರು ರಂಡೇರ ಪೈಕಿ ಪ್ರತಿ ಒಬ್ಬಾಕಿಗೆ ಐವತ್ತುಸಾವಿರ ರೂಪಾಯಿಗಳನ್ನು ಕೊಟ್ಟಿದ್ದನು." ಇದನ್ನು ಕೇಳಿದ ಕೂಡಲೆ ನಾನು ಕೈ ಚಪ್ಪಳಿಸಿ ಹೀಗಂದೆ "ಅವನು ಏನನ್ನುತ್ತಾನೆಂಬದು ಕೇಳಿರಿ. ಎರಡು ಸಲ ದಿವಾಳಿ ತೆಗೆದು, ತನ್ನ ಇಬ್ಬರು ರಂಡೆರಿಗೆ ಪ್ರತಿ ಒಬ್ಬಾಕಿಗೆ ಐವತ್ತುಸಾವಿರ ರೂಪಾಯಿ ಕೊಟ್ಟಂಥ ಗೃಹಸ್ಥನು ವಿಶ್ವಾಸರ್ಹನು ಆದರೆ ಒಬ್ಬ ಸಂತನಿಗೆ ಐದು, ಹತ್ತು ಅಥವಾ ಐನೂರು ರೂಪಾಯಿ ಕೊಟ್ಟವನು ಹುಚ್ಚನು. ಯಾವನೊಬ್ಬ ಸಂತನು ಕಪಟಿ, ಮೋಸಗಾರನೂ ಇದ್ದರೂ ಇರಬಹುದು. ಹಾಗಿದ್ದರೆ ಅವನು ತನ್ನ ಪಾಪಕ್ಕಾಗಿ ದುಃಖಪಡುವನು, ಆದರೆ ಅವನಿಗೆ ವಿಶ್ವಾಸದಿಂದ ಹಣಕೊಟ್ಟವರು ದುಃಖಪಟ್ಟಾರೇನು? ಅವರ ವಿಶ್ವಾಸ ವ ಶುದ್ಧಭಾವಕ್ಕಾಗಿ ಅವರಿಗೆ ಶುಭವಾದ ಗತಿ ಸಿಕ್ಕದಿರದು. ಆದರೆ ರಂಡೆರಿಗೆ ಧನವನ್ನು ಕೊಟ್ಟ ಮನುಷ್ಯನ ಮನೋಭಾವವು ಹ್ಯಾಗಿದ್ದೀತು ಮತ್ತು ಅವನ ಕರ್ಮದ ಫಲವು ಹ್ಯಾಗಾದೀತು?" ಆ ತರುಣನು ಸ್ತಬ್ಧನಾದನು, ಏನು ಉತ್ತರ ಕೊಡಬೇಕೆಂತ ತೋರದೆ ಸುಮ್ಮನಿದ್ದನು ಅವನ ಮಿತ್ರರೆಲ್ಲ ಅವನಿಗೆ ಬಹಳ ಕುಚೇಷ್ಟೆಮಾಡಿದರು ಮತ್ತು ಅಂದಿನಿಂದ ಅವನು ಸಂತರ ದೂಷಣೆ ಮಾಡುವದನ್ನು ಬಿಟ್ಟುಬಿಟ್ಟನು. ಅವನ ಮಿತ್ರರು ಹೇಳಿದಂತೆ ಆ ಫಿಲ್ಮ ಮಾಲಕನು ಅವನನ್ನು ಕಟ್ಟಕಡೆಗೆ ಮೋಸ ಮಾಡಿದನು.

ಭೋಳೆ ಶಿಷ್ಯರ ವಿಶ್ವಾಸದ ಮೇಲೆ ತಮ್ಮ ಕಾರ್ಯ ಜರುಗಿಸುವ ಸುಳ್ಳು ಸಂತರು ತಮ್ಮ ಪಾಪಗಳ ಪ್ರಾಯಶ್ಚಿತ್ತಕ್ಕೆ ಗುರಿಯಾಗದೆ ಹೋಗಲಾರರು. ಹಾಗೆಯೆ ಎಲ್ಲ ಸಂತರೂ ಕಪಟಿಗಳೆಂತ ಅನ್ನುವವರೂ ದುಃಖಕ್ಕೆ ಗುರಿಯಾಗುವರು. ಸಮಾಜದ ಪ್ರತಿವರ್ಗದಲ್ಲಿ ಅಪ್ರಾಮಾಣಿಕರು ಇದ್ದೇ ಇರುವರು. ಮೋಸಗಾರರೊಳಗೆ, ವ್ಯಾಪಾರಿಗಳು, ವೈದ್ಯರು, ವಕೀಲರು ಮತ್ತು ಹಾಗನಿಸಿಕೊಳ್ಳುವ ದೇಶಾಭಿಮಾನಿಗಳೂ ಇರುವರು. ಆದರೆ ಈ ಕಾರಣದ್ದೆಸೆಯಿಂದ ವ್ಯಾಪಾರಿಗಳೂ, ವೈದ್ಯರೂ, ವಕೀಲರೂ, ದೇಶಾಭಿಮಾನಿಗಳೂ ಇವರೆಲ್ಲರೂ ಅಪ್ರಾಮಾಣಿಕರೆಂತ ಹೇಳಲಾಗದು. ಹಾಗೆಯೆ ಎಲ್ಲ ಸಂತರು ಸುಳ್ಳು ಮತ್ತು ಕಪಟಿಗಳೆಂತ

ಅನ್ನುವದು ಹುಚ್ಚತನದ ಮಾತಾಗಿರುವದು. ವಿಚಾರಸ್ಥರು ತಮ್ಮ ಅಭಿಪ್ರಾಯ ಕೊಡುವ ಮೊದಲು ಬಹಳ ಜಾಗ್ರತೆಯಿಂದ ಈ ವಿಷಯದಲ್ಲಿ ನಡಿಯತಕ್ಕದ್ದು.

ಒಂದು ಹಿಂದೀ ಸುಭಾಷಿತದಲ್ಲಿ ಹೀಗೆ ಹೇಳಿದೆ, ಬೆಂಕಿ, ಅರಸರು, ನೀರು ಮತ್ತು ಸಂತರು ಇವರ ಕೂಡ ನಡಿಯುವಾಗ ಬಹಳ ಜಾಗ್ರತೆಯಾಗಿರಬೇಕು. ಇಂಥ ಪ್ರಸಂಗದಲ್ಲಿ ಯೋಗ್ಯವಾದ ಮುಂಜಾಗ್ರತೆಯಿಂದ ವಿಚಾರದಿಂದ ನಡೆದರೆ ಪೂರ್ಣ ಲಾಭವಾಗುವದು, ಹಾಗಲ್ಲವಾದರ ಸಂಪೂರ್ಣ ನಾಶವೇ ಪರಿಣಾಮ ವಾಗುವದು.

ಶ್ರೇಯಸ್ಸನ್ನು ಬಯಸುವ ಜನರಿಗೆ ಶ್ರೀತುಕಾರಾಮರೂ ಎಚ್ಚರಿಕೆ ಕೊಡುತ್ತಾರ. ಸಂತಸಂಗತಿಯನ್ನು ತೀವ್ರವಾಗಿ ಆಕಾಂಕ್ಷೆ ಮಾಡುವ ತುಕಾ-ರಾಮರ ಅನೇಕ ಅಭಂಗಗಳವೆ. ಒಂದು ಪ್ರಸಿದ್ಧ ಪದದಲ್ಲಿ ಹೇಳುತ್ತಾರೆ, "ನನಗೆ ಧನಸಂಪತ್ತೂ ಮೋಕ್ಷವೂ ಬೇಕಾಗಿಲ್ಲ; ಆದರೆ ನಾನು ಯಾವಾಗಲೂ ಸಂತರ ಸಂಗತಿಯಲ್ಲಿರುವಂತೆ ಮಾಡು." ಇದೇ ಸರಣಿಯ ಮೇಲೆ ಅಂಥ ಅಭಂಗಗಳಿ ರುತ್ತವೆ. ಆದರೆ ಕೆಳಗೆ ಕೊಟ್ಟ ಅಭಂಗದಲ್ಲಿ, ಯಾವಾಗಲೂ ಸಂತರ ಸಂಗತಿ ಯಲ್ಲಿರಬಾರದು, ಎಂದು ಅದಕ್ಕೆ ಕಾರಣಗಳನ್ನೂ ಕೊಟ್ಟಿದ್ದಾರೆ. ತಮ್ಮ ಶಾಶ್ವತ ಶ್ರೇಯಸ್ಸನ್ನು ಇಚ್ಛಿಸುವವರು ಈ ಅಭಂಗವನ್ನು ಜಾಗ್ರತೆಯಿಂದ ಓದಿ ವಿಚಾರ ಮಾಡತಕ್ಕದ್ದು.

"ನಾವು ಸರ್ವಕಾಲದಲ್ಲಿ ಸಂತರ ಕೂಡ ಇರಬಾರದು, ಯಾಕಂದರೆ ಕೆಲವು ದೋಷಗಳು ನಮ್ಮನ್ನು ಅಂಟಿಕೊಂಡಾವು. ಒಮ್ಮೆ ಅವು ಅಂಟಿಕೊಂಡ ವೆಂದರೆ, ಅವನ್ನು ಕಳಕೊಳ್ಳಲಾಗುವದಿಲ್ಲ, ಮತ್ತು ಆದರಿಂದ ಹಿಂದೆ ಮಾಡಿದ ಪುಣ್ಯವೆಲ್ಲ ನಾಶವಾದೀತು. ತುಕಾರಾಮನು ಹೇಳುತ್ತಾನೆ, ಸಂತರನ್ನು ದೂರ ದಿಂದ ನಮಸ್ಕರಿಸಬೇಕು, ಮತ್ತು ಅವರ ರೂಪವನ್ನು ಹೃದಯದಲ್ಲಿ ಧಾರಣೆ ಮಾಡಬೇಕು."

ಈಗ ನಾವು ಈ ಅಭಂಗದ ಖರೇ ಅರ್ಥವನ್ನು ವಿವೇಚಿಸುವಾ, ಒಬ್ಬ ಸಂತನು ಎಷ್ಟು ಮಹತ್ವವುಳ್ಳವನಾದರೂ, ದೇಹ ಪ್ರಕೃತಿಯು ಗುಣಗಳು ಬಾಹ್ಯ ದಲ್ಲಿ ತೋರುವಂಥವು ಬಹುಶಃ ಬದಲಾಗುವದಿಲ್ಲ, ದೇಹವೇ ತಾನೆಂತ ತಿಳಿ ದಿರುವ ಸಾಮಾನ್ಯ ಜನರು, ವಿದೇಹ ಸ್ಥಿತಿಯನ್ನು ಹೊಂದಿರುವ ಸಂತರ ಸ್ಥಿತಿ ಯನ್ನು ತಿಳಿಯಲಾರರು. ಆದ್ದರಿಂದ ಸಾಮಾನ್ಯ ಜನರು ಸಂತರ ಬಾಹ್ಯ ಕ್ರಿಯೆ ಗಳಲ್ಲಿ ಗುಣದೋಷಗಳನ್ನು ಆರೋಪಿಸುವರು. ಬಾಹ್ಯಾಚರಣೆಯ ಗುಣದೋ ಷಗಳೆಲ್ಲ ಪ್ರಕೃತಿಯ ಕಾರ್ಯವಾಗಿದ್ದು, ಸಂತರು ಸದಾ ತಮ್ಮ ಲಕ್ಷ್ಯವನು

ಪ್ರಕೃತಿಗೆ ಅತೀತವಾಗಿರುವ ಪರಬ್ರಹ್ಮದಲ್ಲಿ ಇಟ್ಟಿರುವರು. ಸಂತರ ಬಾಹ್ಯಾಚರಣೆಗಳನ್ನಷ್ಟೆ ನೋಡಿ ಸಾಮಾನ್ಯ ಜನರು ಸಂತರನ್ನು ನಿಂದಿಸುತ್ತಾರೆ, ಮತ್ತು ಇದರಿಂದ ತಮ್ಮ ಪೂರ್ವಪುಣ್ಯವನ್ನೆಲ್ಲ ಕಳಕೊಳ್ಳುವರು. ಪ್ರಾಯಶ್ಚಿತ್ತದಿಂದ ಇತರ ಪಾಪಗಳನ್ನೆಲ್ಲ ತೊಳೆಯಬಹುದು, ಆದರೆ ಸಂತರ ನಿಂದೆಯಂಥ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಯಾವನಾದರೂ ಮನುಷ್ಯನ ನಿಂದೆ ಮಾಡುವದು ಪಾಪಕರ್ಮವಾಗಿರುತ್ತದೆ. ಹಾಗೆ ಮಾಡಬಾರದು. ಮಹಾಭಾರತದಲ್ಲಿ ಹೇಳಿದೆ, “ ಇತರರ ನಿಂದೆ ಮಾಡುವದರಿಂದ ಅವರನ್ನು ಕೊಂದ ಪಾಪಕ್ಕೆ ಗುರಿಯಾಗಬೇಕಾಗುವದು, ಮತ್ತು ತನ್ನದೇ ಸ್ತುತಿ ಮಾಡಿಕೊಳ್ಳುವದರಿಂದ ಆತ್ಮಘಾತ ಮಾಡಿದಂತಾಗುವದು. ” ತಮ್ಮ ಶ್ರೇಯಸ್ಸನ್ನು ಬಯಸುವವರು ಸಂತರ ನಿಂದೆ ಮಾಡಿ ತಮ್ಮ ನಾಲಿಗೆಯನ್ನು ಕಳಂಕ ಮಾಡಿಕೊಳ್ಳುವದಿಲ್ಲ. ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಾನೆ, “ ತ್ರೈಲೋಕ್ಯದ ಪಾಪಗಳೆಲ್ಲ ತನ್ನಲ್ಲಿ ಪ್ರವೇಶಿಸಬೇಕೆಂತ ಬಯಸುವವನು ಸ್ವಮುಖದಿಂದ ಸಂತರ ನಿಂದೆಯನ್ನು ಮಾಡಬಹುದು. ( ಏಕನಾಥಿ ಭಾಗವತ, ಅಧ್ಯಾಯ ೨೭ ).

ಹಾಗಾದರೆ ಮನುಷ್ಯನು ಏನು ಮಾಡತಕ್ಕದ್ದು ? ಕ್ಯಾವಿ ಬಟ್ಟೆಯನ್ನು ಹೊತ್ತ ಪ್ರತಿ ಒಬ್ಬನಿಗೆ ನಮಸ್ಕಾರ ಮಾಡಬೇಕೊ ? ಜಟಾಧಾರಿಯಾಗಿ ಅಥವಾ ಭಸ್ಮಧಾರಿಯಾಗಿ ಇಲ್ಲವೆ ತುಲಸಿ-ರುದ್ರಾಕ್ಷ ಮಾಲೆಗಳನ್ನು ಧರಿಸಿದ ಸಾಧುವನ್ನು ಕಂಡಾಗಲೇ ಅವನು ಸಂತನೆಂದು ಅವನ ಪಾದಕ್ಕೆ ಬೀಳಬೇಕೇನು ? ಶ್ರೀತುಕಾ-ರಾಮರನ್ನುತ್ತಾರೆ, “ ಅಲ್ಲ, ಅಲ್ಲ, ಹಾಗೆ ಮಾಡಬೇಡ. ಅವನಲ್ಲಿ ನಿನಗೆ ವಿಶ್ವಾಸ ಹುಟ್ಟದಿದ್ದರೆ, ಅವನ ಸಮೀಪಕ್ಕೆ ಹೋಗಬೇಡ. ದೂರದಿಂದ ಅವನಿಗೆ ನಮಸ್ಕರಿಸು. ಅದೇ ಕ್ಷೇಮಕರವಾದ ಮಾರ್ಗವು. ಆದರೆ ಅವನನ್ನು ದೂಷಣೆಮಾಡಿ, ನಿನ್ನ ಪುಣ್ಯವನ್ನೆಲ್ಲ ಕಳಕೊಳ್ಳುವ ಕೆಲಸ ಮಾಡಬೇಡ ” ಮುಖ್ಯ ಭಾವವೇನೆಂದರೆ, ಯಾರ ಮನಸ್ಸು ಗುಣದೋಷಗಳಿಂದ ಚಲಿಸಲಾರದೊ, ಅವರೇ ಸಂತರ ಸಂಗತಿಯಲ್ಲಿರಬಹುದು. ಇತರರು ದೂರವಲ್ಲಿರುವದೇ ಒಳ್ಳೇದು. ಸಂತರಿಗೆ ಒಲಿಯುವವರು ಬಹಳ ಕಡಿಮೆ, ಅವರೊಳಗೂ ಮೇಲೆ ಹೇಳಿದ ಗುಣ ಉಳ್ಳವರು ಅಪರೂಪ.

ಕೆಲವು ಸಾರಿ ಸುಳ್ಳು ಸಾಧುಗಳು, ಗುಣಾವಗುಣಗಳನ್ನು ನೋಡಬಾರದೆಂತ ಮೇಲೆ ಹೇಳಿದ ಮಾತಿನ ಕೃತ್ರಿಮ ಉಪಯೋಗವನ್ನು ಮಾಡುತ್ತಾರೆ ಆದರೆ ಅದಕ್ಕೆ ಉಪಾಯವಿಲ್ಲ. ಅಂಥ ಸುಳ್ಳುಸಾಧುಗಳ ಬಲೆಯಲ್ಲಿ ಸಿಗದಂತೆ ನಾವು ಬಹಳ ಜಾಗರೂಕರಾಗಿರಬೇಕು. ಆದರೆ ಇದೊಂದು ಸಂಗತಿಯನ್ನು ಮರೆಯಬಾರದು, ಅದೇನಂದರೆ, ಜಾಗರೂಕರಾಗಿರಬೇಕು ಎಂಬದರ ಮೇಲಿಂದ, ದೋಷಗಳಿಲ್ಲದ ಸ್ಥಾನದಲ್ಲಿ ದೋಷಗಳನ್ನು ಹುಡುಕುವಂಥ ಮನಸ್ಸಿನ

ಸ್ವಭಾವವನ್ನು ಬೆಳಿಸಬಾರದು. ಆದ್ದರಿಂದ ನಮ್ಮ ಹೃದಯಸ್ಥಾನದಲ್ಲಿದ್ದ ದೇವರಿಗೆ, ನಮಗೆ ಶುದ್ಧಬುದ್ಧಿಯನ್ನು ಕೊಟ್ಟು ಖರೆ ಸಂತರ ಸಂಗತಿಯನ್ನು ಕೊಡು ಎಂದು ಸದಾಕಾಲದಲ್ಲಿ ಪ್ರಾರ್ಥಿಸುತ್ತಿರಬೇಕು.

ಮಹಾಭಾರತದ ಮೇಲೆ ಆಧರಿಸಿರುವ ಕವಿತಾಬದ್ಧವಾದ ಪಾಂಡವ-ಪ್ರತಾಪವೆಂಬ ಮರಾಠಿ ಗ್ರಂಥದಲ್ಲಿ ಹನ್ನೆರಡು ಪ್ರಕಾರದ ಗುರುಗಳನ್ನು ವರ್ಣಿಸಿವೆ :—

(೧) ಧಾತುವಾದಿ :— ಈತನು ಶಿಷ್ಯನನ್ನು ವಿವಿಧ ಕ್ಷೇತ್ರಗಳನ್ನು ಸಂಚಾರ ಮಾಡಲಿಕ್ಕೆ ವಿಧಿಸಿ, ಅನೇಕ ಸಾಧನೆಗಳನ್ನು ಮಾಡಲಿಕ್ಕೆ ಹಚ್ಚಿ ಕಡೆಗೆ ಅವನಿಗೆ ಆತ್ಮಜ್ಞಾನವನ್ನು ಉಪದೇಶಿಸುವನು.

(೨) ಚಂದನ :— ಹ್ಯಾಗೆ ಚಂದನ ವೃಕ್ಷವು ತನ್ನ ಸುಗಂಧವನ್ನು ಸಮೀಪವಿರುವ ವೃಕ್ಷಗಳಿಗೆ ( ಬಿದಿರು ಇತ್ಯಾದಿ ಹೊರ್ತು ) ಕೊಡುವದೊ, ಹಾಗೆಯೆ, ಈ ಗುರುವು ತನ್ನ ಸಂಗತಿಯಿಂದ ಸಮೀಪದ ಜನರನ್ನು ಉದ್ಧರಿಸುವನು ( ಅವಿಶ್ವಾಸಿಗಳ ಹೊರ್ತು )

(೩) ವಿಚಾರ :— ಈತನು ಶಿಷ್ಯನಿಗೆ ಶಾಶ್ವತ ಅಶಾಶ್ವತಗಳೊಳಗಿನ ಭೇದವನ್ನು ವಿವರಿಸಿ ಹೇಳಿ, ಶಿಷ್ಯನು ವಿಚಾರ ಮಾಡುವಂತೆ ತಿಳಿಸಿ, ಅವನಿಗೆ ಆತ್ಮಸಾಕ್ಷಾತ್ಕಾರ ಮಾಡಿಸಿಕೊಡುವನು.

(೪) ಅನುಗ್ರಹ :— ಈತನು ಶಿಷ್ಯನ ಮೇಲೆ ಕೃಪೆಯನ್ನು ಮಾಡುತ್ತಾನೆ. ಆ ಕೃಪೆಯ ಶಕ್ತಿಯಿಂದ ಶಿಷ್ಯನು ಸುಲಭವಾಗಿ ಆತ್ಮಸಾಕ್ಷಾತ್ಕಾರವನ್ನು ಪಡೆಯುವನು.

(೫) ಪರಿಸ :— ಹ್ಯಾಗೆ ಈ ಕಲ್ಲು ಸ್ಪರ್ಶಮಾತ್ರದಿಂದ ಕಬ್ಬಿಣವನ್ನು ಬಂಗಾರ ಮಾಡುತ್ತದೊ, ಈ ಗುರುವು ತನ್ನ ಸ್ಪರ್ಶಮಾತ್ರದಿಂದ ಶಿಷ್ಯನಿಗೆ ದಿವ್ಯ ದೃಷ್ಟಿಯನ್ನು ದಯಪಾಲಿಸುವನು.

(೬) ಕಚ್ಛಪ :— ಹ್ಯಾಗೆ ಹೆಣ್ಣು ಆಮೆಯು ತನ್ನ ಮರಿಗಳನ್ನು ದೃಷ್ಟಿ ಮಾತ್ರದಿಂದ ಪೋಷಣೆ ಮಾಡುವದೊ, ಹಾಗೆಯೇ, ಈ ಗುರುವು ತನ್ನ ಕೃಪಾದೃಷ್ಟಿಯಿಂದ ಶಿಷ್ಯನಿಗೆ ಜ್ಞಾನೋಪದೇಶಮಾಡುವನು.

(೭) ಚಂದ್ರ :— ಹ್ಯಾಗೆ ಚಂದ್ರಕಾಂತ ಶಿಲೆಯು, ಚಂದ್ರೋದಯವಾದ ಕೂಡಲೆ ಕರಗುವದೊ ಹಾಗೆಯೇ, ಈತನು ದಯಾಭರಿತನಾಗಿದ್ದು, ದೂರದಲ್ಲಿರುವ ಶಿಷ್ಯರು ಸಹಾ ಈತನಿಂದ ರಕ್ಷಿಸಲ್ಪಡುವರು.

(೮) ದರ್ಪಣ :— ಹ್ಯಾಗೆ ಕನ್ನಡಿಯಲ್ಲಿ ನಾವು ನೋಡಿದಾಕ್ಷಣ ನಮ್ಮ ಮುಖವು ನಮಗೆ ಕಾಣಿಸುವದೋ, ಹಾಗೆಯೇ ಈ ಗುರುವಿನ ಮುಖ ನೋಡಿದಾಗಲೇ ಶಿಷ್ಯರಿಗೆ ಆತ್ಮಜ್ಞಾನವು ಲಭಿಸುವದು.

(೯) ಛಾಯಾನಿಧಿ : — ಈ ಹೆಸರಿನ ಒಂದು ದೊಡ್ಡ ಪಕ್ಷಿ ಇದೆ. ಅದು ಆಕಾಶದಲ್ಲಿ ಸಂಚರಿಸುತ್ತಿರುವಾಗ ಅದರ ಛಾಯೆಯು ( ನೆರಳು ) ಯಾವನಾದರೂ ಮನುಷ್ಯನ ಮೇಲ ಬಿದ್ದಿತೆಂದರೆ ಅವನು ರಾಜನಾಗುವನು. ಅದೇ ಪ್ರಕಾರ ಈ ಗುರುವಿನ ನೆರಳು ಯಾವಾತನ ಮೇಲೆ ಬೀಳುವದೊ ಅವನು ಆನಂದ ಸಾಮ್ರಾಜ್ಯವನ್ನು ಹೊಂದುವನು.

(೧೦) ನಾದನಿಧಿ :— ಇದೊಂದು ಪ್ರಕಾರದ ರತ್ನವು. ಯಾವದಾದರೊಂದು ಧಾತುವಿನ ಶಬ್ದವು ಅದಕ್ಕೆ ಕೇಳಿಸಿತೆಂದರೆ, ಆ ಧಾತುವು ಸುವರ್ಣವಾಗುವದು. ಅದೇ ರೀತಿಯಿಂದ ಯಾವನಾದರೂ ಒಬ್ಬ ಮುಮುಕ್ಷುವಿನ ಆರ್ತಸ್ವರವು ಈ ಗುರುವಿಗೆ ಕೇಳಿಸಿದರೆ; ಆ ಮುಮುಕ್ಷುವಿಗೆ ದಿವ್ಯದೃಷ್ಟಿಯು ಪ್ರಾಪ್ತವಾಗುವದು

(೧೧) ಕ್ರೌಂಚಪಕ್ಷಿ :— ಹೆಣ್ಣು ಕ್ರೌಂಚವು ತನ್ನ ಮರಿಗಳನ್ನು ಸಮುದ್ರ ದಂಡೆಯಲ್ಲಿ ಬಿಟ್ಟು ತಿಂಗಳಗಟ್ಟಲೆ ಸಂಚಾರ ಮಾಡುತ್ತಿರುತ್ತದೆ. ಆಗಾಗ್ಗೆ ಅದು ಆಕಾಶವನ್ನು ನೋಡಿ ತನ್ನ ಮರಿಗಳನ್ನು ನೆನಿಸುತ್ತದೆ. ಮತ್ತು ಈ ನೆನೆಯುವದರಿಂದ ಅದರ ಮರಿಗಳಿಗೆ ಪೋಷಣವಾಗುತ್ತದೆ. ಅದೇ ಪ್ರಕಾರ ಈ ಗುರುವು ತನ್ನ ಶಿಷ್ಯರನ್ನು ಸ್ಮರಣಮಾತ್ರದಿಂದ ರಕ್ಷಣೆ ಮಾಡುವನು.

(೧೨) ಸೂರ್ಯಕಾಂತ :— ಹ್ಯಾಗೆ ಸೂರ್ಯನ ಕಿರಣಗಳು ಈ ಸೂರ್ಯಕಾಂತ ಶಿಲೆಯೊಳಗಿಂದ ಹಾದು ಆಚೆಕಡೆಗೆ ಇರುವ ಅರಳೆಯನ್ನು ಸುಡುವವೊ, ಹಾಗೆಯೇ ಈ ಗುರುವಿನ ದೃಷ್ಟಿಪಾತವು ಯಾರ ಮೇಲೆ ಆಗುವದೊ ಅವರು ಕೂಡಲೆ ವಿದೇಹತ್ವವನ್ನು ಹೊಂದುವರು, ಅಂದರೆ ಸಮಾಧ್ಯಸ್ಥರಾಗಿ, ದೇಹಭಾನವನ್ನು ತಪ್ಪುವರು.

ಇವುಗಳ ಪೈಕಿ ಎಷ್ಟೋ ಪ್ರಕಾರಗಳು ಶ್ರೀ ಗಜಾನನ ಮಹಾರಾಜರಲ್ಲಿ ಕಂಡು ಬರುತ್ತವೆ. ಮೊದಲಿನ ಮೂರು ಬಿಟ್ಟು, ಉಳಿದ ಪ್ರಕಾರಗಳು ಅಸಾಧಾರಣ ಶಕ್ತಿವಂತರಾದ ಸಂತರಿಗೆ ಸಂಬಂಧಿಸಿರುವವು. ಶ್ರೀಗಜಾನನ ಮಹಾರಾಜರ ಇತಿಹಾಸವನ್ನು ಓದಿದರೆ ಅವರಾದರೂ ಇಂಥ ಅಸಾಧಾರಣ ವ್ಯಕ್ತಿಗಳೊಳಗೆ ಸೇರುತ್ತಾರೆಂತ ಮನವರಿಕೆಯಾದೀತು.

ಕೆಲವು ಗುರುಗಳು ತಮಗೆ ಯಾರು ದೈನ್ಯಭಾವದಿಂದ ಶರಣು ಬರುತ್ತಾರೊ ಅವರಿಗೆ ಮಾತ್ರ ತಮಗೆ ಗೊತ್ತಿರುವ ಗೂಢವಾದ ಮೋಕ್ಷಮಾರ್ಗವನ್ನು ತೋರಿಸಿ ಅನುಗ್ರಹ ಮಾಡುತ್ತಾರೆ. ಬೇರೆ ಗುರುವಿನ ಶಿಷ್ಯನ ಕೂಡ ಅವರು ಮಾತಾಡಲಿಕ್ಕೆ ಸಹ ಒಪ್ಪುವದಿಲ್ಲ. ಅಂಥವರ್‍ಯಾರೂ ಶರಣು ಬಂದರೆ, ಅವನೊಬ್ಬ ಗುನ್ಹೆಗಾರನೆಂಬದಾಗಿ, ಅಥವಾ ಮಲತಾಯಿಯ ಮಗನಂತೆ ನಡಿಸಿಕೊಳ್ಳುವರು. ಆದರೆ ಗಜಾನನ ಮಹಾರಾಜರ ಪದ್ಧತಿ ಹಾಗಲ್ಲ. ತಮ್ಮ ಕಡೆಗೆ ಶರಣು ಬಂದವನು ಯಾವನೇ ಗುರುವಿನ ಶಿಷ್ಯನಿರಲಿ ಅಥವಾ ಯಾವ ಸಾಂಪ್ರದಾಯದವನೇ ಇರಲಿ, ತನ್ನ ಆತ್ಮಜ್ಞಾನದ ಇಚ್ಛೆಯು ಪೂರ್ಣವಾಗಲಿಲ್ಲಂತ ಬಂದವನಾದರೆ, ಗಜಾನನ ಮಹಾರಾಜರು ಅವನಿಗೆ ಸಹಾಯವಾಗಿ ಯೋಗ್ಯವಾದ ಮಾರ್ಗವನ್ನು ತೋರಿಸುವರು. ಎಷ್ಟೋ ಇತರ ಸಾಂಪ್ರದಾಯಿಕ ಗುರುಗಳ ಶಿಷ್ಯರು ಶ್ರೀಗಜಾನನ ಮಹಾರಾಜರ ಕಡೆ ಬಂದು ಅವರಿಂದ ಅನುಗ್ರಹ ಪಡೆದದ್ದುಂಟು. ಹ್ಯಾಗೆ ಒಬ್ಬ ಪ್ರೀತಿಯುಳ್ಳ ಚಿಗವ್ವನು ತನ್ನ ಕಡೆಗೆ ಜೋಪಾನ ಮಾಡಲಿಕ್ಕೆ ಕೊಟ್ಟ ತನ್ನ ಸಹೋದರಿಯ ಕೂಸನ್ನು ತನ್ನ ಮಕ್ಕಳಿಗಿಂತ ಹೆಚ್ಚು ಜಾಗ್ರತೆಯಿಂದ ಆರೈಕೆ ಮಾಡುವಳೊ, ಹಾಗೆಯೇ, ಶ್ರೀಗಜಾನನ ಮಹಾರಾಜರು ತನ್ನೆಡೆಗೆ ಬಂದ ಇತರ ಗುರುಗಳ ಶಿಷ್ಯರನ್ನು ನಡಿಸುತ್ತಾರೆ ಇಂಥ ಕೆಲವು ಸಂದರ್ಭಗಳನ್ನು ನಾನು ಸ್ವತಃ ಕಂಡಿದ್ದೇನೆ. ಇತರ ಗುರುಗಳ ಇಂಥ ಕೆಲವು ಶಿಷ್ಯರು ತಮ್ಮ ಸ್ವತಃದ ಕೆಲವು ನ್ಯೂನತೆಗಳ ದೆಸೆಯಿಂದ ಪರಮಾರ್ಥಪಥದಲ್ಲಿ ಹಿಂದುಳಿದಿದ್ದರು, ಕೆಲವು ಗುರುವಿನ ಉಪದೇಶದ ಕೊರತೆಯಿಂದ, ಅಥವಾ ಅವರನ್ನು ಮುಂದರಿಸಲಿಕ್ಕೆ ಗುರುವಿಗೆ ಅಶಕ್ಯವಾದ್ದರಿಂದ ಮುಂದುವರಿಯಲಾರದೆ ಹೋಗಿದ್ದರು. ಸಂಗಮನೇರದ ವೈದ್ಯರಾದ ಕೃಷ್ಣಾಜಿ ಗೋವಿಂದ ಕುರ್ಡುಕರ ಇವರ ಸಂದರ್ಭವು ವಿಶೇಷ ತರದ್ದು. ಇಲ್ಲಿ ಅವಶ್ಯವಾಗಿ ವಿವೇಚಿಸತಕ್ಕದ್ದದೆ. ಕುರ್ಡೇಕರನ ಶಕ್ಯತೆ, ತರುಣಾವಸ್ಥೆಯಲ್ಲಿ ಹುಟ್ಟಿದ ವೈರಾಗ್ಯ, ಅವನು ಹಠಯೋಗ ಅಭ್ಯಾಸದಲ್ಲಿ ಮಾಡಿದ ಅಸಾಧಾರಣವಾದ ಸುಧಾರಣೆ, ಅವನ ತಾಳ್ಮೆ, ಮತ್ತು ದುಸ್ತರ ಪ್ರಯತ್ನಗಳನ್ನು ಮಾಡುವದರಲ್ಲಿ ದೃಢತೆ. ಇವೆಲ್ಲ ಗುಣಗಳನ್ನು ಕಂಡು ನಾವು ಬೆರಗಾಗುತ್ತೇವೆ. ಮೂರು ತಿಂಗಳು ತನಕ ಇಡೀ ದಿನಕ್ಕೆ ಒಂದೇ ಶೇರು ಹಾಲು ಕುಡಿದು ನಿರ್ವಹಿಸಿದನು ಆಮೇಲೆ ಆರು ತಿಂಗಳ ವರೆಗೆ ಒಣದ್ರಾಕ್ಷೆಗಳ ಪಾನ ಕುಡಿದು, ಕಡೆಗೆ ೧೦೮ ದಿನಗಳ ವರೆಗೆ ಬರೇ ನೀರು ಮಾತ್ರ ಕುಡಿದು ನಿರ್ವಾಹ ಮಾಡಿದನು ಅವನು ಒಂದು ಆಸನದಲ್ಲಿ ಧ್ಯಾನಕ್ಕೆ ಕುಳಿತನೆಂದರೆ, ಅವನ ಇಡೀ ದೇಹವು ಒಂದೂವರೆ ಮೊಳ ಮೇಲೆ ಏರುತ್ತಿದ್ದು, ಆಧಾರವಿಲ್ಲದೆ ಹಾಗೇ ಇರುತ್ತಿತ್ತು. ಈ ಸಂಗತಿಗಳು ಅಸಾಧಾರಣ ವ ವಿರಳವಾಗಿವೆ. ಅವನ ೧೦೮ ದಿನಗಳ ಉಪೋಷಣದ ಅಂತ್ಯದಲ್ಲಿ ಅವನನ್ನು ತಪಾಸು ಮಾಡಿದ ಇಂದೋರ ಸಂಸ್ಥಾನದ ಸಿವ್ಹಿಲಸರ್ಜನರಾದ ಡಾಕ್ಟರ ಭಾಂಡಾರಕರ ಇವರು

ಅಂದಷ್ಟೇನಂದರೆ, “ ಆರೋಗ್ಯದ ಮೇಲೆ ಏನೇನೂ ಪರಿಣಾಮವಾಗದೆ ೧೦೮ ದಿನಗಳ ತನಕ ಸ್ವಲ್ಪ ನೀರು ಕುಡಿದು ಇದ್ದದ್ದೆಂಬದನ್ನು ನಾನು ಹಿಂದೆ ಎಂದೂ ಕೇಳಲಿಲ್ಲ; ಇದಲ್ಲದೆ ಈತನು ನಿತ್ಯದಲ್ಲಿ ತನ್ನ ಶಕ್ತಿಗೆ ಸರಿಯಾದ ಕೆಲಸಗಳನ್ನು ಮಾಡುತ್ತಿದ್ದರೂ ಏನೂ ದಣುವಾಗದೆ, ಉತ್ಸುಕತೆ ಉಲ್ಹಾಸ ಉಳ್ಳವನಾಗಿದ್ದಾನೆ.” ಈ ಕುರ್ಡೂಕರರ ಹೇಳಿಕೆಯು ಯೋಗಶಾಸ್ತ್ರದ ಮಹತ್ವವನ್ನು ಸ್ಪಷ್ಟವಾಗಿ ತೋರಿಸುವದು. ಕುರ್ಡೂಕರರ ಈ ವೃತ್ತಾಂತವು ಯೋಗಾಭ್ಯಾಸದಿಂದ ಪೂರ್ಣದೇಹಾರೋಗ್ಯತೆ ಮತ್ತು ಆಶ್ಚರ್ಯಕರವಾದ ಶಕ್ತಿಗಳು ಪ್ರಾಪ್ತಮಾಡಿಕೊಳ್ಳಲಿಕ್ಕೆ ಸಾಧ್ಯವದೆ ಎಂದು ತೋರಿಸುತ್ತದೆ. ಈ ವಿಷಯದಲ್ಲಿ ಹೆಚ್ಚಿನ ವಿವೇಚನ ಮಾಡಬೇಕೆಂಬುವವರಿಗೆ ಈ ವೃತ್ತಾಂತದಿಂದ ವಿಚಾರ ಮಾಡಲಿಕ್ಕೆ ಸಾಕಾದಷ್ಟು ವಿಷಯ ಸಿಕ್ಕುವದು.

ಕುರ್ಡೂಕರರ ಸಂಗತಿಯಿಂದ ಮತ್ತೊಂದು ವಿಷಯವು ಸ್ಪಷ್ಟವಾಗುತ್ತದೆ ಹಠಯೋಗದಿಂದ ದೇಹದಾರ್ಢ್ಯತೆ, ಚಮತ್ಕಾರಿಕ ಕ್ರಿಯೆ ಮುಂತಾದ ಎಷ್ಟು ಪ್ರಯೋಜನಗಳನ್ನು ಪಡೆದಾಗ್ಯೂ, ಅದು ದೇಹಾತೀತ ಖರೇ ಆತ್ಮಾನಂದವನ್ನು ಪಡೆಯುವದಕ್ಕೆ ಏನೂ ಉಪಯೋಗವಿಲ್ಲ. ಬೇರೆ ಬೇರೆ ವಸ್ತುಗಳ ಮೇಲೆ ಮನಸ್ಸಿನ ಏಕಾಗ್ರತೆಯನ್ನು ಮಾಡಿ, ಬೇರೆ ಬೇರೆ ಪ್ರಕಾರದ ಶಕ್ತಿಗಳನ್ನು ಹೊಂದುತ್ತಾರೆ. ಭಾಗವತ ಪುರಾಣದ ಹನ್ನೊಂದನೇ ಸ್ಕಂದದ ಹದಿನೈದನೇ ಅಧ್ಯಾಯದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಈ ರೀತಿಯಾದ ಪಡೆಯಬಹುದಾದ ಸಿದ್ಧಿಗಳನ್ನು ವರ್ಣಿಸಿದ್ದಾನೆ. ಶ್ರೀ ಏಕನಾಥರು ಇದರ ಮೇಲೆ ಸುಂದರವಾದ ಟೀಕೆಯನ್ನು ಬರೆದಿದ್ದಾರೆ. ಎಂಟು ಮಹಾಸಿದ್ಧಿಗಳೂ, ಹತ್ತು ಇವುಗಳಿಗಿಂತ ಕಡಿಮೆ ತರದವೂ, ಮತ್ತು ಐದು ತೀರಾ ಕ್ಷುಲ್ಲಕ ಸಿದ್ಧಿಗಳೂ ಇರುತ್ತವೆ. ಶ್ರೀ ಏಕನಾಥರು ತಮ್ಮ ಟೀಕೆಯಲ್ಲಿ ಈ ಸಿದ್ಧಿ ಪ್ರಾಪ್ತಿಗೋಸ್ಕರ ಯಾವ ಯಾವ ಪ್ರಕಾರದ ಏಕಾಗ್ರತೆ ಬೇಕಾಗುತ್ತದೆ ಎಂಬದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಿದ್ಧಿಗಳನ್ನು ಪಡೆಯಲಿಕ್ಕೆ ಸಾಧ್ಯವದೆ ಎಂಬದರಲ್ಲಿ ಸಂಶಯವಿಲ್ಲ, ಆದರೆ ಇವು ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ವಿಘ್ನಗಳಾಗಿರುತ್ತವೆ. ಶ್ರೀಕೃಷ್ಣನು ಅನ್ನುತ್ತಾನೆ, “ ಯಾವಾತನು ಈ ಲೋಕದಲ್ಲಿ ಮಹತ್ವವನ್ನು ಹೊಂದಲಿಚ್ಛಿಸುವನೊ ಆತನು ಈ ಸಿದ್ಧಿಗಳನ್ನು ಪಡೆಯುವ ತೊಂದರೆಯಲ್ಲಿ ಕೈಹಾಕಬೇಕು. ಆದರೆ ಯಾವಾತನು ನನ್ನಲ್ಲಿ ಪ್ರಾಪ್ತನಾಗಬೇಕೆಂದು ದೃಢಾಕಾಂಕ್ಷೆಯುಳ್ಳವನಿದ್ದಾನೊ ಅವನು ಸಿದ್ಧಿಗಳ ಕಡೆ ನೋಡಬಾರದು. ನನ್ನನ್ನು ಹೊಂದುವ ಮಾರ್ಗದಲ್ಲಿ ಸಿದ್ಧಿಗಳು ಬರೇ ವಿಘ್ನಗಳೆಂದು ನಿನಗೆ ತಿಳಿಸಬೇಕೆಂತ ನಾನು ಈ ಸಿದ್ಧಿಗಳನ್ನೂ ಅವುಗಳನ್ನು ಪಡೆಯುವ ಉಪಾಯಗಳನ್ನೂ ನಿನಗೆ ಹೇಳಿದ್ದೆ.” ಈ ಅಷ್ಟ ಮಹಾಸಿದ್ಧಿಗಳು ದಶ ಅಪ್ರಧಾನ ಸಿದ್ಧಿಗಳು ಮತ್ತು ಐದು ಕ್ಷುಲ್ಲಕ ಸಿದ್ಧಿಗಳು

ಇವನ್ನು ವಿವರಿಸಿದ ಬಳಿಕ, ಎಲ್ಲಕ್ಕೂ ಶ್ರೇಷ್ಠ ಸಿದ್ಧಿಯಾದ, ಮನುಷ್ಯ ಜೀವನದ ಮುಖ್ಯ ಉದ್ದೇಶವಾದ ಆತ್ಮಜ್ಞಾನವು ಸಂಪೂರ್ಣವಾಗಿ ವರ್ಣಿಸಿವೆ.

ಎಲ್ಲ ಸಿದ್ಧಿಗಳಲ್ಲಿ ಶ್ರೇಷ್ಠವಾದ ಸಿದ್ಧಿಯೆಂದರೆ ಪರಮಾನಂದಪ್ರಾಪ್ತಿಯು. ಮನುಷ್ಯನ ಎಲ್ಲ ಪ್ರಯತ್ನಗಳು ಸುಖಕ್ಕೋಸ್ಕರ ಇರುತ್ತವೆ. ಮೇಲೆ ಹೇಳಿದ ಸಿದ್ಧಿಗಳಾದರೂ ಸುಖದ ಸಾಧನಗಳಾಗಿವೆ. ಆದರೆ ವಿವಿಧ ಪ್ರಕಾರದ ಸುಖಗಳನ್ನು ವಿವೇಚಿಸಬೇಕಾಗಿರುತ್ತದೆ. ಸುಖವು ಮೂರು ಪ್ರಕಾರದ್ದಿರುತ್ತದೆ :— (೧) ಇಂದ್ರಿಯಜನ್ಯ ಸುಖ, (೨) ಮಾನಸಜನ್ಯ ಸುಖ, (೩) ಬುದ್ಧಿಜನ್ಯ ಸುಖ. ಇವುಗಳಲ್ಲಿ ಪ್ರಥಮದ ಸುಖ ಮಾತ್ರ ಪಶುಗಳಿಗಿರುತ್ತದೆ. ಎರಡನೇದು ಮನುಷ್ಯರಿಗೆ ಮಾತ್ರ ಮತ್ತು ಮೂರನೇದು ದೇವತೆಗಳದ್ದಾಗಿರುತ್ತದೆ. ಶುದ್ಧ ಬುದ್ಧಿಯಿಂದ ಮಾತ್ರ ಪಡೆಯತಕ್ಕ ಈ ಮೂರಕ್ಕೂ ಹೆಚ್ಚಿನದಾದ ಸುಖವೊಂದು ಇರುತ್ತದೆ. ಭಗವದ್ಗೀತೆಯಲ್ಲಿ ಅದರ ಸಂಬಂಧ ಹೀಗೆ ಹೇಳುತ್ತದೆ, “ಆ ಸುಖವು ಇಂದ್ರಿಯಾತೀತವಾಗಿದ್ದು, ಬುದ್ಧಿಗೆ ಮಾತ್ರ ತಿಳಿಯತಕ್ಕಂಥದ್ದಾಗಿರುವದು.” ಈ ಸುಖವು ಸಂತರಿಗೆ ವ ಭಕ್ತರಿಗೆ ಮಾತ್ರ ಅನುಭವಕ್ಕೆ ಬರುವದು. “ಒಬ್ಬ ಯೋಗಿ ಒಂದು ಸ್ಥಳದಲ್ಲಿ ಅದೃಶ್ಯನಾಗಿ ಕೂಡಲೆ ಇನ್ನೊಂದು ದೂರದ ಸ್ಥಳದಲ್ಲಿ ಕಾಣಿಸಿಕೊಳ್ಳುವ ಶಕ್ತಿಯನ್ನು ಪಡೆಯಬಹುದು. ಉದಾಹರಣಾರ್ಥವಾಗಿ ಅವನು ಒಂದು ಕ್ಷಣದಲ್ಲಿ ಮಥುರೆಯಿಂದ ಕಾಶಿಗೆ ಹೋಗಬಹುದು. ಅವನ ಅಂತ್ಯಕಾಲದಲ್ಲಿ ಪ್ರಾಣವು ಬ್ರಹ್ಮರಂಧ್ರದೊಳಗಿನಿಂದ ಹೊರಗೆಡವಿ ಸತ್ಯಲೋಕಕ್ಕೆ ಅವನು ಹೋಗಬಹುದು. ಆದರೆ ಇಂಥ ಯೋಗಿಯು ಅಪೂರ್ಣನಿದ್ದಾನೆ. ಅವನು ಸದ್ಗುರುವಿನ ಖರೆ ಶಿಷ್ಯನಾಗಲಿಲ್ಲ.”

ಈ ಸಿದ್ಧಿಗಳ ಪ್ರಾಪ್ತಿಯಿಂದ ಆಗುವ ಆನಂದವು ಚಿರಸ್ಥಾಯಿ ಅಲ್ಲ. ಆದ್ದರಿಂದ ಇದು ಪರಮಾನಂದವೆನಿಸದು. ಸಿದ್ಧಿಗಳಿಂದ ಉಂಟಾಗತಕ್ಕ ಸುಖದಿಂದ ಸಮಾಧಾನ ಹೊಂದಿದ ಮನುಷ್ಯನು ಅಪಕ್ವನೂ, ಅಪೂರ್ಣನೂ ಇದ್ದು ಅವನು ಸದ್ಗುರುವಿನ ಖರೆ ಶಿಷ್ಯನಲ್ಲವೆಂತ ಕಬೀರನು ಹೇಳುತ್ತಾನೆ ಆದ್ದರಿಂದ ತನ್ನ ಖರೆ ಶ್ರೇಯಸ್ಸನ್ನು ಬಯಸುವ ಮನುಷ್ಯನು ಪರಮಾನಂದಕ್ಕೆ ಕಾರಣವಾದ ಆತ್ಮಸಾಕ್ಷಾತ್ಕಾರವನ್ನು ಪಡಿಯಬೇಕು, ಹೊರ್ತು ಸಿದ್ಧಿಗಳಿಂದ ತಾನು ಆನಂದ ಪಡಿಯಬೇಕೆಂದು ಯತ್ನಿಸಬಾರದು. ಆತ್ಮಸಾಕ್ಷಾತ್ಕಾರವೆ ಮನುಷ್ಯ ಜೀವನದ ಮುಖ್ಯ ಉದ್ದೇಶವಾಗಿದೆ. ಶ್ರೀಕೃಷ್ಣನು ಈ ಉದ್ದೇಶವನ್ನು ಪಡಿಯುವದಕ್ಕೆ ಈ ಕೆಳಗೆ ಬರೆದ ಪ್ರಕಾರ ಉಪಾಯಗಳನ್ನು ಹೇಳಿದ್ದಾನೆ.

“ನಿರ್ಗುಣ ಬ್ರಹ್ಮವಾದ ನನ್ನಲ್ಲೇ ಯಾವ ಸಾಧಕನು ತನ್ನ ಶುದ್ಧ ಮನಸ್ಸನ್ನು ಇಟ್ಟು ಏಕಾಗ್ರ ಮಾಡುವನೊ, ಅವನು ಎಲ್ಲ ಕಾಮನೆಗಳ ಅಂತ್ಯಸ್ಥಾನ

ವಾಗಿರುವ ಪರಮಾನಂದವನ್ನು ಹೊಂದುವನು." ( ಶ್ರೀ ಭಾಗವತ, ಏಕಾದಶ ಸ್ಕಂದ, ಅಧ್ಯಾಯ ೨೫ ).

ಶ್ರೀಏಕನಾಥರು ಇದರ ಮೇಲೆ ಬರೆದ ಟೀಕೆಯಲ್ಲಿ ಅನ್ನುತ್ತಾರೆ. ಚಿತ್ತವು ಸತ್ವಗುಣದ್ದು, ಇಂದ್ರಿಯಗಳು ರಜೋಗುಣಯುಕ್ತವಾದವುಗಳು ಮತ್ತು ಇಂದ್ರಿಯ ವಿಷಯಗಳು ತಮೋಗುಣ ಪ್ರಾಧಾನ್ಯವಾಗಿರುತ್ತವೆ. ಆದ್ದರಿಂದ ನಿರ್ಗುಣ ಬ್ರಹ್ಮದ ಉಪಾಸನೆಯನ್ನು ಮಾಡುವ ಸಾಧಕನು, ಈ ಮೂರೂ ಗುಣಗಳಿಗೆ ಅತೀತನಾಗಿ ಪೂರ್ಣ ಮತ್ತು ಶಾಶ್ವತವಾದ ಆನಂದವನ್ನು ಹೊಂದುವನು ಆತ್ಮನ ಈ ಸಹಜವಾದ ಆನಂದವು ಈ ಗುಣಗಳಿಂದ ಮುಚ್ಚಲ್ಪಟ್ಟಿರುತ್ತದೆ ಆದ್ದರಿಂದ ಈ ಮೂರು ಗುಣಗಳು ಪರಮಸುಖವನ್ನು ಹೊಂದತಕ್ಕ ಮಾರ್ಗದಲ್ಲಿ ವಿಘ್ನಗಳಾಗಿವೆ. ಆದ್ದರಿಂದ ಯಾವ ಸಾಧಕನು ಈ ಮೂರೂ ಗುಣಗಳನ್ನು ನಿರಾಕರಿಸಿ ನಿರ್ಗುಣ ಬ್ರಹ್ಮದಲ್ಲಿಯೇ ಚಿತ್ತವನ್ನು ಯಾವಾಗಲೂ ಇರಿಸುವನೋ ಅವನು ಪರಮಾನಂದವನ್ನು ಪ್ರಾಪ್ತಮಾಡಿಕೊಳ್ಳುವನು ( ನಿರ್ಗುಣವೆಂದರೆ ಪ್ರಕೃತಿಗೆ ಸಂಬಂಧಿಸಿದ ಮೂರು ಗುಣಗಳಿಗೆ ಅತೀತವಾದ ದೈವಿಕ ವಿಶೇಷಣಗಳಿಂದ ಯುಕ್ತವಾದದ್ದೆಂತ ತಿಳಿಯತಕ್ಕದ್ದು. ದೇವರ ಸಗುಣ ಮೂರ್ತಿಯು ಪ್ರಕೃತಿಗೆ ಸಂಬಂಧಿಸದೆ ಅದಕ್ಕೆ ಅತೀತವಾದ ದಿವ್ಯಪ್ರಕಾರದ್ದಾಗಿದೆ. ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ, " ಯಾವಾತನು ನನ್ನ ದಿವ್ಯ ಜನ್ಮ ಕರ್ಮಗಳನ್ನು ಸರಿಯಾಗಿ ತಿಳಿಯುವನೊ ಅವನು ಅಂತ್ಯದಲ್ಲಿ ನನ್ನನ್ನೆ ಪ್ರಾಪ್ತನಾಗಿ ಪುನಹಾ ಜನ್ಮಕ್ಕೆ ಬರಲಾರನು" —ಗೀತೆ ಅ. ೪—ಶ್ಲೋಕ ೯). ಬ್ರಹ್ಮದಲ್ಲಿ ಚಿತ್ತವನ್ನು ಧಾರಣೆಮಾಡುವದರಿಂದ ಸಾಧಕನು ಅತ್ಯುತ್ತಮ ಸುಖವನ್ನು ಹೊಂದುವನು, ಮತ್ತು ಅವನ ಇಚ್ಛೆಗಳೆಲ್ಲ ಆ ಸುಖದಲ್ಲಿ ಲೀನನಾಗುವವು. ಸೂರ್ಯೋದಯವಾದ ಕೂಡಲೇ ಎಲ್ಲ ನಕ್ಷತ್ರಗಳ ಸಹಿತ ಚಂದ್ರನು ಅದೃಶ್ಯನಾಗುವನು. ಹಾಗೆಯೇ ಸಾಧಕನ ಇಚ್ಛೆಗಳೆಲ್ಲ ಆ ಪರಮಸುಖದಲ್ಲಿ ಲೀನವಾಗಿ ಇಲ್ಲದಂತಾಗುವವು, ಇಂದ್ರಿಯ ಸುಖಗಳ ಇಚ್ಛೆಯು ತೋರಿಸಿ ಕೊಳ್ಳಲಿಕ್ಕೆ ನಾಚುವದೊ ಎಂಬಂತೆ ಅಲ್ಲಿಗಲ್ಲಿ ಅದೃಶ್ಯವಾಗುವದು. ಶ್ರೀಏಕನಾಥರನ್ನುತ್ತಾರೆ

" ಪರಮಾನಂದವು ಪ್ರಾಪ್ತವಾಯಿತೆಂದರೆ, ಹ್ಯಾಗೆ ಸೂರ್ಯೋದಯವಾದ ಕೂಡಲೆ ಚಂದ್ರ ನಕ್ಷತ್ರಗಳು ಅದೃಶ್ಯವಾಗುವವೋ, ಹಾಗೆ ಎಲ್ಲ ಇಚ್ಛೆಗಳು ಲೀನವಾಗುವವು. ಸಾಧಕನ ಅಪಾರವಾದ ಇಚ್ಛೆಗಳೆಲ್ಲ ಆ ಪರಮಾನಂದದ ಸಾಗರದಲ್ಲಿ ಮಗ್ನವಾಗುವವು, ಮತ್ತು ಇಂದ್ರಿಯಜನ್ಯ ಸುಖದ ಭಾವನೆಯು ನಾಚಿಕೊಂಡು ತತ್ಕಾಲ ಇಲ್ಲದಂತಾಗುವದು."

ಸಾಧಕರು ಶ್ರೀ ಏಕನಾಥಿ ಭಾಗವತದ ೧೫ನೇ ಅಧ್ಯಾಯದ ೧೭ನೇ ಶ್ಲೋಕದ ಕೆಳಗೆ ಶ್ರೀಏಕನಾಥರು ಬರೆದ ಟೀಕೆಯನ್ನು ಜಾಗ್ರತೆಯಾಗಿ ಓದಬೇಕೆಂತ ವಿನಂತಿ ಅವೆ.

ಈ ಪರಮಾನಂದದ ಪ್ರತ್ಯಕ್ಷ ಅನುಭವವು ಸಾವಿರಾರು ಪುಸ್ತಕಗಳನ್ನು ಓದಿದ್ದರಿಂದ ಆಗಲಿ, ಜಪತಪಾದಿಗಳಿಂದಾಗಲಿ ಬರಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಒಂದೇ ದಾರಿ ಅಂದರೆ ಸದ್ಗುರು ಕೃಪೆಯು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

“ಈ ಸಾಕ್ಷಾತ್ಕಾರ ಕ್ರಿಯೆಯು ಪುಸ್ತಕಗಳಿಂದ ಬರಲಿಕ್ಕೆ ಸಾಧ್ಯವಿಲ್ಲ. ಜೀವಾತ್ಮನು ಮತ್ತೊಬ್ಬ (ಜ್ಞಾನಿ) ಜೀವಾತ್ಮನಿಂದಲೆ ಅವನ್ನು ಪಡಿಯಬೇಕು ಹೊರ್ತು ಬೇರೆ ಉಪಾಯವಿಲ್ಲ.”

ಈ ಗುರುಶಿಷ್ಯರ ಸಂಬಂಧವು ಬರೇ ಮನುಷ್ಯ ಪ್ರಯತ್ನದಿಂದಲೆ ಆಗಲಿಕ್ಕೆ ಸಾಧ್ಯವಿಲ್ಲ. ಅದು ನಿಜವಾಗಿ ಈಶ್ವರ ಸಂಕಲ್ಪದಿಂದಲೆ ಘಟಿಸಬೇಕಾಗಿದೆ ಒಬ್ಬ ಮರಾಠಿ ನಾಟಕಕಾರನು ಹೇಳುತ್ತಾನಲ್ಲ, ಒಬ್ಬ ಹುಡುಗಿಯು ಹುಟ್ಟುವ ಮೊದಲೆ, ಆಕೆಗೆ ಆಗ ತಕ್ಕ ಗಂಡನನ್ನು ದೇವರು ಮೊದಲೇ ಸೃಷ್ಟಿ ಮಾಡುತ್ತಾನೆ; ಹಾಗೆಯೇ ದೇವರು ಶಿಷ್ಯನಿಗೆ ಗುರುವಿನ ವ್ಯವಸ್ಥೆಯನ್ನು ಮೊದಲೇ ಮಾಡಿರುತ್ತಾನೆ. ಗುರುಗಳಲ್ಲಿ ನಿಯತ ಗುರು (ನಿರ್ಣಯಿಸಲ್ಪಟ್ಟ ಗುರು) ಮತ್ತು ಅನಿಯತ ಗುರು (ನಿರ್ಣಯಿಸಲ್ಪಡದ ಗುರು) ಎಂದು ಎರಡು ಪ್ರಕಾರಗಳಿವೆ. ಹ್ಯಾಗೆ ಒಬ್ಬ ಹುಡುಗಿಗೆ ಲಗ್ನಕ್ಕೆ ಮೊದಲು ಅನೇಕ ಹುಡುಗರನ್ನು ಶೋಧಿಸುತ್ತಾರೆ, ಹಾಗೆಯೇ ಒಬ್ಬ ಮುಮುಕ್ಷುವಿನ ಮೇಲೆ ನಿಜವಾದ ಸದ್ಗುರುವಿನ ಕೃಪೆಯಾಗುವ ಮೊದಲು ಅನೇಕ ಸಂತರ ಕಡೆಗೆ ಹೋಗಬೇಕಾಗುವದು. ೨೪ ಗುರುಗಳಿಂದ ಬೇರೆ ಬೇರೆ ಉಪದೇಶಗಳನ್ನು ಪಡೆದ ಅವಧೂತನ ಕಥೆಯು, ಭಾಗವತದ ಹನ್ನೊಂದನೆ ಸ್ಕಂದದಲ್ಲಿ ಹೇಳಿರುತ್ತದೆ; ಅದನ್ನು ಎಲ್ಲರು ಬಲ್ಲರು. ಈ ಅನಿಯತ ಗುರುಗಳ ಸಂಗತಿಯಿಂದ ಮುಮುಕ್ಷುವಿನ ಮನಸ್ಸು ಶುದ್ಧವಾಗುತ್ತದೆ, ಮತ್ತು ಆತನಿಗೆ ಶ್ರೀ ಭಗವದ್ಗೀತೆಯ ೧೬ನೇ ಅಧ್ಯಾಯದಲ್ಲಿ ಹೇಳಿದ ದೈವಿಸಂಪತ್ತು ಪ್ರಾಪ್ತವಾಗುತ್ತದೆ. ಅನಂತರ ಅವನು ತನ್ನ ನಿಯತ ಗುರುವಿನ ಕೃಪೆಗೆ ಪಾತ್ರನಾಗುವನು, ಮತ್ತು ಮನುಷ್ಯ ಜೀವನು ಪರಬ್ರಹ್ಮನಲ್ಲಿ ಐಕ್ಯತೆ ಹೊಂದುವ ಮಹಾನ್ ಜ್ಞಾನವನ್ನು ಪಡೆದು, ಆತ್ಮಸಾಕ್ಷಾತ್ಕಾರವನ್ನು ಹೊಂದುವನು. ಈ ನಿಯತ ಗುರುವೇ ಸದ್ಗುರು, ಯಾಕಂದರೆ ಅವನು ಶಿಷ್ಯನಿಗೆ ಸದ್‌ವಸ್ತು ಅಂದರೆ ಶಾಶ್ವತ ವಸ್ತುವನ್ನು ತೋರಿಸಿಕೊಡುವನು.

“ಯಾವಾತನು ಶಿಷ್ಯನಿಗೆ ತನ್ನ ಆತ್ಮಸಾಕ್ಷಾತ್ಕಾರ ಮಾಡಿಸಿಕೊಟ್ಟು ಪೂರ್ಣಶಾಂತಿಯ ಅನುಭವ ಅವನಿಗೆ ಆಗುವಂತೆ ಮಾಡುವನೊ ಅವನೇ ನಿಜವಾದ ಸದ್ಗುರು ಎಂದು ತಿಳಿಯತಕ್ಕದ್ದು. ಮತ್ಯಾವ ಕಾರಣದಿಂದಲೂ ಒಬ್ಬನು ಮತ್ತೊಬ್ಬನ ಸದ್ಗುರು ಆಗಲಾರನು.” (ಏಕನಾಥಿ ಭಾಗವತ ಅಧ್ಯಾಯ ೧೨).

ಪುರಾಣಗಳಲ್ಲಿಯೂ, ಸಾಂಪ್ರತಕಾಲಗಳಲ್ಲಿಯೂ ಮೇಲೆ ಹೇಳಿದ ಸಂಗತಿ ಅಂದರೆ ಗುರುಶಿಷ್ಯರ ಸಂಬಂಧವು ಮನುಷ್ಯ ಪ್ರಯತ್ನದಿಂದಾಗದೆ ಈಶ್ವರ ಸಂಕಲ್ಪದಿಂದಲೆ ಆಗುವದು ಎಂಬದು ಉದಹರಿಸಲಿಕ್ಕೆ ಅನೇಕ ಕಥೆಗಳು ಇರುತ್ತವೆ. ಶ್ರೀನಿವೃತ್ತಿನಾಥರಿಗೆ ಬಾಲ್ಯತ್ವದಲ್ಲಿಯೆ ಎಂಬಂತೆ ಏನೇನೂ ತನ್ನ ಯತ್ನಗಳನ್ನು ಮಾಡದೆ ಗಹಿನೀನಾಥ ಸದ್ಗುರು ಪ್ರಾಪ್ತರಾದರು. ಹಠಯೋಗದ ಅಭ್ಯಾಸದಿಂದ ಹೊಂದಿದ ಶಕ್ತಿಯಿಂದ ೧೪೦೦ ವರ್ಷ ಬಾಳಿದ ಶ್ರೀ ಚಾಂಗದೇವರು ಮುಕ್ತಾಬಾಯಿಯಿಂದ ಅನುಗ್ರಹ ಹೊಂದಿ ಆತ್ಮಜ್ಞಾನವನ್ನು ಪಡೆದರು. ನಿವೃತ್ತಿ, ಜ್ಞಾನದೇವ, ಸೋಪಾನ ಮತ್ತು ಮುಕ್ತಾಬಾಯಿ ಈ ನಾಲ್ಕು ಸಂತ-ಶಿರೋಮಣಿಗಳು, ಲೋಕೋದ್ಧಾರಾರ್ಥವಾಗಿಯೇ ಅವತಾರ ತಕ್ಕೊಂಡು ಬಂದಿದ್ದರು. ಆದರೂ ಅವರ ಶಕ್ತಿಯು ನಾಮದೇವನ ಕೆಲಸಕ್ಕೆ ಬೀಳಲಿಲ್ಲ. ಯಾಕಂದರೆ, ಈಶ್ವರ ಸಂಕಲ್ಪದಿಂದ ಆತನ ಗುರುವು ವಿಸೋಬಾ ಖೇಚರನಿದ್ದನು. ವಿಠೋಬನಿಂದ ಪ್ರೇರಿತನಾಗಿ ನಾಮದೇವನು ವಿಸೋಬಾ ಖೇಚರನ ಕಡೆಗೆ ಹೋಗಬೇಕಾಯಿತು; ಈ ವಿಸೋಬಾ ಖೇಚರನು ಜ್ಞಾನದೇವನ ಶಿಷ್ಯನು. ಅದೇ ಪ್ರಕಾರ ವಾಮನ ಪಂಡಿತನು ತುಕಾರಾಮರ ಕಡೆಗೆ ಹೋದಾಗ ಅವನ ಮನಸ್ಸಿಗೆ ಸಮಾಧಾನವಾಗದ್ದರಿಂದ ತುಕಾರಾಮನೇ ಅವನನ್ನು ರಾಮದಾಸರ ಕಡೆಗೆ ಕಳುಹಿಸಿದನು. ಅಲ್ಲಿಯೂ ವಾಮನಪಂಡಿತನಿಗೆ ಪೂರ್ಣ ಸಮಾಧಾನವಾಗಲಿಲ್ಲ. ರಾಮದಾಸನು ಅವನ ಸಂಶಯ ನಿವಾರಣಾರ್ಥವಾಗಿ ತಾನೆ, ಹನುಮಂತನ ಭಯಂಕರ ರೂಪವನ್ನು ಧಾರಣೆ ಮಾಡಿ ಅವನಿಗೆ ತೋರಿಸಿಕೊಂಡನು. ಆದರೆ ಅದರ ಉಪಯೋಗವೇನೂ ಆಗಲಿಲ್ಲ. ಯಾವಾಗ ರಾಮದಾಸನ ಯತ್ನಗಳೆಲ್ಲ ವ್ಯರ್ಥವಾದವು. ಅವನು ಸಮಾಧಿಯಲ್ಲಿ ಹೋಗಿ, ವಾಮನ ಪಂಡಿತನ ನಿಯತಗುರು ತಾನಲ್ಲವೆಂತ ತಿಳಕೊಂಡು ಆತನನ್ನು ಮಲಯ ಪರ್ವತಕ್ಕೆ ಕಳುಹಿಸಿದನು. ಅಲ್ಲಿ ವಾಮನ ಪಂಡಿತನಿಗೆ ಸಚ್ಚಿದಾನಂದ ಸ್ವಾಮಿಯು ಭೆಟ್ಟಿಯಾಗಿ ಆತನಿಂದ ಉಪದೇಶ ಹೊಂದಿ ಪರಾಶಾಂತಿಯನ್ನು ಪಡೆದನು. ಈ ಉದಾಹರಣೆಗಳಿಂದ ಏನು ತಿಳಿಯುಬರುತ್ತದೆಂದರೆ, ಸದ್ಗುರು ಮತ್ತು ಶಿಷ್ಯನ ಸಂಬಂಧವು ಪೂರ್ವಜನ್ಮಗಳಲ್ಲಿಯ ಅವರೊಳಗಿನ ಸಂಬಂಧಕ್ಕನುಸರಿಸಿ ಈಶ್ವರಿ ಸಂಕೇತದಿಂದ ಘಟಿಸುವದೆಂದು ಸ್ಪಷ್ಟವಾಗುತ್ತದೆ. ಸದ್ಗುರು ಶೋಧನದ ಪೂರ್ವದಲ್ಲಿ ಒಳ್ಳೇ ಶಿಷ್ಯನ ಗುಣಗಳನ್ನು ಹೊಂದುವದಕ್ಕೆ ಪೂರ್ಣಪ್ರಯತ್ನ ಮಾಡತಕ್ಕದ್ದು. ಶ್ರೀ ರಾಮಕೃಷ್ಣ ಪರಮಹಂಸರು ಹೇಳುವದೇನಂದರೆ, ಸದ್ಗುರುವು ತನ್ನ ಉಪದೇಶವನ್ನು ಗ್ರಹಿಸಲಿಕ್ಕೆ ಸಿದ್ಧವಾದ ಮನಸ್ಸುಳ್ಳ ಶಿಷ್ಯನನ್ನು ಹುಡುಕಿ ಬರುತ್ತಾನೆ.

ಹೀಗೂ ಕೆಲವು ಸಾರಿ ಸಂಭವಿಸುತ್ತದೆ. ಶಿಷ್ಯನ ಏನೂ ತಯಾರಿ ಇಲ್ಲದಿದ್ದಾಗ್ಯೂ ಸದ್ಗುರುವು ಅಕಸ್ಮಾತ್ತಾಗಿ ಅವನಿಗೆ ಭೆಟ್ಟಿಯಾಗಿ ಅನುಗ್ರಹ

ಮಾಡುವದೂ ಉಂಟು. ನಿವೃತ್ತಿನಾಥನು ತೀರಾ ಚಿಕ್ಕ ವಯಸ್ಸಿನವನಿರುವಾಗ ತ್ರಿಂಬಿಕೇಶ್ವರದ ಒಂದು ಗವಿಯೊಳಗೆ ಶ್ರೀಗಹಿನಿನಾಥನು ಅವನಿದ್ದಲ್ಲಿ ಬಂದು ಅನುಗ್ರಹಿಸುವಾಗ್ಗೆ ಅವನದು ಏನು ತಯಾರಿ ಇರಬಹುದು? ನಿವೃತ್ತಿನಾಥನೂ ಅವನ ತಮ್ಮಂದಿರೂ ತಂಗಿಯೂ ಅವತಾರಿಕರೆನಿಸಿಕೊಳ್ಳುವದರಿಂದ ಅವರ ದೀಕ್ಷಾ ಗ್ರಹಣವನ್ನು ಹಾಗೆ ವಿವರಿಸಿ ಹೇಳಲಿಕ್ಕೆ ಬಂದೀತು; ಆದರೆ ಸೊಹಿರೋಬನ ವಿಷಯದಲ್ಲಿ ಹ್ಯಾಗೆ? ಆತನು ಸಾವಂತವಾಡಿ ಸಂಸ್ಥಾನದಲ್ಲಿ ಒಬ್ಬ ಸಾಮಾನ್ಯ ತಲಾತಿ. ವರ್ಷಾವಧಿಯ ಲೆಖ್ಖಪತ್ರಗಳನ್ನು ತಪಾಸಣಿಗೆ ತನ್ನ ಹಳ್ಳಿಯಾದ ಬಾಂದಾದಿಂದ ಸಾವಂತವಾಡಿಗೆ ತಕ್ಕೊಂಡು ಹೋಗುವಾಗ, ಅಡವಿಯಲ್ಲಿ ಗಹಿನಿ ನಾಥನು ಅಕಸ್ಮಾತ್ತಾಗಿ ಭೆಟ್ಟಿಯಾಗಿ ಅನುಗ್ರಹಿಸಿದನು. ಆದರೆ ಇಂಥಾ ಸಂಗತಿ ಗಳನ್ನೂ ನಾವು ಒಳ್ಳೇ ವಿಚಾರಮಾಡಿ ನೋಡಿದರೆ ಹೀಗೆ ಕಂಡುಬರುವದಲ್ಲ, ಅಂಥಾ ಸಂದರ್ಭಗಳು ಅಕಾರಣವಾಗಿ ಅಕಸ್ಮಾತ್ತಾಗಿ ಸಂಭವಿಸುತ್ತವೆಂತ ತೋರಿದರೂ, ಅವುಗಳ ನಿಜವಾದ ಕಾರಣವು ಪೂರ್ವಜನ್ಮದಲ್ಲಿ ಸಂಪಾದಿಸಿದ ಪುಣ್ಯ ಮತ್ತು ಸಂಘಟಣೆಗಳಿಂದ ಉದ್ಭವಿಸುತ್ತದೆಂತ ತಿಳಿಯಬಹುದು. ಶ್ರೀ ಗಜಾನನ ಮಹಾರಾಜರ ಚರಿತ್ರದಿಂದಲಾದರೂ ಇದೇ ನಿರ್ಣಯವು ಸ್ಥಾಪಿತ ವಾಗುವದು. ಅವರು ತೀರಾ ಚಿಕ್ಕವರಿರುತ್ತಾ ಮಾತಾಪಿತೃರು ಸ್ವರ್ಗಸ್ಥರಾದರು. ಅವರ ಚಿಗವ್ವ ಅವರನ್ನು ಸಂರಕ್ಷಿಸಿ, ನಾರಾಯಣಸರಸ್ವತಿ ಮಹಾರಾಜರ ಪಾದದ ಮೇಲೆ ಹಾಕಿದರು. ಈ ಸಮಯದಲ್ಲಿ ಗಜಾನನ ಮಹಾರಾಜರು ಬರೇ ಹನ್ನೆರಡು ವರ್ಷ ವಯಸ್ಸಿನವರು. ಅವರ ಮೂರನೇ ವಯಸ್ಸಿನಲ್ಲಿಯೇ, ಅವರಿಗೆ ದೇವಿರೋಗ ಆಗಿ ಕುಂಟರಾದರು. ಶ್ರೀನಾರಾಯಣಸರಸ್ವತಿಯವರು ಈ ಹುಡುಗನನ್ನು ನೋಡಿದಾಗಲೇ ಅಂದರು – " ಈ ಹುಡುಗನು ನಾಥ ಪಂಥದ ಒಬ್ಬ ಯೋಗಿ ಇದ್ದಾನೆ ಮತ್ತು ಇವನು ಪೂರ್ವಜನ್ಮದಲ್ಲಿ ಧ್ಯಾನ ಯೋಗದ ಅಭ್ಯಾಸ ಮಾಡಿರುತ್ತಾನೆ. ಇನ್ನು ಕೆಲವು ವರ್ಷಗಳಮೇಲೆ ಇವನು ಪ್ರಸಿದ್ಧಿಗೆ ಬರುವನು; ಎಷ್ಟೋ ಮುಮುಕ್ಷುಗಳನ್ನು ಪರಮಾರ್ಥ ಮಾರ್ಗಕ್ಕೆ ಹಚ್ಚುವನು. "

ಈ ಭವಿಷ್ಯವಾದವು ಈಗ ಪ್ರತ್ಯಯಕ್ಕೆ ಬಂದಿರುವದು. ಈ ಉದಾ ಹರಣೆಯಿಂದ ಯಾವ ತತ್ವವನ್ನು ನಾವು ನಿರ್ಣಯಿಸಲಿಕ್ಕೆ ಬರುವದು? ಅದ್ಯಾವದೆಂದರೆ, ನೀವು ಬಂಡವಾಳವಿಲ್ಲದೆ ವ್ಯಾಪಾರ ಮಾಡಲಾರಿರಿ. ಪೂರ್ವ ಜನ್ಮಗಳಲ್ಲಿ ಸಂಗ್ರಹಿಸಲ್ಪಟ್ಟ ಈ ಬಂಡವಾಳವು ಅದೃಷ್ಟ ಧನವಾಗಿರುವದು ಎಲ್ಲಾ ಸಂತರಿಗೆ ಈ ಅದೃಷ್ಟ ಧನವನ್ನು ತಿಳಿಯುವದಕ್ಕೆ ಶಕ್ಯವಿಲ್ಲ. ಆ ಕಾರಣದಿಂದ ಅವರು ಕೆಳಗಿನ ದರ್ಜೆಯವರೆಂತ ತಿಳಿಯಬಾರದು. ಈ ಭೂತ ಭವಿಷ್ಯವನ್ನು ತಿಳಿಯುವ ಶಕ್ತಿಯು ಯೋಗಾಭ್ಯಾಸದಿಂದ, ಏಕಾಂತಿಕ ಭಕ್ತಿ ಯಿಂದ ಅಥವಾ ಅಖಂಡ ನಾಮಸ್ಮರಣೆಯ ಅಭ್ಯಾಸದಿಂದ ಪಡೆಯಲಿಕ್ಕೆ ಬರು

ವದು. ಈ ವಿಷಯದಲ್ಲಿ ವಾಲ್ಮೀಕಿ ಋಷಿಯ ಉದಾಹರಣೆಯು ಸಮಂಜಸವಾಗಿದೆ. ಅವನಿಗೆ ಬರೇ ರಾಮನಾಮದ ಉಚ್ಚಾರದಿಂದ (ಅದು ಸಹಾ ರಾಮ ಎಂಬ ಅಕ್ಷರಗಳನ್ನು ತಿರಿವಿ ಮರಾ ಎಂಬದಾಗಿ ಉಚ್ಚರಿಸಿ) ಈ ಶಕ್ತಿಯು ಪ್ರಾಪ್ತವಾಯಿತು. ರಾಮನು ಹುಟ್ಟುವ ಮೊದಲೇ ಅವನು ರಾಮಾಯಣವನ್ನು ಬರೆದಿರುವನು ಎಂಬದು ಪ್ರಸಿದ್ಧವಾಗಿದೆ. ಕೆಲವರನ್ನುತ್ತಾರೆ, ವಾಲ್ಮೀಕಿಯು ರಾಮನು ಹುಟ್ಟುವ ಮೊದಲು ರಾಮಾಯಣವನ್ನು ಬರೆದನು, ಮತ್ತು ರಾಮನು ತನ್ನ ಭಕ್ತನ ವಚನಕ್ಕೆ ಮಾನಕೊಟ್ಟು ಅದೇ ಪ್ರಕಾರ ನಡೆದನು ಇದು ಮಾತ್ರ ಸರಿಯಾದ್ದಲ್ಲ. ರಾಮನು ರಾಮಾಯಣದಲ್ಲಿ ಬರೆದ ಪ್ರಕಾರ ನಡೆದನೆಂಬದು ಸತ್ಯವಲ್ಲ. ಆದರೆ ನಿಜವಾದ್ದೇನಂದರೆ ಮುಂದೆ ರಾಮನು ಹ್ಯಾಗೆ ಆಚರಿಸುವನೆಂಬದು ವಾಲ್ಮೀಕಿ ಋಷಿಗೆ ಮೊದಲೇ ಗೊತ್ತಾಗಿತ್ತು. ಯೋಗವೃಷ್ಟಿಯನ್ನು ಪಡೆದ ಯೋಗಿಗೆ, ಭೂತ ಭವಿಷ್ಯವು ತನ್ನ ಮನಸ್ಸಿನ ಮುಂದೆ ಚಿತ್ರರೂಪದಿಂದ ಕಾಣುತ್ತದೆ. ಈಗಲಾದರೂ ಅಂಥಾ ಶಕ್ತಿಯುಳ್ಳ ಯೋಗಿಗಳಿರುತ್ತಾರೆ. ಶ್ರೀನಾರಾಯಣಸರಸ್ವತಿಯವರು ಈ ತರದ ಒಬ್ಬ ಯೋಗಿಗಳಾಗಿದ್ದರು. ಅವರು ಶ್ರೀಗಜಾನನ ಮಹಾರಾಜರ ವಿಷಯ ಹೇಳಿದ ಭವಿಷ್ಯವಚನವು ಹ್ಯಾಗೆ ಸತ್ಯವಾಯಿತು ಎಂಬದು ಈ ಪುಸ್ತಕದೊಳಗಿನ ಶ್ರೀಗಜಾನನ ಮಹಾರಾಜರ ಜೀವನ ಚರಿತ್ರದಿಂದ ತಿಳಿಯಬಹುದು.

## ಚಮತ್ಕಾರಗಳು.

ಮಹಾನ್ ಭಕ್ತರ ಅಥವಾ ಸಂತರ ಮುಖಾಂತರ ಚಮತ್ಕಾರಗಳು ಕೆಲವು ವೇಳೆ ಸಂಭವಿಸುವವು. ವೇದಾಂತಿಗಳು ಅನ್ನುತ್ತಾರೆ, ಚಮತ್ಕಾರಗಳೆಲ್ಲಾ ಸಿದ್ಧಿಗಳ ಪ್ರಯೋಗದಿಂದ ಆಗುತ್ತವೆ, ಆದರೆ ಸಿದ್ಧಿಗಳು ಆತ್ಮಜ್ಞಾನ ಪಥದಲ್ಲಿ ವಿಘ್ನರೂಪಗಳಾಗಿರುವದರಿಂದ ಅವರು ಸಿದ್ಧಿಗಳನ್ನು ತಿರಸ್ಕಾರ ಬುದ್ಧಿಯಿಂದ ನೋಡುತ್ತಾರೆ, ಮತ್ತು ಕೆಲವು ಮಟ್ಟಿಗೆ ಅವಕ್ಕೆ ಅಂಜುವರು ಸಿದ್ಧಿಗಳು ಜ್ಞಾನಪಥದಲ್ಲಿ ವಿಘ್ನಗಳೆಂಬದಕ್ಕೆ ಸಂಶಯವಿಲ್ಲ, ಆದರೆ ನಾವು ಬೇರೆ ಬೇರೆ ಸಿದ್ಧಿಗಳೊಳಗೆ ಇರುವ ಭೇದವನ್ನು ತಿಳಿಯತಕ್ಕದ್ದು. ಹಠಯೋಗದ ಅಭ್ಯಾಸದಿಂದ ಚಾಂಗದೇವನು ಪಡೆದ ಸಿದ್ಧಿಯು ಶ್ರೀಜ್ಞಾನದೇವರ ಆತ್ಮಸಿದ್ಧಿಯಿಂದ ಪ್ರತ್ಯೇಕವಾಗಿರುತ್ತದೆ. ಶ್ರೀಸಮರ್ಥ ರಾಮದಾಸರನ್ನುತ್ತಾರೆ:—

"ಸಾಧಕನ ಮನಸ್ಸು ಶಾಶ್ವತ ವಸ್ತುವಿನಲ್ಲಿ ಸ್ಥಿರವಾಗಿ ನಿಂತಿತೆಂದರೆ, ಅವನು ಜ್ಞಾನಮಾರ್ಗದವನಾದರೂ ಅವನಿಗೆ ಸಹಜವಾಗಿ ಸಿದ್ಧಿಗಳು ಪ್ರಾಪ್ತವಾಗುವವು."

ಅವರು ಇದಕ್ಕೂ ಅಧಿಕ ಹೇಳುವದೇನಂದರೆ, ಸಂತರು ತಮಗೆ ಯಾವ ಇಚ್ಛೆಯು ಇಲ್ಲದಿದ್ದರೂ ಲೋಕೋಪಕಾರಾರ್ಥವಾಗಿ ವ್ರತಗಳನ್ನು ಆಚರಿಸಿ ಸಿದ್ಧಿಗಳನ್ನು ಪಡೆಯತಕ್ಕದ್ದು.

" ನಾನಾವ್ರತಗಳನ್ನು ಆಚರಿಸತಕ್ಕದ್ದು, ತೀರ್ಥ ಯಾತ್ರೆಗಳನ್ನು ಮಾಡ ಬೇಕು, ಮತ್ತು ಸಿದ್ಧಿಗಳನ್ನು ಪಡೆಯಬೇಕು ಮತ್ತು ವೃದ್ಧಿ ಮಾಡಬೇಕು, ಆದರೆ ವೈರಾಗ್ಯದ ಬಲವಿರಬೇಕು. ಇದೇ ಸರ್ವಕ್ಕೂ ಮೂಲವಾಗಿದೆ." ( ದಾಸಬೋಧ — ೧೦. ೭. ೧೩. )

ಅರುಣಾಚಲದ ಸಂತರಾಗಿರುವ ಶ್ರೀರಮಣ ಮಹರ್ಷಿಗಳಿಗೆ ಸಿದ್ಧಿಗಳ ಸಂಬಂಧ ಒಂದು ಹೀಗೆ ಪ್ರಶ್ನೆ ಕೇಳಲಾಯಿತು. ಪ್ರಶ್ನೆಯು ಹೀಗಿತ್ತು, " ಜ್ಞಾನಕ್ಕೆ ಮತ್ತು ಸಿದ್ಧಿಗಳಿಗೆ ಏನಾದರೂ ವಿರುದ್ಧವದೆಯೋ ಅಥವಾ ಅವು ಗಳೊಳಗೆ ಏನಾದರೂ ಸಂಬಂಧವಿರುವದೋ ? " ಅವರು ಈ ಕೆಳಗಿನ ಉತ್ತರ ವನ್ನು ಕೊಟ್ಟರು. ಜ್ಞಾನಿಯ ( ಆತ್ಮಸಾಕ್ಷಾತ್ಕಾರಿಯ ) ದೃಷ್ಟಿಯಲ್ಲಿ ಆತ್ಮ ನಿಗೆ ಬೇರೆಯಾಗಿ ಜಗತ್ತೆಂಬದು ಇರುವದಿಲ್ಲ. ಆದ್ದರಿಂದ ಆತನು ಚಮತ್ಕಾರ ಗಳನ್ನು ಆತ್ಮನ ಪ್ರಕಟಣೆ ಅಥವಾ ತೋರಿಕೆಯೆಂದು ತಿಳಿಯುತ್ತಾನೆ.

" ಜ್ಞಾನಿಗೆ ಜಗತ್ತು ಮತ್ತು ಅದರ ತೋರಿಕೆಯು ಆತ್ಮನದೇ ತೋರಿಕೆಯು ಹೊರ್ತು ಬೇರೆ ಏನೂ ಇಲ್ಲ. ಆದ್ದರಿಂದ ಸಿದ್ಧಿಗಳನ್ನಾದರೂ ಆತನು ಆತ್ಮನ ಬರೇ ದೃಶ್ಯರೂಪವೆಂದು ತಿಳಿಯುವನು" (ಶ್ರೀರಮಣ ಗೀತಾ ೧೧. ೨೧.)

## ನಾನಾಪ್ರಕಾರದ ಸಿದ್ಧಿಗಳು.

ಭಾಗವತದ ಹನ್ನೊಂದನೆಯ ಸ್ಕಂದದ ೧೫ನೇ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಉದ್ಧವನಿಗೆ ಎಂಟು ಮಹಾಸಿದ್ಧಿಗಳನ್ನೂ ಹತ್ತು ಅಪ್ರಧಾನ ಸಿದ್ಧಿ ಗಳನ್ನೂ ಐದು ಕ್ಷುಲ್ಲಕ ಸಿದ್ಧಿಗಳನ್ನೂ ವರ್ಣಿಸಿದ್ದಾನೆ. ಶ್ರೀರಾಮಕೃಷ್ಣ ಪರಮಹಂಸರಾದರೂ ಬೇರೆ ಬೇರೆ ಸಿದ್ಧಿಗಳನ್ನೂ ಸಿದ್ಧರನ್ನೂ ವರ್ಣಿಸಿದ್ದಾರೆ. ಅದು ಹ್ಯಾಗಂದರೆ :—

(೧) ತಪೋಸಿದ್ಧರು:— ತಪಸ್ಸು ಮಾಡಿ ಸಿದ್ಧಿಗಳನ್ನು ಹೊಂದಿದವರು.

(೨) ಯೋಗಸಿದ್ಧರು : ಯೋಗಾಭ್ಯಾಸದಿಂದ ಸಿದ್ಧಿಗಳನ್ನು ಪಡೆದವರು.

(೩) ಮಂತ್ರಸಿದ್ಧರು:— ಮಂತ್ರಜಪದಿಂದ ಸಿದ್ಧಿಗಳನ್ನು ಪ್ರಾಪ್ತಿ ಮಾಡಿಕೊಂಡವರು.

(೪) ಔಷಧಸಿದ್ಧರು: — ಮೂಲಿಕೆಗಳನ್ನು ಅಥವಾ ಔಷಧಗಳನ್ನು ತಿಂದು ಸಿದ್ಧಿಪಡೆದವರು.

(೫) ಆಕಸ್ಮಿಕ ಸಿದ್ಧರು: — ಆಕಸ್ಮಾತ್ತಾಗಿ ಗುಪ್ತನಿಧಿಯನ್ನು ಪಡೆ ದಂತೆ ತಮ್ಮ ಯತ್ನ ವಿನಹಾ ಸಿದ್ಧಿಯನ್ನು ಪಡೆದವರು.

(೬) ಕೃಪಾಸಿದ್ಧರು:— ಒಬ್ಬ ಮಹಾತ್ಮನ ಸೇವೆ ಮಾಡಿ ಅವನ ಕೃಪೆಯಿಂದ ಸಿದ್ಧಿಹೊಂದಿದವರು.

(೭) ಜನ್ಮಸಿದ್ಧರು:— ಜನ್ಮಕಾಲದಿಂದಲೆ ಸಿದ್ಧಿಗಳನ್ನು ಪಡೆದು ಬಂದವರು. ಅವರು ಈ ಜನ್ಮದಲ್ಲಿ ತಪ, ಜಪ, ಯೋಗ ಇತ್ಯಾದಿ ಏನೂ ಸಾಧಿಸದೆ, ಈ ಸಿದ್ಧಿಗಳು ಅವರಿಗೆ ಅನುಚರರಾಗಿರುವಂತೆ ಬರುತ್ತವೆ.

ಶ್ರೀಗಜಾನನ ಮಹಾರಾಜರ ಚರಿತ್ರವನ್ನು ಸೂಕ್ಷ್ಮವಾಗಿ ನೋಡಿದರೆ ಅವರು ಜನ್ಮಸಿದ್ಧರೆಂತ ತಿಳಿಯಬರುತ್ತದೆ. ಶ್ರೀನಾರಾಯಣ ಸರಸ್ವತಿಯವರು ಗಜಾನನ ಮಹಾರಾಜರನ್ನು ಪ್ರಥಮದಲ್ಲಿ ನೋಡಿದಾಕ್ಷಣ ಗಜಾನನ ಮಹಾಜರು ಯೋಗಿಗಳಿದ್ದಾರೆಂತ ಅವರು ಅಂದರು, ಎಂಬ ಮಾತು ಹಿಂದೆಯೇ ನಾವು ಹೇಳಿದ್ದೇವೆ. ಶ್ರೀಗಜಾನನ ಮಹಾರಾಜರು ಈ ಜನ್ಮದಲ್ಲಿ ಯಾವಯೊಂದು ತಪಸ್ಸು, ಯೋಗ, ಜಪ, ಅಥವಾ ಸತ್ಪುರುಷನ ಸೇವೆ ಮಾಡಿದ್ದಿಲ್ಲ. ಅವರ ಹತ್ತರ ಪೂರ್ವಜನ್ಮಗಳ ಸಂಚಿತವು ಮೊದಲೇ ಇತ್ತು. ಶ್ರೀನಾರಾಯಣ ಸರಸ್ವತಿಯವರ ಮಹತ್ವಕ್ಕೆ ನ್ಯೂನತೆ ಬರುವದಿಲ್ಲ. ಶಿಷ್ಯನು ಯಾವಾಗಲೂ ಗುರುವಿನ ವಿಷಯದಲ್ಲಿ ಆತನ ಮಹದುಪಕಾರಕ್ಕಾಗಿ ಋಣಿಯಾಗಿರುತ್ತಾನೆ.

ಈ ಸಂಗತಿಗಳಲ್ಲಿ ಸದ್ಗುರುವು ಕೋರ್ಟಿನ ನಾಝರನ ಕಾರ್ಯವನ್ನು ಮಾಡುತ್ತಾನೆ ಒಬ್ಬ ಅಲ್ಪವಯಸ್ಕನ ಆಸ್ತಿಯು ಅವನ ತಾಬೆಗೆ ಇರುತ್ತದೆ. ಆ ಅಲ್ಪವಯಸ್ಕನು ವಯಸ್ಸಿಗೆ ಬಂದ ಮೇಲೆ ನಾಝರನು ಅವನ ಆಸ್ತಿಯನ್ನು ಅವನಿಗೆ ಬಿಟ್ಟುಕೊಡುವನು. ಅವನು ತನ್ನ ಕಿಸೆಯಿಂದ ಏನೂ ಕೊಡುವದಿಲ್ಲ.

“ ತುಕಾರಾಮನನ್ನುತ್ತಾನೆ, ಅವಸರ ಮಾಡಿ ಉಪಯೋಗವಿಲ್ಲ, ಯೋಗ್ಯಕಾಲ ಬರಬೇಕು. ”

ಮುಮುಕ್ಷುವಿಗೆ ಈ ಯೋಗ್ಯಕಾಲ ಬರಬೇಕಾದರೆ ಅವನ ಮನಸ್ಸು ಜ್ಞಾನಗ್ರಹಣಕ್ಕೆ ಸಿದ್ಧವಾಗಬೇಕು. ಆಗ ಅವನು ವಯಸ್ಕನಾಗುವನು. ಹೀಗೆ ಅವನು ವಯಸ್ಸಿಗೆ ಬಂದ ಮೇಲೆ ಸದ್ಗುರುವು ಅವನ ( ಶಿಷ್ಯನ ) ಸ್ವಂತ ಧನವು ಎಲ್ಲಿ ಅದೆ ಅಂತ ತೋರಿಸುವನು; ಮತ್ತು ಶಿಷ್ಯನು ಆತ್ಮಸಾಕ್ಷಾತ್ಕಾರವನ್ನು ಪಡೆಯುವನು. “ ನಿಮ್ಮ ಧನವು ನಿಮ್ಮ ಹತ್ತರವೇ ಇದೆ, ಆದರೆ ಅದು ಎಲ್ಲಿ ಇರುವದೆಂಬದು ನೀವು ಮರೆತಿದ್ದೀರಿ ” (ತುಕಾರಾಮ). ಸದ್ಗುರುಗಳು ಶಿಷ್ಯನಿಗೆ ತಮ್ಮದೇನಾದರೂ ಕೊಡುತ್ತೇವೆಂದು ಎಂದೂ ತಿಳಿಯುವದಿಲ್ಲ, ಮತ್ತು ತಾವು ಶಿಷ್ಯನ ಮೇಲೆ ಉಪಕಾರದ ಹೊರೆ ಹೊರಿಸೇವೆಂದೂ ಮನ್ನಿಸುವದಿಲ್ಲ. ಇಷ್ಟೇ ಅಲ್ಲ, ಅವರು ಈಶ್ವರನು ತಮ್ಮಮೇಲೆ ದೊಡ್ಡ ಜವಾಬದಾರಿಯಾಗಿ ಇಟ್ಟ ಠೇವಣಾತಿಯನ್ನು ಅದರ ತಕ್ಕ ಮಾಲಕನಿಗೆ ತಿರಿಗಿ ಕೊಟ್ಟು, ತಮ್ಮ ಜವಾಬದಾರಿಯನ್ನು ನಿರ್ವಹಿಸಿಕೊಂಡು, ಕರ್ತವ್ಯಕರ್ಮವನ್ನು ಮಾಡಿ

ಬಿಡುಗಡೆಯಾದೆವೆಂದು ತಿಳಿಯುತ್ತಾರೆ. ದೈವಿಕ ನಿಯಮಗಳನ್ನು ಬಲ್ಲಂಥಾ ಸದ್ಗುರುಗಳಲ್ಲಿ ಇಂಥಾ ಲಕ್ಷಣಗಳಿರುತ್ತವೆ. ಆದರೆ ಯೋಗ್ಯನಾದ ಶಿಷ್ಯನು ಹ್ಯಾಗೆ ನಡೆಯಬೇಕು? ದೈವಿಕ ನಿಯಮಗಳನ್ನು ಪ್ರತಿಪಾದಿಸುವ ಶಾಸ್ತ್ರಗಳು, ಮತ್ತು ಅಂಥಾ ನಿಯಮಗಳನ್ನು ಬಲ್ಲಂಥಾ ಸತ್ಪುರುಷರು ಸತ್‌ಶಿಷ್ಯನ ಲಕ್ಷಣಗಳನ್ನು ಹೀಗೆ ವರ್ಣಿಸುವರು :—

" ಉಪನಿಷತ್ತುಗಳು ಖಂಡಿತವಾದ ವಚನಗಳಿಂದ ಹೇಳುತ್ತವೇನಂದರೆ- ಸದ್ಗುರುವಿನ ಸಹಾಯ ಪಡೆದ ವಿನಹಾ ಬ್ರಹ್ಮಜ್ಞಾನವನ್ನು ತಿಳಕೊಳ್ಳು ಲಿಕ್ಕೆ ಸಾಧ್ಯವಿಲ್ಲ. ಒಂದು ದೋಣಿಯು ಜನರನ್ನು ನೀರಿನ ಮೇಲಿಂದ ಇತ್ತಿಂದ ಅತ್ತ ವೈಯುತ್ತದೆಂಬದು ನಿಜ. ಆದರೆ ಅದನ್ನು ಯೋಗ್ಯ ಮತ್ತು ಕುಶಲನಾದ ಚುಕಾಣಿಯವನು ನಡಿಸಿದ ವಿನಹಾ, ಅದರ ಮೇಲೆ ಮಹತ್ವವುಳ್ಳ ಮಂದಿ ಕೂತಿರುವರೆಂಬದರ ಮೇಲಿಂದ ಆ ದೋಣಿಯು ನದಿಯನ್ನು ದಾಟಲಾರದು. ಯಾರು ಆತ್ಮಸಾಕ್ಷಾತ್ಕಾರವನ್ನು ಹೊಂದಿರುವರೊ ಅವರು ತಮ್ಮ ಆತ್ಮನನ್ನು ತಾವೇ ಕಂಡುಹಿಡಿದು ಸಾಕ್ಷಾತ್ಕರಿಸುವಂತೆ ಮಾಡಿದ ಸದ್ಗುರುವಿನಲ್ಲಿ ಪೂರ್ಣ ನಿಷ್ಠೆ ಇಟ್ಟು ಸಾಕ್ಷಾತ್ಕಾರವನ್ನು ಪಡೆದರು; ಆತ್ಮಸಾಕ್ಷಾತ್ಕಾರದ ಅನೇಕ ಸಾಧನಗಳ ಪೈಕಿ ಸದ್ಗುರುವುಪಾಸನೆಯು ಒಂದು ಸಾಧನೆಯಂತ ತಿಳಕೊಳ್ಳುವ ಮುಮುಕ್ಷುವು ಹುಚ್ಚನಿರುವನು ಮತ್ತು ಅವನು ಎಂದೂ ಆತ್ಮಸಾಕ್ಷಾತ್ಕಾರವನ್ನು ಹೊಂದಲಾರನು. ಸದ್ಗುರುವು ಕಾರ್ಯಸಾಧನೆಗೆ ಒಂದು ಉಪಾಯವೆಂತ ತಿಳಕೊಳ್ಳುವಂಥಾದ್ದು ಸ್ವನಾಶಕ್ಕೆ ಕಾರಣವಾಗುವದು "

ಈ ನಿಯಮದ ಕಾರಣವು ಈ ಕೆಳಗಿನ ಓವಿಯಲ್ಲಿ ಸ್ಪಷ್ಟ ಮಾಡಿರುತ್ತದೆ.

" ಆತ್ಮಾನಂದವನ್ನು ನಿತ್ಯದಲ್ಲಿ ಅನುಭವಿಸುತ್ತಾ ಇದ್ದು, ಅವರಲ್ಲಿ ಅಖಂಡವಾಗಿ ಮಗ್ನನಾಗಿರುವ ಸದ್ಗುರುವು ಆತ್ಮನಿಂದ ಪ್ರತ್ಯೇಕನಾಗಿರುವದಿಲ್ಲ." (ಏಕನಾಥಿ ಭಾಗವತ ಅ. ೧೦)

ವೇದಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ ಬ್ರಹ್ಮಜ್ಞಾನವನ್ನು ಹೊಂದುವ ಸಲುವಾಗಿ ಸದ್ಗುರುವಿನಕಡೆ ಹೋಗಬೇಕಂತ ಹೇಳಿರುತ್ತದೆ, ಈ ಶಬ್ದಗಳಿಂದ ಸದ್ಗುರುವು ಸಾಧನವೆಂದೂ ಬ್ರಹ್ಮಜ್ಞಾನ(ಆತ್ಮಜ್ಞಾನ)ವು ಸಾಧ್ಯವೆಂದೂ ತಿಳಿಯಬಹುದು. ಇದರಿಂದ ಸದ್ಗುರುವಿನ ಅವಶ್ಯಕತೆಯು ಸ್ಪಷ್ಟವಾಗುತ್ತಿದ್ದರೂ, ಶ್ರೀ ಏಕನಾಥ ಮಹಾರಾಜರ ಪ್ರೇಮಯುಕ್ತ ಹೃದಯವು ಅದನ್ನು ಸಹಿಸಲಾರದೆ, ಮೇಲೆ ಹೇಳಿದ ಉದ್ಗಾರವನ್ನು ತೆಗೆದರು. ಸದ್ಗುರುವು ಕಾರಣ ಮತ್ತು ಬಹ್ಮ ಕಾರ್ಯ ಎಂಬದಾಗಿ ತಿಳಿಯುವದು ಅವರಿಗೆ ಯೋಗ್ಯವೆನಿಸದು. ಮೇಲೆ ಹೇಳಿದ ಓವಿಯಲ್ಲಿ ಗುರು ಮತ್ತು ಬಹ್ಮ ಒಂದೇ ಅಂತ ತಿಳಿಯಲಿಕ್ಕೆ ಕಾರಣವನ್ನೂ ಅವರು ಕೊಟ್ಟಿರುವರು.

ಹೇಳಿಕೆಗಳು ಬೇರೆ ಬೇರೆ ದೃಷ್ಟಿಕೋನಗಳಿಂದ ಹೇಳಿದ್ದಿರುತ್ತವೆ. ಭಾಗವತದಲ್ಲಿ ಹಾಗೆ ಹೇಳಲಿಕ್ಕೆ ಕಾರಣವೇನಂದರೆ, ನಾವು ಮತ್ತೊಬ್ಬರ ಮೇಲೆ ಕರುಣೆ ಮಾಡುವಾಗ, ನಾವು ಹೆಚ್ಚಿನವರು ಅವರು ಕನಿಷ್ಠರೆಂಬ ಭೇದವು ಮನಸ್ಸಿನಲ್ಲಿ ಉತ್ಪನ್ನವಾಗುವದು. ರಾಮಕೃಷ್ಣಪರಮಹಂಸರನ್ನುತ್ತಾರೆ, ಕರುಣೆ ಮಾಡುವದೆಂಬದೆ ಗರ್ವದ ಚಿಹ್ನ. ಸೇವೆ ಮಾಡುವದೆಂಬದು ಯೋಗ್ಯವಾದ ಮನೋವೃತ್ತಿ. ಈ ಭರತ ರಾಜನು ತನ್ನ ರಾಜ್ಯ, ಸ್ತ್ರೀ, ಮಕ್ಕಳು ಪ್ರಜೆಗಳು ಇವೆಲ್ಲವನ್ನು ಬಿಟ್ಟು ಅರಣ್ಯಕ್ಕೆ ಹೋಗಿ ಅಲ್ಲಿ ಒಂದು ಚಿಗರಿಮರಿಯಿಂದ ಮೋಹಿತನಾದನು. ಅವನ ಮನಸ್ಸು ಆ ಚಿಗರಿಮರಿಯ ದೆಶೆಯಿಂದ ಚಿಂತಾತುರವಾಗಿ ಅದು ಎಲ್ಲಿ ಓಡಿಹೋಗುವದೋ ನಾಯಿ, ತೋಳ ಮುಂತಾದವುಗಳಿಂದ ಎಲ್ಲಿ ಕೊಲ್ಲಲ್ಪಡುವದೊ ಎಂದು ಯಾವಾಗಲೂ ಚಿಂತಿಸುತ್ತಿತ್ತು. ಉಣ್ಣುವಾಗ, ಕುಡಿಯುವಾಗ ಧ್ಯಾನಕ್ಕೆ ಕೂತಿರುವಾಗ ಸಹಾ ಅದರ ಚಿಂತೆಹತ್ತಿ ಅವನ ಚಿತ್ತದ ಏಕಾಗ್ರತೆಯಾಗದೆ ಮನಸ್ಸು ಬಹಳ ಅಸ್ಥಿರವಾಯಿತು. ಆ ಚಿಗರಿಮರಿಯು ದೊಡ್ಡದಾಗುತ್ತಲೆ ಓಡಿಹೋಯಿತು; ತಿರಿಗಿ ಬರಲೇ ಇಲ್ಲ. ಭರತನು ಅದರದೆಶೆಯಿಂದ ಅತ್ಯಂತ ಚಿಂತಾತುರನಾದನು. ಅದೇ ಕಾಲದಲ್ಲಿ ಅವನ ಮರಣವು ಸಮಿಪಿಸಿತು, ಮತ್ತು ಆತನು ತನ್ನ ಮನಸ್ಸು ಆ ಚಿಗರಿಮರಿಯನ್ನು ಧ್ಯಾನಿಸುತ್ತಲೆ ಶರೀರವನ್ನು ಬಿಟ್ಟನು ಅಂತ್ಯಕಾಲದಲ್ಲಿ ಯಾವದರ ಚಿಂತನೆ ಇರುವದೋ ಅದೇ ಮುಂದಿನ ಜನ್ಮದಲ್ಲಿ ಪ್ರಾಪ್ತಿಯಾಗುವದೆಂಬ ನಿಯಮಕ್ಕನುಸರಿಸಿ ಭರತನು ಚಿಗರಿಯಾಗಿ ಪುನರ್ಜನ್ಮವನ್ನು ತಾಳಿದನು. ಇದರ ನಂತರ ಅವನು ಬ್ರಾಹ್ಮಣನಾಗಿ ಹುಟ್ಟಿದನು. ಅವನ ಪೂರ್ವಜನ್ಮಗಳ ತಪೋಪ್ರಭಾವದಿಂದ ಅವನಿಗೆ ಹಿಂದಿನ ಜನ್ಮಗಳ ಸ್ಮೃತಿ ಇತ್ತು. ಆದ್ದರಿಂದ ಈ ಕಡೆ ಜನ್ಮದಲ್ಲಿ ಅವನು ಉನ್ಮತ್ತಾವಸ್ಥೆಯನ್ನು ಕೈಕೊಂಡು ಜಡಭರತನೆನಿಸಿಕೊಂಡನು.

ರಹೂಗಣ ರಾಜನು ಕಪಿಲ ಮಹರ್ಷಿಯ ಕಡೆಗೆ ಅನುಗ್ರಹಾರ್ಥವಾಗಿ ಹೋಗುತ್ತಿರುವಾಗ, ಈ ದಷ್ಟಪುಷ್ಟನಾಗಿ ಹುಚ್ಚನೆಂತಿದ್ದ ಜಡಭರತನನ್ನು ಕಂಡು, ಆ ರಾಜನ ಸೇವಕರು ಅವನನ್ನು ರಾಜನ ಪಲ್ಲಕ್ಕಿ ಹೊರುವದಕ್ಕೆ ವತ್ತಾಯಪಡಿಸಿ ಪಲ್ಲಕ್ಕಿಯ ದಂಡಿಗೆಯನ್ನು ಅವನ ಹೆಗಲಮೇಲಿಟ್ಟರು. ದಾರಿಯಲ್ಲಿರುವ ಇರಿವೆ ಮುಂತಾದ ಪ್ರಾಣಿಗಳು ಕಾಲಿಡುವಲ್ಲಿ ಬಂದವೆಂದರೆ ಅವನು ತತ್ಕಾಲ ಅತ್ತಿತ್ತ ಹಾರುವನು. ರಾಜನು ಈ ಪ್ರಕಾರದ ಅದರುವಿಕೆಯನ್ನು ಸಹಿಸಲಾರದೆ, ಸಿಟ್ಟಿಗೆದ್ದು ಜಡಭರತನಿಗೆ ಬೆತ್ತದಿಂದ ಹೊಡೆದನು. ಜಡಭರತನು ಆಗ ಅಳುವ ಬದಲಿಗೆ ನಕ್ಕನು. ಇದರಿಂದ ರಾಜನು ಸಂಶಯಚಿತ್ತನಾಗಿ, ಪಲ್ಲಕ್ಕಿಯಿಂದ ಕೆಳಗಿಳಿದು, ಅವನು ಯಾರು ಮತ್ತು ಅಳುವ ಬದಲಿಗೆ ನಗುವನ್ಯಾಕೆಂದು ಜಡಭರತನಿಗೆ ಕೇಳಿದನು. ಜಡಭರತನು ಆಗ ಮಾತಾಡಲಾರಂಭಿಸಿದನು. ಮತ್ತು ರಾಜನಿಗೆ ಪರಮಾತ್ಮತತ್ವವನ್ನು ವಿವರಿಸಿ ಹೇಳಿ ಅವನ ಮೇಲೆ ಅನುಗ್ರಹ ಮಾಡಿ ಆತ್ಮ-

ಸಾಕ್ಷಾತ್ಕಾರ ಮಾಡಿಸಿದನು. ಈ ಕಥೆಯು ಭಾಗವತದ ಐದನೇ ಸ್ಕಂದದಲ್ಲಿ ವಿಸ್ತಾರವಾಗಿ ಕೊಟ್ಟಿರುತ್ತದೆ. ಇದರಿಂದ ನಾವು ಏನು ಕಲಿಯತಕ್ಕದ್ದು? ಇದೇ, ಏನಂದರೆ- ಆತ್ಮಜ್ಞಾನವನ್ನು ಪಡಿಯಲಿಕ್ಕೆ ಕೆಲವು ವಿಘ್ನಗಳಿರುತ್ತವೆ. ಅವು ಅಳಿದು ಹೋದ ವಿನಹಾ ಆತ್ಮಜ್ಞಾನ ಪಡಿಯುವದಕ್ಕೆ ಸಾಧ್ಯವಿಲ್ಲ. ವಾಮ ದೇವನಿಗೆ ಒಂದು ಜನ್ಮದ ವಿಘ್ನವಿತ್ತೆಂದು ಹೇಳುತ್ತಾರೆ, ಆದ್ದರಿಂದ ಇಂಥಾ ದುಸ್ತರವಾದ ವಿಘ್ನಗಳಿಂದ ತೊಡಕಿಸಲ್ಪಟ್ಟವರು ಅತಿ ಶ್ರೇಷ್ಠ ಸಂತರಿಂದ ಸಹಾ ಪಾರಾಗಲಾರರು.

ಇನ್ನೊಂದು ಸಂಗತಿಯನ್ನು ವಿಚಾರಮಾಡತಕ್ಕದ್ದದೆ. ಸಾಧಕನು ಮೇಲೆ ಹೇಳಿದ ನಿಯತ ಗುರುವಿಗೆ ಭೆಟ್ಟಿಯಾದ ವಿನಹಾ, ಅವನ ಖರೆಯಾದ ಉದ್ದೇಶವು ಕೈಗೂಡಲಾರದು. ಮೇಲೆ ಹೇಳಿದ ಕಥೆಯಲ್ಲಿ ರಹುಗಣ ರಾಜನು ಕಪಿಲ ಋಷಿಗೆ ಭೆಟ್ಟಿಯಾಗಲಿಕ್ಕೆ ಹೊರಟಿದ್ದನು. ಆದರೆ ಅವನ ಅದೃಷ್ಟದಿಂದ ಅಥವಾ ಕರ್ಮ ದಿಂದ ಸಿದ್ಧವಾದ ವೇಳೆಯು ಆಗಲೇ ಒದಗಿದ್ದರಿಂದ ಜನ್ಮಸಿದ್ಧನಾದ ಜಡಭರ ತನು ಅವನಿಗೆ ಸಿಕ್ಕನು. ಮತ್ತು ತನ್ನ ಜನ್ಮದ ಉದ್ದೇಶವನ್ನು ನೆರವೇರಿಸಿ ಕೊಂಡನು ಇದರಿಂದ ಜಡಭರತನೇ ಅವನ ನಿಯತ ಗುರುವೆಂದು ತೋರುತ್ತದೆ. ಹಿಂದೆಯೇ ಹೇಳಿತ್ತೇನಂದರೆ, ಜ್ಞಾನದೇವ ಮತ್ತು ಅವನ ಬಂಧು-ಭಗಿನಿ ಇವರು ಪೂರ್ಣಸಿದ್ಧರಾಗಿದ್ದು ಲೋಕೋದ್ಧಾರವನ್ನು ಮಾಡುವಷ್ಟು ಶಕ್ತಿಯುಳ್ಳವರಾದರು. ಅವರ ಶಕ್ತಿಯು ನಾಮದೇವನ ಕೆಲಸಕ್ಕೆ ಬೀಳಲಿಲ್ಲ, ಯಾಕಂದರೆ ಅವನ ಗುರು ವಿಠೋಬಾ ಖೇಚರನಿದ್ದನು. ಇದರಿಂದೆಲ್ಲಾ ತಿಳಿಯತಕ್ಕದ್ದೇನಂದರೆ, ಒಬ್ಬಾ ನೊಬ್ಬ ಸಂತನಿಗೆ ಸ್ಪರ್ಶಮಾತ್ರದಿಂದ, ಕೃಪಾದೃಷ್ಟಿಯಿಂದ ಅಥವಾ ಬರೇ ವಚನ ಮಾತ್ರದಿಂದ ಇತರರನ್ನು ಆತ್ಮಜ್ಞಾನಿಗಳನ್ನಾಗಿ ಮಾಡುವ ಶಕ್ತಿಯಿದ್ದರೂ ಆ ಶಕ್ತಿಯು ಸ್ವತಂತ್ರವಾದ್ದಲ್ಲ. ಆ ಶಕ್ತಿಯ ಉಪಯೋಗವು ಶಿಷ್ಯನ ಪೂರ್ವಪುಣ್ಯ ಅಥವಾ ಪೂರ್ವಜನ್ಮದ ಸಂಬಂಧದಿಂದ ಆಗುತ್ತದೆ. ಭಸ್ಮಾಸುರನು ಶ್ರೀ ಶಂಕರ ನಿಂದ ವರ ಪಡದದ್ದೇನಂದರೆ, ತನ್ನ ಕೈಯನ್ನು ಯಾರತಲೆಯಮೇಲೆ ಇಡುವನೋ ಅವನು ಭಸ್ಮವಾಗಬೇಕು; ಮತ್ತು ಆ ವರದ ಶಕ್ತಿಯಿಂದ ಭಸ್ಮಾಸುರನು ಲೋಕದಲ್ಲಿ ಬಹಳ ಹಾವಳಿ ಮಾಡಿದನು. ರಾಮಾಯಣದಲ್ಲಿ ಸುಗ್ರೀವನ ಮಿತ್ರ ನಾದ ನಳನಿಗೆ ಅವನ ಕೈಯಿಂದ ನೀರೊಳಗೆ ಹಾಕಿದ ಕಲ್ಲುಗಳು ತೇಲಬೇ ಕೆಂದು ಒಬ್ಬ ಋಷಿಯು ಶಾಪಕೊಟ್ಟಿದ್ದನು ಈ ಶಾಪದ ಉಪಯೋಗವು ಶ್ರೀರಾಮನಿಗೆ ಲಂಕೆಗೆ ದಾಟಿ ಹೋಗಲಿಕ್ಕೆ ರಚಿಸಿದ ಸೇತುವೆಯ ಸಲುವಾಗಿ ಆಯಿತು. ಮೇಲಿನ ಎರಡು ಸಂಗತಿಗಳಲ್ಲಿ ಹೇಳಿದ ಶಕ್ತಿಯು ಸ್ವತಂತ್ರವಾಗಿತ್ತು ಅಂದರೆ ಎರಡನೆ ಯಾವದಾದರೂ ಅವಲಂಬನೆ ಇಲ್ಲದೆ ಉಪಯೋಗ ಮಾಡ ಲಿಕ್ಕೆ ಬರುವಂಥಾದ್ದಾಗಿತ್ತು. ಸಂತರ ಶಕ್ತಿಯು ಈ ಪ್ರಕಾರದ್ದಲ್ಲ. ಅವರಿಗೆ ಅಂಥಾ ಶಕ್ತಿ ಇತ್ತೆಂದರೆ, ಅವರು ಇಡೀ ಲೋಕವನ್ನು ಮೋಕ್ಷಕ್ಕೆ ಒಯ್ಯುತ್ತಿದ್ದರು;

ಯಾಕಂದರೆ ಅವರು ದಯಾವಂತರಾಗಿದ್ದದರಿಂದ ಪ್ರಾಣಿಗಳು ದುಃಖಪಡುವದು ಅವರಿಗೆ ಸಹನವಾಗುತ್ತಿದ್ದಿಲ್ಲ. ವಾಮನ ಪಂಡಿತರು ತಮ್ಮ ಯಥಾರ್ಥದೀಪಿಕೆ ಯೆಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆಃ- ಬ್ರಹ್ಮಜ್ಞಾನವನ್ನು ಅನಧಿಕಾರಿಗ ಳಿಗೆ ಸಹಾ ಕೊಡಲಿಕ್ಕೆ ಆಗುತ್ತಿದ್ದದ್ದಾದರೆ, ಸರ್ವಭೂತದಯಾಪರರಾಗಿರುವ ಸಂತರು ಮೂರು ಲೋಕಗಳನ್ನು ಮೋಕ್ಷಕ್ಕೆ ಒಯ್ಯುತ್ತಿದ್ದರು. ಆದರೆ ಈ ರೀತಿ ಮಾಡುವದು ದೈವಿಕ ನಿಯಮಕ್ಕೆ ಪ್ರತಿಕೂಲವಾಗಿರುವದು. ಆದ್ದರಿಂದ ಒಬ್ಬಾ ನೊಬ್ಬ ಮನುಷ್ಯನು ಒಬ್ಬ ಸಂತನಿಂದ ಆತ್ಮಸಾಕ್ಷಾತ್ಕಾರವನ್ನು ಹೊಂದ ಲಿಲ್ಲ ಎಂಬ ಸಂಗತಿಯಿಂದ ಆ ಸಂತನ ಮಹತ್ವಕ್ಕೆ ಏನೂ ನ್ಯೂನತೆ ಬರುವದಿಲ್ಲ. ಇಂಥಾ ಸಂಗತಿಗಳಲ್ಲಿ ನಾವು ಹ್ಯಾಗೆ ವಿವರಿಸಿಕೊಳ್ಳತಕ್ಕದ್ದೆಂದರೆ ಆ ಶಿಷ್ಯನಿಗೆ ಆ ಗುರುವಿನ ಪೂರ್ವಜನ್ಮದ ಸಂಬಂಧವಿರಲಿಕ್ಕಿಲ್ಲ, ಅಥವಾ ಅವನು ಗುರುವಾ ನುಗ್ರಹವನ್ನು ಹೊಂದತಕ್ಕ ಯೋಗ್ಯಕಾಲವು ಒದಗಲಿಲ್ಲ.

ನವನಾಥರಂಥಾ ನಿಯತ ಗುರುಗಳು ಯಾವಾಗಲೂ ತಮ್ಮ ನಿಯತ ಶಿಷ್ಯರ ದಾರಿಯನ್ನು ನೋಡುತ್ತಲಿರುವರು. ಈ ನವನಾಥರು ಚಿರಂಜೀವಿಗಳು (ಲೋಕಾಂತದ ತನಕ ಬದುಕಿರುವರು.) ಎಂಬದಾಗಿ ತಿಳಿಯಲ್ಪಡುತ್ತದೆ. ಮಚ್ಛಿಂದ್ರ ನಾಥ, ಗೋರಕನಾಥ, ಗಹಿನೀನಾಥ ಮತ್ತು ಜ್ಞಾನೇಶ್ವರರು ಸಹಾ ಈಗಲೂ ಇದ್ದಾರೆ ಅತ್ರಿ-ಅನುಸೂಯಾ ದಂಪತಿಗಳ ಮಗನಾದ ದತ್ತಾತ್ರೇಯರು, ನವ ನಾಥರ ಗುರುಗಳೆಂತೆನಿಸಲ್ಪಟ್ಟು, ಆ ನವನಾಥರಿಂದ ಗುರುತ್ವವನ್ನು ಹೊಂದಿದ್ದು, ಇನ್ನಾದರೂ ತಮ್ಮ ಪೂರ್ವದೇಹದಿಂದಲೆ ಇದ್ದಾರೆ. ಪರಮಾತ್ಮನು ಯಾವದಾ ದರೂ ಕಾರ್ಯಾರ್ಥವಾಗಿ ಅವತಾರವನ್ನು ಧಾರಣೆ ಮಾಡಿದ್ದಾದರೆ, ಆ ಕಾರ್ಯವು ಮುಗಿಯುತ್ತಲೇ ತನ್ನ ಪೂರ್ವಸ್ಥಾನಕ್ಕೆ ತೆರಳುವನು. ಆದರೆ ಶ್ರೀದತ್ತಾತ್ರೇಯರ ಅವತಾರವು ಈ ಪ್ರಕಾರದ್ದಲ್ಲ ಇವರು ಲೋಕಾಂತವಾಗುವ ತನಕ ಒಂದೇ ರೂಪದಿಂದಿರುವರು. ಆದ್ದರಿಂದ ಇಂಥಾ ಅವತಾರಕ್ಕೆ ಅವಿನಾಶ ಅವತಾರವೆನ್ನು ತ್ತಾರೆ. ನೂರಾರು ವರ್ಷಗಳ ಹಿಂದೆ ಪ್ರಖ್ಯಾತರಾಗಿದ್ದ ಗೋಪಿಚಂದ ಮತ್ತು ನೂರೈವತ್ತು ವರ್ಷಗಳ ಹಿಂದೆ ಇದ್ದ ಸೊಹಿರೋಬಾನಾಥ ಇವರಿಬ್ಬರೂ ನಾಥ ಪಂಥಕ್ಕೆ ಸೇರಿದವರಾಗಿದ್ದು, ಇನ್ನೂ ಅವರು ಮೊದಲಿನ ದೇಹಗಳಿಂದ ಚರಿಸುವ ರೆಂದು ಹೇಳುತ್ತಾರೆ. ನಾಥ ಸಾಂಪ್ರದಾಯದ ಈ ಗುರುಗಳು ಯಾವ ರೀತಿ ಯಿಂದ ತಮ್ಮ ಶಿಷ್ಯರನ್ನು ಕಂಡುಹಿಡಿದು, ಅವರನ್ನು ತಮ್ಮ ಅನುಗ್ರಹಕ್ಕೆ ಪಾತ್ರ ರನ್ನು ಮಾಡುತ್ತಾರೆಂಬದು ತಿಳಿಯುವದಿಲ್ಲ. ಶ್ರೀಗಜಾನನ ಮಹಾರಾಜರ ಚರಿತ್ರದಲ್ಲಿ ಹೇಳಿರುತ್ತದೆ, ಅವರು ಚಿಕ್ಕ ವಯಸ್ಸಿನವರಿದ್ದಾಗ ರಾತ್ರಿಕಾಲದಲ್ಲಿ ಅಕೋಲೆಯ ನಿರ್ಜನವಾದ ಕಿಲ್ಲೆಯಲ್ಲಿ ಧ್ಯಾನಮಾಡುತ್ತ ಕೂತಿರುತ್ತಿದ್ದರು. ಶಿವ ರಾಮಭಾವು ಗುಪ್ತೆಯವರು ಹಾಗೆ ಮಾಡುವದು ಭೀತಿಕರವೆಂದು ಶ್ರೀಗಜಾನನ

ಮಹಾರಾಜರಿಗೆ ಹೇಳಿದಾಗ್ಗೆ ಅವರಂದರು, " ನಾನು ಸ್ವಬುದ್ಧಿಪೂರ್ವಕ ಹೋಗುವದಿಲ್ಲ. ಯಾವದೋ ಗೂಢವಾದ ಶಕ್ತಿಯು ನನ್ನನ್ನು ಅಲ್ಲಿಗೆ ಕರಕೊಂಡು ಹೋಗುವದು. ಮತ್ತು ತಿರುಗಿ ಇಲ್ಲಿ ತಂದು ಬಿಡುವದು. ನನ್ನ ಸದ್ಗುರುವು ಇಷ್ಟು ದಯಾವಂತನಿದ್ದಾನೆ." ಸಂತರು ಅಥವಾ ಸದ್ಗುರುಗಳು ಈ ಪ್ರಕಾರ ಗುಪ್ತರೀತಿಯಿಂದ ಸಾಧಕರಿಗೆ ಸಹಾಯ ಮಾಡುತ್ತಾರೆ. ಅವರಿಗೆ ಅದೃಶ್ಯ ಸಹಾಯಕರೆನ್ನುತ್ತಾರೆ. ಅವರು ಕೆಲವುವೇಳೆ ತಮ್ಮ ಹೆಸರು ಸಹಾ ತಿಳಿಯಗೊಡುವದಿಲ್ಲ. ಇಂಥಾ ಉದಾಹರಣೆಗಳು ಶ್ರೀಗುರುಚರಿತ್ರ, ಶಿವಲೀಲಾಮೃತ ಮುಂತಾದ ಧರ್ಮಗ್ರಂಥಗಳಲ್ಲಿರುವವು. ಈ ಪ್ರಕಾರದ ಕೆಲವು ಸಂಗತಿಗಳು ಗೋರಕಪುರದ 'ಕಲ್ಯಾಣ' ಎಂಬ ಹಿಂದಿ ಮಾಸಿಕದಲ್ಲಿ ಇತ್ತಲಾಗೆ ಪ್ರಸಿದ್ಧವಾಗಿವೆ. ಅಂಥಾ ಗುಪ್ತರೀತಿಯ ಸಹಾಯವನ್ನು ಪಡೆಯಬೇಕಾದರೆ, ಸಾಧಕನ ಹತ್ತರ ಪೂರ್ವಜನ್ಮಗಳಲ್ಲಿ ಮಾಡಿದ ವಿಶೇಷ ಪುಣ್ಯದ ಸಂಗ್ರಹವಿರಬೇಕು. ಆದ್ದರಿಂದ ಸಾಧಕನು ಈ ಸಂಗತಿಯನ್ನು ನೆನಪಿನಲ್ಲಿಟ್ಟುಕೊಂಡು, ಶಾಸ್ತ್ರದಿಂದ ನಿಯಮಿತವಾದ ಶುದ್ಧ ಆಚರಣೆಯಲ್ಲಿದ್ದು, ಇಂಥಾ ಪುಣ್ಯ ಸಂಗ್ರಹವನ್ನು ಮಾಡತಕ್ಕದ್ದು ಅವರು ಸದ್ಗುರುಗಳೆನಿಸುವ ಸಂತರನ್ನು ದೀನ ಭಾವದಿಂದ ಸಮೀಪಿಸಿ ಅವರ ಕೃಪೆಯನ್ನು ಪಡೆಯಬೇಕು. ಶ್ರೀರಮಾವಲ್ಲಭದಾಸರನ್ನುತ್ತಾರೆ, "ಸದ್ಗುರುವಿನಿಂದ ಅನುಗ್ರಹವನ್ನು ಪಡಕೊಂಡು, ಆ ನಂತರ ಸಂತರ ಸಂಗತಿಯಲ್ಲಿದ್ದು ತನಗೆ ಗುರು ಉಪದೇಶಿಸಿದ ತತ್ವಗಳನ್ನು ದೃಢೀಕರಿಸಿಕೊಳ್ಳತಕ್ಕದ್ದು" ಸಾಧಕನಿಗೆ ಯಾವಾಗಲೂ ಸದ್ಗುರು ಸನ್ನಿಧಿಯಲ್ಲಿರಲಿಕ್ಕೆ ಸಾಧ್ಯವಿರುವದಲ್ಲ. ಆದ್ದರಿಂದ ಸಾಧಕನು ಸಂತರೆಲ್ಲಾ ತನ್ನ ಸದ್ಗುರುವಿನ ಇತರ ರೂಪಗಳೆಂದು ತಿಳಿದು ದೈನ್ಯ ವ ಪೂಜ್ಯ ಭಾವಯುಕ್ತನಾಗಿ ಅವರ ಸನ್ನಿಧಿಗೆ ಹೋಗತಕ್ಕದ್ದು. ಆ ಸಂತರ ಮುಖದಿಂದ ತನ್ನ ಸದ್ಗುರುವೇ ಮಾತಾಡುವನು ಮತ್ತು ಪರಮಾರ್ಥ ಮಾರ್ಗದಲ್ಲಿ ಮುಂದಕ್ಕೆ ಕರಕೊಂಡು ಹೋಗುವನೆಂದು ತಿಳಕೊಳ್ಳಬೇಕು.

ಶ್ರೀಗಜಾನನ ಮಹಾರಾಜರಿಗೂ ನಾನಾಸಾಹೇಬ ಗಾಂಡೇಕರ ಜಹಗಿರದಾರ ಇವರಿಗೂ ಆದ ಸಂಭಾಷಣವು ಈ ವಿಷಯವನ್ನು ಸ್ಪಷ್ಟೀಕರಿಸುತ್ತದೆ. ನಾನಾಸಾಹೇಬರು ಮತ್ತೊಬ್ಬ ಸಂತರ ಶಿಷ್ಯರಿದ್ದರು. ಆ ಸಂತರ ಅವಸಾನದ ನಂತರ ಅವರು ಮತ್ತೊಬ್ಬರ ಕಡೆಗೆ ಹೋಗಿ ಅವರು ಹೇಳಿದಂತೆ ಧ್ಯಾನವನ್ನು ಮಾಡಲಾರಂಭಿಸಿದರು. ಆ ಮೇಲೆ ಅವರು ಶ್ರೀಗಜಾನನ ಮಹಾರಾಜರ ಕಡೆಗೆ ಬಂದರು. ಇವರು ಅವರ ಪೂರ್ವೇತಿಹಾಸವನ್ನೆಲ್ಲಾ ಕೇಳಿಕೊಂಡು, ಪ್ರಶ್ನೆ ಮಾಡಿದರು. "ನನ್ನ ಕಡೆಯಿಂದ ಅನುಗ್ರಹವನ್ನು ಪಡಕೊಂಡಮೇಲೆ ಇನ್ನೆಷ್ಟು ಮಂದಿ ಸಂತರಕಡೆ ಹೋಗುವ ಇರಾದೆಯಿದೆ?" ನಾನಾಸಾಹೇಬರಂದರು, "ನನ್ನ ಮನಸ್ಸಿನ ತಾಪವು ಹೋಗಿ ಪೂರ್ಣ ಶಾಂತಿಯು ಪ್ರಾಪ್ತವಾಗುವ ತನಕ ಹೀಗೆ ನಡಿಯುವೆನು" ಮುಂದೆ ನಾನಾಸಾಹೇಬರು ಮನೋಶಾಂತಿಯನ್ನು ಶ್ರೀಗಜಾನನ

ಮಹಾರಾಜರಿಂದಲೇ ಪಡೆದರು. ನದಿಯು ಸಮುದ್ರವನ್ನು ಸೇರಿದಾಗ ಅದರ ಹರಿಯೋಣವು ನಿಂತುಬಿಟ್ಟಿತು. ಎಷ್ಟೋ ಜನರು ಈ ಪ್ರಕಾರ ಶ್ರೀಗಜಾನನ ಮಹಾರಾಜರಿಗೆ ಶರಣುಹೋಗಿ ತಮ್ಮ ಉದ್ದೇಶವನ್ನು ಸಾಧಿಸಿಕೊಂಡಿದ್ದಾರೆ. ಈಗ ಚ್ಯುತಪಟ್ಟಿರುವ ವಾಮನ ಕೇಶವ ಮಾಹೆಗಾಂವಕರ ಎಂಬವರು ಮೊದಲು ಮತ್ತೊಬ್ಬ ಸಂತರ ಶಿಷ್ಯರಿದ್ದರು, ಆದರೆ ಅವರು ಶ್ರೀಗಜಾನನ ಮಹಾರಾಜರಿಂದಲೇ ಸಮಾಧಾನ ಹೊಂದಿದರು. ಆಗ ಅವರು ಓವಿ ರೂಪದಿಂದ "ಶ್ರೀಗುರು-ಶಿಷ್ಯ ವಿಜ್ಞಾನ ದೀಪಿಕಾ" ಎಂಬ ಪುಸ್ತಕವನ್ನು ಬರೆದರು. ಮತ್ತು ಅದನ್ನು ಶ್ರೀಗಜಾನನ ಮಹಾರಾಜರ ಮತ್ತೊಬ್ಬ ಶಿಷ್ಯರಾದ ವಿಶ್ವನಾಥ ಗೋಪಾಲ ವೈದ್ಯ ಎಂಬವರು ಪ್ರಸಿದ್ಧಪಡಿಸಿದರು. ಈ ವೈದ್ಯರೆಂಬ ಹೆಸರಿನವರು ಹೆಸರಿನಿಂದ ಮಾತ್ರ ವೈದ್ಯರಲ್ಲ, ಆದರೆ ಖರೆ ವೈದ್ಯರಿದ್ದಾರೆ. ಯಾಕಂದರೆ ಈ ಸಂಸಾರರೋಗದಿಂದ ದುಃಖ ಹೊಂದಿದ್ದು ಬಿಡುಗಡೆ ಪಡಬೇಕೆಂದು ತಳಮಳಿಸುತ್ತಿರುವವರಿಗೆ ಇವರು ಪ್ರಕಟಿಸಿದ ಈ ಪುಸ್ತಕವು ಉತ್ತಮವಾದ ಚಿಕಿತಸ್ಸಾರೂಪವಾಗಿರುವದು. ಈ ಪುಸ್ತಕವನ್ನು ಛಾಪಿಸಲಿಕ್ಕೆ ಸಹಾಯಮಾಡಿದ ಅನೇಕ ಮಿತ್ರರ ಹೆಸರುಗಳೂ ಈ ಪುಸ್ತಕದಲ್ಲಿ ಬರೆದಿರುತ್ತವೆ. ರಾ. ವೈದ್ಯರು "ಶ್ರೀಗುರು ಕೃಪಾಧ್ಯಾಯವೆಂಬ" ಇನ್ನೊಂದು ಸಣ್ಣ ವಹಿಯನ್ನು ಓವಿಯಿಂದ ರಚಿಸಿರುತ್ತಾರೆ. ಈ ವಹಿಯು ಅವರು ಹೊಂದಿದ ಸದ್ಗುರುಕೃಪೆಯಿಂದ ಅವರಿಗೆ ಬಂದ ಅನುಭವಗಳ ಮಧುರ ಫಲವಾಗಿದೆ. ಅವರ ಸ್ವತಃದ ಅನುಭವಗಳು ಉತ್ಕೃಷ್ಟತರದ್ದು ಆಗಿದ್ದು, ವಾಚಕರು ಅವನ್ನು ಪೂರ್ಣವಾಗಿ ಜಾಗ್ರತೆಯಾಗಿ ಮೂಲದಲ್ಲಿ ಓದತಕ್ಕದ್ದು ಈ ವೈದ್ಯರಿಂದಲೆ ನನಗೆ ಶ್ರೀಗಜಾನನ ಮಹಾರಾಜರ ಮತ್ತು ಅವರ ಅನೇಕ ಶಿಷ್ಯಭಕ್ತರ ದರ್ಶನವಾಯಿತು; ಅದಕ್ಕಾಗಿ ಮತ್ತು ಈ ಉಪೋದ್ಘಾತವನ್ನು ಬರೆದು ಆ ಮಹಾತ್ಮರ ಸೇವಾ ನನಗೆ ಘಟಿಸುವದಕ್ಕೆ ಕಾರಣವಾದದ್ದಕ್ಕೆ ನಾನು ಅವರ ಆಭಾರವನ್ನು ಮನ್ನಿಸುವೆನು.

ಶ್ರೀ ದತ್ತಾತ್ರೇಯ ಲಕ್ಷ್ಮಣ ನಿರೋಖೆಕರ, ಇವರು ನಾಶಿಕದ ಪೋಲೀಸ ಟ್ರೇನಿಂಗ ಶಾಲೆಯ ಕಾಯಿದೆ ಭಾಷಕರಿದ್ದು, ಈ ಪುಸ್ತಕವನ್ನು ಅವರಿಗೆ ಅನೇಕರು ಕೊಟ್ಟಿದ್ದು ಮರಾಠಿಭಾಷೆಯ ಮಾಹಿತಿ ಪತ್ರಗಳಿಂದ ಸುಂದರವಾದ ಮತ್ತು ಉತ್ಕೃಷ್ಟವಾದ ಇಂಗ್ಲಿಷು ಭಾಷೆಯಲ್ಲಿ ತಯಾರಿಸಿ ಇಂಗ್ಲಿಷು ಬಲ್ಲಂಥವರಿಗ ಬಹಳ ಉಪಕಾರ ಮಾಡಿದರು. ಅವರಿಗೆ ಅವರ ಅಭಿಮಾನವಿಲ್ಲದಿದ್ದರೂ ಅವರು ಮಾಡಿದ ಈ ಕಾರ್ಯವು ವಿಶೇಷ ಮಹತ್ವದ್ದಾಗಿರುತ್ತದೆಂಬದರಲ್ಲಿ ಸಂಶಯವಿಲ್ಲ. ಅವರು ವಿದೇಹಕೈವಲ್ಯ ಹೊಂದಿರುವ ಶ್ರೀರಾಮಾನಂದ ಬೀಡರ ಎಂಬವರ ಶಿಷ್ಯರು; ಸದ್ಗುರುಗಳ ಕೃಪೆಯಿಂದ ಅವರು ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ಬಹಳ ಮುಂದರಿಸಿರುವರು. ಅವರು ನಾಶಿಕಕ್ಕೆ ಬಂದ ಮೇಲೆ ಶ್ರೀ ಗಜಾನನ ಮಹರಾಜರ ಸಂಘಟಣೆಯಿಂದ ಇವರ ಮಹತ್ವವು ಅವರಿಗೆ ತಿಳಿಯಬಂತು.

ಸವರಿ ಇಂಗ್ಲಿಷ ಚರಿತ್ರವನ್ನು ಅವರು ಒಂದು ಪ್ರೇಮದ ಕೆಲಸವಾಗಿ ಮಾಡಿರು ತ್ತಾರೆ. ಮತ್ತು ಅದು ತಮ್ಮ ಗುರುಸೇವಾ ಎಂಬದಾಗಿ ತಿಳಿದಿರುವರು.

ಶ್ರೀರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯರಾದ ಶ್ರೀವಿವೇಕಾನಂದ ಸ್ವಾಮಿಯವರಿಗೆ, ತಮ್ಮ ಸಾವಿರಾರು ಮಂದಿ ಶಿಷ್ಯರು ಪಶ್ಚಿಮ ದೇಶಗಳಲ್ಲಿ ಹುಟ್ಟಿರುವದರಿಂದ, ಅವರು (ವಿವೇಕಾನಂದರು) ತಮ್ಮಿಂದ ಪಡೆದ ಜ್ಞಾನವನ್ನು ಅವರೊಳಗೆ ಪ್ರಕಟಿಸಬೇಕೆಂದು, ಕಡೆ ಸಂದೇಶ ಕೊಟ್ಟಿದ್ದರು. ಆ ಪ್ರಕಾರ ವಿವೇ ಕಾನಂದರು ಅದೇ ತಮ್ಮ ಜನ್ಮದ ಮುಖ್ಯ ಕಾರ್ಯವೆಂದು ಗುರುಗಳ ಆಜ್ಞೆ ಯನ್ನು ಶಿರಸಾವಹಿಸಿದರು. ನಾವು ಇದನ್ನು ಜಾಗ್ರತೆಯಾಗಿ ವಿಚಾರಮಾಡಿ ನೋಡಿದರೆ, ನಮಗೆ ಹೀಗೆ ಕಂಡುಬರುವದಲ್ಲ, ವಿವೇಕಾನಂದ, ರಾಮತೀರ್ಥ ಮುಂತಾದ ಮಹಾನ್ ಪ್ರಭೃತಿಗಳು ಪಶ್ಚಿಮದೇಶಗಳ ಕಡೆಗೆ ಆಕರ್ಷಿಸಲ್ಪಟ್ಟು ಅವನ್ನು ತಮ್ಮ ಜನ್ಮದ ಕಾರ್ಯಸ್ಥಾನಗಳಾಗಿ ಮಾಡಿಕೊಂಡರು; ಯಾಕಂದರೆ ಎಷ್ಟೋ ಆರ್ಯಜೀವರು ಅಲ್ಲಿ ಜನ್ಮಕ್ಕೆ ಬಂದಿರಬಹುದು. ಈ ಶ್ರೀಗಜಾನನ ಮಹಾರಾಜರ ಚರಿತ್ರವಾದರೂ ಪೂರ್ವಜನ್ಮದಲ್ಲಿ ನಾಥಪಂಥಕ್ಕೆ ಸೇರಿದ್ದು ಪ್ರಕೃ ತದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಹುಟ್ಟಿರುವ ಜೀವರ ಉಪಕಾರಾರ್ಥವಾಗಿ ಇಂಗ್ಲಿಷ ಭಾಷೆಯಲ್ಲಿ ಪ್ರಥಮರಚಿತವಾಗಿರಬಹುದು. ಸದ್ಯಃಕಾಲದಲ್ಲಿ ಈ ಪುಸ್ತ ಕದಲ್ಲಿ ಮನಸ್ಸು ಹಾಕುವವರು. ಹಿಂದುಸ್ತಾನದಲ್ಲಿ ಬಹಳೇ, ಕಡಿಮೆ ಮಂದಿ ಇದ್ದಾರು ಯಾಕಂದರೆ ಪಶ್ಚಿಮ ದೇಶಗಳ ಅನೇಕ ಅನಾರ್ಯ ಜೀವರು ಈ ದೇಶದಲ್ಲಿ ಜನ್ಮಸಿದ್ಧರಿಂತ ನನಗನಿಸುತ್ತದೆ. ಹಿಂದುಗಳು, ಮುಖ್ಯವಾಗಿ ಬ್ರಾಹ್ಮ ಣರು ತಮ್ಮ ಧರ್ಮವನ್ನು ಬಿಟ್ಟಿದ್ದಾರಂತ ಅನೇಕರನ್ನುತ್ತಾರೆ ಹೀಗೆನ್ನುವದು ಸ್ವಲ್ಪಮಟ್ಟಿಗೆ ಅತಿಶಯೋಕ್ತಿ ಆಗುವದೆಂದು ನಾನು ತಿಳಿಯುತ್ತೇನೆ. ಆದರೆ ಅನೇಕ ಅನಾರ್ಯಜೀವರು ಬ್ರಾಹ್ಮಣಕುಲದಲ್ಲಿ ಹುಟ್ಟಿದ್ದು ಅವರು ತಮ್ಮ ಪೂರ್ವಸಂಸ್ಕಾರದಂತೆ ನಡೆಯುತ್ತಾರೆ. ಮಹಾಭಾರತದಲ್ಲಿ ಹೀಗೆ ಹೇಳಿದೆ, "ಕಲಿಯುಗದಲ್ಲಿ ರಾಕ್ಷಸರು ಬ್ರಾಹ್ಮಣರಾಗಿ ಹುಟ್ಟುವರು." ಇದರ ಅರ್ಥವೇ ನಂದರೆ ರಾಕ್ಷಸಜೀವರು ಬ್ರಾಹ್ಮಣರೊಳಗೆ ಹುಟ್ಟಿ ಬ್ರಾಹ್ಮಣರಾಗಿ ಬಹಳ ತೊಂದರೆ ಮಾಡುವರು. ಆದ್ದರಿಂದ ಯಾವ ಮಾತಾ-ಪಿತರು, ದೇವ ಧರ್ಮದಲ್ಲಿ ವಿಶ್ವಾಸವಿಲ್ಲದ ಅನಾರ್ಯಜೀವರು ತಮ್ಮ ಕುಟುಂಬದಲ್ಲಿ ಹುಟ್ಟಬಾರದೆಂತ ಇಚ್ಛಿಸುವರೊ ಅವರು ಶುದ್ಧಾಚರಣೆಯಿಂದ ನಡೆದು ದೇವರ ಮತ್ತು ಸತ್ಪುರು ಷರ ಸೇವಾ ಮಾಡುವದರಲ್ಲಿಯೇ ಕಾಲಹರಣ ಮಾಡಬೇಕು. ಮುಖ್ಯವಾಗಿ ಅವರು ಸಾಧು-ಸಂತರ ಕೃಪೆಯನ್ನು ಸಾಧಿಸಬೇಕು. ಸ್ತ್ರೀಯರು ತಮ್ಮ ಆಚರ ಣೆಯನ್ನು ಅತ್ಯಂತ ಶುದ್ಧವಾಗಿಟ್ಟು ಕುಲಕ್ಕೆ ಎಷ್ಟೊಂದು ಕಲಂಕ ಬಾರದಂತೆಯೂ, ಅದರ ಉಜ್ವಲ ಕೀರ್ತಿಯನ್ನೂ ನಿರ್ಮಲ ಸಂಸ್ಕಾರಗಳನ್ನೂ ಅತ್ಯುಚ್ಚಪದಕ್ಕೆ

ಏರುವಂತೆಯೂ ಮಾಡತಕ್ಕದ್ದು. ಶ್ರೀ ಜ್ಞಾನೇಶ್ವರ, ಏಕನಾಥ, ರಾಮದಾಸ, ತುಕಾರಾಮ, ಇತ್ಯಾದಿ ಶ್ರೇಷ್ಠ ಸಂತರೂ ಅಥವಾ ಶಿವಾಜಿಯಂಥಾ ವೀರರೂ ಹುಟ್ಟಿದ ಕುಲಗಳ ಇತಿಹಾಸಗಳನ್ನು ನೋಡಿದರೆ, ಇವುಗಳಲ್ಲಿ ತಲಾಂತರಗಳಿಂದ ಉತ್ತಮವಾದ ಪುಣ್ಯ ಸಂಪಾದಿಸುತ್ತ ಬಂದಿದ್ದರೆಂತ ತೋರುವದು. ದೇಶಾಭಿಮಾನಿ ವೀರರೂ ಸಾಧು-ಸಂತರೂ ತಮ್ಮ ಕುಲದಲ್ಲಿ ಹುಟ್ಟಬೇಕೆಂತ ಇಚ್ಛಿಸುವದು ಸಾಧಕರ ಕಾರ್ಯಕ್ಕೆ ಬಾಹ್ಯವಾದ್ದಲ್ಲ. ಇಂಥಾ ಆಕಾಂಕ್ಷೆಗಳು ಈಶ್ವರ ಸಂಕಲ್ಪವನ್ನು ಪೂರ್ಣಮಾಡುವದಕ್ಕೆ ಸಹಾಯವಾಗುವದರಿಂದ ಅಂಥಾ ತಾಯಿತಂದೆಗಳ ಮೇಲೆ ಈಶ್ವರನ ಕೃಪೆಯು ಯಾವಾಗಲೂ ವರ್ಷಿಸಲ್ಪಡುವದು. ಪಿತೃಗಳಾದರೂ ತಮ್ಮ ಲೋಕದಿಂದ ಅಂಥಾ ತಮ್ಮ ಮಕ್ಕಳಿಗೆ ಆಶೀರ್ವಾದಗಳನ್ನು ಕೊಡುವರು. ಸಂತರು ಅಂಥಾ ಕುಲವ ಕುಟುಂಬವು ಲೋಕಾಂತದ ವರೆಗೆ ಪೂರ್ಣ ಸುಖದಿಂದರಲಿ ಎಂದು ಆಶೀರ್ವದಿಸುವರು.

ಈ ಉಪೋದ್ಘಾತವನ್ನು ಮುಗಿಸಬೇಕಾದರೆ ಶ್ರೀಗಜಾನನ ಮಹಾರಾಜರ ಪಾದಗಳಿಗೆ ನನ್ನ ಕೆಲವು ವಾಕ್ಯಗಳನ್ನು ಅರ್ಪಿಸಿ, ಶ್ರೀನಾಮದೇವರ ಒಂದು ಅಭಂಗದ ತಾತ್ಪರ್ಯವನ್ನು ಬರೆದು ಮುಗಿಸುವೆನು.

"ಹರಿಭಕ್ತರ ಕುಲವು ಲೋಕಾಂತ್ಯವಾಗುವತನಕ ಸುಖದಿಂದ ಬಾಳಲಿ. ಸಂತರ ಮಹತ್‌ಸಂಘವು ಯಾವಾಗಲೂ ಸಂಪೂರ್ಣ ಆನಂದವನ್ನು ಉಪಭೋಗಿಸಲಿ, ಮತ್ತು ಅವರಿಗೆ ದುಷ್ಟ ಕಲ್ಪನೆಗಳು ಎಂದೂ ಬಾಧಿಸದಿರಲಿ ವಿಷ್ಣು-ದಾಸರು ಶುದ್ಧಚಿತ್ತವುಳ್ಳವರಾಗಿದ್ದು ಅವರಿಗೆ ಅಹಂಕಾರದ ಗಾಳಿ ಹತ್ತದಿರಲಿ." ನಾಮನನ್ನುತ್ತಾನೆ, ಯಾರ ಮುಖದಲ್ಲಿ ಸರ್ವಸುಖಗಳ ಸಿಧಿಯಾಗಿರುವಂಥಾ ಪಾಂಡುರಂಗನ ನಾಮವಿರುವದೊ ಅವರಿಗೆ ಸರ್ವದಾ ಶುಭವಾಗಲಿ.

— ಶ್ರೀ ಗುರುದೇವ ದತ್ತ —

ಶ್ರೀಸಮರ್ಥ ಸದನ
ಗಿರಗಾಂವ, ಮುಂಬಯಿ.
೧೧ನೇ ಅಕ್ಟೋಬರ ೧೯೬೦

(ಸಹಿ) **ಆರ್. ಕೆ. ಕಾಮತ**
ಸರ್ವ ಸಂತರ ಪಾದಗಳಲ್ಲಿ
ದೀನ ದಾಸನಾಗಿರುವವನು

ಶ್ರೀ ಸದ್ಗುರು ಪ್ರಸನ್ನ.

# ಆತ್ಮಸಾಕ್ಷಾತ್ಕಾರಮಾರ್ಗ ಪ್ರದೀಪ

ಅಥವಾ

## ಶ್ರೀ ಗಜಾನನ ಮಹಾರಾಜರ ಪುಣ್ಯಚರಿತ್ರವು.

## ಒಂದನೇ ಪ್ರಕರಣವು

## ನಾಥಪಂಥ

ಪ್ರಸ್ತುತ ಚರಿತ್ರನಾಯಕರಾದ ಶ್ರೀಗಜಾನನ ಮಹಾರಾಜರು ನಾಥ ಸಾಂಪ್ರದಾಯಿಗಳಾಗಿರುವದರಿಂದ ಪ್ರಥಮದಲ್ಲಿ ನಾಥ ಸಾಂಪ್ರದಾಯದ ಸಂಬಂಧ ಇಲ್ಲಿ ಸ್ವಲ್ಪ ಅನುವಾದವನ್ನು ಮಾಡುವದು ಉಚಿತವದೆ.

ಸದ್ಯದ ಕಾಲಕ್ಕೆ ನಿಜವಾಗಿ ಸುಧಾರಣಾಯುಗವೆಂದು ಅನ್ನುವದು ಯೋಗ್ಯವದೆ. ಅಥವಾ ಸತ್ಯಾನ್ವೇಷಿಯುಗವೆಂತಲೂ ವರ್ಣಿಸಬಹುದು. ಪ್ರತಿ ಒಂದು ಶಾಸ್ತ್ರದಲ್ಲಿ ಹೊಸ ಹೊಸ ಶೋಧನೆಗಳು ಆಗುತ್ತ ಇವೆ, ಮತ್ತು ಹೀಗಾಗಿ, ಇವತ್ತಿನ ಶೋಧಗಳು ನಾಳೆ ಹಳೇವೆನ್ನಿಸಿಕೊಳ್ಳುವವು. ಮಾನವೀ ಬುದ್ಧಿಯು ಪೂರ್ವದ ಸೀಮೆಗಳನ್ನೆಲ್ಲಾ ಇನ್ನೊಷ್ಟು ಶೋಧಿಸುವಂಥಾ ಅಥವಾ ಇಲ್ಲಿ ತನಕ ಅವಿಜ್ಞಾತವಾದ ಪ್ರದೇಶಗಳಲ್ಲಿ ಪ್ರವೇಶ ಯತ್ನ ಮಾಡುವಂಥಾ ದೀರ್ಘ ಪ್ರಯತ್ನಗಳನ್ನು ಮಾಡುತ್ತಲಿದೆ. ಮತ್ತು ಅರ್ವಾಚೀನ ಶಾಸ್ತ್ರವೇತ್ತರಾದರೂ ನಾನಾ ಶಾಸ್ತ್ರಗಳ ಮತ್ತು ಅವುಗಳ ಶಾಖೆಗಳ ಬುಡದಲ್ಲಿ ಯಾವ ಒಂದೇ ತತ್ವವಿರುವದೋ, ಅದನ್ನು ಹುಡುಕಿ ತೆಗೆಯುವ ಹಟಕ್ಕೆ ಬಿದ್ದಿರುವರು. ' ದಿ ಗ್ರೇಟ ಡಿಝಾಯಿನ್ ' ಮತ್ತು ಇಂಥಾ ಕೆಲವು ಗ್ರಂಥಗಳು ಸರ್ವಶಾಸ್ತ್ರಗಳು ಒಂದೇ ದಾರದಲ್ಲಿಯ ಮಣಿಗಳ ಹಾಗೆ ಇರುವವೆಂತ ಪುರಾವೆ ಮಾಡಿಕೊಡುತ್ತಿವೆ.

ಆದರೆ ಒಬ್ಬಾನೊಬ್ಬ ವಿಚಾರಿಯಾದ ಗೃಹಸ್ಥನು ಹೀಗೆನ್ನಬಹುದು— ಸತ್ಯ, ಶಿವ ವ ಸುಂದರ ಆದ ತತ್ವವು ಯಾವ ಸರ್ವ ವಸ್ತುಗಳ ಬುಡಕ್ಕಿರುವದೋ ಆ ಆದ್ಯ ಮೂಲತತ್ವವನ್ನು ಶೋಧಿಸಿ ತೆಗೆಯುವ ಸರ್ವ ಪ್ರಯತ್ನಗಳು ಮಾನವನಿಗೆ ಅಪೂರ್ಣವಾಗಿಯೂ, ಅನಿಶ್ಚಿತವಾದ ಸ್ವರೂಪದ್ದೂ ಇರುತ್ತವೆ. ಮತ್ತು ಯಾವದರ ಜ್ಞಾನವು ಸರ್ವ ಮಾನವ ಜೀವಿಗಳ ಸುಖಶಾಂತಿಗೆ ಕಾರಣವಾಗುವದೋ ಅಂಥಾ ಆದ್ಯ ಮೂಲತತ್ವವನ್ನು ಕಂಡು ಹಿಡಿಯಲಿಕ್ಕೆ ಮಾನವಿ ಬುದ್ಧಿಯು ಎಷ್ಟರ ಮಟ್ಟಿಗೆ ಮುಂದರಿಸೀತು, ಮತ್ತು ಈ ಕಾರ್ಯದಲ್ಲಿ ಕೃತಾರ್ಥವಾಗಲಿಕ್ಕೆ ಅದು ಎಂದು ಸಮರ್ಥವಾದೀತು ಎಂಬದೊಂದು ಪ್ರಶ್ನೆಯಾಗಿದೆ.

ನಮ್ಮ ಆರ್ಯ ಸಂಸ್ಕೃತಿಯಾದರೋ, ಈ ಪ್ರಶ್ನೆಗೆ ಉತ್ತರ ಕೊಟ್ಟಿರು ವದು. ನಮ್ಮ ಸಿದ್ಧಪುರುಷರು ಮತ್ತು ಸಾಕ್ಷಾತ್ಕಾರಿಗಳು ಹೀಗನ್ನುತ್ತಾರಲ್ಲ ಜಗತ್ತಿನ ಈ ಒಗಟು ಬಿಡಿಸಲಿಕ್ಕೆ ಕೇವಲ ಮಾನವೀ ಬುದ್ಧಿಯು ಎಂದೂ ಸಮರ್ಥವಾಗಲಾರದು. ಈ ಶಾಸ್ತ್ರದ ಮೂಲಾರಂಭವಾದರೂ ಅಂತರ್ಯದ ಜ್ಞಾನ ಸಾಂಪ್ರದಾಯದಿಂದಲೇ ತಿಳಿಯತಕ್ಕದ್ದಾಗಿರುವದು. ಈ ಜ್ಞಾನವೆಂಬದು ಆತ್ಮ ಜ್ಞಾನ ಅಥವಾ ಆತ್ಮ ಸಾಕ್ಷಾತ್ಕಾರವೆನಿಸುವದು. ( Self realisation ) ಈ ಜ್ಞಾನವು ಸರ್ವ ಶಾಸ್ತ್ರಾರ್ಥ ಮತ್ತು ತತ್ವಜ್ಞಾನವನ್ನು ಏಕತ್ರ ಜೋಡಿಸುತ್ತದೆ. ಆತ್ಮಸಾಕ್ಷಾತ್ಕಾರವಾದನಂತರ ಸರ್ವ ಮತಭೇದಗಳೂ ವಾದವಿವಾದಗಳೂ ತಮ್ಮಷ್ಟಕ್ಕೆ ನಷ್ಟವಾಗುವವು. ಆತ್ಮಜ್ಞಾನ ಸೂರ್ಯೋದಯವು ಭೌತಿಕ ಶಾಸ್ತ್ರಜ್ಞರಿಗೆ ದುರ್ಲಂಘ್ಯವೆನಿಸುವ, ಅಜ್ಞಾನಾಂಧಕಾರ, ಮಾಯಾಂಧಕಾರ, ಸಂಶಯ ಮತ್ತು ಭ್ರಮ ಇವುಗಳನ್ನು ನಾಶಪಡಿಸಿ, ಪರಮಸತ್ಯಕ್ಕೆ ಮುಟ್ಟಿಸುವ ಮಾರ್ಗವನ್ನು ಸ್ಪಷ್ಟವಾಗಿ ತೋರಿಸುವದು. ಈ ಮಾರ್ಗದಲ್ಲಿ ಮಾನವೀ ಜೀವರಿಗೆ ಸಮಾಧಾನ ಮಾಡುವಂಥ ಸುಖ ಮತ್ತು ಶಾಂತಿ ಇವು ಸಿದ್ಧವಾಗಿ ನಿಂತಿರುವವು,

ಜಗತ್ತಿನೊಳಗಿನ ಸರ್ವ ತಾತ್ವಿಕ ಗ್ರಂಥಗಳಲ್ಲಿ ಶೋಧಿಸಿದರೆ, ಭರತ ಖಂಡದ ತಾತ್ವಿಕ ವ ಆಧ್ಯಾತ್ಮಿಕ ಗ್ರಂಥ ವ ಪಂಥಗಳು ಮುಮುಕ್ಷುಗಳಿಗೆ ತಮ್ಮ ಕಡೆಗೆ ಅತ್ಯಂತ ನಿಶ್ಚಯಾತ್ಮಕ ಧೈರ್ಯದಿಂದ ಕರೆಯುತ್ತವೆ, ಮತ್ತು 'ಸುಖ ವ ಶಾಂತಿ ಕಡೆಗೆ ಹೋಗುವ ಮಾರ್ಗವನ್ನು ನಾವೇ ನಿಮಗೆ ತೋರಿಸಿ ಕೊಡುವೆವು' ಎನ್ನುತ್ತಾರೋ ಎಂಬಂತೆ ನಿಶ್ಚಯವಾಗಿ ಕಾಣಬಹುದು. ಇತರ ಸಾಂಪ್ರದಾಯಗಳಂತೆ ನಾಥ ಸಾಂಪ್ರದಾಯದ ಈ ಕರೆಯೋಣವಾದರೂ ಸರ್ವಮಾನವ ಜೀವರಿಗೆ ಹೀಗೆಯೇ ಹೇಳುವದು, ಮತ್ತು ಈ ಪಂಥದ ನಿಜವಾದ ಸಾಮರ್ಥ್ಯದ ಮಹತ್ವವು ಇದರಲ್ಲಿಯೇ ಇರುತ್ತದೆ.

ನಾಥಪಂಥದ ಮೂಲವನ್ನು ಶೋಧಿಸಿದರೆ ಆದಿನಾಥ ಪರ್ಯಂತ ಮುಟ್ಟುವದು. ಶ್ರೀಮತ್ಸ್ಯೇಂದ್ರನಾಥ ಇವರಿಗೆ ಮಹಾನ್ ಆದಿನಾಥರು ( ಮಹಾದೇವರು ) ಆತ್ಮಸಾಕ್ಷಾತ್ಕಾರದ ಉಪದೇಶವನ್ನು ಮಾಡಿದರು. ಮತ್ಸ್ಯೇಂದ್ರನಾಥರಾದರೂ, ಶ್ರೀಮದ್ಭಾಗವತದಲ್ಲಿ ಹೇಳಿರುವ ನವನಾರಾಯಣರ ಪೈಕಿ ಮೊದಲನೇ ಕವಿ ನಾರಾಯಣರ ಅವತಾರವೆಂದು ತಿಳಿಯುತ್ತಾರೆ.

ಮತ್ಸ್ಯೇಂದ್ರನಾಥರ ಕಾಲದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಅಧಿಕಾರಗಳ ಸೂತ್ರಗಳು ವೈದಿಕ ಧರ್ಮಾನುಯಾಯಿಗಳ ಕೈಯಲ್ಲಿದ್ದವು. ಎಲ್ಲೆಲ್ಲಿಯೂ ವೈದಿಕ ಆಚಾರ ಧರ್ಮವನ್ನು ಪಾಲಿಸುವ ಕರ್ಮಠ ಸನಾತನಿಗಳೇ ಕಾಣಿಸುತ್ತಿದ್ದರು. ದೇವಾಲಯಗಳೂ ಮಠಗಳೂ ಇವರ ಅನುಯಾಯಿಗಳ ಅಧಿಕಾರದೊಳಗೆ ಇರುತ್ತಿದ್ದವು. ತಾವು ಮಾತ್ರ ಆತ್ಮಜ್ಞಾನದ ಅಧಿಕಾರಿಗಳೆಂದು ಇವರು ಪ್ರಸಿದ್ಧಿಸುವರು. ಅವರೊಳಗಿನ ಕೆಲವರು ರಾಜಗುರು ವ ಧರ್ಮಾಧಿಕಾರಿ ಅನ್ನಿ

ಸುತ್ತಿದ್ದು, ಇವರಿಗೆ ಜನರಲ್ಲಿ ವಿಶೇಷ ಮಾನವು ಇರುತ್ತಿತ್ತು. ಆ ಕಾಲದಲ್ಲಿ ಜಾತಿ ಭೇದವಾದರೂ ತೀಕ್ಷ್ಣ ಸ್ವರೂಪದ್ದಿತ್ತು.

ಸನ್ಯಾಸಿಗಳು ಮಾತ್ರ ಆಧ್ಯಾತ್ಮಿಕ ಜ್ಞಾನದ ಅಧಿಕಾರಿಗಳೆನ್ನಿಸಲ್ಪಡುತ್ತಿದ್ದರು. ಈ ಈಶ್ವರೀ ಜ್ಞಾನವು ಅತಿಶ್ರೇಷ್ಠರೆನ್ನಿಸಿಕೊಳ್ಳುವವರಿಗೆ ಮಾತ್ರ ಪ್ರಾಪ್ತಿಯಾಗುತ್ತಿತ್ತು. ಶೂದ್ರ ಮತ್ತು ಅತಿಶೂದ್ರರಿಗೆ ಮಂದಿರ ಪ್ರವೇಶವು ಅಸಾಧ್ಯವಾಗಿತ್ತು. ಸ್ತ್ರೀಯು ಈಶ್ವರಿಜ್ಞಾನಕ್ಕೆ ಅನಧಿಕಾರಿ ಅನ್ನಿಸಿಕೊಳ್ಳುತ್ತಿದ್ದಳು.

ಬೇರೆ ಬೇರೆ ಆಚಾರಧರ್ಮಗಳು ಬಿಗಿಯಾಗಿ ನಡೆಸುವಲ್ಲಿ ಸರ್ವಶ್ರೇಯಸ್ಸೆಂದು ಜನರು ತಿಳಿಯುತ್ತಿದ್ದರು. ಆಗ ಸ್ನಾನ, ಸಂಧ್ಯಾ, ಜಪ, ತಪ ಈ ಕರ್ಮಾನುಷ್ಠಾನಗಳೇ ಮುಖ್ಯವೆಂದು ಗಣಿಸಲ್ಪಡುತ್ತಿದ್ದವು. ಹಠಯೋಗ ಸಾಂಪ್ರದಾಯವು ಇದರಿಂದಲೇ ಉತ್ಪನ್ನವಾಯಿತು. ಯಾರನ್ನಾದರೂ ಶಾಪಕೊಟ್ಟು ನಾಶ ಮಾಡುವ ಶಕ್ತಿ ಅದರಲ್ಲಿರುವದೆಂತ ಪ್ರಸಿದ್ಧಿ ಇದ್ದದರಿಂದ ಸಾಮಾನ್ಯ ಜನರು ಹಠಯೋಗಿಗಳಿಗೆ ಬಹಳ ಅಂಜುತ್ತಿದ್ದರು. ಈ ಹಠಯೋಗಿ ಪಂಥದ ದೆಸೆಯಿಂದ ಅನೇಕ ಸಾಂಪ್ರದಾಯಗಳು ಮುಂದರಿಸಿ ಬಂದು, ಅಪಸ್ವಾರ್ಥಿ ಮತ್ತು ದಾಂಭಿಕ ಜನರಿಗೆ ಶ್ರೀಮಂತರಾಗುವ ಸಂಧಿಯು ಒದಗಿತು. ಇದರಿಂದಲೇ ಶಾಕ್ತ ಮತ್ತು ಭೈರವ ಪಂಥಗಳು ಪ್ರಸಿದ್ಧಿಗೆ ಬಂದವು; ಇಂಥಾ ಸಾಮಾಜಿಕ ಪಾರ್ಶ್ವಭೂಮಿಯಲ್ಲಿ ಶ್ರೀಮತ್ಸ್ಯೇಂದ್ರನಾಥರ ತೇಜಸ್ವಿ ಮತ್ತು ಅಲೌಕಿಕ ಸಾಮರ್ಥ್ಯವಾನ ವಿಭೂತಿಯು ದೃಷ್ಟಿಗೆ ಸ್ಪಷ್ಟವಾಗಿ ಹೊಳೆಯುತ್ತದೆ.

ಶ್ರೀಮತ್ಸ್ಯೇಂದ್ರನಾಥರು ತಮ್ಮ ಮಹಾನ್ ವಿಭೂತಿಮತ್ವದ[1] ತೇಜದಿಂದ ಅಜ್ಞಾನದ ಮತ್ತು ಅಂಧಶ್ರದ್ಧೆಯ ಮೋಡಗಳನ್ನು ಹಾರಿಸಿ ಬಿಟ್ಟರು. ತಮ್ಮ ಮುಖದ ಮೇಲಿನ ಬ್ರಹ್ಮತೇಜ ಮತ್ತು ಉಪದೇಶಪರವ ಮಧುರ ಭಾಷಣಗಳಿಂದ ಸರ್ವರ ಮನಸ್ಸನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡರು. ಅವರ ದರ್ಶನಕ್ಕೆ ಯಾರಿಗೂ ಪ್ರತಿಬಂಧವಿರಲಿಲ್ಲ. ಅವರ ಕಡೆಗೆ ಬರುವ ಪ್ರತಿಯೊಬ್ಬನಿಗೆ ಇವರು ತನಗೆ ನಿಶ್ಚಿತವಾಗಿ ತಪ್ಪದಿರುವ ಮಾರ್ಗ ತೋರಿಸಿ ನಿತ್ಯಾನಂದವನ್ನು ಪ್ರಾಪ್ತಮಾಡಿಕೊಡುವರೆಂತ ಪೂರ್ಣನಂಬಿಕೆಯಾಗುತ್ತಿತ್ತು. ಈ ಮೂಲಕ ಆಚಾರಧರ್ಮಪಂಥಿಗಳಾದ ಸನಾತನಿಜನರಿಗೆ ಬಹಳ ಅಂಜಿಕೆಯಾಯಿತೆಂಬುದಕ್ಕೆ ಏನಾಶ್ಚರ್ಯ? ಇಂಥವರ ಮಠ-ದೇವಾಲಯಗಳು ಖಾಲಿಯಾದವು. ಅವುಗಳ ಕಡೆಗೆ ಯಾರೂ ಈಗ ಹೋಗವಲ್ಲರು.

ಶ್ರೀ ಮತ್ಸ್ಯೇಂದ್ರನಾಥರು ಜನರಿಗೆ ಕಲಿಸಿದ ಆದಿತತ್ವವು ಇದೇ ಇರುತ್ತದೆ—"ಪ್ರತಿಯೊಬ್ಬ ಮನುಷ್ಯ, ಸ್ತ್ರೀ ಇರಲಿ, ಪುರುಷನಿರಲಿ, ಯಾವ ಜಾತಿಯವನಾದರೂ ಇರಲಿ, ಈಶ್ವರೀಜ್ಞಾನ ಮಾಡಿಕೊಳ್ಳುವ ಹಕ್ಕು ಅವನಿಗೆ ಜನ್ಮ-

---

೧ ಈಶ್ವರೀ ಸಾಮರ್ಥ್ಯ.

ಸಿದ್ಧವಾಗಿರುವದು.” ಆತನ ಪ್ರಜ್ಞೆ(ಬುದ್ಧಿ)ಯು ಮಾತ್ರ ಪರಿಪಕ್ವವಾಗಿರಬೇಕು. ಇಷ್ಟುಮಾತ್ರ ನಿರ್ಬಂಧವಿತ್ತು. ಯಾವನಿಗೆ ಸರ್ವ ಐಹಿಕ ವಿಷಯಗಳು ಅಶಾಶ್ವತವೆನಿಸುವವೋ ಮತ್ತು ಶಾಶ್ವತ ಸುಖಪ್ರಾಪ್ತಿಯ ಸಾಧನವು ಆತ್ಮಸಾಕ್ಷಾತ್ಕಾರದಿಂದಲೇ ಆಗುವದೆಂತ ನಿಶ್ಚಿತವಾಗಿ ತಿಳಿದದೊ ಆತನ ಬುದ್ಧಿಯೇ, “ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ” ಎಂಬ ಗೀತಾವಚನಕ್ಕನುಸರಿಸಿ ಪರಿಪಕ್ವವಾಗಿದೆ ಎಂದು ತಿಳಿಯತಕ್ಕದ್ದು. ಈ ಪ್ರಕಾರ ಅವರು ನಿರೂಪಿಸುತ್ತಿದ್ದರು. ಇವರು ಸರ್ವ ಪಾರಮಾರ್ಥಿಕ ಅಧಿಕಾರಿಗಳಿಗೆ ಪ್ರಕಟವಾಗಿ ಕರೆದು ಹೇಳುವದೇನಂದರೆ— “ದುಃಖೀಕಷ್ಟ ಮಾನವರೇ, ನೀವು ನನ್ನ ಕಡೆಗೆ ಬನ್ನಿ. ಅಖಂಡ ಸೌಖ್ಯದ ಗುರುಕಿಲ್ಲಿಯನ್ನು ನಾನು ನಿಮ್ಮ ಸ್ವಾಧೀನ ಮಾಡುವೆನು; ಮತ್ತು ನಿಮ್ಮ ಅಂತಃಕರಣದಲ್ಲಿ ಅಖಂಡ ಆನಂದದ ಬುಗ್ಗೆಯನ್ನು ನಿರ್ಮಾಣ ಮಾಡುವೆನು”

ಅವರು ಜನರಿಗೆ ಹೀಗೆ ಹೇಳುವರಲ್ಲ, “ಮನಸ್ಸಿನೊಳಗೆ ಸಂಕಲ್ಪಗಳು ಹ್ಯಾಗೆ ಉತ್ಪನ್ನವಾಗುತ್ತವೆ, ಇದನ್ನು ಲಕ್ಷಪೂರ್ವಕ ನಿರೀಕ್ಷಿಸಿರಿ; ಅವು ಹ್ಯಾಗೆ ಮತ್ತು ಎಲ್ಲಿಂದ ಹುಟ್ಟುತ್ತವೆ ಎಂಬದು ನಿಮಗೆ ತಿಳಿಯಿತೆಂದರೆ, ಆ ಸಂಕಲ್ಪಗಳನ್ನು ನೀವು ಸ್ವವಶ ಮಾಡಿಕೊಳ್ಳಲಿಕ್ಕೆ ಶಕ್ತರಾಗುವಿರಿ. ಅವನ್ನು ತಡೆಯುವ ಶಕ್ತಿಯೇ ಆತ್ಮಸಾಕ್ಷಾತ್ಕಾರದ ಶೀಘ್ರ ಸಾಧನವಾಗಿರುತ್ತದೆ, ಹ್ಯಾಗಂದರೆ, ಮನಸ್ಸಿನೊಳಗೆ ಬರುವ ಸಂಕಲ್ಪಗಳನ್ನು ನಿರೀಕ್ಷಿಸುತ್ತಿರುವಾಗ ‘ಇವು ನನ್ನಲ್ಲೇ ಹುಟ್ಟುತ್ತವೆ, ಮತ್ತು ನನ್ನಲ್ಲೇ ಲಯವಾಗುತ್ತವೆ ಎಂಬದು ಸ್ಪಷ್ಟವಿರುವದರಿಂದ ಅವುಗಳಿಗೆಲ್ಲ ಕ್ಕೂ ನಾನೇ ಮೂಲಕಾರಣನಿದ್ದು, ತೆರೆಗಳಿಗೆ ಅಧಿಷ್ಠಾನವು (ಆಧಾರ ಪದಾರ್ಥ) ಸಾಗರವಿದ್ದಂತೆ ಇವುಗಳಿಗೆಲ್ಲಾ ನಾನೆ ಅಧಿಷ್ಠಾನ್ಯವಾಗಿದ್ದು ನಿಜವಾಗಿ ಅವಶಿಷ್ಟನಾದ ನನ್ನೊಬ್ಬನ ಹೊರತು ಇಲ್ಲಿ ಮತ್ತೇನೂ ಕಡೆಪನಕ ಇರುವಂಥಾ ಸ್ವತಂತ್ರ ವಸ್ತು ಇಲ್ಲ. ಈ ಸಂಕಲ್ಪಗಳ ಸತ್ಯತ್ವವು ಅಧಿಷ್ಠಾತೃವಾದ ನನ್ನದೇ ಇರುವದು. ನಾನೇ ಸತ್ಯನೂ ನಾನೇ ಪೂರ್ಣನೂ ಶಾಶ್ವತನೂ ಇರುವೆನು. ಇತರವೆಂತ ಕಾಣುವದಿಲ್ಲ, ನನ್ನಲ್ಲೇ ಹುಟ್ಟಿ ಲಯವಾಗುವ ಸಂಕಲ್ಪ ಮಾತ್ರವೆಂಬದು ಅತ್ಯಂತ ನಿಶ್ಚಯವಾಗುವದು. ಯಾಕೆಂದರೆ ನನ್ನ ಸಂಕಲ್ಪದೊಳಗೆ ಬಂದ ವಿನಹಾ ಯಾವದೂ ನನಗೆ ಗೋಚರಿಸದು. ಸಂಕಲ್ಪದೊಳಗಿಂದಲೆ ಜಗತ್ತಿನ ಅನುಭವವು. ಆದ್ದರಿಂದ ಸಂಕಲ್ಪಕ್ಕೆ ಕಾರಣನಾದ ನನ್ನಹೊರತು ಸತ್ಯಯಾವದೂ ಇಲ್ಲ. ಇದೇ ಆತ್ಮಜ್ಞಾನವು. ಸದಾ ಈ ಸ್ಥಿತಿಯಲ್ಲಿರುವದೇ ಮುಕ್ತಿಯು.

ಶ್ರೀ ಮತ್ಸ್ಯೇಂದ್ರನಾಥರ ಆಧ್ಯಾತ್ಮಿಕ ಶಕ್ತಿಯು ಅತ್ಯಂತ ಉಜ್ವಲ ಸ್ವರೂಪದ್ದಿತ್ತು. ಅವರು ತಮ್ಮ ಶಿಷ್ಯರ ಮನೋಶಕ್ತಿಯನ್ನು ತಿಳಿಯುತ್ತಿದ್ದು, ತಮ್ಮ ಆತ್ಮಿಕ ಬಲದಿಂದ ಅವರ ಇಚ್ಛಾಶಕ್ತಿಗೆ ಚಲನೆಯನ್ನು ಕೊಡುತ್ತಿದ್ದರು, ಮತ್ತು ಪ್ರಕಾಶಮಾರ್ಗದಲ್ಲಿ ತರುತ್ತಿದ್ದರು.

ಶಿಷ್ಯನು ಗುರುಮಹಾರಾಜರ ಕಡೆಗೆ ಬಂದ ಕೂಡಲೇ ಗುರುರಾಜರು ಆತನನ್ನು ತಮ್ಮ ಕೃಪಾಛತ್ರದೊಳಗೆ ತಕ್ಕೊಂಡು ಆತನಿಗೆ ಅಂತರ್ದೃಷ್ಟಿಯನ್ನು ಕೊಡುವರು. ಆಮೇಲೆ ಹ್ಯಾಗೆಹ್ಯಾಗೆ ಅಭ್ಯಾಸವು ಬೆಳೆಯುತ್ತ ಹೋಗುವದೋ, ಹಾಗೆಹಾಗೆ ಶಿಷ್ಯನು ಆತ್ಮಸಾಕ್ಷಾತ್ಕಾರದ ಆನಂದದಲ್ಲಿ ಮುಳುಗುವನು. ಶ್ರೀ ಮತ್ಸ್ಯೇಂದ್ರನಾಥರು ತಮ್ಮ ಶಿಷ್ಯನನ್ನು ತಮ್ಮ ಸಮೀಪ ಕೂಡ್ರಿಸಿಕೊಂಡು ಅವನಿಂದ ಧ್ಯಾನದ ಅಭ್ಯಾಸವನ್ನು ಮಾಡಿಸಿಕೊಳ್ಳುತ್ತಿದ್ದರು. ಅವನು ಕೈಕೊಂಡ ಪರಮಾರ್ಥ ಮಾರ್ಗದೊಳಗಿನ ಪ್ರತಿಬಂಧಕಗಳನ್ನೆಲ್ಲ ನಿವಾರಿಸಿ ಅವನಿಗೆ ಅಂತಃಸೃಷ್ಟಿಯ ನೋಟಗಳನ್ನೆಲ್ಲ ತೋರಿಸುವರು. ಕಟ್ಟಕಡೆಗೆ ಆ ಶಿಷ್ಯನ ಅಭ್ಯಾಸಕ್ಕನುಸರಿಸಿ ಆತನಿಗೆ ವಿಶ್ವರೂಪ ಬ್ರಹ್ಮದಲ್ಲಿ ಐಕ್ಯತ್ವವನ್ನು ಅನುಭವ ಮಾಡಿಸಿಕೊಡುತ್ತಿದ್ದರು. ಇಂಥಾ ಬ್ರಹ್ಮಾತ್ಮೈಕ್ಯತ್ವದ ಅನುಭವವನ್ನು ಒಮ್ಮೆ ಹೊಂದಿದವನಿಗೆ ಅದು ಎಂದೂ ಬಿಟ್ಟಿರುವದಿಲ್ಲ. ಅಭ್ಯಾಸಬಲದಿಂದ ಮುಂದೆ ಈ ಐಕ್ಯತ್ವದ ಆನಂದವನ್ನೆ ಆತನು ಪುನಃಪುನಃ ಅನುಭವಿಸುತ್ತಿರುವನು. ಭಕ್ತಿ-ಜ್ಞಾನ-ಧ್ಯಾನಾದಿಗಳ ಪರಿಣಾಮವಾಗಿರುವ ಈ ಐಕ್ಯಜ್ಞಾನವೆಂದರೇನು? ಆತ್ಮ-ಸಾಕ್ಷಾತ್ಕಾರವೆಂತ ಮೇಲೆ ಹೇಳಿದ್ದಕ್ಕೂ ಇದಕ್ಕೂ ಭೇದವೇನಾದರೂ ಇದೆಯೋ? ಇದರ ಅನುಭವ ಹೊಂದಿದವನಿಗೆ ತಾನು ಮ ಜಗತ್ತು ಹ್ಯಾಗೆ ಕಾಣುವವು? ಎಂಬ ಈ ಮೂರು ಪ್ರಶ್ನೆಗಳ ಉತ್ತರವು ಇತರರಿಗೆ ಅತ್ಯಂತ ಗೂಢವಾದರೂ ಇಂಥಾ ಐಕ್ಯಜ್ಞಾನ ಹೊಂದಿದ ಶಿಷ್ಯನಿಗೆ ಕರತಲಾಮಲಕದಂತೆ ಸ್ವತಃ ಸಿದ್ಧವಾಗಿರುವದು. ಅದು ಹ್ಯಾಗೆಂದರೆ, ತನ್ನ ಅಂತರದಲ್ಲಾಗಲಿ, ಬಾಹ್ಯದಲ್ಲಿ ಆಗಲಿ ಮತ್ತೊಂದು (ದ್ವೈತ) ಎಂತ ಕಾಣುವದಿಲ್ಲ ತಾನೇ ಆಗಿದ್ದೇನೆಂತಲೂ, ತನ್ನ ಹೊರ್ತು ಇಲ್ಲಿ ಮತ್ತೇನೂ ಕಲ್ಪನಾತ್ರವಲ್ಲ, ಸಂಕಲ್ಪಗಳು ಸಂಪೂರ್ಣವಾಗಿ ಲಯವಾದಾಗ (ಸಮಾಧಿಯಲ್ಲಿ) ನಾನೊಬ್ಬನೇ ಇದ್ದೇನೆ, ಎರಡನೇದೆಂತ ತಿಳಿದದ್ದು ಎಂದೂ ನಿಜವಾಗಿ ಹುಟ್ಟೇ ಇಲ್ಲ; ಯಾಕೆಂದರೆ ಅಖಂಡವಾಗಿ ಏಕಸ್ವರೂಪನಾಗಿರುವ ನನ್ನಲ್ಲಿ ಎರಡನೇದಕ್ಕೆ ಅವಕಾಶವೇ ಇರುವದು ಸಾಧ್ಯವಿಲ್ಲ, ಎಂಬ ಅನುಭವವು ಸ್ಪಷ್ಟ-ವಾಗಿಬರುವದು. ಇದೇ ಐಕ್ಯಜ್ಞಾನದ ಪರಿಣಾಮವು. ಇದಕ್ಕೆ ದೃಷ್ಟಾಂತವು— ಸ್ವಪ್ನದಿಂದ ಎಚ್ಚರವಾಗಿ ಜಗತ್ತು ಅನುಭವಕ್ಕೆ ಬರುವ ಮೊದಲು, ಸ್ವಪ್ನಪ್ರ-ಪಂಚವೆಲ್ಲವೂ ಲಯವಾಗಿ ಸ್ವಪ್ನವನ್ನು ದೃಷ್ಟನಾದ (ನೋಡುತ್ತಿದ್ದ) ನಾನೊಬ್ಬನೆ ಉಳಿದೆನು, ನನ್ನಹೊರ್ತು ಸ್ವಪ್ನದಲ್ಲಿ ಕಂಡದ್ದೆಲ್ಲ ಸುಳ್ಳಾಗಿರುತ್ತದೆಂಬನು ಹ್ಯಾಗೆ ಸ್ಪಷ್ಟವಾಗಿ ತಿಳಿಯುವದೊ, ಹಾಗೆ ತುರ್ಯಾವಸ್ಥೆಯಲ್ಲಿ ಈ ಐಕ್ಯಜ್ಞಾನವಾಗುವ ಕಾಲದಲ್ಲಿ ಜಾಗ್ರದವಸ್ಥೆಯ ವಸ್ತುಗಳೆಲ್ಲ ತನ್ನಲ್ಲಿಯೇ (ಸಂಕಲ್ಪರೂಪದಿಂದ) ಲಯವಾಗಿ ತಾನೊಬ್ಬನೆ ಉಳಿದೆನೆಂದೂ, ತನ್ನಹೊರ್ತು ಎರಡನೇದೇನೂ ಇಲ್ಲವೆಂದೂ ನಿಚ್ಚಳವಾಗಿ ಅನುಭವಕ್ಕೆ ಬರುವದು. ಇಲ್ಲಿ ತಾನೇ ತಾನಾಗಿ ಉಳಿ-ಯುವದರಿಂದ ಇದಕ್ಕೆ ಆತ್ಮಸಾಕ್ಷಾತ್ಕಾರವೆಂತಲೂ ಅನ್ನುವರು. ಐಕ್ಯವೆಂದರೆ, ಇಷ್ಟು ಕಾಲದವರೆಗೆ ತಾನು ಜೀವನೆಂತ ಇದ್ದ ಅನುಭವವು ಸಂಪೂರ್ಣವಾಗಿ ಅಳಿದು ಹೋಗಿ ತಾನೊಬ್ಬನೇ ಇದ್ದೇನೆಂಬ ಯಾವ ಬ್ರಹ್ಮಾನುಭವವಿದೆಯೋ,

ಅದರಲ್ಲಿ ಸ್ಥಿರವಾಗಿರುವದೇ ಐಕ್ಯವು. ಇದು ದೇಹಾಭಿಮಾನವು ಗಲಿತವಾಗಿ ದೀರ್ಘಾಭ್ಯಾಸ ಪ್ರಯತ್ನಪೂರ್ವಕವಾಗಿ ಮಾಡುವದರಿಂದಲೆ ಸಿದ್ಧಿಸುವದು. ಇಂಥಾ ಜ್ಞಾನವು ಸದ್ಗುರುಗಳ ಕೃಪಾಪಾತ್ರನಾದ ಶಿಷ್ಯನಿಗೆ ಅವಶ್ಯವಾಗಿ ಆಗುವದು. ಈಗ ಈ ಐಕ್ಯಜ್ಞಾನಹೊಂದಿದವನಿಗೆ ತಾನು ವ ಜಗತ್ತು ಹ್ಯಾಗೆ ಕಾಣಿಸುವದೆಂಬ ಪ್ರಶ್ನೆಗೆ ಉತ್ತರ ಕೊಡತಕ್ಕದ್ದು. ತನ್ನಹೊರ್ತು ಎರಡನೇದಿಲ್ಲವೆಂಬ ಈತನ ತುರ್ಯ (ನಿರ್ವಿಕಲ್ಪ ಸಮಾಧಿ) ಜ್ಞಾನದ ದೃಷ್ಟಿಯಿಂದ ಜಗತ್ತನ್ನು ನೋಡಿದರೆ ಇದರಲ್ಲಿರುವ ಪ್ರತಿಯೊಂದು ವಸ್ತುರೂಪದಿಂದ ತಾನೇ ಇರುವೆನು. ಹ್ಯಾಗೆ ಸುವರ್ಣಾಲಂಕಾರಗಳಲ್ಲಿರುವ ಸುವರ್ಣ ಒಂದೇ ಸರ್ವಾಲಂಕಾರವಾಗಿ ಪರಿಣಮಿಸುವದೊ ಹಾಗೆ ಅವನಿಗೆ "ನನ್ನ ಸತ್ವ(ದ್ರವ್ಯ)ದಿಂದಲೆ ನಾನು ಈ ಎಲ್ಲಾ ಜಗದ್ವಸ್ತುಗಳಾಗಿದ್ದೇನೆ. ನನ್ನನ್ನು ಬಿಟ್ಟು ಇಲ್ಲಿ ಏನೇನೂ ಇಲ್ಲ" ಎಂಬು ಕಾಣಿಸುತ್ತದೆ. "ಎಲ್ಲಿ ನೋಡಿದರೂ ನಾನೇ; ಎಲ್ಲ ಕಾರ್ಯಗಳೂ ನನ್ನವೇ; ಸತ್ವ, ರಜತಮಾದಿ ಗುಣಗಳನ್ನೇ ಧಾರಣೆ ಮಾಡಿ (ಸಂಕಲ್ಪ ಮಾತ್ರದಿಂದ) ನಾನೇ ಜಗದ್ರೂಪದಿಂದ ಪರಿಣಮಿಸುತ್ತೇನೆ." ಐಕ್ಯಜ್ಞಾನ, ಆತ್ಮಸಾಕ್ಷಾತ್ಕಾರ ಅಥವಾ ಬ್ರಹ್ಮಜ್ಞಾನ ಹೊಂದಿದ ಶಿಷ್ಯನಿಗೆ ಜಗತ್ತಿನಲ್ಲಿ ವ್ಯವಹರಿಸುತ್ತಿರುವಾಗ್ಗೆ ಇದೇ ರೀತಿ ಅನುಭವಕ್ಕೆ ಬರುವದು.

ಮತ್ಸ್ಯೇಂದ್ರನಾಥರ ಶಿಷ್ಯರೊಳಗೆ ಶ್ರೀ ಗೋರಖನಾಥ ಇವರು ಅಗ್ರಗಣ್ಯರಾಗಿದ್ದರು. ಈ ಗುರುಶಿಷ್ಯರ ಸಂಬಂಧ ಅನೇಕ ಆಶ್ಚರ್ಯಜನಕ ಕಥೆಗಳು ಕೇಳಲ್ಪಡುತ್ತವೆ. ಶ್ರೀ ಗೋರಖನಾಥರು ಒಬ್ಬ ಒಕ್ಕಲಿಗನಿಗೆ ಉಪದೇಶ ಮಾಡಿದರು. ಅವರೇ ಅಡಬಂಗನಾಥ ಎಂಬ ಹೆಸರಿನಿಂದ ಪ್ರಸಿದ್ಧರಾದರು. ಶ್ರೀಗೋರಖನಾಥರು ಶ್ರೀಗಹಿನೀನಾಥರಿಗೆ ಉಪದೇಶ ಕೊಟ್ಟಿದ್ದರು. ಈ ಗಹಿನೀನಾಥರೇ ಶ್ರೀನಿವೃತ್ತಿನಾಥರ ಗುರುಗಳಾಗಿದ್ದರು. ನಿವೃತ್ತಿನಾಥರು ಮಹಾನ್ ಮಹಾರಾಷ್ಟ್ರೀಯ ಸಾಧು ಜ್ಞಾನೇಶ್ವರ ಮಹಾರಾಜ ಇವರ ಅಣ್ಣಂದಿರೂ ಗುರುಗಳೂ ಆಗಿದ್ದರು; ಈ ರೀತಿಯಿಂದ ನಾಥ ಪಂಥವು ಮಹಾರಾಷ್ಟ್ರದೊಳಗೆ ನೆಲೆಗೊಂಡು, ಅದರ ಶಾಖೆಗಳು ಬೇರೆ ಬೇರೆ ಭಾಗಗಳಲ್ಲಿಯೂ ಪಸರಿಸಲ್ಪಟ್ಟಿವೆ. ನಿವೃತ್ತಿ, ಜ್ಞಾನೇಶ್ವರ ಮತ್ತು ಏಕನಾಥ ಇವರೂ ಮತ್ತು ಇವರಂಥಾ ಇತರ ಸತ್ಪುರುಷರೂ ತಮ್ಮ ನಿಃಸ್ವಾರ್ಥ ಮತ್ತು ಪರೋಪಕಾರ ವೃತ್ತಿಯಿಂದ ಈ ಪಂಥದ ಪ್ರಸಾರ ಮಾಡಿ ಮಹಾರಾಷ್ಟ್ರವನ್ನು ಸುಖಿ ಮತ್ತು ಸಂಪನ್ನ ಮಾಡಿದರು. ಈ ಸಾಂಪ್ರದಾಯದ ಈ ರೀತಿ ಪಸರಿಸಿದ ವೈಭವವನ್ನು ಮತ್ತು ಅದರ ದಿಗಂತರ ಪರಿಣಾಮವನ್ನು ನೋಡಿದರೆ ಮನಸ್ಸು ಆಶ್ಚರ್ಯಚಕಿತವಾಗುತ್ತದೆ. ಈ ಮಹಾರಾಷ್ಟ್ರ ಭೂಮಿಯು ಇಂಥ ಮಹಾನ್ ಸಾಧುಸಂತರ ಮತ್ತು ಯೋಗಿಗಳ ಪವಿತ್ರ ಪದಕಮಲ ಸ್ಪರ್ಶದಿಂದ ಭಾಗ್ಯಶಾಲಿಯಾಗಿದೆ.

ಇಂಥ ಪ್ರಕಾರವೆ ಈ ನಾಥಪಂಥದ ಸಾಮರ್ಥ್ಯ ವ ಶ್ರೇಷ್ಠತ್ವ ಇರುತ್ತದೆ. ಈ ರೀತಿಯಿಂದ ಆ ವಿಶಿಷ್ಟ ವ್ಯಕ್ತಿಗಳ ಪರಂಪರೆಯು ಮಾನವಜೀವನದ ಪರಮ

ಧ್ಯೇಯವನ್ನು ಹೊಂದಲಿಕ್ಕೆ ಅಥವಾ ಪರಮಾನಂದ ಪ್ರಾಪ್ತಿಗೆ ಮಾರ್ಗದರ್ಶಕ-ವಾಗಿರುವದು. ಇನ್ನು ಮುಂದೆಯೂ ಇಂಥಾ ಮಹಾನ್ ಸಾಧುಸಂತರ ಸಾಂಪ್ರದಾಯವು ಅಖಂಡ ಪ್ರಚಲಿತವಾಗಿದ್ದು, ಆಧ್ಯಾತ್ಮಿಕ ಮಾರ್ಗದಲ್ಲಿರುವವರಿಗೆ (ಮುಮುಕ್ಷುಗಳಿಗೆ) ಆತ್ಮಜ್ಞಾನದ ಆನಂದಮಯ ಕಿರಣಗಳಿಂದ ಮಾರ್ಗದರ್ಶಕವಾಗುತ್ತಿರುವದು. ಯಾನಾತನಿಗೆ ಇಂಥ ಸದ್ಗುರುಗಳ ಉಪದೇಶವು ಶಿಗುವದೊ ನಿಶ್ಚಯವಾಗಿ ಆತನು ಭಾಗ್ಯವಾನನೆಂತ ತಿಳಿಯತಕ್ಕದ್ದು.

ಶ್ರೀಗಜಾನನ ಮಹಾರಾಜರು ನಾಥಸಂಥವೊಳಗಿನ ಆಧುನಿಕ ಸಾಧುಗಳಾಗಿರುತ್ತಾರೆ. ಯಾರ್‍ಯಾರಿಗೆ ಅವರ ಕೃಪಾಪ್ರಸಾದವಾಗಿರುವದೊ ಅವರೇ ಈ ಮಹಾತ್ಮರ ಮಹತ್ವವನ್ನು ತಿಳಿದಿರುತ್ತಾರೆ. ಇದರ ಸತ್ಯತ್ವಕ್ಕೆ ಹೊರಗಿನ ಪುರಾವೆ ಬೇಡ, ಮತ್ತು ಅವರು ಮಹಾರಾಜರ ವಿಷಯ ಕೃತಜ್ಞರಾಗಿರುವದು ಆಶ್ಚರ್ಯವಲ್ಲ. ಯಾಕಂದರೆ ಅವರು ಆತ್ಮಜ್ಞಾನದ ಅಮೃತತುಲ್ಯ ಫಲವನ್ನು ಪ್ರತ್ಯಕ್ಷ ಸೇವಿಸುತ್ತಿರುವರು.

............

ಶ್ರೀಮಾನ್ ನಿರೋಖೆಕರ ಇವರು ಬರೆದ ಆತ್ಮಸಾಕ್ಷಾತ್ಕಾರ ಮಾರ್ಗಪ್ರದೀಪ (Light on the Path of self realization)ವೆಂಬ ಇಂಗ್ಲಿಷ ಗ್ರಂಥವಲ್ಲಿ ಈ ನಾಥಪಂಥದ ಸಮಸ್ತ ಸಾಂಪ್ರದಾಯಿಕರ ಪರಂಪರೆಯನ್ನು ಅನುಸರಿಸಿ ಅವರ ಹೆಸರುಗಳನ್ನು ಕೊಟ್ಟಿರುತ್ತಾರೆ. ಅದನ್ನೇ ಈ ಕೆಳಗೆ ಕನ್ನಡದಲ್ಲಿ ಬರೆದಿರುತ್ತೇನೆ.

ಶ್ರೀಜ್ಞಾನೇಶ್ವರರು ಹ್ಯಾಗೆ ನಾಥಪಂಥದೊಳಗೆ ಸೇರಲ್ಪಟ್ಟರೆಂಬವು ಈ ಮೊದಲೇ ಮೇಲೆ ಹೇಳಿರುತ್ತದೆ.

ಶ್ರೀನಾಮದೇವರು-ಸಂತ ನಿಳೋಬಾ ಇವರು ಹೇಳುತ್ತಾರಲ್ಲ; ಜ್ಞಾನೇಶ್ವರರು ಸೋಪಾನ ಮತ್ತು ಮುಕ್ತಾಬಾಯಿ ಇವರಿಗೆ ನಾಥಪಂಥದ ದೀಕ್ಷೆಯನ್ನು ಕೊಟ್ಟರು, ಮುಕ್ತಾಬಾಯಿ ವಿಸೋಬಾ ಖೇಚರನಿಗೆ ಮತ್ತು ಈತನು ನಾಮ-ದೇವನಿಗೆ ಮತ್ತು ಆತನು ಜನಾಬಾಯಿಸಹಿತ ಸಮಗ್ರ ಕುಟುಂಬಕ್ಕೆ ಈ ಪಂಥದ ದೀಕ್ಷೆ ಕೊಟ್ಟನು.

ಏಕನಾಥರಾದರೋ ತಮ್ಮ ದೀಕ್ಷೆ ಪರಂಪರೆಯನ್ನು ತಾವೇ ಈಪ್ರಕಾರ ವರ್ಣಿಸುತ್ತಾರೆ.

ಜ್ಞಾನೇಶ್ವರ, ಸತ್ಯಾಮಲನಾಥ, ಭೋಜಲಿಂಗನಾಥ, ಗಯನೀನಾಥ; ಜನಾರ್ದನಸ್ವಾಮಿ, ಇವರು ಏಕನಾಥರಿಗೆ ದೀಕ್ಷೆಯನ್ನು ಕೊಟ್ಟರು. ಈ ವಿಷಯದಲ್ಲಿ ಅವರದು ಈ ಮುಂದೆ ಬರೆದ ಇನ್ನೊಂದು ಪ್ರಕಾರವಿರುತ್ತದೆ.

ಪ್ರಥಮರಾಗಿಯೂ ಶ್ರೇಷ್ಠರಾಗಿಯೂ ಗುರುತ್ವವನ್ನು ವಹಿಸಿದವರು ಆದಿನಾರಾಯಣ ಇವರು ಬ್ರಹ್ಮನಿಗೆ ಉಪದೇಶಿಸಿದರು. ಬ್ರಹ್ಮನು ಅತ್ರಿಮುನಿಗೆ ಮತ್ತು ಅತ್ರಿಮುನಿಯು ತನ್ನ ಮಗನಾದ ದತ್ತಾತ್ರೇಯನಿಗೆ ಉಪದೇಶಿಸಿದನು. ದತ್ತಾತ್ರೇಯರು ಸಹಸ್ರಾರ್ಜುನ, ಯದು ಮತ್ತು ಜನಾರ್ದನಸ್ವಾಮಿ ಇವರಿಗೆ ಉಪದೇಶಿಸಿದರು. ಜನಾರ್ದನಸ್ವಾಮಿ ಇವರು ಏಕನಾಥರಿಗೆ ದೀಕ್ಷಾಗ್ರಹಣ ಮಾಡಿಸಿದರು. ಇದರಿಂದ ಏಕನಾಥರಿಗೆ ಎರಡುಸಲ ಉಪದೇಶವಾದಂತೆ ತೋರುತ್ತದೆ.

ತುಕಾರಾಮನಾದರೊ ತಾನು ಮತ್ತು ತನ್ನ ಶಿಷ್ಯರಾದ ನಿಳೋಬಾ ವ ಬಹಿಣಾಬಾಯಿ ಮುಂತಾದವರು, ಅವರ ದೀಕ್ಷಾಪರಂಪರೆಯನ್ನು ಹೀಗೆ ಹೇಳುತ್ತಾರೆ:-ಜ್ಞಾನೇಶ್ವರ ಸಚ್ಚಿದಾನಂದಬಾಬಾ, ವಿಶ್ವಂಭರನಾಥ, ರಾಘವ ಚೈತನ್ಯ ಕೇಶವ ಚೈತನ್ಯ, ಬಾಬಾ ಚೈತನ್ಯ, ಇವರೇ ತುಕಾರಾಮನ ದೀಕ್ಷಾ ಗುರು.

ಈ ನಾಥಪರಂಪರಾ ಪ್ರಕಾಶಿಕೆಯು ಆ ಮೇಲೆ ಗಹಿನೀ ನಿವೃತ್ತಿನಾಥರಿಗಿಂತ ಪೂರ್ವದ ಪ್ರಸಿದ್ಧರಾದ ಸಿದ್ಧರ ನಾಮಗಳನ್ನೇ ಹೇಳುತ್ತದೆ. ಪ್ರಥಮವಲ್ಲ ಅದು ಶ್ರೀಶಂಕರಾಚಾರ್ಯರ ದೀಕ್ಷಾಗ್ರಹಣವನ್ನು ವಿವರಿಸುತ್ತದೆ. ಶಂಕರಾಚಾರ್ಯರಿಗೆ ಗುರುಗೋವಿಂದ ಅಥವಾ ಗೋವಿಂದನಾಥ ಇವರು, ಅವರಿಗೆ ಗೌಡಪಾದಾಚಾರ್ಯರು ಅವರಿಗೆ ಶುಕಾಚಾರ್ಯರು ಮತ್ತು ಇವರಿಗೆ ಇವರ ತಂದೆಯಾದ ಕೃಷ್ಣದ್ವೈಪಾಯನ ವ್ಯಾಸರು ಉಪದೇಶಿಸಿದರು. ವ್ಯಾಸರ ತಾಯಿ ಮತ್ಸ್ಯಗಂಧಿ ಇವರ ತಂದೆ ಪರಾಶರ ಮುನಿ ಮತ್ತು ಸಹೋದರ ಮತ್ಸ್ಯೇಂದ್ರನಾಥರು. ಈ ಮತ್ಸ್ಯಗಂಧಿ ಮತ್ತು ಮತ್ಸ್ಯೇಂದ್ರನಾಥರ ಕಥೆಯು ಮಹಾಭಾರತದ ಆದಿಪರ್ವದ ೬೩ನೇ ಅಧ್ಯಾಯದಲ್ಲಿ ಕೊಟ್ಟಿರುತ್ತದೆ. ಈ ರೀತಿಯಿಂದ ಶ್ರೀಶಂಕರಾಚಾರ್ಯರೂ ಈ ನಾಥಪಂಥಕ್ಕೆ ಸಂಬಂಧಿಸಿದ್ದರು. ಆ ಕಾರಣ ಅವರು ನಾಥಪಂಥದ ಶಾಸ್ತ್ರದ ಜೊತೆಗೆ ಇತರ ಎಲ್ಲ ಮತ ಶಾಸ್ತ್ರಾದಿಗಳನ್ನು ಖಂಡಿಸುತ್ತಾರೆಂಬದು ಆಶ್ಚರ್ಯವಲ್ಲ.

ಶ್ರೀಶಂಕರಾಚಾರ್ಯರ ಕಾಲದಲ್ಲಿ ಮತ್ತು ಅನಂತರದಲ್ಲಿ ಹದಿನೆಂಟು ಆಖಾಡಗಳು ( ಪಾರಮಾರ್ಥಿಕ ಆಶ್ರಮಗಳು ) ಸ್ಥಾಪಿಸಲ್ಪಟ್ಟವು. ಅವುಗಳ ಹೆಸರುಗಳು:—

| | | | | | |
|---|---|---|---|---|---|
| ೧ | ಕಾನಫಾಡಿ | ೭ | ಆಶ್ರಮ | ೧೩ | ನಿರ್ವಾಣ |
| ೨ | ಗೋರಕ್ಷ | ೮ | ಇಂದ್ರಉದಾಸಿ | ೧೪ | ಪುರಿ |
| ೩ | ಅಘೋರ | ೯ | ಕಾಲಭೇಲಿ | ೧೫ | ಭಾರತಿ |
| ೪ | ಅರಣ್ಯ | ೧೦ | ಗೋದಡ | ೧೬ | ರಾವೂಳ |
| ೫ | ಅವಧೂತ | ೧೧ | ನಂಗಾಗಿರಿ | ೧೭ | ಬನ |
| ೬ | ಆನಂದ | ೧೨ | ನಿರಂಜನ | ೧೮ | ಸರಭಂಗಿ |

ಇದಕ್ಕೂ ಪೂರ್ವದಲ್ಲಿ ನಾಥಸಾಂಪ್ರದಾಯದಲ್ಲಿ ಈ ಕೆಳಗಿನ ಹದಿನೆಂಟು ಒಳಪಂಥಗಳಿದ್ದವು—

| | | | | | |
|---|---|---|---|---|---|
| ೧ | ಸತ್‌ನಾಥ | ೭ | ಕಾಡರನಾಥ | ೧೩ | ಚಾಳಿಕಾನಾಥ |
| ೨ | ಧರ್ಮನಾಥ | ೮ | ನಾಧೀಯಾಸ್ವಜನನಾಥ | ೧೪ | ಗಂಗಾನಾಥ |
| ೩ | ಸಾತನಾಥ | ೯ | ರಾಮನಾಥ | ೧೫ | ಹೇಹೇತಮಾರ್ಗೀನಾಥ |
| ೪ | ಗುಗುಳಿಮನಾಥ | ೧೦ | ಏಕನಾಥ | ೧೬ | ಧನಂಜಯನಾಥ |
| ೫ | ಹಾಜಿನಾಥ | ೧೧ | ಜಾಲೋವೈರಾಗಿನಾಥ | ೧೭ | ಗಜಕಥಡಿನಾಥ |
| ೬ | ಮಿಸ್ಕಿಮನಾಥ | ೧೨ | ಗಾಮನಾಥ | ೧೮ | ನಾಗಾರ್ಜುನನಾಥ |

ಇದಕ್ಕೂ ಮೊದಲು ನಾಥಪಂಥದೊಳಗೆ ಕೆಲವರು ಹಠಯೋಗಾಭ್ಯಾಸವನ್ನು ಪ್ರಚಲಿತಪಡಿಸಿ ಸ್ವತಃ ಅಭ್ಯಾಸಮಾಡಿದವರಿದ್ದರು. ಅವರ ಹೆಸರುಗಳು:-

| | | | | | |
|---|---|---|---|---|---|
| ೧ | ಆನಂದಭೈರವ | ೧೧ | ಸಿದ್ಧಪಾದ | ೨೧ | ಪ್ರಭುದೇವ |
| ೨ | ಚೌರಂಗೀನಾಥ | ೧೨ | ಚರ್ಪಟ | ೨೨ | ಘೋಡಾಚೋಳಿ |
| ೩ | ಮೀನನಾಥ | ೧೩ | ಕಾನೇರಿ | ೨೩ | ಟಿಂಟಿಣಿ |
| ೪ | ವಿರುಪಾಕ್ಷನಾಥ | ೧೪ | ಪೂಜ್ಯಪಾದ | ೨೪ | ಭಾನುಕೀನಾಥ |
| ೫ | ವಿಲೇಶಯನಾಥ | ೧೫ | ನಿತ್ಯಾನಂದ | ೨೫ | ನಾಯುದೇವ |
| ೬ | ಮಂಥಾನ ಭೈರವ | ೧೬ | ನಿರಂಜನ | ೨೬ | ಖಂಡನಾಥ |
| ೭ | ಸಿದ್ಧಬುದ್ಧ | ೧೭ | ಕಪಾಲಿ | ೨೭ | ಕಾಪಾಲಿಕ |
| ೮ | ಕಂಥಡೀನಾಥ | ೧೮ | ಬಿಂದುನಾಥ | ೨೮ | ತಾರಾನಾಥ |
| ೯ | ಕೋರಂಟಕನಾಥ | ೧೯ | ಕಾಕಚಂಡೀಶ್ವರ | | |
| ೧೦ | ಸುರಾನಂದನಾಥ | ೨೦ | ಅಲ್ಲಾಮನಾಥ | | |

ನಾಥಪಂಥದೊಳಗೆ ಈ ಒಂಭತ್ತು ಮಂದಿ ಬೇರೆ ಮತಾನುಯಾಯಿಗಳಿದ್ದರು.

| | | | | | |
|---|---|---|---|---|---|
| ೧ | ಪ್ರಕಾಶನಾಥ | ೪ | ಜ್ಞಾನನಾಥ | ೭ | ಸ್ವಭಾವಾನಂದನಾಥ |
| ೨ | ವಿಮರ್ಶನಾಥ | ೫ | ಸತ್ಯಾನಂದನಾಥ | ೮ | ಪ್ರತಿಭಾವಾನಂದನಾಥ |
| ೩ | ಆನಂದನಾಥ | ೬ | ಪೂರ್ಣಾನಂದನಾಥ | ೯ | ಶುಭಗಾನಂದನಾಥ |

ಮತ್ತು ಈ ಕೆಳಗಿನ ಐವರು ಆಧ್ಯಾತ್ಮಿಕ ವಿಚಾರಿಗಳಾಗಿದ್ದರು.

| | | | | | |
|---|---|---|---|---|---|
| ೧ | ಖಿಂಬಡನಾಥ | ೩ | ಜಂಪಾನಾಥ | ೫ | ಪ್ರಾಣನಾಥ |
| ೨ | ಡಿಂಗರನಾಥ | ೪ | ಘಘನಾಥ | | |

ಈ ಹಟಯೋಗಿಗಳ ಮತ್ತು ಗಹಿನೀನಾಥರ ಕಾಲಗಳ ಮಧ್ಯದಲ್ಲಿ ನಾಥಪಂಥದ ಎಂಭತ್ತನಾಲ್ಕು ಸಿದ್ಧರು ಪ್ರಸಿದ್ಧರಾಗಿದ್ದರು. ಅವರ ಹೆಸರುಗಳು:—

| | | | | | |
|---|---|---|---|---|---|
| ೧ | ಕವೀಶಾನಂದಸಿದ್ಧ | ೫ | ಗೋಚರಾನಂದಸಿದ್ಧ | ೯ | ಅಜಮೊತನಂದಸಿದ್ಧ |
| ೨ | ವಾಗಾನಂದಸಿದ್ಧ | ೬ | ಅಸಿತೊಗಾನಂದಸಿದ್ಧ | ೧೦ | ಗುಪ್ತಾನಂದಸಿದ್ಧ |
| ೩ | ಶಗತಾನಂದಸಿದ್ಧ | ೭ | ಬಟುಕಾನಂದಸಿದ್ಧ | ೧೧ | ಚಂಡಾನಂದಸಿದ್ಧ |
| ೪ | ವಾಚ್ಯಾನಂದಸಿದ್ಧ | ೮ | ಬರಿನಂದಸಿದ್ಧ | ೧೨ | ಕ್ರೋಧಾನಂದಸಿದ್ಧ |

| | | |
|---|---|---|
| ೧೩ ಮಹೇಂದ್ರಾನಂದಸಿದ್ಧ | ೩೭ ದಿವ್ಯಚೈತನ್ಯಸಿದ್ಧ | ೬೧ ಭೂತಭೈರವ ಸಿದ್ಧ |
| ೧೪ ಭೀಷಣಾನಂದಸಿದ್ಧ | ೩೮ ಪ್ರಜ್ಞಾಚೈತನ್ಯಸಿದ್ಧ | ೬೨ ವಿರಾಟಭೈರವಸಿದ್ಧ |
| ೧೫ ದಿವ್ಯಾನಂದಸಿದ್ಧ | ೩೯ ಶಾಮುಚೈತನ್ಯಸಿದ್ಧ | ೬೩ ಸ್ವರಾಜ್ಯಭೈರವಸಿದ್ಧ |
| ೧೬ ಬೋಧಿನಂದಸಿದ್ಧ | ೪೦ ವಿಜ್ಞಾನಚೈತನ್ಯಸಿದ್ಧ | ೬೪ ಸಮ್ರಾಟ ” |
| ೧೭ ಕಲಾನಂದಸಿದ್ಧ | ೪೧ ಪಂಚಚೈತನ್ಯಸಿದ್ಧ | ೬೫ ಆನಂದಭೈರವ ಸಿದ್ಧ |
| ೧೮ ವಿಲಾಸಾನಂದಸಿದ್ಧ | ೪೨ ಆತ್ಮಚೈತನ್ಯಸಿದ್ಧ | ೬೬ ರುರುಭೈರವ ಸಿದ್ಧ |
| ೧೯ ಸಿದ್ಧಾನಂದಸಿದ್ಧ | ೪೩ ವೈರಾಗ್ಯಚೈತನ್ಯಸಿದ್ಧ | ೬೭ ಉನ್ಮತ್ತ ” |
| ೨೦ ಮಾತೃಕಾನಂದಸಿದ್ಧ | ೪೪ ಪ್ರಸಪದಚೈತನ್ಯಸಿದ್ಧ | ೬೮ ಉದ್ಧಟಸಿದ್ಧ |
| ೨೧ ಸರಸ್ವತ್ಯಾನಂದಸಿದ್ಧ | ೪೫ ನಿರ್ವಾಣಚೈತನ್ಯಸಿದ್ಧ | ೬೯ ವಿರಾಶತಸಿದ್ಧ |
| ೨೨ ಶುಭಗಾನಂದಸಿದ್ಧ | ೪೬ ಮೇಧಾಚೈತನ್ಯಸಿದ್ಧ | ೭೦ ವಿಶ್ವರೂಪಸಿದ್ಧ |
| ೨೩ ಸರಸ್ವಭಾವಾನಂದಸಿದ್ಧ | ೪೭ ವಿದ್ಯಾಚೈತನ್ಯಸಿದ್ಧ | ೭೧ ರಂಗವಾರಸಿದ್ಧ |
| ೨೪ ಸಮರಸಾನಂದಸಿದ್ಧ | ೪೮ ಸಿದ್ಧಚೈತನ್ಯಸಿದ್ಧ | ೭೨ ದೇವವಾರ ಸಿದ್ಧ |
| ೨೫ ಮಹಾನಂದಸಿದ್ಧ | ೪೯ ಶ್ರೀಚೈತನ್ಯಸಿದ್ಧ | ೭೩ ಬ್ರಹ್ಮವಾರಸಿದ್ಧ |
| ೨೬ ಭೋಮಾನಂದಸಿದ್ಧ | ೫೦ ಪ್ರಜ್ಞಾಸಿದ್ಧ | ೭೪ ರಾಜೇವಾರಸಿದ್ಧ |
| ೨೭ ಬ್ರಹ್ಮಾನಂದಸಿದ್ಧ | ೫೧ ಶ್ರೀನಾಥಸರಸ್ವತಿಸಿದ್ಧ | ೭೫ ಸಿದ್ಧವಾರಸಿದ್ಧ |
| ೨೮ ಶಕಾನಂದಸಿದ್ಧ | ೫೨ ಆನಂದಸರಸ್ವತಿಸಿದ್ಧ | ೭೬ ಮಾಪ್ರಸಿದ್ಧಸಿದ್ಧ |
| ೨೯ ಚಿದಾನಂದಸಿದ್ಧ | ೫೩ ಮೇಧಾಸರಸ್ವತಿಸಿದ್ಧ | ೭೭ ಕಪಿಲೀಸಿದ್ಧ |
| ೩೦ ಪೂರ್ಣಾನಂದಸಿದ್ಧ | ೫೪ ಚಿದಾನಂದಸಿದ್ಧ | ೭೮ ಕಾಮಸಿದ್ಧ |
| ೩೧ ಶುಕಾನಂದಸಿದ್ಧ | ೫೫ ಪ್ರಜ್ಞಾಸರಸ್ವತಿಸಿದ್ಧ | ೭೯ ಮೂರ್ತಿಶಟ ಸಿದ್ಧ |
| ೩೨ ಬನಾನಂದಸಿದ್ಧ | ೫೬ ಕಲಾಸರಸ್ವತಿಸಿದ್ಧ | ೮೦ ಮೂರ್ತಿಜಾಲನಾ,, |
| ೩೩ ಚೈತನ್ಯಸಿದ್ಧ | ೫೭ ಸಮೇಟಸರಸ್ವತಿಸಿದ್ಧ | ೮೧ ಚಕ್ರವರ್ತಿಸಿದ್ಧ |
| ೩೪ ರಾಜಚೈತನ್ಯಸಿದ್ಧ | ೫೮ ದೇವಸರಸ್ವತಿ ಸಿದ್ಧ | ೮೨ ಜೋಗವತಿಸಿದ್ಧ |
| ೩೫ ಕಲಾಚೈತನ್ಯಸಿದ್ಧ | ೫೯ ವಿರಾಟಸರಸ್ವತಿಸಿದ್ಧ | ೮೩ ಅನುಗ್ರಹಸಿದ್ಧ |
| ೩೬ ನಾಮಚೈತನ್ಯಸಿದ್ಧ | ೬೦ ಸಾರಸರಸ್ವತಿಸಿದ್ಧ | ೮೪ ನಿಗ್ರಹಸಿದ್ಧ |

ಜ್ಞಾನೇಶ್ವರರ ಕಾಲಕ್ಕಿಂತ ಪೂರ್ವದಲ್ಲಿ ಮೇಲೆ ಹೇಳಿದ ಎಂಭತ್ತು ನಾಲ್ಕು ಸಿದ್ಧರು ಮತ್ತು ನಾಥಸಾಂಪ್ರದಾಯದ ಇತರ ಪ್ರವೀಣರು ಪರಮಾರ್ಥ ಪ್ರಚಾರದ ಕಾರ್ಯವನ್ನು ನಡಿಸುತ್ತಿದ್ದರೆಂದು ಇದರಿಂದ ತೋರುತ್ತದೆ. ಆಳಂದಿಯಲ್ಲಿ ಜ್ಞಾನೇಶ್ವರರ ಸಮಾಧಿಯು ಸಿದ್ಧೇಶ ಮಠಕ್ಕೆ ಸಮ್ಮುಖವಾಗಿರುತ್ತದೆ, ಮತ್ತು ದೇವಾಲಯವೂ ೮೪ ಮಂದಿ ಸಿದ್ಧರ ಸ್ಥಾನವೂ ಈ ಸಮಾಧಿಯ ಸುತ್ತಲೂ ಇರುವವು.

ನಾಲ್ಕು ಪ್ರಕಾರದ ಸಿದ್ಧರಿರುತ್ತಾರೆ. ಅವರ್ಯಾರೆಂದರೆ:—

೧ ಆನಂದ ೨ ಸರಸ್ವತಿ ೩ ಚೈತನ್ಯ ೪ ಭೈರವವಾರ

ವಾರಕರಿ ಪಂಥದೊಳಗೂ ನಾಲ್ಕು ಭೇದಗಳಿವೆ—

೧ ಪ್ರಕಾಶ ೨ ಸ್ವರೂಪ ೩ ಆನಂದ ೪ ಚೈತನ್ಯ

ಈ ನಾಲ್ಕು ಪ್ರಕಾರದ ವಾರಕರಿಗಳು ಲಕ್ಷ್ಮಿ, ಬ್ರಹ್ಮ, ವಿಷ್ಣು ಮತ್ತು ಸನಕ ಇವರನ್ನು ಅನುಕ್ರಮದಿಂದ ಗುರುವೆಂದು ತಿಳಿಯುತ್ತಾರೆ. ಈ ಲಕ್ಷ್ಮ್ಯಾದಿಗಳ ಗುರುವು ಆದಿನಾಥರು. ಮೇಲೆ ಹೇಳಿದ ನಾಲ್ಕು ಪ್ರಕಾರದ ವಾರಕರಿಗಳ ಪೈಕಿ ಪ್ರಕಾಶ ಮತ್ತು ಸ್ವರೂಪ ಈ ಎರಡು ಪ್ರಕಾರದವರು ತಾವು ನಾಥಸಾಂಪ್ರದಾಯದವರೆಂದು ತಿಳಕೊಳ್ಳುವರು. ಉಳಿದ ಎರಡು ಪ್ರಕಾರದವರು (ಆನಂದ ಮತ್ತು ಚೈತನ್ಯ) ತಾವು ಸಿದ್ಧ ಸಾಂಪ್ರದಾಯದವರೆನ್ನುತ್ತಾರೆ. ಗಹಿನೀನಾಥರು ಸಿದ್ಧಸಾಂಪ್ರದಾಯಕ್ಕೆ ಸೇರಿದವರೆಂದು ಗ್ರಹಿಸಲ್ಪಟ್ಟಿದೆ.

ನಾಥಸಾಂಪ್ರದಾಯದ ಇತರ ಕೆಲವು ಪ್ರಖ್ಯಾತರ ಹೆಸರುಗಳು ಕೆಳಗೆ ಕೊಟ್ಟಿರುತ್ತವೆ.

೧ ಉದಯನಾಥ
೨ ದಂಡನಾಥ
೩ ಏಕನಾಥ
೪ ಸತ್ಯನಾಥ
೫ ಸಂತೋಷನಾಥ
೬ ಕೂರ್ಮನಾಥ
೭ ಜಾಲಂದರನಾಥ
೮ ಗೋಪಿಚಂದನಾಥ
೯ ಮೀನನಾಥ
೧೦ ಮುಕ್ತಚಂದನಾಥ
೧೧ ಧರ್ಮನಾಥ
೧೨ ಅಡಬಂಗನಾಥ
೧೩ ಸಾರಂಗೀನಾಥ
೧೪ ಜಾಗೀವಾನಾಥ
೧೫ ನಿಜಾನಂದದೀನಾನಾಥ
೧೬ ನಯನನಾಥ
೧೭ ಯದುನಾಥ
೧೮ ನಿರಂಜನನಾಥ
೧೯ ಗಹಿನೀನಾಥ

ಇವರ ಮತ್ತು ೮೪ ಮಂದಿ ಸಿದ್ಧರ ಕಾಲದಲ್ಲಿ ಯೋಗ ಮತ್ತು ಅಧ್ಯಾತ್ಮದ ಅಧ್ಯಯನವು ವಾಡಿಕೆಯಲ್ಲಿತ್ತು. ಕೆಲವು ನಾಥಸಿದ್ಧರು, ಗೋಪೀಚಂದ, ಚರ್ಪಟಿ ಚೌರಂಗಿ, ವಿರೂಪಾಕ್ಷ ಮತ್ತು ವಿಲೇಶ ಮುಂತಾದವರಿಗೆ ಯೋಗದಲ್ಲಿ ಸಂಪೂರ್ಣ ನಂಬಿಕೆ ಇತ್ತು. ಆದರೆ ಇತರ ಕೆಲವು ನಾಥಸಿದ್ಧರು, ಧೀಗರನಾಥ ಘೆಗುನಾಥ, ಚಂಪಾನಾಥ, ಖಿಂಬಡನಾಥ, ಪ್ರಾಣನಾಥ ಮುಂತಾದವರು ಅಧ್ಯಾತ್ಮದ ಕಡೆಗೆ ವಿಶೇಷ ಲಕ್ಷ ಕೊಡುತ್ತಿದ್ದರು; ಮೇಲೆ ಹೇಳಿದಂತೆ ವಾರಕರಿ ಪಂಥದವರು ಭಕ್ತಿಯನ್ನು ಪ್ರೇರಿಸಿ, ಅವರಲ್ಲಿ ಹೆಚ್ಚಾಗಿ ಮಂದಿಯು ಯೋಗ ಮತ್ತು ಅಧ್ಯಾತ್ಮದ ಕಡೆಗೆ ಲಕ್ಷ ಕೊಡುವದಿಲ್ಲ.

ಮೇಲೆ ಹೇಳಿರುವವರಿಗಿಂತಲೂ ಪೂರ್ವದಲ್ಲಿ ಹದಿನೆರಡು ಆಚಾರ್ಯರು ಪ್ರಸಿದ್ಧಿಗೊಂಡಿದ್ದರು. ಅವರು ಯಾರೆಂದರೆ—

೧ ಶ್ರೀಭೈರವನಾಥಾಚಾರ್ಯ ೨ ಶ್ರೀ ಮತ್ಸ್ಯೇಂದ್ರನಾಥಾಚಾರ್ಯ
೩ ಶ್ರೀ ಜಾಲಂದರನಾಥಾಚಾರ್ಯ ೪ ಶ್ರೀ ಜೋಗನಾಥಾಚಾರ್ಯ

೫ ಶ್ರೀ ಸಂತನಾಥಾಚಾರ್ಯ ೬ ಶ್ರೀ ಸುರವರ್ಣನಾಥಾಚಾರ್ಯ
೭ ಶ್ರೀ ಮಹೇಂದ್ರನಾಥಾಚಾರ್ಯ ೮ ಶ್ರೀ ನಾಟಕೇಶ್ವರನಾಥಾಚಾರ್ಯ
೯ ಶ್ರೀ ವಾಘೋಡಿನಾಥಾಚಾರ್ಯ ೧೦ ಶ್ರೀಕಲಂಕನಾಥಾಚಾರ್ಯ
೧೧ ಶ್ರೀಘಾಡಾಚೊಡಿನಾಥಾಚಾರ್ಯ ೧೨ ಶ್ರೀಅಘೋರನಾಥಾಚಾರ್ಯ

ಹಾಗೂ ಒಂಭತ್ತು ಮಂದಿ ನಾಥರು ಪ್ರಸಿದ್ಧರಾಗಿದ್ದರು. ಅವರು—

೧ ಶ್ರೀಮತ್ಸ್ಯೇಂದ್ರನಾಥ ೪ ಕಾಶೀಫನಾಥ ೭ ನಾಗನಾಥ
೨ ಗೋರಕ್ಷನಾಥ ೫ ಭರ್ತೃನಾಥ ೮ ಚರ್ಪಟನಾಥ
೩ ಜಾಲಂದರನಾಥ ೬ ರೇವಣನಾಥ ೯ ಗಹಿನೀನಾಥ

ಇವರು ನವನಾರಾಯಣರ ಅವತಾರಗಳೆಂದು ತಿಳಿಯಲ್ಪಡುವರು, ಆ ನವನಾರಾಯಣರು ಯಾರೆಂದರೆ- ಶ್ರೀಮದ್ಭಾಗವತದ ಏಕಾದಶ ಸ್ಕಂದದಲ್ಲಿ ಕೊಟ್ಟಿದೆ—

೧ ಕವಿ ೨ ಹರಿ ೩ ಅಂತರಿಕ್ಷ ೪ ಪ್ರಬುದ್ಧ ೫ ದ್ರುಮಿಲ ೬ ಚಮಸ ೭ ಆವಿರ್ಹೋತ್ರ ೮ ಪಿಪ್ಪಲಾಯನ ೯ ಕರಭಾಜನ.

ಈ ಒಂಭತ್ತು ನಾಥರು ಮತ್ತು ಚೌರಂಗಿನಾಥ ಕೂಡಿ ಹತ್ತುನಾಥರು ನಿಷ್ಕಳಂಕ ಸಂಭವರಿದ್ದು ಇವರೇ ನಾಥಸಾಂಪ್ರದಾಯದ ಮೂಲ ಪುರುಷರೆನಿಸಲ್ಪಡುತ್ತಾರೆ.

ಶ್ರೀಶಂಕರಾಚಾರ್ಯರ ಪೂರ್ವದಲ್ಲಿಯೂ ಅವರ ಸಹಕಾಲಿಕರಾಗಿಯೂ ಭೈರವ ಮೇಳಾ ಎಂಬ ನಾಥಸಾಂಪ್ರದಾಯದ ಒಂದು ಶಾಖೆಯು ಇತ್ತು. ಇವರೊಳಗಿನ ಅಷ್ಟ ಭೈರವರು--

೧ ಬಟು ಭೈರವ ೪ ಅತಿಸಂಗಭೈರವ ೭ ಸಂಹಾರ ಭೈರವ
೨ ರುದ್ರ ಭೈರವ ೫ ಕ್ರೋಧ ಭೈರವ ೮ ಉನ್ಮತ್ತಭೈರವ
೩ ಚಂಡ ಭೈರವ ೬ ಕಪಾಲ ಭೈರವ

ಪೂರ್ವದ ಒಂದು ಕಥೆ ಹೀಗೆ ಹೇಳುತ್ತಾರೆ- ಇವರ ಪೈಕಿ ಕಪಾಲಭೈರವನ ಭಕ್ತನಾದ ಕ್ರಕಚನೆಂಬ ರಾಜನು ಶ್ರೀಶಂಕರಾಚಾರ್ಯರ ಕೂಡ ಬಹಳ ವಾದ ನಡಿಸಿ ಕಡೆಗೆ ತನ್ನ ಇಷ್ಟದೇವತೆಯಾದ ಕಪಾಲಭೈರವನನ್ನು ತನ್ನ ಸಹಾಯಕ್ಕೆ ಕರೆಸಿಕೊಂಡನು. ಆಗ ಶಂಕರಾಚಾರ್ಯರು ಈ ಎಂಟು ಭೈರವರ ಗುರುವಾದ ಕಾಲಭೈರವನಾಥನನ್ನು ಉಪಾಸಿಸಿ ಕರೆಸಿಕೊಂಡನು. ಈ ಕಾಲಭೈರವನು ಪ್ರಗಟನಾಗಿ ಕ್ರಕಚ ರಾಜನನ್ನು ಸಂಹರಿಸಿದನು. ಈ ಕಥೆಯ ಸಂಬಂಧವು ಶ್ರೀಶಂಕರಾಚಾರ್ಯರು ಮಾಡಿದ ಭೈರವಾಷ್ಟಕದಲ್ಲಿಯೂ

ಕಾಲಭೈರವಾಷ್ಟಕದಲ್ಲಿಯೂ ತೋರಿಸಿರುತ್ತದೆ.

ಹೀಗೂ ವದಂತಿ ಇದೆಯಲ್ಲ, ಭೈರವದಲ್ಲಿ ಶ್ರೇಷ್ಠನಾದ ರವಲನಾಥ ಅಥವಾ ರಾವಗ್ನಿ ಭೈರವನು ತಾನು ಪ್ರಥಮದಲ್ಲಿ ನಾಥಸಾಂಪ್ರದಾಯದ ದೀಕ್ಷೆಯನ್ನು ಹೊಂದಿ ಆನಂತರ ಕಾಲಭೈರವಾದಿ ಎಂಟು ಭೈರವರಿಗೂ ಇತರ ಭೈರವರಿಗೂ ದೀಕ್ಷಾಗ್ರಹಣ ಮಾಡಿಸಿದ್ದನು. ಆ ಇತರ ಭೈರವರ್‍ಯಾರಂದರೆ—

೧ ಶ್ರೀಶಂಕರ ಭೈರವನಾಥ
೨ ಶ್ರೀಮಾರ್ತಂಡ ಭೈರವನಾಥ
೩ ಶ್ರೀಸ್ಪರ್ಶಸಿದ್ಧ ಭೈರವನಾಥ
೪ ಸೋನಾರಸಿದ್ಧಭೈರವನಾಥ
೫ ಶ್ರೀಕರಕೋಟಿ ಭೈರವನಾಥ
೬ ಶ್ರೀಕಮಲ ಭೈರವನಾಥ
೭ ಶ್ರೀಬಾದಲ ಭೈರವನಾಥ
೮ ಶ್ರೀಬೊಭಾಟ ಭೈರವನಾಥ
೯ ಶ್ರೀನಿಗುಡ ಭೈರವನಾಥ

ಆ ರವಲನಾಥ ಭೈರವನು ಅನೇಕ ಶಾಕ್ತಪಂಥದವರನ್ನು ಶೇರಿಸಿಕೊಂಡು ತನ್ನ ಸಂಗಡದಲ್ಲಿ ಎಷ್ಟೋ ಸಾವಿರ ಜನರನ್ನು ಕೂಡಿಸಿಕೊಂಡು ಮಹಾರಾಷ್ಟ್ರದಲ್ಲೆಲ್ಲ ಸಂಚರಿಸಿ ಧರ್ಮಸ್ಥಾಪನೆಯನ್ನು ಮಾಡಿದನು. ಹೀಗೆ ಭೈರವ ಮೇಳವೂ ನಾಥಸಾಂಪ್ರದಾಯದ್ದೆ ಒಂದು ಶಾಖೆಯಾಗಿದ್ದು ಅದರ ಇತರ ಶಾಖೆಗಳಾಗುವ ಪೂರ್ವದಲ್ಲಿ ಪ್ರಚಲಿತವಾಗಿತ್ತು.

ಈ ನಾಥಸಾಂಪ್ರದಾಯದ ಸಂಕ್ಷಿಪ್ತ ಪ್ರತಿಪಾದನೆಯನ್ನು ಮುಗಿಸಬೇಕಾದರೆ ಮಹಾಯೋಗಿ ಸೋಹಿರೋಬಾನಾಥ ಅಂಬಿಯ ( A. D. 1714–1789 ) ಎಂಬ ನಾಥ ಸಾಂಪ್ರದಾಯದ ಸಾಂಪ್ರತಿಕ ಪ್ರಾಮುಖ್ಯರ ವಿಷಯ ಸ್ವಲ್ಪ ಹೇಳತಕ್ಕದ್ದಿದೆ. ಇವರು ಸಾವಂತವಾಡಿಯ ಬಾಂದಾ ಎಂಬಲ್ಲಿ ತಲಾಠಿ ಅಥವಾ ಕುಲಕರ್ಣಿಯಾಗಿದ್ದರು.

ಒಂದಾನೊಂದು ದಿವಸ ಇವರು ಸಾವಂತವಾಡಿಗೆ ಹೋಗುತ್ತಿರುವಾಗ್ಗೆ ಕಾಡಿನಲ್ಲಿ ಇವರಿಗೆ ಗಹಿನೀನಾಥರು ಭೆಟ್ಟಿಯಾಗಿ ಆಶೀರ್ವದಿಸಿ ನಾಥಸಾಂಪ್ರದಾಯದ ದೀಕ್ಷಾಗ್ರಹಣ ಮಾಡಿಸಿದರು. ಆ ಮೇಲೆ ಇವರು ತಮ್ಮ ನೌಕರಿಯನ್ನು ಬಿಟ್ಟು ದೇವರ ಸೇವೆಯನ್ನೇ ಅಂಗೀಕರಿಸಿದರು. ಉತ್ತರ ಹಿಂದುಸ್ತಾನಕ್ಕೆ ಹೋಗಿ, ಮಹಾದಾಜಿ ಸಿಂಧ್ಯನಿಗೆ ಭೆಟ್ಟಿಯಾಗಿ ಉಜ್ಜಯನಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಸಂ. 1789 ರಲ್ಲಿ ಅದೃಶ್ಯರಾದರು. ಅವರು ಬರೆದ ಗ್ರಂಥಗಳು—

೧ ಅಕ್ಷಯಬೋಧ
೨ ಮಹದನುಭವೇಶ್ವರಿ
೩ ಪೂರ್ಣಾಕ್ಷರಿ
೪ ಅದ್ವಯಾನಂದ
೫ ಸಿದ್ಧಾಂತ ಸಂಹಿತಾ
೬ ಪದ ಸಂಗ್ರಹ

ಇವುಗಳನ್ನು ಭಗವಂತ ಬಾಲಕೃಷ್ಣ ಪೈ ರಾಯಕರ ಇವರು ಪ್ರಸಿದ್ಧಪಡಿಸಿರುತ್ತಾರೆ. ಈ ಗ್ರಂಥಗಳಿಂದ ಸೊಹಿರೊಬಾನಾಥರು ಪರಮಾರ್ಥದಲ್ಲಿ

ಎಷ್ಟು ಉತ್ಕೃಷ್ಟ ಪದವಿಯನ್ನು ಹೊಂದಿದ್ದರೆಂಬದು ಸ್ಪಷ್ಟವಾಗುತ್ತದೆ. ನಾಥ ಪಂಥದ ಬೋಧನೆಗಳನ್ನು ಸ್ಪಷ್ಟವಾಗಿ ತಿಳಿಯಬೇಕೆನ್ನುವವರು ಈ ಗ್ರಂಥ ಗಳನ್ನು ವಿಶೇಷ ಲಕ್ಷಪೂರ್ವಕ ಓದತಕ್ಕದ್ದು.

॥ ಸರ್ವೆ ಶಾಂತಿರಸ್ತು ॥

## ಎರಡನೇ ಪ್ರಕರಣ

# ಯೋಗ.

ಶ್ರೀಗಜಾನನ ಮಹಾರಾಜರು ನಾಥಸಾಂಪ್ರದಾಯಕ್ಕನುಸರಿಸಿ ಧ್ಯಾನ ಯೋಗಕ್ಕೆ ಮಹತ್ವವನ್ನು ಕೊಟ್ಟಿರುವದರಿಂದ ಅದರ ಸಂಕ್ಷಿಪ್ತ ವರ್ಣನವು ಮುಂದೆ ಬರುವದು. ಇಲ್ಲಿ ಇತರ ಕೆಲವು ಯೋಗ ಪದ್ಧತಿಗಳ ವರ್ಣನೆಯನ್ನು ಸ್ವಲ್ಪ ಕೊಟ್ಟಿರುತ್ತೇವೆ

ಯೋಗ ಶಬ್ದದ ಮೂಲ ಅರ್ಥದ ಕಡೆಗೆ ಲಕ್ಷಕೊಟ್ಟರೆ, ಎರಡು ಸಜಾತಿಯ ವಸ್ತು ಅಥವಾ ಕಲ್ಪನೆಗಳು ಒಂದರಲ್ಲೊಂದು ಕೂಡಿ ಐಕ್ಯವಾಗುವದು, ಅಂದರೆ ಅವುಗಳಲ್ಲಿರುವ ದ್ವೈತಭಾವನೆಯು ಅಳಿದುಹೋಗಿ ಒಂದೇ ವಸ್ತು ವಾಗಿರುವದೇ ಯೋಗವೆನಿಸುವದು. ಹ್ಯಾಗೆ ಎರಡು ಪಾತ್ರೆಗಳೊಳಗಿನ ನೀರುಗಳು ಒಂದೇ ಪಾತ್ರೆಯಲ್ಲಿ ಸುರುವಿದರೆ ಅವುಗಳು ಹ್ಯಾಗೆ ತಮ್ಮ ಪೂರ್ವ ಆಕಾರ ಮತ್ತು ಸ್ಥಾನಗಳನ್ನು ಬಿಟ್ಟು ಏಕಾಕಾರವಾಗಿ ಒಂದೇ ನೀರೆನಿಸುತ್ತಿರುವವೊ ಇದೇ ರೀತಿ ಉಪಾಧಿಯುಕ್ತ ಚೈತನ್ಯವು ಬೇರೆ ಬೇರೆ ಎಂಬದಾಗಿ ಕಾಣಿಸುತ್ತಿದ್ದರೂ, ಉಪಾಧಿ ಬಿಟ್ಟ ಕೂಡಲೆ ಏಕವಾಗಿ ಪರಿಣಮಿಸಿರುವ ಅನುಭವಕ್ಕೆ ಯೋಗವೆನ್ನುವರು. ಉಪಾಧಿ ಭೇದದಿಂದ ಜೀವಾತ್ಮಾ ಮತ್ತು ಶಿವಾತ್ಮಾ ಅನ್ನಿಸಿ ಕೊಳ್ಳುವವರು ದ್ವೈತ ಸ್ಥಿತಿಯಲ್ಲಿ ಪ್ರಥಕ್ಕಾಗಿ ( ಬೇರೆ ಬೇರೆಯಾಗಿ ) ಕಾಣಿಸುವರು. ಉಪಾಧಿರಹಿತರಾಗಿ ಇವರು ಏಕ ಚೈತನ್ಯವಾಗುವದೇ ಯೋಗವು; ಜೀವಾತ್ಮನು ಶಿವಾತ್ಮನ ಅಂಶವೆಂದು ಶಾಸ್ತ್ರವು ಹೇಳುತ್ತಿದ್ದರೂ, ಪ್ರತ್ಯಕ್ಷವಾಗಿ ಅವರು ಇಷ್ಟು ಭಿನ್ನವಾಗಿ ಯಾಕೆ ಕಾಣಿಸಿಕೊಳ್ಳುವರು; ಮತ್ತು ಅವರ ಐಕ್ಯವು ಹ್ಯಾಗೆ ಸಂಭವಿಸೀತು, ಎಂಬದು ಜೀವನ ಉಪಾಧಿಯುಕ್ತ ಅವಸ್ಥಾತ್ರಯ ಬದ್ಧ ವಾದ ಬುದ್ಧಿಗೆ ತಿಳಿಯಲಾಗದು. ಇಂಥ ಸಾಮಾನ್ಯ ಸ್ಥಿತಿಯ ವ್ಯವಹಾರಿಕ ಬುದ್ಧಿಗೆ ಇದರ ಮರ್ಮವು ತಿಳಿಯದಿದ್ದರೂ ಯೋಗಿ ಜನರು ತಮ್ಮ ಸಮಾಧಿ

ಯಲ್ಲಿಯ ಅನುಭವವು " ಜೀವನಿಗೆ ತಾನು ಶಿವನೇ ಇದ್ದೇನೆ" ಎಂಬದಾಗಿ ರುವದೆಂದು ಸ್ಪಷ್ಟವಾಗಿ ಬರೆದಿರುತ್ತಾರೆ. ಇದರ ಮೇಲಿಂದ ದ್ವೈತದೊಳಗೆ ಅವರು ( ಜೀವಾತ್ಮಾ ಶಿವಾತ್ಮಾ ) ಭಿನ್ನವೆಂತ ಕಾಣಿಸಿದರೂ ಇದು ಬರೇ ತೋರಿಕೆ ಇರುವದು, ಈ ತೋರಿಕೆಯು ಸತ್ಯವಲ್ಲ, ಸುಳ್ಳಾಗಿರುತ್ತದೆ. ಆ ಮಹಾತ್ಮರು ತಮ್ಮ ಅನುಭವವೆಂತ ಯಾವದು ಬರೆದಿರುವರೋ ಅದು ಸತ್ಯಶೋಧನೆಯನ್ನು ಮಾಡುವವನಿಗೆ ಇದೊಂದು ಸಹಾಯವಾಗಲಿ ಎಂದು ಬರೆದಿರುವರು. ಆದರೆ ಯೋಗ ಶಬ್ದವು ಸಾಧನವೆಂಬ ಅರ್ಥದಿಂದಲೂ ಉಪಯೋಗಿಸಲ್ಪಡುವದು. ಜೀವ ಶಿವರ ಐಕ್ಯವನ್ನು ತಂದುಕೊಡುವ ಯಾವ ಸಾಧನವಿರುವದೊ ಅದಕ್ಕೂ ಯೋಗವೆನ್ನುವರು. ಜ್ಞಾನ, ಕರ್ಮ, ಭಕ್ತಿಯೋಗ ಇವುಗಳ ಅರ್ಥದಿಂದ ಹೀಗೆ ವ್ಯಾಖ್ಯಾಮಾಡಲಿಕ್ಕೆ ಬಂದೀತಲ್ಲ " ಮನುಷ್ಯನಲ್ಲಿ ಯಾವ ಆತ್ಮತತ್ವವಿರುತ್ತದೊ ಆದನ್ನು ತಿಳಿಯುವ ಉದ್ದಿಶ್ಯ, ಆದು ವಿಶ್ವರೂಪ ಪರಮಾತ್ಮನಿಗೆ ಬೇರೆಯಾಗಿಲ್ಲ" ಇಂಥಾ ಅನುಭವ ಬರುವದರ ಸಲುವಾಗಿ, ಯಾವ ಶಾರೀರಿಕ ವ ಮಾನಸಿಕ ಕ್ರಿಯೆಗಳು ವಿಧಿವಿಧಾನಪೂರ್ವಕ ಶಾಸ್ತ್ರಕ್ಕನುಸರಿಸಿ ಆಚರಿಸಬೇಕಾಗಿರುತ್ತವೊ ಆ ಪದ್ಧತಿಗೆ ಅಥವಾ ಮಾರ್ಗಕ್ಕೆ ಯೋಗವೆನ್ನುತ್ತಾರೆ. ಬೇರೆ ಶಬ್ದಗಳಿಂದ ಇದನ್ನೆ ವಿವರಿಸಬೇಕಾದರೆ, ಜೀವಾತ್ಮನೆಂದರೆ ಶಿವಾತ್ಮನೇ ಎಂದು ಅನುಭವ ಬರುವದರ ದೆಶೆಯಿಂದ ಯಾವ ಶಾಸ್ತ್ರಾನುಸಾರ ಕ್ರಿಯೆಗಳು ಮಾಡತಕ್ಕವಿರುವವೋ ಅವೇ ಯೋಗವೆನ್ನಲ್ಪಡುವವು. ವೇದಾಂತ ಮತದಲ್ಲಿಯಾದರೂ ಚೈತನ್ಯ ( ಆತ್ಮಾ ) ಇದೇ ಜೀವನ ಸತ್ಯಸ್ವರೂಪವು. ಅದು ಎಂದೂ ಬದ್ಧವಲ್ಲ. ಅದು ಬದ್ಧವೆಂತ ತಿಳಿಯುವದೇ ಶುದ್ಧ ಭ್ರಮೆಯು. ಈ ಭ್ರಮೆಯ ನಾಶವೇ ಜೀವಶಿವರ ಐಕ್ಯ. ಈ ಐಕ್ಯ ಜ್ಞಾನವೇ ಮೋಕ್ಷಕ್ಕೆ ಕಾರಣವು.

ಜೀವನೆಂದರೆ ಸತ್ಯವಾಗಿ ಪರಮಾತ್ಮನೇ ಇರುತ್ತಾನೆ. ಆದರೆ ಮಾಯಾ ಭ್ರಮೆಯಿಂದ ತಾನು ಬೇರೆ ಇದ್ದೇನೆಂತ ಜೀವನಿಗೆ ಕಾಣಿಸುತ್ತದೆ. ಹ್ಯಾಗೆ ಜಾಗೃತಕಾಲದಲ್ಲಿ ತಾನು ಇಂಥವನೇ ಎಂದು ಪೂರ್ಣ ನಿಶ್ಚಯವುಳ್ಳ ಮನುಷ್ಯನಾದರೂ ನಿದ್ರಾಭ್ರಮೆಯಲ್ಲಿ ( ಸ್ವಪ್ನದಲ್ಲಿ ) ತನ್ನ ಜಾಗೃತ್ ಸ್ವರೂಪವನ್ನು ಸಂಪೂರ್ಣವಾಗಿ ಮರೆತು ಮತ್ತೇನೇನೊ ಇದ್ದೇನೆ ಎಂಬ ಭ್ರಮೆಯಿಂದ ಭಯಾದಿಗಳನ್ನು ಹೊಂದುವನೋ ಮತ್ತು ಆ ಸ್ವಪ್ನ ಭ್ರಮೆಯು ತೀರಿದ ಕಾಲದಲ್ಲಿ ತನ್ನ ಜಾಗೃತ್ ಸ್ವರೂಪವನ್ನು ಹೊಂದಿ ಸ್ವಪ್ನಾನುಭವಗಳೆಲ್ಲ ತನ್ನದೇ ಭ್ರಮೆಯೆಂದೂ, ಸ್ವಪ್ನದ ಅನುಭವಿಯೂ ಜಾಗೃದ ಅನುಭವಿಯೂ ತಾನೊಬ್ಬನೇ ಎಂದು ತಿಳಿಯುವನೋ, ಹಾಗೆ ಯಾವಾಗ ಈ ಜಾಗೃದವಸ್ಥೆಯ ಅನುಭವಿಯಾಗಿ ಜೀವನೆನಿಸಿಕೊಳ್ಳುವವನು ನಿರ್ವಿಕಲ್ಪ ಸಮಾಧಿ ಸಿದ್ಧಿಸಿಕೊಂಡು ತನ್ನ ಸ್ವರೂಪ ಸ್ಥಿತಿಯಾದ ತುರ್ಯಾವಸ್ಥೆಯನ್ನು ಹೊಂದುವನೋ ಆಗ್ಗೆ ಇಷ್ಟುಹೊತ್ತು ಭ್ರಮೆಯಿಂದ ಜೀವನೆನಿಸಿ ಬಳಲುತ್ತಿರುವ ನಾನೇ ಶಿವಸ್ವರೂಪನಿರುವೆನೆಂದು ಅನುಭವಕ್ಕೆ ಬರುವದು.

ಜೀವ ಶಿವರ ಐಕ್ಯವಾಗಿ ಆ ಐಕ್ಯಾನುಭವವನ್ನು ಅಖಂಡವಾಗಿರುವಂತೆ ಮಾಡಿಕೊಳ್ಳುವದೇ ಮೋಕ್ಷ ಅಥವಾ ಮುಕ್ತಿ. ಇದೇ ಜೀವನ ಸಾಧ್ಯವಾಗಿದೆ. ಬ್ರಹ್ಮಜ್ಞಾನವೆಂತ ಇದಕ್ಕೇ ಅನ್ನುವರು. ಆತ್ಮಜ್ಞಾನವೆಂದರೂ ಇದೆ. ಇದನ್ನು ಸಾಧಿಸಲಿಕ್ಕೆ ಆತ್ಮವು ಯಾವದು ಅನಾತ್ಮಾ ಯಾವದು ಇವುಗಳ ಶಾಬ್ದಿಕ ಜ್ಞಾನವನ್ನು ಪ್ರಥಮದಲ್ಲಿ ಮಾಡಿಕೊಳ್ಳಬೇಕಾಗಿದೆ. ಅನಂತರ ಆತ್ಮನ ಧ್ಯಾನ ಮಾಡಿ ಬ್ರಹ್ಮಾನುಭವ ಬರುವತನಕ ಸಾಧಕನು ಬಹುಯತ್ನಪೂರ್ವಕವಾಗಿ ನಿರಂತರ ಅಭ್ಯಾಸಮಾಡಬೇಕಾಗುತ್ತದೆ. ಈ ಅಭ್ಯಾಸವೇ ಸಾಧನವು. ಈ ಸಾಧನ ಮೂಲಕ ಯಾವ ಆತ್ಮಾನುಭವ ಬರುವದೋ ಅದಕ್ಕೆ ಸ್ವರೂಪಜ್ಞಾನ ಅಥವಾ ಸ್ವಾನುಭೂತಿಯನ್ನುವರು. "ನಾನು ನಾನೇ ಇದ್ದೇನೆ, ಮತ್ತೇನೇನೂ ಅಲ್ಲ" ಎಂಬ ದೃಢಾನುಭೂತಿಯ ಆತ್ಮಜ್ಞಾನವು ಇದೇ ಅಖಂಡವಾಗಿ ನಿಂತರೆ ಎರಡ ನೇದರ (ದ್ವೈತದ) ಭಾವನೆ ಪೂರ್ಣ ಅಳಿದುಹೋಗಿ, "ನಾನೊಬ್ಬನೇ ಇದ್ದೇನೆ ಮತ್ತೇನೇನೂ ಇಲ್ಲ" ಎಂಬದಾಗಿ ಪರಿಣಮಿಸುವದು. ಈ ಭಾವನೆಯಾದರೂ ಕೆಲವು ಹೊತ್ತು ಅಚಲವಾಗಿ ನಿಂತಿತೆಂದರೆ, ಮುಂದೆ, "ನಾನು ಇದ್ದೇನೆ" ಎಂದೂ ಅದಕ್ಕೂ ಮುಂದೆ ತೂರ್ಯಾತೀತದಲ್ಲಿ ನಾನು ಎಂಬದು ಸಂಪೂರ್ಣವಾಗಿ ಲಯಹೊಂದಿ "ಇದ್ದೇನೆ" ಎಂಬದರ ಜ್ಞಪ್ತಿಮಾತ್ರ ಉಳಿಯುವದು. ಇದೇ ನಿರ್ವಿಕಲ್ಪ ಸಮಾಧಿಯ ಅತ್ಯುಚ್ಚಸ್ಥಿತಿ. ಇದೇ ಸತ್ ಚಿತ್ ಆನಂದ ಎಂಬ ಶುದ್ಧ ಸ್ವರೂಪಸ್ಥಿತಿಯು. ಅಲ್ಲಿ ಜೀವ ಚೈತನ್ಯವು ಜೀವತ್ವವನ್ನು ಬಿಟ್ಟು ಸಚ್ಚಿದಾ ನಂದರೂಪವೇ ಆಗುವದಾದ್ದರಿಂದ ಅಲ್ಲಿ ಆ ಸ್ವರೂಪದ ಅನುಭವವಾಗದೆ ಪುನಃ ಸ್ವರೂಪಕ್ಕೆ ಬೇರೆಯಾಗಿ ಜೀವತ್ವಕ್ಕೆ ಇಳಿಯಿತೆಂದರೆ, ಆ ಸಚ್ಚಿದಾನಂದ ಸ್ವರೂಪದ ಅನುಭವವು ಸ್ಮೃತಿಯಾಗಿ ಅದನ್ನು ವರ್ಣಿಸಲಿಕ್ಕೆ ಜೀವನಿಗೆ ಬರುವದು.

ಬೇರೆ ಬೇರೆ ಯೋಗಗಳ ಅಭ್ಯಾಸವನ್ನು ಮಾಡಿ, ಸಲೋಕತಾ ಸಮೀಪತಾ ಸರೂಪತಾ ಸಾಯುಜ್ಯತಾ, ಈ ಮೆಟ್ಲುಗಳನ್ನು ಏರುತ್ತಾ ಯಾವ ಮುಕ್ತಿ ಸಿಗುವದೋ ಅದಕ್ಕೆ ಕ್ರಮಮುಕ್ತಿಯನ್ನುತ್ತಾರೆ. ಈ ಕ್ರಮಮುಕ್ತಿ ಸಾಧನದಲ್ಲಿ, ಸಾಧಕನಿಗೆ ಈಶ್ವರೀ ಸಹಾಯ ಪ್ರಾಪ್ತವಾಗಿ ಅವನು ಕಡೆಗೆ ಬ್ರಹ್ಮದಲ್ಲಿ ಹೋಗಿ ಸೇರುವನು.

ಮೋಕ್ಷ ಇದು ಸಾಧ್ಯ ಮತ್ತು ಯೋಗ ಇದು ಸಾಧನವೆಂದು ನಿಶ್ಚಯ ವಾದ ನಂತರ ಈಗ ನಾವು ಸಾಧಕನ ಕಡೆಗೆ ಲಕ್ಷಕೊಡೋಣ. ಸಾಧಕನಿಗೆ ಪಂಚಮಹಾಭೂತಾತ್ಮಕ ಶರೀರ, ಕರ್ಮ ವ ಜ್ಞಾನೇಂದ್ರಿಯಗಳು ಮನ, ಬುದ್ಧಿ ಜೀವ, ಶ್ರದ್ಧಾ, ಸ್ಮೃತಿ, ಭಕ್ತಿ ಇತ್ಯಾದಿ ವೃತ್ತಿಗಳೆಲ್ಲ ಇರುವವು. ಅದ್ದ ರಿಂದ ಯೋಗಾಭ್ಯಾಸದಲ್ಲಿ ಕೆಲವು ಶಾರೀರಿಕ ಕೆಲವು ಮಾನಸಿಕ ಕ್ರಿಯೆಗಳು ಹೇಳಲ್ಪಡುತ್ತವೆ. ಜಗತ್ತಿನೊಳಗಿನ ಸುಖದುಃಖಗಳ ಅನುಭವಗಳು ಯಾವಾಗ್ಗೆ ಅಂತಃಕರಣದಲ್ಲಿ ನೆಲೆಗೊಳ್ಳುವವೊ ಆಗ ಅವುಗಳಿಗೆ ಸಂಸ್ಕಾರ ಅಥವಾ ವಾಸನಾ

ಅನ್ನುತ್ತಾರೆ. ಈ ವಾಸನೆಗಳೇ ಮನುಷ್ಯನಿಗೆ ಸ್ವರೂಪಜ್ಞಾನವನ್ನು ಮಾಡಿಕೊಡುವ ಮಾರ್ಗದಲ್ಲಿ ಅಂದರೆ— ಯೋಗಾಭ್ಯಾಸ ಮಾಡುವದರಲ್ಲಿ ವಿಘ್ನಗಳನ್ನು ತರುತ್ತವೆ. ಆದ್ದರಿಂದ ಸಾಧಕನು ಈ ವಿಘ್ನಗಳನ್ನು ನಾಶಮಾಡಲಿಕ್ಕೇಬೇಕು. ಇದಕ್ಕಾಗಿ ಯೋಗಾಭ್ಯಾಸದಿಂದ ಮನಸ್ಸನ್ನು ಮತ್ತು ಪ್ರಾಣವಾಯುವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕಾಗಿರುವದು. ಯಾಕಂದರೆ, ಪವನಜಯ ಮತ್ತು ಮನೋಜಯದಿಂದ ಯಾವಾಗ ಚಿತ್ತಸ್ಥೈರ್ಯವು ಪ್ರಾಪ್ತವಾಗುವದೋ ಆಗಲೇ ಈಶ್ವರೀ ಸಾಕ್ಷಾತ್ಕಾರ (ಆತ್ಮ-ಸಾಕ್ಷಾತ್ಕಾರ) ಪಾಡೀತು. ಚಿತ್ತಸ್ಥೈರ್ಯವೇ ಸಮಾಧಿಯೆನಿಸುವದು.

ಮನ ಮತ್ತು ಶ್ವಾಸಗಳಿಗೆ ನಿಕಟ ಸಂಬಂಧವಿರುತ್ತದೆ. ಕಾಮಕ್ರೋಧಾದಿ ಮನೋವಿಕಾರಗಳು ಯಾವಾಗ ಪ್ರದೀಪ್ತವಾಗುವವೋ ಆಗ ಶ್ವಾಸೋಚ್ಛ್ವಾಸಗಳು ಭರದಿಂದ ನಡೆಯುವವು. ಯೋಗಶಾಸ್ತ್ರವಾದರೂ ಇದನ್ನು ತಿಳಿದು ಶ್ವಾಸೋಚ್ಛ್ವಾಸನಿರೋಧರೂಪಪ್ರಾಣಾಯಾಮದಿಂದ ಮನೋಜಯವನ್ನು ಸಂಪಾದಿಸಲಿಕ್ಕೆ ಹೇಳಿರುತ್ತದೆ. ಮನ ಮತ್ತು ಶ್ವಾಸ ಇವುಗಳನ್ನು ಸಂಪೂರ್ಣವಾಗಿ ತನ್ನ ಆಟೋಪದಲ್ಲಿ ಹಿಡಿದು, ಮನಸ್ಸಿನೊಳಗಿನ ಎಲ್ಲ ಶಂಕಾಕುಶಂಕಾ ವಿಕಲ್ಪನೆಗಳು ಇಲ್ಲದಂತಾದಾಗ್ಗೆ ಚಿತ್ತವೃತ್ತಿಯು ನಿರೋಧವಾಗುವದು. "ಯೋಗಶ್ಚಿತ್ತವೃತ್ತಿನಿರೋಧಃ"[೧] (ಯೋಗವೆಂದರೆ ಚಿತ್ತವೃತ್ತಿಗಳ ನಿರೋಧವು). ಆಗಲೇ ಸಾಧಕನಿಗೆ ಸಮಾಧಿಯ ಅನುಭವವು ಬರುವದು. "ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್"[೨] (ಆ ನಿರೋಧಕಾಲದಲ್ಲಿ ದೃಷ್ಟನು ಸ್ವರೂಪದಲ್ಲಿ ಇರುತ್ತಾನೆ). ಸಮಾಧಿಯಲ್ಲಿ ಜೀವ ಶಿವರೊಳಗಿನ ಭೇದಭಾವವು ಯಾವಾಗ ಸಮೂಲ ಇಲ್ಲದಂತಾಗುವದೋ ಆಗಲೇ ಆತ್ಮಸಾಕ್ಷಾತ್ಕಾರವಾಯಿತೆಂದು ಅನ್ನಬಹುದು. ಅಲ್ಲಿಯ ತನಕ ಮನೋರಾಜ್ಯವು (ಕಲ್ಪನಾಪ್ರವಾಹವು) ನಿಲ್ಲಲಾರದು, ಮತ್ತು 'ನಾನು, ನೀನು' ಎಂಬ ಈ ಭಾವನೆಗಳು ಅಳಿಯಲಾರವು; ಹ್ಯಾಗೆ ಉಪ್ಪಿನ ಕರಣಿಯು ನೀರೊಳಗೆ ಬಿದ್ದರೆ ನೀರಿನ ರೂಪವಾಗುವದೋ, ಹಾಗೆ ಸಮಾಧಿಯೊಳಗೆ ಜೀವನು ಶಿವರೂಪನಾಗುವನು. ಅಂದರೆ ಜೀವನು ಜೀವತ್ವವನ್ನು ತ್ಯಜಿಸಿ, ತನ್ನ ಶಿವಸ್ವರೂಪವನ್ನೆ ವಹಿಸುವನು. ಸಮಾಧಿಯ ಪೂರ್ಣಾವಸ್ಥೆಯೊಳಗೆ 'ನಾನು ನೀನು' ಎಂಬ ಈ ಭಾವನೆಯೇ ನಿಲ್ಲಲಾರದು. ಅಲ್ಲಿ ಆತ್ಮಪ್ರಕಾಶದ ಅಪರಂಪಾರ ಸಾಗರವಿದ್ದು ದ್ವೈತಭಾವನೆಗೆ ಅವಕಾಶವೇ ಇರಲಾರದೆ ಪೂರ್ಣ ಶಾಂತಿಯೇ ತುಂಬಿರುವದು. ಈ ಸ್ಥಿತಿಯು ಬೇರೆಬೇರೆ ನಾಮಗಳಿಂದ ವರ್ಣಿಸಲ್ಪಟ್ಟಿದೆ. ಯಾರು ಇದಕ್ಕೆ ಜೀವ ಶಿವರ ಐಕ್ಯವೆನ್ನುತ್ತಾರೆ. ಯಾರು ಪರಮ ಧ್ಯೇಯವೆನ್ನುವರು. ಇತರರು ಇದನ್ನು ಕೈವಲ್ಯವೆಂತ ವರ್ಣಿಸುವರು. ಯಾರು ಇದಕ್ಕೆ ಸ್ವಾನುಭವ ಅಥವಾ ಸ್ವಾನುಭೂತಿ ಈ ಹೆಸರು ಕೊಡುವರು. ಮತ್ಯಾರು ಈ ಅವಸ್ಥೆಗೆ ಸಹ-

---

[೧] ಪತಂಜಲಿಯೋಗ ಸೂತ್ರ ೨ ಪಾ. ೧ [೨] ಪತಂಜಲಿಯೋಗ ಸೂತ್ರ ೩ ಪಾ. ೧

ಜಾವಸ್ಥಾ ಅನ್ನುತ್ತಾರೆ. ಇವೆಲ್ಲವುಗಳ ಮಥಿತಾರ್ಥ ಒಂದೇ ಇರುತ್ತದೆ. ಈ ಸ್ಥಿತಿಯಲ್ಲಿರುವಾಗ ವಾಸನಾ ಮತ್ತು ಅದರಿಂದ ಹುಟ್ಟುವ ಕಲ್ಪನಾಪ್ರವಾಹವು ತಡೆಯಲ್ಪಡುವವು. ಮನಸ್ಸು ತನ್ನ ನಿತ್ಯ ಸ್ವಭಾವವಾದ ಸಂಕಲ್ಪ-ವಿಕಲ್ಪರೂಪ ವ್ಯವಹಾರವನ್ನು ಬಿಟ್ಟು, ಸುಖದುಃಖಾತೀತವಾಗುತ್ತದೆ. ಈ ಸ್ಥಿತಿಯು ಯಾವ ಸಾಧಕನಿಗೆ ದೇಹವಿರುತ್ತ ನಿರಂತರ ಪ್ರಾಪ್ತವಾಯಿತೆಂದರೆ, ಅವನು ಜೀವನ್ಮುಕ್ತನೆನಿಸುವನು, ಮತ್ತು ದೇಹತ್ಯಾಗದ ನಂತರ ವಿದೇಹಮುಕ್ತನಾಗುವನು.

ಈ ಸ್ಥಿತಿ ಪ್ರಾಪ್ತವಾಗಲಿಕ್ಕೆ ಮಂತ್ರಯೋಗ, ಲಯಯೋಗ, ಹಠಯೋಗ ವ ರಾಜಯೋಗ ಎಂಬೀ ನಾಲ್ಕು ಪ್ರಕಾರದ ಯೋಗಮಾರ್ಗಗಳು ಹೇಳಲ್ಪಟ್ಟಿವೆ. ಈ ಎಲ್ಲ ಮಾರ್ಗಗಳ ಧ್ಯೇಯವು ಒಂದೇ ಇದ್ದರೂ ಇವುಗಳು ಆಚರಣದಲ್ಲಿ ಭಿನ್ನಭಿನ್ನ ಇರುವವು. ಮತ್ತು ಅವವುಗಳಿಂದ ಆಗತಕ್ಕ ಸಮಾಧಿಗಳಿಗಾದರೂ ಬೇರೆಬೇರೆ ಹೆಸರುಗಳಿವೆ. ಮಂತ್ರಯೋಗದಿಂದ ಸಂಪಾದಿಸುವ ಸಮಾಧಿಗೆ ಭಾವ ಸಮಾಧಿಯೆಂತಲೂ, ಲಯಯೋಗದ ಸಮಾಧಿಗೆ ಲಯಸಮಾಧಿಯೆಂತಲೂ, ಹಠಯೋಗಸಮಾಧಿಗೆ ಮಹಾಬೋಧ ಸಮಾಧಿಯೆಂತಲೂ, ಮತ್ತು ರಾಜಯೋಗದಿಂದ ಪ್ರಾಪ್ತಮಾಡಿಕೊಳ್ಳುವ ಸಮಾಧಿಗೆ ಕೈವಲ್ಯವೆಂತಲೂ ಹೇಳುತ್ತಾರೆ.

ಕುಂಡಲಿನಿ ಉತ್ಥಾಪನದಿಂದ ಸಮಾಧಿಪ್ರಾಪ್ತಿ ಮಾಡಿಕೊಂಡು ಜೀವ-ಶಿವರ ಐಕ್ಯದ ಅನುಭವವನ್ನು ಸಂಪಾದಿಸಿಕೊಳ್ಳುವದು ಸಾಧಕನ ದೃಷ್ಟಿಯಿಂದ ಸರ್ವ ಯೋಗಗಳ ಕಡೇ ಧ್ಯೇಯವಾಗಿರುತ್ತದೆ.

ರಾಜಯೋಗದಲ್ಲಿ ಬುದ್ಧಿಗೆ ಹೆಚ್ಚಿನ ಮಹತ್ವ ಸಲ್ಲುತ್ತದೆ. ಮಂತ್ರಯೋಗದಲ್ಲಿ ಶ್ರದ್ಧಾಭಕ್ತಿಪೂರ್ವಕ ನಾಮಮಂತ್ರಜಪ ಮತ್ತು ದೇವತಾರ್ಚನೆ ಇವುಗಳಿಗೆ ಮಹತ್ವವಿರುವದು. ಹಠಯೋಗದಲ್ಲಿ ವಿಶೇಷವಾಗಿ ಶಾರೀರಿಕ ಬಾಹ್ಯಕ್ರಿಯೆಗೂ ಕೆಲವು ಮಟ್ಟಿಗೆ ಮಾನಸಿಕ ಕ್ರಿಯೆಗೂ ಮಹತ್ವವು. ಲಯಯೋಗವು ಹಠಯೋಗಕ್ಕೆ ಮೇಲಿನ ಮೆಟ್ಟಲು ಆಗಿದ್ದು ಇದರಲ್ಲಿ ಧಾರಣ ಮತ್ತು ಕುಂಡಲಿನಿ ಉತ್ಥಾಪನ, ಇವಕ್ಕೆ ವಿಶೇಷತ್ವವಿರುವದು.

ಎಲ್ಲ ತರದ ವಿಚಾರ, ಕಲ್ಪನಾ ಮತ್ತು ವಾಸನಾ ಇವುಗಳ ಉಗಮವು ಚಿತ್ತವೃತ್ತಿಮೂಲಕವಿರುವದರಿಂದ ಯಾವ ಮಾರ್ಗದಿಂದ ನಡೆದರೂ ಒಂದು ವಿಶೇಷ ಸಂಗತಿಯನ್ನು ತಿಳಿಯತಕ್ಕದ್ದು, ಅದ್ಯಾವದೆಂದರೆ—ಚಿತ್ತವೃತ್ತಿರೂಪಕಲ್ಪನಾಪ್ರವಾಹವು ಅಥವಾ ಮನೋರಾಜ್ಯವು ಅಳಿದವಿನಹಾ, ಅಂದರೆ ಶ್ವಾಸಕ್ರಿಯೆಯನ್ನು ನಿಯಮಿಸಿ ಮನೋಲಯವನ್ನು ಸಾಧಿಸಿದ ವಿನಹಾ, ಬ್ರಹ್ಮಾನುಭವವು ಎಂದೂ ಬರಲಾರದು. ಯಾಕಂದರೆ—ಸ್ವತಃಸಿದ್ಧ ಬ್ರಹ್ಮರೂಪನಾಗಿರುವ ಜೀವನಿಗೆ ಈ ಚಂಚಲ ಸಂಕಲ್ಪವಿಕಲ್ಪಾತ್ಮಕ ಮನಸ್ಸೇ ತಾನು ಬ್ರಹ್ಮನೆಂತ ತಿಳಿಯುವದಕ್ಕೆ ಅಡಚಣಿ ಮಾಡುವದು. ಮನಸ್ಸು ಯಾವದಾದರೂ ನಿಷ್ಠಾಪೂರ್ವಕ

ದೀರ್ಘಾಭ್ಯಾಸದಿಂದ ಸಾಧಿಸಿದ ಯೋಗಸಮಾಧಿಯಿಂದಲೇ ಅವರಿಸಲ್ಪಟ್ಟು ಜೀವನಿಗೆ ಬ್ರಹ್ಮಾನುಭವ ಮಾಡಿಸಿಕೊಡುತ್ತದೆ. ಹ್ಯಾಗೆ ಮನುಷ್ಯರೊಳಗೆ ಏಕತ್ವ ಸ್ವಭಾವವಿದ್ದು ಕ್ರಿಯೆಗಳಿಂದಲೇ ಭೇದ ತೋರುವದೋ ಹಾಗೆ ಈ ಮನಸ್ಸು ತನ್ನ ಕ್ರಿಯೆಗಳಿಂದಲೇ ಮನಸ್ಸೆನಿಸಿಕೊಂಡು ಅವನ್ನೆಲ್ಲಾ ಬಿಟ್ಟುಕೊಡಲೇ ತಾನೇ ಪರಮಾತ್ಮ ಅಥವಾ ಬ್ರಹ್ಮವೆಂದು ತಿಳಿಯುವದು.

ಇಂಥಾ ಈ ಮನೋಕ್ರಿಯೆಗಳನ್ನು ಅಥವಾ ಚಿತ್ತವೃತ್ತಿಗಳನ್ನು ನಿರೋಧಿಸುವದಕ್ಕೆ ಉಪಾಯವೇನು? ಅಂದರೆ, ಅದಕ್ಕೆ ಪತಂಜಲಿ ಋಷಿಯು ಪ್ರತಿಪಾದಿಸಿದ ಅಷ್ಟಾಂಗ ಯೋಗವೇ ಉಪಾಯವಾಗಿರುವದು. ಯಮ ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ ಧ್ಯಾನ ಮತ್ತು ಸಮಾಧಿ ಎಂಬಿವೇ ಎಂಟು ಅಂಗಗಳಿಂದ ಯುಕ್ತವಾದ ಯೋಗಕ್ಕೆ ಅಷ್ಟಾಂಗಯೋಗವೆನ್ನುತ್ತಾರೆ. ಈ ಅಷ್ಟಾಂಗಗಳ ವರ್ಣನೆಯನ್ನು ಈ ಕೆಳಗೆ ಕೊಟ್ಟಿರುತ್ತದೆ—

**ಯಮ**— ಇದರಲ್ಲಿ ಧರ್ಮ ಮತ್ತು ನೀತಿ ಇವುಗಳ ಅಂತರ್ಭಾವವಿದ್ದು ಆ ರೀತಿ ಆಚರಿಸಲಿಕ್ಕೆ ಇಚ್ಛೆಯು ಬೇಕು ಇದರ ಅಂತರ ಅಂಗಗಳು ಯಾವವೆಂದರೆ— ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ. ಯಾವದಾದರೊಂದು ಪ್ರಾಣಿಗೆ ದುಃಖ ಕೊಡದಿರುವದೇ ಅಹಿಂಸಾ, ಯಥಾಸ್ಥಿತಿ ಆಚರಣೆಯೇ ಸತ್ಯ. ಪರರ ವಸ್ತುವಿಷಯ ಲೋಭವಿಲ್ಲದಿರುವದೇ ಅಸ್ತೇಯ. ಸ್ತ್ರೀ ವಿಷಯವನ್ನು ಮನಸ್ಸಿನೊಳಗೆ ಎಂದೂ ಬರಗೊಡದಿರುವದೇ ಬ್ರಹ್ಮಚರ್ಯ. ವಿಷಯಗಳನ್ನು ಗ್ರಹಿಸದಿರುವದೇ ಅಪರಿಗ್ರಹ. ಇವೆಲ್ಲವನ್ನು ತ್ರಿಕರಣಪೂರ್ವಕವಾಗಿ ದೀರ್ಘಕಾಲ ಆಚರಿಸತಕ್ಕದ್ದು.

**ನಿಯಮ**—ಶೌಚ, ಸಂತೋಷ, ತಪ, ಸ್ವಾಧ್ಯಾಯ, ಈಶ್ವರಪ್ರಣಿಧಾನ. ಅಂತರ ಬಹಿರ ಶುದ್ಧಿಯೇ ಶೌಚ. ಎಂಥಾ ಸ್ಥಿತಿಯಲ್ಲಿದ್ದರೂ ತಾಳ್ಮೆಯಿಂದ ಸಮಾಧಾನದಿಂದಿರುವದೇ ಸಂತೋಷ, ಕರ್ಮ ಮತ್ತು ಜ್ಞಾನೇಂದ್ರಿಯಗಳ ನಿಯಮನವೇ ತಪ. ಜಪ ಮತ್ತು ಪಾರಮಾರ್ಥಿಕ ಗ್ರಂಥಗಳನ್ನು ಅಧ್ಯಯನ (ಪಠಣ) ಮಾಡುವದೇ ಸ್ವಾಧ್ಯಾಯ. ಸರ್ವ ಕರ್ಮಫಲಗಳನ್ನು ಈಶ್ವರಾರ್ಪಣೆ ಮಾಡುವದೇ ಈಶ್ವರಪ್ರಣಿಧಾನ. ಈ ಕಡೇದು ಭಕ್ತಿಯೋಗದ ಮುಖ್ಯಾಂಗವಾದದ್ದು.

**ಆಸನ**— ಯಾವದಾದರೊಂದು ರೀತಿಯಿಂದ ಸುಖವಾಗಿ ಬಹಳ ಹೊತ್ತು ತನಕ ಅಚಲಿತನಾಗಿರುವದೇ ಆಸನ, ಒಂದು ತಾಸಿನಿಂದ ಮೂರು ತಾಸುಗಳವರೆಗೆ ಅಚಲಿತನಾಗಿ ಒಂದೇ ಪ್ರಕಾರದ ಆಸನದಲ್ಲಿ ಕುಳಿತರೆ ಆಸನ ಸಿದ್ಧವಾಯಿತು.

**ಪ್ರಾಣಾಯಾಮ**— ಪ್ರಾಣಾಯಾಮದ ಪೂರಕ, ಕುಂಭಕ, ರೇಚಕ ಈ ಮೂರು ಭಾಗಗಳಿವೆ. ಪೂರ್ಣ ಶ್ವಾಸವನ್ನು ಒಳಗೆ ತಕ್ಕೊಳ್ಳುವದೇ ಪೂರಕ. ಎಷ್ಟು ಹೊತ್ತು ಶ್ವಾಸ ತಕ್ಕೊಂಡಿತ್ತೊ ಅದರ ನಾಲ್ಕುಪಟ್ಟು ವೇಳೆತನಕ ಅದನ್ನು

ಒಳಗೆ ಬಿಗಿದು ಹಿಡಿದಿರುವದೇ ಕುಂಭಕ. ಒಳಗೆ ತಕ್ಕೊಂಡವೇಳೆಯು ಎರಡು ಪಟ್ಟು ವೇಳೆತನಕ ಅದನ್ನು ಸಮಾನವಾಗಿ ಹೊರಗೆ ಬಿಡುವದೇ ರೇಚಕ. ಕುಂಭಕವು ಅಂತಃಕುಂಭಕ ವ ಬಹಿಃಕುಂಭಕವೆಂತ ಎರಡು ಪ್ರಕಾರ. ಮೇಲೆ ಹೇಳಿದ್ದೇ ಅಂತಃಕುಂಭಕವು. ರೇಚಕದ ನಂತರ ಹೊರಗೆ ಕೆಲವು ಹೊತ್ತು ನಿಲ್ಲಿಸುವದೇ ಬಹಿಃಕುಂಭಕ. ಈ ಪ್ರಾಣಾಯಾಮದ ಮಹತ್ವವು ಹಠಯೋಗದಲ್ಲಿಯೇ ಇದ್ದು, ಅದನ್ನು ಗುರುಸಾನಿಧ್ಯವಿನಹಾ ಆಚರಿಸಲಾಗದು.

**ಪ್ರತ್ಯಾಹಾರ**— ಮನಸ್ಸನ್ನು ಇಂದ್ರಿಯದ್ವಾರಾ ವಿಷಯ ವ್ಯವಹಾರವನ್ನು ಮಾಡುವದನ್ನು ಬಿಡಿಸಿ ತನ್ನ ಸ್ವರೂಪದ ಕಡೆ ತಿರಿಗಿಸುವದೇ ಪ್ರತ್ಯಾಹಾರ.

**ಧಾರಣೆ**— ಯಾವದಾದರೂ ದೇವತೆಯ ಆಕೃತಿ ಅಥವಾ ಮಂತ್ರಾಕ್ಷರಗಳನ್ನು ತನ್ನ ಮನಸ್ಸಿನ ಮುಂದೆ ನಿಲ್ಲಿಸಿ, ಅವುಗಳ ಮೇಲೆ ಮನಸ್ಸನ್ನು ಚಂಚಲವಾಗದಂತೆ ಪ್ರಯತ್ನ ಪೂರ್ವಕ ಹಿಡಿಯುವದೇ ಧಾರಣೆ, ಶರೀರದೊಳಗಿನ ಷಡ್ಚಕ್ರಗಳಲ್ಲಿ ಗುರೂಪದೇಶಕ್ಕನುಸರಿಸಿ ಮನಸ್ಸನ್ನು ನಿಲ್ಲಿಸುವದೂ ಧಾರಣೆ ಎನಿಸಲ್ಪಡುತ್ತದೆ.

**ಧ್ಯಾನ**— ಪ್ರತ್ಯಾಹಾರದ ಅಭ್ಯಾಸದಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಮನಸ್ಸಿನೊಳಗೆ ಯಾವದೊಂದು ಕಲ್ಪನೆಯನ್ನು ಬರಗೊಡದೆ, ಯಾವದಾದರೂ ಒಂದು ವಸ್ತುವಿನ ಮೇಲೆ ಅದನ್ನು ಧಾರಣೆ ಮಾಡಿ, ಅಲ್ಲಿಂದ ತಪ್ಪಿದ ಹಾಗಲ್ಲಾ ಪುನಃ ಪುನಃ ಹಚ್ಚುವದು. ಮತ್ತು ನಿರಂತರವಾಗಿ ಅದರಲ್ಲಿ ನಿಲ್ಲಿಸುವದೇ ಧ್ಯಾನವು. ಈ ಧ್ಯಾನದಲ್ಲಿಯಾದರೂ, ಧ್ಯಾತೃ ಧ್ಯೇಯ[೧]ವೆಂಬ ದ್ವೈತ ಭಾವವಿರುವದು.

**ಸಮಾಧಿ**— ಮೇಲೆ ಹೇಳಿದ ಪ್ರಕಾರ ಧ್ಯಾತೃ ಧ್ಯೇಯ ಯುಕ್ತವಾದ ಧ್ಯಾನವನ್ನು ತೀವ್ರವಾಗಿ ಮಾಡುತ್ತಿರುವಾಗ, ಧ್ಯಾತೃ ಧ್ಯೇಯದೊಳಗಿನ ದ್ವೈತ ಭಾವವು ಅಳಿದುಹೋಗಿ, ಧ್ಯಾತೃವು ಸ್ವಸಂವೇದ್ಯ (ತನ್ನನ್ನೆ ತಾನು ತಿಳಕೊಳ್ಳುವ) ರೂಪನಾಗಿ, ಅಂದರೆ ಧ್ಯಾನದಲ್ಲಿ ಧ್ಯೇಯವನ್ನು ತಿಳಿಯುತ್ತಿರುವದನ್ನು ಬಿಟ್ಟು ಅದು ಇಲ್ಲದಾಗಿ ತನ್ನನ್ನು ಮಾತ್ರ ತಾನು ತಿಳಿಯುತ್ತೇನೆಂದು ಅನುಭವಕ್ಕೆ ಬರುವದೇ ಸಮಾಧಿಯು, ಇದು ಪೂರ್ಣ ಅಂದರೆ ನಿರ್ವಿಕಲ್ಪ ಸಮಾಧಿಯು. ಯಾಕಂದರೆ ಇದರಲ್ಲಿ ಧ್ಯಾತೃ, ಧ್ಯೇಯ, ಧ್ಯಾನವೆಂಬ ತ್ರಿಪುಟಿಯು ಲಯವಾಗಿ ಏಕಾವಸ್ಥೆಯೇ ಗೋಚರವಾಗುವದು. ಇದಕ್ಕೆ ಪರಮಸಂವಿತ್ ಅಥವಾ ಶುದ್ಧ ಚೈತನ್ಯಾವಸ್ಥೆ ಅನ್ನುತ್ತಾರೆ. ಸಮಾಧಿಯು ಸವಿಕಲ್ಪ ನಿರ್ವಿಕಲ್ಪವೆಂತ ಎರಡು ಪ್ರಕಾರ. ಸವಿಕಲ್ಪ ಸಮಾಧಿಯಲ್ಲಿ ಧ್ಯಾತನು ತನ್ನನ್ನುಸಹಾ ಮರೆ

---

[೧] ಧ್ಯಾತೃವೆಂದರೆ ಧ್ಯಾನ ಮಾಡುವವನು, ಧ್ಯೇಯವೆಂದರೆ ಧ್ಯಾನವಿಷಯವಸ್ತು.

ಹಂತೆ ಆಗಿ ಬರೇ ಧ್ಯೇಯವನ್ನೇ ನಿರೀಕ್ಷಿಸುತ್ತಿರುವನು, ಅಂದರೆ ಧ್ಯೇಯಾಕಾರನಾಗುವನು. ನಿರ್ವಿಕಲ್ಪ ಸಮಾಧಿಯಲ್ಲಿ ಮೇಲೆ ಹೇಳಿದಂತೆ ಧ್ಯಾತಾ, ಧ್ಯೇಯ, ಧ್ಯಾನನೆಂಬ ತ್ರಿಪುಟಿ ಅಳಿದುಹೋಗಿ, ಧ್ಯಾತನು ತಿಳಿಯತಕ್ಕ ವಿಷಯವಿಲ್ಲದೆ 'ತಾನು ಮಾತ್ರ ಇದ್ದೇನೆ' ಎಂಬ ಭಾವದಿಂದ ಉಳಿಯುವನು. ಯೋಗಶಾಸ್ತ್ರದಲ್ಲಿ ಸವಿಕಲ್ಪ ಸಮಾಧಿಯ ಮೂರು ಭೂಮಿಕೆಗಳು ವರ್ಣಿಸಲ್ಪಟ್ಟಿವೆ. ಅವುಗಳ ವಿಷಯ ಇಲ್ಲಿ ಹೇಳುವದು ಅವಶ್ಯವಿಲ್ಲವಿದ್ದರೂ ಸಾಧಕನು ಅನುಭವಿಸಿದ ಬೇರೆಬೇರೆ ಭೂಮಿಕೆಗಳನ್ನು ಶಾಸ್ತ್ರದೃಷ್ಟಿಯಿಂದ ವರ್ಣಿಸುವದು ಉಪಯುಕ್ತವಾದೀತೆಂತ ಮುಂದೆ ವಿವರಿಸಿದೆ. ಋತಂಭರಿ, ಪ್ರಜ್ಞಾಲಿಕಾ, ಪ್ರಶಾಂತವಾಹಿನಿ ಇವೇ ಆ ಮೂರು ಭೂಮಿಕೆಗಳು. ಪ್ರಥಮ ಭೂಮಿಕೆಯಲ್ಲಿ ಆನಂದಾನುಭವ ಬರುತ್ತಿದ್ದು, ಅಲ್ಲಿ ದೃಷ್ಟಾ ಧ್ಯಾನವಿಷಯಗಳಿಂದ ತಾನು ಪ್ರತ್ಯೇಕ ಇದ್ದೇನೆಂದು ತಿಳಿಯುತ್ತಾನೆ. ಎರಡನೇದರಲ್ಲಿ ಅಜ್ಞಾನದ ಸರ್ವ ಆವರಣಗಳು ನಷ್ಟವಾಗಿ ಬ್ರಹ್ಮಜ್ಞಾನದ ಸಾಕ್ಷಾತ್ಕಾರವಾಗುತ್ತದೆ. ಮತ್ತು ಮೂರನೇದರಲ್ಲಿ ಸರ್ವ ವಿಕ್ಷೇಪಗಳು ನಷ್ಟವಾಗಿ ತಾನು ಬ್ರಹ್ಮ ಇದ್ದೇನೆ ಎಂತ ಅನುಭವ ಬರುವದು.

ಮೇಲೆ ವರ್ಣಿಸಿದ ಧಾರಣೆ, ಧ್ಯಾನ ವ ಸವಿಕಲ್ಪ ಸಮಾಧಿ, ಈ ಮೂರಕ್ಕೂ ಕೂಡಿ ಸಂಯಮವೆಂದು ಒಂದೇ ಹೆಸರಿರುವದು. ಸಮಾಧಿಯ ಮಾರ್ಗದಲ್ಲಿ ನಡೆಯುತ್ತಿರುವಾಗ ಮನಸ್ಸು ಪೂರ್ಣ ಏಕಾಗ್ರವಾಗುವ ತನಕ ಈ ಮೂರು ಭೂಮಿಕೆಗಳಿರುವವು. ಸಮಾಧಿಯೇ ಸಂಯಮದ ಪೂರ್ಣಾವಸ್ಥೆ.

ಯೋಗದ ಎಂಟು ಸಾಧನಗಳಪೈಕಿ ಪ್ರಥಮ ಮೂರು ಅಂದರೆ ಯಮ, ನಿಯಮ, ಆಸನ ಇವುಗಳಿಂದ ಸ್ಥೂಲಶರೀರವನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದು. ಅನಂತರ ಪ್ರಾಣಾಯಾಮದಿಂದ ಶ್ವಾಸವನ್ನು ಜಯಿಸಬೇಕು. ಕಡೆಯ ನಾಲ್ಕು ಸಾಧನಗಳಿಂದ ಇಂದ್ರಿಯ ವ ಮನಸ್ಸು ಇವುಗಳ ಜಯವನ್ನು ಸಾಧಿಸಬೇಕಾಗಿರುವದು. ಧಾರಣಾ, ಧ್ಯಾನ, ಸಮಾಧಿ ಇವುಗಳಿಗೆ ಹಿಂದಿನ ಅಂಗಗಳ ಅನುಕೂಲತೆಯಾಯಿತೆಂದರೆ, ಮನಸ್ಸು ತಾನೇ ನಿಷ್ಕ್ರಿಯವಾಗುವದು, ಮತ್ತು ಬುದ್ಧಿಯು ಮಾತ್ರ ಕಾರ್ಯ ಮಾಡುತ್ತಿರುವದು. ಸತತ ಅಭ್ಯಾಸದಿಂದ ಕೆಲವು ಕಾಲದ ನಂತರ ತಾನು ತನ್ನ ದೇಹಸಹಿತವಾಗಿರುವ ಜಗತ್ತಿನಿಂದ ಪ್ರತ್ಯೇಕನಿದ್ದೇನೆಂದು ತಿಳಿಯುತ್ತದೆ. ಕಡೆಗೆ ಬುದ್ಧಿಯು ಲೀನವಾಗಿ ಆತ್ಮಸಾಕ್ಷಾತ್ಕಾರವಾಗುವದು. ಈ ಸ್ಥಿತಿಯಲ್ಲಿ ಸರ್ವ ಅಜ್ಞಾನವು ನಷ್ಟವಾಗಿ ಜೀವಾತ್ಮನು ಪೂರ್ಣಜ್ಞಾನಿಯಾಗುವನು. ಅಂದರೆ ಪರಮಾತ್ಮ ಅಥವಾ ಪರಬ್ರಹ್ಮದಲ್ಲಿ ಸಂಪೂರ್ಣ ಲೀನನಾಗುವನು; ಅಂದರೆ ತಾನು ನಿತ್ಯಪರಬ್ರಹ್ಮವೇ ಇದ್ದೇನೆ ಎಂದು ತಿಳಿಯುತ್ತಿರುವನು.

ನಾಥಸಾಂಪ್ರದಾಯದೊಳಗಿನ ಪ್ರಸಿದ್ಧ ನವನಾಥರು ಸರ್ವ ವಿದ್ಯೆಗಳಲ್ಲಿ ಪ್ರವೀಣರಾಗಿದ್ದರು. ಅವರು ಬರೇ ಬ್ರಹ್ಮವಿದ್ಯೆಯಲ್ಲಿ ಮಾತ್ರ ಪ್ರವೀಣರಿದ್ದರೆಂತಲ್ಲ, ವೇದವಿದ್ಯಾ, ಅಸ್ತ್ರವಿದ್ಯಾ, ಶಾಸ್ತ್ರವಿದ್ಯಾ, ಜ್ಯೋತಿಷ, ಮಂತ್ರವಿದ್ಯಾ,

ತಂತ್ರಶಾಸ್ತ್ರ, ಕಿಮಿಯಾ, ಆಯುರ್ವೇದ ಇತ್ಯಾದಿಸಹ ಅವರಿಗೆ ಪೂರ್ಣ ಅವಗತವಾಗಿದ್ದವು. ಮೇಲೆ ಹೇಳಿದ ಮಂತ್ರಯೋಗ, ಲಯಯೋಗ, ಹಠಯೋಗ ಮತ್ತು ರಾಜಯೋಗ ಈ ನಾಲ್ಕು ಯೋಗಗಳನ್ನು ಅವರು ತಿಳಿದವರಿದ್ದರು. ಮತ್ತು ಅವರು ಶ್ರೀನಾರಾಯಣರ ಅವತಾರಗಳೆಂಬದರಿಂದ ಸರ್ವ ಕಲೆಗಳೂ ಸರ್ವ ಶಾಸ್ತ್ರಗಳೂ ಅವರಲ್ಲಿ ವಾಸವಾಡಿದ್ದವು. ಅವರ ಮಾನಸಿಕಶಕ್ತಿಯು ವಿಲಕ್ಷಣವಾಗಿತ್ತು ಮತ್ತು ಅವರ ಸ್ಮರಣಶಕ್ತಿಯಾದರೂ ಅತ್ಯಂತ ಆಶ್ಚರ್ಯಜನಕವಾಗಿತ್ತು. ತಮ್ಮ ವಿಲಕ್ಷಣವಾದ ಮಾನಸಿಕ ಶಕ್ತಿಯಿಂದ ಅವರು ಸಕಲ ಶಾಸ್ತ್ರಾಭ್ಯಾಸಗಳನ್ನು ಹನ್ನೆರಡು ವರ್ಷಗಳಲ್ಲಿ ಮುಗಿಸಿಬಿಟ್ಟಿದ್ದರು. ಅನಂತರ ಹನ್ನೆರಡು ವರ್ಷಗಳವರೆಗೆ ಇವರು ಬರೇ ವಾಯುಭಕ್ಷಣ ಮಾಡುತ್ತ ತಪಸ್ಸು ಮಾಡಿದರು. ಅವರ ತಪಃಸಾಮರ್ಥ್ಯದಿಂದ ಅವರ ಪೂರ್ವದ ಅಭ್ಯಾಸವು ಪರಿಪಕ್ವತೆಯನ್ನು ಹೊಂದಿತು. ಮತ್ತು ಸರ್ವ ಶಾಸ್ತ್ರದೇವತೆಗಳಾದರೂ ಅವರ ಮೇಲೆ ಸಂಪೂರ್ಣ ಅನುಗ್ರಹ ಮಾಡಿದರು. ಅವರು ಲೋಕಪ್ರಸಿದ್ಧಿಯನ್ನು ಹೊಂದಿದ ಬಳಿಕ ಪ್ರತಿ ಸ್ಥಳದಲ್ಲಿ ಅವರು ದೇವರಂತೆ ಪೂಜನೀಯರಾದರು. ಈಗಿನ ಪತಿತ ಕಾಲದಲ್ಲಾದರೂ ಸರ್ವತ್ರ ಪರಿಪೂರ್ಣರಾಗಿದ್ದ ಗುಲಾಬರಾವ ಮಹಾರಾಜರಂಥವರು ಆಗಾಗ್ಗೆ ಪ್ರಕಾಶಿಸುತ್ತಾರೆ. ಮತ್ತು ಅವರ ದೊಡ್ಡಸ್ತಿಕೆಯ ತೇಜವು ಇಷ್ಟು ಪ್ರಭಾವಿಯಾಗಿತ್ತಲ್ಲ, ಎಲ್ಲಾ ಜನರು ಅವರನ್ನು ಸ್ತುತಿಸಲಿಕ್ಕೆ ಬೇಕಾಗಿರುತ್ತದೆ. ಆದ್ದರಿಂದ ಸಾವಿರಾರು ವರ್ಷಗಳ ಹಿಂದಿನಕಾಲದಲ್ಲಿ ಪ್ರತ್ಯಕ್ಷನಾರಾಯಣಾವತಾರವೆಂತ ಪ್ರಸಿದ್ಧರಾಗಿದ್ದ ನವನಾಥರಲ್ಲಿ ಸರ್ವ ವಿದ್ಯೆಗಳು ವಾಸಮಾಡುತ್ತಿದ್ದವೆಂಬದರಲ್ಲಿ ಆಶ್ಚರ್ಯವೇನೂ ಇಲ್ಲ. ನವನಾಥ ಸಾಂಪ್ರದಾಯದ ಅನುಯಾಯಿಗಳ ಪೈಕಿ ಎಂಭತ್ತನಾಲ್ಕುಮಂದಿ ಸಿದ್ಧರು ಯೋಗದ ಪರಿಪೂರ್ಣ ಅವಸ್ಥೆಗೆ ಮುಟ್ಟಿದ್ದರು. ಈ ಪಂಥದೊಳಗಿನ ಪ್ರತಿಯೊಬ್ಬ ಯೋಗಿಯು, ಸರ್ವಯೋಗಗಳಲ್ಲಿ ಅತ್ಯಂತ ಮಹತ್ವವಾದ ರಾಜಯೋಗ ಅಥವಾ ಜ್ಞಾನಯೋಗಗಳಲ್ಲಿ ಮಾತ್ರ ಪ್ರವೀಣರಾಗಿದ್ದರೆಂಬಂತಿಲ್ಲ; ಅವರು ಇತರ ಯೋಗಗಳದ್ದಾದರೂ ಹೆಚ್ಚುಕಡಿಮೆ ತಿಳುವಳಿಕೆಯುಳ್ಳವರಾಗಿದ್ದರು. ಶ್ರೀಗಜಾನನ ಮಹಾರಾಜರ ಶಿಷ್ಯರಿಗೆ ಅಥವಾ ಇತರ ಮುಮುಕ್ಷು ಜನರಿಗೆ, ಆ ನಾಲ್ಕು ಪ್ರಕಾರದ ಯೋಗಗಳ ಸಂಬಂಧ ಪರಿಚಯವಿರಬೇಕೆಂಬ ಉದ್ದಿಶ್ಯದಿಂದ ಅವುಗಳನ್ನು ಸಂಕ್ಷೇಪವಾಗಿ ಈ ಕೆಳಗೆ ವಿವರಿಸಿರುತ್ತೇವೆ.

ಮಂತ್ರಯೋಗ—ಅಭ್ಯಾಸಬಲದಿಂದ ಜಗತ್ತಿನೊಳಗಿನ ನಾಮರೂಪಾತ್ಮಕ ಸರ್ವ ವಸ್ತುಗಳನ್ನು ಮನಸ್ಸಿನ ಸ್ವಾಧೀನದಲ್ಲಿ (ಜ್ಞಾಪಕತ್ವದಲ್ಲಿ) ತಂದುಕೊಳ್ಳುವದೇ ಈ ಯೋಗದ ಉದ್ದಿಶ್ಯವು. ಜಗತ್ತಿನ ಸರ್ವ ವಸ್ತುಗಳನ್ನು ಶಬ್ದ, ಸ್ಪರ್ಶ, ರೂಪ,ರಸ,ಗಂಧ ಇವುಗಳ ಸಹಾಯದಿಂದ ಮನಸ್ಸು ಅರಿಯುತ್ತದೆ. ಮನಸ್ಸು ಏನೇನು ನೋಡುವದೋ ಅದರ ಕೂಡ ತತ್ಕಾಲ ಏಕರೂಪತ್ವವನ್ನು ಹೊಂದುತ್ತದೆ, ಮತ್ತು ಪೂರ್ವವಾಸನಾನುಸಾರ ಅದು ಇಂಥಾದ್ದೆ ವಸ್ತುವೆಂತ

ಬುದ್ಧಿಯು ನಿಶ್ಚಯಿಸುತ್ತದೆ. ಮನಸ್ಸು ಈ ಪ್ರಕಾರ ಜಗದ್ವಸ್ತುಗಳಲ್ಲಿ ತದಾಕಾರ ಹೊಂದುವದಕ್ಕೆ ಮನೋವೃತ್ತಿ ಅನ್ನುತ್ತಾರೆ.

ಮಾನಸಿಕ ವಿಚಾರ ವ ಕಲ್ಪನಾ ಅಂದರೆ ಸಂಕಲ್ಪ ವಿಕಲ್ಪಗಳು. ಇವುಗಳ ಹೊರ್ತು ಮನಸ್ಸು ಕ್ಷಣಮಾತ್ರವಾದರೂ ಜಾಗೃತ್ ಸ್ವಪ್ನಾವಸ್ಥೆಗಳಲ್ಲಿ ಸುಮ್ಮನೆ ಇರಲಾರದು. ಯಾವಾಗ್ಗೆ ಯಾವದೊಂದು ಕರ್ಮವು ಮಾಡಲ್ಪಡುವದೋ, ಆಗ ಅದು ಶ್ರೇಷ್ಠವೋ ಕನಿಷ್ಠವೋ ಒಳ್ಳೇದೊ ಕೆಟ್ಟದ್ದೊ ಎಂಬದು ಆ ಕರ್ಮವನ್ನು ಪ್ರೇರೇಪಿಸಿದ ಆಗಿನ ಮನೋವೃತ್ತಿಯ ಮೇಲಿಂದ ನಿರ್ಣಯಿಸಬೇಕಾಗುತ್ತದೆ. ಪ್ರೇರೇಪಿಸುವ ಮನೋವೃತ್ತಿಯ ಮೇಲಿಂದ ಶುದ್ಧಕಾರ್ಯವಾದರೂ ಅಶುದ್ಧ ಪರಿಣಾಮ ಕೊಡುವದುಂಟು. ಅಬದ್ಧ ಕಾರ್ಯವಾದರೂ ಶುದ್ಧವಾಗಿ ಪರಿಣಮಿಸುವದೂ ಉಂಟು. ಅದು ಹ್ಯಾಗೆಂದರೆ— ಇಂದ್ರಜಿತುವು ಮಾಡಿದ ಯಜ್ಞವು ದೇವತಾಪ್ರಿತ್ಯರ್ಥ ಮಾಡಿದ್ದಾದರೂ, ಆತನು ಮತ್ತೊಬ್ಬರಿಗೆ ಕೇಡು ಬಗೆದು ಮಾಡಿದ್ದರಿಂದ ಕೆಟ್ಟ ಪರಿಣಾಮವಾಯಿತು. ಆದರೆ ದುರ್ವಾಸ ಋಷಿಗಳು ಅಂಬರಿಷನಿಗೆ ಹತ್ತು ಜನ್ಮಗಳು ಬರಲಿ ಎಂದು ಶಪಿಸಿದ್ದರೂ ಲೋಕೋದ್ಧಾರಾರ್ಥವಾಗಿ ವಿಷ್ಣುವೇ ಅವನಿಗೋಸ್ಕರ ಹತ್ತು ಅವತಾರಗಳನ್ನು ತಾಳಿದ್ದರಿಂದ ಉತ್ತಮವಾದ ಪರಿಣಾಮವಾಯಿತು. ಯಾಕೆಂದರೆ ಸಾಕ್ಷಾತ್ ಮಹಾದೇವನ ಅವತಾರವಾದ ದುರ್ವಾಸರು ಈ ಉತ್ಕೃಷ್ಟವಾದ ಲೋಕಹಿತಕ್ಕಾಗಿಯೇ ಶಾಪ ಕೊಟ್ಟಿದ್ದರು. ಆದ್ದರಿಂದ ಯಾವದೊಂದು ಕಾರ್ಯಮಾಡುತ್ತಿರುವಾಗ ಅದರ ಫಲಸಂಬಂಧ ತನ್ನ ವಿಚಾರಗಳು ಶುದ್ಧವಿರಬೇಕು. ಭೂಮಿಗೆ ಬಿದ್ದ ಮನುಷ್ಯನನ್ನು ಎಬ್ಬಿಸುವದಕ್ಕೆ ಹ್ಯಾಗೆ ಭೂಮಿಯ ಆಧಾರವನ್ನೆ ತಕ್ಕೊಳ್ಳಬೇಕಾಗುತ್ತದೊ, ಹಾಗೆಯೇ ಶರೀರಬದ್ಧ ಜೀವಾತ್ಮನಿಗೆ ಬಂಧಮುಕ್ತ ಮಾಡಲಿಕ್ಕೆ ಶರೀರದ್ದೇ ಆಧಾರ ತಕ್ಕೊಳ್ಳಬೇಕಾಗುತ್ತದೆ, ನಾಮರೂಪಗಳ ಯೋಗದಿಂದ ಮನಸ್ಸು ಚಂಚಲವಾಗುತ್ತದೆ. ಆದರೂ ಅದನ್ನು ಸ್ಥಿರಮಾಡಲಿಕ್ಕೆ ಒಂದು ವಿಶಿಷ್ಟ ರೀತಿಯಿಂದ ನಾಮರೂಪಗಳ ಉಪಯೋಗಮಾಡಿಕೊಳ್ಳಬೇಕಾಗುತ್ತದೆ

ಮಂತ್ರಯೋಗದಲ್ಲಿ ನಾಮ ವ ರೂಪಯುಕ್ತವಾದ ಯಾವದಾದರೊಂದು ಆಕೃತಿಯ ಮೇಲೆ ಅಥವಾ ವಸ್ತುವಿನ ಮೇಲೆ ಧ್ಯಾನ ಮಾಡಲಿಕ್ಕೆ ಹೇಳುತ್ತಾರೆ. ಯಾವದರಿಂದ ಶುದ್ಧ ವಿಚಾರಗಳು ಉತ್ಪನ್ನವಾದಾವೋ ಅಂಥಾದ್ದೇ ವಸ್ತು ಇರತಕ್ಕದ್ದು; ಅಂದರೆ ಯಾವದಾದರೂ ಒಂದು ದೇವತಾ ಮೂರ್ತಿ. ಇದಕ್ಕೆ ಸಗುಣಧ್ಯಾನವೆನ್ನುತ್ತಾರೆ. ಈ ಧ್ಯಾನ ಮಾಡುತ್ತಿರುವಾಗ್ಯಾದರೂ ಅಷ್ಟಾಂಗಯೋಗದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಮತ್ತು ಧಾರಣೆ ಈ ಸಾಧನಗಳ ಸಹಾಯ ಬೇಕೇಬೇಕು. ಆ ದೇವತಾ ಮೂರ್ತಿಯ ಬಾಹ್ಯೋಪಚಾರ ಪೂಜೆಯಾದರೂ ನಿತ್ಯದಲ್ಲಿ ಮಾಡತಕ್ಕದ್ದು. ಧ್ಯಾನಕ್ಕೆ ವ ಪೂಜೆಗೆ ಮೂರ್ತಿ, ಲಿಂಗ, ಶಾಲಿಗ್ರಾಮ, ರೇಖಾಚಿತ್ರ ಅಥವಾ

ರೇಖಾಯಂತ್ರ ಇವುಗಳ ಪೈಕಿ ಯಾವದಾದರೊಂದು ಇಡಬೇಕಾಗುತ್ತದೆ. ಮೂರ್ತಿಯ ಧ್ಯಾನ ಅಥವಾ ಪೂಜನ ಮಾಡುತ್ತಿರುವಾಗ ಸಾಧಕನು ಮಂತ್ರ ವನ್ನು ಜಪಿಸಬೇಕಾಗುತ್ತದೆ. ಕೆಲವು ಕಾಲದ ನಂತರ ಈ ಎಲ್ಲ ಸಾಧನೆಗಳು ಸಮಾಧಿ ಸಿದ್ಧಿಸಲಿಕ್ಕೆ ಸಾಧನೀಭೂತವಾಗುತ್ತವೆ. ಇದರಿಂದ ಆಗುವ ಸಮಾಧಿಗೆ ಭಾವಸಮಾಧಿಯೆನ್ನುತ್ತಾರೆ. ಯಾಕಂದರೆ ಇದರಲ್ಲಿ ದೇವತಾ ಭಾವನೆಯೇ ಮುಖ್ಯವಿದ್ದು, ಅದು ಕಾಲಾಂತರದಲ್ಲಿ ಅಭ್ಯಾಸಬಲದಿಂದ ಇಷ್ಟು ದೃಢವಾಗುವ ದಲ್ಲ, ಪ್ರತ್ಯಕ್ಷ ದೇವತೆಯೇ ತನ್ನ ಮುಂದೆ ಬಂದು ನಿಂತಂತೆ ಕಾಣಿಸುವದು. ಇದಕ್ಕೆ ದೇವತಾಸಾಕ್ಷಾತ್ಕಾರವೆನ್ನುತ್ತಾರೆ. ಇದು ಸವಿಕಲ್ಪ ಸಮಾಧಿಯಲ್ಲಿಯೆ ಆಗುವದರಿಂದ ಭಾವಸಮಾಧಿಯೆನ್ನುವರು. ಇತರ ಮೂರು ಯೋಗಗಳಿಗಿಂತ ಇದು ಸ್ವಲ್ಪ ಸುಲಭವಾಗಿದ್ದರೂ, ಈ ಯೋಗದಲ್ಲಿ ಬೇರೆ ಬೇರೆ ಪೂಜಾ ವಿಧಿ ವಿಧಾನ ಇವುಗಳ ಕಡೆಗೆ ಪ್ರಥಮದಲ್ಲಿ ಲಕ್ಷಕೊಡಬೇಕಾಗುತ್ತದೆ. ಮೂರ್ತಿಯು ಅಥವಾ ಮಂತ್ರವು ಒಮ್ಮೆ ಮನಸ್ಸಿನಲ್ಲಿ ದೃಢವಾಗಿ ನಿಂತಿತೆಂದರೆ, ಆ ಮೇಲೆ ಮಾನಸಿಕ ಕ್ರಿಯೆಗಳಿಂದಲೇ ಉಪಾಸನೆ ಮಾಡುವದು ಸಾರ್ಥಕವಾಗುತ್ತದೆ. ಇದ ರಿಂದ ಮೂರ್ತಿದೇವತಾ ಅಥವಾ ಮಂತ್ರದೇವತಾ ಸಾಕ್ಷಾತ್ಕಾರವಾಗುವದು ಇಷ್ಟೇ ಅಲ್ಲ, ಮುಂದೆ ಆ ದೇವತೆಗಳ ಮೇಲೆ ಮನಸ್ಸು ಹ್ಯಾಗೆ ಏಕಾಗ್ರವಾಗುತ್ತ ನಡಿಯುವದೊ, ಹಾಗೆ ಅವು ತಮ್ಮ ಸಗುಣರೂಪಗಳನ್ನು ಬಿಟ್ಟು ಸಾಧಕನಲ್ಲಿ ( ಆತನ ನಿರ್ಗುಣರೂಪದಲ್ಲಿ) ಐಕ್ಯತ್ವವನ್ನು ಹೊಂದಿ ಅವನಿಗೆ ಆತ್ಮಸಾಕ್ಷಾತ್ಕಾರ ಅಥವಾ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಡುವವು. ಈ ಅನುಭವವು ನಿರ್ವಿಕಲ್ಪ ಸಮಾಧಿಯಲ್ಲಿ ಆಗಿ, ಸಾಧಕನು ಅದ್ವೈತಾನುಭವವನ್ನು ಪಡೆಯುವನು, ಈ ಅನುಭವವೇ ಮುಕ್ತಿಗೆ ಸಾಧನವಾಗಿರುತ್ತದೆ. ಯಾಕಂದರೆ ಇಷ್ಟುಕಾಲ ಸಗುಣ ಮೂರ್ತಿ ಉಪಾಸನೆ ಮಾಡಿದ ಸಾಧಕನಿಗೆ ಇನ್ನು ಮುಂದೆ ನಿರ್ಗುಣ ಆತ್ಮೋ ಪಾಸನೆಯನ್ನು ಮಾಡುವ ವಿಧಿಯು ಜ್ಞಾನವಾಗಿ ಅವನು ಇದರ ಹೊರತು ಮತ್ತೊಂದು ಉಪಾಸನೆಯನ್ನು ಮಾಡಲಾರನು. ಈ ನಿರ್ಗುಣ ಆತ್ಮೋಪಾಸನೆ ಯಲ್ಲಿ ಅದ್ವೈತ ಭಾವವೇ ಇರುವದರಿಂದ ಸಾಧಕನು ಅದನ್ನೆ ಆಶ್ರಯಿಸುವನು. ಈ ಆತ್ಮೋಪಾಸನೆಯ ರೀತಿಯು ಐಕ್ಯಜ್ಞಾನವಿಲ್ಲದವನಿಗೆ ಕಲ್ಪನೆಗೆ ಸಹ ಬರ ಲಾರದು. ಸಾಧಕನು ಅದ್ವೈತಭಾವ ಹೊಂದಿದರಿಂದ ಜಗತ್ತು ಮತ್ತು ಅದರೊ ಳಗಿನ ಸರ್ವ ವಸ್ತುಗಳು ತಾನೇ ಆಗಿರುವೆನೆಂದು ತಿಳಿಯುವದೇ ಆತನ ಉಪಾ ಸನೆಯು. ಇದು ತದಾಕಾರ ವೃತ್ತಿಜ್ಞಾನದಿಂದ ತಿಳಿಯಲಿಕ್ಕೆಬೇಕು ಹೊರತು ಸೋಽಹಂ ಇತ್ಯಾದಿ ಬಾಹ್ಯ ಶಬ್ದ ಮಾತ್ರಗಳಿಂದ ತಿಳಿಯಲಾಗದು. ಬ್ರಹ್ಮವೇ ಜಗತ್ತು ಎಂಬ ಉಪನಿಷದ್ವಾಕ್ಯವು ಸತ್ಯವಾಗಿದ್ದರೆ, ಮತ್ತು ' ಬ್ರಹ್ಮವಿತ್ ಬ್ರಹ್ಮೈವ ಭವತಿ' ಎಂಬದು ಖರೆಯಾದರೆ, ಈ ಬ್ರಹ್ಮಾತ್ಮೈಕ್ಯವನ್ನು ಪಡೆದ ಸಾಧಕನಿಗೂ, ಜಗತ್ತು ತಾನೇ ಅಂತ ಅನ್ನಿಸುತ್ತಿರಬೇಕು, ಹಾಗಿಲ್ಲದಿದ್ದರೆ ಬ್ರಹ್ಮೈಕ್ಯವು ಶಬ್ದಮಾತ್ರವಾಗುವದು. ಆದ್ದರಿಂದ ಐಕ್ಯಜ್ಞಾನ ಹೊಂದಿದವನು

ಯಾವ ಇಂದ್ರಿಯಗೋಚರ ಅಥವಾ ಮನೋಗೋಚರ ವಿಷಯವಿರುವದೋ ಅದೆಲ್ಲ ತಾನೇ ಆಗುವದೆಂತ ಪೂರ್ಣ ನಿಶ್ಚಯಾತ್ಮಕ ಬುದ್ಧಿಯಿಂದ ತಿಳಿಯುವದೇ ಆ ಸಾಧಕನ ಉಪಾಸನೆಯು. ಇಲ್ಲಿ ನಿಶ್ಚಯಾತ್ಮಕ ಎಂಬ ಶಬ್ದಕ್ಕೆ ಎಷ್ಟರ ಮಟ್ಟಿಗೆ ಆ ನಿಶ್ಚಯತ್ವದ ಸೀಮಾ ಅಂತ ಕೇಳಿದರೆ, ಸಾಮಾನ್ಯ ಮನುಷ್ಯನಿಗೆ ತಾನು ದೇಹವೆಂಬದೂ ತನ್ನ ಸುತ್ತಲೂ ಜಗತ್ತು ಎಂಬದೂ ಎಷ್ಟು ನಿಶ್ಚಯವಾಗಿದೆಯೋ ಅಷ್ಟೆ ಆತ್ಮ ( ಬ್ರಹ್ಮ ) ತಾನೆಂಬದೂ, ಮತ್ತು ಅದರ ಪರಿಣಾಮವಾಗಿ ಜಗತ್ತು ತಾನೇ ಆಗಿರುವನೆಂಬದೂ ನಿಶ್ಚಯವಿರಬೇಕು. ಇಷ್ಟಾದರೇ ಐಕ್ಯಜ್ಞಾನದ ಸಾಫಲ್ಯವಾಯಿತು. ಇದೇ ಜ್ಞಾನದ ಅಭ್ಯಾಸಬಲದಿಂದ, ಈಗ ಜಾಗೃತಿ ಅವಸ್ಥೆಯು ಎಷ್ಟು ಸಹಜಾವಸ್ಥೆ ಎನಿಸುವದೋ ಅಷ್ಟೇ ಮುಂದೆ ತುರ್ಯಾವಸ್ಥೆಯು ( ಏಕಮೇವಾದ್ವಿತೀಯಂ, ತಾನೊಬ್ಬನೆ ಎರಡನೇದಿಲ್ಲ ) ಇದು ಸಹಜಾವಸ್ಥೆಯಾಗುವದು. ಅವನು ಇತರ ದೇಹಗಳನ್ನೆಲ್ಲಾ ನೋಡುತ್ತಿದ್ದಂತೆ ತನ್ನ ಈ ದೇಹವನ್ನೂ ಅದರ ಕಾರ್ಯಗಳನ್ನೂ ನೋಡುತ್ತಾನೆ. ಹ್ಯಾಗೆ ಒಬ್ಬ ಮನುಷ್ಯನಿಗೆ ವ್ಯಗವೆಂತ ಕರೆದರೆ ಅವನಿಗೆ ವಿಪರೀತ ಕಾಣಿಸುವದೋ ಹಾಗೆಯೆ ಆ ತುರ್ಯಾವಸ್ಥೆಯನಿಗೆ ಮನುಷ್ಯನೆಂದರೆ ವಿಪರೀತ ಕಾಣಿಸುವದು. ಇದೇ ಮುಕ್ತಸ್ಥಿತಿ, ದೇಹವಿರಲಿ ಇಲ್ಲದಿರಲಿ ಇಲ್ಲಿ ' ಸೋಹಂ 'ದ ಪೂರ್ಣತೆಯಾಯಿತು.

ಹಠಯೋಗ— ಈ ಯೋಗದಲ್ಲಿ ಪ್ರಥಮ ಸ್ಥೂಲ ಶರೀರವನ್ನು ಸ್ವಾಧೀನಪಡಿಸಿಕೊಳ್ಳುವ ಯತ್ನಗಳನ್ನು ಮಾಡಬೇಕಾಗುತ್ತದೆ. ಆದರೆ ಸ್ಥೂಲ ಶರೀರವು ಸೂಕ್ಷ್ಮ ಶರೀರಕ್ಕೆ ಸಂಬಂಧಿಸುವದರಿಂದ ಸ್ಥೂಲ ಶರೀರದ ಜಯದಿಂದ ಸೂಕ್ಷ್ಮಶರೀರವಾದರೂ ಕೆಲವುಮಟ್ಟಿಗೆ ಸ್ವಾಧೀನಕ್ಕೆ ಬರುವದು. ಇದರಿಂದ ಮನೋವೃತ್ತಿ ಮತ್ತು ವಾಸನೆಗಳು ಕೈವಶವಾಗುವವು. ಕರ್ಮಫಲ ಭೋಗಕ್ಕೆ ಸ್ಥೂಲ ಶರೀರವೇ ಸಾಧನವಾಗಿರುವದರಿಂದ ಸೂಕ್ಷ್ಮಶರೀರದಲ್ಲಿ ಸಿದ್ಧವಾಗಿರುವ ಪೂರ್ವಜನ್ಮದ ಕರ್ಮಫಲಗಳನ್ನು ಉಪಭೋಗಿಸಲಿಕ್ಕೆ ಯೋಗ್ಯವಾಗಿರುವಂಥಾದ್ದೇ ಸ್ಥೂಲ ಶರೀರವು ಜೀವನಿಗೆ ಸಿಗುವದು. ಆದ್ದರಿಂದ ಯಾವಾಗ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಸಂಯೋಗದಿಂದ ಜನ್ಮ ಪ್ರಾಪ್ತವಾಗುವದೋ ಅಂದಿನಿಂದ ಅವುಗಳು ಒಂದನ್ನೊಂದು ಅವಲಂಬಿಸಿರುತ್ತವೆ. ಇದರಲ್ಲಿ ಏನೂ ಸಂದೇಹವಿಲ್ಲ. ಸ್ಥೂಲ ಶರೀರವನ್ನು ವಶಪಡಿಸಲಿಕ್ಕೆ ಮಾಡಿದ ಪ್ರಯತ್ನಗಳ ಪರಿಣಾಮವು, ಸೂಕ್ಷ್ಮಶರೀರದ ಮೇಲೆಯೂ ಆಗುವದರಿಂದ, ಯಾವಾಗ್ಗೆ ಕೆಲವು ಅಭ್ಯಾಸಗಳಿಂದ ಸ್ಥೂಲ ಶರೀರವು ಕೈವಶವಾಗುವದೋ ಆಗ್ಗೆ ಸೂಕ್ಷ್ಮಶರೀರವು ಕೆಲವು ಮಾನಸಿಕ ಅಭ್ಯಾಸಗಳಿಂದ ಸ್ವಾಧೀನ ಪಡಿಸಿಕೊಳ್ಳಲಾಗುವದು. ಬರೇ ಸ್ಥೂಲ ಶರೀರ ಮಾತ್ರ ವಶಪಡಿಸಿಕೊಳ್ಳುವದು ಯೋಗ್ಯವಲ್ಲ. ಅದರಿಂದ ಶರೀರ ಪ್ರಕೃತಿಯನ್ನು ಸುಸ್ಥಿತಿಯಲ್ಲಿ ಇಡಲಿಕ್ಕೆ ಬಂದೀತಷ್ಟೇ. ಹಠಯೋಗದಲ್ಲಿ ಯಮ ನಿಯಮಾದಿ ಎಂಟು ಅಂಗಗಳ ಅಭ್ಯಾಸ ಮಾಡಬೇಕಾಗುವದು. ಧ್ಯಾನದ ಅಭ್ಯಾ

ಸಮಷ್ಟಿ ದೀಪದ ಜ್ಯೋತಿಯ ಮೇಲೆ ನೋಡುತ್ತಾರೆ. ಹಠಯೋಗದಿಂದ ಸಾಧಿಸತಕ್ಕ ಸಮಾಧಿಗೆ ಮಹಾಭಾವ ಸಮಾಧಿಯನ್ನುವರು. ಪ್ರಾಣಾಯಾಮದಿಂದ ಮನಸ್ಸಿನ ಸ್ಥಿರತೆಯನ್ನು ಸಂಪಾದಿಸಲಿಕ್ಕೆ ಬರುತ್ತದೆ. ( ಹಠ ಶಬ್ದದಲ್ಲಿ ಹ ಮತ್ತು ಠ ಈ ಎರಡು ಅಕ್ಷರಗಳಿದ್ದು ಇವುಗಳ ಅರ್ಥ ಕ್ರಮದಿಂದ ಸೂರ್ಯ ವ ಚಂದ್ರ ಮತ್ತು ಪ್ರಾಣವಾಯು ವ ಅಪಾನವಾಯು ಹೀಗಾಗುತ್ತದೆ ); ಪ್ರಾಣವಾಯುವು ಹೃದಯದಲ್ಲಿರುತ್ತಿದ್ದು ಅದು ಅಪಾನವಾಯುವನ್ನು ಮೇಲಕ್ಕೆ ಎಳೆಯುತ್ತಿರುತ್ತದೆ. ಅಪಾನವಾಯುವು ಮೂಲಾಧಾರದಲ್ಲಿದ್ದು ಪ್ರಾಣವಾಯುವನ್ನು ಕೆಳಗೆ ಎಳಕೊಳ್ಳುತ್ತದೆ. ಇವೆರಡೂ ಪರಸ್ಪರ ಯುದ್ಧ ಮಾಡುತ್ತಿರುತ್ತವೊ ಎಂಬಂತೆ ಇದ್ದು, ಶರೀರ ಬಿಟ್ಟು ಹೋಗದಂತೆ ಒಂದಕ್ಕೊಂದು ಅಡ್ಡಿ ಮಾಡುತ್ತವೆ. ಆದರೆ ಯಾವಾಗ್ಗೆ ಇವು ಒಂದಕ್ಕೊಂದು ಸಹಾಯಕರವಾಗುತ್ತವೆಯೋ ಆಗ ಅವು ಜೀವನಿಗೆ ಶರೀರ ಬಿಟ್ಟು ಹೋಗಲಿಕ್ಕೆ ಅನುಕೂಲವಾಗುವದಕ್ಕೆ ಸುಷುಮ್ನಾ ನಾಡಿಯಲ್ಲಿ ಒಟ್ಟುಕೂಡುತ್ತವೆ. ವ್ಯಷ್ಟಿಯೊಳಗಿನ ಪ್ರಾಣವು ಸಮಷ್ಟಿ ಪ್ರಾಣದ ಒಂದಂಶ ಮಾತ್ರ ವಿರುವದು. ಆದ್ದರಿಂದ ವ್ಯಷ್ಟಿ ಸಮಷ್ಟಿಯೊಳಗಣ ಪ್ರಾಣಗಳ ಏಕತ್ವವನ್ನು ಪ್ರಥಮದಲ್ಲಿ ಸಾಧಿಸಬೇಕಾಗಿದೆ. ಈ ಯೋಗದಿಂದ ಶರೀರ ಪ್ರಕೃತಿಯು ಸುಸ್ಥಿರವಾಗಿದ್ದು, ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲಿಕ್ಕೆ ಬರುತ್ತದೆ. ಇತರ ಮೂರು ಯೋಗಗಳಿಗಿಂತ ಹಠಯೋಗದಲ್ಲಿ ಪ್ರಾಣಾಯಾಮದ್ದು ಹೆಚ್ಚಿನ ಮಹತ್ವವಾಗಿರುತ್ತದೆ. ಸುಷುಮ್ನಾ ನಾಡಿಯೊಳಗಿಂದ ಪ್ರಾಣವನ್ನು ಬ್ರಹ್ಮರಂಧ್ರದಲ್ಲಿ ಒಯ್ದು ಅಲ್ಲಿ ಸಮಾಧಿಯ ಅನುಭವವನ್ನು ತಕ್ಕೊಳ್ಳುವದಕ್ಕೆ ಹಠಯೋಗಿಗಳು ಮೋಕ್ಷವೆನ್ನುತ್ತಾರೆ.

ಹಠಯೋಗದ ಅಭ್ಯಾಸವನ್ನು ಮಾಡುತ್ತಿರುವಾಗ, ಅನ್ನಪಾನ ದೇಶ ಕಾಲ ಆಚಾರ, ವಿಚಾರ ಸ್ತ್ರೀಸಂಗ ಇವೆಲ್ಲವುಗಳ ಸಂಬಂಧವಿರುವ ನಿರ್ಬಂಧಗಳನ್ನು ಅತ್ಯಂತ ದಕ್ಷತೆಯಿಂದ ಪಾಲಿಸಬೇಕಾಗುತ್ತದೆ.

ಹಠಯೋಗದೊಳಗೆ ಯಾವ ಸರ್ವ ಪ್ರಕ್ರಿಯೆಗಳಿರುವವೊ, ಅವುಗಳ ಏಳು ಭಾಗ ಮಾಡಿರುತ್ತದೆ. ಮೊದಲನೇ ( ೧ ) ದು ಶರೀರಶೋಧನ; ಇದರಲ್ಲಿ ಆರು ಒಳಭೇದಗಳಿವೆ, ಅವಕ್ಕೆ ಷಟ್ಕರ್ಮವಿಧಿಯನ್ನುತ್ತಾರೆ. ಅವುಗಳ ಹೆಸರುಗಳು—ಧೌತಿ, ಬಸ್ತಿ, ನೌಲಿ, ಕಪಾಲಭಾತಿ, ನೇತಿ ಮತ್ತು ತ್ರಾಟಕ. ಧೌತಿಯಂದರೆ ಒಂದು ವಸ್ತ್ರವನ್ನು ಹೊಟ್ಟೆಯೊಳಗೆ ಸೇರಿಸಿ, ಹೊಟ್ಟೆಯನ್ನು ಒರಸಿ ತೆಗೆಯುವದು. ಬಸ್ತಿ ಅಂದರೆ ನೀರನ್ನು ಹೊಟ್ಟೆಯೊಳಗೆ ತಕ್ಕೊಂಡು ಮಲಮಾರ್ಗವನ್ನು ತೊಳೆಯುವದು. ಇದರ ಪ್ರಾಕೃತಸಾಧನವೆಂದರೆ ಎನಿಮಾ ಇಡುವದು. ನೌಲಿ ಎಂದರೆ ಹೊಟ್ಟೆಯೊಳಗಣ ಕರಳುಗಳನ್ನು ಬಲಗಡೆಯಿಂದ ಎಡಗಡೆಗೆ ತಿರುಗಿಸುವದು. ಕಪಾಲಭಾತಿ ಎಂಬದು ಪ್ರಾಣಾಯಾಮದ್ದೆ ಒಂದು ಪ್ರಕಾರವಿರುವದು. ನೇತಿಯೆಂದರೆ ಮೂಗಿನ ಸೊಳ್ಳೆಗಳನ್ನು ಸ್ವಚ್ಛಮಾಡುವದು.

ತ್ರಾಹಾಟಕವೆಂದರೆ, ದೃಷ್ಟಿ ಸ್ಥಿರಮಾಡುವದಾಗಿರುತ್ತದೆ. ಇವಲ್ಲದೆ (೨) ಧೃತಿ, ಮಾನಸಿಕ ಶಕ್ತಿ (೩) ಮಾನಸಿಕ ಸ್ಥೈರ್ಯ; ಇದು ಭೂಚರಿ, ಖೇಚರಿ, ಅಗೋಚರಿ, ಚರಾಚರಿ ಮತ್ತು ಷಣ್ಮುಖಿ, ಇತ್ಯಾದಿ ಮುದ್ರೆಗಳ ಪೈಕಿ ಯಾವದಾದರೂ ಒಂದು ಮುದ್ರೆಯನ್ನು ಅಭ್ಯಾಸಿಸಿ ಪ್ರಾಪ್ತಮಾಡಿಕೊಳ್ಳಲಿಕ್ಕೆ ಬರುತ್ತದೆ. (೪) ಧೈರ್ಯ ಇದು ಇಂದ್ರಿಯ ನಿಗ್ರಹದಿಂದ ಬರುವದು. (೫) ಲಘುತ್ವ ಇದು ಪ್ರಾಣಾಯಾಮದ್ವಾರಾ ಪ್ರಾಪ್ತಿಯಾಗುವದು. (೬) ಸಾಕ್ಷಾತ್ಕಾರ ಅಥವಾ ಸ್ವಾನುಭವ ಧ್ಯಾನಯೋಗದಿಂದ ಪ್ರಾಪ್ತವು. (೭) ಅಲಿಪ್ತತೆ (ತಾನು ಜಗತ್ತಿನಿಂದ ಪ್ರತ್ಯೇಕನಾಗಿರುವೆನೆಂಬ ಅನುಭವವು) ಇದು ಸಮಾಧಿಯೋಗದಿಂದ ಪ್ರಾಪ್ತಮಾಡಿಕೊಳ್ಳಲು ಶಕ್ಯವಿದೆ.

ಸರ್ವ ರೋಗಗಳ ಮೂಲ ಕಾರಣವು ಕಫ ವಾತ, ಪಿತ್ತ ಈ ಮೂರರ ಸಾಮ್ಯಾವಸ್ಥೆ ತಪ್ಪುವದು ಆಗಿರುವದರಿಂದ ಯಾವಾತನ ಶರೀರವು ರೋಗಗ್ರಸ್ತವಾಗಿರುವದೊ, ಅವನು ಮೊದಲು ಶರೀರ ಶೋಧನದ ಷಟ್ಕರ್ಮವಿಧಿಯನ್ನು ಮಾಡಿ ಶರೀರ ನಿರೋಗಿಯಾದ ಮೇಲೆ, ಪ್ರಾಣಾಯಾಮವನ್ನು ಆರಂಭಿಸಬೇಕು. ಯಾವಾತನ ಶರೀರವು ನಿರೋಗಿಯಾಗಿರುವದೋ ಆತನು ಒಮ್ಮೆಲೆ ಪ್ರಾಣಾಯಾಮ ವಿಧಿಯನ್ನು ಅಭ್ಯಾಸಿಸಲಿಕ್ಕೆ ಅಡ್ಡಿ ಇಲ್ಲ. ಇವು ಮೇಲೆ ಹೇಳಿದ ಹಠಯೋಗದ ಪ್ರಥಮ ಮೆಟ್ಟಲುಗಳಾಗಿರುತ್ತವೆ. ಇವನ್ನು ಸಾಧಿಸುವದರಿಂದ ಸ್ನಾಯುಗಳು ರಕ್ತವಾಹಿನಿಗಳು ಜ್ಞಾನತಂತು ವ ನಾಡಿಗಳು ಶುದ್ಧಿ ಹೊಂದಿ, ಪಚನ ಶಕ್ತಿಯು ಅಧಿಕವಾಗುವದು, ಮತ್ತು ಕುಂಭಕದ ಅಭ್ಯಾಸ ಮಾಡಲಿಕ್ಕೆ ಬಹು ಅನುಕೂಲವಾಗುವದು. ಕೆಲವು ಪ್ರಕಾರದ ಆಸನಗಳ ಅಭ್ಯಾಸದಿಂದಲೂ ಶರೀರ ಸ್ಥಿರತೆಯನ್ನು ಸಾಧಿಸಲಿಕ್ಕೆ ಬರುತ್ತದೆ ಸಿದ್ಧಾಸನವು ಕುಂಡಲಿನೀ ಜಾಗೃತ ಮಾಡಲಿಕ್ಕೆ ಉಪಯೋಗವು. ಹಾಗೆಯೆ ಅದು ಮೂಲಬಂಧ ಉಡ್ಡಿಯಾನ ಬಂಧ, ವ ಜಾಲಂಧರ ಬಂಧ ಎಂಬ ಮೂರು ಬಂಧಗಳನ್ನು ಸಾಧಿಸಲಿಕ್ಕೂ, ಉನ್ಮನಿ ಅವಸ್ಥಾ ಪ್ರಾಪ್ತಿಮಾಡಿಕೊಳ್ಳಲಿಕ್ಕೂ ಉಪಯೋಗವಿದೆ, ಶರೀರ ಸ್ಥಿರತೆಯು ಮೇಲೆ ಹೇಳಿದಂತೆ ಆಸನಗಳಿಂದ ಮಾತ್ರವಲ್ಲ, ಕೆಲವು ಮುದ್ರೆಗಳನ್ನು ಸಾಧ್ಯಮಾಡಿಕೊಳ್ಳುವದರಿಂದಲೂ ಪ್ರಾಪ್ತವಾಗುವದು. ಮುದ್ರೆಗಳ ಅಭ್ಯಾಸವೆಂದರೆ ಕುಂಡಲಿನಿಯನ್ನು ಜಾಗೃತಮಾಡುವ ನಿಜವಾದ ಗುರುಕಿಲ್ಲಿಯಾಗಿರುತ್ತದೆ. ಶರೀರಶುದ್ಧಿಯು ಕೃತಿಗಳ ಪರಿಣಾಮವು ಮನಸ್ಸಿನಮೇಲೆ ಆಗಿ, ಅವರ ವಿಷಯಚಿಂತನದ ಪ್ರೀತಿಯು ನಷ್ಟವಾಗುತ್ತದೆ. ಮತ್ತು ಶರೀರ ಮತ್ತು ಮನಸ್ಸು ಒಕ್ಕಟ್ಟಾಗಿ ವರ್ತಿಸುತ್ತವೆ. ಇದರಿಂದ ಯೋಗಿಯ ಮಾನಸ ಶಕ್ತಿಯು ವೃದ್ಧಿಯಾಗಿ ಆತನಿಗೆ ಸಿದ್ಧಿಗಳು ಪ್ರಾಪ್ತವಾಗುತ್ತವೆ. ಬೇರೆ ಬೇರೆ ಮುದ್ರೆಗಳ ಅಭ್ಯಾಸದಿಂದ ಬೇರೆಬೇರೆ ಶಕ್ತಿಗಳು ಬರುವವು. ಬೆನ್ನೆಲುವಿನಲ್ಲಿಯ ರಜ್ಜುವಿನ ಸಮೀಪ ಆರು ಕೇಂದ್ರಗಳಿವೆ. ಅವಕ್ಕೆ ಚಕ್ರಗಳೆನ್ನುತ್ತಾರೆ. ಮೂಲಾಧಾರ, ಸ್ವಾದಿಸ್ಥಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ ಈ ಪ್ರಕಾರ

ಅವುಗಳ ಹೆಸರುಗಳು. ಸಾಧಕನು ಅವುಗಳ ಪೈಕಿ ಯಾವದೊಂದು ಚಕ್ರದಮೇಲೆ 'ಹಂ' ವ 'ಸ' ಈ ಅಕ್ಷರಗಳ ಜಪ ಮಾಡುತ್ತ ಮನಸ್ಸು ಏಕಾಗ್ರ ಮಾಡಿದನೆಂದರೆ, ಆತನ ಕುಂಡಲಿನಿಯು ಜಾಗೃತವಾಗುವದು. 'ಹಮ್' ಈ ಅಕ್ಷರದ ಮಾನಸಿಕ ಜಪದಿಂದ ಉಷ್ಣತೆ ಉತ್ಪನ್ನವಾಗಿ ಅದರ ಪರಿಣಾಮವು ಕುಂಡಲಿನಿಯ ಮೇಲೆ ಘಟಿಸುತ್ತದೆ. ಮತ್ತು 'ಸ' ಅಕ್ಷರದ ಜಪದ ಪರಿಣಾಮವು ಇಚ್ಛಾಶಕ್ತಿಯಮೇಲೆ ಆಗುವದು. ಮೂಲಾಧಾರ ಚಕ್ರದೊಳಗಿನ ಪ್ರಾಣವಾಯು ಇದ್ದಲ್ಲಿ ಸೂರ್ಯಚಂದ್ರರಿರುವರು, ಮತ್ತು 'ಹಂಸ' ಇದರ ಅಂತಸ್ಥ ಜಪದಿಂದ ಕುಂಡಲಿನಿಯು ಉತ್ಥಾಪನವಾಗುವದು. ಮತ್ತು 'ಸ'ದ ಜಪವು ಆ ಕುಂಡಲಿನಿಯನ್ನು ಸಹಸ್ರದಲಪಕಡೆಗೆ ಮೇಲೆ ಏರಿಸುವದು. ಇದರಿಂದ ಸಾಧಕನು ತಾನು ಶಕ್ತಿಮಾನನು ಆದೆನೆಂದು ಭಾವಿಸುತ್ತಾನೆ. ಜೀವ ಮತ್ತು ಶಿವ ಇವರು ಏಕವಾಗಿದ್ದಾರೆಂತ ತಿಳಿದು ಆ ಸಾಧಕನ ಮನಸ್ಸು ಅಲ್ಲಿ ಪೂರ್ಣ ಏಕಾಗ್ರತೆ ಹೊಂದಿ, ಅವನು ಅತ್ಯಂತ ಸುಖವನ್ನು ಉಪಭೋಗಿಸುತ್ತಾನೆ.

ಮೇಲೆ ಪ್ರಾಣಾಯಾಮದ ವರ್ಣನೆ ಮಾಡುವಾಗ್ಗೆ ಪೂರಕ, ಕುಂಭಕ, ರೇಚಕಗಳನ್ನು ಮಾಡಬೇಕಂತ ಹೇಳಿದೆ. ಆದರೆ ಯಾವ ವಿಶಿಷ್ಟ ನಾಡಿಯೊಳಗಿಂದ ಅದರ ಅಭ್ಯಾಸಮಾಡಬೇಕೆಂತ ಹೇಳಿದ್ದಿಲ್ಲ; ಅದನ್ನು ಮುಂದೆ ಹೇಳುವೆನು. ಬೆನ್ನೆಲುವಿನ ನಳಿಕೆಯ ಮಧ್ಯದಲ್ಲಿ ಇಡಾ, ಪಿಂಗಲಾ ಮತ್ತು ಸುಷುಮ್ನಾ ಈ ಮೂರು ನಾಡಿಗಳಿರುತ್ತವೆ. ಎಡಗಡೆ ನಾಡಿಯು ಇಡಾ ಅಥವಾ ಚಂದ್ರನಾಡಿಯು, ಬಲಗಡೆದು ಪಿಂಗಲಾ ಅಥವಾ ಸೂರ್ಯನಾಡಿಯು. ಬೆನ್ನೆಲುವಿನ ಮಧ್ಯಪೊಳ್ಳಿನೊಳಗಿಂದ ಹಾಯುವಂಥದ್ದು ಸುಷುಮ್ನಾ ನಾಡಿ ಅಥವಾ ಅಗ್ನಿನಾಡಿ ಎನಿಸುವದು. ಇಡೆಯು ಮೂಗಿನ ಎಡ ಸೊಳ್ಳೆಯಿಂದಲೂ ಪಿಂಗಲೆಯು ಬಲ ಸೊಳ್ಳೆಯಿಂದಲೂ ಸುಷುಮ್ನಾ ಇವುಗಳ ಮಧ್ಯದಿಂದಲೂ ಹಾಯುವವು. ಸುಷುಮ್ನಾ ನಾಡಿಯು ಬ್ರಹ್ಮರಂಧ್ರಕ್ಕೆ ಏರಲಿಕ್ಕೆ ನಿಚ್ಚಣಿಕೆ ಇದ್ದಂತಿರುವದು. ಇಡಾ ನಾಡಿಯು ಅಂಡಕೋಶದ ಬುಡಕ್ಕೆ ಎಡಗಡೆಯಿಂದ ಹೊರಟು ಎಡದಿಂದ ಬಲಕ್ಕೆ ಮತ್ತು ಬಲದಿಂದಎಡಕ್ಕೆ ಹೀಗ ಜ್ಞಾನಕಮಲದೊಳಗಿಂದ ಡೊಂಕುಡೊಂಕಾಗಿ ಚಲಿಸುತ್ತ ಕ್ರಮಕ್ರಮದಿಂದ ಏರಿ, ಕೊರಳಿನ ಹಿಂಭಾಗದ ತನಕ ಬರುತ್ತದೆ. ಮತ್ತು ಅಲ್ಲಿಂದ ಮೆದುಳಿನ ದಂಡೆ ಹಿಡಿದು ಮೂಗಿನ ಎಡಗಡೆ ಸೊಳ್ಳೆಯೊಳಗೆ ಸೇರುವದು. ಹಾಗೆಯೇ ಪಿಂಗಲಾನಾಡಿಯು ಅಂಡಕೋಶದಬುಡಕ್ಕೆ ಬಲಗಡೆಯಿಂದ ಹೊರಟು ಮೇಲೆ ಹೇಳಿದಂತೆ ಮತ್ತೊಂದು ಅಂಗದಿಂದ ಹಾದು ಮೂಗಿನ ಬಲ ಸೊಳ್ಳೆಯನ್ನು ಪ್ರವೇಶಿಸುತ್ತದೆ. ಕುಂಡಲಿನಿಯು ಯಾವದೇ ಸಾಧನದಿಂದ ಜಾಗೃತವಾದರೂ ಅದನ್ನು ಬ್ರಹ್ಮರಂಧ್ರಪರ್ಯಂತ ಮೇಲೆ ಏರಿಸಿ, ಅಲ್ಲಿ ಸ್ಥಿರವಾಗಿ ನಿಲ್ಲಿಸುವದೇ ಹಠಯೋಗದ ಅಂತಿಮಸಾಧ್ಯವಾಗಿರುತ್ತದೆ. ಯಾವಾಗ ಕುಂಭಕದ ಯೋಗದಿಂದ ಶ್ವಾಸವು ನಿರೋಧಿಸಲ್ಪಡುವದೋ ಆಗ 'ಹಂಸ'ದ ಅಂತರಜಪದಿಂದ ಕುಂಡಲಿನಿಯು ಜಾಗೃತವಾಗಿ ಸುಷುಮ್ನೆಯೊಳಗಿನಿಂದ ಮೇಲೆ

ಏರುತ್ತದೆ. ಒಮ್ಮೆ ಸುಷುಮ್ನಾಮಾರ್ಗವು ತೆರೆಯಿತೆಂದರೆ ಯೋಗಿಯು ಬೇಕಾದಾಗ್ಗೆ ಕುಂಡಲಿನಿಯನ್ನು ಇಚ್ಛಾಮಾತ್ರದಿಂದ ಬ್ರಹ್ಮರಂಧ್ರಕ್ಕೆ ಒಯ್ದು ಇಡುವನು ಅಥವಾ ಕೆಳಗೂ ತರುವನು. ಅನಂತರ ಯೋಗಿಯು ಇಡಾಪಿಂಗಲಾ ನಾಡಿಗಳಿಂದ ಶ್ವಾಸೋಚ್ಛ್ವಾಸ ಮಾಡದೆ ಬರೀ ಸುಷುಮ್ನೆಯೊಳಗಿಂದಲೇ ಮಾಡುತ್ತಾನೆ. ಇಡಾ, ಪಿಂಗಲಾ ವ ಸುಷುಮ್ನಾ ಈ ಮೂರೂ ನಾಡಿಗಳು ಆಜ್ಞಾಚಕ್ರದಲ್ಲಿ ಅಂದರೆ ಭ್ರೂಮಧ್ಯದಲ್ಲಿ ಏಕವಾಗುತ್ತವೆ. ಅಲ್ಲಿಂದ ಸುಷುಮ್ನಾ ನಾಡಿ ಮಾತ್ರ ಸಹಸ್ರದಲದ ಕಡೆ ಹೊರಡುತ್ತದೆ.

ಲಯಯೋಗ—ಇದು ಹಠಯೋಗದ್ದ ಮೇಲಿನ ಮೆಟ್ಟಿಲಾಗಿರುತ್ತದೆ. ಅಷ್ಟಾಂಗಯೋಗದ ಪೈಕಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ, ಧ್ಯಾನ ಈ ಏಳು ಅಂಗಗಳ ಅಭ್ಯಾಸ ಪೂರ್ಣವಾದ ಬಳಿಕ ಈ ಯೋಗದ ಅಭ್ಯಾಸವು ಮಾಡುವದಿರುತ್ತದೆ. ಪ್ರತ್ಯೇಕ ಮಾನವೀ ಪ್ರಾಣಿಯಲ್ಲಿ ಸಚ್ಚಿದಾನಂದರೂಪ ಶಿವನು ತನ್ನ ಶಕ್ತಿಸಹಿತ ವಾಸಮಾಡಿಕೊಂಡಿರುತ್ತಾನೆ. ಆದರೆ ಈ ಶುದ್ಧಾತ್ಮನು ಅನಂತ ಜನ್ಮಗಳ ವಾಸನಾಜಾಲದೊಳಗೆ ತೊಡಕಿಗುವದರಿಂದ ಆ ಜೀವಾತ್ಮಗೆ ಸ್ವತಃದ ಶುದ್ಧ ಸ್ವರೂಪದ ಜ್ಞಾನವಾಗಲಾರದು. ಲಯಯೋಗದಲ್ಲಿ ಯೋಗಿಯು ಮೊದಲು ಮನಸ್ಸನ್ನು ತನ್ನ ವಶಪಡಿಸಿಕೊಳ್ಳುತ್ತಾನೆ. ಆ ಮೇಲೆ ಪ್ರಕೃತಿ ಪುರುಷರ ಐಕ್ಯವನ್ನು ಸಾಧಿಸುತ್ತಾನೆ. ಪಿಂಡದೊಳಗಿನದು ಬ್ರಹ್ಮಾಂಡದೊಳಗೆ ಅಥವಾ ಬ್ರಹ್ಮಾಂಡದೊಳಗಿನದು ಪಿಂಡದಲ್ಲಿ ಎಂಬ ಈ ಯೋಗಶಾಸ್ತ್ರದೊಳಗಿನ ನ್ಯಾಯವು ಪೂರ್ಣ ಸತ್ಯವಾಗಿರುವದರಿಂದ ಮಾನವಿ ಶರೀರದಲ್ಲಿಯ ಪಂಚತತ್ವಗಳು ವಿಶ್ವದೊಳಗಿನ ಪಂಚತತ್ವಗಳೊಳಗೆ ಏಕರೂಪವಾಗಿ ಹೋಗುತ್ತವೆ. ಮಂತ್ರಯೋಗ ಹಠಯೋಗಗಳಲ್ಲಿ ತನ್ನ ಅಭ್ಯಾಸ ಮಾಡಿಕೊಳ್ಳಲಿಕ್ಕೆ ಸಾಧಕನು ಕೆಲಕೆಲವು ಕ್ರಿಯೆಗಳನ್ನು ಮಾಡಬೇಕಾಗಿರುತ್ತದೆ. ಹಾಗೆಯೇ ಈ ಯೋಗದಲ್ಲಿಯಾದರೂ ಅವನ್ನು ಮಾಡಬೇಕಾಗುವದು. ಲಯಯೋಗದಲ್ಲಿ ಜ್ಞಾನೇಂದ್ರಿಯಗಳ ಮೂಲ ಸ್ವಭಾವ, ಶರೀರದೊಳಗಿನ ಅವುಗಳ ಸ್ಥಾನ, ಸೂಕ್ಷ್ಮ ಶರೀರದ ಮೇಲೆ ಆಗುವ ಅವುಗಳ ಪರಿಣಾಮ, ಅವುಗಳ ಶಕ್ತಿ ಮತ್ತು ಮಾನವೀ ಶರೀರದೊಳಗಿನ ಅಂತಃಸೃಷ್ಟಿ ಇವೆಲ್ಲ ಸಂಗತಿಗಳನ್ನು ವಿಚಾರದಲ್ಲಿ ತಕ್ಕೊಳ್ಳಬೇಕಾಗುವದು. ಶರೀರದೊಳಗಿನ ಷಟ್‌ಚಕ್ರಗಳಲ್ಲಿ ಭಿನ್ನ ಭಿನ್ನ ದೇವತೆಗಳು ವಾಸಮಾಡುತ್ತವೆ. ತನ್ನ ಶಕ್ತಿಸಹಿತ ಸ್ವಾತ್ಮಾನಂದ ಸುಖದಲ್ಲಿ ರಮಮಾಣನಾಗಿರುವ ಪರಮಾತ್ಮ ಶಿವನು ವಾಸಿಸಿರುವ ಸ್ಥಾನವೇ ಸಹಸ್ರದಲ ಕಮಲವು, ಮತ್ತು ಪ್ರಕೃತಿಯ ಜೀವನಶಕ್ತಿಯಾದ ಕುಂಡಲಿನಿಯು ಮೂಲಾಧಾರ ಚಕ್ರದಲ್ಲಿ ವಾಸಮಾಡಿರುವದು. ಈ ಪ್ರಕೃತಿಯ ಮೇಲೆ ಜಯ ಸಾಧಿಸಿ, ಅದನ್ನು ಆತ್ಮಶಕ್ತಿಯಲ್ಲಿ ಲಯಮಾಡಿ ಸಮಾಧಿ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುವದು, ಈ ಯೋಗದ ಧ್ಯೇಯವಾಗಿರುತ್ತದೆ. ಹಠಯೋಗದೊಳ

ಗಿನ ಸಮಾಧಿಸ್ಥಿತಿಯು ಪ್ರಕಾಶದ ಧ್ಯಾನಮಾಡಿ, ಮತ್ತು ಮಂತ್ರಯೋಗದ ಸಮಾಧಿಸ್ಥಿತಿಯು ನಾಮರೂಪಯುಕ್ತವಾದ ಒಂದಾನೊಂದು ದೇವತಾಮೂರ್ತಿಯ ಧ್ಯಾನದಿಂದ ಪ್ರಾಪ್ತ ಮಾಡಿಕೊಳ್ಳಲಿಕ್ಕೆ ಬರುತ್ತದೆ. ಅದೇ ಪ್ರಕಾರ ಲಯ ಯೋಗದೊಳಗಿನ ಸಮಾಧಿಯು ಭ್ರೂಮಧ್ಯದೊಳಗಿನ ಆಜ್ಞಾಚಕ್ರದಲ್ಲಿ ತೇಜೋ ರೂಪದಿಂದ ಕಾಣಿಸುವ ಕುಂಡಲಿನಿಯ ಪ್ರತಿಬಿಂಬದ ಧ್ಯಾನಮಾಡಿ, ( ತೇಜದ ಧ್ಯಾನಮಾಡಿ ) ಸಮಾಧಿಯನ್ನು ಪ್ರಾಪ್ತಮಾಡಿಕೊಳ್ಳಲಿಕ್ಕೆ ಬರುತ್ತದೆ. ಈ ತೇಜೋರೂಪ ಪ್ರತಿಬಿಂಬವು ಯಾವಾತನ ಕುಂಡಲಿನಿಯು ಜಾಗೃತವಾಗಿರು ವದೋ ಆತನಿಗೆ ಮಾತ್ರ ಕಾಣಿಸುವದು.

ಈ ಯೋಗದಲ್ಲಿ ಹಠಯೋಗದ ಮತ್ತು ಯಮ ನಿಯಮಾದಿ ಅಷ್ಟಾಂಗ ಗಳ ಸಾಧನದಿಂದ ಕುಂಡಲಿನಿ ಜಾಗೃತವಾಗುತ್ತದೆ. ಆದ್ದರಿಂದ ಈ ಯೋಗದಲ್ಲಿ ಧಾರಣೆಗೆ ಹೆಚ್ಚು ಮಹತ್ವ ಕೊಡಲ್ಪಡುತ್ತದೆ. ಕುಂಡಲಿನಿ ಶಕ್ತಿಯು ಮಾನವಿ ಶರೀರವನ್ನು ಧಾರಣೆ ಮಾಡಿ, ಅದಕ್ಕೆ ಆಶ್ರಯ ಕೊಡುತ್ತದೆ. ಇದರ ಹೊರ್ತು ಯೋಗದ ಎಲ್ಲ ಅಭ್ಯಾಸಗಳಿಗೂ ಕುಂಡಲಿನಿಯ ಮುಖ್ಯ ಅಶ್ರಯವಿರುತ್ತದೆ. ಹ್ಯಾಗೆ ನಾವು ಬೀಗವನ್ನು ತೆಗೆದು ಬಾಗಲು ತೆರೆಯುವೆವೋ, ಹಾಗೆಯೇ ಯೋಗಿಯು ವಿಶಿಷ್ಟ ಅಭ್ಯಾಸದಿಂದ ಕುಂಡಲಿನಿಯನ್ನು ಜಾಗೃತಮಾಡಿ, ಮೋಕ್ಷ ದ್ವಾರವನ್ನು ತೆರೆಯುವನು. ಮಾನವೀ ಶರೀರದಲ್ಲಿ ಈ ಕುಂಡಲಿನಿಯೇ ಸರ್ವ ಶ್ರೇಷ್ಠವಾದ ಶಕ್ತಿಯಾಗಿರುತ್ತದೆ. ಮತ್ತು ಇದರಲ್ಲಿಯೇ ಇತರ ಶಕ್ತಿಗಳೆಲ್ಲ ಕೇಂದ್ರೀಭೂತವಾಗಿರುತ್ತವೆ. ಅಸ್ಖಲಿತ ಬ್ರಹ್ಮಚರ್ಯವ್ರತವನ್ನು ಬಿಗಿಯಾಗಿ ಪಾಲಿಸಿದರೆ, ಈ ಶಕ್ತಿಯು ತನ್ನ ತಾನೇ ಅಧಃಪಾತ ಮಾಡಿಸುವ ಕಾಮವಿಕಾರ ಅಥವಾ ಕಾಮೋತ್ಪಾದಕ ವೀರ್ಯ ಉತ್ಪನ್ನ ಮಾಡುವ ಬದಲಿಗೆ (ಅತಿಸೂಕ್ಷ್ಮ) ಓಜಸ್ ಶಕ್ತಿಯನ್ನು ಉತ್ಪನ್ನ ಮಾಡುತ್ತದೆ. ಮತ್ತು ಶಾಸ್ತ್ರದ ಆಧಾರದಿಂದ ಶಿವಶಕ್ತಿಗಳ ನಿವಾಸಸ್ಥಾನವಾದ ಸಹಸ್ರದಲ ಪರ್ಯಂತ ಅದು ಮೇಲೇರುತ್ತ ಹೋಗುತ್ತದೆ. ಯಾವಾತನು ಕಾಮವಾಸನೆಯನ್ನು ಜಯಿಸುವನೋ ಅವನು ಸರ್ವ ಬಂಧನಗಳಿಂದ ಮುಕ್ತನಾಗುವನು.

ಕುಂಡಲಿನಿಯು ಅಧೋಮುಖಿ ಸರ್ಪಾಕೃತಿ ಇದ್ದು, ಮೂಲಾಧಾರದಲ್ಲಿ ಸುರುಳಿ ಸುತ್ತಿಕೊಂಡು ನಿದ್ರಿಸ್ತ ಇರುತ್ತದೆ. ಸುಷುಮ್ನಾದ್ವಾರವು ಕುಂಡಲಿ ನಿಯ ಮುಖದಿಂದ ಆಚ್ಛಾದಿತವಾಗಿರುವದು. ಮಾನವೀ ಶರೀರದೊಳಗಿನ ೭೨,೦೦೦ ನಾಡಿಗಳು ಈ ಸ್ಥಾನದಿಂದಲೇ ಆರಂಭವಾಗುತ್ತವೆ. ಈ ಕುಂಡಲಿನಿಗೆ ಶಬ್ದಬ್ರಹ್ಮ, ನಾದಬ್ರಹ್ಮ ಅಥವಾ ಪ್ರಾಣಶಕ್ತಿ ಹೀಗೂ ಅನ್ನುತ್ತಾರೆ. ಸರ್ವ ಮಂತ್ರಗಳು ಈ ಕುಂಡಲಿನಿಯ ಪ್ರಕಟೀಕರಣ ( ಪ್ರಕಟ ಮಾಡುವಂಥವು ) ಆಗಿ ರುವದರಿಂದ ಇದು ಸರ್ವ ಮಂತ್ರಗಳ ಅಧಿಷ್ಠಾತ್ರಿ ದೇವತೆಯೆಂದು ತಿಳಿಯ ಲ್ಪಡುತ್ತದೆ.

ಈ ಕುಂಡಲಿನಿ ಅಥವಾ ಪ್ರಾಣಶಕ್ತಿಯು ಯಾವಾತನಿಗೆ ಅವಗತವಾಗಿರುವದೊ ಅವನೇ ನಿಜವಾದ ಯೋಗಿಯು. ಅಂಥವನೇ ಈ ಶಕ್ತಿಯನ್ನು ವಶಪಡಿಸಿಕೊಳ್ಳುತ್ತಾನೆ, ಮತ್ತು ಅವನೇ ಮೋಕ್ಷಕ್ಕೆ ಪ್ರಾಪ್ತನಾಗುವನು. ಇತರ ಸರ್ವ ಜನರು ಯುಗಾನುಯುಗಗಳಲ್ಲಿ ಜಗತ್ತಿನ ಜಾಳಿಗೆಯೊಳಗೆ ಶಿಕ್ಕಿಬದ್ಧರಾಗಿ ಬಿದ್ದಿರುತ್ತಾರೆ. ಈ ಕುಂಡಲಿನಿಯು ಮಿಂಚಿನಂತೆ ಹೊಳೆಯುತ್ತದೆ. ಮಂತ್ರಗಳು ಅಕ್ಷರಗಳ ಸಮುದಾಯಗಳಾಗಿರುವವು. ಆದ್ದರಿಂದ ಆ ಮಂತ್ರದ ಉಚ್ಚಾರವು ಕುಂಡಲಿನಿಯ ಪ್ರಗಟ ಮೂರ್ತಿಯಾಗಿದೆ. ದ್ವೈತ ಸ್ಥಿತಿಯಲ್ಲಿ ಪರಮಾತ್ಮನು ಸಹಾ ಕುಂಡಲಿನಿಯ ತೇಜೋರೂಪವನ್ನು ಪ್ರತಿಬಿಂಬಿಸಿದ್ದಾನೆ. ಆದ್ದರಿಂದ ಕುಂಡಲಿನಿಯನ್ನು ಜಾಗೃತ ಮಾಡಲಿಕ್ಕೆ ಮಂತ್ರಜಪವು ಅವಶ್ಯವಾಗಿದೆ. ಮಂತ್ರಗಳ ಸಾರವು ಪೂರ್ಣ ಜೀವನವಿದೆ. ಬರೇ ಮಂತ್ರಾಕ್ಷರಗಳು ನಿಃಸತ್ವವಾಗಿದ್ದು ಆ ಮಂತ್ರದೊಳಗಿನ ಶಕ್ತಿಯೇ ಪೂರ್ಣ ಜೀವನಶಕ್ತಿ ಅಥವಾ ಪ್ರಾಣವಾಗಿರುವದು. ಪ್ರತಿ ಒಂದು ಮಾನವೀ ಪ್ರಾಣಿಯಲ್ಲಿ ಈಶ್ವರಿ ಶಕ್ತಿಯು ವಾಸಿಸುತ್ತಿದ್ದರೂ, ಈ ಸ್ಥೂಲ ಜಗತ್ತಿನಲ್ಲಿ ಆ ಶಕ್ತಿಯು ಲಕ್ಷಕ್ಕೆ ಬರುವಂತೆ ಪರಿಣಾಮ ಉತ್ಪನ್ನವಾಗಲಿಕ್ಕೆ ಸದ್ಗುರುಗಳು ತೋರಿಸಿದ ಮಾರ್ಗದ ಅವಲಂಬನ ಮಾಡಬೇಕಾಗಿದೆ; ಮತ್ತು ಅವರ ಉಪದೇಶವನ್ನು ಕಾರ್ಯದಲ್ಲಿ ತರಬೇಕಾಗುವದು. ಯಾವಾಗ ಸಾಧಕನ ಗ್ರಾಹಕ ಶಕ್ತಿಯು ಮಂತ್ರದ ಮೂಲಭೂತ ಶಕ್ತಿಯೊಳಗೆ ತಾದಾತ್ಮ್ಯವನ್ನು ಹೊಂದುವದೋ ಆಗಲೇ ಆತ್ಮಿಕ ಶಕ್ತಿಯು ಪ್ರಕಾಶ ಅಥವಾ ನಾದರೂಪದಿಂದ ಪ್ರಕಟವಾಗುತ್ತದೆ. ಮಂತ್ರಜಪದಿಂದ ಕುಂಡಲಿನಿ ಶಕ್ತಿಯನ್ನು ಜಾಗೃತಮಾಡಿ ಅದನ್ನು ಸಹಸ್ರದಲತನಕ ವೈಯುವದು, ಮತ್ತು ಅದನ್ನು ಪರಮಾತ್ಮನಲ್ಲಿ ಐಕ್ಯಮಾಡುವದು, ಇದೇ ಯೋಗದಲ್ಲಿ ಮುಖ್ಯಕಾರ್ಯವಾಗಿರುತ್ತದೆ. ಕುಂಡಲಿನಿ ಶಕ್ತಿಯು ಯಾವಾಗ್ಗೆ ಪರಮಾತ್ಮನಲ್ಲಿ ಏಕರೂಪವಾಗುವದೊ, ಆಗಲೇ ಖರೆ ಆತ್ಮಸಾಕ್ಷಾತ್ಕಾರವೆನಿಸುವದು. ಆದ್ದರಿಂದ ಕುಂಡಲಿನಿಯನ್ನು ಜಾಗೃತಮಾಡುವದು ಮೊದಲಿನ ಮೆಟ್ಟು; ಅದನ್ನು ಮೇಲೆ ಏರಿಸುತ್ತ ವೈದು ಸಹಸ್ರದಲದಲ್ಲಿ ಐಕ್ಯಮಾಡುವದು, ಇದು ಮೇಲಿನ ಮೆಟ್ಟು ಮತ್ತು ಇದರ ಅರ್ಥವೇ ಪೂರ್ಣ ಸಾಕ್ಷಾತ್ಕಾರವು.

**ರಾಜಯೋಗಃ—** ಸರ್ವ ಯೋಗಗಳಲ್ಲಿ ರಾಜಯೋಗವು ಶ್ರೇಷ್ಠವೆನಿಸುತ್ತದೆ. ಮಂತ್ರ, ಲಯ, ಹಠಯೋಗಾದಿಗಳಲ್ಲಿ ಚಿತ್ತಶುದ್ಧಿಯು ಸ್ವಲ್ಪಸ್ವಲ್ಪವಾಗಿ ಸಾಧಕನು ಸವಿಕಲ್ಪ ಸಮಾಧಿಗೆ ಅಧಿಕಾರಿಯಾಗುತ್ತಾನೆ. ಆದರೆ ರಾಜಯೋಗದಲ್ಲಿ ಮಾತ್ರ ನಿರ್ವಿಕಲ್ಪ ಸಮಾಧಿಯು ಒಮ್ಮೆಲೇ ಸಿದ್ಧಿಸುತ್ತದೆ. ಯಾವಾತನು ಬರಿ ಸವಿಕಲ್ಪ ಸಮಾಧಿ ಸಾಧನದಲ್ಲಿ ಮಾತ್ರ ತೊಡಗಿರುತ್ತಾನೊ ಆತನಿಗೆ ಜನ್ಮಮರಣಗಳು ತಪ್ಪವು. ಆದರೆ ಯಾವಾತನು ನಿರ್ವಿಕಲ್ಪ ಸಮಾಧಿಯ ತನಕ ಮುಟ್ಟಿರುತ್ತಾನೊ, ಅವನು ಪೂರ್ಣವಾಸನಾಕ್ಷಯವನ್ನು ಹೊಂದಿ

ತಾನು ಶರೀರ ಸಹಿತವಾಗಿರುವ ಜಗತ್ತಿನಿಂದ ಪ್ರತ್ಯೇಕವಾಗಿದ್ದೇನೆಂದು ಅನುಭವ ಮಾಡಿಕೊಂಡು ಪರಬ್ರಹ್ಮದಲ್ಲಿ ಐಕ್ಯಹೊಂದಿ ಜನ್ಮಮರಣಗಳ ತೊಡಕುಗಳಿಂದ ತಪ್ಪಿಸಿಕೊಳ್ಳುತ್ತಾನೆ. ಮೊದಲಿನ ಮೂರು ಯೋಗಗಳು ರಾಜಯೋಗದ ಭೂಮಿಕೆಯನ್ನು ತಯಾರಿಸುತ್ತವೆ; ಮಂತ್ರಯೋಗದಿಂದ ಭಾವ ಸಮಾಧಿ ಪ್ರಾಪ್ತಿಯಾಗುತ್ತದೆ. ಹಠಯೋಗದೊಳಗಿನ ಸಮಾಧಿಯಲ್ಲಿ ಪ್ರಾಣದ ಪೂರ್ಣ ಜಯವಾಗಿ, ಸಾಧಕನು ಬಾಹ್ಯ ಜಗದಿಂದ ಸಂಪೂರ್ಣ ಭಿನ್ನನಾಗುತ್ತಾನೆ. ಲಯಯೋಗದಲ್ಲಿ ಸಾಧಕನಿಗೆ ಬಾಹ್ಯ ಜಗತ್ತಿನ ಭ್ಯಾಸವೇ ಇಲ್ಲದೆ ಅವನು ಪರಮಾನಂದವನ್ನು ಅನುಭವಿಸುತ್ತಾನೆ. ಪೂರ್ಣ ಅಂದರೆ ನಿರ್ವಿಕಲ್ಪ ಸಮಾಧಿಯು ರಾಜಯೋಗದಲ್ಲಿ ಮಾತ್ರ ಸಿದ್ಧಿಸುತ್ತದೆ; ಇದರಲ್ಲಿ ಬರೇ ಬ್ರಹ್ಮದ ಅಂದರೆ ಆತ್ಮದ ಮಾತ್ರ ಅಸ್ತಿತ್ವದ ಅರಿವು ಇರುತ್ತದೆ. ಈ ಸ್ಥಿತಿಗೆ ಮೋಕ್ಷ ಅಥವಾ ಕೈವಲ್ಯಮುಕ್ತಿ ಅಂತ ಹೇಳುತ್ತಾರೆ.

ವೈರಾಗ್ಯದ ಪರ ವ ಅಪರವೆಂಬ ಎರಡು ಪ್ರಕಾರಗಳಿವೆ. ಅಪರ ವೈರಾಗ್ಯ ಮೂರು ಪ್ರಕಾರದ್ದು. (೧) ಯಾವಾಗ ಐಹಿಕ ವಿಷಯಗಳಲ್ಲಿ ಮಾತ್ರ ಅಪ್ರೀತಿಯಾಗುತ್ತದೆ, ಇದು ಕನಿಷ್ಠ ವೈರಾಗ್ಯ; (೨) ವಿಷಯಗಳು ಸಿಕ್ಕರೆ ಅವುಗಳನ್ನು ಭೋಗಿಸುವ ಇಚ್ಛೆಯಾಗುತ್ತದೆ, ಆದರೆ ಅವು ಸಿಗದಿದ್ದರೆ ಮನಸ್ಸಿಗೆ ಅಸ್ವಸ್ಥತಾ ಉತ್ಪನ್ನವಾಗುವಷ್ಟು ಮತ್ತು ಅವುಗಳನ್ನು ಪ್ರಾಪ್ತ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿಸುವಷ್ಟು ಇಚ್ಛೆ ಇರುವದಿಲ್ಲ, ಇದು ಮಧ್ಯಮ ವೈರಾಗ್ಯ; (೩) ವಿಷಯೋಪಭೋಗಗಳು ಇವು ದುಃಖಪರಿಣಾಮಿಗಳೆಂದು ಮೇಲಿಂದಮೇಲೆ ಅನುಭವಕ್ಕೆ ಬಂದು ಅವುಗಳ ಸಂಬಂಧ ಯಾವ ಹೇಯ ಬುದ್ಧಿ ಉತ್ಪನ್ನವಾಗುವದೊ, ಅದು ಅಧಿಮಾತ್ರ ಅಥವಾ ಉತ್ತಮ ವೈರಾಗ್ಯವೆನಿಸುವದು. ಮತ್ತು ಯಾವದರಲ್ಲಿ ಐಹಿಕ ವ ಪಾರಲೌಕಿಕ ವಿಷಯಭೋಗಗಳ ಸಂಬಂಧ ಪೂರ್ಣ ಪರಾಙ್ಮುಖತೆ ಇರುತ್ತದೊ, ಅದು ಪರ ಅಥವಾ ಪೂರ್ಣ ವೈರಾಗ್ಯವು. ಇದೇ ಎಲ್ಲಕ್ಕೂ ಶ್ರೇಷ್ಠವಾದದ್ದು. ಮಂತ್ರ, ಹಠ ವ ಲಯ ಯೋಗಗಳಲ್ಲಿ ಅಪರ ವೈರಾಗ್ಯದ ಮಾತ್ರ ಅವಶ್ಯಕತೆ ಇರುವದು. ಆದರೆ ರಾಜಯೋಗದಲ್ಲಿಮಾತ್ರ ಪರವೈರಾಗ್ಯದ ವಿನಹಾ ಅದು ಸಿದ್ಧಿಸಲಾರದು. ಪ್ರತಿ ಒಂದು ಯೋಗದಲ್ಲಿ ಚಿತ್ತಶುದ್ಧಿಗೆ ಮಹತ್ವ ಕೊಟ್ಟಿದ್ದರೂ ರಾಜಯೋಗದಲ್ಲಿ ಮಾತ್ರ ಅದು ಅತ್ಯಂತ ಅವಶ್ಯವಾಗಿರುತ್ತದೆ.

ಚಿತ್ತಶುದ್ಧಿಯೆಂದರೆ ಮನಸ್ಸಿನಲ್ಲಿ ಆಗಾಗ್ಗೆ ಉತ್ಪನ್ನವಾಗುವ ಮಲಿನ ಅಂದರೆ ದುಷ್ಟ ವಿಷಯೇಚ್ಛೆಗಳಿಗೆ ಕಾರಣವಾದ ವಾಸನೆಗಳನ್ನು ಪೂರ್ಣವಾಗಿ ನಾಶಪಡಿಸುವದು. ಇದಕ್ಕಾಗಿ ಎರಡು ಸಾಧನಗಳಿವೆ. (೧) ಇಚ್ಛೆಗಳು ಹುಟ್ಟಿದ ಹಾಗೆಲ್ಲ ವಿವೇಕದ ಬಲದಿಂದ, ಅವುಗಳಿಂದ ತನಗಾಗುವ ಹಾನಿಗಳನ್ನು ಜ್ಞಾಪಕಕ್ಕೆ ತಂದು, ಆ ಇಚ್ಛೆಗಳನ್ನು ತಳ್ಳಿಬಿಡೋಣವು, (೨) ಅಂಥಾ ವಿಷಯುಗಳ ಸಮಕ್ಷಮದಲ್ಲಿಯಾಗಲಿ, ಅವುಗಳನ್ನು ಸೇವಿಸುವವರ ಸಂಗತಿಯಲ್ಲಿ ಆಗಲಿ ಇರದೆ

ಸದ್ವಾಸನೆಯುಳ್ಳ ಸತ್ಪುರುಷರ ಸಹವಾಸದಲ್ಲಿರೋಣವು. ಒಂದು ವೇಳೆ ಅಂಥಾ ಸತ್ಪುರುಷರ ಸಂಗತಿ ಸಿಗದಿದ್ದರೆ, ಏಕಾಂತದಲ್ಲಿದ್ದು ಸಚ್ಛಾಸ್ತ್ರಪಠಣ ಅಥವಾ ನಾಮಸ್ಮರಣೆಯನ್ನು ಮಾಡುತ್ತಿರುವದು. ಈ ಉಪಾಯಗಳಿಂದ ರಾಜಯೋಗಕ್ಕೆ ಉಪಯುಕ್ತವಾದ ಚಿತ್ತಶುದ್ಧಿಯು ಸಿದ್ಧಿಸುವದು.

ವೇದ, ಉಪನಿಷದ ವ ಇತರ ತಾತ್ವಿಕ ಗ್ರಂಥಗಳ ಅಂದರೆ ಅಧ್ಯಾತ್ಮ ಶಾಸ್ತ್ರಗಳ, ಮನನಪೂರ್ವಕ ಅಧ್ಯಯನದಿಂದ ಮತ್ತು ವಿಚಾರದಿಂದ; ಸತ್ಯಾಸತ್ಯ ಆತ್ಮಾನಾತ್ಮ, ಶಾಶ್ವತ ಅಶಾಶ್ವತವೆಂದರೇನು ಎಂಬದನ್ನು ನಿರ್ಣಯಮಾಡಿ, ಈಶ್ವರನ ಪ್ರತ್ಯಕ್ಷ ಅಸ್ತಿತ್ವ ಅದೇ ಚೈತನ್ಯ ಅದೇ ಆನಂದ ಇವುಗಳ ಪ್ರತ್ಯಕ್ಷ ಅನುಭವ ತಕ್ಕೊಳ್ಳುವದು, ಮತ್ತು ನಿರ್ವಿಕಲ್ಪ ಸಮಾಧಿಯಲ್ಲಿ ಲೀನವಾಗು ವದು ಅಂದರೆ ಪರಮೇಶ್ವರನಲ್ಲಿ ಐಕ್ಯವಾಗುವದು, ಇದೇ ರಾಜಯೋಗದ ಮುಖ್ಯ ಉದ್ದೇಶವು.

ರಾಜಯೋಗದಿಂದ ಮಾತ್ರ ಜನ್ಮ ಕರ್ಮಗಳ ಅಂತ್ಯವಾಗುತ್ತದೆ. ಮತ್ತು ಯೋಗಿಯು ಮನುಷ್ಯದೇಹದಲ್ಲಿದ್ದರೂ, ತಾನು ಎಂದೆಂದೂ ಪೂರ್ಣ ಮುಕ್ತನೇ ಇದ್ದೇನೆ ಎಂಬ ಅನುಭವವನ್ನು ಹೊಂದಿ ದೇಹಪಾತನಂತರ ವಿದೇಹ ಕೈವಲ್ಯವನ್ನು ಹೊಂದುವನು.

ಇಲ್ಲಿ ತನಕ ಯೋಗದ ಸಂಬಂಧ ಕೊಟ್ಟ ವಿವರವು ಬೇರೆಬೇರೆ ಕಾಲ ದಲ್ಲಿ ಶ್ರೀ ಗಜಾನನ ಮಹಾರಾಜರ ಕಡೆಯಿಂದ ಸಿಕ್ಕಿದ್ದರ ಮೇಲೆ ಅವಲಂಬಿಸಿ ಇದ್ದು, ಇದಲ್ಲದೆ ಯೋಗ ವಿಷಯಕ ಬೇರೆಬೇರೆ ಗ್ರಂಥಗಳಿಂದ ಸಹಾ ಕೊಟ್ಟು ಭರ್ತಿ ಮಾಡಿರುತ್ತದೆ. ಈ ವಿಷಯ ಸಂಬಂಧ ಸರ್ವಸಾಧಾರಣ ಪರಿಜ್ಞಾನವು ವಾಚಕರಿಗೆ ದೊರೆಯಬೇಕು ಎಂಬ ಇಷ್ಟೆ ಉದ್ದೇಶವಿದ್ದದರಿಂದ ಮೇಲೆ ಕೊಟ್ಟ ಯೋಗ ವರ್ಣನೆಯು ಸಂಪೂರ್ಣವೆಂದು ಹೇಳಲಾಗದು.

ಮಂತ್ರ, ಲಯ ಮತ್ತು ಹಠ ಈ ಯೋಗಗಳ ಸಾಧನೆಯಿಂದ, ಬರೇ ಸವಿಕಲ್ಪ ಸಮಾಧಿಯು ಸಿದ್ಧವಾಗುವದೆಂದು ಸ್ಪಷ್ಟವಾಗಿ ಹೇಳಿರುವದರಿಂದ, ಬಹಳ ಪ್ರಯಾಸ ಪಟ್ಟು, ಅವುಗಳನ್ನು ಅಭ್ಯಾಸಿಸಿದರೂ, ಮಾನವ ಜನ್ಮಕ್ಕೆ ಬಂದ ಜೀವನ ಮುಖ್ಯ ಗುರಿಯಾಗಿರುವ ಬ್ರಹ್ಮಾತ್ಮೈಕ್ಯಜ್ಞಾನ, ಮತ್ತು ಅದರ ಪರಿಣಾಮವಾದ ಜನ್ಮಮರಣರೂಪ ಸಂಸಾರದಿಂದ ಮೋಕ್ಷ ಇವು ಸಾಧ್ಯವಾಗ ಲಾರವು ಎಂದು ತಿಳಿಯುವದು. ಈ ಪ್ರಕಾರ ಸಂಪೂರ್ಣ ಮುಕ್ತಿ ಸಿಗಬೇಕಾದರೆ ರಾಜಯೋಗವೇ ಕಾರಣವೆಂತ ಅದರ ವಿವರಣೆಯಲ್ಲಿ ಮೇಲೆ ಹೇಳಿರುತ್ತದೆ.

ಈ ಯೋಗವನ್ನು ಶ್ರೀಕೃಷ್ಣ ಪರಮಾತ್ಮನು ಗೀತೆಯೊಳಗೆ ಅರ್ಜುನ ನಿಗೆ ಬೋಧಿಸಿರುತ್ತಾನೆ.

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ॥
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಂ ॥ ಗೀ. ಅ. ೯-೨ ॥

ಅರ್ಥ— ಈ ರಾಜವಿದ್ಯೆಯು ರಾಜಗುಹ್ಯವು (ಶ್ರೇಷ್ಠಗುಹ್ಯ ಅಥವಾ ಗೂಢ ಉಪದೇಶವು) ಇದು ಪವಿತ್ರವು ಮತ್ತು ಉತ್ತಮವು. ಇದಲ್ಲದೆ ಇದು ಪ್ರತ್ಯಕ್ಷ ಅನುಭವಕ್ಕೆ ಬರುವಂಥಾದ್ದು, ಧರ್ಮಕ್ಕೆ ಅನುಕೂಲ, ಆಚರಣೆಗೆ ಸುಲಭ ಮತ್ತು ಎಂದೂ ವ್ಯರ್ಥವಾಗಿ ಹೋಗತಕ್ಕದ್ದಲ್ಲ, ಅಂದರೆ ಶಾಶ್ವತಫಲ ಕೊಡುವಂಥಾದ್ದು.

ಈ ರಾಜವಿದ್ಯೆ ಅಥವಾ ರಾಜಯೋಗದಲ್ಲಿ ದೇಹ ಸಂಬಂಧ ಏನೂ ಕಷ್ಟಪಡಬೇಕಾಗಿಲ್ಲ. ತನ್ನ ದೇಹದ ರಕ್ಷಣ ಪೋಷಣಾದಿಗಳ ಭಾರವನ್ನೆಲ್ಲ, ದೇಹವನ್ನು ಸಿದ್ಧಮಾಡಿ ಅದರೊಳಗೆ ಕೂತು ಅದನ್ನು ಪಾಲಿಸುವಂಥಾ ಪರಮಾತ್ಮನ ಮೇಲೆ ಇಟ್ಟು ಆತನನ್ನೇ ಸದಾ ಸ್ಮರಿಸುತ್ತ ಇದ್ದರಾಯಿತು. ಉಪಾಸನೆಗೆ ಯೋಗ್ಯವಾದ ಮೂರ್ತಿಯನ್ನು ತನ್ನ ಮುಂದಿಟ್ಟುಕೊಂಡು ಸದಾ ಆತನ ನಾಮ ಉಚ್ಚಾರ ಮತ್ತು ಧ್ಯಾನದಲ್ಲಿ ಮೂರ್ತಿ ಈ ಪ್ರಕಾರ ಚಿಂತನೆ ಮಾಡತಕ್ಕದ್ದು. ಆತನ (ಉಪಾಸ್ಯ ಕೃಷ್ಣ, ರಾಮ ಅಥವಾ ಇತರ ದೇವತಾ) ಕೀರ್ತಿಯನ್ನು ಶ್ರವಣ ಅಥವಾ ಪಠಣ ಮಾಡುವದರಿಂದ ಆತನಲ್ಲಿ ದಿನೇದಿನೇ ಭಕ್ತಿ ಮತ್ತು ಪ್ರೇಮವು ವೃದ್ಧಿಂಗತವಾಗುತ್ತ, ಇತರ ವಿಷಯಗಳ ಮೇಲಿನ ಪ್ರೀತಿಯು ಕಡಿಮೆಯಾಗುತ್ತ ಹೋಗುವದು. ಭಕ್ತಿಯ ಬಲದಿಂದ ಹೀಗೆ ವಿಷಯ ವೈರಾಗ್ಯವು ವಿಶೇಷ ಯತ್ನವಿಲ್ಲದೆ ಸಹಜವಾಗಿ ಪ್ರಾಪ್ತಿಯಾಗುವದು. ಹಾಗೆಯೇ ದುಷ್ಟವಾಸನೆಗಳಾದರೂ, ತಮಗೆ ಹೊರಬೀಳಕ್ಕೆ ಅವಕಾಶವೇ ಸಿಗದೆ, ನೀರು ಸಿಗದ ಮಣ್ಣೊಳಗಿನ ಬೀಜಗಳಂತೆ ಒಳಗೆಯೆ ಕ್ಷಯವಾಗಿ ಹೋಗುವವು. ಹೀಗೆ ವಾಸನಾಕ್ಷಯವು ಸಂಭವಿಸುವದು. ಇದು ಜ್ಞಾನಕ್ಕೆ ಅತ್ಯಂತ ಅವಶ್ಯಕವಾದದ್ದು, ಸಹಜವಾಗಿ ಪ್ರಾಪ್ತವಾಗುವದು. ಈ ಪ್ರಕಾರ ಸಗುಣ ಪರಮಾತ್ಮನ ನಾಮರೂಪಾದಿಗಳ ಧ್ಯಾನ ಮಾಡುತ್ತ ಮಾಡುತ್ತ ಸಾಧಕನ ಮನಸ್ಸು ಅತ್ಯಂತ ಶುದ್ಧವಾಗಿ ಜಗತ್ತಿನೊಳಗಿನ ಗುಣಗಳು ಮತ್ತು ರೂಪ ಆಕೃತಿಗಳು ಸಹಾ ಅವನು ಮರೆಯುವನು. ಇದೆ ಸಾಧನದ ಪೂರ್ಣತ್ವ ಹೊಂದುವ ಸಮಯ ಬಂದಾಗ್ಗೆ, ಸಾಧಕನ ಮನಸ್ಸು ಅತ್ಯಂತ ಪ್ರೇಮದ ಲವಲವಿಕೆಯಿಂದ ಸರ್ವವನ್ನು ಮರೆತು ಪರಮಾತ್ಮನಲ್ಲಿ ಇಷ್ಟು ತದಾಕಾರವಾಗಿ ಹೋಗುವದಲ್ಲ, ಅವನಿಗೆ ಎತ್ತನೋಡಿದರೂ ಅದೇ ರೂಪ ಕಾಣಿಸುವದು. ಪುರುಷ, ಸ್ತ್ರೀ, ಪಶುಗಳು, ವನಸ್ಪತ್ಯಾದಿ ಸಹ ಅವನು ಪರಮಾತ್ಮರೂಪವಾಗಿ ಕಾಣುವನು, ವಿಷಯಗಳಲ್ಲಿ ಗುಣದೋಷಗಳನ್ನು ನೋಡುವ ಸ್ವಭಾವವೇ ಹೋಗಿರುವದು. ಇದೇ ಪೂರ್ಣ ಚಿತ್ತಶುದ್ಧಿಯು. ಇದರ ಪ್ರಭಾವದಿಂದ ಸಾಧಕನು ಹೊರಗಿನ ಸರ್ವವಸ್ತುಗಳಲ್ಲಿ ಪರಮಾತ್ಮನ ಹೊರ್ತು ಮತ್ತೇನೂ ಕಾಣನು, ಮಾತ್ರವಲ್ಲ, ತನ್ನಲ್ಲಿ ಸಹಾ ಆತನೇ ದೇಹ

ರೂಪದಿಂದ ವರ್ತಿಸಿ ಸರ್ವಕಾರ್ಯಗಳನ್ನು ನಡಿಸುತ್ತಾನೆಂತ ಸ್ಪಷ್ಟವಾಗಿ ಕಾಣುತ್ತಾನೆ. ಹೀಗೆ ಆ ಸಾಧಕನಲ್ಲಿ ನಿಷ್ಕ್ರಿಯತ್ವ ಸಹಜವಾಗಿ ಬರುವದು. ಈ ಪ್ರಕಾರ ನಿರಂತರದಲ್ಲಿ ಪರಮಾತ್ಮನ ಸಪ್ರೇಮ ಧ್ಯಾನ, ಎಲ್ಲಾ ಕಡೆಯಲ್ಲಿಯೂ ಆತನನ್ನೆ ಕಾಣುವದು, ಮತ್ತು ಅಲ್ಲಲ್ಲಿ ಗುಣಾದಿಗಳನ್ನು ನೋಡದೆ ಭಗವದ್ಭಾವನೆಯಿಂದ ನಮಸ್ಕರಿಸುತ್ತ ಹೋಗುವದು, ಇವೆಲ್ಲವುಗಳಿಂದ ಮನಸ್ಸಿನ ಚಂಚಲತ್ವಕ್ಕೆ ಕಾರಣವಾಗುವ ರಾಗದ್ವೇಷಾದಿಗಳು ಶೂನ್ಯವಾಗಿ, ಸದ್ವೃತ್ತಿ ಸಮೂಹಗಳ ಪ್ರಾಪ್ತಿಯಿಂದ ಆತನ ಮನಸ್ಸು ಏಕಾಗ್ರತೆ ಹೊಂದಲಿಕ್ಕೆ ಸಿದ್ಧವಾಗುತ್ತದೆ. ಮನಸ್ಸಿನ ಚಂಚಲತ್ವಕ್ಕೆ ಕಾರಣವಾದ ಭೇದಾಭೇದಗಳು ದೇಹಾಭಿಮಾನ ಇತ್ಯಾದಿ ಇವನಲ್ಲಿ ಅತ್ಯಂತ ಶಿಥಿಲವಾಗಿ ಇವನ ಮನಸ್ಸು ಪರಮಾತ್ಮನಲ್ಲಿ ಪ್ರೇಮಭರದಿಂದ ಏಕಾಗ್ರವಾಗುವದು. ಈ ಏಕಾಗ್ರತೆಯ ಪರಿಣಾಮವೇನಂದರೆ ಸರ್ವವಾಗಿರುವ ಪರಮಾತ್ಮನು ತನ್ನನ್ನು ಸಹಾ ಆವರಿಸಿಕೊಂಡು ತಾನು ಸಹಾ (ಅಂದರೆ ಸಾಧಕನು ಸಹಾ) ಆಗಿ ವರ್ತಿಸುತ್ತಾನೆಂದು ಕಾಣಿಸುವದು. ಕಟ್ಟಕಡೆಗೆ ನಾನೆಂಬ ಭಾವನೆಯು ಅಳಿದುಹೋಗಿ (ತತ್ಕಾಲಕ್ಕೆ ಧ್ಯಾನಕಾಲದಲ್ಲಿ) ತನ್ನ ಸತ್ (ಅಸ್ತಿತ್ವ) ಮಾತ್ರದ ಅರಿವು ಮಾತ್ರ ಉಳಿದು ಅದು ಧ್ಯೇಯ ಪರಮಾತ್ಮನ ಸತ್ ಮಾತ್ರ ಅರಿವಿನೊಳಗೆ ಐಕ್ಯವಾಗಿ, ನಾನೆಂಬದೂ ಪರಮಾತ್ಮನೆಂಬದೂ ಎರಡೂ ಭಾವನೆಗಳು ಹೋಗಿ ತಾನೇ ತಾನಾಗಿ ಉಳಿಯುವನು. ಇದರಲ್ಲಿ ಧ್ಯಾತನ ಪೂರ್ವ ನಾನೆಂಬ ಭಾವನೆಯೂ ಇವನು ಪರಮಾತ್ಮನೆಂಬ ಭಾವನೆಯೂ ಎರಡೂ ಅಂದರೆ ಧ್ಯಾತಾ ಮತ್ತು ಧ್ಯೇಯ ಇವುಗಳ ಐಕ್ಯ ಸಂಭವಿಸುವದು. ಇಲ್ಲಿ ಏಕತ್ವದ ಭಾವ ಮಾತ್ರ ಉಳಿದು, ನಾನು ಮತ್ತು ಪರಮಾತ್ಮ ಎಂಬ ದ್ವೈತ ಭಾವವು ಎಲ್ಲೆಲ್ಲಿಯೂ ಇಲ್ಲದಂತಾಗುವದ. ಇಲ್ಲಿ ಸಾಧಕನಿಗೆ ಅಸ್ತಿತ್ವ ಅಥವಾ ಸತ್ ಇದರ ಚಿತ್ ಅಂದರೆ ಅರಿವು ಮಾತ್ರ ಅನುಭವಕ್ಕೆ ಬರುವದು. ಇದೇ ಖರೇ ಐಕ್ಯತ್ವವು. ಇದೇ ಸೋಹಂ ಭಾವವೂ (ಸ ಅಂದರೆ ಪರಮಾತ್ಮನು ಅಹಂ ಅಂದರೆ ನಾನೇ) ಆತ್ಮ ಸಾಕ್ಷಾತ್ಕಾರವೂ. ಇದು ಒಮ್ಮೆ ಅನುಭವಕ್ಕೆ ಬಂತೆಂದರೆ ಎಂದೂ ಬಿಟ್ಟು ಹೋಗುವದಿಲ್ಲ. ಮನಸ್ಸಿನ ಏಕಾಗ್ರತೆಯಿಂದ ಸಾಧಕನಿಗೆ ಬೇಕಾದಾಗ ಈ ಐಕ್ಯತೆಯನ್ನು ಅನುಭವಿಸಲಿಕ್ಕೆ ಬರುವದು. ಮತ್ತು ಅವನು ಮನಸ್ಸನ್ನು ಯಾವದರ ಮೇಲೆ ಏಕಾಗ್ರ ಮಾಡುವನೋ ಅದನ್ನು ತನ್ನಲ್ಲಿ ಐಕ್ಯಮಾಡಿಕೊಂಡು ತಾನೇ ತಾನಾಗಿ ಉಳಿಯಲಿಕ್ಕೂ ಮತ್ತೊಂದು ಎರಡೆಂದೂ ಇಲ್ಲದೆ ನಾನೇ ಆ ರೂಪಭಾವನಾದಿಗಳನ್ನು ಇಷ್ಟು ಹೊತ್ತು ಧರಿಸಿಕೊಂಡು ಬೇರೆ ಎಂಬಂತೆ ಕಾಣಿಸಿಕೊಳ್ಳುತ್ತಿದ್ದೆನೆಂದೂ ಪ್ರತ್ಯಕ್ಷವಾಗಿ ತಿಳಿಯಲಿಕ್ಕೆ ಬರುವದು. ಈ ಭಾವನೆಯು ಆರಂಭದಲ್ಲಿ ಒಂದು ಕ್ಷಣ ಮಾತ್ರ ಇದ್ದರೂ ಮುಂದೆ ಅಭ್ಯಾಸಬಲದಿಂದ ದೃಢಪಡಿಸಿಕೊಳ್ಳುತ್ತ ಹೋದರೆ ಅದೇ ನಿರ್ವಿಕಲ್ಪ ಸಮಾಧಿಯಾಗಿ ಪರಿಣಮಿಸುವದು. ಇದರಲ್ಲಿ ಎರಡನೇದೆಂತ ಏನೇನು ಕಾಣುವದೋ ಅದೆಲ್ಲಾ ನಾನೇ ಆ ರೂಪಗಳಿಂದ ಇದ್ದೇನೆ; ನನ್ನ

ಹೊರ್ತು ಇಲ್ಲಿ ಮತ್ತೇನೇನೂ ಇಲ್ಲ, ನಾನೊಬ್ಬನೆ ಇರುತ್ತೇನೆ, ಎಂಬದಾಗಿ ಅನುಭವವು ಸ್ಪಷ್ಟವಾಗಿ ಬರುವದು. ಇದಕ್ಕೆ ನಿರ್ವಿಕಲ್ಪ ಸಮಾಧಿಯೆಂದು ಯಾತಕ್ಕೆನ್ನುವರೆಂದರೆ, ಈ ಸಮಾಧಿಯಲ್ಲಿ ಎರಡನೇದರ ಧ್ಯಾಸ ಮಾತ್ರವೂ ಇಲ್ಲದಿರುವದರಿಂದ ವಿಕಲ್ಪಕ್ಕೆ ಆಶ್ರಯುವೇ ಇಲ್ಲ. ದ್ವೈತ ಭಾವನೆಯು ಎಲ್ಲಿ ತನಕ ವಿರುವದೊ ಅಲ್ಲಿ ತನಕ ಜನ್ಮಮರಣದ ಬೀಜವಿರುವದು. ದ್ವೈತವು ಈ ನಿರ್ವಿಕಲ್ಪ ಸಮಾಧಿಯಲ್ಲಿ ಸಂಪೂರ್ಣ ಅಳಿದುಹೋಗಿರುವದರಿಂದ ಸಾಧಕನು ಸಹ ಏಕರೂಪನಾದ ಆತ್ಮ ಅಥವಾ ಬ್ರಹ್ಮವೇ ತಾನಾಗಿರುವೆನೆಂಬ ಅನುಭವ-ವನ್ನು ಹೊಂದುವನು.

ಪರಮಾತ್ಮನ ಸಗುಣಧ್ಯಾನವು ಈ ನಿರ್ವಿಕಲ್ಪ ಸಮಾಧಿಗೆ ಅಭ್ಯಾಸದ್ವಾರಾ ಕಾರಣವಾಗಿದ್ದರೂ ಐಕ್ಯಕಾಲದಲ್ಲಿ ಗುಣಗಳು ಸಂಪೂರ್ಣ ಅಳಿದು ಹೋಗಿ, ಏಕಾತ್ಮನು ನಿರ್ಗುಣಸ್ವರೂಪನೆಂಬದು ಪ್ರತ್ಯಕ್ಷ ಅನುಭವಕ್ಕೆ ಬರುವದು. ಈ ಐಕ್ಯತ್ವವು ಬರಬರುತ್ತಾ ಇಷ್ಟು ಸುಲಭಸಾಧ್ಯವಾಗುವದಲ್ಲ, ಸಾಧಕನು ಯಾವ ದಾದರೊಂದು ವಿಷಯದಕಡೆಗೆ ಬರೇ ಲಕ್ಷಕೊಟ್ಟನೆಂದರೆ, ಅದು ಮತ್ತೇನಲ್ಲದೆ ತಾನೇತಾನಾಗಿ ಕಾಣುವನು. ಐಕ್ಯಪೂರ್ವದಲ್ಲಿ ಪರಮಾತ್ಮನೆಂತ ಕಾಣಿಸುತ್ತಿದ್ದ ವಸ್ತುಗಳೆಲ್ಲ ಈಗ ತಾನೇ ಆಗಿ ಕಾಣುವನು. ಭಕ್ತಿಯುಕ್ತನಾಗಿ ಪೂರ್ವದಲ್ಲಿ ಪರ-ಮಾತ್ಮಧ್ಯಾನ ಮಾಡುತ್ತಿದ್ದ ಸಾಧಕನು ಈಗ ಪರಮಾತ್ಮಧ್ಯಾನದ ಆರಂಭಕ್ಕೆ ಧ್ಯೇಯನೂ ತಾನೇ ಆಗಿ ತನ್ನದೇ ಧ್ಯಾನ ತಾನು ಮಾಡುತ್ತಿರುವಂತೆ ಕಾಣಿಸುವದು. ಅವನಿಗೆ ಈ ಕಾಲದಲ್ಲಿ ಎರಡನೇದರ ಧ್ಯಾನವೆಂಬದು ಅಸಾಧ್ಯ ಮಾತು. ಹೀಗೆ ಎಲ್ಲಿ ಹೋದರೂ ತನ್ನನ್ನೆ ಕಾಣುವಂಥವನಾಗಿ ಅವನಿಗೆ ಈ ದ್ವೈತ ಲೋಕವು ಕಾಣಿಸದಂತಾಗಿ, ತನ್ನ ಶುದ್ಧ ಸ್ವರೂಪದಲ್ಲಿಯೆ ಸದಾಕಾಲದಲ್ಲಿ ಇರಲಿಕ್ಕೆ ಅವನ ಮುಂದಿನ ಪ್ರಯತ್ನಗಳೆಲ್ಲ ನಡೆಯುವವು. ಈ ಪ್ರಕಾರ ಸ್ಥೂಲ ಲೋಕವನ್ನೆಲ್ಲ ತನ್ನಲ್ಲಿ ಲೀನ ಮಾಡಿಕೊಂಡಮೇಲೆ ತಾನು ಸೂಕ್ಷ್ಮದೇಹಧಾರಿ-ಯಾಗಿ ಸೂಕ್ಷ್ಮಲೋಕದಲ್ಲಿ ವರ್ತಿಸುವೆನೆಂತ ಅವನ ಅನುಭವಕ್ಕೆ ಬರುವದು. ಅಲ್ಲಿಯಾದರೂ ಈ ಐಕ್ಯಭಾವದ ಆಯುಧವನ್ನು ಪ್ರಯೋಗಿಸಿ ಎಲ್ಲ ವಿಷಯಗ-ಳನ್ನು ತನ್ನಲ್ಲಿ ಲೀನಮಾಡಿಕೊಂಡು, ಅಂದರೆ ಎಲ್ಲ ತಾನೇ ಆಗಿರುತ್ತೇನೆ, ತನ್ನ ಹೊರ್ತು ಮತ್ತೇನೇನೂ ಇಲ್ಲ, ಎಂತ ತಿಳಿದಾಕ್ಷಣ, ಬರೇ ಭಾವನಾರೂಪ (ನಿರಾಕಾರ) ಕಾರಣಲೋಕವನ್ನು ಪ್ರವೇಶಿಸುವನು. ಅಲ್ಲಿ ತಾನು ಮತ್ತು ತನ್ನ ಸಂಕಲ್ಪಗಳು ಅಥವಾ ನಿರಾಕಾರವಾದ ಮನೋವೃತ್ತಿಗಳು ಇವರಹೊರ್ತು ಮತ್ತೇನೇನೂ ಇಲ್ಲ; ತನ್ನ ದೇಹ ಸಹ ಭಾವನಾಮಾತ್ರವೆಂದರಿಯುತ್ತಾನೆ. ಅಲ್ಲಿಯಾದರೂ ಸ್ವಲ್ಪ ದ್ವೈತವಿರುವದರಿಂದ ಅಲ್ಲಿಯ ದ್ವೈತಭಾವನೆಗಳಲ್ಲಿಯೂ ಐಕ್ಯ ಭಾವನೆಯನ್ನು ಮಾಡಿ, ತಾನು ಮತ್ತು ತನ್ನ ಭಾವನೆಗಳು ಏಕವೆಂದು ತಿಳಿದು, ಮಹತ್ ಅಥವಾ ಮಹಾಕಾರಣ ಅಥವಾ ಬುದ್ಧಿಲೋಕದಲ್ಲಿ ಸಾಧಕನು ಪ್ರವೇ-ಶಿಸುವನು. ಆ ಲೋಕದಲ್ಲಿ ಎರಡನೇದೆಂಬದು ಏನೇನೂ ಇಲ್ಲದೆ, " ನಾನೊಬ್ಬನೇ

ಇದ್ದೇನೆ” ಎಂಬ ಭಾವನೆ ಮಾತ್ರ ಉಳಿದಿದ್ದರೂ ಇಲ್ಲಿಯ (ಮಹಾಕಾರಣದ) ನಾನು ಎಂಬ ಸೂಕ್ಷ್ಮ ಅಹಂಭಾವವು ಇರುವಂಥಾದ್ದು ಪೂರ್ಣ ಆತ್ಮಸ್ಥಿತಿಯಲ್ಲದ್ದರಿಂದ, ಸಾಧಕನು ಈ ಸ್ಥಿತಿಗೂ ಅತೀತನಾಗಿ ಇದಕ್ಕೂ ಸೂಕ್ಷ್ಮವಾದ ಶುದ್ಧ ಆತ್ಮಲೋಕವನ್ನು ಹೊಂದಬೇಕಾಗಿರುತ್ತದೆ. ಕೆಳಗಿನ ಮೂರು ಅಂದರೆ ಸ್ಥೂಲ, ಸೂಕ್ಷ್ಮ, ಕಾರಣ ಲೋಕಗಳಲ್ಲಿ ದ್ವೈತವಿದ್ದದರಿಂದ ಅದಕ್ಕೆ ವಿಲಕ್ಷಣ 'ನಾನು' ಎಂಬ ಭಾವನೆಯೂ ದೀರ್ಘಸಂಸ್ಕಾರದಿಂದ ದೃಢವಾಗಿದ್ದು, ಆ ಅಹಂಭಾವವು 'ನಾನು' ಎಂಬ ಭಾವನೆಗೆ ಆಶ್ರಯಕೊಡುವಂಥಾ ತುರ್ಯಾವಸ್ಥೆ (ಸಾಕ್ಷಿರೂಪ) ಆಗಿರುವ ಮಹಾಕಾರಣಲೋಕದಲ್ಲಿ ಕೆಲವುಕಾಲ ಸಾಧಕನನ್ನು (ಪರಮಾತ್ಮೈಕ್ಯನಾದ ಜೀವನನ್ನು) ಕೂಡ್ರಿಸಿಕೊಳ್ಳುತ್ತದೆ. ಕ್ರಮೇಣ ದ್ವೈತದ ಪೂರ್ಣ ಅಭಾವದ ಅನುಭವವು ಹ್ಯಾಗೆಹ್ಯಾಗೆ ವೃದ್ಧಿಯಾಗುತ್ತದೊ, ಹಾಗೆಹಾಗೆ ಈ ಮಹಾಕಾರಣದ ಮೂಲ ಶುದ್ಧ ಅಹಂಭಾವವು ಕಡಿಮೆಯಾಗುತ್ತ ಹೋಗಿ, ಬರೇ ಸತ್-ಚಿತ್-ಆನಂದಮಯವಾದ ಸ್ವರೂಪದಲ್ಲಿ ಅಂದರೆ ನಿರ್ಗುಣ ಬ್ರಹ್ಮವೆಂದು ಉಪನಿಷತ್ತುಗಳಲ್ಲಿ ಹೇಳಲ್ಪಡುವದರಲ್ಲಿ ಸ್ಥಿರವಾಗುತ್ತಾನೆ. ಇದೇ ಖರೇ ಮುಕ್ತಿ. ದೇಹವಿದ್ದಾಗ್ಗೆ ಇದನ್ನು ಅಭ್ಯಾಸಬಲದಿಂದ ಸಾಧ್ಯಮಾಡಿಕೊಂಡಿದ್ದರೆ ದೇಹಪಾತನಂತರ ಪುನರ್ಜನ್ಮಕ್ಕೆ ಕಾರಣವಾಗದಂಥ ವಿದೇಹ ಕೈವಲ್ಯವು ಪ್ರಾಪ್ತಿಯಾಗುವದು. ಇಲ್ಲಿ ಅಂದರೆ ಇಹಲೋಕದಲ್ಲಿ ಈ ಮುಕ್ತಿ ಅನುಭವಿಸಲಿಲ್ಲವಾದರೆ, ಮುಂದೆ ಜನ್ಮವು ತಪ್ಪದು.

ಈಗ ಮನಸ್ಸಿನ ಏಕಾಗ್ರತೆ ಐಕ್ಯಕ್ಕೆ ಕಾರಣ ಮತ್ತು ಐಕ್ಯವೆ ಆತ್ಮಸ್ಥಿತಿಗೆ ಕಾರಣವೆಂಬದಕ್ಕೆ ಶಾಸ್ತ್ರಪ್ರಮಾಣವೇನು, ಎಂತ ಕೇಳಿದರೆ, ಪತಂಜಲಿಯ ಯೋಗ ಸೂತ್ರಗಳೇ ಪ್ರಮಾಣ. ಒಂದನೇ ಪಾದದ ೨ನೇ ಸೂತ್ರದಲ್ಲಿ 'ಯೋಗಶ್ಚಿತ್ತವೃತ್ತಿನಿರೋಧಃ' ಅಂತ ಕೊಟ್ಟಪ್ರಕಾರ ಯೋಗವೆಂದರೆ ಚಿತ್ತವೃತ್ತಿನಿರೋಧವು. ಚಿತ್ತೈಕಾಗ್ರತೆಯಿಂದ ವೃತ್ತಿನಿರೋಧವಾಗುತ್ತದೆ, ವೃತ್ತಿನಿರೋಧವೇ ಆತ್ಮಸ್ಥಿತಿ. ೩ನೇ ಸೂತ್ರದ ಪ್ರಕಾರ "ತದಾ ದ್ರಷ್ಟುಃ ಸ್ವರೂಪೇಽವಸ್ಥಾನಮ್" ಆಗ ದ್ರಷ್ಟು ಅಂದರೆ ವೃತ್ತಿಗಳನ್ನು ಕಾಣುವಂಥವನು ಅಂದರೆ ಜೀವನು ತನ್ನ ಸ್ವರೂಪದಲ್ಲಿರುತ್ತಾನೆ, ಅಂದರೆ ಆತ್ಮಸ್ಥಿತಿಯಲ್ಲಿಯೇ ಇರುತ್ತಾನೆ. ಹೀಗೆ ಚಿತ್ತೈಕಾಗ್ರತೆಯಿಂದ ವೃತ್ತಿನಿರೋಧವು ಆದರಿಂದ ಸ್ವರೂಪ ಅಥವಾ ಆತ್ಮಪ್ರಾಪ್ತಿಯು ಎಂಬದು ಸ್ಪಷ್ಟವಾಯಿತು. ಯಾಕೆಂದರೆ ಮನೋವೃತ್ತಿಗಳಿಂದಲೆ ದ್ವೈತಗೋಚರವಾಗುತ್ತದೆ, ವೃತ್ತಿನಿರೋಧದಿಂದ ಅದ್ವೈತವೇ ಉಳಿಯುವದು. ಈಗ ತಾನು ಮತ್ತು ಪರಮಾತ್ಮ ಎಂದು ದ್ವೈತಭಾವದಿಂದ ಪರಮಾತ್ಮನಲ್ಲಿ ಮನಸ್ಸು ಏಕಾಗ್ರಮಾಡಿದರೆ ಅದ್ವೈತ ಹ್ಯಾಗಾಗುವದು ಎಂದು ಶಂಕಾ ತೆಗೆದರೆ, ಅದಕ್ಕೆ ಉತ್ತರಃ- ಧ್ಯಾನ ಕಾಲದಲ್ಲಿ ಮನಸ್ಸಿನಲ್ಲಿ ಧ್ಯೇಯ ಒಂದೇ ಅಂದರೆ ಧ್ಯೇಯಾಕಾರ ವೃತ್ತಿ ಒಂದೇ ಇದ್ದು ಇತರ ವೃತ್ತಿಗಳೆಲ್ಲ ನಿರೋಧವಾಗಿರುತ್ತವೆ, ಮುಂದೆ ಐಕ್ಯ-

ರೂಪ ನಿರ್ವಿಕಲ್ಪ ಸಮಾಧಿಯಾಗಬೇಕಾದರೆ ಮೊದಲು ಸವಿಕಲ್ಪಕ ಸಮಾಧಿಯು ಆಗುವದು. ಅದು ಹ್ಯಾಗೆಂದರೆ ಧ್ಯಾತನು ಧ್ಯೇಯದಮೇಲೆ ಮನಸ್ಸು ಧಾರಣೆ ಮಾಡಿ, ಇತರ ಎಲ್ಲವನ್ನು ಮರೆತು, ಕಡೆಗೆ ತನ್ನನ್ನು ಸಹ ಮರೆತಂತೆ ಆಗಿ ಬರೇ ಧ್ಯೇಯಾಕಾರ ಒಂದೇ ವೃತ್ತಿ ಉಳಿಯುವದು. ಇದಕ್ಕೆ ತದಾಕಾರವೃತ್ತಿ ಅನ್ನುತ್ತಾರೆ. ಇದರಲ್ಲಿ 'ನಾನು' ಎಂಬದು ಅತ್ಯಂತ ಸೂಕ್ಷ್ಮವಾಗಿದ್ದು ಧ್ಯೇಯ ಒಂದೇ ಸರ್ವಕಾಲ್ಯವಸ್ಥಿತವಾಗಿದ್ದು ಧ್ಯಾತಾ ತಾನು ಸಹ ಅದರ ಆಕಾರನಾಗಿ ತನ್ನ ಮರೆಯುತ್ತಾನೆ, ಇದೇ ಅಷ್ಟಾಂಗ ಯೋಗದ ಸಮಾಧಿಯು. ಇದಕ್ಕೆ ಸಂಪ್ರಜ್ಞಾತ ಸಮಾಧಿಯೆಂದು ಅನ್ನುತ್ತಾರೆ. ಆದರೆ ಈ ಸ್ಥಿತಿಯಲ್ಲಿರುವ ಅಭ್ಯಾಸ ವೃದ್ಧವಾದಮೇಲೆ, ಮುಂದೆ ಆ ಧ್ಯೇಯಾಕಾರವಾಗಿದ್ದ ಒಂದೇಒಂದು ವೃತ್ತಿಯೂ ಹೋಗುತ್ತದೆ ಮತ್ತು ಶುದ್ಧ ಸತ್ ಚಿತ್ ಆನಂದ ರೂಪವೇ ತಾನಾಗಿ ಧ್ಯಾತನು ಉಳಿಯುತ್ತಾನೆ. ಯಾಕಂದರೆ ಯಾವದು ಹೋದರೂ ತನ್ನ ಸತ್ಯಸ್ವರೂಪವು ಮರೆಯುವನು ಅಸಾಧ್ಯವಾದ್ದರಿಂದ ಅದೊಂದೆ ನಿರ್ವೃತ್ತಿಕವಾಗಿ ಉಳಿಯುತ್ತದೆ. ಇಲ್ಲಿ ವೃತ್ತಿಗೋಚರವಾದದ್ದೆಲ್ಲ ಶೂನ್ಯವಾಗುತ್ತದೆ.

ಈಗ ಈ ಜೀವನ್ಮುಕ್ತನ ಸ್ಥಿತಿಗತಿವ್ಯವಹಾರಾದಿಗಳನ್ನು ವಿಚಾರಿಸೋಣ. ಯಾಕಂದರೆ ಸಿದ್ಧನ ಸಹಜಾಚರಣೆಯೇ ಸಾಧಕನಿಗೆ ಉತ್ತಮವಾದ ಸಾಧನವಾಗಿರುತ್ತದೆ. ಸಿದ್ಧ ಅಥವಾ ಜೀವನ್ಮುಕ್ತನ ಬಾಹ್ಯವರ್ತನೆ ಮತ್ತು ಮಾನಸಿಕ ಸ್ಥಿತಿ ಇವೆರಡೂ ಸಾಧಕನಿಗೆ ಅನುಕರಣೀಯವಾಗಿರುತ್ತವೆ. ಈ ಸಿದ್ಧನು ಸದಾ ಆತ್ಮಸ್ವರೂಪದಲ್ಲಿಯೇ ಇದ್ದು ಜಗತ್ತನ್ನು ಒಮ್ಮೊಮ್ಮೆ ಕಾಣುವದರಿಂದ, ಅವನಿಗೆ ಎಲ್ಲೆಲ್ಲಿಯೂ ತಾನೇ ಇದ್ದು, ಈ ಅನೇಕ ರೂಪಗಳಿಂದ ತಾನೇ ವ್ಯವಹರಿಸುವಂತೆ ತೋರುತ್ತದೆ. ಹೀಗಿರುತ್ತಾ ಉಚ್ಚ-ನೀಚಾದಿಗಳು ಅವನಿಗೆ ಹ್ಯಾಗೆ ಕಾಣಬೇಕು? ಅವನು ಸರ್ವದರಲ್ಲಿಯೂ ಸಮಾನ ಭಾವ ಇಡುತ್ತಾನೆ ಮಾತ್ರವಲ್ಲ, ಅಜ್ಞಾನಕಾಲದಲ್ಲಿ ತನ್ನ ದೇಹದಮೇಲೆ ಹ್ಯಾಗೆ ಪ್ರೇಮವನ್ನು ಮಾಡುತ್ತಿದ್ದನೊ ಹಾಗೆಯೇ ಈಗ ಸರ್ವ ಪ್ರಾಣಿಗಳ ಮೇಲೆ ಮಾಡುವನು. ಅಚೇತನ ವಸ್ತುಗಳಲ್ಲಿಸಹ ತನ್ನ ವಾಸ್ತವ್ಯವನ್ನೆ ಕಂಡು ಯಾವದೊಂದಕ್ಕೂ ಹಾನಿಯಾಗದಂತೆ ನಡಿಯುವನು. ಆತನನ್ನು ಯಾರು ಪೂಜೆ ಮಾಡಲಿ ಅಥವಾ ಹೊಡಿಯಲಿ, ಅವರಿಬ್ಬರ ರೂಪದಿಂದ ತಾನೇ ಲೀಲೆ ಮಾಡಿದೆನೆಂದು ತಿಳಿಯುತ್ತಾನೆ. ಮತ್ತು ಆ ಸಂಬಂಧ ರಾಗದ್ವೇಷಗಳು ಅವನಲ್ಲಿ ಎಂದೂ ಹುಟ್ಟವು. ಅವನು ಯಾವದೊಂದು ವಿಷಯವನ್ನೂ ಇಚ್ಛಿಸನು. ಯಾಕಂದರೆ, ಇಚ್ಛಿಸತಕ್ಕ ವಸ್ತು ತನ್ನೊಳಗಿನ ಬರೇ ಮನೋವಿಕಾರ ಅಂದರೆ ತಾನೇ ಆಗುವಂಥಾದ್ದಾದ್ದರಿಂದ ಅವನು ಸದಾ ಸಂತುಷ್ಟನಾಗಿರುತ್ತಾನೆ. ಅವನು ಪಡೆಯುವಂಥಾ ಸುಖವು ಬ್ರಹ್ಮಾನಂದ ಸಾಗರದೊಳಗಿನದಾದ್ದರಿಂದ, ಅನಿತ್ಯ ಸುಖದ ಲೇಶಮಾತ್ರವಾಗಿರುವ ಬಾಹ್ಯ ವಿಷಯ ಸುಖಗಳನ್ನು ತುಚ್ಛವೆಂದು ಮನ್ನಿಸಿ, ಅದನ್ನು ಇಚ್ಛಿಸಲಾರನು.

ಅಂತರದಲ್ಲಿಯಾದರೂ ಬಾಹ್ಯ ವಿಷಯಗಳನ್ನು ಎಂದೂ ಚಿಂತಿಸದೆ ಅಖಂಡವಾಗಿ ಆತ್ಮ ಚಿಂತನದಲ್ಲಿಯೇ ಇರುವನು. ಅವನಿಗೆ ತನ್ನ ಹೊರತು ಎರಡನೇದೆಂಬದು ಸುಳ್ಳಾಗಿರುವದರಿಂದ ಅವನು ಸದಾ ಅದ್ವೈತ ಭಾವದಲ್ಲಿಯೇ ವರ್ತಿಸುವನು. ವಸ್ತುಗಳನ್ನು ಕಾಣುವಾಗ್ಗೆ ಅಂದರೆ ವಸ್ತು ಆಕಾರ ವೃತ್ತಿಗಳು ಮನಸ್ಸಿನಲ್ಲಿ ಹೊರಟಾಗ್ಗೆ ತಾನು ಅವುಗಳ ಸಾಕ್ಷಿಯಾಗಿಯೂ, ಹಾಗಿಲ್ಲದಾಗ್ಗೆ ಅಂದರೆ ಸುಷುಪ್ತಿ ಅಥವಾ ಸಮಾಧಿ ಕಾಲದಲ್ಲಿ ಅಖಂಡಾತ್ಮನಾಗಿಯೂ ಇರುವನು. ಇತರರಿಗೆ ಈತನು ಕರ್ಮ ವ್ಯವಹಾರ ಮಾಡುತ್ತಾನೆಂತ ಕಂಡರೂ, ಇವನಿಗೆ ದೇಹದ ಲೇಶಮಾತ್ರವೂ ಸ್ಮೃತಿ ಇಲ್ಲದ್ದರಿಂದ, ತಾನು ಮಾಡುತ್ತೇನೆಂತ ಅವನಿಗೆ ಕ್ಷಣಮಾತ್ರವೂ ಅರಿವು ಆಗಲಾರದು. ಮತ್ತೊಬ್ಬನು ಮಾಡುತ್ತಿದ್ದ ಕರ್ಮವನ್ನು ತಾನು ಕಾಣುತ್ತಿದ್ದರೂ ಅವು ತಾನು ಮಾಡುತ್ತೇನೆಂತ ಹ್ಯಾಗೆ ಅಜ್ಞಾನಿಗೆ ಅರಿವಾಗದೊ. ಹಾಗೆಯೇ ಸಿದ್ಧನಿಗೆ ತನ್ನ ದೇಹದಿಂದ ಆದ ಕರ್ಮಗಳು ತನ್ನವೆಂದು ತಿಳಿಯದು. ಹೀಗಾಗಿ ಅವನು ಕರ್ಮಬದ್ಧನಾಗುವದಿಲ್ಲ. ಇಷ್ಟರಮೇಲಿಂದ ಸಾಧಕನು ಸಿದ್ಧನ ಸಂಪೂರ್ಣ ಸ್ಥಿತಿಯನ್ನು ಊಹಿಸಿ, ಅವನಂತೆ ಆಚರಣೆ ವ ಮನೋವೃತ್ತಿ ಇಟ್ಟು ನಡೆದನಂದರೆ ಶೀಘ್ರದಲ್ಲಿ ಜ್ಞಾನವನ್ನು ಹೊಂದುವನು. "ಜ್ಞಾನಾದೇವತುಂ ಕೈವಲ್ಯಂ" ಎಂದು ಉಪನಿಷತ್ ವಾಕ್ಯ ಇರುವದರಿಂದ, ಈ ಜ್ಞಾನದಿಂದಲೇ ಮೋಕ್ಷವು ಅಥವಾ ಕೈವಲ್ಯವು (ಏಕತ್ವ) ಪ್ರಾಪ್ತಿಯಾಗುವದು. ಈ ಜ್ಞಾನವೆಂದರೆ ಸಂಕ್ಷಿಪ್ತವಾಗಿ "ನಾನು ದೇಹಾದಿಗಳಲ್ಲವು. ನಿರ್ಗುಣ ನಿರಾಕಾರವಾದ ವಸ್ತುವೇ ನಾನು ಶಾಶ್ವತವಾಗಿದ್ದೇನೆ" ಎಂತ ದೃಢ ನಿಶ್ಚಯವಾಗಿ ತಿಳಿಯುವದೇ.

---

## ಶ್ರೀ ಗಜಾನನ ಮಹಾರಾಜರು ಕಲಿಸುತ್ತಿರುವ ಧ್ಯಾನಯೋಗವು.

ಕಳೆದ ಸಾವಿರ ವರ್ಷಗಳಲ್ಲಿ ಮಾನವನ ಆಧ್ಯಾತ್ಮಿಕ ಅವನತಿಯು ಆಗುತ್ತ ಬಂದದೆ. ಆದರೂ ಯೋಗದ ವಿಷಯ ತಿಳಿಯಬೇಕೆನ್ನುವವರು ಸಾವಿರದಲ್ಲಿ ಒಬ್ಬನಂತೆಯಾದರೂ ಇರುತ್ತಾರೆ. ಆದರೆ ಅಂತಃಕರಣಪೂರ್ವಕ ಅಭ್ಯಾಸ ಮಾಡುವವನು ಹತ್ತು ಸಾವಿರದಲ್ಲಿ ಒಬ್ಬನಾದರೂ ಸಿಗುತ್ತಾನೋ ಇಲ್ಲವೋ ಎಂಬದೊಂದು ಸಂಶಯವೇ. ಯೋಗಾಭ್ಯಾಸ ಮಾಡುವವರಂತೆ ಯಾರು ನಮಗೆ ಕಾಣುತ್ತಾರೋ, ಅವರು ಬರೇ ಆಸನ ಪ್ರಾಣಾಯಾಮದ್ದೇ ಅಭ್ಯಾಸ ಮಾಡುತ್ತಿರುತ್ತಾರೆ. ಅಂಥವರು ಯಮ ನಿಯಮಾದಿಗಳನ್ನು ಪಾಲಿಸುವದರಲ್ಲಿ ವಿಶೇಷ ಲಕ್ಷ ಕೊಡುವದಿಲ್ಲ. ಪಾತಂಜಲಿ ಗ್ರಂಥದಲ್ಲಿ ಹೇಳಿದ ಸಂಪೂರ್ಣ ಅಷ್ಟಾಂಗ ಸಹಿತವಾಗಿ ಅಭ್ಯಾಸ ಮಾಡುವವರು ಲಕ್ಷದಲ್ಲಿ ಒಬ್ಬರಿರಬಹುದು.

" ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೆ । ಯತತಾಮಪಿಸಿದ್ಧಾನಾಂ ಕಶ್ಚಿನ್ಮಾಂವೇತ್ತಿ ತತ್ವತಃ ॥ " ಗೀತಾ ಅ. ೭. ಅರ್ಥ- " ಸಾವಿರಾರು ಮನುಷ್ಯರಲ್ಲಿ ಯಾವನಾದರೂ ಒಬ್ಬನು ಸಿದ್ಧಿಪ್ರಾಪ್ತಿಗಾಗಿ ಯತ್ನಿಸುತ್ತಾನೆ. ಅಂಥಾ ಅನೇಕ ಯತ್ನ ಮಾಡುವವರಲ್ಲಿ ಎಲ್ಲಿಯಾದರೂ ಒಬ್ಬನು ನನ್ನನ್ನು ಖರೆಯಾಗಿ ತಿಳಿಯುತ್ತಾನೆ." ಈ ಪ್ರಕಾರ ಗೀತಾವಾಕ್ಯವೂ ಇರುವದು.

" ನೀನು ಮುಮುಕ್ಷುಗಳಿಗೆ ಪರಮಾರ್ಥ ಮಾರ್ಗವನ್ನು ತೋರಿಸಬಲ್ಲಿ", ಎಂದು ಹೀಗೆ ಶ್ರೀಗಜಾನನ ಮಹಾರಾಜರಿಗೆ, ಅವರ ಗುರುಗಳು ಹೇಳಿದ್ದರೂ, ಅವರಿಗೆ ಶಿಕ್ಷಣದ ಮತ್ತು ಅಧ್ಯಾತ್ಮಿಕ ಗ್ರಂಥಗಳ ಅಭ್ಯಾಸ ಮಾಡುವದರ ಲಾಭವಾಗದ್ದರಿಂದ ಯಾವನಾದರೂ ಅವರ ಕಡೆಗೆ ಬಂದರೆ, ಅವನ ಅಧಿಕಾರ ತಿಳಿ-ಯುವದಕ್ಕೆ ತನ್ನಷ್ಟಕ್ಕೆ ಒಂದು ಉಪಾಯವನ್ನು ಅವರು ನಿರ್ಣಯಿಸಿದ್ದರು. ಅದಕ್ಕನುಸರಿಸಿ ಶುದ್ಧ ನೈತಿಕ ವರ್ತನ, ಸಾಮಾಜಿಕ ಸಂಬಂಧಗಳ ವಿಷಯು ಪುನ್ನಣೆ, ಐಹಿಕ ವಿಷಯು ಸಂಬಂಧ ಹೇಯಬುದ್ಧಿ (ಬೇಸರ), ಈಶ್ವರ ವಿಷಯುದಲ್ಲಿ ಆಸ್ತಿಕ್ಯಬುದ್ಧಿ, ವಿಶ್ವಾಸ ಮತ್ತು ಭಕ್ತಿ ಇತ್ಯಾದಿ ಗುಣಗಳು ಒಬ್ಬಾನೊಬ್ಬ ಸಾಧಕನಲ್ಲಿ ಕಂಡುಬಂದದ್ದಾದರೆ, ಅಂಥವನಿಗೆ ಮಹಾರಾಜರು ತನ್ನ ಸದ್ಗುರುಗಳಿಂದ ಮತ್ತು ಮಹಾನ್ ಸಾಧು ಮಚ್ಛೇಂದ್ರನಾಥರಿಂದ ಯಾವ 'ಸೋಹಂ' ಎಂಬ ಅಜಪಾಜಪ ಮಂತ್ರ ಶಿಕ್ಕಿರುವದೂ, ಅದನ್ನು ಉಪದೇಶಿಸುವರು. ಶ್ರೀಗಜಾನನ ಮಹಾರಾಜರಿಗೆ ಅಂತರ್ದೃಷ್ಟಿ ಇದ್ದ ಕಾರಣ ಯಾವನಾದರೂ ಒಬ್ಬ ಸಾಧಕನು ಬಂದದ್ದಾದರೆ, ಅವನು ಈ ಜನ್ಮದಲ್ಲಿಯಾಗಲೀ ಪೂರ್ವ ಜನ್ಮದಲ್ಲಿಯಾಗಲಿ ಯೋಗಾಭ್ಯಾಸ ಮಾಡಿದ್ದಾನೊ ಇಲ್ಲವೊ ಎಂಬ ಸಂಗತಿ ಅವರಿಗೆ ಗೊತ್ತಾಗುತ್ತಿತ್ತು. ಆ ಕಾರಣ ಅವರು ಸಾಧಕನ ಅಭ್ಯಾಸ ಮತ್ತು ಸುಧಾರಣೆ ತಿಳಿದು ಅವನಿಗೆ ಯೋಗ್ಯವಾದ ಮಾರ್ಗವನ್ನು ತೋರಿಸುತ್ತಿರುವರು. ನವನಾಥರೆಲ್ಲರದೂ 'ಸೋಹಂ' ಇದೊಂದೇ ಮಂತ್ರವಾಗಿರುವದರಿಂದ, ಮತ್ತು ಸರ್ವ ಪ್ರಾಣಿಗಳ ಶ್ವಸನಕ್ರಿಯೆಯು ಇದೇ ಮಂತ್ರವನ್ನು ತೋರಿಸು-ವದರಿಂದ, ಯಾವಾತನು ಮಹಾರಾಜರಿಂದ ಈ ಮಂತ್ರವನ್ನು ತಗೊಳ್ಳುವನೊ, ಅವನು ಇದೇ ಜನ್ಮದಲ್ಲಿ ಸಿದ್ಧಿ ಪಡೆಯುವನು.

ತನ್ನ ಶಿಷ್ಯನದು ಏನಾದರೂ ಸುಧಾರಣೆ ಆಗುತ್ತದೊ ಇಲ್ಲವೊ ಎಂತ ನೋಡಿಕೊಳ್ಳುವ ಜವಾಬದಾರಿಯನ್ನು ಶ್ರೀಗಜಾನನ ಮಹಾರಾಜರು ತಮ್ಮ ಮೇಲೆಯೇ ತಗೊಳ್ಳುತ್ತಾರೆ. ಸಾಧಕನ ಮನಸ್ಸಿನ ಬಾಹ್ಯ ವಿಷಯುಗಳ ಕಡೆ ಎಳೆಯೋಣವು ಕಮ್ಮಿ ಕಮ್ಮಿ ಆಗುತ್ತಿದೆ, ಮತ್ತು ಆತನ ಮನಸ್ಸಿಗೆ ಸಮಾಧಾನವಾಗುತ್ತ ನಡೆದದೆ, ಎಂದು ಹೀಗೆ ತಿಳಿದು ಬಂದರೆ ಅವನ ಪರಮಾರ್ಥದಲ್ಲಿ ಸುಧಾರಣೆ ಆಗುತ್ತದೆ ಎಂದು ತಿಳಿಯಲಿಕ್ಕೆ ಏನೂ ಅಡ್ಡಿ ಇಲ್ಲ.

ಇತರ ಲೌಕಿಕ ಗುರುಗಳಿಗಿಂತ ಶ್ರೀಗಜಾನನ ಮಹಾರಾಜರು ಪೂರ್ಣ ವಿಲಕ್ಷಣ ಸ್ಥಿತಿಯವರಿದ್ದಾರೆ. ಮುಂದೆ ಕೊಟ್ಟಿರುವ ಅವರ ಚರಿತ್ರದ ಮೇಲಿಂದ ಈ ಸಂಗತಿಯು ಲಕ್ಷಕ್ಕೆ ಬಂದೀತು. ಆದ್ದರಿಂದ ಈ ವಿಷಯದಲ್ಲಿ ಇಲ್ಲಿ ಹೆಚ್ಚಿಗೆ ಬರೆಯುವ ಜರೂರಿ ಇಲ್ಲ. ಆದರೂ ಧ್ಯಾನಯೋಗದ ವಿಷಯದಲ್ಲಿ ಅವರ ಕಲಿಸೋಣವೇನದೆ ಎಂಬದನ್ನು ಇಲ್ಲಿ ಸಂಕ್ಷೇಪವಾಗಿ ಕೊಡುವದು ಅವಶ್ಯ ಕಂಡದ್ದರಿಂದ ಅದನ್ನು ಮುಂದೆ ವಿವರಿಸಿದೆ.

**ಹಠಯೋಗ ಮತ್ತು ಧ್ಯಾನಯೋಗ ಇವುಗಳೊಳಗಿನ ಭೇದಗಳು:-**

(೧) ಮನೋಜಯ ಮಾಡುವದಕ್ಕಾಗಿ ಹಠಯೋಗದಲ್ಲಿ ಹೇಳಿರುವ ಶಾರೀರಿಕ ವ ಮಾನಸಿಕ ಕ್ರಿಯೆಗಳು ಧ್ಯಾನಯೋಗದಲ್ಲಿ ಅವಶ್ಯವಿಲ್ಲ. ಯಾವನೊಬ್ಬ ಮನುಷ್ಯನು 'ಸೋಹಂ' ಮಂತ್ರದ ಸಹಾಯದಿಂದ, ಶರೀರದೊಳಗಿನ ಯಾವದಾದರೊಂದು ಕಮಲದ ಮೇಲೆ ಮನಸ್ಸಿನ ಏಕಾಗ್ರತೆಯನ್ನು ಮಾಡಿದರೆ, ಅದರಿಂದ ಬೇಗನೆ ಅವನ ಯತ್ನಗಳು ಸಿದ್ಧಿಸುವವು.

(೨) ಹಠಯೋಗದಲ್ಲಿ ಮೊದಲು ಪ್ರಾಣಾಯಾಮದಿಂದ ವಾಯುಜಯ ಮಾಡಿದ್ದಾದರೆ, ಧ್ಯಾನಯೋಗದಿಂದ ಮನೋಜಯ ಮಾಡುವದು ಸುಲಭವಾಗುವದು. ಮತ್ತು ಧ್ಯಾನಯೋಗದಲ್ಲಿ ಮಂತ್ರಸಹಾಯದಿಂದ ಮನಸ್ಸಿನ ಏಕಾಗ್ರತೆ ಸಾಧಿಸಿದ್ದಾದರೆ, ವಾಯುಜಯ ತನ್ನಷ್ಟಕ್ಕೆ ಆಗುತ್ತದೆ.

(೩) ಹಠಯೋಗದಲ್ಲಿ ಪೂರಕವನ್ನು ಮಾಡಿ, ಅನಂತರ ಕುಂಭಕ ಮಾಡಬೇಕಾಗಿರುತ್ತದೆ. ಆದರೆ ಧ್ಯಾನಯೋಗದಲ್ಲಿ ಮನಸ್ಸಿನ ಏಕಾಗ್ರತೆಯ ಬಲದಿಂದ ಪೂರಕ ಮಾಡದೆ ಕುಂಭಕ ತಾನೇ ಸಾಧಿಸುವದು. ಇದಕ್ಕೆ ಕೇವಲ ಕುಂಭಕವೆಂತ ಹೇಳುತ್ತಾರೆ. ಗಾಢ ಏಕಾಗ್ರತೆಯೊಳಗೆ ಅಂದರೆ ಸಮಾಧಿಯೊಳಗೆ ಶ್ವಾಸೋಚ್ಛ್ವಾಸ ಕ್ರಿಯೆಯು ಸೂಕ್ಷ್ಮವಾಗಿ ನಡೆಯುತ್ತದೆ. ಅದು ಇಷ್ಟು ಸೂಕ್ಷ್ಮ ಇರುತ್ತದಲ್ಲ, ಯೋಗಿಯ ಮೂಗಿನ ಹತ್ತರ ಅರಳೆ ಚೂರು ಹಿಡಿದರೆ ಅದು ಅಲ್ಲಾಡುವದು ಕಾಣಿಸುವದಿಲ್ಲ. ಆದರೂ ಇಲ್ಲಿ ಶ್ವಸನಕ್ರಿಯೆಯು ಇರುತ್ತದೆ; ಆದರೆ ಅದು ಕೇವಲ ನಾಮಮಾತ್ರ ಅಂದರೆ ಶರೀರವು ಜೀವಂತ ಇರುವದಕ್ಕೆ ಸಾಕಷ್ಟೆ ಇರುತ್ತದೆ. ಬಾಕಿ ವಿಷಯದಲ್ಲಿ ಅದು ಕುಂಭಕವೇ. ಈ ಪ್ರಕಾರ ಹಠಯೋಗದ ಒಂದು ಮಹತ್ವದ ವಿಷಯವು (ಶ್ವಾಸ ಜಯವು) ಧ್ಯಾನಯೋಗದಲ್ಲಿ ಪ್ರಯತ್ನವಿಲ್ಲದೆ ಸಾಧಿಸುತ್ತದೆ.

ಆದರೂ ಕುಂಡಲಿನಿ ಇದು ನಿಜವಾಗಿ ಪ್ರಾಣಶಕ್ತಿಯೇ. ಅದನ್ನು ಜಾಗೃತ ಮಾಡಿ, ಸುಷುಮ್ನಾ ದ್ವಾರ ತೆರೆದು, ಶ್ವಸನ ಕ್ರಿಯೆ ಸುಷುಮ್ನಾ ನಾಡಿಯೊಳಗಿಂದ ಮಾಡಲಿಕ್ಕೆ ಬರುವಂಥಾದ್ದು ಇದು ಯೋಗಸಾಧನದಲ್ಲಿ ವಿಶೇಷ

ಮಹತ್ವದ ಕ್ರಿಯೆ ಇರುತ್ತದೆ. ಇದನ್ನು ಸಾಧಿಸಲಿಕ್ಕೆ ಸಾಧಕನು ಪದ್ಮಾಸನದಲ್ಲಿ ಅಥವಾ ಸಹಜಾಸನದಲ್ಲಿ ಕೂತು ಧ್ಯಾನಾಭ್ಯಾಸ ಮಾಡಲಿಕ್ಕೆ ಮಹಾರಾಜರು ಉಪದೇಶಮಾಡುತ್ತಾರೆ. ಆಸನವು ಯಾವದಾದರೂ ನಡೆದೀತು. ಆದರೆ ಆ ಸ್ಥಿತಿಯಲ್ಲಿ ಸಾಧಕನ ಶರೀರವನ್ನು ಬಹಳ ಹೊತ್ತು ತನಕ ಸರಳವಾಗಿ ಸುಖ ದಿಂದ ಇಡಲಿಕ್ಕೆ ಬರಬೇಕು. ಗಜಾನನ ಮಹಾರಾಜರು ಇಂಥಾದ್ದೆ ಆಸನ ಹಾಕಬೇಕಂತ ಆಗ್ರಹ ಮಾಡುವದಿಲ್ಲ. ಆದರೆ ಸಾಧಕನು 'ಸೋಹಂ'ದೇ ಜಪ ಮಾಡುವಲ್ಲಿ ಆತನು ಯಾವದೊ ಆಸನವನ್ನು ಹಾಕಬಹುದು, ಅಥವಾ ಸ್ವಸ್ಥ ಮಲಗಿಕೊಂಡಿರಬಹುದು. ಜಪಮಾಡುವ ಮುಖ್ಯ ಉದ್ದೇಶವು, ಮನಸ್ಸು ಏಕಾಗ್ರಮಾಡುವ ಅಭ್ಯಾಸವಾಗಬೇಕೆಂಬುವದೇ, ಮತ್ತು ಈ ಸ್ಥಿತಿಯಲ್ಲಿ ಬಹಳ ಹೊತ್ತು ತನಕ ಇರಲಿಕ್ಕಾಗಬೇಕೆಂಬುದೆ ಮುಖ್ಯ ಹೇತುವು. ಈ ಯೋಗದಲ್ಲಿ ಸಾಧಕನಿಗೆ ವಿಶೇಷ ಪರಿಶ್ರಮವಿಲ್ಲದೆ ಸಮಾಧಿ ಸ್ಥಿತಿ ಹೊಂದಲಿಕ್ಕೆ ಅನುಕೂಲ ವಾಗುವದು. ಮಾನಸಿಕ ಏಕಾಗ್ರತೆಯಿಂದ ಶ್ವಸನ ಕ್ರಿಯೆಯು ತನ್ನಷ್ಟಕ್ಕೆ ವಶವಾಗುತ್ತದೆ. ಸಾಧಕನು ಸುಖದಿಂದ ಇರಲಿಕ್ಕೆ ಬಂದೀತು, ಈ ಪ್ರಕಾರ ಶರೀರದ ಯಾವದಾದರೊಂದು ಸ್ಥಿತಿಯಲ್ಲಿದ್ದು ದೇಹದೊಳಗಿನ ಯಾವದಾದ ರೊಂದು ಭಾಗದ ಮೇಲೆ ಮನಸ್ಸು ಏಕಾಗ್ರಮಾಡಲಿಕ್ಕೆ ಪ್ರಯತ್ನಿಸಬೇಕು. ಇಲ್ಲಿ ಶರೀರದ ಯಾವದಾದರೂ ಒಂದು ಭಾಗವೆಂದರೆ, ಸ್ಥೂಲ ಶರೀರದ್ದಲ್ಲ, ಅಂತಃ ಶರೀರದ ಭಾಗ ( ಕೇಂದ್ರ ಅಥವಾ ಕಮಲ ) ಎಂದು ತಿಳಿಯತಕ್ಕದ್ದು. ಅಂದರೆ ಧ್ಯಾನಯೋಗದಲ್ಲಿ, ಹಠಯೋಗದಲ್ಲಿ ಹೇಳಿದ ಷಟ್‌ಚಕ್ರಗಳ ಪೈಕಿ ಯಾವ ದಾದರೂ ಒಂದೇ ಚಕ್ರದ ಉಪಯೋಗ ಮಾಡಬೇಕು. ಮೂಲಾಧಾರ ( ಗುಹ್ಯ ದ್ವಾರದ ಹತ್ತರ ), ಸ್ವಾಧಿಷ್ಠಾನ ( ಜನನೇಂದ್ರಿಯದ ಸಮೀಪ ), ಮಣಿಪೂರ ( ಹೊಕ್ಕಳದ ಸಮೀಪ ), ಅನಾಹತ ( ಹೃದಯದಲ್ಲಿ ), ವಿಶುದ್ಧ ( ಕಂಠದಲ್ಲಿ ), ಮತ್ತು ಆಜ್ಞಾ ( ಹುಬ್ಬುಗಳ ನಡುವೆ ) ಇವೇ ಷಟ್‌ಚಕ್ರಗಳ ಹೆಸರು ಮತ್ತು ಸ್ಥಾನಗಳಿರುವವು. ಮುಂದೆ ಮೆದುಳಿನ ಮಧ್ಯಭಾಗದಲ್ಲಿ ಸಹಸ್ರದಲ ಚಕ್ರ ವಿರುವದು.

ಶ್ರೀಗಜಾನನ ಮಹಾರಾಜರಾದರೂ ತಮ್ಮ ಶಿಷ್ಯನಿಗೆ ಷಟ್‌ಚಕ್ರಗಳ ಪೈಕಿ ಒಂದು ಚಕ್ರದ ಮೇಲೆ ಏಕಾಗ್ರಮಾಡುತ್ತ, ಜಿವ್ಹಾ ಚಲನವಾಗದಂತೆ ಸೋಹಂ ಜಪಮಾಡಲಿಕ್ಕೆ ಹೇಳುತ್ತಾರೆ. ಮಂತ್ರದ ಅಂತರ ಜಪದಿಂದ ಮತ್ತು ಷಟ್‌ಚಕ್ರಗಳ ಪೈಕಿ ಯಾವದಾದರೊಂದರ ಮೇಲೆ ಏಕಾಗ್ರತೆ ಮಾಡಿದ್ದರಿಂದ ಶ್ವಸನ ಕ್ರಿಯೆಯು ಸಹಜವಾಗಿ ವಶವಾಗುತ್ತದೆ; ಮತ್ತು ಕುಂಡಲಿನಿ ಪ್ರದೇಶ ದಲ್ಲಿ ಲಹರಿ ಉತ್ಪನ್ನವಾಗಿ ಅದು ಜಾಗೃತವಾಗುತ್ತವೆ. ಆಮೇಲೆ ಶ್ವಾಸವು ಸುಷುಮ್ನಾನಾಡಿಯೊಳಗಿಂದ ಮೇಲೆ ಏರುತ್ತದೆ. ಹೀಗೆ ಮನಪವನಗಳು ಏಕ ವಾಗಿ ಅವು ಸಹ ಕಾರ್ಯಮಾಡಲಿಕ್ಕೆ ತೊಡಗುತ್ತವೆ; ಮತ್ತು ಸಾಧಕನು ತನ್ನ ಮನಸ್ಸನ್ನು ಬೇಕಾದಲ್ಲಿ ಹಚ್ಚಲಿಕ್ಕೆ ಶಕ್ತನಾಗುತ್ತಾನೆ.

ಶ್ರೀಗಜಾನನ ಮಹಾರಾಜರು ಶಿಷ್ಯನ ಪೂರ್ವ ಜನ್ಮದ ಅಥವಾ ಈ ಜನ್ಮದ ತಯಾರಿ ಹ್ಯಾಗದೆ ಎಂಬದು ಅಂತರ್ದೃಷ್ಟಿಯಿಂದ ನೋಡಿ ಆ ಮೇಲೆ ಅವನ ಮೇಲೆ ಅನುಗ್ರಹ ಮಾಡುತ್ತಾರೆ ಅಂತ ಹಿಂದೆ ಹೇಳಿರುತ್ತದೆ. ಆ ಕಾರಣ ಶಿಷ್ಯನಿಗೆ ತನ್ನ ಪೂರ್ವ ಅಭ್ಯಾಸ ಸ್ಥಿತಿಗನುಸರಿಸಿ, ಬೇಗನೆ ಅಥವಾ ಮೆಲ್ಲಗೆ ಆತ್ಮದರ್ಶನವಾಗುತ್ತದೆ; ಮತ್ತು ಇದರದೇ ಪರಿಣಾಮವಾಗಿ ಮನಸ್ಸು ಬಾಹ್ಯವಿಷಯಗಳಿಂದ ಪರಾವೃತವಾಗಿ ಅಂತರ್ಮುಖವಾಗುತ್ತದೆ. ಅಂದರೆ ಆತ್ಮನ ಕಡೆಗೆ ತಿರುಗುತ್ತದೆ. ಹೀಗೆ ಈ ಅನುಭವವು ಒಬ್ಬರಿಗೆ ಎಂಟೇ ದಿನಗಳಲ್ಲಿ, ಮತ್ತೊಬ್ಬರಿಗೆ ಹದಿನೈದು ದಿನಗಳಲ್ಲಿ, ಯಾರಿಗೆ ತಿಂಗಳಲ್ಲಿ, ಮತ್ಯಾರಿಗೆ ಆರುತಿಂಗಳಲ್ಲಿ, ಒಬ್ಬೊಬ್ಬರಿಗೆ ವರ್ಷದಲ್ಲಿ, ಅನ್ಯರಿಗೆ ಆರುವರ್ಷಗಳಲ್ಲಿ ಸಹ ಬರುವದುಂಟು, ಮತ್ತು ಅಂಥವನಿಗೆ ಅಂತರ ಪ್ರಕಾಶ ಹೊಳೆಯುವದು.

ಯಾರಾದರೂ ಹೀಗೆ ಪ್ರಶ್ನೆ ಮಾಡುವರಲ್ಲ, ಯಾವದಾದರೊಂದು ವಸ್ತು ಬರೇ ಕಲ್ಪನೆಯಿಂದ ಮನಸ್ಸಿನ ಮುಂದೆ ತರಲಿಕ್ಕೆ ಆಗುತ್ತಿರುವಾಗ, ಈ ಅಂತರ ಪ್ರಕಾಶದ ಅರ್ಥವೇನು ? ಯಾರಿಗೆ ಆತ್ಮದರ್ಶನವಾಗಿರುತ್ತದೆ, ಅವರಿಗೆ ಈ ಪ್ರಶ್ನೆಯ ಉತ್ತರವು ಸಹಜವಾಗಿ ತಿಳಿಯುತ್ತದೆ. ಪ್ರಕಾಶದ ಕಲ್ಪನೆಯನ್ನು ಮಾಡಿ ಅದನ್ನು ಮನಸ್ಸಿನ ಮುಂದೆ ತರುವದು; ಮತ್ತು ಕಣ್ಣುಮುಚ್ಚಿ ಒಳಗೆ ಪ್ರಕಾಶ ಅಥವಾ ಪ್ರಕಾಶಾಕೃತಿ ಪ್ರತ್ಯಕ್ಷ ಕಾಣುವದು, ಇವುಗಳೊಳಗೆ ಮಹದಂತರವಿದೆ. ಈ ಪ್ರಕಾಶವೆಂಬದು ಕಲ್ಪನೆಯ ಆಟವಲ್ಲ, ಪ್ರತ್ಯಕ್ಷಕಾಣುವಂಥಾದ್ದು. ಚರ್ಮಚಕ್ಷುಗಳಿಗೆ ಮಾತ್ರ ಅದು ಕಾಣಲಿಕ್ಕೆ ಬರುವಂಥಾದ್ದಲ್ಲ. ಬಾಹ್ಯವಿಷಯಗಳ ಕಲ್ಪನೆಗಳೆಲ್ಲ ನಿಂತುಹೋಗಿ, ಯಾವಾಗ ಮನಸ್ಸು ಏಕಾಗ್ರವಾಗುತ್ತದೆ, ಆಗ್ಗ ಈ ಪ್ರಕಾಶವು ಒಳಗೆ ಹೊರಗೆ ವ ಎಲ್ಲಾ ಕಡೆಗಳಲ್ಲಿ ಹೊಳೆಯಲಾರಂಭಿಸುತ್ತದೆ. ಆದ್ದರಿಂದ ಈ ಪ್ರಕಾಶವು ಕಾಲ್ಪನಿಕ ಪ್ರಕಾಶವಲ್ಲ, ಅದು ಆತ್ಮನನ್ನು ಪ್ರತ್ಯಕ್ಷವಾಗಿ ಕಾಣುವ ಪ್ರಕಾಶವದೆ. ಒಂದು ವೇಳೆ ಯಾರಾದರೂ ಅಂದಾರಲ್ಲ; ಶ್ವಾಸ ನಿರೋಧದ ಮೂಲಕ ಮೆದುಳಿನ ಶಿರಗಳ ಮೇಲೆ ತಿಣುಕು ಬಿದ್ದು ಉಷ್ಣತೆ ಉತ್ಪನ್ನವಾಗಿ, ಅದರಿಂದ ಪ್ರಕಾಶ ಕಾಣಿಸಬಹುದು, ಅಂದರೆ ಅದಕ್ಕೂ ಮುಂದೆ ಉತ್ತರಕೊಡುವೆವು.

ಸಾಧಕನು ಯಾವಾಗ ಬಾಹ್ಯವಿಷಯಗಳಿಂದ ಮನಸ್ಸನ್ನು ನಿವೃತ್ತ ಮಾಡಿ ಒಳಗಿನ ಕೇಂದ್ರ ( ಕಮಲ )ದ ಮೇಲೆ ಹಚ್ಚುವನೋ, ಮತ್ತು ಅತ್ಯಂತ ಶಾಂತನಾಗಿ ಕೂತಿರುವನೋ, ಆಗ ಉಷ್ಣತಾ ಉತ್ಪನ್ನವಾಗುವಂಥಾ ತಿಣುಕು ಮೆದುಳಿನ ಶಿರಗಳ ಮೇಲೆ ಹ್ಯಾಗೆ ಸಂಭವಿಸೀತು? ಈ ಸಾಧಕನಾದರೂ ಮೆದುಳಿನ ಶಿರಗಳ ಮೇಲೆ ತಿಣುಕು ಬೀಳುವಂಥಾ ಯಾವದೊಂದು ಅಭ್ಯಾಸವನ್ನು ಮಾಡಿರುವದಿಲ್ಲ. ಮನಸ್ಸಿನ ಏಕಾಗ್ರತೆ ಮೂಲಕ ಶ್ವಾಸವು ಸಹಜವಾಗಿ ವಶವಾಗುತ್ತದೆ, ಆದ್ದರಿಂದ ಶಿರಗಳಮೇಲೆ ತಿಣುಕು ಬೀಳುವದೆಂಬದು ಸಯುಕ್ತಿಕ

ವಲ್ಲ. ಇದರ ಹೊರ್ತು, ಕೆಲವು ಸಾಧಕರಿಗೆ ಧ್ಯಾನಕ್ಕೆ ಕೂತಿಲ್ಲವಾದರೂ ಈ ಪ್ರಕಾಶ ಸತತ ಕಾಣುತ್ತಿರುವದು. ಅವರು ಮಾತಾಡುವಾಗ್ಗೆ, ಉಣ್ಣುವಾಗ್ಗೆ, ಕುಡಿಯುವಾಗ್ಗೆ, ನಗುವಾಗ್ಗೆ ಸಹಾ ಪ್ರಕಾಶವು ಒಂದೇಸವನೆ ಅವರ ಮುಂದೆ ಹೊಳೆಯುತ್ತಿರುವದು. ಈ ಉದಾಹರಣದ ಮೇಲಿಂದ ಮೆದುಳಿನ ಶಿರಗಳ ಮೇಲೆ ತಿಣುಕು ಬೀಳುವ ಪ್ರಶ್ನೆಯೇ ಸಂಭವಿಸಲಾರದು.

ಶ್ರವಣ, ಮನನ, ನಿದಿಧ್ಯಾಸನ ಮತ್ತು ಕಡೆಗೆ ಸತತ ಧ್ಯಾನ ಇವುಗಳ ಸಹಾಯದಿಂದ ಆತ್ಮನನ್ನು ಕಾಣಬಹುದೆಂದು ಉಪನಿಷತ್ತುಗಳು ಹೇಳುತ್ತವೆ. ಈ ಆತ್ಮದರ್ಶನವು ಪ್ರಕಾಶರೂಪವಿರುತ್ತದೆ. ಆತ್ಮನು ಬಾಹ್ಯವಸ್ತುಗಳಂತೆ ಜಡವಸ್ತುವಲ್ಲ ( ಅಂದರೆ ಇಂದ್ರಿಯ ವ ಮನಸ್ಸಿಗೆ ಗೋಚರವಾಗತಕ್ಕವನಲ್ಲ ). ಆದ್ದರಿಂದ ಆತನನ್ನು ಮತ್ಯಾವ ಉಪಾಯದಿಂದಲೂ ನೋಡಲಿಕ್ಕೆ ಆಗಲಿ ತೋರಿಸಲಿಕ್ಕೆ ಆಗಲಿ ಸಾಧ್ಯವಿಲ್ಲ. ಆತನು ಪ್ರಕಾಶರೂಪನಿದ್ದು. ಆ ಪ್ರಕಾಶದ ಮೇಲೆ ಯಾವಾಗ ಮನಸ್ಸು ಏಕಾಗ್ರವಾಗುತ್ತದೊ, ಆಗ ಮುಂದಿನ ಅಭ್ಯಾಸವು ಬಹಳ ಸುಲಭವಾಗಿ ಬೇಗನೇ ಸಾಧ್ಯವಾಗುತ್ತದೆ.

ಶ್ರೀಗಜಾನನ ಮಹಾರಾಜರ ಶಿಷ್ಯನಿಗೆ, ಉಪನಿಷತ್ತುಗಳಲ್ಲಿ ಹೇಳಿದಂತೆ ಮೊದಲು ಪ್ರಕಾಶ ದರ್ಶನವಾಗುತ್ತದೆ, “ ನಾನು ಆತ್ಮನ ಧ್ಯಾನ ಮಾಡುತ್ತೇನೆ, ’ ಎಂದು ಯಾವನೊಬ್ಬ ಶಿಷ್ಯನು ಅಂದನಂದರೆ, ಅದರ ಮೇಲೆ ಶಂಕಾಕಾರನು ಹೀಗಂದಾನಲ್ಲ, ಧ್ಯಾನ ಮಾಡಲಿಕ್ಕೆ ಮನಸ್ಸಿಗೆ ಏನಾದರೂ ಆಧಾರ ( ವಸ್ತು ) ಬೇಕಾಗುವದು, ಆದರೆ ಆತ್ಮನು ನಿರ್ಗುಣನು, ನಿರಾಕಾರನು, ಅಂದಮೇಲೆ ಆತ್ಮನ ಧ್ಯಾನ ಹ್ಯಾಗೆ ಸಂಭವಿಸೀತು ? ಅದಕ್ಕೆ ಉತ್ತರ ಹೀಗದಲ್ಲ:— ಆತ್ಮ ಪ್ರಕಾಶದ ಮೇಲೆ ಮನಸ್ಸು ಏಕಾಗ್ರಮಾಡಲಿಕ್ಕೆ ಬರುತ್ತದೆ. ಮತ್ತು ಈ ಆತ್ಮ ಪ್ರಕಾಶವು ಕಾಲ್ಪನಿಕ ಪ್ರಕಾಶವಲ್ಲ, ಪ್ರತ್ಯಕ್ಷ ಕಾಣಿಸುವಂಥಾದ್ದು. ಮತ್ತು ಸಾಧಕನಿಗೆ ಯಾವಾಗ ಅಂತರ್ದೃಷ್ಟಿ ಪ್ರಾಪ್ತಿಯಾಗುವದೊ ಆಗ ಈ ಪ್ರಕಾಶವು ಕಾಣಲಾಗುವದು.

ಯಾವ ಕಾಲದಲ್ಲಿ ಸುಷುಮ್ನಾದ್ವಾರವು ತೆರೆಯಲ್ಪಡುವದೊ ಮತ್ತು ಮನಸ್ಸು ವ ಶ್ವಾಸಗಳು ಈ ಸುಷುಮ್ನಾನಾಡಿಯೊಳಗಿಂದ ಮೇಲೆ ಕೆಳಗೆ ಆಡಬಲ್ಲವೊ ಆಗ ಸಾಧಕನು ವಿಶ್ವದೊಳಗಿನ ವಿವಿಧ ನೋಟಗಳನ್ನು ತಾನು ಇದ್ದಲ್ಲಿಯೇ ಇದ್ದು ನೋಡಲಿಕ್ಕೆ ಶಕ್ತನಾಗುವನು. ಅವನಿಗೆ ನಾನಾ ಪ್ರಕಾರದ ಸುವಾಸಗಳು ಬರುವವು, ಅನೇಕ ಪ್ರಕಾರದ ಧ್ವನಿಗಳು ಕೇಳಲ್ಪಡುವವು. ಅರಣ್ಯಗಳು, ನದಿಗಳು, ಸಮುದ್ರ, ಹಡಗಗಳು, ವಿಮಾನಗಳು, ಚಂದ್ರ, ಸೂರ್ಯ, ತಾರೆಗಳು ಇತ್ಯಾದಿ ಚಮತ್ಕಾರಿಕ ನೋಟಗಳು ಸಾಧಕನಿಗೆ ಕಾಣಿಸುವವು. ಹಾಗೆಯೇ ಅವನು ಬೇರೆ ಬೇರೆ ದೇವತೆಗಳು, ಸಾಧು, ಋಷಿ, ಇವರ ದರ್ಶನಗಳನ್ನು

ತಕ್ಕೊಳ್ಳುವನು, ಮತ್ತು (೧) ತನ್ನ ದೇಹ ಬಿಟ್ಟು ಪರಕಾಯ ಪ್ರವೇಶ ಮಾಡುವದು (೨) ನೀರಿನ ಮೇಲೆ ನಡಿಯುವದು (೩) ಆಕಾಶದಲ್ಲಿ ಸಂಚರಿಸುವದು (೪) ಆಳವಾದ ಪ್ರದೇಶದಲ್ಲಿ ಹುಗಿದಿಟ್ಟ ದ್ರವ್ಯವನ್ನು ಕಾಣುವದು ಇವೇ ಪ್ರಕಾರದ ನಾನಾಶಕ್ತಿಗಳು ಅವನಿಗೆ ಪ್ರಾಪ್ತವಾಗುವವು. ಇಷ್ಟೇ ಅಲ್ಲ, ಅವನು ಎಷ್ಟೋ ದಿವಸ ತನಕ ಹಸಿವು ನೀರಡಿಕೆ ಇಲ್ಲದೆ ಇರಲಿಕ್ಕೆ ಶಕ್ತನಾಗುವನು.

ವಿಶಿಷ್ಟ ಕಮಲಗಳ ಧ್ಯಾನಮಾಡುತ್ತಿರುವಾಗ್ಗೆ, ವಿಶೇಷಪ್ರಕಾರದ ಅನುಭವಗಳು ಬರುವವು ಎಂದು ಹಠಯೋಗ ಪ್ರದೀಪಿಕೆಯಲ್ಲಿ ಹೇಳಿರುತ್ತದೆ. ಆದರೆ ಶ್ರೀ ಗಜಾನನ ಮಹಾರಾಜರ ಅರ್ಧಕ್ಕಿಂತ ಅಧಿಕ ಶಿಷ್ಯರ ಅಭಿಪ್ರಾಯ ಹೀಗದೆಯಲ್ಲ. ಅವರು ಯಾವದಾದರೂ ಒಂದು ಕಮಲದ ಮೇಲೆ ಧ್ಯಾನ ಮಾಡಿದರೂ ಯಾವದಾದರು ಅನುಭವವು ಬರುವದು (ಅಂದರೆ ಇಂಥಾ ಕಮಲದ ಧ್ಯಾನದಿಂದ ಇಂಥಾದ್ದೇ ನೇಮಕ ಅನುಭವ ಬರುವದೆಂಬ ನೇಮವಿಲ್ಲ). ಹಾಗೆಯೇ ಯಾವದೊಂದು ಕಮಲದ ಧ್ಯಾನಮಾಡದಿದ್ದರೂ ಕೇವಲ 'ಸೋಹಂ'ದ ಮಾನಸಿಕಜಪವು ತೀವ್ರ ಸಂವೇಗದಿಂದ ಜಪಿಸಿ, ನಾನಾ ಪ್ರಕಾರದ ಅನುಭವಗಳು ಬಂದದ್ದೂ ಇರುತ್ತದೆ. ಹೀಗೆಯೇ ಅನೇಕ ಉದಾಹರಣೆಗಳು ಇವೆ.

ಶ್ರೀ ಗಜಾನನ ಮಹಾರಾಜರು ತಮ್ಮ ಶಿಷ್ಯನಿಗೆ 'ಸೋಹಂ' ಮಂತ್ರವನ್ನು ಹೇಳುತ್ತಾರೆ. ಅದಕ್ಕೆ ಅಜಪಾಜಪ ಅನ್ನುವರು. ಅದರ ಮೂಲತತ್ವ ವಾಯುವು. ಅನ್ನ, ನೀರು, ಪ್ರಕಾಶ ವ ಹವೆ ಇವು ಶರೀರ ಧಾರಣೆಗೆ ಅವಶ್ಯವಾಗಿರುತ್ತವೆ. ಆ ಪೈಕಿ ಮೊದಲಿನ ಮೂರು ನಮ್ಮ ವಶದಲ್ಲಿರುವವಲ್ಲ, ಅವು ನಮಗೆ ಜರೂರ ಬಿದ್ದಾಗ ಶಿಕ್ಕಾವು ಇಲ್ಲವೆ ಅವು ಶಿಗಲಾರವು. ಆದರೆ ಹವೆ ಮಾತ್ರ ಈ ಮೂರರಿಂದ ಬೇರೆಯಾಗಿದೆ. ಇದು ನಮಗೆ ಬೇಕಾದಾಗ್ಗೆ ಬೇಕಾದಷ್ಟು ಪುಕ್ಕಟೆ ಶಿಗಬಹುದು. ಅನ್ನ, ನೀರು ಮತ್ತು ಪ್ರಕಾಶ ಇವು ವಾಯು ತತ್ವದೊಳಗಿಂದ ಉತ್ಪನ್ನವಾದವು. ಆದ್ದರಿಂದ ವಾಯುತತ್ವದ ಮಹತ್ವವು ಅವುಗಳಗಿಂತ ಹೆಚ್ಚಿನದದೆ. ಆದ್ದರಿಂದ ಅಜಪಾಜಪಕ್ಕೆ ಸುಸಂಗತವಾದ ಯಾವದೊಂದು ಕ್ರಿಯೆಯು ಸ್ವಭಾವಕ್ಕೆ ವ ಪ್ರೇಷ್ಠ ಶಕ್ತಿಗೆ ಮೇಳ ಕೂಡುತ್ತದೆ.

'ಸೋಹಂ'ದ ವೈಶಿಷ್ಟ್ಯ ಏನದೆ ಎಂಬದನ್ನು ನಾವು ಈಗ ವಿಚಾರಿಸುವಾ. ಸರ್ವ ಪ್ರಾಣಿಗಳು ಶ್ವಾಸೋಚ್ಛ್ವಾಸ ಮಾಡುವವುಗಳೇ ಇರುತ್ತವೆ. ಒಂದು ದಿನದಲ್ಲಿ ೨೧,೬೦೦ ಶ್ವಾಸೋಚ್ಛ್ವಾಸಗಳು ನಡಿಯುತ್ತವೆ. ಶ್ವಾಸವನ್ನು ಒಳಗೆ ತಕ್ಕೊಳ್ಳುವಾಗ 'ಸೊ' ಎಂಬ ಧ್ವನಿಯಾಗುತ್ತದೆ; ಮತ್ತು ಬಿಡುವಾಗ 'ಹಮ್' ಎಂಬ ಶಬ್ದವಾಗುತ್ತದೆ. ಇಂಥಾ ಈ 'ಸೋಹಂ' ಧ್ವನಿಯು ಪ್ರತಿ ಒಂದು ಪ್ರಾಣಿಯಲ್ಲಿ ಸತತ ಚಾಲು ಇದ್ದರೂ, ಬಹಳೇ ಕಡಿಮೆ ಪ್ರಾಣಿಗಳಿಗೆ ಅದರ ಅರಿವು ಇರುತ್ತದೆ. ಈ ಧ್ವನಿಯ ಅರಿವು ಇರುವದೆಂಬುದೇ 'ಸೋಹಂ'

ಇದರ ಖರೇ ದರ್ಶನವು. ಇದರ ಅರ್ಥವೇನಂದರೆ, "ಅವನು ನಾನು ಇದ್ದೇನೆ". ಆದ್ದರಿಂದ 'ಸೋಹಂ' ಇದು ಜೀವ ಶಿವರ (ಜೀವಾತ್ಮ ಪರಮಾತ್ಮರ) ಐಕ್ಯವನ್ನು ತೋರಿಸುವದಾಗಿದೆ. ಸರ್ವ ಜ್ಞಾನವು ಈ ಸೋಹಂದೊಳಗೆ ತುಂಬಿರುತ್ತದೆ. ನಾಲ್ಕು ವೇದಗಳು, ಗೀತೆ ಮತ್ತು ಗಾಯತ್ರಿ ಮಂತ್ರವು ಇವೆಲ್ಲಾ 'ಸೋಹಂ' ವಿನಹಾ ಮತ್ತೇನೂ ಹೇಳುವದಿಲ್ಲ. 'ಸೋಹಂ'ದ ಧ್ಯಾನದಿಂದ ಯಾವನೊಬ್ಬನು ಬೇಕಾದ್ದನ್ನು ಸಂಪಾದಿಸ್ಯಾನು. ವಿಷಯಸುಖದ ಅಸಹ್ಯತೆ, ಕರ್ಮ ಸನ್ಯಾಸ, ಜನ್ಮಮರಣ ಪರಂಪರೆಯೊಳಗಿಂದ ಮುಕ್ತತೆ ಮತ್ತು ಆತ್ಮ ಸಾಕ್ಷಾತ್ಕಾರ, ಸ್ವಲ್ಪದರಲ್ಲಿ ಹೇಳುವದೆಂದರೆ, ಎಲ್ಲಾದನ್ನೂ ಈ 'ಸೋಹಂ'ದಿಂದ ಪ್ರಾಪ್ತ ಮಾಡಿಕೊಳ್ಳಲಿಕ್ಕೆ ಬರುತ್ತದೆ. ಇದೇ ನಿಜವಾದ ಧ್ಯಾನಯೋಗ ಅಥವಾ ರಾಜಯೋಗವು.

ಶ್ರೀ ಗಜಾನನ ಮಹಾರಾಜರು ಪ್ರಥಮದಲ್ಲಿ ತಮ್ಮ ಶಿಷ್ಯನ ಅಧಿಕಾರವನ್ನು ನೋಡುತ್ತಾರೆ. ಆ ಮೇಲೆ ಅವನ ಬುದ್ಧಿಯೊಳಗೆ ಪ್ರವೇಶಿಸಿ ಅದಕ್ಕೆ ಚಾಲನೆಯನ್ನು ಕೊಡುತ್ತಾರೆ. ಅನಂತರ 'ಸೋಹಂ'ದ ಜಪವನ್ನು ಹೇಳುತ್ತಾರೆ. ಮತ್ತು ಧ್ಯಾನಯೋಗದ ಮಾರ್ಗಕ್ಕೆ ಹಚ್ಚುತ್ತಾರೆ. ಧ್ಯಾನಕಾಲದಲ್ಲಿ ಬಾಹ್ಯ ಜಗತ್ತು ಇಲ್ಲದಂತಾಗುವದು (ಅದರ ಮರವು ಆಗುವದು) ಮತ್ತು ಸಾಧಕನು ತನ್ನಲ್ಲಿ ಒಳಗಿರುವ ಜಗತ್ತಿನೊಳಗೆ ಪ್ರವೇಶಿಸುತ್ತಾನೆ. ಪ್ರತಿ ಒಬ್ಬ ಶಿಷ್ಯನು ತಾನು ಮಾಡಿದ ಪರಿಶ್ರಮಕ್ಕನುಸರಿಸಿ ಯೋಗದ ಎಂಟೂ ಅಂಗಗಳನ್ನು ಹೆಚ್ಚು ಕಡಿಮೆ ಕಾಲದೊಳಗೆ ಸಾಧಿಸಿಕೊಳ್ಳುತ್ತಾನೆ. ಅವರ ಎಲ್ಲಾ ಶಿಷ್ಯರು ಈ ವಿಧಾನಗಳ ಸತ್ಯತ್ವವನ್ನು ನಿಶ್ಚೈಸಿಕೊಳ್ಳಬೇಕು. ಒಂದುವೇಳೆ ಒಬ್ಬಾನೊಬ್ಬ ಶಿಷ್ಯನು ತನ್ನ ಪೂರ್ವಜನ್ಮದಲ್ಲಿ ಯೋಗದ ಎಂಟು ಅಂಗಗಳ ಪೈಕಿ ಯಾವದನ್ನು ಅಭ್ಯಾಸ ಮಾಡಿರುತ್ತಾನೆ ಎಂಬದು ತಿಳಿದು ಬಂದರೆ, ಅವನಿಗೆ ಪುನಃ ಆ ಅಭ್ಯಾಸ ಹೇಳುವದಿಲ್ಲ. ಯಾವನಾದರೂ ಒಬ್ಬ ಶಿಷ್ಯನು ತನ್ನ ಪೂರ್ವಜನ್ಮದಲ್ಲಿ ಕೆಲವು ಅಂಗಗಳ ಅಭ್ಯಾಸವನ್ನು ಮಾಡಿದ್ದು ಇದ್ದರೆ, ಮತ್ತು ಕೆಲವು ಸಾಧನಗಳು ಉಳಿದಿದ್ದವಾದರೆ, ಧ್ಯಾನಯೋಗದ ಅಭ್ಯಾಸದಿಂದ ಅವುಗಳ ಪೂರ್ಣತೆಯನ್ನು ಮಾಡಲಿಕ್ಕೆ ಸಾಧ್ಯವದೆ. ಮತ್ತು ಯಾವದಾದರೂ ಬಾಹ್ಯನಿಯಮ ಪಾಲಿಸಿದ ವಿನಹಾ ಅಥವಾ ಲಕ್ಷಕ್ಕೆ ಬರುವಂತೆ ಯಾವದಾದರೂ ಪ್ರಯತ್ನಗಳನ್ನು ಮಾಡಿದ ವಿನಹಾ, ಧ್ಯಾನಯೋಗದಿಂದ ಆ ಸಾಧನಗಳಲ್ಲಿ ಪ್ರಾವಿಣ್ಯವನ್ನು ಸಾಧಿಸಬಹುದು.

ಶ್ರೀಗಜಾನನ ಮಹಾರಾಜರು ಯಾವದೊಂದು ವಿಶಿಷ್ಟ ಪದ್ಧತಿಯಿಂದ ಶಿಷ್ಯನ ಮೇಲೆ ಅನುಗ್ರಹ ಮಾಡ್ತಾರು ಎಂಬ ಸಾಧಾರಣ ನಿಯಮವಿಲ್ಲ. ಶಿಷ್ಯನಿಗೆ ಅನುಗ್ರಹ ಮಾಡುವ ಕಾಲದಲ್ಲಿ, ಅವನ ಅಧಿಕಾರ ಎಷ್ಟು ಇದ್ದೀತೋ ಅದರ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ಶ್ರೀಗಜಾನನ ಮಹಾರಾಜರು ಶಿಷ್ಯನಿಗೆ

ಮೊದಲು ಅಂತರ್ದೃಷ್ಟಿಯನ್ನು ಕೊಡುತ್ತಾರೆ ಮತ್ತು ಸುಷುಮ್ನಾನಾಡಿದ್ವಾರಾ ಅವನನ್ನು ಸಹಸ್ರದಳದ ಕಡೆಗೆ ಒಯ್ಯುತ್ತಾರೆ. ಈ ಮಾರ್ಗವು ಬಹು ಕಠಿಣ ವಾಗಿರುತ್ತದೆ. ಶಿಷ್ಯನು ಸದೋದಿತ ಸದ್ಗುರುಗಳ ಸನ್ನಿಧಿಯಲ್ಲಿರತಕ್ಕದ್ದು. ಸದ್ಗುರುಗಳು ಶಿಷ್ಯನಿಗೆ ಈ ಪ್ರಕಾರವಾಗಿ ಮಾರ್ಗ ತೋರಿಸಿದ್ದರೂ ಧ್ಯೇಯ ವನ್ನು ಸಂಪಾದಿಸುವದು ಬಹು ಪರಿಶ್ರಮದ ಕಾರ್ಯವಾಗಿದೆ. ಧ್ಯಾನಯೋಗದ ಅಭ್ಯಾಸ ಕಾಲದಲ್ಲಿ ಅನೇಕ ಪ್ರಕಾರದ ತೊಂದರೆಗಳು ನಿರ್ಮಾಣವಾಗುತ್ತವೆ. ಅವು ಪೂರ್ವ ಜನ್ಮದ ಕರ್ಮಫಲರೂಪವಾಗಿವೆ. ಮನಸ್ಸು ಒಮ್ಮೊಮ್ಮೆ ಚಂಚಲ ವಾಗಿ ಧ್ಯಾನವನ್ನು ಬಿಟ್ಟು ಬಿಡುತ್ತದೆ. ಆದರೆ ಗುರುಗಳ ಮೇಲೆ ದೃಢವಿಶ್ವಾಸ ವಿದ್ದರೆ, ಈ ತೊಂದರೆಗಳು ದೂರವಾಗುತ್ತವೆ. ಜೀವಾತ್ಮನು ಮೂಲದಲ್ಲಿ ಚೈತನ್ಯರೂಪನಿದ್ದರೂ, ಹಾಗೆ ಅನುಭವದಲ್ಲಿ ಬರಲಿಕ್ಕೆ ಮತ್ತು ಅದರ ಮಾರ್ಗ ದರ್ಶನಕ್ಕೆ ಸದ್ಗುರುಗಳ ಅತ್ಯಂತ ಜರೂರಿ ಇದೆ. ಶ್ರೀಗಜಾನನ ಮಹಾರಾಜರ ಶಿಷ್ಯರ ಸುಧಾರಣೆಯು ಅತ್ಯಂತ ಸಮಾಧಾನಕಾರಕವಿದೆ. ಮತ್ತು ಅಭ್ಯಾಸ ಕಾಲದಲ್ಲಿ ಬರುವ ಅಡ್ಡಿಗಳು ಅವರ ಕೃಪೆಯಿಂದಲೇ ದೂರವಾಗುತ್ತವೆ, ಎಂತ ಆ ಶಿಷ್ಯರ ಅನುಭವವದೆ.

ಗಜಾನನ ಮಹಾರಾಜರ ಶಿಷ್ಯರ ಪಾರಮಾರ್ಥಿಕ ಅನುಭವಗಳು ಭಿನ್ನ ಭಿನ್ನವಿರುತ್ತವೆ. ಅವು ಹೀಗೆ ಭಿನ್ನವಾಗಿರಲಿಕ್ಕೆ ಕಾರಣವೆಂದರೆ, ಅವರವರ ಪೂರ್ವಜನ್ಮದ ಅಭ್ಯಾಸ, ಅವರ ಬುದ್ಧಿ ಮತ್ತು ಮನಸ್ಸಿನ ಪಾತ್ರತೆ (ಯೋಗ್ಯತೆ) ಇವುಗಳ ಮೇಲೆ ಅವಲಂಬಿಸಿರುತ್ತದೆ. ಅವರಲ್ಲಿ ಯಾರು ವಿಹಂಗಮ ಮಾರ್ಗದಿಂದ, ಯಾರು ಪಿಪೀಲಿಕಾ ಮಾರ್ಗದಿಂದ, ಯಾರು ಮೀನ ಮಾರ್ಗದಿಂದ, ಯಾರು ಕಪಿಮಾರ್ಗದಿಂದ, ಮತ್ಯಾರು ಶೇಷಮಾರ್ಗದಿಂದ ಹೋಗುತ್ತಾರೆ. ಪ್ರಥಮದಲ್ಲಿ ಅವರಿಗೆ ಅನುಭವ ಬರುತ್ತದೆ, ಆಮೇಲೆ ತಾವು ಯಾವ ಮಾರ್ಗದಿಂದ ಹೋಗುವೆವೆಂಬದು ತಿಳಿಯುತ್ತದೆ. ಮೊದಲು ಅವರಿಗೆ ಆತ್ಮ ಪ್ರತೀತಿಯಾಗುತ್ತದೆ. ಆಮೇಲೆ ಅವರು ಅದನ್ನು ಗುರು ಪ್ರತೀತಿಗೆ ಹೋಲಿಸಿ ನೋಡುವರು. ಅನಂತರ ಉಪನಿಷತ್ತುಗಳು, ಪಾತಂಜಲಿಯೋಗಶಾಸ್ತ್ರ, ಸಾಧುಸಂತರ ಗ್ರಂಥಗಳು ಇವೆಲ್ಲವುಗಳಲ್ಲಿ ಆ ವಿಷಯ ಏನು ಬರೆದದೆ ಎಂಬ ದನ್ನು ನೋಡುವರು, ಈ ಶಿಷ್ಯರು ತಮಗೆ ಬಂದ ಅನುಭವಗಳನ್ನು ತಮ್ಮ ಶಬ್ದಗಳಲ್ಲಿ ಬರೆದಿಟ್ಟಿದ್ದಾರೆ. ಅವನ್ನು ಈ ಪುಸ್ತಕದಲ್ಲಿ ಕಡೆಗೆ ಕೊಟ್ಟಿರುತ್ತೇವೆ, ಬೇರೆ ಬೇರೆ ಶಿಷ್ಯರ ಅನುಭವಗಳ ಪ್ರಕಾರಗಳು ಹ್ಯಾಗಿವೆ ಎಂಬದನ್ನು ನಾವು ನೋಡೋಣ. ಅವನ್ನು ನೋಡುವ ಮೊದಲು ವಿಹಂಗಮಾದಿ ಮಾರ್ಗಗಳೆಂತ ಏನು ಹೇಳಿತ್ತೋ ಅವುಗಳಸಂಬಂಧ ಸ್ವಲ್ಪ ವಿವರವನ್ನು ಮೊದಲು ಕೊಡುತ್ತೇವೆ.

ವಿಹಂಗಮ ಮಾರ್ಗವೆಂದರೆ ಪಕ್ಷಿಮಾರ್ಗ. ಇದು ಭ್ರೂಮಧ್ಯದಲ್ಲಿರುವ ದ್ವಿದಲದಿಂದ ಅಂದರೆ ಆಜ್ಞಾಚಕ್ರದಿಂದ ಆರಂಭವಾಗುತ್ತದೆ. ಪಿಪೀಲಿಕಾ ಮಾರ್ಗವೆಂದರೆ- ಇರುವೆಯ ಮಾರ್ಗ, ಇದು ಮೂಲಾಧಾರ ಚಕ್ರದಿಂದ ಆರಂಭ

ವಾಗಿ ಆರೂ ಚಕ್ರಗಳೊಳಗಿಂದ ಹಾಯುತ್ತದೆ. ಮತ್ಸ್ಯಮಾರ್ಗವೆಂದರೆ- ತಾನು
ಸ್ವತಃ ಮೀನು ಎಂತಲೂ ಬ್ರಹ್ಮವು ಜಲವೆಂತಲೂ ತಿಳಿದು ಅದರಲ್ಲಿ ತೇಲಾಡುತ್ತಿ
ರುವದು. ಕಪಿಮಾರ್ಗವೆಂದರೆ- ಒಂದು ಕಮಲದಿಂದ ಮತ್ತೊಂದು ಕಮಲದ
ಮೇಲೆ ಹಾರುವದು, ಅಂದರೆ ನಡುವಿನ ಕಮಲಗಳನ್ನು ಬಿಟ್ಟರೂ ಅಡ್ಡಿಯಿಲ್ಲ.
ಶೇಷಮಾರ್ಗವೆಂದರೆ- ಮಧ್ಯಸಂಧಿಯ ಮಾರ್ಗ. ಇದರಲ್ಲಿ, ಒಂದು ಸಂಕಲ್ಪ
ಒಂದು ಲಯವಾಯಿತೆಂದರೆ ಮತ್ತೊಂದು ಬರುವ ಪೂರ್ವದಲ್ಲಿ ಯಾವ ಸಂಧಿ
ಕ್ಷಣ ಇರುತ್ತದೋ ಅದನ್ನು ಸಾಧಿಸಿ ಅಲ್ಲೇ ಲಕ್ಷವಿಡುವದು. ಇಲ್ಲಿಯ ಧ್ಯಾನದ
ವಿಷಯವು ನಿರ್ಗುಣ ಆತ್ಮವಿರುತ್ತದೆ, ಆದ್ದರಿಂದ ಇದು ನಿರ್ಗುಣಧ್ಯಾನವು. ಇತರ
ಮಾರ್ಗಗಳಲ್ಲಿ ಧ್ಯಾನಕ್ಕೆ ಯಾವದಾದರೊಂದು ಪ್ರತ್ಯಕ್ಷ ವಿಷಯವಿರುತ್ತದೆ.
ಅಂತ ಅದು ಸಗುಣಧ್ಯಾನವಾಗತ್ತದೆ.

ಪೂರ್ವ ಜನ್ಮದಲ್ಲಿ ಯೋಗ ಮಾರ್ಗದ ಅಭ್ಯಾಸ ಮಾಡಿದ ಶಿಷ್ಯನಿದ್ದರೆ,
ಮಹಾರಾಜರು ಅವನಿಗೆ ಸೋಹಂ ಜಪವನ್ನು ಸತತ ಮಾಡಲಿಕ್ಕೆ ಹೇಳುತ್ತಾರೆ.
ಈ ಜಪ ಚಾಲು ಇರುವಾಗ್ಗೆ ಯಾವದಾದರೊಂದು ಕಮಲದ ಮೇಲೆ ಆತನ
ಮನಸ್ಸು ಏಕಾಗ್ರವಾಗಲಾರಂಭಿಸಿತೆಂದರೆ ಅವನಿಗೆ ಅಂತರ್ದೃಷ್ಟಿ ಪ್ರಾಪ್ತವಾಗು
ತ್ತದೆ ಮತ್ತು ಪರಮಾರ್ಥದ ಅನುಭವಗಳು ಬರಹತ್ತುತ್ತವೆ. ಆದರೆ ಪೂರ್ಣ
ಶಾಸ್ತ್ರಾನುಸಾರ ಯಾವ ಕಮಲದಮೇಲೆ ಧ್ಯಾನ ಘಟಿಸುತ್ತದೊ, ಅದೇ ಕಮಲದ
ಮೇಲೆ ಆ ಅನುಭವಗಳು ಬರುತ್ತವೆ ಅಂತ ನೇಮವಿಲ್ಲ. ಎಲ್ಲಾ ತರದ ಅನುಭವ
ಗಳು ಬರಬೇಕೆಂದರೆ ಎಲ್ಲಾ ಕಮಲಗಳ ಮೇಲೆ ಧ್ಯಾನ ಮಾಡಬೇಕೆಂತ ಯೋಗ-
ಪ್ರದೀಪಿಕೆಯಲ್ಲಿ ಹೇಳಿದೆ. ಆದರೂ ಹಾಗೆಯೇ ಸಂಭವಿಸುತ್ತದೆ ಎಂತ ಹೇಳ-
ಲಾಗದು. ಈ ಸಂಬಂಧ ಗಜಾನನ ಮಹಾರಾಜರ ಪದ್ಧತಿಗಳಾದರೂ ಇವರ
ಸ್ವತಃದ್ದು ಇರುತ್ತವೆ. ಶಿಷ್ಯನಿಗೆ ಯಾವಾಗ ಅಂತರ್ದೃಷ್ಟಿ ಪ್ರಾಪ್ತಿಯಾಗುತ್ತದೊ
ಆಗಲೇ ಅವನು ಸುಷುಮ್ನಾ ಮಾರ್ಗದಲ್ಲಿಯ ಕಮಲಗಳನ್ನು ಪ್ರತ್ಯಕ್ಷ ನೋಡು
ವನು, ಮತ್ತು ಅಲ್ಲಿಯ ದೇವತೆಗಳದಾದರೂ ಅವನಿಗೆ ದರ್ಶನವಾಗುತ್ತದೆ. ಈ
ಕಮಲಗಳು ಎಲ್ಲಿ ತನಕ ತಿರುಗುತ್ತಿರುವವೊ, ಅಲ್ಲಿತನಕ ಅವುಗಳ ಎಸಳುಗಳು
ಎಣಿಸಲಿಕ್ಕೆ ಬರುವದಿಲ್ಲ. ಸ್ಥಿರವಾದವೆಂದರೆ ಧ್ಯಾನ ಪರಿಪಕ್ವವಾಯಿತು, ಮತ್ತು
ಸಾಧಕನು ಪ್ರತಿ ಒಂದು ಕಮಲದಮೇಲಿನ ಮಂತ್ರದ ಅಕ್ಷರಗಳನ್ನು ಓದಬಲ್ಲನು.
ಆದರೆ ಅವುಗಳು ಅವನನ್ನು ಒಂದರಲ್ಲಿ ನಿಲ್ಲಗೊಡದೆ ಬ್ರಹ್ಮರಂಧ್ರಕ್ಕೆ ಕರಕೊಂಡು
ಹೋಗುತ್ತವೆ. ಹ್ಯಾಗೆ ಗಾಳಿಪಟವು ಆಕಾಶದಲ್ಲಿ ಬಹಳ ಮೇಲಕ್ಕೆ ಹೋಯಿತೆಂ
ದರೆ, ಅದು ಸ್ಥಿರವಾಗುತ್ತದೊ, ಹಾಗೆಯೇ ಸಾಧಕನು ಬ್ರಹ್ಮರಂಧ್ರದಲ್ಲಿ ಸ್ಥಿರ-
ವಾಗುತ್ತಾನೆ. ಮತ್ತು ಅಲ್ಲಿಯ ಆನಂದಾನುಭವವನ್ನು ಲುಟಾಯಿಸುತ್ತಾನೆ.
ಯಾವಾಗ ಅವನು ಹಿಂದೆ ನೋಡುವನೊ ಅಂದರೆ ದೇಹಭಾನಕ್ಕೆ ಬರುವನೊ,
ಆಗ ಅವನು ಧ್ಯಾನದೊಳಗೆ ಪ್ರಾಪ್ತವಾದ ಪರಮಾನಂದದ ವರ್ಣನವನ್ನು ಮಾಡ
ಲಿಕ್ಕೆ ಶಕ್ತನಾಗುವನು. ಆ ಮೇಲೆ ಅವನಿಗೆ ಸದ್ಗುರುಗಳು ಹೇಳುತ್ತಾರಲ್ಲ,

'ಎಲ್ಲಿ ಪ್ರಕಾಶ ಮತ್ತು ನಾದ ಏಕವಾಗುತ್ತವೆ, ಅದೇ ನಿನ್ನ ರೂಪ'; ಅನಂತರ ಹೇಳುವದಾಗಲಿ ಕೇಳುವದಾಗಲಿ ಏನೂ ಬಾಕಿ ಉಳಿಯುವದಿಲ್ಲ: ಅನಂತರ ನಾನು ಬ್ರಹ್ಮನಿದ್ದೇನೆಂಬ ಅರಿವು ಸಹ ನಷ್ಟವಾಗುತ್ತದೆ. ಮತ್ತು ಅಲ್ಲಿ ಶುದ್ಧ ಪರಮಾನಂದ ಮಾತ್ರ ಅವಶೇಷವಾಗಿರುವದು.

ಕೆಲವು ಶಿಷ್ಯರು ಕೇವಲ 'ಸೋಹಂ'ದೊಳಗೆ ಮಗ್ನರಾಗಿದ್ದು ಪರಮ ಸುಖದ ಅನುಭವವನ್ನು ಪಡಿಯುತ್ತಾರೆ. ಮತ್ತು ಕೆಲವರು ಆ ಮಾರ್ಗದಲ್ಲಿದ್ದ ನಂತರ ದರ್ಶನ ತೆಕ್ಕೊಂಡು ತೆಕ್ಕೊಂಡು ಕಡೆಗೆ ನಿರ್ಗುಣಾವಸ್ಥೆಯಲ್ಲಿ ಪ್ರವೇಶಿಸುತ್ತಾರೆ. ಕೆಲವರು ಮೊದಲು ದಟ್ಟವಾದ ಅಂಧಕಾರ, ಆ ಮೇಲೆ ಪರಮಾತ್ಮನ ಪ್ರಕಾಶವನ್ನು ನೋಡುತ್ತಾರೆ. ಈ ಪ್ರಕಾಶವು ನಾನಾ ರೂಪಗಳನ್ನು ಧರಿಸುತ್ತದೆ. ಆಮೂಲಕ ಯಾರಿಗೆ ಮುತ್ತಿನ ಗೊಂಚಲು ಕಾಣಿಸುತ್ತದೆ, ಯಾರಿಗೆ ಬಳ್ಳಿಯಂತೆ ಕಾಣಿಸುತ್ತದೆ. ಕೆಲವರಿಗೆ ಆ ಪ್ರಕಾಶವು ಸರ್ಪಾಕಾರ ಕಾಣಿಸುತ್ತದೆ, ಯಾರಿಗೆ ಅದು ಹಂಸದಂತೆ ಕಾಣಿಸುತ್ತದೆ, ಮತ್ತ್ಯಾರಿಗೆ ಅದು ಚಕ್ರರೂಪ ತೋರುತ್ತದೆ. ಕೆಲವರಿಗೆ ದಂಡಾಕೃತಿ, ಮತ್ತು ಕೆಲವರಿಗೆ ಸೂರ್ಯಮಂಡಲ, ಮತ್ತ್ಯಾರಿಗೆ ಮಯೂರವಾಗಿ ಕಾಣಿಸುವದು. ಒಬ್ಬೊಬ್ಬರಿಗೆ ಬೇರೆಬೇರೆ ರಂಗಗಳು ಕಾಣಿಸುತ್ತಿರುವವು. ಈ ಪ್ರಕಾಶದ ಸತೇಜತೆಯ ಮೇಲಿಂದ ತಾನು ಪರಮಾರ್ಥದ ಯಾವ ಮೆಟ್ಟಲಿನಮೇಲೆ ಇರುತ್ತೇನೆಂಬುವದು ಶಿಷ್ಯನಿಗೆ ನಿಶ್ಚಯಿಸಲಿಕ್ಕಾಗುತ್ತದೆ.

ಕೆಲವು ಶಿಷ್ಯರಿಗೆ ಈ ಪ್ರಕಾಶರೂಪ ದೃಶ್ಯದಕೂಡ ನಾನಾವಿಧದ ಧ್ವನಿಗಳು ಕೇಳಿಸುತ್ತಿರುತ್ತವೆ. ಈ ಧ್ವನಿಗೆ ಅನಾಹತ ನಾದವೆನ್ನುತ್ತಾರೆ. ಈ ನಾದವು ಯಾವದೊಂದು ವಸ್ತುವಿನ ಹೊಡತದಿಂದ ಆಗದಿರುವಕಾರಣ ಸ್ವತಃ ಸಿದ್ಧವಾಗಿರುತ್ತದೆ; ಅದ್ದರಿಂದ ಇದಕ್ಕೆ ಅನಾಹತ ಧ್ವನಿ ಅನ್ನುತ್ತಾರೆ. ಮೇಘ ಗರ್ಜನೆ, ಮೃದಂಗ, ಸತಾರ ವಾದನ, ವೀಣೆಯ ತಂತಿ ಬಾರಿಸುವದು, ನೃತ್ಯ, ಶಂಖನಾದ, ಕಪ್ಪೆಗಳ ಕೂಗು, ಜೇನುನೊಣಗಳ ಝೇಂಕಾರ, ನದಿಪ್ರವಾಹಶಬ್ದ, ಮಳೆಯ ಧ್ವನಿ, ತಾಳ ಅಥವಾ ಘಂಟೆ ಬಾರಿಸೋಣ ಇವೇ ಪ್ರಕಾರದ ಧ್ವನಿಗಳಿರುತ್ತವೆ. ಆದರೆ ಇಂಥ ಶಿಷ್ಯನಿಗೆ ಇಂಥದೆ ಶಬ್ದ ಕೇಳಬಂಬೇಕೆಂಬ ನೇಮವಿಲ್ಲ. ಸಾಧಕನು ಧ್ಯಾನಮಾಡಲಿಕ್ಕೆ ಕೂತಿರುವಾಗ, ಇವುಗಳಪೈಕಿ ಯಾವದಾದರೊಂದು ಧ್ವನಿಯನ್ನು ಕೇಳುವನು ಇಷ್ಟೇ ಆ ಸಂಬಂಧ ಹೇಳಲಿಕ್ಕೆ ಬಂದೀತು. ಧ್ವನಿ ಕೇಳಿಸುವದು ಸಾಧಕನ ಅಭ್ಯಾಸಮಾರ್ಗದೊಳಗಿನ ಒಂದು ಅವಸ್ಥೆ ಇರುವದು, ಎಂದು ಅನ್ನಲಿಕ್ಕೆ ಅಡ್ಡಿ ಇಲ್ಲ. ಕಟ್ಟಕಡೆಗೆ ಸೋಹಂ ಧ್ವನಿಯಾದರೂ ಸ್ಪಷ್ಟವಾಗಿ ಕೇಳಿಸುವದು.

ಈ ಒಳಗೆ ಕಾಣಿಸುವ ನೋಟಗಳು ಸ್ವಪ್ನದೊಳಗಿನವೆಂಬಂತೆ ಕಾಣುತ್ತಿದ್ದರೂ ಇವು ಸ್ವಪ್ನಗಳಲ್ಲ. ಇವು ಪ್ರಕಾಶರೂಪವಿರುತ್ತವೆ. ಆದರೆ ಸ್ವಪ್ನದ್ದು

ಹಾಗಿರುವದಿಲ್ಲ. ಈಶ್ವರನೆಂದರೆ ಪ್ರಕಾಶ; ಮತ್ತು ಆತನು ಒಳಗೆ ಕಾಣಿಸುತ್ತಿರುವದರಿಂದ, 'ನಾನು ಸರ್ವರ ಹೃದಯದಲ್ಲಿರುತ್ತೇನೆ' ಎಂಬ ಗೀತಾವಚನವು ಇದರ ಸತ್ಯತ್ವವನ್ನು ನಿರ್ಣಯಿಸಿ ಕೊಡುತ್ತದೆ. ಆದ್ದರಿಂದ ಈ ಪ್ರಕಾಶರೂಪ ನೋಟಗಳಿಗೆ ಸ್ವಪ್ನವೆಂತನ್ನಕೂಡದು.

ಕೆಲವು ಕಾಲದ ನಂತರ ಸಾಧಕನು ಧ್ಯಾನಯೋಗದಲ್ಲಿ ಹ್ಯಾಗೆ ಹ್ಯಾಗೆ ಮುಂದಕ್ಕೆ ಬರುತ್ತಾನೊ ಹಾಗೆಲ್ಲ, ಜ್ಞಾತಾ, ಜ್ಞೇಯ, ಜ್ಞಾನ (ತಿಳಿಯುವವನು, ತಿಳಿಯತಕ್ಕಂಥದು, ಅದರ ಜ್ಞಾನ) ಅಥವಾ ಧ್ಯಾತಾ, ಧ್ಯೇಯ, ಧ್ಯಾನ (ಧ್ಯಾನಿಸುವವನು, ಧ್ಯೇಯವಸ್ತು ಅದರ ಜ್ಞಾನ) ಇವುಗಳು ಏಕರೂಪವಾಗಿ ಹೋಗುತ್ತವೆ. ಅಂದರೆ ಆತ್ಮನ ಹೊರ್ತು ಸರ್ವವಸ್ತುಗಳ ಜ್ಞಾನಕ್ಕೆ ಸಾಧನವಾದ ಈ ತ್ರಿಪುಟಿಯು ಲಯವಾಗುತ್ತದೆ. ಮತ್ತು ಸಾಧಕನು ಸ್ವಾತ್ಮರೂಪದಲ್ಲಿ ಏಕತ್ವವನ್ನು ಹೊಂದುತ್ತಾನೆ. ಧ್ಯಾನದ ನಿಜವಾದ ಉದ್ದೇಶವು ಇದೇ. ಎಲ್ಲಾ ಸಾಧು ಸಂತರು ಆತ್ಮನ ಸೇವೆಯನ್ನು ಮಾಡುತ್ತಿರುತ್ತಾರೆ. ಅಂದರೆ ಇದೇ ಅವರ ಉಪಾಸನೆಯು ಮತ್ತು ಪೂಜೆಯು. ಆದರೆ ಈ ಅವಸ್ಥೆ ಬರುವ ತನಕ, ಇತರ ಉಪಾಸ್ಯವಸ್ತುಗಳ ಉಪಾಸನೆಯನ್ನು ಕೈಕೊಳ್ಳಬೇಕು. ಅನಂತರ ಕೈವಲ್ಯವೇ (ಅದ್ವೈತವೆ) ಹೊರ್ತು ಬೇರೆ ಏನೂ ಇಲ್ಲ.

ಯಾವಾಗ್ಗೆ ಶ್ವಸನ ಕ್ರಿಯೆಯು ವಿರುದ್ಧವಾಗಿ ತಿರುಗಿತೊ, ಆಗ್ಗೆ ಅದು ಭ್ರೂಮಧ್ಯದಲ್ಲಿರುವ ದ್ವಿದಲ ಆಜ್ಞಾ ಚಕ್ರದಲ್ಲಿ ಸೇರುವದು, ಮತ್ತು ಸಾಧಕನಿಗೆ ಇಲ್ಲಿ ತನ್ನ ಸದ್ಗುರುವಿನ ದರ್ಶನವಾಗುತ್ತದೆ. ಇತರ ಸಾಧುಗಳ ದರ್ಶನವೂ ಆಗ ತ್ತದೆ. ಪ್ರಾಣಶಕ್ತಿಯು ಮೆದುಳಿನ ಮಧ್ಯಭಾಗದಲ್ಲಿರುವ ಬ್ರಹ್ಮರಂಧ್ರದ ಕಡೆಗೆ ಹೋಗುವದು, ಮತ್ತು ಅನಂತರ 'ಸೋಹಂ' ಅಂದರೆ ಅವನು ನಾನಿದ್ದೇನೆ, ಈ ಅರಿವು ಆ ಅನಿರ್ವಾಚ್ಯರೂಪ ಪರಮಾತ್ಮನಲ್ಲಿ ಏಕರೂಪವಾಗಿ ಹೋಗುತ್ತದೆ. ಮತ್ತು ಸಾಧಕನಿಗೆ ಪೂರ್ಣಾವಸ್ಥೆಯು ಪ್ರಾಪ್ತವಾಗುವದು.

ಶ್ರೀಗಜಾನನ ಮಹಾರಾಜರ ಕೆಲವು ಶಿಷ್ಯರಿಗೆ, 'ಸಹಜಸಮಾಧಿ' ಪ್ರಾಪ್ತವಾಗಿದ್ದು ಅವರು ಐಹಿಕ ವ್ಯವಹಾರದಲ್ಲಿ ತೊಡಕಿದ್ದಾಗಿ ಕಾಣಿಸುತ್ತಿದ್ದರೂ, ನಿತ್ಯ ಸ್ವಾತ್ಮಸುಖದ ಅನುಭವವನ್ನು ತಕ್ಕೊಳ್ಳುತ್ತಿದ್ದಾರೆ. ಮತ್ತು ಕೆಲವರು ಈ ಅವಸ್ಥೆಯ ಸಮೀಪ ಸಮೀಪ ಹೋದವರೂ ಇದ್ದಾರೆ. ಕೆಲವಂಗೆ ಅಂತರ್ದೃಷ್ಟಿಯ ನೋಟಗಳು ಕಾಣಿಸುವದು ನಿಂತು ಹೋಗಿದ್ದರೂ, ಅವರು ಸರ್ಪದ ಬುಡಕ್ಕೆ (ಅಧಿಷ್ಠಾನವಾಗಿ) ಇರುವ ಒಂದೇ ಮೂಲತತ್ವ 'ಬ್ರಹ್ಮ' ಅದರ ಪ್ರಾಪ್ತಿಯ ವಿಷಯ ಪ್ರಯತ್ನ ಮಾಡುವರು. ಕೆಲವರು ಧ್ಯಾನಸ್ಥಿತಿಯಲ್ಲಿಯೇ ಮಾನಸಿಕ ಪೂಜೆಯನ್ನು ಮಾಡುತ್ತಿದ್ದು, ಈಶ್ವರನ ಸಗುಣ ಸ್ವರೂಪದ ಸಹವಾಸ ಜನ್ಯ ಸುಖವನ್ನು ಉಪಭೋಗಿಸುತ್ತಿದ್ದಾರೆ. ಮತ್ತು ಕೆಲವರಿಗೆ ಆತ್ಮಸಾಕ್ಷಾ

ತ್ಕಾರವಾಗಿದ್ದು 'ಇದೇ ದೇಹದಲ್ಲಿ, ಇದೇ ಕಣ್ಣಿನಿಂದ ಮುಕ್ತಿಯ ಉತ್ಸವವನ್ನು ನೋಡುವೆನು' ಎಂಬ ಶ್ರೀ ತುಕಾರಾಮರ ಉಕ್ತಿಯ ಅನುಭವವನ್ನು ಅವರು ತಕ್ಕೊಳ್ಳುವರು.

ನಮ್ಮ ಅಂಬೋಣದ ವಿಪರೀತಾರ್ಥವಾಗಬಾರದೆಂದು 'ಸಹಜಸಮಾಧಿ' ಅಂದರೇನು, ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ನಾವು ಸಹಜಸಮಾಧಿ ಎನ್ನುವಂಥಾದ್ದು, ಶ್ರೀರಾಮ, ಶ್ರೀಕೃಷ್ಣ ಅಥವಾ ಜನಕರಾಜಾ ಇವರ ಉದಾಹರಣೆಗಳನ್ನು ಕೊಟ್ಟು, ಅವರ ಚರಿತ್ರದಲ್ಲಿ ವರ್ಣನೆ ಮಾಡಿ ತೋರಿಸಿದ 'ಸಹಜಾವಸ್ಥಾ' ಅಥವಾ ಜೀವನ್ಮುಕ್ತಿ ಅಲ್ಲ. ಈ ಸಹಜಾವಸ್ಥೆಯೆಂದರೆ ಯೋಗದ ಪೂರ್ಣಾವಸ್ಥೆಯೇ ಆಗಿರುತ್ತದೆ. ಆ ಸ್ಥಿತಿಯಲ್ಲಿ ಸಮಾಧಿಯೊಳಗೆ ಹೋಗುವದು ಅಥವಾ ಅದರೊಳಗಿಂದ ಹೊರಗೆ ಬರುವದು, ಇದರ ಮಾತೇ ಇಲ್ಲ. ಈ ಸಹಜಾವಸ್ಥೆಯೆಂದರೆ ಸದಾ ಸರ್ವಕಾಲ ಸಮಾಧಿಯೇ ಆಗಿದೆ. ಆ ಶ್ರೇಷ್ಠ ಪುರುಷರು ಕರ್ಮಮಾಡುತ್ತಿದ್ದಾರೆಂತ ಜನರಿಗೆಮಾತ್ರ ಕಾಣಿಸುತ್ತದೆ, ಆದರೆ ವಿಚಾರಮಾಡಿ ನೋಡಿದರೆ, ಅವರ ಹೊರಗೆ ತೋರುತ್ತಿರುವ ಕ್ರಿಯೆಗಳು ತಮ್ಮಷ್ಟಕ್ಕೆ (ಪ್ರಕೃತಿ ಸ್ವಭಾವಾನುಸಾರ) ನಡಿಯುತ್ತಿರುತ್ತವೆ. ಅವರ ಆತ್ಮನು ಬ್ರಹ್ಮದಲ್ಲಿ ಲೀನವಾಗಿದ್ದು ಅವರು ಸದಾ ಸರ್ವಕಾಲ ಆತ್ಮಾನಂದದಲ್ಲಿ ನಿಮಗ್ನರಾಗಿರುತ್ತಾರೆ. ಮತ್ತು ಅವರ ಇಹಲೋಕದ ಸರ್ವವ್ಯವಹಾರಗಳು ದೇಹೇಂದ್ರಿಯಗಳ ಮೂಲಕವೆ ನಡಿಯುತ್ತಿದ್ದು, 'ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ವವಿತ್|' 'ನಾನೇನೂ ಮಾಡುವದಿಲ್ಲ ಎಂಬದಾಗಿ ತತ್ತ್ವವೇತ್ತರು ತಿಳಿಯುತ್ತಾರೆ' ಎಂಬ ಶ್ರೀ ಗೀತಾವಾಕ್ಯವೇ ಇದಕ್ಕೆ ಪ್ರಮಾಣವು. ಸರ್ವಶ್ರೇಷ್ಠ ಮತ್ತು ಪ್ರಖ್ಯಾತರಾದ ಸಾಧುಗಳು ಈ ಸ್ಥಿತಿಗೆ ಮುಟ್ಟಿದವರಿರುತ್ತಾರೆ. ಶ್ರೀಜ್ಞಾನೇಶ್ವರ ಮಹಾರಾಜರು ಗೀತಾರ್ಥ ಬರೆಯುತ್ತಿರುವಾಗ, ಏಕನಾಥ ಮಹಾರಾಜರು ಗೃಹಸ್ಥಾಶ್ರಮ ಪಾಲಿಸುತ್ತಿರುವಾಗ, ಶ್ರೀಸಮರ್ಥ ರಾಮದಾಸರು ಮಹಾರಾಷ್ಟ್ರದ ಉನ್ನತಿಗೋಸ್ಕರ ಶಿವಾಜಿ ಮಹಾರಾಜರಿಗೆ ಉಪದೇಶಿಸುತ್ತಿರುವಾಗ, ಮತ್ತು ಶ್ರೀ ತುಕಾರಾಮ ಮಹಾರಾಜರು ಪಂಢರಪುರದ ವಾರಿಯನ್ನು ಮಾಡುತ್ತಿರುವಾಗ ಈ ಎಲ್ಲ ಸಾಧುಸಂತರು ಈ ಸ್ಥಿತಿಗೆ ಮುಟ್ಟಿದ್ದರು, ಆದರೆ ನಾವು 'ಸಹಜಸಮಾಧಿ' ಅನ್ನುವಂಥಾದ್ದು ಇದಲ್ಲ. ಶಿಷ್ಯನು ಜಗತ್ತಿನ ರೀತಿಪ್ರಕಾರ ಪ್ರಾಪಂಚಿಕ ವ್ಯವಹಾರ ಮಾಡುತ್ತಿರುವಾಗ, ಅವನು ತಾನಾಗಿ ಏನೂ ಯತ್ನಮಾಡದಲೇ ತನ್ನ ಮುಂದೆ ಪ್ರಕಾಶ ಉತ್ಪನ್ನವಾಗುತ್ತದೆ, ಮತ್ತು ಅದರ ಕಡೆಗೆ ಅವಶನಾಗಿ ಎಳೆಯಲ್ಪಟ್ಟು ಸಮಾಧಿ ಸ್ಥಿತಿಗೆ ಮುಟ್ಟುತ್ತಾನೆ. ಆ ಕಾಲದಲ್ಲಿ ಆತಗೆ ಸ್ವಶರೀರದ ಅಥವಾ ತನ್ನ ಪರಿಸ್ಥಿತಿಯ ಭಾನವಿರುವದಿಲ್ಲ. ಅಥವಾ 'ಸೋಹಂ'ದ ಜಪವು ತನ್ನಷ್ಟಕ್ಕೆ ಸುರುವಾಗಿ, ಆತನು ತನ್ನ ಆತ್ಮಸ್ವರೂಪದಲ್ಲಿ ಮಗ್ನನಾಗಿ ಕೆಲವು ವೇಳೆ ತನಕ ಎಲ್ಲವನ್ನೂ ಮರೆಯುತ್ತಾನೆ. ಈ ಅವಸ್ಥೆಯು ಬಹಳ ಹೊತ್ತು ಉಳಿ

ಯುವದೆಂದು ಹೇಳಲಾಗದು, ಕೂಡಲೆ ಆತನು ತನ್ನ ಪೂರ್ವಸ್ಥಿತಿಯನ್ನು ಹೊಂದುವನು. ಕೆಲವು ಶಿಷ್ಯರು ದಿನದೊಳಗೆ ಬಹಳ ಸಾರಿ ಈ ಸ್ಥಿತಿಯೊಳಗೆ ಹೋಗುವರು. ಶಿಷ್ಯನು ಧ್ಯಾನ ಮಾಡುತ್ತಿರುವಾಗ, ಅಥವಾ ಮಾನಸಿಕ ಏಕಾಗ್ರತೆಯನ್ನು ಸಾಧಿಸುತ್ತಿರುವಾಗ, ಸಮಾಧಿ ಸಾಧಿಸಲಿಕ್ಕೆ ಅವನು ಬುದ್ಧಿಪುರಸ್ಸರ ಯತ್ನಗಳನ್ನು ಮಾಡುತ್ತಾನೆ, ಅಂತ ಅವನಿಗೆ ಈ ಸ್ಥಿತಿಯು ಪ್ರಾಪ್ತಿಯಾಗುತ್ತದೆ ಅಂತಲ್ಲ. ಆದರೆ ತಾನು ಏನೂ ಪ್ರಯತ್ನ ಮಾಡದೆ, ಮತ್ತು ತನಗೆ ತಿಳಿಯದೆ, ಈ ಸ್ಥಿತಿ ಪ್ರಾಪ್ತವಾಗುತ್ತದೆ, ಎಂತ ನಾವು ಇದಕ್ಕೆ 'ಸಹಜಸಮಾಧಿ' ಎಂಬ ಹೆಸರು ಕೊಟ್ಟಿರುತ್ತೇವೆ.

ಶ್ರೀಗಜಾನನ ಮಹಾರಾಜರ ಸಾಮರ್ಥ್ಯದ ಪ್ರಶಂಸೆ ಮಾಡುವ ಉದ್ದಿಶ್ಯ ಅತಿಶಯೋಕ್ತಿ ಮಾಡುವಂಥಾದ್ದು, ನಮ್ಮ ಸರ್ವಥಾ ಇಚ್ಛೆಯಿಲ್ಲ; ಇದು ಧ್ಯಾನದಲ್ಲಿಟ್ಟುಕೊಳ್ಳಬೇಕು, ಯಾಕಂದರೆ ಸಂಶಯಕ್ಕೆ ಅವಕಾಶವಿರಬಾರದೆಂತ ಮತ್ತು ಯಾವದೊಂದು ಸಂಗತಿಯನ್ನು ಇದ್ದದ್ದಕ್ಕಿಂತ ಹೆಚ್ಚಿಗೆ ಕೂಡಿಸಿ ಹೇಳಬಾರದೆಂತ ನಾವು ಬಹಳ ಎಚ್ಚರದಲ್ಲಿರುತ್ತೇವೆ. ಆ ಮೂಲಕ ಎಷ್ಟೋ ಸಂಗತಿಗಳಲ್ಲಿ ಅವರ ಖರೇ ಸಾಮರ್ಥ್ಯವನ್ನು ಪ್ರಕಟ ಮಾಡದಿದ್ದ ದೋಷ ಮಾತ್ರ ನಮ್ಮ ಮೇಲೆ ಬರಬಹುದು. ಶ್ರೀಗಜಾನನ ಮಹಾರಾಜರದು ಇಂಥಾದೊಂದು ವಿಶೇಷ ಗುಣ ಇರುವದಲ್ಲ, ಅವರು ತಮ್ಮ ಕೆಲವು ಶಿಷ್ಯರಿಗೆ ಧ್ಯಾನದ ಅಂದರೆ ಯೋಗಾಂಗಗಳ ಒಮ್ಮೆಲೇ ಏಳನೇ ಮೆಟ್ಟಲಿನ ಅನುಗ್ರಹಮಾಡಿ, ಅವರ ಮೇಲೆ ಕೃಪಾಪ್ರಸಾದ ಮಾಡಿರುತ್ತಾರೆ.

ಅವರನ್ನುತ್ತಾರೆ—"ಬಂಧು ಭಗಿನಿಯರೆ, 'ಸೋಹಂ'ದ ಪ್ರಕಾಶ ಮಾರ್ಗದ ಮೇಲಿನ ನಾನೊಬ್ಬ ದಾರಿಕಾರನಿದ್ದೇನೆ, ಮತ್ತು ಸದ್ಗುರು ಧ್ಯಾನ ಮಾಡಲಿಕ್ಕೆ, ನನ್ನ ಸದ್ಗುರುಗಳ ನಾನೊಬ್ಬ ವಿದ್ಯಾರ್ಥಿ ಇದ್ದೇನೆ. ನನಗೆ ಸ್ವತಃ ಯಾವ ಅನುಭವಗಳು ಬಂದಿರುತ್ತವೆ, ಅವನ್ನು ಸದ್ಗುರು ಕೃಪೆಯಿಂದಲೇ ನಿಮಗೆ ಹೇಳುತ್ತೇನೆ. ಎಚ್ಚರಾಗಿರಿ ಮತ್ತು ಅಜ್ಞಾನದ ಗಾಢಾಂಧಕಾರದಲ್ಲಿ ಸೋಹಂ ಜ್ಯೋತಿಯನ್ನು ಪ್ರಜ್ವಲಿತ ಮಾಡಿರಿ; ಮತ್ತು ಧ್ಯಾನಯೋಗದ ಅಭ್ಯಾಸವನ್ನು ಮಾಡಿ ಆತ್ಮಸಾಕ್ಷಾತ್ಕಾರದ ಪ್ರಾಪ್ತಿಮಾಡಿಕೊಳ್ಳಿರಿ. ಅಂದರೆ ನಿಮ್ಮ ಇಹಲೋಕದ ಜೀವನವೆಲ್ಲ ಆನಂದಮಯವಾದೀತು. ಅದರಲ್ಲಿ ಅಧ್ಯಾತ್ಮಿಕ ಶಕ್ತಿಯು ಉತ್ಪನ್ನವಾದೀತು. ಹೀಗಾಯಿತೆಂದರೆ ದುಷ್ಟ ಮನುಷ್ಯನಿಗೆ ಸಹಾ ನಿಮ್ಮಕಡೆ ವಕ್ರದೃಷ್ಟಿಯಿಂದ ನೋಡಲಶಕ್ಯವಾದೀತು. ನಿಮ್ಮ ಧ್ಯಾನವು ಯಾವಾಗ್ಗೆ ಪರಿಪಕ್ವ ಸ್ಥಿತಿಗೆ ಮುಟ್ಟುವದೋ ಆಗ ಶತ್ರುಗಳು ನಿಮ್ಮ ಬಂಧು ಭಗಿನಿಯರಂತೆ ನಿಮ್ಮ ಕೂಡೆ ನಡೆದಾರು. ನೀವು ಆಮೇಲೆ ಸಮಾಜದೊಳಗೆ ಇದ್ದರೆ ಸಂಸಾರ ಯಾತ್ರೆಯನ್ನು ಸುರಳಿತವಾಗಿ ನಡಿಸೀರಿ ಮತ್ತು ಪರಮಾರ್ಥದಂತೆ ಸಂಸಾರದಲ್ಲಿಯೂ ಸುಖಿಯಾಗಿರುವಿರಿ. ಸಂಸಾರದಲ್ಲಿದ್ದು (ಅಂದರೆ, ಸ್ವಾರ್ಥ ಸಾಧಿಸಿ)

ಪರಮಾರ್ಥವನ್ನು ಸಾಧಿಸುವದೆಂದರೆ ಹೀಗೆಯೆ. ಇದೇ ಗುರುಕೃಪೆ; ಪರಮಾತ್ಮನ ಕೃಪೆ ಎಂಬುವದಾದರೂ ಇದೇ. ಈ ಸಂಗತಿಯನ್ನು ಲಕ್ಷದಲ್ಲಿಟ್ಟುಕೊಳ್ಳಬೇಕಲ್ಲ, ಆತ್ಮಜ್ಞಾನವು ಮನಸ್ಸನ್ನು ದುರ್ಬಲ ಸ್ಥಿತಿಗೆ ತರುವಂಥಾದ್ದು ಎಂದೂ ಅಲ್ಲ. ಉಲಟ ಆತ್ಮಜ್ಞಾನಿಯ ಮನಸ್ಸು ಜಗತ್ತನ್ನೆಲ್ಲ ಆವರಿಸಿಕೊಳ್ಳುವದರಿಂದ ಜಗತ್ತಿನೊಳಗಿನ ಸಾಮರ್ಥ್ಯವೆಲ್ಲ ಅದಕ್ಕೆ ಬರುವದು. ಆತ್ಮಿಕ ವಿಷಯವು ಎಲ್ಲ ಭ್ರಾಮಿಕ ವ ಭಾಸಾತ್ಮಕ ಕಲ್ಪನೆಗಳಿರುತ್ತವೆ ಅಂತ ಅನ್ನುವ ಮೊದಲು ಜನರು ಅದರ ಅನುಭವವನ್ನು ತಕ್ಕೊಳ್ಳಲಿಕ್ಕೆ ಯತ್ನಿಸಬೇಕು. ಮತ್ತು ಖಚಿತವಾಗಿ ಅವು ಭ್ರಾಮಿಕ ಅವೆ ಅಂತ ಅವರಿಗೆ ತಿಳಿದ ವಿನಹಾ ಹಾಗನ್ನಬಾರದು. ಮತ್ತು ಹಾಗೆಯೆ ಅಂದರೆ ಅವರು ಇನ್ನೂ ಅಪಕ್ವ ಸ್ಥಿತಿಯಲ್ಲಿದ್ದಾರೆಂತ ನಾವು ತಿಳಿಯುವೆವು."

ಶ್ರೀಗಜಾನನ ಮಹಾರಾಜರು ಯಾವನಾದರೊಬ್ಬ ಶಿಷ್ಯನ ಮೇಲೆ ಯಾವಾಗ್ಗೆ ಅನುಗ್ರಹ ಮಾಡುತ್ತಾರೋ, ಅನಂತರ ಅವರು ಪ್ರತಿದಿನ ಮುಂಜಾನೆ ಸಂಜೆಗೆ ಸುಮಾರು ಎರಡು ಎರಡುವರೆ ಘಟಿಕೆಪರ್ಯಂತ ತಮ್ಮ ಸಮಕ್ಷಮ ಆತನಿಂದ ಧ್ಯಾನದ ಅಭ್ಯಾಸ ಮಾಡಿಸಿಕೊಳ್ಳುತ್ತಾರೆ ಅವನ ಅಭ್ಯಾಸ ಬರೋಬರಿ ನಡೆದದೆ ಅಂತ ತಿಳಿದ ಮೇಲೆ, ಆ ಶಿಷ್ಯನಿಗೆ ಮನೆಯಲ್ಲಿಯೆ ಇದ್ದು ಅಭ್ಯಾಸ ಮಾಡಲಿಕ್ಕೆ ಹೇಳುತ್ತಾರೆ. ಅವರ ದರ್ಶನಕ್ಕೆ ಯಾರಾದರೂ ಹೋದರೆ— 'ಹೋಗು, ನಿನಗೆ ಮಗನು ಹುಟ್ಟುತ್ತಾನೆ, ನಿನಗೆ ನೌಕರಿ ಆಗುತ್ತದೆ, ನೀನು ಶ್ರೀಮಂತನಾಗುವಿ, ನೀನು ರೋಗದಿಂದ ಬಿಡುಗಡೆಯಾಗುವಿ' ಈ ಪ್ರಕಾರ ಅವರೂ ಎಂದೂ ಅನ್ನಲಾರರು, ಯಾಕಂದರೆ ಸಂತರ ನಿಜವಾದ ಲೋಕದಲ್ಲಿಯ ಕಾರ್ಯವು ಇದಲ್ಲ, ಮುಮುಕ್ಷುಗಳಿಗೆ ಅಧ್ಯಾತ್ಮ ಮಾರ್ಗವನ್ನು ತೋರಿಸುವದಷ್ಟೆ ಅವರ ಅವತಾರ ಕಾರ್ಯವು. ಸಾಧಕನು ಗುರುಗಳ ಕಡೆಯಿಂದ ಉಪದೇಶ ತಕ್ಕೊಳ್ಳಬೇಕು ಮತ್ತು ಆ ಪ್ರಕಾರ ಧ್ಯಾನದ ಅಭ್ಯಾಸ ಮಾಡಬೇಕು. ಮತ್ತು ತನ್ನ ಜೀವನವನ್ನು ಸುಖಮಯ ಮಾಡಿಕೊಳ್ಳಬೇಕು. ಇದೇ ಮಾನವಿ ಜೀವನದ ಖರೆ ಹೇತು ಇರುತ್ತದೆ. ಒಂದು ವೇಳೆ ಯಾವನಾದರೊಬ್ಬ ಸಂತನಿಗೆ ತಾನು ಯಾವದಾದರೊಂದು ವಿಶಿಷ್ಟ ಕಾರ್ಯದ ಸಲುವಾಗಿ ಬಂದಿದ್ದೆಂತ ಮನಃಪೂರ್ವಕವಾಗಿ ಅನ್ನಿಸುತ್ತಿದ್ದರೆ, ಅವನು ತನ್ನ ಅಂತರ್ದೃಷ್ಟಿಯ ಉಪಯೋಗ ಮಾಡಿ, ಭವಿಷ್ಯವನ್ನು ಹೇಳಿ ಶಿಷ್ಯ ಸಮುದಾಯವನ್ನು ಕೂಡಿಸಲಿ. ಆ ಸಂಬಂಧ ಗಜಾನನ ಮಹಾರಾಜರದು ಏನೊಂದೂ ಅಂಬೋಣವಿಲ್ಲ.

ಶ್ರೀ ಗಜಾನನ ಮಹಾರಾಜರ ಸಮೀಪ ಒಂದು ಕಾಲದಲ್ಲಿ ನಾಲ್ಕೈದು ಮಂದಿಗಿಂತ ಹೆಚ್ಚುಮಂದಿ ಕಾಣಲಾರರು, ಅವರು ಎಲ್ಲಿ ಹೋದರೂ ಹೀಗೆಯೇ ಇರುವದು. ಆ ಕಾರಣ ಇವರು ಸಾಮಾನ್ಯ ದರ್ಜೆಯವರು, ಸಾಧುಗಳಲ್ಲ ಎಂದು ತಿಳಿದು ಕೆಲವರು ಭ್ರಮೆಗೊಳ್ಳುತ್ತಾರೆ. ಮುಂದೆ ಹೇಳಿದಂತೆ ಅವರು ಯಾವಾ

ಗಲೂ ಹೇಳುವರು, "ಮಾನವೀ ಜೀವನದ ಸಾರ್ಥಕವಾಗುವದರ ದೆಶೆಯಿಂದ ನಿಮಗೆ ಯಾವನಾದರೊಬ್ಬ ಸಾಧುವಿನ ಮೇಲೆ ವಿಶ್ವಾಸವಿಡುವದಿದ್ದರೆ, ಅವನು ಆತ್ಮಾನುಭವ ಉಳ್ಳವನಿರಬೇಕು ಮತ್ತು ಆತ್ಮಾನುಭವಕ್ಕೆ ಮುಟ್ಟತಕ್ಕ ಮಾರ್ಗ ತೋರಿಸತಕ್ಕವನಾಗಬೇಕು. ಹೀಗಿದ್ದರೆ ಮಾತ್ರ ಅಂಥವನ ಮೇಲೆ ನಿಃಸಂಶಯವಾಗಿ ಶ್ರದ್ಧೆ ಇಡಬಹುದು. ಆದರೆ ಯಾವನೊಬ್ಬನ ಚಮತ್ಕಾರ ನೋಡಿ ಅವನ ಮೇಲೆ ನಿಮ್ಮ ವಿಶ್ವಾಸ ಕೂತಿರುವದಾದರೆ, ಅವನಿಂದ ನಿಮ್ಮ ಸಂಸಾರಿಕ ಇಚ್ಛೆಗಳಷ್ಟೇ ಪೂರ್ಣವಾದಾವು. ಆದರೆ ಅಂಥವನಿಂದ ನಿಮ್ಮ ಮಾನವಿಜನ್ಮದ ಸಾರ್ಥಕವನ್ನು ಎಂದೂ ಸಾಧಿಸಿಕೊಳ್ಳಲಾರಿರಿ. ಸಂತರು ಯಾರೊಬ್ಬರ ದೈವವನ್ನು ಬದಲಿಸಲಾರರು. ಹೀಗೆ ನನ್ನ ಪೂರ್ಣ ಮನೋನಿಶ್ಚಯವಾಗಿದೆ. ಒಬ್ಬೊಬ್ಬರು ಎಂದೂ ದೇವರ ಚಿಂತನೆ ಮಾಡುವದಿಲ್ಲ, ಅಥವಾ ಸಂತರ ಕಡೆಗೂ ಹೋಗುವದಿಲ್ಲ, ಇಂಥಾ ಸೇಕಡೋ ಜನರು ಶ್ರೀಮಂತಿಯಲ್ಲಿ ಉರುಳ್ಯಾಡುವದಿಲ್ಲವೇ? ಅವರು ತಮ್ಮ ಪೂರ್ವ ಕರ್ಮಕ್ಕನುಸರಿಸಿ, ಸಂತತಿ ಸಂಪತ್ತಿಯು ಉಪಭೋಗವನ್ನು ತಕ್ಕೊಳ್ಳುತ್ತಾರೆ. ಇದು ಸತ್ಯವಿರುವಾಗ, ನಾವು ಯಾತಕ್ಕೆ ಒಬ್ಬರ ದೈವವನ್ನು ಬದಲಾಯಿಸುವ ಪ್ರೌಢಿಯನ್ನು ಮೆರೆಯಿಸಬೇಕು? ಅಜ್ಞಾನರೂಪ ಅಂಧಕಾರದಲ್ಲಿ ಮಾರ್ಗ ತೋರಿಸುವ ಈ 'ಸೋಹಂ' ಜ್ಯೋತಿಯನ್ನು ಕೈಯಲ್ಲಿ ಹಿಡಕೊಳ್ಳಿರಿ. ಮತ್ತು ಈ ಲೋಕದಲ್ಲಿ ವಿರಕ್ತರಾಗಿದ್ದು, ಈ ಸಂಸಾರ ಸಮುದ್ರವನ್ನು ನಿರ್ಭಯರಾಗಿ ದಾಟಿ ಹೋಗಿರಿ. ಈ ಜ್ಯೋತಿಯು ನಿಮಗೆ ಪ್ರಕಾಶವನ್ನು ಕೊಟ್ಟು ನಿಮ್ಮ ಇಷ್ಟ ಸ್ಥಳಕ್ಕೆ ನಿಮ್ಮನ್ನು ಸುರಕ್ಷಿತವಾಗಿ ಮುಟ್ಟಿಸುವದು. ಒಮ್ಮೆ ನೀವು ಅಲ್ಲಿಗೆ ಹೋಗಿ ಮುಟ್ಟಿದಿರೆಂದರೆ, ಸ್ವಸ್ವರೂಪದಲ್ಲಿ ಮುಳುಗಿ ಹೋಗುವಿರಿ. ಮತ್ತು ಅಲ್ಲಿ ನೀವು ಪರಮಾನಂದವನ್ನು ಭೋಗಿಸುವಿರಿ. ನಿಮಗೆ ನಾನು ಈ ಪರಬ್ರಹ್ಮದ ಕಡೆಗೆ ಹೋಗುವ ಮಾರ್ಗವನ್ನು ತೋರಿಸುತ್ತಿದ್ದೇನೆ. ನೀವು ಈ ಮಾರ್ಗದಿಂದ ಹೋದಿರೆಂದರೆ ಬ್ರಹ್ಮತತ್ವವೆಂದರೆ ಏನದೆ ಎಂಬದು ನಿಮಗೆ ಸಾಕ್ಷಾತ್ಕಾರವಾದೀತು. ಇದರದು ನಿಮಗೆ ಪೂರ್ಣ ನಿಶ್ಚಯವಿರಲಿ. ನೀವು ನನ್ನ ಮೇಲೆ ವಿಶ್ವಾಸವಿಡಿರಿ, ಎಂತ ನಾನು ಎಂದೂ ಅನ್ನುವದಿಲ್ಲ. ನೀವು ನಿಮ್ಮ ಶ್ರದ್ಧೆಯನ್ನು 'ಸೋಹಂ' ಮಂತ್ರದ ಸಾಮರ್ಥ್ಯದ ಮೇಲೆ ಮತ್ತು ನಿಮಗೆ ಏನು ಅನುಭವಗಳು ಬಂದಾವು ಅವುಗಳ ಮೇಲೆ ಇಡಿರಿ. ಈ ಪ್ರಕಾರ ನಿಮ್ಮನ್ನು ಕುರಿತು ನಾನು ಅಂತಃಕರಣ ಪೂರ್ವಕ ಹೇಳುವದು ಇರುತ್ತದೆ. ಸ್ವಾತ್ಮಾನುಭವ ಸಂಪಾದಿಸುವದಕ್ಕೆ ಅಖಂಡ ಪ್ರಯತ್ನಗಳನ್ನು ಮಾಡಿರಿ. ನೀವು ಧ್ಯಾನಯೋಗದ ಅಭ್ಯಾಸವನ್ನು ಮನಃಪೂರ್ವಕ ಯತ್ನಗಳಿಂದ ಮಾಡಿದ್ದಾದರೆ, ಸರ್ವ ಜಗತ್ತೆಂದರೆ ಮತ್ತೇನು ಅಲ್ಲದೆ ಪರಬ್ರಹ್ಮವೇ ಇದೆ, ಅಂತ ನಿಮ್ಮ ಅನುಭವಕ್ಕೆ ಬಂದೀತು. ಆಮೇಲೆ ಜಗತ್ತಿನೊಳಗೆ ನೀವು ವ್ಯವಹಾರ ಮಾಡುತ್ತಿದ್ದರೂ ಏನಾಯಿತು? ತಾನು ಪೂರ್ಣವಾಗಿ ಇದಕ್ಕೆ ಅಲಿಪ್ತನಾಗಿದ್ದೇನೆಂತ ನಿಮ್ಮ ಮನಸ್ಸಿನಲ್ಲಿ ಖಾತ್ರಿಯಾದೀತು. ನೀವು ಸುಖದುಃಖಾತೀತರಾಗುವಿರಿ, ಮತ್ತು ನಿಮ್ಮ

ಸಮುತಾ ಬುದ್ಧಿಯು ಎಂದಿಗೂ ಬದಲಾಯಿಸಲಿಕ್ಕಿಲ್ಲ. ನಿಮಗೆ ಬ್ರಹ್ಮಾನುಭವ ಬಂದಮೇಲೆ ನಿಮ್ಮ ಸಾಧಕವಸ್ಥೆಯು ಮುಗಿಯುವದು. ಅನಂತರ ಸರ್ವವ್ಯಾಪಿ ಮತ್ತು ಸರ್ವಶಕ್ತಿಮಾನ ಇಂಥಾ ಪರಮಾತ್ಮನ ಖರೆ ಭಕ್ತರು ಎಂಬ ಈ ಕಾರಣ ದಿಂದ ನೀವು ಸದಾ ಸ್ವಾತ್ಮಾನಂದವನ್ನು ಭೋಗಿಸುವಿರಿ. ಯಾವಾತನು ಪರ-ಮಾತ್ಮರೂಪನಾಗುವನೊ ಅವನು ಪರಮಾತ್ಮನ ಸತ್ಯವಾದ ಪೂಜೆಯನ್ನು ಮಾಡುವನು. ಇದು ಖರೇ ಸುಭಾಷಿತವದೆ. "

ಶ್ರೀಗಜಾನನ ಮಹಾರಾಜರು ಖರೋಖರ ಅಪೂರ್ವ ಸಂತರಿದ್ದಾರೆ. ಒಂದುವೇಳೆ ಅವರು ಆತ್ಮಸಾಕ್ಷಾತ್ಕಾರವನ್ನು ಅನುಭವಿಸಿದ್ದೇ ಆದರೂ ಅವರು ಇನ್ನೂ ಲೋಕದಲ್ಲಿ ಅಪ್ರಸಿದ್ಧರೇ ಇದ್ದಾರೆ ವರ್ಹಾಡದ ಆಕೋಲಾ ಎಂಬಲ್ಲಿ ಅವರು ಇಪ್ಪತ್ತು ಇಪ್ಪತ್ತೈದು ವರ್ಷ ಇದ್ದರು. ಆದರೂ ಅವರ ನಿಜವಾದ ಪರಿಚಯವು ನಾಲ್ಕೈದು ಮಂದಿಗೆ ಮಾತ್ರ ಆಗಿತ್ತು. ಅನಂತರ ಅವರು ಮುಂಬಯಿಯಲ್ಲಿ ಹದಿನಾರು ಹದಿನೇಳು ವರ್ಷ ಇದ್ದರು. ಅಲ್ಲ್ಯಾದರೂ ಅವರ ಮಹತ್ವದ ಕಲ್ಪನೆಯು ಸ್ವಲ್ಪ ಜನರಿಗಷ್ಟೇ ಆಗಿತ್ತು. ಪ್ರಸ್ತುತ ಕಾಲದಲ್ಲಿ ಅವರ ಪರಿಚಯವು ಬಹಳ ಜನರಿಗೆ ಆಗಿದ್ದರೂ, ಇನ್ನಾದರೂ ಅವರ ಖರೇ ಸಾಮರ್ಥ್ಯದ ಮತ್ತು ಶ್ರೇಷ್ಠತ್ವದ ತಿಳುವಳಿಕೆಯು ಆದ ಜನರು ಬಹಳ ಕಡಿಮೆ. ಅವರು ಸಾಧುಗಳಿದ್ದಾರೆಂತ ಹೇಳಿದ ಹೊರ್ತು ಅವರ ಶ್ರೇಷ್ಠತ್ವದ ಮತ್ತು ಸಾಧುತ್ವದ ಕಲ್ಪನೆ ಸಹಾ ಯಾರಿಗೂ ಆಗಲಾರದು. ಅವರ ವೃತ್ತಿಯು ಇಷ್ಟು ಸಾಮಾನ್ಯ ಮತ್ತು ನಿರಭಿಮಾನದ್ದಿರುತ್ತದೆ. ಅವರು ಅಭಿಮಾನವನ್ನು ಪೂರ್ಣನುಂಗಿ ಬಿಟ್ಟಿದ್ದಾರೆ. ಅಪ್ರಸಿದ್ಧವಾಗಿ ಇರೋಣವೇ ಅವರಿಗೆ ವಿಶೇಷವಾಗಿ ಬೇಕಾಗಿರುತ್ತದೆ

ಪ್ರಸ್ತುತ ಕಾಲದಲ್ಲಿ ಆತ್ಮಸಾಕ್ಷಾತ್ಕಾರಿ ಸಂತರು ಕ್ವಚಿತ್ ಇರಬಹುದು, ಅವರು ನಿಜವಾಗಿ ಎಲ್ಲ್ಯಾದರೂ ಇದ್ದರೆ, ಅಂಥವರು ಸಿಗುವದು ಅತ್ಯಂತ ಕಠಿಣವಾಗಿದೆ. ಈ ಮಹಾನ್ ಸತ್ಪುರುಷರು ತಮ್ಮ ಶಿಷ್ಯರಿಗೆ ಆತ್ಮಪ್ರಕಾಶದ ಜ್ಯೋತಿಯನ್ನು ತೋರಿಸಿ, ಧ್ಯಾನಯೋಗದ ಮಾರ್ಗವನ್ನು ತೋರಿಸಿದ್ದಾರೆ. ಮತ್ತು ಆತ್ಮಸಾಕ್ಷಾತ್ಕಾರದ ಉಪದೇಶವನ್ನು ಮಾಡಿದ್ದಾರೆ. ವಾಚಕರಿಗೆ ನಾವು ಮನಃಪೂರ್ವಕ ವಿನಂತಿ ಮಾಡುವದೇನಂದರೆ, ಈ ಪುಸ್ತಕದಲ್ಲಿ ಅವರ ಶಿಷ್ಯರ ಯಾವ ಅನುಭವಗಳು ಕೊಡಲ್ಪಟ್ಟಿರುತ್ತವೋ ಅವುಗಳನ್ನು ಅವರು ಲಕ್ಷ್ಯಪೂರ್ವಕ ಅವ-ಲೋಕಿಸಬೇಕು. ಅಂದರೆ, ನಾವು ಶ್ರೀಗಜಾನನ ಮಹಾರಾಜರ ಸಂಬಂಧ ಯಾವ ವಿಚಾರಗಳನ್ನು ಪ್ರಕಟಿಸಿದ್ದೇವೆ, ಅವುಗಳ ಸತ್ಯತೆಯು ಅವರಿಗೆ ಸಹ ಅನುಭವಕ್ಕೆ ಬಂದೀತು. ಈ ಅನುಭವಗಳು ಮತ್ತು ಶ್ರೀ ರಾಮದಾಸರು 'ಸೋಲಿವ ಸುಖ' ಎಂಬ ಗ್ರಂಥದಲ್ಲಿ ಬರೆದ ಅನುಭವ, ಹಾಗೆಯೆ ಗೋರಕ್ಷಗೀತಾ ವ ಪ್ರಕಾಶ ದೀಪಿಕಾಗಳಲ್ಲಿ ಬರೆದ ಅನುಭವಗಳು ,ಮತ್ತು ಜ್ಞಾನೇಶ್ವರ, ತುಕಾರಾಮ, ಏಕನಾಥ, ಜನಾಬಾಯಿ, ಕಬೀರ ವ ಇತರ ಸಾಧುಸಂತರ ಪದ, ಅಭಂಗ, ವ ವಚನ

ಇವುಗಳಲ್ಲಿರುವ ಅನುಭವಗಳು, ಇವುಗಳ ತುಲನೆಯನ್ನು ಮಾಡಿದರೆ, ಶ್ರೀಗಜಾನನ ಮಹಾರಾಜರು ಕಲಿಸುತ್ತಿರುವ ಧ್ಯಾನಯೋಗದ ಮಾರ್ಗವು ಮತ್ತು ಹಿಂದಿನ ಸಾಧುಸಂತರು ಹಾಕಿಕೊಟ್ಟ ಆತ್ಮಸಾಕ್ಷಾತ್ಕಾರದ ಮಾರ್ಗವು ಒಂದೇ ಎಂದು ನಿಮಗೆ ಸಹಜವಾಗಿ ತಿಳಿದೀತು. ಮತ್ತು ಈ ವಿಷಯದಲ್ಲಿ ನಿಮಗೆ ಸಂಶಯವೇನೂ ಉಳಿಯಲಾರದು. ಗಜಾನನ ಮಹಾರಾಜರ ಶಿಷ್ಯರ ಅನುಭವಗಳು ಮತ್ತು ಬೇರೆಬೇರೆ ಸಾಧುಸಂತರ ಕವಿತಾ ಪದಗಳು ವ ಅಭಂಗಗಳು, ಇವುಗಳಲ್ಲಿ ಜೋಡಿಸಿದ ಅನುಭವಗಳು ಒಂದೇ ಪ್ರಕಾರದ್ದಾಗಿರುವವು, ಎಂಬದು ತೋರಿಸುವದಕ್ಕೆ ಹಿಂದಿನ ಸಾಧುಸಂತರ ಕವಿತೆ, ಪದಗಳು ಮತ್ತು ಅಭಂಗಗಳು ಇವುಗಳೊಳಗಿನ ಕೆಲವನ್ನು ಮುಂದೆ ಕೊಟ್ಟಿರುತ್ತೇವೆ.

(೧) ಅಧಿಕ ಏನು ಹೇಳಲಿ, ಸರ್ವದರ ಮೂಲವನ್ನು ಇದರೊಳಗೆ ( ದೇಹದೊಳಗೆ ) ಶೋಧಿಸಬೇಕು. ಜನ್ನಂಗಿ ಕಾಳಿನಷ್ಟು ಬಿಂದು, ಅದರಲ್ಲಿ ತ್ರಿಭುವನವೂ ತುಂಬಿರುತ್ತದೆ. ಹರಿಹರರ ಮೂರ್ತಿಗಳು ಈ ಬಿಂದುವಿನಲ್ಲಿ ಆಗಿ ಹೋಗುತ್ತವೆ. ತುಕಾರಾಮನನ್ನುತ್ತಾನೆ. ಇದು ಸರ್ವದರ ಮೂಲವು ಈ ಶುದ್ಧ ಆತ್ಮನನ್ನು ನಿತ್ಯದಲ್ಲಿ ಕಾಣುತ್ತಿರಬೇಕು. ಶ್ರೀತುಕಾರಾಮ

(೨) ಯಾವಾತನು ನಿಶ್ಚಯವಾಗಿ ಕಣ್ಣಿನ ಜ್ಯೋತಿರೂಪ ಕಣ್ಣನ್ನು ನೋಡಿದ್ದಾನೋ ಅವನು ನಿಜವಾದ ಕಣ್ಣನ್ನು ಕಂಡಿದ್ದಾನೆ. ಕತ್ತಲೆಯೊಳಗೆ ಕರ್‍ರಗೆ ಇದ್ದು, ಅಲ್ಲಿ ನೀಲರೂಪದ ಪ್ರಕಾಶವು. ಬ್ರಹ್ಮಬೀಜದ ಗುರುತೆಂದರೆ, ಜ್ಯೋತಿಯೊಳಗೆ ಜ್ಯೋತಿ, ಪ್ರಕಾಶದ ರಾಶಿಯೇ. ಆತ್ಮಜ್ಞಾನವಿಲ್ಲದೆ ಪುಸ್ತಕ ಪಠಿಸುವದು ವ್ಯರ್ಥ ಕರ್ಕಶ ಶಬ್ದ ಮಾತ್ರವು. ಹಯಬತಿಬುವಾ.

(೩) ಜ್ಯೋತಿ ಮಿಂಚಿತು ಮಿಂಚಿತು, ಇದೇ ಸದ್ಗುರುಗಳ ಚಾವಿಯು, ಜನರೊಳಗೆ ಮನದೊಳಗೆ ತುಂಬಿರುತ್ತದೆ. ಮತ್ತು ಅದೇ ರೂಪವು ಒಳಹೊರಗೂ ವ್ಯಾಪಿಸಿದೆ; ಚಿತ್ತದ ಚಂದ್ರಪ್ರಕಾಶವನ್ನು ನೋಡಿದಾಕ್ಷಣ ಮನಸ್ಸಿಗೆ ಆನಂದವಾಯಿತು. ದಾಸನೆನ್ನುತ್ತಾನೆ, ನನ್ನ ಎರಡೂ ಕಣ್ಣುಗಳಲ್ಲಿ ಬಂಣಗಳು ತುಂಬಿರುತ್ತವೆ. ರಾಮದಾಸ.

(೪) ಕಿವಿಗಳಲ್ಲಿ ಬೀಜ ಬಿತ್ತಿತ್ತು; ಅದು ಕಣ್ಣುಗಳಲ್ಲಿ ಪ್ರಕಾಶವಾಯಿತು. ಮನಸ್ಸು, ಪ್ರಾಣ, ಚಿತ್ತ ಇವು ಏಕವಾಗಿ ನನ್ನಲ್ಲಿ ಹುಚ್ಚುತುಂಬಿಸಿಬಿಟ್ಟವು.

ಮಹಿಪತಿ.

(೫) ಜ್ಞಾನದೀವಿಗೆಯು ಹಚ್ಚಿತು; ಇಲ್ಲಿ ಚಿಂತೆಯ ಹೊಗೆ, ಮಸಿ ಇಲ್ಲ. ಆನಂದಭರಿತವಾದ ಪ್ರೇಮದಿಂದ ದೇವದತ್ತನ ಮುಂದೆ ಆರತಿ ಬೆಳಗಿದೆ. ಭೇದಾಭೇದಗಳು ಮಾಯವಾದವು. ಸರ್ವ ವಿಕಾರಗಳು ಗಲಿತವಾದವು, ಏಕನಾಥನು ಜನಾರ್ದನನೊಳಗೆ ಕೂಡಿದನು; ತೇಜದಲ್ಲಿ ತಾನು ಕೂಡಿದನು. ಏಕನಾಥ.

(೬) ಆದರ ನಡುವೆ ಅಗ್ನಿ ಜ್ವಾಲೆಯು ಅಣುವಿನಂಥಾದ್ದು, ಊರ್ಧ್ವಗತಿಯುಳ್ಳದ್ದು, ನೀಲಮೇಘದ ಮಧ್ಯದಲ್ಲಿರುವದು, ಮಿಂಚಿನ ಬಳ್ಳಿಯಂತೆ ಪ್ರಕಾಶಿಸುವದು, ಅತಿಸೂಕ್ಷ್ಮವಾದ ಯಷ್ಟಿ ( ದೇಹ ) ಉಳ್ಳದ್ದು, ಅಣುವಿನಂತಿರುವದು. ಮತ್ತು ಅರಿಷಿನ ವರ್ಣದ್ದು ಆದರ ಶಿಖೆಯ ಮಧ್ಯದಲ್ಲಿ ಆ ಪರಮಾತ್ಮನು ವ್ಯವಸ್ಥಿತನಾಗಿದ್ದಾನೆ ನಾರಾಯಣೋಪನಿಷತ್

(೭) ಮಹಾನ್ ಪ್ರಭುವಾದ ಪುರುಷನು ಇದೆಲ್ಲವುಗಳ ಪ್ರವರ್ತಕನಿದ್ದಾನೆ. ನಿರ್ಮಲವಾದ ಇವೆಲ್ಲವುಗಳನ್ನು ಪ್ರಾಪ್ತಿಮಾಡಿ ಕೊಡತಕ್ಕ ಈ ಈಶಾನನು ನಾಶರಹಿತ ಜ್ಯೋತಿರ್ಮಯನಿರುವನು.

ಶ್ವೇತಾಶ್ವತರೋಪನಿಷತ್ ( ಅ. ೩ ಶ್ಲೋ. ೧೨ )

(೮) ಸ್ವಚ್ಛವಾಗಿಯೂ ಮೃದುವಾಗಿಯೂ ಇರುವ ಆ ತೇಜವು, ಅತ್ಯಂತ ಪ್ರಕಾಶಮಾನವಾಗಿ ಆಕಾಶ ಗರ್ಭನಾದ ಸೂರ್ಯನಂತೆ ಕಾಣಿಸುತ್ತದೆ. ಕತ್ತಲು ಹೋಯಿತು, ಹೋಯಿತು, ಎಲ್ಲವೂ ಏಕರೂಪವಾಯಿತು. ಅಖಂಡ ವ್ಯಾಪಿಸಿಕೊಂಡು ಎಲ್ಲಾದರಲ್ಲಿ ದಟ್ಟವಾಗಿ ಘನಶಾಮನು ( ಶ್ರೀಕೃಷ್ಣನು ) ಇರುವನು. ಯಾವಾತನು ಸದ್ಗುರು ಕೃಪಾಪಾತ್ರನೊ ಅವನಿಗೆ ಬೋಧವಾಗುವದು. ನಿವೃತ್ತಿ ಪ್ರಸಾದದಿಂದ ನಾನು ತಿಳಿದಿದ್ದೇನೆ. ಎಂದು ಜ್ಞಾನದೇವನನ್ನುತ್ತಾನೆ. ಅನುಭವದ ಹೊರತು ಜಗತ್ತು ಕಾಣಿಸುತ್ತಿರುವದೆಂಬದು ನಾನು ಅರಿಯೆ.

ಜ್ಞಾನದೇವ

(೯) ಇದರ ಕಾರಣವನ್ನು ಕೇಳಿರಿ. ಪ್ರಥಮದಲ್ಲಿ ಗಾಢವಾದ ಅಂಧಕಾರವು, ಇದೇ ಎಂಟು ಪ್ರಕಾರದ ಪ್ರಕೃತಿಯು. ಏಕನಾಥ

(೧೦) ಪ್ರಥಮದಲ್ಲಿ ಏನೂ ಇಲ್ಲದ ರಕ್ತವರ್ಣವು. ಆದರ ಹೆಸರು ಅಧಃಶೂನ್ಯ ಊರ್ಧ್ವಶೂನ್ಯವು ಶ್ವೇತವರ್ಣದ್ದು, ಮಧ್ಯದ ಶೂನ್ಯಂ ಕರೇವರ್ಣದ್ದು. ಮಹಾಶೂನ್ಯವು ನೀಲವರ್ಣದ್ದು, ಆದರಲ್ಲಿ ಕೇವಲ ಸ್ವರೂಪ,

ಜನಾಬಾಯಿ

(೧೧) ಅತಿಶಯ ಪ್ರಭೆಯುಳ್ಳ ಮುತ್ತು, ಮತ್ತು ಅಷ್ಟಾಂಗಗಳಲ್ಲಿ ನವ-ಜ್ಯೋತಿಯು ಯಾವಾತನಿಗೆ ಪ್ರಾಪ್ತಿಯಾಗಿದೆ ಅವನಿಗೆ ಸತ್ಯವಾದ ಲಾಭವಾಗಿದೆ,

ಜ್ಞಾನೇಶ್ವರ

(೧೨) ಆಕಾಶರೂಪವಾದ ಚಕ್ರಗಳೊಳಗೆ ಚಕ್ರಗಳು ಬರುತ್ತವೆ. ಆದರ ಜ್ಯೋತಿಯು ಆದಿ ಮಧ್ಯ ಅಂತ್ಯದಲ್ಲಿ ತುಂಬಿರುವದು. ಪ್ರಥಮ ಸಮಾಧಿಯು ಅಖಂಡ ಸಾಕಾರವಾದದ್ದು. ಆದರ ನಡುವೆ ಚಕ್ರದ್ದೆ ಆಕಾರವು, ದಿವ್ಯ

ಮಾಣಿಕ್ಯ ಇತ್ಯಾದಿ ರತ್ನದ ಖಣಿಯೇ ಪ್ರಕಾಶಿಸುತ್ತಿರುವದು. ಈ ಚಿನ್ಮಯದ ದರ್ಶನವು ಅವಿನಾಶವಾದದ್ದು. ಒಂದು ಚಕ್ರ ಬರುವದು ಆಕಾಶದಷ್ಟು ಮುತ್ತು ಅದರಲ್ಲಿ ಮುತ್ತಿನ ಆಭರಣಗಳು. ಆ ಮಣಿಗಳ ಜ್ಯೋತಿ ಹ್ಯಾಗಿತ್ತೆಂದರೆ, ಸಂಜೆ ಜೊತ್ತಿಗೆ ಎಣ್ಣೆ ವಿನಹಾ ದೀಪ ಬೆಳಗುವದೊ ಎಂಬಂತೆ ಜನಾರ್ಧನನ್ನುತ್ತಾನೆ, ಏಕನಾಥನೇ, ಈ ದೇಹದಲ್ಲಿಯೇ ಸೋಹಂದ್ವಾರಾ ಸಮಾಧಿ ಸುಖವನ್ನು ಪಡೆಕೊ...

ಜನಾರ್ಧನ.

(೧೩) ಅಲ್ಲಿ ಸುವರ್ಣರಂಗದ ಕಾಮಿನಿಯರು ಮಿಂಚಿನಂತೆ ಹೊಳೆಯುತ್ತಾರೆ, ನಾನಾಪ್ರಕಾರದ ಜ್ವಾಲೆಗಳು ಹೊರಡುತ್ತವೆ, ಕಲ್ಪಾಂತವಾಗುವದಾದರೂ ಅಂಜಬೇಡ.

ರಾಮದಾಸ.

(೧೪) ಸೂರ್ಯ ಪ್ರಭೆಯಲ್ಲಿ ದೃಶ್ಯಗಳು ಎಷ್ಟು ಸ್ಪಷ್ಟವಾಗಿ ಕಾಣುವವೊ ಆದರಂತೆ ಅದೃಶ್ಯ ಪದಾರ್ಥಗಳು ಕಾಣುವವು. ಸ್ವರೂಪ ದೃಷ್ಟಿಯಿಂದ ಸಮತೆಯನ್ನು ನೋಡುತ್ತಿರು. ಅಖಂಡ ಮಂಡಲ ದೃಷ್ಟಿಯಿಂದ ದೃಶ್ಯಗಳೆಲ್ಲ ವಿಪರೀತವಾಗಿ ಕಾಣಿಸುತ್ತಿರುವವು. ಭಕ್ತರೆಂಬ ಪ್ರೇಮಗಳ ನವಿಲುಗಳು ಹೊಳೆಯುವ ಗರಿಗಳನ್ನು ಎತ್ತಿ ಶ್ಯಾಮವರ್ಣ ಪೂರ್ಣವಾಗಿ ನೃತ್ಯಮಾಡುತ್ತವೆ.

ಮೇರುಸ್ವಾಮಿ.

(೧೫) ಚಂದ್ರ-ಸೂರ್ಯರು ಮೂಡಿದಂತೆ ಕಾಣುವರು. ಅನೇಕ ಪ್ರಕಾಶಗಳು ಬೆಳಗಿದವು. ಇಂಥಾ ತೇಜವನ್ನು ನಾನು ಕಣ್ಣಿನಿಂದ ನೋಡಿದೆನು. ಯಾವಾತನು ಚಂದ್ರಸೂರ್ಯರಂತೆ ಭಾಸಿಸುತ್ತಾನೆ, ಅವನನ್ನು ಮನಸ್ಸು ಸ್ಥಿರಮಾಡಿ ದೃಷ್ಟಿಯನ್ನು ಸಮತೆಯಲ್ಲಿಟ್ಟು ನಿಶ್ಚಲನಾಗಿ ನೋಡು, ಅದನ್ನು ನೋಡಿದರೆ, ಕಣ್ಣಿಗೆ ನವಿಲುಗರಿ ನೀಲಮಣಿಯಂತೆ ಕಾಣುತ್ತಿದ್ದು ಏಕಸ್ವರೂಪವಾಗಿ ನೋಡುವಿ. ಅದರಲ್ಲಿ ದೃಷ್ಟಿ ( ಲಕ್ಷ ) ಊರಬೇಕು, ಆದನ್ನು ಭ್ರೂಮಧ್ಯದಲ್ಲಿ ಕಾಣಬೇಕು. ಅದು ನೇತ್ರದಲ್ಲಿ ಬಂದು ಸ್ಥಿರವಾಗುವದು.

ಏಕನಾಥ.

(೧೬) ಮನಸ್ಸು ಉನ್ಮನವಾಯಿತೆಂದರೆ ಬದ್ಧತೆಯು ಬಿಟ್ಟೇಹೋಗುವದು, ಸರ್ವ ಇಚ್ಛೆಗಳು ನಾಶವಾದವು. ಶಬ್ದಕ್ಕೆ ನಿಃಶಬ್ದತೆ ಬಂತು, ನಿಜರೂಪವನ್ನು ನೋಡುತ್ತಾ ತಟಸ್ಥನಾದೆನು. ಆ ಸುಖವನ್ನು ಏನು ಹೇಳಲಿ ಅದು ನಾಲಿಗೆಯಿಂದ ವರ್ಣಿಸಲಾಗದು.

ಜ್ಞಾನೇಶ್ವರ.

(೧೭) ಸರ್ವ ಘಟಗಳಲ್ಲಿದ್ದು ಪ್ರಕಾಶಿಸುವ ಆತ್ಮನು ಗುರುಕೃಪೆಯಿಂದ ನಮಗೆ ಪ್ರತ್ಯಕ್ಷ ಕಾಣಿಸುತ್ತಾನೆ.

ನಿವೃತ್ತಿನಾಥ.

(೧೮) ಝುಗಿಝುಗಿಸುತ್ತಿರುವ ಈ ಆತ್ಮಜ್ಯೋತಿಯು ರಾತ್ರಿ ಹಗಲು ನಿರ್ಮಲ ಮುತ್ತಿನಂತೆ ಪ್ರಕಾಶಿಸುವದು. ಎಣ್ಣೆ ಬತ್ತಿ ಇಲ್ಲದಿದ್ದರೂ, ಜಾಗೃತ ಅಥವಾ ನಿದ್ರಾಕಾಲದಲ್ಲಿಯೂ ಇದು ಆರುವದಿಲ್ಲ. ಕಬೀರನು ಅನ್ನುತ್ತಾನೆ ಸಾಧುಬಂಧುಗಳೇ ಕೇಳಿರಿ, ಮನೆಮನೆಗಳಲ್ಲಿ ಗ್ರಂಥಗಳನ್ನು ಓದುತ್ತಾರೆ. ಆದರೆ ಆತ್ಮಜ್ಯೋತಿಯು ಲಕ್ಷದಲ್ಲಿ ಬರುವದಿಲ್ಲ. ಕಬೀರ.

(೧೯) ಸುತ್ತಲೂ ಬೆಳಕು ಮಧ್ಯದಲ್ಲಿ ಶಾಮವರ್ಣ. ಇವನೇ ಕಬೀರನ ರಾಮನು. ಕಬೀರ.

(೨೦) ಸಂತರೇ, ಗುರುಸ್ಥಾನದ ವಿನೋದವು ವಿಶೇಷವಾಗಿದೆ. ಮೋಡ ವಿಲ್ಲದೆ ಮಿಂಚು ಹೊಳೆಯುತ್ತದೆ. ಕೆಂಪು, ಗುಲಾಬರಂಗಗಳು ಮಿಂಚುತ್ತವೆ. ಮತ್ತು ಮುತ್ತುಗಳ ಪ್ರವಾಹವೇ ನಡದದೆ. ಟಿಕಮದಾಸ

(೨೧) ಗುರುಭಜನೆಯ ಹೊರ್ತು ವ್ಯರ್ಥ ಕಾಲಹರಣ ಮಾಡಬೇಡ. ಸರ್ಪ ದಂತೆ ಕಾಣುವ ಹಗ್ಗಕ್ಕೆ ಹೆದರಿದಂತೆ ಈ ಭವ ( ಸಂಸಾರ ) ಕ್ಕೆ ಹೆದರಬೇಡ, ಜೀವಶಿವನಿಗೆ ಭೇದವಿಲ್ಲ. ಅಂತರದೊಳಗಿನ ಜ್ಞಾನದೀಪವನ್ನು ನಂದಿಸಬೇಡ, ಸೋಹಿರೋಬಾ ಅನ್ನುತ್ತಾನೆ. ಪೂರ್ಣ ಜ್ಯೋತಿಯಲ್ಲಿ ದಿನರಾತ್ರಿ ಅಂತ ಇಲ್ಲ. ಅದನ್ನು ಮರೆತು ಕಣ್ಣು ರೆಪ್ಪೆಗಳನ್ನು ಸಹ ಚಲಿಸಬೇಡ.

ಸೋಹಿರೋಬಾನಾಥ



# ಮೂರನೇ ಪ್ರಕರಣ.

## ಶ್ರೀ ಸದ್ಗುರು ಗಜಾನನ ಮಹಾರಾಜ ಇವರ ಚರಿತ್ರವು

" ಯಾವಾತನು ಭಗವಂತನನ್ನು ತಿಳಿದಿರುವನೋ, ಮತ್ತು
ಶಾಶ್ವತ ಅಶಾಶ್ವತಗಳನ್ನು ನಿರ್ಣಯಿಸಿರುವನೋ,
ಅವನಿಗೆ ಸಂತನೆನ್ನಬೇಕು "

—ರಾಮದಾಸ.

(೧) ಪೂರ್ವಜರು ಮತ್ತು ವಾಸಸ್ಥಾನ— ಈ ಅಲ್ಪ ಚರಿತ್ರ ಗ್ರಂಥ ನಾಯಕರಾದ ಶ್ರೀಗಜಾನನ ಮಹಾರಾಜರು ಮೇಲೆ ಶ್ರೀರಾಮದಾಸರು ವರ್ಣಿಸಿದ ಮಹಾನ್ ಪುರುಷರ ಪೈಕಿ ಇದ್ದಾರೆ. ಇಂಥಾ ಆಶ್ಚರ್ಯಕಾರಕ ಅತಿಮಾನುಷ್ ವ್ಯಕ್ತಿ ಇವರು ಹುಟ್ಟಿದಂದಿನಿಂದಲೆ ಶ್ರೇಷ್ಠರಿರುತ್ತಾರೆ. ಅವರು ಮಾಡಲ್ಪಟ್ಟು ಹಾಗಾಗುವದಿಲ್ಲ. ಶ್ರೀ ಗಜಾನನ ಮಹಾರಾಜರ ಚರಿತ್ರದೊಳಗಿನ ಸಂಗತಿಗಳನ್ನು ಸೂಕ್ಷ್ಮರೀತಿಯಿಂದ ವಿಚಾರಿಸಿ ನೋಡಿದರೆ, ಎಂಥವನ ಮುಖದಿಂದಾದರೂ ಈ ಕೆಳಗೆ ಕೊಟ್ಟ ಆಶ್ಚರ್ಯ ಉದ್ಗಾರಗಳು ಹೊರಬೀಳುವವು.

" ಎಲ್ಲಾ ಸಂಗತಿಗಳು ಎಷ್ಟು ವಿಲಕ್ಷಣವಾದ ಸಂಭವಗಳಿಂದ ಒದಗಿ ಬಂದವು ! ಸತ್ಯವಾಗಿ ಈಶ್ವರೀ ಇಚ್ಛೆಯು ಅದ್ಭುತ ಮತ್ತು ದುರ್ಜ್ಞೇಯವಾಗಿದೆ "

ಶ್ರೀಗಜಾನನ ಮಹಾರಾಜರ ಪೂರ್ಣ ಹೆಸರು ಶ್ರೀಗಜಾನನ ಮುರಲೀಧರ ಗುಪ್ತೆ. ಇವರ ತಂದೆಯವರು ಮುರಲೀಧರರಾವ ಗುಪ್ತೆ; ಇವರು ಮೊದಲು ಕೊಲಾಬಾ ಜಿಲ್ಹೆಯ ಪೇಣದ ರಹಿವಾಸಿ ಇದ್ದು, ಇವರ ಮೂಲ ಮನೆತನವು ಪೇಣವಾಸಿ ವಗೈರೆ ಆರುಏಳು ಊರುಗಳ ವತನದಾರ ಕುಲಕರ್ಣಿ ಎಂದು ಪ್ರಸಿದ್ಧವಿತ್ತು. ಅವರು ಯಾವದಾದರೊಂದು ದೈವಿಕ ಆಪತ್ತಿಮೂಲಕ ವರ್ಹಾಡಕ್ಕೆ ಸನ್ ೧೮೫೫ ಸಾಲಿನಲ್ಲಿ ನೌಕರಿ ಸಲುವಾಗಿ ಬಂದರು. ಮತ್ತು ಬುಲಢಾಣದಲ್ಲಿ ಡೆಪ್ಯೂಟಿ ಕಮಿಶನ್‌ರ ಕಚೇರಿಯಲ್ಲಿ ನೌಕರಿಯನ್ನು ಸ್ವೀಕರಿಸಿದರು. ಕೆಲವು ದಿನ ನೌಕರಿ ಮಾಡಿದ ಮೇಲೆ ಅದರಿಂದ ತನ್ನ ಚರಿತಾರ್ಥವನ್ನು ನಡೆಸುವದು ಅಶಕ್ಯವಿದೆ ಎಂದು ತಿಳಕೊಂಡು, ಅವರು ಆ ಕಾಲದ ಅಲ್ಲಿಯ ಪರಿಸ್ಥಿತಿಗನುಸರಿಸಿ ಮರಾಠಿಯಲ್ಲೇ ವಕೀಲಿ ಅಭ್ಯಾಸ ಮಾಡಿ ಪರೀಕ್ಷೆಯನ್ನು ಕೊಟ್ಟರು. ಅದರಲ್ಲಿ ಅವರು ಉತ್ತಮರೀತಿಯಿಂದ ಉತ್ತೀರ್ಣರಾದರು.

(೨) **ಕುಟುಂಬ**—ಆ ಮೇಲೆ ಅವರು ಪೆನ್‌ಶನ್ ತಕ್ಕೊಂಡರು, ಮತ್ತು ಯವತಮಾಳ ಜಿಲ್ಹೆಯ ನ್ಯಾಯಸ್ಥಾನದಲ್ಲಿ ವಕೀಲಿ ಆರಂಭಿಸಿದರು. ಆ ಕಾಲದಲ್ಲಿ ಅಲ್ಲಿ ಇಬ್ಬರು ಮೂವರೇ ವಕೀಲರಿದ್ದರು. ಅವರೆಲ್ಲರಿಗಿಂತ ಇವರ ವಕೀಲಿಯೆ ಉತ್ತಮವಾಗಿ ನಡೆದು, ಅವರು ಉತ್ತಮಪ್ರತಿಯ ವಕೀಲರೆಂದು ಪ್ರಸಿದ್ಧಿಗೆ ಬಂದರು. ಅವರ ಪತ್ನಿಯ ತವರ ಮನೆಯ ಹೆಸರು ರಾಜುಬಾಯಿಯೆಂತಲೂ, ಮಾವನ ಮನೆಯ ಹೆಸರು ಲಕ್ಷ್ಮೀಬಾಯಿಯೆಂತಲೂ ಇತ್ತು. ಈ ದಂಪತಿಗಳಿಗೆ ಐದು ಗಂಡು ಮತ್ತು ಮೂರು ಹೆಣ್ಣು ಹೀಗೆ ಒಟ್ಟು ಎಂಟು ಮಕ್ಕಳು ಹುಟ್ಟಿದರು. ಇವರ ಪೈಕಿ ಹಿರೇ ಮಗ ನಾರಾಯಣನು, ಎರಡನೇ ರಾಮಚಂದ್ರನು, ಮೂರನೇ ಕೇಶವ, ನಾಲ್ಕನೇ ಲಕ್ಷ್ಮಣ ಮತ್ತು ಐದನೇ ಎಲ್ಲರಿಗೂ ಕಿರಿಯವನು ಗಜಾನನ; ಇವನೇ ನಮ್ಮ ಚರಿತ್ರ ನಾಯಕನು.

ಹಿರಿಯವನಾದ ನಾರಾಯಣನ ಜನ್ಮವು ಸನ್ ೧೮೭೨ ನೇ ಇಸವಿಯ ಜೂನ ತಿಂಗಳಲ್ಲಿ ಮಲಕಾಪೂರ ಎಂಬಲ್ಲಿ ಆಯಿತು. ಇವರು ಮಹಾನ್ ಬುದ್ಧಿವಂತರಿದ್ದು, ಚಿಕ್ಕ ವಯಸ್ಸಿನಿಂದಲೇ ಸಾತ್ವಿಕ ವೃತ್ತಿಯವರಾಗಿದ್ದರು. ಇವರ ಮರಾಠಿ ಅಭ್ಯಾಸವು ಉಮರಾವತಿಯಲ್ಲಿ ಆಯಿತು. ಅವರಿಗೆ ಅಲ್ಲಿಯ ಶಿಷ್ಯವೃತ್ತಿಯೂ ಸಿಗುತ್ತಿತ್ತು. ಅವರ ಬುದ್ಧಿಮತ್ತೆ ಮತ್ತು ವಿದ್ವತ್ತೆ ಮೂಲಕ ಅವರು ಮಹಾರಾಷ್ಟ್ರದಲ್ಲಿ 'ಬೀ' ( Bee ) ಕವಿ ಈ ಹೆಸರಿನಿಂದ ಪ್ರಸಿದ್ಧಿಯಾಗಿದ್ದಾರೆ. ಆದರೂ ಅವರಿಗೆ ಸ್ವತಃದ ಪ್ರತಿಷ್ಠೆಯು ಎಂದೂ ಸೇರುತ್ತಿದ್ದಿಲ್ಲ. ಸೌಂದರ್ಯದಲ್ಲಿ ತಾದಾತ್ಮ್ಯವನ್ನು ಹೊಂದಿ ಕಾವ್ಯ ರಚಿಸುವ ಕಲೆಯು ಅವರಲ್ಲಿ ಉತ್ಕೃಷ್ಟ ರೀತಿಯಿಂದ ಇರುವ ಕಾರಣ ಸುಂದರ ಶಬ್ದಗಳಿಂದ ಹೃದಯಕ್ಕೆ ತಗಲುವ ಭಾವಗಳನ್ನು ಉತ್ಪನ್ನ ಮಾಡುವಂಥಾ ಶಕ್ತಿಯು ಇವರ ಕವಿತ್ವದಲ್ಲಿ ವಿಶೇಷವಾಗಿರುತ್ತದೆ. ರಸಾತ್ಮಕ ವರ್ಣನೆಗೆ ಪದಲಾಲಿತ್ಯದ ಜೋಡಿಕೆ ಇರುವ ದುರ್ಲಭವಾದ ಕಾವ್ಯಗುಣವು ಇವರ ಕಾವ್ಯದಲ್ಲಿ ಇದ್ದ ಮೂಲಕ, 'ಕೇಸರಿ' ಕಾರರು ಇವರಿಗೆ 'ಔದುಂಬರ ಪುಷ್ಪ'ವೆಂದು ಏನು ಉಪಮೆಯನ್ನು ಕೊಟ್ಟಿರುವರೋ ಅದು ಕೇವಲ ಯಥಾರ್ಥವಿರುವದು. ಆದ್ದರಿಂದ ಕಾವ್ಯ ರಸಿಕರು ಅವರ 'ಪುಷ್ಪಾಂಜಲಿ' ಎಂಬ ಕಾವ್ಯ ಸಂಗ್ರಹವನ್ನು ಎಂದೂ ಮರಿಯಲಾರರು.

ನಾರಾಯಣರಾಯರು ಮೊದಲು ಕಾರಕೂನರೆಂದು ಸರಕಾರಿ ನೌಕರಿಯಲ್ಲಿ ಸೇರಿದರು. ಬೇರೆ ಬೇರೆ ಕಡೆಗಳಲ್ಲಿ ಬದಲಿಗಳಾಗುತ್ತ ಕಡೆಗೆ ಇವರು ಆಕೋಲೆಗೆ ಬಂದರು. ಆ ನಂತರ ಅಲ್ಲೆ ನಾಯಬ ತಹಶೀಲದಾರರ ಹುದ್ದೆಯ ಮೇಲೆ ಏರಿದರು. ಆ ಮೇಲೆ ಕೆಲವು ದಿವಸಗಳ ಸಲುವಾಗಿ ಅವರು ಮೂರ್ತಿಜಾಪುರಕ್ಕೆ ಬಂದು ಬದಲಿ ಆದನಂತರ ತಿರುಗಿ ಆಕೋಲೆಗೆ ಹೋಗಿ ಅಲ್ಲಿಂದಲೇ ಸೇವಾನಿವೃತ್ತರಾದರು.

ಮುರಲಿಧರಪಂತರ ಎರಡನೇ ಮಗ ರಾಮಭಾವು ಇವರು 'ರಾಲಿ ಬ್ರದರ್ಸ' ಕಂಪನಿಯಲ್ಲಿ ಸಬ-ಏಜಂಟರಿದ್ದರು. ಮೂರನೇ ಮಗ ಕೇಶವ ಎಂಬವನಿಗೆ ಆತನ ಚಿಗಪ್ಪನಿಗೆ ದತ್ತಕ ಮಾಡಿಕೊಟ್ಟರು. ಮತ್ತು ನಾಲ್ಕನೇ ಮಗ ಲಕ್ಷ್ಮಣರಾಯರು ತಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ಆಕೋಲೆಯಲ್ಲಿ ನೌಕರಿ ಸ್ವೀಕರಿಸಿದರು.

ಮುರಲೀಧರಪಂತರ ಐದನೇ ವ ಎಲ್ಲರಲ್ಲೂ ಚಿಕ್ಕವರಾದ ಗಜಾನನ ಊರ್ಫ ಗಜಾನನ ಮಹಾರಾಜ ಇವರು ಸನ್ ೧೮೭೨ನೆ ಇಸವಿಯಲ್ಲಿ ಹುಟ್ಟಿದರು. ಇವರ ಮೂರನೇ ವರ್ಷದಲ್ಲೇ ಮೈಲಿ ಬೇನೆ ಬಂದು ಅದರ ಮೂಲಕ ಬಲಗಾಲು ನಿರುಪಯೋಗವಾಯಿತು. ಅವರನ್ನು ಉಮರಾವತಿಗೆ ತಂದು ಡಾಕ್ಟರ ವೈದ್ಯರ ಅನೇಕ ಉಪಚಾರಗಳನ್ನು ಮಾಡಿದರೂ ಏನೂ ಉಪಯೋಗವಾಗಲಿಲ್ಲ. ಅವರು ಹಾಗೇ ಕುಂಟರಾಗಿಯೇ ಉಳಿದರು.

(೩) **ತಂದೆ-ತಾಯಿಗಳವರ ನಿಧನ—** ಮುಂದೆ ಅವರ ತಂದೆ ತಾಯಿಗಳಿಬ್ಬರೂ ಒಂದೆರಡು ತಿಂಗಳ ಅಂತರದಿಂದ ಉಮರಾವತಿಯಲ್ಲಿ ಸ್ವರ್ಗವಾಸಿಯಾದರು. ಗಜಾನನ ಮಹಾರಾಜರ ತಾಯಿಯಾದ ರಾಜುಬಾಯಿ ಇವರು ಪರಲೋಕಕ್ಕೆ ತೆರಳುವಾಗ್ಗೆ, ತನ್ನ ತಂಗಿಯಾದ ಬಾಳುಬಾಯಿ ಇವರಿಗೆ ಸಮೀಪ ಕರೆಸಿ, ಗಜಾನನರ ಕೈ ಆಕೆಯ ಕೈಯಲ್ಲಿ ಕೊಟ್ಟು ಅಂದರು, "ನನ್ನದೇನೂ ಇನ್ನು ಮೇಲೆ ಭರವಸೆ ಇಲ್ಲ. ನನ್ನ ಈ ಗಜಾನನನು ಕುಂಟನಿದ್ದಾನೆ, ಇದನ್ನು ನೀನು ನೋಡುತ್ತಿದ್ದೀ. ಅವನ ತಾಯಿಯು ಇನ್ನು ನೀನೇ ಆಗು. ನನ್ನ ನೆನಪು ಅವನಿಗೆ ಆಗಬಾರದು, ಈ ರೀತಿಯಿಂದ ಆತನ ಲಾಲನೆಪಾಲನೆಯನ್ನು ಮಾಡು. ಯಾವನಾದರೂ ಸತ್ಪುರುಷನ ಪಾದದಲ್ಲಿ ಈತನನ್ನು ಹಾಕಿ ಆತನ ಕೃಪೆ ಈತನ ಮೇಲೆ ಆಗುವಂತೆ ಮಾಡು. ಅವರ ಕೃಪಾದೃಷ್ಟಿಯಿಂದಲೂ ಆಶೀರ್ವಾದದಿಂದಲೂ ಮುಂದೆ ಈತನ ಕಲ್ಯಾಣವಾದೀತು." ಹೀಗಂದು ಆ ಸಾಧ್ವಿ ಸ್ತ್ರೀಯು ಪರಲೋಕಕ್ಕೆ ತೆರಳಿದಳು. ಆಶ್ಚರ್ಯದ ಸಂಗತಿ ಏನಂದರೆ, ಆಕೆಯ ಹೇಳಿಕೆಯಂತೆಯೇ ಮುಂದೆ ಎಲ್ಲ ಸಂಗತಿಗಳು ನಡೆದವು.

(೪) **ಸೋದರತ್ತೆ:-** ಗಜಾನನರ ಸೋದರತ್ತೆ ಬಾಳುಬಾಯಿ ಈಕೆಯು ಬಾಲವಿಧವೆ ಇದ್ದಳು. ಆಕೆಗೆ ಮಕ್ಕ್ಯಾರೂ ಸಂಬಂಧಿಕರು ಇಲ್ಲದ್ದರಿಂದ ಆಕೆಯು ತನ್ನ ಅಕ್ಕನ ಕೂಡೆಯೇ ಇರುತ್ತಿದ್ದಳು. ಗಜಾನನರ ಕುಟುಂಬದೊಳಗಿನ ಸಮಸ್ತ ಜನರು ಆಕೆಯಕೂಡ ಪ್ರೀತಿಯಿಂದಿರುತ್ತಿದ್ದರು. ಗಜಾನನರ ಪರಾಮರಿಕೆ ನೋಡುವಲ್ಲಿ ಆಕೆಯು ಕಡೆತನಕ ಎಂದೂ ಆಲಸ್ಯ ಮಾಡಿದ್ದಿಲ್ಲ. ಮತ್ತು ಅವರ ತಾಯಿಯ ಕಡೇ ಇಚ್ಛೆಯನ್ನು ಪೂರ್ಣ ಮಾಡುವ ಸಂಧಿ ಸಿಕ್ಕಕೂಡಲೇ ಅದರ ಫಾಯಿದೆ ಮಾಡಿಕೊಳ್ಳುವದಕ್ಕೂ ಆಕೆಯು ತಪ್ಪಲಿಲ್ಲ.

ಸ್ವಲ್ಪವೇ ಅಂತರದಿಂದ ಗಜಾನನರ ತಂದೆ ತಾಯಿಗಳಿಗೆ ಬಂದ ಮೃತ್ಯು ಮೂಲಕ, ಅವರ ಕುಟುಂಬದ ಮೇಲೆ ಒಂದು ದುರ್ಧರ ಆಪತ್ತು ಸಂಭವಿಸಿತು. ಇದರಿಂದ ಕುಟುಂಬದ ಎಲ್ಲ ಜಬಾಬದಾರಿಯು ಅವರ ಹಿರೇ ಅಣ್ಣಾ ನಾರಾಯಣ ರಾವ ಮತ್ತು ಸೋದರತ್ತೆ ಬಾಳೂಬಾಯಿ ಇವರಮೇಲೆ ಸಾಹಜೀಕವಾಗಿ ಬಿತ್ತು. ಆದರೆ ಅವರ ಸಂಸಾರದ ಸರ್ವಭಾರವನ್ನು ಈಶ್ವರನೇ ತನ್ನ ಮೇಲೆ ತಕ್ಕೊಂಡಿರು ವನೋ ಎಂಬಂತೆ ಮುಂದಿನ ಸಂಗತಿಗಳಿಂದ ಕಾಣಿಸುತ್ತಿತ್ತು. ಈ ವಿಪತ್ತಿಯ ಗಾಢ ಅಂಧಃಕಾರದೊಳಗೆ ಸ್ವಲ್ಪಸ್ವಲ್ಪ ಪ್ರಕಾಶ ಕಾಣಲಾಗಂಭಿಸಿತು. ಮೂರು ಅಕ್ಕಂದಿರ ಲಗ್ನಗಳು ಒಬ್ಬರ ಹಿಂದೆ ಒಬ್ಬರಡಾಗಿ ಅವರು ತಮ್ಮ ತಮ್ಮ ಗಂಡನ ಮನೆಗೆ ಹೋದರು. ಗಜಾನನರ ಉಪನಯನವಾದರೂ ಅವರ ಒಂಭತ್ತನೇ ವರ್ಷದಲ್ಲೆ ಆಯಿತು. ಇವೆಲ್ಲ ಘಟನೆಗಳು ಸನ್ ೧೯೦೧ ನೇ ಇಸವಿಯಲ್ಲಿಯೇ ಮುಗಿದವು.

(೫) ಸಾಧುದರ್ಶನಃ— ಈ ಸಂಧಿಯಲ್ಲಿಯೇ ಬುಲಢಾಣಾ ಜಿಲ್ಹೆಯೊ ಳಗಿನ ಚಿಖಲಿ ಎಂಬ ಊರಿನಲ್ಲಿ 'ರಾಲಿ ಬ್ರದರ್ಸ' ರ ಸಬ್ ಏಜಂಟರಾಗಿದ್ದ ರಾಮಚಂದ್ರಪಂತ (ಅಂದರೆ ಗಜಾನನರ ಎರಡನೇ ಹಿರೆ ಅಣ್ಣಾಂದಿರು) ಇವರು ನಾರಾಯಣರಾಯರಿಗೆ ಬರೆದರು, "ಚಿಖಲಿಯಿಂದ ಆರು ಏಳು ಮೈಲು ದೂರ ಅಂತ್ರಿ ಎಂಬ ಹೆಸರಿನ ಒಂದು ಹಳ್ಳಿ ಇದೆ. ಅದರ ಸಮೀಪ ಅನೇಕ ಸಣ್ಣಸಣ್ಣ ಗುಡ್ಡಗಳಿದ್ದು ದಟ್ಟವಾದ ಅಡವಿಯು ಇದೆ. ಈ ಅಡವಿಯಲ್ಲಿ ಜಾಂಬೋರಿ ಊರ ಸಮೀಪ ಯೆಲೋಬಾ ಹೆಸರಿನ ಒಬ್ಬ ಸಾಧುವಿನ ಸಮಾಧಿ ಇದ್ದು, ಅಲ್ಲಿ ಭೂಮಿಯ ಒಳಗೆ ಗವಿಗಳು ಅವೆ. ಅಲ್ಲಿ ನಾರಾಯಣ ಸರಸ್ವತಿ ಎಂಬ ಪ್ರಖ್ಯಾತ ಯೋಗಿಗಳು ವಾಸಿಸುತ್ತಾರೆ. ಅವರ ಕೀರ್ತಿಯು ಎಲ್ಲಕಡೆಯಲ್ಲಿಯೂ ಪಸರಿಸಿ ರುವದರಿಂದ ದಿಲ್ಲಿ, ಪಂಜಾಬ, ಬಂಗಾಲ ವಗೈರೆ ಪ್ರಾಂತಗಳಿಂದ ಭಕ್ತಮಂಡ ಳಿಯು ಈ ಮಹಾನ್ ಪರಮಹಂಸಯೋಗಿಗಳ ದರ್ಶನಕ್ಕೆ ಬರುತ್ತಾರೆ. ನೀವಾ ದರೂ ನಿಮ್ಮ ಮಂದಿ ಎಲ್ಲ ಕೂಡಿಕೊಂಡು ಅವರ ದರ್ಶನಕ್ಕೆ ಬರಬೇಕು. ಆ ಪತ್ರಕ್ಕೆ ಅನುಸರಿಸಿ ನಾರಾಯಣರಾಯರು ಕುಟುಂಬದ ಮಂದಿ ಎಲ್ಲ ಕರಕೊಂಡು ಚಿಖಲಿಗೆ ಬಂದರು. ಈ ಕಾಲಕ್ಕೆ ಗಜಾನನರು ಹತ್ತು ಹನ್ನೊಂದು ವರ್ಷದವ ರಿರಬಹುದು. ಆ ಮೇಲೆ ಗಜಾನನರನ್ನು ಕರಕೊಂಡು ಆ ಎಲ್ಲ ಮಂದಿ ಎತ್ತಿನ ಗಾಡಿಯಲ್ಲಿ ಕೂತು ಅಂತ್ರಿಗೆ ಬಂದು ಮುಟ್ಟಿದರು.

(೬) ಶ್ರೀನಾರಾಯಣ ಸರಸ್ವತಿ:— ಶ್ರೀನಾರಾಯಣ ಸರಸ್ವತಿಯವರ ವಸತಿಸ್ಥಾನವು ಅತ್ಯಂತ ರಮಣೀಯವಾಗಿತ್ತು. ಸಮೀಪದಲ್ಲಿಯೇ ಒಂದು ದೊಡ್ಡ ಚೌಕು. ಅದರ ಮಧ್ಯಭಾಗದಲ್ಲಿ ಒಬ್ಬ ಪುರಾತನ ಸಾಧು ಯೆಲೋಬಾ ಈತನ ಸಮಾಧಿಯು, ಆ ಚೌಕದ ನಾಲ್ಕೂ ಕಡೆಗೆ ಸುತ್ತಲೂ ಕೋಣೆಗಳು ಇದ್ದು, ಗಚ್ಚಿನಿಂದ ಕಟ್ಟಿಸಿದ ಇಟ್ಟಂಗಿಯ ಕೆಲವು ಗವಿಗಳಿದ್ದವು. ಅವುಗಳೊಳಗೆ ಪ್ರಕಾಶ

ಬೀಳುವ ವ್ಯವಸ್ಥೆ ಇದ್ದು, ಅವುಗಳೊಳಗೆ ಹತ್ತು-ಹದಿನೈದು ಮಂದಿ ಸಹಜವಾಗಿ ಕೂಡ್ರುವಷ್ಟು ಜಾಗೆ ಇತ್ತು. ಚೌಕದ ಸಮೀಪದ ದಟ್ಟವಾದ ತೋಪಿನಲ್ಲಿ ಒಂದು ಬಾವಿ ಇತ್ತು. ಅದರ ನೀರು ಬಹಳ ರುಚಿಕರವಿತ್ತು. ಜನರು ಅಲ್ಲಿ ತಮ್ಮ ಸ್ನಾನ ಸಂಧ್ಯಾ ಜಪಾನುಷ್ಠಾನಾದಿಗಳನ್ನು ಮಾಡಿ ಅಲ್ಲಿ ಊಟವನ್ನೂ ಮಾಡುವರು. ಚೌಕದೊಳಗಿನ ಸಮಾಧಿಯ ಕಟ್ಟೆಯ ಮೇಲೆ ಮಹಾರಾಜರ ಗಾದಿ ಹಾಸಿದ್ದು ಇದ್ದು, ಅವರು ಯಾವಾಗಲೂ ಅಲ್ಲೇ ಕೂತಿರುವರು.

(೭) **ಜಾಂಬೋರಿಯಲ್ಲಿಯ ಪೂಜಾವಿಧಿಯ ಪ್ರಕಾರ:—** ಪ್ರಾತಃ ಕಾಲದಲ್ಲಿ ಕಾಕಡಾರತಿ; ಮಧ್ಯಾನ್ಹಕ್ಕೆ ಪೂಜಾ, ಸಂಜೆಯ ಹೊತ್ತಿಗೆ ಪುನಃ ಆರತಿ, ಅನಂತರ ಭಜನ, ಈ ಪ್ರಕಾರ ಅಲ್ಲಿಯ ಕಾರ್ಯಕ್ರಮವು. ಅಲ್ಲಿ ಹೋದ ನಂತರ ಎಲ್ಲರೂ ಮಹಾರಾಜರ ದರ್ಶನ ತಕ್ಕೊಂಡರು; ಆ ಕೂಡಲೇ ಅವರಿಗೆ ಒಂದು ಕೊಠಡಿಯಲ್ಲಿ ಇರಲಿಕ್ಕೆ ಅಪ್ಪಣೆಯಾಯಿತು.

ಅನಂತರ ಗಜಾನನರನ್ನು ಕರಕೊಂಡು ಅವರ ಸೋದರತ್ತೆಯು ಒಬ್ಬಾಕೆಯೇ ಮಹಾರಾಜರ ದರ್ಶನಕ್ಕೆ ಹೋದಳು. ಗಜಾನನರನ್ನು ಕೆಳಗಿಳಿಸಿದ ಕೂಡಲೇ ಅವರು ಸಹಜ ರೀತಿಯಿಂದ ಮಹಾರಾಜರ ಪಾದಗಳನ್ನು ಗಟ್ಟಿಯಾಗಿ ಹಿಡಿದು ಅವುಗಳಮೇಲೆ ತಮ್ಮ ಮಸ್ತಕವನ್ನಿಟ್ಟರು. ಆಗ ಮಹಾರಾಜರ ಪ್ರಾರ್ಥನೆಯನ್ನು ಮಾಡಿ ಬಾಳುಬಾಯಿ ಹೀಗಂದಳು— "ಮಹಾರಾಜರೇ, ಈ ಕುಂಟ ಹುಡುಗನ ಮೇಲೆ ದಯೆಯನ್ನು ಮಾಡಿರಿ. ಇವನ ತಾಯಿ ತಂದೆಗಳು ತೀರಿಕೊಂಡು ಈತನು ಅನಾಥನಾಗಿದ್ದಾನೆ. ಇವನ ಮುಂದಿನ ಗತಿ ಏನಾದೀತೆಂತ ತಿಳಿಯುವದಿಲ್ಲ. ಈಶ್ವರನವಿನಃ ಇವನ ರಕ್ಷಣೆ ಮಾಡುವವರು ಯಾರೂ ಇಲ್ಲ. ನೀವು ಮಹಾನ್ ಸಾಧುರೂಪ ಈಶ್ವರರಿದ್ದೀರಿ, ಈಶ್ವರನ ಸರ್ವಶಕ್ತಿಗಳು ತಮ್ಮಲ್ಲಿರುತ್ತವೆ. ಆದ್ದರಿಂದ ಈ ಕೂಸನ್ನು ನಿಮ್ಮ ಉಡಿಯಲ್ಲಿ ಹಾಕಿಕೊಳ್ಳಿರಿ. ಇವನ ತಾಯಿ ಅಂದರೆ ನನ್ನ ಅಕ್ಕ ಬಹಳ ಸಾಧ್ವಿ ಇದ್ದಳು. ಆಕೆಯು ತನ್ನ ಮರಣಕಾಲದಲ್ಲಿ ಈತನನ್ನು ನನ್ನ ಸ್ವಾಧೀನ ಮಾಡಿ ಹೇಳಿದ್ದೇನಂದರೆ 'ನೀನು ಇವನನ್ನು ಯಾವನಾದರೂ ಸಾಧುವಿನ ಚರಣಗಳಲ್ಲಿ ಹಾಕು; ಅಂದರೆ ಅತನ ಕೃಪಾಪ್ರಸಾದದಿಂದ ಈತನ ಮುಂದಿನ ಜೀವನವು ಸುಖದಿಂದ ಸಾಗುವದು'. ಆಕೆಯ ಸದಿಚ್ಛೆಯಿಂದಲೇ ಇವತ್ತಿನ ಈ ಸುಸಂಧಿಯು ಪ್ರಾಪ್ತವಾಗಿರುತ್ತದೆ".

(೮) **ಶ್ರೀನಾರಾಯಣ ಸರಸ್ವತಿಯವರ ಕೃಪಾಪ್ರಸಾದವು:—** ಆ ಬಾಳುಬಾಯಿಯ ಕರುಣ ವಚನಗಳನ್ನು ಕೇಳಿ ಮಹಾರಾಜರಿಗೆ ಸಮಾಧಾನವಾಯಿತು. ಮತ್ತು ಆಕೆಯ ಕಡೆಗೆ ತಿರುಗಿ, ಅಂದರು— "ತಾಯಿ, ನೀವಿಬ್ಬರೂ ಅಕ್ಕತಂಗ್ಯಂದಿರು ಪೂರ್ವ ಜನ್ಮದಲ್ಲಿ ಯೋಗಾಭ್ಯಾಸಿಗಳಿದ್ದಿರಿ. ನಿಮ್ಮ ಪೂರ್ವ ಜನ್ಮದ ಪುಣ್ಯಪ್ರಭಾವದಿಂದಲೇ ಈಹೊತ್ತಿನ ಈ ಯೋಗ ಸಂಭವಿಸಿತು. ಈ ಗಜಾನನನು ಪೂರ್ವಜನ್ಮದಲ್ಲಿ ಯೋಗಿ ಇದ್ದನು. ಇನ್ನು ಕೆಲವು ವರ್ಷಗಳಲ್ಲಿ

ಇವನು ಮಹಾಸಾಧು ಎಂತ ಪ್ರಸಿದ್ಧಿ ಹೊಂದುವನು. ಮತ್ತು ಅಧ್ಯಾತ್ಮ ಮಾರ್ಗದಲ್ಲಿದ್ದ ಬಹಳೇ ಸಾಧಕರಿಗೆ ಇವನು ಮಾರ್ಗದರ್ಶಕನಾಗುವನು. ಇವನ ಕಣ್ಣೊಳಗಿನ ಗೊಂಬೆಗಳ ಮೇಲಿಂದ ಇವನು ನಾಥಪಂಥಿ ಯೋಗಿ ಇರಬೇಕು. ಇವನ ಸಮ್ಬಂಧ ನೀವು ಎಷ್ಟೊಂದೂ ಚಿಂತೆ ಮಾಡುವ ಕಾರಣವಿಲ್ಲ. ಆದರೆ, ತಾಯಿ, ನೀವು ಮಾತ್ರ ಈತನ ಉಜ್ವಲ ಕೀರ್ತಿಯನ್ನು ನೋಡಲಿಕ್ಕೆ ಇರಲಾರಿರಿ. ಆದರೂ ಈತನ ಬೆಳೆಯುವ ಕೀರ್ತಿಯು ಯಾವಾಗ್ಗೆ ಸ್ವಲ್ಪವಾದರೂ ನಿಮ್ಮ ಕಿವಿಯಲ್ಲಿ ಬೀಳುವದೋ, ಆಗ ಇವನ ಸಮ್ಬಂಧ ನಿಮ್ಮ ಚಿಂತೆಯು ದೂರವಾದೀತು" ಮುಂದೆ ಮಹಾರಾಜರು ಈ ಸೋದರತ್ತೆಗೆ ಮುಕ್ತಾಬಾಯಿ ಎಂತ ಕರೆಯುತ್ತಿದ್ದರು.

ಅನಂತರ ಮಹಾರಾಜರು ಎಲ್ಲರಿಗೂ ಅಡಿಗೆ ಊಟ ವಗೈರೆ ತೀರಿಸಿಕೊಳ್ಳಲಿಕ್ಕೆ ಕಳುಹಿಸಿದರು. ಊಟ ಆದಮೇಲೆ ಸರ್ವರೂ ನಿದ್ದೆಹೋದರು. ಮುಂಜಾನೆ ಕಾಂಕಡಾರತಿಗೆ ಎಲ್ಲರೂ ಹೋಗಬೇಕಂತ ನಿರ್ಣಯಿಸಿದ್ದರಿಂದ ಆ ವೇಳೆಗೆ ಎಲ್ಲರೂ ಎದ್ದು ಕಾಂಕಡಾರತಿಗೆ ಹೋದರು. ಆದರೆ ಗಜಾನನರು ಮಾತ್ರ ನಿದ್ದೆಹೋಗದೆ ಸರ್ವರೂ ಆರತಿಗೆ ಹೋಗಿ ತಿರುಗಿ ಬರುವತನಕ ಅರ್ಧ ಎಚ್ಚರವಿದ್ದು, ತಮ್ಮ ಹಾಸಿಗೆಯ ಮೇಲೆ ಕೂತಿದ್ದರು. ಇದೇ ಸ್ಥಿತಿಯಲ್ಲಿ ಅವರಿಗೆ ಮುಂದೆ ಹೇಳಿದಂತೆ ದೃಷ್ಟಾಂತವಾಯಿತು.

(೯) **ಆಧ್ಯಾತ್ಮಿಕ ದೃಷ್ಟಾಂತ:—** ಎಲ್ಲಿ ಕಡೆಯಲ್ಲಿಯೂ ದಟ್ಟವಾದ ಅಂಧಃಕಾರ ಬಿದ್ದಿರುವದು. ಅದರೊಳಗಿಂದಲೇ ತಾನು ಪಾದಚಾರಿಯಾಗಿ ನಡೆಯುತ್ತಿದ್ದೇನೆಂತ ಗಜಾನನರಿಗೆ ತಿಳಿಯಬಂತು. ನಡನಡುವೆ ಒಂದು ನಕ್ಷತ್ರ ಕಾಣಿಸುತ್ತಿತ್ತು. ಮತ್ತೆ ಪುನಃ ಕತ್ತಲು. ಮಳೆಯೂ ಬೀಳುತ್ತಿತ್ತು; ಮೇಘ ಗರ್ಜನೆಯೂ ಕೇಳುತ್ತಿತ್ತು ಮಿಂಚು ಹೊಳೆಯುತ್ತಿರುವದು ಮತ್ತು ರಸ್ತೆಯಲ್ಲಿ ತುಂಬಾ ಹಾವುಗಳು ಇದ್ದವು. ಅವುಗಳೊಳಗೆ ಕೆಲವು ಬೆಳ್ಳನವು, ಕೆಲವು ಕರ್ರನವು, ಕೆಲವು ಹಸರು, ಕೆಲವು ಮನುಷ್ಯರ ಮುಂಗೈಯಷ್ಟು, ಕೆಲವು ಹಾವುಗಳು ಮನುಷ್ಯನ ತೊಡೆಗಳಷ್ಟು ಸಹ ಇದ್ದವು. ಹಾವುಗಳು ಗಜಾನನರ ಕಾಲುಗಳಿಗೆ ಮತ್ತು ಟೊಂಕಕ್ಕೆ ಸುತ್ತಿಕೊಂಡವು. ಅವುಗಳಪೈಕಿ ಎಲ್ಲಕ್ಕೂ ದೊಡ್ಡ ಹಾವು ಬಂದು ಗಜಾನನರ ಕೊರಳನ್ನೇ ಸುತ್ತಿಕೊಂಡಿತು, ಮತ್ತು ತಲೆಯ ಮೇಲೆ ಹತ್ತಿತು. ಗಜಾನನರಾದರೂ ಮುಂದೆ ಮುಂದೆ ನಡೆಯುತ್ತಾ ಇದ್ದರು. ನಡೆಯುತ್ತಿರುವಾಗ ಅವರ ಶರೀರವು ಪುಷ್ಟವೂ ಉನ್ನತವೂ ಆಯಿತು. ಮತ್ತು ಹಾವುಗಳನ್ನು ಸರಿಸುತ್ತಾ ಮುಂದ ಮುಂದೆ ಹೋಗುತ್ತಿದ್ದರು. ಅವರಿಗೆ ಭೀತಿಯೂ ಇತ್ತು. ಆದರೆ ಒಂದು ಪ್ರಕಾರದ ಅನನುಭೂತ ಆನಂದವೂ ಆಗುತ್ತಿತ್ತು. ತಾವು ಎಷ್ಟು ನಡೆದೆವೆಂಬದು ಅವರಿಗೆ ಅನುಮಾನಿಸಲಾಗುತ್ತಿದ್ದಿಲ್ಲ. ಆದರೆ ಬೇಗನೆ ತಮ್ಮ ಶರೀರವು ಹಗುರವಾಗುತ್ತನಡೆದದೆ ಎಂಬದು ತಿಳಿಯಬಂತು.

ಹಾವುಗಳು ಅಲ್ಲಿ ಇದ್ದೇ ಇದ್ದವು. ಆದರೆ ಈ ಕತ್ತಲು ಮಾತ್ರ ಇದ್ದಿಲ್ಲ. ಎಲ್ಲಕಡೆಯಲ್ಲಿಯೂ ಸ್ವಚ್ಛವಾದ ಪ್ರಕಾಶವು ಪಸರಿಸುತ್ತಿತ್ತು. ಆ ಪ್ರಕಾಶದಲ್ಲಿ ಅವರು ತಮ್ಮ ಮುಂದೆ ಒಂದು ಸುಂದರವಾದ ಸಮಾಧಿಯನ್ನು ನೋಡಿದರು. ಅದು ಸರ್ವಪ್ರಕಾರದ ಶೋಭಿಸುವ ಹೂವುಗಳಿಂದ ಶೃಂಗರಿಸಲ್ಪಟ್ಟಿದ್ದು ಇದ್ದು ಅದರೊಳಗಿಂದ ಉತ್ಕೃಷ್ಟ ಸುವಾಸು ಹೊರಚಿಮ್ಮುತ್ತಿತ್ತು. ಅಲ್ಲಿ ಒಂದು ಸಣ್ಣ ದೀವಿಗೆಯು ಉರಿಯುತ್ತಿತ್ತು. ಮತ್ತೊಂದುಕಡೆಯಲ್ಲಿ ಕರ್ಪೂರವು ಹಚ್ಚಿತ್ತು. ಸಮೀಪದಲ್ಲಿ ಒಬ್ಬ ಸುಂದರ ತರುಣಿಯು ನಿಂತಿದ್ದಳು. ಆಕೆಯ ಟೊಂಕಕ್ಕೆ ಬಂಗಾರದ ಪಡುಕಟ್ಟು ಇದ್ದು, ಅದಕ್ಕೆ ಒಂದು ಲಖಲಖಿತವಾದ ಖಡ್ಗವು ಶಿಗಿಸಿತ್ತು. ಗಜಾನನರು ಆಕೆಗೆ ನಮಸ್ಕಾರ ಮಾಡಬೇಕೆನ್ನುವಷ್ಟರಲ್ಲಿ ಆಕೆಯು ಅದೃಶ್ಯಳಾದಳು. ಗಜಾನನರಿಗೆ ಬಹಳ ಆಶ್ಚರ್ಯವೂ ಆಯಿತು. ಆನಂದವೂ ಆಯಿತು. ಇದು ಯಾರ ಸಮಾಧಿ ಇರಬಹುದು, ಎಂಬದನ್ನು ತಿಳಿಯಬೇಕೆಂಬ ತೀವ್ರ ಇಚ್ಛೆಯು ಮನಸ್ಸಿನಲ್ಲಿ ಉತ್ಪನ್ನವಾಯಿತು. ತತ್ಕ್ಷಣವೇ ಸಮಾಧಿಯು ಎರಡು ಹೋಳಾಗಿ ಅವರೊಳಗಿಂದ ಕಣ್ಣು ಕುಕ್ಕುವಂಥ ತೇಜವಂತ ಪುರುಷಾಕೃತಿ ಹೊರಗೆ ಬಂತು ವ "ಆದೇಶ ಓಂ ಹಂಸಃ ಸೊಹಂ ಬ್ರಹ್ಮ" ಎಂಬ ದೊಡ್ಡ ಧ್ವನಿಯಾಯಿತು. ಗಜಾನನರಿಗಾದರೋ ಆ ಧ್ವನಿಯು ಸ್ವಶರೀರದೊಳಗಿಂದಲೇ ಹೊರಟಂತೆ ಕಾಣಿಸಿತು. ಆ ದಿವ್ಯ ಮೂರ್ತಿಗೆ ಉದ್ದವಾದ ಗಡ್ಡವೂ ಇದ್ದು, ಆತನು ಕೇಶರೀ ಬಣ್ಣದ ಕಫನಿ ( ನಿಲುವಂಗಿ ) ಯನ್ನು ತೊಟ್ಟಿದ್ದನು. ಕೊರಳೊಳಗೆ ರುದ್ರಾಕ್ಷ ಮಾಲೆ ಇತ್ತು. ಮತ್ತು ಮಸ್ತಕದ ಮೇಲೆ ಜಡೆಗಳ ಒಂದು ಮುಕುಟವಿತ್ತು. ಆದರ ತೇಜದಿಂದ ಗಜಾನನರ ಕಣ್ಣು ಕುಕ್ಕಿದವು. ಮತ್ತು "ಹಂಸಃ ಸೋಹಂ" ಈ ಧ್ವನಿಯು ಆ ಮೂರ್ತಿಯ ಮುಖದಿಂದ ಹೊರಡುತ್ತಿತ್ತು. ಆದರೂ ಅದು ತನ್ನ ಮುಖದಿಂದಲೇ ಹೊರಡುತ್ತಿತ್ತೆಂಬಂತೆ ಗಜಾನನರಿಗೆ ತೋರುತ್ತಿತ್ತು. ಅನಂತರ ಆ ವ್ಯಕ್ತಿಯು ಸೌಮ್ಯ ರೂಪವನ್ನು ಧಾರಣೆ ಮಾಡಿತು. ಮತ್ತು "ಮಚ್ಛೇಂದ್ರ ಆದೇಶ" ಈ ಧ್ವನಿಯಾಗಿ ಎಲ್ಲ ನೋಟವು ಒಮ್ಮೆಂದೊಮ್ಮೆ ಅದೃಶ್ಯವಾಯಿತು.

(೧೦) **ದೃಷ್ಟಾಂತದ ನಂತರ:—** ಆ ಮೇಲೆ ಗಜಾನನರು ಪೂರ್ಣವಾಗಿ ಎಚ್ಚರವಾದರು. ಆಗ ಅವರ ಶರೀರವು ಬೆವರಿನಿಂದ ಪೂರ್ಣವಾಗಿ ನೆನೆದಿತ್ತು. ವಸ್ತ್ರಗಳೆಲ್ಲವೂ ನೆನೆದಿದ್ದವು, ಮತ್ತು ಅವರ ಸರ್ವಾಂಗದೊಳಗಿಂದ ಸುವಾಸವು ಹೊರಗೆ ಪಸರುತ್ತಿತ್ತು. ಅವರು ತಮ್ಮ ಕಣ್ಣುಗಳನ್ನು ಒರಸಿಕೊಳ್ಳುತ್ತಿದ್ದರು. ಆಗ ಸೂರ್ಯೋದಯವಾಗಿತ್ತು. ಎಲ್ಲಕಡೆಯಲ್ಲಿಯೂ ಪ್ರಕಾಶವಾಯಿತು. ಆದರೆ ಗಜಾನನರ ಕಣ್ಣುಮುಂದೆ ಕತ್ತಲೆಯೇ ವ್ಯಾಪಿಸಿತ್ತು. ಅವರು ಸ್ವಲ್ಪ ಘಾಬರಿಯಾದಂತೆ ಕಾಣಿಸುತ್ತಿದ್ದರು.

ಅವರ ಒದ್ದೆಯಾದ ಶರೀರವನ್ನು ನೋಡಿ, ಗಜಾನನರೂ ಇತರರೂ ತಿಳಕೊಂಡರಲ್ಲ, ಹಾಸಿಗೆಯ ಸಮೀಪ ಇಟ್ಟ ನೀರಿನ ಪಾತ್ರೆಯು ಮಲಗಿದ್ದಾಗ

ಅವರ ಕಾಲಿಗೆ ತಾಗಿ ಉರುಳಿರಬಹುದು. ಗಜಾನನರ ಘಾಬರಿಯಾದಂಥ ಸ್ಥಿತಿಯನ್ನು ನೋಡಿ, ಸೋದರತ್ತೆಯು ಭಯಚಿಂತಾವಶಳಾಗಿ ಅವನನ್ನು ಕರಕೊಂಡು ಹೋಗಿ ಮಹಾರಾಜರ ಪಾದಗಳಮೇಲೆ ಹಾಕಿದಳು. ಮಹಾರಾಜರು ಸೋದರತ್ತೆಯಕಡೆಗೆ ನೋಡಿ ಅಂದದ್ದೇನಂದರೆ, "ನಿಮಗೆ ತಿಳಿಯಿತೇನು? ಅವನು ನಿಜವಾದ ಯೋಗಿಯು, ನೀವು ಅವನ ಸಲುವಾಗಿ ಚಿಂತೆಯನ್ನು ವಹಿಸತಕ್ಕದ್ದಲ್ಲ.

ಆಗ ಅವರು ಗಜಾನನರಿಗೆ ಸ್ವಪ್ನದಲ್ಲಿ ಕೊಟ್ಟ ಮಂತ್ರವನ್ನು ಉಚ್ಚರಿಸಲಿಕ್ಕೆ ಹೇಳಿದರು. ಆ ಮಂತ್ರವು ಕಿವಿಗಳಲ್ಲಿ ಘೋಷಿಸುತ್ತಿತ್ತು. ಮತ್ತು ಮೈತುಂಬ ಆಕ್ರಮಿಸಿತ್ತು. "ಆದೇಶ ಓಂ ಹಂಸಃ ಸೋಹಂ" ಈ ಶಬ್ದಗಳನ್ನು ಅವನು ಕೇಳಿದ್ದನು. ಅವುಗಳ ಪೈಕಿ ಮೊದಲನೆಯವು ಬಿಟ್ಟುಹೋಗಿ, ಬರೇ 'ಸೋಹಂ' ಸೋಹಂ' ಮಾತ್ರ ಅವನ ಕಿವಿಯಲ್ಲಿಯೂ ಶರೀರದಲ್ಲಿಯೂ ಘೋಷಿಸುತ್ತಿತ್ತು; ಅಂತ ಅವರು ಮಹಾರಾಜರ ಮುಂದೆ 'ಸೋಹಂ, ಸೋಹಂ" ಎಂದು ಅಂದು ತೋರಿಸಿದರು. "ಹಾಗಾದರೆ ಇಷ್ಟು ಸಣ್ಣ ವಯಸ್ಸಿನಲ್ಲಿಯೇ ನಿನಗೆ ದೇವಿಯು ವ ಮತ್ಸ್ಯೇಂದ್ರನಾಥರ ದರ್ಶನವಾಯಿತಲ್ಲ, ಮಗುವೇ!" ಎಂದು ಮಹಾರಾಜರು ಬಹಳ ಆಶ್ಚರ್ಯಗೊಂಡು ಹೇಳಿದರು.

(೧೧) ಪ್ರಸಾದವು:— ಅನಂತರ ಗಜಾನನರು ಸರ್ವ ಸ್ವಪ್ನದ ವರ್ಣನೆಯನ್ನು ಮಾಡಿದರು. ಅದನ್ನು ಕೇಳಿ ಮಹಾರಾಜರಿಗೆ ಅತ್ಯಂತ ಸಮಾಧಾನವಾಯಿತು. ಅವರು ಗಜಾನನರನ್ನು ಕೈಗಳಿಂದ ಅಪ್ಪಿಕೊಂಡು ಮುದ್ದಿಟ್ಟರು. ಮತ್ತು ಅವರ ಮುಖದಿಂದ ಸಹಜವಾಗಿ ಈ ಶಬ್ದಗಳು ಹೊರಟವು — "ಜಗತ್ತಿನೊಳಗೆ ನಿನ್ನ ಕೀರ್ತಿಯಾದೀತು. ಮತ್ತು ನಿನ್ನಿಂದ ಅನೇಕ ಮುಮುಕ್ಷು ಜನರ ಕಲ್ಯಾಣವಾಗುವದು. ನೀನು ಯಾವಾಗಲೂ ಆತ್ಮಾನಂದದಲ್ಲಿ ನಿಮಗ್ನನಾಗಿರುವಿ" ಹೀಗೆ ಆಶೀರ್ವಾದ ಕೊಟ್ಟರು, ಮತ್ತು ಅಂದರು—"ನಿನ್ನ ಶ್ವಾಸದಲ್ಲಿ ನಿನಗೆ ಸದಾ ನನ್ನ ದರ್ಶನವಾದೀತು." ಅನಂತರ ಎಲ್ಲರೂ ಮಹಾರಾಜರ ದರ್ಶನ ತಕ್ಕೊಂಡು ತಮ್ಮ ಕೊಠಡಿ ಕಡೆಗೆ ಬಂದು ಅಡಿಗೆ ಮಾಡಿ ಭೋಜನ ಮಾಡಿದರು.

(೧೨) ಸಮಾಧಿಯ ದರ್ಶನ ತಗೊಳ್ಳುವ ಹುಲಿಯು- ಒಂದು ದಿನ ಸರ್ವ ಗುಪ್ತೆಯವರ ಮಂದಿ ದರ್ಶನಕ್ಕೆ ಹೋಗಿರುವಾಗ ಮಹಾರಾಜರಂದರು— "ಇಲ್ಲಿ ಒಂದು ಬಹು ದೊಡ್ಡ ಹುಲಿಯು ಸಮಾಧಿಯ ದರ್ಶನದ ಸಲುವಾಗಿ ಪ್ರತಿ ರಾತ್ರಿ ಬರುತ್ತದೆ ಆದ್ದರಿಂದ ರಾತ್ರಿ ಹನ್ನೊಂದು ಗಂಟೆಯನಂತರ ಯಾರೊಬ್ಬರೂ ಎಚ್ಚರವಿರಬಾರದು. ಇದ್ದರೆ ಅದನ್ನು ನೋಡಿ ಘಾಬರಿಯಾದಾರು". ಆ ರಾತ್ರಿ ದಿನದಂತೆ ಎಲ್ಲರೂ ನಿದ್ದೆ ಹೋದರು, ಆದರೆ ಗಜಾನನರು ಮಾತ್ರ ನಿದ್ದೆ ಮಾಡುವವರಂತೆ ಕಾಣಿಸಿಕೊಂಡು ಎಚ್ಚರವಿದ್ದರು, ಜಪಮಾಗುತ್ತಿ

ರುವದನ್ನು ಕೇಳುತ್ತಾ ಅವರು ಆನಂದದಲ್ಲಿದ್ದರು. ಇಂಥಾವೇಳೆಗೆ ಹುಲಿಯು ದಿನದಂತೆ ಬಂತು, ಅದು ಸಮಾಧಿಗೆ ಮತ್ತು ಮಹಾರಾಜರಿಗೆ ಬಗ್ಗಿ ನಮ-ಸ್ಕಾರ ಮಾಡಿತು. ಮತ್ತು ಬಂದ ದಾರಿಯಿಂದಲೇ ತಿರುಗಿ ಹೋಯಿತು. ಮಹಾರಾಜರು ಸಹಜವಾಗಿ ಗಜಾನನರ ಕಡೆಗೆ ನೋಡಿದರು, ಮತ್ತು ಅವರು ಎಚ್ಚರ ಇರುವದನ್ನು ಕಂಡು, “ ಮಗುವೇ ಇನ್ನೂ ನೀನು ಎಚ್ಚರ ಇದ್ದಿಯೇ ! ನಿನಗೆ ಅಂಜಿಕೆಯಾಗಲಿಲ್ಲವಲ್ಲ ? ” ಅಂದರು. ಆಗ ಗಜಾನನರು, ನನಗೆ ಸದ್ಗುರು ಕೃಪೆಯಿಂದ ಎಷ್ಟೊಂದೂ ಅಂಜಿಕೆಯಾಗಲಿಲ್ಲ ಎಂದಂದರು.

ಪ್ರಾತಃಕಾಲದಲ್ಲಿ ರಾತ್ರೆ ನಡೆದ ಸಂಗತಿಯು ಸರ್ವರಿಗೂ ತಿಳಿಯಿತು. ಆಗ ಪ್ರತಿಯೊಬ್ಬರು ಅನ್ನುತ್ತಾರಲ್ಲ, “ ಗಜಾನನರು ಎಚ್ಚರವಿದ್ದರೆ, ಆ ಸಮಯ ನಮಗೆ ಯಾಕೆ ಎಬ್ಬಿಸಲಿಲ್ಲ ? “ನಿಮಗೆ ಎಬ್ಬಿಸುತ್ತಿದ್ದೆವು ಆದರೆ ನೀವು ಭಯ ಪಡುತ್ತಿದ್ದಿರಿ” ಎಂದು ಮಹಾರಾಜರು ಅಂದರು.

(೧೩) **ಬೋರಗಾಂವಕ್ಕೆ ಪ್ರಯಾಣ ಮತ್ತು ಶ್ರೀ ನಾರಾಯಣ ಸರಸ್ವತಿಯವರ ಗುರು:—** ಕೆಲವು ಕಾಲದ ನಂತರ ಮಹಾರಾಜರ ಗುರುಗಳ ಪುಣ್ಯತಿಥಿಯ ದಿವಸವು ಬಂತು. ಅವರ ಗುರುಗಳ ಸಮಾಧಿಯು ಬೋರಗಾಂವ ದೊಳಗೆ ಅದೆ. ಅಂತ್ರಿಯಿಂದ ಎತ್ತಿನ ಗಾಡಿ ಮೇಲೆ ಬೋರಗಾಂವಕ್ಕೆ ಹೋಗ ಲಿಕ್ಕೆ ಮೂರು ನಾಲ್ಕು ದಿವಸಗಳು ಹಿಡಿಯುತ್ತವೆ. ಇದಕ್ಕೆ ಬಾಬಾ ಮಗನನ ಬೋರಗಾಂವ ಅಂತಲೂ ಅನ್ನುತ್ತಾರೆ. ಅದು ನಿಜಾಮ ಹದ್ದಿನೊಳಗಿನ ಔರಂಗಾ ಬಾದ ಊರಿನ ಉತ್ತರಕ್ಕೆ ಸುಮಾರು ಸಾಲ್ವತ್ತು ಮೈಲಿನ ಮೇಲೆ ಇರುವದು. ಅಲ್ಲಿಗೆ ಹೋಗುವ ಮಾರ್ಗವು ಕಾಡಿನೊಳಗಿಂದ ಹೋಗುತ್ತಿದ್ದು ಬಹಳ ದುಸ್ತರ ವಾಗಿದೆ. ಈ ರಸ್ತೆಯಿಂದಲೇ ನಾರಾಯಣ ಮಹಾರಾಜರು ತಮ್ಮ ೨೦೦-೩೦೦ ಶಿಷ್ಯರು ವ ೧೫೦ ಎತ್ತಿನ ಗಾಡಿಗಳನ್ನು ತಕ್ಕೊಂಡು ಹೊರಟು ಏಳು ದಿವಸಗಳಲ್ಲಿ ಬೋರಗಾಂವಕ್ಕೆ ಮುಟ್ಟಿದರು. ಬೋರಗಾಂವ ಎಂಬದು ಒಂದು ಸಣ್ಣ ಹಳ್ಳಿಯು, ಮಹಾರಾಜರು ಈ ಭಾಗದಲ್ಲಿ ಒಳ್ಳೇ ಪ್ರಸಿದ್ಧಿಯನ್ನು ಹೊಂದಿದ್ದರು ಅವರು ಅಲ್ಲಿ ಹದಿನೈದು ದಿನಗಳವರೆಗೆ ಇದ್ದರು. ಪ್ರತಿದಿನ, ಭಜನ, ಪೂಜಾ ಆರತಿ ಮತ್ತು ಉತ್ಸವಗಳು ಈ ಕಾರ್ಯಕ್ರಮ ನಡೆಯುತ್ತಿತ್ತು. ಅನ್ನ ಸಂತ-ರ್ಪಣೆಯೂ ದೊಡ್ಡ ಪ್ರಮಾಣದಿಂದ ನಡೆಯುತ್ತಿತ್ತು.

(೧೪) **ಗುರುಗಳ ಆದೇಶ:—** ಬೋರಗಾಂವದ ಸಮೀಪ ಒಂದು ನದಿ ಇದೆ. ಮಹಾರಾಜರು ತಮ್ಮ ಗುರುಗಳು ಎಲ್ಲಿ ಧ್ಯಾನಕ್ಕೆ ಕೂಡುತ್ತಿದ್ದರೋ ಆ ಸ್ಥಾನವನ್ನು ಎಲ್ಲರಿಗೂ ತೋರಿಸಿದರು. ಒಂದಾನೊಂದು ದಿನ ಅವರು ತಮ್ಮ ಗುರುಗಳ ವಚನಗಳ ನೆನಪು ಎಲ್ಲರಿಗೂ ಮಾಡಿಕೊಟ್ಟರು. ಅವರಂದರು “ನನ್ನ ಮೊದಲನೇ ಹೆಸರು ಪರಮಾನಂದ ನನ್ನ ಸದ್ಗುರುಗಳ ಹೆಸರು ನಾರಾಯಣ ಸರಸ್ವತಿ, ತಮ್ಮ ಅಂತ್ಯಕಾಲವು ಸಮೀಪ ಬಂದದೆಂತ ಯಾವಾಗ್ಗೆ ಸದ್ಗುರುಗಳಿಗ

ತಿಳಿಯಿತು, ಅವರದು ನನ್ನ ಮೇಲೆ ವಿಶೇಷ ಕೃಪಾ ದೃಷ್ಟಿ ಇದ್ದ ಮೂಲಕ, ನನ್ನನ್ನು ಅವರು ಸಮೀಪ ಕರೆದು, ಅಂದರು- "ಪರಮಾನಂದಾ ನಾನು ಬೇಗನೆ ಈ ಇಹಲೋಕವನ್ನು ಬಿಟ್ಟು ಹೋಗುತ್ತೇನೆ ನಮ್ಮ ಮಾರ್ಗದ ಪರಂಪರೆಯನ್ನು ಪೂರ್ವದಂತೆ ನಡಿಸುತ್ತಿರಬೇಕು. ಈ ಕಾರ್ಯದ ಸಲುವಾಗಿ ನಿನಗಿಂತ ಅಧಿಕ ಯೋಗ್ಯರು ನನಗೆ ಮತ್ಯಾರೂ ತೋರುವದಿಲ್ಲ. ಆದ್ದರಿಂದ ನನ್ನನಂತರ ನೀನು ನಿನ್ನ ಪರಮಾನಂದ ಎಂಬ ಹೆಸರನ್ನು ಬಿಟ್ಟು ನಾರಾಯಣ ಸರಸ್ವತಿ ಎಂಬ ಹೆಸರನ್ನು ಧಾರಣೆ ಮಾಡು, ಮತ್ತು ನಮ್ಮ ಪರಂಪರೆಯನ್ನು ಚಾಲು ಇಡು. ಯಾರಾದರೂ ಸತ್ವಶೀಲ ಅಧಿಕಾರಿ ಅಲ್ಲದಿದ್ದರೆ ಅಥವಾ ಇಂದ್ರಿಯ ದಮನ ಮಾಡುವವನು ಅಲ್ಲದ್ದಾದರೆ, ಅಂಥವನ ಮೇಲೆ ಅನುಗ್ರಹ ಮಾಡಬೇಡ. ಅನುಗ್ರಹ ಕೊಟ್ಟನಂತರ ಯಾರೊಬ್ಬನು ಅವಿಚಾರದಿಂದ ಆಚರಿಸಿದನೆಂದರೆ, ನೀನು ಅಂಥವನಿಗೆ ಕೊಟ್ಟ ಶಕ್ತಿಯನ್ನು ತಿರಿಗಿ ತಕ್ಕೊ" ಹೀಗೆ ಹೇಳಿ ಅವರು ತಮ್ಮ ನಶ್ವರ ದೇಹವನ್ನು ಬಿಟ್ಟುಬಿಟ್ಟರು.

(೧೫) **ಮಾರ್ಗದಲ್ಲಿ ದರೋಡೆಖೋರರು:-** ಪುಣ್ಯತಿಥಿಯ ಉತ್ಸವವು ತೀರಿದ ಬಳಿಕ ಅವರ ಕೂಡ ಯಾವ ಜನರು ಬೋರಗಾಂವಕ್ಕೆ ಹೋಗಿದ್ದರು, ಅವರ ಕೂಡ ಅವರು ಅಂತ್ರಿಗೆ ತಿರಿಗಿ ಹೋಗಲಿಕ್ಕೆ ಹೊರಟರು. ದಾರಿಯಲ್ಲಿ ಕಾಡಿನೊಳಗಿನ ಒಂದು ಮಾರ್ಗದಲ್ಲಿ ಕಳ್ಳರ ಸ್ಥಾನವು ಗಂಟುಬಿತ್ತು. ಅಲ್ಲಿ ಆ ಕಳ್ಳರು ಭೋಜನಾದಿಗಳನ್ನು ಮಾಡುವದರಲ್ಲಿ, ನಗುತ್ತ ಹಾಳ ಹರಟೆ ಮಾತಾಡುವದರಲ್ಲಿ ಮಗ್ನರಾಗಿದ್ದರು. ಅವರ ಕೂಡ ಬಂದೂಕುಗಳಿದ್ದವು. ಹಾಗೆಯೇ ಮಹಾರಾಜರ ಮಂದಿಯ ಹತ್ತರವೂ ಇದ್ದವು. ಬಂದೂಕುಗಳನ್ನು ಹಾರಿಸಲಿಕ್ಕೆ ಮಹಾರಾಜರ ಪರವಾನಗಿ ಕೇಳಿಬಂದರು, ಆದರೆ ಅವರು ಪರವಾನಗಿ ಕೊಟ್ಟಿಲ್ಲ. ಆದರೂ ಒಂದು ಮೈಲು ಮುಂದೆ ಹೋದ ಮೇಲೆ ಹಾರಿಸಿದರು. ಅದರಿಂದ ಕಳ್ಳರ ಉಪದ್ರವವೇನೂ ಆಗಲಿಲ್ಲ.

(೧೬) **ಶ್ರೀನಾರಾಯಣಸರಸ್ವತಿ ಸಮ್ಮಂಧ ಅವರ ಶಿಷ್ಯರ ದೃಷ್ಟಿ:-** ಶ್ರೀನಾರಾಯಣಸರಸ್ವತಿ (ಪರಮಾನಂದ) ಇವರು ಮಹಾ ಪರಾಕ್ರಮಿಯಾದ ಸಾಧುಗಳಿದ್ದರು. ಗಜಾನನರು ಹಾಗೂ ಅವರ ಇತರ ಭಕ್ತಜನರು ಅವರು ಮಾಡಿದ ಅನೇಕ ಚಮತ್ಕಾರಗಳನ್ನು ಪ್ರತ್ಯಕ್ಷ ನೋಡಿದ್ದಾರೆ. ಅವರು ಯಾರಿಗೂ ತಮ್ಮ ಫೋಟೋ ತೆಗಿಯಗೊಡುತ್ತಿದ್ದಿಲ್ಲ. ಅಕೋಲಾ-ವಣ್ಹಾಡ ಎಂಬಲ್ಲಿ ಶ್ರೀ ಪೆಂಢಾರಕರ ಎಂಬವರು ಡ್ರಾಯಿಂಗ ಶಿಕ್ಷಕರೂ ಫೊಟೊಗ್ರಾಫರರೂ ಆಗಿದ್ದರು. ಅವರು ಮಹಾರಾಜರ ಫೋಟೊ ತಕ್ಕೊಳ್ಳಬೇಕೆಂದು ಪ್ರಯತ್ನ ಮಾಡಿದರು, ಆದರೆ ಅವರ ಮುಖಕ್ಕೆ ಸರಿಯಾಗಿ ಇದ್ದ ಒಂದೂ ಫೊಟೊ ಹೊರಡಲಿಲ್ಲ. ಕಡೆಗೆ ಅವರು ಮಹಾರಾಜರ ಪಾದಕ್ಕೆ ಬಿದ್ದರು, ಮತ್ತು ಮಹಾರಾಜರು ತಮ್ಮ ಫೊಟೊ ಸರಿಯಾಗಿ ಬರುವಂತೆ ಕೃಪಾ ಮಾಡಬೇಕು ಎಂದು ಸವಿನಯ ಪ್ರಾರ್ಥನೆ

ಮಾಡಿದರು. ಆಗ ಮಹಾರಾಜರು ಪರವಾನಗಿ ಕೊಟ್ಟರು, ಆ ಮೇಲೆ ಅವರ ಫೋಟೋ ತಕ್ಕೊಳ್ಳಲಿಕ್ಕೆ ಅವರಿಗೆ ಸಾಧ್ಯವಾಯಿತು.

ರಾ. ಭಂಡಾರಕರ ಇವರ ಪತ್ನಿಯು ಸನ್ ೧೯೪೦ನೇ ಇಸವಿಯ ಜುಲೈ ತಿಂಗಳಲ್ಲಿ ಶ್ರೀ ಗಜಾನನ ಮಹಾರಾಜರ ದರ್ಶನಕ್ಕೆ ಬಂದಿದ್ದಳು. ಆಗ ಆಕೆಯ ಕಡೆಯಿಂದ ಈ ಮೇಲಿನ ಸಂಗತಿ ನಮಗೆ ತಿಳಿದವು. ಆಕೆಯ ಗಂಡನು ಆಗ ಆರು ತಿಂಗಳ ಹಿಂದೆ ತೀರಿಕೊಂಡಿದ್ದನು. ಆಕೆಯು ಅಂದಳು, ಒಮ್ಮೆ ಬಹಳ ಭಕ್ತಜನರು ಕೂಡಿ. ಅವರಿಗೆ ಪ್ರಾರ್ಥನೆಯನ್ನು ಮಾಡಿದರಲ್ಲ, "ತಮ್ಮ ಭಕ್ತ ಮಂಡಲಿಯವರು ದೂರ ದೂರ ಸ್ಥಳಗಳಲ್ಲಿರುತ್ತಾರೆ. ಆದ್ದರಿಂದ ತಮ್ಮ ಫೋಟೊ ಹೊರಡುವಂತೆ ತಾವು ಮಾಡಿದರೆ, ತಮ್ಮ ಫೋಟೋದ ಪೂಜಾ ಮಾಡಲಿಕ್ಕೆ ಬಂದೀತು, ಮತ್ತು ತಮ್ಮ ದರ್ಶನವೂ ಆದಂತಾಗುವದು. ಆದ್ದರಿಂದ ಇಷ್ಟೊಂದು ಕೃಪೆ ಮಾಡಿರಿ" ಎಂದು ಬಹಳ ಆಸ್ಥೆಯಿಂದ ವಿನಂತಿ ಮಾಡಿದ ಮೇಲೆ ಅವರು ಫೋಟೋ ತೆಗಿಸಿಕೊಳ್ಳಲಿಕ್ಕೆ ತಯಾರಾದರು. ಅನಂತರ ಅವರ ಸಾಮ್ಯವನ್ನು ತೋರಿಸುವಂಥಾ ಉತ್ತಮ ಫೋಟೊ ಹೊರಟಿತು.

ಒಂದು ವೇಳೆ ಒಬ್ಬ ಭಕ್ತನಿಗೆ ಅವರ ದರ್ಶನದ ಅತ್ಯಂತ ತೀವ್ರ ಇಚ್ಛೆ ಆಗಿದ್ದಾದರೆ ಮಹಾರಾಜರು ಅವನ ಮುಂದೆ ಪ್ರಕಟವಾಗಿ ನಿಂತು, ನೀನು ಯಾಕೆ ನನಗೆ ಕರೆಸಿದಿ, ಎಂದು ಪ್ರಶ್ನೆ ಮಾಡುವರು; ಆದರಿಂದ ಆ ಭಕ್ತನಿಗೆ ಪರಮಾನಂದ ಆಗುತ್ತಿತ್ತು. ಯಾವಾಗ ಅವರು ಅಂತ್ರಿ ಅಥವಾ ಜಾಂಬೋರಿಯಲ್ಲಿ ಇರುವದಾಗುತ್ತಿತ್ತು, ಆಗ ಸಾವಿರಾರು ಯಾತ್ರಿಕರು ಅವರ ದರ್ಶನಕ್ಕೆ ಬರುತ್ತಿದ್ದರು. ಅವರ ಪೈಕಿ ಕೆಲವರಿಗೆ ಅವರು ಗಿಡದ ಬುಡಕ್ಕೆ ಕೂತಂತೆ ಕಾಣುಸುತ್ತಿದ್ದರು. ಮತ್ತು ಕೆಲವರಿಗೆ ಅವರು ಬಾವಿ ದಂಡೆ ಮೇಲೆ ಧ್ಯಾನಸ್ಥರಾಗಿ ಕೂತಿದ್ದು ಕಾಣಿಸುತ್ತಿತ್ತು. ಹಲವರಿಗೆ ಅವರು ತರುಣರೆಂದೂ ಇತರರಿಗೆ ವೃದ್ಧರೆಂತಲೂ ತೋರುತ್ತಿದ್ದರು. ಒಮ್ಮೊಮ್ಮೆ ಅವರು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹಾರಿದ್ದು ಕಾಣಿಸುತ್ತಿತ್ತು. ಒಮ್ಮೊಮ್ಮೆ ಬಹಳ ಕೃಶವಾದ ಶರೀರವುಳ್ಳವರಾಗಿಯೂ, ಮತ್ತೊಮ್ಮೆ ಅತ್ಯಂತ ಪುಷ್ಟಕಾಯರಾಗಿಯೂ ಕಾಣಿಸಿಕೊಳ್ಳುವರು. ಈ ರೀತಿಯಿಂದ ಅವರ ವಿವಿಧಪ್ರಕಾರ ಲೀಲಾ ಇರುತ್ತಿತ್ತು. ಆದರೂ ಯೋಗಿಜನರ ಈ ಪ್ರಕಾರದ ಚಮತ್ಕಾರಗಳು ತನ್ನಷ್ಟಕ್ಕೆ ಘಟಿಸುತ್ತಿರುವದರಿಂದ ಇಂಥ ಚಮತ್ಕಾರಗಳಿಗೆ ಯಾರೂ ವಿಶೇಷ ಮಹತ್ವ ಕೊಡಬಾರದೆಂತ ಅವರು ಹೇಳುತ್ತಿದ್ದರು.

ಶ್ರೀ ನಾರಾಯಣ ಸರಸ್ವತಿ (ಪರಮಾನಂದ) ಕಾರ್ತಿಕ ವದ್ಯ ೧೨ ದ್ವಾದಶೀ ಶಕೆ ೧೮೩೨ ತಾರೀಖು ೧೪ ನೇ ನವ್ಹಂಬರ ೧೯೧೦ನೇ ದಿವಸ ಇಹಲೋಕವನ್ನು ಬಿಟ್ಟರು. ಆಗ್ಗೆ ಅವರ ವಯಸ್ಸು ೧೧೭ ಇರಬಹುದು. ಅವರ ಜನ್ಮವು ಪೈಠಣದಿಂದ ಸುಮಾರು ನಾಲ್ವತ್ತು ಮೈಲ ಮೇಲೆ ಗೋದಾವರಿ ದಂಡೆಯಲ್ಲಿರುವ ದಹಿ-

ಠಣ ಎಂಬ ಊರಲ್ಲಿ ಆಗಿತ್ತು, ಅವರ ವಂಶಪರಂಪರೆಯ ವೃತ್ತಿಯು ಸರಾಫೀದು ಇತ್ತು. ಪರಮಾನಂದರು ತೀರಾ ಚಿಕ್ಕವರಿರುವಾಗ್ಗೆ ಅವರ ತಂದೆ ತೀರಿಕೊಂಡರು. ಅವರ ಲಾಲನೆಪಾಲನೆಯನ್ನು ಅವರ ತಾಯಿ ಮಾಡಿದರು. ಅವರ ಮುಂಜಿಯನಾದರು ತಾಯಿಯೇ ಮಾಡಿಸಿದಳು. ಪರಮಾನಂದರು ಹನ್ನೆರಡು ವಯಸ್ಸಿನವರಾದಾಗ್ಗೆ ಅವರ ತಾಯಿ ತೀರಿಕೊಂಡಳು. ಆಕೆಯ ಅಸ್ತಿಗಳನ್ನು ಗೋದಾವರಿ ನದಿಯ ರಾಮಕುಂಡದಲ್ಲಿ ವಿಶರ್ಜನ ಮಾಡಬೇಕೆಂದು ಅವರು ನಾಶಿಕಕ್ಕೆ ಬಂದವರು ತಿರಿಗಿ ಊರಿಗೆ ಹೋಗಲೇ ಇಲ್ಲ. ಅಲ್ಲಿಂದ ಅವರು ಪಂಜಾಬ ಪ್ರಾಂತಕ್ಕೆ ಹೋದರು ಅಲ್ಲಿ ಅವರು ಗುರುಮುಖಿ ಭಾಷೆಯನ್ನು ಕಲಿತು ಬಹಳ ಕಾಲ ಪರ್ಯಂತ ಪಂಜಾಬದಲ್ಲೇ ಇರುತ್ತಿದ್ದರು.

ಮೇಲೆ ಹೇಳಿದ ವಿವರವು ಈಗಲೇ ಅವರ ಒಬ್ಬ ಶಿಷ್ಯರು ನಮಗೆ ಹೇಳಿದರು. ಇವರು ಈಗ ಬಹಳ ವೃದ್ಧರಾಗಿದ್ದಾರೆ. ಹಾಗೆಯೇ ಶ್ರೀನಾರಾಯಣ-ಸರಸ್ವತಿ ಇವರು ಬೇರೆಬೇರೆ ಸ್ಥಾನಗಳಲ್ಲಿ ಎಷ್ಟೆಷ್ಟು ವರ್ಷ ಇದ್ದರೆಂಬ ವಿಷಯದ ಒಂದು ಯಾದಿಯನ್ನು ಇವರು ನಮಗೆ ಕೊಟ್ಟರು. ಅದು ಮುಂದೆ ಕೊಟ್ಟಿದೆ. ಈ ಎಲ್ಲಾ ಕಾಲ ಕೂಡಿಸಿದರೆ ೧೧೪ ವರ್ಷಗಳು ತುಂಬುತ್ತವೆ.

೧೨ ವರ್ಷ ಬಾಲ್ಯತ್ವ ದಹಿಠಣದಲ್ಲಿ,

೧೬ ವರ್ಷ ಪಂಜಾಬ ಪ್ರಾಂತದಲ್ಲಿ, ಅದರ ಪೈಕಿ ಕೆಲವು ವರ್ಷಗಳು ರಾಜಾ ರಾಯಚಂದ ದಪ್ತರದಾಳ ಇವರ ಕೂಡ ದಕ್ಷಿಣ ಹೈದರಾಬಾದದಲ್ಲಿ ಹೋದವು.

೬ ವರ್ಷ ನಾಲ್ಕೂ ಧಾಮಗಳ ಯಾತ್ರೆ.

೭ ವರ್ಷ ಕರತವಾಡಿ; ೬ ತಿಂಗಳು ನೇತನಶಾ; ೬ ವರ್ಷ ಜಾಫರಾಬಾದ

೬ ವರ್ಷ ವರೂಡ; ೪ ವರ್ಷ ಸಾತೆಗಾಂವ ಸಾವಂಗಿ,

೭ ವರ್ಷ ಕಸಬಾಖೇಡ; ೧ ವರ್ಷ ಅನಾಸರಿ; ೭ ವರ್ಷ ಜಳಗಾಂವ,

೧೨ ವರ್ಷ ಪಾಲಖೇಡ; ೧೩ ವರ್ಷ ಬೇರಾತಿ; ೩॥ ವರ್ಷ ಅಂಬಾತಿ

೧೩ ವರ್ಷ ಅಂತ್ರಿ. ಹೀಗೆ ಒಟ್ಟಿಗೆ ೧೧೪ ವರ್ಷ.

(೧೭) **ಅಕೋಲೆಗೆ ಪುನರಾಗಮನ:-** ಗಜಾನನ, ಅವರ ಅಣ್ಣಾ, ಸೋದರತ್ತೆ ಮತ್ತೆ ಕೆಲವು ಕುಟುಂಬದ ಜನರು, ಕೆಲವು ದಿವಸಗಳತನಕ ಅಂತ್ರಿಯೊಳಗೆ ನಿಂತರು. ಅನಂತರ ಮಹಾರಾಜರ ಅಪ್ಪಣೆ ಪಡಕೊಂಡು ರಾಮಭಾವು ಇದ್ದಲ್ಲಿ ಚಿಖಲಿಗೆ ಬಂದರು. ಅಲ್ಲಿ ನಾಲ್ಕು ಐದು ದಿನ ಇದ್ದು ಎಲ್ಲಾ ಮಂದಿ ಅಕೋಲೆಗೆ ತಿರುಗಿ ಬಂದರು. ಅಕೋಲೆಯಲ್ಲಿ ಗಜಾನನರ ಅಭ್ಯಾಸವು ಮರಾಠಿ ನಾಲ್ಕನೇ ಇಯತ್ತೆ ವರೆಗೆ ಆಯಿತು. ಯಾವಾಗ ಗಜಾನನರ ಹಿರೇ ಅಣ್ಣಾ ನಾರಾಯಣರಾಯರಿಗೆ ವಾಶಿಮ ಎಂಬಲ್ಲಿಗೆ ಬದಲಿ ಆಯಿತು, ಆಗ ಗಜಾನನರು ತಮ್ಮ ಮುಂದಿನ ಅಭ್ಯಾಸಕ್ಕಾಗಿ ಅವರಕೂಡ ವಾಶಿಮಕ್ಕೆ ಹೋದರು. ಆದರೆ ತಿಂಗಳು ಎರಡು ತಿಂಗಳೊಳಗೆ ಶಾಲೆಯನ್ನು ಬಿಟ್ಟುಬಿಟ್ಟರು. ವಾಶಿಮಕ್ಕೆ ಬಹಳ ಸಾಧುಸಂತರು

ಬರುತ್ತಿದ್ದರು. ಶ್ರೀ ಹರಿಹರ ಸ್ವಾಮಿ ಮಹಾರಾಜರು ಎಂಟು ಹತ್ತು ದಿವಸ ತನಕ ಅಲ್ಲಿಯ ಶ್ರೀ ಕರುಣೇಶ್ವರ ದೇವಾಲಯದಲ್ಲಿ ವಸ್ತಿ ಮಾಡಿದರು. ಅವರು ಮೌನಿಗಳಿದ್ದರು. ಮಾತಾಡುವದೇನಾದರೂ ಇದ್ದರೆ ಅವರು ಅದನ್ನು ಪಾಟಿಯ ಮೇಲೆ ಬರೆದು ತೋರಿಸುತ್ತಿದ್ದರು. ಅಲ್ಲಿ ನಂಗೆ ಬುವಾ (ನಗ್ನ ಸಾಧು) ಎಂಬ ವಿಚಿತ್ರ ರೀತಿಯಿಂದ ನಡಿಯುವ ಸಾಧುಗಳು ಯಾವಾಗಲೂ ಇರುತ್ತಿದ್ದರು. ಘಂಟಿಕೆ ತಳೆಂ (ಒಡಕು ಕೆರೆ) ಎಂಬ ಹೆಸರಿನ ಒಂದು ಕೆರೆಯು ಅಲ್ಲಿತ್ತು. ಅದರ ದಂಡೆಯ ಮೇಲೆ ತಮಗೋಸ್ಕರ ಒಂದು ಪರ್ಣಕುಟಿಕೆ ಕಟ್ಟಿಕೊಂಡು ಆ ಸಾಧುಗಳಿರುತ್ತಿದ್ದರು. ಅವರ ಸೇವೆಯನ್ನು ಮಾಡುವದನ್ನು ಒಬ್ಬ ವಯಸ್ಕ ಬ್ರಾಹ್ಮಣನು ತಾನು ವಹಿಸಿಕೊಂಡಿದ್ದನು. ಅವನು ಅವರಕೂಡ ಸುಮಾರು ಇಪ್ಪತ್ತೈದು ವರ್ಷಗಳಿಂದ ಇರುತ್ತಿದ್ದು ಇನ್ನಾದರೂ ಅವರ ಕೂಡೆಯೇ ಇರುತ್ತಿದ್ದನು.

(೧೮) **ನಂಗೆ ಮಾರಾಜರ ದರ್ಶನ:-** ನಂಗೆ ಮಹಾರಾಜರು ಸದೋದಿತ ಹಾಸ್ಯ ಮುಖದಿಂದಿರುತ್ತಿದ್ದರು. ಅವರು ಖಾಲೀ ಕಾಗದದ ಮೇಲೆ ತಿಳಿಯಲಾರದಂಥಾ ಅಂಕುಡೊಂಕು ಅಕ್ಷರಗಳನ್ನು ಬರೆದು, ಆ ಮೇಲೆ ಆ ಕಾಗದವನ್ನು ಹರಿದು ಬಿಡುತ್ತಿದ್ದರು. ಗಜಾನನರು ಈ ಇಬ್ಬರೂ ಸಾಧುಗಳ ದರ್ಶನಕ್ಕೆ ನಿತ್ಯದಲ್ಲೂ ಹೋಗುವದಕ್ಕೆ ಆರಂಭ ಮಾಡಿದ್ದರು. ಅವರು ಆ ಸಾಧುಗಳ ಸಮೀಪ ಹೋಗಿ ಕೂತಿರುವರು. ಈ ಮೂಲಕ ಸಾಧುಸಂಗತಿಯ ಲಾಭವು ಸುದೈವದಿಂದ ಅವರಿಗೆ ಪ್ರಾಪ್ತಿಯಾಯಿತು ನಂಗೆ ಮಹಾರಾಜರ ದರ್ಶನಕ್ಕೆ ಯಾರಾದರೂ ಹೋದರೆಂದರೆ ಅವರಿಗೆ ಅವರು ಮಾಂಸ ತಂದು ಕೊಡು ಎಂತ ಬೇಡುತ್ತಿದ್ದರು. ಅವರಿಗೆ ಹಸಿ ಮಾಂಸ ಮತ್ತು ಶೆರೆಯನ್ನು ಯಾರಾದರೂ ತಂದು ಕೊಡುತ್ತಿದ್ದರು. ಅವರು ಇತರ ಯಾವ ಅನ್ನಕ್ಕೂ ಸ್ಪರ್ಶಸಹ ಮಾಡಿದ್ದಿಲ್ಲ. ಅವರು ಪರ್ಣಕುಟಿಯಿಂದ ಹೊರಟು ಹೊರಗೆ ಹೋಗುತ್ತಿದ್ದರು. ಅವರು ಇಷ್ಟು ತ್ವರೆಯಿಂದ ನಡೆಯುತ್ತಿದ್ದರಲ್ಲ, ಅವರ ಕಾಲು ಭೂಮಿಗೆ ತಾಗಿದ್ದು ಕಾಣಿಸುತ್ತಿದ್ದಿಲ್ಲ. ಅವರು ಬಹಳ ದೂರ ಪರ್ಯಂತ ಹೋಗುವರು, ಆದರೆ ಯಾರಿಗೂ ಖರೇ ಅನಿಸಲಿಕ್ಕಿಲ್ಲ ಇಷ್ಟು ಬೇಗನೆ ತಿರುಗಿ ಬಂದು ತಮ್ಮ ಪರ್ಣಕುಟಿಯೊಳಗೆ ಕಾಣಿಸುತ್ತಿದ್ದರು.

ಒಮ್ಮೆ ಯಾವನೋ ಒಬ್ಬನು ಅವರಿಗೆ ಸೆರೆ ಬಾಟ್ಲಿಯನ್ನು ತಂದು ಕೊಟ್ಟನು. ಆಗ ಗಜಾನನರು ಸಮೀಪ ಕೂತಿದ್ದರು; "ಈ ಪ್ರಸಾದವನ್ನು ತೆಗೆದುಕೊ" ಎಂದು ಅವರು ಗಜಾನನರಿಗೆ ಅರ್ಧ ಬಾಟ್ಲಿಯನ್ನು ಕೊಟ್ಟರು, ಮತ್ತು ಇವರು ಅದನ್ನು ಒಮ್ಮೆಲೆ ಕುಡಿದುಬಿಟ್ಟರು. ಅದು ಹಾಲಿನಂತಲ್ಲ ಹಾಲಿನಗಿಂತಲೂ ಸವಿ ಅನಿಸಿತು. ಯಾವಾಗ ನಂಗೆ ಮಹಾರಾಜರ ಪ್ರಾಣೋತ್ಕ್ರಮಣವಾಯಿತು; ಆಗ ವಾಸಿಮುದ ಹಿಂದು ಮುಸಲ್ಮಾನರಲ್ಲಿ ದಂಗೆಯಾಗುತ್ತಿತ್ತು. ಹಿಂದುಗಳು ಈತನು ಹಿಂದು ಸಾಧು ಎಂದು ತಿಳಿದಿದ್ದರು, ಮುಸಲ್ಮಾನರು ಈತನು ಮುಸಲ್ಮಾನ ಸಾಧು ಅನ್ನುತ್ತಿದ್ದರು. ಹಿಂದೂ ಧರ್ಮದಂತೆ ಅವನ ಪ್ರೇತವನ್ನು

ದಹನ ಮಾಡಿ ಅದರ ಮೇಲೆ ಸಮಾಧಿಯನ್ನು ಕಟ್ಟಿಸುವೆವು ಎಂದು ಹಿಂದುಗಳು ಅನ್ನುವರು, ಆದರೆ ಮುಸಲ್ಮಾನರು ಅಂತಲ್ಲ, ತಾವು ತಮ್ಮ ಧರ್ಮಕ್ಕನುಸರಿಸಿ ಪ್ರೇತದ ದಫನ ಮಾಡಿ ಅದರ ಮೇಲೆ ಕಬರ ಕಟ್ಟುವೆವು. ಸರಕಾರದವರು ಪೋಲಿಸ ಪಾರ್ಟಿಯನ್ನು ತಂದು ಜಗಳ ಶಾಂತ ಮಾಡಿದರು. ಆ ಸಮಯದಲ್ಲಿ ಅಲ್ಲಿ ಕಿಂಗ ಎಂಬ ಹೆಸರಿನ ಒಬ್ಬ ಅಧಿಕಾರಿ ಇದ್ದನು. ಅವನು ಎರಡೂ ತಂಡದವರೂ ಎಲ್ಲ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಎರಡೂ ಸಮಾಜದವರೂ ದರ್ಶನಕ್ಕೆ ಹೋಗಲಿಕ್ಕೆ ಅಡ್ಡಿ ಇಲ್ಲ. ಎಂತ ಹುಕುಮು ಮಾಡಿದನು. ಈ ಸಂಗತಿಗಳೆಲ್ಲ ನಡೆಯುತ್ತಿರುವಾಗ ಗಜಾನನರು ಅಲ್ಲಿ ಹಾಜರಿದ್ದರು. ಕೆಲಕೆಲವು ವೇಳೆ ಸಾಧು ಜನರ ವರ್ತನೆಯು ಹೀಗೆ ವಿಚಿತ್ರವಾಗಿರುತ್ತದೆ.

(೧೯) **ತೇಲಿ ಮಹಾರಾಜರು ಮತ್ತು ಖಟಿಯಾ ಮಹಾರಾಜರು;** ನಾರಾಯಣರಿಗೆ ಪುನಃ ಅಕೋಲೆಗೆ ಬದ್ಲಿ ಆಯಿತು. ಅವರು ಸೇವಾನಿವೃತ್ತರಾಗುವತನಕ ಅಲ್ಲಿಯೇ ಇದ್ದರು. ಗಜಾನನರಾದರೂ ನಾರಾಯಣರಾಯರಕೂಡ ಅಕೋಲೆಯಲ್ಲಿ ಇದ್ದರು. ಆದರೆ ಅವರಿಗೆ ಸಾಧು ದರ್ಶನದ ಮತ್ತು ಸಂಗತಿಯ ತೀವ್ರ ಇಚ್ಛೆ ಇರುತ್ತಿತ್ತು. ಯವತಮಾಳ ಜಿಲ್ಹೆಯಲ್ಲಿ ದಾರವ್ಹಾ ಎಂಬಲ್ಲಿ ತೇಲಿ ಮಹಾರಾಜರೆಂಬವರಿದ್ದಾರೆಂತ ಕೇಳಿ, ಗಜಾನನರು ದಾರವ್ಹಾ ಊರಿಗೆ ಹೋದರು. ಮತ್ತು ಏಳು ಎಂಟು ದಿನ ಅಲ್ಲಿ ಇದ್ದರು. ಪ್ರತಿದಿವಸ ಅವರು ತೇಲಿ ಮಹಾರಾಜರ ದರ್ಶನ ಮಾಡಿಕೊಂಡು ಆದಷ್ಟು ಹೊತ್ತು ಅವರ ಸಂಗತಿಯಲ್ಲಿ ಕಳೆಯುತ್ತಿದ್ದರು. ಆ ಮೇಲೆ ಯವತಮಾಳದಲ್ಲಿ ಖಟಿಯಾ ಮಹಾರಾಜರೆಂಬವರು ಯಾರೋ ಇದ್ದಾರೆಂತ ಅವರ ಕಿವಿಮೇಲೆ ಸುದ್ದಿ ಬಂತು. ಆಗ ಅವರು ಅಲ್ಲಿಗೆ ಹೋಗಿ ಕೆಲವು ಕಾಲ ಅವರ ಸಂಗತಿಯಲ್ಲಿ ಕಳೆದರು.

ಹೀಗೆ ಅನೇಕ ಸಂತರ ದರ್ಶನಗಳನ್ನು ಗಜಾನನರು ತಕ್ಕೊಂಡರು. ಮತ್ತು ಅವರ ಸತ್ಸಂಗತಿಯು ಅವರಿಗೆ ಪೂರ್ಣ ಲಾಭವಾಯಿತು. ಪಂಢರಪುರದ ತಪಕೀರ ಬುವಾನ ದರ್ಶನಸಹ ಗಜಾನನರು ತಕ್ಕೊಂಡರು. ಅವರ ಸದ್ಗುರುಗಳಾದ ಶ್ರೀನಾರಾಯಣಸರಸ್ವತಿ ಮಹಾರಾಜರ ಸಮ್ಮಂಧ ಅವರಿಗೆ ಎಷ್ಟು ಪೂಜ್ಯ ಬುದ್ಧಿ ಇರುತ್ತಿತ್ತೊ, ಅಷ್ಟೇ ಆದರವು ಆ ಇತರ ಮಹಾರಾಜರ ಸಮ್ಮಂಧ ಅವರಿಗೆ ಅನಿಸುತ್ತಿತ್ತು. ಸಂತರ ಪುಣ್ಯಕಾರಕ ದರ್ಶನ ಮತ್ತು ಅವರ ಸದ್ಗುರುಗಳ ಮೇಲಿನ ನಿಷ್ಠೆ ಇವುಗಳ ಯೋಗ್ಯ ಫಲವು ಗಜಾನನರಿಗೆ ಅಕೋಲೆಯಲ್ಲಿಯೇ ಪ್ರಾಪ್ತವಾಯಿತು. ಆ ಫಲವೆಂದರೆ ಆತ್ಮಸಾಕ್ಷಾತ್ಕಾರದ ಪರಮಾನಂದದ ಪೂರ್ಣ ಅನುಭವವೇ ಅವರಿಗೆ ಬಂತು.

(೨೦) **ಶ್ರೀ ಗುಲಾಬರಾವ ಮಹಾರಾಜರು:—** ಅನಂತರ ಗಜಾನನರದೂ ಶ್ರೀ ಗುಲಾಬರಾವ ಮಹಾರಾಜರದೂ ಅತ್ಯಂತ ನಿಕಟ ಸಮ್ಮಂಧವಾ

ಯಿತು. ಶ್ರೀ ಗುಲಾಬರಾವ ಮಹಾರಾಜರು ತಾನು ಶ್ರೀ ಜ್ಞಾನೇಶ್ವರರ ಕನ್ಯೆ ಪುತ್ರಿ ಶ್ರೀಕೃಷ್ಣ ಪರಮಾತ್ಮನ ಒಬ್ಬ ಜಿವಲಗ ಗೋಪಿ ಎಂದು ಮನ್ನಿಸುತ್ತಿದ್ದರು. ಆಶ್ಚರ್ಯದ ಸಂಗತಿ ಏನಂದರೆ, ಒಂದು ದಿನ ಶ್ರೀ ಗುಲಾಬರಾವ ಮಹಾರಾಜರು ಗಜಾನನರಿಗೆ ತನ್ನ ಗುರು ಶ್ರೀನಾರಾಯಣಸರಸ್ವತಿ ಇವರ ಸ್ವರೂಪದಿಂದ ಕಾಣಿಸಿಕೊಂಡರು. ಈ ರೀತಿಯಿಂದ ಸರ್ವಶ್ರೇಷ್ಠ ವಿಭೂತಿಗಳು ಆತ್ಮಿಕ ದೃಷ್ಟಿಯಿಂದ ಅನೇಕ ಇಲ್ಲವೆ ಒಂದೇ ಇರುವದು ಎಂಬದಾಗಿ ಸಾಕ್ಷಾತ ಪ್ರಚೀತಿ ಅವರಿಗೆ ಆಯಿತು. ಮತ್ತು ಅದರ ಸತ್ಯತ್ವವು ನಿಶ್ಚಯವಾಯಿತು. ತನ್ನ ಸ್ವತಃದ ಗುರುಗಳು ಅಂದರೆ ಶ್ರೀ ನಾರಾಯಣ ಮಹಾರಾಜರ ಧ್ಯಾನ ಮಾಡುತ್ತಿರುವಾಗ್ಗೆ ಆದರೂ ಗಜಾನನರಿಗೆ ಪುನಃ ಅದೇ ಅನುಭವ ಬಂತು.

(೨೧) **ಧ್ಯಾಸ ಅಥವಾ ಧ್ಯಾನಸ್ಥಿತಿಃ**— ಅಕೋಲೆಯಲ್ಲಿ ಒಂದು ಹಳೇ ಬೀಳಲಿಕ್ಕೆ ಆದಂಥ ಒಂದು ಕಿಲ್ಲೆ ಇದೆ. ಗಜಾನನರು ಅಕೋಲೆಯಲ್ಲಿರುವಾಗ. ಆ ಕಿಲ್ಲೆಯೊಳಗಿನ ಏಕಾಂತ ಶಿಗಬೇಕೆಂತ ಹಗಲೂ ರಾತ್ರಿಯೂ ಅಲ್ಲಿ ಹೋಗುತ್ತಿದ್ದರು. ಅಲ್ಲಿ ಅವರು ಧ್ಯಾನದ ಅಭ್ಯಾಸ ಮಾಡುತ್ತಿದ್ದರು, ಇದು ಮಾತ್ರ ಯಾರಿಗೂ ಗೊತ್ತಿದ್ದಿಲ್ಲ. ರಾತ್ರಿಕಾಲದಲ್ಲಿ ಅಲ್ಲಿ ಸುತ್ತಲೂ ನರಿಗಳು ಕೂಡಿ ಕೂಗುತ್ತಿದ್ದವು. ಗಜಾನನರಿಗೆ ಅವುಗಳ ಬಹಳ ಅಂಜಿಕೆಯಾಗುತ್ತಿತ್ತು. ಒಂದೆರಡು ಸಾರಿ ಅವರು ಘಾಬರಿಯಾಗಿ ಅಲ್ಲಿಂದ ಓಡಿ ಬಂದರು. ಆದರೆ ಮುಂದೆ ಈ ನರಿಗಳ ಕೂಗುಗಳು ತಮ್ಮಷ್ಟಕ್ಕೆ ನಿಂತವು, ಧ್ಯಾನ ಮಾಡಲಿಕ್ಕೆ ಯಾವದೊಂದು ಅಡಚಣಿ ಉಳಿಯಲಿಲ್ಲ, ಅವರು ಅಲ್ಲಿಗೆ ನಿತ್ಯ ಹೋಗಿ ಧ್ಯಾನ ಮಾಡಿ ಬ್ರಹ್ಮಾನಂದದಲ್ಲಿ ನಿಮಗ್ನರಾಗಿರುತ್ತಿದ್ದರು.

(೨೨) **ಶಿವರಾಮಭಾವೂ ಗುಪ್ತೆಃ**— ಶಿವರಾಮ ಭಾವೂ ಗುಪ್ತೆ ಅಂತ ಗಜಾನನರ ಒಬ್ಬ ಮಿತ್ರ ನಿದ್ದನು. ಅವನು ಆ ಕಾಲದಲ್ಲಿ ಅಕೋಲೆಯ ಗೌಳಿಪುರದಲ್ಲಿ ಇರುತ್ತಿದ್ದನು. ಗಜಾನನ ಮಹಾರಾಜರ ಧ್ಯಾನ ಮಾಡುವ ಜಾಗೆ, ಅವರು ಅಲ್ಲಿಗೆ ಹೋಗೋದು ಬರೋದು ಇದು ಅವನಿಗೆ ಮಾತ್ರ ಗೊತ್ತಿತ್ತು. ಮತ್ಯಾರಿಗೂ ಆ ಸಮ್ಮಂಧ ತಿಳಿದಿದ್ದಿಲ್ಲ. ಗಜಾನನ ಮಹಾರಾಜರು ರಾತ್ರಿ ಧ್ಯಾನ ಮಾಡಿ ತಿರಿಗಿ ಬಂದ ಮೇಲೆ, ಅವರು ಯಾವಾಗಲಾದರೂ ತಮ್ಮ ಮಿತ್ರನ ಮನೆಯಲ್ಲಿ ಮಲಗುತ್ತಿದ್ದರು.

(೨೩) **ಬ್ರಹ್ಮಾನಂದಃ**—ಒಮ್ಮೊಮ್ಮೆ ಆ ಮಿತ್ರನ ಮನೆಯಲ್ಲಿ ಗಜಾನನ ಮಹಾರಾಜರಿಂದ ಏನಾದರೂ ಚಮತ್ಕಾರಗಳು ಆಗುತ್ತಿದ್ದವು. ಶಿವರಾಮಭಾವು ಗುಪ್ತೆ ಆ ಕಾಲದಲ್ಲಿ ಮೂವತ್ತು ವರ್ಷದವರಿದ್ದರು. ಅವರು ಗಜಾನನ ಮಹಾರಾಜರ ಸಮ್ಮಂಧಿಕರಿದ್ದರು. ಅವರು ಮಾಮಲೇದಾರ ಕಚೇರಿಯಲ್ಲಿ ಅರ್ಜಿಗಳನ್ನು ಬರೆಯುತ್ತಿದ್ದರು. ಅವರಿಗೆ ಗಜಾನನ ಮಹಾರಾಜರ ಮೇಲೆ ವಿಶೇಷ ಪ್ರೇಮ

ಮತ್ತು ನಿಷ್ಠೆಯು ಇತ್ತು. ಶಿವರಾಮ ಭಾವು ತೀರಿಕೊಂಡು ಈಗ ಇಪ್ಪತ್ತು ವರ್ಷ ಗಳಾದವು. ಗಜಾನನ ಮಹಾರಾಜರು ತಾನು ಕಿಲ್ಲೆಯೊಳಗೆ ಹೋಗಿ ಧ್ಯಾನ ಮಾಡುತ್ತಿದ್ದೇನೆ ಎಂದು ಅವರಿಗೆ ಹೇಳಿ ತನ್ನ ಅನುಭವದ ಸ್ಥಿತಿ ತೋರಿಸಿದರು. ಆಗ ಅವರು ಮಹಾರಾಜರಿಗೆ, 'ಹುಡುಗನೇ ನೀನು ರಾತ್ರಿ ವೇಳೆ ಕಿಲ್ಲೆಯೊಳಗೆ ಹೋಗಬೇಡ.' ಎಂತ ಉಪದೇಶ ಮಾಡಿದರು, ಆಗ ಗಜಾನನ ಮಹಾರಾಜರು ಅಂದರು, " ನಾನು ಸ್ವಇಚ್ಛೆಯಿಂದ ಅಲ್ಲಿಗೆ ಹೋಗುವದಿಲ್ಲ. ಆನಂದದ ಲಹರಿ ಯಲ್ಲಿ ಈಶ್ವರೀ ಶಕ್ತಿಯು ನನ್ನನ್ನು ಅಲ್ಲಿಗೆ ಒಯ್ಯುತ್ತದೆ. ಮತ್ತು ಅದೇ ನನ್ನನ್ನು ಪುನಃ ಸುರಕ್ಷಿತವಾಗಿ ತಿರುಗಿ ತಂದು ಬಿಡುತ್ತದೆ. ನನ್ನ ಸದ್ಗುರು ಬಹಳ ದಯಾಳು ಇದ್ದಾರೆ. ಅವರೇ ನನಗೆ ಬುದ್ಧಿಯನ್ನು ಕೊಡುತ್ತಾರೆ. ನನ್ನ ಮನಸ್ಸಿನೊಳಗೆ ಬಂದಕೂಡಲೇ ನನ್ನ ಮನಸ್ಸೆ ' ಸೋಹಂ ಸೋಹಂ ' ಎಂದು ಜಪ ಮಾಡುತ್ತದೆ. ನಾನು ಸ್ವತಃ ಏನೂ ಪ್ರಯತ್ನ ಮಾಡಬೇಕಾಗಿಲ್ಲ.

ಆದರೆ ಮುಂದೆ ಗಜಾನನ ಮಹಾರಾಜರು ಶಿವರಾಮ ಭಾವು ಗುಪ್ತೆ ಇವರ ಮನೆಯಲ್ಲಿಯೇ ಧ್ಯಾನಕ್ಕೆ ಕೂಡ್ರುತ್ತಿದ್ದರು. ಆ ಸಮಯದಲ್ಲಿ ರಾಜೇ-ಶ್ವರ ದೇವಾಲಯದ ಸಮೀಪ ಕರ್ಣಿಕ ಹೆಸರಿನ ಹಳೆ ಮತ್ತು ಬಹಳ ಬುದ್ಧಿ ವಂತ ವಕೀಲರು ಇರುತ್ತಿದ್ದರು ಅವರು ಸಂಸ್ಕೃತದಲ್ಲಿ ಬಹಳ ಗ್ರಂಥಗಳನ್ನು ಬರೆದಿರುತ್ತಾರೆ. ಒಮ್ಮೆ ಗಜಾನನ ಮಹಾರಾಜರು ಕರ್ಣಿಕರ ಮನೆಗೆ ಹೋಗಿ ದ್ದರು. ಅವರು ನವರಾತ್ರಿಯಲ್ಲಿ ಶಾಸ್ತ್ರ ಪದ್ಧತಿಯಿಂದ ದೇವಿಯ ಪೂಜಾ ಮಾಡು ತ್ತಿದ್ದರು. ನವರಾತ್ರಿಯಲ್ಲಿಯೇ ಗಜಾನನ ಮಹಾರಾಜರು ಅವರ ಮನೆಗೆ ಹೋಗಿ ದ್ದರು. ಆಗ ದೇವೀ ಸಮೀಪ ಎಲ್ಲ ಪೂಜಾ ಸಾಹಿತ್ಯ ಇಟ್ಟಿತ್ತು. ಅದರ ಪೈಕಿ ಒಂದು ಮದ್ಯದ ಬಾಟ್ಲಿಯೂ ಇತ್ತು.

(೨೪) ಶ್ರೀ ಕರ್ಣಿಕ:– ಕರ್ಣಿಕರು ಆ ಕಾಲದಲ್ಲಿ ಖಾಪರ್ಡೆ ವಕೀಲರ ಹಳೇ ಮನೆಯಲ್ಲಿರುತ್ತಿದ್ದರು. ಗಜಾನನ ಮಹಾರಾಜರಿಗೆ ಅವರು ದೇವಿಯ ಪ್ರಸಾದವೆಂದು ಆ ಮದ್ಯವನ್ನು ಕೊಟ್ಟರು. ಮಹಾರಾಜರ ಸೋದರತ್ತೆಯು ಆಗ ಅಲ್ಲಿ ಇದ್ದಳು. ಆಕೆಯು, 'ನೀನು ಅದನ್ನು ತಗೋಬೇಡ ' ಎಂದು ಹೇಳಿ ದಳು, ಆದರೂ ಮಹಾರಾಜರು ಅದೆಲ್ಲವನ್ನು ಕುಡಿದುಬಿಟ್ಟು, ಮನೆಗೆ ಓಡುತ್ತ ಹೋದರು. ಮದ್ಯದ ಅಮಲೇರಲು, ಅವರ ' ಸೋಹಂ' ಜಪವು ತೀವ್ರವಾಗಿ ನಡೆಯಿತು. ಮಹಾರಾಜರ ಅತ್ತೆಯು ಅವರಿಗೆ ಬಹಳ ಬೈದಳು ಮತ್ತು ಶಿವರಾಮ ಭಾವುಗೆಸಹ ಈ ಸಂಗತಿಯನ್ನು ತಿಳಿಸಿದಳು. "ನೀನು ಹೀಗೆ ಯಾಕೆ ಮಾಡಿದಿ" ಎಂದು ಶಿವರಾಮ ಭಾವು ಅವರನ್ನು ಕೇಳಿದ್ದಕ್ಕೆ ಮಹಾರಾಜರು ಉತ್ತರ ಕೊಟ್ಟಿದ್ದು, " ಒಮ್ಮೆ ನಂಗೆ ಮಹಾರಾಜರುಸಹ ನನಗೆ ಪ್ರಸಾದವೆಂದು ಮದ್ಯವನ್ನು ಕೊಟ್ಟಿ ದ್ದರು, ಅದನ್ನು ನಾನು ತಕ್ಕೊಂಡೆ, ಆಗ ನನಗೆ ವಿಶೇಷ ಆನಂದವಾಯಿತು. ಅದೇ ಪ್ರಕಾರದ್ದು ಈ ಕರ್ಣಿಕರು ಕೊಟ್ಟ ಪ್ರಸಾದವೂ ಇದ್ದೀತು ಎಂದು

ಅದನ್ನು ನಾನು ತಕ್ಕೊಂಡೆ. ಅದನ್ನು ತಗೋಬೇಡವೆಂತ ನನ್ನ ಸೋದರತ್ತೆ ಹೇಳಿದಳು, ಆದರೆ ಪ್ರಸಾದವನ್ನು ಬೇಡನ್ನಬಾರದೆಂತ ನಾನು ತಕ್ಕೊಂಡೆ. ಆದರೆ ಅದರ ಯಾವದೊಂದು ದುಷ್ಪರಿಣಾಮವು ನನ್ನ ಮೇಲೆ ಆಗಲಿಲ್ಲ. ಹಾಗೂ ನನಗೆ ಬಹಳ ಆನಂದವೂ ಆಯಿತು, ಹುಶಾರಿಯೂ ಕಾಣಿಸಿತು.

ಶ್ರೀ ಗಜಾನನ ಮಹಾರಾಜರು ಇವರು ಜಾತಿಯಿಂದ ಕಾಯಸ್ಥಪ್ರಭು ಪೈಕಿ ಇದ್ದರು. ಆದರೂ ಅವರ ಕೆಲವು ಜಾತಿ ಬಂಧುಗಳಂತೆ ಅವರ ಮನೆತನದಲ್ಲಿ ಸುರಾಪಾನ ವ ಮಾಂಸ ಭಕ್ಷಣವು ಸಂಪೂರ್ಣ ವರ್ಜವಾಗಿದ್ದವು ಮತ್ತು ಹಾಗೆ ಈಗಲೂ ಇದೆ.

(೨೫) **ಚಮತ್ಕಾರ ಮತ್ತು ಆ ಸಮ್ಮಂಧ ಚಿಂತೆ:—** ಗಜಾನನ ಮಹಾರಾಜರು ಬಹಳ ಚಮತ್ಕಾರಗಳನ್ನು ಮಾಡಿದರು, ಆದರೆ ಅವರು ಅವುಗಳನ್ನು ಬೇಕಂತ ಮಾಡದೆ, ಅವರಿಂದ ಅವು ತಮ್ಮಷ್ಟಕ್ಕೆ ಘಟಿಸುತ್ತಿದ್ದವು. ಅವು ಮಾತ್ರ ಅವರ ಮಿತ್ರರೊಳಗೆ ಸಂಭವಿಸಿ, ಯಾರೊಬ್ಬರೂ ಅವನ್ನು ಪ್ರಕಟ ಮಾಡಲಿಲ್ಲ. ಇಷ್ಟೇ ಅಲ್ಲ ಅವನ್ನು ಗುಪ್ತವಾಗಿರುವ ಯತ್ನವನ್ನೇ ಮಾಡಿದರು. ಯಾಕಂದರೆ ಈ ಗಜಾನನನೆಂದರೆ, ಮೋರೆಸಹ ತೊಳಕೊಳ್ಳಲಿಕ್ಕೆ ಬಾರದ ಕುಂಟ ಹುಡುಗನು. ಹೀಗಿರುಂತಾ ಈ ಚಮತ್ಕಾರಗಳನ್ನು ಪ್ರಕಟಿಸಿದರೆ ಆತನ ಪ್ರತಿಷ್ಠೆಕಿಂತ ಕುಚೇಷ್ಟೆಯೇ ಹೆಚ್ಚಿಗೆ ಆದೀತು, ಅಥವಾ ಇವು ದೆವ್ವ ಪಿಶಾಚಿಗಳ ಚೇಷ್ಟೆಗಳಿದ್ದಾವು ಎಂದು ಜನರು ಅನ್ನುವರು. ಆದರೆ ಗಜಾನನ ಮಹಾರಾಜರು ಮುಂದೆ ಯಾವನಾದರೂ ವಕೀಲನ ಅಥವಾ ಮತ್ಯಾರಾದರೂ ಗುರ್ತಿನವರ ಮನೆಗೆ ಹೋದರೆಂದರೆ ಅಲ್ಲಿಯಾವರೂ ಹಾಗೆಯೇ ಚಮತ್ಕಾರಗಳು ಸಂಭವಿಸುತ್ತಿದ್ದವು. ಈ ಚಮತ್ಕಾರಗಳು ವಕೀಲ ಅಥವಾ ಇತರ ಜನರಲ್ಲಿ ಪ್ರಸಿದ್ಧವಾಗಿ ಇವನ್ನು ಅವರ ಮುಂದೆ ಮಾಡಿ ತೋರಿಸಬೇಕೆಂದರೆ, ನೀವು ಮಾಡಿ ತೋರಿಸುವಿರೇನು, ಎಂದು ಮಹಾರಾಜರಿಗೆ ಕೇಳಿದರೆ ಅವರು, ' ಈ ಚಮತ್ಕಾರಗಳ ಸಮ್ಮಂಧ ನಮಗೆ ಏನೂ ತಿಳಿಯದು, ಅವುಗಳ ಅರಿವುಸಹ ನನಗಿರುವದಿಲ್ಲ, ಅಂದಮೇಲೆ ಅವುಗಳ ಸಮ್ಮಂಧ ನಾನು ಏನು ಹೇಳಲಿ? ಈ ಚಮತ್ಕಾರವೆಂದರೇನು, ಅವು ಯಾಕೆ ಆಗುತ್ತವೆ; ಎಂಬದು ನನಗೇನೂ ತಿಳಿಯದು. ಈ ಸಮ್ಮಂಧ ನನಗಿಂತ ನಿಮಗೆ ಹೆಚ್ಚಿಗೆ ತಿಳಿದಿರುವದು. ನಾನು ಒತ್ತಟ್ಟಿಗೆ ಕೂತು ಬರೇ ಧ್ಯಾನ ಮಾಡುತ್ತಿರುತ್ತೇನೆ, ಅಂದಮೇಲೆ ಈ ವಿಷಯದಲ್ಲಿ ನಾನು ಹೆಚ್ಚಿಗೆ ಏನು ಹೇಳಲಿ?

ಮಹಾರಾಜರ ಕುಟುಂಬದ ಜನರೊಳಗೆಸಹ ಈ ಚಮತ್ಕಾರ ಸಮ್ಮಂಧ ಎಷ್ಟೊಂದೂ ತಿಳಿದಿದ್ದಿಲ್ಲ, ಮತ್ತು ಅವರಿಗೆ ಯಾರೊಬ್ಬರೂ ಹೇಳಲೂ ಇಲ್ಲ. ಇವುಗಳ ವಿಷಯ ಯಾವಾಗ್ಗೆ ಇತರ ಜನರಿಂದ ಇವರು ಕೇಳಿದರು, ಆಗ ಒಂದು

ವೇಳೆ ಇವನಿಗೆ ಭೂತ-ಪಿಶಾಚಾದಿ ಅಥವಾ ಅಘೋರಿ ವಿದ್ಯೆಗೆ ಸಂಬಂಧ ಇರ-ಬಹುದು ಎಂದು ಜನರು ತಿಳಿದು ತಮಗೆ ದೋಷ ಕೊಡುವರು. ಮತ್ತು ಏನಾದರೂ ವಿರುದ್ಧ ಗ್ರಹವಾಗಿ ಕೂತೀತು, ಎಂದು ತಿಳಕೊಂಡು ಅವರಿಗೆ ಒಂದು ಪ್ರಕಾರದ ಭೀತಿ ಉತ್ಪನ್ನವಾಯಿತು. ಮುಂದೆಮುಂದೆ ಇದೊಂದು ದೊಡ್ಡ ಚಿಂತೆಯ ವಿಷಯವಾಗಿ ಹೋಯಿತು, ಮತ್ತು ಏನು ಮಾಡಬೇಕೆಂತ ಸೂಚಿಸಲಿಲ್ಲ. ಈ ಕಾಲದಲ್ಲಿ ಅವರ ವಯಸ್ಸೆಂದರೆ ೧೮-೧೯ ವರ್ಷ ಆಗಿರಬಹುದು. ಈ ಸ್ಥಿತಿಯಲ್ಲಿ ಅವರು ಒಮ್ಮೆ ಧ್ಯಾನಸ್ಥರಾಗಿ ಕೂತಿರುವಾಗ, ಅವರ ಕಿವಿ ಮೇಲೆ ಈ ಮುಂದಿನ ಶಬ್ದಗಳು ಬಿದ್ದವು; " ಯೋಗಿ ಜನರ ಸಂಬಂಧ ಇಂಥ ಚಮತ್ಕಾರಗಳು ಆಗುತ್ತವೆಂದರೆ, ಅವರು ಸ್ವತಃ ಸಿದ್ಧರಿರುತ್ತಾರೆ. ಅಂದರೆ ಯೋಗಿಗಳಿಗೆ ತಿಳಿಯಲಾರದೆ, ಅಥವಾ ಅವರಾಗಿ ಏನೊಂದೂ ಪ್ರಯತ್ನ ಮಾಡದೆ, ಅವು ತಮ್ಮಷ್ಟಕ್ಕೆ ಸಂಭವಿಸುತ್ತವೆ. ಎಂತ ಆ ಸಂಬಂಧ ಚಿಂತೆ ಮಾಡುತ್ತ ಕೂಡ್ರುವದಕ್ಕೆ ಎಷ್ಟೊಂದೂ ಕಾರಣವಿಲ್ಲ." ಈ ದೃಷ್ಟಾಂತರೂಪ ಸ್ಪಷ್ಟೀಕರಣದಿಂದ ಅವರ ಚಿಂತೆ ಎಲ್ಲ ದೂರವಾಗಿ ಮಹಾರಾಜರಿಗೆ ಅತ್ಯಾನಂದವಾಯಿತು.

(೨೬) ಅನುಕರಣ ಮತ್ತು ಅಸಂಭವ:— ಕರ್ಣಿಕ ಇವರ ಮನೆಯಲ್ಲಿ ನವರಾತ್ರಿಯಲ್ಲಿ ಆಗುತ್ತಿರುವ ದೇವಿಯ ಉಪಾಸನೆಯನ್ನು ನೋಡಿ, ಗಜಾನನರಿಗೆ ತನ್ನ ಹುಡುಗ ಬುದ್ಧಿಗೆ ಅನುಸರಿಸಿ, ತಾನೂ ಶಕ್ತಿ ಉಪಾಸನೆಯನ್ನು ಮಾಡಿ ನೋಡಬೇಕೆಂತ ಮನಸ್ಸಿನೊಳಗೆ ಬಂತು. ಕರ್ಣಿಕರು ಎಲ್ಲ ಪೂಜಾವಿಧಿ ಆದ ಮೇಲೆ ದೇವಿಗೆ ಸಮರ್ಪಿಸಿದ ಮದ್ಯವನ್ನು ದೇವಿ ಪ್ರಕಟಳಾಗಿ ತಾನೇ ತನ್ನ ಕೈಯಿಂದ ತಕ್ಕೊಳ್ಳುತ್ತಾಳೋ ಎಂಬ ಭಾವನೆಯಿಂದ ಮದ್ಯದ ಪಾತ್ರೆಯನ್ನು ದೇವಿಯ ಮುಂದೆ ಹಿಡಿದು ಹ್ಯಾಗೆ ಅವರು ಧ್ಯಾನಕ್ಕೆ ಕೂಡ್ರುತ್ತಿದ್ದರು, ಹಾಗೆಯೆ ಮಾಡಬೇಕೆಂತ ಗಜಾನನರು ಎಲ್ಲ ಪೂಜಾ ಸಾಹಿತ್ಯವನ್ನು ತಕ್ಕೊಂಡು, ಶಿವರಾಮ ಭಾವು ಇವರ ಮನೆಯಲ್ಲಿ ಒಂದು ಕೋಣೆಯಲ್ಲಿ ಹೋದರು, ಮತ್ತು ಬಾಗಿಲು ಮುಚ್ಚಿಕೊಂಡು ಪ್ರಯೋಗಕ್ಕೆ ಸುರು ಮಾಡಿದರು. ಎಲ್ಲ ವಿಧಿಗಳನ್ನು ಕರ್ಣಿಕರು ಮಾಡಿದಂತೆಯೆ ಮಾಡಿದರು. ಭಕ್ತಿಭಾವದಿಂದ ದೇವಿಯ ಪ್ರಾರ್ಥನೆ ಮಾಡಿ, ಕಣ್ಣು ಮುಚ್ಚಿದರು. ಆದರೆ ಏನೊಂದು ಸಂಭವಿಸಲಿಲ್ಲ. ಎರಡನೇ ರಾತ್ರಿಯಲ್ಲಿಯೂ ಅದೇ ಪ್ರಯೋಗವನ್ನು ಪುನಃ ಮಾಡಿದರು. ಆದರೂ ಏನೂ ಉಪಯೋಗವಾಗಲಿಲ್ಲ. ಮೂರನೇ ರಾತ್ರಿಯಲ್ಲು ಅದೇ ಪ್ರಯೋಗವನ್ನು ನಿಶ್ಚಯಾತ್ಮಕ ಬುದ್ಧಿಯಿಂದ ಮಾಡುತ್ತಿರುವಾಗ ಒಮ್ಮೆಲೆ ಪರಮಾನಂದದಲ್ಲಿ ನಿಮಗ್ನರಾದರು; ಮತ್ತು ಅದರಲ್ಲೇ ಈ ಪೂಜೆಯನ್ನು ತಾನು ದೇವಿಗೆ ಸಮರ್ಪಣೆ ಮಾಡಿದ್ದರೂ, ಅದು ತನ್ನ ಗುರುವಿಗೆ ಮುಟ್ಟಲಿ ಎಂದು ಅನ್ನುತ್ತಲೇ, ಮದ್ಯದ್ದು ಹಾಲು ಆಯಿತು, ದುರ್ವಾಸನೆದು ಗುಲಾಬಿ ಹೂವು ಆದವು ಮತ್ತು ದೇವಿಗೆ ಅರ್ಪಿಸಿದ ಪುಷ್ಪ ಹಾರವು ತನ್ನದೆ ಕೊರಳಲ್ಲಿ ಕಾಣಿಸಿತು. ಮತ್ತು ವಿಶೇಷ ಆಶ್ಚರ್ಯದ ಮಾತು ಹೀಗಾಯಿತಲ್ಲ, ಗಜಾನನರು ದೇಹಭಾನದ ಮೇಲೆ ಬರುತ್ತಲೇ

ಮೊದಲು ಧ್ಯಾನಸ್ಥಿತಿಯಲ್ಲಿ ನೋಡಿದಂತೆ ಸಾಹಿತ್ಯದಲ್ಲಿ ಆದ ಭೇದವು ಅವರಿಗೆ ಅಲ್ಲಿ ಪ್ರತ್ಯಕ್ಷ ಕಂಡು ಬಂತು.

ಈ ಸಮಯದಲ್ಲಿ ಸಿವರಾಮಭಾವು ಇವರು ಈ ಎಲ್ಲ ಪ್ರಕಾರಗಳನ್ನು ಬಾಗಿಲಿನ ಸಂದಿನೊಳಗಿಂದ ನೋಡುತ್ತಿದ್ದರು. ಅವರು ಒಮ್ಮೆಲೇ ಒಳಗೆ ಪ್ರವೇಶಿಸಿ, ಗಜಾನನ ಮಹಾರಾಜರ ಚರಣ ಕಮಲಗಳಲ್ಲಿ ಲೋಟಾಂಗಣವನ್ನು ಹಾಕಿದರು. ಆಗ ಮಹಾರಾಜರು ಅವರಿಗೆ ಆಶೀರ್ವಾದ ಮಾಡಿ, 'ಸೋಹಂ' ಮಂತ್ರದ ಉಪದೇಶ ಕೊಟ್ಟರು.

(೨೭) **ಸಾಧುಗಳ ದರ್ಶನ:**— ಆ ಮೇಲೆ ಗಜಾನನ ಮಹಾರಾಜರ ಧ್ಯಾನದ ಅಭ್ಯಾಸವು ನಿರಾತಂಕವಾಗಿ ನಡೆಯಿತು. ಮತ್ತು ಅವರಿಗೆ ರಿದ್ಧಿಸಿದ್ಧಿಗಳ ದರ್ಶನವಾಯಿತು. ಯೋಗಾಭ್ಯಾಸದಲ್ಲಿ ಇವು ಸಿದ್ಧಿಗಳ ದೇವತೆಗಳು ಹಾಗೆಯೇ ಅವರಿಗೆ ಧ್ಯಾನಕಾಲದಲ್ಲಿ ಬಹಳ ಮಂದಿ ಸಾಧುಸಂತರ ದರ್ಶನಗಳಾದವು. ಎಲ್ಲರೂ ಅವರಿಗೆ ಬಹಳ ಉತ್ಸುಕತೆಯಿಂದ ಆಶೀರ್ವಾದ ಕೊಟ್ಟರು. ಮತ್ತು ಅಂದದ್ದೇನಂದರೆ:— 'ನಿನ್ನ ಯೋಗವು ಈಗ ಪೂರ್ಣವಾಗಿರುತ್ತದೆ. ನೀನು ಈಗ ಸಿದ್ಧನಾಗಿದ್ದಿ. ನೀನು ಮುಮುಕ್ಷುವಿಗೆ ಯಾವ ಮಂತ್ರ ಕೊಟ್ಟದ್ದಾದರೂ ಆ ಮಂತ್ರವು ಸಿದ್ಧಿಸುವದು. ನೀನು ಮುಮುಕ್ಷುವಿಗೆ ಬರೇ ಸ್ಪರ್ಶ ಮಾಡಿದಿ ಅಂದರೆ, ಅವನು ಯೋಗ ಮಾರ್ಗದಲ್ಲಿ ಸುಧಾರಣೆ ಹೊಂದುವನು.' ನಂತರ ಆ ಸಾಧುಗಳು ಅಂತರ್ಧಾನ ಹೊಂದಿದರು.

(೨೮) **ಸದ್ಗುರುಗಳ ಮಾನಸ ಪೂಜೆಯು:**—ರಾತ್ರಿ ಕಾಲದಲ್ಲಿ ಒಮ್ಮೆ ಗಜಾನನ ಮಹಾರಾಜರು ಧ್ಯಾನಕ್ಕೆ ಕೂತಿರುವಾಗ, ಅವರ ಗುರುಗಳು ಅವರ ಮುಂದೆ ಪ್ರಕಟರಾದರು. ಗಜಾನನ ಮಹಾರಾಜರು ಅವರ ಪೂಜೆ ಮಾಡಿ ನೈವೇದ್ಯ ಸಮರ್ಪಿಸಿದರು. ಆಗ ಅವರು ಹಾಸ್ಯ ಮುದ್ರೆಯಿಂದ ಅಂದರು— "ಈ ಎಲ್ಲಾ ಉಪಚಾರಗಳದ್ದೇನೂ ಅವಶ್ಯಕತೆ ಇಲ್ಲ. ಇವುಗಳೊಳಗಿನ ಖರೆ ತತ್ವವೆಂದರೆ ನೀನೇ ಅಂದರೆ ನಿನ್ನ ಶ್ರದ್ಧಾ ಮತ್ತು ಭಕ್ತಿ ಇರುತ್ತದೆ. ನೀನು ಸ್ವತಃ ಆನಂದರೂಪನಿದ್ದೀ, ತದ್ರೂಪನಾಗು." ಹೀಗಂದು ಸದ್ಗುರುಗಳು ಅದೃಶ್ಯರಾದರು. ಆ ಕಾಲದಿಂದ ಮಹಾರಾಜರ ಧ್ಯಾನದ ವೇಳೆಗೆ ನಾರಾಯಣ ಸರಸ್ವತಿಯರು ಗಜಾನನ ಮಹಾರಾಜರ ಸಮೀಪ ಕೂಡ್ರುತ್ತಿದ್ದರು. ಮತ್ತು ಧೂಪ, ದೀಪ, ನೈವೇದ್ಯ, ಫಲ, ತಾಂಬೂಲ ಹಾರ ವಗೈರೆ ಪೂಜಾ ಸಾಹಿತ್ಯ ಯಾವ್ಯಾವದು ಅವರು ಮನಸ್ಸಿನಿಂದ ಕಲ್ಪಿಸುವರೋ, ಅವೆಲ್ಲ ಈ ದೃಶ್ಯ ಸೃಷ್ಟಿಯೊಳಗೆ ಮಹಾರಾಜರ ಮುಂದೆ ಜನರಿಗೆ ಪ್ರತ್ಯಕ್ಷ ಕಾಣಿಸುತ್ತಿದ್ದವು. ಯಾರೊಬ್ಬರೂ ಅವರ ಕೊರಳೊಳಗೆ ಹಾರ ಹಾಕದಿದ್ದರೂ ಅವರ ಕೊರಳಲ್ಲಿ ಹಾರ ಕಾಣಿಸುತ್ತಿತ್ತು.

**(೨೯) ಮೂರ್ತಿಯು ಅದೃಶ್ಯವಾಗುವದು :—** ಶ್ರೀಗಜಾನನ ಮಹಾರಾಜರು ಅಕೋಲೆಯಲ್ಲಿರುವಾಗ ಅವರ ಮುಖಾಂತರ ಅನೇಕ ಅಘಟಿತ ಸಂಗತಿಗಳು ಘಟಿಸಿದವು. ಅವುಗಳ ಪೈಕಿ ಕೆಲವು ಘಟನೆಗಳು ಅವನ್ನು ಪ್ರತ್ಯಕ್ಷವಾಗಿ ನೋಡಿದ ಜನರು ಹೇಳಿರುತ್ತಾರೆ. ಅವುಗಳ ಪೈಕಿ ಕೆಲವನ್ನು ಕೆಳಗೆ ಕೊಡುತ್ತೇವೆ.

ಅಕೋಲೆಯೊಳಗೆ ಒಂದು ಅದ್ಭುತ ಚಮತ್ಕಾರವು ಸಂಭವಿಸಿತು. ಆ ಸಮಯದಲ್ಲಿ ಮಹಾರಾಜರ ವಯಸ್ಸು ಬರೇ ಹದಿಮೂರು ವರ್ಷದಿತ್ತು. ಈ ಸಂಗತಿಯು ಘಟಿಸಿದ ಮೇಲೆ ಸುಮಾರು ೩೪ ವರ್ಷಗಳಾದನಂತರ ಮುಂಬಯಿಯೊಳಗೆ ಖಾರ ರಸ್ತೆಯಲ್ಲಿರುವ ಪಂಡಿತ ಹೆಸರಿನ ಒಬ್ಬ ಸದ್ಗೃಸ್ಥನು, ಈ ಚರಿತ್ರ ಲೇಖಕನಿಗೆ ಪತ್ರದ್ವಾರದಿಂದ ತಿಳಿಸಿದ್ದು ಏನಂದರೆ:— “ ಅಕೋಲೆಯಲ್ಲಿ ವಾಸವಾಗಿದ್ದ ಒಬ್ಬ ವೃದ್ಧಸ್ತ್ರೀಯು, ರಾಮಭಾವು ಹೆಸರಿನ ಗೃಹಸ್ಥನ ಚಿಗವ್ವ, ತನ್ನ ಕೋಣೆಯೊಳಗೆ ಕೂತು, ಕಂಚಿನ ಶ್ರೀಕೃಷ್ಣ ಮೂರ್ತಿಯನ್ನು ನಿತ್ಯದಂತೆ ಪೂಜಿಸುತ್ತಿದ್ದಳು. ಗಜಾನನ ಮಹಾರಾಜರು ಕೆಲವು ಗೆಳೆಯರ ಕೂಡೆ ಅಲ್ಲೆ ಅತ್ತಿತ್ತ ಆಡುತ್ತಿದ್ದರು, ಅವರು ಸಹಜವಾಗಿ ಆ ವೃದ್ಧಳ ಸಮೀಪ ಹೋಗಿ ಅಂದರು, “ ಅಜ್ಜೀ, ನೀವು ಈ ಮೂರ್ತಿದು ಯಾಕೆ ಪೂಜಾ ಮಾಡುತ್ತಿದ್ದೀರಿ ? ನಿಮ್ಮ ದೇವತೆ ಈ ಕೃಷ್ಣ ಮೂರ್ತಿಯನ್ನು ನಾನು ಇಲ್ಲದಂತೆ ಮಾಡಿದರೆ ನನಗೇನು ಕೊಡುವಿರಿ ? ” ಆಕೆಯು ಈತನ ತಿಳಗೇಡಿ ಮಾತುಗಳ ಕಡೆಗೆ ಲಕ್ಷಕೊಡಲಿಲ್ಲ ಆಗ ಗಜಾನನನು “ ನೀನು ಇಲ್ಲಿಂದ ಹೊರಟು ಹೋಗು ” ಎಂದು ಮೂರ್ತಿಗೆ ಉದ್ದೇಶಿಸಿ ಅಂದನು. ಆ ಕ್ಷಣವೇ ಆ ಮೂರ್ತಿಯು ಗುಪ್ತವಾಯಿತು, ಇದನ್ನು ನೋಡಿ ಪ್ರತಿ ಒಬ್ಬನು ಆಶ್ಚರ್ಯಚಕಿತನಾದನು. ಈ ಗಾರುಡಿ ವಿದ್ಯೆ ನೋಡಿ ಆ ಅಜ್ಜಿಯು ಘಾಬರಿಯಾದಳು. ಮತ್ತು ತನ್ನ ಬಾಲಕೃಷ್ಣನು ಅದೃಶ್ಯನಾದ್ದು, ಕಂಡು, ಆಕೆಗೆ ಬಹಳ ದುಃಖವಾಗಿ ಅಳಲಾರಂಭಿಸಿದಳು. “ ನನ್ನ ಬಾಲಕೃಷ್ಣನು ತಿರಿಗಿ ಬಾರದಿದ್ದರೆ ನಾನು ಅನ್ನಗ್ರಹಣ ಮಾಡಲಿಕ್ಕಿಲ್ಲ. ” ಎಂದು ಆಕೆಯು ಅಂದಳು. ಕಡೆಗೆ ಗಜಾನನಗೆ ದಯಾ ಹುಟ್ಟಿ ಅವನಂದದ್ದು, “ ನಿಮ್ಮ ಕೈ ಚಾಚಿರಿ ” ಹಾಗೆ ಮಾಡಿದ ಕೂಡಲೆ ಸಣ್ಣ ಹುಡುಗರಿಗೆ ಕರೆದಂತೆ, “ ಕೃಷ್ಣಾ ಬಾರೋ ಬಾ, ” ಹೀಗೆ ಅನ್ನುತ್ತಲೆ ಅಜ್ಜಿಯ ಕೈಯಲ್ಲಿ ಮೂರ್ತಿಯು ಕಾಣಿಸಿತು. ಅಲ್ಲಿ ಹಾಜರಿದ್ದ ಎಲ್ಲರಿಗೂ ಈ ಚಮತ್ಕಾರ ನೋಡಿ ಆಶ್ಚರ್ಯವಾಯಿತು. ಗಜಾನನ ಮಹಾರಾಜರ ಕೈಯಿಂದ ಹದಿಮೂರನೆಯ ವಯಸ್ಸಿನಲ್ಲಿಯೇ ಈ ಮೊದಲನೇ ಅದ್ಭುತ ಸಂಗತಿಯು ಘಟಿಸಿತು.”

**(೩೦) ಸೌ, ದಿಘೆ ಎಂಬಾಕೆಯ ಸಮಾಚಾರ :-** ಅಕೋಲೆಯ ದಿಘೆ ಅಣ್ಣಾ ಹೆಸರಿನ ಒಬ್ಬ ಸ್ತ್ರೀಯು ಮಹಾರಾಜರಿಗೆ ಭೆಟ್ಟಿಯಾಗಲಿಕ್ಕೆ ಅಂತ ಸನ್ ೧೯೪೦ ಇಸವಿಯ ಫೆಬ್ರುವರಿ ತಿಂಗಳಲ್ಲಿ ಇಲ್ಲಿ ( ನಾಸಿಕ ) ಬಂದಿದ್ದರು, ಅವರು

ಪ್ರತ್ಯಕ್ಷ ನೋಡಿದ ಈ ಕೆಳಗಿನ ವೃತ್ತಾಂತವನ್ನು ನಮಗೆ ಹೇಳಿದರು. ಅವರು ಮಹಾರಾಜರ ಬಾಲ್ಯದಲ್ಲಿ ಅವರ ಸಂಗಡಿಗರಿದ್ದರು.

(೧) ಮೇ ತಿಂಗಳಾಗಿತ್ತು, ಗಜಾನನರು ಹದಿನಾರು ವರ್ಷದವರಿದ್ದರು. ಒಮ್ಮೆ ಅವರು ಗುಪ್ತೆ ವಕೀಲರ ಕಾರಕೂನರ ಮನೆಯಲ್ಲಿ ಕೂತಿದ್ದರು. ಆ ಮನೆಯು ವಕೀಲರ ಮನೆಗೆ ಹತ್ತಿ ಇತ್ತು. ಅಲ್ಲಿ ಗುಪ್ತೆಯವರ ಮನೆಮಂದಿ ಎಲ್ಲ ಕೂಡಿದ್ದರು. ಗಜಾನನರಿಗೆ ಕರ್ಣಪಿಶಾಚಿಯ ಸಹಾಯ ಇದೆ, ಮತ್ತು ಅದರ ನೆರವಿನಿಂದ ಬಹಳ ಚಮತ್ಕಾರಗಳನ್ನು ಮಾಡುತ್ತಾರೆ, ಎಂದು ಎಲ್ಲರಿಗೂ ಗೊತ್ತಿತ್ತು. 'ನಮ್ಮ ಸಲುವಾಗಿ ಕೆಲವು ಗುಲಾಬಿ ಹೂವುಗಳನ್ನು ತರಿಸಿಕೊಡಿರಿ.' ಎಂದು ಒಬ್ಬಳು ಅವರಿಗೆ ವಿನಂತಿ ಮಾಡಿದರು. ಅದಕ್ಕೆ ಗಜಾನನರು ಅಂದರು- "ದುಷ್ಟ ಪಿಶಾಚಿಯನ್ನು ಕರೆಸಿ ನಾನು ಸಾಯಬೇಕೆಂಬ ನಿಮ್ಮ ಇಚ್ಛೆ ಏನು? ನನಗೆ ಕರ್ಣ ಪಿಶಾಚಿಯ ಸಹಾಯವಿದೆ ಎಂದು ಅನ್ನುವದು ಸಂಪೂರ್ಣ ಹುಚ್ಚು ಇದೆ. ನನ್ನ ಕೈಯಿಂದ ಚಮತ್ಕಾರಗಳು ಆಗುತ್ತವೆ ಅಂತ ಏನು ಕಾಣಿಸುತ್ತದೆ, ಅವನ್ನು ನಾನು ಬೇಕಂತ ಮಾಡುವದಿಲ್ಲ. ಮತ್ತು ಅವು ಯಾವಾಗ್ಗೆ ಘಟಿಸುತ್ತವೆ ಎಂಬದು ಸಹ ನನಗೆ ಗೊತ್ತಾಗಿರುವದಿಲ್ಲ. ಅವು ಒಂದು ದೊಡ್ಡ ಅಜ್ಞಾತ ಶಕ್ತಿಕಡೆಯಿಂದ ಆಗುತ್ತಿರಬಹುದು. ನನಗೆ ಒಂದು ಪ್ರಕಾರದ ಚಮತ್ಕಾರಿಕ ಥಕ್ಕೆಯಾಗುತ್ತದೆ. ಮತ್ತು ನನ್ನಮುಂದೆ ಒಂದು ಪ್ರಕಾಶಾವಲಯ ಕಾಣುತ್ತದೆ. ಈ ಪ್ರಕಾಶವು ನನ್ನ ಸದ್ಗುರು ರೂಪವನ್ನು ಧಾರಣ ಮಾಡುತ್ತದೆ. ಆ ಮೇಲೆ ನೀವು ಹೀಗೆ ಹೇಳುವಂತೆ ಚಮತ್ಕಾರಕ ಸಂಗತಿಗಳು ನನ್ನ ನಿಮಿತ್ತದಿಂದ ಸಂಭವಿಸುತ್ತವೆ. ಅವು ಚಮತ್ಕಾರದಂತೆ ಕಾಣಿಸುತ್ತವೆ ಅಂತ ಕರ್ಣ ಪಿಶಾಚಿಯ ಕೆಲಸವಿರಬೇಕೆಂದು ಜನರು ತಿಳಿಯುತ್ತಾರೆ.

" ಅದೇನೂ ಇರಲಿ, ನೀವು ಬೇಕಾದ ಹಾಗೆ ಮಾಡಿರಿ, ನಮ್ಮ ಸಲುವಾಗಿ ಗುಲಾಬಿ ಹೂವುಗಳನ್ನು ತರಿಸಲಿಕ್ಕೇಬೇಕು, " ಹೀಗೆ ಎಲ್ಲರೂ ಅವರಿಗೆ ಆಗ್ರಹ ಮಾಡಿದರು. ಗಜಾನನರು ಆಗ ಕೋಣೆಯ ಹೊರಗೆ ಹೋದರು ಮತ್ತು ಒಂದೆರಡು ಮಿನಿಟುಗಳೊಳಗೆ ತಿರುಗಿ ಬಂದರು. ಈ ಮಧ್ಯದಲ್ಲಿ ಅವರು ಏನು ಮಾಡುತ್ತಿದ್ದರು ಎಂಬದರ ಕಡೆಗೆ ಜನರ ಲಕ್ಷವಿತ್ತು; ಆದರೆ ಏನೊಂದೂ ಮಾಡದೆ, ಅವರು ಕೋಣೆಯೊಳಗೆ ಬಂದರು ಮತ್ತು ತತ್‌ಕ್ಷಣವೇ ೨೫–೩೦ ಹೂವುಗಳನ್ನು ನೆಲದ ಮೇಲೆ ಚಲ್ಲಿದರು.

ಗುಪ್ತೆ ವಕೀಲರ ತಂದೆ ಮಾರ್ತಂಡರಾವ ಗುಪ್ತೆ ಇವರಾದರೂ ವಕೀಲರಿದ್ದರು. ಇದೇನು ಚಮತ್ಕಾರ ಎಂದು ನೋಡುವ ಸಲುವಾಗಿ, ಅವುಗಳೊಳಗಿನ ಕೆಲವು ಹೂವುಗಳನ್ನು ತಕ್ಕೊಂಡು ಅವರು ತಿಜೋರಿಯಲ್ಲಿ ಇಟ್ಟು ಕೀಲಿ ಹಾಕಿದ್ದರು. ಆದರೂ ಅವು ಮೊದಲಿನಂತೆ ಇದ್ದವು. ಅವುಗಳ ಪೈಕಿ ಒಂದಾದರೂ ಹೂವು

ಕಡಿಮೆಯಾಗಲಿಲ್ಲ, ಇದರ ಮೇಲಿಂದ ಇವು ಕರ್ಣ ಪಿಶಾಚಿಯ ಹೂವುಗಳಲ್ಲೆಂತ ಅವರ ಖಾತ್ರಿಯಾಯಿತು.

(೨) ಗಜಾನನರು ಬಹುತೇಕ ಸ್ನಾನ ಮಾಡುವದನ್ನು ತಪ್ಪಿಸಿಕೊಳ್ಳುತ್ತಿದ್ದರು. ಒಂದು ದಿನ ಎಲ್ಲರು ಅವರಿಗೆ ಸ್ನಾನ ಮಾಡಬೇಕಂತ ಆಗ್ರಹ ಮಾಡಿದರು. ಅವರೂ ಸಮ್ಮತಿಸಿದರು. ಆದರೆ ಆಶ್ಚರ್ಯದ ಮಾತು ಹೀಗಲ್ಲ, ಅವರಿಗೆ ಸ್ನಾನ ಮಾಡಿಸುತ್ತಿರುವಾಗ ಮೈಮೇಲಿಂದ ಇಳಿದ ನೀರಿನಿಂದ ಅತ್ತರಿನಂತೆ ಸುವಾಸ ಹೊರಟಿತು.

(೩೧) **ಸಂತುರಾಮ ಗುಪ್ತೆ:—** ಅಕೋಲೆಯಲ್ಲಿ ಯಾವ ಮನೆಯಲ್ಲಿ ಮಹಾರಾಜರು ಇರುತ್ತಿದ್ದರೋ, ಅದೇ ಮನೆಯಲ್ಲಿ ಸಂತುರಾಮ ಗುಪ್ತೆ ಎಂಬ ಹೆಸರಿನ ಒಬ್ಬ ಗೃಹಸ್ಥರಿರುತ್ತಿದ್ದರು. ಅವರು ಜಜ್ಜಕೋರ್ಟಿನಲ್ಲಿ ಶಿರಸ್ತೆದಾರರಿದ್ದರು. ಅವರ ಹೆಂಡತಿಗೆ ವಿಷಮಜ್ವರ ಮತ್ತು ನ್ಯೂಮೋನಿಯಾ ಇವುಗಳಿಂದ ಪ್ರಾಣಾಂತ ಸಮಯ ಪ್ರಾಪ್ತವಾಗಿತ್ತು. ಮಹಾರಾಜರು ಅವರ ಮನೆ ಮುಂದಿಗೆ ಆಕೆಯ ಸಮೀಪ ಕರ್ಪೂರ ಹಚ್ಚಲಿಕ್ಕೆ ಹೇಳಿದರು. ಹಾಗೆ ಅವರು ಮಾಡುತ್ತಲೇ ಆಕೆಗೆ ನೆಟ್ಟಗಾಯಿತು.

(೩೨) **ಮುಂಬಯಿಯಲ್ಲಿ ಶ್ರೀಗಜಾನನ ಮಹಾರಾಜರು:—** ಬಹಳ ದಿವಸ ತೀರ್ಥಯಾತ್ರೆ ಮಾಡಿದ ಮೇಲೆ ಗಜಾನನ ಮಹಾರಾಜರು ಪರೇಳ ಮುಂಬಯಿಯಲ್ಲಿರುತ್ತಿದ್ದ ಶ್ರೀನಾರಾಯಣರಾವ ಸಮರ್ಥ ಇವರ ಕಡೆ ಇರಲಿಕ್ಕೆ ಹೋದರು. ಸಮರ್ಥ ಇವರು ಅವರ ಸಂಬಂಧಿಕರಿದ್ದು ಪರೇಳ ಮಿಲ್ಸದೊಳಗೆ ನೌಕರರಿದ್ದರು.

ಶ್ರೀ ಮೋರೇಶ್ವರರಾವ ಮಥುರೆ ಈ ಹೆಸರಿನ ಒಬ್ಬ ಗೃಹಸ್ಥರು ಒಂದು ದಿನ ಸಮರ್ಥರ ಕಡೆ ಬಂದರು. ಇವರಾದರೂ ಪರೇಳ ಮಿಲ್ಸದೊಳಗೆ ನೌಕರರಿದ್ದರು. ಮಥುರೆ ಇವರು ಚಿಕ್ಕಂದಿನಲ್ಲಿ ಅಕೋಲೆಯಲ್ಲಿ ಗುಪ್ತೆ ವಕೀಲರ ಮನೆಯಲ್ಲಿದ್ದು, ಶಾಲೆಯಲ್ಲಿ ಕಲಿಯುತ್ತಿದ್ದರು, ಆಗ ನಾರಾಯಣರಾವ ಗುಪ್ತೆ ಅಂದರೆ 'ಬೀ'ಕವಿ, ಇವರಾದರೂ ತನ್ನ ತಮ್ಮ ಮತ್ತು ಸೋದರತ್ತೆ ಇವರ ಕೂಡ ಅಲ್ಲೇ ಇರುತ್ತಿದ್ದರು. ಅವರಿಗೆ ಅಲ್ಲೇ ಸರಕಾರಿ ಚಾಕರಿ ಇತ್ತು.

(೩೩) **ರಾ. ಮಥುರೇ:—** ಗಜಾನನ ಮಹಾರಾಜರ ಒಬ್ಬ ಅಣ್ಣಾ ಲಕ್ಷ್ಮಣರಾವ ಗುಪ್ತೆ ಮತ್ತು ಮಥುರೆ ಇವರು ಸಹಪಾಠಿಗಳಿದ್ದರು. ಅವರಿಬ್ಬರೂ ಆಗ ಮರಾಠಿ ನಾಲ್ಕನೆ ಇಯತ್ತೆಯಲ್ಲಿ ಕಲಿಯುತ್ತಿದ್ದರು. ಈ ಮೂಲಕ ಮಥುರೆಗೆ ಗಜಾನನ ಮಹಾರಾಜರ ಗುರ್ತವಿತ್ತು. ಎಷ್ಟೋ ವರ್ಷಗಳ ಮೇಲೆ ಮಥುರೆ ಇವರು ಮಹಾರಾಜರನ್ನು ಇದೇ ಮೊದಲು ಕಂಡಿದ್ದು, ಆಗ ಮಹಾರಾಜರು

ಸಾಧುಗಳ ಸೇವೆಗೆ ಸ್ತ್ರೀಯರು ಇದ್ದಾರೆ. ಕೆಲವರು ಮುಖದಿಂದ ಮಾತ್ರ ವೇದಾಂತವನ್ನು ಪ್ರಕಟ ಮಾಡುತ್ತಾರೆ. ಕೆಲವರು ಹಟಾತ್ತಾಗಿ ಹೊಲಸು ಬಟ್ಟೆಗಳನ್ನು ಮೈಮೇಲೆ ಹೊರುತ್ತಾರೆ. ಮತ್ತು ಕೆಲವರ ಮೈಮೇಲೆ ಹಳೇ ಚಿಂದಿಗಳು ಇರುತ್ತವೆ. ಕೆಲವರು ನಗ್ನರಾಗಿರುತ್ತಾರೆ. ಸಾಧಕರ ಮನಸ್ಸಿನ ಮೇಲೆ ಪರಿಣಾಮಮಾಡಲಿಕ್ಕೆ ಇವೆಲ್ಲ ಯುಕ್ತಿಗಳಿರುತ್ತವೆ. ಒಬ್ಬರು ಹೇಳುತ್ತಾರೆ. "ಬರೇ ಸ್ತ್ರೀಯರ ಉದ್ಧಾರದ ಸಲುವಾಗಿಯೇ ಈಶ್ವರನು ನನ್ನನ್ನು ಬೇಕೆಂತ ಕಳುಹಿಸಿರುವನು. ನಾವು ಬಹಳ ಪರಿಶ್ರಮ ಮಾಡಿರುವೆವು. ಶಂಕರನು ನನಗೆ ಪ್ರತ್ಯಕ್ಷ ದರ್ಶನ ಕೊಟ್ಟು ಸ್ತ್ರೀಯರ ಉದ್ಧಾರ ಮಾಡೆಂತ ವರ ಕೊಟ್ಟಿದ್ದಾನೆ. ಮತ್ತು ಆ ನಮ್ಮ ಕಾರ್ಯವನ್ನು ನಾವು ಪೂರ್ಣ ಮಾಡುತ್ತಿದ್ದೇವೆ." ಆದರೆ ಇದು ಭಸ್ಮಾಸುರಗೆ ಕೊಟ್ಟವರದಂತೆ ಇರುವದೆಂದು ನನಗೆ ತೋರುತ್ತದೆ.

ಮಹಾರಾಜ :-- ಪ್ರಾಚೀನ ಕಾಲದಲ್ಲಿ ಯಾವಾಗ್ಗೆ ಬ್ರಹ್ಮಸಾಕ್ಷಾತ್ಕಾರಿ ಸಾಧುಗಳಿದ್ದರೊ ಆಗ್ಗೆ ಸಹ ಇಂಥ ಡಾಂಭಿಕ ವ ನಕಲಿ ಸಾಧುಗಳು ಇರುತ್ತಿದ್ದರು. ಯಾರು ಸ್ತ್ರೀಯರ ಸುಧಾರಣೆಗೋಸ್ಕರ ಕಳುಹಿಸಲ್ಪಟ್ಟವರೆಂತ ಅನ್ನುತ್ತಾರೊ ಅಂಥವರು ಈಗಲೂ ಅನೇಕ ಜನರಿದ್ದಾರೆ. ಇರಲಿ, ಇಂಥ ರೀತಿ ಯಾವಾಗಲೂ ನಡಿಯುತ್ತಿರುವದೇ. ತಾನು ಇದರಿಂದ ಸತ್ಯಾಸತ್ಯಸ್ಥಿತಿಯನ್ನು ತಿಳಕೊಳ್ಳ ಬೇಕು. ಮೋಸ ಹೋಗಬಾರದು ಎಂಬಡಿಷ್ಟೇ ಕಲಿಯತಕ್ಕದ್ದು; ತುಕಾರಾಮರು ಅನ್ನುತ್ತಾರೆ. "ಇಂಥ ಸಂತರನ್ನು ಪುಣ್ಣೊಳಗೆ ಜೀವಂತ ಹುಗಿಯಬೇಕು." "ಇಂಥ ಗುರುಗಳು ದುಡ್ಡಿಗೆ ನೂರು ಸಿಗುತ್ತಾರೆ." ಎಂತ ರಾಮದಾಸ ಸಮರ್ಥ ರಾದರೂ ಹೇಳುತ್ತಾರೆ. ಆಕೋಲೆಯೊಳಗೆ ಇದ್ದಾಗ್ಗೆ ನಾನಾದರೂ ನಾಲ್ಕೈದು ವರ್ಷಗಳ ವರೆಗೆ ಇಂಥ ಸಾಧುಗಳ ಬೆನ್ನುಹತ್ತಿದ್ದೆ. ಆದರೆ ಈಶ್ವರನೇ ಇಂಥವರ ತಂತ್ರದೊಳಗಿಂದ ನನ್ನನ್ನು ರಕ್ಷಿಸಿದನು. ನಾನಾದರೂ ಇಪ್ಪತ್ತಿಪ್ಪತ್ತೈದು ಮಂದಿ ನನ್ನ ಸ್ನೇಹಿತರನ್ನು ಎಚ್ಚರಕ್ಕೆ ತಂದೆ. ಕೆಲವು ಕಾಲದ ನಂತರ ಈ ಸಾಧುಗಳಾ ದರೂ ಲೋಕಾಪವಾದಕ್ಕೆ ಪಾತ್ರರಾದರು. ಆಗ ಈಶ್ವರನು ನಮ್ಮನ್ನು ಕಾಪಾಡಿದ ನೆಂದು ಈಶ್ವರನಿಗೆ ನಾವು ಕೃತಜ್ಞರಾದೆವು.

ಮಥುರೆ:— ನೀವು ಹೇಳುವಂಥಾದ್ದು ಸತ್ಯವು. ಯಾರು ಇಂಥ ಸಾಧುಗಳ ತಂತ್ರದೊಳಗೆ ಸಿಕ್ಕಿ ಬೀಳುತ್ತಾರೊ, ಮತ್ತು ಅವರ ವರೆಗಲ್ಲಿಗೆ ಹತ್ತುವ ಪ್ರಯತ್ನ ಮಾಡುತ್ತಾರೊ ಅವರು ಕಡೆಗೆ ಸ್ವಾರ್ಥ ಪರಮಾರ್ಥ ಎರಡಕ್ಕೂ ಎರವಾಗುವರು. ಇದು ನಾನು ಕಂಡಿದ್ದೇನೆ. ಆದರೆ ವ್ಯಸನಿ ಎಂದು ತನ್ನ ಮಹತ್ವವನ್ನು ಅಡಗಿಸುವ ಯುಕ್ತಿಮಾತ್ರ ಬಹಳ ಉತ್ತಮವಾಗಿದೆ. ಆದರಿಂದ ತನ್ನ ಹತ್ತರ ಜನಸಂದಣಿ ಆಗುವದಿಲ್ಲ. ನಿಮ್ಮ ಹತ್ತರ ದೇವತೆಗಳ ಚಿತ್ರಗಳು ಇಲ್ಲ. ಭಜನೆ ಇಲ್ಲ, ಪೂಜೆ ಅರ್ಚಾದಿಗಳಿಲ್ಲ, ಫಲ, ಪುಷ್ಪಾದಿಗಳೂ

ಕಾಣುವದಿಲ್ಲ, ಮನೆಯೊಳಗಿನ ಎಲ್ಲ ವ್ಯವಹಾರಗಳಲ್ಲಿ ಇತರರಂತೆ ನೀವಾದರೂ ನಡೆಯುತ್ತೀರಿ. ಯಾರಿಗೆ ನಿಮ್ಮ ಸತ್ಯ ವಸ್ತುಸ್ಥಿತಿಯು ಮಾಹಿತಿ ಇಲ್ಲ, ಅವರು ಈ ಮದ್ಯಪಾನ ಮತ್ತು ಬೈಯುವ ಚಾಳಿ ನೋಡಿ. ನಿಜವಾಗಿ ಮೋಸ ಹೊಂದುವರು. ಮತ್ತು ನಿಮ್ಮ ಕಡೆ ಬರುವದು ಬಿಟ್ಟು ಬಿಡುವರು. ಆದರೆ ಇಷ್ಟೊಂದು ಸತ್ಯವು, ಅವರ ಲುಕ್ಸಾನು ಆಗಲಾರದು. ಹಾಗೆಯೇ ಯಾವಾತನಿಗೆ ತಮ್ಮ ಕೂಡ ಪೂರ್ವಜನ್ಮದ ಸಂಬಂಧವಿರುವದೊ ಅಂಥವನು ನಿಮ್ಮನ್ನೇ ಹಿಡದಿರುವನು. ಮತ್ತು ತನ್ನ ಶ್ರೇಯಸ್ಸನ್ನು ಸಾಧಿಸಿಕೊಳ್ಳುವನು

ಮಾಥುರಿ ಮುಂದೆ ಹೇಳುತ್ತಾರೆ:- " ಮಹಾರಾಜರೇ ನಾನು ಈಗ ನಿಮಗೆ ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಬಹಳ ಮಂದಿ ನಾಸ್ತಿಕರಿದ್ದು ಅಥವಾ ನಾಸ್ತಿಕತ್ವದ ತೋರಿಕೆ ಇಟ್ಟುಕೊಂಡು ಈಶ್ವರನ ಅಸ್ತಿತ್ವದ ವಿಷಯದಲ್ಲಿ ಶಂಕೆ ಉತ್ಪನ್ನಮಾಡುತ್ತಾರೆ, ಮತ್ತು ಈಶ್ವರನಿದ್ದರೆ, ಆತನ ಅಸ್ತಿತ್ವ ಸಿದ್ಧಮಾಡಿ ತೋರಿಸಿರಿ. ಎಂದನ್ನುತ್ತಾರೆ. ನನಗೆ ಈಶ್ವರನ ಮೇಲೆ ಧೃಡ ವಿಶ್ವಾಸವಿದ್ದರೂ ಈ ಪ್ರಶ್ನೆಗೆ ನಾನು ನಿರುತ್ತರನಾಗುತ್ತೇನೆ. ಇಂಥ ಸಮಯದಲ್ಲಿ ನಾನು ಸುಮ್ಮ ನಿರಬೇಕಾಗುತ್ತದೆ, ಅಥವಾ ಅದು ಪ್ರತಿಬಬ್ಬನ ವಿಶ್ವಾಸದ ಮಾತಾಗಿರುತ್ತದೆ ಅಂತ ಹೇಳಬೇಕಾಗುವದು, ಹಾಗಾದರೆ ಈ ಪ್ರಶ್ನೆಯ ಉತ್ತರ ಏನದೆ ಎಂಬದು ನೀವು ನನಗೆ ಹೇಳುವಿರೊ ? ಈಶ್ವರನ ಅಸ್ತಿತ್ವವು ವಾದ ವಿವಾದದಿಂದ ಸಿದ್ಧವಾದೀತೇನು ?

ಮಹಾರಾಜ:— ಈ ಪ್ರಶ್ನೆಗೆ ಸುಲಭವಾದ ಉತ್ತರವು ಮತ್ತು ಶಾಸ್ತ್ರೀಯ ಪ್ರಮಾಣಕ್ಕೆ ಅನುಸರಿಸಿ ಮುಂದೆ ಹೇಳುವ ಪ್ರಕಾರ ಕೊಡಲಿಕ್ಕೆ ಆದೀತು. ಆಕ್ಸಿಜನ ವ ಹಾಯಡ್ರೊಜನ ಇವೆರಡು ವಾಯುಗಳ ರಾಸಾಯನಿಕ ಮಿಶ್ರಣದಿಂದ ಜಲ ಉತ್ಪನ್ನವಾಗುವದೆಂದು ರಸಾಯನಿಕ ಶಾಸ್ತ್ರದಲ್ಲಿ ಹೇಳಿದೆ, ಆದರೆ ಆ ಮಿಶ್ರಣದ ಪ್ರಮಾಣ ಯಾವದೆಂತ ಆ ರಸಾಯನ ಶಾಸ್ತ್ರಜ್ಞನೇ ಹೇಳಬಲ್ಲನು; ಅಂದರೆ ಯಾವನಿಗೆ ಬುದ್ಧಿ ಇರುವದೊ ಅವನೇ ಹೇಳಬಲ್ಲನು. ಆದರೆ ಈ ತಿಳಿಯುವಂಥ ಶಕ್ತಿಯು ಜಡಪದಾರ್ಥಗಳಲ್ಲಿ ಇರುವದು ಶಕ್ಯವಿಲ್ಲ. ಅಂದರೆ ಜಗತ್ತಿನಲ್ಲಿ ಯಾವ ಅಪರಂಪಾರ ನೀರು ಅದೆ. ಅದರ ಪ್ರಮಾಣವನ್ನು ಠರಾಯಿಸಿ ಯಾವನು ನೀರನ್ನು ಉತ್ಪನ್ನಮಾಡಿದನೊ ಆತನ ಬುದ್ಧಿ ಮರ್ಯಾದಿತ ಮಾನವೀ ಬುದ್ಧಿಯಲ್ಲ. ಇದು ಸಮಷ್ಟ್ಯಾತ್ಮಕ ಬುದ್ಧಿಯ ಕಾರ್ಯವು; ಸಮಷ್ಟ್ಯಾತ್ಮಕ ಬುದ್ಧಿಯೆಂದರೆ ವಿಶ್ವಶಕ್ತಿಯ ಅಸ್ತಿತ್ವ. ಈ ಸಮಷ್ಟ್ಯಾತ್ಮಕ ಬುದ್ಧಿಯ ಅಸ್ತಿತ್ವವೆ, ಈಶ್ವರನ ಅಸ್ತಿತ್ವ. ನಿನಗೆ ಪ್ರಶ್ನೆ ಕೇಳುವಂಥವನು, ಜಡ ವಸ್ತುವಿಗೂ ಬುದ್ಧಿ ( ಅರಿವು ) ಇದೆ ಅಂತ ಹೇಳುತ್ತಾನಾದರೆ, ಅದು ವೇದಾಂತ ತತ್ವಕ್ಕೆ ಅನುಸರಿಸಿದೆ. ಯಾಕಂದರೆ, ಬ್ರಹ್ಮವು ಚಿತ್‌ಸ್ವರೂಪವಿದ್ದು ಸರ್ವವ್ಯಾಪಿ ಇದೆ. ಅದನ್ನು ತೋರಿಸತಕ್ಕ ಮಾರ್ಗ ಮಾತ್ರ ಬೇರೆ ಇಷ್ಟೇ.

ಜಡ ಮತ್ತು ಚಿತ್ ಇವುಗಳೊಳಗಿನ ಭೇದವು ಹೋಯಿತು, ಅಂದರೆ ಯಾವ ಬರೀ ಚಿತ್ ಸ್ವರೂಪ ಮಾತ್ರ ಉಳಿಯುವದೊ ಅದೇ ಈಶ್ವರ.

ಒಟ್ಟಾರೆ ಮೇಲೆ ಈ ಪ್ರಶ್ನೆಯ ವಿಚಾರವನ್ನು ಧರ್ಮದೃಷ್ಟಿಯಿಂದಾಗಲಿ, ಶಾಸ್ತ್ರದೃಷ್ಟಿಯಿಂದಾಗಲಿ ಮಾಡಿದರೆ, ಈಶ್ವರನ ಅಸ್ತಿತ್ವದ ವಿಷಯದ ಶಂಕೆಯು ಉಳಿಯುವದೇ ಇಲ್ಲ.

ಮಥುರೆ:— “ನಾನು ಅಜ್ಞಾನಿ ಇದ್ದೇನೆ. ನಾನು ಬರೆ ಮರಾಠಿ, ಅದು ಸಹ ನಾಲ್ಕೇ ಇಯತ್ತೆಗಳ ಪರ್ಯಂತ ಕಲಿತಿದ್ದೇನೆ.” ಮತ್ತು ಶಾಸ್ತ್ರವಾದರೂ ಎಷ್ಟೊಂದೂ ಕಲಿಯಲಿಲ್ಲ ಅಂತ ನೀವು ಹೇಳುತ್ತೀರಿ, ಆದರೆ ಇಂಥ ಗಹನವಾದ ಪಶ್ನೆಯನ್ನು ನೀವು ಹ್ಯಾಗ ಬಿಡಿಸುತ್ತೀರಿ? ನಾನು ಬಹಳ ಗ್ರಂಥಗಳನ್ನು ಓದಿದ್ದೇನೆ, ಆದರೂ ನಾನು ಸಹ ಗಲಿಬಿಲಿಯಲ್ಲಿ ಬೀಳುತ್ತೇನೆ. ನನ್ನಿಂದ ಇಂಥ ಪ್ರಶ್ನೆಗಳು ಬಿಡಿಸಲಾಗದು.

ಮಹಾರಾಜ:— ವಿದ್ವಾಂಸ ಜನರು ತಮ್ಮ ತಮ್ಮೊಳಗೆ ವಾದ ವಿವಾದ ಮಾಡುತ್ತಿರುವಾಗ ನಾನು ಕೇಳಿದ್ದೇನೆ ಮತ್ತು ಅವರ ಪುಸ್ತಕದೊಳಗಿನ ಕೆಲವು ಸಂಗತಿಗಳನ್ನು ಅರಿತುಕೊಂಡಿದ್ದೇನೆ. ಅನಂತರ ಆ ಎಲ್ಲ ಸಂಗತಿಗಳನ್ನು ನಾನು ಮನನ ಮಾಡಿದೆ, ಪೂರ್ವದಲ್ಲಿ ಕೇಳಿದ ವಿಷಯಗಳು ನನಗೆ ಗುರು ಕೃಪೆಯಿಂದ ಒಮ್ಮಿಂದೊಮ್ಮೆ ನೆನಪಾಗುತ್ತವೆ, ಮತ್ತು ಇಂಥ ಪ್ರಶ್ನೆಗಳ ಉತ್ತರವನ್ನು ನಾನು ಸರಿಯಾಗಿ ಕೊಡಬಲ್ಲೆನು. ಹಾಗೆಯೇ ನಾನು ಏನು ಅನ್ನುತ್ತೇನೊ ಅದನ್ನು ನಾನು ಅನ್ನದೆ ನನ್ನ ಗುರುವು ನನ್ನ ಮುಖದಿಂದ ಮಾಡುತ್ತಿರುತ್ತಾನೆ, ಎಂಬದರಲ್ಲಿ ನನ್ನ ಪೂರ್ಣ ವಿಶ್ವಾಸವದೆ. ಚಿಕ್ಕಂದಿನಲ್ಲಿ ನಾನು ಕಥೆ ಪುರಾಣಾದಿಗಳಿಗೆ ಹೋಗುತ್ತಿದ್ದೆ, ಮತ್ತು ಶಾಸ್ತ್ರಚರ್ಚೆಗಳನ್ನು ನಾನು ಲಕ್ಷಪೂರ್ವಕ ಕೇಳುತ್ತಿದ್ದೆ. ಆ ಮೇಲೆ ಯಾವ ಯಾವ ಧಾರ್ಮಿಕ ಪುಸ್ತಕಗಳು ನನಗೆ ಶಿಕ್ಕವೊ ಅವನ್ನೆಲ್ಲ ನಾನು ಓದಿದೆ, ಕೆಲವು ಉಪನಿಷತ್ತುಗಳು ಮತ್ತು ಪತಂಜಲಿಯ ಯೋಗಶಾಸ್ತ್ರ ಈ ಗ್ರಂಥಗಳನ್ನು ನಾನು ಓದಿರುತ್ತೇನೆ. ಈ ಪೈಕಿ ಕೆಲವು ಪುಸ್ತಕಗಳನ್ನು ನಾನು ಓದಿದೆ ಮತ್ತು ಕೆಲವುಗಳ ತಾತ್ಪರ್ಯವನ್ನು ಎರಡನೆಯವರ ಕಡೆಯಿಂದ ಕೇಳಿಕೊಂಡೆ, ಕೆಲವು ಸಾಧುಗಳ ಚರಿತ್ರೆಗಳಾದರೂ ನಾನು ಓದಿದ್ದೇನೆ. ಈ ಚರಿತ್ರೆಗಳಿಂದ ನಾನು ಏನೇನು ಓದಿದೆನೋ ಅದನ್ನು ನನ್ನ ಮಿತ್ರ ವ ಬಂಧು ಭಗಿನಿಯರಿಗೆ ವಿವರಿಸುತ್ತಿದ್ದೆ, ಇತ್ತಿತ್ತಲಾಗಿ ಮಾತ್ರ ನಾನು ಇದನ್ನೆಲ್ಲ ಬಿಟ್ಟಿರುತ್ತೇನೆ. ಸದ್ಯ ನಾನು ಏನೇನೂ ಮಾಡುವದಿಲ್ಲ, ನನಗೇನೂ ತಿಳಿಯುವದಿಲ್ಲ ಅಂತ ತೋರಿಸಿಕೊಳ್ಳುತ್ತೇನೆ. ನಮ್ಮಲ್ಲಿ ಬಹಳ ದೋಷಗಳಿವೆ ಎಂತ ಜಗಕ್ಕೆ ತಿಳಿಯಬೇಕೆಂತ ನನಗೆ ಅನ್ನಿಸುತ್ತದೆ. ತನ್ನ ಗುಣ ( ಒಳ್ಳೇ ) ತೋರಿಸುವದೆಂದರೆ ಇತರರಿಗೂ ತನಗೂ ಮೋಸಗೊಳಿಸಿದಂತಾಗುವದು, ಪ್ರಾಚೀನ ಕಾಲ

ದಲ್ಲಿ ಸಹ ಋಷಿಜನರು ತಮ್ಮಲ್ಲಿ ಬಹಳ ದೋಷಗಳವೆ, ಅಂತ ಜನರಿಗೆ ತೋರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದರು.

ಮಥುರೆ:—ಧ್ಯಾನದಲ್ಲಿ ನನ್ನ ಆತ್ಮನು ನನಗೆ ಕಾಣಿಸ್ಯಾವೇನು? ಜೀವಾತ್ಮಾ ಅಂದರೆ ಅವನೇ ಶಿವಾತ್ಮಾ ಎಂದು ಅನ್ನುತ್ತಾರೆ.

ಮಹಾರಾಜ:— ಈ ವೇದಾಂತ ಈಗ ಸಾಕು. ನಿನಗೆ ನಿನ್ನ ಆತ್ಮನು ಕಾಣುವನು ಹೀಗನ್ನುವ ಕಾರಣವೇನಂದರೆ ನನಗೆ ಸ್ವತಃ ಆ ಅನುಭವವಾಗಿದೆ. ನನ್ನಿಂದ ಎಲ್ಲ ಸಹಾಯ್ಯ ಮಾಡಿಕೊಳ್ಳುವದು ಈ ನಿನ್ನ ಪ್ರಯತ್ನವದೆ, ಹೀಗೆ ನನಗೆ ಅನಿಸುತ್ತದೆ. ಇವತ್ತಿನ ಈ ನಮ್ಮ ಭೆಟ್ಟಿಯು ದೈವಯೋಗದಿಂದಲೇ ಠರಾಯಿಸಿತ್ತೆಂಬಂತೆ ಕಾಣುತ್ತದೆ. ಇಲ್ಲದಿದ್ದರೆ ಈ ಪ್ರಕಾರದ ಸಂಧಿ ನಾನು ನಿನಗೆ ಕೊಡಲಿಕ್ಕಿಲ್ಲಿತ್ತು. ನಾನಾ ಸಮರ್ಥರ ಮೇಲೆ ನನ್ನ ಅತ್ಯಂತ ಪ್ರೇಮವಿದೆ. ನನ್ನಿಂದ ಘಟಿಸಿದ ಬಹಳ ಚಮತ್ಕಾರಗಳು ಅವರು ನಿನಗೆ ಹೇಳಿದರೆಂದು ನಿನಗೆ ನನ್ನ ಮೇಲೆ ವಿಶ್ವಾಸ ಕೂತಿತು. ಇದಲ್ಲದೆ ಅಕೋಲೆಯ ಗುಪ್ತೆ ಇವರೂ ನನ್ನ ವಿಷಯದಲ್ಲಿ ನನ್ನ ಕಡೆಯಿಂದ ಆದ ಚಮತ್ಕಾರದ ವಿಷಯ ನಿನಗೆ ಹೇಳಿದ್ದಾರು. ಆ ಮೂಲಕ ನಿನ್ನ ಮನಸ್ಸಿನೊಳಗಿನ ಶಂಕಾ ಕುಶಂಕೆಗಳು ಓಡಿ ಹೋದವು ಮತ್ತು ಪೂರ್ಣ ವಿಶ್ವಾಸ ಉತ್ಪನ್ನವಾಯಿತು ಆದ್ದರಿಂದ ನಿನಗೆ ಇದನ್ನೆಲ್ಲ ಹೇಳುವ ಕಲಸ ಬಿತ್ತು. ಈಗ ಲಕ್ಷ್ಯದಲ್ಲಿಡು, ನಿನ್ನ ಧ್ಯಾನ ಯಾವಾಗ್ಗೆ ಸಕ್ವವ ಪರಿಪೂರ್ಣವಾದೀತು ಆಗ ನಿನ್ನ ಆತ್ಮನು ಬ್ರಹ್ಮರಂಧ್ರದಲ್ಲಿ ಪ್ರವೇಶಿಸುವ ಮೊದಲು ಸ್ವಲ್ಪವೇಳೆ ಮಿಂಚಿನ ಗೆರೆಯಂತೆ ಸುಷುಮ್ನೆಯೊಳಗೆ ಹ್ಯಾಗೆ ಏರುವನು ಎಂಬದನ್ನು ನೀನು ನೋಡುವಿ. ಆದರೆ ಅವನು ಇಷ್ಟು ತೀವ್ರವಾಗಿ ಹೋಗುತ್ತಾನಲ್ಲ, ಪೂರ್ಣ ಲಕ್ಷವಿಲ್ಲದಿದ್ದರೆ ಇದು ತಿಳಿಯುವದೇ ಇಲ್ಲ. ನಾನು ನಿನಗೆ ವಿಶೇಷವಾದ ಈ ಗುರ್ತವನ್ನು ಹೇಳಿರುತ್ತೇನೆ. ನೀನು ಸೂಕ್ಷ್ಮದೃಷ್ಟಿಯಿಂದ ನೋಡಿದ್ದಾದರೆ ಮಾತ್ರ ನಿನಗೆ ಅವನು ಕಾಣಿಸುವನು. ಅಕೋಲೆಯಲ್ಲಿರುವಾಗ ಶಿವರಾಮಭಾವು ಇವರಿಗೆ ನಾನು ಇದನ್ನು ತೋರಿಸಿದ್ದೇನೆ.

ಮಥುರೆ:— ಚಮತ್ಕಾರಗಳ ಸಂಬಂಧ ನಿಮ್ಮ ಮತವೇನೆಂದು ನಾನು ತಿಳಿಯಲಿಚ್ಛಿಸುತ್ತೇನೆ.

ಮಹಾರಾಜ.— ಕೆಲವು ಮಹಾತ್ಮರ ಕಡೆಯಿಂದ ಚಮತ್ಕಾರಗಳು ಘಟಿಸುತ್ತವೆ. ಆದರೆ ಮಹನ್ ಸಾಧುಗಳು ಅವುಗಳ ಕಡೆಗೆ ಎಷ್ಟೊಂದೂ ಲಕ್ಷ ಕೊಡುವದಿಲ್ಲ. ಕೆಲವು ಖರೇ ಸಾಧುಗಳ ಕಡೆಯಿಂದ ಚಮತ್ಕಾರಗಳು ಘಟಿಸುವದೂ ಇಲ್ಲ. ಆದರೆ ಆ ಮೂಲಕ ಅವರು ಸಾಧುಗಳಲ್ಲವೆಂತ ಮಾತ್ರ ತಿಳಿಯಬಾರದು. ಇತರ ಧರ್ಮಗಳೊಳಗಿನ ಸಾಧುಗಳು ಸಹ ಚಮತ್ಕಾರಗಳನ್ನು ತೋರಿಸುತ್ತಾರೆ. ಈ ಸಾಧುಗಳ ಮುಖದಿಂದ ಯಾವ್ಯಾವ ಮಂತ್ರಗಳು ಹೊರ

ಕೇಳುತ್ತವೋ ಅವನ್ನು ಯೋಗ್ಯ ಪ್ರಕಾರದಿಂದ ಜಪಿಸಿದರೆ, ಅವು ಸಿದ್ಧವಾಗ ಲಿಕ್ಕೇಬೇಕು. ಪಾರಮಾರ್ಥಿಕ ಸಾಧಕನು ಯಾವದೇ ಜಾತಿ ಅಥವಾ ಧರ್ಮದವ ನಿರಲಿ, ಆತನು ಖರೇ ಮಾರ್ಗದಿಂದ ನಡೆದದ್ದಾದರೆ ಅವನಿಗೆ ಆತ್ಮಜ್ಞಾನ ಸಿದ್ಧಿಸಲಿಕ್ಕೇ ಬೇಕು.

ಮಥುರೆ, ಈಗ ಈ ಚರ್ಚೆ ಸಾಕಾಯಿತು. ನಾಸಾ ಸಮರ್ಥನು ನನ್ನ ದಾರಿ ನೋಡುತ್ತಿದ್ದಾನು. ಇನ್ನೊಮ್ಮೆ ಯಾವಾಗಲಾದರೂ ನಾನು ಪುನಃ ಬಂದೇನು. ನೀನು ಈಗ ಧ್ಯಾನದ ಅಭ್ಯಾಸವನ್ನು ತೀವ್ರತೆಯಿಂದ ಮಾಡು. ನೀನು ಹೀಗೆ ಮಾಡಿದ್ದಾದರೆ, ವ್ಯವಹಾರ ಮಾಡುತ್ತಿದ್ದರೂ ನಿನಗೆ ಮನಃಶಾಂತಿ ಪ್ರಾಪ್ತವಾದೀತು.

ಅನಂತರ ಮಹಾರಾಜರು ಮಥುರೆಯವರ ರಜೆ ತಕ್ಕೊಂಡರು. ಮಥುರೆ ಯವರು ಇತ್ತಲಾಗೆ ತಮ್ಮ ಐವತ್ತೇಳನೇ ವಯಸ್ಸಿನಲ್ಲಿ ತೀರಿಕೊಂಡರು. ಅವರು ಸಮಾಧಿ ಅವಸ್ಥೆ ತನಕ ಮುಟ್ಟಿದ್ದರು.

( ೩೪ ) ಕಲ್ಯಾಣದ ಶ್ರೀರಾಮ ಮಾರುತಿ ಮಹಾರಾಜರು :— ಶ್ರೀ ಗಜಾನನ ಮಹಾರಾಜರು ಮುಂಬಯಿಯಲ್ಲಿ ಇರುವಾಗ, ಅವರು ಒಮ್ಮೆ ಸಹಜ ಕಲ್ಯಾಣಕ್ಕೆ ಹೋಗುವದಾಯಿತು. ಅಲ್ಲಿ ರಾಮ ಮಾರುತಿ ಎಂಬ ಹೆಸರಿನ ಸಾಧು ಗಳು ಇರುತ್ತಿದ್ದರು. ಮಹಾರಾಜರು ಯಾವಾಗ್ಗೆ ಅವರ ದರ್ಶನಕ್ಕೆ ಹೋಗಿದ್ದರೊ ಆ ಸಮಯದಲ್ಲಿ ಅವರು ಒಂದು ಗದ್ದಿಗೆ ಮೇಲೆ ಕೂತಿದ್ದರು, ಮಹಾರಾಜರು ಅವರಿಗೆ ನಮಸ್ಕಾರ ಮಾಡಿದರು. ಮತ್ತು, " ನಿಮ್ಮ ಯೋಗಾಭ್ಯಾಸವು ಹ್ಯಾಗೆ ಹ್ಯಾಗೆ ನಡೆದದೆ, ಎಲ್ಲಿ ತನಕ ಮುಂದರಿಸಿದ್ದೀರಿ " ಎಂದು ಪ್ರಶ್ನೆ ಮಾಡಿದರು. ಶ್ರೀರಾಮ ಮಾರುತಿ ಮಹಾರಾಜರು ( ಪಾಟಿಯ ಮೇಲೆ ಬರೆದು ) ಅಂದರು, " ನಾವಿಬ್ಬರೂ ಒಂದೆ ಪಾವಟಣಿಗೆ ಮೇಲೆ ಇರುವಾಗ ನೀನು ಈ ಪ್ರಶ್ನೆ ಮಾಡ ಬಹುದೋ ? " ನನಗೆ ದೊಡ್ಡ ಆಶ್ಚರ್ಯ ಕಾಣುತ್ತದೆ.

ಶ್ರೀರಾಮ ಮಾರುತಿ ಮಹಾರಾಜರು ಮೌನವ್ರತ ಧಾರಣೆ ಮಾಡಿದ್ದ ರಿಂದ, ಏನೇನು ಮಾತಾಡಬೇಕೊ ಅದನ್ನು ಸ್ಲೇಟಿನ ಮೇಲೆ ಬರೆದು ತೋರಿ ಸುತ್ತಿದ್ದರು. " ನಾನೂ ನೀನೂ ಚೌರಂಗಿನಾಥರ ಅವತಾರಿಗಳಿದ್ದೇವೆ," ಹೀಗೆ ಅವರು ಪಾಟಿಯ ಮೇಲೆ ಬರೆದು ಮಹಾರಾಜರಿಗೆ ತೋರಿಸಿದರು. ನಂತರ ಮಹಾ ರಾಜರು ಅವರ ಅಪ್ಪಣೆ ತಕ್ಕೊಂಡು ತಿರುಗಿ ಮುಂಬಯಿಗೆ ಬಂದರು.

ಇದರ ನಂತರ ಶ್ರೀರಾಮ ಮಾರುತಿ ಮಹಾರಾಜರು ಎರಡೇ ತಿಂಗ ಳಲ್ಲಿ ಇಹಲೋಕವನ್ನು ತ್ಯಜಿಸಿದರು, ಮಹಾರಾಜರು ಪರೇಲದಲ್ಲಿ ಇರುತ್ತಿದ್ದರು.

ಅಲ್ಲಿ ಶ್ರೀರಾಮ ಮಾರುತಿಯವರ ನಾಲ್ಕೈದು ಮಂದಿ ಶಿಷ್ಯರು ಬಂದರು. ಅವರು ಗಜಾನನ ಮಹಾರಾಜರನ್ನು ಹಿಂದೆ ಎಂದೂ ನೋಡಿದ್ದಿಲ್ಲ. ಅವರು ಹ್ಯಾಗಿದ್ದಾರೆ, ಅವರ ಸ್ವಭಾವ ವಗೈರೆ ಅವರಿಗೇನೂ ಗೊತ್ತಿದ್ದಿಲ್ಲ. ಮಹಾರಾಜರು ಕೂಡಿಕೊಂಡ ಖೋಲಿಯಲ್ಲಿ ಅವರು ಬಂದರು, ಮತ್ತು ಇವರೇ ಗಜಾನನ ಮಹಾರಾಜರಿದ್ದಾರೆಂತ ಗುರ್ತವಿಲ್ಲದೆ ಅವರ ಕೂಡೇ ಮಾತಾಡಲಾರಂಭಿಸಿದರು. ಮಹಾರಾಜರಿಗೆ ಸಹ ಈ ಮಂದಿ ಯಾರು ಇದ್ದಾರೆಂಬದು ಗೊತ್ತಿದ್ದಿಲ್ಲ. ಮಹಾರಾಜರು ಹತ್ತು ದಿನೈದು ವರ್ಷ ಪರೇಳದಲ್ಲಿರುತ್ತಿದ್ದರು, ಆದರೆ ಮಂದಿಯ ಮನೆಗಳಿಗೆ ಹೋಗುವದು ಅಪರೂಪ. ಒಮ್ಮೊಮ್ಮೆ ನಾನಾ ಸಮರ್ಥರ ಮಿತ್ರರು ದಸರಾ, ಕೋಜಾಗಿರಿ, ಪೂರ್ಣಿಮೆ ಇಂಥ ದಿವಸಗಳಲ್ಲಿ ಇಸ್ಪೇಟ ಆಡಲಿಕ್ಕೆ ಮಹಾರಾಜರನ್ನು ಕರೆಸುತ್ತಿದ್ದರು. ಆದರೆ ಅವರು ಎಂದೂ ಯಾರ ಕಡೆಗೂ ಹೋಗುತ್ತಿದ್ದಿಲ್ಲ. ಈ ನಾನಾ ಸಮರ್ಥರ ಮಿತ್ರರು ನಾನಾ ಸಮರ್ಥರ ಮನೆಯಲ್ಲಿಯೇ ಆಡುತ್ತಿದ್ದರು.

ಮಹಾರಾಜರ ದರ್ಶನಕ್ಕೆ ಬಂದ ಈ ಮಂದಿಯಲ್ಲಿ ಕೆಲವರು ದಾದರ ಎಂಬಲ್ಲಿ ಇರುತ್ತಿದ್ದರು, ಕೆಲವರು ಕಲ್ಯಾಣದಲ್ಲಿರುತ್ತಿದ್ದರು. ಅವರನ್ನು ನೋಡಿ ಮಹಾರಾಜರಿಗೆ ಸ್ವಲ್ಪ ಆಶ್ಚರ್ಯವಾಯಿತು. ಆ ಸಮಯದಲ್ಲಿ ಮನೆಯಲ್ಲಿರುವ ಎಲ್ಲ ಪುರುಷರು ಆಫೀಸಿಗೆ ಹೋಗಿದ್ದರು. ಮಹಾರಾಜರು ಆ ಬಂದ ಮಂದಿಯೊಳಗೆ ಒಬ್ಬರಿಗೆ ಹೆಸರು ಕೇಳಿದರು, ಅವರು ತಮ್ಮ ಹೆಸರು ಗುಪ್ತೆ ಎಂಬದಾಗಿ ಹೇಳಿದರು. ಅನಂತರ ಈ ಗುಪ್ತೆ ವ ಮಹಾರಾಜರಿಗೆ ಈ ಮುಂದಿನಂತೆ ಸಂಭಾಷಣೆಯಾಯಿತು.

ಮಹಾರಾಜ:— ನೀವೆಲ್ಲರೂ ಇಲ್ಲಿ ಬರುವ ಉದ್ದಿಶ್ಯವೇನು?

ಗುಪ್ತೆ:— ಈ ಚಾಳನ್ನು ಹುಡುಕಿ ತೆಗಿಯಲಿಕ್ಕೆ ನಮಗೆ ಸುಮಾರು ಒಂದೂವರೆ ತಾಸು ಹತ್ತಿತು. ಕೆಳಗೆ ಒಬ್ಬ ಮನುಷ್ಯನಿದ್ದನು, ಅವನಿಗೆ ಸಮರ್ಥರು ಎಲ್ಲಿ ಇರುತ್ತಾರೆಂತ ನಾವು ಕೇಳಿದೆವು. ಮೇಳಿಗೆ ಮೇಲೆ ಹೋಗಲಿಕ್ಕೆ ಅವನು ಹೇಳಿದ ಪ್ರಕಾರ ನಾವು ಇಲ್ಲಿಗೆ ಬಂದೆವು.

ಮಹಾರಾಜ:— ಅದೆಲ್ಲ ಸರಿ, ಆದರೆ ನನ್ನ ಕೂಡ ನಿಮ್ಮ ಕೆಲಸವೇನು?

ಗುಪ್ತೆ:— ನಮಗೆ ನಿಮ್ಮ ಕೂಡ ಏನೂ ಕಾರ್ಯವಿಲ್ಲ, ಸಮರ್ಥರ ಮನೆಯಲ್ಲಿರುವ ಗಜಾನನ ಮಹಾರಾಜರನ್ನು ಕಾಣಲಿಕ್ಕೆ ನಾವು ಬಂದಿರುತ್ತೇವೆ.

ಮಹಾರಾಜ:— ಅವರ ವಿಷಯ ಯಾರು ನಿಮಗೆ ಮಾಹಿತಿ ಕೊಟ್ಟರೆಂತ ನನಗೆ ಹೇಳುವಿರಾ? ನೀವು ಉದಾರ ಮನಸ್ಸಿನಿಂದ ಎಲ್ಲ ಸಂಗತಿ ಹೇಳಿದ್ದಾದರೆ, ನಾನಾದರೂ ಸತ್ಯಸ್ಥಿತಿಯನ್ನು ಸಂಪೂರ್ಣವಾಗಿ ಹೇಳುವೆನು.

ಆದರಿಂದ ನೀವು ಮೋಸ ಹೋಗಲಾರಿರಿ, ಆಗ ನಿಮ್ಮ ಉದ್ದೇಶವು ಯೋಗ್ಯ ರೀತಿಯಿಂದ ಪೂರ್ಣವಾದೀತು. ಇಲ್ಲವಾದರೆ ನೀವು ವಿಪರೀತ ಬಗೆಯಲ್ಲಿ ಸೊಡಕಿ ಬೀಳುವಿರಿ, ನಿಮಗೆ ಸಹಾಯವಾಗುವದು ನನಗೆ ಇಚ್ಛಾ ಆದೆ. ನಾನು ನಿಮಗೆ ಹೇಳುವ ಸತ್ಯಾಸತ್ಯಗಳ ವಿಷಯು ನಿಮಗೆ ಮುಂದೆ ಸಮಾಧಾನವಾದೀತು.

ಗುಪ್ತೆಃ— ಶ್ರೀರಾಮ ಮಾರುತಿಯವರು ಈ ಲೋಕವನ್ನು ಬಿಟ್ಟು ಹೋದರು. ಉರಣದಲ್ಲಿ ಮಹಾಲಕರ ಆಗಿರುವ ನನ್ನ ಆಪ್ತರೊಬ್ಬರು ಇದ್ದಾರೆ. ಅವರು ಧಾರ್ಮಿಕರೂ ನಿಷ್ಕಪಟ ಸ್ವಭಾವದವರೂ ಇರುತ್ತಾರೆ. ಮಹಾತ್ಮರೆಂಬ-ದರ ಮೇಲಿಂದ ಯಾರೊಬ್ಬರನ್ನು ಅವರು ಶಿಫಾರಸ ಮಾಡದೆ, ತನ್ನ ಸ್ವಂತದ ಅನುಭವದ ಮೇಲಿಂದಲೇ ಯಾವನನ್ನಾದರೂ ಪರೀಕ್ಷಿಸಿ ಹೇಳುವರು. ಇದಲ್ಲದೆ ಬರೆ ಹೊರಗಿನ ನೋಟದ ಮೇಲಿಂದ ಮೋಸ ಹೊಂದುವವರಲ್ಲ, ಅವರು ಹೇಳಿದ್ದೇನಂದರೆ– "ನಮ್ಮ ಕಾಯಸ್ಥ ವರ್ಗದವರಲ್ಲಿ ಶ್ರೀರಾಮ ಮಾರುತಿಯವರ ಗಾದಿಗೆ ಯೋಗ್ಯರಾದವರು ಶ್ರೀ ಗಜಾನನ ಮಹಾರಾಜರೊಬ್ಬರೇ, ಅವರು ಕೆಲವು ವರ್ಷಗಳಿಂದ ಸಮರ್ಥರ ಕೂಡ ಇರುತ್ತಾರೆ." ಆದ್ದರಿಂದ ನಾವು ಇಲ್ಲಿಗೆ ಬಂದಿರುತ್ತೇವೆ.

ಮಹಾರಾಜರುಃ— ಈಗ ತಿಳಿಯಿತು. ಈಗ ನಾನು ಸಂಕ್ಷೇಪವಾಗಿ ಗಜಾನನ ಮಹಾರಾಜರ ವಿಷಯುವಾಗಿ ಹೇಳುವೆನು. ನೀವು ನನ್ನಲ್ಲಿ ವಿಶ್ವಾಸ ಇಡಿರಿ, ಅಥವಾ ಬಿಡಿರಿ, ಅದನ್ನು ನಾನು ನಿಮ್ಮ ನಿರ್ಣಯಕ್ಕೆ ಬಿಟ್ಟು ಬಿಡುವೆನು. ಮಹಾಲಕರ, ರಾವಸಾಹೇಬ ಸುಳೆಯವರು ಗಜಾನನ ಮಹಾರಾಜರ ದೇಹದ ನ್ಯೂನತ್ವವೇನಾದರೂ ನಿಮಗೆ ಹೇಳಿರುವರೋ ?

**ಗುಪ್ತೆಃ**— ಇಲ್ಲ, ಆ ವಿಷಯದಲ್ಲಿ ಅವರು ನಮಗೆ ಏನೂ ಹೇಳಿರುವದಿಲ್ಲ.

**ಮಹಾರಾಜರುಃ**— ಒಳ್ಳೇದು, ನಾನು ಹೆಚ್ಚಿಗೆ ಏನೂ ಪ್ರಶ್ನೆಗಳನ್ನು ಕೇಳುವದಿಲ್ಲ, ಅವರ ಸಂಬಂಧ ನನ್ನ ಅಭಿಪ್ರಾಯುವನ್ನು ನಾನು ನಿಮಗೆ ಹೇಳುವೆನು. ಈ ಅಭಿಪ್ರಾಯವು ಕೇಳಿದ ಮಾತ್ರದಿಂದಲ್ಲ, ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಅವರು ನನ್ನನ್ನು ಮದ್ಯಪಾನದ ವ್ಯಸನದಲ್ಲಿ ಎಳೆದಿದ್ದರು, ಆದರೆ ನನ್ನ ಸುದೈವದಿಂದಲೇ ನಾನು ಆದರೊಳಗಿಂದ ಬಿಡುಗಡೆ ಹೊಂದಿದೆ. ಅವನು ಏನೇನೂ ಕೆಲಸಕ್ಕೆ ಬಾರದ ಮನುಷ್ಯನಿದ್ದಾನೆ, ಪಕ್ಕಾ ಸೆರೆಕುಡಕನೂ ಇದ್ದಾನೆ. ಮಾವಳಿಯಂತೆ ಅವನು ಹೆಂಗಸರನ್ನು ಸಹ ಬೈಯುತ್ತಾನೆ. ಲೋಕದ ಅಥವಾ ಇತರ ಜನರ ಅಭಿಪ್ರಾಯಕ್ಕೆ ಅವನು ಕವಡಿ ಕಿಮ್ಮತು ಕೊಡುವದಿಲ್ಲ. ಅವನು ಅನ್ನ ಸೇವನೆ ಮಾಡುವದು ಅಪರೂಪ, ಎಷ್ಟೋ ವರ್ಷಗಳ ಹಿಂದಿನ ಸುಸ್ಥಿಯನ್ನು ತೆಗೆದು ಅವನು ಇತರರನ್ನು ಅವರ ಇಷ್ಟಮಿತ್ರರ ಸಮ್ಮುಖದಲ್ಲಿ ಕುಚೇಷ್ಟೆ ಮಾಡುತ್ತಾನೆ. ಅವನು ಅಸಹ್ಯವಾದ ಮಾತುಗಳನ್ನು, ಗಾದೆಗಳನ್ನು

ಉಚ್ಚರಿಸುವನು; ಮತ್ತು ಯಾರಾದರೂ ಆ ವಿಷಯದಲ್ಲಿ ಅವನಿಗೆ ದೋಷ ಕೊಟ್ಟರೆ, ಅವಕ್ಕೆ ಪಾರಮಾರ್ಥಿಕ ಅರ್ಥವನ್ನು ಹಚ್ಚುತ್ತಾನೆ. ಅವನು ಚಮತ್ಕಾರಗಳನ್ನು ಮಾಡುತ್ತಾನೆಂತ ಕೆಲವರು ಅನ್ನುತ್ತಾರೆ. ಆದರೆ ಅವನು ಅಘೋರಪಂಥದವ (ದುಷ್ಟ ತಂತ್ರಾದಿಗಳನ್ನು ಮಾಡುವವ) ನಿದ್ದಾನೋ, ಅಥವಾ ಕರ್ಣಪಿಶಾಚಿಯ ಉಪಾಸಕನಿದ್ದಾನೋ, ಅಥವಾ ಅವೆಲ್ಲ ಕಣ್ಣುಕಟ್ಟಿನ (Hypnotism) ಕಾರ್ಯವೋ ನನಗೆ ತಿಳಿಯದು. ನನ್ನಂಥವನು ನಾನಾ ಸಮರ್ಥಗೆ ಅವನ ವಿಷಯ ಹ್ಯಾಗೆ ಏನಾದರೂ ಹೇಳಲಿಕ್ಕೆ ಬರುತ್ತದೆ? ಮೊದಲನೇ ಮಾತೇನೆಂದರೆ, ಅವನು ಹೇವನಿದ್ದಾನೆ. ಎರಡನೇದೇನಂದರೆ ಅವನು ನಾನಾ ಸಮರ್ಥರ ಸಂಬಂಧಿಕನಿದ್ದಾನೆ, ಮೂರನೇ ನಾನಾ ಸಮರ್ಥರು ಅವನನ್ನು ತನ್ನ ಗುರು ಎಂತ ಮನ್ನಿಸುತ್ತಾರೆ, ಮತ್ತು ಅವರ ಮನೆಯವರೆಲ್ಲರೂ ಚಿಕ್ಕವರೂ ದೊಡ್ಡವರೂ ಅವನ ಮೇಲೆ ಪೂರ್ಣ ವಿಶ್ವಾಸ ಉಳ್ಳವರಿದ್ದಾರೆ. ಅವನ ಮತ ಕೇಳದ ವಿನಹ ಅವರು ಏನೊಂದೂ ಮಾಡುವದಿಲ್ಲ, ಮತ್ತು ಅವನ ಆಜ್ಞೆಯನ್ನು ಎಂದೂ ಮೀರುವದಿಲ್ಲ. ಹೀಗನ್ನುವದರಿಂದ ಅವರ ಮನೆಯಲ್ಲಿಯ ಪ್ರತಿಯೊಬ್ಬರು ಅವನ ಮಾತನ್ನು ಪ್ರತಿ ಒಂದು ಸಂಗತಿಯಲ್ಲಿ ತಪ್ಪದೆ ನಡಿಸುತ್ತಾರೆಂತ ನನ್ನ ಅಂಬೋಣವಲ್ಲ; ಆದರೆ ನಾನು ಮೇಲೆ ಹೇಳಿದ್ದು ಒಟ್ಟಾರೆ ಮೇಲಿಂದ ನಿಜವಾಗಿರುವದು. ಅವನಿಗೆ 'ದೇವಮಾಮಾ' ಅಂತ ಅವರೆಲ್ಲರೂ ಕರೆಯುತ್ತಾರೆ. ಈ ಪ್ರಕಾರ ಸ್ಥಿತಿ ಇರುವಾಗ ಅವನ ಆಚರಣೆಯು ನನ್ನ ಮನಸ್ಸಿಗೆ ಬರುವದಿಲ್ಲವೆಂತ ನಾನು ನಾನಾ ಸಮರ್ಥರಿಗೆ ಹ್ಯಾಗೆ ಹೇಳಲಿ? ಗಜಾನನ ಮಹಾರಾಜರ ಮೂಲಸ್ಥಾನವಾದ ಅಕೋಲೆಯಲ್ಲಿ ನಾನೂ ರಹಿವಾಸಿಯಾಗಿರುತ್ತೇನೆ. ಇಂಥ ಮನುಷ್ಯನನ್ನು ಶ್ರೀರಾಮ ಮಾರುತಿ ಮಹಾರಾಜರಂಥ ಸತ್ಪುರುಷರ ಗಾದಿಯ ಮೇಲೆ ಕೂಡ್ರಿಸುವದೆಂದರೆ, ಆ ಮಹಾತ್ಮರ ಸ್ಮೃತಿಗೆ ಅವಮಾನ ಮಾಡುವದಾಗುವದು. ಇಂಥಾದ್ದೊಂದು ಕೆಲಸ ಮಾಡಿದಿರೆಂದರೆ ಆ ಮಹಾನ್ ಸಾಧುಗಳ ಶಿಷ್ಯರು ಲೋಕಾಪವಾದಕ್ಕೆ ಮತ್ತು ಜನರ ಪರಿಹಾಸ್ಯಕ್ಕೆ ಪಾತ್ರರಾಗುವರು. ಇದಲ್ಲದೆ ಗಜಾನನನು ಹೆಳವನಿರುವದರಿಂದ ಎಲ್ಲಿ ಕೂತಿರುವನೋ ಅಲ್ಲೇ ಶೌಚಕ್ರಿಯಾದಿಗಳನ್ನು ಮಾಡುವನು. ಮತ್ತು ಹೆಂಗಸರು ಎದುರಿಗಿದ್ದರೂ ಅನುಮಾನಿಸುವದಿಲ್ಲ, ಹೀಗೆ ಅವನ ಬಾಹ್ಯ ಕ್ರಿಯೆಗಳೆಲ್ಲ ಲೌಕಿಕ ದೃಷ್ಟಿಯಿಂದ ದೋಷಾಸ್ಪದವಾಗಿವೆ. ಅವನ ಅಂತರ ವೃತ್ತಿ ಹ್ಯಾಗಿರುವದೆಂದು ನಾನೇನೂ ಹೇಳಲಾರೆ. ಸದ್ಯದಲ್ಲಿ ಅವನು ಪರಊರಿಗೆ ಹೋಗಿರುತ್ತಾನೆ. ಮತ್ತು ಒಂದೆರಡು ದಿನಗಳಲ್ಲಿ ತಿರುಗಿ ಬರುವನು. ನೀವು ಅವನನ್ನು ಸ್ವತಃ ನೋಡಿ ಅವನ ಸಂಬಂಧ ಎಲ್ಲ ಸಂಗತಿಗಳನ್ನು ತಿಳಕೊಳ್ಳಬೇಕು. ನಾನು ಇಂದು ರಾತ್ರಿಯ ಗಾಡಿಯಿಂದ ಹೋಗುವೆನು. ಮತ್ತೇನಾದರೂ ಕಾರಣ ನಿಮಿತ್ತ ನನ್ನ ಪ್ರಯಾಣವು ಮುಂದರಿಸಿದ್ದಾದರೆ ನಾವೆಲ್ಲರೂ ಗಜಾನನ ಮಹಾರಾಜರ ಸಮಕ್ಷಮ ಕೂಡುವೆವು. ಅವರ ಸಮಕ್ಷಮ ಮಾತ್ರ ನಾನು ಏನೂ ಹೇಳಲಿಕ್ಕಿಲ್ಲ. ನೀವು ನಿಮ್ಮಷ್ಟಕ್ಕೆ

ಎಲ್ಲ ಸಂಗತಿಗಳನ್ನು ಕಂಡು ನಿಮ್ಮ ಸ್ವಂತ ಅಭಿಪ್ರಾಯವನ್ನು ಮಾಡಿಕೊಳ್ಳ ಬೇಕು.

ಈಗ ನೀವೆಲ್ಲರೂ ಹೋಗಿರಿ. ಯಾರೋ ಒಬ್ಬರ ಕಡೆಯಿಂದ ಗಜಾನನ ಮಹಾರಾಜರ ಸದ್ಗುಣಗಳನ್ನು ಮಾತ್ರ ನೀವು ಕೇಳಿರುವದರಿಂದ, ನೀವು ಮನ ಸ್ಸಿನಿಂದ ಅವನನ್ನು ಖರೇ ಸತ್ಪುರುಷನ ಪದವಿಗೆ ಏರಿಸಿರುವಿರಿ. ಆದರೆ ಈಗ ಹೋಗಿರಿ, ಮತ್ತು ಇನ್ನೊಮ್ಮೆ ನಾವು ಭೆಟ್ಟಿಯಾದಾಗ ವಿಚಾರಪೂರ್ವಕ ಅವನ ವಿಷಯು ನಿಮ್ಮ ಮತವೇನೆಂಬದು ನನಗೆ ತಿಳಿಸಿರಿ. ಇನ್ನೊಮ್ಮೆ ತಪ್ಪದೆ ಇಲ್ಲಿಗೆ ಬನ್ನಿರಿ.

ಮಹಾರಾಜರು ಇಷ್ಟು ಹೇಳಿದಾಗಲೆ, ಆ ನಾಲ್ಕೈದು ಶಿಷ್ಯರಪೈಕಿ ಕುಶಲ ಮತ್ತು ಚತುರ ಬುದ್ಧಿಯುವನೊಬ್ಬನು, ಒಮ್ಮೆಲೆ ಮಹಾರಾಜರ ಪಾದ ಗಳನ್ನು ಹಿಡಿದು, ಅವನ್ನು ಬಿಡದೆ, "ನೀವೇ ಗಜಾನನ ಮಹಾರಾಜರು." ಎಂದು ಅನ್ನಲಿಕ್ಕೆ ಆರಂಭಿಸಿದನು. ಕಟ್ಟಕಡೆಗೆ ಮಹಾರಾಜರು ಅದನ್ನು ಒಪ್ಪಿ ಕೊಳ್ಳಬೇಕಾಯಿತು. ಮತ್ತು ಅಂದದ್ದೇನಂದರೆ,— "ನಾನು ಖರೆಯಾಗಿ ಮಹಾರಾಜನಲ್ಲ; ಆದರೆ ಕೆಲವು ಮಂದಿ ಹಾಗನ್ನುತ್ತಾರೆ. ಒಳ್ಳೇದು, ನೀವು ಈಗ ನನ್ನನ್ನು ಗಜಾನನ ಮಹಾರಾಜರೆಂತ ತಿಳಕೊಂಡಿರಿ. ನೀವು ಹೇಳುವದೇನು?

ಆ ಗೃಹಸ್ಥರೆಲ್ಲರೂ— ಹೆಚ್ಚಿಗೇನಿಲ್ಲ, ನೀವೇ ಶ್ರೀರಾಮ ಮಾರುತಿ ಮಹಾ ರಾಜರ ಗಾದಿಗೆ ಬರಲಿಕ್ಕೆ ಯೋಗ್ಯರಿದ್ದೀರಿ.

ಮಹಾರಾಜ- ನಾನು ಗಜಾನನ ಮಹಾರಾಜರ ವಿಷಯು ಇಷ್ಟು ಹೊತ್ತು ಏನು ಅಂದಿದ್ದೇನೋ ಆದಕ್ಕೆ ಸರಿಯಾಗಿಯೇ ಇದ್ದೇನೆ, ಹೆಚ್ಚೂ ಇಲ್ಲ, ಕಡ ಮೆಯಯೂ ಇಲ್ಲ.

ಇದನ್ನು ಕೇಳಿ ಅವರೆಲ್ಲರೂ ನಕ್ಕರು. ಅವರಿಗೆ ಚಹಾಪಾನವು ಕೊಡ ಲಾಯಿತು, ಆ ಮೇಲೆ ಮಹಾರಾಜರು ಅವರಿಗಂದರು, "ಖರೆಯಾಗಿ ನಾನು ಅಂಥ ಮರ್ಯಾದಿಗೆ ಯೋಗ್ಯ ಪಾತ್ರನಲ್ಲ. ನನ್ನ ವ್ಯಸನಗಳೆಲ್ಲ ನಾನು ಬಿಡುವೆ ನೆಂದರೂ, ಇನ್ನೂ ನಾನು ಸಾಧಕದೆಶೆಯಲ್ಲಿದ್ದೇನೆ. ನನಗೆ ಜ್ಞಾನವಾದರೂ ವಿಶೇಷವಿಲ್ಲ. ನಾನು ಏನೇನು ಬಲ್ಲೆನೆಂತ ತೋರುವದೋ ಅದು ನನ್ನ ಸ್ವಂತ ಜ್ಞಾನವಲ್ಲ. ನನ್ನ ಗುರುವು ನನ್ನನ್ನು ತನ್ನ ಕರಣ ಮಾಡಿಕೊಂಡು ನನ್ನ ಮುಖಾಂತರ ಮಾತಾಡುತ್ತಾನೆ. ನಾನು ಮಹಾತ್ಮರ ಹೇಳಿಕೆ ಮೇರೆಗೆ ಮಂದಿಗೆ ತಿಳಿಯದಂತೆ ಜಪವನ್ನು ನನ್ನ ಮನಸ್ಸಿನಲ್ಲಿಯೇ ಮಾಡುತ್ತೇನೆ. ಸದ್ಗುರು ಕೃಪೆ ಯಿಂದ ಅವನನ್ನು ಧ್ಯಾನಿಸುತ್ತೇನೆ. ಮತ್ತು 'ಸೋಹಂ' ಜಪವನ್ನು ಅಂತರದಲ್ಲಿ ಮಾಡುತ್ತಿರುತ್ತೇನೆ. ನನ್ನೊಳಗಿನ ಕಲ್ಮಷಗಳೆಲ್ಲ ಇನ್ನೂ ಜಾಡಿಸಿ ಹೋಗಲಿಲ್ಲ. ಯಾವದಾದರೂ ಕಸಬರಿಗೆಯಿಂದ ಅವು ಜಾಡಿಸಲ್ಪಟ್ಟವೆಂದರೆ, ನಾನು ಯಾವ

ನಾದರೂ ಸತ್ಪುರುಷನ ಗಾದಿಯ ಮೇಲೆ ಕೂಡ್ರಲಿಕ್ಕೆ ಅನುಮಾನಿಸಲಿಕ್ಕಿಲ್ಲ. ಆಗ್ಗೆ ನಾನು ಯಾವದೊಂದು ಗಾದಿಯ ಮೇಲಿಲ್ಲದಿದ್ದರೂ ನನ್ನ ಸದ್ಗುರುವಿನ ಅನುಜ್ಞೆ ಮತ್ತು ಕೃಪೆಯಿಂದ ನಾನು ಯಾರಾದರೂ ಮುಮುಕ್ಷುಗಳಿಗೆ ಪರಮಾರ್ಥ ಮಾರ್ಗವನ್ನು ತೋರಿಸುವೆನು.

ಒಳ್ಳೇದು, ಈಗ ಘಂಟೆ ಐದು ಹೊಡೆದವು; ನೀವು ನಿಮ್ಮ ಗಾಡಿಯನ್ನು ಹತ್ತ ಬೇಕಾಗಿದೆ, ನೀವೆಲ್ಲರೂ ನಾನು ರಾಮ ಮಾರುತಿ ಮಹಾರಾಜರ ಗಾದಿಯನ್ನೇರಬೇಕೆಂತ ಇಚ್ಛೆ ಮಾಡುವದಾದರೆ ಪೂರ್ಣ ವಿಚಾರ ಮಾಡಿ ಇನ್ನೊಂದು ವಾರ ಅಷ್ಟಕ್ಕೆ ತಿರಿಗಿ ಬನ್ನಿ, ಆ ಮೇಲೆ ನೋಡೋಣ.

ಆ ಮೇಲೆ ಆ ನಾಲ್ಕೈದು ಮಂದಿ ಹೋದರು. ಅನಂತರ ಈ ವರೆಗೆ ಅವರ ಪೈಕಿ ಯಾರೂ ಮಹಾರಾಜರನ್ನು ಕಾಣಲಿಕ್ಕೆ ಬರಲಿಲ್ಲ. ಮತ್ತು ರಾಮ ಮಾರುತಿ ಮಹಾರಾಜರ ವರ್ಷಂಪ್ರತಿ ನಡಿಯುವ ಪುಣ್ಯತಿಥಿಗೆ ಬರಲಿಕ್ಕೆ ಅವರಿಗೆ ಆಮಂತ್ರಣ ಕೊಟ್ಟಿಲ್ಲ, ಮಹಾರಾಜರು ಒಂದೆರಡುಸಾರೆ ತಮ್ಮಷ್ಟಕ್ಕೆ ಆ ಉತ್ಸವಕ್ಕೆ ಹೋಗಿದ್ದರು

ನಾನಾ ಸಮರ್ಥರಿಗೆ ಈ ಸಂಗತಿ ತಿಳಿದಾಗ, ಅವರು ಮಹಾರಾಜರಿಗೆ ಈ ನಿವೇದನೆಯನ್ನು ಯಾಕೆ ಸ್ವೀಕರಿಸಲಿಲ್ಲವೆಂತ ಕೇಳಿದರು. ಸಮರ್ಥರಂದರು, ಇದೊಂದು ಉತ್ತಮ ದೇಣಗಿ ಇದ್ದು, ಕಾಯಸ್ಥ ವರ್ಗದವರಿಗೆ ಇದೊಂದು ಕೀರ್ತಿಕಾರಕವಾಗುತ್ತಿತ್ತು. ಅದಕ್ಕೆ ಮಹಾರಾಜರಂದರು, "ಸ್ವತಃಕ್ಕೆ ರಾಮಮಾರುತಿ ಮಹಾರಾಜರ ಗಾದಿಯ ಮೇಲೆ ಕೂಡ್ರಲಿಕ್ಕೆ ನನ್ನ ಆಕ್ಷೇಪವಿದ್ದಿಲ್ಲ. ಅವರು ಮಹಾಪುರುಷರಿದ್ದರು. ಅವರ ಕೃಪೆಯಿಂದ ಅವರ ಕಾರ್ಯವನ್ನು ನಾನು ಜರಗಿಸುತ್ತಿದ್ದೆನು. ಒಂದೇ ಆಕ್ಷೇಪವೇನಂದರೆ,– ನೀವುಗಳೆಲ್ಲರೂ ನನ್ನ ಸಂಗತಿಯ ಸುಖದಿಂದ ತಪ್ಪಿ ಹೋಗುತ್ತಿದ್ದಿರಿ. ಅಲ್ಲಿ ನನ್ನ ಸುತ್ತಲೂ ಅನೇಕ ಪ್ರಕಾರದ ಜನಗಿರುತ್ತಿದ್ದರು. ಅನೇಕ ಶ್ರೀಮಂತ ಜನರು ದರ್ಶನಕ್ಕೆ ಬರುತ್ತಿದ್ದರು. ಇದರಿಂದ, ಯಾರಿಗೆ ಗೊತ್ತು, ನನಗೆ ಅಭಿಮಾನ ಗರ್ವ ಬರುತ್ತಿತ್ತು, ಮತ್ತು ನಿಮ್ಮಂಥವರ ಕೂಡ ಗೆಳೆತನದಿಂದ ನಡಿಯುವದು ಸ್ವಲ್ಪ ಅಪಮಾನವೆನಿಸುತ್ತಿತ್ತು. ನಿನಗೆ ಇದು ಸೇರುತ್ತಿತ್ತೋ? ವಿಚಾರ ಮಾಡಿ ನೋಡು".

ನಾನಾಸಮರ್ಥರು ಮಹಾರಾಜರಿಗೆ ಅಂದರು, "ನೀವು ಇದ್ದಹಾಗೆ ದಯಮಾಡಿ ಇರ್ರಿ, ನಮ್ಮೊಳಗಿಂದ ನಿಮ್ಮನ್ನು ಕಳಕೊಂಡರೆ, ಮತ್ತೇನೇನೂ ಆ ಲುಕ್ಸಾನಿಯನ್ನು ತುಂಬಲಿಕ್ಕಿಲ್ಲ."

ಈ ಸಂಗತಿ ೧೯೧೮ ನೇ ಇಸವಿಯ ನವ್ಹೆಂಬರ ತಿಂಗಳಲ್ಲಿ ಸಂಭವಿಸಿತ್ತು, ಇತ್ತಲಾಗೆ ಮಹಾರಾಜರು ಸ್ವತಃ ಇದನ್ನು ಈ ಚರಿತ್ರಕಾರರಿಗೆ ಹೇಳಿದ್ದರು; ಮತ್ತು ಅವರ ಶಬ್ದಗಳಿಂದಲೇ ಇಲ್ಲಿ ಅದು ವರ್ಣಿಸಲ್ಪಟ್ಟದೆ.

ಇದನ್ನು ಹೇಳಿ ಮುಗಿಸಿದ ಮೇಲೆ ಮಹಾರಾಜರು ಅಂದರು. " ಅದು ಹ್ಯಾಗಾಗದೇಕೊ ಹಾಗೆಯೇ ಆಯಿತು. ನಾನಾದರೊ ಎಷ್ಟರಷ್ಟು ಅಪಾತ್ರ ನಿದ್ದೇನೆ, ನನಗೆ ಬುದ್ಧಿ ಇಲ್ಲ, ನನ್ನ ಆತ್ಮವನ್ನು ನಾನು ಮೊದಲು ಕಳಕೊಂಡಿದ್ದೆ, ಆತ್ಮವನ್ನು ಯಾವಾಗ್ಗೆ ನಾನು ಕಂಡುಕೊಂಡೆ, ಆಗ ನನ್ನ ಇರುವಿಕೆಯು ನನಗೆ ನಿಶ್ಚಯವಾಯಿತು. ಈಗ ನಾನು ಮರಣವೆಂದರೇನೆಂಬುದನ್ನು ಶೋಧಿಸಲಿಕ್ಕೆ ಪ್ರಯತ್ನಿಸುತ್ತೇನೆ, ಅದು ತಿಳಿಯಿತೆಂದರೆ, ದೇವರನ್ನು ಕಂಡುಕೊಳ್ಳಲಿಕ್ಕೆ ನನ್ನಿಂದಾಗುವದು. ಆ ಮೇಲೆ ನನಗೆ ಪೂರ್ಣ ಆನಂದವು ಭೋಗಿಸಲಿಕ್ಕೆ ಸಿಗುವದು, ಮುಂದಿನ ಎಲ್ಲ ಸಂಗತಿಗಳು ತಾವಾಗಿ ಸಂಭವಿಸುವವು.

(೩೭) **ಅನುಗ್ರಹ ಹೊಂದಿದವರು**— ಗಜಾನನ ಮಹಾರಾಜರು ಮುಂಬಯಿಯಲ್ಲಿರುವಾಗ್ಗೆ, ಈ ಕೆಳಗಿನ ಗೃಹಸ್ಥರು ಅವರ ಕಡೆಯಿಂದ ಅನುಗ್ರಹವನ್ನು ಹೊಂದಿದರು. ಶ್ರೀ. ಪಾಟಣಕರ, ಬಾಳಾಸಾಹೇಬ ಗಡಕರಿ ಮತ್ತು ರಾಮಕೃಷ್ಣಪಂತ ಗಡಕರಿ, ಅವರ ಅನುಭವಗಳು ಈ ಪ್ರಕರಣದ ಸಮಾಪ್ತಿಯಾದ ಮೇಲೆ ಜೋಡಿಸಿರುತ್ತಾವೆ ಹಾಗೆಯೇ ರೋಹದ ರಾಜೆ ಮತ್ತು ರಣದಿವೆ ಇವರೂ ಅನುಗ್ರಹವನ್ನು ಪಡೆದಿದ್ದರು.

(೩೮) **ವಾಮನರಾವ ಕುಲಕರ್ಣಿ**— ಮಹಾರಾಜರು ಮುಂಬಯಿಯಲ್ಲಿರುತ್ತಿದ್ದಾಗ, ಅವರ ಅಣ್ಣ ನಾರಾಯಣರಾಯರು ಪೇಣ ವ ಇತರ ಸ್ಥಳಗಳಲ್ಲಿದ್ದ ಅವರ ಮನೆತನದ ಸುಮಾರು ವರ್ಷಕ್ಕೆ ಐನೂರು-ಎಂಟನೂರು ರೂಪಾಯಿ ಉತ್ಪನ್ನ ಬರುವ ಆಸ್ತಿಗಳ ಉತ್ಪನ್ನವನ್ನು ವಸೂಲ ಮಾಡಿಕೊಂಡು ಬರಲಿಕ್ಕೆ ಅವರಿಗೆ ಎಷ್ಟೋ ಸರ್ತಿ ಹೇಳುತ್ತಿದ್ದರು.

ಈ ಪೈಕಿ ಒಮ್ಮೆ ಪೇಣಕ್ಕೆ ಹೋದಾಗ ೧೯೨೦-೨೧ ರಲ್ಲಿ, ಅವರು ಅಲ್ಲಿ ಪ್ರಧಾನರೆಂಬವರಲ್ಲಿ ವಸ್ತಿ ಮಾಡಿದ್ದರು. ತ್ರಿಂಬಕ ಶಿಕೇಕರ ಎಂಬ ಗಜಾನನರ ಮಿತ್ರರೊಬ್ಬರು ಮಹಾರಾಜರ ಕಡೆ ಬಂದು, ರೋಹದ ದಾರಿಯಿಂದ ನಾತೆ ಎಂಬ ಗ್ರಾಮಕ್ಕೆ ಬರಬೇಕೆಂದು ಪ್ರಾರ್ಥಿಸಿದರು. ಅವರಂದರು, ತನ್ನ ಸಹೋದರಿ ಕೇರೂಬಾಯಿಯನ್ನು ರೋಹಾದಿಂದ ಆಕೆಯು ಗಂಡನ ಮನೆಯಿಂದ ಕರಕೊಂಡು ಬರುವದದೆ. ಮಹಾರಾಜರಿಗೆ ರೋಹಾದಲ್ಲಿ ಯಾರಾದರೂ ಪರಿಚಯು ಇಲ್ಲದ್ದರಿಂದ ಅವರ ಕೂಡ ಹೋಗಲಿಕ್ಕೆ ಸ್ವಲ್ಪ ಅನುಮಾನಿಸಿದರು. ಆದರೆ ತ್ರಿಂಬಕರಾಯರು ಬಹಳ ಆಗ್ರಹ ಮಾಡಿದ್ದರಿಂದ ಮಹಾರಾಜರು ಕಡೆಗೆ ಒಪ್ಪಿಗೆ ಕೊಟ್ಟರು.

ಮರುದಿನ ತ್ರಿಂಬಕರಾಯರು, ಅವರ ಮಿತ್ರರು ಮತ್ತು ಮಹಾರಾಜರು ಒಂದು ಚಕ್ಕಡಿಗಾಡಿ ಮೇಲೆ ಕೂತು ಮುಂಜಾನೆ ಹೊರಟು, ಸಂಜೆ ಹೊತ್ತಿಗೆ ರೋಹಕ್ಕೆ ಮುಟ್ಟಿದರು.

ಮಹಾರಾಜರು ಆಗ ಮಲಿನ ವಸ್ತ್ರಗಳನ್ನು ಧರಿಸಿದ್ದರು; ಅವರು ತ್ರಿಂಬಕರಾಯರಿಗೆ ತಾನು ಅವರ ಆಳೆಂದು ಜನರಿಗೆ ಹೇಳೆಂದು ತಿಳಿಸಿದರು. ತ್ರಿಂಬಕರಾಯರು ಇದಕ್ಕೆ ಒಪ್ಪಲಿಲ್ಲ. ಆದರೆ ಪ್ರಸಂಗ ಇಂಥಾದ್ದಿತ್ತಲ್ಲ, ಮಹಾರಾಜರು ಅಪ್ರಸಿದ್ಧರಾಗಿರುವದು ಜರೂರ ಇತ್ತು.

ರೋಹಾಕ್ಕೆ ಬಂದ ಮೇಲೆ ತ್ರಿಂಬಕರಾಯರು ತಮ್ಮ ತಂಗಿಯ ಕಡೆಗೆ ಹೋಗಿ, ಮಹಾರಾಜರು ತಮ್ಮನ್ನು ಹ್ಯಾಗೆ ತಿಳಿಯಬೇಕೆಂತ ಹೇಳಿದ್ದನ್ನು ಆಕೆಗೆ ಹೇಳಿದರು. ಮಹಾರಾಜರು ಮಹಾತ್ಮರಿದ್ದಾರೆಂಬದನ್ನು ಆಕೆಯು ಕೇಳಿದ್ದರಿಂದ ಆಕೆಗೆ ಈ ಮಾತು ಸರಿ ಬೀಳಲಿಲ್ಲ; ಇವರೆಲ್ಲರೂ ಆಕೆಯನ್ನು ತಮ್ಮ ಸಂಗಡ ಕರಕೊಂಡು ಹೋಗಲಿಕ್ಕೆ ಬಂದಿರುವರೆಂದು ಆಕೆಗೆ ತಿಳಿದಾಕ್ಷಣ ಬಹಳ ಸಂತೋಷವಾಯಿತು. ಮತ್ತು ಗಂಡನ ಮನೆಯವರೂ ಕಬೂಲಿ ಕೊಟ್ಟಾರೆಂದು ಆಶಿಸುತ್ತಿದ್ದಳು.

ಅವಳ ಕುಟುಂಬದಲ್ಲಿ, ಕೇರೂಬಾಯಿ ಗಂಡ ವಾಮನರಾವ ಇವರು ಮಾಮಲೇದಾರ ಕಚೇರಿಯಲ್ಲಿ ಕಾರಕೂನರು, ಅವರ ತಂದೆ ನಾರಾಯಣರಾವ, ಮತ್ತು ತಾಯಿ, ಚಿಕ್ಕಮಕ್ಕಳು ಮತ್ತು ಇತರ ಆಪ್ತರು ಇದ್ದರು. ಕೇರೂಬಾಯಿ ವಯಸ್ಸಿಗೆ ಬಂದು ಎಂಟು ವರ್ಷಗಳಾದರೂ ಆಕೆಯ ಹೊಟ್ಟೆಯಲ್ಲಿ ಮಕ್ಕಳಾಗಲಿಲ್ಲ. ಕೆಲವರನ್ನುತ್ತಿದ್ದರಲ್ಲ, ಆಕೆಗೆ ಮೈಯೊಳಗೆ ದೆವ್ವ ಪ್ರವೇಶಿಸಿಯದೆ, ಅದ್ದರಿಂದ ಮಕ್ಕಳಾಗುವದಿಲ್ಲ.

ಈ ಅತಿಥಿಗಳು ಬಂದಿರುವಾಗ್ಗೆ ನಾರಾಯಣರಾಯರು ಮನೆಯಲ್ಲಿದ್ದರು, ಅವರು ಈ ಅಭ್ಯಾಗತರ ಯೋಗ್ಯ ಆದರ ಸತ್ಕಾರ ಮಾಡಿದರು. ಆದರೆ ಮಹಾರಾಜರು ಅವರ ಗುರ್ತದವರಲ್ಲದ್ದರಿಂದ ಅವರು ಈ ಕೆಳಗಿನ ಪ್ರಶ್ನೆಗಳನ್ನು ಕೇಳಿದರು.

ನಾರಾಯಣರಾವ:— ನಿಮ್ಮ ಜಾತಿ ಯಾವದು ?

ಮಹಾರಾಜ:— ನಮಗೆ ಜಾತಿ ಇರುವದಿಲ್ಲ.

ನಾರಾಯಣರಾವ:— ನಿಮ್ಮ ತಂದೆಯವರ ಹೆಸರೇನು ?

ಮಹಾರಾಜ:— ಮುರಲೀಧರ.

ನಾರಾಯಣರಾವ:— ನಿಮ್ಮ ಅಡ್ಡಹೆಸರೇನು ?

ಮಹಾರಾಜ:— ಗುಪ್ತ.

ನಾರಾಯಣರಾಯರು ಇನ್ನು ಹೆಚ್ಚಿಗೆ ಪ್ರಶ್ನೆ ಕೇಳಲಿಲ್ಲ. ಇಷ್ಟರೊಳಗೆ ವಾಮನರಾಯರು ಆಫೀಸಿನಿಂದ ಮನೆಗೆ ಬಂದರು, ಅವರು ಅತಿಥಿಗಳ ವಿಚಾರಗ ಮಾಡದಲೇ ಒಮ್ಮಿಂದೊಮ್ಮೆ ಮನೆಯೊಳಗೆ ಹೊಕ್ಕರು. ಆಗ ಈ ಮಂದಿ ಕೇರುಬಾಯಿಯನ್ನು ತನ್ನ ತಂದೆ ಮನೆಗೆ ಕರಕೊಂಡು ಹೋಗಲಿಕ್ಕೆ ಬಂದಿದ್ದಾರೆಂತ ತಿಳಿಯಿತು. ಸಂಜೆ ಊಟದ ಹೊತ್ತಿಗೆ ಮಹಾರಾಜರು ಈ ಬಂದವರ ಗಾಡಿ

ಹೊಡಿಯುವವನೆಂತ ತಿಳಿದು, ಅವರ ಊಟಕ್ಕೆ ಎಲೆಯು ಹೊರಗೆ ಕಟ್ಟೆಯ ಮೇಲೆ ಇಟ್ಟಿತ್ತು. ಭೋಜನಾನಂತರ ಇವರು ಮಲಗುವ ವ್ಯವಸ್ಥೆ ಮಾಡುವದಾಯಿತು. ಮರುದಿನ ತನ್ನ ತಂಗಿಯನ್ನು ತನ್ನ ಕೂಡ ಕಳುಹಿಸಿ ಕೊಡುತ್ತಾರೋ ಇಲ್ಲವೋ ಎಂಬದನ್ನು ಕೇಳಲಿಕ್ಕೆ ತ್ರಿಂಬಕರಾಯರು ಮಹಾರಾಜರಿಗೆ ಹೇಳಿದರು. ಕಳುಹಿಸುವದಾದರೆ ನಾವು ನಸುಕಿನ ವೇಳೆಗೆ ಹೊರಡೋಣ ಎಂದು ಅವರಂದರು, ಆ ಪ್ರಕಾರ ಮಹಾರಾಜರು ವಾಮನರಾಯರ ಕೂಡ ಈ ವಿಷಯವನ್ನು ಎತ್ತಿದರು, ಆದರೆ ಅವರು ಏನೂ ಉತ್ತರ ಕೊಡಲಿಲ್ಲ. ಕೆಲವು ಹೊತ್ತಿನ ಮೇಲೆ ಕೇರೂಬಾಯಿಯು ತನ್ನ ಅಣ್ಣನಕೂಡ ಹೋಗಲಿಕ್ಕೆ ಪರವಾನಿಗೆ ಬೇಡಿದಾಗ ವಾಮನರಾಯರು ಇಷ್ಟು ಸಿಟ್ಟಿಗೆದ್ದರಲ್ಲ, ಆಕೆಗೆ ಸುಮ್ಮನಿರಬೇಕಾಯಿತು. ಮಹಾರಾಜರು ಅವರನ್ನು ಶಾಂತ ಮಾಡುವ ಪ್ರಯತ್ನ ಮಾಡಿದರು; ಆದರೆ ಏನೂ ಉಪಯೋಗವಾಗಲಿಲ್ಲ. ಮಲಗಲಿಕ್ಕೆ ಹೋಗುವ ಮುಂದೆ ಮಹಾರಾಜರು ತ್ರಿಂಬಕರಾಯರಿಗೆ ಅಂದರು, "ನಾಳೆ ಮುಂಜಾನೆ ಏನದು ನೋಡೇನು, ನಾವು ಹತ್ತು ಹೊಡಿಯುವತನಕ ಗಾಡಿ ಹೂಡಬಾರದು."

ಎರಡನೇ ದಿನ ಮುಂಜಾನೆ,–"ನಾನು ವಾಮನರಾಯರ ಕೂಡ ಪುನಃ ಈ ಸಂಗತಿ ಮಾತಾಡುವೆನು, ನೀವು ನಿಮ್ಮ ಪತ್ರದ ಕೂಡ ಸಧ್ಯ ಹೊರಗೆ ಹೋಗಿರಿ," ಎಂದು ಮಹಾರಾಜರು ತ್ರಿಂಬಕರಾಯರಿಗೆ ಹೇಳಿದರು. ವಾಮನರಾಯರ ಮುದುಕ ತಂದೆ ಶೇಗಡಿ (ಒಲೆ) ಹತ್ತರ ಕೂತಿದ್ದರು. ಅಲ್ಲಿಗೆ ಅವರು ಹೋದರು, ಇಷ್ಟರೊಳಗೆ ಅಲ್ಲಿಗೆ ಒಳಗಿಂದ ವಾಮನರಾಯರೂ ಬಂದರು. ಆಗ ಮಹಾರಾಜರು ವಾಮನರಾಯರಿಗೆ ಹೇಳಿದರು, "ಏನು ಕೇರೂಬಾಯಿಗೆ ನಮ್ಮ ಕೂಡ ಕಳುಹಿಸುವಿರಲ್ಲ? ಆಕೆಯು ನಾಲ್ಕೈದು ವರ್ಷಗಳಲ್ಲಿ ತಂದೆ ತಾಯಿಯವರನ್ನು ಕಾಣಲಿಲ್ಲ. ಈಗ ಆಕೆಯ ತಂದೆಯವರು ಬಹಳ ರೋಗ ಪೀಡಿತರಾಗಿದ್ದಾರೆ, ಆಕೆಯನ್ನು ಎಂಟೇ ದಿವಸಗಳಲ್ಲಿ ತಿರುಗಿ ಕಳುಹಿಸುವ ಜವಾಬದಾರಿ ನಾನು ತಕ್ಕೊಳ್ಳುವೆನು, ಆಕೆಯನ್ನು ನಮ್ಮ ಕೂಡ ಕಳುಹಿಸಿದ್ದಾದರೆ ನಮ್ಮ ಮೇಲೆ ನೀವು ಬಹಳ ಉಪಕಾರ ಮಾಡಿದಂತಾಗುವದು."

ವಾಮನರಾವ ಪುನಃ ಸಿಟ್ಟಿಗೆದ್ದು ಅಂದರು, "ನಾನು ಆಕೆಯನ್ನು ಎಂದೂ ಕಳುಹಿಸಲಿಕ್ಕಿಲ್ಲ. ನೀವು ಬಂದಹಾಗೆ ಹೊರಟು ಹೋಗಿರಿ," ಮಹಾರಾಜರಂದರು, "ಹೀಗೆ ಸಿಟ್ಟಿಗೇಳಬೇಡಿರಿ. ನಾನು ಅವರ ಆಳಾಗಿದ್ದರೂ ಎಲ್ಲರ ಹಿತಕ್ಕಾಗಿಯೇ ಇದರ ವಿಚಾರಣೆ ಮಾಡುವದಕ್ಕೆ ಧೈರ್ಯಪಟ್ಟೆ". ವಾಮನರಾವ ನಂತರ ಸ್ವಲ್ಪ ಶಾಂತರಾಗಿ ಅಂದರು, "ಯಾವಾಗ್ಗೆಲ್ಲ ಈಕೆಯನ್ನು ತೌರಮನೆಗೆ ಕಳುಹಿಸುತ್ತೇನೋ ಆವಾಗೆಲ್ಲ ಈಕೆಗೆ ದೆವ್ವ ಹಿಡಿದದೆ ಆದ್ದರಿಂದ ಮಕ್ಕಳಾಗುವದಿಲ್ಲ. ಎಂತ ಅಲ್ಲಿಯವರು ಅನ್ನುತ್ತಾರೆ, ಮತ್ತು ನನ್ನನ್ನು ನಿಂದಿಸುತ್ತಾರೆ. ಆದ್ದರಿಂದ ಈಕೆಯನ್ನು ತೌರಮನೆಗೆ ಕಳುಹಿಸುವದಕ್ಕೆ ನನಗೆ ಇಚ್ಛೆಯಾಗುವದಿಲ್ಲ."

ಅನಂತರ ಮಹಾರಾಜರು ಅವರ ಮುಖವನ್ನು ನೋಡಿ, "ನೀವು ಎಂದಾದರೂ ಉಪವಾಸ ಮಾಡುತ್ತೀರೇನು?" ಎಂದು ಕೇಳಿದರು.

**ವಾಮನರಾವ**:— ಹೌದು, ನಾನು ಉಪವಾಸ ಮಾಡುತ್ತಿರುತ್ತೇನೆ. ಇಲ್ಲಿ ಒಬ್ಬ ಪ್ರಖ್ಯಾತ ಜ್ಯೋತಿಷಿ (ಜೋಯಿಸರು) ಬಂದಿದ್ದರು, ಅವರ ಶಾಸ್ತ್ರ ನೈಪುಣ್ಯ ಕಂಡು, ನನಗೆ ಖಾತ್ರಿಯಾಯಿತು. ಮತ್ತು ಅವರಿಗೆ ನನ್ನ ಜನ್ಮ ಪತ್ರಿಕೆಯನ್ನು ತೋರಿಸಿದೆ, ಅವರು ನನಗೆ ಮೂವತ್ತಾರು ಮಂಗಳವಾರ (ಉಪವಾಸ) ಮಾಡಬೇಕೆಂದು ಹೇಳಿದರು. ಇವತ್ತೇ ಮೂರನೇ ಮಂಗಳವಾರ.

**ಮಹಾರಾಜ**:— ನಿಮಗೆ ಜ್ಯೋತಿಷ್ಯದ ಮೇಲೆ ಪೂರ್ಣ ವಿಶ್ವಾಸವಿದೆ ಏನು? ಈ ಪ್ರಶ್ನೆಯನ್ನು ಕೇಳಿ, ವಾಮನರಾಯರಿಗೆ ಗಾಡಿ ಹೊಡೆಯುವ ಆಳುಮನುಷ್ಯನು ಈ ಪ್ರಶ್ನೆಯನ್ನು ಒಳ್ಳೆ ಶಾಂತ ವ ಗಂಭೀರ ರೀತಿಯಿಂದ ಮತ್ತು ವಿಚಾರಯುಕ್ತನಾಗಿ ಕೇಳುವದೆಂಬದನ್ನು ನೋಡಿ ಆಶ್ಚರ್ಯವಾಯಿತು, ಅವರೂ ವಿಚಾರ ಮಾಡುವವರಾದರು. ಆಗ ಮಹಾರಾಜರು ಪುನಃ ಅದೇ ಪ್ರಶ್ನೆಯನ್ನು ಕೇಳಿದರು, ವ ಮುಂದೆ ಅಂದರು, "ನಿಮ್ಮದು ಜ್ಯೋತಿಷ್ಯದ ಮೇಲೆ ವಿಶ್ವಾಸ ಪದ್ದರೆ, ನಾನೇನು ಹೇಳುವೆನೋ ಅದರ ಮೇಲೆ ವಿಶ್ವಾಸವಿರುವದೋ?" ಎಂದು ಕೇಳಿದ್ದಕ್ಕೆ "ನೀವು ಏನು ಹೇಳುವಿರೋ ಅದು ಸತ್ಯವೆಂದು ನಿರ್ಣಯವಾಗುವದರ ಮೇಲೆ ಇವೆಲ್ಲ ಅವಲಂಬಿಸಿರುವದು." ಎಂದು ಅವರು ಮಹಾರಾಜರಿಗೆ ಉತ್ತರ ಕೊಟ್ಟರು.

ವಾಮನರಾಯರು ಒಳಗೆ ಹೋಗಿ ಪಂಚಾಂಗ ತಕ್ಕೊಂಡು ಹೊರಗೆ ಬಂದರು. ಅವರು ಅದನ್ನು ಮಹಾರಾಜರಿಗೆ ಕೊಟ್ಟರು. ವಾಮನರಾಯರು ಒಳಗೆ ಹೋದಾಗ್ಗೆ ಎಷ್ಟೋ ಶಾಂತರಾಗಿದ್ದರು, ಮತ್ತು ತನ್ನ ಮೇಲೆ ಈ ಆಳು ಮನುಷ್ಯನು ಇಷ್ಟು ವ್ಯಾಪ್ತಿ ಇಡಬೇಕೆಂಬ ವಿಷಯವನ್ನು ವಿಚಾರ ಮಾಡುವಂತೆ ಕಂಡು ಬಂತು.

ಪಂಚಾಂಗದಕಡೆ ನೋಡಿ ಮಹಾರಾಜರಂದರು; "ನನಗೆ ಪಂಚಾಂಗ ನೋಡಲಿಕ್ಕೆ ಬರುವದಿಲ್ಲ; ಆದರೆ ನನಗೆ ಯಾವ ಪ್ರಶ್ನೆಗಳು ನೀವು ಕೇಳುವವವೆಯೊ ಅವುಗಳನ್ನು ನನಗೆ ಹೇಳದೆ ಕಾಗದದ ಮೇಲೆ ಬರೆದು ಇಡಿರಿ." ನಂತರ ಕೈಬೆರಳುಗಳನ್ನು ಒಂದೊಂದನ್ನೇ ಮಡಿಚಿ, ಏನೋ ಗಣಿತ ಮಾಡುವವನಂತೆ ತೋರಿಸಿಕೊಂಡು, ಮಹಾರಾಜರು ಆ ಎಲ್ಲ ಪ್ರಶ್ನೆಗಳಿಗೆ ಎನೇನೂ ತಪ್ಪಿಲ್ಲದೆ ಉತ್ತರ ಕೊಟ್ಟರು. ಇದನ್ನು ನೋಡಿ ವಾಮನರಾಯರು ಚಕಿತರಾದರು. ಆ ಮೇಲೆ ಅವರ ಮನಸ್ಸಿನಲ್ಲಿ ಬೇರೆಯೆ ಭಾವನೆಯು ಉತ್ಪನ್ನವಾಯಿತು. ಮಹಾರಾಜರು ಇವರು ಆಳಲ್ಲಾ. ಜ್ಯೋತಿಷಿಯೂ ಅಲ್ಲ, ಯಾರೋ ಮಹಾನ್ ಸಾಧು

ಗಳಿದ್ದಾರೆ, ಎಂಬ ರೀತಿ ಅವರ ಮನಸ್ಸಿನಲ್ಲಿ ಆಯಿತು, ಅವರು ಮಹಾರಾಜರ ಪಾದಗಳನ್ನು ಬಿಗಿಯಾಗಿ ಅಪ್ಪಿ ಅವುಗಳ ಮೇಲೆ ತನ್ನ ತಲೆಯನ್ನು ಇಟ್ಟರು. ಅನಂತರ ಅಂದರು, "ಮಹಾರಾಜರೇ ನೀವು ಸಾಧುಗಳಿದ್ದೀರಿ. ನನ್ನ ಅಂತಃಕರಣದಲ್ಲಿ ನಿಮ್ಮ ಗುರುತು ಹತ್ತಿತು. ನೀವು ನನಗೆ ಉಪದೇಶ ಮಾಡಿದ ವಿನಃ ನಾನು ನಿಮ್ಮ ಚರಣಗಳನ್ನು ಬಿಡಲಿಕ್ಕಿಲ್ಲ." ಮಹಾರಾಜರು ಅವರ ವಿನಂತಿಯನ್ನು ಮಾನ್ಯ ಮಾಡಿದರು, ಮತ್ತು ಅವರಿಗೆ ಶ್ರೀಕೃಷ್ಣನ ಧ್ಯಾನವನ್ನು ಮಾಡಲಿಕ್ಕೆ ಹೇಳಿದರು, ಅವರು ವಾಮನರಾಯರಿಗೆ "ಸೋಹಂ" ಮಂತ್ರವನ್ನು ಕೊಟ್ಟು ಅಂತರ್ದೃಷ್ಟಿಯನ್ನೂ ಇತ್ತರು. ಮಹಾರಾಜರು ಅವರನ್ನು ತನ್ನ ಮುಂದೆ ಅರ್ಧ ತಾಸು ತನಕ ಕೂಡ್ರಿಸಿಕೊಂಡು ನಂತರ ಅವರ ತಲೆಯ ಮೇಲೆ ಹಸ್ತವನ್ನಿಟ್ಟು ಮನಸ್ಸಿನಲ್ಲೇ 'ಸೋಹಂ' ದ ಜಪವನ್ನು ಮಾಡ ಹೇಳಿದರು. ಆಗ ವಾಮನರಾಯರಿಗೆ ತೇಜಃಪುಂಜ ಶ್ರೀ ಕೃಷ್ಣಮೂರ್ತಿ ಮತ್ತು ಅದರ ಹತ್ತಿರ ಸುಂದರವ ತೇಜಸ್ವಿ ಒಂದು ಆಕಳು ಕಾಣಿಸಿತು.

"ತಾವು ಆಳು ಮನುಷ್ಯನಂತ ತೋರಿಸಿಕೊಂಡಿರಿ; ಆದರೆ ನೀವು ಆಳು ಎಂದೂ ಅಲ್ಲ, ನೀವು ಖರೆಯಾಗಿ ಯಾರಿದ್ದೀರಿ ಅದನ್ನು ಹೇಳಿರಿ, ಹೀಗೆ ಹೇಳಿ, ಅವರು ಮಹಾರಾಜರಿಗೆ ಆದಿನ ಹೋಗಲಿಕ್ಕಂತು ಬಿಡಲಿಲ್ಲ; ಅದಲ್ಲದೆ ಆ ದಿವಸದ ರಜಾತಕೊಂಡು,ಅವರ ಅತಿಥ್ಯವನ್ನು ಸ್ವತಃ ಮಾಡುವ ಉದ್ದಿಶ್ಯ ಮನೆಯಲ್ಲೆ ಉಳಿದರು ಅನಂತರ ಮಹಾರಾಜರು ತಾನು ಯಾರು ಎಂಬ ಸಂಗತಿಯನ್ನು ಸ್ಪಷ್ಟೀಕರಿಸಿ ತಿಳಿಸಿರು. ಅವರಂದರು "ನಾನೊಬ್ಬ ಕುಂಟನು, ಹೆಳವನು, ದೇವರ ಕೂಸು ಇದ್ದೇನೆ. ಆದರೆ ಪರಮಾರ್ಥಿ ಜನರಿಗೆ ಆತ್ಮಸಾಕ್ಷಾತ್ಕಾರದ ಮಾರ್ಗವನ್ನು ತೋರಿಸಲಿಕ್ಕೆ ಸದ್ಗುರು ಕೃಪೆಯಿಂದ ನಾನು ಸಮರ್ಥನಿದ್ದೇನೆ."

ಸರ್ವರಿಗೂ ಅತ್ಯಾನಂದವಾಯಿತು. ಮತ್ತು ತಾವು ಮಹಾರಾಜರಿಗೆ ಆಳು ಮನುಷ್ಯನಂತೆ ನಡಿಸಿದ್ದಕ್ಕೆ ಅವರ ಕ್ಷಮೆ ಬೇಡಿದರು. ಮಹಾರಾಜರು ಅಂದರು, "ನೀವು ನನ್ನ ಕೂಡ ಪ್ರೇಮಭಾವದಿಂದ ನಡಿಯುತ್ತೀರಿ, ಇದರಲ್ಲಿ ನನಗೆ ಪೂರ್ಣ ಸಮಾಧಾನವಿದೆ. ಮಾನ ಅಪಮಾನ ಇವುಗಳನ್ನು ಸಮಾನ ಬುದ್ಧಿಯಿಂದ ನಾನು ನೋಡುತ್ತೇನೆ."

ಎರಡನೇ ದಿವಸ ಈ ಅತಿಥಿಗಳು ಕೇರೂಬಾಯಿಕೂಡ ಹೊರಟರು, ನಾನು ನಿಮ್ಮ ಕುಟುಂಬಕ್ಕೆ ಚಲೋದು ಮಾಡುತ್ತೇನೆ. ಮತ್ತು ಆಕೆಗೆ ಕೂಸು ಹುಟ್ಟುವದು ಎಂದು ಮಹಾರಾಜರು ಆಶ್ವಾಸನವನ್ನು ಕೊಟ್ಟರು, ಆ ಪ್ರಕಾರ ಮಹಾರಾಜರ ವಚನವು ಮುಂದೆ ಸತ್ಯವಾಯಿತು. ಆಕೆಗೆ ಒಂದು ಗಂಡು ಕೂಸು ಹುಟ್ಟಿತು. ಅವನು ಈಗ ದೊಡ್ಡವನಾಗಿದ್ದಾನೆ. ವಾಮನರಾಯರಿಗೆ ಯೋಗ ಮಾರ್ಗದಲ್ಲಿಯೂ ಒಳ್ಳೇ ಸುಧಾರಣಿಕೆ ಆಯಿತು, ಮಹಾರಾಜರು ಪರಳದಲ್ಲಿದ್ದಾಗ, ಅವರು ಒಮ್ಮೊಮ್ಮೆ ಅವರ ದರ್ಶನಕ್ಕೆ ಬರುತ್ತಿದ್ದರು.

(೩೭) **ಮಹಾಡದಲ್ಲಿರುವಾಗ ಸಂಭವಿಸಿದ ಸಂಗತಿ :—** ಹೊಲದ ವಸೂಲಿ ಮಾಡುವ ಸಲುವಾಗಿ ಮಹಾರಾಜರು ಹೋಗಿದ್ದಾಗ ಮಹಾಡದಲ್ಲಿ ಅವರದು ಒಂದು ದಿನ ವಸ್ತಿ ಆಯಿತು. ಅಲ್ಲಿ ರಣದಿವೆ ಅಂತ ಅವರ ಮಿತ್ರ ರೊಬ್ಬರು ಇರುತ್ತಿದ್ದರು, ಅವರು ಬಹಳ ಶ್ರದ್ಧಾವಂತರಿದ್ದರು. ರೋಹದ ವಾಮ ನರಾವ ಕುಲಕರ್ಣಿಯವರು ಇವರಿಗೆ ಮಹಾರಾಜರ ಪರಿಚಯ ಮೊದಲೇ ಮಾಡಿ ಕೊಟ್ಟಿದ್ದರು, ರಣದಿವೆ ಇವರು ಆ ಸಮಯದಲ್ಲಿ ಪ್ರಾಂತಿಕ ಶಿರಸ್ತೇ ದಾರರಿದ್ದರು. ಆಗ್ಗೆ ಅವರು ಪರ್ಯಟನೆ ಮೇಲೆ ಇರುತ್ತಿದ್ದು, ಮಹಾಡದಿಂದ ಮೂರು ಮೈಲಿನ ಮೇಲೆ ಇದ್ದರು. ಅವರಿಗೆ ಮಹಾರಾಜರು ಬಂದಿದ್ದು ತಿಳಿದ ಕೂಡಲೇ, ತನ್ನ ಕ್ಯಾಂಪಕ್ಕೆ ಬರಬೇಕೆಂತ ಅವರಿಗೆ ವಿನಂತಿ ಮಾಡಿದರು. ಮಹಾ ರಾಜರ ಮತ್ತೊಬ್ಬ ಮಿತ್ರರು, ವಾಮನರಾವ ಮಥುರೆ ಎಂಬವರು ಡಾಕ್ಟರರಿದ್ದರು ಅವರು ರಾಮ ಭಕ್ತರಿದ್ದರು, ಮಹಾರಾಜರು ಅವರಿಗೆ ತನ್ನ ಕೂಡ ರಣದಿವೆಯ ವರ ಕಡೆಗೆ ಹೋಗುವದಕ್ಕೆ ವಿನಂತಿ ಮಾಡಿದರು. ಆಗ ಡಾಕ್ಟರಸಾಹೇಬರ ಎತ್ತಿನಗಾಡಿಯಲ್ಲಿ ಕುಳಿತು ಹೋಗುವಾಗ್ಗೆ ಮಹಾಡ ಸಮೀಪದ ಗಾಂಧಾರೀ ನದಿಗೆ ಪ್ರವಾಹ ಬಂದಿತ್ತು. ಆದರೂ ಸುಖರೂಪದಿಂದ ರಾತ್ರಿ ಹತ್ತಕ್ಕೆ ಮುಟ್ಟಿ ದರು. ಕ್ಯಾಂಪಿನಲ್ಲಿ ಕೆಲವು ಬ್ರಾಹ್ಮಣರು ಮತ್ತು ಕೆಲವು ಕಾಯಸ್ಥ ಪ್ರಭು ಜಾತಿ ಯವರೂ ಇದ್ದರು. ಭೋಜನದ ತಯಾರಿ ಆಯಿತು. ಕಾಯಸ್ಥ ಪ್ರಭು ಜನರಿಗೆ ಮಾಂಸಾನ್ನ ನಡಿಯುವದೆಂದು ಅವರ ಎಲೆಗಳು ಬೇರೆಕಡೆಯಲ್ಲಿ ಹಾಕಿದ್ದರು. ' ಇಂಥಾ ಅನ್ನದ ನಮಗೆ ಅಭ್ಯಾಸವಿಲ್ಲ. ನಮ್ಮ ಎಲೆಗಳನ್ನು ಶಾಕಾಹಾರಿ ಪಂಕ್ತಿಯಲ್ಲಿ ಹಾಕಿರಿ. " ಎಂದು ಮಹಾರಾಜರೂ ಡಾಕ್ಟರ ಸಾಹೇಬರೂ ಇತ ರರಿಗೆ ವಿನಂತಿ ಮಾಡಿದರು. " ನಮ್ಮಂಥ ಕಾಯಸ್ಥರಿಗೆ ಇದೇನೂ ಅಪರಿಚಿತ ವಲ್ಲ.'' ಅಂತ ಕೆಲವರಂದರು, ಕೆಲವರು "ನೀವು ವಿನಾಕಾರಣ ಡೌಲು ಮಾಡು ತ್ತೀರಿ" ಎಂದಂದರು, ಮತ್ತೆ ಚೇಷ್ಟೆ ಮಾಡಲಾರಂಭಿಸಿದರು. " ನಿಮ್ಮೆಲ್ಲರ ಆಗ್ರಹವಿದ್ದರೆ, ನಾನು ಹೇಳುವದೇನೂ ಇಲ್ಲ. ನೀವು ಹೇಳುವ ಪಂಕ್ತಿಯೊಳಗೆ ಕೂಡ್ರುವೆನು." ಎಂದು ಅಂದು ಮಹಾರಾಜರು ಕಾಯಸ್ಥರ ಪಂಕ್ತಿಗೆ ಕೂತರು, ಮತ್ತು ಪದ್ಧತಿ ಪ್ರಕಾರ ತನ್ನ ಮುಂದಿರುವ ಮಾಂಸಾನ್ನವಿದ್ದ ಎಲೆಯನ್ನು ಈಶ್ವರನಿಗೆ ನೈವೇದ್ಯ ತೋರಿಸಿದರು. ಆಗ್ಗೆ ಏನು ಆಶ್ಚರ್ಯವಾಯಿತು ! ಆ ಎಲ್ಲ ಮಾಂಸನ್ನದ್ದು ಪಡೆಯ ಹುಳಿಪಲ್ಯವಾಯಿತು. ಎಲ್ಲರೂ ಆಶ್ಚರ್ಯಚಕಿತರಾದರು. ಒಬ್ಬರು ಅಂದರು, " ಇದು ಗಾರುಡೀ ವಿದ್ಯೆಯು." ಮತ್ತೊಬ್ಬರು '' ಇದು ಹಿಪ್ನೊಟಿಸಮ್ '' ಎಂದು ಒದರಿದರು,

(೩೮) **ಶ್ರೀ. ರಣದಿವೆ :—** ರಣದಿವೆ ಇವರು ಬಹಳ ಶ್ರದ್ಧಾವಂತರಿದ್ದರು ಮತ್ತು ಅವರೇ ಮಹಾರಾಜರನ್ನು ಕ್ಯಾಂಪಿಗೆ ಕರಕೊಂಡಿದ್ದರು. ಮಹಾರಾಜರು ಸಾಧು ಎಂಬ ವಿಷಯದಲ್ಲಿ ಅವರಿಗೆ ಪೂರ್ಣ ವಿಶ್ವಾಸವಿತ್ತು, ಅವರು ಆ ಸಾರನ್ನು ಆಲಿಬಾಗಕ್ಕೆ ಪ್ರಸಾದವೆಂದು ಕಳುಹಿಸಿದರು, ಆಶ್ಚರ್ಯವ ಸಂಗತಿ ಏನಂದರೆ,

ವೆಂಟು ದಿನಗಳತನಕ ಆ ಸಾರು ಏನೂ ಕೆಡದೆ ಹ್ಯಾಗಿತ್ತೋ ಹಾಗೆಯೇ ಉಳಿಯಿತು.

ಕೆಲವು ದಿನಗಳ ನಂತರ ರಣದಿವೆಯವರು ಕ್ವಾಲಿಫಾಯಿಂಗ (Qualifying) ಪರೀಕ್ಷೆಗೆ ಕೂತರು. ಉತ್ತರಗಳನ್ನು ಬರೆಯುವ ಮೊದಲು ಮಹಾರಾಜರ ನೆನಪು ಮಾಡಿದ್ದರು. ಪರೀಕ್ಷೆಯಲ್ಲಿ ಉತ್ತಮರೀತಿಯಿಂದ ಉತ್ತೀರ್ಣರಾಗಿ ಮುಂದೆ ಅವರು ಮಾಮಲೇದಾರರಾದರು. ಮಹಾರಾಜರ ಮಹತ್ವದ ಸಂಬಂಧ ಅವರಿಗೆ ಇಷ್ಟು ಸಬಲ ಮತ್ತು ವಿಶ್ವಸನೀಯ ಪ್ರತ್ಯಕ್ಷ ಪ್ರಮಾಣವು ಸಿಕ್ಕಿತ್ತು; ಆದರೂ ಮಹಾರಾಜರು "ಇವರು ದೊಡ್ಡ ಜಾದೂಗಾರರಿರಬೇಕು, ಅಥವಾ ಅಘೋರಪಂಥದವರಿರಬೇಕು," ಎಂದು ಈ ಪ್ರಕಾರ ಅವರು ಇತರರ ಹೇಳಿಕೆ ಮೇರೆಗೆ ತಿಳಿದಿದ್ದರು. ಅದ್ದರಿಂದ ಅವರು ಆತ್ಮಜ್ಞಾನಕ್ಕೆ ಎರವಾದರು, ಎಂತ ಹೇಳಲಿಕ್ಕೆ ಬಹಳ ದುಃಖವಾಗುತ್ತದೆ.

(೩೯) ಧುಳೆಯಲ್ಲಿರುವಾಗ ರಾ. ರಾಜೆ ಇವರ ಮನೆಯಲ್ಲಿ:— ಸನ್ ೧೯೩೪ನೇ ಇಸವಿಯಲ್ಲಿ ಶ್ರೀ ಗಜಾನನ ಮಹಾರಾಜರು ನಾಶಿಕದಲ್ಲಿ ಇರುವ ತಮ್ಮ ಸಂಬಂಧಿಕರಾದ ಭಿಸೆ ಎಂಬವರಲ್ಲಿ ಹೋಗಿದ್ದರು. ಆ ಕಾಲದಲ್ಲಿ ಅಲ್ಲಿ ದಾಮೋದರ ಮಾರ್ತಂಡ ಚಿಟಣೀಸ ಎಂಬ ಒಬ್ಬ ಗೃಹಸ್ಥರು ರೆವ್ಹಿನ್ಯೂ ಖಾತೆಯಲ್ಲಿ ಕಾರಕೂನರಾಗಿದ್ದರು. ಅವರು ಮಹಾರಾಜರ ಅನುಗ್ರಹವನ್ನು ತಕ್ಕೊಂಡರು. ಅನಂತರ ಮಹಾರಾಜರು ಮುಂಬಯಿಗೆ ಹೋದರು, ಆದರೆ ಕೆಲವು ದಿನಗಳೊಳಗೆ ತಿರುಗಿ ನಾಶಿಕಕ್ಕೆ ಬಂದರು. ಆದರೆ ಈಗ ಚಿಟ್ಣೀಸರು ನಾಂದಗಾಂವ ಎಂಬಲ್ಲಿಗೆ ಬದಲಿಯಾಗಿ ಹೋಗಿದ್ದರು. ಅದ್ದರಿಂದ ಅವರನ್ನು ಕಾಣಲಿಕ್ಕೆ ಮಹಾರಾಜರು ಮುದ್ದಾಂ ನಾಂದಗಾಂವಕ್ಕೆ ಹೋದರು. ಅಲ್ಲಿ ಮಹಾರಾಜರು ಮೂರು ದಿನಗಳತನಕ ಇದ್ದರು. ಚಿಟಣೀಸರು ತಮ್ಮ ಮೈದುನರಾದ ರಾಜೆ ಇವರಿಗೆ ನಾಂದಗಾಂವಕ್ಕೆ ಬಂದು ಹೋಗಬೇಕೆಂದು ಪತ್ರ ಬರೆದಿದ್ದರು. ಆ ಪ್ರಕಾರ ರಾಜೆಯವರಿಗೆ ಮತ್ತು ಮಹಾರಾಜರಿಗೆ ಭೆಟ್ಟಿಯಾಗಿ ಆ ಒಂದು ರಾತ್ರಿ ಅವರೊಳಗೆ ಪರಮಾರ್ಥ ಸಂಬಂಧ ಚರ್ಚೆ ನಡೆಯಿತು.

ಎರಡನೇ ದಿವಸ ರಾಜೆಯವರು ಮಹಾರಾಜರಿಗೆ ಧುಳೆಗೆ ಬರಬೇಕೆಂತ ವಿನಂತಿ ಮಾಡಿದರು, ಅವರೆಂದರು, "ನನಗೆ ಈ ಸಾಧು ಜನರ ಮೇಲೆ ಬಹಳ ವಿಶ್ವಾಸವಿಲ್ಲ, ಯಾಕಂದರೆ ಅವರ ಅಧ್ಯಾತ್ಮ ವಿಷಯವು ನಮಗೇನೂ ಸಂಬಂಧಿಸಿದ್ದೇ ಅಲ್ಲ, ಎಂತ ನನಗನಿಸುತ್ತದೆ. ನನ್ನ ತಾಯಿಗೆ ಮಾತ್ರ ಈ ಸಾಧುಗಳ ಮೇಲೆ ವಿಶ್ವಾಸ ಬಹಳ, ಸಾಧುಗಳ ದರ್ಶನ ತಕ್ಕೊಳ್ಳಬೇಕೆಂದು ಆಕೆಗೆ ಬಹಳ ಇಚ್ಛೆ. ಆದ್ದರಿಂದ ಆಕೆಯ ಸಲುವಾಗಿ ತಾವು ಧುಳೆಗೆ ಬಂದರೆ ನಮಗೆ ಬಹಳ ಆನಂದವಾದೀತು." ಮಹಾರಾಜರು ಹೋಗಲಿಕ್ಕೆ ಒಪ್ಪಿದರು, ಆದರೆ ಅವರು ರಾಜೆಯವರಕೂಡ ಹೋಗಲಿಲ್ಲ.

ರಾಜೆಯವರು ಧುಳೆಗೆ ಹೋದನಂತರ ಎರಡು ದಿನಗಳಲ್ಲಿ ಚಿಟಣಿಸರು ಮಹಾರಾಜರಿಗೆ ಧುಳೆದ ತಿಕೀಟು ತೆಗಿಸಿ ಕೊಟ್ಟು ನಾಂದಗಾಂವ ಸ್ಟೇಶನದಲ್ಲಿ ಗಾಡಿಯಲ್ಲಿ ಕೂಡ್ರಿಸಿದರು, ಆದರೆ ಮುಂದೆ ಎರಡೇ ದಿವಸಗಳಲ್ಲಿ "ಮಹಾರಾಜರು ಮನೆಯಲ್ಲಿ ಯಾರಿಗೂ ತಿಳಿಸದೆ ಮುಂಬಯಿಗೆ ಹೊರಟು ಹೋದರು." ಎಂಬದಾಗಿ ಚಿಟಣಿಸರಿಗೆ ಪತ್ರ ಬಂತು.

ಸನ್ ೧೯೦೬ನೇ ಇಸ್ವಿಯಲ್ಲಿ ಮಹಾರಾಜರು ಮುಂಬಯಿಯಿಂದ ನಾಶಿಕಕ್ಕೆ ಮತ್ತು ನಾಶಿಕದಿಂದ ಧುಳೆಗೆ ಹೊರಟು ಹೋದರು. "ಮಹಾರಾಜರು ಧುಳೆಯಲ್ಲಿ ತಮ್ಮಲ್ಲಿ ಇದ್ದಾರೆ, ಅವರಿಗೆ ಭೆಟ್ಟಿಯಾಗಲಿಕ್ಕೆ ನೀವು ಧುಳೆಗೆ ಬರಬೇಕು," ಎಂತ ರಾಜೆಯವರ ಪತ್ರ ಚಿಟಣಿಸರಿಗೆ ಬಂತು. ಆ ಪ್ರಕಾರ ಚಿಟಣಿಸರು ಧುಳೆಗೆ ಹೋದರು, ಅಲ್ಲಿ ಸಾಸವಡಕರ ಮಾಧವರಾವ ವೈದ್ಯ ರಾವಸಾಹೇಬ ಗುಪ್ತೆ ಮುಂತಾದ ಮಂದಿಗೆ ಭೆಟ್ಟಿಯಾಗಿ ಅವರು ತಿರುಗಿ ನಾಂದಗಾಂವಕ್ಕೆ ಬಂದರು. ಈ ಸಮಯ ಮಹಾರಾಜರು ರಾಜೆಯವರ ಮನೆಯಲ್ಲಿ ಎಂಟು ಹತ್ತು ತಿಂಗಳು ಉಳಿದರು. ರಾಜೆ ಕುಟುಂಬದರು ಎಲ್ಲರೂ ಅವರ ಕೂಡ ಬಹಳ ಪ್ರೇಮದಿಂದ ನಡೆಯುತ್ತಿದ್ದರು. ಇಷ್ಟೇಲ್ಲಾ ದಿವಸಗಳಲ್ಲಿ ತಾನು ಸಾಧು ಇದ್ದೇನೆ ಎಂಬ ಕಲ್ಪನೆ ಯಾರಿಗೂ ಆಗಗೊಡಲಿಲ್ಲ, ಮತ್ತು ಅವರಾದರೂ ಮಹಾರಾಜರು ಸಾಧುಗಳು ಎಂಬ ಭಾವನೆಯಿಂದ ಕರಿಸಿಕೊಂಡಿದ್ದೂ ಅಲ್ಲ. ತನ್ನ ತಾಯಿಯು ಶ್ರೀ. ಮಾಧವನಾಥ ಮಹಾರಾಜರ ಅನುಗ್ರಹನ್ನು ತಕ್ಕೊಂಡಿದ್ದಾಳೆ, ಮತ್ತು ಅವರ ಬರೋಣದರಿಂದ ಆಕೆಯು ಆನಂದವು ವಿಶೇಷವಾದೀತು ಎಂತ ಇಷ್ಟು ಮಾತ್ರ ರಾಜೆಯವರು ಮಹಾರಾಜರಿಗೆ ತಿಳಿಸಿದ್ದರು. ಮಾತಾಡುತ್ತ ಮಾತಾಡುತ್ತ ರಾಜೆಯವರ ತಾಯಿಗೆ ಮತ್ತು ಮಹಾರಾಜರ ಸೋದರತ್ತೆಯವರಿಗೆ ನಿಕಟ ಪರಿಚಯ ಇರುವದು ಗೊತ್ತಾದ ಮೇಲೆ, ಮಹಾರಾಜರು ಏನೇನೋ ಸಂಕೋಚವಿಲ್ಲದೆ ಇರಲಿಕ್ಕೆ ಹತ್ತಿದರು. ರಾಜೆಯವರು ಯಾವನಾದರೂ ಸಾಧು ಮೇಲೆ ವಿಶ್ವಾಸ ಇಡುವವರಲ್ಲ, ಆದರೂ ಶ್ರೀ ಗಜಾನನ ಮಹಾರಾಜರ ಮಧುರ ಸ್ವಭಾವ, ಶುದ್ಧ ವರ್ತಣೂಕ, ಮತ್ತು ಅವರ ವ್ಯವಸ್ಥಿತ ಪಾರಮಾರ್ಥಿಕ ಜ್ಞಾನ ಇವುಗಳ ಮೂಲಕ ರಾಜೆಯವರಿಗೆ ಮಹಾರಾಜರ ಮೇಲೆ ವಿಶೇಷ ಆದರ ಉತ್ಪನ್ನವಾಗಿ, ಅವರ ಮೇಲೆ ಬಂಧುವಿನಂತೆ ಪ್ರೇಮ ಮಾಡುತ್ತಿದ್ದರು.

(೪೦) **ಗೋಕುಲಾಷ್ಟಮಿ ದಿನಃ**—ಆ ವರ್ಷ ಗೋಕುಲಾಷ್ಟಮಿ ದಿವಸ ರಾಜೆ ವ ಅವರ ಕುಟುಂಬದ ಎಲ್ಲ ಜನರು ಮನೆಯಲ್ಲಿಯೇ ಇದ್ದರು. ರಾತ್ರಿ ಹತ್ತು ಹನ್ನೊಂದು ಹೊಡೆಯುವದಕ್ಕೆ ರಾಜೆಯವರು ಶೌಚಕೂಪಕ್ಕೆ ಹೋಗಿದ್ದಾಗ ನೂರಾರು ಊದಿನ ಕಡ್ಡಿ ಸುಟ್ಟಂತೆ ಅವರಿಗೆ ಸುವಾಸ ಬಂತು. ಮಹಾರಾಜರು ಆ ಕಾಲದಲ್ಲಿ ಆರಾಮ ಖುರ್ಚಿ ಮೇಲೆ ಕೂತಿದ್ದರು. ರಾಜೆಯವರಿಗೆ ಸ್ವಲ್ಪ ಭೀತಿ ಕಂಡಿತು ಅಂತ ಹೊರಗೆ ಬಂದು, ಕೈಕಾಲು ತೊಳಕೊಂಡು ಎಲ್ಲಿ

ವಾಸ ಬರುತ್ತದೆಂತ ನೋಡಲಿಕ್ಕೆ ಮನೆಯಲ್ಲ ಹುಡುಕಿದರು. ಆದರೆ ಎಲ್ಲಿಂದ ಆ ವಾಸನೆಯು ಬರುತ್ತದೆಂತ ಅವರಿಗೆ ಗೊತ್ತಾಗಲಿಲ್ಲ. ಇನ್ನಾದರೂ ಅವರಿಗೆ ವಾಸ ಬರುತ್ತಾ ಇತ್ತು, ಮಹಾರಾಜರು ಆರಾಮ ಖುರ್ಚಿಯ ಮೇಲೆ ಇದ್ದಲ್ಲಿಗೆ ಅವರು ಬಂದರು. ಅಲ್ಲಿಯೂ ವಾಸ ಬರುತ್ತಾ ಇತ್ತು. ಅವರು ಮಹಾರಾಜರಿಗೆ ಎಬ್ಬಿಸಿ, ಎಲ್ಲ ಸಂಗತಿಯನ್ನು ತಿಳಿಸಿದರು. ಆಗ ಮಹಾರಾಜರು ಬಹಳ ಸಪ್ಪಳ ದಿಂದ ನಕ್ಕರು. ಮತ್ತು ಅಂದರು, “ನಾನಾದರೂ ಆನಂದದಲ್ಲಿ ನಿಮಗ್ನನಾಗಿದ್ದೆ, ನನ್ನಿಂದ ಏನೂ ಹೇಳಲಾಗದು.” ಅನಂತರ ರಾಜೆಯವರ ಮನೆಮಂದಿ ಎಲ್ಲ ಅಲ್ಲಿ ಕೂಡಿದರು, ಮತ್ತು ಆಶ್ಚರ್ಯಚಕಿತರಾದರು. ಈ ಸಂಗತಿಯನ್ನು ರಾಜೆಯವರು ಇತ್ತಲಾಗೆ ನಾಶಿಕಕ್ಕೆ ಬಂದಾಗ್ಗೆ, ಮಹಾರಾಜ ಮತ್ತು ಇತರ ಮಂದಿ ಮುಂದೆ ಹೇಳಿದರು; ಅವರು ಬೇರೆ ಸಹ ಕೆಲವು ಚಮತ್ಕಾರಗಳನ್ನು ಹೇಳಿದರು, ಅವುಗಳ ಪೈಕಿ ಕೆಲವು ಕೆಳಗೆ ಕೊಟ್ಟಿರುತ್ತೇವೆ.

ಒಮ್ಮೆ ಮುಂಜಾನೆ ನಾಲ್ಕು-ಐದು ಘಂಟೆಯ ಸಮಯಕ್ಕೆ ಎರಡು ಮೂರುಸಲ ಎಲ್ಲೆಲ್ಲಿಯೂ ಹೂವಿನ ಸುವಾಸನೆಯು ಬರಹತ್ತಿತು, ಏನೇನೂ ದೃಶ್ಯ ಕಾರಣವಿಲ್ಲದೆಯೂ ಮಹಾರಾಜರ ಸರ್ವ ದೇಹ ಭಸ್ಮದಿಂದ ತುಂಬಿದಂತೆ ಮತ್ತು ಹಣೆಯ ಮೇಲೆ ಚಂದನೀ ಗಂಧ ಹಚ್ಚಿದಂತೆ, ರಾಜೆಯವರು ಕೆಲವು ಸೇಳೆ ಕಂಡರು. ಆ ಸಂಬಂಧಿ ಮಹಾರಾಜರಿಗೆ ಕೇಳಿದ್ದಲ್ಲಿ ಅವರು ಸುಮ್ಮನೆ ಇರುತ್ತಿದ್ದರು. ರಾಜೆ ಇವರು ಈ ಸಂಗತಿಗಳನ್ನು ಪ್ರತ್ಯಕ್ಷ ಕಂಡಿದ್ದರೂ ಅವರಿಗೆ ಅವುಗಳ ಮೇಲೆ ವಿಶ್ವಾಸವಿದ್ದಿಲ್ಲ. ಮತ್ತು ಮಹಾರಾಜರಿಗೆ ಸಾಧು ಅನ್ನಲಿಕ್ಕೆ ಅವರು ಸಿದ್ಧವಿದ್ದಿಲ್ಲ, ಆದರೂ ಈ ನಡೆದ ಸಂಗತಿಗಳನ್ನು ರಾಜೆಯವರು ಸಾಸವಡ ಕರ ಹೆಸರಿನ ಸಬ್‌ರಜಿಸ್ಟ್ರಾರರಿಗೂ ಗಾಂಡೇಕರ ಎಂಬ ಗೃಹಸ್ಥರಿಗೂ ಹೇಳಿದ್ದರು ರಾಜೆಯವರು ಜ್ಯೋತಿಷಶಾಸ್ತ್ರ ವಿಷಯ ಎಷ್ಟೋ ಗ್ರಂಥಗಳನ್ನು ಪ್ರಸಿದ್ಧ ಮಾಡಿ ದ್ದರು. ಆದ್ದರಿಂದ ಬಹಳ ಸುಶಿಕ್ಷಿತ ಜನರು ಅವರಿಗೆ ಕಾಣಲಿಕ್ಕೆ ಬರುತ್ತಿದ್ದರು. ಅವರು ಹೊರಗೆ ಮಂಚದ ಮೇಲೆ ಕೂತಿರುತ್ತಿದ್ದ ಮಹಾರಾಜರನ್ನು ನೋಡು ತ್ತಿದ್ದರು, ಒಂದು ದಿನ ಅವರೊಳಗೊಬ್ಬರು “ಈ ಕುಂಟ ಮನುಷ್ಯನು ಯಾರು?” ಎಂದು ರಾಜೆಯವರಿಗೆ ಕೇಳಿದಾಗ, ಅವರು ಏನು ಉತ್ತರ ಕೊಟ್ಟರು ತಿಳಿಯಲಿಲ್ಲ. ಆದರೆ ಅವರಪೈಕಿ ಕೆಲವರು ಮಹಾರಾಜರ ಕಡೆಗೆ ಬಂದು “ಮಹಾರಾಜರೇ ನೀವು ಎಲ್ಲಿ ಇರುವದು ?” ಎಂದು ಕೇಳಿದರು, ಮಹಾರಾಜರು ಅವರಿಗಂದದ್ದು “ನಾನು ಸಾಧುವೂ ಅಲ್ಲ ಮಹಾರಾಜನೂ ಅಲ್ಲ, ನಾನು ರಾಜೆ ಇವರ ಕುಟುಂಬ ದವರಪೈಕಿ ಒಬ್ಬನಿದ್ದೇನೆ. ಮತ್ತು ಅವರಲ್ಲಿ ಅತಿಥಿಯಾಗಿ ಬಂದಿರುತ್ತೇನೆ. ನಾನು ಈ ವಿಶ್ವಕುಟುಂಬದೊಳಗಿನ ಅಜ್ಞಾನಿ ಮತ್ತು ದೀನ ಪ್ರಾಣಿ ಇದ್ದೇನೆ, ಯಾರಾ ದರೂ ನನಗೆ ಮಹಾರಾಜ ಅನ್ನುತ್ತಾರೆ; ಆದರೆ ಈ ಹೆಸರು ಎರಡನೇಯವರು ನನಗೆ ಕೊಟ್ಟದ್ದು, ನನ್ನ ನಿಜವಾದ ಹೆಸರು ಗಜಾನನ. ನಾನು ಅಕೋಲೆಯ

ಸಹವಾಸಿ ಇದ್ದೇನೆ. ಸದ್ಯಕ್ಕೆ ನಾನು ನಾನಾಸಮರ್ಥ ಇವರ ಕಡೆ ಇರುತ್ತೇನೆ. ಅವರು ನನ್ನ ಮಿತ್ರರೂ ಸಂಬಂಧಿಕರೂ ಇದ್ದಾರೆ, ಇನ್ನು ಎರಡು ಮೂರು ವಾರಗಳಲ್ಲಿ ನಾನು ಅಲ್ಲಿಗೆ ಹೋಗುವೆನು."

ಆದರೂ ಮಹಾರಾಜರು ಹಾಗೆ ಹಾರಿಸಿ ಬಿಡುವ ಉತ್ತರ ಕೊಟ್ಟರೆಂತ ಅವರಿಗೆ ಅನಿಸಿತು ಮತ್ತು "ತಾವು ಸಾಧುಗಳಿದ್ದೀರೆಂತ ನಮಗೆ ಚನ್ನಾಗಿ ತಿಳಿದಿರುವದು," ಎಂದು ಅವರಂದರು. ಆಗ ಮಹಾರಾಜರು, "ನಿಮಗೆ ನನ್ನ ಸಂಬಂಧಿ ಯಾರು ಏನು ಹೇಳಿದ್ದಾರೆ; ಅದು ನನಗೆ ತಿಳಿಯದು. ನನಗೆ ಗುರುಗಳು ಎರಡು ಅಕ್ಷರಗಳನ್ನು ಹೇಳಿದ್ದರು, ಅದಕ್ಕೂ ಹೆಚ್ಚಿಗೆ ನನಗೇನೂ ಗೊತ್ತಿಲ್ಲ. ಎರಡನೇಯವರಿಗೆ ಉಪದೇಶ ಕೊಡಲಿಕ್ಕೆ ನಾನು ಸಮರ್ಥನಲ್ಲ, ಮತ್ತು ಆ ಯೋಗ್ಯತೆಯೂ ನನಗಿಲ್ಲ. ನಾನು ಇನ್ನೂ ಒಬ್ಬ ಸಾಧಕನಿದ್ದೇನೆ. ಇದರ ಹೊರ್ತು ಯಾರೂ ಮಾಡಲಿಕ್ಕಿಲ್ಲ ಅಂಥಾದ್ದನ್ನು ನಾನು ಮಾಡುತ್ತೇನೆ. ನಾನು ರಾತ್ರಿ ಹಗಲು ಒಂದೇಸವನೆ ಮದ್ಯಪಾನ ಮಾಡುತ್ತೇನೆ. ಇಂಥ ಗುರುವಿನ ಉಪಯೋಗವೇನು?" ಈ ಬುದ್ಧಿವಾದದಿಂದ ಅವರಿಗೆ ಸಮಾಧಾನವಾಗಲಿಲ್ಲ, ಮತ್ತು ಉಪದೇಶ ಕೊಡಬೇಕೆಂತ ಬಹಳ ಆಗ್ರಹ ಮಾಡಿದ್ದಕ್ಕೆ "ಸೋಹಂ"ದ ಮಂತ್ರ ಕೊಟ್ಟರು.

ರಾವಸಾಹೇಬ ಗುಪ್ತೆ ಮತ್ತು ಜಹಗೀರದಾರ ನಾನಾಸಾಹೇಬ ಗಾಂಡೇಕರ ಈ ಇಬ್ಬರೂ ಗೃಹಸ್ಥರು ರಾಜೆಯುವರ ಭೆಟ್ಟಿಸಲುವಾಗಿ ಅವರ ಮನೆಗೆ ಬಂದಿದ್ದರು. ನಾನಾಸಾಹೇಬ ಜಹಗೀರದಾರರು ಈ ಕುಂಟ ಗೃಹಸ್ಥರು ಯಾರು ಎಂದು ಕೇಳಿದಾಗ ರಾಜೆಯುವರು ಅವರನ್ನು ತನ್ನ ಕೂಡ ಆಡ್ಡಾಡಲಿಕ್ಕೆ ಕರಕೊಂಡು ಹೋಗಿ, ಮಹಾರಾಜರು ಯಾರೆಂಬ ಸಂಗತಿಯನ್ನು ಅವರಿಗೆ ತಿಳಿಸಿದರು.

(೪೧) **ಬುಕ್ಕಾ+ ಸಂಬಂಧ ನಡೆದ ಸಂಗತಿಃ—** ಸುಮಾರು ಮೂರು ವರ್ಷಗಳ ಹಿಂದೆ ರಾಜೆ ಮತ್ತು ಸಾಸವಡಕರ ಇವರು ನಾಶಿಕಕ್ಕೆ ಬಂದಿದ್ದರು. ಅವರು ಮಹಾರಾಜರು ಧುಳೆಯಲ್ಲಿರುವಾಗ ಮಾಡಿದ ಅನೇಕ ಚಮತ್ಕಾರಗಳ ಸಂಗತಿ ಹೇಳಿದರು. ಈ ಬುಕ್ಕಾದ ಸಂಗತಿಯನ್ನು ಸಾಸವಡಕರರು ಪೇಠ ಮುಕ್ಕಾಮಿ ರೆವ್ಹಿನ್ಯೂ ಖಾತೆಯಲ್ಲಿ ಕಾರಕೂನರಾಗಿದ್ದ ದಾಮೋದರ ಮಾರ್ತಂಡ ಚಿಟಣೀಸ ಇವರಿಗೆ ಪತ್ರ ವ ಪೋಸ್ಟ ಕಾರ್ಡ ಬರೆದು ತಿಳಿಸಿದ್ದರು. ಈ ಕಾರ್ಡು ವ ಪತ್ರ ವಿಶ್ವನಾಥ ಗೋಪಾಳ ವೈದ್ಯ ಇವರು ಓದಿದ್ದರು, ಎಂದು ಬುಕ್ಕಾದ

---

+ ಇದು ವಾರಕರಿ ಪಂಥದವರು ಒಬ್ಬರಿಗೊಬ್ಬರು ಭಜನೆ ವೇಳೆಗೆ ಹಚ್ಚುವ ಸುವಾಸಿಕ ಕರೆ ಪುಡಿ.

ಚಮತ್ಕಾರ "ಗುರುಶಿಷ್ಯ ವಿಜ್ಞಾನ ದೀಪಿಕಾ"† ಇದರಲ್ಲಿ ವರ್ಣಿಸಿದರು. ಈ ಚಮತ್ಕಾರದ ವಿಷಯು ಮುಂದೆ ಕೊಟ್ಟ ವರ್ಣನೆಯು ಆ ಪೋಸ್ಟ ಕಾರ್ಡ ನ ಪತ್ರದ ಆಧಾರದಿಂದ ಕೊಟ್ಟಿರುತ್ತದೆ. ರಾಜೀವ ಸಾಸವಡಕರ ಇವರು ಮೂರು ವರ್ಷಗಳ ಹಿಂದೆ ನಾಶಿಕಕ್ಕೆ ಬಂದಾಗ್ಗೆ ಅವರು ಆ ಸಂಗತಿ ಪ್ರತ್ಯಕ್ಷ ವರ್ಣಿಸಿದ್ದರಿಂದ ನಾವು ಅದನ್ನು ಸಾಸವಡಕರರ ಶಬ್ದಗಳಿಂದಲೇ ನಿರೂಪಿಸಿರುತ್ತೇವೆ.

ಭಾದ್ರಪದ ತಿಂಗಳು ಗಣಪತಿಯು ಉತ್ಸವದ ಕಡೇ ದಿವಸ ಅಂದರೆ ಅನಂತ ಚತುರ್ದಶಿ ದಿನ ಸಾಯಂಕಾಲಕ್ಕೆ ಆರು ಹೊಡಿಯುವಾಗ ನಾವೆಲ್ಲರೂ ಪುಳೆ ವಕೀಲರ ಮನೆಗೆ ಉತ್ಸವ ಮೇಳಗಳು ಬರುವದನ್ನು ನೋಡಲಿಕ್ಕೆ ಹೋಗಿದ್ದೆವು. ಗಣಪತಿ ಮತ್ತು ಮೇಳಗಳು ನೋಡಿ ಆದ ಮೇಲೆ ರಾಜೀವ, ಮಾಧವರಾವ ವೈದ್ಯ, ಪ್ರಧಾನ ಮತ್ತು ನಾನು ಪ್ರಧಾನರ ಮನೆಗೆ ಹೋದೆವು. ಮತ್ತು ಅಲ್ಲಿ ಬೇರೆ ಬೇರೆ ವಿಷಯುಗಳನ್ನು ಕುರಿತು, ಮಾತಾಡುತ್ತ ಇದ್ದೆವು. ತಾವು ಸಾಧು ಅನ್ನಿಸಿಕೊಳ್ಳುವವರ ವಿಷಯು ಅನೇಕ ಚಮತ್ಕಾರಿಕ ಸಂಗತಿಗಳನ್ನು ಅವರ ಶಿಷ್ಯರು ವರ್ಣಿಸುತ್ತಾರೆ. ಆದರೆ ಕೆಲವುಕಾಲದ ನಂತರ ಅವೇ ಸಾಧುಗಳು ದಾಂಭಿಕ ವ ಕಪಟಿ ಎಂದು ವರ್ತಮಾನ ಪತ್ರಗಳೊಳಗೆ ಪ್ರಸಿದ್ಧವಾಗುತ್ತವೆ. ಅನೇಕ ವಿದ್ಯಾವಂತ ಶ್ರದ್ಧಾಳೂ ಜನರು, ಈ ಚಮತ್ಕಾರಗಳಿಂದ ಮೋಸ ಹೋಗುತ್ತಾರೆ, ಕಟ್ಟಕಡೆ ಆ ಚಮತ್ಕಾರಗಳೂ ಸುಳ್ಳೆಂತ ನಿರ್ಣಯಿಸಲ್ಪಡುತ್ತವೆ. ಖಾನದೇಶ ಜಿಲ್ಹೆಯಲ್ಲಿ ನಂದುರಬಾರ ಸಮೀಪ 'ಪ್ರಕಾಶೆ' ಅಂತ ಒಂದು ಊರದೆ. ಅಲ್ಲಿ ನಾನು ಸ್ವತಃ ಒಬ್ಬ ಸಾಧುವನ್ನು ನೋಡಿದ್ದೇನೆ, ಸಾವಿರಾರು ಮಂದಿ ಆತನ ದರ್ಶನಕ್ಕೆ ಹೋಗುತ್ತಾರೆ. ಆದರೆ ಆ ಸಾಧುವು ಮುಂದೆ ಆತ್ಮಹತ್ಯೆ ಮಾಡಿಕೊಂಡನು. ಮತ್ತು ಪ್ರಕಾಶೆ ಊರಲ್ಲಿ ಪ್ರಕಾಶ ಹಾಕುವ ಬದಲಿಗೆ ಕತ್ತಲೆ ಹಾಕಿದನು. ಇದಕ್ಕಾಗಿಯೇ ಈಗಿನ ಸಾಧುಗಳ ಮೇಲೆ ನನಗೆ ವಿಶ್ವಾಸ ವಿಲ್ಲ. ಗಜಾನನ ಮಹಾರಾಜರು ಈ ವೇಳೆ ಅಲ್ಲಿ ಇದ್ದರು. ಅವರಿಗೆ 'ನೀವು ಯಾಕೆ ಮಾತಾಡುವದಿಲ್ಲ,' ಎಂತ ಕೇಳುತ್ತಿರುವಾಗ. ಅವರಂದರು, "ನಾವು ಏನು ಮಾತಾಡಲಿ ?" ಪ್ರತಿಯೊಬ್ಬರು ಹ್ಯಾಗೆ ನೋಡುತ್ತಾರೊ ಹಾಗೆ ಹೇಳುತ್ತಾರೆ. ಸಾಧುಗಳ ಕೃತಿ ಅವರು ನೋಡಿರುತ್ತಾರೆ. ನಾನಾದರೂ ಅಜ್ಞಾನಿ ಇದ್ದೇನೆ, ನಾನು ಏನೂ ಮಾಡುವದಿಲ್ಲ. ವೇದಾಂತ ಮತ್ತು ಅದರೊಳಗಿನ ತತ್ವಜ್ಞಾನ ನನಗೆ ತಿಳಿಯುವದಿಲ್ಲ. ನನಗೆ ಪುಸ್ತಕಿ ಜ್ಞಾನವೂ ಇಲ್ಲ. ಆದರೂ ಇವೆಲ್ಲವುಗಳ ಆತ್ತಲಾಗೆ ಒಂದು ಸಂಗತಿ ( ಮಹತ್ ಬ್ರಹ್ಮ ) ಮಾತ್ರ ಇದೆ. ತುಕಾರಾಮ, ರಾಮದಾಸ ವ ಏಕನಾಥ ಇವರು ಪೂರ್ವದ ಸಾಧುಗಳು, ಮತ್ತು ರಾಮಕೃಷ್ಣ ಪರಮಹಂಸ ಶ್ರೀಗುಲಾಬರಾವ ಮಹಾರಾಜ ಮತ್ತುರಾಮಮಾರುತಿ

---

† ಈ ಓವಿಬದ್ಧ ಸಣ್ಣ ಪುಸ್ತಕದಲ್ಲಿ ಶ್ರೀಗಜಾನನ ಮಹಾರಾಜರ ಚರಿತ್ರ ಮತ್ತು ಅವರ ಶಿಷ್ಯರ ಅನುಭವಗಳೂ ಇವು ಸಂಕ್ಷೇಪವಾಗಿ ಕೊಟ್ಟಿರುತ್ತವೆ.

ಈ ಇತ್ತಲಾಗಿನ ಸಾಧುಗಳು ಆ ಮಹತ್ ಬ್ರಹ್ಮಕ್ಕೆ ಮುಟ್ಟಲಿಕ್ಕೆ ಮತ್ತು ಆತ್ಮ ಸಾಕ್ಷಾತ್ಕಾರ ಹೊಂದಲಿಕ್ಕೆ ಮಾರ್ಗ ತೋರಿಸಿದ್ದಾರೆ. ನನ್ನ ಸದ್ಗುರು ಮಾತೆಯು ಆ ಮಾರ್ಗವನ್ನು ನನಗೂ ತೋರಿಸಿದ್ದಾಳೆ. ಮತ್ತು "ಸೋಹಂ" ಮಂತ್ರವು ನನಗೆ ಕೊಟ್ಟಿರುತ್ತದೆ. ಆ ಸಂಬಂಧ ನನಗೇನಾದರೂ ಕೇಳಿದರೆ ನಾನು ಹೇಳಬಲ್ಲೆನು. ನೀವು ಮನಃಕಲ್ಪಿತ ಸಂಶಯಗಳನ್ನು ತೆಗೆದು ಇಡೀ ರಾತ್ರಿ ಎಲ್ಲ ಚರ್ಚೆ ಮಾಡುತ್ತ ಕೂತರೂ ಅದರಿಂದೇನೂ ಪ್ರಯೋಜನವಾಗಲಾರದು. ಎಲ್ಲ ಸಾಧುಗಳು ಕಪಟಿ, ಅವರ ಚಮತ್ಕಾರಗಳೆಲ್ಲ ಸುಳ್ಳು ಎಂತ ಹೇಳುತ್ತಿದ್ದರೆ, ನಾನು ಅದಕ್ಕೆ ಏನು ಹೇಳಲಿ?

**ಸಾಸವಡಕರಃ**— ಎಲ್ಲ ಸಾಧುಗಳು ಕಪಟ ಮತ್ತು ಎಲ್ಲ ಚಮತ್ಕಾರಗಳು ಸುಳ್ಳು, ಎಂದು ಅನ್ನುವದು ನನ್ನ ತಾತ್ಪರ್ಯವಲ್ಲ. ಇತ್ತಲಾಗೆ ತೋರಿಕೆ ಸಾಧುಗಳ ಮಹತ್ವವೇ ಬಹಳ, ಇಷ್ಟೇ ನನ್ನ ಅಂಬೋಣವು.

ಅದಕ್ಕೆ ಮಹಾರಾಜರಂದರು, "ಹಾಗಿರಬಹುದು. ಒಂದು ವೇಳೆ; ಆದರೆ ಅದಕ್ಕೇನು ಉಪಾಯವು? ಖರೇ ಸಾಧುಗಳು ನಾಲ್ಕು-ಐದು ಇದ್ದರೆ, ಕಪಟಿ ಸಾಧುಗಳು ನೂರಾರು ಇವೆ, ಅವರು ಖರೇ ಸಾಧುಗಳನ್ನು ಅನುಕರಣ ಮಾಡುತ್ತಾರೆ. ಮತ್ತು ತಾವೂ ಖರೇ ಸಾಧುಗಳೆಂತ ಲೋಕದಲ್ಲಿ ವರ್ತನೆ ಮಾಡುತ್ತಾರೆ, ಹೀಗೆಂತಲೇ ಜನರು ಮೋಸಗೊಳ್ಳುತ್ತಾರೆ. ಒಬ್ಬನ ಲಗ್ನದ ಹೆಂಡತಿ ಎರಡನೇಯುವನ ಕೂಡ ಹೋದಳೆಂತ ಲಗ್ನ ಮಾಡಿಕೊಳ್ಳುವದನ್ನು ಯಾರಾದರೂ ಬಿಡುತ್ತಾರೇನು? ರೈಲಗಾಡಿ, ಮೋಟಾರ, ವಿಮಾನ ಇವುಗಳ ಅಪಘಾತಗಳು ಎಂದಾದರೂ ಆಗುತ್ತವೆಂತ ಅವುಗಳನ್ನು ಉಪಯೋಗಿಸುವದು ಯಾರಾದರೂ ಬಿಟ್ಟಿದ್ದಾರೇನು? ಆ ಪ್ರಕಾರ ಸುಳ್ಳು ಸಾಧುಗಳೂ ಇರಬಹುದು. ಆದರೆ ಆ ಕಾರಣದಿಂದ ಪರಮಾರ್ಥ ಮಾರ್ಗದಲ್ಲಿರುವ ಸಾಧಕರು ಖರೇ ಸದ್ಗುರುಗಳನ್ನು ಹುಡುಕುವ ಯತ್ನ ಮಾಡಬಾರದೆಂತ ಅದರ ಅರ್ಥವಲ್ಲ. ಇಂಥ ಸಂಗತಿಗಳಲ್ಲಿ ಪ್ರತಿ ಒಬ್ಬರು ಬಹಳ ಎಚ್ಚರಿಕೆಯಿಂದ ನಡೆಯುತ್ತಿರಬೇಕು ಎಂದು ಇಷ್ಟೇ ನನ್ನ ಅಂಬೋಣವು."

ಮಹಾರಾಜರು ಹೀಗೆ ಅನ್ನುತ್ತಿರುವಾಗ, ನಾನು ದೃಷ್ಟಿಯನ್ನು ಅವರ ಮುಖದ ಮೇಲೆ ಇಟ್ಟಿದ್ದೆ. ಆಗ ಅವರ ಮುಖದ ಸುತ್ತಲೂ ಒಂದು ತೇಜದ ವರ್ತುಲ ಕಾಣಿಸಿತು. ಮತ್ತು ನಂತರ ನಮ್ಮ ದೇಹಗಳ ಮೇಲೆ ಮುಖದ ಮೇಲೆ, ಕೋಟುಗಳ ಮೇಲೆ ಸತರಂಜಿ ಮೇಲೆಲ್ಲ ಬುಕ್ಕಾದ ಮಳೆ ಸುರಿದಂತಾಯಿತು. ಮಹಾರಾಜರೂ ಅದರೊಳಗೆ ಸೇರಿದ್ದರು. "ನಾರಾಯಣ ಸರಸ್ವತಿಕೀ ಜಯ, ಗಣಪತಿ ಮಹಾರಾಜಕೀ ಜಯ" ಹೀಗೆ ಮಹಾರಾಜರು ಜಯಜಯಕಾರ ಮಾಡುತ್ತಿದ್ದರು. ಸರ್ವರಿಗೂ ಆನಂದವಾಯಿತು. ಪ್ರಧಾನರು ಮಹಾರಾಜರನ್ನು ಮಾಳಿಗೆ ಮೇಲೆ

ಕರಕೊಂಡು ಹೋದರು. ಆಗ ಪ್ರಧಾನರ ತಲೆಯ ಮೇಲೆ ಮೈಮೇಲೆಲ್ಲ ಬುಕ್ಕಾ ಸುರಿಯಲ್ಪಟ್ಟಿತು. ಅನಂತರ ಮನೆ ಮುಂದಿ ಎಲ್ಲ ಆ ಮಾಳಿಗೆ ಮೇಲೆ ಬಂದರು. ಅವರು ಮಹಾರಾಜರನ್ನು ಮಣೆಯ ಮೇಲೆ ಕೂಡ್ರಿಸಿ, ಚಹಾ ಕೊಟ್ಟರು. ಮತ್ತು ಸರ್ವರೂ ಮಹಾರಾಜರ ದರ್ಶನ ತಕ್ಕೊಂಡರು, ರಾವಸಾಹೇಬ ಗುಪ್ತೆ ಅವರೊಳಗಿದ್ದರು. ಎಲ್ಲರೂ ಆದರೊಳಗಿನ ಸ್ವಲ್ಪ ಸ್ವಲ್ಪ ಬುಕ್ಕಾ ತಕ್ಕೊಂಡು, ಡಬ್ಬಿಗಳಲ್ಲಿ ಹಾಕಿಟ್ಟರು. ಕೆಲವರ ಕಡೆ ಅದು ಈಗ ನಾಲ್ಕೈದು ವರ್ಷದ ಹಿಂದೆ ತನಕ ಇತ್ತು, ಆ ಮೇಲೆ ರಾತ್ರಿ ಹನ್ನೊಂದು ಹೊಡೆಯುವಾಗ ಎಲ್ಲರೂ ಹೊರಟು ಹೋದರು. ಈ ಚಮತ್ಕಾರವು ಧುಳೆಯಲ್ಲಿ ಬಹಳ ಜನರಿಗೆ ಗೊತ್ತಾಯಿತು. ಇದರ ನಂತರ ಮಹಾರಾಜರು ಬೇಗನೆ ಮುಂಬಯಿಗೆ ಹೊರಟು ಹೋದರು, ಆಗ್ಗೆ ಮಹಾರಾಜರು ಧುಳೆಯಲ್ಲಿ ಹತ್ತು ಹನ್ನೊಂದು ತಿಂಗಳು ವಾಸ ಮಾಡಿದ್ದರು. "ಆದಷ್ಟುಮಟ್ಟಿಗೆ ಈ ಚಮತ್ಕಾರವನ್ನು ಜನರೊಳಗೆ ಪ್ರಸಿದ್ಧ ಮಾಡಬೇಡಿರಿ" ಎಂದು ಮಹಾರಾಜರು ಎಲ್ಲರಿಗೂ ವಿನಂತಿ ಮಾಡಿದ್ದರು.

ಎರಡನೇ ದಿವಸ ಸಾಸವಡಕರ ಮತ್ತು ಮಾಧವರಾವ ವೈದ್ಯ ಇವರು ಮಹಾರಾಜರ ದರ್ಶನಕ್ಕೆ ಹೋಗಿದ್ದಾಗ ಅವರೊಳಗೆ ಈ ಮುಂದೆ ಹೇಳಿದ ಪ್ರಕಾರ ಸಂಭಾಷಣೆ ನಡೆಯಿತು.

ವೈದ್ಯ:— ನಾನು ಪುಣೆಯಲ್ಲಿ ಒಂದೆರಡು ಸಾಧುಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿದೆ. ಅದಕ್ಕೆ ಅವರೊಳಗೆ ಒಬ್ಬರಂದರು, "ನಾವು ನಮ್ಮ ಶಿಷ್ಯರಿಗೆ ದೃಷ್ಟಾಂತವನ್ನು ಕೊಡುತ್ತೇನೆ. ಮತ್ತು ಪರಮಾರ್ಥದ ಉಪದೇಶವನ್ನು ಕೊಡುತ್ತೇನೆ. ಯಾರು ನಮ್ಮ ಆಜ್ಞೆಪ್ರಕಾರ ನಡೆಯುತ್ತಾರೆ, ಅವರ ಮರಣ ಕಾಲದಲ್ಲಿ ನಾವು ರಕ್ಷಣೆ ಮಾಡುತ್ತೇವೆ. ಮೃತ್ಯು ನಂತರ ಅವರು ಜನ್ಮಕ್ಕೆ ಬರುತ್ತಾರೆ. ಮತ್ತು ನಮ್ಮಂತೆ ಸಾಧು ಆಗುತ್ತಾರೆ. ಈಶ್ವರನು ಪ್ರತ್ಯಕ್ಷ ಅವರ ಕೂಡ ಮಾತಾಡುತ್ತಾನೆ. ಆದರೆ ಅವರ ಪೂರ್ಣ ವಿಶ್ವಾಸ ಬೇಕು, ಅವರು ನಮ್ಮ ಸೇವಾ ಯೋಗ್ಯ ರೀತಿಯಿಂದ ಮಾಡದಿದ್ದಡೆ, ಅವರ ಕಲ್ಯಾಣಕ್ಕಾಗಿ ನಾವು ಲಕ್ಷ ಕೊಡುವಲ್ಲ. ಯಾಕೆಂದರೆ ನಾವು ನಮ್ಮ ಪುಣ್ಯದ ಕೆಲವು ಅಂಶವನ್ನು ಅವರಿಗೆ ಕೊಡಬೇಕಾಗುತ್ತದೆ: ನಮ್ಮ ಶಿಷ್ಯರ ದುಃಖಗಳನ್ನು ನಾವು ತಕ್ಕೊಳ್ಳಬೇಕಾಗುತ್ತದೆ." ನಾನು ಮತ್ತು ನನ್ನ ಮಿತ್ರ ಇದಕ್ಕೆ ಕಬೂಲಾದೆವು. ಒಬ್ಬರಂದರು "ರಾಮನಾಮವನ್ನು ಕಾಗದದ ತುಂಡುಗಳ ಮೇಲೆ ಬರೆದು ಇಂಥ ಒಂದು ಲಕ್ಷ ತುಂಡುಗಳನ್ನು ತಕ್ಕೊಂಡು ಗೋದಿ ಹಿಟ್ಟು ಕಲಿಸಿ ಗುಳಿಗೆಗಳನ್ನು ಮಾಡಿ, ಅವುಗಳಲ್ಲಿ ಆ ತುಂಡುಗಳನ್ನು ಸೇರಿಸಿ, ನೀರೊಳಗಿನ ಮೀನುಗಳಿಗೆ ತಿನ್ನಲಿಕ್ಕೆ ಕೊಡಬೇಕು. ಅಂದರೆ ಈಶ್ವರನ ದರ್ಶನವಾಗುವದು." ಮತ್ತೊಬ್ಬನಂದನು, "ಮರಣನಂತರ ನಾವು ಶಿಷ್ಯನ ಉದ್ಧಾರ ಮಾಡುತ್ತೇವೆ. ನೀವು ಚಿತ್ತ ಶುದ್ಧಿ ಮಾಡಿರಿ,

ಈಶ್ವರನ ಸತತ ಸ್ಮರಣ ಮಾಡಿರಿ." ಮೂರನೆಯುವನೊಬ್ಬನು ಅಂದನು, "ಸ್ತ್ರೀಯರ ಉದ್ಧಾರದ ಸಲುವಾಗಿಯೇ ನಮ್ಮ ಜನ್ಮವು."

ಮಹಾರಾಜರು. ಈ ಕಡೆ ಮಾತು ಹೇಳಿದ ಸಾಧುವಿನ ಹೆಸರು ಹೇಳಬೇಕಾಗಿ ಆಗ್ರಹ ಮಾಡಿದರು. ವೈದ್ಯರಂದರು, ಆ ಸಾಧುವಿನ ಹೆಸರು ಜಗತ್ಪ್ರಸಿದ್ಧವದೆ, ಇನ್ನು ಕೆಲವು ಕಾಲದಲ್ಲಿ ಅವರು ಸುಳ್ಳು ಮತ್ತು ಕಪಟಿ ಎಂದು ಪ್ರಸಿದ್ಧವಾಗುವದದೆ." 'ಒಳ್ಳೇದು, ಇರಲಿ, ನನಗೆ ಅವರ ಹೆಸರಿನ ಕಾರಣವಿಲ್ಲ.' ಹೀಗಂದು ಅವರು ಮುಂದೆ ಅಂದರು, " ನನ್ನ ಮನೆ ಸ್ವಚ್ಛವಿರುವದೋ ಎಂಬದನ್ನು ನಾನು ನೋಡಬೇಕಾಗಿದೆ, ಸತ್ಯ ಏನೆಂಬದು ಕಂಡು ಹಿಡಿಯಲಿಕ್ಕೆ ಬೇಕಾದ ಸೂಕ್ಷ್ಮ ಬುದ್ಧಿಯು ಬೇಕು; ಸುಮ್ಮನೆ ನಿರಾಧಾರ ಶಂಕಾ ಅಥವಾ ಸಂಶಯ ತೆಗೆಯುವ ಬುದ್ಧಿ ಇರಬಾರದು, ಮನುಷ್ಯರಲ್ಲಿ ಏನು ಇರಬೇಕಾಗುವದೋ ಅದು ಇದೆ, ಪರಮಾರ್ಥಿ ಮನುಷ್ಯನ ಹತ್ತರ ಖರೇ ಚಾತುರ್ಯವಿದ್ದರೆ, ಅವನು ಎಂದೂ ಮೋಸ ಹೋಗಲಾರನು. ನೀವು ನನ್ನ ಬಾಂಧವರಂತಿದ್ದೀರಿ. ಆದ್ದರಿಂದ ಈ ಸಂಬಂಧ ನನಗೆ ಏನು ತೋರುವದೋ ಅದನ್ನು ನಿಮಗೆ ಸ್ಪಷ್ಟ ಮಾಡಿ ಹೇಳುತ್ತೇನೆ. ನನ್ನಲ್ಲಿಸಹ ಬಹಳ ದುರ್ಗುಣಗಳು ಅವೆ, ಒಂದೂ ಒಳ್ಳೇಚಾಳಿ ನನ್ನಲ್ಲಿಲ್ಲ, ನನ್ನಲ್ಲಿ ಒಳ್ಳೆಯದು ಯಾವದು ಕೆಟ್ಟದ್ದು ಯಾವದು ಇದರ ಪರೀಕ್ಷೆ ನೀವೇ ಮಾಡತಕ್ಕದ್ದು."

ಪ್ರಾಚೀನ ಕಾಲದಲ್ಲಿ ಅನೇಕ ಸಾಧುಗಳು ಪ್ರಸಿದ್ಧರಾಗಿದ್ದರು, ಈಗಲೂ ಇದ್ದಾರೆ, ಮತ್ತು ಮುಂದೆಯೂ ಆದಾರು, ಖರೆ ಆನಂದದ ಉಗಮವು ತನ್ನ ಸಮೀಪವೇ ಇದೆ, ಹೀಗೆ ಬಹಳ ಸಾಧುಗಳು ಹೇಳಿದ್ದಾರೆ. ಈ ಆತ್ಮಾನಂದದ ಅನುಭವವು ಹ್ಯಾಗೆ ಹೊಂದಬೇಕು ಎಂತ ತಿಳಿಯಲಿಕ್ಕೆ ಸದ್ಗುರು ಕಡೆ ಹೋಗಬೇಕು; ಮತ್ತು ಅವರ ಉಪದೇಶದಂತೆ ಆಚರಣೆ ಮಾಡುವದೇ ಕರ್ತವ್ಯವು. ಈ ಆತ್ಮಾನುಭವದ ಸತ್ಯಮಾರ್ಗ ನಿಮಗೆ ಸಿಕ್ಕಿದ್ದಾದರೆ, ಸರ್ವ ಐಹಿಕ ವ್ಯವಹಾರ ಮಾಡುತ್ತಿರುವಾಗ್ಯಾದರೂ ಈ ಆತ್ಮಾನಂದವು ನಿಮಗೆ ಸಿಕ್ಕುತ್ತಿದ್ದೀತು. ಸ್ತ್ರೀಯರ ಉದ್ಧಾರ ಮಾಡುವದೆ ಈ ಲೋಕದಲ್ಲಿ ತನ್ನ ಕಾರ್ಯವೆಂದು ಯಾವನಾದರೂ ಸಾಧು ಅಂದದ್ದಾದರೆ, ಅವನು ಅವರೊಳಗೆ 'ಸ್ಪೆಶಲಿಷ್ಟ' ( Specialist ) ಎಂತ ತಿಳಿಯಬೇಕು. ಈಶ್ವರನ ಭಕ್ತನು ಏನೇನೂ ಆತಗೆ ಬೇಡುತ್ತಾನೋ ಅದನೆಲ್ಲಾ ಈಶ್ವನು ಕೊಡುತ್ತಾನೆ. ಈ ಸಾಧು ಇಂಥ ವರವನ್ನು ಈಶ್ವರನಿಂದ ಬೇಡಿಕೊಂಡಿರಬೇಕು, ಮತ್ತು ಈಶ್ವರನು ಅವನಿಗೆ ಅದನ್ನು ಕೊಟ್ಟಿರಬೇಕು, ಆದರೂ ಶ್ರೀ ಜ್ಞಾನೇಶ್ವರ, ತುಕಾರಾಮ, ಏಕನಾಥ ಇವರಂಥಾ ಶ್ರೇಷ್ಠ ಸಾಧುಗಳು ತಾವು ಸ್ತ್ರೀಯರ ಉದ್ಧಾರಾರ್ಥ ಮಾತ್ರವಲ್ಲದೆ ಎಲ್ಲಾ ಮಾನವೀ ಜೀವದ ಉದ್ಧಾರಕ್ಕಾಗಿ ಬಂದಿರುತ್ತೇವೆ ಎಂದು ಹೇಳಿರುವರು.

ಮೀರಾಬಾಯಿ, ಮುಕ್ತಾಬಾಯಿ, ಜನಾಬಾಯಿ, ಬಹಿಣಾಬಾಯಿ ಇವರಂಥಾ ಸ್ತ್ರೀ ಸಂತರಾದರೂ ತಾವು ಪುರುಷರ ಉದ್ಧಾರಾರ್ಥವಾಗಿ ಮಾತ್ರ ಬಂದಿರುವೆವು ಎಂತ ಎಲ್ಲ್ಯೂ ಹೇಳಲಿಲ್ಲ. ಪ್ರಾಚೀನ ಋಷಿಗಳು, ಉಪನಿಷದ್ ಅಥವಾ ಯೋಗ ಶಾಸ್ತ್ರದಲ್ಲಿ ಈ ಪ್ರಕಾರ ಎಲ್ಲಿಯೂ ಹೇಳಲಿಲ್ಲ, ಅರ್ವಾಚೀನ ಸಾಧುಗಳ ಪೈಕಿ ಮಾತ್ರ ಈ 'ಸ್ಪೇಶಲ್' ತಜ್ಞರನ್ನು ಈಶ್ವರನು ಉತ್ಪನ್ನ ಮಾಡಿದನು ಎಂಬಂತೆ ಇವರ ಮಾತುಗಳ ಮೇಲಿಂದ ಕಾಣುತ್ತದೆ. ಸತ್ಯಾಸತ್ಯಗಳನ್ನು ವಿಚಾರದ ಒರೆಗಲ್ಲಿಗೆ ಹಚ್ಚಿನೋಡಬೇಕು ಅಂದರೆ ಮೋಸವಾಗಲಾರದು.

ನನ್ನ ವಿಷಯ ಕೇಳುವದಾದರೆ, ನಾನು ಈ ಭವಸಾಗರದಲ್ಲಿ ಒಂದು ಕಟ್ಟಿಗೆಯ ತುಂಡು ಇದ್ದಂತೆ ಬಿಡಲ್ಪಟ್ಟಿರುತ್ತೇನೆ. ಯಾರು ಈ ಪ್ರವಾಹವನ್ನು ಉತ್ಪನ್ನ ಮಾಡಿದ್ದಾರೆ ಅವರ ಇಚ್ಛೆಪ್ರಕಾರ ನಡಿಯುವದೇ ಈ ಕಟ್ಟಿಗೆಯ ಕಾರ್ಯ. ನೀವು ನನಗೆ ಸಾಧು ಅನ್ನುತ್ತೀರಿ, ಆದರೆ ನಾನು ನಿಮ್ಮ ಮುಖ ವನ್ನು ಹ್ಯಾಗೆ ಸ್ತಬ್ಧ ಮಾಡಲಿ? ನಾನು ನಿಮಗೆ ಹೇಳುತ್ತೇನಲ್ಲ, ನಾನು ಮಹಾ ರಾಜನಲ್ಲ. ಆದರೂ ನೀವು ನನ್ನನ್ನು ಮುದ್ದಾಂ ಸಾಧು ಅನ್ನುತ್ತೀರಿ. ನೀವು ಸುಮ್ಮನೆ ಕಲ್ಲಿಗೆ ಶೇಂದೂರ ಹಚ್ಚಿ ದೇವ ಅಂತ ಅನ್ನುತ್ತೀರಿ.

**ವೈದ್ಯ:**— ಮಹಾರಾಜರೇ, ಬಂಗಾರಕ್ಕೆ ಮುಲಾಮು ಮಾಡಿಸುವದು ಅವ ಶ್ಯವೇನು? ನಿಜವಾದ ರತ್ನವು ಅಂಧಕಾರದಲ್ಲಿ ಅಡಗುವದೇನು? ಗುಲಾ ಬಿಯು, ಸಂಪಿಗೆಯು, ಅಥವಾ ಕಸ್ತೂರಿಯ ವಾಸನೆಯು ಅಡಗಿತೋ?

**ಮಹಾರಾಜರು:**— ಇಂಥಾ ನಿರರ್ಥಕ ಪ್ರಶ್ನೆಗಳ ವಾಟಾಘಾಟಿ ಮಾಡು ವವರಲ್ಲಿ ಅರ್ಥವೇನು? ಅವರವರ ಕರ್ಮಫಲ ಅವರವರೇ ಭೋಗಿಸಬೇಕಾಗು ತ್ತದೆ. ಸಾಧುಗಳ ದೋಷವನ್ನೆತ್ತುವದನ್ನು ಮುಂದೆ ಎಂದೂ ಮಾಡಬೇಡಿರಿ. ಅವರೊಳಗೆ ಒಮ್ಮೊಮ್ಮೆ ಖರೇ ಸಾಧುಗಳೂ ಇರುವರು. ಅವರು ಬ್ರಹ್ಮಸಾಕ್ಷಾ ತ್ಕಾರಿ ಇರುತ್ತಾರೆ. ಇತರ ಸಾಧುಗಳ ಕೂಡ ಇಂಥವರಿಗೂ ದೋಷ ಕೊಟ್ಟಂತಾ ಗುವದು, ಇದು ಒಳ್ಳೇದಲ್ಲ.

**ಮಾಧವರಾವ:**— ಅಜ್ಞಾನಿ ಹುಡುಗರಿಗೆ ಕಲಿಸುವದು ಹಿರಿಯರ ಕರ್ತವ್ಯವಲ್ಲವೇ? ಇದೇ ನನ್ನ ಕಡೆ ಪ್ರಶ್ನೆ,

**ಮಹಾರಾಜರು:**— ಜನರು, ಅಜ್ಞಾನಿಗಳೆ ಇದ್ದರೂ ಅವರ ಬುದ್ಧಿಭೇದ ಮಾಡಬಾರದು, ಎಂದು ಶಾಸ್ತ್ರದಲ್ಲಿ ಹೇಳಿದೆ, ಇದಕ್ಕೆ ಮಾಧವರಾಯರಂದರು— " ಶಾಲೆಯಲ್ಲಿ ವಿದ್ಯಾ ಕಲಿತವರಿಗೆ ಈ ತತ್ವ ಹತ್ತಲಿಕ್ಕಿಲ್ಲ." "ನೀವು ಎಂದಾದರೂ ಮೋಸ ಹೊಂದಿರುವಿರೋ?" ಎಂದು ಮಹಾರಾಜರು ಕೇಳಿದ್ದಕ್ಕೆ, ಮಾಧವಂತ ಹುರು ಉತ್ತರಕೊಟ್ಟರು. " ಈಗ ಹತ್ತುವರ್ಷಗಳಾದವು, ನಾನು ಸಾಧುಗಳ

ಪ್ರಶ್ನೆ:— ನೀವು ಧುಳಿಯಲ್ಲಿ ಎಷ್ಟು ಸಾಧುಗಳ ದರ್ಶನವನ್ನು ತಕ್ಕೊಂಡೀರಿ ? ಮತ್ತು ಎಷ್ಟು ಮಂದಿ ಕಡೆಯಿಂದ ಉಪದೇಶ ತಕ್ಕೊಂಡೀರಿ ? ನನ್ನ ಉಪದೇಶದ ನಂತರ ನೀವು ಮತ್ತು ಎಷ್ಟು ಮಂದಿಯನ್ನು ಹುಡುಕಿ ಕೊಂಡು ಹೋಗುವಿರಿ, ಮತ್ತು ಅವರ ಉಪದೇಶ ತಕ್ಕೊಳ್ಳುವಿರಿ ? ಸಾಧುಗಳನ್ನು ಹುಡುಕುವದು ಮತ್ತು ಅವರ ಉಪದೇಶ ತಕ್ಕೊಳ್ಳುವದು ಈ ನಿಮ್ಮ ಚಟಾ ನಿರಂತರ ಹೀಗೇ ಇದ್ದೀತೇನು ?

ಉತ್ತರ:—ಎಲ್ಲಿ ತನಕ ನನ್ನ ಮನಸ್ಸು ಶಾಂತವಾಗುವದು, ಮತ್ತು ಅಂತರ್ದೃಷ್ಟಿ ಪ್ರಾಪ್ತವಾಗಲಾರದು. ಅಲ್ಲಿತನಕ ನಾನು ಮತ್ತೊಂದೇನು ಮಾಡಲಿ ? ನನ್ನ ಇಚ್ಛೆ ತೃಪ್ತಿಯಾಗುವ ತನಕ ನನ್ನ ಸಾಧು ಶೋಧನ ನಡಿಯ ಲಿಕ್ಕೆಬೇಕು.

ಪ್ರಶ್ನೆ:— ನಾರಾಯಣ ಮಹಾರಾಜರು ಚಮತ್ಕಾರಗಳನ್ನು ಮಾಡುತ್ತಿರುವಾಗ್ಗೆ ಎಂದಾದರೂ ನೋಡಿದ್ದಿರೇನು? ಮತ್ತು ಯಾರು ಚಮತ್ಕಾರಗಳನ್ನು ಮಾಡಿ ತೋರಿಸುತ್ತಾರೆ ಅವರೇ ನಿಮಗೆ ಉಪದೇಶ ಕೊಡಲಿಕ್ಕೆ ಯೋಗ್ಯ ಸದ್ಗುರುಗಳು ಎಂದು ನಿಮ್ಮ ಅಭಿಪ್ರಾಯವೇನು?

ಉತ್ತರ:— ನಾರಾಯಣ ಮಹಾರಾಜರು ಮಾಡಿದ ಅನೇಕ ಚಮತ್ಕಾರಗಳನ್ನು ನಾನು ನೋಡಿದ್ದೇನೆ. ಭಾವಿಯೊಳಗಿಂದ ಮಿಠಾಯಿ ತುಂಬಿರುವ ಕಾಟುಗಳನ್ನು ತೆಗೆದು ಅವರು ಒಮ್ಮೆ ನಮಗೆಲ್ಲ ಪ್ರಸಾದ ಹಂಚಿದ್ದಾರೆ. ಇನ್ನೊಮ್ಮೆ ತನ್ನ ಅಂಗೈಯಿಂದ ಗಂಗಾಜಲವನ್ನು ತೆಗೆದು ನಮಗೆ ತೋರಿಸಿದ್ದಾರೆ.

ಪ್ರಶ್ನೆ:— ಉಪದೇಶ ತಕ್ಕೊಳ್ಳುವ ಸಲುವಾಗಿ ನೀವು ನನ್ನ ಯಾವ ಚಮತ್ಕಾರವನ್ನು ನೋಡಿದಿರಿ ?

ಉತ್ತರ:— ರಾಜೆಯವರು ನನಗೆ ತಮ್ಮ ವಿಷಯ ಹೇಳಿದ್ದಾರೆ. ಮತ್ತು ಕಳದ ಎಳೆಂಟು ದಿನ ನಾನು ಒಂದೇ ಸಮನೆ ನಿಮ್ಮ ಕಡೆಗೆ ಬರುತ್ತಿದ್ದೇನೆ. ನನಗೆ ಸಹಾ ಇಲ್ಲಿ ಸುವಾಸ ಬರುತ್ತ ಇದೆ, ಒಂದು ಕ್ಷಣ ಮದ್ಯದ ವಾಸ ಬರುತ್ತದೆ. ತತ್ಕಾಳವೆ, ಧೂಪದವಾಸ ಬರುತ್ತದೆ. ಎರಡನೇ ಕ್ಷಣದಲ್ಲಿ ಚಮೇಲಿ ಹೂವ್ವಿನ ಗಂಧ ಬರುವದು. ಹೀಗಿದ್ದು, ನನ್ನ ಮನಸ್ಸು ನನಗೆ ಹೇಳುತ್ತದಲ್ಲ, ನೀವು ಆತ್ಮಸಾಕ್ಷಾತ್ಕಾರಿ ಸಾಧುಗಳಿರಬೇಕು. ಅಲ್ಲ ಇದ್ದೀರಿ,

ಪ್ರಶ್ನೆ:— ಭಾವಿಯೊಳಗಿಂದ ಪೇಢೆ, ಬರ್ಫಿ ಇವುಗಳ ಕಾಟುಗಳು ಹೊರಗೆ ತೆಗೆಯುವದು ಮತ್ತು ಸುವಾಸ ಹೊರಗೆ ಹಾಕುವದು, ಇವೆರಡರಲ್ಲಿ

ಮಹದಂತರವಿದೆ. ಪೇಢೆ ಬರ್ಫಿಗಳಿಂದ ನಿಮ್ಮ ಹೊಟ್ಟೆಯಾದರೂ ತುಂಬುವದು, ಆದರೆ ಬರೇ ಸುವಾಸದಿಂದ ಏನು ಉಪಯೋಗವಾದೀತು ?

**ಉತ್ತರ:**— ಮಹಾರಾಜರೇ, ನೀವು ಈಗ ನನ್ನನ್ನು ಹೆಚ್ಚಿಗೆ ಪರೀಕ್ಷಿಸಿ ನೋಡಬೇಡಿರಿ. ನಾನು ನಿಜವಾಗಿ ಅಜ್ಞಾನಿ ಇದ್ದೇನೆ. ಆದರೂ ನೀವು ಹೇಳಿದಂತೆ ಧ್ಯಾನದ ಅಭ್ಯಾಸ ಮಾಡಲಿಕ್ಕೆ ಹತ್ತಿದ ಲಾಗಾಯತು ಮಾನಸಿಕ ಸ್ವಾಸ್ಥ್ಯ ಸಿಗಲಿಕ್ಕೆ ಆರಂಭವಾಗಿದೆ. ಈ ಸಂಗತಿಯು ನಿಜವಾಗಿದೆ. ಯಾವದರಿಂದ ನಿಮ್ಮ ದೊಡ್ಡಸ್ಥಿಕೆಯು ಸಿಕ್ಕಯುವಾದೀತೋ ಅದೊಂದು ಸಂಗತಿಯನ್ನು ನಾನು ನಿಮಗೆ ಹೇಳುವೆನು. ಅದೇನೆಂದರೆ— ನನ್ನ ನಾಲ್ಕು-ಐದು ಮಿತ್ರರ ಕೂಡ ನಾನು ಪಂಢರಪುರಕ್ಕೆ ಹೋಗಿದ್ದೆ, ಆಗ ಚಂದ್ರಭಾಗೆಯ ತೀರದಲ್ಲಿ "ತಪಕೀರಿ ಬುವಾ" ಎಂಬ ಒಬ್ಬ ಸಾಧು ಇರುತ್ತಿದ್ದರು. ಅವರು ದೊಡ್ಡ ಶರೀರದವರು, ಧಷ್ಟ-ಪುಷ್ಟ ಇದ್ದರು. ಅವರು ಅಜಾನುಬಾಹುಗಳಿದ್ದರು. ಅವರಿಗೆ ಉದ್ದವಾದ ಗಡ್ಡವಿತ್ತು. ಟೊಂಕಕ್ಕೆ ಗೋಣಿ ಚೀಲದ ತುಂಡು ಸುತ್ತಿದ್ದಿದ್ದು, ಮತ್ತೇನೂ ವಸ್ತ್ರ ಅವರ ಮೈಮೇಲೆ ಇದ್ದಿಲ್ಲ. ಕಂಕುಳದಲ್ಲಿ ಒಂದು ಜೋಳಿಗೆ ಇದ್ದು, ನೀರು ಕುಡಿಯಲಿಕ್ಕೆ ಕೈಯಲ್ಲಿ ಒಂದು ಜಸ್ತದ ಡಬ್ಬಿ ಇತ್ತು. ಅವರು ಮೌನ ಧಾರಣೆ ಮಾಡಿದ್ದರು. ಅವರು ಯಾರೊಬ್ಬರ ಕೂಡ ಮಾತಾಡುತ್ತಿದ್ದಿಲ್ಲ, ನಾನು ಅವರನ್ನು ನೋಡಿ ನಮಸ್ಕಾರ ಮಾಡಿದೆನು ಆಗ ಅವರಂದರು, ನಿಮ್ಮ ಊರಾದ ಧುಳಿಗೆ ಒಬ್ಬ ಸಾಧು ಬಂದಾನು. ಆದರೂ ನೀನು, ಅವನು ಸಾಧು ಎಂದು ತಿಳಿಯಲಾರೆ. ನಾನು ಸ್ವತಃ ಸಾಧು ಸ್ವರೂಪದಿಂದ ಅಲ್ಲಿಗೆ ಬರುವೆನು. ಮತ್ತು ನಿನ್ನ ಅಂತಃಕರಣದೊಳಗಿನ ಆಶೆಯನ್ನು ತೃಪ್ತಿ ಮಾಡುವದಕ್ಕಾಗಿ ನಾನು ನಿನಗೆ ಖರೇ ಮಾರ್ಗವನ್ನು ತೋರಿಸುವೆನು. ಈ ಶಬ್ದಗಳನ್ನು ಕೇಳಿ ನಾನು ಮೂಕನಾದೆನು. ಮತ್ತು ನನ್ನ ಹೃದಯವು ಅತ್ಯಾನಂದದಿಂದ ತುಂಬಿ ಹೋಯಿತು.

(೪೩) **ಶ್ರೀ ತಪಕೀರಿ ಮಹಾರಾಜ**·— ಇದನ್ನು ಕೇಳಿ ಮಹಾರಾಜರಿಗೆ ಆನಂದವಾಯಿತು. ಅವರಂದರು,- ನೀವು ನೋಡುವ ಮೊದಲೇ ನಾನು ತಪಕೀರಿ ಮಹಾರಾಜರನ್ನು ನೋಡಿದ್ದೆ. ನಾನು ಅಕೋಲೆಯ ಗುಪ್ತೆಯವರ ಕೂಡ ಪಂಢರಪುರಕ್ಕೆ ಹೋಗಿದ್ದೆ. ತನ್ನ ಮಗಳಿಗೆ ಹುಡುಗ ಹುಟ್ಟಿದನೆಂತ ಅವರು ಕುಟುಂಬ ಸಹಿತ ಅಲ್ಲಿರುವ ತನ್ನ ಅಳಿಯನ ಮನೆಗೆ ಹೋಗಿದ್ದರು, ಈ ಅಳಿಯ ಅಲ್ಲಿ ಅಬಕಾರಿ ಇನಸ್ಪೆಕ್ಟರ ಇದ್ದನು, ಗುಪ್ತೆ ವಕೀಲರಿಗೆ ನಾನು ಅಣ್ಣನೆಂತ ಕರೆಯುತ್ತಿದ್ದೆ. ಮರುದಿನ ನಾನು ಚಂದ್ರಭಾಗೆಯ ಸ್ನಾನಕ್ಕೆ ಹೋಗುತ್ತಿದ್ದೆ, ಆ ನದಿಯ ದಂಡೆಯ ಮೇಲೆ ಮುರಿದು ಬೀಳಲಿಕ್ಕೆ ಬಂದ ಒಂದು ಹಳೇ ದೇವಾಲಯವಿತ್ತು. ಅದರ ಹತ್ತರ ಒಂದು ಅರಳಿ ಗಿಡವಿತ್ತು. ತಪಕೀರಿ ಬುವಾ ಅಲ್ಲಿ ಕೂತಿದ್ದರು, ನಾನು ಬರಿಗಾಲಿಲೇ ನಡಕೊಂಡು ಹೋಗುತ್ತಿದ್ದೆ. ಆಗ್ಗೆ ಮೇತಿಂಗಳು ಇದ್ದದರಿಂದ ಕಾಲು ಸುಡುತ್ತಿದ್ದವು. ಅಬಕಾರಿ ಇನ್ಸಪೇಕ್ಟರ ರಾಜೆ ಇವರು

ದರ್ಶನ ತಕ್ಕೊಳ್ಳುತ್ತಾ ಇರುತ್ತೇನೆ. ನಾನು ಎಂದೂ ಮೋಸ ಹೋಗಲಿಲ್ಲ, ಮತ್ತು ಮುಂದೆ ಎಂದಾದರೂ ಮೋಸಪಟ್ಟೇನೆಂತ ಅನಿಸುವದಿಲ್ಲ. ಇದರದು ನನಗೆ ನಿಶ್ಚಯವಿದೆ." ಮುಂದೆ ಅವರಂದರು, " ಜನರಿಗೆ ಸತ್ಯದ ಜ್ಞಾನವನ್ನು ತಿಳಿಸಿ ಕೊಡುವದು, ಇದು ಖರೇ ಸಾಧುವಿನ ಕರ್ತವ್ಯವು. ಅಜ್ಞಾನಿ ಜನರು ಮೋಸಗೊಳ್ಳಬಾರದೆಂದು ತುಕಾರಾಮ, ರಾಮದಾಸ ಏಕನಾಥ ವ ಗುಲಾಬ ರಾವ ಮಹಾರಾಜರು ವಗೈರೆ ಶ್ರೇಷ್ಠ ಸಾಧುಗಳು ಸಹ ಕಪಟಿ ವ ನಕಲಿ ಸಾಧು ಗಳನ್ನು ತೀವ್ರ ಶಬ್ದಗಳಿಂದ ನಿಷೇಧ ಮಾಡಿರುತ್ತಾರೆ, ಇವೆಲ್ಲ ಸತ್ಪುರುಷರು ಅಲ್ಲವೇನು? ಹಾಗಾದರೆ ಅವರು ಯಾಕೆ ಮತ್ತೊಬ್ಬರ ದೋಷ ತೆಗೆದರು? ಅವರು ಎಲ್ಲಕಡೆಯಲ್ಲಿ ಈಶ್ವರ ಸ್ವರೂಪ ನೋಡುತ್ತಿದ್ದರೂ ಅವರು ಹೀಗೆ ಯಾಕೆ ಮಾಡಬೇಕು ಇದು ನನಗೆ ತಿಳಿಯುವದಿಲ್ಲ.

ಮಹಾರಾಜರು:— ಮಾಧವರಾವ, ನಿಮ್ಮ ಅಂಬೋಣ ತಪ್ಪಿರುತ್ತದೆ. ಆ ಶ್ರೇಷ್ಠ ಜನರಿಗೆ ಹಾಗೆ ಮಾಡುವ ಅಧಿಕಾರವಿದೆ. ಈ ಮಹಾನ್ ವಿಭೂತಿ ಗಳಿಗೆ ಸರ್ವ ಜಗತ್ತಿನ ಮೇಲೆ ಸತ್ತಾ ನಡಿಸುವ ಅಧಿಕಾರವದೆ. ಅವರಂತೆ ಆಚರಿ ಸುವದು ನಮ್ಮಂಥವರಿಗೆ ಶೋಭಿಸೀತೇನು? ನನ್ನ ಸದ್ಗುರುವು ನನಗೆ "ಸೋಹಂ" ದ ದಿವ್ಯ ಜ್ಯೋತಿಯನ್ನು ಕೊಟ್ಟಿರುವನು. ಸ್ನಾನ, ಸಂಧ್ಯಾ, ಜಪ, ತಪ ಇವೆಲ್ಲ ನಾನು ನನ್ನ ಮನಸ್ಸಿನೊಳಗೆ ಮಾಡುತ್ತೇನೆ. ನಾನು ಜನರೊಳಗೆ ಕೂಡುತ್ತೇನೆ. ಮತ್ತು ಅವರೊಳಗೆ ಅವರಂತೆಯೇ ಮಾತಾಡುತ್ತೇನೆ, ಸಾಧು ಅಥವಾ ವಿದ್ವಾನ್ ಸದ್ವರ್ತನಿ ಜನರೊಳಗಿಂದ ಉತ್ತಮರನ್ನು ಆರಿಸುವಂಥಾದ್ದು ಮತ್ತು ಅವರ ಗುಣಗಳನ್ನು ನನ್ನಲ್ಲಿರುವಂತೆ ಮಾಡಬೇಕಾದಂಥ ಪ್ರಯತ್ನಗಳನ್ನು ನಾನು ಮಾಡುತ್ತೇನೆ. ಮತ್ತು ನನ್ನ ಮನಸ್ಸಿನಲ್ಲಿ ಏನೇನು ದುರ್ಗುಣಗಳಿದ್ದಾವು ಅವನ್ನು ಝಾಡಿಸಿ ತೆಗೆಯುವ ಯತ್ನವನ್ನು ಮಾಡುತ್ತೇನೆ. ಈ ಮೂಲಕ ದುರ್ವಾಸನೆಯು ಇನ್ನು ಎಂದೂ ಮನಸ್ಸಿನೊಳಗೆ ಬರಬಾರದು. ನೀವೆಲ್ಲರೂ ಹೀಗೆ ಆಚರಿಸತಕ್ಕದ್ದು.

ಆದರೆ ಒಮ್ಮೊಮ್ಮೆ ನನ್ನ ಕೈಯಿಂದ ಚಮತ್ಕಾರಗಳು ಯಾಕೆ ಘಟಿಸು ತ್ತವೆ, ಇದನ್ನು ನಾನು ಹೇಳಲಾರೆ. ಯಾವಾಗಲಾದರೂ ಚಮತ್ಕಾರಗಳು ಘಟಿಸುತ್ತವೆ. ಈ ಮಾತು ಸತ್ಯವದೆ, ರಾಜೆಯವರು ತಮ್ಮ ಮನೆಯಲ್ಲಿ ಸಂಭವಿ ಸಿದ ಚಮತ್ಕಾರಗಳ ಸಂಗತಿ ನಿಮಗೆ ಹೇಳಿದ್ದಾರೆ, ಅವು ಹ್ಯಾಗಾಗುತ್ತವೆ. ನನಗೆ ತಿಳಿಯಲಾರದು. ಆದರೆ ಅವು ಸಂಭವಿಸುತ್ತವೆ. ಅಗ್ಗೆ ಮಾತ್ರ ನನಗೆ ಕೆಟ್ಟ ಅನಿಸುತ್ತದೆ. ನಾನು ಪರಮಾನಂದದಲ್ಲಿ ನಿಮಗ್ನನಾಗಿರುತ್ತೇನೆ, ಆಗ ನನ್ನ ಮುಂದೆ ಪ್ರಕಾಶವು ಕಾಣಿಸುವದು. ಆ ಪ್ರಕಾಶದಲ್ಲಿ ಸದ್ಗುರು ಮೂರ್ತಿ ತೋರು ತ್ತದೆ. ಮತ್ತು ಒಮ್ಮೊಮ್ಮೆ ಚಮತ್ಕಾರಗಳು ಸಂಭವಿಸುತ್ತವೆ. ಇವು ಎಡನೇ

ಯವರಿಗೆ ಕಾಣಿಸುತ್ತವೆ. ನಾನು ಮಾತ್ರ ಅವಕ್ಕೆ ಎಂದೂ ಮಹತ್ವ ಕೊಡುವದಿಲ್ಲ. ಮತ್ತು ಅವು ಪುನಃ ಆಗಬಾರದೆಂದು, ಪ್ರಾರ್ಥನೆ ಮಾಡುತ್ತೇನೆ.

' ಈಗ ನೀವು ಹೋಗಿರಿ, ನಾನು ಪುನಃ ಇಲ್ಲಿಗೆ ಬರುವದಿಲ್ಲ, ನನ್ನ ಭೆಟ್ಟಿಗೆ ಬರುವದಾದರೆ ನೀವು ಪರೇಳ ಮುಂಬಯಿಗೆ ಬನ್ನಿ, ಆಗ ನಾವು ಹೆಚ್ಚಿಗೆ ಮಾತಾಡೋಣ.

(೪೨) **ರಾ. ನಾನಾಸಾಹೇಬ ಗಾಂಡೇಕರ**:—ಮರುದಿನದಿಂದ ನಾನಾಸಾಹೇಬರು ನಿತ್ಯ ಮಹಾರಾಜರಕಡೆ ಬರುತ್ತಿದ್ದರು. ಮತ್ತು ತನಗೆ ಉಪದೇಶ ಮಾಡಬೇಕೆಂತ ವಿನಂತಿ ಮಾಡುತ್ತಿದ್ದರು. ಹೀಗೆ ಎಂಟು ದಿನಗಳು ಹೋದವು, ಒಮ್ಮೆ ಅವರು ಮಧ್ಯಾನ್ಹ ಹೊತ್ತಿಗೆ ಬಂದರು. ಆಗ ಮಹಾರಾಜರು ಒಬ್ಬರೇ ಇದ್ದಾರೆಂತ ನೋಡಿ, ಅನುಗ್ರಹದ ಸಲುವಾಗಿ ಅವರು ಮಹಾರಾಜರಿಗೆ ವಿನಂತಿಯನ್ನು ಮಾಡಿದರು. ಅವರ ಲವಲವಿಕೆ, ವಯಸ್ಸು ಮತ್ತು ಸಚ್ಛೀಲತ್ವ ಲಕ್ಷದೊಳಗೆ ತಕ್ಕೊಂಡು ಮಹಾರಾಜರು ಅವರಿಗೆ ಅನುಗ್ರಹ ಕೊಟ್ಟರು. ಧ್ಯಾನಯೋಗದ ಅಭ್ಯಾಸ ಹ್ಯಾಗೆ ಮಾಡಬೇಕೆಂಬದನ್ನೂ ಹೇಳಿದರು. ಉಪದೇಶದ ಪೂರ್ವದಲ್ಲಿ ವ ಅನಂತರ ನಾನಾಸಾಹೇಬರಿಗೆ ಯಾವಯಾವ ಪ್ರಶ್ನೆಗಳು ಕೇಳುವದರಲ್ಲಿ ಬಂತು. ಮತ್ತು ಅವರೊಳಗೆ ಆದ ಸಂಭಾಷಣೆ ಇಲ್ಲಿ ನಿರೂಪಿಸಿರುವೆನು.

**ಪ್ರಶ್ನೆ**:—ನಿಮಗೆ ಪೂರ್ವದಲ್ಲಿ ಯಾವನಾದರೂ ಗುರುವು ಉಪದೇಶ ಕೊಟ್ಟಾನೇನು ?

**ಉತ್ತರ**:— ಸುಮಾರು ಹತ್ತು ವರ್ಷಗಳ ಹಿಂದೆ, ಬೇಲಾಪೂರಕರ ಮಹಾರಾಜರು ನನಗೆ ಉಪದೇಶ ಮಾಡಿದ್ದಾರೆ.

**ಪ್ರಶ್ನೆ**:— ಅವರು ನಿಮಗೆ ಏನು ಹೇಳಿದರು ಮತ್ತು ನೀವು ಏನು ಮಾಡಿದಿರಿ ?

**ಉತ್ತರ**:— ನಾನು ಅವರು ಕೊಟ್ಟ ಮಂತ್ರದ ಜಪ ಮಾಡುತ್ತಿದ್ದೆ; ಬಹಳ ಕಾಲತನಕ ಅವರ ಸಹವಾಸದ ಲಾಭ ನನಗೆ ಶಿಕ್ಕಿರುವದು.

**ಪ್ರಶ್ನೆ**:—ಆ ನಂತರ ಮತ್ಯಾವದಾದರೂ ಸಾಧುಕಡೆ ಉಪದೇಶಕ್ಕಾಗಿ ಹೋಗಿದ್ದೀರೇನು ?

**ಉತ್ತರ**:—ಇದರ ನಂತರ ಕೆಲವು ಕಾಲ ನಾನು ಕೇಡಗಾಂವದ ನಾರಾಯಣ ಮಹಾರಾಜ ಇವರ ಸಹವಾಸದಲ್ಲಿದ್ದೆ, ಅವರು ಹೇಳಿದ ಮೇರೆಗೆ ಅವರ ಫೋಟೋದ ಧ್ಯಾನ ಮಾಡುತ್ತಿರುತ್ತೇನೆ, ಮತ್ತು ಅವರು ಕೊಟ್ಟ ಮಂತ್ರದ ಜಪ ಮಾಡುತ್ತಿರುತ್ತೇನೆ.

ಮೊದಲೇ ನನಗೆ ಹೇಳಿದ್ದರಲ್ಲ, " ಇಲ್ಲಿ ಒಬ್ಬ ಹುಚ್ಚ ಮನುಷ್ಯನಿರುತ್ತಾನೆ ಅವನಿಗೆ ನಾಶೀ ಪುಡಿದು ದೊಡ್ಡ ವೆಸನವಿದೆ. ಪ್ರತಿಯೊಬ್ಬ ಮನುಷ್ಯನಿಗೆ ನಾಶೀ ಪುಡಿ ಬೇಡುತ್ತಾ ಊರೊಳಗೆಲ್ಲ ಅಡ್ಡಾಡುತ್ತಿರುತ್ತಾನೆ." ಆದರೆ ಇವನು ಸಾಧು ಇರಬೇಕೆಂದು ನನಗೆ ಅನ್ನಿಸಿತು. ಅವನಿಗೆ ಭೆಟ್ಟಿಯಾಗುವದು ನನ್ನ ಇಚ್ಛೆ ಇತ್ತು. ಈ ಮೂರ್ತಿಯು ಅರಳಿ ಗಿಡದ ಬುಡಕ್ಕೆ ಕೂತದ್ದು ನೋಡಿದಾಗಲೇ ನನ್ನ ಇಚ್ಛೆ ಪೂರ್ಣವಾಯಿತು. ಆ ವೇಳೆಗೆ ನನಗೆ ನೀರಡಿಕೆ ಆಗಿತ್ತು, ಆದರಿಂದ ನಾನು ತಳಮಳಿಸುತ್ತಿದ್ದೆ. " ತಪಕೀರಿ ಬುವಾ ಒಮ್ಮೆಲೆ ಎದ್ದು ನದಿ ಕಡೆಗೆ ಓಡುತ್ತ ಹೋದರು. ಮತ್ತು ತನ್ನ ಡಬ್ಬಿಯೊಳಗೆ ಹೊಲಸು ನೀರು ತುಂಬಿಕೊಂಡು ಬಂದರು. ಮತ್ತು ಅದನ್ನು ನನ್ನ ಮುಂದೆ ಹಿಡಿದು, ' ಮಗನೇ ಕುಡಿ'; ಎಂದರು. ಆದರೆ ಆ ನೀರು ಹೊಲಸದೆ ಅಂತ ನೋಡಿದಾಕ್ಷಣ ನನ್ನ ಮನಸ್ಸಿನಲ್ಲಿ ಸಂಶಯು ಉತ್ಪನ್ನವಾಯಿತು. ಆ ಮೇಲೆ ತಪಕೀರಿ ಬುವಾ ಸ್ವತಃ ಆ ನೀರು ಕುಡಿದರು. ಅವರು ಕುಡಿಯುತ್ತಿರುವಾಗ್ಗೆ ಅವರ ಗಡ್ಡದ ಮೇಲೆ ಹಾಲಿನ ಹನಿ ಬಿದ್ದಂತೆ ಕಾಣಿಸಿತು; ಮತ್ತೇನು ಕೇಳುವದು ನಾನು ಬಹಳ ಆಶ್ಚರ್ಯಚಕಿತ ನಾದೆನು. ನನ್ನ ಅಂತಃಕರಣದಲ್ಲಿ ಒಮ್ಮೆಲೇ ಪ್ರಕಾಶವಾಯಿತು. ಮತ್ತು ಆ ನೀರು ಕುಡಿಯದೆ ಇದ್ದದ್ದಕ್ಕೆ ನನಗೆ ಬಹಳ ಕೆಟ್ಟ ಅನಿಸಿತು; ತಪಕೀರಿ ಬುವಾ ಇವರು ಪುನಃ ಅದೇ ನೀರನ್ನು ನನಗೆ ಕೊಟ್ಟರು. ಅದನ್ನು ನಾನು ಕುಡಿದೆ. ಮತ್ತು ಅತ್ಯಂತ ಭಕ್ತಿಭಾವದಿಂದ ಆ ಪೂಜ್ಯ ಸಾಧುವಿನ ಪಾದಕ್ಕೆ ಬಿದ್ದೆನು. ಅವರು ನನನ್ನು ಎತ್ತಿ ಅಪ್ಪಿಕೊಂಡರು, ಮತ್ತು ನನ್ನ ಅಂಗಾಲುಗಳನ್ನು ತಮ್ಮ ಕೈಯಿಂದ ಬಹಳ ಹೊತ್ತಿನ ತನಕ ತಿಕ್ಕಿದರು, ಮತ್ತು " ಬಾಲಕನೇ ನೀನು ಈಗ ಹೋಗು" ಅಂತ ಹೇಳಿದರು ಆಶ್ಚರ್ಯದ ಸಂಗತಿ ಏನೆಂದರೆ ಕಾಲು ಸುಟ್ಟು ಆಗುತ್ತಿದ್ದ ದುಃಖವು ಒಮ್ಮೆಲೇ ಹೋಯಿತು.

ಅನಂತರ ಅವರು ಓಡಿ ಹೋದರು. ಅವರು ಪುನಃ ನನಗೆ ಕಾಣಿಸಲಿಲ್ಲ. ಅದೇ ದಿನ ಗುಪ್ತೆಯವರು ಅಕೋಲೆಗೆ ತಿರುಗಿ ಹೋಗುವವರಿದ್ದರು. ಗುಪ್ತೆಯವರ ಅಳಿಯು ರಾಜೆ ಇವರ ಮನೆಗೆ ಮುಟ್ಟಿದೆನು. ಆಗ ಮಧ್ಯಾನ್ಹ ಎರಡು ಹೊಡೆದಿದ್ದವು. ನನನೆ ಮನೆ ದಾರಿ ಸಿಗಲಿಕ್ಕಿಲ್ಲವೆಂತ ಒಂದು ಟಾಂಗಾ ಮಾಡಬೇಕಾಯಿತು. ದಾರಿಯಲ್ಲಿ ಕೇಳುತ್ತ ಕೇಳುತ್ತ ಮನೆಗೆ ಬಂದು ಮುಟ್ಟಿದೆನು. ಆದರೆ ನಾನು ಮುಟ್ಟುವ ಮೊದಲೇ ಗುಪ್ತೆಯವರು ಸ್ಟೇಶನಕ್ಕೆ ಹೋಗಿದ್ದಾರೆಂತ ನನಗೆ ತಿಳಿಯಿತು. ಅನಂತರ ನಾನು ಅದೇ ಟಾಂಗೆಯಿಂದ ಸ್ಟೇಶನಕ್ಕೆ ಹೋದೆನು. ಮತ್ತು ಗುಪ್ತೆಯವರ ಕಡೆ ರೊಕ್ಕ ತಕ್ಕೊಂಡು ಟಾಂಗೆಯವನಿಗೆ ಕೊಟ್ಟೆ.

ನಾನು ಗುಪ್ತೆಯವರ ಖರ್ಚಿನಿಂದಲೆ ಪಂಢರಪುರಕ್ಕೆ ಹೋಗಿದ್ದೆ. ಇದು ನನಗೆ ಇಲ್ಲಿ ಹೇಳಬೇಕಾಗಿದೆ, ಆ ದಿನ ಗಾಡಿಯು ತಡವಾಗಿ ಬಂತೆಂತ. ಒಳ್ಳೇದಾಯಿತು, ಇಲ್ಲದಿದ್ದರೆ ಗುಪ್ತೆಯವರು ನನಗೆ ಸ್ಟೇಶನ ಮೇಲೆ ಸಹ ಶಿಗುತ್ತಿದ್ದಿಲ್ಲ.

ಆ ದಿವಸ ನನಗೆ ಊಟವಿಲ್ಲ; ಹಸವೂ ಆಗುತ್ತಿದ್ದಿಲ್ಲ. ಯಾಕೆಂದರೆ ತಪಕೀರಿ ಬುವಾನು ನನಗೆ ಆ ದಿನ ಅಮೃತವನ್ನು ಕೊಟ್ಟಿದ್ದನು. ಅವರ ಕೃಪೆಯಿಂದಲೇ ಆ ದಿನ ಗಾಡಿಗೂ ತಡವಾಯಿತು, ಆದ್ದರಿಂದ ಗುಪ್ತೆಯವರು ನನಗೆ ಸ್ಟೇಶನ ಮೇಲೆ ಭೆಟ್ಟಿಯಾದರು. ಏನು ಜಹಗೀರದಾರರೇ, ಈಗ ನಿಮ್ಮ ಅಂತಃಕರಣದಲ್ಲಿ ಪ್ರಕಾಶ ಬಿತ್ತೋ ಇಲ್ಲವೋ?

**ಜಹಗೀರದಾರ:—** ಅಲಬತ್, ತಪಕೀರಿ ಮಹಾರಾಜರು ಸಾಧು ಇರಲಿಕ್ಕೇ ಬೇಕು.

**ಮಹಾರಾಜ:—** ಆದರೆ ನಾನು ತಪಕೀರಿ ಮಹಾರಾಜನಲ್ಲ. ನಾನು ಸರ್ವ ಸಂತ ಚರಣಗಳ ಮತ್ತು ನಿಮ್ಮೆಲ್ಲರ ದಾಸನಿದ್ದೇನೆ. ನಾನು ಸರ್ವರನ್ನು ನನ್ನ ಸದ್ಗುರು ನಾರಾಯಣ ಸರಸ್ವತಿ ಎಂಬಂತೆ ಕಾಣುತ್ತೇನೆ. ನಾನು ಯಾವ ನಾದರೂ ಸಾಧುಗೆ ನೋಡಿದ್ದಾಗ್ಗೆ ಅವನು ನನ್ನ ಸದ್ಗುರುವಿನಂತೆ ನನಗೆ ಕಾಣಿಸಿದರೆ, ಆಗ ಅವನನ್ನು ಸಾಧು ಅಂತ ನಾನು ತಿಳಿಯುತ್ತೇನೆ. ಯಾಕಂದರೆ ರಾಮದಾಸರು ಹೀಗನ್ನುತ್ತಾರಲ್ಲ; ಸಾಧುಗಳು ಶರೀರದಿಂದ ಭಿನ್ನಭಿನ್ನವಾಗಿ ಕಾಣಿಸಿದರೂ ಅಂತರ್ಯದಲ್ಲಿ ಅವರು ಪರಮಾತ್ಮನಿಗೆ ಏಕರೂಪರಾಗಿರುತ್ತಾರೆ. ಆದ್ದರಿಂದ ಇತರ ಸಾಧುಗಳು ನಿಮಗೆ ಯಾವ ಮಂತ್ರಗಳನ್ನು ಕೊಟ್ಟಿರಬಹುದೋ, ಅವುಗಳನ್ನು ನೀವು ಶ್ರದ್ಧೆಯಿಂದ ಜಪಿಸಿರಿ. ನಾನು ನಿಮಗೆ ಭ್ರಮೆಯಲ್ಲಿ ಹಾಕುವದಿಲ್ಲ. ನನ್ನ ಮಾರ್ಗ ಅಥವಾ ಪದ್ಧತಿ ಬೇರೆ ಇದ್ದಾಗ್ಯೂ ಎಲ್ಲ ಮಾರ್ಗಗಳು ಕೂಡಿ ಕಡೆಗೆ ಒಂದೇ ಮಾರ್ಗವಾಗುತ್ತದೆ. ನನ್ನ ಸದ್ಗುರುಗಳು ನನ್ನ ಮೇಲೆ ಅನುಗ್ರಹ ಮಾಡಿದರು. ಮತ್ತು ನಾನು ಅಪಾತ್ರನಿದ್ದಾಗ್ಯೂ ನನಗೆ "ಸೋಹಂ" ಮಂತ್ರವನ್ನು ಕೊಟ್ಟರು. ಅದೇ "ಸೋಹಂ" ಮಂತ್ರದ ಜಪವನ್ನು ನೀವಾದರೂ ಮಾಡಿದರೆ ನಿಮಗೆ ಅಂತರ್ದೃಷ್ಟಿ ಪ್ರಾಪ್ತಿಯಾದೀತು. ನಿಮ್ಮ ಯಾವ ಪ್ರೀತಿಯ ದೇವತೆ ಅದೆಯೋ, ಮತ್ತು ಯಾವ ಸಾಧುಗೆ ನೀವು ಗುರು ಎಂದು ಮನ್ನಿಸಿದ್ದೀರೋ, ಅವರ ಭಕ್ತಿಯನ್ನು ಮಾಡಲಿಕ್ಕೆ ನೀವು ಆರಂಭಿಸಿರಿ. ಇನ್ನೊಮ್ಮೆ ನೀವು ನನ್ನ ಕಡೆ ಬನ್ನಿ; ಆಗ ನಿಮಗೆ ನಾನು ಧ್ಯಾನದ (ಧ್ಯಾನಯೋಗದ) ಮಾರ್ಗವನ್ನು ತೋರಿಸುವೆನು. ಆ ಮಾರ್ಗವು ಸಂಪೂರ್ಣ ಇಲ್ಲದಿದ್ದರೂ ನಿಮ್ಮ ಹೇತು ಪರಿಪೂರ್ಣವಾದೀತು.

ಧುಳೆಯಲ್ಲಿ ಅನುಗ್ರಹ ಪಡಕೊಂಡವರಪೈಕಿ ಮತ್ತೊಬ್ಬ ಸಾಸವಡಕರ ಎಂಬ ಸದ್ಗೃಹಸ್ಥರಿದ್ದರು. ಆ ಸಮಯದಲ್ಲಿ ಅವರು ಅಲ್ಲಿ ಸಬ್‌ರಜಿಸ್ಟರ ಆಗಿದ್ದರು. ಅವರಿಗೂ ಮಹಾರಾಜರಿಗೂ ಭೆಟ್ಟಿಯಾಗಿ, ಮಹಾರಾಜರು ಅವರ ಮೇಲೆ ಹ್ಯಾಗೆ ಅನುಗ್ರಹ ಮಾಡಿದರು, ಈ ಸಂಬಂಧ ಆ ಗೃಹಸ್ಥರ ಶಬ್ದಗಳಿಂದಲೇ ಎಲ್ಲ ವಿವರ ಕೆಳಗೆ ಕೊಟ್ಟಿರುತ್ತದೆ.

(೪೪) ಶ್ರೀ ಸಾಸವಡಕರಃ— ಸನ್ ೧೯೦೬ ನೇ ಇಸವಿಯಲ್ಲಿ ನನಗೆ ಧುಳೆಗೆ ಬದಲಿ ಆಯಿತು, ಅನಂತರ ಬೇಗನೇ "ಶ್ರೀ ಗಜಾನನ ಮಹಾರಾಜ ಈ ಹೆಸರಿನ ಒಬ್ಬ ಮಹಾನ್ ಸಾಧುಗಳು ಕುಂಟೆರಿದ್ದು, ಇಲ್ಲಿಯ ಪೋಸ್ಟ್ ಮಾಸ್ತರ ಮನೆಯಲ್ಲಿ ಇರುತ್ತಾರೆ ಅಂತ ನನಗೆ ವರ್ತಮಾನ ತಿಳಿಯಿತು; ಮತ್ತು ಹೀಗೂ ತಿಳಿಯಬಂತಲ್ಲ. ಅವರು ಧುಳೆಗೆ ಬಂದ ಬಹಳ ದಿವಸಗಳ ಮೇಲೆ ಇತರರಿಗೆ ಇವರು ಸಾಧು ಪುರುಷರೆಂತ ತಿಳಿಯಿತು, ಯಾಕಂದರೆ ಇವರು ತಾವಾಗಿ ತಮ್ಮ ಮಹತ್ವವನ್ನು ಯಾರಿಗೂ ತೋರಿಸುತ್ತಿರಲಿಲ್ಲ. ಹಾಗೂ ಇತರರು ತನ್ನ ಮಹತ್ವವನ್ನು ವರ್ಣಿಸಬೇಕೆಂದು ಅವರಿಗೆ ಅನ್ನಿಸುತ್ತಿದ್ದಿಲ್ಲ. ಮತ್ತು ಹಾಗೆ ಯಾರಾದರೂ ಮಾಡಿದರೆ ಸೇರುತ್ತಿದ್ದಿಲ್ಲ. ಅವರ ಬಾಹ್ಯ ಸ್ವರೂಪ ಮತ್ತು ಉಡಿಗೆ ಸಹ ಇವರು ಸಾಧುಗಳಿದ್ದಾರೆ ಅಂತ ಯಾರಿಗೂ ತಿಳಿಯುವಂತೆ ಇದ್ದಿಲ್ಲ. ಯಾರಾದರೂ ಪರಕೀಯರು ರಾಜೆಯವರ ಮನೆಗೆ ಬಂದರೆ, ಇವರು ಮನೆಯೊಳಗೆ ಹೋಗಿ ಒಬ್ಬರೇ ಕೂತಿರುತ್ತಿದ್ದರು.

ದಾಮೋದರ ಮಾರ್ತಂಡ ಚಿಟಣೀಸ ಇವರು ನಾಂದಗಾಂವ (ನಾಸಿಕ) ಇಲ್ಲಿಯ ಮಾಮಲೇದಾರ ಕಚೇರಿಯಲ್ಲಿ ಕಾರಕೂನರು, ಇವರು ಪೋಸ್ಟಮಾಸ್ತರ ರಾಜೆ ಇವರ ಮೈದುನರಿದ್ದರು. ಅವರು ಒಮ್ಮೆ ಇವರ ಭೆಟ್ಟಿಗೆ ಬಂದಿದ್ದರು, ಅವರ ಕೂಡ ಒಮ್ಮೆ ನಾನು ಅಡ್ಡಾಡಲಿಕ್ಕೆ ಹೋಗುವಾಗ್ಗೆ ರೇಲ್ವೆ ಸ್ಟೇಶನಿನ ರಸ್ತೆ ಹಿಡಿದು ಹೋಗುತ್ತಿದ್ದೆವು, ಆಗ ಮಹಾರಾಜರ ಸಂಬಂಧ ಏನಾದರೂ ಸಂಗತಿಗಳನ್ನು ತಿಳಕೊಳ್ಳಬೇಕೆಂದು ಅವರಿಗೆ ನಾನು ಪ್ರಶ್ನೆ ಮಾಡಿದೆ, ಆದರೆ ಅವರು ಉತ್ತರ ಕೊಡಲಿಕ್ಕೆ ಸಂತೋಷವಿಲ್ಲೆಂಬಂತ ನನಗೆ ತೋರಿತು, ಅವರು ಈ ವಿಷಯದಲ್ಲಿ ಅಸಂತೋಷಪಡಲಿಕ್ಕೆ ಕಾರಣವೆಂದರೆ, ಮಾಹಾರಾಜರ ಬಾಹ್ಯ ಆಚರಣೆ, ಅವರ ಉಡಿಗೆ ಬೈರಾಗ್ಯದ ಚಟ ಇತ್ಯಾದಿ ಇರಬೇಕೆಂತ ನಾನು ತಿಳಕೊಂಡೆ, ನಿಜವಾದ ಸಮಾಚಾರವು ಈ ಪ್ರಕಾರ ಸಿಗಲಾರದು ಎಂದು ನೋಡಿ, ಚಿಟಣೀಸರಿಗೆ ಸುಳ್ಳೇ ಹೀಗೆ ಹೇಳಿದೆ; "ಮಹಾರಾಜರು ನನಗೆ ನಿನ್ನೆ ಹೇಳಿದ್ದಾರೆ ಏನಂದರೆ, ನನ್ನ ವಿಷಯು ಎಲ್ಲ ಸಂಗತಿಗಳನ್ನು ಚಿಟಣೀಸರು ಬಲ್ಲರು, ಅವರಿಗೆ ಕೇಳಿದರೆ ಅವರು ಹೇಳುವರು."

ಚಿಟಣೀಸರು ಆ ಮೇಲೆ ಯಾವರೀತಿಯಿಂದಲೂ ಸಂಕೋಚ ಮಾಡದೆ ಈ ಕೆಳಗಿನ ಸಂಗತಿಗಳನ್ನೆಲ್ಲ ಹೇಳಿದರು. "ನಾನು ಮಹಾರಾಜರನ್ನು ೧೯೦೪ ನೇ ಇಸವಿಯಲ್ಲಿ ಮೊದಲು ನಾಸಿಕದಲ್ಲಿ ಭೆಟ್ಟಿಯಾದೆ, ಆಗ ಅವರು ತನ್ನ ಸಂಬಂಧಿಕರಾದ ಭಿಸೇ ಎಂಬ ಅಡ್ಡ ಹೆಸರಿನವರನ್ನು ಭೆಟ್ಟಿಯಾಗಲಿಕ್ಕೆ ಮುಂಬೈಯಿಂದ ಬಂದಿದ್ದರು. ಭಿಸೆಯವರ ಕಡೆ ನಾನೂ ಆಗಾಗ್ಗೆ ಹೋಗಿ ಬರೋದಿರುತ್ತಿತ್ತು, ಆ ಕಾಲದಲ್ಲಿ ಮಹಾರಾಜರು ಮುಂಬಯಿಯಲ್ಲಿ ನಾನಾಸಮರ್ಥರ ಕೂಡ ಇರುತ್ತಿದ್ದರು, ಭಿಸೇಯವರ ಸೋದರ ಮಾವ ಮಧುಕರ ಇವರು ಮಹಾರಾಜರ

ಶಿಷ್ಯರಾಗಿದ್ದರು. ಅವರು ಪರೇಳದಲ್ಲಿ ಇರುತ್ತಿದ್ದರು; ಅವರ ಗುರ್ತದ ಮೇಲಿಂದ ಮಹಾರಾಜರು ಭಿಸೇಯವರಲ್ಲಿ ಒಮ್ಮೊಮ್ಮೆ ಬರುತ್ತಿದ್ದರು. ಹೀಗೆ ಒಂದು ಪ್ರಸಂಗದಲ್ಲಿ ಭಿಸೇಯವರಲ್ಲಿ ನಾನು ಮಹಾರಾಜರಿಗೆ ಭೆಟ್ಟಿಯಾದೆ. ಆ ಸಮಯದಲ್ಲಿ ನಾನು ಮಹಾರಾಜರಿಗೆ ಬಹಳ ಪ್ರಶ್ನೆಗಳನ್ನು ಮಾಡಿದೆ. ಅನೇಕ ಸಂಶಯಗಳನ್ನು ಅವರ ಮುಂದಿಟ್ಟೆ. ಮೊದಲು ಅವರು ಸುಮ್ಮನೇ ಇದ್ದರು. ಆದರೆ ಸ್ವಲ್ಪ ಸಿಟ್ಟು ಬಂದಂತೆ ತೋರಿಸಿಕೊಂಡು, ಆ ಮೇಲೆ ಉತ್ತರ ಕೊಡಲಿಕ್ಕೆ ಆರಂಭಿಸಿದರು. ವ್ಯವಹಾರದೊಳಗಿನ ಮತ್ತು ಮನೆತನದ ಉದಾಹರಣೆಗಳನ್ನು ಕೊಟ್ಟು ಅವರು ನನ್ನ ಮನಸ್ಸನ್ನು ಅಧ್ಯಾತ್ಮದಕಡೆ ತಿರುಗಿಸಿದರು. ಮತ್ತು ನಿಜವಾದ ಸೌಖ್ಯವೆಂದರೇನು ಎಂಬದರ ವಿಷಯ ನನಗೆ ತಿಳಿಸಿ ಕೊಟ್ಟರು. ಆ ನಂತರ ಮಹಾರಾಜರ ಕಡೆ ಹೋಗಿ ಅವರ ಉಪದೇಶವನ್ನು ಪಡೆಯಬೇಕೆಂಬ ವಿಷಯದಲ್ಲಿ ನನಗೆ ದೃಷ್ಟಾಂತವಾಯಿತು. ಅದಕ್ಕನುಸರಿಸಿ, ನಾನು ಅವರ ಉಪದೇಶವನ್ನು ಪಡದೆ. ಅವರು ನನಗೆ ಧ್ಯಾನಯೋಗದ ಮಾರ್ಗವನ್ನು ತೋರಿಸಿದರು. ನನಗೆ ಬಂದ ಅನೇಕ ಪ್ರಕಾರದ ಅನುಭವಗಳಪೈಕಿ ಕೆಲವುಸಾರಿ ವಿವಿಧ ನೋಟಗಳು ಕಾಣಿಸಿದವು. ಪ್ರಕಾಶ ಕಾಣಿಸಿತು, ಅನೇಕ ಪ್ರಕಾರದ ಸಾಧುಗಳು ಕಾಣಿಸಿದರು. ಬಹು ಪ್ರಕಾರದ ಸುವಾಸಗಳು ಬಂದವು. ಘಂಟೆ, ಮೇಘನಾದ ಇತ್ಯಾದಿ ಅನೇಕ ಪ್ರಕಾರದ ನಾದಗಳು ಕೇಳಿಸಿದವು. ಧ್ಯಾನ ಕಾಲದಲ್ಲಿ ಪ್ರತ್ಯಕ್ಷ ಮಹಾರಾಜರ ದರ್ಶನವಾಯಿತು. ಮಹಾರಾಜರು ಒಂದು ಸ್ಥಾನ ಬಿಟ್ಟು ಮತ್ತೊಂದಕ್ಕೆ ಹೋದರೆಂದರೆ ಅದು ನನಗೆ ತಿಳಿಯುತ್ತಿತ್ತು. ಮೆಲ್ಲ ಮೆಲ್ಲಗೆ ಇವೆಲ್ಲ ನೋಟಗಳು ಕಾಣಿಸದಂತಾದವು. ಮತ್ತು ಪರಮಾನಂದದ ಅನುಭವವು ಬರಲಿಕ್ಕೆ ಆರಂಭವಾಯಿತು. ಆ ಸಮಯದಲ್ಲಿ ನನಗೆ ನನ್ನ ದೇಹದ ಮರವಾಗುತ್ತದೆ, ಮತ್ತು ಒಮ್ಮೊಮ್ಮೆ ಇಂಥ ಸ್ಥಿತಿಯಲ್ಲಿ ಒಂದು ತಾಸಿನಕಿಂತ ಹೆಚ್ಚು ವೇಳೆ ನನಗೆ ಇರಲಿಕ್ಕೆ ಶಕ್ಯವಾಗುವದು. ಹೀಗೆ ನನ್ನ ಸದ್ಯದ ಸ್ಥಿತಿ ಇದೆ.

ರಾತ್ರಿ ಸುಮಾರು ಎಂಟು ಘಂಟೆಗೆ ನಾವು ಮನೆ ಕಡೆಗೆ ತಿರುಗಿದೆವು. ಚಿಟಣೀಸರು ರಾಜೆಯವರಲ್ಲಿ ಹೋದರು. ಮತ್ತು ನಾನು ಮನೆಗೆ ಬಂದೆ, ನಾನು ಎಲ್ಲ ಸಮಾಚಾರವನ್ನು ಸುಳ್ಳು ಹೇಳಿ ಕೇಳಿಕೊಂಡದ್ದಕ್ಕೆ ನನಗೆ ಸ್ವಲ್ಪ ಅಂಜಿಕೆ ಇತ್ತು. ಮರುದಿನ ಆದಿತ್ಯವಾರ ಇತ್ತು, ಮುಂಜಾನೆ ಚಿಟಣೀಸರು ನನ್ನಕಡೆಗೆ ಬಂದು ನನಗಂದರು, "ನಾನು ಮಹಾರಾಜರ ವಿಷಯ ನಿಮಗೆ ಹೇಳಿದ್ದಕ್ಕೆ ಮಹಾರಾಜರು ನನಗೆ ದೋಷ ಕೊಟ್ಟು ಮಾತಾಡಿದರು. ಮತ್ತು ಪುನಃ ತಮ್ಮ ದರ್ಶನಕ್ಕೆ ಬರುವದಕ್ಕೆ ನನಗೆ ನಿಷೇಧ ಮಾಡಿದರು. ಅವರು ನನ್ನ ಮೇಲೆ ಬಹಳ ಸಿಟ್ಟಿಗೆದ್ದರು." ಆಗ ಚಿಟಣೀಸರಿಗೆ ಅತಿ ಕಷ್ಟವಾಯಿತೆಂಬಂತೆ ನನಗೆ ತೋರಿತು. ಮತ್ತು ಅವರು ಅಂದರು, "ಮಹಾರಾಜರು ತಮ್ಮ ವಿಷಯ ಎಲ್ಲ ಸಂಗತಿಗಳನ್ನು ನಿಮಗೆ ಹೇಳಬೇಕೆಂದು ಹೇಳಿದ್ದಾರೆಂತ ನೀವು ಅಂದಿರಿ ಅಂತ ನಾನು ಎಲ್ಲ

ವಿಷಯಗಳನ್ನು ಹೇಳಿದೆನು. ಆದರೆ ನೀವು ಇವನ್ನು ಸುಳ್ಳೇ ಹೇಳಿದ್ದರಿಂದ ನಾನು ಈ ಪ್ರಕಾರ ಬಿಕ್ಕಟ್ಟಿನಲ್ಲಿ ಬಿದ್ದೆನು. ಮಹಾರಾಜರ ವಿಷಯ ಯಾವ ಸಂಗತಿಯನ್ನಾದರೂ, ನಾವು ಇತರರಿಗೆ ಹೇಳಬಾರದು, ಎಂಬದಾಗಿ ಅವರ ಇಚ್ಛೆ ಇರುವದರಿಂದ, ನಿಮಗೆ ಅವರ ವಿಷಯ ಹೇಳಲಿಕ್ಕೆ ನನಗೆ ಖುಶಿ ಇದ್ದಿಲ್ಲ. ಪರಿಸ್ಥಿತಿಗೆ ಸರಿಯಾಗಿ ಹ್ಯಾಗಾಗಬೇಕು ಹಾಗೆಯೇ ಆಗತಕ್ಕದ್ದೆಂತ ಅವರ ಇಚ್ಛೆ ಇರುವದು. ಬಹುತೇಕ ಎಲ್ಲರಿಗೂ ಈಗಿನ ಕಾಲದಲ್ಲಿ ಪ್ರಾಪಂಚಿಕ ಸುಖವೇ ಬೇಕಾಗಿರುತ್ತದೆ. ಮತ್ತು ಯಾವ ಸಾಧುಗಳು ಇದು ಪ್ರಾಪ್ತ ಮಾಡಿಕೊಳ್ಳುವರೋ ಅಂಥವರೇ ಅವರಿಗೆ ಬೇಕಾಗಿರುತ್ತಾರೆ. ಪಾರಮಾರ್ಥಿಕ ಜ್ಞಾನದಲ್ಲಿ ಏನೂ ಅರ್ಥವಿಲ್ಲ; ಅದಕ್ಕಾಗಿ ಹೊತ್ತು ಕಳಿಯುವದೆಂಬದು ತನ್ನ ಶಕ್ತಿ ಸಾಮರ್ಥ್ಯದ ಅಪವ್ಯಯ ಮಾಡುವದು, ಇದು ಮುಂದೆ ಬರುವ ವಿಪತ್ತಿ ಮತ್ತು ದಾರಿದ್ರ್ಯದ ಸ್ಪಷ್ಟ ಲಕ್ಷಣವಾಗಿದೆ, ಎಂದು ತಿಳಿಯುತ್ತಾರೆ. ಸಂತತಿ, ಸಂಪತ್ತಿ ಮತ್ತು ವೈಭವ ಇಂಥಾದ್ದನ್ನು ಕೊಡುವ ಸಾಧುಗಳೇ ಅವರಿಗೆ ಬೇಕಾಗಿರುತ್ತಾರೆ, ಮತ್ತು ಅಂಥವರ ಪಾದದಲ್ಲಿ ಅವರು ಉರುಳಾಡುತ್ತಾರೆ, ಅವರಿಗೆ ಪಾರಮಾರ್ಥಿಕ ಸುಖ ಬೇಕಾಗಿಲ್ಲ. ಅದು ಕಾಲ್ಪನಿಕವೆಂತ ಅವರು ತಿಳಿದಿದ್ದಾರೆ. ಅವರಿಗೆ ಪ್ರಾಪಂಚಿಕ ಸುಖವೇ ಬೇಕಾಗಿರುತ್ತದೆ. ಹೀಗಂತಲೇ ಮಹಾರಾಜರ ಸಂಬಂಧ ಬಹಳ ಕಡಿಮೆ ಜನರಿಗೆ ತಿಳಿದದೆ. ಪ್ರಾಪಂಚಿಕ ಸುಖವು ನಾಶವಂತ ಮತ್ತು ದುಃಖ ಪರಿಣಾಮ ಉಳ್ಳದ್ದೆಂತ ಯಾರಿಗೆ ಅನ್ನಿಸುವದೋ ಅವರೇ ಖರೇ ಸಾಧುಗಳ ಕಡೆಗೆ ಹೋಗುವರು; ಮತ್ತು ಅವಿನಾಶಿ ಸುಖವನ್ನು ಬೇಡಿಕೊಂಡಾರು. ವಿಚಾರ ಮಾಡಿ ನೋಡಿದರೆ ಶ್ರೀಮಂತಗೂ ಬಡವನಿಗೂ ತಮ್ಮ ನಿಜವಾದ ಕಲ್ಯಾಣವನ್ನು ಸಾಧಿಸಲಿಕ್ಕೆ ಆತ್ಮ ಸಾಕ್ಷಾತ್ಕಾರಿ ಸಾಧುವಿನ ಅವಶ್ಯಕತೆ ಇರುತ್ತದೆ. ಆದರೆ ಈ ಕಾಲದಲ್ಲಿ ಇಂಥ ಸಾಧುಗಳದು ಯಾರಿಗೆ ಅವಶ್ಯಕತೆ ಇದೆ?"

ಅನಂತರ ನಾನು ಅವರಿಗೆ ಹೇಳಿದೆ, "ಚಿಟಣೀಸರೇ, ದಯಮಾಡಿ, ಸಿಟ್ಟಿಗೇಳಬೇಡರಿ. ನಾನು ನಿಮಗೆ ಸುಳ್ಳು ಹೇಳಿದರೂ, ನಮ್ಮ ನಿಮ್ಮ ಮಿತ್ರತ್ವದ ಸಂಬಂಧ ಹೇಳಿದೆ. ಅದರಲ್ಲಿ ನನ್ನದೇನೂ ಕೆಟ್ಟ ಉದ್ದೇಶವಿಲ್ಲ. ಈಗಿನ ದಿವಸಗಳಲ್ಲಿ ನಕಲೀ ಸಾಧುಗಳೇ ವೈಭವಶಾಲಿಗಳಾಗಿದ್ದಾರೆ, ಮತ್ತು ವಿದ್ಯಾವಂತರೂ ಕುಶಲರೂ ಅಂಥವರ ಬಲೆಯಲ್ಲಿ ಬೀಳುತ್ತಾರೆ. ಇದು ನಾವ ಸ್ವತಃ ನೋಡಿದ್ದೇವೆ. ಆದ್ದರಿಂದ ನಿಜವಾದ ಸಾಧುವನ್ನು ತಿಳಿಯುವದು ಬಹಳ ಕಠಿಣವಾಗಿದೆ. ಹೀಗೆ ಅನ್ನುವದರಲ್ಲಿ ಖರೇ ಸಾಧು ಇಲ್ಲವೇ ಇಲ್ಲೆಂತ ಹೇಳುವಂಥಾದ್ದು ನನ್ನ ತಾತ್ಪರ್ಯವಲ್ಲ. ಅವರು ಇದ್ದರೂ ಬಹಳೇ ಕಡಿಮೆ. ವರ್ತಮಾನಪತ್ರಗಳಲ್ಲಿ ಮತ್ತು ಮಾಸಿಕಗಳಲ್ಲಿ ನಕಲಿ ಸಾಧುಗಳ ವರ್ಣನವೇ ಬಹಳವಾಗಿರುತ್ತದೆ, ಮತ್ತು ಇಂಥವರಿಂದ ಎಚ್ಚರಿಕೆಯಾಗಿರಬೇಕೆಂದೂ ಅವು ಹೇಳುವವು. ಹೀಗಿದ್ದರೂ ಎಷ್ಟೋ ಸುಶಿಕ್ಷಿತ ಜನರು ಸಹ ಈ ಸುಳ್ಳು ಸಾಧುಗಳ ಬಲೆಯೊಳಗೆ ಸಿಕ್ಕು

ಒದ್ದಾಡುವದನ್ನು ನಾವು ನೋಡುತ್ತೇವೆ. ಇಷ್ಟೇ ಅಲ್ಲ, ಅವರ ಮಾತುಗಳ ಮೇಲೆ ಅಂಧ ವಿಶ್ವಾಸವಿಟ್ಟು, ತಮ್ಮ ಆಸ್ತಿ ಮತ್ತು ಸ್ತ್ರೀಯರನ್ನು ಸಹ ಅವರಿಗೆ ಅರ್ಪಣ ಮಾಡುತ್ತಾರೆ. ಮತ್ತು ವರ್ತಮಾನಪತ್ರ ಮತ್ತು ಮಾಸಿಕಗಳಲ್ಲಿ ಆ ಸಾಧುಗಳ ವಿಷಯ ಬರೆದವರ ಉಪಕಾರ ಸ್ಮರಿಸುವ ಬದಲಿಗೆ, "ಅವರಿಗೆ ಏನು ಗೊತ್ತದೆ, ಈಶ್ವರನಿಗೆ ಅವರು ಮನ್ನಿಸುವದಿಲ್ಲ. ಇಂಥವರು ಸಾಧುಗಳಿಗೇನು ಮನ್ನಿಸ್ಯಾರು? ಅವರಿಗೆ ದೇವರು ಬೇಡ, ಧರ್ಮ ಬೇಡ, ಭಕ್ತಿಯ ಕಲ್ಪನೆ ಸಹ ಅವರಿಗಿಲ್ಲ. ಸಾಧು ನಿಂದೆ ಪಸರಿಸಿ, ವರ್ಗಣಿದಾರರನ್ನು ಹೆಚ್ಚಿಸುವದು, ಇಷ್ಟೊಂದು ಸಂಗತಿ ಅವರಿಗೆ ತಿಳಿದಿರುತ್ತದೆ." ಹೀಗೆ ಸಾಧುನಿಂದಕ ಮತ್ತು ಪಾಖಂಡಿ ಎಂದು ಅವರನ್ನು ಕರೆಯುತ್ತಾರೆ."

"ನಾನು ಮೋಸ ಹೋಗಬಾರದೆಂತ ನಿಮಗೆ ಅವರ ವಿಷಯ ಹೇಳಿದೆ. ಈ ಸುಳ್ಳು ಸಾಧುಗಳ ಪೈಕಿ ಕೆಲವರಿಗೆ ಹಿಪ್ನಾಟಿಝಮ್ ( ಮೋಹ ಶಕ್ತಿ ) ಗೊತ್ತಿರುತ್ತದೆ. ಆ ಶಕ್ತಿಯಿಂದ ಅವರು ಎರಡನೇಯವರ ಮೇಲೆ ತನ್ನ ಸತ್ತೆ ಕೂಡ್ರಿಸಿ, ಅವರನ್ನು ತನ್ನ ಬಲೆಯೊಳಗ ಎಳೆಯುತ್ತಾರೆ. ಪೇಟೆಯಲ್ಲಿ ನಿಜ ಮತ್ತು ಸುಳ್ಳು ನಾಣ್ಯಗಳು ಕೂಡಿರುತ್ತವೆಂತ, ನಾವು ಯಾವದಾದರೂ ನಾಣ್ಯ ಬಂದರೆ ನಿಜವೊ ಸುಳ್ಳೊ ಎಂತ ಪರೀಕ್ಷೆ ಮಾಡಬೇಕಾಗಿರುತ್ತದೆ, ಇಷ್ಟೇ ತಿಳಿಸುವದು ನನ್ನ ಉದ್ದೇಶವು. ಆದ್ದರಿಂದ ನಾನು ನಿಮಗೆ ಪುನಃ ವಿನಂತಿ ಮಾಡು ಮಾಡುತ್ತೇನಲ್ಲ. ನೀವು ಸಿಟ್ಟಿಗೇಳಬೇಡಿರಿ. ಮಹಾರಾಜರು ಖರೇ ಸಾಧುಗಳು ಇದ್ದಾರೆ, ಅಂತ ನಿಮ್ಮ ನಿಶ್ಚಯವಾಗಿದ್ದಾದರೆ, ಸಿಟ್ಟಾಗುವ ಕಾರಣವೇನು? ನೀವು ಏನು ಅವರ ವಿಷಯ ಹೇಳಿದಿರಿ, ಅದರ ಮೇಲೆ ನನ್ನ ಪೂರ್ಣ ವಿಶ್ವಾಸ ಐದೆ. ಆದರೆ ಇದು ಲಕ್ಷದಲ್ಲಿರಲಿ, ನಾನು ನಿಮ್ಮ ಶಬ್ದಗಳ ಮೇಲೆ ಆಧರಿಸಿರಲಿಕ್ಕಿಲ್ಲ. ಅದರಲ್ಲಿ ಖರೇ ಏನದೆ ಎಂಬದು ನನ್ನಷ್ಟಕ್ಕೆ ತಿಳಿಯುವದಕ್ಕೆ ಯತ್ನ ಮಾಡುವೆನು. ಮತ್ತು ಏನು ಮಾಡುವೆನೋ ಅದನ್ನು ದೋಷ ದೃಷ್ಟಿ ಅಥವಾ ವಿರೋಧಿ ದೃಷ್ಟಿಯಿಂದ ಮಾಡದೆ ಸತ್ಯ ಶೋಧನ ದೃಷ್ಟಿಯಿಂದ ಮಾಡುವೆನು.

ಅನಂತರ ಚಿಟಣೀಸರು ನನಗೆ ಹೆಚ್ಚಿಗೆ ಸಂಗತಿಗಳನ್ನು ಹೇಳಿದರು. ಅವೆಂದರೆ- ಗಜಾನನ ಮಹಾರಾಜರು ಯಾರಕಡೆಯಿಂದಲೂ ಎಂದೂ ಪೂಜೆಯನ್ನು ಸ್ವೀಕರಿಸುವದಿಲ್ಲ. ಚಿಕ್ಕವ, ದೊಡ್ಡವ, ಬಡವ, ಶ್ರೀಮಂತ, ಇವರೆಲ್ಲರಿಗೂ ಅವರು ಸಮಾನರೆನಿಸಿ, ಅವರ ಕೂಡ ನಡೆಯುತ್ತಾರೆ. ಅವರ "ಸೋಹಂ" ಮಂತ್ರವು ಜಪಿಸುವ ಮಂತ್ರವಲ್ಲ; ಶ್ವಾಸ ಹೊರಗೆ ಹೋಗುವದು ಒಳಗೆ ಬರುವದು ಇವುಗಳ ಕಡೆಗೆ ಲಕ್ಷ ಕೊಡುವದೇ ಇರುತ್ತದೆ. ಕೆಲವು ಕಾಲದ ಮೇಲೆ ನನಗೆ ಅಂತರ್ದೃಷ್ಟಿಯು ಪ್ರಾಪ್ತವಾಯಿತು, ಅನಂತರ ನಾನು ಸಹಸ್ರದಲದ ತನಕ ಸಹಜ ಹೋದೆ, ಮಹಾರಾಜರು ಕೆಲವು ದಿವಸ ನನ್ನನ್ನು ತಮ್ಮ ಸಮೀಪ ಕೂಡ್ರಿಸಿಕೊಂಡು, ನನ್ನ ಕಡೆಯಿಂದ ಧ್ಯಾನದ ಅಭ್ಯಾಸ ಮಾಡಿಸಿಕೊಂಡರು.

ಅನಂತರ ಅವರು ನನಗೆ ಮನೆಯಲ್ಲಿ ಅಭ್ಯಾಸ ಮಾಡಲಿಕ್ಕೆ ಹೇಳಿ, ಪುನಃ ತನ್ನ ಕಡೆ ಬರುವ ಕಾರಣವಿಲ್ಲ ಎಂತ ಹೇಳಿದರು. ಹೀಗೆ ತನ್ನ ಕಡೆಯಿಂದ ಯಾರು ಉಪದೇಶವನ್ನು ತಕ್ಕೊಂಡಿರುವರೋ ಅವರಿಂದ ಬೇರೆಯೇ ಇರುತ್ತಾರೆ. ಅದ್ದ-ರಿಂದಲೇ ಅವರು ಅಪ್ರಸಿದ್ಧವಾಗಿದ್ದಾರೆ. ಯಾರಾದರೂ ಬೇಕಂತ ಹೇಳಿದ ವಿನಃ ಯಾರೂ ಅವರು ಸಾಧು ಅಥವಾ ಮಹಾರಾಜರೆಂತ ತಿಳಕೊಳ್ಳಲಾರರು. ಇಂಥ ಆತ್ಮಸಾಕ್ಷಾತ್ಕಾರಿ ಸಾಧುಗಳು ಬಹಳ ಅಪರೂಪ. ಮತ್ತೊಬ್ಬರಿಗೂ ಆತ್ಮಸಾ-ಕ್ಷಾತ್ಕಾರದ ಮಾರ್ಗ ತೋರಿಸಿ ಕೊಡುವ ಸಾಧುಗಳ ಪೈಕಿ ಇವರೊಬ್ಬರಿದ್ದಾರೆ. ಎಂದು ನನಗೆ ಪೂರ್ಣ ನಿಶ್ಚಯವಾಗಿದೆ. ಇನ್ನು ಹೆಚ್ಚಿಗೆ ನಾನೇನೂ ಹೇಳುವದಿಲ್ಲ. ಅವರ ಶಿಷ್ಯರು ಅವರಿಗೆ ಬರೆದ ಪತ್ರಗಳನ್ನು ನಾನು ಓದಿದ್ದೇನೆ. ಅವರಿಗೆ ಮಹಾರಾಜರು ಯಾವ ಮಾರ್ಗ ತೋರಿಸಿ ಕೊಟ್ಟಾರೋ, ಆದರ ಒಂದೆರಡು ವರ್ಷಗಳ ಅಭ್ಯಾಸದಿಂದ ಪೂರ್ಣ ಜ್ಞಾನ ಮಾಡಿಕೊಂಡು, ಅವರಿಗೆ ಬಂದ ಅನುಭವಗಳನ್ನು ಅವರು ಆ ಪತ್ರಗಳಲ್ಲಿ ವರ್ಣಿಸಿದ್ದಾರೆ. ಇದಕ್ಕೂ ಹೆಚ್ಚಿಗೆ ಪುರಾವೆ ನಿಮಗೆ ಏನು ಬೇಕು ! ನಮ್ಮ ಕಾಯಸ್ಥಪ್ರಭು ಜಾತಿಯೊಳಗಿನ ಶಿಷ್ಯರಿಗಿಂತ ಅವರ ಬ್ರಾಹ್ಮಣ ಶಿಷ್ಯರು ಅಧಿಕರಿದ್ದಾರೆ. ಮತ್ತು ಅವರ ಪಾರಮಾರ್ಥಿಕ ಅನುಭವಗಳಾದರೂ ಶ್ರೇಷ್ಠತರದ್ದು ಅವೆ.

ಆ ಮೇಲೆ ಚಿಟಣೀಸರಿಗೆ ನಾನು ಚಹಾ ಕೊಟ್ಟೆ, ಮತ್ತು ಅವರ ಕೂಡ ರಾಜೆಯವರ ಮನೆಗೆ ಹೋದೆ. ಚಿಟಣೀಸರು ಅದೇ ರಾತ್ರಿ ನಾಂದಗಾಂವಕ್ಕೆ ಹೋದರು. ಮುಂದೆ ನಾನು ಸ್ವತಃ ಪೋಸ್ಟಮಾಸ್ತರ ರಾಜೆ ಇವರಿಗೆ, ಮಹಾರಾಜರ ವಿಷಯ ಕೇಳಿದೆನು. ಅವರು ಮಹಾರಾಜರ ವಿಷಯ ತಮಗೆ ಗೊತ್ತಿರುವದನ್ನೆಲ್ಲ ನನಗೆ ಹೇಳಿದರು. ಅವರಂದರು:— ಅರ್ವಾಚೀನ ಸಾಧುಗಳ ಮೇಲೆ ನನಗೆ ಏಷ್ಟೊಂದೂ ವಿಶ್ವಾಸವಿಲ್ಲ. ಆದರೆ ನನ್ನ ತಾಯಿಯವರಿಗೆ ಪರಮಾರ್ಥದ ಪ್ರೀತಿ ಇದ್ದದ್ದರಿಂದ, ನಾನು ಅವರನ್ನು ಇಲ್ಲಿ ಕರಕೊಂಡಿದ್ದೇನೆ. ಅವರ ಸರಳ ಶುದ್ಧ ಸ್ವಭಾವದ್ದೆಶಿಯಿಂದ ನಾನೂ ಅವರನ್ನು ಮೆಚ್ಚಿದ್ದೇನೆ. ಅವರು ಬಹಳ ವಿನೋದಿ ಮತ್ತು ಸ್ವಲ್ಪ ಚೇಷ್ಟೆ ಮಾಡುವವರೂ ಇದ್ದಾರೆ. ಸಣ್ಣ ಹುಡುಗರ ಕೂಡೆಯೂ ಅವರು ಏಕವಾಗಿ ನಡೆಯುತ್ತಾರೆ, ಮತ್ತು ಅವರ ಸಂಬಂಧ ಗುಪ್ತ ಅಥವಾ ಭೀತಿಜನಕ ಇಂಥಾದ್ದೇನೂ ಇಲ್ಲ. ಅವರು ಎಂದೂ ಮನೆ ಬಿಟ್ಟು ಹೋಗುವದಿಲ್ಲ; ಮತ್ತು ಪ್ರಶ್ನೆ ಕೇಳಿದ ಹೊರ್ತು ಯಾರೊಬ್ಬರಕೂಡ ಮಾತಾಡುವದೂ ಅಪರೂಪ.

ಈ ಮೇಲಿನ ಸಮಾಚಾರಗಳು ಸಿಕ್ಕಮೇಲೆ, ನಾನು ಅವರ ದರ್ಶನಕ್ಕೆ ಹೋದೆ. ಮಹಾರಾಜರು ಆ ಸಮಯದಲ್ಲಿ ಒಂದು ಸ್ಟೂಲಿನ ಮೇಲೆ ಕೂತಿದ್ದರು. ಅವರು ಬಹಳ ತೆಳ್ಳನವರಿದ್ದದ್ದು ಕಂಡೆ. ಅವರ ಕೈಕಾಲುಗಳು ಬಹು ದುರ್ಬಲವಾಗಿದ್ದು ಸೊರಗಿದವರಂತೆ ಇದ್ದರು. ನಾನು ಅವರ ದರ್ಶನ ತಕೊಂಡೆ. ನಾನು

ಕೆಲವು ಪ್ರಶ್ನೆಗಳನ್ನು ಕೇಳಿದೆ, ಆದರೆ ಅವರು ಹಾರಿಸಿ ಹಾರಿಸಿ ಉತ್ತರ ಕೊಟ್ಟರು.

**ಮಹಾರಾಜರಂದರು:**— “ನಾನು ಒಬ್ಬ ಬಡ ಮನುಷ್ಯನಿದ್ದೇನೆ. ಯಾವಾತನು ನನಗೆ ಪ್ರೇಮದಿಂದ ಕರೆಯುತ್ತಾನೋ ಮತ್ತು ಯಾರು ಸಂಬಂಧಿಕರಂತೆ ನನಗೆ ಆದರ ಸತ್ಕಾರ, ಮಾಡುತ್ತಾರೋ, ಅಂಥವರ ಕಡೆ ನಾನು ಬಹಳ ಪ್ರೀತಿಯಿಂದ ಹೋಗುತ್ತೇನೆ. ಮನಸ್ಸಿನಿಂದ ನಾನೊಬ್ಬ ಫಕೀರನಿದ್ದು, ಮಾನವೀ ವಿಶ್ವಕುಟುಂಬದೊಳಗೆ ನಾನೊಬ್ಬ ನಮ್ರ ದಾಸನಾಗಿದ್ದೇನೆ. ಯಾವಾತನು ನನ್ನನ್ನು ಪ್ರೇಮದಿಂದ ಕರಕೊಳ್ಳುತ್ತಾನೋ ಆತನ ಕಡೆ ನಾನು ಹೋಗುವೆನು. ಮತ್ತು ಬೇಕಾದಷ್ಟು ದಿವಸ ಇರುವೆನು”

ಅನಂತರ ನಾನು ಏಳೆಂಟು ದಿನಗಳವರೆಗೆ ದಿನಾಲು ಮಹಾರಾಜರ ದರ್ಶನಕ್ಕೆ ಹೋಗುತ್ತಿದ್ದೆ. ಅವರು ಆನಂದ ವೃತ್ತಿಯಲ್ಲಿರುವಾಗ, ನನ್ನ ಕಡೆ ನಿರಾತಂಕವಾಗಿ ಮಾತಾಡುತ್ತಿದ್ದರು. ಒಮ್ಮೆ ನಾನು ಅವರಿಗೆ ಅಂದೆ:— “ಮಹಾರಾಜರೇ ಸಿಟ್ಟಾಗಬೇಡಿರಿ, ನಾನು ಸತ್ಯವಾಗಿ ಹೇಳುತ್ತೇನೆ, ನಾವು ಯಾವಾಗಲಾದರೂ ನಿಮ್ಮ ಹತ್ತರ ಕೂತಿರುವಾಗ್ಗೆ ಒಮ್ಮೊಮ್ಮೆ ವಿವಿಧ ಸುವಾಸನೆಗಳು ಬರುತ್ತವೆ. ಆದರೆ ಇಂಥ ಚಮತ್ಕಾರಗಳನ್ನು ಮಾಡುವದರಲ್ಲಿ ಏನು ಅರ್ಥವಿದೆ ? ಎಂಟುಪ್ರಕಾರದ ಸಿದ್ಧಿಗಳು (ಶಕ್ತಿಗಳು) ಇವೆ ಅಂತ ನಾನು ಕೇಳಿದ್ದೇನೆ. ಈ ಅಷ್ಟ ಸಿದ್ಧಿಗಳು ಯೋಗಿಗೆ ಮೋಹಗೊಳಿಸುತ್ತವೆ ಮತ್ತು ಯೋಗ ಮಾರ್ಗದಲ್ಲಿ ವಿಘ್ನಕಾರಕಗಳೆ. ಯಾರು ವೈರಾಗ್ಯಸಂಪನ್ನರಿರುತ್ತಾರೋ ಅಂಥವರೆ ಅವುಗಳ ಬಲೆಯಲ್ಲಿ ಶಿಗುವದಿಲ್ಲ. ಅವರು ಇವುಗಳನ್ನು ದೂರ ಮಾಡುತ್ತಾರೆ. ಮತ್ತು ಮೆಲ್ಲಮೆಲ್ಲನೆ ಪರಮಪದಕ್ಕೆ ಪ್ರಾಪ್ತರಾಗುತ್ತಾರೆ. ಆದರೆ ಇದಕ್ಕೆ ವಿರುದ್ಧವಾಗಿ ನೀವು ಚಮತ್ಕಾರಗಳನ್ನು ತೋರಿಸುತ್ತೀರಿ, ಹೀಗಿದ್ದು ನಿಮ್ಮ ಯೋಗವು ಪೂರ್ಣವಾಗಿದೆ ಎಂದು ಹ್ಯಾಗೆ ಅನ್ನಬಹುದು ? ನಾನಾಪ್ರಕಾರದ ಸುಗಂಧಿ ಅತ್ತರಗಳು, ಮೇವಾ ಮಿಠಾಯಿ ವ ಇಂಥ ವಸ್ತುಗಳನ್ನು ನಾವು ಸಹ ಪೇಟೆಯಿಂದ ತಂಪುಕೊಳ್ಳುವೆವು. ಒಬ್ಬರು ಈ ವಸ್ತುಗಳನ್ನು ಯೋಗ ಸಾಮರ್ಥ್ಯದಿಂದ ಉಂಟುಮಾಡ್ಯಾರು, ಮತ್ತೊಬ್ಬರು ಪೂರ್ವಜನ್ಮದ ಪುಣ್ಯದ ಫಲವೆಂದು ದ್ರವ್ಯ ಸಾಮರ್ಥ್ಯದಿಂದ ಉಂಟುಮಾಡ್ಯಾರು, ವಿಚಾರ ಮಾಡಿದರೆ, ಪರಿಣಾಮದಲ್ಲಿ ಇಬ್ಬರದೂ ಫಲ ಒಂದೇ, ನಾನು ಇಂಥ ಚಮತ್ಕಾರಗಳಿಗೆ ಎಂದೂ ಮಹತ್ವ ಕೊಡಲಾರೆ. ಯಾವನಾದರೊಬ್ಬ ಯೋಗಿಯು ವರ್ಷಗಟ್ಲೆ ಯೋಗಾಭ್ಯಾಸ ಮಾಡಿ, ಅಥವಾ ಅನ್ಯಪ್ರಕಾರದ ತಪಶ್ಚರ್ಯ ಮಾಡಿ ಇಂಥ ಸಿದ್ಧಿಗಳನ್ನು ಸಂಪಾದಿಸಿ, ತನ್ನನ್ನು ಅವುಗಳಲ್ಲಿ ತೊಡಕಿಸಿಕೊಂಡದ್ದಾದರೆ, ನಾನು ಅಂಥವನಿಗೆ ಒಂದು ಕವಡಿ ಕಿಮ್ಮತು ಕೊಡಲಾರೆ, ಇಂಥ ಯೋಗಿಗಳು ತಮ್ಮ ಸ್ವತ:ದ ಘಾತ ಮಾಡಿಕೊಳ್ಳುತ್ತಾರೆ, ಮತ್ತು ಇತರರನ್ನೂ

ಮುಳುಗಿಸುತ್ತಾರೆ, ನಾನು ಈ ವಿಷಯ ಹೆಚ್ಚಿಗೆ ಮಾತಾಡಿದ್ದಕ್ಕೆ ನನಗೆ ಮಾಫಿ ಮಾಡಿರಿ. ಆದರೆ ಇದು ಅಜ್ಞಾನಿ ಜನರಿಗೆ ಮೋಸ ಮಾಡುವ ರೀತಿ ಅಲ್ಲೇನು ? ನಾನು ತಪ್ಪಿದ್ದಾದರೆ ನನ್ನನ್ನು ಸುಧಾರಿಸಿಕೊಂಡು ಹೋಗಿರಿ. ನನಗೆ ನಿಸ್ಸಂಶಯವಾಗುವಂತೆ ಇದರ ವಿವರನನ್ನು ಹೇಳಿರಿ. ಪಾರಮಾರ್ಥಿಕ ವಿಷಯದಲ್ಲಿ, ಯೋಗ ಶಾಸ್ತ್ರದಲ್ಲಿ, ಬೇರೆ ಬೇರೆ ಧರ್ಮದ ಮತಗಳಲ್ಲಿ ಮತ್ತು ಪುಸ್ತಕಗಳಲ್ಲಿ ಒಂದೇ ಸತ್ಯವಾದ ಸಂಗತಿ ಎಂದು ಹೇಳಿದ್ದಿರುತ್ತದೆ. ಅದು "ಅನುಭವ" ಇದೇ. ನಾನು ಬಹಳ ತಾತ್ವಿಕ ಗ್ರಂಥಗಳು, ರಾಮಕೃಷ್ಣ-ಪರಮಹಂಸರಂತೆ ಅನೇಕ ಸಾಧುಗಳ ವಚನಗಳು, ವಿವೇಕಾನಂದರ ಗ್ರಂಥಗಳು, ಜ್ಞಾನೇಶ್ವರಿ, ಯೋಗವಾಸಿಷ್ಠ ಇವೆ ಎಲ್ಲ ಓದಿದ್ದೇನೆ. ಅವುಗಳ ಅರ್ಥವನ್ನು ತಿಳಕೊಳ್ಳುವ ಯತ್ನ ಮಾಡಿದ್ದೇನೆ, ಆದರೆ ಅವುಗಳಲ್ಲಿ ಇಂಥ ಚಮತ್ಕಾರಗಳಿಗೆ ಮಹತ್ವ ಕೊಟ್ಟದ್ದು ಎಲ್ಲಿಯೂ ಕಾಣಲಿಲ್ಲ. ಪ್ರಾಚೀನ ಸಾಧುಸಂತರು ಸಹ ಸದ್ಗುರುಗಳ ವರ್ಣನೆ ಮಾಡುವಾಗ್ಗೆ ಚಮತ್ಕಾರ ಮಾಡುವದರಲ್ಲಿ ತೊಡಕಿದ ಯೋಗಿಗೆ ದೋಷ ಕೊಟ್ಟಿದ್ದಾರೆ. ಮತ್ತು ಇಂಥ ಚಮತ್ಕಾರಿ ಸಾಧುಗೆ ಭುಲೈಸಿ ಹೋಗದಂತೆ ಎಚ್ಚರ ಕೊಟ್ಟಿದ್ದಾರೆ. ರಾಜಯೋಗದಲ್ಲಿಯಾಗಲೀ ಅಥವಾ ಇತರ ಯೋಗ ಮಾರ್ಗಗಳಲ್ಲಿಯಾಗಲಿ ಗೂಢ ವ ಗುಪ್ತವೆಂಬದೇನೂ ಇಲ್ಲ; ಯೋಗದಲ್ಲಿ ಹೇಳಬಾರದಂಥ ಗೂಢವಾದದ್ದು ಏನಾದರೂ ಅದೆ ಎಂದು ಯಾವಾತನೂ ಅಂದರೆ ಅವನ ಮಾತಿನ ಮೇಲೆ ವಿಶ್ವಾಸವನ್ನು ನಾನು ಎಂದೂ ಇಡಲಾರೆನು. ಖರೇ ಸಾಧುವು ಮುಮುಕ್ಷುವಿಗೆ ಸ್ವಲ್ಪಾದರೂ ಸ್ವಾನುಭವದ ಮಾರ್ಗ ತೋರಿಸಿದವಿನಃ ಅಂಥ ವಿಶ್ವಾಸವಿಡಲಿಕ್ಕೆ ಎಂದೂ ಹೇಳಲಿಕ್ಕಿಲ್ಲ.

ಈ ಪ್ರಕಾರ ನಾನು ಮಹಾರಾಜರಿಗೆ ಬಹಳೇ ತ್ರಾಸ ಕೊಟ್ಟೆ. ರಾವ ಸಾಹೇಬ ಗುಪ್ತೆ ಮತ್ತು ಮಾಧವರಾವ ವೈದ್ಯ ಇವರು ಆ ಸಮಯ ಅಲ್ಲಿದ್ದರು. ಮಹಾರಾಜರು ಏನೂ ಮಾತಾಡಲಿಲ್ಲ ಆದರೆ ಬಹಳ ಸಂತೋಷಯುಕ್ತರಾಗಿ ಮುಗುಳ ನಗೆಯಿಂದ ನಗುತ್ತಿದ್ದರು. ಆ ಮೇಲೆ ನಾವು ನಮ್ಮ ನಮ್ಮ ಮನೆಗೆ ಹೋದೆವು. ಆದರೆ ನಮ್ಮ ಮೂರು ಮಂದಿಯ ಚಿತ್ತವೃತ್ತಿಯು ಸ್ವಸ್ಥವಿದ್ದಿಲ್ಲ. ಮತ್ತು ಮಹಾರಾಜರ ಸಂಬಂಧ ಏನಾದರೂ ಹೆಚ್ಚಿಗೆ ತಿಳಕೊಳ್ಳಬೇಕೆಂದು, ನಾವು ಬಹಳ ಚಿಂತಾತುರರಾಗಿದ್ದೆವು.

ಮರುದಿನ ನಾವು ಮೂರೂ ಮಂದಿ ಬೇಗನೆ ಅಲ್ಲಿಗೆ ಹೋದೆವು. ನಮ್ಮನ್ನು ನೋಡಿ ಮಹಾರಾಜರಿಗೆ ಆನಂದವಾದದ್ದು ಕಂಡು ಬಂತು. ಅವರಂದರು— "ಪ್ರಿಯ ಬಂಧುಗಳೇ, ನೀವು ನಿನ್ನೆ ನನಗೆ ಬಹಳ ವೇದಾಂತ ಹೇಳಿದಿರಿ; ಆದರೆ ನಾನೊಬ್ಬ ಅಶಿಕ್ಷಿತ ಮನುಷ್ಯನಿದ್ದೇನೆ, ನನಗೆ ವೇದಾಂತ ತಿಳಿಯುವದಿಲ್ಲ. ನಾನು ಎರಡು ಮೂರು ಇಯತ್ತೆ ಮರಾಠಿ ಕಲಿತಿರುತ್ತೇನೆ. ನನ್ನ ಮುಂದೆ ಇಂಥ ಶಂಕೆಗಳನ್ನು ಉಪಸ್ಥಿತ ಮಾಡಿ, ವಾದ-ವಿವಾದ ಹುಟ್ಟಿಸಿ,

ನನ್ನನ್ನು ನಿರುತ್ತರ ಮಾಡುವದರಲ್ಲಿ ಲಾಭವೇನು? ಚಮತ್ಕಾರವನ್ನು ತೋರಿಸಿ, ತಾನು ಸಾಧು ಅನ್ನಿಸಿಕೊಂಡು ಮೆರೆಯಿಸಿಕೊಳ್ಳಲಿಕ್ಕೆ, ಅಥವಾ ಅಜ್ಞಾನಿ ಸ್ತ್ರೀ ಪುರುಷರನ್ನು ಮೋಸಗೊಳಿಸಲಿಕ್ಕೆ ನಾನು ಇಲ್ಲಿ ಬಂದಿಲ್ಲ. ಚಮತ್ಕಾರಗಳು ಪ್ರತ್ಯೇಕ ವಿಷಯದಲ್ಲಿ ಸ್ವಾಭಾವಿಕವಾಗಿ ಇರುತ್ತವೆ. ಅವು ಹೊರಗಿನಿಂದ ಎಲ್ಲಿಂದಾದರೂ ತರುವಂಥವುಗಳಲ್ಲ. ನೀವು ಧ್ಯಾನದ ಅಭ್ಯಾಸ ಮಾಡಿದ್ದಾದರೆ, ನೀವಾದರೂ ಇಂಥ ಸುವಾಸಗಳನ್ನು ಉತ್ಪನ್ನ ಮಾಡುವಿರಿ. ಧ್ಯಾನದ ಅಭ್ಯಾಸ ಮಾಡಿ ಏಕಾಗ್ರತೆ ಹೆಚ್ಚಿತು ಅಂದಾಕ್ಷಣ ಇಂಥ ಸುವಾಸಗಳು ಹೊರಬೀಳುತ್ತವೆ. ಯೋಗದ ಕೆಳಗಿನ ಮೆಟ್ಟಲಿನಲ್ಲಿಯೇ ಇಂಥ ಅನುಭವಗಳು ಬರುವವು. ಅವು ಮಾರ್ಗ ಬರೋಬರಿ ಅದೆಯೋ ಎಂಬದಷ್ಟೇ ತೋರಿಸುತ್ತವೆ.

"ರಾಜೆ ಪೋಸ್ಟ ಮಾಸ್ತರ ಇವರ ಪರಿಚಯವು ಪ್ರಸಂಗವಶದಿಂದ ನನಗಾಯಿತು, ನನ್ನ ಸೋದರತ್ತೆ ಮತ್ತು ರಾಜೆಯವರ ತಾಯಿ, ಇವರು ಚಿಕ್ಕಂದಿನಿಂದ ಪರಸ್ಪರ ಗುರ್ತದವರಿದ್ದರು. ಇದು ನನಗೆ ತಿಳಿದಿದ್ದರಿಂದ ಮತ್ತು ರಾಜೆಯವರ ತಾಯಂದಿರು ಬಹಳ ಆಗ್ರಹ ಮಾಡಿದ್ದಕ್ಕೆ ನಾನು ಅವರಲ್ಲಿ ಬಂದು ಇದ್ದೇನೆ. ನೀವು ನನಗೆ ಯಾಕೆ ತ್ರಾಸ ಕೊಡುತ್ತೀರಿ? ಇದರಿಂದ ನಿಮಗೆ ಆಗುವ ಲಾಭವಾದರೂ ಏನಿದ್ದೀತು? ಎರಡನೇ ಸಂಗತಿ ಹೀಗದೆ. ಒಬ್ಬನು ಒಂದು ಗಿಳಿಯನ್ನು ಸಾಕಿದನು, ಮತ್ತು ಅದಕ್ಕೆ ಮಾತು ಕಲಿಸಿದನು; ಆ ಪ್ರಕಾರ ಆ ಗಿಳಿ ಮಾತಾಡಿದರೆ, ಅದರ ಚತುರತೆ ಸಾಕಿದವನದೋ ಗಿಳೀದೊ? ಸಾಕಿದವನಿಗೆ ಆ ಕುಶಲತೆ ಒಪ್ಪುವದೆಂಬದು ಸ್ಪಷ್ಟವಾಗಿದೆ. ನಾನು ಹೇಳುವದೇನಂದರೆ, ನಿಮ್ಮ ಮಾತುಗಳು ಆ ಗಿಳಿಯ ಮಾತುಗಳಂತಿವೆ. ನೀವು ಬಹಳ ಶಾಸ್ತ್ರ ಗ್ರಂಥಗಳನ್ನು ಓದಿದ್ದೀರಿ. ಹೀಗೆ ಕಲ್ಪಿಸಿರಿ, ನಾನು ನಿಮಗೆ ಏನಾದರೂ ಹೇಳಿದೆ, ನೀವು ಅದನ್ನು ಕೇಳಿಕೊಂಡಿರಿ. ಆದರೆ ಅದರಿಂದ ನಿಮಗೆ ಲಾಭವೇನು? ಪುಸ್ತಕಗಳಲ್ಲಿ ಓದಿದ ಸಂಗತಿಗಳನ್ನು ನೀವು ಬಾಯಲ್ಲಿ ಉಚ್ಚರಿಸಿ ತೋರಿಸಿದಿರಿ. ಆದರೆ ಹ್ಯಾಗೆ ಗಿಳಿ ಅಂದ ಮಾತಿನ ಅರ್ಥ ಗಿಳಿಗೆ ತಿಳಿಯದು, ಹಾಗೆಯೇ ನೀವು ಏನು ಅನ್ನುವಿರೋ ಅದರ ನಿಜವಾದ ತಾತ್ಪರ್ಯ ನಿಮಗೆ ತಿಳಿಯದು. ನನ್ನ ಮಿತ್ರರೇ, ಇವೆಲ್ಲ ಶಾಬ್ದಿಕ ಮಾತುಗಳವೆ ಮತ್ತೇನೂ ಅಲ್ಲ. ಧ್ಯಾನದ ಅಭ್ಯಾಸ ಮಾಡಿರಿ ಮತ್ತು ನಿಜಾನುಭವವನ್ನು ಪಡೆಯಿರಿ. ಹೀಗೆ ನಾನು ನಿಜವಾಗಿ ಆಗ್ರಹ ಪೂರ್ವಕ ಹೇಳುತ್ತೇನೆ, ಕೆಲವು ಕಾಲ ಅಭ್ಯಾಸ ಮಾಡಿ ನಿಮಗೆ ಒಂದು ವೇಳೆ ಏನೂ ಅನುಭವ ಬಂದಿಲ್ಲ, ಆಗ ನಾನಂದ ಪ್ರತಿ ಒಂದು ಸಂಗತಿ ಸುಳ್ಳವೆ ಅಂತ ಹೇಳಿರಿ. ಖರೇ ಸಾಧುಗಳು ನಿಮಗೆ ಯಾವಾಗಲೂ ಪ್ರತ್ಯಕ್ಷಾನುಭವವನ್ನು ಪಡೆಯಿರಿ ಅಂತ ಹೇಳುವರು. ಯಾಕಂದರೆ ಅವರು ಮಾನವೀ ಪ್ರಾಣಿಗಳ ಮೇಲೆ ಮನಃಪೂರ್ವಕವಾಗಿ ನಿಷ್ಕಪಟ ಪ್ರೇಮವನ್ನು ಮಾಡುತ್ತಾರೆ. "ಈ ಜನರು ಮುಳುಗುವದು ನೋಡುವದಾಗುವದಿಲ್ಲ ಅಂತ ಅವರ ಸಂಬಂಧ ಬಹಳ

ವ್ಯಾಕುಲತೆ ಅನಿಸುತ್ತದೆ." ಹೀಗೆ ತುಕಾರಾಮನ ವಚನವಿದೆ. ಈ ಉದ್ಗಾರದೊಳಗಿನ ಸೂಕ್ಷ್ಮಾರ್ಥ ನೋಡಿದರೆ, ಖರೇ ಸಾಧುವಿನ ಅಂತಃಕರಣವು ಮಾನವೀ ಜೀವಿಗಳಿಗೋಸ್ಕರ ಎಷ್ಟು ತಳಮಳಸುವವೆಂದು ಕಲ್ಪನೆ ಉಂಟಾದೀತು.

ಕೆಲವು ಚಮತ್ಕಾರಗಳನ್ನು ನೀವೀಗ ನೋಡಿದ್ದೀರಿ, ಮತ್ತು ಕೆಲವದರ ವಿಷಯ ಕೇಳಿದ್ದೀರಿ; ಆದರೆ ಅವುಗಳ ಸಂಬಂಧ ನಿಮಗೇನಾದರೂ ಅನುಭವ ಇದೆ ಏನು ? ಎಷ್ಟೊಂದೂ ಇರಲಿಕ್ಕಿಲ್ಲ! ನನ್ನ ಪ್ರಿಯ ಮಿತ್ರರೆ! ನಾನು ನಿಮಗೆ ಪುನಃ ಹೇಳುತ್ತೇನೆ, ಮನಸ್ಸಿಗೆ ಅಂದ್ರ್ಯಷ್ಟಿ ಬಂತೆಂದರೆ, ಮತ್ತು ಧ್ಯಾನದಲ್ಲಿ ಮನಸ್ಸಿನ ಏಕಾಗ್ರತೆ ಸಾಧಿಸಿತೆಂದರೆ, ಯಾವನಾದರೂ ಧ್ಯಾನದ ಅಭ್ಯಾಸ ಮಾಡುವವನಿಗೆ ಇಂಥ ಸೌಗಂಧಿಕ ವಾಸನೆಗಳು ಸಹಜವಾಗಿ ಬರುವವು. ಇದರಲ್ಲಿ ಆಶ್ಚರ್ಯಪಡತಕ್ಕಂಥಾದ್ದೇನೂ ಇಲ್ಲ."

ಈ ಭಾಷಣದ ನಂತರ ನಾವೆಲ್ಲರೂ ಮನೆಗೆ ಹೋದೆವು. ಮರುದಿನ ಮತ್ತು ಮೂರು ನಾಲ್ಕು ಜನರನ್ನು ಕರಕೊಂಡು ನಾನು ಮಹಾರಾಜರಕಡೆಗೆ ಹೋದೆನು, ಈ ಸಮಯದಲ್ಲಿ ಉತ್ತಮ ಸೌಗಂಧಿಕ ಅತ್ತರವನ್ನು ನಾನು ಕೈಗೆ ಹಚ್ಚಿಕೊಂಡಿದ್ದೆ, ಮತ್ತು ಎಲ್ಲ ವಸ್ತ್ರಗಳಿಗೂ ತಿಕ್ಕಿದ್ದೆ; ಮತ್ತು ಅರಳೆಯ ಒಂದು ಉಂಡೆಯನ್ನು ಅತ್ತರದೊಳಗೆ ಎದ್ದಿ, ಅದನ್ನು ಕಿವಿಯೊಳಗೆ ಇಟ್ಟುಕೊಂಡಿದ್ದೆ. ಆ ಸಮಯದಲ್ಲಿ ಬೇರೆ ಕೆಲವು ಮಂದಿ ಮಹಾರಾಜರ ಹತ್ತಿರ ಇದ್ದರು. ಅವರ ಪೈಕಿ ಒಬ್ಬನು ನನಗಂದನು, 'ಏನು ರಿಜಿಸ್ಟ್ರಾರ ಸಾಹೇಬರೇ, – ಈ ಹೊತ್ತು ನೀವು ಅತ್ತರ ಹಚ್ಚಿಕೊಂಡು ಬಂದೀರಿ ಕಾಣಸುತ್ತದೆ? ನೀವು ಈ ಹೊತ್ತೇ ದೀಪಾವಳಿ ಮಾಡಿದಿರೇನು ?' ಅದಕ್ಕೆ ನಾನಂದೆ, " ವಿವಿಧ ಸೌಗಂಧಿಕ ವಾಸನೆಗಳು ಬರುತ್ತವೆ. ಆದರೆ ಇವತ್ತು ಬರೇ ಅತ್ತರ ಹಚ್ಚಿಕೊಂಡೇ ನೋಡಬೇಕೆಂದು ನನಗನಿಸಿತು;"

ಅದಕ್ಕೆ ಮಹಾರಾಜರಂದರು :— " ನನಗಂತೂ ಅತ್ತರದ ಸುಗಂಧ ಬರುವದಿಲ್ಲ, ಆದರೆ ಯಾವದಾದೂ ಸಾಮಾನ್ಯ ಎಳ್ಳೆಣ್ಣೆಯ ಕೆಟ್ಟ ವಾಸ ಬರುತ್ತದೆ. ಮಹಾರಾಜರು ಹೇಳಿದರ ಮೇಲಿಂದ ಆ ಮಂದಿಯು ನನ್ನ ವಸ್ತ್ರಗಳನ್ನು ಮೂಸಿ ನೋಡಿದರು; ಮತ್ತು ಅವರಿಗಾದರೂ ಸಾಮಾನ್ಯ ಎಣ್ಣೆಯ ವಾಸ ಬಂತು. ಆಗ ಅಲ್ಲಿದ್ದವರೆಲ್ಲರೂ ನಗಲಿಕ್ಕೆ ಹತ್ತಿದರು. ನನಗೆ ಮಾತ್ರ ಬಹಳ ನಾಚಿಕೆಯಾಯಿತು. ಮತ್ತು ಆ ಕ್ಷಣವೇ ನಾನು ಮಹಾರಾಜರ ಕ್ಷಮೆ ಬೇಡಿಕೊಂಡೆ. ಅನಂತರ ಎಲ್ಲರೂ ನನಗಂದರು, " ನಿಮಗೆ ಸಾಧುವಿನ ಪರೀಕ್ಷೆ ಮಾಡುವದಿದ್ದರೆ, ಏನಾದರೂ ನಮ್ರತೆ ಧಾರಣ ಮಾಡಿ ಮಾಡಬೇಕು, ಇಂಥ ದುಸ್ತರ ಕಾರ್ಯವನ್ನು ಎಂದೂ ಕೈಕೊಳ್ಳಬಾರದು, ಇದೇ ಉತ್ತಮ. ತನಗೆ ಸಾಧುವಿನ ಮೇಲೆ ವಿಶ್ವಾಸ ಕೂಡ್ರದಿದ್ದರೆ, ಅವನನ್ನು ದೂರದಿಂದಲೇ ನಮ-

ಸ್ಕಾರ ಮಾಡಬೇಕು, ಆದರೆ ಅವರ ದೋಷ ಎತ್ತುತ್ತ ಕೂಡ್ರಬಾರದು. ಮಹಾರಾಜರು, ಈಗ ಎಂಟು ಒಂಭತ್ತು ತಿಂಗಳು ಇಲ್ಲಿ ಇದ್ದಾರೆ; ಆದರೂ ಸ್ವಲ್ಪೇ ಜನರಿಗೆ ಅವರ ವಿಷಯ ಗೊತ್ತಾಗಿದೆ. ಮಹಾನ್ ಸಾಧುಗಳ ಪರೀಕ್ಷೆ ಮಾಡುವದು ಎಂದೂ ವಿಹಿತವಾದದ್ದಲ್ಲ. ಹೀಗೆ ಮಾಡುವದು ನಿಮ್ಮಂಥವರಿಗೆ ಅಯೋಗ್ಯವಾದದ್ದು. ಆದರೂ ಏನು ಆಗಿ ಹೋಯಿತು, ಅದು ನಿಮ್ಮ ಕಲ್ಯಾಣಕ್ಕೋಸ್ಕರವೇ ಆಯಿತು." ಅನಂತರ ಎಲ್ಲರೂ ಅಲ್ಲಿಂದ ಹೊರಟು ಹೋದರು.

(೪೫) **ಅತ್ತರಗಾರನ ಸಂಗತಿಯು:**—ಒಂದೆರಡು ದಿನಗಳ ನಂತರ ಗಜಾನನ ಮಹಾರಾಜರು ಮುಂಜಾನೆ ಸುಮಾರು ಒಂಭತ್ತು ಘಂಟೆಗೆ, ನಾನು ಇದ್ದಲ್ಲಿಗೆ ಬಂದರು. ಮತ್ತು ನಾವು ಪರಸ್ಪರ ಮಾತಾಡುತ್ತ ಕುಳಿತಿರುವಾಗ, ಕನೋಜದಿಂದ ಧುಳೆಗೆ ಬಂದಿದ್ದ ಒಬ್ಬ ಅತ್ತರಗಾರನು ಅಲ್ಲಿಗೆ ಬಂದನು. ಅವನು ಊರೊಳಗಿನ ಶ್ರೀಮಾನ್ ಮತ್ತು ದೊಡ್ಡ ದೊಡ್ಡ ಮಂದಿಗೆ ಅತ್ತರವನ್ನು ಮಾರಿದ್ದನು. ಅವರದೊಂದು ಯಾದಿ ಮಾಡಿತ್ತು. ಅದನ್ನು ಅವನು ನನಗೆ ತೋರಿಸಿದನು. ಮತ್ತು ಅಂದನು, "ನಿಮ್ಮ ಹೆಸರು ಕೇಳಿ ನಾನು ಇಲ್ಲಿಗೆ ಬಂದಿದ್ದೇನೆ. ಎರಡು ನೂರು ತೊಲೆ ಅತ್ತರ ನೀವು ತಕ್ಕೊಳ್ಳಬೇಕು" ನಾನು ಹೇಳಿದೆ, "ನಾನು ಅತ್ತರದ ಷೌಕಿನ ಅಲ್ಲ," ನಾನು ಅವನಿಗೆ ಹೋಗೆಂತ ಹೇಳುವವನಿದ್ದೆ, ಅದರೆ ಹಾಗೆ ಮಾಡದೆ, ನಾನು ಎರಡು ನೂರು ರೂಪಾಯಿಗಳ ಅತ್ತರ ಕೊಳ್ಳಬೇಕಾಯಿತು. ಅನಂತರ ನಾನು ಸ್ನಾನಕ್ಕಾಗಿ ಒಳಗೆ ಹೋದೆ. ನಾನು ಹೊರಗೆ ಬಂದಾಗ್ಗೆ ಮಹಾರಾಜರಿಗೂ ಅತ್ತರಗಾರನಿಗೂ ಏನೋ ಮಾತು ನಡೆದಿದ್ದವು. ಎಂಬಂತೆ ನನಗೆ ಕೇಳಿಸಿತು. ಅತ್ತರಗಾರನಂದನು, "ನಾನು ನಮೂನೆಗಾಗಿ ಯಾರಿಗೂ ಪುಕ್ಕಟೆ ಕೊಡುವದಿಲ್ಲ. ರೊಕ್ಕ ಕೊಡಿರಿ, ನಾನು ನಿಮಗೆ ಅತ್ತರದಲ್ಲಿ ಅದ್ದಿ ಅರಳಿ ಗುಳಿಗೆ ಕೊಡುತ್ತೇನೆ. ನನ್ನ ಅತ್ತರ ಏನು ಎಂಟು ಹತ್ತು ಅಣೆ ಕಿಮ್ಮತ್ತಿನ ಹಲಕಿರೀ ತರದ್ದಲ್ಲ. ಒಂದು ಅರಳಿ ಗುಳಿಗೆಯು ಅತ್ತರಕ್ಕೆ ಎಂಟು ಆಣೆ ತಕ್ಕೊಳ್ಳುತ್ತೇನೆ." ಅದಕ್ಕೆ ಮಹಾರಾಜರಂದರು, "ನಾನು ಗರೀಬನಿದ್ದೇನೆ, ನನ್ನ ಕೈಗೆ ಸ್ವಲ್ಪ ಅತ್ತರ ಹಚ್ಚಿರಿ. ನನಗೆ ಅರಳಿ ಗುಳಿಗೆ ಹತ್ತುವ ಅತ್ತರ ಬೇಡಾ ನನಗೆ "ಹೀನಾ ಮತ್ತು ಮಲ್ಲಿಗೆ" ಇವನ್ನು ತೋರಿಸಿರಿ.

ಇಷ್ಟಾದರೂ ಅತ್ತರದವನು ನಮೂನೆ ತೋರಿಸಲಿಲ್ಲ. ಅನಂತರ ನಾನು ಅವನಿಗೆ ಮಹಾರಾಜರಿಗೆ ನಮೂನೆ ತೋರಿಸಲಿಕ್ಕೆ ಹೇಳಿದೆ. ಮಹಾರಾಜರು ಏನಾದರೂ ಚಮತ್ಕಾರ ಮಾಡುವರೆಂತ ನನ್ನ ತರ್ಕವಿತ್ತು. ಅಂತ ನಾನು ಅವನಿಗೆ ಪುನಃ ಅಗ್ರಹ ಮಾಡಿದೆ. ಮತ್ತು ಹೇಳಿದೆ, "ಅವರಿಗೆ ನಮೂನೆ ತೋರಿಸು, ಅವರು ನಿಮ್ಮ ಅತ್ತರ ತಕ್ಕೊಂಡಾರು."

ಅದರೆ ಅತ್ತರಗಾರನೂ ದೊಡ್ಡ ಹಟವಾದಿ ಇದ್ದನು. ಮತ್ತು ಅಂದನು "ನನ್ನ ಅತ್ತರಗಳು ಭಾರೀ ಕಿಮ್ಮತ್ತಿನವು ಇದ್ದಾವೆ, ಅವರು ಅವನ್ನೇನ

ತಗೊಂಡಾರು?" ಆದರೂ ಅವನು ಎರಡು ನಮೂನೆಯ ಅತ್ತರಗಳನ್ನು ಮಹಾರಾಜರ ಕೈಗೆ ಹಚ್ಚಿದನು. ಮಹಾರಾಜರು, ಆ ಅತ್ತರಗಳ ಕ್ರಯವನ್ನು ಕೇಳಿದರು; ಆಗ ಅವನಂದನು, "ನನ್ನ ಅತ್ತರಗಳು ತೊಲೆಗೆ ಹತ್ತು ರೂಪಾಯಿವು ಅವೆ. ಆದರೆ ಅವರಿಗೆ ಕೊಟ್ಟಂತೆ ಎಂಟು ರೂಪಾಯಿಗೆ ತೊಲೆಯಂತೆ ಕೊಟ್ಟೇನು. ಮಹಾರಾಜರು ಅನಂತರ ಅತ್ತರದ ವಾಸ ತಕ್ಕೊಂಡರು. ಮತ್ತು ಅಂದರು, "ಇದರ ಗಂಧವಾದರೂ, ನಾವು ಮನೆಯಲ್ಲಿ ಅಡಿಗೆಗೆ ಒಗ್ಗರಣೆ ಹಾಕುವ ಎಣ್ಣೆಯಂಥಾದ್ದದೆ," ಅತ್ತರಗಾರನು ಸಿಟ್ಟಿಗೆದ್ದನು, ಅವನು ಸಿಕ್ಕಹಾಗೆ ಬೈಯ್ಯಲಿಕ್ಕೆ ಸುರು ಮಾಡಿದನು. ಆ ಮೇಲೆ ನಾನಂದೆ, "ಕೆಲವು ಜನರಿಗೆ ಹ್ಯಾಗೆ ಅತ್ತರದ ಪರೀಕ್ಷೆ ಇರುವದಿಲ್ಲ, ಹಾಗೆ ನಿನಗೆ ಮನುಷ್ಯರ ಪರೀಕ್ಷೆ ಇಲ್ಲ."

ಆ ಮೇಲೆ ಮಹಾರಾಜರು ನನ್ನ ಕಡೆ ತಿರುಗಿ ಅಂದರು, "ಭಾವೂಸಾಹೇಬ, ಅವನಿಗೆ ಐದು ರೂಪಾಯಿ ಕೊಡಿರಿ ಮತ್ತು ಎಲ್ಲ ಅತ್ತರದ ನಮೂನೆಗಳನ್ನು ತೋರಿಸಲಿಕ್ಕೆ ಹೇಳಿರಿ," ಆ ಪ್ರಕಾರ ಆ ಅತ್ತರಗಾರನು ತನ್ನ ಹತ್ತರ ಇದ್ದ ಎಲ್ಲ ಅತ್ತರಗಳ ನಮೂನೆ ತೋರಿಸಿದನು. ತೋರಿಸಿದ ಎಲ್ಲ ಅತ್ತರಗಳ ವಾಸವು ಸಾದಾ ಎಣ್ಣೆಯ ವಾಸದಂತೆ ಇತ್ತು, ಭಾರೀ ಕಿಮ್ಮತಿನ ಅತ್ತರದ್ದು ಸಹ ಅದೆ ಆಯಿತು. ಅತ್ತರಗಾರನು ಸ್ವತಃ ಮತ್ತು ನಾನು ಸಹ ವಾಸ ತಕ್ಕೊಂಡು ನೋಡಿದೆ; ಮಹಾರಾಜರು ಅನ್ನುವದೇ ಖರೇ ಎಂಬದಾಗಿ ನಮ್ಮಿಬ್ಬರದೂ ನಿಶ್ಚಯವಾಯಿತು. ಅತ್ತರಗಾರನಿಗೆ ದೊಡ್ಡ ಭೀತಿ ಹುಟ್ಟಿತು. ಈ ಮಲಿನ ಕೋಟಿನ ಮನುಷ್ಯನು ಸಾಧು ಇರಬೇಕೆಂತ ಅವನು ಊಹಿಸಿದನು, ನಂತರ ಅವನು ಮಹಾರಾಜರ ಪಾದಕ್ಕೆ ಬಿದ್ದನು. ಅವನು ಮಹಾರಾಜರ ಕ್ಷಮಾ ಬೇಡಿದನು. ನಮಗಂತೂ ದೊಡ್ಡ ನಗೆ ಬಂತು. ಮಹಾರಾಜರು ಅತ್ತರಗಾರನಿಗಂದರು, "ನಾನಿದರಲ್ಲಿ ಏನೂ ಮಾಡಲಿಲ್ಲ. ಎಲ್ಲ ಅತ್ತರಗಳಿಗೂ ಸಾದಾ ಎಣ್ಣೆಯೇ ಉಪಯೋಗಿಸುತ್ತಾರೆ. ನೀವಾದರೂ ಹಾಗೆಯೇ ಮಾಡುತ್ತೀರಿ ಅಂತ ನಾನು ಕೇಳಿದ್ದೇನೆ. ಆದ್ದರಿಂದ ಈ ಅತ್ತರಗಳು ಮೊದಲಿನ ಸಾದಾ ಎಣ್ಣೆಯಂತೆ ಆಗಿದ್ದಾವೆ, ಅದರದೇನು ಆಶ್ಚರ್ಯ?" ಆದರೂ ಮಹಾರಾಜರು ಪುನಃ ಅವನ ಅತ್ತರಗಳು ಮೊದಲಿದ್ದಂತೆ ಸೌಗಂಧಿಕ ಮಾಡಿದರು. ಆ ಅತ್ತರಗಾರನು, ಧುಳಿಯಲ್ಲಿ ಪುನಃ ನಾನಿದ್ದಲ್ಲಿ ಬರಲಿಲ್ಲ. ಅವನು ಮುಸಲ್ಮಾನನಿದ್ದರೂ ತನ್ನ ಉಡಿಗೆಯನ್ನು ಹಿಂದುಗಳಂತೆ ಮಾಡಿದ್ದನು.

ಆ ಕಾಲದಿಂದ ಮಹಾರಾಜರ ಕೃಪೆಯಾಗಬೇಕು ಅಂತ ನಾನು ಬಹಳ ಚಿಂತಾತುರನಾದೆನು. ಅನಂತರ ರಾವಸಾಹೇಬ ಗುಪ್ತೆ, ಮಾಧವರಾವ ವೈದ್ಯ ಮತ್ತು ನಾನು, ಹೀಗೆ ಮೂರು ಮಂದಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಹೀಗೆ ನಿರ್ಣಯ ಮಾಡಿದೆವಲ್ಲ; ಇಂಥ ಸಾಧುವಿನ ಅನುಗ್ರಹ ತಕ್ಕೊಳ್ಳದಿರುವದು ಕೇವಲ ಮೂರ್ಖತ್ವವಾಗುವದು, ಹೀಗೆಂದು ಅದಕ್ಕೋಸ್ಕರ

ಮುಂದಿನ ಗುರುವಾರವೆಂತ ನೇಮಿಸಿದೆವು, ಮಹಾರಾಜರು. ಬಹಳ ವಿನೋದ ಮಾಡುತ್ತಿದ್ದರು. ನಮಗೂ ಅವರ ಕೂಡ ಸಲಿಗೆ ಬಹಳ ಬೆಳೆಯುತ್ತ ನಡೆಯಿತು. ಮೊದಲು ನಮಗೆ ಅವರ ವಿಷಯ ಸ್ವಲ್ಪ ಭೀತಿ ಇತ್ತು, ಅದು ಬಹು ದಿನದ ಸಹವಾಸದಿಂದ ಅಳಿದು ಹೋಯಿತು. ಪ್ರಥಮ ಮಹಾರಾಜರನ್ನು ವೈದ್ಯರು ತಮ್ಮ ಮನೆಗೆ ಕರಕೊಂಡು ಹೋದರು. ಧುಳೆ ಶಹರಿನಿಂದ ನಾಲ್ಕೈದು ಮೈಲು ದೂರ ಅವರ ಹೊಲಗಳಿದ್ದವು, ಅಲ್ಲಿ ಅವರು ಇರುತ್ತಿದ್ದರು. ಮೊದಲು ಅವರು ಅಬಕಾರಿ ಇನ್ಸಪೇಕ್ಟರ ಇದ್ದರು. ಆ ಮೇಲೆ ಅವರು ಏನೋ ವ್ಯಾಪಾರ ಸುರು ಮಾಡಿದ್ದರು. ಮಹಾರಾಜರ ಕುಚೇಷ್ಟೆ ಮಾಡುವ ನನ್ನ ಪ್ರಯತ್ನದಲ್ಲಿ ಅವರೂ ಭಾಗ ತಕ್ಕೊಂಡಿದ್ದರು. ಆ ಕಾರಣ ಅವರು ಮೊದಲು ಮಹಾರಾಜರ ಕ್ಷಮಾ ಬೇಡಿದರು. ಅನಂತರ ಅವರನ್ನು ಮನೆಗೆ ಕರಕೊಂಡು ಹೋದರು. ಅವರ ಕೊರಳಿಗೆ ಪುಷ್ಪಾಹಾರವನ್ನು ಹಾಕಿದರು. ಮತ್ತು ಅವರ ಅನುಗ್ರಹವನ್ನು ಪಡ-ಕೊಂಡರು, ಒಂದು ವಾರದೊಳಗೆ ಮಹಾರಾಜರು ಅವರ ಕಡೆಯಿಂದ ಧ್ಯಾನದ ಅಭ್ಯಾಸಮಾಡಿಸಿಕೊಂಡರು. ಆದರಿಂದ ಅವರಿಗೆ ಅಂತಃದೃಷ್ಟಿ ಪ್ರಾಪ್ತವಾಯಿತು. ಮತ್ತು ಅಂತಃದೃಷ್ಟಿಯೊಳಗಿನ ಷಟ್‌ಚಕ್ರಗಳಂಥ ಆಶ್ಚರ್ಯಕಾರಕ ಸಂಗತಿಗಳನ್ನು ಅವರು ಪ್ರತ್ಯಕ್ಷ ಕಾಣಲಾರಂಭಿಸಿದರು. ಕಡೆಗೆ ಹೃದಯದಲ್ಲಿದ್ದ ಅನಾಹತ ಚಕ್ರದ ಮೇಲೆ ಲಕ್ಷವಿಟ್ಟು ಅಲ್ಲಿ ಧ್ಯಾನ ಮಾಡಲಿಕ್ಕೆ ಅವರಿಗೆ ಹೇಳಿತು. ಹಾಗೆ ಮಾಡುತ್ತ ಅವರಿಗೆ ಒಳಗೆ ಪ್ರಕಾಶ ಕಾಣಲಿಕ್ಕೆ ಹತ್ತಿತು. ಬಹಳೇ ಸಾಧುಗಳ ದರ್ಶನವಾಗಲಿಕ್ಕೆ ಆರಂಭವಾಯಿತು, ಪ್ರಕಾಶಮಾನ ದೇವತೆಗಳು ಕಾಣಿಸಿದವು, ಮೂಲಾಧಾರದ ಮೇಲೆ ಧ್ಯಾನ ಮಾಡಿದಾಗ್ಗೆ ಅಗ್ನಿಜ್ವಾಲೆಗಳು ಕಾಣಿಸಿದವು. ಹಾಗೆಯೇ ನಕ್ಷತ್ರಗಳು ಸೂರ್ಯ, ಚಂದ್ರ, ಗ್ರಹಗಳು ಕಾಣುತ್ತಿದ್ದವು. ಮುಂದೆ ಮುಂದೆ ಮೇಘ ಗರ್ಜನೆ, ಘಂಟಾ ನಾದ, ಶಿವತಾಂಡವ ನೃತ್ಯದ ಧ್ವನಿ, ಮುರಲಿ (ವೇಣಿ) ಯ ಮಂಜುಳ ಸ್ವರ, ಶಂಖ ನಾದ ವಗೈರೆ ಭಿನ್ನ ಭಿನ್ನ ನಾದಗಳು ಕೇಳಿಸಲಿಕ್ಕೆ ಆರಂಭವಾಯಿತು. ಈ ತಮ್ಮ ಸ್ವಂತದ ಅನುಭವಗಳನ್ನು ಅವರು ನನಗೆ ವರ್ಣಿಸಿ ಹೇಳಿದರು.

ಇದನ್ನೆಲ್ಲ ಕೇಳಿ ನನಗೆ ಬಹಳ ಆನಂದವಾಯಿತು, ಮತ್ತು ಯಾವ್ಯಾವ ಸಂಶಯಗಳು ನನ್ನ ಮನಸ್ಸಿನೊಳಗೆ ಘಟ್ಟಿಯಾಗಿ ನಿಂತಿದ್ದವೋ, ಅವೆಲ್ಲ ಸಂಪೂರ್ಣವಾಗಿ ಓಡಿ ಹೋದವು. ಇಂಥ ಪ್ರಕಾರದ ಮಹಾನ್ ಸಾಧು ವಿಷಯದಲ್ಲಿ ಮನಸ್ಸಿನೊಳಗೆ ಶಂಕೆಗಳನ್ನು ಬರಗೊಟ್ಟಿದ್ದಕ್ಕೆ ನನಗೆ ಬಹಳ ಪಶ್ಚಾತ್ತಾಪವಾಯಿತು. ಮಾಧವರಾವ ವೈದ್ಯ ನನಗಂದರು, " ಭಾವೂಸಾಹೇಬರೇ, ನಾನು ಪೂರ್ವ ಜನ್ಮದಲ್ಲಿ ಮಹತ್ ಪುಣ್ಯ ಮಾಡಿರ ಬೇಕು, ಅಂತೇ ಇಂಥ ಮಹಾನ್ ಸಾಧುಗಳ ಕೃಪಾ ಸಂಪಾದನ ಮಾಡುವ ಸುದೈವ ಲಭಿಸಿತು, ಅವರಿಗೆ ಸ್ವತಃ ಆಧ್ಯಾತ್ಮಿಕ ಅನುಭವಗಳು ಇರಬೇಕು, ಹಾಗಿಲ್ಲದಿದ್ದರೆ, ಅವರು ಪರರಿಗೆ ಇಂಥ ಅನುಭವಗಳನ್ನು ಮಾಡಿಕೊಡುತ್ತಾರೆಂಬದು ಇದು ವಿಶೇಷ ಸಂಗತಿ. ಇಂಥ

ಸಾಧುಗಳು ಬಹಳ ಅಪರೂಪ. ಇದಲ್ಲದೆ ಮಹಾರಾಜರು ಅಗದಿ ನಿರಭಿಮಾನಿಗ ಳಿದ್ದಾರೆ. ಅವರ ಆಹಾರವು ಚಿಕ್ಕಮಕ್ಕಳಂತೆ ಇರುವದು. ಭೋಜನದಂತೂ ನೋಟವೇ ಮಾಡುತ್ತಾರೆ. ಕೆಲವು ವರ್ಷಗಳ ಹಿಂದೆ ಪುಣೆಯ ಅಣ್ಣಾಸಾಹೇಬ ಪಟವರ್ಧನರು ಇಲ್ಲಿಗೆ ಬಂದಿದ್ದರು. ಆಗ ಅವರು, "ನಿನಗೆ ಮಹಾನ್ ಸಾಧು ವಿನ ಉಪದೇಶವಾದೀತು. ಏನೂ ಕಾಳಜಿ ಮಾಡಬೇಡ." ಎಂದು ಹೇಳಿದ್ದರು. ಆ ಅವರ ಭವಿಷ್ಯ ಕಥನವು ಈಗ ಸತ್ಯವಾಯಿತು. ಭಂಗಾರದ ಪರೀಕ್ಷೆ ಆದರೂ, ಮತ್ತೂ ಸಂಶಯ ಬರುತ್ತದೆ ಅಂತ ಮತ್ತೆ ಮತ್ತೆ ಆ ಭಂಗಾರವನ್ನು ಒರೆ- ಕಲ್ಲಿಗೆ ತಿಕ್ಕುತ್ತ ಹೋದರೆ, ಎಲ್ಲ ಭಂಗಾರ ಕಡೆಗೆ ಇಲ್ಲದಂತಾದೀತು. ಆದ್ದರಿಂದ ಇಂಥ ಸಂಶಯಗಳು ಬರಗೊಡದಂತೆ ಎಚ್ಚರವಿರಬೇಕು.

ಅದೇ ಪ್ರಕಾರ ಸದ್ಗುರುಗಳು ಯಾವಾಗ್ಗೆ ಉಪದೇಶ ಕೊಡುವರೋ ಆಗ್ಗೆ ಧ್ಯಾನದ ಅಭ್ಯಾಸ ಹ್ಯಾಗೆ ಮಾಡಬೇಕು ಎಂತ ಅವರು ಕಲಿಸುತ್ತಾರೆ. ಶಿಷ್ಯನಿಗೆ ಅದರ ಅನುಭವ ಬರುತ್ತದೆ. ಮತ್ತು ಏಕಾಗ್ರತೆ ಮತ್ತೂ ಶಾಂತಿ ಇವು ಗಳ ಆನಂದವನ್ನು ಮನಸ್ಸಿಗೆ ಭೋಗಿಸಲಿಕ್ಕೆ ಸಿಗುತ್ತದೆ. ಹಾಗಿದ್ದಾಗ ಗುರು ಹೇಳಿದ ಮಾರ್ಗದಿಂದ ಮುಂದೆ ಹೋಗುವದೇ ಶಿಷ್ಯನ ಕರ್ತವ್ಯವು. ಮಹಾರಾ ಜರು ನನಗೆ ಈ ಅನುಭವಗಳನ್ನು ಕೊಟ್ಟು ಮಾರ್ಗ ತೋರಿಸಿದರು. ನನಗೆ ಅವರಂದರು, "ನೀನು ನನ್ನ ಮೇಲೆ ವಿಶ್ವಾಸವಿಡಬೇಡ, ಆದರೆ ನಿನಗೆ ಯಾವ ಅನುಭವಗಳು ಬಂದಿರುತ್ತವೆ ಅವುಗಳ ಮೇಲೆ ವಿಶ್ವಾಸವಿಡು."

ಅನಂತರ ಎರಡು ದಿವಸಗಳಲ್ಲಿ ರಾವಸಾಹೇಬ ಗುಪ್ತೆ ಮತ್ತು ನಾನು ಇಬ್ಬರೂ ಮಹಾರಾಜರ ಉಪದೇಶ ತಕ್ಕೊಂಡೆವು. ಮಹಾರಾಜರು ನನಗೆ "ಸೋಹಂ" ದ ಮಂತ್ರ ಕೊಟ್ಟರು. ಮತ್ತು ಧ್ಯಾನದ ಅಭ್ಯಾಸ ಮಾಡಲಿಕ್ಕೆ ಹೇಳಿದರು. ಅವರು ನನ್ನ ಮೇಲೆ ಕೃಪೆ ಮಾಡಿ ನನಗೆ ಅಂತರ್ದೃಷ್ಟಿಯನ್ನು ಕೊಟ್ಟರು. ಮೆಲ್ಲಮೆಲ್ಲಗೆ ಅಂತರ್ದೃಷ್ಟಿಯೊಳಗಿನ ನೋಟಗಳು ನನಗೆ ಕಾಣಿಸ ಹತ್ತಿದವು. ನನಗೆ ವೇಳೆ ಸಿಕ್ಕಿದಾಗ ನಾನು ಒಂದೆರಡು ವರ್ಷ ಧ್ಯಾನದ ಅಭ್ಯಾಸ ಮಾಡಿದೆನು. ಆ ಮೇಲೆ ನನಗೆ ಮಾನಸಿಕ ಶಾಂತಿ ಪ್ರಾಪ್ತವಾಯಿತು. "ಸೋಹಂ" ಮಂತ್ರದ ಜಪ ನನ್ನ ಶರೀರದ ಸರ್ವ ಭಾಗಗಳಿಂದ ಆಗುತ್ತದೆ ಅಂತ ನನಗೆ ಅನಿಸಲಾರಂಭಿಸಿತು. ಒಮ್ಮೊಮ್ಮೆ ಜಪವು ತನ್ನಷ್ಟಕ್ಕೆ ಆಗುತ್ತಿತ್ತು. ನಿದ್ರೆಯೊಳಗಿದ್ದಾಗ ಯಾರಾದರೂ ಅಗಳಾಡಿಸಿ, ಜಪ ಚಾಲೂ ಇದು ಎಂದು ಹೇಳಿದಂತೆ ಒಮ್ಮೊಮ್ಮೆ ಆಗುತ್ತಿತ್ತು.

ಈ ಪ್ರಕಾರ ಬಹಳ ದಿವಸಗಳ ನಂತರ, ಮಹಾರಾಜರು ಮುಂಬಯಿಗೆ ಹೋಗಿದ್ದಾಗ್ಗೆ, ನಾನು ಅವರಿಗೆ, ಕೆಳಗೆ ಬರೆದಂತೆ ನನ್ನ ಅನುಭವಗಳನ್ನು ಪತ್ರ ದ್ವಾರದಿಂದ ತಿಳಿಸಿದೆ, "ಒಂದು ಹಳದೀ ಬಣ್ಣದ ಜ್ಯೋತಿಯು ಸುಷುಮ್ನಾ ನಾಡಿ

ಯೋಗಸಾಧನೆ ಶುರುವಾಗ ಸಹಸ್ರದಳ ಕಮಲದ ಕಿಟಕಿ ತೆರೆಯಿತು, ಮತ್ತು ಅಷ್ಟು ಆಕೃತಿ ಸಹಸ್ರ ಸೂರ್ಯರ ತೇಜವು ನನಗೆ ಕಾಣಿಸಿತು. ಇದರಲ್ಲಿ ನದಿಗಳು, ಪರ್ವತಗಳು, ಮಂಜು, ಚಂದ್ರಪ್ರಕಾಶ, ಚಂದ್ರ-ಸೂರ್ಯ, ಅಗ್ನಿ ಜ್ವಾಲೆ, ಸಾಧುಗಳು ಮತ್ತು ಬೇರೆ ಬೇರೆ ದೇವತೆಗಳು ಕಾಣಿಸುತ್ತಿದ್ದವು. ಕೆಲವು ದಿವಸಗಳ ನಂತರ ಢೋಲ, ವೀಣೆ, ಝಾಂಜ, ಇತ್ಯಾದಿ ವಾದ್ಯಗಳ ಧ್ವನಿ ಕೇಳಿಸಿತು. ಮುಂದೆ ಶಂಖದ ದೊಡ್ಡ ಧ್ವನಿ ಕೇಳಿಸಿತು. ಇದರಿಂದ ನಾನು ಗಾಬರಿಯಾದೆ, ಮತ್ತು ನನ್ನ ತಲೆಯು ಮರಗಟ್ಟಿದಂತೆ ಆಯಿತು. ಯಾವ ಕಾಲಕ್ಕೆ ನಾನು ಧ್ಯಾನವನ್ನು ಮುಗಿಸಿ, ಶರೀರದ ಕಡೆ ನೋಡಿದ್ದೆ, ಅದು ಬೆವರಿನಿಂದ ಪೂರಾ ಒದ್ದೆಯಾಗಿ ಹೋಗಿತ್ತು. ಮತ್ತು ಕೈವಸ್ತ್ರದಿಂದ ಒರೆಸಿಕೊಳ್ಳಬೇಕಾಯಿತು.

ಎರಡು ಮೂರು ವರ್ಷಗಳ ನಂತರ ನಾನು ಮಹಾರಾಜರ ಕಡೆಗೆ ಹೋದೆನು. ಆ ಸ್ಥಳದಲ್ಲಿ ಇತರ ಕೆಲವು ಜನರಿದ್ದರು, ಅವರ ಸಮಕ್ಷ ಮಹಾರಾಜರಿಗೆ ಮೇಲಿನ ಅನುಭವಗಳನ್ನು ನಾನು ಹೇಳಿದೆನು. ಹಾಗೆ ಹೇಳುತ್ತಿರುವಾಗ ಬರಕೊಳ್ಳಲ್ಪಟ್ಟಿತು. ಅನಂತರ ಅವರಿಗೆ ಈ ಮುಂದಿನ ಪ್ರಶ್ನೆಗಳನ್ನು ಕೇಳಿದೆ, ಧ್ಯಾನದಲ್ಲಿ ಕಂಡ ನೋಟಗಳು ಮತ್ತು ಸ್ವಪ್ನದಲ್ಲಿಯವು, ಇವೆರಡರಲ್ಲಿ ಭೇದವೇನು?

ಮಹಾರಾಜರು:— ಸ್ವಪ್ನದ ನೋಟಗಳಲ್ಲಿಯ ವಸ್ತುಗಳಿಗೆ ತೇಜವಿರುವದಿಲ್ಲ, ಅಂದರೆ ಅವುಗಳು ಪ್ರಕಾಶಯುಕ್ತ ಇರುವದಿಲ್ಲ. ಆದರೆ ಧ್ಯಾನದಲ್ಲಿ ಕಂಡ ಪದಾರ್ಥಗಳಿಗೆ ತೇಜವಿರುತ್ತದೆ. ಅವು ಪ್ರಕಾಶಮಯವೇ ಇರುತ್ತದೆ. ಇವುಗಳ ಪಾರ್ಶ್ವಭೂಮಿ ಬ್ರಹ್ಮವಾಗಿರುತ್ತದೆ. ಆದ್ದರಿಂದ ಈ ಎಲ್ಲ ನೋಟಗಳು ಅದೃಶ್ಯವಾದಮೇಲೆ ಶುದ್ಧ ಆನಂದವೇ ಹಿಂದೆ ಉಳಿಯುತ್ತದೆ. ಈ ನೋಟಗಳು ಸತ್ಯವಲ್ಲದಿದ್ದರೂ ಅವು ಸತ್ಯ ವಸ್ತುವಿನ ಬಾಹ್ಯ ಪ್ರಕಟೀಕರಣ, ಅಂದರೆ ದೃಶ್ಯ ಸ್ವರೂಪವೆಂತ ತಿಳಿಯಬೇಕು. ಜ್ಞಾನೇಶ್ವರ, ತುಕಾರಾಮ, ರಾಮದಾಸ ಇವರು ಮತ್ತು ಪ್ರಾಚೀನ ಋಷಿಗಳಾದರೂ ಇದೇ ಮಾರ್ಗದ ಅವಲಂಬನೆ ಮಾಡಿದ್ದರು. ಸದ್ಗುರುಗಳು ನನಗೆ ಇದೇ ಮಾರ್ಗ ತೋರಿಸಿ ಕೊಟ್ಟರು. ಮತ್ತು ಅದನ್ನೇ ನಿನಗೂ ತೋರಿಸಿದ್ದೇನೆ. ಈ ಎಲ್ಲ ನೋಟಗಳು ಬ್ರಹ್ಮದ ಕಡೆ ಹೋಗುವ ಮಾರ್ಗದೊಳಗಿನ (ಮಾರ್ಗ ತೋರಿಸುವ) ಪಾಟಿಗಳು ಇವೆ. ಈ ಪಾಟಿಗಳು ಕಾಣಿಸುವುದು ನಿಂತಿತೆಂದರೆ, ಧ್ಯಾನಾಭ್ಯಾಸಿಯು ಸಮಾಧಿಯಲ್ಲಿ ವಿಲೀನನಾಗುತ್ತಾನೆ. ರಾಜಯೋಗದಲ್ಲಿ ಇದೇ ಖರೇ ಅನುಭವವಿರುವದು; ಪೂರ್ವದ ಸಾಧುಗಳು ಮಾಯಾಭ್ರಮೆಯಿಂದ ಹುಚ್ಚರಾಗಿ ಹೋಗಿದ್ದರು. ಎಂದು ತಿಳಿಯುವಿ ಆದರೆ ನನ್ನನ್ನು ಸಹ ಅವರ ಪೈಕಿ ಒಬ್ಬ ಹುಚ್ಚನೆಂತ ತಿಳಿ. ಆದರೂ ನಾನು ಇನ್ನೂ ಸಾಧಕನಿದ್ದೇನೆ. ನೀನು ನನಗೆ ಸಿದ್ಧ ಅಂದರೂ ಅದರಿಂದೇನೂ ನನ್ನ ಮೇಲೆ ಪರಿಣಾಮ ಆಗಲಿಕ್ಕಿಲ್ಲ.

ಈ ಪ್ರಕಾರ ಮಹಾರಾಜರು ನನ್ನ ಶಾಂತಿಯ ವೃತ್ತಿಯನ್ನು ಅಳಿಸಿ ಬಿಟ್ಟರು. ಕಳೆದ ಎರಡು ಮೂರು ವರ್ಷಗಳಲ್ಲಿ ನೋಟಗಳು ಕಾಣಿಸಲಿಲ್ಲ. ಧ್ಯಾನಕ್ಕೆ ಕೂತಾಗ ಜಪವೂ ನಿಂತು ಹೋಗುತ್ತದೆ, ಯಾವ ಪ್ರಕಾರದ್ದು ವಿಚಾರ ಅಥವಾ ಕಲ್ಪನೆಗಳು ಬಾರದೆ ಕೇವಲ ಶುದ್ಧ ಆನಂದ ಸ್ಥಿತಿಯಲ್ಲಿ ನಾನು ಒಂದು ಒಂದೂವರೆ ತಾಸು ತನ್ಮಯ ಇರುತ್ತೇನೆ. ಅಂದಿನಿಂದ ನನ್ನ ಮನೋವೃತ್ತಿ ಬದಲಾಗಿ, ಪ್ರತಿಯೊಂದು ಸ್ಥಳದಲ್ಲಿ ಶಾಂತಿಪೂರ್ಣ ಇರುವಂತೆ ಅನಿಸುತ್ತದೆ. ಈ ಶಾಂತಿ ಸ್ಥಿತಿಯಲ್ಲಿ ಅಂತರಾತ್ಮನು "ಸೋಹಂ" ಮಂತ್ರದ ಜಪ ಮಾಡುತ್ತಿರುತ್ತಾನೆ, ಮತ್ತು ನಾನು ಕೇಳುವವನಾಗುತ್ತೇನೆ. ಆತ್ಮಪ್ರಚೀತಿ ಮತ್ತು ಶಾಸ್ತ್ರ ಪ್ರಚೀತಿ ಎಂದು ಇದಕ್ಕೆ ಅನ್ನುತ್ತಾರೆ. ಯಾರು ನನ್ನದು ನನಗೆ ಪರಿಚಯ ಮಾಡಿಕೊಟ್ಟರು ಆ ಸದ್ಗುರುಗಳ ಜಯಜಯಕಾರವಿರಲಿ,

ಓಂ ಶಾಂತಿಃ ಶಾಂತಿಃ ಶಾಂತಿಃ

(೪೬) ಮಹಾರಾಜರ ಜ್ವರ:— ಸನ್ ೧೯೩೧-೩೨ನೇ ಇಸವಿ ಮಧ್ಯದಲ್ಲಿ ಸಾಸವಡೇಕರರು ನಿಫಾಡದಲ್ಲಿ ಸಬ್ ರಜಿಸ್ಟ್ರಾರ ಇರುವಾಗ, ಮಹಾರಾಜರು ಅವರ ಭೆಟ್ಟಿ ಸಲುವಾಗಿ ಅಲ್ಲಿಗೆ ಹೋಗಿದ್ದರು. ೧೯೩೩ ನೇ ಸಾಲಿನಿಂದ ಮಹಾ-ರಾಜರು ಅವರ ಸಂಬಂಧಿಕರಾದ ಭಿಸೆಯವರಲ್ಲಿ ಇರುತ್ತಿದ್ದರು. ಅಲ್ಲಿಂದಲೇ ಅವರು ನಿಫಾಡಕ್ಕೆ ಬಂದಿದ್ದರು. ಸರಕಾರಿ ಡಾಕ್ಟರ ವಿ. ಕರ್ಜೇಕರ ಇವರು ಭೆಟ್ಟಿ ಮೇಲೆ ಇದ್ದಾಗ್ಗೆ, ಒಂದು ದಿನ ಸಾಸವಡೇಕರರಲ್ಲಿ ಬಂದರು. ಆ ದಿನ ಮಹಾರಾಜರಿಗೆ ಜ್ವರ ಬಂದದ್ದು ನೋಡಿ, ಅವರು ಥರ್ಮಾಮಿಟರ್ ಹಚ್ಚಿ ನೋಡಿದರು. ಆಗ್ಗೆ ೧೦೫ ಡಿಗ್ರಿ ಮೇಲೆ ಜ್ವರ ಇರುವಂತೆ ತೋರಿತು! ಇದನ್ನು ನೋಡಿ ಡಾಕ್ಟರರು ಗಾಬರಿಯಾದರೂ ಆದರೂ 'ಹೆದರುವದಕ್ಕೆ ಕಾರಣವಿಲ್ಲ' ಎಂದು ಮಹಾರಾಜರು ಅಂದರು. ಆದರೆ ಡಾಕ್ಟರರು ಕೂಡಲೇ ಹೊರಟು ಹೋದರು, ಮಹಾರಾಜರು ತಮ್ಮೊಳಗೆ ನಕ್ಕು ಸ್ವಸ್ಥರಾದರು. ರಾತ್ರಿ ೧೦ ಘಂಟೆ ಹೊಡೆಯುವ ವೇಳೆಗೆ, ಸಾಸವಡೇಕರ ಮತ್ತು ಡಾಕ್ಟರರು ಮನೆಗೆ ಬಂದರು. ಡಾಕ್ಟರರು ಮತ್ತೆ ಅವರದು ಏನು ಪರೀಕ್ಷೆಗಳಾದವು ತಿಳಿಯಲಿಲ್ಲ. ಆದರೂ ಸಾಸವಡೇಕರರು ಮಹಾರಾಜರಿಗೆ ಅಂದರು, "ಡಾಕ್ಟರ ಸಾಹೇಬರ ಕುರಿತು ನಗೆಚೇಷ್ಟೆ ಮಾಡುವದಕ್ಕೆ ನೀವು ಏನಾದರೂ ಕಾರಣತ ಮಾಡಿರಬೇಕು." ಮಹಾರಾಜರು ಅಂದರು, "ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಮತ್ತು ನೀವು ಏನು ಅನ್ನುತ್ತೀರಿ, ಇದೂ ನನಗೆ ತಿಳಿಯುವದು." ಡಾಕ್ಟರ ಕರ್ಜೇಕರ ಇದ್ದಕ್ಕೆ ಸಾಕ್ಷಿ ಇರುತ್ತಾರೆ.

(೪೭) ಭಕ್ತ ಕೆಗೊಳ್ಳುವವರು ಮತ್ತು ಬಾಬಾ ಮಹಾರಾಜರು:— ಸನ್ ೧೯೩೫ನೇ ಇಸ್ವಿಯಲ್ಲಿ ಸಾಸವಡೇಕರ ಇವರು ಕಳೇಗಾಂವ ಧಮಧೇರಿ ಎಂಬಲ್ಲಿ ಸಬ್ ರಜಿಸ್ಟ್ರಾರ ಆಗಿದ್ದರು, ಆ ಸಮಯದಲ್ಲಿ ಮಹಾರಾಜರು ಬಾಬಾ

ಸಮರ್ಥ ಮತ್ತು ರಾಮಶೇಜದ ಬಾಳಾ ಮಹಾರಾಜ ಇವರನ್ನು ಕರಕೊಂಡು ಅವರ ಭೆಟ್ಟಿಗೆ ಬಂದಿದ್ದರು; ತಳೇಗಾಂವದಿಂದ ಹತ್ತು ಮೈಲುಗಳ ಮೇಲೆ ಇಕಲವಾಡಿ ಎಂಬ ಪವಿತ್ರ ಕ್ಷೇತ್ರವಿದೆ. ಒಂದು ದಿನ ಈ ಅತಿಥಿಗಳನ್ನು ಕರಕೊಂಡು ಎತ್ತಿನ ಗಾಡಿಯಲ್ಲಿ ಕೂತುಕೊಂಡು ಅಲ್ಲಿಗೆ ಹೋದರು. ಸಾಸವಡಕರರು ಮಹಾರಾಜರಿಗೆ ನದಿಯಲ್ಲಿ ಸ್ನಾನ ಮಾಡಿಸಿದರು. ಮತ್ತು ನಾನಾ ಸಮರ್ಥರು ಬಾಳಾ ಮಹಾರಾಜರಿಗೆ ಸ್ನಾನ ಮಾಡಿಸಿದರು. ಆಗ ನಾನಾ ಸಮರ್ಥರು ಬಾಳಾ ಮಹಾರಾಜರ ಜೋಳಿಗೆಯನ್ನು ಚನ್ನಾಗಿ ನೀರೊಳಗೆ ಒಗೆದು ಸ್ವಚ್ಛ ಮಾಡಿ ಒಣಗಲಿಕ್ಕೆ ಹಾಕಿದರು. ಅದರೊಳಗಿನ ಭಸ್ಮ ವ ಇತರ ವಸ್ತುಗಳು ಎಲ್ಲ ನದಿಯೊಳಗೆ ಹರಿದು ಹೋದವು. ಭಸ್ಮ ಇಲ್ಲದ್ದನ್ನು ನೋಡಿ ಬಾಳಾ ಮಹಾರಾಜರಿಗೆ ಕೆಟ್ಟ ಅನಿಸಿತು. ಯಾಕಂದರೆ ಸ್ನಾನವಾದ ಮೇಲೆ ಅವರು ಭಸ್ಮವನ್ನು ತನ್ನ ಶರೀರಕ್ಕೆ ಹಚ್ಚಿಕೊಳ್ಳುತ್ತಿದ್ದರು.

ಬಾಳಾ ಮಹಾರಾಜರು:— ಮಹಾರಾಜರೇ, ಇದೇನು? ಇವರಿಬ್ಬರು ಜೋಳಿಗೆಯೊಳಗಿನ ಸಾಮಾನು ಸಹಿತ ಜೋಳಿಗೆಯನ್ನು ಸ್ವಚ್ಛ ಮಾಡಿದರು. ಇತರ ವಸ್ತುಗಳದೇನು ಇಲ್ಲ, ನನ್ನ ಭಸ್ಮ ಹೋಯಿತು ಎಂಬದಕ್ಕೆ ನನಗೆ ಕೆಟ್ಟ ಅನಿಸುತ್ತದೆ.

ಮಹಾರಾಜರುಃ—ಏನೂ ತ್ರಾಸ ಮಾಡಿಕೊಳ್ಳಬೇಡಿರಿ. ಈ ಜನರಿಗೆ ಏನೂ ತಿಳಿಯುವದಿಲ್ಲ. ಆದರೆ ನಾನು ನಿಮಗೆ ಹೀಗೆ ಕೇಳುತ್ತೇನಲ್ಲ, ನೀವು ಇಷ್ಟು ದುಃಖಿ ಯಾಗಬೇಕು? ನಿಮ್ಮ ಪ್ರೇಮದ ಶ್ರೀ ಗುರುದತ್ತ ದೇವರಿಗೆ ಆ ವಸ್ತುಗಳನ್ನು ತಂದು ಕೊಡಲಿಕ್ಕೆ ಯಾಕೆ ಹೇಳಲಾರಿರಿ? ಆ ರಾಮಶೇಜದ ಗುಡ್ಡದ ಮೇಲೆ ನೀವು ಆತನ ಸೇವೆಯನ್ನು ಮನೋಭಾವದಿಂದ ಮಾಡುತ್ತಿದ್ದಿರಿ. ಆತನಿಗೆ ನಿಮ್ಮ ದಯೆ ಬರಲಿಕ್ಕಿಲ್ಲೇನು? ಇದಲ್ಲದೆ ನೀವು ಶಿವಾಲಯದಲ್ಲಿ ಕೂತಿರುತ್ತೀರಿ. ಶಂಕರನಿಗೆ ಅಂತು ಭಸ್ಮದ ಬಹಳ ಪ್ರೀತಿ. ಒಳ್ಳೇದು ಇರಲಿ; ನಿಮಗೆ ಎಷ್ಟು ಭಸ್ಮ ಬೇಕು ಚೀಲ ತುಂಬ ಅಥವಾ ಜೋಳಿಗೆ ತುಂಬ ಬೇಕು? ಯಾಕಂದರೆ ನಿಮಗೆ ಅಷ್ಟು ಎರಡು ಮೂರು ತಿಂಗಳ ತನಕ ಸಾಕಾದೀತು. ಇಷ್ಟರೊಳಗೆ ಸಾಸವಡಕರ ಮತ್ತು ನಾನಾ ಸಮರ್ಥರು ದೇವಾಲಯದೊಳಗೆ ಬಂದರು. ಅವರು ಮೇಲಿನ ಸಂವಾದವನ್ನು ಕೇಳಿದರು, ಆಗ್ಗೆ ಸರಾಸರಿ ಒಂದು ಹೊಡೆದಿರಬಹುದು, ಮಹಾರಾಜರು ಆ ಇಬ್ಬರನ್ನು ಕುರಿತು ಅಂದರು, " ಅಹೊ, ನಿಮಗೆ ಇಷ್ಟು ಯಾಕೆ ವಿಚಾರವಿಲ್ಲ. ಬಾಳಾ ಮಹಾರಾಜರ ಭಸ್ಮವನ್ನು ನೀವು ನದಿಯೊಳಗೆ ಒಗೆದು ಬಿಟ್ಟಿರಿ." ಸಾಸವಡಕರ ವ ನಾನಾ ಸಮರ್ಥ ಇವರು ಬಾಳಾ ಮಹಾರಾಜರ ಕ್ಷಮೆ ಬೇಡಿಕೊಂಡರು. ಮತ್ತು ಅವರಿಗೆ ನಮಸ್ಕಾರವನ್ನು ಮಾಡಿದರು. ಬಾಳಾ ಮಹಾರಾಜರು ಅವರಿಗಂದರು; "ಇದರಲ್ಲೇನು ಅರ್ಥವದೆ? ನನಗೆ ಭಸ್ಮ ಬೇಕು, ಸಿಕ್ಕಿದರೆ ಆಯಿತು." ಮಹಾರಾಜರು ಅವರಿಗೆ

ವುನಃ ಕೇಳಿದರು. “ ನಿಮಗೆ ಭಸ್ಮ ಎಷ್ಟು ಬೇಕು, ಚೀಲ ತುಂಬ ಅಥವಾ ಜೋಳಿಗೆ ತುಂಬ ? ಬಾಳಾ ಮಹಾರಾಜರು ತುಸು ಸಿಟ್ಟಿಗೆದ್ದು ಅಂದರು, “ ನಿಮ್ಮದು ಒಂದೇ ಸಮನೆ ಬಡಬಡ ನಡೆದಿದೆ, ಆದರೆ ಒಂದು ಸ್ವಲ್ಪಾದರೂ ಭಸ್ಮ ಉತ್ಪನ್ನ ಮಾಡಲಿಲ್ಲ. ಬರೇ ದೇವ ಮತ್ತು ಭಕ್ತ ಈ ವಿಷಯದ ಚರ್ಚೆ ಯನ್ನೇ ನಡಿಸೀರಿ. ನನ್ನ ತಪಶ್ಚರ್ಯದ ಸಂಬಂಧವೂ ನೀವು ಒಂದು ಹೊಡತ ಕೊಟ್ಟಿರಿ, ಮತ್ತು ದೇವತೆಗೆ ಯಾಕೆ ಕರಿಸುವದಿಲ್ಲ, ಎಂತಲೂ ಕೇಳಿದಿರಿ.” ಇದನ್ನು ಕೇಳಿ ಅಲ್ಲಿ ಎಲ್ಲರೂ ನಕ್ಕರು. ಆ ಮೇಲೆ ಶ್ರೀ ಗಜಾನನ ಮಹಾರಾಜ ರಂದರು, “ ಬಾಳಾ ಮಹಾರಾಜರೇ ಕೃಪೆಮಾಡಿ ಸಿಟ್ಟಿಗೇಳಬೇಡಿರಿ. ನನ್ನ ಹತ್ತಿರ ತಪಶ್ಚರ್ಯದ ಪುಣ್ಯವೂ ಇಲ್ಲ, ಆತ್ಮ ಶಕ್ತಿಯೂ ಇಲ್ಲ. ನನಗೆ ಐಹಿಕ ವ ಪಾರಮಾರ್ಥಿಕ ಇವೆರಡರದೂ ಜ್ಞಾನವಿಲ್ಲ. ನಾನು ಸಂತರ ಮನೆಯ ಕೇವಲ ಕಸಬರಿಕೆ ಇದ್ದೇನೆ. ಅವರ ಮನೆಯೊಳಗೆ ಕಸತೆಗಿಯುವದೇ ನನ್ನ ಕೆಲಸ. ನಾನು ‘ ಸೋಽಹಂ’ ಒಂದು ಗುಟಕು ತಕ್ಕೊಳ್ಳುತ್ತೇನೆ. ಮತ್ತು ಅಷ್ಟೇ ನನಗೆ ಸಾಕಾಗುತ್ತದೆ. ದತ್ತಮಹಾರಾಜರೆ, ಓಡಿ ಬನ್ನಿರಿ, ಮತ್ತು ನನ್ನ ಮಿತ್ರರಿಗೆ ಭಸ್ಮವನ್ನು ತಂದುಕೊಡಿರಿ.” ಹೀಗಂದು ಮಹಾರಾಜರು, ಲಿಂಗದ ಹಿಂದೆ ಕೈ ಹಾಕಿದರು. ಅಲ್ಲಿಂದ ಹಿಡಿ ಹಿಡಿ ತುಂಬ ಭಸ್ಮವನ್ನು ತೆಗೆದು ಬಾಳಾ ಮಹಾ ರಾಜ, ನಾಸವಡಕರ, ಸಮರ್ಥ ಇವರ ವ ತನ್ನ ಮೈಗಳಿಗೆಲ್ಲ ಭಸ್ಮವನ್ನು ಒರಸ ಲಿಕ್ಕೆ ಸುರು ಮಾಡಿದರು. ಸ್ವಲ್ಪ ಹೊತ್ತಿನ ಮೇಲೆ ಬಿಟ್ಟರು. ಇದನ್ನು ನೋಡಿ ಬಾಳಾ ಮಹಾರಾಜರು ಅವರ ಪಾದಗಳ ಮೇಲೆ ತಮ್ಮ ಮಸ್ತಕವನ್ನಿಟ್ಟರು. ಮತ್ತು ಅಂದರು, “ ನಾನು ನಿಮ್ಮ ಕೂಸು ಇದ್ದೇನೆ. ಆಗಿಹೋದ ತಪ್ಪಿಗಾಗಿ ನನಗೆ ಕ್ಷಮಿಸಿರಿ ” ಹೀಗಂದು ಮಹಾರಾಜರ ಕ್ಷಮೆ ಬೇಡಿದರು. ಇಬ್ಬರೂ ಒಬ್ಬರಿಗೊಬ್ಬರು ಆಲಿಂಗನವನ್ನು ಕೊಟ್ಟರು. ಇದರ ನಂತರ ಎತ್ತಿನ ಗಾಡಿಯಲ್ಲಿ ಕುಳಿತು ಎರಡು ಘಂಟೆಗೆ ಎಲ್ಲರು ತಿರುಗಿದರು.

ದಾರಿಯಲ್ಲಿ ಕಿತ್ತಳೇ ಹಣ್ಣಿನ ತೋಟ ಹತ್ತಿತು. ಕೆಲವು ಕಿತ್ತಳೆ ಹಣ್ಣುಗಳನ್ನು ಕೊಂಡರು. ಸಮೀಪದಲ್ಲಿಯೇ ಭಾವಿ ಇತ್ತು. ಕಿತ್ತಳೆ ಹಣ್ಣು ಗಳನ್ನು ತಿಂದು ತಣ್ಣಗೆ ನೀರು ಕುಡಿದ ಮೇಲೆ ಮಹಾರಾಜರಂದರು, “ ದ್ರವ್ಯ ಮತ್ತು ಸ್ತ್ರೀ ಒಬ್ಬರ ನಾಶಕ್ಕೆ ಹ್ಯಾಗೆ ಕಾರಣೀಭೂತರಾಗುತ್ತಾರೆ, ಎಂಬದು ಲಕ್ಷದಲ್ಲಿ ಇಟ್ಟುಕೊಳ್ಳಲಿಕ್ಕೆ ಯೋಗ್ಯವಾದದ್ದು: ಬ್ರಹ್ಮಜ್ಞಾನ, ಈಶ್ವರಭಕ್ತಿ ಮತ್ತು ವೈರಾಗ್ಯ ಇವನ್ನು ಬದಿಗೊತ್ತಿದರೆ, ಜಗತ್ತಿನಲ್ಲಿ ಸದ್ಗುಣ ಯಾವದು ಮತ್ತು ದುರ್ಗುಣ ಯಾವದು ಎಂಬದು ತಿಳಕೊಳ್ಳಲಿಕ್ಕೆ ಕಠಿಣವಾದೀತು; ದೈವ ವಿದ್ದರೆ ದುರ್ಗುಣ ಮನುಷ್ಯನಾದರೂ ಐಹಿಕ ದೃಷ್ಟಿಯಿಂದಾದರೂ ಸದ್ಗುಣಿ ಯಾದಾನು, ಮತ್ತು ದೈವ ಪ್ರತಿಕೂಲವಾಯಿತೆಂದರೆ, ಸದ್ಗುಣೀ ಮನುಷ್ಯನಾ ದರೂ ಎಷ್ಟೋ ಸಂಗತಿಗಳಲ್ಲಿ ಸಂಶಯಿತ ವೃತ್ತಿಯಿಂದ ನೋಡಲ್ಪಡುವನು. ಆದರೆ ಒಂದು ಸಂಗತಿ ನಿಜವೆಂತ ತೋರುವದು, ಬಂಗಾರವು ಮಣ್ಣಿನೊಳಗೆ

ಬಿದ್ದರೂ ಅವಕ್ಕೆ ಸ್ವಲ್ಪವೂ ಮುಟ್ಟದಿರುತ್ತಾರೆ. ಹಾಗೆ ಪರೀ ಸಹಜರು ಮನುಷ್ಯನ ಗುಣಗಳು ಅವನ ಬುದ್ಧಿಗನುಸಾರವಾದ ಪಾತ್ರೆಯೊಳಗೆ ಬಿದ್ದರೂ ಮುಟ್ಟದೆಹೋಗುತ್ತವೆ. ಅವನ ಕೀರ್ತಿಯು ನಾಲ್ಕೂ ದಿಕ್ಕುಗಳಲ್ಲಿ ಪಸರಿಸಿತು ಮತ್ತು ಜನರು ಅವನ ಕಡೆಗೆ ಜನರ ಅತ್ತ ಹೋಗದೆ ಇರಲಾರರು. ( ಮಹಾರಾಜರ ಈ ಉತ್ತರವು ಪ್ರಶ್ನೆ ವಿಷಯಕ್ಕೆ ಅನುಸರಿಸಿ ಅಥವಾ ಯಾರಾದರೂ ಪ್ರಶ್ನೆ ಮಾಡಿದ್ದಕ್ಕೆ ಉತ್ತರವಾಗಿ ಅಲ್ಲದೆ, ಬಾಳಾ ಮಹಾರಾಜರ ವಿಚಾರಕ್ಕೆ ಉತ್ತರ ಕೊಡಲಾಗುತ್ತದೆಂದು ಅನಿಸುತ್ತದೆ.)

ಆ ಮೇಲೆ ಎಲ್ಲರೂ ಮರಳಿ ತಳೇಗಾಂವ ಧಮಧೇರೆಗೆ ರಾತ್ರಿ ಒಂಭತ್ತಕ್ಕೆ ಬಂದು ಮುಟ್ಟಿದರು. ಶ್ರೀಗಜಾನನ ಮಹಾರಾಜರು, ಸಮರ್ಥರು ಮ ಬಾಳಾ ಮಹಾರಾಜರು ಮುಂದೆ "ರಾಮಶೇಜ"ಕ್ಕೆ ಹೋದರು. ರಾಮಶೇಜ ಈ ಗುಡ್ಡವು ನಾಶಿಕದಿಂದ ಏಳೆಂಟು ಮೈಲು ದೂರವಿದೆ. ಅಲ್ಲಿ ಪ್ರಭು ರಾಮಚಂದ್ರ ಇವರು ಕೆಲವು ಕಾಲ ಇದ್ದರೆಂದು ಹೇಳುತ್ತಾರೆ.

(೪೪) ರಾ. ಕಾರಖಾನೀಸ:—ಮುಂದಿನ ಸಂಗತಿ ನಿಫಾಡದಲ್ಲಿ ೨೨ನೇ ಏಪ್ರೀಲ ೧೯೩೨ ನೇ ದಿನ ಸಂಭವಿಸಿತು. ರಾ. ಗಣಪತರಾವ ಕಾರಖಾನೀಸ ಈ ಹೆಸರಿನ ೬೨ ವರ್ಷ ವಯಸ್ಸಿನ ಗೃಹಸ್ಥರು ಅಲ್ಲಿ ಇರುತ್ತಿದ್ದರು, ಅವರು ೩೫ ವರ್ಷಗಳ ಹಿಂದೆ ಯವತಮಾಳದ ಒಬ್ಬ ಸಾಧುಕಡೆಯಿಂದ ಅನುಗ್ರಹ (ಉಪದೇಶ) ವನ್ನು ಪಡೆದಿದ್ದರು. ಅಲ್ಲಿಯ ಸಬ್‌ರಜಿಸ್ಟ್ರಾರ ಸಾತವಳಕರ ಇವರಕಡೆ ಮಹಾರಾಜರು ೧೯೩೨ ರಲ್ಲಿ ಹೋಗಿದ್ದಾಗ, ಗಣಪತರಾಯರು ಅವರ ದರ್ಶನಕ್ಕೆ ಅಲ್ಲಿಗೆ ಬಂದರು. ಅವರು ತಮಗೆ ಯವತಮಾಳದ ಸಾಧುಕಡೆಯಿಂದ ಉಪದೇಶವಾದ ಸಂಗತಿ ಹೇಳಿ, ಮುಂದೆ ಅಂದರು "ಅವರು ಕೊಟ್ಟ ಮಂತ್ರವನ್ನು ನಾನು ಈಗ ಎಷ್ಟೋ ವರ್ಷಗಳಿಂದ ಜಪಿಸುತ್ತೇನೆ, ಮತ್ತು ಧ್ಯಾನದ್ದೂ ಅಭ್ಯಾಸ ಮಾಡುತ್ತಿದ್ದೇನೆ. ಆದರೆ ನನಗೆ ಮಾನಸಿಕ ಸ್ವಾಸ್ಥ್ಯ ಇನ್ನೂ ತನಕ ಪ್ರಾಪ್ತವಾಗಲಿಲ್ಲ. ಆದ್ದರಿಂದ ನನ್ನನ್ನು ತಮ್ಮ ಕೃಪಾಛತ್ರದೊಳಗೆ ತೆಗೆದುಕೊಂಡು ನನ್ನ ಮೇಲೆ ದಯೆಯನ್ನು ಮಾಡಿರಿ."

ಮಹಾರಾಜರು ಮೊದಲು ಅವರ ಕಡೆ ಲಕ್ಷ್ಯಕೊಡಲಿಲ್ಲ. ಮತ್ತು ಅವರನ್ನು ಹಿಂದೆ ಕಳುಹಿಸುವಂತೆ ಯತ್ನ ಮಾಡಿದರು. ಆದರೆ ಸಾತವಳಕರರು ಅವರಿಗೆ ಉಪದೇಶ ಕೊಡಲಿಕ್ಕೆ ಆಗ್ರಹ ಮಾಡಿದರು. ಅದಕ್ಕೆ ಮಹಾರಾಜರು ಅವರಿಗೆ ವೈದ್ಯರು, ಇಂಥ ಕೆಲಸದಲ್ಲಿ ತ್ಯಾಗ ಬೇಕಾದದ್ದೆಂತ ಸೂಚಿಸಿದರು. ಆದರೂ ಮಹಾರಾಜರು ಕಾರಖಾನೀಸರಿಗೆ ಅಭ್ಯಾಸದ ಬಗ್ಗೆ ಹೇಳಿದರು. ಮತ್ತು ಗುರುಗಳು ಅವರಿಗೆ ಕೊಟ್ಟ ಮಂತ್ರವನ್ನು ಮನಸ್ಸಿನಲ್ಲೇ ಜಪಮಾಡಲಿಕ್ಕೆ ಆಜ್ಞೆ ಮಾಡಿದರು. ತಮ್ಮ ಕೈಯನ್ನು ಅವರ ಮಸ್ತಕದ ಮೇಲೆ ಇಟ್ಟರು. ತಕ್ಷಣವೇ

ಕಾರಖಾನೀಸರು ಸಮಾಧಿ ಸ್ಥಿತಿಯಲ್ಲಿ ಹೋದರು. ಮತ್ತು ಒಂದು ತಾಸು ತನಕ ನಿಶ್ಚಲ ಸ್ಥಿತಿಯಲ್ಲಿದ್ದರು. ಮಹಾರಾಜರು ಅನಂತರ ಅವರಿಗೆ ಅಲ್ಲಾಡಿಸಿ, ಒಂದು ಹೊಡತ ಕೊಟ್ಟ ಮೇಲೆ ಅವರು ಕಣ್ಣು ತೆರೆದರು. ಅವರ ಕಣ್ಣುಗಳು ಕೆಂಪಾಗಿದ್ದವು. ಅವುಗಳಿಂದ ಒಂದೇ ಸಮನೆ ಅಶ್ರುಪಾತ ನಡೆಯುತ್ತಿತ್ತು. ಅವರಂದರು, ಸ್ವಾತ್ಮ ಸುಖವೆಂದರೆ ಏನೆಂಬುವದು ನನಗೆ ಇವತ್ತು ತಿಳಿಯಿತು. ಹೀಗೆಯೇ ನನ್ನ ಮೇಲೆ ತಮ್ಮ ಕೃಪೆಯ ಮಳೆ ಬೀಳಬೇಕು. " ಮಹಾರಾಜರು ಅವರಿಗೆ ಆಶೀರ್ವಾದ ಕೊಟ್ಟರು, ಮತ್ತು ಪುನಃ ಹತ್ತು ಮಿನಿಟು ಅದೇ ಸ್ಥಿತಿಯಲ್ಲಿ ಕುಳ್ಳಿರಿಸಿದರು. ಆಗ ಅವರಿಗೆ ಅವರ ಮೊದಲಿನ ಗುರುವಿನ ದರ್ಶನವಾಯಿತು. ಅನಂತರ ಅವರಿಗೆ ಧ್ಯಾನದ ಅಭ್ಯಾಸ ಹೀಗೆಯೇ ಚಾಲು ಇಡಬೇಕಾಗಿ ಮಹಾರಾಜರು ತಿಳಿಸಿದರು. ಅನಂತರ ಕಾರಖಾನೀಸರು ಮನೆಗೆ ಹೋದರು. ಮುಂಬಯಿಯ ರಾ. ಗಡಕರಿ ಮತ್ತು ರಾ. ಪಾಟಣಕರ ವಕೀಲ ಇವರು ಆ ಸಮಯದಲ್ಲಿ ಅಲ್ಲಿಯೇ ಇದ್ದರು. ಮರುದಿನ ಎಲ್ಲರೂ ಮುಂಬಯಿಗೆ ಹೊರಟು ಹೋದರು. ರಾ. ಸಾಸವಡಕರರು ತಾನು ಈ ಸಂಗತಿಯನ್ನು ಪ್ರತ್ಯಕ್ಷ ನೋಡಿದ್ದಾಗಿ ಹೇಳುತ್ತಾರೆ.

(೪೯) ಮದ್ಯವಿಷಯಕ ಸಂದರ್ಭ:— ಮದ್ಯಪಾನದ ವಿಷಯದಲ್ಲಿ ಮಹಾರಾಜರಿಗೂ ಮಥುರೆ ಇವರಿಗೂ ಆದ ಸಂಭಾಷಣವು ವಾಚಕರಿಗೆ ನೆನಪಿರಬಹುದು. ಅನಂತರ ಕೆಲವು ವರ್ಷಗಳ ಮೇಲೆ ಸನ್ ೧೯೩೦-೩೧ರ ಸುಮಾರಕ್ಕೆ ಮುಂದಿನ ಸಂದರ್ಭ ಘಟಿಸಿತು. ಮಹಾರಾಜರು ಆಗ ಪರೇಳ ಎಂಬಲ್ಲಿ ಸಮರ್ಥರಲ್ಲಿ ಇರುತ್ತಿದ್ದರು. ಮಹಾರಾಜರು ಒಂದು ದಿನ ದೊಡ್ಡದೊಂದು ಮದ್ಯದ ಬಾಟ್ಲಿಯನ್ನು ಕ್ರಯಕ್ಕೆ ತಂದು, ಮೇಜಿನ ಮೇಲೆ ಇಟ್ಟರು, ಮುಂಜಾನೆಹಿಡಿದು ಕುಡಿಯಲಿಕ್ಕೆ ಸುರು ಮಾಡಿ ಸುಮಾರು ಅರ್ಧ ಬಾಟ್ಲಿ ತೀರಿಸಿದರು, ಆ ಮೇಲೆ ಉಳಿದ ಅರ್ಧ ಬಾಟ್ಲಿಯನ್ನೂ ತೀರಿಸಿ ಬಿಟ್ಟರು. ಆ ಮೇಲೆ ಇನ್ನೊಂದು ದೊಡ್ಡ ಬಾಟ್ಲಿ ತಂದು ತನ್ನ ಮುಂದೆ ಮೇಜಿನ ಮೇಲೆ ಇಟ್ಟರು, ಮತ್ತು ಅದರ ಕಡೆ ನೋಡುತ್ತ ಬೈಗಳ ಮಳೆ ಆರಂಭಿಸಿದರು. ಅವರು ತಮ್ಮಷ್ಟಕ್ಕೆ ಬೈದುಕೊಳ್ಳುತ್ತಾರೆಂದು ಮನೆ ಮಂದಿಗೆ ಅನಿಸಿತು, ಆದರೆ ಮುಂದೆ ಯಾವ ಪ್ರಕಾರವಾಗುವದೋ ಎಂದು ಅವರು ನಿರೀಕ್ಷಿಸುತ್ತಾ ಕೂತಿದ್ದರು. ಏನಾದರೂ ಕೆಟ್ಟದ್ದು ಸಂಭವಿಸಿತೆಂದರೆ ಅವರ ಕೂಡ ಎಲ್ಲ ಸಂಬಂಧ ಬಿಟ್ಟುಬಿಡುವ ವಿಚಾರದಲ್ಲಿದ್ದರು. ನೆರೆಮನೆಯವರೆಲ್ಲರೂ ಅಲ್ಲಿ ಬಂದು ಕೂಡಿದ್ದರು. ಮನೆ ಮಂದಿಗೆ ಮಹಾರಾಜರ ಸಲುವಾಗಿ ತಮಗೆ ಅಪಕೀರ್ತಿಗೆ ಕಾರಣವಾಗುವದೆಂದು ಅನ್ನಿಸುತ್ತಿತ್ತು.

ಈ ಮುಂದಿಗೆ ಮಹಾರಾಜರ ಹದಿನೈದು ಹದಿನಾರು ವರ್ಷ ಸಹವಾಸವಾಗಿತ್ತು. ಮತ್ತು ಅವರ ಮಾತೃವತ್ ಸಂಬಂಧ ನೂರಾರು ಅನುಭವಗಳು ಅವರಿಗೆ ಬಂದಿದ್ದವು. ಹೀಗಿದ್ದು ಇಷ್ಟು ಅಲ್ಪ ಕಾಲದೊಳಗೆ ಅವರ ಮನಸ್ಸಿನಲ್ಲಿ

ಇಷ್ಟು ದುಷ್ಟವಿಚಾರಗಳು ಬರುವದು ಆಶ್ಚರ್ಯಕರವೆನಿಸುತ್ತದೆ. ಆ ದಿನದ ಮಹಾರಾಜರ ವರ್ತನೆ ವಿಚಿತ್ರವೆಂಬದು ನಿಜ, ಮನೆಯವರು ಮಹಾರಾಜರಿದ್ದ ಕೋಣೆಯ ಬಾಗಿಲಿಗೆ ಹೊರಗಿನಿಂದ ಕೊಂಡಿ ಹಾಕಿ ಒಂದು ಸಂದಿಯೊಳಗಿಂದ ಒಳಗೆ ನೋಡಲಿಕ್ಕೆ ಹತ್ತಿದರು. ಧ್ಯಾನಕ್ಕೆ ಕೂಡ್ರುವಂತೆ ಪಲಂಗದ ಮೇಲೆ ಅವರು ಕೂತಿದ್ದರು. ಮೇಜಿನ ಮೇಲಿನ ಬಾಟ್ಲಿಕಡೆಗೆ ಪೂರ್ಣ ನಿಶ್ಚಲ ಮುದ್ರೆಯಿಂದ ಅವರು ನೋಡುತ್ತಿದ್ದರು, ಮತ್ತು ಬಾಯಿಯಿಂದ ಬೈಗಳು ಒಂದೇ ಸಮನೆ ಹೊರಡುತ್ತಿದ್ದವು. ಅವರ ಕಣ್ಣುಗಳು ಕೆಂಪಾಗಿದ್ದು, ಅವರು ಸಿಟ್ಟಿನಿಂದ ಕ್ಷುಬ್ಧರಾಗಿ ಹೋಗಿದ್ದರು, ಇದರ ಹೊರ್ತು ಕಳೆದ ನಾಲ್ಕು ಐದು ದಿವಸಗಳಲ್ಲಿ ಅವರ ಹೊಟ್ಟೆಯೊಳಗೆ ಅನ್ನದ ಒಂದು ಕಾಳುಸಹ ಹೋಗಿದ್ದಿಲ್ಲ.

ಅವರು ಒಮ್ಮಿಂದೊಮ್ಮೆ ಎದ್ದು, ಬಾಟಲಿಕಡೆ ಹೋದರು; ಮತ್ತು ಬಾಟಲಿಯನ್ನು ತಕ್ಕೊಂಡು ನೆಲದ ಮೇಲೆ ಜೋರಿನಿಂದ ಒಗೆದರು. ಬಾಟಲಿಯು ಚೂರು ಚೂರುಗಳಾದವು ವ ಮದ್ಯವೆಲ್ಲ ನೆಲದ ಮೇಲೆ ಪಸರಿಸಿತು. ಬಾಟಲಿಯ ಕೆಲವು ತುಣುಕುಗಳು ಮಹಾರಾಜರಿಗೆ ತಾಗಿದವು, ಮತ್ತು ಬಹಳಕಡೆ ಅವರಿಗೆ ಜಖಮವಾಯಿತು, ಹೊರಗಿನ ಮಂದಿ ಎಲ್ಲರೂ ಗಾಬರಿಯಾದರು. ಅವರು ಬಾಗಿಲು ತೆರೆದು ಒಳಗೆ ಬಂದು ಅಂದರು, “ದೇವಮಾಮಾ, ದೇವಮಾಮಾ, ಇದೇನು ನಡಿಸಿದ್ದೀರಿ?” (ಮನೆ ಮಂದಿ ಅವರಿಗೆ ಇದೇ ಹೆಸರಿನಿಂದ ಕರೆಯುತ್ತಿದ್ದರು.) ಅವರು ಮಹಾರಾಜರನ್ನು ಎತ್ತಿ ಪಲಂಗದ ಮೇಲೆ ಹಾಕಿದರು, ಅವರಿಗೆ ಮಹಾರಾಜರು ಆಗ ಆತ್ಮಾನಂದದಲ್ಲಿದ್ದಂತೆ ತೋರಿತು, ಅವರು ದೊಡ್ಡ ಧ್ವನಿಯಿಂದ ನಕ್ಕರು ಮತ್ತು ಅಂದರು, “ಮಿತ್ರರೇ, ನಾನು ಇವತ್ತು ಶಕ್ತಿಯ ಮೇಲೆ ವಿಜಯವನ್ನು ಸಂಪಾದಿಸಿದೆನು. ಆಕೆಯನ್ನು ಜಯಿಸುವದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೆನು. ಆದರೆ ಆಕೆಯು ನನಗೆ ಭ್ರಮೆ ಹಾಕುತ್ತಿದ್ದಳು, ಮತ್ತು ನನ್ನ ಇಚ್ಛೆ ತೃಪ್ತ ಮಾಡಲಿಕ್ಕೆ ತಾನು ಸಹಾಯ ಮಾಡುವೆನೆಂದು ನನ್ನ ಮನಸ್ಸು ತಿರುಗಿಸುತ್ತಿದ್ದಳು, ಆಕೆಯನ್ನು ಹಿಂದೆ ಹಾಕಿ ನಾನು ಮುಂದೆ ಹೋದೆನು, ಈಗ ನನಗೆ ಜಯ ಸಿಕ್ಕಿದೆ. ಇವತ್ತು ನನಗೆ ಅವಿನಾಶಿ ಸುಖ ಪ್ರಾಪ್ತವಾಗಿದೆ.

ಯಾವ ಆ ಕೋಣೆಯು ಮದ್ಯದ ಕಮರಿನಿಂದ ತುಂಬಿ ಹೋಗಿತ್ತೋ ಅದೇ ಈಗ ಭಿನ್ನ ಭಿನ್ನ ಸುವಾಸಗಳಿಂದ ವ್ಯಾಪಿಸಲ್ಪಟ್ಟಿತು, ಕೆಲವರಿಗೆ ಗಂಧದ್ದು, ಕೆಲವರಿಗೆ ಧೂಪದ್ದು, ಕೆಲವರಿಗೆ ಲವ್ಹೆಂಡರದ್ದು, ಮತ್ತು ಕೆಲವರಿಗೆ ಸುವಾಸಿಕ ಊದಬತ್ತಿಗಳ ಸುವಾಸ ಬರಲಿಕ್ಕೆ ಹತ್ತಿತು. ಅಲ್ಲಿಗೆ ಹೊಸದಾಗಿ ಬಂದ ಪ್ರತಿ ಒಬ್ಬನಿಗೆ ಬೇರೆ ಬೇರೆ ಸುವಾಸಗಳು ಬರಹತ್ತಿದವು, ಒಂದು ಬಾಟ್ಲಿ ತುಂಡಿನಿಂದ ಮಹಾರಾಜರಿಗೆ ಕಣ್ಣಿನ ಹತ್ತಿರ ಜಖಮವಾಗಿ ಅದರೊಳಗಿಂದ ರಕ್ತಸ್ರಾವವಾಗು

ತ್ತಿತ್ತು. ಕಾಜಿನ ಚೂರುಗಳು ಹೊರಗೆ ಚಲ್ಲಿದರು. ಎರಡು ಮೂರು ದಿವಸಗಳಲ್ಲಿಯೇ ಘಾಯಗಳು ಮಾಯಿದವು.

ಎಲ್ಲರೂ ಮಹಾರಾಜರ ಕ್ಷಮೆ ಬೇಡಿದರು. ಆಗ ಮಹಾರಾಜರು ನಕ್ಕರು. ಸರ್ವರಿಗೂ ಆನಂದವಾಯಿತು. ಆ ದಿನದಿಂದ ಮಹಾರಾಜರು ಮದ್ಯಕ್ಕೆ ಸ್ಪರ್ಶ ಮಾಡುತ್ತಿದ್ದಿಲ್ಲ. ಅವರು ಸ್ವಾತ್ಮ ಸುಖದ ಅನುಭವವನ್ನು ತಕ್ಕೊಳ್ಳುತ್ತಾ ತಮ್ಮ ಪ್ರತಿಯೊಬ್ಬ ಶಿಷ್ಯನಿಗೂ ಮುಮುಕ್ಷು ಜನಗಳಿಗೂ, ಸಂಸಾರ ಬಿಡದೆ, ಶರೀರಕ್ಕೆ ಕಷ್ಟ ಕೊಡದೆ, ತನ್ನ ತನ್ನ ಅಧಿಕಾರಕ್ಕೆ ಸರಿಯಾಗಿ ಪ್ರತಿಯೊಬ್ಬನು ಪರಮಾರ್ಥ ಮಾರ್ಗದಲ್ಲಿ ಹ್ಯಾಗೆ ಮುಂದೆ ಮುಂದೆ ಹೋಗಬೇಕೆಂಬದು ಕಲಿಸುತ್ತಿದ್ದರು.

ಮಹಾರಾಜರು ತಮ್ಮ ದಿವಸಗಳನ್ನು ಶಾಂತಿ ಆನಂದದಲ್ಲಿ ಕಳೆಯುತ್ತಿದ್ದರು. ಅವರು ಶಾಂತರೂ, ರಸಿಕರೂ, ಪ್ರೇಮಿಗಳು ಇದ್ದು, ಎಲ್ಲರ ಕೂಡೆ ಮಿತ್ರರಂತೆ ನಡೆಯುತ್ತಿದ್ದರು. ಅವರು ತಮ್ಮ ಮಹತ್ವದ ಕುರುಹು ಲೇಶಮಾತ್ರವೂ ತೋರಿಸುತ್ತಿದ್ದಿಲ್ಲ. ಅವರಿಗೆ ಗರ್ವ ಏನೇನೂ ಇದ್ದಿಲ್ಲ; ಮತ್ತು ಬಡವರಾಗಲಿ, ಶ್ರೀಮಂತರಾಗಲಿ, ಉಚ್ಚ ಜಾತಿಯವರಿರಲಿ, ನೀಚ ಜಾತಿಯವರಿರಲಿ, ಕಿರಿಯವರಿರಲಿ, ಹಿರಿಯರಿರಲಿ, ಸರ್ವರನ್ನು ಸಮಾನ ಬುದ್ಧಿಯಿಂದ ನಡಿಸುತ್ತಿದ್ದರು. ಯಾರಾದರೂ ತಪ್ಪಿದರೆ, ಅವರ ಕೂಡ ಜಗಳಾಡುವರು, ಆದರೆ ತಪ್ಪು ಆ ಮನುಷ್ಯನದೇ ಇರುತ್ತಿತ್ತು. ನಾವು ಹ್ಯಾಗೆ ನಮ್ಮ ಮುಖವನ್ನು ಕನ್ನಡಿಯಲ್ಲಿ ನೋಡುತ್ತೇವೆ, ಹಾಗೆ ಮಹಾರಾಜರು ಅವರಕಡೆಗೆ ಬರುವವರಿಗೆ ಕನ್ನಡಿಯಂತಿರುವರು. ಯಾಕಂದರೆ ಅವರ ಮನೋಭಾವಗಳೆಲ್ಲ ಇವರಲ್ಲಿ ಮೂಡುತ್ತಿದ್ದವು, ಬಹಳ ಕಾಲದ ವರೆಗೆ ಸೂಕ್ಷ್ಮವಾಗಿ ಅವರನ್ನು ನಿರೀಕ್ಷಿಸುತ್ತಿದ್ದವರಿಗೆ ಮಾತ್ರ ಮಹಾರಾಜರು ಹೊರಗೆ ಕಾಣಿಸಿಕೊಂಡಂತೆ ಇಲ್ಲದೆ ಖರೇ ಸ್ಥಿತಿ ಬೇರೆ ಅದೆ ಅಂತ ತಿಳಿಯುತ್ತಿತ್ತು.

ಮಹಾರಾಜರು ಅನ್ನುತ್ತಾರೆ, “ನಾನು ಹುಟ್ಟಿದಲಾಗ್ಯಾತು ಯಾರನ್ನೂ ಶತ್ರು ಮಾಡಿಕೊಂಡಿಲ್ಲ, ಖರೆಯಾಗಿ ತಾನೇ ತನ್ನ ಶತ್ರು. ನನಗೆ ಶತ್ರುಗಳು ಯಾರಾದರೂ ಆಗಿದ್ದಾದರೆ, ಅವರಿಗೆ ಕೆಟ್ಟದ್ದು ಮಾಡುವ ಬದಲಿಗೆ, ನಾನು ಯಾವಾಗಲೂ ನನ್ನ ಸಮೀಪ ಅವರನ್ನು ಇಟ್ಟುಕೊಳ್ಳುತ್ತಿದ್ದೆ, ಒಬ್ಬರ ಕೆಟ್ಟ ಸಂಕಲ್ಪಗಳನ್ನು ದೂರ ಮಾಡಲಿಕ್ಕೆ ಶತ್ರುಗಳು ಉಪಯೋಗವಾಗುತ್ತಾರೆ. ಅಂಥ ಶತ್ರುಗಳು ಪ್ರತಿಯೊಬ್ಬರಿಗೆ ಇರುತ್ತಾರೆ. ಇತರರು ನನ್ನಂತೆ ನಡೆದರೆ ಮತ್ತು ಖರೇ ಅನುಭವ ಪಡಿಯಲಿಕ್ಕೆ ಯತ್ನಿಸಿದರೆ, ಅವರಾದರೂ ನನ್ನಂತೆ ಆನಂದವನ್ನು ಪಡೆಯುವರು.”

ಸಂತ ನಾಮದೇವರ ವಿಷಯ ಹೇಳುತ್ತಾರಲ್ಲ, ಪೂರ್ವ ವಯಸ್ಸಿನಲ್ಲಿ ಅವರು ದರೋಡೆಕೋರರಿದ್ದು, ಪಂಢರಪುರಕ್ಕೆ ಹೋಗುವ ಯಾತ್ರಿಕರನ್ನೇ ಸುಲಿಯುತ್ತಿದ್ದರು. ವಾಲ್ಯಾ ಕೋಳಿಯೆಂಬವನೂ ದರೋಡೆ, ಮತ್ತು ಕೊಲೆಗಳನ್ನು ಮಾಡುತ್ತಿದ್ದನು. ಒಂದು ಕೊಲೆಯಾದಾಕ್ಷಣ ಅವನು ಒಂದು ಸಣ್ಣ ಕಲ್ಲನ್ನು ಒಂದು ದೊಡ್ಡ ಹೂಜಿಯೊಳಗೆ ಹಾಕುವನು. ಹೀಗೆ ಏಳು ದೊಡ್ಡ ಹೂಜಿಗಳನ್ನು ಸಣ್ಣ ಕಲ್ಲುಗಳಿಂದ ತುಂಬಿದ್ದನು. ಆದರೆ ತಾನು ಮಾಡುವದು ಪಾಪವೆಂತ ಅವನಿಗೆ ಗೊತ್ತಿದ್ದಿಲ್ಲ. ಅವನ ಜೀವನ ಸ್ಥಿತಿ ಎಲ್ಲ, ಗುರುವು ಬದಲಾಯಿಸಿದ ಮೇಲೆ, ಅವನು ಮಹಾನ್ ಋಷಿ ವಾಲ್ಮೀಕನಾದನು.

ಅದೇ ರೀತಿಯಿಂದ ಗಜಾನನರ ಗುರುಗಳು ತನ್ನ ಕೃಪೆಯನ್ನು ಗಜಾನನರ ಮೇಲೆ ವರ್ಷಿಸಿದರು. ಮತ್ತು ಅವರಿಗೆ ಶಕ್ತಿಯನ್ನು ಜಯಿಸುವ ಸಾಮರ್ಥ್ಯವನ್ನು ಕೊಟ್ಟರು, ಆ ಮೇಲೆ ಮೆಲ್ಲಗೆ ಅವರು ಮಹಾರಾಜರೆಂತ ಪ್ರಸಿದ್ಧರಾಗಿ, ಅನೇಕ ಜನರು ಅವರ ದೆಶೆಯಿಂದ ಪಾರಮಾರ್ಥಿಕ ಅನುಭವಗಳನ್ನು ಪಡೆದು, ಅವರ ಮಹತ್ವದ ಸಂಬಂಧ ಖಚಿತ ಮಾಡಿಕೊಂಡರು. ಮಹಾರಾಜರು ತಮ್ಮ ಚಿಕ್ಕ ವಯಸ್ಸಿನಲ್ಲಿ ಮದ್ಯಪಾನ ಮಾಡುತ್ತಿದ್ದಿಲ್ಲ, ಅವರು ಮುಂದೆಯೂ ಹಾಗೆಯೇ ಇರುತ್ತಿದ್ದರೆ, ಅವರ ಮಹತ್ವದ ಖ್ಯಾತಿಯು ಎಲ್ಲಕಡೆಗೆ ಪಸರಿಸುತ್ತಿತ್ತು. ಅವರು ಕುಡಿಯಲಿಕ್ಕೆ ಆರಂಭ ಮಾಡಿದಾಗ, ಅವರು ಪ್ರಕಟವಾಗಿ, ಮದ್ಯವನ್ನು ಬೇಡುತ್ತಿದ್ದರು. ಇದರಿಂದ ಹೀಗೆ ತೋರುವದಲ್ಲ, ಖರೇ ಯೋಗಿಯು ಜನರಿಗೆ ಎಂದೂ ಡಂಭಾಚಾರ ಮಾಡಿ ಮೋಸಗೊಳಿಸುವದಿಲ್ಲ. ಅವರು ಯಾರಿಗೂ ಒಳ್ಳೇದು ಮಾಡಲಿಲ್ಲ ಅಂದರು, ಅವರು ಯಾರಿಗೂ ಹಾನಿ ಮಾಡಲಿಲ್ಲ. ತನಗೆ ಸಾಧ್ಯವಾದ ಮಟ್ಟಿಗೆ ಅವರು ಪರರಿಗೆ ಒಳ್ಳೇದು ಮಾಡುತ್ತಿದ್ದರು.

ಹಾಗಲ್ಲದಿದ್ದರೆ, ಮುಂಬಯಿಯಲ್ಲಿ ಬಹಳ ಕಾಲ ಇದ್ದಾಗ, ಮಹಾರಾಜರು ಜನರನ್ನು ಮೋಸಗೊಳಿಸಿ, ತನ್ನ ಮಹತ್ವವನ್ನು ಅವರಿಗೆ ತೋರಿಸಿ, ಯಥೇಷ್ಟ ಧನವನ್ನು ಸಂಪಾದಿಸಬಹುದಿತ್ತು ಮತ್ತು ಎಷ್ಟೋ ಬಂಗಲೆಗಳೂ ಇಮಾರತಿಗಳೂ ಕಟ್ಟಿಸಬಹುದಿತ್ತು. ಆದರೆ ಅವರು ಎಂದೂ ಮಂದಿಗೆ ಮೋಸ ಮಾಡಲಿಲ್ಲ. ಅಥವಾ ಸುಳ್ಳು ನೆವಗಳಿಂದ ಹಣ ಯಾರಿಂದಲೂ ಎತ್ತಲಿಲ್ಲ. ಅವರ ಅತಿ ನಿಷ್ಠುರ ಶತ್ರುವಾದರೂ ಅವರು ಈ ಪ್ರಕಾರ ಮಾಡಿದರೆಂತ ಆರೋಪ ಮಾಡಲಿಕ್ಕಿಲ್ಲ. ಅಂಥವನು ಹೆಚ್ಚಿನದು ಹೇಳಿದನಂದರೆ ಮಹಾರಾಜರು ಮದ್ಯಪಾನ ಮಾಡುತ್ತಾರೆ ಮತ್ತು ಮಂದಿಗೆ ಬಯ್ಯುತ್ತಾರೆ. ಅಂದಾನು. ಆದರೆ ಮಹಾರಾಜರಿಗೆ ಯಾರಾದರೂ ಶತ್ರುಗಳು ಇದ್ದಾರೇನು ? ಮಹಾರಾಜರಿಗೆ ಯಾರ ಮೇಲೆ ದ್ವೇಷವಿಲ್ಲ. ಹೀಗಿರುತ್ತಾ ಅವರಿಗೆ ಶತ್ರುಗಳು ಹ್ಯಾಗಿರಬೇಕು ? ಯಾರಿಗಾದರೂ ಅವರ ಮೇಲೆ ದ್ವೇಷವಿದ್ದರೆ, ಅವರನ್ನು ತ್ತಾರೆ ಆ ಮನುಷ್ಯನು ತನ್ನ ಕೆಟ್ಟ ಭಾವನೆಗಳಿಂದ ತಾನೇ ದುಃಖಪಡುವನು; ಸಾಧುಸಂತರು

ಯಾರೊಬ್ಬರ ಹಗೆಗಳು ಆಗುವದಿಲ್ಲ. ಅವರು ಶರೀರಧಾರಿಯಂತೆ ಕಾಣಿಸಿದರೂ ಯಾವಾಗಲೂ ಆತ್ಮಾನಂದವನ್ನು ಅನುಭವಿಸುತ್ತಾರೆ.

ಮಹಾರಾಜರನ್ನುತ್ತಾರೆ, "ನಾನು ಎಂದೂ ಸಾಧುವೇಷ ಹಾಕಿಕೊಳ್ಳಲಿಲ್ಲ, ಅಥವಾ ಯಾರೊಬ್ಬರಿಗೂ ನನ್ನ ಶಿಷ್ಯರಾಗಿರೆಂತ ಹೇಳಲಿಲ್ಲ. ಇದಕ್ಕೆ ವಿರುದ್ಧವಾಗಿ, ನಾನು ಮುಂದಿಗೆ ಕರೆದ ಹೊರ್ತು ನನ್ನ ಕಡೆ ಬರಬೇಡಿರಿ ಅಂತ ಹೇಳುತ್ತೇನೆ. ನಾನು ಯಾವಾಗಲೂ "ಸೋಹಂ" ದ ಮದ್ಯವನ್ನು ಕುಡಿಯುತ್ತೇನೆ, ಹೀಗೆ ನಾನು ಕೆಟ್ಟೆನು. ನೀವು ನನ್ನಂತೆ ಮಾಡಲಿಕ್ಕೆ ಹೋಗಿ ನಿಮ್ಮ ಜೀವನವನ್ನು ಕೆಡಿಸಿಕೊಳ್ಳಬೇಡಿರಿ. ಯಾವನಾದರೂ ನನ್ನಹಾಗೆ ತನ್ನ ಜೀವವನ್ನು ಕೆಡಿಸಿಕೊಳ್ಳಬೇಕಂತ ಇಚ್ಛಿಸುವನಾದರೆ, ಅವನು ಕಣ್ಣು ತೆರೆದು, ತನ್ನದು ತನಗೆ ಖಚಿತ ಮಾಡಿಕೊಂಡು ಈ "ಸೋಹಂ"ದ ಗುಟುಕು ತಕ್ಕೊಂಡು ತನ್ನ ಆತ್ಮನ ಆನಂದದಲ್ಲಿ ಜೀವಿಸುತ್ತಿರಬೇಕು. ನಾನು ಸದ್ಯಃಕಾಲದಲ್ಲಿ ಒಬ್ಬ ಸಾಧುವಿನಂತೆ ನಿಮಗೆ ಒಂದು ವೇಳೆ ಕಾಣಿಸುತ್ತಿರಬಹುದು. ಆದರೆ ಮುಂದ ನನ್ನ ಅದೃಷ್ಟದಲ್ಲಿ ಏನದೆ ಯಾರಿಗೆ ಗೊತ್ತು? ಈಗಿನಂತೆ ಮುಂದೆ ನನ್ನ ಆಚರಣೆ ಶುದ್ಧ ಇಲ್ಲದಿರಬಹದು. ನಾನು ಈ ವರೆಗೆ ಯಾರೊಬ್ಬರ ಸಂಬಂಧ ಕೆಟ್ಟ ಭಾವನೆಗಳನ್ನು ಮಾಡಲಿಲ್ಲ. ಮತ್ತು ಮುಂದೆ ಎಂದಾದರೂ ಮಾಡಲಿ-ಕ್ಕಿಲ್ಲ. ನೀವು ಖರೇಯಾಗಿ ನನ್ನನ್ನು ಪ್ರೀತಿಸುತ್ತಿದ್ದರೆ, ನಾನಾದರೂ ನಿಮ್ಮನ್ನು ಅತ್ಯಂತವಾಗಿ ಪ್ರೀತಿಸುವೆನು, ಮತ್ತು ನನ್ನ ಪ್ರೀತಿಯು ಎಂದೂ ಬದಲಾಗಲಾರದು. ಬೇರೆ ಗುರುವಿನ ಶಿಷ್ಯನೊಬ್ಬನು ನನ್ನ ಕಡೆ ಬಂದರೆ; ಅವನು ನನ್ನಿಂದ ಹೆಚ್ಚಿನ ಪ್ರಯೋಜನ ಹೊಂದುವನೆಂದು ನಾನು ಎಂದೂ ಅವನಿಗೆ ಮೋಸಪಡಿಸುವ ಸೂಚನೆ ಮಾಡಲಿಕ್ಕಿಲ್ಲ. ಒಬ್ಬ ಗುರುವಿನಿಂದ ಹೆಚ್ಚಿನ ಉಪ-ಯೋಗವಾಗದಿದ್ದರೆ, ಮತ್ತೊಬ್ಬನಿಂದಲೂ ಅಷ್ಟೇ ಸರಿ. ಹೀಗೆ ಈಗ ನನ್ನ ಆಚರಣೆ ಇದ್ದರೂ, ಅದು ಮುಂದ ಹೀಗೆಯೇ ಇದ್ದೀತೆಂತ ನಾನು ಭರವಸೆ ಹೇಳಲಾರೆ. ಆದರೆ ನಾನು ನನ್ನ ಈಗಿನ ಆಚರಣೆಯಲ್ಲಿ ಬದಲಾಗಬಾರದೆಂತ ದೇವರಿಗೆ ಪ್ರಾರ್ಥಿಸುತ್ತೇನೆ; ನನ್ನ ಬೇಡಿಕೆಯನ್ನು ಕೊಡುವದು ಕೊಡದಿರುವದು ಆತನ ಕೈಯ್ಯಲ್ಲಿ ಇದೆ. ನನ್ನ ಕಳೆದು ಹೋದ ಧನವು ನನ್ನ ಗುರುಕೃಪೆಯಿಂದ ತಿರುಗಿ ಸಿಕ್ಕಿತು. ಪ್ರಸಿದ್ಧ ಸಂತ ದೇವನಾಥರು ರಚಿಸಿದ ಪದವು ಹೀಗದೆ:—

ಗುರುಕೃಪೆಯಿಂದ ನನಗೆ ಅಂಜನ (ಅಂತರ್ದೃಷ್ಟಿ) ಸಿಕ್ಕಿದೆ ಅಂತ ನನಗೆ ಮಾತ್ರ ಗೊತ್ತದೆ.

"ಅಮೃತದ ಬಟ್ಟಲಿಂದ ಅಮೃತವ ಕುಡಿದಿದ್ದೇನೆಂತ ನನಗೆ ಮಾತ್ರ ಗೊತ್ತು,
ನನ್ನ ಆತ್ಮನಲ್ಲಿಯೇ ಎಲ್ಲ ಆಕೃತಿಗಳು ಲೀನವಾಗಿದೆಯಂತ ನನಗೆ ಮಾತ್ರ ಗೊತ್ತು,
ನಾನೇ ಗುರು ನಾನೇ ಶಿಷ್ಯನು ಎಂಬದು ನನಗೆ ಮಾತ್ರ ಗೊತ್ತಾಗಿದೆ."

### (೫೦) ಮೇನಿನಜಾಯಟಿಸ ರೋಗ ಪೀಡಿತನಾದವನು :—

ಸನ್ನ ೧೯೩೩ನೇ ಇಸವಿಯಲ್ಲಿ ನಾಶಿಕದಲ್ಲಿ ಭಿಸೆ ಇವರ ಮನೆಯಲ್ಲಿ ಅಪ್ಪಾಸಾಹೇಬ ವೈದ್ಯ, ವಾಲಾವಲಕರ ಮತ್ತು ಒಬ್ಬರಿಬ್ಬರು ಮಹಾರಾಜರ ಕೂಡೆ ಮಾತಾಡುತ್ತಾ ಕುಳಿತಿದ್ದರು. ಇಷ್ಟರಲ್ಲಿ, "ಆ ರೋಗಿಯು ನನ್ನ ಮನೆಯಲ್ಲಿ ನನ್ನ ಖೋಲಿಯಲ್ಲಿ ಮಂಚದ ಮೇಲೆ ಮಲಗಿದ್ದಾನೆ. ನನಗೆ ಪರೇಲಕ್ಕೆ ಹೋಗಲಿಕ್ಕೇ ಬೇಕು." ಈ ಪ್ರಕಾರ ಉದ್ಗಾರ ಮಹಾರಾಜರ ಮುಖದಿಂದ ಹೊರಡಿತು. ಯಾವನೊಬ್ಬ ಮನುಷ್ಯನು ಅಸ್ವಸ್ಥವಿದ್ದದರ ಕುರಿತು, ಪರೇಲದಿಂದ ಪತ್ರ ಅಥವಾ ತಾರ ಬಾರದೆ, ಮಹಾರಾಜರ ಈ ಉದ್ಗಾರವನ್ನು ಕೇಳಿ ಆ ಮಂದಿಗೆ ಆಶ್ಚರ್ಯವಾಯಿತು. ಇಷ್ಟರೊಳಗೆ ಸಮರ್ಥರ ಮಗ ಶಂಕರ ಇವನು ಅಸ್ವಸ್ಥನಿದ್ದಾನೆ, ಮಹಾರಾಜರು ಕೂಡಲೇ ಹೊರಟು ಬರಬೇಕೆಂದು ತಾರ ಬಂತು. ಆಗ ಎಲ್ಲರಿಗೂ ಅತ್ಯಂತ ಆಶ್ಚರ್ಯವಾಯಿತು.

ಮಹಾರಾಜರು ಮಧ್ಯಾಹ್ನದ ಮೊದಲನೆ ಗಾಡಿಗೆ ಹೊರಟರು. ಮತ್ತು ಸಂಜೆಹೊತ್ತಿಗೆ ಪರೇಲಕ್ಕೆ ಹೋಗಿ ಮುಟ್ಟಿದರು. ಮಹಾರಾಜರ ಮೋಟಾರಗಾಡಿ ಬಾಗಲ ಮುಂದೆ ನಿಂತ ಕೂಡಲೆ ಚಿಕ್ಕಮಕ್ಕಳೆಲ್ಲ "ದೇವ ಮಾಮಾ ಬಂದರು." ಎಂದು ಒದರಿದರು. ಅನಂತರ ಮಹಾರಾಜರು ರೋಗದ ಸಂಬಂಧ ಕೇಳಿದರು. ಮತ್ತು ಅವರು ಎರಡನೆ ಮಾಳಿಗೆಯ ಮೇಲೆ ಹೋದರು ಶಂಕರಗೆ ಸ್ಮೃತಿ ಇದ್ದಿಲ್ಲ. ಅವನು ಮೊದಲು ಮಹಾರಾಜರ ಗುರ್ತು ಹಿಡಿಯಲಿಲ್ಲ. ಆದರೆ ಕೆಲವು ಹೊತ್ತಿನ ಮೇಲೆ ಗುರ್ತ ಹಿಡಿದನು. ಡಾಕ್ಟರ ದಾಭೋಳಕರ ಇವರು ಸಮರ್ಥರ ನೇಮಿಸಲ್ಪಟ್ಟ ಡಾಕ್ಟರರಿದ್ದರು. ಅವರು ಬಹಳ ಪರೋಪಕಾರಿ ಇದ್ದರು. ಅವರು ತಮ್ಮ ವೃತ್ತಿಯಲ್ಲಿ ಬಹಳ ಕುಶಲರೂ, ಯಶಸ್ವಿಗಳೂ ಇದ್ದರು. ಮೇನಿನಜಾಯಿಟಿಸ ರೋಗದ್ದು ಮುಂಬಯಿಯಲ್ಲಿ ಇದು ಮೊದಲನೆ ಪೀಡೆ (Case) ಇದ್ದದರಿಂದ ಪ್ರಥಮದಲ್ಲಿ ರೋಗದ ಬರೋಬರಿ ತಿಳುವಳಿಕೆ ಆಗಲಿಲ್ಲ. ಎರಡು ಮೂರು ದಿನಗಳ ನಂತರ ಯಾವಾಗ್ಗೆ ವಾತದ ಲಕ್ಷಣಗಳು ಕಾಣಬಂದವು, ಆಗ ರೋಗದ ಬರೋಬರಿ ತಿಳುವಳಿಕೆ ಆಯಿತು. ಭರೂಚಾ, ಮೂಳಗಾಂವಕರ, ಮಿಸ್ತ್ರಿ ಈ ಎಲ್ಲ ಪ್ರಸಿದ್ಧ ಡಾಕ್ಟರರನ್ನು ಕರೆದಿದ್ದರು. ಅವರ ಕಮೀಟಿಯಾಗಿ ಅವರ ಕಡೆಯಿಂದ ಶಂಕರನ ರೋಗದ ಪರೀಕ್ಷೆ ಮಾಡಲ್ಪಟ್ಟಿತು. ಸಂಬಂಧಿಕರೂ, ನೆರೆಯವರೂ ಅವನ ಸಮಾಚಾರ ತಿಳಿಯಲಿಕ್ಕೆ ಆಗಾಗ್ಗೆ ಬರುತ್ತಿದ್ದರು. ಶಂಕರನು ಟ್ರಾಮ್ಸ ಅಫ್ ಇಂಡಿಯಾ ಆಫೀಸದಲ್ಲಿ ಸ್ಟೋರಕೀಪರನಿದ್ದನು. ಅವರ ಆಫೀಸಿನ ಮಂದಿ ಸಹ ಸಮಾಚಾರಕ್ಕಾಗಿ ಬರುತ್ತಿದ್ದರು. ಡಾಕ್ಟರರೂ ಬರುತ್ತಿದ್ದರು, ಮತ್ತು ಜಪ ವಗೈರೆ ದೈವಿಕ ಉಪಚಾರಗಳೂ ನಡಿಯುತ್ತಿದ್ದವು. ಈ ರೀತಿಯಿಂದ ಒಂದು ತಿಂಗಳು ಆಗಿಹೋಯಿತು. ಮಹಾರಾಜರು ಪ್ರತ್ಯಕ್ಷ ಮೊದಲು ಒಂದೆ

ಎಂದು ಹೊರಗಿನ ಮಂದಿ ಸಮರ್ಥರ ಮನೆಯವರಿಗೆ ಕೇಳುತ್ತಿದ್ದರು. ಅದಕ್ಕೆ "ಮಹಾರಾಜರು ನಮಗೆ ಒಂದೆಸಮನೆ ಬೈಯ್ಯುತ್ತಾರೆ. ನಾವು ಈಗ ಅವರ ಕೂಡ ಮಾತಾಡುವದೇ ಬಿಟ್ಟಿರುತ್ತೇವೆ. ಆದರೂ ಎಲ್ಲವೂ ಮಹಾರಾಜರ ಕೃಪೆಯಮೇಲೆ ಹೊಂದಿರುತ್ತದೆ, ಎಂದು ನಾವು ತಿಳಿದಿದ್ದೇವೆ." ಎಂದು ಮನೆ ಮಂದಿ ಅವರಿಗೆ ಉತ್ತರ ಕೊಡುತ್ತಿದ್ದರು.

ಈ ಪ್ರಕಾರ ಎರಡು ತಿಂಗಳಾದರೂ ಇನ್ನು ಪ್ರಕೃತಿ ಏನೂ ಸುಧಾರಿಸುವ ಲಕ್ಷಣ ಕಾಣಿಸಲಿಲ್ಲ. ಅವನ ಕಣ್ಣುಗಳು ಬಾತಿದ್ದವು, ಕಿವಿಗಳಿಂದ ಕೀವು ಸೋರುತ್ತಿತ್ತು, ಮತ್ತು ಇಂಗ್ಲಿಷ, ಉರ್ದು, ಗುಜರಾತಿ ಈ ಭಾಷೆಗಳಿಂದ ಏನಾದರೂ ಅಸಂಬದ್ಧ ಮಾತುಗಳನ್ನು ಬಡಬಡಿಸುತ್ತಿದ್ದನು. ಜ್ವರವು ಮೂರುನಾಲ್ಕು ಡಿಗ್ರಿತನಕ ಒಂದೆಸಮನೆ ನಡಿಯುತ್ತಿತ್ತು. ಶಂಕರನ ಮೇಲಿನ ಅಧಿಕಾರಿಯು ಅವನ ರೋಗದ ಸಂಬಂಧ ಚನ್ನಾಗಿ ತಿಳಿದುಕೊಂಡು ಬಂದು ಹೇಳಬೇಕಂತ ಪ್ರತಿ ಒಬ್ಬ ಕಾರಕೂನನಿಗೆ ಹೇಳಿದ್ದನು. ಹಾಗೂ ಅವನು ಶಂಕರನಿಗೆ ದವಾಖಾನೆಗೆ ಕಳುಹಿಸಿ ಅವನ ಯೋಗ್ಯ ವ್ಯವಸ್ಥಾ ಮಾಡುವ ಸಲುವಾಗಿ ಚಿಗಪ್ಪನಾದ ನಾನಾ ಸಮರ್ಥನಿಗೂ ಹೇಳಿ ಕಳುಹಿಸಿದ್ದನು. ಮತ್ತು ಅವನೂ ಪತ್ನಿಸಹಿತ ಶಂಕರನಿಗೆ ನೋಡಲಿಕ್ಕೆ ಬಂದಿದ್ದನು. ಆದರೆ ಶಂಕರನಿಗೆ ಅವನ ಗುರ್ತ ಹತ್ತಲಿಲ್ಲ. ಶಂಕರನನ್ನು ನೋಡಿ ಇನ್ನು ಇವನು ನಾಲ್ಕೈದು ದಿವಸಗಳ ಸಂಗತಿಯುವನೆಂದು ಅವನಿಗೆ ನಿಶ್ಚಯವಾಯಿತು. ಅವನಿಗೆ ಬಹಳ ಕೆಟ್ಟೆ ಅನಿಸಿತು. ಈಗ ಅವನನ್ನು ದವಾಖಾನೆಗೆ ವೈಯ್ಯುವದು ಏನೂ ಉಪಯೋಗವಿಲ್ಲವೆಂದು ಅವನು ಮನೆಗೆ ಹೋದನು.

(೫೧) ನಿರ್ವಾಣದ ಸ್ಥಿತಿ :— ಮರುದಿನ ಶಂಕರನು ಒಂದು ಸ್ವಪ್ನವನ್ನು ಕಂಡನು. ಅದನ್ನು ಅವನು ಎಚ್ಚರವಾದ ಮೇಲೆ ಕೆಳಗೆ ಬರೆದಂತೆ ವರ್ಣಿಸಿ ಹೇಳಿದನು, "ನನ್ನ ಕೊರಳ ಸುತ್ತಲು ಪಾಶ ಹಾಕುತ್ತಿರುವ ಒಬ್ಬ ಕರೇ ಯಮ-ದೂತನನ್ನು ನಾನು ನೋಡಿದೆ, ಅಲ್ಲೆ ಸಮೀಪ ಒಂದು ಪ್ರೇತವು ಸುಡುತ್ತಿತ್ತು ಒಬ್ಬ ವಿಧವೆಯು ಒಂದೇ ಸವನೇ ಆಕ್ರೋಶ ಮಾಡುತ್ತಿದ್ದಳು. ನಾನು ದೊಡ್ಡ ಧ್ವನಿಯಿಂದ ಅಳುತ್ತಿದ್ದೆನು. ಮತ್ತು " ದೇವ ಮಾವಾ, ದೇವ ಮಾವಾ, ನನಗೆ ಬದುಕಿಸಿರಿ, ಬದುಕಿಸಿರಿ " ಎಂದು ಗಟ್ಟಿಯಾಗಿ ನಾನು ಒದರುತ್ತಿದ್ದೆನು. ಅನಂತರ ಯಾವನೋ ಒಬ್ಬ ಮನುಷ್ಯನು ಹೋಗಿ, ಗಜಾನನ ಮಹಾರಾಜರನ್ನು ಕರಕೊಂಡು ಬಂದನು. ನಾನು ಅಳುವದು ಮಹಾರಾಜರು ಕಂಡು, ಅಂದರು "ಅಳಬೇಡ, ಅಳಬೇಡ, ನಾಳಿನಿಂದ ನಿನಗೆ ನೆಟ್ಟಗೆ ಆದೀತು." ಆದರೂ ನನಗೆ ಅದರಿಂದ ಸಮಾಧಾನವಾಗಲಿಲ್ಲ. ನಂತರ ಅವರು ನನಗೆ 'ಸೋಹಂ'ದ ಬಿಡದೆ ಜಪ ಮಾಡಲಿಕ್ಕೆ ಹೇಳಿದರು. ನಾನು ಕಣ್ಣುಮುಚ್ಚಿ ಜಪ ಮಾಡಲಿಕ್ಕೆ ಆರಂಭಿಸಿದೆ."

ಉಳಿದ ಎಲ್ಲ ಜನರು ಹೋಗಿದ್ದರು. ಅವನ ಹಾಸಿಗೆಯ ಹತ್ತರ ನಾಲ್ಕುಐದು ಮಂದಿಮಾತ್ರ ಇದ್ದರು. ಅವರು ತಲೆಯಕಡೆ ಕರ್ಪೂರ ಹಚ್ಚುತ್ತಾ ಇದ್ದರು. ಆ ರಾತ್ರಿ ಎರಡು ಮೂರು ರೂಪಾಯಿಗಳ ಕರ್ಪೂರ ಸುಟ್ಟರು. ಆ ಮೇಲೆ ಶಂಕರನು ಮಾತಾಡಲಿಕ್ಕೆ ಹತ್ತಿದನು, ಮತ್ತು ಅಂದನು, ಎಲ್ಲರೂ ಹೋದರೇನು? ಇಲ್ಲಿ ಒಂದು ದೊಡ್ಡ ಹಾವು, ಮತ್ತು ಶ್ರೀಕೃಷ್ಣನು ಅದರಮೇಲಿದ್ದು, ನನ್ನ ಮಸ್ತಕದ ಮೇಲೆ ಹಸ್ತವಿಟ್ಟನು. ನೋಡಿರಿ, ಅವರು ಹೋದರು.'' ಇದನ್ನು ಕೇಳಿ ಎಲ್ಲರಿಗೂ ಆನಂದವಾಯಿತು, ಆ ರಾತ್ರಿಯಿಂದ ಶಂಕರನ ಜ್ವರವು ಮೆಲ್ಲಮೆಲ್ಲಗೆ ಕಡಿಮೆ ಆಗುತ್ತಾ ಬಂತು. ಮೂರು ತಿಂಗಳಲ್ಲಿ ಅವನು ಸಂಪೂರ್ಣ ನೆಟ್ಟಗಾದನು. ಅವನಿಗೆ ಮೊದಲಿನಂತೆ ಶಕ್ತಿಬಂತು ಮತ್ತು ಅವನು ತನ್ನ ಕೆಲಸಕ್ಕೆ ಹೋಗಲಿಕ್ಕೆ ಆರಂಭಿಸಿದನು.

(೫೨) **ಉಪಾಧ್ಯೆ** :— ವಿಠಲ ಪಾಂಡುರಂಗ ಉಪಾಧ್ಯೆ ಎಂಬ ಹೆಸರಿನ ನಾಶಿಕದೊಳಗಿನ ಒಬ್ಬ ವಕೀಲರು ಬಹಳ ವರ್ಷಗಳತನಕ ಮಹಾರಾಜರ ಕೂಡ ಮಿತ್ರತ್ವದಿಂದ ನಡೆಯುತ್ತಿದ್ದರು. ಉಪಾಧ್ಯೆ ಶಾಂತ ಸ್ವಭಾವದವರಿದ್ದು ಎಲ್ಲರ ಕೂಡ ಸ್ನೇಹ ಮಾಡತಕ್ಕವರಿದ್ದರು, ವೇದಾಂತದ ತತ್ವಗಳನ್ನು ಬಹಳ ಸುಲಭ ರೀತಿಯಿಂದ ಯಾರಿಗಾದರೂ ತಿಳಿಸಿಕೊಡುವ ಕುಶಲತೆ ಅವರಿಗಿತ್ತು. ಅವರಿಗೆ ಓದುವ ಚಟ ವಿಶೇಷವಾಗಿತ್ತು. ಎರಡುಮೂರುವರ್ಷಗಳ ಹಿಂದೆ ದಿವಾಳಿಯ ಎರಡನೇ ದಿನ ಸಾಯಂಕಾಲಕ್ಕೆ ಸಬರಜಿಸ್ಟ್ರಾರ ಸಾಸವಡಕರ ಇವರ ಮನೆಯಲ್ಲಿ ಕೆಲವು ಮಂದಿ ಹರಟೆಹೊಡೆಯುತ್ತಾ ಇದ್ದರು. ಸಾಸವಡಕರರು ಆ ಸಮಯ ದಲ್ಲಿ ನಾಶಿಕದಲ್ಲಿಯೇ ಇರುತ್ತಿದ್ದರು. ಮಹಾರಾಜರೂ ಅಲ್ಲೇ ಇದ್ದರು. ಉಪಾಧ್ಯೆ ಮಹಾರಾಜರಿಗೆ ಅಂದರು, “ ಮಹಾರಾಜರೇ; ನೀವು ಬಹಳ ಮಂದಿಗೆ ದಿನಾಲು ನಿಮ್ಮ ಸಮೀಪ ಧ್ಯಾನಕ್ಕೆ ಕೂಡ್ರಿಸಿಕೊಳ್ಳುತ್ತೀರಿ. ಇಲ್ಲಿ ಈ ಬಾಬಾ-ಸಾತಪೂತಕರ ಇದ್ದಾರೆ, ಅವರಿಗೆ ಧ್ಯಾನಕ್ಕೆ ಕೂಡ್ರುವ ಬಹಳ ಇಚ್ಛೆ ಇದೆ, ಹಾಗಿದ್ದು ನೀವು ಅವರನ್ನು ಯಾಕೆ ಧ್ಯಾನಕ್ಕೆ ಕೂಡ್ರಿಸಿಕೊಳ್ಳುವದಿಲ್ಲ. ನೀವು ಅವರ ಮೇಲೆ ಕೃಪೆಮಾಡಬೇಕೆಂದು ಅವರು ಬಹಳ ದಿವಸಗಳಿಂದ ದಾರಿನೋಡುತ್ತಿದ್ದಾರೆ.'' ಇದಕ್ಕೆ ಮಹಾರಾಜರೆಂದರು, “ ವಕೀಲಸಾಹೇಬರೇ ನೀವೂ ಸಹ ಪೂರ್ವಜನ್ಮದಲ್ಲಿ ಬಹಳ ತಯಾರಿ ಮಾಡಿದ್ದವೆ. ಈ ಜನ್ಮದಲ್ಲಿ ನೀವು ಸ್ವಲ್ಪಾದರೂ ಯೋಗಾಭ್ಯಾಸ ಮಾಡಿರಬಹುದು. ಯಾಕಂದರೆ ನಿಮ್ಮ ಮೇಲೆ ನಿಮ್ಮ ಗುರುಗಳ ಕೃಪೆ ಆಗಿದೆ, ಹೀಗಿದ್ದು, ನೀವು ನನ್ನ ಸಹವಾಸದಲ್ಲಿ ಇಷ್ಟು ದಿನ ಇದ್ದೀರಿ, ಆದರೂ ನಾನು ತಪ್ಪಿ ನಿಮಗೆ ಧ್ಯಾನಕ್ಕೆ ಕೂಡ್ರಲಿಕ್ಕೆ ಹೇಳೇನೇನು ? ಇಲ್ಲಿ ತನಕ ನಾನು ಎಂದೂ ಹಾಗೆ ಮಾಡಲಿಲ್ಲ. ಆದರೆ ಇವತ್ತು ಕೂತ್ರ ಸಂಧಿ ಪ್ರಾಪ್ತವಾಗಿದೆ ಎಂತ ಕಾಣುತ್ತದೆ. ಎರಡನೇಯವರಿಗೆ ಧ್ಯಾನಕ್ಕೆ ಕೂಡ್ರಿಸಿಕೊಳ್ಳಲಿಕ್ಕೆ ಹೇಳುವ ಬದಲಿಗೆ ನೀವೇ ಯಾಕೆ ನನ್ನೆದುರಿಗೆ ಧ್ಯಾನಕ್ಕೆ ಕೂಡ್ರಬಾರದು?

ಮಹಾರಾಜರು ಹೀಗೆ ಅಂದಾಕ್ಷಣ ಉಪಾಧ್ಯೆಯವರು ಎದ್ದು ಮಹಾರಾಜರ ಎದುರಿಗೆ ಹೋಗಿ ಕೂತರು. ಆಶ್ಚರ್ಯದ ಸಂಗತಿ ಏನಂದರೆ, ಅವರ ಕಣ್ಣು ತೆರೆದಿದ್ದರೂ ಅವರು ಒಮ್ಮೆಲೇ ಧ್ಯಾನದಲ್ಲಿ ಮಗ್ನರಾದರು. ಸುಮಾರು ಒಂದೂವರೆ ತಾಸುತನಕ ಅವರಿಗೆ ದೇಹದ ಸ್ಮೃತಿ ಇದ್ದಿಲ್ಲ. ಜನರು ಅವರ ಹೆಸರಿನಿಂದ ಘಟ್ಟಿಯಾಗಿ ಕರೆದರು, ಅವರನ್ನು ಎಚ್ಚರಗೊಳಿಸುವ ಬಹಳ ಯತ್ನ ಮಾಡಿದರು. ಆದರೆ ಅದರ ಉಪಯೋಗವೇನೂ ಆಗಲಿಲ್ಲ ಅವರ ದೇಹವೆಲ್ಲ ಕಟ್ಟಿಗೆಯಂತೆ ಬಿರುಸಾಗಿ ಹೋಗಿತ್ತು. ಒಂದೂವರೆ ತಾಸಿನ ಮೇಲೆ ಅವರು ಎಚ್ಚರಾದರು. ಕೂಡಲೇ ಅವರು ಎರಡು ತಂಬಿಗೆ ನೀರು ಕುಡಿದರು, ಮತ್ತು ಕೆಳಗೆ ಬಿದ್ದು ಬಿಟ್ಟರು. ಅವರು ಸಮಾಧಿಯಂಥ ಆನಂದ ಸ್ಥಿತಿಯಲ್ಲಿ ಸ್ತಬ್ಧರಾಗಿದ್ದರು. ಮುಂದೆ ಇಪ್ಪತ್ತು ಮಿನಿಟು ತನಕ ಅವರು ಮಾತಾಡಲೇ ಇಲ್ಲ. ಮಹಾರಾಜರು ಸಹ ಅವರಿಗೆ ಒದರಿ ಕರೆದರು, ಆದರೆ ಅವರು ಒಂದು ಶಬ್ದ ಸಹ ಉಚ್ಚರಿಸಲಿಲ್ಲ. ಅವರು ತಡೆಯಿರಿ ಎಂಬಂತೆ ಮಹಾರಾಜರಿಗೆ ಕೈಯಿಂದ ಸಂಜ್ಞೆ ಮಾತ್ರ ಮಾಡಿದರು. ಹದಿನೈದು ಮಿನಿಟಿನ ಮೇಲೆ ಅವರು ಎದ್ದರು. ಆ ಸಮಯದಲ್ಲಿ ಮಹಾರಾಜರು ಮಲಗಿದ್ದು ನಿದ್ರಾಗ್ರಸ್ತರಾಗಿದ್ದರು. ಜನರು ಉಪಾಧ್ಯೆಯವರಿಗೆ ಅವರ ಅನುಭವ ಸಂಬಂಧ ಕೇಳಿದರು. ಅದಕ್ಕೆ ಅವರು ಬಹಳ ಆನಂದದಿಂದ ಮುಂದೆ ಬರೆದಂತೆ ವರ್ಣಿಸಿದರು; “ನನ್ನ ನಾಲಿಗೆಯ ತುದಿಯು ಹಿಂತಿರುಗಿತು, ಮತ್ತು ಕಂಠದೊಳಗಿನ ಕಿರಿ ನಾಲಿಗೆಯ ಮೇಲೆ ತನ್ನಷ್ಟಕ್ಕೆ ಒತ್ತಿ ಕೂತಿತು. ಶ್ವಾಸ ಸ್ವಲ್ಪ ತಡೆಯಿತು, ಮತ್ತು ಲಕ್ಷವು ಒಳಗಿಂದ ಮೇಲೆ ಹೋಯಿತು. ಭ್ರೂಮಧ್ಯದಲ್ಲಿ ನಾನು ಸುದರ್ಶನ ಚಕ್ರವನ್ನು ನೋಡಿದೆ. ಅದು ಒಂದೇ ಸಮನೆ ದುಂಡಗ ತಿರುಗುತ್ತಿತ್ತು, ಮತ್ತು ಚಂದ್ರಜ್ಯೋತಿ ಅಥವಾ ಮಿಂಚಿನಂಥ ಪ್ರಕಾಶ ಕಾಣಿಸಿತು. ಮೂಲಾಧಾರದಲ್ಲಿ ಅಗ್ನಿಜ್ವಾಲೆಗಳು ಕಾಣಿಸಿದವು. ಮತ್ತು ನನ್ನ ಸರ್ವ ಶರೀರವು ತಪ್ತವಾಯಿತು. ನಾನು ಮೇಲೆ ಬರುವ ಯತ್ನ ಮಾಡಿದೆ, ಆದರ ಆದರದೇನೂ ಉಪಯೋಗವಾಗಲಿಲ್ಲ. ನಾನು ಪುನ: ಕೆಳಗೆ ಹೋದೆನು, ಅನಂತರ ನನಗೆ ಶೀತಲತೆಯು ಭಾಸವಾಯಿತು; ಮತ್ತೆ ಪುನ: ಉಷ್ಣತೆಯೂ ಭಾಸವಾಯಿತು; ಆ ಮೇಲೆ ನಾನು ಮತ್ತೊಮ್ಮೆ ಮೇಲೆ ಏರಹತ್ತಿದೆ. ಹ್ಯಾಗೆ ಹ್ಯಾಗೆ ಹತ್ತಿದೆ ಹಾಗೆ ಹಾಗೆ ತಣ್ಣಗಾಗುತ್ತ ಬಂತು, ಮತ್ತು ಕಂಠದೊಳಗಿನ ಕಿರಿನಾಲಿಗೆಯೊಳಗಿಂದ ಅಮೃತ ಬಿಂದುಗಳು ಸ್ರವಿಸುವದೂ ಅವನ್ನು ನಾನು ಕುಡಿಯುವದೂ ನನಗೆ ತಿಳಿಯಬಂತು. ಆ ಅಮೃತದ ರುಚಿಯು ಶಬ್ದಗಳಿಂದ ವರ್ಣಿಸಲಾಗದು. ಅದು ಬೇರೆ ಯಾವ ಪದಾರ್ಥದಂತಿದೆ ಎಂಬದು ಹೇಳಲಾಗದು. ಯೋಗಿಗಳು ಈ ಅಮೃತವನ್ನು ಸೇವಿಸುತ್ತಾ ಇರುತ್ತಾರೆ, ಎಂದು ಹೀಗೆ ಯೋಗ ಶಾಸ್ತ್ರಗಳಲ್ಲಿ ಹೇಳಿದೆ. ನನಗೆ ಅದರ ಪ್ರತ್ಯಕ್ಷ ಅನುಭವ ಬಂತು, ಎಂದು ನನಗೆ ಅತ್ಯಾನಂದವಾಯಿತು.”

ಉಪಾಧ್ಯೆ ಇದನ್ನು ವರ್ಣಿಸಿ ಹೇಳುವಾಗ್ಗೆ ಮಹಾರಾಜರು ಮಲಗಿದ್ದರು, ಅವರು ಕೂಡಲೇ ಎದ್ದರು, ಮತ್ತು ಉಪಾಧ್ಯೆಯವರಿಗಂದರು, " ಅಹೋ ವಿಠಲಾ, ಅಹೋ ಪಾಂಡುರಂಗಾ, ನೀವು ಏನು ನೋಡಿದಿರಿ, ನನಗೂ ಹೇಳಿರಿ? ಅಂದರೆ ನಾನು ಸಹ ನಿಮ್ಮ ಆನಂದದಲ್ಲಿ ಭಾಗ ತಕ್ಕೊಂಡೇನು, ಯಾರೂ ಇಂಥ ಅನುಭವ ಇತರರಿಗೆ ಹೇಳುವದಿಲ್ಲ, ಪ್ರತಿಯೊಬ್ಬರಿಗೆ ಈ ಆನಂದವೂ ತಮ್ಮಲ್ಲೇ ಸಿಗುತ್ತದೆ, ಮತ್ತು ತಮ್ಮಷ್ಟಕ್ಕೆ ಅದರ ಅನುಭವ ವನ್ನು ತಕ್ಕೊಳ್ಳಬೇಕು. ಪೂರ್ವಜನ್ಮದ ಸುಕೃತದಿಂದ ಯಾವನಾದರೂ ಒಬ್ಬ ಶಿಷ್ಯನು ತನ್ನ ಗುರು ಹೇಳಿದ ಪ್ರಕಾರ ದೃಢವಿಶ್ವಾಸದಿಂದ ಮತ್ತು ನಿಃಸ್ವಾರ್ಥ ಬುದ್ಧಿಯಿಂದ ಅಭ್ಯಾಸ ನಡಿಸುತ್ತ ಇದ್ದರೆ, ಪರಮಾರ್ಥದ ಕಡೇ ಧ್ಯೇಯವನ್ನು ಹೊಂದಲಿಕ್ಕೆ ಅವನು ಯೋಗ್ಯನಾದಾನು. ಆ ಮೇಲೆ ಅವನು ಪ್ರಪಂಚದೊಳಗೆ ತೊಡಕಿದ್ದರೂ ಅಡ್ಡಿ ಇಲ್ಲ. ತನ್ನೊಳಗಿನ ಆನಂದಮಯ ಸ್ಥಿತಿಯಲ್ಲಿಯೇ ಅವನು ನಿಮಗ್ನನಾಗುವನು.

ಆನಂತರ ಉಪಾಧ್ಯೆಯವರು ಮಹಾರಾಜರಿಗೆ ತಮ್ಮ ಅನುಭವಗಳನ್ನು ಹೇಳಿದರು ಮತ್ತು ಅಂದರು, " ಮಹಾರಾಜರೇ, ನೀವು ಮಲಗಿದ್ದಿಲ್ಲವಾದರೆ, ನಾನು ಬೇಗನೆ ದೇಹಭಾನದ ಮೇಲೆ ಬರುತ್ತಿದ್ದಿಲ್ಲ." ಆ ಮೇಲೆ ಎಲ್ಲರೂ ಎದ್ದು ಗೋದಾವರೀ ತೀರಕ್ಕೆ ತಿರುಗಾಡಲಿಕ್ಕೆ ಹೋದರು.

ಮರುದಿನ ಉಪಾಧ್ಯೆ ಇವರು ಮಹಾರಾಜರಕಡೆ ಬಂದು ಅಂದರು, "ಮಹಾರಾಜರೇ, ನಿನ್ನೆ ನಾನು ಬಹು ಕಷ್ಟದಿಂದ ಮನೆಗೆ ಹೋಗಿ ಮುಟ್ಟಿದೆನು. ಆನಂದದ ಲಹರಿಗಳು ಮೇಲಿಂದಮೇಲೆ ಏಳುತ್ತಿದ್ದವು. ಮತ್ತು ನಡೆಯುವಾಗ್ಗೆ, ಎಲ್ಲಾದರೂ ಬೀಳುವೆನೇನೊ ಎಂದು ಅಂಜಿಕೆ ಆಗುತ್ತಿತ್ತು." ಇತರ ಮಂದಿ ಇರುವಾಗ್ಗೆ ಅವರು ಹಿಂದಿನ ದಿವಸದ್ದೇ ಅನುಭವಗಳನ್ನು ಪುನ: ಹೇಳಿಹರು. ಉಪಾಧ್ಯೆಯವರು ತತ್ವಜ್ಞಾನದ ಕುರಿತು ಅನೇಕ ಗ್ರಂಥಗನ್ನು ಓದಿ ಅಧ್ಯಾತ್ಮದ ಸಂಬಂಧ ಉತ್ತಮ ವಿಚಾರ ಮಾಡಿದ್ದರಿಂದ, ಅವರ ಈ ಸ್ವಂತದ ಅನುಭವಗಳು ಜನರಿಗೆ ತಿಳಿಯುವಂತೆ ಸಾಧಾರಣ ಶಬ್ದಗಳಿಂದ ಚಲೋ ರೀತಿಯಿಂದ ಹೇಳಿದರು.

(೫೩) ಸೌ. ಗುಪ್ತೆ ಇವರ ಅರ್ಧಾಂಗವಾಯು :— ರಾವಸಾಹೇಬ ಶಂಕರ ಸೀತಾರಾಮ ಗುಪ್ತೆ ಪೆನ್ಶನರ ಇಂಜನಿಯರ ಇವರು ಸನ್ನ ೧೯೦೬ ನೇ ಇಸವಿಯಲ್ಲಿ ಮಹಾರಾಜರಿಗೆ ಭೆಟ್ಟಿಯಾದರು, ಧುಳೆಯಲ್ಲಿರುವಾಗ ಅವರು ಮಹಾರಾಜರ ಉಪದೇಶವನ್ನು ತಕ್ಕೊಂಡಿದ್ದರು. ಸೌ. ಆನಂದಿಬಾಯಿ ಆರೇಳು ತಿಂಗಳ ಲಾಗ್ಯಾತು ಅರ್ಧಾಂಗವಾಯು ಆಗಿ ಹಾಸಿಗೆಗೆ ಹತ್ತಿಕೊಂಡೇ ಇದ್ದರು. ಗುಪ್ತೆಯವರು ೧೯೦೭ನೇ ಸಾಲಿನಿಂದ ಮಹಾರಾಜರ ಸಹವಾಸದ ಲಾಭ ತಿಗಬೇ

ಕೆಂದು ನಾಶಿಕದಲ್ಲಿಯೇ ಇರುತ್ತಿದ್ದರು. ಆದರೆ ಅವರಿಗೆ ಮಹಾರಾಜರನ್ನು ತನ್ನ ಮನೆಗೆ ಕರಕೊಂಡು ಹೋಗಬೇಕೆಂಬ ವಿಚಾರವೇ ಸೂಚಿಸಲಿಲ್ಲ; ಯಾಕಂದರೆ ಪ್ರಾಪಂಚಿಕ ವಿಷಯದಲ್ಲಿ ಮಹಾರಾಜರಿಗೆ ತ್ರಾಸ ಕೊಡುವದು ನೆಟ್ಟಗಲ್ಲ, ಮತ್ತು ಅದೃಷ್ಟಕ್ಕನುಸರಿಸಿ ಪ್ರಾಪ್ತವಾದ ಕ್ಲೇಶವನ್ನು ತನ್ನ ತಾನೇ ಸಹಿಸತಕ್ಕದ್ದು, ಎಂದು ಹೀಗೆ ಅವರಿಗೆ ಅನಿಸುತ್ತಿತ್ತು. ಮನೆಯಲ್ಲಿ ಡಾಕ್ಟರ ಮಾವೂಸಕರ ಇವರ ಔಷಧೋಪಚಾರ ನಡೆಯುತ್ತಿದ್ದವು.

ಆದರೂ ಒಂದು ದಿನ ಗುಪ್ತೆಯವರು ಮಹಾರಾಜರನ್ನು ಕುರಿತು ಅಂದರು, “ ನನ್ನ ಪತ್ನಿಗೆ ಡಾಕ್ಟರರ ಔಷಧೋಪಚಾರ ಮಾಡಿ ಬೇಸತ್ತು ಹೋದೆನು. ನೀವು ಕೃಪೆ ಮಾಡಿ ಮನೆಗೆ ಬಂದು ಆಕೆಗೆ ಆಶೀರ್ವಾದ ಕೊಟ್ಟರೆ ಬಹಳ ಉಪಕಾರವಾದೀತು.” ಮಹಾರಾಜರಂದರು—“ರೋಗ ನೆಟ್ಟಗೆ ಮಾಡುವದು ಡಾಕ್ಟರ-ವೈದ್ಯರ ಕೆಲಸವು ನೀವು ಅಜ್ಞಾನಿ ಜನರು ಸಾಧುವಿನ ಆಶೀರ್ವಾದದಿಂದ ರೋಗ ಗುಣವಾಗಬೇಕೆಂತ ಇಚ್ಛಿಸುತ್ತೀರಿ. ಸಾಧುವಿನ ಆಶೀ-ರ್ವಾದದಿಂದ ರೋಗ ನೆಟ್ಟಗಾಗುತ್ತದೆ. ಆದರೆ ನಾನು ಅಂಥಪ್ರಕಾರದ ಸಾಧು ಅಲ್ಲ; ನಾನು ರೋಗ ಗುಣ ಮಾಡುವದಾದರೆ ನನ್ನ ಸ್ವತಃದ ರೋಗ ಗುಣ ಮಾಡುತ್ತಿದ್ದಿಲ್ಲೇನು ? ನಿಮಗೆ ಗೊತ್ತದೆ ಅಲ್ಲ; ನಾನು ತಿಂಗಳೊಳಗೆ ಇಪ್ಪತ್ತು ದಿನ ಅಸ್ವಸ್ಥನಾಗಿರುತ್ತೇನೆ. ಮತ್ತು ನಿಮ್ಮ ಕುಟುಂಬದ ವಯಸ್ಸು ಸದ್ಯಕ್ಕೆ ೬೦ ವರ್ಷ ಇರುವದರಿಂದ, ಇಂಥ ಪ್ರಕಾರದ ರೋಗ ಬರುವದು ಸ್ವಾಭಾವಿಕವಾಗಿದೆ.” ಮಹಾರಾಜರ ಈ ಶಬ್ದಗಳನ್ನು ಕೇಳಿ ಗುಪ್ತೆಯವರು ಈ ವಿಷಯವನ್ನು ಇಷ್ಟಕ್ಕೆ ಬಿಡಬೇಕು ಅಂತ ತಿಳಕೊಂಡರು. ಆದರೆ ಮಹಾರಾಜರು ತಮ್ಮ ವಿಚಾರವನ್ನು ಬದಲಾಯಿಸಿ, ಅವರ ಮನೆಗೆ ಬರುವದಕ್ಕೆ ಒಪ್ಪಿದರು, ನೇಮಿಸಿದಂತೆ ಮನೆಗೆ ಹೋದಮೇಲೆ, ಮಹಾರಾಜರು ಸೌ. ಗುಪ್ತೆಯವರನ್ನು ಕೈ ಹಿಡಿದು ನಿಂದಿರಿಸಿದರು, ಮತ್ತು ಅಂದರು, “ ಯಾತರ ಮೇಲೆ ಕೂತು ನೀವು ನಿತ್ಯ ಧ್ಯಾನ ಮಾಡುತ್ತೀರೋ, ಅದೇ ಸ್ಥಳದಲ್ಲಿ ನೀವು ನಿಂತಿರುವಾಗ ಧ್ಯಾನ ಮಾಡಿರಿ, ಮತ್ತು ನಿಮ್ಮ ಎಲ್ಲ ಇಂದ್ರಿಯಗಳಕಡೆ ಮನಸ್ಸು ಹಚ್ಚಿ ಜಪ ಸುರು ಮಾಡಿರಿ.” ಇದನ್ನು ಕೇಳಿ ಆನಂದಿಬಾಯಿಯವರಿಗೆ ಅತ್ಯಾನಂದವಾಯಿತು. ಮಹಾರಾಜರು ಊರೊಳಗೆ ಇದ್ದರೂ ಆರು ತಿಂಗಳ ತನಕ ಅವರ ದರ್ಶನವಿಲ್ಲದೆ ಈಗ ದರ್ಶನದ ಯೋಗವನ್ನು ಪರಮೇಶ್ವರನೇ ತಂದನೆಂದು ಅವರಿಗೆ ಖಾತ್ರಿಯಾಯಿತು. ಅವರು ಮಹಾರಾಜರು ಹೇಳಿದಂತೆ ಮಾಡಿದ ಮೇಲೆ ಎರಡು ಮೂರು ಹೆಜ್ಜೆ ಇಡಲಿಕ್ಕೆ ಶಕ್ಯವಾಯಿತು. ಹೀಗೆ ಎರಡು ಮೂರು ತಾಸು ಅವಧಿಯಲ್ಲಿ ಅವರು ಎರಡು ಮೂರು ಸಲ ಮಾಡಿದರು. ನಂತರ ಅವರು ಮನೆಯೊಳಗೆ ಹೋದರು ಮತ್ತು ಹೊರಗೆ ಬಂದರು. ಒಂದೆರಡು ದಿನಗಳೊಳಗೆ ಅವರಿಗೆ ಪೂರ್ಣ ನೆಟ್ಟಗಾಯಿತು, ಅವರಿಗೆ ಅರ್ಧಾಂಗವಾಯು ಎಂದೂ ಆಗಲಿಲ್ಲ

ವಂಬಂತೆ ಕಾಣಹತ್ತಿತು. ಯಾವ ಡಾಕ್ಟರರ ಔಷಧ ನಡೆದಿತ್ತೋ, ಅವರಿಗೆ ಇದು ಕೇಳಿದಾಗ ಬಹಳ ಆಶ್ಚರ್ಯವಾಯಿತು.

(೫೪) **ಶ್ರೀ ಭಾವೆ :—** ಶ್ರೀ ಭಾವೆ ಎಂಬ ಹೆಸರಿನ ಇಲೆಕ್ಟ್ರಿಕಲ್ ಇಂಜನಿಯರರು ಪೆನಶನ್ ತಕ್ಕೊಂಡ ಮೇಲೆ ನಾಗಪುರದಲ್ಲಿ ಇರುತ್ತಿದ್ದರು. ಅಲ್ಲಿ ಅವರ ಸ್ವಂತದ ಮನೆ ಇದೆ. ಇವರು ಕುಲೀನ ಮನೆತನದ ಕೊಂಕಣಸ್ಥ ಬ್ರಾಹ್ಮಣರು; ಇವರು ತಂತಿ ಖಾತೆಯಲ್ಲಿ ಇಂಜನಿಯರ ಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸದ ಸಂಬಂಧ ಅವರು ಫಿರತಿ ಮೇಲೆ ಇರುವಾಗ, ಪೂರ್ವ ಜನ್ಮದ ಪುಣ್ಯದಿಂದ ಅವರಿಗೆ ಅನೇಕ ಸಾಧುಸಂತರ ದರ್ಶನವಾಯಿತು. ಈ ಮೂಲಕ ಮತ್ತು ಸ್ವಾಭಾವಿಕವಾಗಿಯೂ ಅವರು ಸ್ನಾನ ಸಂಧ್ಯಾ ಪೂಜಾ ವಗೈರೆ ನಿತ್ಯ ಕರ್ಮಗಳನ್ನು ಮಾಡುತ್ತಿದ್ದರು. ವಿಶೇಷ ಕರ್ಮನಿಷ್ಠರಿದ್ದು ಅವರಿಗೆ ಈಶ್ವರನಮೇಲೆ ಧೃಡ ವಿಶ್ವಾಸವಿತ್ತು. ಅವರಿಗೆ ವೇದಾಂತದ್ದು ಒಳ್ಳೇ ಜ್ಞಾನ ವಿದ್ದು ಅಧ್ಯಾತ್ಮ ವಿಷಯದಲ್ಲಿಯೂ ಅವರು ಒಳ್ಳೇ ಅಭ್ಯಾಸ ಮಾಡಿದ್ದರು. ಅವರು ವಿನೋದಿ ಇದ್ದು ಸ್ವಲ್ಪ ಗಡಿಬಿಡಿಯುವರಾದ್ದರಿಂದ ಮನಸ್ಸಿನ ಚಂಚಲತ್ವವು ಬಹು ಬೇಗನೇ ಆಗುತ್ತಿತ್ತು. ಆದರೆ ಸತ್ವ ಗುಣದ ಪ್ರಾಬಲ್ಯ ಅಧಿಕವಾದ್ದರಿಂದ ಇತರ ನ್ಯೂನತೆಗಳೆಲ್ಲ ಮರೆಯಾಗುತ್ತಿದ್ದವು. ಎರಡನೇಯವರ ಅಂಬೋಣವೇನು ಎಂದು ಅವರು ಕೇಳಿಕೊಳ್ಳುತ್ತಾರೆ. ಆ ಮೇಲೆ ಅದರ ವಿಚಾರ ಮಾಡುತ್ತಾರೆ. ಮತ್ತು ತನ್ನ ತಪ್ಪಿದ್ದರೆ; ಅದನ್ನು ಕಬೂಲ ಮಾಡುತ್ತಾರೆ. ಇತರ ವೇದಾಂತಿಗಳಂತೆ ತನ್ನದೆ ಖರೇ ಅಂತ ಹಟ ಹಿಡಿಯುವದಿಲ್ಲ. ಭಾವೆಯವರದು ಶ್ರೀ ಗುಲಾಬರಾವ ಮಹಾರಾಜರ ಕೂಡ ಹದಿನಾಲ್ಕು ವರ್ಷ ತನಕ ಸಮೀಪದ ಸಂಬಂಧವಿತ್ತು. ಈ ವಿಭೂತಿಯ ( ಮಹಾರಾಜರ ) ಸಹವಾಸದ ಲಾಭದ್ದೆಶೆಯಿಂದ ಅವರ ಚಿತ್ತ ಶುದ್ಧಿಯಾಯಿತು. ಪ್ರಸ್ತುತ ಕಾಲದಲ್ಲಿ ಹೋದ ಆರೇಳು ವರ್ಷಗಳು ಅವರು ನಾಶಿಕದಲ್ಲಿ ಶ್ರೀ ಶಂಕರಾಚಾರ್ಯರ ಮಠದಲ್ಲಿ ಭಾಡಿಗೆ ಸ್ಥಳದಲ್ಲಿ ವಾಸಿಸುತ್ತಾರೆ ಅವರಿಗೆ ಪರಮಾರ್ಥ ವಿಷಯದ ಪ್ರೀತಿ ಇದ್ದುದರಿಂದ ರಾ. ಭಾಗವತ ಇವರ ಹೇಳಿಕೆ ಪ್ರಕಾರ ಆರು ವರ್ಷಗಳಿಂದ ಸಾಕೋರಿಯ ಶ್ರೀ ಉಪಾಸನಿ ಮಹಾರಾಜರ ಕಡೆ ಹೋಗುತ್ತಿದ್ದರು. ರಾ. ಭಾಗವತರಾದರೂ ಈಗ ಹತ್ತು ವರ್ಷಗಳಿಂದ ಸಾಕೋರಿಗೆ ಹೋಗುತ್ತಿದ್ದರು. ೨-೩ ವರ್ಷಗಳ ಹಿಂದೆ ಇವರೂ ಪೆನಶನ್ ತಕ್ಕೊಂಡಿದ್ದಾರೆ. ಮೊದಲು ಅವರು ಮುಂಬೈಯ ಸರಕಾರ ಖಾತೆಯೊಳಗೆ ಸುಪರಿಂಟೆಂಡೆಂಟರಾಗಿದ್ದರು. ಭಾವೆಯವರು ಭಾಗವತರಿಗೆ ಪತ್ರ ಬರೆದು ಶ್ರೀ ಗಜಾನನ ಮಹಾರಾಜರ ವಿಷಯ ತಿಳಿಸಿದರು, ಮತ್ತು ನಾಶಿಕಕ್ಕೆ ಬರಲಿಕ್ಕೆ ಬರೆದರು. ಆ ಪ್ರಕಾರ ಅವರು ನಾಶಿಕಕ್ಕೆ ಬಂದು ಗಜಾನನ ಮಹಾರಾಜರ ಅನುಗ್ರಹ ತಕ್ಕೊಂಡರು ಭಾವೆಯವರು ಇದಕ್ಕೂ ೬ ತಿಂಗಳ ಮೊದಲೇ ಗಜಾನನ ಮಹಾರಾಜರ ಅನುಗ್ರಹವನ್ನು ತಕ್ಕೊಂಡಿದ್ದರು.

ಭಾವೆಯವರಿಗೆ ಶ್ರೀ ಉಪಾಸನೀ ಮಹಾರಾಜರ ಸಹವಾಸವಾಗಿದ್ದರೂ, ಮತ್ತು ಆ ಮೂಲಕ ಸ್ನಾನ-ಸಂಧ್ಯಾ, ಭಜನ ಪೂಜಾದಿಗಳನ್ನು ಮಾಡುತ್ತಿದ್ದರೂ, ಅವರಿಗೆ ಮನಸಿನ ಸ್ವಾಸ್ಥ್ಯ ದೊರಕಿದ್ದಿಲ್ಲ.

ಸನ್ ೧೯೩೩ನೇ ಇಸವಿಯಲ್ಲಿ ಭಾವೆಯವರಿಗೆ ಅವರೊಬ್ಬ ಮಿತ್ರನ ಕಡೆಯಿಂದ ಶ್ರೀ ಗಜಾನನ ಮಹಾರಾಜರ ವಿಷಯ ಗೊತ್ತಾಯಿತು. ಅವರ ಆ ಮಿತ್ರರು ಕಲ್ಯಾಣದಲ್ಲಿ ಇರುತ್ತಿದ್ದು, ಅವರಿಂದ ಭಾವೆಯವರಿಗೆ ಒಂದು ಪತ್ರ ಬಂತು. ಅದರಲ್ಲಿ ಅವರು "ನೀವು ನಾಶಿಕದಲ್ಲೇ ಇದ್ದು ಶ್ರೀ ಗಜಾನನ ಮಹಾರಾಜರ ವಿಷಯ ಹ್ಯಾಗೆ ಗೊತ್ತಾಗಲಿಲ್ಲ" ಎಂದು ಆಶ್ಚರ್ಯ ಪ್ರಕಟ ಮಾಡಿದ್ದು, ಮತ್ತು ಮಹಾರಾಜರ ಸಮಾಚಾರವನ್ನೆಲ್ಲ ತಿಳಕೊಂಡು ಅವರಕಡೆ ಹೋಗಲಿಕ್ಕೆ ಬಹಳ ಆಗ್ರಹಪೂರ್ವಕ ಬರೆದಿತ್ತು. ಇದೇ ಮಿತ್ರನಕಡೆಯಿಂದ ಭಾವೆಯವರಿಗೆ ೨-೩ ಪತ್ರಗಳು ಹೀಗೆಯೇ ಬಂದ ಮೇಲೆ ಅವರಿಗೆ ಮಹಾರಾಜರಕಡೆ ಹೋಗುವ ವಿಚಾರ ಉತ್ಪನ್ನವಾಯಿತು. ಒಂದು ದಿನ ಅವರು ಮಹಾರಾಜರ ಮನೆಯನ್ನು ಹುಡುಕಿ ತೆಗೆದು ಮಧ್ಯಾಹ್ನ ವೇಳೆಗೆ ಹೋದರು.

ಭಾವೆಯವರು ಮಹಾರಾಜರಿಗೆ ನಮಸ್ಕಾರ ಮಾಡಿದರು. ಮಹಾರಾಜರು ಅವರಿಗೆ "ನೀವು ಯಾರು? ಎಲ್ಲಿಂದ ಬಂದಿರಿ? ಇಲ್ಲಿಗೆ ಹ್ಯಾಗೆ ಬಂದಿರಿ?" ಇತ್ಯಾದಿ ಪ್ರಶ್ನೆ ಮಾಡಿದರು. ಭಾವೆಯವರು ಸರಳತನದಿಂದ ಇವಕ್ಕೆ ಉತ್ತರ ಕೊಟ್ಟರು, ಮತ್ತು ತನ್ನ ಎಲ್ಲ ವಿಷಯ ಹೇಳಿದರು; ಮತ್ತು ಅಂದರು:— ಮಹಾರಾಜರೇ ನೀವು ನನ್ನನ್ನು ತಮ್ಮ ಆಶ್ರಯದಲ್ಲಿ ತಕ್ಕೊಂಡು ನನಗೆ ಯೋಗವನ್ನು ಕಲಿಸಿರಿ." ಪ್ರಥಮದಲ್ಲಿ ಮಹಾರಾಜರು ಹಾರಿಸಿ ಬಿಡುವ ಉತ್ತರಗಳನ್ನು ಕೊಟ್ಟರು. ಆದರೆ ಭಾವೆಯವರು ದಿನಾಲು ಮಹಾರಾಜರಕಡೆ ಹೋಗಹತ್ತಿದರು. ಕಡೆಗೆ ಮಹಾರಾಜರು ಅವರಿಗೆ ಉಪದೇಶ ಕೊಟ್ಟರು.

ಭಾವೆಯವರಿಗೆ ಉಪದೇಶ ಕೊಡುವ ಮೊದಲು ಶ್ರೀ ಉಪಾಸನೀ ಮಹಾರಾಜರ ವಿಷಯ ಹೊರಟಾಗ್ಗೆ ಮಹಾರಾಜರಂದರು: "ಉಪಾಸನೀ ಮಹಾರಾಜರು ಏನು ನಿಮಗೆ ಹೇಳಿದ್ದಾರೋ ಅದನ್ನು ಸಹ ಮಾಡುತ್ತ ಹೋಗಿರಿ. ಯಾಕಂದರೆ ಅವರು ಸಂತರಿದ್ದಾರೆ, ಆದರೆ ನಾನು ಮಾತ್ರ ಸಂತನಲ್ಲ. ನಾನು ಹ್ಯಾಗೆ ಎರಡನೇಯವರಿಗೆ ಹೇಳುತ್ತೇನೆ ಹಾಗೆಯೆ ನಿಮಗೆ ಮಿತ್ರತ್ವದ ಸಂಬಂಧದಿಂದ ಹೇಳುತ್ತೇನೆ. ಅವರು ಹ್ಯಾಗ ಆನಂದದ ಉಪಭೋಗ ತಕ್ಕೊಳ್ಳುತ್ತಾರೋ ಹಾಗೆಯೇ ನೀವಾದರೂ ತಕ್ಕೊಳ್ಳಿರಿ. ಮುಖ್ಯ ಸಂಗತಿ ಇಷ್ಟೇ ಅಲ್ಲ; ನೀವು ಸತತ ಅಭ್ಯಾಸ ಮಾಡಿರಿ. ನೀವು ನಿಮ್ಮ ನಿರ್ಣಯನ್ನು ಅನುಭವದಿಂದಲೇ ಮಾಡಿಕೊಳ್ಳಬೇಕು. ಜಗತ್ತಿನೊಳಗಿನ ಎಲ್ಲ ಸಂತರೂ ನನಗೆ ಪೂಜ್ಯರಿದ್ದಾರೆ. ಆದರೆ ಈಗ ಢೋಂಗೀ ಸಾಧುಗಳೇ ಭರಭರಾಟಿಯಲ್ಲಿದ್ದಾರೆ, ಈ ನಕಲೀ ಸಾಧುಗಳು

ಪ್ರಾಚೀನ ಸಾಧುಗಳ ವಚನಗಳ ಆಧಾರ ಮೇಲಿಂದ ತಮ್ಮ ಶಿಷ್ಯರಿಗೆ ಹೇಳು- ತ್ತಾರೆ. ಚಮತ್ಕಾರಕ್ಕೆ ಏನೂ ಕಿಮ್ಮತಿಲ್ಲ. ಖರೇ ಸಾಧುಗಳು ಎಂದೂ ಚಮ ತ್ಕಾರ ಮಾಡಿ ತೋರಿಸುವದಿಲ್ಲ. ನಾವು ಖರೇ ಸಾಧುಗಳು, ಚಮತ್ಕಾರಗಳ ಆಚೆಕಡೆಯುವರಿದ್ದೇವೆ. ಖರೇ ಸಾಧುಗಳು ಚಮತ್ಕಾರದ ಪ್ರದರ್ಶನ ಎಂದೂ ಮಾಡುವದಿಲ್ಲ." ಈ ಶಬ್ದಗಳಿಂದ ತಮ್ಮ ಶಿಷ್ಯರಿಗೆ ಮೋಹಿಸಿ, ತಮ್ಮ ದಾಂಭಿ ಕತ್ವ ಮತ್ತು ಅಪಾತ್ರತೆಯನ್ನು ಅಡಗಿಸುತ್ತಾರೆ. ಖರೇ ಸಂಗತಿ ಹೀಗದೆ, ಖರೇ ಸಾಧುಗಳು ಚಮತ್ಕಾರಗಳನ್ನು ನಿರರ್ಥಕವೆಂತ ತಿಳಿದರೂ, ಯೋಗ್ಯ ಸಂಧಿ ಪ್ರಾಪ್ತವಾಯಿತೆಂದರೆ ಅವರ ಕೈಯಿಂದ ಚಮತ್ಕಾರಗಳು ತಮ್ಮಷ್ಟಕ್ಕೆ ಸಂಭವಿ ಸುತ್ತವೆ. ಚಮತ್ಕಾರಗಳು ಪಾರಮಾರ್ಥಿಕ ಮಾರ್ಗದೊಳಗಿನ ಮೊದಲಿನ ಮೆಟ್ಟಿಲುಗಳವೆ. ಅವುಗಳಿಂದ ಮುಮುಕ್ಷುವು ಮೋಹಿಸಬಾರದು, ಮತ್ತು ಪಾರ ಮಾರ್ಥಿಕ-ಮಾರ್ಗದಿಂದ ತನ್ನ ಲಕ್ಷ ಅಗಲಾಡಗೊಡಬಾರದು. ಇಷ್ಟೇ ಖರೇ ಸಂತರು ಹೇಳುವದಿರುತ್ತದೆ.

ಈ ಮಾತು ಆದಮೇಲೆ, ಮಹಾರಾಜರು ಭಾವೆಯವರಿಗೆ ಕೇಳಿದರು, "ನೀವು ಪರಮಾರ್ಥ ಸಂಬಂಧ ಪ್ರತ್ಯೇಕ ಏನು ಮಾಡುತ್ತಿರುತ್ತೀರಿ?" ಭಾವೆ ಯವರೆಂದರು, ಉಪಾಸನಿ ಮಹಾರಾಜರ ಆಜ್ಞೆಯ ಮೇರೆಗೆ ನಾನು ಸ್ನಾನ ಸಂಧ್ಯಾ ಮಾಡಿ, ವಿಷ್ಣು ಸಹಸ್ರನಾಮ ಗೀತೆಯ ೧೫ನೇ ಅಧ್ಯಾಯ, ಗಣಪತಿ ಅಥರ್ವಶೀರ್ಷ ವ ಸೂರ್ಯ ಸೂಕ್ತ ಅನ್ನುತ್ತಿರುತ್ತೇನೆ. ಮತ್ತು ಗಣಪತಿಯ ಅಥರ್ವಶೀರ್ಷದ ಇಪ್ಪತ್ತೊಂದು ಆವರ್ತನೆಮಾಡಿ ಗಣಪತಿಪೂಜೆಯನ್ನು ಮಾಡು ತ್ತೇನೆ ಅಂಥ ಕಾಲಕ್ಕೂ ಮೊದಲು ನಿನಗೆ ಗಣಪತಿಯ ಪ್ರತ್ಯಕ್ಷ ದರ್ಶನ ವಾವೀತು ಎಂದು ಉಪಾಸನೀ ಮಹಾರಾಜರು ನನಗೆ ನಿಶ್ಚಯಾತ್ಮಕವಾಗಿ ಹೇಳಿದ್ದಾರೆ.

ಅನಂತರ ದತ್ತ ಜಯಂತಿಯ ದಿವಸ ಭಾವೆಯವರು ಪೇಢೆ ವ ಪುಷ್ಪಾ ಹಾರವನ್ನು ತಕ್ಕೊಂಡು ಬಂದರು, ಮತ್ತು ಶಾಸ್ತ್ರದೊಳಗಿನ ಕೆಲವು ಸಂಗತಿ ಗಳನ್ನು ಹೇಳಿ ಅಂದರು, "ಇವತ್ತು ಶ್ರೀ ದತ್ತಜಯಂತಿ ದಿವಸವದೆ, ಶಾಸ್ತ್ರದಲ್ಲಿ ಇದು ಶುಭದಿನವೆನಿಸಿಕೊಳ್ಳುತ್ತದೆ. ಆದ್ದರಿಂದ ಇವತ್ತು ನನಗೆ ಉಪದೇಶ ಕೊಟ್ಟು ಕೃತಾರ್ಥ ಮಾಡಿರಿ.

ಮಹಾರಾಜರು:— ನೀವು ಹೇಳುವದು ಶಾಸ್ತ್ರ ದೃಷ್ಟಿಯಿಂದ ಖರೇ ಯದೆ. ಆದರೆ ಸಂತರಿಗೆ ಎಲ್ಲ ದಿನಗಳೂ ಶುಭವಾಗಿರುತ್ತವೆ. ಅವರು ಶುಭಾ- ಶುಭ ದಿನಗಳು ಅಥವಾ ವೇಳೆ ನೋಡುವದಿಲ್ಲ. ಇದರ ಅರ್ಥ ಹೀಗಲ್ಲವಲ್ಲ; ನಾನು ದೊಡ್ಡ ಸಂತನಿದ್ದೇನೆ. ನೀವು ನನ್ನ ತಂದೆಯವರಂತೆ ಇದ್ದೀರಿ, ನಾನೇ ನಿಮ್ಮ ಕಡೆಯಿಂದ ಕಲಿತುಕೊಂಡೇನು. ಖರೇ ಜ್ಞಾನವು ನಿಜವಾಗಿ ತನ್ನಲ್ಲೇ ಇರುವದು.

ಆದರೆ ಅದರ ತಿಳುವಳಿಕೆ ತನಗಿರುವದಿಲ್ಲ. ಅದು ತನ್ನಷ್ಟಕ್ಕೆ ನಿಮ್ಮಲ್ಲಿ ಪ್ರಕಟವಾದೀತು. ಆ ಮೇಲೆ ನನಗೆ ಹೇಳಿರಿ."

ಮಹಾರಾಜರು ಅವರಿಗೆ ಗುರುವಾರ ದಿನ ಬರಲಿಕ್ಕೆ ಹೇಳಿದರು. ಮತ್ತು ತನ್ನ ಗುರು ತನಗೆ ಏನು ಹೇಳಿದ್ದು ಅದೆಯೋ ಅದನ್ನೆಲ್ಲ ಅವರಿಗೆ ಹೇಳುವೆನೆಂತ ಅಭಿವಚನ ಕೊಟ್ಟರು.

ಮರುದಿವಸ ಮಹಾರಾಜರು ಭಾವೆಯವರಿಗೆ ತಮ್ಮ ಎದುರಿಗೆ ಧ್ಯಾನಕ್ಕೆ ಕೂಡ್ರಲಿಕ್ಕೆ ಹೇಳಿ ನೆಟ್ಟಗೆ ಕೂತು ಮನಸ್ಸು ಏಕಾಗ್ರ ಮಾಡಲಿಕ್ಕೆ ಹೇಳಿದರು. ಸುಮಾರು ಹತ್ತು ಮಿನಿಟುಗಳಲ್ಲಿ ಅವರ ಸಂಕಲ್ಪ ವಿಕಲ್ಪಗಳು ನಿಂತವು. ಇದನ್ನು ಅವರು ಮಹಾರಾಜರಿಗೆ ಹೇಳಿದರು, ಆಗ ಮಹಾರಾಜರು "ನಿಮ್ಮ ವಿಚಾರಗಳನ್ನು ನಾನು ನನ್ನ ಸ್ವಾಧೀನ ತಕ್ಕೊಂಡಿದ್ದೇನೆ." ಎಂದಂದರು. ಆ ಹೊತ್ತಿನಿಂದ ಅವರ ನಿತ್ಯದ ಅಭ್ಯಾಸದಲ್ಲಿ ಮನಸ್ಸು ಏಕಾಗ್ರವಾಗಹತ್ತಿತು.

ಗುರುವಾರ ದಿನ ಅವರು ಪುನಃ ಮಹಾರಾಜರಕಡೆ ಬಂದರು. ಅವರ ನಿಷ್ಠೆಯನ್ನು ಕಂಡು ಮಹಾರಾಜರು ಅವರಿಗೆ "ಸೋಹಂ" ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು. ಮತ್ತು ಧ್ಯಾನದ ಅಭ್ಯಾಸ ಮಾಡಲಿಕ್ಕೂ ಹೇಳಿದರು, ಭಾವೆಯವರು ದೃಢಭಕ್ತಿಯಿಂದ ಮತ್ತು ಏಕಾಗ್ರತೆಯಿಂದ ಧ್ಯಾನದ ಅಭ್ಯಾಸ ಶುರು ಮಾಡಿದರು; ಅದರಲ್ಲಿ ಅವರು ಒಮ್ಮೆಗೇ ನಿಮಗ್ನರಾದರು. ಅವರು ಮಾನಸಪೂಜಾ ಮಾಡುತ್ತಿರುವಾಗ ಅವರ ಮುಂದೆ ಅವರಿಗೆ ಮಹಾರಾಜರು ಕಾಣಿಸಿದರು. ಮತ್ತು ಅವರ ಎಲ್ಲ ಶಂಕೆಕುಶಂಕೆಗಳನ್ನು ನಿವಾರಿಸಿ ಸರ್ವ ವಿಷಯಗಳನ್ನು ಪುರಾವೆ ಸಹಿತ ಹೇಳಿಕೊಟ್ಟರು.

ಇತರ ಶಿಷ್ಯರಂತೆ ನನಗೆ ಪ್ರಕಾಶ ಕಾಣುವದಿಲ್ಲವೆಂತ ಅವರ ನಿತ್ಯದ ತಕರಾರು ಇತ್ತು, ಮಹಾರಾಜರು ಉತ್ತರ ಕೊಟ್ಟರು, "ನೀವು ನಿಮ್ಮ ಮಾರ್ಗದಿಂದ ನಡೆಯಿರಿ. ಮತ್ತು ಅದರಲ್ಲಿ ಯಾವ ಅನುಭವಗಳು ಬರುತ್ತವೆ ಅವನ್ನು ನೋಡಿರಿ. ನೀವು ಇತರರ ಅನುಭವಗಳನ್ನು ನೋಡುವದಾದರೆ ಮತ್ತು ಶಾಸ್ತ್ರದಲ್ಲಿ ಏನದೆ ಎಂಬದರ ವಿಚಾರ ಮಾಡಲಿಕ್ಕೆ ಹೋಗುವದಾದರೆ, ತೊಂದರೆಯೊಳಗೆ ಬೀಳುವಿರಿ. ಬೇರೆ ಬೇರೆ ಜನರಿಗೆ ಬೇರೆ ಬೇರೆ ಅನುಭವಗಳು ಬರುತ್ತವೆ. ಕೆಲವರಿಗೆ ಬೇರೆ ಬೇರೆ ನೋಟಗಳು ಕಾಣಿಸುತ್ತವೆ. ಮತ್ತು ಕೆಲವರಿಗೆ ನಾನಾ ಧ್ವನಿಗಳು ಕೇಳಿಸುತ್ತವೆ. ಸದ್ಗುರುವಿನ ಮಾರ್ಗದ ಗುಟ್ಟು ಒಮ್ಮೆಲೇ ತಿಗಲಾರದು. ಅದು ಬಹಳ ಗಹನವಾಗಿರುತ್ತದೆ. ಕೆಲವರಿಗೆ ನಾನಾತರದ ಸುವಾಸಗಳು ಬರುತ್ತವೆ. ಕೆಲವರ ಶರೀರದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಪ್ರಾಣವಾಯುವಿನ ಆಕುಂಚನ ಪ್ರಸರಣಾದಿಗಳು ಆಗುತ್ತವೆ. ಕೆಲವರಿಗೆ ಷಟ್ಚಕ್ರ ಭೇದನ ಮಾಡಬೇಕಾಗುತ್ತದೆ. ಬೇರೆ ಬೇರೆ ಸಾಧುಗಳಿಗೆ ಬೇರೆ ಬೇರೆ ಅನುಭವಗಳು

ಬಾರುತ್ತವೆ." ಈ ಭಾಷಣದನಂತರ ಭಾವೆಯುವರು ನಿಃಶಂಕರಾಗಿ ತಮ್ಮ ಅಭ್ಯಾಸ ವನ್ನು ಶುರು ಮಾಡಿದರು.

ಕೆಲವು ತಿಂಗಳ ಹಿಂದೆ ಭಾವೆಯುವರು ಮನೆಯಲ್ಲಿ ಕೂತಿರುವಾಗ್ಗೆ, ಒಂದು ಕ್ಷಣಮಾತ್ರ ಅವರ ಕಣ್ಣುಗಳು ಮುಚ್ಚಿದವು, ಮತ್ತು ಗಜಾನನ ಮಹಾರಾಜರು ಸಮೀಪ ನಿಂತಿರುವದನ್ನು ಕಂಡರು; ಇದು ಏನೂ ಭ್ರಮೆ ಅಲ್ಲ. ಪ್ರತ್ಯಕ್ಷ ಸಂಭವಿಸಿದ ವಿಷಯವಾಗಿದೆ, ಆ ಸಮಯದಲ್ಲಿ ಬರೀ ಮಹಾರಾಜರ ಆಕಾರವನ್ನು ಪ್ರಕಾಶ ರೂಪವಾಗಿ ಕಂಡರು. ಭಾವೆಯುವರು ತಮ್ಮ ಧ್ಯಾನಾಭ್ಯಾಸವನ್ನು ಒಳ್ಳೇ ಶ್ರದ್ಧೆಯಿಂದ ಮತ್ತು ಆತ್ಮ ವಿಶ್ವಾಸದಿಂದ ನಡಿಸಿದರು. ಆ ಮೂಲಕ ಅವರಿಗೆ ಶರೀರದೊಳಗೆ ಅನೇಕ ಆಶ್ಚರ್ಯಕಾರಕ ಸಂಗತಿಗಳು ಸಂಭವಿಸಿದ್ದು ಕಾಣಬಂದವು. ತನ್ನ ಶರೀರವು ಹೂವಿನಂತೆ ಹಗುರಾಗಿ, ಹವೆಯಲ್ಲಿ ತೇಲುವದೇನೋ ಎಂಬಂತೆ ಕಾಣಿಸಿತು. ಶಕ್ತಿಯು ತನ್ನಷ್ಟಕ್ಕೆ ಅಧಿಕವಾಗುತ್ತ ನಡೆದದೆ ಅಂತ ಅನಿಸುತ್ತಿತ್ತು. ಅವರು ಒಮ್ಮೆ ಕೂತಾಗ್ಗೆ ಬಹಳ ಹೊತ್ತು ತನಕ ಅಧಿಕಾಧಿಕ ಏಕಾಗ್ರತೆಯಿಂದ ಧ್ಯಾನ ಮಾಡಲಿಕ್ಕೆ ಆರಂಭಿಸಿದರು. ಅವರು ಧ್ಯಾನಕ್ಕೆ ಪದ್ಮಾಸನ ಹಾಕಿ ಕೂಡ್ರುತ್ತಾರೆ, ಮತ್ತು ಹಾಗೆ ಕೂತ ಮೇಲೆ ದೇಹಭಾನ ಕಮ್ಮಿ ಕಮ್ಮಿ ಆಗುತ್ತಾ, ಅವರ ಅವಯವಗಳು ಆಕುಂಚನ ಆದಂತೆ ಜನರಿಗೆ ಸ್ಪಷ್ಟ ಕಾಣಿಸುತ್ತದೆ. ತನ್ನ ಶರೀರ ಅರಳೆಯಂತೆ ಹಗುರಾಗಿದೆ. ದೊಡ್ಡ ಗಾಳಿ ಬಂತೆಂದರೆ ತಾನು ಹಾರಿ ಹೋಗುವೆನೇನೋ ಎಂಬವಾಗಿ ಅವರಿಗೆ ಭೀತಿಯಾಗುತ್ತಿತ್ತು. ಅವರ ದೃಢ ವಿಶ್ವಾಸಯುಕ್ತ ಸ್ಥಿರಬುದ್ಧಿಯಿಂದ ನಡಿಸಿದ ಅಭ್ಯಾಸ ಮತ್ತು ಪೂರ್ವ ಜನ್ಮದ ಪುಣ್ಯ ಇವುಗಳದೆಶೆಯಿಂದ ಅವರು ಮಹಾರಾಜರ ಪೂರ್ಣ ಕೃಪೆಯನ್ನು ಸಂಪಾದಿಸಿದ್ದಾರೆಂಬದು ಸ್ಪಷ್ಟವಾಗುತ್ತಿತ್ತು. ಗುರುಕೃಪೆಯ ವಿನ: ಕೇವಲ ಸ್ವಪ್ರಯತ್ನದಿಂದ ಅಂಥ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುವದು ಯಾರಿಗೂ ಸಾಧ್ಯವಿಲ್ಲ. ಇಂಥ ಸ್ಥಿತಿಯನ್ನು ಯಾವನಾದರೂ ಸ್ವಪ್ರಯತ್ನದಿಂದ ಅಸಹಾಯನಾಗಿ ಪ್ರಾಪ್ತ ಮಾಡಿಕೊಳ್ಳುವೆನೆಂತ ಅಂದರೆ, ಅದು ತಪ್ಪು ತಿಳುವಳಿಕೆ ಎಂದು ಅವನಿಗೆ ತಿಳಿದು ಬಂದೀತು.

(೫೫) **ಘಾಣೇಕರ ಕೂಸು:—** ನಾಶಿಕದ ದತ್ತೋಪಂತ ಘಾಣೇಕರ ಇವರು ಹದಿನಾಲ್ಕು ವರ್ಷ ಆಗ್ಯಾತು ಮಹಾರಾಜರಿಗೆ ನಿಕಟ ಸಂಬಂಧ ಮಾಡಿಕೊಂಡಿದ್ದರು. ಇವರು ಮಹಾರಾಜರ ದರ್ಶನವನ್ನು ಆಗಾಗ್ಗೆ ತಕ್ಕೊಳ್ಳುತ್ತಾರೆ. ಮಹಾರಾಜರು ಅವರಿಗೆ ಒಮ್ಮೊಮ್ಮೆ ಬೈಯ್ಯುತ್ತಾರೆ. ಆದರೆ ಅದರಿಂದ ಘಾಣೇಕರರ ಮೇಲೆ ಏನೊಂದೂ ಪರಿಣಾಮ ಆಗುತ್ತಿದ್ದಿಲ್ಲ. ಮತ್ತು ದರ್ಶನ ತಕ್ಕೊಳ್ಳುವದೂ ಅವರು ಬಿಡಲಿಲ್ಲ. ಇಷ್ಟೇ ಅಲ್ಲ, ಅವರಿಗೆ ಮಹಾರಾಜರ ಮೇಲೆ ದೃಢ ವಿಶ್ವಾಸವಿದೆ, ಮಹಾರಾಜರಕಡೆ ಅವರು ಎಂದೂ ಐಹಿಕ ಸುಖದ ಬೇಡಿಕೆ ಮಾಡಲಿಲ್ಲ, ಮತ್ತು ಮುಂದಾದರೂ ಅವರು ಎಂದೂ ಮಾಡುವವರಲ್ಲ.

ಒಮ್ಮೊಮ್ಮೆ ಅವರ ಪತ್ನಿಯೂ ತಮ್ಮ ನಾಲ್ಕು ವರ್ಷದ ಮಗನಿಗೆ ಕರೆದುಕೊಂಡು ಮಹಾರಾಜರ ದರ್ಶನಕ್ಕೆ ಬರುತ್ತಿದ್ದರು. ಒಮ್ಮೆ ಹೀಗೆ ಬಂದಾಗ ಮಹಾರಾಜರು ತಮ್ಮ ರೀತಿ ಪ್ರಕಾರ ಬೈಯ್ಯಲಿಕ್ಕೆ ಹತ್ತಿದರು. ಫಾಣಶೆಕರರು ಆಗ್ಗೆ ತಮ್ಮ ಪತ್ನಿಗೆ ಹೇಳಿದರು; "ಈ ಬೈಗಳು ನಿನ್ನನ್ನು ಅನುಲಕ್ಷಿಸಿ ಅಲ್ಲ; ಅವರದು ಅದು ಸ್ವಭಾವವೇ, ಅದರಿಂದ ಯಾರದೇನು ಲುಕಸಾನ ಆಗುವದಿಲ್ಲ." ಅನಂತರ ಆಕೆಯು ತನ್ನ ಮಗನನ್ನು ಕರಕೊಂಡು ಆಗಾಗ್ಗೆ ಮಹಾರಾಜರ ದರ್ಶನಕ್ಕೆ ಬರಹತ್ತಿದಳು. ಈ ಹುಡುಗನು ಪೂರ್ವ ಜನ್ಮದಲ್ಲಿ ವಿಶೇಷ ಪುಣ್ಯ ಮಾಡಿದ್ದನೆಂಬಂತೆ ಕಂಡು ಬಂತು; ಯಾಕಂದರೆ ಅವನು ಮಹಾರಾಜರ ಹತ್ತರ ಕೂತನಂದರೆ ಅವನಿಗೆ ಸಮಾಧಿ ಹತ್ತುತ್ತಿತ್ತು. ಆ ಸ್ಥಿತಿಯಲ್ಲಿರುವಾಗ್ಗೆ ತನಗೆ ಕಾಣುವ ನೋಟಗಳನ್ನು ಅವನು ವರ್ಣಿಸಿ ಹೇಳುತ್ತಿದ್ದನು: "ನನಗೆ ಬಹಳ ಸಾಧುಗಳ ದರ್ಶನವಾದವು, ಅವರು ನನಗೆ ಆಶೀರ್ವಾದ ಕೊಟ್ಟರು ಮತ್ತು ನನಗೆ ಪರಮಾನಂದವಾಯಿತು."

ಮಹಾರಾಜರೆಂದರು, "ಮುಂದಿನ ಎರಡು ಅಥವಾ ನಾಲ್ಕು ಜನ್ಮಗಳಲ್ಲಿ ಇವನು ಮಹಾನ್ ಸಾಧುವಾದಾನು. ಆದರೆ ಇವನು ಬಹಳ ದಿವಸ ಬದುಕ್ಯಾನು ಅಂತ ಮಾತ್ರ ನೀವು ತಿಳಿಯಬೇಡಿರಿ." ಆ ಹುಡುಗನು ಅವನ ವಯಸ್ಸಿನ ಆರನೇ ವರ್ಷಕ್ಕೆ ದೇವಾಧೀನನಾದನು. ಫಾಣಶೆಕರರು ಪ್ರತಿ ಒಂದು ಗುರುವಾರ ದಿವಸ ಮಹಾರಾಜರ ದರ್ಶನಕ್ಕೆ ಬರುತ್ತಾರೆ.

(೫೬) **ಸಾಯಗಾಂವಕರರ ವಿಲಕ್ಷಣ ಅನುಭವ**— ಮಹಾರಾಜರ ಒಬ್ಬ ಶಿಷ್ಯನ ಅನುಭವಗಳು ಅಸಾಮಾನ್ಯ ಇರುತ್ತವೆ; ಅವು ಇಷ್ಟು ಅಸಾಮಾನ್ಯ ಅವೆಯಲ್ಲ; ಅವನ್ನು ಇಲ್ಲಿ ಬರೆಯಲಿಕ್ಕೆ ಆ ಶಿಷ್ಯನ ಹೆಸರನ್ನು ಹೇಳಲಿಕ್ಕೂ, ಈ ಚರಿತ್ರ ಲೇಖಕನಿಗೆ ಬಹಳ ಆನಂದವಾಗುತ್ತದೆ. ಈ ಅನುಭವಗಳು ಯೋಗಮಾರ್ಗದ ಯೋಗಿಗಳ ಅನುಭವಗಳೆಂಬದರಲ್ಲಿ ಸಂಶಯವಿಲ್ಲ; ಆದರೆ ಇಂಥ ಪ್ರಕಾರದ ಅನುಭವಗಳು ಈ ಶಿಷ್ಯನಿಗೆ ಅನುಗ್ರಹವಾದ ಒಂದು ವರ್ಷದೊಳಗೆಯೇ ಪ್ರಾಪ್ತವಾಗಬೇಕಲ್ಲ! ಈ ಸಂಬಂಧ ಮಹಾರಾಜರ ಇತರ ಶಿಷ್ಯರಿಗೆ ಆಶ್ಚರ್ಯವೂ ಕೌತುಕವೂ ಅನಿಸುತ್ತದೆ.

ಈ ಶಿಷ್ಯನ ಹೆಸರು ಸಾಯಗಾಂವಕರ. ಇವರು ನಾಶಿಕದಲ್ಲಿ ಫೋಟೋಗ್ರಾಫರ ಆಗಿದ್ದಾರೆ. ವಿವೇಕಾನಂದ, ರಾಮತೀರ್ಥ, ಶ್ರೀರಾಮಕೃಷ್ಣ ಪರಮಹಂಸ ಆ ಇತರ ಮಹಾನ್ ಸಾಧುಗಳ ಗ್ರಂಥಗಳನ್ನು ಓದಿ ಅವರ ಮನಸ್ಸಿನಲ್ಲಿ ಪರಮಾರ್ಥ ವಿಷಯ ಜಿಜ್ಞಾಸೆ ಉತ್ಪನ್ನವಾಯಿತು. ಕಡೆಗೆ ಅವರು ಮಹಾರಾಜರ ಕಡೆ ಬಂದರು. ಮತ್ತು ಅವರು ಮಹಾರಾಜರ ಉಪದೇಶವನ್ನು ಪಡೆದರು. ಹೋದವರ್ಷ ಅವರು ಯೋಗದ ಅನುಭವವನ್ನು ತಕ್ಕೊಳ್ಳುತ್ತಿದ್ದರು. ಅವುಗಳ ಪೈಕಿ ಕೆಲವನ್ನು ಈ ಪುಸ್ತಕದಲ್ಲಿ ಪ್ರತ್ಯೇಕ ಕೊಟ್ಟಿದೆ.

ರಾ. ತ್ರ್ಯಂಬಕ ಭಾಸ್ಕರ ಖರೆ ಇವರು ಇತ್ತಲಾಗೆ ಶಂಕರಾಚಾರ್ಯರಾಗಿದ್ದಾರೆ. ಈ ಖರೆ ಎಂಬವರು ಮಧ್ಯಪ್ರಾಂತದಲ್ಲಿ ಮುಖ್ಯ ಪ್ರಧಾನರಾಗಿದ್ದ ಡಾ. ಖರೆ ಎಂಬವರ ಅಣ್ಣಂದಿರಾಗಬೇಕು. ಅವರು ಪೂರ್ವದಲ್ಲಿ ಮುಂಬೈಯಲ್ಲಿ ಆಡಿಟರರಾಗಿದ್ದರು. ಅವರು ರಾ. ಕ್ಷೀರಸಾಗರ ಎಂಬ ಹೆಸರಿನ ಗೃಹಸ್ಥರಕೂಡ ಸಾಯಗಾಂವಕರ ಇವರ ಕಡೆ ಒಂದು ದಿನ ಬಂದರು, ಮತ್ತು ಅಂದರು, “ನೀವು ಯೋಗಾಭ್ಯಾಸ ಮಾಡುತ್ತಿದ್ದು ಇಲ್ಲಿಯ ಪ್ರಸಿದ್ಧ ಫೋಟೋಗ್ರಾಫರ ಇದ್ದೀರೆಂತ ನಾವು ಕೇಳಿದ್ದೇವೆ. ಆದ್ದರಿಂದ ನಾವು ಈಗ ನಿಮ್ಮ ಕಡೆ ಬಂದಿರುತ್ತೇವೆ. ನಮ್ಮ ಗುರುಗಳ ಫೋಟೋ ನಮಗೆ ಸಿಗುವಹಾಗಿಲ್ಲ. ಆದರೂ ನಮಗೆ ಅದರ ಅತ್ಯಂತ ಅವಶ್ಯಕತೆ ಇರುತ್ತದೆ. ನಾನು ನಿಮ್ಮ ಮುಂದೆ ನನ್ನ ಗುರುವಿನ ಧ್ಯಾನ ಮಾಡುತ್ತಾ ಕೂತಿರುತ್ತೇನೆ. ನೀವು ನನ್ನ ಮನಸ್ಸಿನಲ್ಲಿ ಹೊಕ್ಕು ಅವರದು ಬರಾಬರಿ ಚಿತ್ರ ತಯಾರಿಸಿರಿ.”

ಇಲ್ಲಿ ಒಂದು ಸಂಗತಿ ನಮೂದಿಸಬೇಕಾಗಿರುತ್ತದೆ, ಅದು ಹೀಗದಲ್ಲ, ಖರೆ ಇವರು ಧ್ಯಾನ ಧಾರಣೆಯನ್ನು ಮಾಡುತ್ತಿದ್ದು, ಯೋಗ ಮತ್ತು ಮಂತ್ರ ಶಾಸ್ತ್ರದ ಮೇಲೆ ಒಂದೆರಡು ಪುಸ್ತಕಗಳನ್ನು ಬರೆದಿರುತ್ತಾರೆ. ಸಾಯಗಾಂವಕರ ಇವರು ಗಜಾನನ ಮಹಾರಾಜರ ಶಿಷ್ಯರಿದ್ದಾರೆಂಬದು ಅವರಿಗೆ ಕ್ಷೀರಸಾಗರ ಇವರಿಂದ ತಿಳಿದಿರುತ್ತದೆ. ಯಾವಾಗ್ಗೆ ಅವರು ಫೋಟೋ ವಿಷಯದಲ್ಲಿ ಸಾಯಗಾಂವಕಾರರಿಗೆ ಹೇಳಿದರು, ಆಗ ಇವರು ಬಹಳ ಚಿಂತೆಯಲ್ಲಿ ಬಿದ್ದರು. ಆದರೆ ಅವರು ಶ್ರೀ ಗಜಾನನ ಮಹಾರಾಜರ ಸ್ಮರಣ ಮಾಡಿ, “ಒಳ್ಳೇದು ನಾನು ಪ್ರಯತ್ನ ಮಾಡುತ್ತೇನೆ, ಏನು ಆಗುತ್ತದೆ ನೋಡೋಣ,” ಎಂದಂದರು.

ಸಾಯಗಾಂವಕರ ಇವರು ಗುರುಗಳ ಸ್ಮರಣ ಮಾಡಿದ್ದರೂ, ಮತ್ತು ಗುರುಗಳ ಆಜ್ಞೆ ಮೇಲಿಂದ ಅವರಿಗೆ ಅಂತಃ ಸ್ಫೂರ್ತಿಯಾದರೂ, ಈ ಸೂಕ್ಷ್ಮ ಮತ್ತು ಬಿಕ್ಕಟ್ಟಿನ ಕೆಲಸ ಮಾಡಲಿಕ್ಕೆ ಅವರಿಗೆ ಮೂಲದಲ್ಲಿಯೇ ಏನಾದರೂ ಆಧಾರವಿತ್ತು. ಆ ಆಧಾರ ವಿಷಯ ಸಂಕ್ಷೇಪವಾಗಿ ನಾವು ಕೆಳಗೆ ವರ್ಣಿಸುವೆವು. ಆದರೆ ನಮ್ಮ ವಾಚಕರಿಗೆ ಇದೊಂದು ಮಾತು ಸ್ಪಷ್ಟ ಮಾಡಿ ಹೇಳಬೇಕಲ್ಲ; ಈ ಸಾಧನ ಶಿಕ್ಕಿದ್ದರೂ, ಸಾಯಗಾಂವಕರನಂತೆ ನಾನೂ ಕಾರ್ಯವನ್ನು ಮಾಡೇನು ಅಂತ ಮತ್ತ್ಯಾರಾದರೂ ಸಾಮಾನ್ಯ ಜನರು ಹೇಳಿದ್ದಾದರೆ ಅವರಿಂದ ಅದು ಸಾಧ್ಯವಾಗಲಾರದು. ಹೀಗೆ ಫಲಪ್ರಾಪ್ತಿಯಾಗಲಿಕ್ಕೆ ಧ್ಯಾನಯೋಗದಿಂದ ಅತ್ಯಂತ ಪರಿಪಕ್ವ ಆದ ಅವಸ್ಥೆಯು ಅವಶ್ಯವಾಗಿರಬೇಕು. ಖರೆಯುವರಿಗೆ ಅವರ ತಂದೆಯವರು ತಮ್ಮ ಗುರುಗಳ ಆಕೃತಿ ಮತ್ತು ಸ್ವರೂಪ ಸಂಪೂರ್ಣ ಕುಲಂಕುಶವಾಗಿ ವರ್ಣನ ಮಾಡಿ ಹೇಳಿದ್ದರು. ಮತ್ತು ಖರೆಯುವರು ತಮ್ಮ ತಂದೆ ವರ್ಣಿಸಿದಂತೆ ಆ ಮೂರ್ತಿಯ ಧ್ಯಾನ ಮಾಡುತ್ತಿದ್ದರು. ಅವರು ಸ್ವತಃ ಗುರುವಿಗೆ (ಅಂದರೆ ತಂದೆಯ ಗುರುವಿಗೆ) ನೋಡಿದ್ದಿಲ್ಲ. ಆದರೂ ಅವರ ಫೋಟೋ ತನ್ನ

ಹತ್ತಿರ ಇರಬೇಕು. ಎಂದು ಖರೆಯವರಿಗೆ ಉತ್ಕಟ ಇಚ್ಛೆಯಾಗಿತ್ತು. ಮತ್ತು ಅದನ್ನು ತಾನು ತಯಾರ ಮಾಡಿಸಿಕೊಳ್ಳುವೆನೆಂದು ಅವರ ಮನಸ್ಸಿನ ನಿರ್ಧಾರ ವಿತ್ತು. ಅವರ ಸಂಗಡಿಗರಾದ ನಾಶಿಕದ ಕ್ಷೀರಸಾಗರ ಇವರು ಪ್ಲಾಂಚೇಟದ ಅಭ್ಯಾಸವನ್ನು ಉತ್ತಮವಾಗಿ ಮಾಡಿರುವದರಿಂದ ಆ ವಿದ್ಯೆಯಲ್ಲಿ ಅವರು ಪ್ರವೀಣರಾಗಿದ್ದರು. ತಾನು ಹ್ಯಾಗೆ ಗುರು ಧ್ಯಾನ ಮಾಡುತ್ತಿರುತ್ತೇನೆ, ಅದು ತನ್ನ ಗುರುವಿನ ಆಕೃತಿಗೆ ಮತ್ತು ಸ್ವರೂಪಕ್ಕೆ ಪೂರ್ಣ ಸರಿಯಾಗಿರುತ್ತದೆಂದು ಖರೆಯವರು ರಾ. ಕ್ಷೀರಸಾಗರ ಇವರಕಡೆಯಿಂದ ಪ್ಲಾಂಚೆಟದ ಸಹಾಯದಿಂದ ನಿಶ್ಚಯ ಮಾಡಿಕೊಂಡರು. ಆ ಪ್ರಕಾರವೇ ಖರೆಯವರು ಸಾಯಗಾಂವಕರ ಇವರಿಗೆ ಕುಲಂಕುಶವಾಗಿ ವರ್ಣನೆ ಮಾಡಿ ಹೇಳಿದರು, ಮತ್ತು ಅವರು ಸರಿಯಾಗಿ ಸಾದೃಶ್ಯವಾದ ಗ ಫೋಟೊ ತಯಾರಿಸಬೇಕಾಗಿ ವಿನಂತಿ ಮಾಡಿದರು.

ಅನಂತರ ಖರೆ ಮತ್ತು ಸಾಯಗಾಂವಕರ ಇವರಿಬ್ಬರೂ ಒಬ್ಬರೆದುರಿಗೆ ಒಬ್ಬರು ಧ್ಯಾನಕ್ಕೆ ಕೂತರು. ಧ್ಯಾನ ಮುಗಿದ ಬಳಿಕ ಸಾಯಗಾಂವಕರ ಇವರು ಧ್ಯಾನ ಮಾಡುತ್ತಿರುವಾಗ ಖರೆಯವರ ಗುರುಗಳ ಸ್ವರೂಪವನ್ನು ಹ್ಯಾಗೆ ಕಂಡಿದ್ದರೂ ಹಾಗೆಯೇ ಬರಾಬರಿ ಹೋಲ್ಕಿಕೆಯ ಚಿತ್ರವನ್ನು ತಯಾರಿಸಿದರು. ವಿಶೇಷ ಆಶ್ಚರ್ಯಾದ ಸಂಗತಿ ಇದಲ್ಲ, ಖರೆಯವರು ಹ್ಯಾಗೆ ತಾವು ಗುರುಗಳ ಧ್ಯಾನ ಮಾಡುತ್ತಿದ್ದರು, ಹಾಗೆಯೇ ಈ ಚಿತ್ರವಾದರೂ ಕಾಣಿಸುತ್ತಿತ್ತು. ಖರೆಯವರು ಈ ಸಂಬಂಧ ಸಾಯಗಾಂವಕರರ ಅತ್ಯಂತ ಉಪಕಾರ ಮನ್ನಿಸಿದರು, ಮತ್ತು ತನ್ನ ಗುರುಗಳ ಒಂದು ಪೂರ್ಣ ಚಿತ್ರವನ್ನು ಬಣ್ಣದಲ್ಲಿ ತಯಾರಿಸಲಿಕ್ಕೆ ಹೇಳಿದರು.

ಖರೆ ಇವರು ಮುಂಬೈಯಿಗೆ ತಿರುಗಿ ಹೋಗಿದ್ದು ಎಳೆಂಟುದಿಷ ತಿರುಗಿ ಬರಲಿಕ್ಕಿಲ್ಲವೆಂತ ತಿಳಿದಮೇಲೆ, ಸಾಯಗಾಂವಕರ ಇವರು ಒಮ್ಮೆಗೆ ಕೆಲಸಕ್ಕೆ ಆರಂಭ ಮಾಡಲಿಲ್ಲ; ಈ ಎಳೆಂಟು ದಿವಸಗಳಲ್ಲಿ ಒಂದು ವಿಶಿಷ್ಟ ಸಂಗತಿ ಸಂಭವಿಸಿತು. ಅದು ಸಹ ಆಶ್ಚರ್ಯಕಾರಕವಾಗಿದೆ. ಸಾಯಗಾಂವಕರ ಇವರಿಗೆ ಶಿವ ಗೀತಾ ಪ್ರತಿದಿನ ಓದಬೇಕೆಂದು ಒಳಗಿನಿಂದ ಪ್ರೇರಣೆಯಾಯಿತು. ಈ ಸಂಬಂಧ ವಿಶೇಷ ಚೌಕಸಿ ಮಾಡುವಾಗ, ಸಾಯಗಾಂವಕರರಿಗೆ ಖರೆಯವರಿಂದ ಹೀಗೆ ತಿಳಿಯ ಬಂತಲ್ಲ; ಅವರ ಗುರು ಹಂಸರಾಜಸ್ವಾಮಿಯವರು ನೂರು ವರ್ಷಗಳ ಹಿಂದೆ ಪ್ರಸಿದ್ಧರಾಗಿದ್ದು, ಅವರು ಶಿವಗೀತೆಯ ಮೇಲೆ ಓವಿ ಛಂದದಿಂದ, "ವೇದೇಶ್ವರಿ" ಈ ಹೆಸರಿನ ಒಂದು ಟೀಕೆಯನ್ನು ಬರೆದಿದ್ದಾರೆ. ಇದರ ಮೇಲಿಂದ ಸಾಯಗಾಂವಕಾರರಿಗೆ ಶಿವಗೀತಾ ಓದಲಿಕ್ಕೆ ಒಳಗಿಂದ ಆಗ್ರಹ ಮಾಡಿ, ಮತ್ತು ಸ್ವತಃ ಅವರ ಹತ್ತಿರ ನಿಂತು, ಈ ಮಹಾನ್ ಸಾಧುಗಳು ಅವರ ಕಡೆಯಿಂದ ತಮ್ಮ ಚಿತ್ರವನ್ನು ಸಿದ್ಧ ಮಾಡಿಕೊಳ್ಳುವಂತೆ ಕಾಣಿಸುತ್ತದೆ. ಧ್ಯಾನಯೋಗ ದಕ್ಷ ಅಂತದೃಷ್ಟಿಯಿಂದ ನೋಡಿದ ನೋಟಗಳು ಹ್ಯಾಗಿದ್ದವೊ ಹಾಗೆಯೇ ಈ

ಜಡ ಸೃಷ್ಟಿಯಲ್ಲಿ ಬಂದಿರುತ್ತಾನೆ; ಇದು ಒಂದು ಪ್ರಶ್ನೆ ಇದೆ. ಅರ್ವಾಚೀನ ತತ್ವವೇತ್ತರಿಗೆ ಈ ಪ್ರಶ್ನೆ ಬಿಡಿಸುವದು ಬಹಳ ಕಠಿಣವಾದೀತು. ಯಾವ ಶ್ರೇಷ್ಠ ಮಹಾತ್ಮರೂ ಈ ನಶ್ವರ ಜಡದೇಹವನ್ನು ಬಿಟ್ಟಿದ್ದಾರೆ, ಮತ್ತು ಸರ್ವಸಾಕ್ಷಿ ಸರ್ವ ವ್ಯಾಪಿ ಅಕ್ಷಯ ಪರಮಾತ್ಮನಲ್ಲಿ ಏಕರೂಪರಾಗಿದ್ದಾರೆ. ಅಂಥವರು ಯಾವನೊಬ್ಬ ಗೃಹಸ್ಥನ ಕಡೆಯಿಂದ ಯಾವದಾದರೂ ಕಾರ್ಯವನ್ನು ಮಾಡಿಸಿಕೊಳ್ಳಲಿಕ್ಕೆ ತಾವಾಗಿ ಪ್ರಕಟವಾಗುತ್ತಾರೆ. ಆದರೆ ಈ ವ್ಯಕ್ತಿಯು ಚಿತ್ತಶುದ್ಧಿ ಆಗಿದ್ದು ಅದು ಸತ್ವಗುಣ ಸಂಪನ್ನ ಇರಬೇಕು. ಸಾಯಗಾಂವಕರರ ಈ ಅನುಭವವು ಊಂದರೆ ಈ ಶ್ರೇಷ್ಠ ತತ್ವವು ಧ್ಯಾನದಲ್ಲಿಟ್ಟುಕೊಳ್ಳತಕ್ಕಂಥ ಒಂದು ಉದಾಹರಣೆ ಇರುತ್ತದೆ.

ಸಾಯಗಾಂವಕರ ಇವರು ಅನಂತರ ಖರೆಯವರ ಸದ್ಗುರುಗಳ ಚಿತ್ರವನ್ನು ತಯಾರಿಸಿದರು; ಅದು ಖರೆಯವರಿಗೆ ಪೂರ್ಣ ಸಮಾಧಾನವಾಗುವಂಥಾದ್ದಾಯಿತು.

ಇದೇ ರೀತಿಯಿಂದ ಸಾಯಗಾಂವಕರರು ಧ್ಯಾನಸ್ಥರಾಗಿ ಕೂತು ಖರೆಯವರ ತಂದೆಯವರ ಚಿತ್ರವನ್ನು ತಯಾರ ಮಾಡಿದರು. ಖರೆ ಇವರ ಸಂಬಂಧ ಇನ್ನೊಂದು ಅನುಭವವನ್ನು ಸಾಯಗಾಂವಕರರು ಹೇಳಿದರು. ಅದನ್ನು ಅವರ ಶಬ್ದಗಳಿಂದಲೇ ಈ ಕೆಳಗೆ ಕೊಡುತ್ತೇನೆ.

“೨೧-೫-೪೮ ನೇ ದಿವಸ ಖರೇಯವರು ತನ್ನ ಸಾಪತ್ನ ತಾಯಿಯ ಔರ್ಧ್ವದೇಹಿಕ ಮಾಡುವ ಸಲುವಾಗಿ ಮುಂಬೈಯಿಂದ ನಾಶಿಕಕ್ಕೆ ಬಂದಿದ್ದರು. ಅವರು ನನ್ನ ಕಡೆಗೆ ಬಂದು ತನ್ನ ಸ್ವಂತ ತಾಯಿಯವರ ಫೋಟೊ ತೆಗೆದು ಕೊಡಬೇಕಾಗಿ ತಮ್ಮ ಇಚ್ಛೆಯನ್ನು ವ್ಯಕ್ತ ಮಾಡಿದರು. ಯಾಕಂದರೆ ಅವರು ಇಹಲೋಕ ಬಿಟ್ಟು ಬಹಳ ಕಾಲವಾಗಿತ್ತು ಮತ್ತು ಅವರ ಫೋಟೊ ಸಿಗುವಂತೆ ಇದ್ದಿಲ್ಲ. ‘ಹಿಂದಿನ ಇಡೀ ವಾರ ಪೂರಾ ನಾನು ಮಲೇರಿಯಾ ಜ್ವರದಿಂದ ಪೀಡಿತನಾಗಿದ್ದದರಿಂದ ನನ್ನಿಂದ ಈ ಕಾರ್ಯವಾಗುವದು ಅಶಕ್ಯವದೆ. ನೀವು ಈ ವಿಷಯ ನನಗೆ ಆಗ್ರಹ ಮಾಡಬಾರದು,’ ಎಂದು ನಾನು ಅವರಿಗೆ ವಿನಂತಿ ಮಾಡಿದೆ. ಆದರೆ ಅವರು ಬಹಳ ಆಗ್ರಹ ಮಾಡಿದ್ದರಿಂದ ಅವರಿಗೆ ಇಲ್ಲೆಂತ ಅನ್ನುವದು ನನ್ನ ಜೀವದ ಮೇಲೆ ಬಂತು. ಕಡೆಗೆ ಆ ಕಾರ್ಯವನ್ನು ಮಾಡಿ ಕೊಡಲಿಕ್ಕೆ ನಾನು ಕಬೂಲಿ ಕೊಟ್ಟೆ. ಆದರೆ ಅಶಕ್ತತೆಯಿಂದ ಧ್ಯಾನ ಮಾಡುವದೂ ಏಕಾಗ್ರತೆ ಮಾಡುವದೂ ನನಗೆ ಶಕ್ಯವಾಗದೆಂದು ಅನಿಸಿತ್ತು. ಹೀಗೆಂದು ನಾನು ನನ್ನ ಸದ್ಗುರುಗಳ ಧ್ಯಾನ ಮಾಡಲಿಕ್ಕೆ ಕೂತುಕೊಂಡೆ. ಇಷ್ಟರಲ್ಲಿ ನಾನು ಒಂದು ಪ್ರಕಾಶಯುಕ್ತ ಸಿಂಹಾಸನವನ್ನು ನೋಡಿದೆ. ಆದರೆ ಅದರ ಮೇಲೆ ಯಾರೊಬ್ಬರೂ ಕೂತಿರಲಿಲ್ಲ. ಅದು ಖಾಲಿ ಯಾಕಿರಬಹುದು ಎಂದು ನನ್ನ

ಮನಸ್ಸಿನಲ್ಲಿ ವಿಚಾರ ಬಂದ ಕೂಡಲೇ, ಆ ಸಿಂಹಾಸನದ ಮೇಲೆ ನನ್ನ ಸದ್ಗುರು ಗಳ ಮೂರ್ತಿಯನ್ನು ಕಂಡೆ, ಮತ್ತು 'ಕೆಲಸ ಮಾಡು' ಎಂಬ ಶಬ್ದಗಳು ನನ್ನ ಕಿವಿಯೊಳಗೆ ಬಿದ್ದವು. "ನಾನು ಈಗ ಕೆಲಸ ಸುರು ಮಾಡುತ್ತೇನೆ" ಎಂದು ನಾನು ಅವರಿಗೆ ಹೇಳಿದೆ, ಆಗ ನೋಟವು ಮುಗಿಯಿತು. ಖರೆಯವರು ಧ್ಯಾನಸ್ಥ ರಾಗಿ ಕೂತರು ಮತ್ತು ತನ್ನ ತಾಯಿಯವರ ಧ್ಯಾನವನ್ನು ಸುರು ಮಾಡಿದರು. ನನಗೆ ಸಹ ಅವರ ತಾಯಿಯು ಧ್ಯಾನದಲ್ಲಿ ಕಾಣಿಸಿದಳು. ಮತ್ತು ಕೂಡಲೆ ನಾನು ಅವರ ತಾಯಿಯವರ ಚಿತ್ರ ಕಾಗದದ ಮೇಲೆ ತೆಗೆದೆ. ಖರೆಯವರು ಅದನ್ನು ನೋಡಿದಾಕ್ಷಣ ಅವರಿಗೆ ಅತ್ಯಾನಂದವಾಯಿತು. ಮತ್ತು ಅಂದರು ನಾನು ಯಾವಾಕೆಯ ಧ್ಯಾನ ಮಾಡಿದ್ದೆನೊ ಆ ನನ್ನ ತಾಯಿಯ ಚಿತ್ರವೇ ಇದು, "ಇದೆಲ್ಲ ನನ್ನ ಗುರುಭಕ್ತಿಯ ಫಲ" ಎಂದು ನಾನು ಅವರಿಗೆ ಹೇಳಿದೆನು.

ಇದೆಲ್ಲ ಸಂಭವಿಸಿದ ಹಿಂದಿನ ದಿನ, ರಾತ್ರೆ ಒಂಭತ್ತು ಗಂಟೆಗೆ ನಾನು ಧ್ಯಾನಕ್ಕೆ ಕೂತಿರುವಾಗ ಒಂದು ಮಾನವೀ ಶರೀರವನ್ನು ಕಂಡೆ, ಮತ್ತು ಅದರೊ ಳಗಿಂದ ಬೇರೆ ಮೂರು ನಾಲ್ಕು ಶರೀರಗಳು ಹೊರಬೀಳುತ್ತಿರುವದನ್ನೂ ನೋಡಿದೆ, ಅವುಗಳ ಪೈಕಿ ಒಂದು ಶರೀರವು ಪ್ರಕಾಶಮಯವಾಗಿ ಕಾಣಿಸಿತು, ಮತ್ತು 'ನಾನೇ ಪ್ರಾಣಮಯವೆಂಬ ನಿಜವಾದ ಶರೀರ ಇದ್ದೇನೆ,' ಎಂಬ ಈ ಶಬ್ದಗಳು ನನ್ನ ಕಿವಿಮೇಲೆ ಬಿದ್ದವು. ಅದರ ಮೇಲಿಂದ ಇತರ ದೇಹಗಳು ಬರೀ ಪಂಚತತ್ವಗಳಿಂದ ಆಗಿರಬೇಕಂತ ನಾನು ತಿಳಿದೆ. ಅನಂತರ ಆ ಇತರ ಶರೀರ ಗಳು ಈ ಪ್ರಕಾಶಮಯ ಶರೀರದಲ್ಲಿ ಲುಪ್ತನಾದವು, ಮತ್ತು ಆ ದೇಹವಾದರೂ ಚೈತನ್ಯಮಯವಾಯಿತು. ಆ ಮೇಲೆ ನಾನು ದೇಹಭಾನಕ್ಕೆ ಬಂದೆ. ಆಗ ರಾತ್ರಿ ಹತ್ತುವರೆ ಗಂಟೆಯ ವೇಳೆ ಇತ್ತು.

ಈ ನನ್ನ ಹಿಂದಿನ ದಿವಸದ ಅನುಭವವನ್ನು ನಾನು ಖರೆಯವರಿಗೆ ಹೇಳಿದೆನು. ಅವರು ತನ್ನ ಪ್ರಾಣಶಕ್ತಿ ಮೇಲಿನ ಪುಸ್ತಕದಲ್ಲಿ ಹೀಗೆಯೇ ವರ್ಣಿ ಸಿದ್ದಾರೆ. ಅವರು ಆ ಭಾಗವನ್ನು ನನಗೆ ಓದಿ ಹೇಳಿದರು, ಆ ಮೂಲಕ ನನಗ ಅತ್ಯಂತ ಸಮಾಧಾನವಾಯಿತು."

(೫೭) ಸಮಾರೋಪ :— ಯಾರು ಮಹಾರಾಜರನ್ನು ಅಥವಾ ಅವರು ಮಾಡಿದ ಚಮತ್ಕಾರಗಳನ್ನು ನೋಡಿದ್ದಾರೋ, ಅವರು ಒಂದುವೇಳೆ ಮಹಾರಾಜರ ಶತ್ರುಗಳಾಗಿದ್ದರೂ ಅವರಿಗೆ ಹೀಗೆ ಪೂರ್ಣ ನಿಶ್ಚಯುವದೆಯಲ್ಲ, ಮಹಾರಾಜರು ಯಾರ ಕಡಿಯಿಂದಾದರೂ ಒಂದು ದುಡ್ಡು ಸಹ ತಕ್ಕೊಂಡಿಲ್ಲ ಅಥವಾ ಅವರಿಗೆ ಹಾಗೆ ಎಂದೂ ಇಚ್ಛೆಯೂ ಆಗಲಿಲ್ಲ. ಮಹಾರಾಜರು ಕೀರ್ತಿ

ಬಯಸುವವರೂ ಅಲ್ಲದರಿಂದ ಕೀರ್ತಿಯು ಹೇತುವಾದರೂ ಸಂಭವಿಸುವದಿಲ್ಲ. ತುಳ್ಳ ಅನ್ನುವವರು ಈ ಚಮತ್ಕಾರದ ವಿಚಾರ ಮಾಡಬೇಕು.

ಮಹಾರಾಜರು ಬಹಳ ಕಡೆಗೆ ಹೋಗಿದ್ದರು, ಆದರೆ ಅವರು ಯಾರಿಗಾದರೂ ಮೋಸ ಮಾಡಿದ್ದಾರೆ, ಮತ್ತು ಅವರ ಕಡೆಯಿಂದ ರೊಕ್ಕ ತಕ್ಕೊಂಡಿದ್ದಾರೆ, ಅಂತ ಅಲ್ಲಿಯ ಒಬ್ಬರೂ ಅನ್ನುವದಿಲ್ಲ: ಕೆಲವು ವರ್ಷಗಳ ಹಿಂದೆ ಮಾತ್ರ ಅವರು ಮದ್ಯಪಾನ ಮಾಡುತ್ತಿರುವಾಗ್ಗೆ ಮಾತ್ರ ಹಣ ಬೇಡುತ್ತಿದ್ದರು, ಆದರೆ ಅದು ಪ್ರಕಟವಾಗಿ ಬೇಡುತ್ತಿದ್ದರು. ಅವರು ಒಮ್ಮೊಮ್ಮೆ ಮಂದಿಗೆ ಬೈಯುತ್ತಾರೆ. ಸಂಗುವ ಮತ್ತು ರೋಗ ಇವುಗಳ ದೆಶೆಯಿಂದ ಅವರು ಸ್ನಾನವೂ ಮಾಡುವದಿಲ್ಲ. ಅವರಿಗೆ ವೇದಾಂತ ಗೊತ್ತಿಲ್ಲ. ಅವರು ಪುಷ್ಪಾದಿ ಸಾಹಿತ್ಯಗಳನ್ನು ತಕ್ಕೊಂಡು ದೇವಪೂಜೆಯನ್ನೂ ಮಾಡುವದಿಲ್ಲ. ಅವರು ಏನೇನೂ ಮಾತಾಡುವರೊ ಅದೇ ಅವರ ವೇದಾಂತ; ಆದರೆ ಆ ವೇದಾಂತವನ್ನು ಅವರು ಪುಸ್ತಕಗಳನ್ನು ಓದಿ ಕಲಿತಿದ್ದು ಅಲ್ಲ. ಅದು ಅವರ ಸ್ವಾತ್ಮಾನುಭವವೇ ಇದೆ. ಈ ವೇದಾಂತವಾದರೂ ಸಾಮಾನ್ಯಜನರಿಗೆ ಸಹ ತಿಳಿಯುವಂಥಾದ್ದದೆ, ಮತ್ತು ಅವರು ಆದರ ನಿಜವಾದ ಕಿಮ್ಮತು ತಿಳಿಯುತ್ತಾರೆ.

ಅವರು ಒಮ್ಮೊಮ್ಮೆ ಹೇಳುತ್ತಾರೆ, " ವಾಚಾಸಿದ್ಧಿ ಸಂಪಾದಿಸುವದಕ್ಕೆ ನಾನು ಎಂದೂ ಪ್ರಯತ್ನ ಮಾಡಲಿಲ್ಲ. ನನ್ನ ಪೂರ್ವಜನ್ಮದ್ದಾದರೂ ಬಹಳ ಪುಣ್ಯ ಇಲ್ಲ. ವಿದ್ವಾನ ಮತ್ತು ಪುಣ್ಯವಾನ ಸಾಧುಗಳು ಬಹಳ ಇದ್ದಾರೆ. ಅವರ ಶಬ್ದಕ್ಕೆ ಜನರು ಮಾನ ಕೊಡುತ್ತಾರೆ, ಎಂಬದಕ್ಕೆ ಅವರ ಸುತ್ತಲೂ ಜನರು ಕೂಡುತ್ತಾರೆ. ಇಂಥ ಸಾಧುಗಳಿಗೆ ಜನರು ಶಿಫಾರಸು ಕೊಡುತ್ತಾರೆ. ಅವರು ಜನರ ರೋಗಗಳನ್ನು ಪರಿಹರಿಸುತ್ತಾರೆ, ಮತ್ತು ಬೇರೆ ಇಂಥಾದ್ದೆ ಸಂಗತಿಗಳನ್ನು ಮಾಡುತ್ತಾರೆ, ನಾನು ನಿಮ್ಮಂತೆ ಸಾದಾ ಮನುಷ್ಯನಿದ್ದೇನೆ. ಎರಡನೇಯವರಲ್ಲಿ ಏನು ಒಳ್ಳೇದು ಕಾಣಿಸುವದೋ ಅದನ್ನು ತಕ್ಕೊಳ್ಳುವ ಪ್ರಯತ್ನವನ್ನು ಮಾಡುತ್ತೇನೆ. ವಿಶ್ವಕುಟುಂಬದೊಳಗಿನ ನಾನೊಬ್ಬ ಅಜ್ಞಾನಿ ಕೂಸು ಇದ್ದೇನೆ. ನೀರೊಳಗೆ ಯಾವ ಬಣ್ಣ ಹಾಕುವರೊ ಅದರಂತೆ ನೀರು ಆಗುವದು. ಹಾಗೆ ನಾನು ನೀರಿನಂತಿದ್ದೇನೆ. "

ಒಮ್ಮೊಮ್ಮೆ ಮಹಾರಾಜರು ಆನಂದವೃತ್ತಿಯಿಂದಿರುವಾಗ ಧ್ಯಾನಾಭ್ಯಾಸದ ಸಂಬಂಧ ಸಂಭಾಷಣ ಮಾಡುತ್ತಾರೆ; ಮತ್ತು ವ್ಯವಹಾರದೊಳಗಿನ ಸಂಗತಿಗಳನ್ನು ಉದಾಹರಣೆ ಮಾಡಿಕೊಟ್ಟು ತಮ್ಮ ಭಾಷಣವನ್ನು ಕೇಳುವವರಿಗೆ ಸ್ಪಷ್ಟ ಮಾಡಿ ಹೇಳುತ್ತಾರೆ. ಒಮ್ಮೆ ಅವರೆಂದರು, " ದೇಹವೆ ಇದು ದೇವಾಲಯು ಮತ್ತು ಆತ್ಮನೇ ಪಾಂಡುರಂಗನು, ಹೀಗೆ ವಾರಕರಿಯವರು ಅನ್ನುತ್ತಿರು

ತ್ತಾರೆ. ಆದರೆ ಯಾರು ಅಂತರಾತ್ಮನ ಅನುಭವವನ್ನು ಸಂಪಾದಿಸುವ ಪ್ರಯತ್ನ ಮಾಡುವರೊ ಅವರಿಗೆ ಮಾತ್ರ ಈ ಮಾತಿನ ಸತ್ಯತ್ವವು ನಿಶ್ಚಯವಾದೀತು. ಈ ಸಂಬಂಧ ನನ್ನ ಸ್ವಂತ ಅನುಭವವನ್ನು ಯಾರಾದರೂ ಕೇಳಿದರೆ, ನಾನು ಹೇಳುವೆನು, " ನಾನೇನೂ ಬರೀ ಸಂತರ ವಚನಗಳನ್ನು ಹೇಳುವದಿಲ್ಲ- ಸಂತರ ವಚನಗಳನ್ನು ಹೇಳುವದು ವಿದ್ಯಾವಂತರ ಕೆಲಸವು, ತಮಗೆ ಅನುಭವವಿಲ್ಲದಿದ್ದರೂ ಆ ವಿದ್ವಾಂಸರು ಆ ವಚನಗಳನ್ನು ವಿವರಿಸಿ ಸ್ಪಷ್ಟಮಾಡಿ ಹೇಳುವರು. ಆದರೆ ನಿಜವಾಗಿ ಯಾವನೊಬ್ಬನಿಗೆ ಈ ಅನುಭವಗಳು ಬಂದದ್ದಾದರೆ ಮತ್ತು ಅವನು ಹಾಗೆ ಹೇಳಿದಾ, ಅಂದರೆ ಅವನು ಗರ್ವಿಷ್ಠನಿದ್ದಾನೆಂದು ಹೇಳಲಾಗದು. ಇಂಥ ಸಾತ್ವಿಕ ಅಹಂಕಾರದಲ್ಲಿ ದೋಷಕೊಡತಕ್ಕದ್ದೇನೂ ಇಲ್ಲ. ಒಬ್ಬ ಮನುಷ್ಯನು ಲಕ್ಷಾಧೀಶನಿದ್ದನೆಂತ ತಿಳಿಯಿರಿ. ಮತ್ತು ಅವನು ನಿಮ್ಮ ಗರಜಿನ ವೇಳ್ಯಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟನು, ಮತ್ತು ಅವನು ಇಂಥವನಿಗೆ ತಾನು ಒಂದು ಸಾವಿರ ರೂಪಾಯಿ ಕೊಟ್ಟಿದ್ದೇನೆಂತ ಹೇಳಿದನು, ಅಂದರೆ ಅವನಿಗೆ ದ್ರವ್ಯದ ಗರ್ವಬಂದದೆಯಂತ ನೀವು ದೋಷ ಕೊಡುವಿರೇನು? ಇಲ್ಲ; ಆದರೆ ತನ್ನ ಹತ್ತರ ಏನೂ ಇಲ್ಲದೆ ತಾನು ಇಂಥವನಿಗೆ ಒಂದು ಸಾವಿರ ರೂಪಾಯಿ ಕೊಟ್ಟೆನು ಎಂತ ಹೇಳಿದರೆ, ಅವನಿಗೆ ದೋಷ ಕೊಡುವದು ಯೋಗ್ಯವೇ ಸರಿ, ಅದೇ ಪ್ರಕಾರ ನಾನು ಈಶ್ವರನನ್ನು ಹುಡುಕಿ ತೆಗೆದಿದ್ದೇನೆ, ನಾನು ಈಶ್ವರನನ್ನು ತಿಳಿದಿದ್ದೇನೆ, ಎಂತ ಹೇಳುವವನಿಗಿಂತ ಯಾವನಿಗೆ ನಿಜವಾಗಿ ಆತ್ಮಸಾಕ್ಷಾತ್ಕಾರವಾಗಿದೆ, ಅವನೇ ಸರ್ವ ಅಧಿಕಾರಿಗಳಿಗೆ ಆತ್ಮಸಾಕ್ಷಾತ್ಕಾರದ ಮಾರ್ಗವನ್ನು ತೋರಿಸಲಿಕ್ಕೆ ಯೋಗ್ಯನಾಗುವನು. ' ಸೋಹಂ ' ದ ತತ್ವವನ್ನು ಯಾವಾತನು ಅನುಭವಿಸಿರುವನೊ ಅವನೇ ಖರೆ ಸಾಧು ಇದ್ದಾನೆ. ( ' ಸೋಹಂ ' ಅಂದರೆ 'ಅವನು ನಾನು ಇದ್ದೇನೆ ' ) ಆತನ ಮನಬುದ್ಧಿ, ಅವನ ಇಂದ್ರಿಯಗಳು, ಮತ್ತು ಅವನ ಶರೀರದ ಮೇಲಿನ ಕೂದಲು ಸಹ ಸರ್ವ ಸೋಹಂ ರೂಪವೇ ಇರುತ್ತವೆ. ಅವನು ಬಾಹ್ಯವ್ಯಾಪಾರ ಮಾಡಲಿ ಅಥವಾ ಬಿಡಲಿ, ಅವನು ಏನಾದರೂ ಮಾಡುತ್ತಿದ್ದರೆ, ಆದರಿಂದ ಅವನು ಅಲಿಪ್ತನೇ ಇರುತ್ತಾನೆ. ಅವನು ಜನಕನಂತೆ ವಿದೇಹಿ ಇರುತ್ತಾನೆ. ಅವನು ಐಹಿಕ ಮತ್ತು ಪಾರಮಾರ್ಥಿಕ ಸಂಗತಿಗಳನ್ನು ಸಮಾನವೆಂದು ತಿಳಿಯುತ್ತಾನೆ; ಮತ್ತು ಸುಖದುಃಖಾತೀತನಿರುತ್ತಾನೆ. ಅವನು ಬರೆ ಒಂದು ಸತ್ಸ್ವರೂಪವನ್ನು ತಿಳಿಯುತ್ತಾನೆ, ಮತ್ತು ಅಪರಿಮಿತ ಆನಂದಸ್ಥಿತಿಯ ಉಪಭೋಗವನ್ನು ತಕ್ಕೊಳ್ಳುತ್ತಿದ್ದಾನೆ, ಬಾಹ್ಯ ವಸ್ತುಕಿಂತ ಅದರೊಳಗಿನ ಸೂಕ್ಷ್ಮ ಶಕ್ತಿ ಇದೇ ಧ್ಯಾನದ ವಿಷಯವಾಗಬೇಕಂತ ನನಗನಿಸುತ್ತದೆ, ಒಬ್ಬರು ಅನ್ನುತ್ತಾರೆ. ನಿರಾಕಾರದ ಧ್ಯಾನ ಮಾಡುವದು ಕಠಿಣ ಇರುವದು, ನನ್ನ ಮತವೆಂದರೆ ಅದು ಬಹಳ ಸುಲಭವದೆ. ಮತ್ತು ಆದು ತೀರಾ ಸಹಜವಾಗಿದೆ. "

ನಿರಾಕಾರದ ಧ್ಯಾನಮಾಡಿ ಮನುಷ್ಯನಿಗೆ ಸಮಾಧಿ ಸ್ಥಿತಿ ಸಹಜ ಪ್ರಾಪ್ತವಾಗುತ್ತದೆ. ಆದರೂ ಈ ಮಾರ್ಗವು ಸ್ವಲ್ಪ ಬೇರೆಯಾಗಿ ಗುಪ್ತವಾಗಿರುತ್ತದೆ. ಆದರೆ ಅದು ಒಮ್ಮೆ ನಿಮಗೆ ಸಿಕ್ಕಿತೆಂದರೆ, ಆ ಮೇಲೆ ಹೊರಗೆ ಕಾಣುವಾಗ ನೀವು ನಗುತ್ತಾ, ಆಡುತ್ತಾ, ಮಾತಾಡುತ್ತಾ ಅಥವಾ ನಿದ್ದೆಮಾಡುತ್ತಾ ಇದ್ದರೂ, ನೀವು ಆ ಸ್ಥಿತಿಯಲ್ಲಿಯೇ ಇರಲಿಕ್ಕೆ ಶಕ್ಯವಾದೀತು. ಈ ಶಕ್ತಿ ಸರಸ್ವತಿ ನದಿಯಂತೆ ಗುಪ್ತವಿದೆ. ಕೆಲವು ಜನರಿಗೆ ಈ ಗುಪ್ತ ಮಾರ್ಗದ್ದು ಗೊತ್ತಿರುವದಿಲ್ಲವೆಂತ ಈ ಮಾರ್ಗ ಕಠಿಣವದೆಯೆಂತ ಅನ್ನುತ್ತಾರೆ, ಇದರಲ್ಲಿ ಸಿದ್ಧಿಗಳು ಸಂಪಾದಿಸಲಿಕ್ಕೆ ಬಹಳ ಜನ್ಮಗಳ ಯತ್ನಗಳು ಬೇಕಾಗುತ್ತವೆ, ಅಂತ ಅವರು ಹೇಳುತ್ತಾರೆ. ಧ್ಯಾನದಲ್ಲಿ ಏನೂ ಕಾಣಿಸದಿರುವದೇ ಏಕಾಗ್ರತೆಯಾದ್ದು ಸೂಚಿಸುತ್ತದೆ. ಯಾವಾಗ ಕಾಣುವಂಥಾದ್ದು ಕಾಣಿಸದಂತಾಗುವದೋ ಅದೇ ಖರೇ ಸಮಾಧಿ ಸ್ಥಿತಿಯು; ಪೂರ್ಣ ಸಮಾಧಿಯು ಬಾಹ್ಯದಲ್ಲಿ ಮರಣದಂತೆ ಇರುತ್ತದೆ. ಆದರೆ ಆ ಸ್ಥಿತಿಯಲ್ಲಿ ಯೋಗಿಯು ಜೀವಂತನಿರುತ್ತಾನೆ. ಅವನ ನಿದ್ರೆಯೆಂದರೆ ಸಮಾಧಿ ವಿನಹಾ ಮತ್ತೇನೂ ಇರುವದಿಲ್ಲ. ಅಂಥವನಿಗೆ ಧ್ಯಾನಯೋಗದ ಗೌಪ್ಯ ಸರಿಯಾಗಿ ತಿಳಿದದೆ."

“ಆದ್ದರಿಂದ ನಾನು ಅನ್ನುತ್ತೇನೆ, ನೀವು ಧ್ಯಾನ ಯೋಗವನ್ನು ಕಲಿತಿದ್ದರೆ ನಿಮ್ಮ ಕಲ್ಯಾಣವಾದೀತು. ಕಲಿಯಲಿಲ್ಲವಾದರೆ ಕಲಿಯುವ ಪ್ರಯತ್ನಗಳನ್ನು ಮಾಡಿರಿ. ಶಾಸ್ತ್ರಗಳನ್ನು ಕಲಿಯುವದನ್ನು ಬಿಟ್ಟುಬಿಡಿರಿ. ವಾದ ಮಾಡುವ ಪ್ರಸಂಗದಲ್ಲಿ ಬೀಳಬೇಡಿರಿ. ನೀವು ಶಾಸ್ತ್ರಗಳನ್ನೆ ಕಲಿತು ಅವುಗಳನ್ನು ತಿಳಿದುಕೊಳ್ಳುವಿರಿ ಅಂದರೆ ನಿಮಗೆ ವ್ಯರ್ಥವಾಗಿ ಅನೇಕ ಜನ್ಮಗಳು ಹಾಕಬೇಕಾದಾವು, ಒಂದುವೇಳೆ, ವಿದ್ವತ್ತೆಯ, ಸಾಧುತ್ವದ ಕೀರ್ತಿಯನ್ನು ಸಂಪಾದಿಸುವಿರಿ. ಆದರೆ ಆ ಮೂಲಕ ನೀವು ತಮಗೂ ಇತರರಿಗೂ ಮೋಸಮಾಡುವಿರಿ. ನಿಮ್ಮ ಅಂತರ್ಯದಲ್ಲಿ ಮಾತ್ರ ನಿಮ್ಮ ನಿಜವಾದ ಕಿಮ್ಮತು ಏನದೆ ಎಂದು ನಿಮಗೆ ಗೊತ್ತಿದ್ದೀತು: ಮತ್ತು ಜನ್ಮಮರಣದ ತಿರಗೋಣದಲ್ಲಿ ನೀವು ಬೀಳಬೇಕಾದೀತು. ನಿಜವಾಗಿ ನೋಡಿದರೆ ಈಶ್ವರನೆಂದರೆ ಮತ್ಯಾರೂ ಅಲ್ಲದೆ ನಿಮ್ಮ ಆತ್ಮನೇ ಈಶ್ವರನಿದ್ದಾನೆ, ಪ್ರತಿ ಒಬ್ಬ ಮನುಷ್ಯನು ‘ಸೋಹಂ’ ದ ಪ್ರಕಾಶದಿಂದ ಈ ಆತ್ಮನನ್ನು ನೋಡಲಿಕ್ಕೆ ಪ್ರಯತ್ನ ಸತಕ್ಕದ್ದು, ಮತ್ತು ಅಂತರ್ದೃಷ್ಟಿಯನ್ನು ಪಡೆಯಬೇಕು. ಸಂತರನ್ನುತ್ತಾರೆ, ಯಾರಿಗೆ ಅಂತರದ ದೃಶ್ಯಗಳು ಕಾಣುವವೋ ಅವರು ಉದ್ಧೃತರಾಗುವರು, ಮತ್ತು ಯಾರು ಬಾಹ್ಯದೃಶ್ಯಗಳ ಮೇಲೆಯೇ ಅವಲಂಬಿಸಿರುವರೋ ಅವರು ಮುಳುಗುವರು. ನೀವು ನಿಮ್ಮ ಗುರುವಿನ ಅಥವಾ ದೇವತೆಯ ಧ್ಯಾನ ಮಾಡಬೇಡಿರಿ ಅಂತ ನನ್ನ ಅಂಬೋಣವಿಲ್ಲ. ನೀವು ಬರೇ ಆಕೃತಿಯ ಧ್ಯಾನ ಮಾಡಬೇಡಿರಿ; ಆದರೆ ಅದನ್ನು ವ್ಯಾಪಿಸಿರುವ ಜ್ಞಾನ ಶಕ್ತಿ

ಇರುವದೊ ಅದರ ಧ್ಯಾನ ಮಾಡಿರಿ; ಅಂದರೆ ನಿಮ್ಮ ಬಾಹ್ಯಾಕೃತಿಯು ಸರಿಯಾಗಿ ಇರಲಿ, ಇಲ್ಲದಿರಲಿ; ನೀವು ಒಳಗೆ ಶೇರಿದಿರಂದರೆ ನಿಮ್ಮ ನಿಜವಾದ ಗುರುವು ಒಳಗಿರುತ್ತಾನೆ. ಅವನು ನಿಮಗೆ ನಿಜ ಮಾರ್ಗವನ್ನು ತೋರಿಸುವನು. ನಿಮಗೆ ಯಾವಾತನು ಮಾರ್ಗ ತೋರಿಸುತ್ತಾನೆಂಬದು ಮೊದಲು ನಿಮಗೆ ಗೊತ್ತಾಗಲಿಕ್ಕಿಲ್ಲ.

**ಕಬೀರರು ಅನ್ನುತ್ತಾರೆ** :— ' ನಿಮಗೆ ಆತ್ಮನನ್ನು ನೋಡಬೇಕಂತ ಇದರೆ, ಆತನು ವೇದ, ಶಾಸ್ತ್ರ, ಪುರಾಣ ದೇವಾಲಯ ಅಥವಾ ಮಶೀದಿ ಇವುಗಳಲ್ಲಿ ಶಿಗಲಾರನು. ಹಾಗೆಯೇ ತಪಸ್ಸು, ಯಾತ್ರೆ, ಪ್ರಾಣಾಯಾಮ ಇತ್ಯಾದಿಗಳಿಂದಲೂ ನೀವು ಆವನ ಕಡೆ ಹೋಗಲಾರಿರಿ. ಅವನು ಮಾತ್ರ ನಿಮ್ಮ ಶ್ವಾಸದಲ್ಲಿ ಶಿಕ್ಕುವನು, ಅಂದರೆ ' **ಸೋಹಂ** ' ದೊಳಗೆ ಶಿಗುವನು. ' ಸೊ' ಅಂದರೆ ಶ್ವಾಸ ಒಳಗೆ ತಕ್ಕೊಳ್ಳುವಾಗ ಆಗುವ ಧ್ವನಿ ಮತ್ತು ಹಮ್ ಅಂದರೆ ಶ್ವಾಸ ಹೊರಗೆ ಬಿಡುವಾಗ್ಗೆ ಆಗುವ ಧ್ವನಿ ').

ಪೃಥ್ವಿ ಮೇಲಿನ ಎಲ್ಲ ಮನುಷ್ಯ ಪ್ರಾಣಿಗಳು ಖರೆಯಾಗಿ ದೇವರಿದ್ದಾರೆ. ಆದರೆ ಯಾರು ತನ್ನನ್ನು ತಿಳಿಯುತ್ತಾರೊ, ಅವರೇ ಸುಖ ವ ಶಾಂತಿಯ ಅನುಭವವನ್ನು ಪಡೆಯುತ್ತಾರೆ. ಅವರೇ ಮುಮುಕ್ಷುವಿಗೆ, ' ಯಾವಾತನಿಗೆ ನೀವು ಈಶ್ವರನ ಅವತಾರವೆನ್ನುವಿರೊ, ಅವನೇ ಆ ಅವತಾರ ' ಹೀಗೆ ಹೇಳಲಿಕ್ಕೆ ಶಕ್ತರಿದ್ದಾರೆ. ಡಾಂಭಿಕ ಸಾಧುಗಳು ತಾವು ರಾಮ, ಕೃಷ್ಣ, ದತ್ತ ಅಥವಾ ದೇವಿ ಅವತಾರವೆಂದು ಅಜ್ಞಾನಿ ಜನರಿಗೆ ತೋರಿಸಿಕೊಂಡು ಮೋಸಗೊಳಿಸಬಾರದು. ಇಷ್ಟು ಮಾತ್ರ ಸೂಚಿಸುವದು ನನ್ನ ಇಚ್ಛೆಯಿದೆ. ನಿಮ್ಮ ಮನಸ್ಸು ಶುದ್ಧವಿಲ್ಲದಿದ್ದರೆ, ಸಾಜೂಸು ಏನು ಮಾಡೀತು ? ನಿಮ್ಮ ಮನಸ್ಸು ಒಳಗೆ ಪರಮಾನಂದದಲ್ಲಿ ಮಗ್ನವಾಗಿರಬೇಕು. ಕಾವಿ ಬಣ್ಣದ ನಿಲುವಂಗಿ ಹಾಕಿ, ಮೇಲೆ ರುದ್ರಾಕ್ಷಿ ಮಾಲಾ ಹಾಕಿಕೊಂಡು, ಸಾಧುವಿನ ಉಡಿಗೆ ಧರಿಸಿ, ಜನರಿಗೆ ಮತ್ತು ನಿಮಗೆ ಮೋಸಗೊಳಿಸಬೇಡಿರಿ. ಕುಕಲ್ಪನೆಯನ್ನು ಮನಸ್ಸಿನಲ್ಲಿ ಬರಗೊಡಬೇಡಿರಿ. ಕೆಟ್ಟ ವಿಚಾರಗಳು ಮನಸ್ಸಿನೊಳಗೆ ಉತ್ಪನ್ನವಾದವೆಂದರೆ ಅವನ್ನು ಅಲ್ಲಿಂದಲ್ಲೇ ' ಸೋಹಂ ' ಭಾವದ ಮಂತ್ರದಿಂದ ಒತ್ತಿಬಿಡಿರಿ. ಹೀಗೆ ಮಾಡಿದರೆ ಮೆಲ್ಲಮೆಲ್ಲನೆ ನಿಮ್ಮ ಮನಸ್ಸಿನಲ್ಲಿ ಬರುವ ವಿಚಾರಗಳು ಬಿಟ್ಟುಹೋಗುವವು. ಆದರೆ ಆ ಕಾಲದಲ್ಲಿ ನೀವು ಬಹಳ ಜಾಗೃತರಾಗಿರಬೇಕಾಗುವದು ಯಾಕಂದರೆ, ಸಿದ್ಧಿಗಳು ನಿಮಗೆ ಆಕರ್ಷಣೆ ಮಾಡುವವು. ಅವುಗಳಿಗೆ ಬಲಿಬೀಳಬೇಡಿರಿ. ಅವುಗಳನ್ನು ದೂರ ಮಾಡಿರಿ ಮತ್ತು ನಿಮ್ಮ ಧ್ಯೇಯದ ಕಡೆಗೆ ಲಕ್ಷ್ಯಗೊಡಿರಿ.

ಆತ್ಮನಲ್ಲಿ ಏಕರೂಪರಾಗಿರಿ, ಅಂದರೆ ದ್ವೈತವು ನಷ್ಟವಾಗುವದು ಮತ್ತು ಖರೇ ಸ್ವಾತ್ಮಸುಖವು ಪ್ರಾಪ್ತವಾದೀತು. ಆತ್ಮನಲ್ಲಿ ಹ್ಯಾಗೆ ಅಂತರ್ಮುಖ

ವಾಗಬೇಕು ಎಂಬುದು ಅಜ್ಞಾನಿ ಜನರಿಗೆ ಕಲಿಸುವದೇ ಮಹಾನ್ ಸಾಧುಗಳ ಇಹ ಲೋಕದೊಳಗಿನ ಕರ್ತವ್ಯವು. ಮಾನವೀ ಆತ್ಮವು ಕ್ಷುಲ್ಲಕವಾಗಿರದೆ, ಈಶ್ವರನ ಪ್ರೀತಿಯ ಬಾಲಕನಿದ್ದಾನೆ ಎಂದು ಅವರು ಪ್ರತ್ಯಯಕ್ಕೆ ತಂದುಕೊಡುತ್ತಾರೆ. ಅರ್ವಾಚೀನ ವಿದ್ವಾಂಸ ಜನರಿಗೆ ಇದರ ನಿಜತ್ವದ ಕಲ್ಪನೆ ಬರಲಾರದು. ಆದರೂ ರಾಮದಾಸರು ಹೇಳುತ್ತಾರೆ. ಸಾಧು ಸಂತರು ಈಶ್ವರನ ಸದೋದಿತ ಕೀರ್ತನ ಮಾಡುತ್ತಾ ಇರಬೇಕು. ಇಲ್ಲಿ ಕೆಲವು ಸಂಗತಿಗಳಷ್ಟೇ ವಿಶದಮಾಡಿ ನಾನು ಹೇಳಿರುತ್ತೇನೆ. ಆ ಸಂಗತಿಗಳು ವಿದ್ವಾಂಸ ಇರಲಿ ಅವಿದ್ವಾಂಸನಿರಲಿ ಸರ್ವರಿಗೂ ಗ್ರಾಹ್ಯವಾಗುವಂಥವು ಇವೆ.”

ಶ್ರೀಗಜಾನನ ಮಹಾರಾಜರು ಪ್ರಸ್ತುತ ನಾಶಿಕದಲ್ಲಿ ಇರುತ್ತಾರೆ. ಪರಮಾರ್ಥ ಮಾರ್ಗದಲ್ಲಿ ಕೆಲವು ಅಧಿಕಾರಿಗಳು ಅವರ ಶಿಷ್ಯರಾಗಿದ್ದಾರೆ. ಅವರ ಪೈಕಿ ಈ ಕೆಳಗಿನವರಿಗೆ ಗಜಾನನ ಮಹಾರಾಜರು ಉಪದೇಶ ಮಾಡಿದ್ದಾರೆ.

೧) ದಾಮೋದರ ಮಾರ್ತಂಡ ಚಿಟಣೀಸ ಮತ್ತು ಅವರ ಮಗ ಮಧು.

೨) ವಿಶ್ವನಾಥ ಗೋಪಾಳ ವೈದ್ಯ ‘ ಶ್ರೀಗುರುಕೃಪಾಧ್ಯಾಯ ’ ಇದನ್ನು ಬರೆದವರು.

೩) ಗಂಗಾಧರಪಂತ ವಾಲಾವಲಕರ

೪) ವಿಷ್ಣು ಪಂತ ಜಾಘೆಕರ

೫) ವಾಮನ ಕೇಶವ ಮಾಹೆಗಾಂವಕರ “ ಗುರುಶಿಷ್ಯ ವಿಜ್ಞಾನ ದೀಪಿಕಾ ” ಇದರ ಲೇಖಕ

೬) ಶಂಕರ ಮಲ್ಹಾರ ಪಂತ

೭) ಭಾರ್ಗವ ವಾಮನ ಪರಚುರೆ

೮) ಪಾಂಡುರಂಗ ಲಕ್ಷ್ಮಣ ಭಾಗವತ

೯) ಡಿ. ಡಿ. ಭಾವೆ

೧೦) ಪ್ರೊಫೆಸರ ಕೆ. ಆರ್. ಕರಂದಿಕರ, ರಾಯಲ್ ಇನ್ಸಟಿಟ್ಯೂಟ ಆಫ ಸಾಯಿನ್ಸ, ಮುಂಬಯಿ

೧೧) ಕಾಣೆ, ಪೆನ್‌ಶನರ ಪೋಸ್ಟಲ ಸುಪರಿಂಟೆಂಡೆಂಟ

೧೨) ದತ್ತಾತ್ರಯ ಕೇಶವ ಭಟ್ಟ

೧೩) ಪಿ. ಎಲ್. ಇನಾಮದಾರ

೧೪) ವಸಂತ ನಾರಾಯಣ ಶಿರೋಡಕರ

೧೫) ಅಂಬಾದಾಸ ಗೋಪಾಳ ಪೈಠಣಕರ

೧೬) ಗೋವಿಂದ ದಾದಾಜಿ ಮಾಂಡವಗಣೆ

೧೭) ಶಂಕರ ಕೇಶವ ಫಣಸಳಕರ

೧೮) ಕೃಷ್ಣಾಜಿ ಗೋವಿಂದ ಕಾಡೋಕರ

ಯಾರಿಗೆ ಧ್ಯಾನಯೋಗದ ಪ್ರತ್ಯಕ್ಷ ಅನುಭವಗಳು ಶಿಕ್ಕಿರುತ್ತವೆಯೋ ಅವರು ಈ ಚರಿತ್ರ ಸಂಬಂಧ ಬಹಳ ಉತ್ಸುಕರಾಗಲಿಕ್ಕಿಲ್ಲ. ಇವರ ಪೈಕಿ ಬಹುತೇಕ ಜನರಿಗೆ ಗಜಾನನ ಮಹಾರಾಜರ ಕೂಡ ಹೋದ ಏಳು ಎಂಟು ವರ್ಷಗಳಿಂದ ಸಂಬಂಧ ಆಗಿರುತ್ತದೆ. ಅಂಧವಿಶ್ವಾಸವಿಡದೆ ಅವರಿಗೆ ಪ್ರತ್ಯಕ್ಷ ಅನುಭವ ಶಿಕ್ಕಿದ್ದಿದ್ದು, ಅವರು ಮಾನಸಿಕ ಸುಖ ವ ಶಾಂತಿ ಇವುಗಳ ಅನುಭವವನ್ನು ತಕ್ಕೊಳ್ಳುತ್ತಿದ್ದಾರೆ. ಯಾರಿಗೆ ಖರೇ ಸದ್ಗುರು ಕಡೆಯಿಂದ ಮಾರ್ಗದರ್ಶನವಾಗಬೇಕೆಂದು ಮನಸ್ಸಿಗೆ ತಳಮಳ ಹತ್ತಿರುವದೋ, ಅವರು ಗಜಾನನ ಮಹಾರಾಜರ ಸಾನ್ನಿಧ್ಯದ ಲಾಭ ತಕ್ಕೊಳ್ಳಬೇಕು. ಮತ್ತು ಇದರೊಳಗಿನ ಯಾವದಾದರೂ ಅನುಭವಗಳನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಅವರಿಗೆ ಯಾವದಾದರೂ ಪ್ರತ್ಯಕ್ಷ ಅನುಭವ ಶಿಕ್ಕಿದರೆ ಅವರು ಅಭ್ಯಾಸಕ್ಕೆ ದೃಢವಾಗಿ ಹತ್ತಿಕೊಳ್ಳುವರು ಇಲ್ಲವಾದರೆ ಬಿಟ್ಟುಬಿಡುವರು ಮಹಾರಾಜರಿಗೆ ಗುರುದಕ್ಷಿಣೆ ಅಥವಾ ಮತ್ತೇನಾದರೂ ಕೊಡುವ ಪ್ರಶ್ನೆಯೇ ಇಲ್ಲ. ಮಹಾರಾಜರ ಶ್ರೇಷ್ಠತ್ವ ಪೂರ್ಣಸತ್ಯವಗಿದೆ. ಅವರ ಕೂಡ ಯಾರಿಗೆ ಸಹವಾಸ ಸಂಭವಿಸುತ್ತದೆ, ಅಂಥವರ ಕೂಡ ಅವರು ಪ್ರೇಮದಿಂದ ವರ್ತಿಸುತ್ತಾರೆ. ಈ ಮೂಲಕ ಅವರು ಜನರಿಗೆ ತಮ್ಮ ಕಡೆಗೆ ಎಳಕೊಳ್ಳುತ್ತಾರೆ. ಇಂಥ ಸತ್ಪುರುಷರ ಸಹವಾಸದಿಂದ ಸಾಧಕನಿಗೆ ನಿಃಸಂಶಯವಾಗಿ ಲಾಭವಾಗುತ್ತದೆ.

ಗಜಾನನ ಮಹಾರಾಜರ ವ್ಯಕ್ತಿವಿಶೇಷದ ಕುರಿತು ಸ್ವಲ್ಪ ವರ್ಣನೆ ಮಾಡಿ ಈ ಅಲ್ಪ ಚರಿತ್ರವನ್ನು ಮುಗಿಸುವೆನು. ಅರ್ವಾಚೀನ ಕಾಲದ ಪರಮಾರ್ಥ ಶೂನ್ಯವಿದ್ದರೂ ಬಹಳ ಬಡಬಡಿಸುವಂಥ ವ್ಯಕ್ತಿಗಳೊಳಗೆ ಈ ಲೋಕದಲ್ಲಿ ಇಂಥ ಸಾಧುಗಳು ಕ್ವಚಿತ್ತವಾಗಿ ಶಿಗುವರು ಅವರು ಬಾಗಾಲಿನಿಂದ ಕುಂಟರೂ ಪಂಗುಗಳೂ, ಶರೀರದಿಂದ ಬಹಳ ಕ್ಷೀಣರು ಆಗಿ ಅಲ್ಪ ಸ್ಥಿತಿಯವರೆಂತ ಕಾಣಿಸುತ್ತಿದ್ದರೂ, ಜಗರಹಾಟಿಯೊಳಗೆ ಅಥವಾ ಜನರ ಕೂಡ ನಡತೆಯಲ್ಲಿ ಅವರು ದುರ್ಮುಖಯುಕ್ತರೂ, ಖಿನ್ನವದನರೂ ಎಂಬಂತೆ ಯಾರಿಗೂ ಕಾಣಲಾರರು.

(೫೮) ವ್ಯಕ್ತಿ ಮತ್ತು ಸ್ವಭಾವ– ಅವರ ಮುಖದ ಮೇಲೆ ವಿನೋದಿ ಭಾವವು ಯಾವಾಗಲೂ ಇರುತ್ತದೆ; ಆದರೆ ಅದು ನಿಷ್ಕಪಟಯಾಗಿಯೂ ಹಿತಕರವಾಗಿಯೂ ಇರುತ್ತದೆ. ಅವರು ಅಕ್ಷರಶಃ ಬ್ರಹ್ಮಚಾರಿ ಇದ್ದಾರೆ. ಅವರು ಸ್ತ್ರೀಯರಿಗೆಲ್ಲ ತಾಯಿ ತಂಗಿ ಎಂಬ ಭಾವನೆಯಿಂದಲೇ ತಿಳಿಯುತ್ತಾರೆ. ಅವರು ಸ್ವತಃ ವ್ಯವಹಾರಿ ಜನರಂತೆಯೇ ಇದ್ದಾರೆ. ಅವರು ಉತ್ತಮ ಉಡಿಗೆ

ಗಳನ್ನು ಪ್ರೀತಿಸುತ್ತಾರೆ. ಅವರು ಸ್ವಚ್ಛ ಮತ್ತು ಸರಿಯಾದ ಉಡಿಗೆಗಳನ್ನು ತೊಡುತ್ತಾರೆ. ಅವರ ಬಿಳುಪಾದ ಕಾಲರ ಸೋನೇರಿಪಿನ್ ಬೆಳೇ ನೆಕಟಾಯಿ ಇವು ವಿಶೇಷವಾಗಿ ನೋಡುವವರ ಕಣ್ಣು ಆಕರ್ಷಿಸತಕ್ಕವಿರುವವು. ಅವರ ಭೋಜನಪಾನಗಳು ಸಾದಾ ಪ್ರಕಾರದ್ದಿರುವವು. ಒಂದು ವಾರದಲ್ಲಿ ಒಮ್ಮೆ ಅಥವಾ ಎರಡು ಸಲ ಅನ್ನಗ್ರಹಣ ಮಾಡುತ್ತಾರೆ. ಆದರಲ್ಲಿ ಒಂದೇ ಚಪಾತಿಯು ನಾಲ್ಕನೆ ಅಂಶ ವ ಮಸಾಲೆ ಇಲ್ಲದ ಯಾವದಾದರೂ ಪಲ್ಲೆ ಇರುತ್ತದೆ. ನಿತ್ಯದಲ್ಲಿ ಅವರು ಐದು ಆರು ಸಲ ಚಹಾ ತಿಗೊಳ್ಳುವರು. ಅವರು ಚಹಾದ ಬಹಳ ಚಟ ಉಳ್ಳವರು. ಅವರು ಒಂದೇಸವನೇ ಸಿಗಾರೇಟ್ಸ ಶೇದುತ್ತಾರೆ. ಈ ಸಿಗಾರೇಟ ಶೇದುವದರೊಳಗೆ ಒಂದು ವಿಲಕ್ಷಣ **ಸಂಗತಿ** ಒಮ್ಮೊಮ್ಮೆ ಸಂಭವಿಸುವದು. ಮಹಾರಾಜರ ಶಿಷ್ಯರು ವ ಮಿತ್ರರು, ಮಹಾರಾಜರು ಉತ್ತಮ ಪ್ರಕಾರದ ಸಿಗಾರೇಟ ಸೇದುತ್ತಿದ್ದರೂ, ಅವರ ಸುತ್ತಲಿನ ವಾತಾವರಣ ಊದಿನಕಡ್ಡಿಗಳ ವಾಸದಿಂದ ತುಂಬಿದಂತೆ ಅನುಭವ ಪಡೆದಿರುವರು. ಅವರು ಯಾವಾಗ್ಗೆ ತಮ್ಮ ಮನಸ್ಸು ಪರಮಾನಂದ ವೃತ್ತಿಯಲ್ಲಿ ತಲ್ಲೀನ ಮಾಡುವರೋ ಆಗ ಈ ಸಂಗತಿಯು ವಿಶೇಷ ಪ್ರತ್ಯಯಕ್ಕೆ ಬರುವದು.

ಒಟ್ಟಾರೆ ಮೇಲೆ ಅವರ ಬಾಹ್ಯ ದೃಶ್ಯದಲ್ಲಿಯೂ ಆಚರಣೆಯಲ್ಲಿಯೂ ಒಳಗೆ ಗುಪ್ತವಾಗಿರುವ ಅವರ ಸಾಧುತ್ವವು ಯಾರಿಗಾದರೂ ಕಾಣಿಸಲಾಗದು. ಅವರ ಕಡೆಗೆ ಬರುವ ಜನರಿಗೆ ಪ್ರಥಮದಲ್ಲಿ ಇವರು ಸಾಮಾನ್ಯ ಮನುಷ್ಯರಿದ್ದಾರೆಂಬದಾಗಿ ಭಾವನೆಯಾಗುವದು. ಅತಿ ನಿಕಟ ಸಹವಾಸದ ನಂತರವೇ ಈ ನಾಜೂಕ ವ ರೋಗಿ ಶರೀರದಲ್ಲಿ ಮಹಾನ್ ವಿಭೂತಿಯು ವಾಸಮಾಡಿರುತ್ತದೆ ಎಂಬದು ನಿಶ್ಚಯವಾದೀತು. ಚಿಕ್ಕಂದಿನಿಂದ ನಿರಭಿಮಾನ ಸ್ಥಿತಿಯಲ್ಲಿರುವದೇ ಅವರ ಸ್ವಭಾವವಾಗಿದೆ, ಈ ಅವರ ಸ್ವಭಾವದ ಮೂಲಕ ಅವರ ಕೆಲವು ಶಿಷ್ಯರು ಅವರು ಬಂಗಾಲದ ರಾಮಕೃಷ್ಣ ಪರಮಹಂಸರಂತೆ ಇರುವರೆಂದು ತಿಳಕೊಳ್ಳುವದರಲ್ಲಿ ಆಶ್ಚರ್ಯವೇನೂ ಇಲ್ಲ,

ಯಾವಾಗ್ಗೆಲ್ಲ ಇವರು ಯಾರಿಗಾದರೂ ಪತ್ರ ಬರಿಯುತ್ತಾರೆ. ಆಗೆಲ್ಲ ಅವರು ತಮ್ಮನ್ನು ಕಸಬರಿಕೆಯೆಂದು ತಿಳಿದು ಹಾಗೆಯೇ ಸಹಿ ಮಾಡುತ್ತಾರೆ. ಇದೊಂದು ಲಕ್ಷ್ಯದೊಳಗಿಡತಕ್ಕ ಸಂಗತಿಯದೆ. ‘ ಕಸಬರಿಕೆ ’ ( ಕೇರಸುಣಿ ಮರಾಠಿ ) ಈ ಶಬ್ದವು ಧ್ಯಾನದಲ್ಲಿಟ್ಟುಕೊಳ್ಳತಕ್ಕದ್ದದೆ. ಈ ಶಬ್ದವೇ ಇವರ ಆಯುಷ್ಯದೊಳಗಿನ ಕಾಮಗಿರಿಯನ್ನು ತೋರಿಸುತ್ತದೆ. ಯಾರಾದರೂ ಇವರ ಕಡೆಗೆ ಬಂದರೆ ಅವರ ಮನಸ್ಸು ಸ್ವಚ್ಛಮಾಡುವ ಕೆಲಸವು ಇವರ ಅದೃಷ್ಟದಲ್ಲಿ ಬರೆದದ್ದೆಂತ ತೋರುತ್ತದೆ. ಮಾನವೀ ಮನಸ್ಸು ಯಾವಾಗಲೂ ಸುಳ್ಳು ವ ಮೋಸದ ಸಂಗತಿಗಳಿಂದ ಮುಚ್ಚಿರುತ್ತದೆ. ಅದು ಈ ಪ್ರಕಾರ ಮಲಿನತ್ವದಿಂದ ಆಚ್ಛಾದಿತವಾಗಿರುವದರಿಂದ ಒಳಗಿನ ಮಾರ್ಗದರ್ಶಕವಾದ ಆತ್ಮ ತೇಜವನ್ನು

ನೋಡಲಾರದು. ಆ ಮೂಲಕ ಅದು ದುಃಖಿ, ನಿರಾಶ ಮತ್ತು ಅಸ್ವಸ್ಥವಾಗಿರುತ್ತದೆ. ಅರ್ವಾಚೀನ ವೈದ್ಯಶಾಸ್ತ್ರವು ಶಾರೀರಿಕ ವೈಗುಣ್ಯವನ್ನೂ ಶಾರೀರಿಕ ದುಃಖಗಳನ್ನೂ ನೆಟ್ಟಗೆ ಮಾಡುತ್ತವೆ. ಆದರೆ ಆ ಶಾಸ್ತ್ರವು ಮೇಲೆ ಹೇಳಿದ ಮಾನಸಿಕ ವ್ಯಥೆಯನ್ನು ಕಳೆಯಲಾರದು. ಮನುಷ್ಯನ ಮನಸ್ಸನ್ನು ಉತ್ತಮ ರೀತಿಯಿಂದ ನಿರೋಗಿಯಾಗಿ ಮಾಡಿ, ಹಾಗೆಯೇ ಇರುವಂತೆ ಮಾಡಬೇಕಾದರೆ ಧ್ಯಾನಯೋಗ ಇದೊಂದೇ ಶಾಸ್ತ್ರವು ಉಪಯೋಗವಾಗಿದೆ.

ಗಜಾನನ ಮಹಾರಾಜರು ಪೂರ್ವಜನ್ಮದ ಸತತ ಅಭ್ಯಾಸದಿಂದ ಮತ್ತು ಈ ಜನ್ಮದಲ್ಲಿ ಹೊಂದಿದ ಗುರುಕೃಪೆಯಿಂದ ಈ ಧ್ಯಾನಯೋಗದಲ್ಲಿ ಪೂರ್ಣ ನಿಷ್ಣಾತರಾಗಿದ್ದಾರೆ. ನನಗೆ " ಇನ್ನು ಬಹಳ ಮೆಟ್ಟಿಲುಗಳನ್ನು ಏರುವದವೆ, " ಹೀಗೆ ಅವರು ಆಗಿಂದಾಗ್ಗೆ ಹೇಳುತ್ತಿರುತ್ತಾರೆ. ಆದರೆ ಅವರು ಏನು ಕಲಿತಿರುವರೋ, ಅವನ್ನು ತಮ್ಮ ಗುರುಗಳ ಹೆಸರಿನಿಂದ ಎರಡನೇಯವರಿಗೆ ಕೊಡುವಂಥಾದ್ದು ತನ್ನ ಕರ್ತವ್ಯವೆಂದು ತಿಳಿಯುತ್ತಾರೆ, ಮತ್ತು ಈ ಪ್ರಕಾರ ಪ್ರತಿ ಒಬ್ಬ ಮಾನವಿ ಪ್ರಾಣಿಯಲ್ಲಿ ಅಂತರ್ಯಾಮಿಯಾದ ಯಾವ ಆತ್ಮಪ್ರಕಾಶವಿದೆಯೋ ಅದನ್ನು ಅಧಿಕಾರಿ ಮನುಷ್ಯನಿಗೆ ತೋರಿಸುವದಕ್ಕೆ ಮತ್ತು ಅನುಭವಗಳನ್ನು ಹೊಂದಲಿಕ್ಕೆ ಅವರು ಸಹಾಯ ಮಾಡುತ್ತಾರೆ. ಮಾನವೀ ಮನಸ್ಸಿನ ಮಲಿನತೆಯನ್ನು ತೆಗೆದು ಚೆಲ್ಲಿ, ಅದು ಆತ್ಮಪ್ರಕಾಶವನ್ನು ಗ್ರಹಣಮಾಡುವಷ್ಟು ಸ್ವಚ್ಛ ಮಾಡುವದು. ಮತ್ತು ಜೀವಶಿವರೊಳಗೆ ಸಾಮ್ಯತಾ ಅಥವಾ ಐಕ್ಯತೆಯನ್ನು ಉತ್ಪನ್ನಮಾಡುವದು, ಇದೇ ಇವರ ಇಹಲೋಕದ ಮುಖ್ಯ ಕಾರ್ಯವಿರುತ್ತದೆ. ಆದರೂ ಒಂದು ಸಂಗತಿ ಮಾತ್ರ ಇಲ್ಲಿ ಅವಶ್ಯವಾಗಿ ನಮೂದಿಸಿ ಇಡಬೇಕಾಗಿದೆ.

ಅವರ ಕಾರ್ಯವಿದ್ದು ಈ ಪ್ರಕಾರ ನೇಮಿಸಿದಂತಿದೆ, ಆದರೂ ಗಜಾನನ ಮಹಾರಾಜರ ಸ್ವಭಾವವೇ ಅಪ್ರಸಿದ್ಧರಾಗಿರುವದರಿಂದ ತಮ್ಮ ಇತರ ಸಮಕಾಲೀನ ಸಾಧುಗಳಂತೆ ಈ ಜಗತ್ತಿನ ಕಾಲಚಕ್ರದಲ್ಲಿ ತಾನು ಪ್ರಸಿದ್ಧಿಗೆ ಬರುವದಕ್ಕೆ ಎಷ್ಟು ಮಾತ್ರವೂ ಇಂಬುಕೊಡಲಿಲ್ಲ, ಅವರನ್ನು ಹುಡಿಕಿ ತೆಗಿಯುವ ಕೆಲಸವನ್ನು ಸತ್ಯಶೋಧಕನಿಗೆ ಮೊದಲು ಒಪ್ಪಿಸಿರುವದು. ಅವರ ಸಹಾಯದಿಂದ ಅವನು ಬೇಕಾದರೆ ತನ್ನ ಉದ್ಧಾರ ಮಾಡಿಕೊಳ್ಳಬೇಕು; ಅಭಿಮಾನ ಇಲ್ಲದಂತೆ ಮಾಡುವದು ಮತ್ತು ನಿರಭಿಮಾನಿಯಾಗಿರುವದು ಅವರ ಸ್ವಾಭಾವಿಕ ವೃತ್ತಿ ಇರುವದು. ಈ ಸಂಬಂಧ ಒಂದು ಲೇಖನದೊಳಗಿಂದ ಉತಾರವನ್ನು ಕೆಳಗೆ ಕೊಟ್ಟಿರುತ್ತೇನೆ. ಈ ಲೇಖನವು ಶ್ರೀ. ನಾಗೇಶ ವಾಸುದೇವ ಗುಣಾಜಿ ಇವರು " ಗುರು-ಶಿಷ್ಯ-ವಿಜ್ಞಾನ-ದೀಪಿಕಾ " ಎಂಬ ಸಣ್ಣದೊಂದು ಪುಸ್ತಕದಲ್ಲಿ ಬರೆದದ್ದು ಇದ್ದು, ಅದು ಪರೀಕ್ಷಣವೆಂತ ಗೋರಕ್ಷಣ ಈ ವರ್ತಮಾನ ಪತ್ರದ

ಕಾರ್ತಿಕ ಶು॥ ೧೧ನೇ ಶಕೆ ೧೮೬೦ ಈ ಅಂಕದಲ್ಲಿ ಪ್ರಸಿದ್ಧವಾಗಿದೆ, ಅದನ್ನು ಮಹಾರಾಜರ ನಿರಹಂಕಾರ ವೃತ್ತಿ ಸಂಬಂಧ ವಾಚಕರು ಅವಶ್ಯ ಓದಬೇಕು.

" ಅವಿನಾಶಿ ಈಶ್ವರನೆಂದರೆ ಗುರುದೇವನೆ ಇದ್ದಾನೆ, ಇತರೆ ಸರ್ವ ದೇವತೆಗಳು ಮಾಯಿಕರಿರುವರು. " ಶ್ರೀಸಾಯಿ ಸ. ಚರಿತ್ರ ( ೧೮೪ )

ನಾನು ಸಂತ ಚರಿತ್ರದೊಳಗಿನ ಸಂಗತಿಗಳನ್ನು ಲಕ್ಷಪೂರ್ವಕ ಕೇಳಿದ್ದರೆ, ನಮಗೆ ಬಹಳ ಲಾಭವಾಗುವದು. ಆದರೆ ನಾವು ಈ ಸಂತರ ಗೊತ್ತು ಹ್ಯಾಗೆ ಹಿಡಿಯಬೇಕು ? ಅವರ ವಿಶೇಷ ಲಕ್ಷಣ ಏನು ಇರುತ್ತದೆಂಬದು ಅನೇಕ ಪುಸ್ತಕಗಳಲ್ಲಿ ವಿವೇಚನ ಮಾಡಿರುತ್ತದೆ. ಅವುಗಳ ಸವಿಸ್ತರ ವರ್ಣನವು ಇಲ್ಲಿ ಕೊಡಲಿಕ್ಕೆ ಶಕ್ಯವಿಲ್ಲ. ಇದಲ್ಲದೆ ಪರೀಕ್ಷಣ ಮಾಡತಕ್ಕ ವ್ಯಕ್ತಿಯಲ್ಲಿ ಈ ಎಲ್ಲಾ ಲಕ್ಷಣಗಳು ಇದ್ದಾವೊ ಇಲ್ಲವೊ ಅಂತ ತಿಳುಕೊಳ್ಳುವ ಶಕ್ತಿಯು ನಮ್ಮ ಪೈಕಿ ಬಹಳ ಕಮ್ಮಿ ಜನರಲ್ಲಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಾವು ಒಂದೇ ಒಂದು ಲಕ್ಷಣವನ್ನು ಹೇಳುವೆವು. ಅದು ಎಲ್ಲಕ್ಕೂ ಹೆಚ್ಚಿನ ಮಹತ್ವದ್ದು ಇದ್ದು, ಅದು ಯಾರೊಬ್ಬನಲ್ಲಿ ಕಾಣಬಂತೆಂದರೆ ಅವನು ಸಾಧು ಎಂತ ತಿಳಕೊಂಡರೆ ತಪ್ಪಾಗಲಿಕ್ಕಿಲ್ಲ. ಯಾವಾತನಲ್ಲಿ ಈ ಲಕ್ಷಣ ಕಾಣುವದೊ ಅವನು ಸದ್ಗುರು ಎಂತ ಅವನ ಮೇಲೆ ನಿಃಶಂಕೆಯಿಂದ ವಿಶ್ವಾಸವಿಡಬಹುದು. ಅಂಥವನ ಮೇಲೆ ವಿಶ್ವಾಸವಿಟ್ಟರು ಮೋಸ ಹೋಗಲಿಕ್ಕಿಲ್ಲ.

ಮುಖ್ಯವಾಗಿ ಅಹಂ-ತೆಯು ನಾಶವಾಗಲಿಕ್ಕೆಬೇಕು. ತುಕಾರಾಮ.

ಈ ಅಹಂಕಾರದ ವಿಷಯವನ್ನು ಜ್ಞಾನೇಶ್ವರರು ಜ್ಞಾನೇಶ್ವರಿಯಲ್ಲಿ ವಿಶೇಷವಾಗಿ ವರ್ಣನೆ ಮಾಡಿದ್ದಾರೆ. " ಈ ಅಹಂಕಾರದ ಆಟ ಚಮತ್ಕಾರವಿದೆ, ಇದು ವಿಶೇಷವಾಗಿ ಅಜ್ಞಾನಿಯ ಬೆನ್ನು ಹತ್ತುವದಿಲ್ಲ, ಆದರೆ ಸಜ್ಞಾನಿಯು ಕೊರಳಿಗೆ ಬೀಳುತ್ತದೆ ಮತ್ತು ನಾನಾ ಸಂಕಟದಲ್ಲಿ ಕುಣಿಸುತ್ತದೆ, " ಜ್ಞಾನೇಶ್ವರರ ಈ ವಿಚಾರವು ಎಷ್ಟು ಸಮತೋಲವಾಗಿದೆ ನೋಡಿರಿ, ಈ ಅಹಂಕಾರವನ್ನು ಜಯಿಸುವದು ಬಹಳ ಕಠಿಣವದೆ. ಇಷ್ಟೆ ಅಲ್ಲ, ಅದು ಇಷ್ಟು ಸೂಕ್ಷ್ಮ ಮತ್ತು ಕುಯುಕ್ತಿ ಉಳ್ಳದ್ದದೆ ಅಲ್ಲ, ದೊಡ್ಡದೊಡ್ಡ ಜನರಿಗೆ ಸಹಾ ತಾವು ಅದರ ಬಲೆಯೊಳಗೆ ಶಿಕ್ಕೇವೆ ಅಂತ ಅದು ತಿಳಿಯಗೊಡುವದಿಲ್ಲ.

ನನ್ನ ಮರಣ ನಾನು ನೋಡಿದೆನು. ಆ ಸುಖವನ್ನು ವರ್ಣಿಸಲಾಗದು, ತುಕಾರಾಮ.

ಇದರ ಅರ್ಥ ತುಕಾರಾಮ ಮಹಾರಾಜರು ತನ್ನ ಅಹಂಕಾರದ ಮರಣ ತಾನು ನೋಡಿದೆ ಅಂತ ಇರುತ್ತದೆ.

ಏಕನಾಥ ಮಹಾರಾಜರು ಸಹ ಭಾಗವತದಲ್ಲಿ ಅನ್ನುತ್ತಾರೆ, ದೇಹಾಭಿಮಾನ ಮಾನಮಾನ್ಯತೆ ಮತ್ತು ದೊಡ್ಡಸ್ತಿಕೆ ದೊರಕಿಸಿಕೊಳ್ಳುವ ಆಶೆಯು ನಷ್ಟವಾಗಬೇಕು. ಆಗಲೇ ಅವನು ಬ್ರಹ್ಮದಲ್ಲಿ ಐಕ್ಯಹೊಂದಲಿಕ್ಕೆ ಯೋಗ್ಯನಾಗುವನು.

"ಅಹಂಕಾರದ ಘಾಳಿಯು ನನ್ನ ವಿಶ್ವಾಸಿಕ ಮತ್ತು ಭಾವಿಕರಾದ ವಿಷ್ಣುದಾಸರಿಗೆ ಹತ್ತದಿರಲಿ," ಈ ಪ್ರಕಾರ ನಾಮದೇವರಾದರೂ ಈಶ್ವರನಿಗೆ ಪ್ರಾರ್ಥಿಸಿದ್ದರು,

ಯಾರ ಅಹಂಕಾರವು ಸಮೂಳ ನಷ್ಟವಾಗಿದೆಯೋ ಮತ್ತು ಯಾರು ಬ್ರಹ್ಮದಲ್ಲಿ ಸಮರಸವಾಗಿದ್ದಾರೊ ಅವರಿಗೆ ಅತಿ ನಮ್ರತೆಯಿಂದ ಶರಣುಹೋಗಿ, ಅವರ ಸಹವಾಸದಲ್ಲಿದ್ದು, ಅವರ ಆಜ್ಞಾಪಾಲಿಸುವದು ಇದೇ ಎಲ್ಲದರಲ್ಲಿ ಶ್ರೇಷ್ಠ ಕರ್ತವ್ಯವು. ಇದಕ್ಕೂ ಹೆಚ್ಚಿನ ಕರ್ತವ್ಯವು ಈ ಜಗತ್ತಿನಲ್ಲಿ ಬೇರೆ ಇಲ್ಲ,

ಶೇರಡಿಯ ಸಾಯಿ ಬಾಬಾ ವ ರಾಮಕೃಷ್ಣ ಪರಮಹಂಸರು ಇವರು ಈ ಅಹಂಕಾರವನ್ನು ಸಮೂಳ ನಷ್ಟಮಾಡಿದ್ದರು.

ರಾಮಕೃಷ್ಣ ಪರಮಹಂಸರು ಒಬ್ಬ ಶಿಷ್ಯನ ಸಂಗತಿ ಸಹಾ ನಾವು ಕಲಿಯತಕ್ಕದ್ದದೆ. ಅವನು ರಾಮಕೃಷ್ಣ ಪರಮಹಂಸರ ವಚನಗಳನ್ನು ಬಂಗಾಲಿ ಭಾಷೆಯಲ್ಲಿ ನಾಲ್ಕೈದು ಭಾಗಗಳಾಗಿ ಪ್ರಸಿದ್ಧ ಮಾಡಿದ್ದಾನೆ. ಇದಲ್ಲದೆ ಇಂಗ್ಲಿಷಭಾಷೆಯಲ್ಲಿಯೂ ರಾಮಕೃಷ್ಣ ಪರಮಹಂಸರ ವಿಷಯ ಸಂಗತಿಗಳನ್ನು ಎರಡು ಭಾಗಗಳಾಗಿ ಬರೆದಿರುತ್ತಾನೆ. ಮೇಲೆ ಬರೆದ ಬಂಗಾಲಿ ಭಾಷೆಯಲ್ಲಿ ಬರೆದ ಸಂಗತಿಗಳ ಮೇಲಿಂದಲೇ ಇಂಗ್ಲಿಷ ಭಾಷೆಯಲ್ಲಿಯೂ ಬರೆದಿತ್ತು, ಇವನು ಬರೆದ ಈ ಪುಸ್ತಕಗಳಲ್ಲಿ ವಿಶೇಷವೇನಂದರೆ— ಈ 'ಎಮ್' ವಾಚಕರನ್ನು ಒಮ್ಮೆಲೆ ರಾಮಕೃಷ್ಣ ಪರಮಹಂಸರ ಕಡೆಗೆ ಒಯ್ಯುತ್ತಾರೆ. ಮುಂದಿನ ಸಂವಾದವು ವಾಚಕ ಮತ್ತು ರಾಮಕೃಷ್ಣರು ಇವರೊಳಗೆ ನಡೆದು, ಲೇಖಕನು ಮೂರನೇಯೆಂಬವನಂತೆ ಅಲ್ಲಿರುವನು. ವಾಚಕನ ಮನಸ್ಸು ರಾಮಕೃಷ್ಣರ ಬೋಧಾಮೃತವನ್ನು ಕೇಳಿ, ಪೂರಾ ತೃಪ್ತವಾಗುತ್ತದೆ; ಅಗ್ಗ ಗುಣಗಳ ಅಗಾಧ ಜ್ಞಾನ ವ ಭಕ್ತಿ ಅಥವಾ 'ಎಮ್' ನಲೀನತಾ ಇವುಗಳ ಪೈಕಿ ಯಾವದರ ಸ್ತುತಿ ಮಾಡಲಿ ಎಂದು ವಾಚಕನಿಗೆ ತಿಳಿಯದು, ಶ್ರೀರಾಮಕೃಷ್ಣ ಪರಮಹಂಸ ಮತ್ತು ಇತರ ಸಾಧುಗಳು ಇವರ ಸಹವಾಸದಲ್ಲಿ ತಂದು ಅವರ ಪರಿಚಯ ಮಾಡಿಕೊಟ್ಟ ಬಗ್ಗೆ 'ಎಮ್' ನ ಉಪಕಾರ ಮನ್ನಿಸಬೇಕೆಂತ ಅವನನ್ನು ಹುಡುಕಿದರೆ ಎಲ್ಲೆಲ್ಲಿಯೂ ಸಿಗಲಾರನು. ಯಾಕಂದರೆ ಆತನು ತನ್ನ ಹೆಸರು ಮತ್ತು ವಿಳಾಸವನ್ನು ಗುಪ್ತವಾಗಿಟ್ಟದ್ದಾನೆ. ಸರ್ವರೂ ಈ ಪ್ರಕಾರದ ಲೀನತೆಯ ಉದಾಹರಣೆಯನ್ನು 'ಎಮ್' ನಿಂದ ಕಲಿಯತಕ್ಕದ್ದು. (ಅವನ ಪೂರ್ಣ ಹೆಸರು ಮಹೇಂದ್ರನಾಥ ಗುಪ್ತ, )

ಗಜಾನನ ಮಹಾರಾಜರು ತಮ್ಮ ಹೆಸರು 'ಕೇರಸುಣಿ' (ಕಸಬರಿಕೆ) ಎಂದು ಯಾಕೆ ಇಟ್ಟುಕೊಂಡರು, ಎಂಬದಾಗಿ ಅವರ ಶಿಷ್ಯರಿಗೆ ಬಹಳ ಆಶ್ಚರ್ಯ ವೆನಿಸುತ್ತದೆ. ಆದರೆ ಅವರ ಒಬ್ಬ ಭಕ್ತನಿಗೆ ಅಡಗಿರುವ ಖರೆ ಸಂಗತಿ ಏನಿದೆ ಎಂಬದು ತಿಳಿದಿದ್ದರಿಂದ ಅವನು ಅದನ್ನು 'ಹನ್ನೆರಡು ಅಕ್ಷರದ ಕೇರಸುಣಿ ಮಂತ್ರ' ಈ ಹೆಸರಿನ ಕವಿತೆಯನ್ನು ಬರೆದು 'ಗುರುಶಿಷ್ಯ ವಿಜ್ಞಾನ ದೀಪಿಕೆ' ಈ ಗ್ರಂಥದಲ್ಲಿ ಪ್ರಸಿದ್ಧಮಾಡಿದ್ದಾನೆ. ಆದರಲ್ಲಿಯ ವಿಶೇಷವೆಂದರೆ ಪ್ರತಿಒಂದು ಪಂಕ್ತಿಯ ಆದ್ಯಾಕ್ಷರವು ತಕ್ಕೊಂಡರೆ ಒಟ್ಟು "ಕೇರಸುಣಿಲಾ ನಮನ ಅಸೊ" (ಕಸಬರಿಕೆಗೆ ನಮಸ್ಕಾರವಿರಲಿ) ಮತ್ತು ಕಡೆ ಹನ್ನೆರಡು ಅಕ್ಷರಗಳಿಂದ "ಗಜಾನನ ಮಹಾರಾಜಕಿ ಜಯ" ಹೀಗೆ ವಾಕ್ಯಗಳು ಸಿದ್ಧವಾಗುತ್ತವೆ.

ತಮ್ಮ ಅವತಾರ ಕಾರ್ಯಕ್ಕನುಸರಿಸಿ ಗಜಾನನ ಮಹಾರಾಜರು ಬಹಳ ಅಧಿಕಾರಿಗಳಿಗೆ ಧ್ಯಾನಯೋಗದ ಅನುಗ್ರಹ ಕೊಟ್ಟಿರುತ್ತಾರೆ. ಅಪ್ಪೈಕಿ ಕೆಲವರು ಆರ್ತರಿದ್ದರು. ಕೆಲವರು ಜಿಜ್ಞಾಸುಗಳಿದ್ದರು, ಅವರು ಹ್ಯಾಗೂ ಇರಲಿ, ಯಾರು ಉತ್ಕಟ ಇಚ್ಛೆಯಿಂದ ಮತ್ತು ದೃಢಸಂಕಲ್ಪದಿಂದ ಅವರ ಕಡೆ ಬರುತ್ತಾರೊ ಅಂಥವರಿಗೆ ಅನಿವಾರ ಸುಖ ಮತ್ತು ಆತ್ಮಸಾಕ್ಷಾತ್ಕಾರದ ಮಾರ್ಗ ತೋರಿಸಲ್ಪಟ್ಟದೆ.

ಪರಮಾರ್ಥ ಮಾರ್ಗದಲ್ಲಿಯ ಅಭ್ಯಾಸಿ ಸಾಧಕರ ಕೆಲವು ಅನುಭವಗಳು ಈ ನಿರಭಿಮಾನಿ ಮಹಾನ್ ಸಾಧುವಿನ ಚರಿತ್ರದ ಅಖೈರಿಗೆ ಕೊಟ್ಟಿರುತ್ತವೆ.

ಈ ಅನುಭವಗಳು ಪ್ರತಿ ಒಬ್ಬ ಸಾಧಕನ ಮನೋಭೂಮಿಕೆ ಪ್ರಕಾರ ಭಿನ್ನಭಿನ್ನವಾಗಿದ್ದರೂ ಈ ಮಹಾರಾಷ್ಟ್ರದ ಪುಣ್ಯಭೂಮಿಯಲ್ಲಿ ಯಾರಾದರೂ ಸತ್ಯಶೋಧನ ಮಾಡುವವರಿದ್ದರೆ ಆವರಿಗೆ ಮೋಕ್ಷಮಾರ್ಗವನ್ನು ತೋರಿಸುವ ತಕ್ಕ ಮತ್ತು ಒಂದು ಪ್ರಕಾರದ ಸಮಾಧಾನ ಉತ್ಪನ್ನವಾಗಲಿಕ್ಕೆ ಉತ್ತಮವಾಗಿ ಕಾರಣಿಭೂತವಾಗುವವು.

---

## ನಾಲ್ಕನೇ ಪ್ರಕರಣ

# ಮಹತ್ವದ ಸಂವಾದಗಳು

೧

ಒಂದು ದಿನ ಸರ್ವ ಶಾಸ್ತ್ರಗಳಲ್ಲಿ ಪ್ರವೀಣನೆಂತ ತಿಳಕೊಂಡ ಒಬ್ಬ ಗೃಹಸ್ಥನು ಮಹಾರಾಜರ ಕಡೆ ಬಂದು ಅಂದನು, "ನಿಮ್ಮ ಕೀರ್ತಿ ಕೇಳಿಕೊಂಡು ನಾನು ಇಷ್ಟಿಗೆ ಬಂದಿರುವೆನು. ಶಾಸ್ತ್ರದೊಳಗಿನ ನನ್ನ ಯಾವ

ಶಂಕೆಗಳವೆಯೊ ಅವನ್ನು ನೀವು ಸ್ಪಷ್ಟೀಕರಣ ಮಾಡುವಿರಿ ಮತ್ತು ನನ್ನ ಇತರ ಎಲ್ಲ ಸಂಶಯಗಳನ್ನೂ ದೂರ ಮಾಡುವಿರಿ ಎಂಬ ಈ ಆಶೆಯಿಂದ ನಾನು ನಿಮ್ಮ ಕಡೆ ಬಂದಿರುವೆನು. ನನಗೆ ನಿಮ್ಮ ಮೇಲೆ ಪೂರ್ಣ ಭರವಸೆ ಇದೆ." ಇದನ್ನು ಕೇಳಿ ಮಹಾರಾಜರು ಆವನ ಮುಖವನ್ನು ಚನ್ನಾಗಿ ನಿರೀಕ್ಷಿಸಿ ನೋಡಿದರು, ಮತ್ತು ಯಾರಾದರೂ ನನ್ನನ್ನು ವಾದದಲ್ಲಿ ಸೋಲಿಸಿ ನನಗೆ ನಗಚೇಷ್ಟೆಗೆ ಈಡು ಮಾಡಬೇಕೆಂತ ಈ ಮನುಷ್ಯನನ್ನು ನನ್ನ ಕಡೆಗೆ ಕಳುಹಿಸಿರಬೇಕು, ಎಂದು ಅವರ ಲಕ್ಷಕ್ಕೆ ಬಂತು. ಆ ಮನುಷ್ಯನು ಮತ್ತು ಅಂದನು, "ಎರಡು ಮೂರು ದಿನಗಳ ಹಿಂದೆ ನಾನು ಇಲ್ಲಿಗೆ ಬಂದಿದ್ದೆ, ಆದರೆ ನೀವು ಅಸ್ವಸ್ಥವಾಗಿದ್ದದ್ದು ಕೇಳಿ ತಿರಿಗಿ ಹೋದೆ. ಇವತ್ತು ತಿರಿಗಿ ಬಂದಿರುತ್ತೇನೆ."

ಮಹಾರಾಜ :— ಆದರೆ ನಾನು ಮಹಾರಾಜನಿದ್ದೇನೆಂತ ನಿಮಗೆ ಯಾರು ಹೇಳಿದರು? ನಾನು ಮಹಾರಾಜನಲ್ಲ, ನನಗೆ ಶಾಸ್ತ್ರಗಳು ಗೊತ್ತಿಲ್ಲ, ಮತ್ತು ಶಾಸ್ತ್ರವಿಷಯ ವಿವರಣ ನನಗೆ ಎಷ್ಟಕ್ಕೂ ಮಾಡಲಿಕ್ಕೆ ಬರುವದಿಲ್ಲ; ಇದು ಇಲ್ಲಿಯ ಪ್ರತಿ ಒಬ್ಬ ಮನುಷ್ಯನಿಗೆ ತಿಳಿದದೆ, ಹೀಗಿರುವಾಗ್ಗೆ ನಾನು ನಿಮ್ಮ ಸಂಶಯಗಳನ್ನು ಹ್ಯಾಗೆ ದೂರ ಮಾಡಲಿ? ನೀವು ಹೇಳುತ್ತೀರಲ್ಲ ನನ್ನ ಮೇಲೆ ನಿಮ್ಮ ಪೂರ್ಣ ವಿಶ್ವಾಸವಿದೆ, ಆದರೆ ಅಂಥ ವಿಶ್ವಾಸವು ನಿಮ್ಮಲ್ಲಿ ಒಮ್ಮೆಗೆ ಹ್ಯಾಗೆ ಉತ್ಪನ್ನವಾಯಿತು? ನನ್ನ ಕಡೆಯಿಂದ ಆದ ಯಾವದೊಂದು ಚಮತ್ಕಾರವನ್ನು ನೀವು ನೋಡಿರುವಿರೇನು? ನಿಮ್ಮದು ನನ್ನ ಮೇಲೆ ವಿಶ್ವಾಸ ಕೂಡ್ರಬೇಕಾದರೆ ನಿಮಗೆ ಏನಾದರೂ ವಿಶಿಷ್ಟ ಅನುಭವ ಪ್ರಾಪ್ತವಾಗಿತ್ತೇನು? ನೀವು ನನ್ನ ಸಂಬಂಧಿಕರು ಅಥವಾ ಸಾಲೆಯ ಸಂಗಡಿಗರು ಇದ್ದೀರೇನು? ಅಥವಾ ಪೂರ್ವ ಜನ್ಮದಲ್ಲಿ ನೀವು ನನ್ನ ಪರಮ ಮಿತ್ರರಿದ್ದು, ನಿಮ್ಮ ಮನಸ್ಸು ನಿಮಗೆ ತಿಳಿಯದೆ ನನ್ನ ಕಡೆಗೆ ಆಕರ್ಷಿತವಾಗಿರುವದೊ? ನೀವು ನೋಡಿದ್ದೀರಿ, ನಾನು ಯಾವಾಗಲೂ ಅಸ್ವಸ್ಥನಾಗಿರುತ್ತೇನೆ. ಮೃತ್ಯು ಅಂದರೇನು ಅಂತ ನಾನು ಗುರುಕೃಪೆಯಿಂದ ಹುಡುಕುತ್ತಿದ್ದೇನೆ, ಮತ್ತು ಹೀಗೆ ಮಾಡುತ್ತಾ ಮಾಡುತ್ತಾ ನಾನು ಅವರ ಕಡೆಗೆ ಹೋಗುತ್ತಿದ್ದೇನೆ. ಅಲ್ಲ ಮುಟ್ಟಿರುತ್ತೇನೆ. ಒಮ್ಮೆ ಮೃತ್ಯು ಏನದೆ ಅಂತ ತಿಳಿಯಿತೆಂದರೆ, 'ಸೋಹಂ' ಮಂತ್ರದಿಂದ ನಾನು ಈಶ್ವರನನ್ನು ಹುಡುಕಿ ತೆಗೆದೇನು. ಆ ನಂತರ ನಾನು ಯಾರು ಇದ್ದೇನೆ ಎಂದು ನನಗೆ ತಿಳಿದೀತು. ಆಮೇಲೆ ನಾನು ಸ್ವಾತ್ಮಾನಂದದ ಉಪಭೋಗವನ್ನು ತಕ್ಕೊಳ್ಳಲಿಕ್ಕೆ ಸುರು ಮಾಡುವೆನು. ನಂತರ ಸರ್ವಜಗತ್ತು ಬ್ರಹ್ಮರೂಪದ ಹೊರತು ಮತ್ತೇನೇನೂ ಇಲ್ಲ, ಅಂತ ನನಗೆ ಕಾಣಹತ್ತೀತು, ಆಮೇಲೆ ನನ್ನ ಸದ್ಗುರುವಿನ ಆಜ್ಞೆಯಿಂದ ಶಾಸ್ತ್ರದೊಳಗಿನ ನಿಮ್ಮ ಸರ್ವಶಂಕೆಗಳನ್ನು ದೂರಮಾಡುವದಕ್ಕೆ ಶಕ್ತನಾದೇನು. ಆ ಸ್ಥಿತಿ ಪ್ರಾಪ್ತವಾಗುವತನಕ ನಿಮ್ಮಂಥ ವಿದ್ವಾನ ಪಂಡಿತರಿಗೆ ನನ್ನಂಥ ಅಜ್ಞಾನಿ ಅಶಿಕ್ಷಿತ ಮನುಷ್ಯನು ಯಾವದೊಂದು ವಿಷಯವನ್ನು

ಹೇಳಲಿಕ್ಕೆ ಹ್ಯಾಗೆ ಶಕ್ತನಾದಾನು ? ಹಾಗೂ ನನಗೆ ಹೀಗನಿಸುತ್ತದಲ್ಲ, ಯಾವಾಗ ಒಬ್ಬ ಮನುಷ್ಯನು, ಅವನು ಶಿಕ್ಷಿತನಿರಲಿ ಅಶಿಕ್ಷಿತನಿರಲಿ, ಅವನಿಗೆ ಐಹಿಕ ವಿಷಯ ಸಂಪಾದನೆಯಲ್ಲಿ ಯಶ ಪ್ರಾಪ್ತಿಯಾಗಬೇಕು ಅಂತ ಅಥವಾ ಪರಮಾರ್ಥಿಕ ಪಥದಲ್ಲಿ ಮಾರ್ಗದರ್ಶಕನು ಶಿಕ್ಕಬೇಕೆಂದು ಒಬ್ಬ ಸಾಧುಕಡೆ ಹೋಗುವದಿದ್ದರೆ, ಪ್ರಥಮದಲ್ಲಿ ಜಗತ್ತಿನಲ್ಲಿ ಆ ಸಾಧುವಿನ ಆಚರಣೆ ಹ್ಯಾಗದೆ, ಎಂಬ ವಿಚಾರಣೆಯನ್ನು ಮಾಡಿಕೊಳ್ಳಬೇಕು. ಆತನ ವರ್ತನವು ಶುದ್ಧ ಅದೆ ಅಂತ ನಿಮ್ಮ ಮನಸ್ಸಿಗೆ ನಿಶ್ಚಯವಾಯಿತೆಂದರೆ, ಆಮೇಲೆ ಅವನ ಕಡೆ ಹೋಗಬಹುದು. ಆತನ ಪಾರಮಾರ್ಥಿಕ ಸಾಮರ್ಥ್ಯದ ಸಂಬಂಧ ಬರೇ ಕಿವಿಯಿಂದ ಕೇಳಿದ ಮಾತಿನ ಮೇಲೆ ಅಧರಿಸಬಾರದು. ಹಾಗೆಯೇ ಆತನು (ಆ ಮನುಷ್ಯನು) ಮಹಾನ್ ಸಾಧುಗಳ ಚರಿತ್ರಗಳನ್ನು ಲಕ್ಷಪೂರ್ವಕ ಓದಬೇಕು ಮತ್ತು ಅವುಗಳ ದೀರ್ಘ ವಿಚಾರಮಾಡಬೇಕು. ತಾನು ತನ್ನಷ್ಟಕ್ಕೆ ಸತ್ಯ ಅಸತ್ಯಗಳ ಭಾಗ ಯಾವವೆಂದು ಠರಾಯಿಸತಕ್ಕದ್ದು. ನಂತರ ತನ್ನ ಸರ್ವ ಶಂಕೋಪಶಂಕೆಗಳನ್ನು ಬದಿಗೊತ್ತಿ, ಬಹಳ ನಮ್ರಭಾವದಿಂದ ಸಂತರ ಕಡೆ ಹೋಗಬೇಕು; ಈಪ್ರಕಾರ ಅವನು ಮಾಡಿದನಂದರೆ ಸರ್ವಶಕ್ತಿಮಾನನಾದ ಸಿದ್ಧಿವಿನಾಯಕನು ಅವನಿಗೆ ಸರ್ವ ಐಹಿಕ ವ ಪಾರಮಾರ್ಥಿಕ ಸುಖಸಂಪತ್ತಿಯ ಪ್ರಾಪ್ತಿಯನ್ನು ಮಾಡಿಕೊಟ್ಟಾನು, ಇದರಲ್ಲಿ ಸಂಶಯವೇನು ?

ಸ್ವತಃದ ವಿಚಾರದ ಅಂತ್ಯದಲ್ಲಿ ಮತ್ತು ನನ್ನ ಸದ್ಗುರುಗಳ ಕೃಪಾಪ್ರಸಾದದಿಂದ ಹೀಗೆ ನನ್ನ ಸ್ಪಷ್ಟವಾದ ಮತವಾಗಿದೆ. ಹಾಗೆಯೇ ಪ್ರತಿ ಒಬ್ಬ ಮನುಷ್ಯನು ತನ್ನ ಪೂರ್ವಜನ್ಮದ ಒಳ್ಳೆ ಅಥವಾ ಕೆಟ್ಟ ಕರ್ಮಕ್ಕನುಸರಿಸಿ ಈ ಜಗತ್ತಿನಲ್ಲಿ ಸುಖ ಅಥವಾ ದುಃಖವನ್ನು ಪಡೆಯುತ್ತಾನೆ. ಆದ್ದರಿಂದ ಸಂತ ಮಹಂತರಲ್ಲಿ ಒಂದುವೇಳೆ ಕರ್ತುಮಕರ್ತುಮ್ ( ಮಾಡುವದು ಮಾಡದಿರುವದು ) ಶಕ್ತಿ ಇದ್ದರೂ, ಪ್ರತಿಒಬ್ಬ ಮನುಷ್ಯನು ತನ್ನ ಪೂರ್ವ ಕರ್ಮಫಲವನ್ನು ಭೋಗಿಸಿಯೇ ತೀರಿಸಬೇಕು, ಎಂತ ಏನು ನಿಯಮವದೆ ಅದರಲ್ಲಿ ಅವರು ಎಂದೂ ಹೆಚ್ಚುಕಡಿಮೆ ಮಾಡುವದಿಲ್ಲ. ಅವರ ಈ ಜಗತ್ತಿನೊಳಗಿನ ನಿಜವಾದ ಕಾರ್ಯವೆಂದರೆ, ಅವರ ಕಡೆ ಯಾರಾದರೂ ಬಂದರೆ ಅವರಿಗೆ ಅವಿನಾಶಿಯಾದ ಅಕ್ಷಯ ಸುಖದ ಮಾರ್ಗವನ್ನು ತೋರಿಸುವದು, ಮತ್ತು ಅವರಿಗೆ ಸುಖಪ್ರಾಪ್ತಿ ಸಲುವಾಗಿ ಆಶೀರ್ವಾದ ಕೊಡುವದು, ಇದೇ ಇರುವದು. ಯಾಕಂದರೆ ಐಹಿಕ ಸುಖದುಃಖಗಳು ಅಶಾಶ್ವತವಾಗಿರುವದರಿಂದ ಅವರು ಅವುಗಳ ಕಡೆ ಲಕ್ಷಕೊಡುವದು ಬಹಳ ಅಪರೂಪ. ಈಶ್ವರ ಸಾಕ್ಷಾತ್ಕಾರಿಯಾದ ಮಹಾನ್ ಸಾಧುಸಂತರಾದ ತುಕಾರಾಮ ಮಹಾರಾಜರು, ಅಜ್ಞಾನ ಅಂಧಃಕಾರದಲ್ಲಿ ಬೀಳುತ್ತಿರುವ ಜನರಿಗೋಸ್ಕರ ತಳಮಳಪಟ್ಟು, ಉಚ್ಚರಿಸಿದ ಉದ್ಗಾರಗಳು ನಿಜವಾಗಿ ಉತ್ಕೃಷ್ಟವಾಗಿವೆ. ಅವರು ಅತ್ಯಂತ ಪ್ರೇಮದ ಮತ್ತು ಕರುಣೆಯ ಶಬ್ದಗಳಿಂದ ಅನ್ನುತ್ತಾರೆ.

“ಈ ಜನರು ಮುಳುಗುತ್ತಾರೆ, ಕಣ್ಣಾರೆ ನೋಡಲಾರೆನು; ಅವರ ಸಂಬಂಧ ಬಹಳ ಕರುಣೆ ಹುಟ್ಟುತ್ತದೆ. ”

ಮಹಾರಾಜರೆ, ನೀವು ವಿದ್ವಾನರಿದ್ದೀರಿ, ಆದರೆ ನಾವು ನಿಮಗೆ ವಿನಂತಿ ಮಾಡುತ್ತೇನಲ್ಲ, ನೀವು ಈಗ ಈ ಶಾಸ್ತ್ರಾಭ್ಯಾಸ ಮಾಡುವದನ್ನು ಬಿಟ್ಟುಬಿಡಿರಿ. ಯಾರಿಗಾದರೂ ಒಣ ಉಪದೇಶ ಮಾಡುತ್ತ ಕೂಡ್ರಬೇಡಿರಿ. ವಿಶೇಷವಾಗಿ ಸಾಧುಸಂತರಿಗೆ ನಗಚೇಷ್ಟೆಗೆ ಗುರಿಮಾಡುವಂಥ ಕಾರ್ಯಮಾಡಬೇಡಿರಿ. ವಿಚಾರಮಾಡಿ ನೋಡಿದರೆ ಸಾಧುಸಂತರಕಡೆ ಪೂಜ್ಯಭಾವನೆಯಿಂದ ಮತ್ತು ಅತಿ ನಮ್ರತೆಯಿಂದ ಹೋಗಬೇಕು. ನೀವು ಈಗ ಸುಮಾರು ೬೦ ವರ್ಷದ ವಯಸ್ಸಿಗೆ ಬಂದಿರಬೇಕು. ಸಂಧ್ಯಾ, ದೇವಪೂಜೆ, ಗೋಪಿಚಂದನದತಿಲಕ ಇವುಗಳು ಆಪತ್ಕಾಲದಲ್ಲಿ ಏನೂ ಉಪಯೋಗಕ್ಕೆ ಬೀಳುವದಿಲ್ಲ. ಅಂತಃಕರಣದಲ್ಲಿ ಖರೇ ಈಶ್ವರಭಕ್ತಿಬೇಕು. ಸರ್ವವಸ್ತು ಮಾತ್ರಗಳಲ್ಲಿ ಪರಮಾತ್ಮನು ತುಂಬಿರುತ್ತಾನೆ, ಎಂದು ಕಾಣಲಿಕ್ಕೆ ಕಲಿಯಬೇಕು. ನೀವು ಖರೇ ಸಾಧುಗಳ ಕಡೆಗೆ ಹೋಗಿರಿ, ಮತ್ತು ಅವರ ಚರಣಕಮಲಗಳಲ್ಲಿ ಇಂಥ ಭಕ್ತಿ ಹ್ಯಾಗೆ ಕೂತೀತು ಎಂಬದನ್ನು ಕಲಿಯಿರಿ. ”

ಮಹಾರಾಜರ ಈ ಮಾತುಗಳಿಂದ ಆ ಮನುಷ್ಯನ ಮೇಲೆ ಉತ್ತಮ ಪರಿಣಾಮವಾಯಿತು. ಅವನಂದನು “ ಮಹಾರಾಜರೆ. ನಿಮ್ಮ “ ಸೋಹಂ ” ಕಸಬರಿಕೆಯಿಂದಲೆ ನೀವು ನನ್ನ ಮನಸ್ಸಿನೊಳಗಿನ ಎಲ್ಲ ಹೊಲಸು ತೆಗೆದುಹಾಕಿ ಬಿಟ್ಟೀರಿ. ನಾನು ನಿಜವಾಗಿ ನಿಮ್ಮನ್ನು ಸ್ತಬ್ಧಮಾಡಬೇಕು, ಮತ್ತು ಹಾಸ್ಯಾಸ್ಪದ ಮಾಡಬೇಕು ಅಂತ ಬಂದಿದ್ದೆನು. ನಾನು ಹಿಂದೆ ಒಮ್ಮೆ ನಿಮ್ಮನ್ನು ಕಂಡಿದ್ದೆ, ಆದರ ಮೇಲಿಂದ ನಿಮ್ಮ ಸಂಬಂಧ ನನ್ನ ಕೆಟ್ಟ ಗ್ರಹವಾಗಿತ್ತು. ಆದ್ದರಿಂದ ನಿಮ್ಮನ್ನು ಹಾಸ್ಯಾಸ್ಪದ ಮಾಡಬೇಕಂತ ಇವತ್ತು ನಿಮ್ಮ ಕಡೆ ಬಂದಿದ್ದೆ. ಆದರೆ ನೀವು ನನ್ನ ಮನಃಸ್ಥಿತಿ ತಿಳಕೊಂಡು, ನೀವು ಏನು ಮನಃಪೂರ್ವಕ, ನಿಃಸ್ವಾರ್ಥ ವ ಅತ್ಯುತ್ತಮವಾದ ಉಪದೇಶ ಮಾಡಿದಿರಿ, ಅದಕ್ಕಾಗಿ ನಿಮ್ಮದು ನನ್ನ ಮೇಲೆ ಬಹಳ ಉಪಕಾರವಾಯಿತು. ನಾನು ನಿಮ್ಮ ಉಪದೇಶವನ್ನು ಶಿರಸಾಮಾನ್ಯ ಮಾಡುತ್ತೇನೆ. ವಯಸ್ಸಿನಿಂದ ಹಿರಿಯನಿದ್ದ ಉಪಯೋಗ ವೇನು. ನೀವೇ ಖರೆ ಗುರುಗಳೆಂದು ನನ್ನ ನಿಶ್ಚಯವಾಗಿದೆ. ನನ್ನಂಥ ಅನೇಕ ಜನರಿಗೆ ನೀವು ಅಧ್ಯಾತ್ಮ ಉಪದೇಶ ಮಾಡುವಿರಿ.

ಮಹಾರಾಜರಂದರು, “ ನೀವು ವಿದ್ವಾನ ಬ್ರಾಹ್ಮಣರಿದ್ದೀರಿ. ನಿಮ್ಮ ಮಾನವನ್ನು ಕಾಪಾಡುವದು ಇದು ನಿಮ್ಮ ಕರ್ತವ್ಯವೆಂದು ನಾನು ತಿಳಿಯುತ್ತೇನೆ: ನೀವು ನನಗೆ ಗುರುಸ್ಥಾನದಲ್ಲಿ ಇದ್ದೀರಿ. ನಾನು ನಿಮಗೆ ಒಂದು ಸಂಗತಿ ಹೇಳುವೆನು, ಆದರ ಕಡೆ ಲಕ್ಷಕೊಡಿರಿ, ಕೆಲವು ವರ್ಷಗಳ ಹಿಂದೆ ಒಬ್ಬ ರಾಜನು

ಇದ್ದನು, ಅವನು, ಜ್ಞಾನೇಶ್ವರಿ ಯಾವಾತನು ಬಲ್ಲವನಿದ್ದಾನೋ, ಅವನು ನನ್ನ ಕಡೆಗೆ ಬರಬೇಕು, ಎಂದು ತನ್ನ ರಾಜಧಾನಿಯೊಳಗೆ ಜಾಹೀರ ಮಾಡಿದನು. ಇದನ್ನು ಕೇಳಿ ಯಾರು ನಿತ್ಯ ಜ್ಞಾನೇಶ್ವರಿಯನ್ನು ಓದುತ್ತಿದ್ದರೊ, ಅಂಥ ಬಹಳ ಮಂದಿ ಪಂಡಿತರು ಆ ಅರಸನ ಭೆಟ್ಟಿಗೆ ಹೋಗಲಾರಂಭಿಸಿದರು. ಒಬ್ಬರೆಂದರು, "ನಾವು ಇಪ್ಪತ್ತೈದು ಸಾರಿ ಜ್ಞಾನೇಶ್ವರಿ ಓದಿದ್ದೇವೆ," ಮತ್ತೊಬ್ಬರೆಂದರು, "ನಾವು ಐವತ್ತು ಸಾರಿ ಓದಿದ್ದೇವೆ." ಕೆಲವರು, "ನಾವು ನೂರು ವೇಳೆ ಪಾರಾಯಣ ಮಾಡಿದ್ದೇವೆ" ಅಂದರು. ರಾಜನು ಈ ಪ್ರತಿಒಬ್ಬ ಪಂಡಿತನಿಗೆ ಕತ್ತಲೆಕೋಣೆಯೊಳಗೆ ಹಾಕಲಿಕ್ಕೆ ಹುಕುಮು ಕೊಟ್ಟನು. ದಾರಿದ್ರ್ಯದಿಂದ ಪೀಡಿತನಾದ ಒಬ್ಬ ಬ್ರಾಹ್ಮಣನಿಗೆ ಈ ರಾಜನ ಜಾಹೀರಾತು ತಿಳಿಯಿತು, ಮತ್ತು ಯಾವ ವಿದ್ವಾನನು ರಾಜನ ಭೆಟ್ಟಿಗೆ ಹೋದನೊ ಅವನು ತಿರುಗಿಬರಲಿಲ್ಲ, ಎಂಬದನ್ನೂ ಅವನು ಕೇಳಿದನು. ಅದರ ಮೇಲಿಂದ ಇವರೆಲ್ಲರೂ ರಾಜನ ಅತಿಥಿಗಳಾಗಿ, ಚಲೋ ಊಟ ಉಂಡು ದೊಡ್ಡದೊಡ್ಡ ದಕ್ಷಿಣೆಗಳನ್ನು ತಕ್ಕೊಳ್ಳುತ್ತಿದ್ದಾರು, ಎಂದು ಅವನ ಕಲ್ಪನೆಯಾಯಿತು. ತಾನೂ ಕಪಾಲಕ್ಕೆ ಭಸ್ಮ ಹಚ್ಚಿಕೊಂಡು ಕೈಯಲ್ಲಿ ಪಂಚಪಾತ್ರೆಯನ್ನು ತಕ್ಕೊಂಡು ರಾಜನ ಭೆಟ್ಟಿಗೆ ಹೋಗಬೇಕೆಂದು ಅವನು ನಿರ್ಣಯಿಸಿದನು. ಹಾಗೆಯೇ ರಾಜನ ಕಡೆಗೆ ಹೋದ ಯಾವನೊಬ್ಬ ಬ್ರಾಹ್ಮಣನೂ ತಿರುಗಿ ಬಂದಿಲ್ಲ ಎಂಬದರ ಮೇಲೆ ರಾಜನು ಯಾರಿಗೂ ಪ್ರಶ್ನೆ ಕೇಳುವದಿಲ್ಲವೆಂತ ಅವನ ತಿಳುವಳಿಕೆಯಾಯಿತು.

ಈ ಪ್ರಕಾರ ವಿಚಾರ ಮಾಡಿ ಆ ಬ್ರಾಹ್ಮಣನು ರಾಜನ ಭೆಟ್ಟಿಗೆ ಹೋದನು. ಇತರರಂತೆ ಅವನೂ ಕತ್ತಲೆ ಕೋಣೆಯನ್ನು ಸೇರಿದನು. ಈ ಬ್ರಾಹ್ಮಣನ ಪತ್ನಿಯು ಬಹಳ ಸಾಧ್ವಿ ಮತ್ತು ಭಕ್ತಿವಂತಳಿದ್ದಳು. ಆಕೆಯ ಅಂತರಾತ್ಮನು 'ಸೋಹಂ'ಕ್ಕೆ ತಾದಾತ್ಮ್ಯ ಹೊಂದಿದವನಿದ್ದನು. ತನ್ನ ಪತಿಯೇ ತನ್ನ ಅಂತರಾತ್ಮನೆಂದು ಆಕೆಯು ತಿಳಿದಿದ್ದಳು. ಇಂಥ ಸ್ತ್ರೀಯ ಮಹತ್ವ ಏನು ವರ್ಣನ ಮಾಡಲಿ? ಆಕೆಯು ಅನ್ನ ನೀರನ್ನು ಬಿಟ್ಟು ಮೂರು ದಿನ ಉಪವಾಸ ಇದ್ದಳು. ಆ ಮೇಲೆ ಒಮ್ಮೆಲೇ ರಾಜನ ಭೆಟ್ಟಿಗೆ ಆಕೆಯು ಹೋದಳು. ಈ ವರೆಗೆ ಅವರ ಭೆಟ್ಟಿಗೆ ಯಾರೂ ಸ್ತ್ರೀ ಬಂದಿದ್ದಿಲ್ಲ. ಈ ಸ್ತ್ರೀಯನ್ನು ನೋಡಿ ರಾಜನಿಗೆ ದೊಡ್ಡ ಆಶ್ಚರ್ಯವಾಯಿತು. ನಂತರ ಅವನು ತನ್ನ ರಾಣಿಗೆ ಈಕೆಯ ಒಳ್ಳೆ ಆದರಾತಿಥ್ಯ ಮಾಡಲಿಕ್ಕೆ ಹೇಳಿದನು. ರಾಣಿಯು ಆಕೆಯ ಸತ್ಕಾರ ಮಾಡಿ, ಬೆಲೆಬಾಳುವ ವಸ್ತ್ರವನ್ನು ಉಡಲಿಕ್ಕೆ ಆಕೆಗೆ ಕೊಟ್ಟಳು. ನಂತರ ರಾಜನು ಜ್ಞಾನೇಶ್ವರಿ ತಿಳಿದ ಜನರ ಸಂಬಂಧ ತಾನು ಡಂಗುರ ಹೊಡಿಸಿದ್ದೆಂಬದನ್ನು ಆಕೆಗೆ ತಿಳಿಸಿದನು. ವ "ನೀವು ಯಾವ ಹೇತುವಿನಿಂದ ಇಲ್ಲಿಗೆ ಬಂದಿದ್ದೀರಿ" ಎಂತ ಕೇಳಿದನು. ಆಕೆಯೆಂದಳು, "ನನಗೆ ನಿಮ್ಮ ಕೂಡ ಏನೂ ಕಾರ್ಯವಿಲ್ಲ. ನನ್ನ ಪತಿ ನಿಮ್ಮ ಕಡೆ ಬಂದಿದ್ದಾರೆ. ನನ್ನನ್ನು ಬಿಟ್ಟು ಈಗ ಮೂರು ದಿವಸಗಳಾದವು.

ಇವತ್ತಿನತನಕ ಅವರ ದಾರಿ ನೋಡಿದೆ. ಈ ಮೂರು ದಿವಸಗಳಲ್ಲಿ ನಾನು ಅನ್ನ ನೀರಿನ ಸ್ಪರ್ಶಸಹ ಮಾಡಲಿಲ್ಲ. ಕೃಪೆಮಾಡಿ ಅವರು ಎಲ್ಲಿದ್ದಾರೆಂಬುದನ್ನು ಹೇಳಿರಿ."

ರಾಜನಂದನು, "ಅವರು ಎಲ್ಲಿದ್ದಾರೆಂಬದು ನನಗೆ ಹೇಳಲಿಕ್ಕೆ ಬರುವದಿಲ್ಲ, ಜ್ಞಾನೇಶ್ವರಿ ತಿಳಿದಿದೆಂಬು ಹೇಳಿದಂಥ ಎಲ್ಲ ಪಂಡಿತರನ್ನು ಕತ್ತಲೆ ಕೋಣೆಯಲ್ಲಿ ಹಾಕಿದೆ. ಅವರ ಪೈಕಿ ಒಂದು ವೇಳೆ ನಿಮ್ಮ ಗಂಡನೂ ಇದ್ದಾನು."

ಆಕೆಯಂದಳು, "ಹೇ ರಾಜನೆ, ನೀವು ಸ್ವತಃ ಅದರೊ ಜ್ಞಾನೇಶ್ವರಿ ಸಂಬಂಧಿ ಏನಾದರೂ ತಿಳಿದದ್ದುಂಟೋ? ಯಾವಾತನು ಜ್ಞಾನೇಶ್ವರಿಯ ನಿಜವಾದ ಅರ್ಥ ತಿಳಿದಿರುವನೋ ಅವನು ನಿಮ್ಮರಾಜ್ಯದಲ್ಲಿರಲಿಕ್ಕೆ ಶಕ್ತನಾದಾನೇನು? ಅವನು ಪ್ರತ್ಯೇಕ ವಸ್ತುವಿನಲ್ಲಿ ಇದ್ದು ಅದರಿಂದ ದೂರವಾಗಿದ್ದಾನು. ಅವನು ಸತತ ಅನಾಸಕ್ತನಿದ್ದಾನು. ಅಂಥ ಮನುಷ್ಯನು ನಿಮ್ಮ ಕಡೆ ಯಾಕೆ ಬಂದಾನು? ಇಷ್ಟು ನಿಮಗೆ ತಿಳಿಯಬಾರದೇನು?"

ಆಕೆಯ ಈ ಶಬ್ದಗಳನ್ನು ಕೇಳಿ, ರಾಜನು ಆಕೆಯ ಸಾಮರ್ಥ್ಯವನ್ನು ತಿಳಿದು ತತ್‌ಕ್ಷಣವೇ ಆಕೆಯ ಕಾಲುಗಳಿಗೆ ಬಿದ್ದನು, ಮತ್ತು ಸರ್ವ ಪಂಡಿತರೆನ್ನು ಮುಕ್ತಮಾಡಿ ತನ್ನ ಮುಂದೆ ಕರೆಕೊಂಡು ಬರಲಿಕ್ಕೆ ಹುಕುಮು ಕೊಟ್ಟನು. ನಂತರೆ ಎಲ್ಲ ಪಂಡಿತರಿಗೆ ಅಂದನು, "ಈ ಮಹಾನ್ ಸ್ತ್ರೀಗೆ ಮಾತ್ರ ಜ್ಞಾನೇಶ್ವರಿಯ ಸತ್ಯಾರ್ಥವು ತಿಳಿದದೆ. ಆಕೆಯನ್ನು ನೀವು ಗುರು ಎಂದು ತಿಳಕೊಳ್ಳಲಿಕ್ಕೆ ಏನು ಅಡ್ಡಿಯದೆ? ರಾಜನು ಸರ್ವರಿಗೆ ದಕ್ಷಿಣೆ ವಗೈರೆ ಕೊಟ್ಟು ಅವರನ್ನು ಕಳುಹಿಸಿದನು."

ಆಯಿತು. ನನ್ನ ಕಥೆಯು ಮುಗಿಯಿತು. ಇದರೆ ಮೇಲಿಂದ ನೀವು ಯಾವ ಬೋಧವನ್ನು ತಗೋಬೇಕೋ ಅದನ್ನು ತಕ್ಕೊಳ್ಳಬಹುದು. ಆದರೂ ನಿಮಗೆ ಮತ್ತು ಒಂದು ಕಡೆ ಸಂಗತಿ ಹೇಳುವೆನು. ಶ್ರೀ ಗುಲಾಬರಾವ ಮಹಾರಾಜರ ಪತ್ರಗಳು ವ ಚರಿತ್ರ ಈಗ ಪ್ರಸಿದ್ಧವಾಗಿವೆ. ಕೃಪೆಮಾಡಿ ಅವನ್ನು ನೀವು ಓದಿರಿ ಮತ್ತು ವಿಚಾರ ಮಾಡಿರಿ. ಅವರ ಸಹವಾಸದಲ್ಲಿದ್ದು ಮತ್ತು ಅವರ ಗ್ರಂಥಗಳನ್ನು ಓದಿ ನನಗೆ ಬಹಳ ಲಾಭವಾಗಿದ್ಧೆ, ಅಂತ ನಾನು ನಿಮಗೆ ಆಗ್ರಹ ಮಾಡುತ್ತೇನೆ. ಯಾವನೊಬ್ಬ ಮನುಷ್ಯನು ದರಿದ್ರನಿರಲಿ, ಶ್ರೀಮಂತನಿರಲಿ, ಪುರುಷನಿರಲಿ ಅಥವಾ ಸ್ತ್ರೀ ಇರಲಿ, ಆತಗೆ ಯಾವಾಗ ಪಾರಮಾರ್ಥಿಕ ವಿಷಯದ ಜರೂರಿ ತೋರುತ್ತದೆ, ಆಗ ಅವನು ಈಶ್ವರನಕಡೆಗೆ ಹೋಗಿ, ತನ್ನ ಮನಸ್ಸಿನ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳಲಿಕ್ಕೆ ಪ್ರಾರ್ಥಿಸುತ್ತಾನೆ. ನಾವು ಗುಡಿಯೊಳಗೆ ಹೋಗುತ್ತೇವೆ; ಅಲ್ಲಿ ದೇವರೆಂಬದು ಕಲ್ಲಿನದೇ ಇರುತ್ತದೆ. ಆದರೆ ನಾವು ವಿಶ್ವಾಸದಿಂದ ಆ ಮೂರ್ತಿಗೆ ಶ್ರೀರಾಮ ಅಥವಾ ಶ್ರೀಕೃಷ್ಣ ಎಂದು ತಿಳಿಯು

ತ್ತೇವೆ, ಮತ್ತು ನಮ್ಮ ಇಚ್ಛೆಯನ್ನು ಪೂರ್ಣ ಮಾಡುವದಕ್ಕೆ ಆ ಮೂರ್ತಿಯ ಆರಾಧನೆ ಮಾಡುತ್ತೇವೆ. ಆ ಪ್ರಾರ್ಥನೆಯ ಫಲವು ಇವತ್ತು, ನಾಳೆ ಯಾವಾಗ ಲಾದರೂ ಶಿಗುವದೇ. ಸರ್ವರ ವಿಷಯದಲ್ಲಿ ಇದು ಖರೆ ಅದೆ. ಯಾವಾಗ್ಗೆಲ್ಲ ಮನುಷ್ಯನು ಯಾವದಾದರೂ ಐಹಿಕ ವಿಷಯ ಸಂಪಾದಿಸುವ ಇಚ್ಛೆಯನ್ನು ಮನಸ್ಸಿನಲ್ಲಿ ಹಿಡಿಯುವನೋ ಅಥವಾ ಪಾರಮಾರ್ಥಿಕ ವಿಷಯದಲ್ಲಿ ಸುಧಾರಣೆ ಮಾಡಿಕೊಳ್ಳುವ ಇಚ್ಛೆ ಮಾಡುವನೊ ಮತ್ತು ಯಾವಾಗ ಅವನಿಗೆ ಫಲ ಸಿಗು ವದೊ ಅದು ಈ ಜನ್ಮದ ಅಥವಾ ಪೂರ್ವ ಜನ್ಮದ ಕರ್ಮದ ಫಲವಾಗಿರುವದು, ನೀವು ಅದಕ್ಕೆ ದೈವ ಅನ್ನಿರಿ, ಪ್ರಾರಬ್ಧ ಅನ್ನಿರಿ ಪ್ರಯತ್ನ ಇತ್ಯಾದಿ ಬೇಕಾದ್ದು ಅನ್ನಿರಿ. ಅದಕ್ಕೆ ಜ್ಯೋತಿಷಿ, ಸಾಧು ಅಥವಾ ಈಶ್ವರ ಇವರದು ಜರೂರಿ ಇಲ್ಲ. ಆದರೂ ತಮ್ಮ ಇಚ್ಛೆಗಳು ಸಫಲವಾಗಬೇಕೆಂದು ಸ್ತ್ರೀಯರೂ ಪುರುಷರೂ ಸಾಧು ಕಡೆ ಹೋಗುತ್ತಾರೆ. ಆ ಸಾಧು ಖರೆ ಇರಲಿ ಸುಳ್ಳು ಇರಲಿ. ಕೆಲವರು ಉದ್ಯೋ ಗದಸಲುವಾಗಿ, ಕೆಲವರು ಸಂತತಿ ಪಡೆಯಬೇಕಾಗಿ, ಕೆಲವರು ರೋಗ ಗುಣ- ವಾಗುವದಕ್ಕಾಗಿ, ಕೆಲವರು ಆತ್ಮಾನಂದ ಸಂಪಾದಿಸುವದಕ್ಕಾಗಿ ಅಥವಾ ಈಶ್ವರ ದರ್ಶನಕ್ಕಾಗಿ ಅಂತಲೂ ಹೋಗುತ್ತಾರೆ. ಆದರೆ ಮನಃಪೂರ್ವಕವಾಗಿ ನಾನು ಹೀಗೆ ಹೇಳುವೆನು, ಪ್ರತಿ ಒಬ್ಬನು ಮನಸ್ಸಿನೊಳಗೆ 'ಸೋಹಂ' ಜಪ ಮಾಡ ಬೇಕು, ಮತ್ತು ತನ್ನ ಇಚ್ಛೆಯನ್ನು ತಾನೇ ಪೂರ್ಣ ಮಾಡಿಕೊಳ್ಳುವೆನು ಎಂದು ಸಂಪೂರ್ಣವಾಗಿ ಧ್ಯಾನದಲ್ಲಿಟ್ಟುಕೊಳ್ಳಬೇಕು. ಇಷ್ಟೊಂದು ಮಾತ್ರ ಖರೆಯದೆ, ತಾನು ತನ್ನ ವರ್ತನೆಯನ್ನು ಅತ್ಯಂತ ಶುದ್ಧವಿಡಬೇಕು, ಕನಿಷ್ಟಪಕ್ಷಕ್ಕೆ ಸ್ವಲ್ಪ ವಾದರೂ ವೈರಾಗ್ಯವಿರಬೇಕು, 'ಸೋಹಂ' ಮಂತ್ರವು ಸರ್ವ ಇಚ್ಛೆಗಳನ್ನು ಪೂರ್ಣ ಮಾಡುವದೆಂದು ದೃಢ ವಿಶ್ವಾಸ ಬೇಕು. ಒಬ್ಬನಿಗೆ ಒಮ್ಮೆ ಆತ್ಮವಿಶ್ವಾಸ ಉತ್ಪನ್ನವಾಯಿತೆಂದರೆ, ಅವನು ನಿಶ್ಚಯವಾಗಿ ಸಾಕ್ಷಾತ್ಕಾರ ಸಂಪಾದಿಸುವನು, ಮತ್ತು ಅವನಿಗೆ ಖರೆ ಗುರುವೂ ಶಿಗುವನು. ಅನಂತರ ಕುವಿಚಾರ ಉತ್ಪನ್ನ ವಾಗುವದು ನಿಂತೀತು. ಆದರೆ ಈ ಜಪದ ಸಂಬಂಧ ಒಂದು ಸಂಗತಿಯನ್ನು ನಿಶ್ಚಿ ತವಾಗಿ ಧ್ಯಾನದಲ್ಲಿಟ್ಟುಕೊಳ್ಳಬೇಕು, ಅದ್ಯಾವದೆಂದರೆ, "ಸೋಹಂ" ಜಪ ವನ್ನು ಮನಸ್ಸಿನೊಳಗೆ ಜಪಿಸಬೇಕು, ಮತ್ತು ನೀವು ಜಪಿಸುತ್ತೀರೆಂಬದು ಇತ ರರಿಗೆ ತಿಳಿಯಗೊಡಬಾರದು. ಈ ಜಪವನ್ನು ಇಷ್ಟು ಅಖಂಡ ವ ನಿರಂತರ ಜಪಿ ಸಬೇಕಲ್ಲ, ನಿದ್ರೆಯೊಳಗೆಸಹ ತನಗೆ ಒಳಗಿನಿಂದ ಕೇಳಿಸುತ್ತಿರಬೇಕು. ಯಾವಾಗ ಈ ಜಪವು ಮನದಲ್ಲಿ ಏಕರೂಪವಾಗಿ ಹೋಗುವದೋ, ಆಗ್ಗೆ ಷಟ್ ಚಕ್ರಗಳ ಪೈಕಿ ಯಾವದಾದರೊಂದು ಚಕ್ರದ ಮೇಲೆ ಮನಸ್ಸು ಏಕಾಗ್ರ ಮಾಡ ಬೇಕು. ಯಾವಾಗ ಈ ಸ್ಥಿತಿ ಪ್ರಾಪ್ತವಾಗುತ್ತದೊ, ಆಗ ಗಾಢ ನಿದ್ದೆಯೊಳಗೆ ಇದ್ದಾಗಸಹ "ಏಳು, ಜಪ ಸುರುವು ಮಾಡು," ಎಂದು ಒಳಗಿನಿಂದ ಎಚ್ಚರ ಕೊಡಲ್ಪಡುವದು, ಇಂಥಕಾಲದಲ್ಲಿ ನೀವು ನಿಮ್ಮ ಇಚ್ಛೆ ಪೂರ್ಣವಾಗಲಿಕ್ಕೆ ಒಳ ಗಿನ ಪ್ರಕಾಶರೂಪ ಈಶ್ವರನಿಗೆ ಪ್ರಾರ್ಥನೆ ಮಾಡಿದ್ದಾದರೆ, ಈ ಪ್ರಾರ್ಥನೆಯು

ನಿಃಸಂಶಯವಾಗಿ ಸಫಲವಾದೀತು, ಇದು ಪೂರ್ಣ ನಿಶ್ಚಯವೆಂತ ತಿಳಿಯತಕ್ಕದ್ದು.

ಹೊರಗಿನ ಈಶ್ವರನ ಕೃಪಾಸಂಪಾದನೆ ಮಾಡಲಿಕ್ಕೆ ನಡಿಸಿದ ಪ್ರಾರ್ಥನೆಗಿಂತ, ಈ ಪ್ರಾರ್ಥನೆಯ ಪದ್ಧತಿಯು ನೂರುಪಾಲಷ್ಟು ಶ್ರೇಯಸ್ಕರವಿರುವದು, ಅವನ ಇಚ್ಛೆಗಳು ಸಫಲವಾಗುವವು ಇಷ್ಟೇ ಅಲ್ಲ, ಪೂರ್ವ ಜನ್ಮದ ಕರ್ಮಕ್ಕನುಸರಿಸಿ, ಅಥವಾ ಈ ಜನ್ಮದ ಪ್ರಯತ್ನಗಳಿಗೆ ಸರಿಯಾಗಿ ಅವನು ಆತ್ಮನ ಪರಮಾನಂದ ಪ್ರಾಪ್ತಿ ಮಾಡಿಕೊಳ್ಳುವನು. ಆದರೂ ಈ ಕಾರ್ಯಕ್ಕೆ ಸದ್ಗುರು ಸಹಾಯ ಮತ್ತು ಕೃಪೆಯು ಅವಶ್ಯವಿದೆ. ನನ್ನ ಬಂಧುಭಗಿನಿಯರು ಈಗ ಹೇಳಿದಂತೆ ಮಾಡಿದ್ದಾದರೆ ಖರೇ ಸುಖದ ಅನುಭವ ಸಂಪಾದಿಸಲಿಕ್ಕೆ ಸಮರ್ಥರಾದಾರು, ಮತ್ತು ಸುಳ್ಳು ಸಾಧುವಿನ ಬಲೆಯಲ್ಲಿ ಎಂದೂ ಬೀಳಲಾರರು. ಒಳ್ಳೇದು ಈಗ ನೀವು ಹೋಗಿರಿ, ಮತ್ತು ನಾನು ಹೇಳಿದ ಜ್ಞಾನವನ್ನು ಇತರರಲ್ಲಿ ಪ್ರಸಾರ ಮಾಡಿರಿ, ಮತ್ತು ಅನೇಕ ಕುಟುಂಬದೊಳಗಿನ ಜೀವರು ಸುಖಿ ವ ಸಮಾಧಾನಿಯಾಗುವ ಪ್ರಯತ್ನ ಮಾಡಿರಿ. ನೀವು ವಿದ್ವಾನರಿದ್ದೀರಿ ಎಂದು ನೀವು ಈ ಪ್ರಕಾರ ಮಾಡಬೇಕೆಂತ ನನ್ನ ಇಚ್ಛೆಯದೆ.

೨

ಹೀಗೆಯೇ ಮತ್ತೊಬ್ಬ ಗೃಹಸ್ಥನು ಮಹಾರಾಜರ ಕೀರ್ತಿಯನ್ನು ಕೇಳಿ ದರ್ಶನಾರ್ಥವಾಗಿ ಅವರ ಕಡೆಗೆ ಬಂದನು. ಅವನು ಉತ್ತಮ ಬಹುಶ್ರುತನಿದ್ದು ಅನೇಕ ಸಾಧುಗಳ ದರ್ಶನವನ್ನು ತಗೊಂಡಿದ್ದನು. ಅವನಿಗೂ ಮಹಾರಾಜರಿಗೂ ಯಾವ ಸಂವಾದ ಸಂಭವಿಸಿತೋ, ಅದು ಬಹಳ ಉದ್ಬೋಧಕವಿದ್ದದ್ದು, ಧಾರ್ಮಿಕ ವ ಅಧ್ಯಾತ್ಮಿಕ ವಿಷಯದ ಅನೇಕ ಸಂಗತಿಗಳ ಮೇಲೆ ಪ್ರಕಾಶ ಬೀಳುವಂಥಾದ್ದಿರುವದರಿಂದ, ಹ್ಯಾಗದೆಯೊ ಹಾಗೆಯೇ ನಾವು ಕೆಳಗೆ ಕೊಟ್ಟಿದ್ದೇವೆ.

ಮಹಾರಾಜ:— ನೀವು ಶಾಸ್ತ್ರಕ್ಕನುಸರಿಸಿ ಮಾತಾಡುತ್ತೀರಿ, ಹಾಗಾದರೆ ನೀವು ಧರ್ಮ ಸಂಬಂಧ ಯಾವ್ಯಾವ ಪುಸ್ತಕಗಳನ್ನು ಓದಿರುತ್ತೀರಿ, ಎಂಬದು ನನಗೆ ಕೃಪೆ ಮಾಡಿ ಹೇಳುವಿರೋ ?

ಗೃಹಸ್ಥ:— ಎಲ್ಲ ಉಪನಿಷತ್ತುಗಳು, ಯೋಗವಾಸಿಷ್ಠ, ಪಂಚದಶಿ, ಭಗವದ್ಗೀತಾ ವ ಜ್ಞಾನೇಶ್ವರಿ ವಗೈರೆ ಗ್ರಂಥಗಳನ್ನು ನಾನು ಓದಿರುತ್ತೇನೆ.

ಮಹಾರಾಜ: — ಇವುಗಳ ಪೈಕಿ ನಾನು ಒಂದೂ ಸಂಪೂರ್ಣವಾಗಿ ಓದಲಿಲ್ಲ. ನಾನು ನಿಮಗೆ ಹೀಗೆ ಕೇಳುತ್ತೇನೆ, " ನಿಮಗೆ ಅವು ತಿಳಿದಿರುತ್ತವೇನು? ಅಂದರೆ ಅವುಗಳ ವಾಚನದಿಂದ ನಿಮ್ಮ ಸರ್ವ ಸಂಶಯಗಳು ದೂರವಾಗಿ, ನಿಮ್ಮ ಶಂಕೆಗಳ ನಿರಸನವಾಯಿತೇನು ?

ಗೃಹಸ್ಥ:— ಇಲ್ಲ. ಎಷ್ಟಕ್ಕೂ ಇಲ್ಲ. ಅದಲ್ಲದೆ ನನ್ನ ಹೀಗೆ ತಿಳುವ ಳಿಕೆಯಾಗಿದೆಯಲ್ಲ, ಮಾರ್ಗದರ್ಶಕ ಸದ್ಗುರು ಇದ್ದವಿನಹಾ ಈ ಎಲ್ಲ ವಾಚನ ವ್ಯರ್ಥವಾಗಿದೆ. ಅಂದದ್ದರಿಂದ ನಾನು ಈ ಪುಸ್ತಕಗಳನ್ನೆಲ್ಲ ಬದಿಗೊತ್ತಿದ್ದೇನೆ.

ಮಹಾರಾಜ:— ನನಗೆ ಅನಿಸುತ್ತದೆ, ನೀವು ಬಹಳ ಉತ್ತಮ ಕೆಲಸ ಮಾಡಿದಿರಿ. ಚಿಕ್ಕಂದಿನಲ್ಲಿ ನಾನು ಶಾಲೆಯಲ್ಲಿರುವಾಗ ಒಂದು ಕವಿತೆ ಕಲಿತಿದ್ದೆ. ಅದು "ಶಾಸ್ತ್ರಗಳು ಬಹಳ ಅಪಾರ, ಆದರೆ ಮಾನವನೇ ನಿನ್ನ ಜೀವಿತ ಅತ್ಯ-ಲ್ಪವೇ." ವೇದಾಂತ ಕಲಿಯುವದು ವ ಅದನ್ನು ಇತರರಿಗೆ ಕಲಿಸುವದು ಏನೂ ಕೆಟ್ಟದ್ದಲ್ಲ; ಆದರೆ ಮೊದಲು ನೀವು ಸದ್ಗುರು ಕಡೆಯಿಂದ ಅದರ ಗುಟ್ಟು ತಿಳ-ಕೊಂಡದ್ದಾದ್ದರೆ, ಅದು ನಿಮಗೆ ನಿಜವಾದ ಉಪಯೋಗಕ್ಕೆ ಬಿದ್ದೀತು. ಅನುಭವದ ಜ್ಞಾನವು ಬೇರೆಯೇ ಇರುತ್ತದೆ. ಇರಲಿ. ನೀವು ವೇದಾಂತದ ಅಭ್ಯಾಸಮಾಡಿರಿ, ಒಳ್ಳೇದಾಯಿತು. ಆದರೆ ನೀವು ಯಾವದಾದರೂ ಸಂತ ಚರಿತ್ರಗಳನ್ನು ಓದಿದ್ದೀರೇನು ?

ಗೃಹಸ್ಥ:— ಹೌದು ಶ್ರೀಸಮರ್ಥ ರಾಮದಾಸ, ಅಕ್ಕಲಕೋಟದ ಶ್ರೀ ಸ್ವಾಮಿ ಮಹಾರಾಜ. ಶ್ರೀ ಗುಲಾಬರಾವ ಮಹಾರಾಜ, ಇವರ ಚರಿತ್ರೆ ಮತ್ತು ವಿಚಾರ ನನ್ನ ಪೂರ್ಣ ಪರಿಚಯದ್ದು ಇರುತ್ತವೆ.

ಮಹಾರಾಜರು:— ಶ್ರೀ ಗುಲಾಬರಾವ ಮಹಾರಾಜರು, "ದೋಷ-ದೃಷ್ಟಿ ವ ಅದರ ಪ್ರಕಾರ" ಈ ವಿಷಯದಲ್ಲಿ ಯಾವ ವಿಚಾರಗಳು ಪ್ರಕಟಮಾಡಿರುತ್ತಾರಲ್ಲ, ಅವು ನಿಮಗೆ ನೆನಪು ಅವೆ ಏನು ?

ಗೃಹಸ್ಥ:— ಇಲ್ಲ, ನನಗೆ ನೆನಪಿಲ್ಲ.

ಮಹಾರಾಜರು:— ಹಾಗಾದರೆ ಆ ವಿಷಯ ಹೇಳುವೆನು. ದೋಷ ದೃಷ್ಟಿಯ ಮೂರು ಪ್ರಕಾರಗಳು ಕಲ್ಪಿಸಲ್ಪಟ್ಟಿವೆ. (೧) ವೈಯ್ಯಕ್ತಿಕ (೨) ಸಾಮಾಜಿಕ, (೩) ಶಾಸ್ತ್ರೀಯ. ಅವರೆನ್ನುತ್ತಾರೆ, "ನಾನು ನನ್ನ ಮಗನ ಲಗ್ನ ಮಾಡುವೆನು," ಎಂದು ತಂದೆಯು ಹೇಳುತ್ತಲೆ ಮಗನಿಗೆ ಆನಂದವಾಗುತ್ತದೆ, ಇದರಲ್ಲಿ ಶಂಕೆ ಇಲ್ಲ; ಆದರೆ ಈ ಆನಂದವು ಮತ್ತು ಪತ್ನಿಯ ಸಹವಾಸದ ಆನಂದವು ತೀರಾ ಭಿನ್ನ ಅವೆ. ಅದೇ ಭೇದವು ಜ್ಞಾನಿ (ಅಂದರೆ ಯಾವಾತಗೆ ಪ್ರತ್ಯಕ್ಷ ಬ್ರಹ್ಮದರ್ಶನ ಆಗಿದೆಯೋ ಅವನು) ವ ವಾದಿ (ಯಾವನು ಬರೇ ಶಾಬ್ದಿಕ ವೇದಾಂತ ಚರ್ಚೆ ಮಾಡುವದರೊಳಗೆ ಹುಶಾರ ಇದ್ದಾನೆ, ಅವನು) ಇವರೊಳಗೆ ಅದೆ. ಕೆಂಪು, ನೀಲಿ, ಹಸುರು ವಗೈರೆ ರಂಗಗಳ ವಿಷಯ ಅಂಧನು ನೂರಾರು ವ್ಯಾಖ್ಯಾನಗಳನ್ನು ಕೊಟ್ಟರೂ, ಹ್ಯಾಗೆ ರಂಗಗಳನ್ನು ಪ್ರತ್ಯಕ್ಷ ಕಾಣತಕ್ಕವನ ದೃಷ್ಟಿಯಿಂದ ಅದೆಲ್ಲ ಹಾಸ್ಯಾಸ್ಪದವದೆ, ಹಾಗೆಯೇ ಸ್ವಾನು

ಛಪಿಹ ಹೊಳೆತು ವೇದಾಂತ ಚರ್ಚೆ ಮಾಡುವದು ಹಾಸ್ಯಾಸ್ಪದವಾಗಿದೆ. ಯಾವನು ಸ್ವಾನುಭವದ ಮಾರ್ಗವನ್ನು ಶಿಷ್ಯನಿಗೆ ತೋರಿಸ್ಯಾನು ಅವನೊಬ್ಬನೆ ನಿಜವಾದ ಗುರುವು. ಬಹಳ ಮುಮುಕ್ಷುಗಳು, "ನಿಮಗೆ ಮುಂದೆ ಆತ್ಮಸಾಕ್ಷಾತ್ಕಾರವಾದೀತು" ಈ ಪ್ರಕಾರ ಆಶೆ ತೋರಿಸಿದ ಮೂಲಕ, ಸುಳ್ಳು ಸಾಧುಗಳ ಬಲೆಯೊಳಗೆ ಬಿದ್ದು ಕಡೆಗೆ ನಿರಾಶರಾಗಿದ್ದಾರೆ.

ನಂತರ ಅವರು ವೇದಾಂತ ಮತ್ತು ಧಾರ್ಮಿಕ ವಿಷಯಗಳನ್ನು ಬಿಟ್ಟು ಬಿಟ್ಟು, ಸಾಮಾನ್ಯ ನೀತಿತತ್ತ್ವಗಳನ್ನು ಪಾಲಿಸುವದರೊಳಗೆ ಸಮಾಧಾನ ಪಡುತ್ತಾರೆ, ಮತ್ತು ಬೇರೆ ಜನರನ್ನು ವ ಇತರ ಸಂಗತಿಗಳನ್ನು ನೋಡುವ ಅವರ ದೃಷ್ಟಿಯು ಪೂರ್ಣ ಬದಲಾಗುತ್ತದೆ. ಆ ಮೇಲೆ ಅವರು ಪ್ರತಿ ಒಬ್ಬ ಮನುಷ್ಯನಲ್ಲಿ ದೋಷ ನೋಡುತ್ತಿರುತ್ತಾರೆ.

ದೋಷದೃಷ್ಟಿಯಿಂದ ನೋಡುವದು ಈ ವೃತ್ತಿ ನನ್ನ ಮತದಿಂದ ಒಂದು ರೀತಿ ಕೆಟ್ಟದ್ದು ಅದೆ, ಮತ್ತೊಂದು ರೀತಿಯಿಂದ ಒಳ್ಳೇದೂ ಇರುತ್ತದೆ. ಈ ವೃತ್ತಿಯು ದಾಂಭಿಕ ವ ಸುಳ್ಳು ಸಾಧುಗಳ ಬಲೆಯೊಳಗೆ ಬೀಳಗೊಡದಿರುವದರಿಂದ ಒಳ್ಳೆದು ಅದೆ. ಆದರೆ ಇದು ಒಬ್ಬ ಮಹಾತ್ಮನ ಸಹ ದೋಷ ತೋರಿಸುವದಕ್ಕೆ ಕಾರಣೀಭೂತವಾದರೆ ಆಗ ಮಾತ್ರ ಅದು ನಿಜವಾಗಿ ದೂಷಣಾಸ್ಪದವಾಗುವದು. ಅನ್ನಸಹ ಯೋಗ್ಯ ಪ್ರಮಾಣದಿಂದ ಉಣ್ಣದಿದ್ದರೆ ವಿಷತುಲ್ಯವಾಗಿ ಬಾಧಿಸುತ್ತದೆ. ವಿರುದ್ಧಪಕ್ಷಕ್ಕೆ ವಿಷಸಹ ಅತಿ ಸೂಕ್ಷ್ಮ ಪ್ರಮಾಣದಿಂದ ಯೋಗ್ಯ ರೀತಿಯಿಂದ ತಕ್ಕೊಂಡರೆ ರೋಗ ನೆಟ್ಟಗೆ ಮಾಡಲಿಕ್ಕೆ ವ ಶರೀರ ಪುಷ್ಟ ಮಾಡಲಿಕ್ಕೆ ಕಾರಣೀಭೂತವಾಗುತ್ತದೆ. ದೋಷದೃಷ್ಟಿ ಇರುವ ಮೊದಲು, ದೋಷ ಶೋಧಿಸಿ ತೆಗಿಯಲಿಕ್ಕೆ ಬೇಕಾದ ಕುಶಾಗ್ರಬುದ್ಧಿ ವ ಸೂಕ್ಷ್ಮ ದೃಷ್ಟಿ ಇವುಗಳು ತನ್ನ ಹತ್ತರ ಇವೆ ಎಂಬದರ ತನಗೆ ಮೊದಲು ನಿಶ್ಚಯು ಬೇಕು; ಮತ್ತು ಮೇಲಿನಮೇಲೆ ಕಾಣಿಸುವ ದೋಷಗಳೆಂದರೆ ಅವು ಖರೆ ದೋಷಗಳೆಂಬ ತಪ್ಪು ತಿಳುವಳಿಕೆ ತಾನು ಮಾಡಿಕೊಳ್ಳುವದಿಲ್ಲವಲ್ಲ ಎಂಬದರದು ನಿರ್ಣಯವು ಬೇಕು. ಇಲ್ಲದಿದ್ದರೆ, ಅಕ್ಕಿ ಹಸನ ಮಾಡುವಾಗ್ಗೆ ಆದರೊಳಗಿನ ಕಲ್ಲುಗಳು ಆರಿಸುವ ಬದಲಿಗೆ ಅಕ್ಕಿಯನ್ನ ಆರಿಸಿ ಚೆಲ್ಲಿದಂತಾಗುವದು. ಈ ಪ್ರಕಾರ ತಪ್ಪು ತಿಳುವಳಿಕೆ ಮಾಡಿಕೊಂಡವನಿಗೆ ಯಾರೂ ಜಾಣನೆನ್ನಲಿಕ್ಕಿಲ್ಲ.

ಇದಕ್ಕೋಸ್ಕರ ಮನುಷ್ಯನು ಮೊದಲು ಸ್ವಚ್ಛ ಸೂಕ್ಷ್ಮದೃಷ್ಟಿಯನ್ನು ಪ್ರಾಪ್ತ ಮಾಡಿಕೊಳ್ಳಬೇಕು; ಇಲ್ಲದಿದ್ದರೆ ದೋಷ ಶೋಧಿಸುವಾಗ ಗುಣವನ್ನೇ ದೋಷವೆಂತ ತಿಳಿದು ಗುಣಗಳ ತ್ಯಾಜ್ಯವೆಂತ ನಿರ್ಣಯವಾದೀತು. ತನ್ನ ತಿಳುವಳಿಕೆಗೆ ವಿರುದ್ಧವಿರುವ ಪ್ರತಿಒಂದು ಸಂಗತಿ ದೋಷದೃಷ್ಟಿಯಿಂದ ನೋಡುವದು, ಇದು ನಾನು ವೈಯಕ್ತಿಕ ದೋಷದೃಷ್ಟಿ ಎಂದು ತಿಳಿಯುತ್ತೇನೆ. ಇದೇ

ಕೌಟುಂಬಿಕ, ಸಾಮಾಜಿಕ ವ ಧಾರ್ಮಿಕ ಜೀವನದಲ್ಲಿ ಸರ್ವತರದಿಂದ ಕೆಡಿಸುವ ದಕ್ಕೆ ಮೂಲವಾಗಿದೆ. ದೈವವಾನ ವ ಭಾಗ್ಯಶಾಲಿ ಪರಿಸ್ಥಿತಿಯಲ್ಲಿ ಇರುವ ಮನುಷ್ಯನು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಸದ್ಗುಣಿ ಮನುಷ್ಯನನ್ನಾದರೂ ತುಚ್ಛಬುದ್ಧಿಯಿಂದ ಭಾವಿಸುತ್ತಾನೆ. ಅವನಲ್ಲಿ ಆ ದೈವವಾನ ಮನುಷ್ಯನಿಗೆ ಸರ್ವದೋಷ ಮತ್ತು ದುರ್ಗುಣಗಳೇ ಕಾಣಿಸುತ್ತವೆ. ಇದೇ ವೈಯಕ್ತಿಕ ದೋಷದೃಷ್ಟಿಯ ದೊಡ್ಡ ದುಷ್ಪರಿಣಾಮವು ಆಗಿದೆ.

ನಕಲೀ ಸಾಧುವು ಸುಳ್ಳು ಆಡಂಬರಗಳನ್ನು ಮಾಡಿ ಜನರಿಂದ ಬಹಳ ದ್ರವ್ಯಸಂಪಾದನ ಮಾಡುತ್ತಾನೆ; ಆಮೇಲೆ ಸಾವಿರಾರು ಮಂದಿಗೆ ಉಣಿಸಿ, ತನ್ನ ದಾನಧರ್ಮದ ದೊಡ್ಡ ಪ್ರದರ್ಶನವನ್ನು ಮಾಡುವನು; ಮತ್ತು ಜನಸಂದಣಿಯೊಳಗಿಂದ ದೂರ ಇದ್ದು ಆತ್ಮ ಚಿಂತನೆಯಲ್ಲಿ ಶಾಂತ ನಿದ್ದು ಕಾಲಹರಣ ಮಾಡುವ ಖರೆ ಸಾಧುವಿಗೆ ನ್ಯೂನತೆ ಕೊಟ್ಟು ಅವನ ದಾರಿದ್ರ್ಯದ ಸಲುವಾಗಿ ಅವನು ಹೀನನೆಂದು ತಿಳಿಯುತ್ತಾನೆ. ಇದರ ಮೇಲಿಂದ ಹೀಗೆ ಸ್ಪಷ್ಟ ಕಾಣಿಸುದಲ್ಲ, ವೈಯಕ್ತಿಕ ದೋಷದೃಷ್ಟಿಯ ಈ ಸ್ವಭಾವವು ಬಹಳ ಕೆಟ್ಟದ್ದದೆ, ಮತ್ತು ಅದು ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಜಾಣ ಮನುಷ್ಯನು ಅದರ ಗೊಂದಲದೊಳಗೆ ಬೀಳದೆ ದಕ್ಷತೆಯಿಂದಿರಬೇಕು, ಇದೇ ಉತ್ತಮ.

ಎರಡನೇ ದೋಷದೃಷ್ಟಿಯಂದರೆ ಸಾಮಾಜಿಕ ದೋಷದೃಷ್ಟಿ. ಇದು ಶಿಷ್ಟ ಮರ್ಯಾದೆಯ ತನಕ ಒಳ್ಳೇದದೆ; ಆದರೆ ಇದರೊಳಗೂ ಒಟ್ಟಾರೆ ಮೇಲೆ ಒಳ್ಳೇದಕ್ಕಿಂತ ಕೆಟ್ಟದ್ದೇ ಹೆಚ್ಚಿಗಿದೆ. ಯಾರ್‍ಯಾರು ಸಮಾಜದ ಅಥವಾ ಜಾತಿಯ ವಿಚಾರಕ್ಕೆ ವಿರುದ್ಧ ಇರುವರೋ ಅವರು ಆ ಸಮಾಜದ ಅಥವಾ ಜಾತಿಯವರಿಂದ ಸದೋಷಿಗಳೆಂತ ಗಣಿಸಲ್ಪಡುತ್ತಾರೆ. ಆದರೆ ಒಂದು ಸಮಾಜದ ಘಟನೆ ಮತ್ತು ತತ್ವಗಳು ಈ ದೃಷ್ಟಿಯಿಂದ ಬೇರೆ ಸಮಾಜದಿಂದ ಭಿನ್ನವಿದ್ದರೆ ಅದು ಆ ಬೇರೆ ಸಮಾಜದ ದೃಷ್ಟಿಗೆ ದೂಷಣಾಸ್ಪದವೆಂದು ತಿಳಿಯುವದು ಸ್ವಾಭಾವಿಕವದೆ. ಕೆಲವು ಸಮಾಜ ಸುಧಾರಕರು ಸಮಾಜದ ಸರ್ವ ಮಾಲಮತ್ತಾ, ಆ ಸಮಾಜದ ಎಲ್ಲ ಜನರೊಳಗೆ ಸಮಾನವಾಗಿ ಹಂಚಬೇಕು ಎಂಬ ವಿಷಯಕ್ಕೆ ಪ್ರಯತ್ನ ಮಾಡಿದರು. ಆದರೆ ಆ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಹಾಗೆಯೆ ಒಬ್ಬ ಮನುಷ್ಯನು ಸಮಾಜದ ಕಲ್ಯಾಣಕ್ಕಾಗಿ ಸ್ವಾರ್ಥತ್ಯಾಗ ಮಾಡಿ, ಈ ತತ್ತ್ವದ ಮೇಲೆ ತನ್ನ ವತನವಿಟ್ಟದ್ದಾದರೆ ಅವನ ಕುಟುಂಬದ ಮನುಷ್ಯರೆಲ್ಲರೂ ಅವನು ದೋಷಿ ಎಂದು ಠರಾಯಿಸುತ್ತಾರೆ. ಒಳ್ಳೇದು ಇದರ ವಿರುದ್ಧ ಅವನು ತನ್ನ ಸ್ವಂತ ಕುಟುಂಬದ ಕಡೆಗೆ ಅಯುಕ್ತವಾಗಿ ಲಕ್ಷಕೊಟ್ಟದ್ದಾದರೆ, ಸಮಾಜವು ಅವನಿಗೆ ದೋಷಕೊಡುತ್ತದೆ. ಇದರ ಮೇಲಿಂದ ಸಾಮಾಜಿಕ ದೋಷದೃಷ್ಟಿಯಿಂದ ನೋಡುವದು ಬಹಳ ಬಿಕ್ಕಟ್ಟು ಇದ್ದು, ಮನುಷ್ಯನನ್ನು ಅನೇಕ ಸಂಶಯಗಳಲ್ಲಿ ಹಾಕುವಂಥಾದ್ದದೆ, ಇದಲ್ಲದೆ ಅದು ಮನುಷ್ಯನಿಗೆ ಇದು

ಮಾಡಲ್ಯೋ ಅದು ಮಾಡಲ್ಯೋ, ಎಂಬ ಗೊಂದಲದೊಳಗೆ ಹಾಕುತ್ತದೆ. ಆದರೂ ಈ ದೋಷದೃಷ್ಟಿಯಿಂದ ನೋಡುವದು ಕೆಲವು ಜನರಿಗೆ ಪರೋಪಕಾರಿ ವ ಸಾಮಾಜಿಕ ಕಾರ್ಯಕರ್ತ ಅಂತ ಅನ್ನಿಸಿಕೊಳ್ಳಲಿಕ್ಕೆ ಒಳ್ಳೇ ಸಂಧಿ ಕೊಡುತ್ತದೆ

ಮೂರನೇ ದೋಷದೃಷ್ಟಿಯು ಪ್ರಕಾರವು ಶಾಸ್ತ್ರೀಯ ಅಥವಾ ಧಾರ್ಮಿಕ ಸಂಬಂಧದ್ದಿರುತ್ತದೆ. ಇದು ಸರ್ವದರಲ್ಲಿ ಉತ್ತಮವಿದ್ದು ಪಾರಮಾರ್ಥಿಕ ಅಧಿಕಾರಿಗೆ ಖರೇ ಕಲ್ಯಾಣಮಾಡಲಿಕ್ಕೆ ಉಪಯೋಗವಾಗುತ್ತದೆ. ಇದರಲ್ಲಿ ಯಾವ್ಯಾವದು ಶಾಸ್ತ್ರವಿರುದ್ಧ ಇದ್ದೀತು ಅದೆಲ್ಲ ಕೆಟ್ಟದೆಂತ ತಿಳಕೊಳ್ಳುವ ಪ್ರವೃತ್ತಿಯದೆ. ಯಾವಾತನಿಗೆ ಈ ದೃಷ್ಟಿ ಪ್ರಾಪ್ತವಾಗಿದೆ ಅವನು ಡಾಂಭಿಕ ವ ಮೋಸಗಾರನಾದ ಸಾಧುಗಳ ಬಲೆಯಲ್ಲಿ ಶಿಲುಕಲಾರನು. ಅವರ ಸಂಗತಿಯಿಂದ ಅವನು ಅವರ ಕೈಯೊಳಗೆ ಶಿಲುಕಲಿಕ್ಕಿಲ್ಲ; ಮತ್ತು ಕಡೆಗೆ ತಾನು ಮಾನವೀ ಜೀವನದ ಧ್ಯೇಯವನ್ನು ಶೋಧಿ, ಯಾವ ಸಮಾಜದೊಳಗೆ ಈ ವ್ಯಕ್ತಿ ಇರುವದೊ, ಆ ಸಮಾಜದ ನೈತಿಕ ವ ಆಧ್ಯಾತ್ಮಿಕ ಯೋಗ್ಯತೆಯನ್ನು ವೃದ್ಧಿಗೊಳಿಸಲಿಕ್ಕೆ ಅವನು ಯತ್ನಮಾಡುವನು. ಆದರೆ ಈ ಅಂತರ್ದೃಷ್ಟಿಯನ್ನು ಸದ್ಗುರು ಪ್ರಸಾದದಿಂದಲೆ ಪ್ರಾಪ್ತಮಾಡಿಕೊಳ್ಳಬೇಕು, ಬರೇ ಶಾಸ್ತ್ರವನ್ನು ಓದಿ ಅಥವಾ ಅದರ ಚರ್ಚೆ ಮಾಡಿದ ಮೇಲಿಂದ, ಯಾವದೊಂದು ಸಂಗತಿ ಶಾಸ್ತ್ರಪ್ರಮಾಣ್ಯ ಅದೆಯೋ ಇಲ್ಲವೊ ಅಂತ ಠರಾಯಿಸಲಿಕ್ಕೆ ಶಕ್ಯವಿಲ್ಲ. ಯಾವಾತನು ಶಾಸ್ತ್ರಗ್ರಂಥಗಳನ್ನು ಬರೆ ತನ್ನ ವಿಚಾರ ಸರಣಿ ವ ತರ್ಕದ ಮೇಲಿಂದ ಓದ್ಯಾನು, ಅವನು ತನ್ನ ವಿಚಾರ ಸರಣಿಗೆ ಸರಿಯಾದ ವಿಷಯಗಳನ್ನು ಮಾತ್ರ ಗ್ರಹಿಸ್ಯಾನು, ಅಥವಾ ಅವುಗಳ ಅರ್ಥವನ್ನು ತನ್ನ ವಿಚಾರ ಸರಣಿಗೆ ಪೋಷಕವಾಗುವಂತೆ ಮಾಡ್ಯಾನು. ।

ಹೀಗೆ ಕಲ್ಪಿಸಿರಿ, ಒಬ್ಬ ವೇಶ್ಯಾಸ್ತ್ರೀಯು, ಭಾಗವತಗ್ರಂಥವನ್ನು ಓದಿ. ಅದರಲ್ಲಿ ವರ್ಣಿಸಿದ ಗೋಪಿಸ್ತ್ರೀಯರ ಕಥಾನಕದ ಆಧಾರದಿಂದ ಸ್ತ್ರೀಯರು ವ್ಯಭಿಚಾರ ಮಾಡಿದರೆ ಹರಕತ್ತು ಇಲ್ಲ. ಅಂತ ಅನುಮಾನ ತೆಗೆದರೆ, ಭಾಗವತದ ಇಂಥ ವಚನದಿಂದ ಆ ವೇಶ್ಯೆಯು ವರ್ತಣೂಕ ಎಂದಾದರೂ ಸುಧಾರಿಸುವ ಆಶೆ ಅದೆ ಏನು ? ಶಾಸ್ತ್ರಗಳು ವಾಚಕರ ವಿಚಾರ ಸರಣಿಯಲ್ಲಿ ಅಥವಾ ದೃಷ್ಟಿಕೋನದಲ್ಲಿ ಏನಾದರೂ ಬದಲು ಮಾಡಲಾರವಾದರೆ, ಅವು ಏನಾದರೂ ಮಹತ್ವದ್ದೆ ಕಲಿಸುತ್ತವೆಂದು ಹೇಳಲಿಕ್ಕೆ ಹ್ಯಾಗೆ ಬಂದೀತು ? ಶಾಸ್ತ್ರಗಳು ಹೊಸವೇನಾದರೂ ಉತ್ತಮ ಸಂಗತಿಗಳನ್ನು ಕಲಿಸದಿದ್ದರೆ, ತಂಗಳನ್ನದಿಂದ ಅತಿಥಿಯ ಸರಬರಾಯಿ ಮಾಡಿದಂತಾಗುವದು.

ಇದರ ಮೇಲಿಂದ ಶಾಸ್ತ್ರದಲ್ಲಿ ಏನು ಹೇಳಿರುವದೊ, ಅದನ್ನು ಸದ್ಗುರು ಪಾದದಲ್ಲಿಯೇ ಕಲಿತುಕೊಳ್ಳಬೇಕು. ಆದರೆ ಸದ್ಗುರು ಯಾರೆಂತ ತಿಳಿದು

ಕೊಳ್ಳುವದೇ ಕಠಿಣವಾಗಿದೆ. ಬಹಳ ವಿದ್ಯಾವಂತರು ಸಹ ಸ್ವಾರ್ಥಸಾಧುಗಳಾದ ನಕಲಿ ಸಾಧುಗಳ ತೊಡಕಿನಲ್ಲಿ ಬೀಳುತ್ತಾರೆ. ಪರಿಸ್ಥಿತಿಗೆ ಸರಿಯಾಗಿ ಖರೆ ಮಹಾನ್ ಸಾಧುಗಳಿದ್ದಾದರೂ ಬಾಹ್ಯ ಆಚರಣೆಯ ಮಾರ್ಗಗಳು ಬೇರೆ ಬೇರೆ ಇರುತ್ತವೆ. ಇದರ ಮೇಲಿಂದ, ಮೇಲೆ ಮೇಲೆ ನೋಡುವವರಿಗೆ ಖರೆ ಸಾಧುವಿನ ಮಹತ್ವವನ್ನು ಹುಡಿಕಿ ತೆಗೆಯುವದು ಕಠಿಣವಾಗುತ್ತದೆ. ಸಾಧು ಅನ್ನಿಸಿಕೊಳ್ಳುವ ಕೆಲವು ಜನರು ವೇದಾಂತ ವಿದ್ಯೆಯಲ್ಲಿ ನಿಪುಣರಾಗಿದ್ದು ಯಾರ ಮನಸ್ಸಿಗಾದರೂ ಉತ್ತಮರೀತಿಯಿಂದ ತಿಳಿಯುವಂತೆ ಹೇಳುವದರಲ್ಲಿ ಜಾಣರಿರುತ್ತಾರೆ; ಆದರೆ ಒಳಗೆ ಮಾತ್ರ ತನ್ನ ಮೋಸಕ್ಕೊಳಗಾಗುವ ಅನುಯಾಯಿಗಳನ್ನು ಮೋಸಗೊಳಿಸುವ ಸಂಧಿಯನ್ನು ಹುಡುಕುತ್ತಾರೆ. ಖರೆ ಪಾರಮಾರ್ಥಿಕ ಸಾಧಕರು ಕಡೆಗೆ ಇಂಥ ಸಾಧುಗಳ ಸಂಗತಿಯಿಂದ ನಿರಾಶರಾಗುತ್ತಾರೆ. ತಾನು ರೊಟ್ಟಿ ಬೇಡಲಿಕ್ಕೆ ಬಂದಲ್ಲಿ ಕಲ್ಲು ಶಿಕ್ಕಿತು ಎಂಬಂತೆ ಆಗುವದು. ಅವರಿಗೆ ಖರೇ ವೇದಾಂತದ ಅನುಭವದ ಜರೂರಿ ಇರುವಾಗ್ಗೆ ಬರೆ ಶಾಸ್ತ್ರ ಚರ್ಚೆಯಷ್ಟೆ ಅವರ ಕಿವಿಗಳ ಮೇಲೆ ಬೀಳುತ್ತದೆ.

ಈಶ್ವರೀ ಕೃಪೆಯು ವಿನಹಾ ಖರೆ ಸದ್ಗುರುವಿನ ಭೆಟ್ಟಿಯಾಗುವದು ಶಕ್ಯವಿಲ್ಲವೆಂತ ಯೋಗವಾಸಿಷ್ಠದಲ್ಲಿ ಹೇಳಿದೆ. ಪ್ರೇಮದ ತಾಯಿತಂದೆಗಳು ಶಿಗುವದಾದರೂ ಸರ್ವಸ್ವಿ ದೈವದ ಮೇಲೆ ಹೊಂದಿದೆ. ಮದ್ಯಪಾನದ ಸಲುವಾಗಿ ರೊಕ್ಕ ಶಿಗಬೇಕೆಂತ ಮಕ್ಕಳನ್ನು ಮಾರುವ ತಾಯಂದಿರ ಉದಾಹರಣೆಗಳು ಈ ಭರತಖಂಡದಲ್ಲಿ ಕಡಿಮೆಯಾದರೂ ಇತರ ದೇಶಗಳಲ್ಲಿ ಬಹು ದೊಡ್ಡ ಪ್ರಮಾಣದಿಂದ ಇರುತ್ತವೆ. ಸದ್ಗುರುವು ಅಧಿಕಾರಿ ಶಿಷ್ಯನಿಗೆ ಕಲಿಸುವ ಯೋಗವು ಕೇವಲ ಶಾಬ್ದಿಕ ಇರದೆ, ಸ್ವಾನುಭವದ ಮಾರ್ಗಕ್ಕೆ ವೈಯ್ಯುವಂಥಾದ್ದು ಇರಬೇಕು. ಶಿಷ್ಯನಿಗಾದರೂ ಯಾವ ಪ್ರಶ್ನೆ ಕೇಳಬೇಕು ಮತ್ತು ಹ್ಯಾಗೆ ಕೇಳಬೇಕು ಎಂಬದು ತಿಳಿದಿರಬೇಕು; ಇಲ್ಲದಿದ್ದರೆ ಎಲ್ಲವೂ ನಿಷ್ಫಲವಾದೀತು.

ಶ್ರೀ ಗುಲಾಬರಾವ ಮಹಾರಾಜರು ಏನು ಹೇಳಿದ್ದರೊ ಅದನ್ನು ಸ್ವಲ್ಪದರಲ್ಲಿ ನಾನು ವಿವರಿಸಿದ್ದೇನೆ. ಮತ್ತು ನನ್ನದೂ ಅದಕ್ಕೆ ಪೂರ್ಣಸಮ್ಮತಿ ಇದೆ. ಮಹಾನ್ ಪುರುಷರ ಮನಸ್ಸುಗಳನ್ನು ತಿಳಕೊಳ್ಳುವದು ಬಹಳ ಕಠಿಣವದೆ, ಎಂದು ಒಬ್ಬ ಮಹಾನ್ ಕವಿಯು ಹೇಳಿದ್ದಾನೆ. ಯಾಕೆಂದರೆ ಅವು ಒಮ್ಮೊಮ್ಮೆ ವಜ್ರಕ್ಕಿಂತ ಕಠಿಣವಿರುತ್ತವೆ. ಮತ್ತು ಒಮ್ಮೊಮ್ಮೆ ಹೂವಿನಗಿಂತ ಮೃದು ಇರುತ್ತವೆ. ನನ್ನದಾದರೂ ಹೀಗೆ ಅಭಿಪ್ರಾಯವದೆಯಲ್ಲ, ಈಶ್ವರನು ನಿರಾಕಾರ ಇದ್ದಾನಾದರೂ, ಸಾಧಕನು ಯಾವದಾದರೊಂದು ಆಕಾರದ ಧ್ಯಾನಮಾಡಿ ಮನಸ್ಸು ಸ್ಥಿರಮಾಡಲಿಕ್ಕೆ ಕಲಿಯಬೇಕು, ಕಡೆಗೆ ನಿರಾಕಾರ ಈಶ್ವರನನ್ನು ಗ್ರಹಿಸುವ ಪ್ರಯತ್ನ ಮಾಡಬೇಕು.

ಈಗ ನಾನು ನಿಮಗೆ ಗುಲಾಬರಾವ ಮಹಾರಾಜರು, ರಾಜಯೋಗ, ಚಮತ್ಕಾರ ವ ಪ್ರೇಮಸಮಾಧಿ ಈ ಸಂಬಂಧ ಏನು ಹೇಳಿದ್ದಾರೆ, ಅದನ್ನು ಸ್ವಲ್ಪ

ದರಲ್ಲಿ ಹೇಳುತ್ತೇನೆ. ನೀವು ಒಂದು ವೇಳೆ ಹೇಳಿರಿ, ನಾನು ಎರಡನೇ ಸಾಧುಗಳು ಏನು ಹೇಳುತ್ತಾರೊ ಅದನ್ನೆ ಹೇಳುತ್ತೇನೆ; ಮತ್ತು ನನ್ನದೆಂತ ಏನೂ ಹೇಳುವದಿಲ್ಲ. ಹೌದು ಈ ಸಂಗತಿ ನಿಜವಾಗಿದೆ. ವೇದಾಂತ ವ ಅದರಲ್ಲಿ ಪ್ರಸ್ತಾಪಿಸಿದ ತತ್ತ್ವಗಳು ಮತ್ತು ಆ ತತ್ತ್ವಗಳನ್ನು ಪ್ರಸ್ತಾಪಿಸಲಿಕ್ಕೆ ವೇದಾಂತ ಗ್ರಂಥಗಳಲ್ಲಿ ಯಾವ ವಿಷಯಗಳನ್ನು ತಕ್ಕೊಂಡಿರುತ್ತಾರೆ, ಎಂಬ ಈ ವಿಷಯಗಳನ್ನು ನನ್ನ ಗುರುಗಳು ನನಗೆ ಕಲಿಸಲಿಲ್ಲ. ಅವರು ನನಗೆ ಬರೇ 'ಸೋಹಂ' ದ ಮಂತ್ರ ಕೊಟ್ಟರು. ಮತ್ತು ಸರ್ವ ವೇದಾಂತ ವ ಅದರೊಳಗಿನ ವಿಷಯಗಳು ಇವುಗಳ ಆಚೆಗೆ ಯಾವ ಬ್ರಹ್ಮ ಅದೆಯೊ ಅದರ ಕಡೆಗೆ ಹೋಗುವ ಮಾರ್ಗವನ್ನು ತೋರಿಸಿದರು. 'ತತ್ವಮಸಿ' ( ಅವನು ನೀನೇ ಇದ್ದಿ ) ಈ ಮಹಾವಾಕ್ಯದಲ್ಲಿ ಸತ್ಯ ಏನದೆ ಎಂಬದನ್ನು ನನಗೆ ಅನುಭವ ಮಾಡಿಕೊಟ್ಟರು. ಮತ್ತು ಇದರ ವಿನಹಾ ಬೇರೆ ಏನೂ ಹೇಳುವದು ಬಾಕಿ ಉಳಿಯಲಿಲ್ಲ, ಅಂತ ಹೇಳಿದರು; ಆದ್ದರಿಂದ ಬೇರೆ ಸಾಧುಗಳು ಏನು ಹೇಳುತ್ತಾರೆ, ಅದನ್ನೆ ನಾನು ಹೇಳುತ್ತೇನೆ. ನಾನು ಮುಂದೆ ಹೀಗೆಯೇ ಹೇಳುವೆನಲ್ಲ, ನನ್ನ ಗುರು ನನ್ನ ಮುಖದಿಂದ ಮಾತಾಡುತ್ತಿದ್ದಾರೆ. ಈ ನನ್ನ ಅಂಬೋಣದ ಕಡೆ ಬೇರೆ ದೃಷ್ಟಿಯಿಂದಲೂ ನೋಡಿರಿ. ಈ ತ್ರಯಲೋಕ್ಯದಲ್ಲಿ ಬೇರೆ ಯಾರ್ಯಾರು ಮಾತಾಡುವರೊ, ಅದು ವ್ಯಾಸೋಚ್ಛಿಷ್ಟವದೆ ಅಂತ ಹೀಗೂ ಹೇಳುತ್ತಾರೆ. ಹೀಗೆ ಇರುವದಾದರೆ ನನ್ನಂಥಾ ಅಶಿಕ್ಷಿತ ಮತ್ತು ಜಡಬುದ್ಧಿಯ ಮನುಷ್ಯನು ಎರಡನೇ ಸಾಧುಗಳು ಏನನ್ನುತ್ತಾರೆ ಎಂಬದನ್ನು ಕಡ ತಕ್ಕೊಂಡು ಹೇಳುವದರೊಳಗೆ ಆಶ್ಚರ್ಯವೇನು? ಅಧ್ಯಾತ್ಮ ವಿಷಯದ ಮೇಲೆ ಸ್ವಲ್ಪ ಪುಸ್ತಕಗಳನ್ನು ನಾನು ಓದಿದ್ದೇನೆ, ಮತ್ತು ಅವುಗಳೊಳಗಿಂದ ನಾನು ಸ್ವಲ್ಪ ಹೇಳುತ್ತಿರುತ್ತೇನೆ. ನನಗೆ ಶಾಬ್ದಿಕ ಜ್ಞಾನವಿಲ್ಲ. ನನ್ನ ಖರೇ ಶಕ್ತಿಯು ಆ ಶಬ್ದಗಳಿಗೆ ಬರಾಬರಿ ಅರ್ಥ ಏನದೆ ಅಂತ ಗೊತ್ತುಮಾಡಿ ಕೊಳ್ಳುವದರಲ್ಲಿ ಅದೆ. ತುಕಾರಾಮ, ಏಕನಾಥರಂಥ ಸಾಧುಗಳಾದರೂ ಶಾಬ್ದಿಕ ಜ್ಞಾನಕ್ಕೆ ವಿಶೇಷ ಮಹತ್ವ ಕೊಡುವದಿಲ್ಲ; ಆದರೆ ಶಬ್ದಗಳ ನಿಜವಾದ ಅರ್ಥವನ್ನು ಪೂರ್ಣವಾಗಿ ಗೊತ್ತು ಮಾಡಿಕೊಳ್ಳುವ ಅವರ ಶಕ್ತಿಯು ಅಗಾಧವಾಗಿತ್ತು.

ಪ್ರೇಮಸಮಾಧಿ ಸಂಬಂಧ ಗುಲಾಬರಾವ ಮಹಾರಾಜರು ಅನ್ನುತ್ತಾರೆ- ನಮ್ಮ ಸರ್ವ ಭಕ್ತಿಯು ಈಶ್ವರನಲ್ಲಿಯೇ ಕೇಂದ್ರೀಭೂತ ( ಏಕತ್ರಿತ ) ಆಗಿದ್ದಾದರೆ, ನಮ್ಮ ಮನಸ್ಸು ಎಲ್ಲ ನಿರರ್ಥಕ ವಿಷಯಗಳಿಂದ ಪರಾವೃತ್ತವಾಗುವದು; ಆದರೆ ಒಂದು ಸಂಗತಿಯನ್ನು ಚನ್ನಾಗಿ ಲಕ್ಷದೊಳಗಿಡಬೇಕಲ್ಲ, ಒಬ್ಬ ಮನುಷ್ಯನು ತನ್ನ ಅನ್ನಪಾನ ಮತ್ತು ಶರೀರಕ್ಕೆ ಅವಶ್ಯವಾದ ಇತರ ವಿಷಯಗಳ ಸಂಬಂಧ ಜಾಗರೂಕನಿದ್ದು, ಬೇರೆ ಸಂಗತಿಗಳಲ್ಲಿ ಉದಾಸೀನನಿದ್ದರೂ ಅವನ ಪ್ರೀತಿ ಈಶ್ವರನಲ್ಲಿ ಕೇಂದ್ರೀಭೂತವಾಗಿದೆ ಅಂತ ಹೇಳಲಾಗದು. ನಾವು ಕೆಲವು ಇಂಥ ಈಶ್ವರಭಕ್ತರನ್ನು ನೋಡಿದ್ದೇವಲ್ಲ, ಅವರಿಗೆ ಅನ್ನಪಾನದ ವಿಷಯ ವ ಇತರ

ಶಾರೀರಿಕ ಆವಶ್ಯಕ ವಸ್ತುಗಳ ವಿಷಯದಲ್ಲಿ ಹಂಬಲಿಕೆ ಇರುತ್ತದೆ. ಆದರೆ ತಮ್ಮ ಕುಟುಂಬದೊಳಗಿನ ಜನರ ಕೂಡ ನಡೆಯುವಲ್ಲಿ ಮತ್ತು ಉಡಿಗೆ ತೊಡಿಗೆಗಳ ವಿಷಯ ಅವರು ಉದಾಸೀನತೆ ಮಾಡುತ್ತಾರೆ. ಅವರು ಖರೇ ಈಶ್ವರ ಭಕ್ತರಲ್ಲ. ಇದರ ಮೇಲಿಂದ ಒಬ್ಬರು ಶಂಕೆ ಮಾಡ್ಯಾರಲ್ಲ, “ ಖರೇ ಈಶ್ವರ ಭಕ್ತರು ಅನ್ನಪಾನಗಳನ್ನು ಸೇವಿಸುವದಿಲ್ಲವೇನು? ” ಅದಕ್ಕೆ ನನ್ನ ಉತ್ತರ ಹೀಗದೆ. ಅವರು ಅನ್ನಪಾನಗಳನ್ನು ಮಾಡುತ್ತಾರೆ ಎಂಬದನ್ನು ನಾನು ಒಪ್ಪುತ್ತೇನೆ; ಆದರೆ ಯಾವಾಗ ಅವರು ಪ್ರೇಮಸಮಾಧಿಯಲ್ಲಿರುತ್ತಾರೆ ಆಗ ಅವರು ಎಷ್ಟೋ ದಿವಸಗಳತನಕ ಅನ್ನಪಾನಾದಿಗಳ ವಿನಹಾ ಇರುತ್ತಾರೆ, ಮತ್ತು ಯಾವಾಗ ದೇಹಭಾನದ ಮೇಲೆ ( ನಿತ್ಯದ ಸ್ವಾಭಾವಿಕ ಪರಿಸ್ಥಿತಿಯ ಮೇಲೆ ) ಬರುವರೊ ಆವಾಗ ಮಾತ್ರ ಅನ್ನಪಾನಗಳ ವಿಷಯ ದಕ್ಷತೆ ಇಡುತ್ತಾರೆ ಹೀಗಲ್ಲ, ಆದರೆ ಸರ್ವ ಇತರ ವಿಷಯಗಳಲ್ಲಿಯೂ ಅವರು ದಕ್ಷರಿರುತ್ತಾರೆ. ಹ್ಯಾಗೆ ಹ್ಯಾಗೆ ಅವರು ಪ್ರೇಮಸಮಾಧಿಯಲ್ಲಿ ಅಧಿಕಾಧಿಕ ಮಗ್ನರಾಗುತ್ತಾರೊ ಹಾಗೆ ಹಾಗೆ ಅವರ ಇತರ ವಿಷಯಗಳ ಹಂಬಲ ಕಮ್ಮಿಕಮ್ಮಿಯಾಗುತ್ತ ಹೋಗುತ್ತದೆ. ನಿಜವಾದ ಈಶ್ವರಭಕ್ತರು ಚಮತ್ಕಾರ ತೋರಿಸುವದಕ್ಕೆ ಮೆಚ್ಚುವದಿಲ್ಲ, ಯಾಕಂದರೆ ಅವರ ಪ್ರೇಮದ ಈಶ್ವರನಿಗೆ ಆ ಮೂಲಕ ತಾವು ಉಪದ್ರ ಕೊಡುವದಾಗುತ್ತದೆಂದು ಅವರು ತಿಳಿಯುತ್ತಾರೆ. ಆದರೆ ಸರ್ವಶಕ್ತಿಮಾನ ಈಶ್ವರನಿಗೆ ಚಮತ್ಕಾರ ತೋರಿಸುವದೇನು ಹೆಚ್ಚಿನ ತೊಂದರೆ ಎಂದು ಒಂದು ವೇಳೆ ಅಂದಾರು. ಈ ಶಂಕೆಯು ಜ್ಞಾನಮಾರ್ಗದಿಂದ ಹೋಗುವವರಿಗೆ ಯೋಗ್ಯ ಕಾಣಿಸುವದು, ಆದರೆ ಭಕ್ತರ ಮನಸ್ಸು ಬೇರೆ ಒಂದು ಪ್ರಕಾರ ತಯಾರಾಗಿರುತ್ತದೆ. ಅದರ ಪ್ರಕಾರ ತಮ್ಮ ಪರಮ ಪ್ರೇಮಾಸ್ಪದನಾದ ಈಶ್ವರನಿಗೆ ಸ್ವಲ್ಪಾದರೂ ಉಪದ್ರವಾಗುವಂತೆ ಮಾಡುವದು ಅವರ ಜೀವದ ಮೇಲೆ ಬರುತ್ತದೆ. ಜ್ಞಾನಮಾರ್ಗದ ಮನುಷ್ಯನು ಈಶ್ವರನು ತನಗೆ ಬೇಕಾದಲ್ಲಿ ಬೇಕಾದ ಹಾಗೆ ಸಹಾಯವಾಗಬೇಕಂತ ಅಂದಾನು; ಆದರೆ ಇದರ ವಿರುದ್ಧವಾಗಿ ಭಕ್ತನು ಈಶ್ವರನ ಸೇವೆಯ ಸಲುವಾಗಿ ಮನಸ್ಸು, ಆತ್ಮ ಮತ್ತು ಶರೀರ ಇವುಗಳನ್ನು ಅರ್ಪಣಮಾಡುವನು, ಮತ್ತು ಅವುಗಳ ಸಂಬಂಧ ಯಾವದರದೂ ಆಶೆ ಮಾಡಲಿಕ್ಕಿಲ್ಲ, ಭಕ್ತನು ಯಾವಾಗ ಈಶ್ವರ ಪ್ರೀತಿಯಲ್ಲಿ ತನ್ಮಯನಾಗುತ್ತಾನೊ, ಆಗ ಸಂಕಟ ಕಾಲದಲ್ಲಿಯಾದರೂ ಈಶ್ವರನನ್ನು ಸಹಾಯಕ್ಕೆ ಹ್ಯಾಗೆ ಕರೆದಾನು ? ಅವನಿಗೆ ಸ್ವತದ್ದೆ ಭಾನ ಇರುವದಿಲ್ಲ, ಮತ್ತು ದೇಹಕ್ಕೆ ಬಂದ ಸಂಕಟವಾದರೂ ಇದಕ್ಕೂ ಕಡಿಮೆ.

ಪ್ರೇಮ ಸಮಾಧಿಯಲ್ಲಿ ತನ್ನ ಯಾವ ಸ್ಥಿತಿಯಾಗುತ್ತದೆ, ಈ ಸಂಬಂಧ ತುಕಾರಾಮ ಮಹಾರಾಜರು ಏನು ಹೇಳುತ್ತಾರೆಂಬದಕ್ಕೆ ಮುಂದೆ ಎರಡು ಅವರ ಅಭಂಗಗಳ ತಾತ್ಪರ್ಯವು ಕೊಟ್ಟಿರುತ್ತದೆ.

ರುಕ್ಮಿಣಿ ಪತಿಯೆ, ಪ್ರಿಯ ಬಂಧುವೇ, ನಿನ್ನ ಮೂರ್ತಿಯು ಸದಾ ನನ್ನ ಕಣ್ಣಿಗೆ ಹೊಳೆಯುತ್ತಿರಲಿ. ನಿನ್ನ ರೂಪ ಸವಿ, ನಿನ್ನ ನಾಮ ಸವಿ; ನನಗೆ ಸರ್ವಕಾಲದಲ್ಲಿಯೂ ನಿನ್ನ ಪ್ರೇಮವನ್ನು ಕೊಡು. ವಿಠುರಾಯಿಯೆ, ಇಷ್ಟೇ ವರ ಕೊಡು, ನನ್ನ ಹೃದಯದಲ್ಲಿಯೆ ವಾಸಮಾಡು. ತುಕಾರಾಮನು ಅನ್ನುತ್ತಾನೆ ಎರಡನೇದೇನೂ ನಾನು ಬೇಡುವದಿಲ್ಲ, ನಿನ್ನ ಪಾದದಲ್ಲಿ ಎಲ್ಲ ನನ್ನ ಸುಖವಿದೆ.

ಈಗ ನನಗೆ ಮತ್ತೇನೂ ಬೇಡ, ಬೇಕಾದ್ದನ್ನು ಚಿತ್ತಕ್ಕೆ ನೇಮಿಸಿದ್ದೇನೆ. ಧ್ಯಾನದಲ್ಲಿ ಪಾಂಡುರಂಗ, ಮನದಲ್ಲಿ ಪಾಂಡುರಂಗ, ಜಾಗೃತ ಸ್ವಪ್ನದಲ್ಲಿಯೂ ಪಾಂಡುರಂಗನೇ. ಇಂದ್ರಿಯಗಳಿಗೆಲ್ಲ ಇದೇ ಕರಿಪಾಠ, ಎರಡನೇ ಭಾವವೇ ಇರುವಂತಿಲ್ಲ. ತುಕಾರಾಮನನ್ನುತ್ತಾನೆ, ನನ್ನ ನೇತ್ರಗಳು ಪೀಠದ ಮೇಲೆ ತಟಸ್ಥನಾಗಿರುವವನ ಧ್ಯಾನವೇ ಬಲ್ಲವು.

ಈ ಎರಡು ಅಭಂಗಗಳಲ್ಲಿ ಶ್ರೀತುಕಾರಾಮ ಮಹಾರಾಜರು ಪ್ರೇಮ ಸಮಾಧಿಯಲ್ಲಿ ಅಂತರ್ಬಾಹ್ಯಸ್ಥಿತಿ ಹ್ಯಾಗಿರುತ್ತದೆಂಬದನ್ನು ಬಹಳ ವಿಶದವಾಗಿ ವರ್ಣಿಸಿದ್ದಾರೆ. ಶಾಸ್ತ್ರದಲ್ಲಿ ಈ ಸ್ಥಿತಿ ಸಂಬಂಧ ಹೀಗೆ ಬರೆದಿರುತ್ತದಲ್ಲ, ಸಾಧುವು ತೀರಾ ಶಾಂತ ಮತ್ತು ಪ್ರಸನ್ನಚಿತ್ತನಾಗಿರಬೇಕು. ಮೇಲಿನ ಎರಡನೇ ಅಭಂಗದಲ್ಲಿ, ನನ್ನ ಜಾಗೃತಿ ಮತ್ತು ಸ್ವಪ್ನದಲ್ಲಿ ಎರಡೂ ಅವಸ್ಥೆಗಳಲ್ಲಿ ಪಾಂಡುರಂಗನು ಹಾಜರ ಇರುತ್ತಾನೆ. ಈಶ್ವರನು ಯಾವಾಗ್ಗೆ ಪ್ರತ್ಯಕ್ಷ ಸಮೀಪ ಇರುತ್ತಾನೆ, ಆಗ ಅದಕ್ಕೆ ಜಾಗೃತ ಸಮಾಧಿ ಅನ್ನಬೇಕು ಮತ್ತು ಹಾಗೆ ಇಲ್ಲದೆ, ಭಕ್ತನು ಯಾವಾಗ ಈಶ್ವರನಿಂದ ಬೇರೆ ಇರುತ್ತಾನೆ, ಆಗ ಅದಕ್ಕೆ ಸ್ವಪ್ನಸಮಾಧಿ ಅನ್ನತಕ್ಕದ್ದು. ಒಟ್ಟಾರೆ ಮೇಲೆ ಇದರ ಅರ್ಥ ಹೀಗದಲ್ಲ, ಭಕ್ತನು ಯಾವಾಗ ಜಾಗ್ರದವಸ್ಥೆಯಲ್ಲಿರುವನೊ ಆಗ ಅವನು ಪ್ರತ್ಯಕ್ಷ ಈಶ್ವರನ ಸಹವಾಸದಲ್ಲಿರುವನು, ಮತ್ತು ಯಾವಾಗ ನಿದ್ರೆಯೊಳಗಿರುವನೊ ಆಗ ಅವನಿಗೆ ಈಶ್ವರನದೆ ಸ್ವಪ್ನ ಬೀಳುವದು ಅಂದರೆ ಅವನು ಸ್ವಪ್ನಸ್ಥಿತಿಯಲ್ಲಾದರೂ ಈಶ್ವರನ ಸಮೀಪವೇ ಇರುತ್ತಾನೆ.

ಶ್ರೀತುಕಾರಾಮರು ಭಕ್ತನು ಸಮಾಧಿಯಲ್ಲಿ ಇಲ್ಲದ ಸಮಯದಲ್ಲಿ ಅವನ ಸ್ಥಿತಿ ವರ್ಣಿಸಿದ್ದಾರೆ.

ನಾವು ವಿಷ್ಣುದಾಸರು ಮೇಣಕ್ಕಿಂತಲೂ ಮೃದು ಇದ್ದೇವೆ, ಕಠಿಣವೆಂದರೆ ವಜ್ರವನ್ನೂ ಭೇದಿಸುವೆವು.

ಎರಡನೇ ಸ್ಥಳದಲ್ಲಿ ಹೀಗೆ ಹೇಳಿದೆ. " ಏಳು ಸೂಳೆ ಮಗನೇ, ಇಲ್ಲಿಂದ ಹೋಗು, ನಮ್ಮ ಕೀರ್ತನದಲ್ಲಿ ಕೂಡ್ರಬೇಡ " ಎಷ್ಟೋ ಮಂದಿ ಇಂಥ ಮಾತು

ಗಳಿಗೆ ಹೆಸರಿಡುತ್ತಾರೆ ( ದೂಷಿಸುತ್ತಾರೆ: ) ಆದರೆ ಇದನ್ನು ಲಕ್ಷದಲ್ಲಿಟ್ಟು ಕೊಳ್ಳಬೇಕಲ್ಲ, ಯಾವ ಸಮಾಜದಲ್ಲಿ ಅವರಿರುತ್ತಾರೋ ಆ ಸಮಾಜದ ಘಟಕಗಳಾಗಿ ಜನರು ಹ್ಯಾಗೆ ವರ್ತಿಸಬೇಕು ಎಂದು ಕಲಿಸಲಿಕ್ಕೆ ಈ ಅಭಂಗ ಇರುತ್ತದೆ. ಈ ಅಭಂಗವು ಭಕ್ತನು ಪ್ರೇಮಸಮಾಧಿಯಲ್ಲಿ ಇರದೆ ಸರ್ವಸಾಧಾರಣ ಸಾಮಾನ್ಯ ಮನಸ್ಸಿನ ಸ್ಥಿತಿಯಲ್ಲಿ ಅಂದರೆ ದೇಹದ ಮೇಲಿರುವಾಗ, ಅವನ ಮನೋಭಾವನೆ ಹ್ಯಾಗಿರುವದೆಂದು ತೋರಿಸುತ್ತದೆ.

“ ವಿಷ್ಣುದಾಸರಾದ ನಾವು ಮೇಣಕ್ಕಿಂತಲೂ ಮೃದು, ಕಠಿಣವೆಂದರೆ ವಜ್ರವನ್ನು ಭೇದಿಸುವೆವು ” ಈ ಅಭಂಗವು ಈಶ್ವರ ಭಕ್ತನು ಪ್ರೇಮಸಮಾಧಿಯಲ್ಲಿ ಇಲ್ಲದಿರುವಾಗ ಅಂದರೆ ದೇಹಭಾನದ ಮೇಲೆ ಇರುವಾಗ್ಗೆ, ಲೋಕವ್ಯವಹಾರದಲ್ಲಿ ಹ್ಯಾಗೆ ಕಠಿಣ ಮತ್ತು ತೀಕ್ಷ್ಣ ವಿಚಾರದವರಿರುತ್ತಾರೆಂಬದು ತೋರಿಸುತ್ತದೆ.

ಹಾಗೆಯೇ ಕವಿಶ್ರೇಷ್ಠರಾದ ಭವಭೂತಿ ಇವರು ಶ್ರೀರಾಮಚಂದ್ರನ ಸ್ವಭಾವ ವರ್ಣನ ಮಾಡುತ್ತಾ ಮಾಡುತ್ತಾ ತನ್ನ ಒಂದು ಕವಿತೆಯೊಳಗೆ “ದೊಡ್ಡವರ ಮನಸ್ಸು ಹೂವಿನಕಿಂತ ಮೆತ್ತಗೆ, ಮತ್ತು ವಜ್ರಕ್ಕಿಂತ ಕಠಿಣ” ಹೀಗೆ ಹೇಳುತ್ತಾರೆ.

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।<br>
ಲೋಕೋತ್ತರಾಣಾಂ ಚೇತಾಂಸಿ ಕೋಹಿ ವಿಜ್ಞಾತುಮರ್ಹತಿ॥

ರಾಜಯೋಗದ ಸಂಬಂಧ ಶ್ರೀಗುಲಾಬರಾವ ಮಹಾರಾಜರು ಅನ್ನುತ್ತಾರೆ— ಸರ್ವಯೋಗಾಭ್ಯಾಸಗಳಲ್ಲಿ ರಾಜಯೋಗವು ಉತ್ತಮವಾಗಿದೆ. ಮಹಾನ್ ಯೋಗಿ ಗೋರಖನಾಥರನ್ನುತ್ತಾರೆ. ರಾಜಯೋಗವು ಆಚರಿಸಲಿಕ್ಕೆ ಅಶಕ್ಯವಲ್ಲ, ಆದರೆ ಹಠಯೋಗದ ವಿನಹಾ ಅದರೊಳಗೆ ಸಿದ್ಧಿಯಾಗುವದು ಕಠಿಣವದೆ. ಶರೀರದ ಮೇಲೆ ಸತ್ತಾನಡಿಸುವ ತಮೋಗುಣಾತ್ಮಕ ದ್ರವ್ಯಶಕ್ತಿ ಮತ್ತು ಪ್ರಾಣ ವ ಇಂದ್ರಿಯಗಳು ಇವುಗಳ ವ್ಯಾಪಾರವನ್ನು ನಡಿಸುವ ರಜೋಗುಣಾತ್ಮಕ ಕ್ರಿಯಾಶಕ್ತಿ ಇವು ಹಠಯೋಗದ ಅಭ್ಯಾಸದಿಂದ ಸಾಧಕನ ಸ್ವಾಧೀನ ಬರುತ್ತವೆ. ಮತ್ತು ರಾಜಯೋಗದ ಅಭ್ಯಾಸದಿಂದ ಬರೇ ಜ್ಞಾನ ಶಕ್ತಿಯಿಂದ ಉತ್ಪನ್ನವಾದ ಸಂಸ್ಕಾರಗಳು ವಶಪಡಿಸಿಕೊಳ್ಳಲಿಕ್ಕೆ ಆಗುತ್ತದೆ. ಮತ್ತು ಅವನ್ನು ಪೂರಾ ಇಲ್ಲದಂತೆ ಮಾಡಲಿಕ್ಕೂ ಬರುತ್ತದೆ. ಇವೆಲ್ಲ ದಮನ ಶಕ್ತಿಗಳು ಅಭ್ಯಾಸ ಮತ್ತು ವೈರಾಗ್ಯದಿಂದ ಪ್ರಾಪ್ತವಾಗುತ್ತವೆ. ಯಾವ ಮನುಷ್ಯನು ವೈರಾಗ್ಯದ ಹೊರ್ತು ಬರೇ ಅಭ್ಯಾಸ ಮಾತ್ರ ನಡಿಸುವನೊ ಅವನು ಕಡೆತನಕ ಮುಟ್ಟಲಾರನು, ಮತ್ತು ಅವನು ಅಭ್ಯಾಸವನ್ನು ಮಧ್ಯದಲ್ಲಿಯೇ ಬಿಟ್ಟು ಬಿಡಬೇಕಾಗುತ್ತದೆ, ಕಾರಣ ವಿಷಯಗಳು ಅವನನ್ನು ಕ್ಷಣಕ್ಷಣಕ್ಕೆ ತಮ್ಮ

ಕಡೆಗೆ ಎಳಕೊಳ್ಳುತ್ತವೆ, ಮತ್ತು ಪುನಃಪುನಃ ಪ್ರಯತ್ನಮಾಡಿ ಅವನು ದಣಿದು ಹೋಗಿ, ಕಡೆಗೆ ಅಭ್ಯಾಸವನ್ನು ಬಿಟ್ಟುಬಿಡುತ್ತಾನೆ. ಅಭ್ಯಾಸದ ವಿನಹಾ ಬರೇ ವೈರಾಗ್ಯ ಇರುವದು ಸಹಾ ಕಡೆಗೆ ಅದೇ ಪರಿಣಾಮಕ್ಕೆ ಮುಟ್ಟುತ್ತದೆ. ಯಾಕಂದರೆ ಅಭ್ಯಾಸವಿಲ್ಲದ್ದರಿಂದ ಮನೋವೃತ್ತಿಗಳನ್ನು ಹ್ಯಾಗೆ ಆವರಿಸಿಕೊಳ್ಳಬೇಕೆಂಬದು ತಿಳಿಯುವದು ಶಕ್ಯವಿಲ್ಲ ಹೀಗೆ ಅವನು ಸಾಯುವತನಕ ಅಸಮಾಧಾನಿಯಾಗಿಯೇ ಇರುವನು. ಆದ್ದರಿಂದ ಸರ್ವಶಕ್ತಿಗಳ ಮೇಲೆ ಸತ್ತಾ ನಡಿಸಬೇಕಾದರೆ ಅಭ್ಯಾಸ ಮತ್ತು ವೈರಾಗ್ಯ ಇವುಗಳಿಂದಲೇ ಶಕ್ಯ ಅದೆ. ("ಅಭ್ಯಾಸವೈರಾಗ್ಯಾಭ್ಯಾಂತನ್ನಿರೋಧಃ") ಈ ಪತಂಜಲಿ ಯೋಗಸೂತ್ರವು ಆಧಾರವಿದೆ.

ವೇದಾಂತದ ತತ್ವಗಳನ್ನು ಲಕ್ಷಪೂರ್ವಕ ಓದಿ, ಅದರ ಮೇಲೆ ದೀರ್ಘ ವಿಚಾರ ಮಾಡಿ ತಮೋಗುಣವನ್ನು ವಶಮಾಡಿಕೊಳ್ಳಲಿಕ್ಕೆ ಬರುತ್ತದೆ. ಅದಕ್ಕೆ ಶ್ರವಣವೆನ್ನುತ್ತಾರೆ, ಮತ್ತು ಅದು ನಿಯಮದ ಒಂದು ಭಾಗವಾಗಿದೆ. ರಜೋಗುಣವೆಂದರೆ ಇಂದ್ರಿಯ ವ್ಯಾಪಾರಗಳು; ಇವು ಯಮ ಮತ್ತು ನಿಯಮ ಇವುಗಳ ಅಭ್ಯಾಸದಿಂದ ವಶಪಡಿಸಿಕೊಳ್ಳಲಿಕ್ಕೆ ಬರುತ್ತದೆ. ಆಸನಗಳ ಅಭ್ಯಾಸದಿಂದ ಶಾರೀರಿಕ ಸ್ಥೈರ್ಯವನ್ನು ಪ್ರಾಪ್ತಮಾಡಿಕೊಳ್ಳಲಿಕ್ಕೆ ಬರುತ್ತದೆ. ಪ್ರಾಣಾಯಾಮದಿಂದ ಕ್ರಿಯಾಶಕ್ತಿಯು ವಿಧೇಯವಾಗುತ್ತದೆ. ಸಾಧಕನು ಈ ಮೆಟ್ಟಿಲುತನಕ ಮುಟ್ಟಿದನಂದರೆ ಮೂಢಾವಸ್ಥೆಯು ಇಲ್ಲದಂತಾಗುವದು ಮನಸ್ಸಿನ ಚಂಚಲ ಸ್ವಭಾವವು ಧಾರಣೆ, ಧ್ಯಾನಗಳಿಂದ ಅಳಿದುಹೋಗಿ, ಅಲ್ಲಿಂದ ಉತ್ಪನ್ನವಾಗುವ ಏಕಾಗ್ರತೆಯಿಂದ ಸಾಧಕನಿಗೆ ಸಂಪ್ರಜ್ಞಾತ (ಸವಿಕಲ್ಪ) ಸಮಾಧಿಯನ್ನು ಪ್ರಾಪ್ತಮಾಡಿಕೊಳ್ಳಲಿಕ್ಕೆ ಬರುವದು. ಇದೇ ಅವಸ್ಥೆ ಮುಂದೆ ಪರಿಪಕ್ವವಾಗಿ ಸಾಧಕನಿಗೆ ನಿರ್ವಿಕಲ್ಪ ಸಮಾಧಿಯು ಪ್ರಾಪ್ತವಾಗುವದು. ಯೋಗಶಾಸ್ತ್ರದಲ್ಲಿ ವರ್ಣಿಸಿದ ಸಂಪೂರ್ಣ ಮಾರ್ಗದ ಇದು ಸಂಕ್ಷಿಪ್ತ ವರ್ಣನವಾಗಿರುತ್ತದೆ. ಆದರೆ ಇದಕ್ಕೆ ಮನಸ್ಸಿನ ವಿಶೇಷ ತಯಾರಿ ಬೇಕಾಗುತ್ತದೆ. ಯಾರ ವಿಷಯದ ಕಡೆ ಎಳೆದಾಟ ತಪ್ಪಿರುವದೊ, ಅವರೇ ಈ ಜ್ಞಾನಕ್ಕೆ ಅಧಿಕಾರಿಯಾಗಿದ್ದಾರೆ. ಯಾರು ಮೊದಲು ಮನಸ್ಸಿನೊಳಗಿನ ವಿಷಯವಾಸನೆಗಳನ್ನು ಜಯಿಸಿರುವರೊ ಅವರೇ ಅದರ ಮಹತ್ವವನ್ನು ಬಲ್ಲರು. ಶಾಸ್ತ್ರಮರ್ಯಾದೆಗನುಸರಿಸಿ ವಿಷಯೋಪಭೋಗ ತಕ್ಕೊಂಡಿದ್ದರೂ, ಅವರು ತಮ್ಮ ಮನಸ್ಸು ಶಾಂತವಾಗಿ ಇಡುತ್ತಾರೆ; ಕಡೆಗೆ ಸುಖೋಪಭೋಗದ ಎಲ್ಲ ವಾಸನೆಗಳನ್ನು ಬಿಟ್ಟುಬಿಟ್ಟು ಯೋಗಶಿಖರಕ್ಕೆ ಮುಟ್ಟುವ ಯೋಗ್ಯತೆ ಸಂಪಾದಿಸುತ್ತಾರೆ. ಯಾವಾತನು ತನ್ನ ಆಸನದಿಂದ ಚಲಿಸದೆ ತನ್ನ ಮನಸ್ಸಿನೊಳಗೆ ಉತ್ಪನ್ನವಾಗುವ ಸಂಕಲ್ಪ-ಪ್ರವಾಹವನ್ನು ಹ್ಯಾಗೆ ಹಿಡಿಯಬೇಕೆಂದು ತಿಳಿಯುತ್ತಾನೊ, ಅಂದರೆ ತನ್ನ ವಿಶಿಷ್ಟ ವಿಚಾರಗಳನ್ನು ಯಾವ ವಿಶಿಷ್ಟ ಶಕ್ತಿಯಿಂದ ಜಯಿಸಬೇಕೆಂದು ಬಲ್ಲನೊ, ಹಾಗೆಯೇ ಒಂದು ಸಂಕಲ್ಪ ನಷ್ಟವಾಗಿ ಮತ್ತೊಂದು ಉದ್ಭವಿಸುವ ಮಧ್ಯಸಂಧಿಯಲ್ಲಿ ಅಂದರೆ ಅದರೊಳಗಿನ ಬ್ರಹ್ಮದಲ್ಲಿ ಹ್ಯಾಗೆ ಧ್ಯಾನಮಗ್ನನಾಗಬೇಕೆಂತ ತಿಳಿ

ಯುವನೋ, ಅವನೇ ಯೋಗದ ಕಡೇ ಗುರಿಯನ್ನು ಹೊಂದಲಿಕ್ಕೆ ಮತ್ತು ಅದ ರಲ್ಲಿ ಪರಿಪೂರ್ಣನಾಗಲಿಕ್ಕೆ ಸಮರ್ಥನಾಗುತ್ತಾನೆ. ಯೋಗದಲ್ಲಿ ದೇಹವನ್ನೇ ಜಯಿಸಬೇಕಾಗುತ್ತದೆ ಎಂಬ ಭೀತಿದೆಶೆಯಿಂದ ಬಹಳ ಜನರು ಯೋಗಕ್ಕಿಂತ ಭಕ್ತಿ ಸುಲಭವೆಂತ ತಿಳಿಯುತ್ತಾರೆ. ಆದರೆ ಯೋಗಕ್ಕಿಂತ ಸುಲಭವಾದದ್ದು ಮತ್ತೇನದೆ? ಹೀಗೆ ಜ್ಞಾನೇಶ್ವರರು ಅನ್ನುತ್ತಾರೆ. ನನಗಾದರೂ ಹೀಗೆ ಅನಿ ಸುತ್ತದಲ್ಲ, ಭಕ್ತಿಯು ಬಾಹ್ಯ ವಿಷಯದ ಮೇಲೆ ಅವಲಂಬಿಸಿರುತ್ತದೆ. ಮತ್ತು ಯೋಗವು ತನ್ನ ಸ್ವತಃದ ಮೇಲೆ ಅವಲಂಬಿಸಿರುತ್ತದೆ. ಅದ್ದರಿಂದ ಯೋಗ ದಷ್ಟು ಭಕ್ತಿ ಸುಲಭವಲ್ಲ. ಮನುಷ್ಯನು ಈ ಪ್ರಶ್ನೆಯ ದೀರ್ಘ ವಿಚಾರ ಮಾಡಿ ತನ್ನಷ್ಟಕ್ಕೆ ಅದರ ವಿವರಣೆ ಮಾಡಿಕೊಂಡದ್ದಾದರೆ, ಮತ್ತು ಬಂಧಕಕಾರಕ ವಿಷ ಯದ ಧ್ಯಾನ ಮಾಡುವದನ್ನು ಬಿಟ್ಟು, ಅದರ ವಿರುದ್ಧವಾದ ಸ್ವತಂತ್ರ ಆತ್ಮನ ಧ್ಯಾನವನ್ನು ಮಾಡಿದರೆ, ಅವನು ಸರ್ವ ದುಃಖಗಳನ್ನು ದೂರ ಮಾಡಿ, ಸರ್ವ ಶ್ರೇಷ್ಠವಾದ ಸುಖದ ಪ್ರಾಪ್ತಿ ಮಾಡಿಕೊಂಡಾನು. ಸಾಂಖ್ಯ ಶಾಸ್ತ್ರದೊಳಗಿನ ಸರ್ವ ತತ್ವಗಳ ಪೂರ್ಣ ವಿಚಾರ ಮಾಡಿ ಸರ್ವ ದೃಶ್ಯಾದೃಶ್ಯ ವಸ್ತುಗಳಿಂದ ಸ್ವತಂತ್ರನಾದ ಆತ್ಮನ ಕಡೆಗೆ ಲಕ್ಷವನ್ನು ಪೂರೈಸಬೇಕು, ಮತ್ತು ಯೋಗ ಸಾಧನ ಗಳಿಂದ ಆತನ ಧ್ಯಾನ ಮಾಡಬೇಕು. ಆದರೆ ಪ್ರತಿಒಂದು ವಿಷಯದಲ್ಲಿ ಗುರು ಬೇಕು. ಯಾಕಂದರೆ ಗುರುವು ಮಾರ್ಗ ತೋರಿಸಿದ ವಿನಹಾ ಅದರೊಳಗಿನ ಖರೆ ರಹಸ್ಯವು ಸ್ವತಂತ್ರವಾಗಿ ಯತ್ನ ಮಾಡುವವರಿಗೆ ಸಿಗಲಾರದು.

ಸರ್ವಸಾಧಾರಣವಾಗಿ ಯಾರಿಗೂ ದುಃಖವು ಬೇಕಾಗಿರುವದಿಲ್ಲ, ಎಂಬದರಿಂದ ಪ್ರತಿಒಬ್ಬನು ಆ ದುಃಖದ ಸಮಾಪ್ತಿಯಾಗಬೇಕೆಂತ ಇಚ್ಛಿಸು ತ್ತಾನೆ. ಯಾವದೊಂದು ಇತರ ವಿಷಯಕ್ಕಿಂತ ತಾನೇ ತನಗೆ ಅಧಿಕ ಪ್ರಿಯ ನಿರುವನು. ತನ್ನ ಸುಖಕ್ಕೆ ಅಡ್ಡವಾಗಿ ಯಾವ ಸಂಗತಿಗಳು ಬರುವವೊ ಅವು ತನಗೆ ಅಪ್ರಿಯವಾಗುವವು. ಹಾಗೆಯೇ ತಾನೇ ತನಗೆ ಎಂದೂ ಅಪ್ರಿಯನಲ್ಲ ಇದರ ಮೇಲಿಂದ ಹೀಗೆ ಸ್ಪಷ್ಟವಾಗಿ ತೋರುವದಲ್ಲ, ಖರೇ ಸುಖವು ಬೇರೆ ಯಾವ ಬಾಹ್ಯವಸ್ತುವಿನಲ್ಲಿಯೂ ಇರದೆ, ಅದು ತನ್ನಲ್ಲಿಯೇ ಇರುತ್ತದೆ.

ಮನಸ್ಸನ್ನು ಹ್ಯಾಗೆ ಜಯಿಸಬೇಕು, ಮತ್ತು ಕಡೆಗೆ ಅದರ ನಾಶವನ್ನು ಹ್ಯಾಗೆ ಮಾಡಬೇಕು, ಈ ವಿಷಯದಲ್ಲಿಯೂ ಗುಲಾಬರಾವ ಮಹಾರಾಜರು ಸ್ವಲ್ಪ ಹೇಳಿರುತ್ತಾರೆ. ಅವರನ್ನುತ್ತಾರೆ, ವಶಿಷ್ಠಮುನಿಗಳು ಮನೋನಾಶಕ್ಕೆ ಎರಡು ಸಾಧನೆಗಳನ್ನು ಹೇಳಿದ್ದಾರೆ. ಒಂದನೇದು, ಯೋಗಸಾಧನದಿಂದ ಮನ ಸ್ಸಿನ ವೃತ್ತಿಗಳನ್ನು ವಶಪಡಿಸಿಕೊಳ್ಳುವದು; ಎರಡನೇದು ತನ್ನನ್ನು ತ್ರಯಸ್ಥ ಅಂದರೆ ಸಾಕ್ಷಿರೂಪದಿಂದ ನೋಡುವದು, ಈ ಎರಡನೇ ಸಾಧನವು ಸ್ವಲ್ಪ ಕಠಿ ಣವದೆ. ಮನೋವೃತ್ತಿಗಳನ್ನು (ಸಂಕಲ್ಪಗಳನ್ನು) ಯೋಗಾಭ್ಯಾಸ ವೈರಾಗ್ಯ ದಿಂದ ತನ್ನ ಸ್ವಾಧೀನಪಡಿಸಿಕೊಳ್ಳಲಿಕ್ಕೆ ಬರುತ್ತದೆ. ಸರ್ವ ಐಹಿಕ ವ್ಯವಹಾರ

ವನ್ನೂ ವಿಷಯಗಳನ್ನೂ ದೋಷದೃಷ್ಟಿಯಿಂದ ನೋಡುವದು ಮತ್ತು ವಿಷಯ ಗಳಸಲುವಾಗಿ ಮಾಡತಕ್ಕ ಪ್ರಯತ್ನಗಳು ದೋಷ ಮತ್ತು ಕ್ಲೇಶಗಳಿಂದ ತುಂಬಿರುತ್ತವೆಂತ ತಿಳಿಯುವದು; ಇವುಗಳಿಂದ ವೈರಾಗ್ಯ ಪ್ರಾಪ್ತವಾಗಲಿಕ್ಕೆ ಸಾಧ್ಯವದೆ. ಈಶ್ವರನ ಧ್ಯಾನದಿಂದ ಯೋಗಾಭ್ಯಾಸ ಘಟಿಸುತ್ತದೆ. ನಾಮರೂಪ ಇರುವಂಥ ಸಗುಣ ಈಶ್ವರನ ಧ್ಯಾನ, ಮತ್ತು ನಾಮರೂಪಾತೀತನಾದ ಈಶ್ವರನ (ನಿರ್ಗುಣ) ಧ್ಯಾನ, ಹೀಗೆ ಧ್ಯಾನದ ಎರಡು ಪ್ರಕಾರಗಳು ಅವೆ. ಶ್ರೀಕೃಷ್ಣನು ಜಗತ್ತಿನ ಎಲ್ಲ ವಸ್ತುಗಳಿಗಿಂತ ಸುಂದರನು ಎಂದು ಸಾಧಕನು ಮೊದಲು ಕೃಷ್ಣ ನಂಥ ಯಾವದಾದರೂ ಸಗುಣ ಈಶ್ವರಸ್ವರೂಪದ್ದು ಧ್ಯಾನಮಾಡಬೇಕು, ಮತ್ತು ಅತನ ಸರ್ವತೋಪರಿ ಭಕ್ತಿಭಾವದಿಂದ ಸೇವಾ ಮಾಡಬೇಕು, ಪೂರ್ವದ ಅನಂತ ಜನ್ಮಗಳಲ್ಲಿ ಮತ್ತು ಈ ಜನ್ಮದಲ್ಲಿಯೂ ವೈಷಯಿಕ ಸುಖಭೋಗದಿಂದ ಮನಸ್ಸಿನಲ್ಲಿ ನೆಲೆಗೊಂಡ ಸರ್ವ ಸಂಸ್ಕಾರಗಳನ್ನು ನಾಶಪಡಿಸಲಿಕ್ಕೆ ಈ ಧ್ಯಾನವು ಒಳ್ಳೇ ಉಪಯೋಗಕ್ಕೆ ಬೀಳುವದು.

ಅನಂತರ ಬಹಳ ಧ್ಯಾನಾಭ್ಯಾಸದಿಂದ ಧ್ಯಾತಾ (ಧ್ಯಾನ ಮಾಡುವವನು) ಧ್ಯೇಯದಲ್ಲಿ ಏಕರೂಪನಾಗುತ್ತಾನೆ. ಆಮೇಲೆ ನಿರ್ವಾಣ ಸ್ಥಿತಿಯಲ್ಲಿ ಪ್ರವೇಶಿ ಸುತ್ತಾನೆ, ಆದರೂ ಅವನು ಯಾವಾಗ ದೇಹಭಾನಕ್ಕೆ ಬರುತ್ತಾನೋ, ಆಗ ಅವನಿಗೆ ಈ ಜಗತ್ತು ಸತ್ಯವೆಂಬಂತೆ ಕಾಣಿಸುತ್ತದೆ. ಹೀಗೆ ಆಲೋಚಿಸಿರಿ, ಒಬ್ಬ ಮನುಷ್ಯನು ಕತ್ತಲಲ್ಲಿ ಒಂದು ಹಗ್ಗ ನೋಡಿದನು ಆಗ ಅದು ಹಾವು ಅಂತ ತಿಳಿದು ಅವನು ಅಲ್ಲಿಂದ ಓಡಿಹೋದನು, ಹೀಗೆ ಅವನು ಆ ಹಾವನ್ನು ನೋಡ ಲಾರನು; ಆದರೆ ತಾನು ಹಾವು ನೋಡಿದ್ದೆನೆಂಬ ಸಂಸ್ಕಾರವು ಅವನ ಮನಸ್ಸಿನಲ್ಲಿ ನಿಲ್ಲುವದು ಈಗ ಇದಕ್ಕೆ ಪ್ರತಿಪಕ್ಷವಾಗಿ, ಅವನು ಓಡಿಹೋಗದೆ, ಅವನು ಅಲ್ಲೇ ಇದ್ದು, ದೀಪ ತಂದು ಇದು ಹಾವಲ್ಲ ಹಗ್ಗವದೆ ಎಂದು ತನ್ನ ನಿಶ್ಚಯ ಮಾಡಿ ಕೊಂಡದ್ದಾದರೆ, ಅವನ ಭೀತಿಯು ಇಲ್ಲದಂತಾಗುವದು, ಮತ್ತು ಭೀತಿಯ ಸಂಸ್ಕಾರವೂ ಮನಸ್ಸಿನೊಳಗೆ ಇರಲಾರದು.

ಇದರ ಮೇಲಿಂದ ಜಗತ್ತಿನ ಅಸ್ತಿತ್ವದ ಭೀತಿಯು ಇಲ್ಲದಂತಾಗಲಿಕ್ಕೆ ಒಂದು ಜ್ಞಾನವಮಾತ್ರ ಸಮರ್ಥವದೆ. ಈ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳ ಲಿಕ್ಕೆ ಧಾರ್ಮಿಕ ಪುಸ್ತಕಗಳನ್ನು ಓದಬೇಕು. ಅವುಗಳ ಮೇಲಿನ ಗುರುಗಳ ವಿವರಣೆಯನ್ನು ಶ್ರವಣ ಮಾಡಬೇಕು, ಅನಂತರ ಏಕಾಂತದಲ್ಲಿ ಕೂತು ಅದರ ವಿಷಯ ವಿಚಾರ ಮಾಡಬೇಕು. ಮತ್ತು ಅದರೊಳಗಿನ ತತ್ವಗಳು ಮನ ಸ್ಸಿಗೆ ಸಮಾಧಾನಕಾರಕವಾಗಿ ಯಾವಾಗ್ಗೆ ಗೊತ್ತಾಗುವವೋ, ಆಗ ಅವುಗಳ ಚಿಂತನವನ್ನು ಪುನಃಪುನಃ ಮಾಡಬೇಕು. ಬ್ರಹ್ಮಾನುಭವವು ಸ್ವಾನುಭವದ ಮಾರ್ಗದಿಂದ ಮಾತ್ರ ಪ್ರಾಪ್ತಮಾಡಿಕೊಳ್ಳಬೇಕು. ಇದರಮೇಲೆ ಶಂಕರಾಚಾರನು ಹೀಗನ್ನುವನು, ಇದು ಪ್ರತಿಒಬ್ಬನಿಗೆ ಗೊತ್ತೇ ಅದೆ; ಇದಕ್ಕೆ ವಶಿಷ್ಠರನ್ನುತ್ತಾರೆ,

ಹೀಗೆ ಗೊತ್ತಿರುವದು ಸತ್ಯವಾದರೆ ಪ್ರತಿಒಬ್ಬನು ಅದನ್ನೇ ನಿರಂತರ ಲಕ್ಷದಲ್ಲಿಟ್ಟುಕೊಂಡು ಆ ಪ್ರಕಾರ ನಡೆಯಬೇಕು. ಎಂದೂ ಮರೆಯಬಾರದು ಅಂದರೆ ಆಯಿತು.

ಶ್ರೀವಸಿಷ್ಠರು ರಾಮನಿಗೆ ಅನ್ನುತ್ತಾರೆ—'ಪ್ರತಿಒಂದು ವಿಷಯವನ್ನು ಶಿಷ್ಯನಿಗೆ ತಿಳಿಯುವಂತೆ ಸ್ಪಷ್ಟಮಾಡಿ ಹೇಳುವಂಥಾದ್ದು, ಇದು ಗುರುವಿನ ಕರ್ತವ್ಯವು. ಆದರೆ ಅದನ್ನು ಗ್ರಹಿಸುವದು ಶಿಷ್ಯನ ಅಧಿಕಾರದ ಮೇಲೆ ಹೊಂದಿರುತ್ತದೆ.'

ಬಹಳ ವೇದಾಂತಿಗಳಿಗೆ ಹೀಗೆ ಅನಿಸುತ್ತದೆ ಮತ್ತು ಅವರು ಹೇಳುತ್ತಾರಲ್ಲ, ಸದ್ಗುರುವೇ ನಿರಂತರ ಶಿಷ್ಯನ ಶೋಧ ಮಾಡುತ್ತಿರುತ್ತಾರೆ. ಆದರೆ ಗುಲಾಬರಾವ ಮಹಾರಾಜರನ್ನುತ್ತಾರೆ, — ವೇದ ಮತ್ತು ಸ್ಮೃತಿ ಇವುಗಳಲ್ಲಿ, ಬೇರೆ ಬೇರೆ ವರ್ಣಸ್ಥರಿಗೆ ಬೇರೆ ಬೇರೆ ಧರ್ಮಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ನಿಃಸಂದಿಗ್ಧರೀತಿಯಿಂದ ಹೀಗೆ ಹೇಳುತ್ತದಲ್ಲ, "ಜನರು ಅನೇಕ ತೀರ್ಥಸ್ಥಾನಗಳನ್ನು ನೋಡಬೇಕು, ಮತ್ತು ಸಾಧು ಸಹವಾಸ ಘಟಿಸುವಂತೆ ಯತ್ನಗಳನ್ನು ಮಾಡಬೇಕು." ಇದರ ಮೇಲಿಂದ ಹೀಗೆ ಸ್ಪಷ್ಟವಾಗುತ್ತದಲ್ಲ, ಪಾರಮಾರ್ಥಿಕ ಅಧಿಕಾರಿಯು ಸಾಧುವನ್ನು ಶೋಧಿಸಿ ತೆಗೆಯಬೇಕು, ಮತ್ತು ಅವಶ್ಯವೆನಿಸಿದರೆ, ಅದರ ಸಲುವಾಗಿ ಮತ್ತು ಅವರ ಸಹವಾಸ ಮಾಡುವದರ ಸಲುವಾಗಿ ಅನೇಕ ಸ್ಥಳಗಳನ್ನಾದರೂ ಸೇವಿಸಬೇಕು. ಆದರೆ ಸದ್ಗುರುವು ಸಚ್ಛಿಷ್ಯನನ್ನು ಹುಡುಕಲಿಕ್ಕೆ ಎಲ್ಲಾದರೂ ಹೋಗಬೇಕೆಂಬ ಮಾತು ನಿಜವಲ್ಲ. ವೇದಾಂತ ಶಾಸ್ತ್ರದ ಪ್ರಕಾರ ಯಾವಾತನು ಸಾಧನ ಚತುಷ್ಟಯ ಸಂಪನ್ನನಿದ್ದಾನೋ ಅವನೇ ಸದ್ಗುರುವಿನ ಕಡೆ ಹೋಗಲಿಕ್ಕೆ ಯೋಗ್ಯನು ಎಂತ ತಿಳಿಯಲ್ಪಡುವದು. ಆದರೆ ಸದ್ಗುರುವು ಶಿಷ್ಯನನ್ನು ಹುಡುಕಲಿಕ್ಕೆ ಹೋಗಬೇಕು ಅಂತ ಎಲ್ಲಿಲ್ಲಿಯೂ ಹೇಳಲಿಲ್ಲ.

ಒಬ್ಬೊಬ್ಬರನ್ನುತ್ತಾರೆ, ಈಶ್ವರ ಕೃಪೆಯಿಂದಲೆ ಸದ್ಗುರುವು ಪ್ರಾಪ್ತನಾಗುವನು, ಇದಕ್ಕೆ ವಿರುದ್ಧ ಶಾಸ್ತ್ರ ಹೇಳುತ್ತದೆ, ಗುರುವಿನ ಸಹಾಯದ ವಿನಹಾ ಯಾರಿಗೂ ಈಶ್ವರ ಕೃಪೆಯನ್ನು ಸಂಪಾದಿಸಲಾಗದು. ಸದ್ಗುರುವು ಸಿಗಬೇಕಾದರೆ, ಈಶ್ವರೀ ಕೃಪೆಯು ಅವಶ್ಯಕವಿದೆಯೆಂದು ಒಮ್ಮೆ ಒಪ್ಪುವದಾದರೆ, ಇಂಥ ಒಂದು ಪ್ರಶ್ನೆ ಬಂದು ನಿಲ್ಲುತ್ತದಲ್ಲ, ಈಶ್ವರೀ ಕೃಪೆಯು ನಾವು ಏನೇನೂ ಪ್ರಯತ್ನ ಮಾಡಿದ ವಿನಹಾ ಪ್ರಾಪ್ತವಾಗುವದೇನು ? ಯಾವದಾದರೊಂದು ಪ್ರಯತ್ನದ ವಿನಹಾ ಅದು ಪ್ರಾಪ್ತವಾಗುತ್ತದೆ ಅಂತ ಅನ್ನುವದು ವೇದಾಂತ ಮತಕ್ಕೆ ಪೂರ್ಣ ವಿರುದ್ಧವದೆ, ಎಂದು ಪ್ರಯತ್ನದ ಜರೂರಿ ಅದೆ ಅಂತ ಕಬೂಲು ಮಾಡಿದರೆ, ಸದ್ಗುರುಪ್ರಾಪ್ತಿಗಾದರೂ ಪ್ರಯತ್ನಗಳು ಅವಶ್ಯ

ವೆಂಬುದು ಸಿದ್ಧವಾಗುತ್ತದೆ. ತಮ್ಮನ್ನು ಸಾಧು ಅನ್ನಿಸಿಕೊಳ್ಳುವ ಜನರೇ ವರ್ಣಾಶ್ರಮ ಧರ್ಮದ ಪರಂಪರಾ ಮುರಿಯಲಿಕ್ಕೆ ಶುರು ಮಾಡಿದರೆಂದಮೇಲೆ, ಅವರ ಅನುಕರಣ ಸಾಮಾನ್ಯ ಜನರೂ ಮಾಡುವರು, ಮತ್ತು ಜಗದ ಕಲ್ಯಾಣಕ್ಕಾಗಿಯೂ ವರ್ಣಾಶ್ರಮ ಧರ್ಮ ಸ್ಥಾಪನಾರ್ಥವಾಗಿಯೂ ಈಶ್ವರನು ಅವತಾರ ಧಾರಣೆ ಮಾಡಬೇಕಾಗುವದು. ಅವನು ಈ ಸುಳ್ಳು ಕಲಿಸೋಣದಿಂದ ಆದ ದುಷ್ಪರಿಣಾಮವನ್ನು ನಾಶಮಾಡಿ, ಕ್ರಮಕ್ರಮದಿಂದ ಉಚ್ಚ ಸ್ಥಿತಿಗೆ ಒಯ್ಯುವವಂಥ ಈ ಪುರಾತನ ಮಾರ್ಗವನ್ನು ಸ್ಪಷ್ಟ ಮಾಡುತ್ತಾನೆ. ವರ್ಣಾಶ್ರಮ ಧರ್ಮಪರಂಪರೆಯನ್ನು ಪುನಹಾ ಶುರು ಮಾಡುವನು. ಯೋಗದ ಮೇಲೆ ತನ್ನ ವಿಶ್ವಾಸ ಕೂಡ್ರುವದಿಲ್ಲವೆಂತ ಯಾವನಾದರೂ ಹೇಳಿದರೆ, ನೀತಿಯ ಮೇಲೆ ನೀವು ವಿಶ್ವಾಸ ಯಾಕೆ ಇಡುತ್ತೀರಿ ಎಂದು ಅವರಿಗೆ ಕೇಳಬೇಕು. ಯಾಕಂದರೆ ಅದರ ಫಲ ಸಹ ಅವರಿಗೆ ಈ ಜನ್ಮದಲ್ಲಿ ಸಿಗಲಾರದೆ, ಅದು ಮುಂದೆ ಎಂದಾದರೂ ಅಥವಾ ಮುಂದಿನ ಜನ್ಮದಲ್ಲಿಯೇ ಸಿಗುವದಿರುತ್ತದೆ, ಅಥವಾ ಅದು ಪಾರಲೌಕಿಕವಿರುತ್ತದೆ.

ಚಂಚಲ ಸ್ವಭಾವದ ಸಾಧಕರು ಮೂರು ಪ್ರಕಾರದವರಿರುತ್ತಾರೆ. (೧) ಮನಸ್ಸಿನ ಸಿದ್ಧತೆ ಅಥವಾ ಪಾತ್ರತೆ ಇದ್ದ ವಿನಹಾ ಸಾಧುಗಳ ಉಪದೇಶವನ್ನು ತಕೊಳ್ಳುತ್ತಾರೆ. ಆದರೆ ವೈರಾಗ್ಯದ ಅಭಾವದ ಮೂಲಕ ವಿಪತ್ತಿಯೊಳಗೆ ಸಿಕ್ಕಿಬಿದ್ದು ಅಭ್ಯಾಸವನ್ನು ಬಿಟ್ಟುಬಿಡುತ್ತಾರೆ. (೨) ಸ್ವಲ್ಪ ಪಾತ್ರತೆ ವ ಸಿದ್ಧತೆ ಇದ್ದೂ ನಿಜವಾದ ಮಾರ್ಗದರ್ಶಕ ಗುರು ಸಿಗದಿದ್ದದರಿಂದ ಸುಳ್ಳು ಗುರುವಿನಿಂದ ಮೋಸ ಹೊಂದಿ ಪಶ್ಚಾತ್ತಾಪ ಪಟ್ಟು ಅಭ್ಯಾಸವನ್ನು ಬಿಟ್ಟುಬಿಡುವರು. (೩) ಸಾಧನ ಚತುಷ್ಟಯ ಸಂಪನ್ನರಿದ್ದರೂ, ನಕಲಿ ವ ಡಾಂಭಿಕ ಗುರುವಿನ ಬಲೆಯೊಳಗೆ ಸಿಕ್ಕು ಮೋಸಹೊಂದಿದವರ ಉದಾಹರಣೆಗಳನ್ನು ಕೇಳಿ, ಯಾರು ಗುರು ಮಾಡಲಿಕ್ಕೆ ಸಂಶಯಪಡುತ್ತಾರೋ ಅವರು. ಇಷ್ಟರ ಪೈಕಿ ಮೊದಲನೇಯವರು ಯಾವ ಕೆಲಸಕ್ಕೂ ಬರುವವರಲ್ಲ. ಎರಡನೇ ಪ್ರಕಾರದ ಸಾಧಕರು ಜಾಲೋ [illegible]ತ್ತಾರೆ. ಆದರೆ ಅವರ ಶಂಕಾಖೋರ ಸ್ವಭಾವದದೆಸೆಯಿಂದ ಅವರು ಸದ್ಗುರುವಿನಾದರೂ ತಿರಸ್ಕರಿಸುವ ಸಂಭವ ಇರುತ್ತದೆ. ಅವರು ಮನೆಯಲ್ಲಿಯೇ ಇದ್ದು ತಮ್ಮಲ್ಲಿರುವ ಉತ್ತಮ ಗುಣಗಳನ್ನು ವೃದ್ಧಿಗೊಳಿಸುವ ಪ್ರಯತ್ನ ಮಾಡಬೇಕು; ಅಂದರೆ ಕೆಲವು ಕಾಲದ ಮೇಲೆ ಅವರಿಗೆ ಸದ್ಗುರು ಪ್ರಾಪ್ತನಾದಾನು. ಆದರೆ ಮೂರನೇ ಪ್ರಕಾರದ ಸಾಧಕರಿಗೋಸ್ಕರವಾಗಿಯೆ ಪತಂಜಲಿ ಮುನಿಗಳು ತಮ್ಮ ಯೋಗ-ಶಾಸ್ತ್ರದಲ್ಲಿ (ಪಾದ ೩ ಸೂತ್ರ ೩೨) "ಮೂರ್ಧಜ್ಯೋತಿಷಿ ಸಿದ್ಧದರ್ಶನಮ್" (ಸಹಸ್ರಾರ ಅಥವಾ ಶಿರಸ್ಸಿನಲ್ಲಿ ಸಂಯಮ ಮಾಡಿದರೆ ಸಿದ್ಧದರ್ಶನವಾಗುವದು) ಅಂತಲೂ, ಮತ್ತು ವ್ಯಾಸರೂ ಒಂದು ಉಪಾಯವನ್ನು ತೋರಿಸಿದ್ದಾರೆ, ಸಾಧಕನು ಧ್ಯಾನ ಮಾಡುತ್ತಿರುವಾಗ, ಆ ಧ್ಯಾನಸ್ಥಿತಿಯಲ್ಲಿ ಮೊದಲಿನ ಮಧ್ಯಭಾಗ

ದಲ್ಲಿ ಪ್ರಕಾಶವನ್ನು ಕಾಣುತ್ತಾನೆ ಮತ್ತು ಆ ಪ್ರಕಾಶದಲ್ಲಿ ಅವನಿಗೆ ಪೃಥ್ವಿ, ಸ್ವರ್ಗ ವ ಅಂತರಾಳದಲ್ಲಿರುವ ಸಾಧುಗಳ ದರ್ಶನವಾಗುತ್ತದೆ. ಇದರಲ್ಲಿ ಮಹತ್ವದ ಸಂಗತಿ ಏನೆಂದರೆ, ಸಾಧಕನಿಗೆ ಅಲ್ಲಿ ತನ್ನ ಸದ್ಗುರು ದರ್ಶನವಾಗುತ್ತದೆ, ಮತ್ತು ಆ ಸದ್ಗುರುವು ಅವನಿಗೆ ಮುಂದಿನ ಮಾರ್ಗವನ್ನು ತೋರಿಸುತ್ತಾನೆ. ಸದ್ಗುರು ಶೋಧನೆಗೆ ಇದು ಉತ್ತಮ ಮತ್ತು ಸಮೀಪದ ಮಾರ್ಗವಿರುತ್ತದೆ. ಒಮ್ಮೊಮ್ಮೆ ಇಂಥಾ ಉದಾಹರಣೆಗಳಿರುತ್ತವಲ್ಲ, ಒಬ್ಬ ಸಾಧಕನಿಗೆ ಸದ್ಗುರು ಶೋಧನದ ಏನೊಂದು ಪ್ರಯತ್ನ ಮಾಡದಲೆ ಸದ್ಗುರುವಿನ ದರ್ಶನವಾಗುತ್ತದೆ. ಆದರೆ ಇಂಥ ಅಪವಾದಗಳಿಂದಲೇ ನಿಯಮವು ನಿರ್ಣಯಿಸಲ್ಪಡುವದು. ಇಂಥ ಉದಾಹರಣೆಗಳ ಮೇಲಿಂದ ಸದ್ಗುರು ಶೋಧನದ ಯತ್ನವನ್ನು ಬಿಟ್ಟು ಬಿಡುವದು ಹಿತಪ್ರದವಾಗಲಾರದು.

ಯಾವನಾದರೂ ಒಬ್ಬ ಮನುಷ್ಯನಿಗೆ ಭೂಮಿಯೊಳಗೆ ಹುಗಿದ ಗುಪ್ತ ದ್ರವ್ಯವು ಶಿಕ್ಕಿದೆ ಅಂತ ಮತ್ತೊಬ್ಬನು ಇನ್ನು ತಾನು ಹೊಲದ ಕೆಲಸ ಮಾಡುವ ಜರೂರಿ ಇಲ್ಲ ಅಂದರೆ ಅದು ಕೇವಲ ಮೂರ್ಖತ್ವವೆನಿಸೀತು. ಈಗ ಒಬ್ಬ ಸಾಧುವಿನ ಕಡೆಯಿಂದ ನಾನು ಮೋಸ ಹೊಂದುವೆನು ಎಂತ ಅನಿಸುತ್ತಿದ್ದರೆ, ಸಾಧುಶೋಧನದಲ್ಲಿ ವೇಳೆ ಕಳೆಯುವದು ಯೋಗ್ಯವಲ್ಲ. ನನಗೆ ಹೀಗೆ ಅನಿಸುವದಲ್ಲ, ಖರೆ ಸಾಧಕನು ಸುಳ್ಳು ಸಾಧುವಿನಿಂದ ಎಂದೂ ಮೋಸ ಹೋಗಲಾರನು. ಶ್ರೀಗುಲಾಬರಾವ ಮಹಾರಾಜರು ಈ ಸಾಧು ಶೋಧನದ ವಿಚಾರವನ್ನು ತಮ್ಮ ಗ್ರಂಥದಲ್ಲಿ ಪುನಃಪುನಃ ಹೇಳಿರುತ್ತಾರೆ. ನನಗಾದರೂ ಅದು ಮಾನ್ಯವದೆ. ತುಕಾರಾಮ ಮಹಾರಾಜರಾದರೂ ತಮ್ಮ ಅಭಂಗದಲ್ಲಿ ಇದೇ ಸಂಗತಿಯನ್ನು ಹೇಳಿರುತ್ತಾರೆ.

ಅಗ್ನಿಯು ಯಾರನ್ನು ಕರೆಯುತ್ತಾನೆ? ಯಾವಾತನು ಚಳಿಯಿಂದ ಪೀಡಿತನಾಗಿರುವನೋ ಅವನೇ ಅಗ್ನಿ ಇದ್ದಲ್ಲಿ ಹೋಗಿ, ತನ್ನ ಚಳಿಯನ್ನು ಕಳಕೊಳ್ಳುತ್ತಾನೆ. ನೀರು, ಜನರಿಗೆ ಬನ್ನಿರಿ ನನ್ನನ್ನು ಕುಡಿಯಿರಿ ಅಂತ ಹೇಳುತ್ತದೇನು? ತೃಷಿತನಾದವನು ತಾನೇ ನೀರಿನ ಕಡೆ ಓಡುತ್ತಾನೆ. ವಸ್ತ್ರವೇನು ನನ್ನನ್ನು ಧರಿಸಿರಿ ಎಂದು ಹೇಳುವದೊ, ತಮ್ಮ ತಮ್ಮ ಇಚ್ಛೆಯಿಂದ ಜನರು ಧಾರಣ ಮಾಡುತ್ತಾರೆ. ತುಕಾರಾಮನ ಸ್ವಾಮಿಯು " ನಿಮ್ಮ ಉದ್ಧಾರಕ್ಕಾಗಿ ನನ್ನನ್ನು ಸ್ಮರಿಸಿರಿ " ಅನ್ನುತ್ತಾನೋ?

ಉಪನಿಷತ್ತುಗಳಲ್ಲಿ ಸಹ ಹೀಗೆ ಹೇಳಿದೆ, ಮುಮುಕ್ಷುವು ಯಾವ ಸ್ವಾತ್ಮಾನುಭವಿ ಸಾಧು ಇದ್ದಾನು, ಮತ್ತು ಪರಮಾರ್ಥದ ಮಾರ್ಗ ತೋರಿಸಲಿಕ್ಕೆ ಸಮರ್ಥನಿದ್ದಾನು, ಅವನ ಕಡೆಗೆ ಸಮಿತ್ಪಾಣಿಯಾಗಿ ಹೋಗಿ, ಅವನಿಂದ ಆತ್ಮಜ್ಞಾನದ ಉಪದೇಶವನ್ನು ಪಡಕೊಳ್ಳಬೇಕು.

ಒಳ್ಳೇದು ಇರಲಿ, ನೀವು ನನ್ನ ಸ್ವಂತದ ವಿಷಯ ಕೇಳುತ್ತೀರಾದರೆ, ನಾನು ಶಿಕ್ಷಿತನೂ ಅಲ್ಲ, ಮತ್ತು ಸ್ವಾಭಾವಿಕವಾಗಿ ಬುದ್ಧಿಯಲ್ಲಿ ಸ್ವಲ್ಪ ನ್ಯೂನತೆಯು ಉಳ್ಳವನಿದ್ದೇನೆ. ಆದ್ದರಿಂದ ಇತರ ಸಾಧುಗಳ ವಚನಗಳನ್ನು ಮತ್ತು ನನಗಿಂತ ಜ್ಞಾನದಿಂದಲೂ ವಿದ್ವತ್ತೆಯಿಂದಲೂ ಅತ್ಯಂತ ಶ್ರೇಷ್ಠರಾದವರ ವಚನಗಳನ್ನು ನಾನು ಆಧಾರವಾಗಿ ತಕ್ಕೊಳ್ಳಬೇಕಾಯಿತು. ನನ್ನ ಗುರುವು ಸೂಚಿಸಿದಂತೆ ನಾನು ಕೆಲವು ಸಂಗತಿಗಳನ್ನು ನನ್ನ ಸ್ವಂತ ಶಬ್ದಗಳಿಂದ ಹೇಳಿದ್ದರೆ, ಜನರು ನನ್ನ ಮೇಲೆ ವಿಶ್ವಾಸವಿಡಲಾರರು. ಆದ್ದರಿಂದ ಇತರರು ನನಗೆ ಏನು ಹೇಳಿದ್ದಾರೊ ಅಥವಾ ನಾನು ಸ್ವತಃ ಓದಿದ್ದೆನೊ ಅವರ ಆಧಾರದಿಂದ ನಾನು ಜನರಿಗೆ ಸ್ವಲ್ಪ ಹೇಳುತ್ತೇನೆ. ಶ್ರವಣ ಮಾಡುವದು ಅಥವಾ ಆದಕ್ಕೇನಾದರೂ ಮಹತ್ವಕೊಡುವದು ಇದು ಜನರ ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದ ಶ್ರೀಗುಲಾಬರಾವ ಮಹಾರಾಜರು ಏನು ಹೇಳಿರುವರೊ ಮತ್ತು ನನಗೆ ಎಷ್ಟು ನಿಶ್ಚಯವಾಗಿ ತಿಳಿದದೋ ಅದನ್ನು ನಿಮಗೆ ಹೇಳಿದ್ದೇನೆ. ಈ ಪ್ರಶ್ನದಲ್ಲಿ ಯಾರಿಗಾದರೂ ಆಳವಾದ ವಿಚಾರ ಮಾಡುವದಿದ್ದರೆ, ಅವರು ಇತ್ತಲಾಗಿ ಪ್ರಸಿದ್ಧವಾಗಿರುವ ಗುಲಾಬರಾವ ಮಹಾರಾಜರ ಪತ್ರಗಳನ್ನು ಓದಬೇಕು. ನಾನು ಮಹಾರಾಜನೂ ಅಲ್ಲ, ಮತ್ತು ಇಂಥ ಗೂಢ ಪ್ರಶ್ನೆಗಳ ಉತ್ತರ ಕೊಡಲಿಕ್ಕೆ ಸಮರ್ಥನೂ ಅಲ್ಲ. ಆದ್ದರಿಂದ ಈ ಪ್ರಶ್ನೆಯ ಸಂಬಂಧ ಗುಲಾಬರಾವ ಮಹಾರಾಜರು ಏನು ಹೇಳಿರುವರೊ ಆದನ್ನು ಆದಷ್ಟು ಅವರ ಶಬ್ದಗಳಿಂದ ಹೇಳಿದ್ದೇನೆ. ನನ್ನಷ್ಟಕ್ಕೆ ನಾನು ಸ್ವತಃ ಅಜ್ಞಾನಿ ಹುಚ್ಚನಿದ್ದೇನೆ.

ಚಮತ್ಕಾರಗಳ ಸಂಬಂಧ ಶ್ರೀಗುಲಾಬರಾವ ಮಹಾರಾಜರು ಅನ್ನುತ್ತಾರೆ :— ಒಂದಾನೊಂದು ಸಂಗತಿಯು ಇತರ ಜನರು ತಿಳಿಯುವದಕ್ಕಿಂತ ತೀರಾ ಭಿನ್ನವದೆ ಅಂತ ಒಂದು ವಿಶಿಷ್ಟ ವ್ಯಕ್ತಿಗೆ ತಿಳಿದು ಬಂದರೆ ಅದು ಅವನಿಗೆ ಚಮತ್ಕಾರವೆನಿಸುವದು. ಮತ್ತು ಒಂದೊಂದು ವ್ಯಕ್ತಿವಿಷಯದಲ್ಲಿ ಅವನ ಪೂರ್ವಕರ್ಮದ ಮೂಲಕ ಬಹಳ ಸಾರಿ ಇಂಥ ಚಮತ್ಕಾರಗಳು ಸಂಭವಿಸುತ್ತವೆ. ಆದರೆ ಸರ್ವ ಜನರಿಗೋಸ್ಕರ ಒಂದು ಚಮತ್ಕಾರ ಕ್ವಚಿತ್ತಾಗಿ ಘಟಿಸುತ್ತದೆ, ಆದರೆ ಅದು ಸರ್ವರಿಗೂ ಚಮತ್ಕಾರವೆನಿಸುವದೆಂಬ ನೇಮವಿಲ್ಲ. ನನ್ನ ಪ್ರೇಮದ ದೇವ ಮತ್ತು ಧ್ಯೇಯಮೂರ್ತಿ ಶ್ರೀಕೃಷ್ಣನು ಗೋಕುಲದಲ್ಲಿ ದಾವಾಗ್ನಿಯನ್ನು ನುಂಗಿದ್ದನೆಂಬದು ಖರೆಯಾದರೆ, ಆವನು ಕಾಲಯವನನ ಭೀತಿಯಿಂದ ಯಾಕೆ ಓಡಿದನು, ಎಂದು ಹೀಗೆ ಯಾರಾದರೂ ಶಂಕೆಯನ್ನು ತೆಗೆದಾರು. ಇಂಥದರಲ್ಲಿ ನನ್ನಂಥವನ ಗತಿಏನು? ಕೆಲವು ಜನರು ರಾಸಕ್ರೀಡೆಯ ಸಂಬಂಧ ಹೀಗನ್ನುವರಲ್ಲ, ಶ್ರೀಕೃಷ್ಣನು ತನ್ನ ಅಸಂಖ್ಯ ಗೆಳೆಯರಿಗೆ ತನ್ನಂಥ ವೇಷ ಕೊಟ್ಟು ತಂದನು ಮತ್ತು ಅವರು ಪ್ರತಿಒಬ್ಬನು ಒಬ್ಬೊಬ್ಬ ಗೋಪಿ ಕೂಡ ಕುಣಿದಿರಬಹುದು. ಮತ್ತು ಹುಡುಗಹುಡುಗಿಯರೊಳಗೆ ಶೃಂಗಾರವಿಷಯಕ ಈ ಆಟ ನಡೆಯಿತು

ಅಂತ ಈ ಪ್ರಸಿದ್ಧ ರಾಸಕ್ರೀಡೆಯು ನೀತಿಬಾಹ್ಯವೆಂದು ಯಾರಾದರೂ ಅನ್ನುವರು.

ಆದರೆ ಇಂಥ ಶಂಕೆಗಳನ್ನು ತಕ್ಕೊಂಡರೆ, ನಾನಾಗಲಿ, ನನ್ನ ತಂದೆ ಅಥವಾ ಅಜ್ಜನಾಗಲಿ, ಪ್ರತ್ಯಕ್ಷ ವ್ಯಾಸನಾದರೂ ಸಮಾಧಾನಕಾರಕ ಉತ್ತರ ಕೊಡಲಾರರು. ಬ್ರಹ್ಮಜ್ಞಾನ ವಿಷಯಕ ಸಂವಾದವನ್ನು ಯಾವಾಗ ರಾಮನು ವಸಿಷ್ಠರ ಕಡೆಯಿಂದ ಶ್ರವಣ ಮಾಡಿದನು ಆಗ ನಿಜವಾಗಿ ರಾಮನು ವೈರಾಗ್ಯ ಶೀಲನಾದರೆ ಅರಣ್ಯದೊಳಗಣ ವೃಕ್ಷಗಳನ್ನು ಪತ್ನಿ ವಿರಹದ ದುಃಖದಿಂದ ಆಲಿಂಗಿಸುವ ಕಾರಣವೇನು? ಇದಕ್ಕೆ ಕೆಲವರು ಹೇಳುವರು, ಆ ವೃಕ್ಷಗಳು ಋಷಿಗಳಿದ್ದು ಅವರನ್ನು ಉದ್ಧಾರ ಮಾಡುವದಕ್ಕಾಗಿ ರಾಮನು ಆಲಿಂಗಿಸಿದನು, ಆದರೆ ನಿಶ್ಚಯಪೂರ್ವಕ ಹೀಗೆ ಯಾರಾದರೂ ಹೇಳಿದರೆ, ಅವರಿಗೆ ಹೀಗೆ ಕೇಳಲಿಕ್ಕೆ ಬರುವದಲ್ಲ, ಅವುಗಳನ್ನು (ವೃಕ್ಷಗಳನ್ನು) ಮಾತ್ರ ಎಂದು ಆಲಿಂಗಿಸಲಿಕ್ಕೆ ಏನು ಅಡ್ಡಿಯಾಗುತ್ತಿತ್ತು. ತನ್ನ ಸಾಧ್ವಿ ಸ್ತ್ರೀಯು ಪತಿವ್ರತೆ ಮತ್ತು ನಿಷ್ಕಲಂಕಳೆಂದು ರಾಮನಿಗೆ ಗೊತ್ತಿದ್ದದ್ದಾದರೆ, ಯಾವದೋ ಲೋಕವಾರ್ತೆಯ ಮೇಲೆ ವಿಶ್ವಾಸವಿಟ್ಟು ಅವನು ಆಕೆಯ ತ್ಯಾಗವ್ಯಾಕೆ ಮಾಡಿದನು? ಮತ್ತು ಆಕೆಯನ್ನು ವನಕ್ಕೆ ಯಾಕೆ ಕಳುಹಿಸಿದನು? ನಾರದನು ಶ್ರೀಕೃಷ್ಣನಿಗೆ ಒಬ್ಬ ಸ್ತ್ರೀ ಕೇಳಿದಾಗ ಅವನಿಗೆ ಬುದ್ಧಿ ಕಲಿಸಲಿಕ್ಕೆ ಸ್ತ್ರೀರೂಪವನ್ನು ಕೊಟ್ಟನು, ಇದು ಖರೆಯಾದರೆ ಸ್ವತಃ ಶ್ರೀಕೃಷ್ಣನು ಮತ್ತು ಆತನ ಸಾವಿರಾರು ಗೆಳೆಯರು ಕೂಡ ಸಾವಿರಾರು ಪರಸ್ತ್ರೀಯರನ್ನು ಕೆಡಿಸುವಾಗ್ಗೆ ಈ ನೀತಿತತ್ವ ಎಲ್ಲಿ ಹೋಗಿತ್ತು? ಶ್ರೀ ಶಂಕರಾಚಾರ್ಯರು ನಿಜವಾಗಿ ಶಂಕರನ ಅವತಾರವಿದ್ದರೆ, ಅವರಿಗೆ ಕಾಮಶಾಸ್ತ್ರದೊಳಗಿನ ಪ್ರಶ್ನೆ ಕೇಳಿದಾಗ್ಗೆ ಅದಕ್ಕೆ ಉತ್ತರ ಕೊಡುವ ಸಲುವಾಗಿ ಎರಡನೇ ಯವರ ಶರೀರದೊಳಗೆ ಪ್ರವೇಶ ಮಾಡಿ ಆ ಅನುಭವ ಪಡುವ ಕಾರಣವೇನಿತ್ತು? ಯಾವಾಗ ಅವರು ಪ್ರತ್ಯಕ್ಷ ಶಂಕರರಿದ್ದರು, ಆಗ ಅವರಿಗೆ ಉಮೆಯ ಕೂಡ ಕಾಮವಿಷಯದ ಅನುಭವ ಸಿಕ್ಕಿದ್ದಿಲ್ಲೇನು? ಶ್ರೀಶಂಕರನು ಯಾವಾಗ ಶರಭದ ರೂಪ ಧರಿಸಿ ಶ್ರೀನರಸಿಂಹನ ಮೇಲೆ ಹಾರಿಬಂದನು, ಆಗ ಶಂಕರ ಮತ್ತು ವಿಷ್ಣು ಪರಸ್ಪರ ಪ್ರೀತಿಯುಳ್ಳವರೆಂತ ಹ್ಯಾಗೆ ಹೇಳಲಿಕ್ಕೆ ಬರುವದು? ಹಾಗಾದರೆ ಈ ಪ್ರಸಂಗದಲ್ಲಿ ಅವರು ಒಬ್ಬರಿಗೊಬ್ಬರು ಇಷ್ಟು ಯಾಕೆ ನಿಷ್ಠುರರಾದರು? ಕಾಶೀಖಂಡ ಪುರಾಣದಲ್ಲಿ ಹೀಗೆ ಹೇಳಿದೆಯಲ್ಲ, ಪೂರ್ವಜನ್ಮದ ಯಾವದೋ ಕರ್ಮದ ದೆಸೆಯಿಂದ ವ್ಯಾಸರಿಗೆ ಕತ್ತೆಯ ಜನ್ಮ ಬಂತು. ಹೀಗಿದ್ದರೆ, ಈ ಲೋಕದ ಜನರ [illegible]ಯಿಂದಲೆ, ವ್ಯಾಸರಿಗೆ ದೈವಶಕ್ತಿ ತೀರ ಇಂಥ ತಪ್ಪು ತತ್ವಗಳನ್ನು ಬರೆಯಬೇಕಾಯಿತು ಅಂತ ಹೀಗೆ ಯಾಕೆ ಅನ್ನಬಾರದು? ಹಾಲು ಇದು ಮಕ್ಕಳಿಗೂ ವೃದ್ಧರಿಗೂ ವೀರ್ಯೋತ್ಪಾದಕವಿರುವದು ಎಂದು ಚರಕಾದಿ [illegible] ವೈದ್ಯಶಾಸ್ತ್ರಕಾರರು ತಮ್ಮ ಗ್ರಂಥಗಳಲ್ಲಿ ಬರೆದಿದ್ದಾರೆ, ಮತ್ತು ಇದು ಅನುಭವ ಸರ್ವ ಪ್ರತೀತವಿದೆಯಲ್ಲ, ಯಶೋದೆಯು ಕೃಷ್ಣನಿಗೆ ದಿವಸದೊಳಗೆ ಹಲ ಸಾರಿ

ಹಾಲು ಮತ್ತು ಬೆಣ್ಣೆಯನ್ನು ತಿನ್ನಲಿಕ್ಕೆ ಕೊಡುತ್ತಿದ್ದಳು. ಮತ್ತು ಅವನಾದರೂ ತನ್ನ ಗೆಳೆಯರ ಕೂಡ ಕದ್ದು ಬೆಣ್ಣೆ ತಿನ್ನುತ್ತಿದ್ದನು, ಆದ್ದರಿಂದ ಆಗ್ಗೆ ಎಂಟು ವರ್ಷದ ಕೃಷ್ಣನು ಕಾಮವಾಸನಾಯುಕ್ತನಾಗಿದ್ದನು ಅಂತ ಹೇಳುವದು ಹುಚ್ಚುತನದ ಮಾತಲ್ಲ, ಶ್ರೀಕೃಷ್ಣನು ಧರ್ಮ ಮತ್ತು ದೇವಪೂಜನವನ್ನು ಸ್ಥಾಪಿಸಲಿಕ್ಕೆ ಅವತಾರ ತೊಟ್ಟಿದ್ದಾದರೆ ಅವನು ಇಂದ್ರನ ಪೂಜೆಗೆ ಯಾಕೆ ಅಡ್ಡಿ ಮಾಡಿದನು ? ಮತ್ತು ನಡುವೆ ಬಿಡಿಸಿ ನಿಷ್ಫಲ ಯಾಕೆ ಮಾಡಿದನು ?

ಗೋವರ್ಧನ ಪರ್ವತ ಎತ್ತಿದ ಸಾಹಸವನ್ನು ಬಹಳ ವರ್ಣನ ಮಾಡುತ್ತಾರೆ, ಆದರೆ ಕೃಷ್ಣನು ಆ ಪರ್ವತದ ಬುಡಕ್ಕೆ ಯಾವದೊಂದು ಯಾಂತ್ರಿಕ ಶಕ್ತಿಯು ಸ್ಪ್ರಿಂಗ ಮೊದಲೇ ಇಟ್ಟಿರಲಿಕ್ಕಿಲ್ಲಯೆಂಬದು ಯಾತರ ಮೇಲಿಂದ ? ಶ್ರೀಕೃಷ್ಣನ ವಿಷಯದಲ್ಲಿ ಗೋಪೀಸ್ತ್ರೀಯರ ಪ್ರೇಮವು ಬಾಕಿ ಎಲ್ಲ ವಿಷಯಕ್ಕಿಂತಲೂ ಅಧಿಕವಾಗಿದ್ದದ್ದು ಖರೆಯಾದರೆ ಅವರು ಗೋಕುಲಬಿಟ್ಟು ಅವನಕೂಡ ಮಥುರೆಗೆ ಯಾಕೆ ಹೋಗಲಿಲ್ಲ? ಕೆಲವು ಸ್ತ್ರೀಯರು ವಿವಾಹಿತರಾಗಿದ್ದು ಅವರ ಸ್ವತ್ಸೆ ಬಿಟ್ಟರೆ, ಬಾಕಿ ಸ್ತ್ರೀಯರು ಶ್ರೀಕೃಷ್ಣನು ಪತಿಯಾಗಬೇಕಂತ ಕಾತ್ಯಾಯನಿ ವ್ರತ ಮಾಡಿದ್ದರು, ಅವರಾದರೂ ಹೋಗಬೇಕಿತ್ತಲ್ಲ, ಮತ್ತು ಈ ಸ್ತ್ರೀಯರು ಮುಂದೆ ಇತರರಿಗೆ ಲಗ್ನವಾದಲ್ಲಿ ಅವರ ಕೃತಿಯು ವ್ಯಭಿಚಾರಿ ಮತ್ತು ಅಪವಿತ್ರವೆಂತ ಅನ್ನಬಾರದೇನು ? ಮತ್ತು ಈ ನಡೆವ ಸಂಗತಿಯು ಅವರ ಭಕ್ತಿಯ ಸಂಬಂಧ ಎಷ್ಟು ಗಾಯನ ಮಾಡಿದರೂ ಮುಚ್ಚಲಿಕ್ಕಾದೀತೇನು ? ಯಾವ ಬ್ರಾಹ್ಮಣರು ಶ್ರೀಕೃಷ್ಣ ಮತ್ತು ಆತನ ಗೆಳೆಯರಿಗ ಅನ್ನಕೊಡಲಿಕ್ಕೆ ನಿರಾಕರಿಸಿದರು ಅವರು ಅಶ್ಲಾಘ್ಯರೆನಿಸಿದರು ಮತ್ತು ಅವರ ಸ್ತ್ರೀಯರು ಅನ್ನ ಕೊಟ್ಟದ್ದಕ್ಕೆ ವಂದನೀಯ ಅನ್ನಿಸಿಕೊಂಡರು. ಇದು ಆಶ್ಚರ್ಯವಲ್ಲವೆ ?

ಇಂಥ ಸಂಗತಿಗಳು ನಕಲಿ ಸಾಧುಗಳಿಗೆ ತಮ್ಮ ಸ್ತ್ರೀ ಶಿಷ್ಯರನ್ನು ತಮ್ಮ ಕಡೆ ಆಕರ್ಷಿಸಲಿಕ್ಕೆ ಮತ್ತು ಅವರನ್ನು ಮೋಸಗೊಳಿಸಲಿಕ್ಕೆ ಚಲೋದಾಗಿ ಕೆಲಸಕ್ಕೆ ಬೀಳುತ್ತವೆ. ಇವೆಲ್ಲ ಸಂಗತಿಗಳು ಈಶ್ವರನ ಆಟ ಎಂದು ತಿಳಿಯುವದಾದರೆ, ದುರ್ವ್ಯಸನಿ ಜನರ ಶೃಂಗಾರಚೇಷ್ಟೆಗಳಾದರೂ ಆಟಗಳೆಂತ ತಿಳಿಯಬಹುದು. ವೇದಾಂತ ತತ್ವಗಳಬಗ್ಗೆ ಈ ಪ್ರಕಾರ ಸಂಗತಿ ಅಥವಾ ವಿಸಂಗತಿ ಹಚ್ಚಲಿಕ್ಕೆ ಬಂದರೆ, ಹೆಣ್ಣುಗಂಡು ನಾಯಿಗಳ ಸಂಗವಿಷಯವೂ ಸ್ತುತಿ ಮಾಡಲಿಕ್ಕೆ ಬಂದೀತು. ಆ ಮೇಲೆ ರಾಸಕ್ರೀಡೆಯ ಇಷ್ಟು ವಿಸ್ತಾರ ವರ್ಣನ ಮಾಡುವ ಕಾರಣವೇನು ?

ಈ ಪ್ರಕಾರದ ಸಾವಿರಾರು ಶಂಕೆಗಳನ್ನು ತೆಗೆಯಬಹುದು. ಅವುಗಳನ್ನು ತರ್ಕಶಾಸ್ತ್ರ ದೃಷ್ಟಿಯಿಂದ ಖಂಡಣ ಮಾಡಲಿಕ್ಕೆ ನನ್ನಹತ್ತಿರ ಉತ್ತರವಿಲ್ಲ, ಶ್ರೀವಾಸುದೇವಾನಂದ ಸರಸ್ವತಿ, ಇವರಂತೆ ನೀವು ಯಾಕೆ ಚಮತ್ಕಾರ ಮಾಡಿ

ತೋರಿಸುವದಿಲ್ಲ, ಅಂತ ಶ್ರೀಗುಲಾಬರಾವ ಮಹಾರಾಜರಿಗೆ ಒಬ್ಬ ವಕೀಲರು ಕೇಳಿದರು. ನನ್ನ ಅನೇಕ ಮಿತ್ರರು ನನಗೂ ಹೀಗೆ ಪ್ರಶ್ನೆ ಮಾಡಿದ್ದರು. ಅವರಿಗೆ ನಾನು ಗುಲಾಬರಾವ ಮಹಾರಾಜರು ಕೊಟ್ಟ ಉತ್ತರವನ್ನೇ ಕೊಟ್ಟೆ. ಅದು ಕೆಳಗೆ ಬರೆದಂತಿದೆ.

ಚಮತ್ಕಾರಗಳ ವಿಷಯ ಮಾತಾಡುವವರು ಅನೇಕ ಚಮತ್ಕಾರಿಕ ಸಂಗತಿಗಳನ್ನು ಹೇಳುತ್ತಾರೆ. ವೈದಿಕ ಧರ್ಮದ ಶ್ರೇಷ್ಠ ಅನುಯಾಯಿಗಳಾದ ಶ್ರೀವಾಸುದೇವಾನಂದ ಸರಸ್ವತಿ ಇವರು ಮಾಡಿದ ಚಮತ್ಕಾರಗಳನ್ನು ಅವರ ಶಿಷ್ಯರು ಪ್ರಸಿದ್ಧಪಡಿಸಿದ್ದಾರೆ. ಅವೆಲ್ಲ ಮುಸಲ್ಮಾನಿ ಫಕೀರರು ಮಾಡುವ ಚಮತ್ಕಾರಗಳಂತೆ ತೋರುತ್ತವೆ. ಮುಸಲ್ಮಾನ ಫಕೀರರ ಧರ್ಮದ ಪದ್ಧತಿಗಳಂತು ನಮ್ಮ ಧರ್ಮದ ಪೂರ್ಣ ವಿರುದ್ಧ ಅವೆ. ಈ ಚಮತ್ಕಾರಗಳಾದರೂ ಎಲ್ಲ ಪ್ರಸಂಗಗಳಲ್ಲಿ ಸರ್ವರ ಸಮಕ್ಷಮ ಆದ್ದೆಂಬದು ತೋರುವದಿಲ್ಲ. ಸಣ್ಣ ಚಮತ್ಕಾರಗಳೂ ವಿಶ್ವಾಸಾರ್ಹವಿರುವದಾದರ್ರೆ ಕೆಲವು ಜನರು ಅಂಥ ಚಮತ್ಕಾರಗಳನ್ನು ತಾವೂ ಮಾಡೇವಂತ ಅನ್ನುತ್ತಾರೆ. ವಾಸುದೇವಾನಂದರು ಮಾಡಿದ ಚಮತ್ಕಾರಗಳು ಸರ್ವಜನರಿಗೆ ಖಾತ್ರಿಯಾಗುವಂತಿದ್ದವು ಅಥವಾ ಸರ್ವ ಸ್ಥಳಗಳಲ್ಲಿಯೂ ಮಾಡಿದರಂತೂ ತೋರುವದಿಲ್ಲ. ನನ್ನಿಂದ ಘಟಿಸಿದ ಚಮತ್ಕಾರಗಳೂ ಇದೇ ಪ್ರಕಾರದ್ದು ಅವೆ. ಚಮತ್ಕಾರಗಳ ಏನೇನೂ ಉಪಯೋಗವಿಲ್ಲ ಎಂತ ನನ್ನ ಅಂಬೋಣವಲ್ಲ. ನನ್ನ ಮತ ಇಷ್ಟೇ ಅಲ್ಲ, ಯಾರಾದರೂ ತಮ್ಮ ತಮ್ಮ ಗುರುಗಳು ಮಾಡಿದ ಚಮತ್ಕಾರಗಳ ಸಂಬಂಧ ಗರ್ವ ಹಿಡಿಯಬಾರದು, ಮತ್ತು ಇತರರನ್ನು ಅವರ ಗುರುಗಳಿಗೆ ಅಂಥ ಚಮತ್ಕಾರಗಳನ್ನು ಮಾಡುವ ಶಕ್ತಿಯಿಲ್ಲವೆಂತ ಹಿಯಾಳಿಸಬಾರದು. ಮುಸಲ್ಮಾನರು ತಮ್ಮ ರೋಗ ನೆಟ್ಟಗಾಗುವ ಸಲುವಾಗಿ ಹಿಂದು ದೇವರ ಪೂಜೆಯನ್ನು ಎಂದೂ ಮಾಡುವದಿಲ್ಲ. ಅವರು ತಮ್ಮ ' ತುರಬತ್ತಿ ' ಮೇಲೆಯೇ ವಿಶ್ವಾಸವಿಡುತ್ತಾರೆ. ಆದರೆ ಹಿಂದು ಜನರು ಮುಸಲ್ಮಾನ ಸಾಧು ಕಟಕರವನಿದ್ದರೂ ಅವನಕಡೆ ಹೋಗುತ್ತಾರೆ. ನಮ್ಮ ಮನೆಯೊಳಗಿನ ನಾವು ಪೂಜೆ ಮಾಡುವ ಶಾಲಿಗ್ರಾಮವು ಏನೂ ಚಮತ್ಕಾರ ಮಾಡುವದಿಲ್ಲ. ಮತ್ತು ನಮಗೆ ಮುಸಲ್ಮಾನ ಸಾಧುವಿನಕಡೆ ಓಡಬೇಕಾಗುತ್ತದೆ: ಇದಕ್ಕೂ ಹೆಚ್ಚಿನ ಆಶ್ಚರ್ಯವೇನು ?

" ಒಮ್ಮೊಮ್ಮೆ ಮಹಾನ್ ಸಾಧುಕಡೆಯಿಂದಲೇ ಚಮತ್ಕಾರಗಳು ಸಂಭವಿಸುತ್ತವೆ, ಮತ್ತು ಕೆಲವು ಪ್ರಸಂಗಗಳಲ್ಲಿ ನನ್ನ ಕಡೆಯಿಂದಲೂ ಘಟಿಸುತ್ತವೆ. ಒಂದು ವೇಳೆ ಯಾವಾಗಲಾದರೂ ನಿಮ್ಮ ಕಡೆಯಿಂದಲೂ ಘಟಿಸುವವು. ಶ್ರೀವಾಸುದೇವಾನಂದ ಸರಸ್ವತಿ ಇವರ ಶಿಷ್ಯರಿಗೆ ನನ್ನ ವಿಷಯದಲ್ಲಿ ಆದರವಿಲ್ಲ, ಆದರೆ ಶೇಡಿಯ ಶ್ರೀಸಾಯಿಬಾಬಾ ವಿಷಯದಲ್ಲಿ ಅವರು ಬಹಳ ಪೂಜ್ಯ

ಬುದ್ಧಿ ತೋರಿಸುತ್ತಾರೆ. ಶ್ರೀವಾಸುದೇವಾನಂದ ಸರಸ್ವತಿಯವರ ವಿಷಯ ನ್ನಾನು ಯಾವಾಗಲೂ ಆದರಭಾವವನ್ನು ವ್ಯಕ್ತ ಮಾಡುತ್ತೇನೆ. ಅವರ ಶಿಷ್ಯರು ನನ್ನ ವಿಷಯ ಅನಾದರಭಾವವನ್ನು ಯಾಕೆ ವ್ಯಕ್ತಮಾಡಬೇಕು, ಇದು ತಿಳಿಯದು."

ಈಗ ನನ್ನ ( ಶ್ರೀಗಜಾನನ ಮಹಾರಾಜರ ) ಸಂಬಂಧ ನೀವು ಹೇಳುವದಾದರೆ ಬಹಳೇ ಚಮತ್ಕಾರಗಳು ನನ್ನ ಕಡೆಯಿಂದ ಸಹಜವಾಗಿ ಸಂಭವಿಸುತ್ತವೆ; ಅದರೂ ಬಹಳ ಜನರು ನಾನು ಪುರುಷರಿಗೂ ಸ್ತ್ರೀಯರಿಗೂ ಬೈಯ್ಯುತ್ತೇನೆಂತ ಮತ್ತು ನಾನು ಅಘೋರಿ ಮಂತ್ರ ಕಲಿತಿದ್ದೇನೆ ಎಂದು ನನ್ನ ಮೇಲೆ ಟೀಕಾ ಮಾಡುತ್ತಾರೆ, ಮತ್ತು ನನಗೆ ದೂಷಿಸುತ್ತಾರೆ. ನಾನು ಮದ್ಯದ ಹಾಲು ಮಾಡಲಿಕ್ಕೆ ಸಮರ್ಥನಿದ್ದರೆ, ಎಲ್ಲ ಮದ್ಯವನ್ನೇ ಗಂಗಾಜಲವನ್ನು ಮಾಡಲಿಕ್ಕೆ ನನ್ನಿಂದ್ಯಾಕಾಗದು ? ಎಷ್ಟೋ ಸಲ ನಾನು ಬಾಯಿ ಮುಕ್ಕಳಿಸುವದಿಲ್ಲ. ನನಗೆ ಶಾಸ್ತ್ರದ ವಿಷಯ ಏನೂ ತಿಳಿಯುವದಿಲ್ಲ. ಇತರ ಸಾಧುಗಳ ದೋಷ ತೋರಿಸುವದು ಮತ್ತು ಅವರ ಕುಚೇಷ್ಟೆ ಮಾಡುವದು ನನಗೆ ಯೋಗ್ಯಕಾಣಿಸುವದೆಂದು ಕೆಲವರು ನನ್ನ ದೋಷ ತೋರಿಸುತ್ತಾರೆ. ಇಂಥ ಟೀಕಾಕಾರರಿಗೆ ನನ್ನ ಉತ್ತರವೇನಂದರೆ— ಮೊದಲು ಜನರು ನನ್ನನ್ನು ದೂಷಿಸುತ್ತಿದ್ದರು, ಈಗ ದೂಷಿಸುತ್ತಿದ್ದಾರೆ, ಮುಂದೆಯೂ ದೋಷ ಕೊಡುತ್ತಿರುವರು, ಇದು ನನಗೆ ಗೊತ್ತದೆ. ನನ್ನ ಬಾಹ್ಯ ವರ್ತನವಾದರೂ ಹೀಗದಲ್ಲ, ಅವರು ನನಗೆ ದೋಷ ಕೊಡುವದು ಸಹಜವಾಗಿದೆ. ನಿಜವಾಗಿ ಈ ಸಂಗತಿಯು ಮಾತಾಡತಕ್ಕಂಥದ್ದಲ್ಲ, ಆದರೆ ಯಾಕೆಂತ ಯಾರಿಗೆ ಗೊತ್ತು, ಇದನ್ನು ನಿಮಗೆ ತಿಳಿಸಬೇಕೆಂತ ನನಗೆ ಅನಿಸುವದು. ನನ್ನ ಮಿತ್ರನ ಮುಂದೆ ಯಾರಾದರೂ ನನಗೆ ದೋಷ ಕೊಟ್ಟರೆ, ನನ್ನ ಮಿತ್ರನಿಗೆ ದುಃಖವಾದೀತೆಂಬುದು ಸಹಜವಾಗಿದೆ. ಹ್ಯಾಗೆ ತಂದೆಗೆ ದೋಷ ಕೊಟ್ಟದ್ದು ನೋಡಿದರೆ ಮಗನಿಗೆ ಅಸಮಾಧಾನವಾಗುವದೊ ಹಾಗೆಯೇ ಮಗನಿಗೆ ಕೊಟ್ಟ ದೋಷದಿಂದ ತಂದೆಗೂ ಅಪ್ರೀತಿಯಾಗುವದು. ಆದರೆ ನನ್ನ ಮಿತ್ರರಿಗೂ, ಬಂಧು ಭಗಿನಿಯರಿಗೂ, ನಾನು ವಿನಂತಿ ಮಾಡುವದೇನಂದರೆ ಅವರು ಆ ಸಂಬಂಧ ವ್ಯಸನಪಡಬಾರದು. 'ಅಮಾನಿತ್ವಂ, ಅದಂಭಿತ್ವಂ' ಮೊದಲಾದ ( ಗೀತಾ ೧೩-೭ ) ವಚನಗಳನ್ನನುಸರಿಸಿ, ಸ್ವಸ್ತುತಿ ವಿಷಯದಲ್ಲಿ ಅಸಹ್ಯತೆ ಇದು ನನ್ನ ಸ್ವಭಾವದ ಮುಖ್ಯ ಲಕ್ಷಣವಾಗಿದೆ. ಜನರು ನನಗೆ ದೂಷಿಸಬೇಕೆಂದು ನಾನು ತಿಳಿದು ಈ ರೀತಿಯಿಂದ ವರ್ತಿಸುತ್ತೇನೆ. "ತುಲ್ಯನಿಂದಾ ಸ್ತುತಿರ್ಮೌನೀ ಸಂತುಷ್ಟೋ ಯೇನಕೇನಚಿತ್ । ಅನಿಕೇತಃ ಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರಃ ॥"* ( ಗೀತಾ ೧೨-೧೯ ) ಈ ಗೀತಾ ವಚನವು ಭಂಗಾರದ ಅಕ್ಷರ

---

* ನಿಂದಾ ಸ್ತುತಿ ಸಮಾನವಾಗಿಯೂ, ಮೌನಿಯಾಗಿಯೂ, ಎಷ್ಟು ಸ್ವಲ್ಪದರಿಂದಾದರೂ ಸಂತುಷ್ಟನಾಗುವನಾಗಿಯೂ, ಮನೆ ಇಲ್ಲದವನೂ, ಸ್ಥಿರಮತಿಯೂ ಯಾವನಿದ್ದಾನೊ ಅವನೇ ಭಕ್ತಿವಂತನು, ನನಗೆ ಪ್ರಿಯನಾಗಿರುವನು.

ಗಳಿಂದ ಬರೆದಿಡುವಂಥ ಮಹತ್ವದ್ದಿದೆ. ಒಮ್ಮೊಮ್ಮೆ ಚಮತ್ಕಾರಗಳು ಸಂಭವಿಸು ವವು ಅವುಗಳ ಹೇತು ಪ್ರಾಪಂಚಿಕ ಜನರಿಗೆ ಸಹಾಯ ಮಾಡುವದಾಗಿರುತ್ತದೆ. ಆಧ್ಯಾತ್ಮಿಕ ಪ್ರಗತಿಗೆ ಅವುಗಳ ಏನೊಂದೂ ಉಪಯೋಗವಿಲ್ಲ, ಆದ್ದರಿಂದ ತುಕಾ ರಾಮ ಮಹಾರಾಜರು ಹೇಳುತ್ತಾರೆ:— ‘ ಕಲ್ಲಿನ ಪರ್ವತವು ಭಂಗಾರದ್ದು ಮಾಡ ಬಹುದು, ಮಂತ್ರತಂತ್ರ ಅನುಷ್ಠಾನ ಮಾಡಬಹುದು, ಪ್ರಾಣವನ್ನು ಬ್ರಹ್ಮಾಂ- ಡಕ್ಕೆ ಒಯ್ಯಬಹುದು, ಬ್ರಹ್ಮ-ವಿಷ್ಣು-ಶಿವ ಇವರನ್ನು ಚಾಕರರಾಗಿ ಮಾಡ ಬಹುದು, ಸೂರ್ಯಚಂದ್ರರನ್ನು ನಿತ್ಯ ದಾಸರನ್ನಾಗಿ ಮಾಡಬಹುದು; ಆದರೆ ಶ್ರೀಕೃಷ್ಣನ ಪಾದಗಳು ದುರ್ಲಭವಾಗಿವೆ, ಅಲ್ಲಿ ಯಾವ ಉಪಾಯವೂ ನಡೆ ಯದು, ತುಕಾರಾಮನು ಅನ್ನುತ್ತಾನೆ, ನನ್ನ ಇದೇ ನಿಶ್ಚಯ, ನಿನ್ನ ಪಾದ ಗಳನ್ನು ಸದೋದಿತ ಸ್ಮರಿಸುವೆನು.’

ಈ ಅಭಂಗದಲ್ಲಿ ಪ್ರತ್ಯಕ್ಷವಾಗಿ ಚಮತ್ಕಾರಗಳ ನಿಷೇಧ ಮಾಡಿದೆ. ಈಗ ನಿಂದೆ ವಿಷಯ ತುಕಾರಾಮ ಮಹಾರಾಜರನ್ನುತ್ತಾರೆ.

‘ ನಿಂದಕನ ಮನೆ ನೆರೆಯಲ್ಲಿರಬೇಕು, ಅಂದರೆ ಗುಣದೋಷಗಳು ಹೊರಬೀಳುವವು, ನಿಂದಕನು ನನ್ನ ಕೂರಳಿನ ತಾಯಿತಿ, ಅವನೇ ನನ್ನ ಎಲ್ಲ ಹಿತವನ್ನು ಮಾಡಿದನು,

ಯಾವಾತನು ಬ್ರಹ್ಮನಿಷ್ಠನಿರುವನೋ ಅವನನ್ನು ಸ್ತುತಿಸುವವರು ಅವನ ಪುಣ್ಯಗ್ರಹಣ ಮಾಡುತ್ತಾರೆ. ಮತ್ತು ಅವನ ನಿಂದಕರು ಅವನ ಪಾಪ ವನ್ನು ಗ್ರಹಿಸುವರು. ಅವನ ಮಕ್ಕಳು ಮೊಮ್ಮಕ್ಕಳು ಅವನ ಆಸ್ತಿಯನ್ನು ತಕ್ಕೊಳ್ಳುತ್ತಾರೆ. ಅವನು ಸ್ವತಃ ತನ್ನ ಪಾಪಪುಣ್ಯಗಳನ್ನು ನಾಶಮಾಡಿ ಶಾಶ್ವತ ನಿರಂಜನಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ, ಎಂದು ಕೌಷೀತಕಿ ಉಪನಿಷ ತ್ತಿನಲ್ಲಿ ಹೇಳಿದೆ.

ತಸ್ಯತೆ ಗೃಹ್ಣಂತಿ ಸುಹೃದಃ ಸಾಧುಕೃತ್ಯಾಮ್, ದ್ವಿಷತಃ ಪಾಪಕೃತ್ಯಾಮ್,
ಪುತ್ರಾದಯೊ ಧನಾನ್ ಸರ್ವೆ ಪಾಪಪುಣ್ಯೆ ವಿಧಾಯಂ ನಿರಂಜನಂ
ಶಾಶ್ವತಂ ಉಪೈತಿ ದಿವ್ಯವತ್ ।

ಈಗ ನೀವೇ ಹೇಳಿರಿ, ನಾನು ಗುರು ಆಜ್ಞಾ ಮತ್ತು ಸಂತರ ಆಚ ರಣೆ ಇವನ್ನು ಅನುಸರಿಸಿ ನಡಿಯಬೇಕೋ, ಜನರಿಗೆ ಖುಷಿಯಾಗಬೇಕೆಂತ ವ್ಯವಹಾರಿಕ ಚಮತ್ಕಾರಗಳನ್ನು ತೋರಿಸಬೇಕೊ? ಕಬೀರದಾಸರನ್ನುತ್ತಾರೆ,-

ದೋಹಾ:- ನಿಂದಕ ಹಮಾರೆ ಇಷ್ಟ ಹೈ ಮಾಬಾಪಸೆ ಪಾರ |
ಆಪ ಡುಬೆ ಪಂಝುರಮೆ ಹಮೆ ಉತರೆತ ಪಾರ ॥೧॥

ಮಹಾನ್ ಸಾಧುಗಳ ಇವೆಲ್ಲ ವಚನಗಳನ್ನು ನೋಡಿದ್ದಾದರೆ, ನನಗೆ ಚಮತ್ಕಾರ ಮಾಡುವದು ಅಥವಾ ಜನರಿಂದ ಸಾಧು ಅನ್ನಿಸಿಕೊಳ್ಳುವದು ಏನೂ ಕಾರಣವಿಲ್ಲ. ಇದರ ಮೇಲಿಂದ ನಾನು ನನ್ನ ಮಿತ್ರರಿಗೆ ಹೇಳುತ್ತೇನಲ್ಲ, ನಿಮ್ಮ ಸಮಕ್ಷ ಯಾರಾದರೂ ನನ್ನನಿಂದೆ ಮಾಡಿದರೆ ನಿವು ಅದಕ್ಕಾಗಿ ದುಃಖ ಪಡಬಾರದು. ತುಕಾರಾಮನ ಸಂಬಂಧ ಹೀಗೆ ಹೇಳುತ್ತಾರಲ್ಲ, ಒಂದು ಹಳ್ಳಿಯಲ್ಲಿ ಒಬ್ಬ ವಿಧವೆಯು ಬಸುರಾದಳು; ಆಗ, ತುಕಾರಾಮನು, ಆಕೆಗೆ ಹುಟ್ಟುವ ಕೂಸಿನ ತಂದೆಯೆಂದು ಜನರು ಸುದ್ದಿ ಎಬ್ಬಿಸಿದರು; ಮತ್ತು ಅವನ ಫಜೀತಿ ಮಾಡಲಿಕ್ಕೆ ಜನರು ಅವನ ಕೊರಳಿಗೆ ಮಚ್ಚುಗಳ ಮಾಲೆಯನ್ನು ಹಾಕಿ, ಕತ್ತೆಯ ಮೇಲೆ ಕೂಡ್ರಿಸಿ, ಅವನನ್ನು ಊರೊಳಗಿನ ರಸ್ತೆಗಳಲ್ಲಿ ಮೆರೆಯಿಸಿದರು. ಅವನ ನಿಂದಾ ಮಾಡಿ, ಯಥೇಷ್ಟ ಬೈದರು. ನನ್ನನ್ನು ಯಾರೂ ಇನ್ನೂತನಕ ಹೀಗೆ ಮಾಡಿ ಪರೀಕ್ಷೆ ಮಾಡಲಿಲ್ಲ. ಆದರೆ ಈಶ್ವರ ಕೃಪೆಯಿಂದ ನನ್ನದೂ ಹಾಗೆಯೇ ಪರೀಕ್ಷೆ ಆಗಬೇಕೆಂದು ನಾನು ಬಯಸುತ್ತೇನೆ. ಈ ನನ್ನ ಇಚ್ಛಿತ ಸಂಗತಿಯು ಯಾವಾಗ ಘಟಿಸೀತು ಇದು ನನಗೆ ತಿಳಿಯದು, ಆದರೆ ನಾನು ಆದರ ದಾರಿ ನೋಡುತ್ತಿದ್ದೇನೆ.

ಗೃಹಸ್ಥ :— ಸಂತರಿಗೆ ಯಾವದೊಂದು ಇಚ್ಛೆ ಇರಲಾರದು ಎಂದು ಹೇಳುತ್ತಾರೆ. ಹೀಗಿದ್ದರೂ ಸಾಧು ಜನರ ಕಡೆಯಿಂದ ಕುಕರ್ಮಗಳು ಸಂಭವಿಸಿದ ಉದಾಹರಣೆಗಳು ಕಾಣಬರುತ್ತವೆ. ನಾನು ಸ್ವತಃ ಇಂಥಾದ್ದೊಂದು ಉದಾಹರಣೆ ನೋಡಿದ್ದೇನೆ. ಮಹಾರಾಜರೇ, ನಿಮ್ಮದು ಈ ಸಂಬಂಧ ಅಭಿಪ್ರಾಯ ವೇನು?

ಮಹಾರಾಜ:- ಭಂಗಾರವನ್ನು ಒಮ್ಮೆ ಒರೆಗಲ್ಲಿಗೆ ಹಚ್ಚಿನೋಡಬೇಕು. ಅದು ಖರೆ ಅದೆ ಅಂತ ಒಮ್ಮೆ ತಿಳಿದ ಬಳಿಕ ಮತ್ತೆ ಸಂಶಯ ಮಾಡಬಾರದು. ಭಂಗಾರದ ಉಂಗುರುದಲ್ಲಿ ರತ್ನ ಕೂಡ್ರಿಸುವದಾದರೆ ಆ ಭಂಗಾರದಲ್ಲಿ ಸ್ವಲ್ಪ ಹೀನ ಧಾತು ಕೂಡಿಸಬೇಕಾಗುತ್ತದೆ. ಆದರಿಂದ ನಿಜವಾದ ಭಂಗಾರದ ಕ್ರಯ ವೇನಾದರೂ ಕಡಿಮೆಯಾಗುವದೇನು? ಆದರಂತೆ ಖರೆ ಮಹಾತ್ಮನಾದರೂ ಒಮ್ಮೊಮ್ಮೆ ಪೂರ್ವಜನ್ಮದ ಯಾವದೊಂದು ಅಜ್ಞಾತ ಸಂಬಂಧದ ಮೂಲಕ, ಸಾಮಾನ್ಯ ನೀತಿಕಲ್ಪನೆಯ ವಿರುದ್ಧ ಏನಾದರೂ ಮಾಡಿರಬಹುದು. ಆದರೆ ಆ ಮೂಲಕ ಅವನ ಸಾಧುತ್ವಕ್ಕೆ ಅಥವಾ ಆತ್ಮಸಾಕ್ಷಾತ್ಕಾರಕ್ಕೆ ಏನಾದರೂ ನ್ಯೂನತೆ ಬರುವದಿಲ್ಲ. ನೀವು 'ಬ್ರಹ್ಮಸಿದ್ಧಾಂತ ಮಾಲಾ' ಎಂಬ ಗ್ರಂಥವನ್ನು ಓದಿದ್ದಾದರೆ, ಈ ವಿಷಯ ನಿಮಗೆ ಚನ್ನಾಗಿ ತಿಳಿದೀತು. ಆದರೆ ಸುಳ್ಳು ಸಾಧುಗಳು ಈ ಸಂಗತಿಯ ಉಪಯೋಗ ಮಾಡಿಕೊಂಡಾರು, ಮತ್ತು ಆದರಂತೆ ತಮ್ಮ ನೀತಿಬಾಹ್ಯ ವರ್ತನದ ಸಮರ್ಥನ ಮಾಡಲಿಕ್ಕೆ ಯತ್ನ ಮಾಡ್ಯಾರು, ಆದರೆ ಆದಕ್ಕೆ ಉಪಾಯವಿಲ್ಲ. ಇಂಥ ಸಂಗತಿಗಳು ಈ ಲೋಕದಲ್ಲಿ ನಡಿಯುವವೇ.

ಗೃಹಸ್ಥ :— ಒಬ್ಬ ಸಾಧಕನ ದೇಹದಲ್ಲಿ ಅವನಿಗೆ ತಿಳಿಯದೆ ಯಾವದೊಂದು ರೋಗದ ಬೀಜವಿದ್ದರೆ, ಅವನು ಯೋಗದಲ್ಲಿ ಯಶವನ್ನು ಹೊಂದ್ಯಾನೇನು ?

ಮಹಾರಾಜ :— ಇಂಥ ಅಧಿಕಾರಿಗೆ ಉಪದೇಶ ಮಾಡುವದಾದರೆ ಖರೆ ಸಾಧುವು ಮೊದಲು ಅಂತರ್ದೃಷ್ಟಿಯಿಂದ ಅವನ ಶರೀರದ ತಪಾಸಣೆ ಮಾಡಬೇಕು, ಮತ್ತು ಅವನಲ್ಲಿ ಯಾವ ಚಕ್ರವು ನಿರೋಗಿ ಇರುವದೋ ಅದೇ ಚಕ್ರದ ಮೇಲೆ ಮನಸ್ಸು ಏಕಾಗ್ರ ಮಾಡಲಿಕ್ಕೆ ಹೇಳಬೇಕು. ಆ ಮೇಲೆ ಆ ಸಾಧಕನು ಯೋಗದಲ್ಲಿ ವೃದ್ಧಿಯಾಗುತ್ತ ಹೋಗುವನು, ಈ ಮುಂಜಾಗ್ರತೆಯನ್ನು ತಕ್ಕೊಳ್ಳದಿದ್ದರೆ, ಯಾವಾತನು ಅವನಿಗೆ ಉಪದೇಶ ಮಾಡುವನೋ ಅವನೇ ಆ ರೋಗದ ಯಾತನೆಯನ್ನು ಭೋಗಿಸಬೇಕಾದೀತು, ಹೀಗೆ ನನ್ನ ಅನುಭವವಿದೆ. ನನಗೆ ಹೀಗೆ ಅನಿಸುತ್ತದೆ, ಯಾವ ಯೋಗಿಯು ಇತರರಿಗೆ ಯೋಗಮಾರ್ಗದ ಉಪದೇಶವನ್ನು ಮಾಡುತ್ತಾನೊ, ಅವನಿಗೂ ಅಂಥ ಅನುಭವ ಇರಬೇಕು. ಈ ಉದಾಹರಣೆ ಮೂಲಕ ಸುಳ್ಳು ಸಾಧುಗಳು ಯಾವಾಗ ರೋಗಪೀಡಿತರಾಗುವರೊ, ಆಗ ತಾವು ತಮ್ಮ ಶಿಷ್ಯರ ರೋಗವನ್ನು ತಮ್ಮ ಮೇಲೆ ತಕ್ಕೊಂಡಿದ್ದೇವೆಂತ ಹೆಗ್ಗಳಿಕೆ ಹೇಳುವರು.

— ೩ —

ನಾಶಿಕದ ರಾ. ಅಂಬಾದಾಸ ಗೋಪಾಳ ಪೈಠಣಕರ ಇವರಿಗೆ ಉಪದೇಶವಾಗುವ ಪೂರ್ವದಲ್ಲಿ ವ ನಂತರದಲ್ಲಿ, ಅವರಿಗೂ ಮಹಾರಾಜರಿಗೂ ಆದ ಸಂಭಾಷಣವು ಪೈಠಣಕರ ಇವರೇ ಹೇಳಿದ ಪ್ರಕಾರ ಸಂಕ್ಷೇಪದಿಂದ ಕೆಳಗೆ ಕೊಟ್ಟಿರುತ್ತದೆ.

ಒಮ್ಮೆ ಒಂದು ವಿಶಿಷ್ಟ ಸಂಗತಿ ಸಂಭವಿಸಿದ್ದರಿಂದ, ಶ್ರೀಗಜಾನನ ಮಹಾರಾಜರ ಮಹತ್ವದ ವಿಷಯದಲ್ಲಿ ನನ್ನ ಮನಸ್ಸಿಗೆ ನಿಶ್ಚಯವಾಯಿತು. ಅಂದಿನಿಂದ ಅವರ ಕೂಡ ಮನೆಯವರಂತೆ ನನ್ನ ಸಂಬಂಧವು ಬೆಳೆಯಿತು. ಆಗ ಸಂಭವಿಸಿದ ಸಂಗತಿಯ ವರ್ಣನೆಯು ಕೆಳಗೆ ಕೊಟ್ಟಿರುತ್ತದೆ. ಸನ್ ೧೯೦೮ ಸಾಲಿನ ಎಪ್ರಿಲ ತಿಂಗಳ ಕಡೇವಾರ ಆಗಿತ್ತು. ಆ ದಿವಸ ನಾನು ನನ್ನ ಪರಮ ಮಿತ್ರ ಡಿ. ಕೆ. ಭಟ ಇವರ ಮನೆಯಲ್ಲಿ ಕುಳಿತಿದ್ದೆನು. ಅವರು ನನಗೆ ಗಜಾನನ ಮಹಾರಾಜರ ವಿಷಯ ಮತ್ತು ಅವರಿಗೆ ಸ್ವತಃ ಶಿಕ್ಕಿದ ಪಾರಮಾರ್ಥಿಕ ಅನುಭವಗಳ ವಿಷಯ ವರ್ಣಿಸುತ್ತಿದ್ದರು. ಅದೆಲ್ಲ ಕೇಳುವದರಲ್ಲಿ ನಾನು ಮಗ್ನನಾಗಿ ಹೋಗಿದ್ದೆನು. ಅನಂತರ ನನ್ನ ಮಿತ್ರರು ವೇದಾಂತದ ಗೂಢ ತತ್ವಗಳನ್ನು ವಿಚಾರ ಮಾಡಬೇಕಂತ ನನಗೆ ಹೇಳಹತ್ತಿದರು. ಅದರಲ್ಲಿ ಸ್ವಲ್ಪ ನನಗೆ ತಿಳಿಯುತ್ತಿದ್ದಿಲ್ಲ,

ಅವು ಯಾವವೆಂದರೆ, ಆತ್ಮಪ್ರಚೀತಿ, ಗುರುಪ್ರಚೀತಿ ಮತ್ತು ಶಾಸ್ತ್ರಪ್ರಚೀತಿ, ಈ ವಿಷಯ ಹೇಳುತ್ತಿದ್ದರು. ಆದರೆ ನನ್ನ ಮನಸ್ಸು ಬರೇ ಒಂದೇ ವಿಷಯದ ವಿಚಾರ ಮಾಡುತ್ತಿತ್ತು, ಮತ್ತು ಆ ವಿಷಯವೆಂದರೆ ಗಜಾನನ ಮಹಾರಾಜರೇ. ನನ್ನ ಮಿತ್ರರಾದ ಭಟ ಇವರು ಏನು ಹೇಳುತ್ತಾರೊ ಅದರ ಅರ್ಥದ ಕಡೆಗೆ ಲಕ್ಷ ಕೊಡದೆ, ಅವರ ಶಬ್ದಗಳನ್ನು ಮಾತ್ರ ಕೇಳುತ್ತಿದ್ದೆ.

ಇದಕ್ಕೂ ಮೊದಲು ಸುಮಾರು ಐದಾರು ವರ್ಷಗಳ ಹಿಂದೆ ನಾನು ಶ್ರೀಗಜಾನನ ಮಹಾರಾಜರನ್ನು ಕಂಡಿದ್ದೆ, ಮತ್ತು ಅನಂತರ ಅವರ ವಿಷಯದ ಚಲೋ ಕೆಟ್ಟ ಸಂಗತಿಗಳನ್ನೂ ಕೇಳಿದ್ದೆ. ಅವರ ವಿಷಯದಲ್ಲಿ ನನ್ನ ಮನಸ್ಸು ತೀರ ಕೆಟ್ಟಿತ್ತು, ಮತ್ತು ಅವರ ಕಡೆ ನಾನು ಯಾವಾಗಲೂ ತಿರಸ್ಕಾರ ಬುದ್ಧಿಯಿಂದ ನೋಡುತ್ತಿದ್ದೆ; ಆದರೆ ಆ ದಿನ ನನ್ನ ಮಿತ್ರರಾದ ಭಟ ಇವರು ಮಹಾರಾಜರ ವಿಷಯ ಮತ್ತು ಅವರಿಗೆ ಪರಮಾರ್ಥ ವಿಷಯ ಬಂದ ಅನುಭವಗಳನ್ನು ಹೇಳಿದ್ದು ಕೇಳುತ್ತಿರುವಾಗ ನಾನು ಪೂರಾ ತನ್ಮಯನಾಗಿ ಹೋದೆ. ಆ ಮೂಲಕ ಅವರ ವಿಷಯದ ನನ್ನ ತಿರಸ್ಕಾರ ಬುದ್ಧಿ ಬದಲಾಯಿಸಿ ಹೋಗಿ, ಮೆಲ್ಲಮೆಲ್ಲಗೆ ನನ್ನ ಮತ ಚಲೋದಾಗುತ್ತ ಬಂತು. ಅನಂತರ ಯಾವ ಈ ಮುಂದಿನ ಸಂಗತಿ ಸಂಭವಿಸಿತು, ಅದಕ್ಕೆ ನಾನು ಚಮತ್ಕಾರದ ಹೊರತು ಮತ್ತೇನು ಹೇಳಲಾರೆ.

ನನ್ನ ಮಿತ್ರ ಭಟ ಇವರು ಆತ್ಮಪ್ರಚೀತಿ ವಿಷಯ ವರ್ಣನಮಾಡಿ ಹೇಳುತ್ತಿದ್ದ ಮಾತುಗಳನ್ನು ನಾನು ಕಿವಿಯಿಂದ ಶಬ್ದಮಾತ್ರವಾಗಿ ಕೇಳುತ್ತಿರುವಾಗ, ನನ್ನ ಮನಸ್ಸು ಬಹು ಖೋಲ ವಿಚಾರದಲ್ಲಿ ಮುಳುಗಿತ್ತು. ಆ ವಿಚಾರವೆಂದರೆ ಗಜಾನನ ಮಹಾರಾಜರ ವಿಷಯದ್ದೇ. ನನ್ನ ಎಲ್ಲ ವಿಚಾರಗಳೂ ಕಲ್ಪನೆಗಳೂ ಒಂದರೊಳಗೊಂದು ಮುಳಗಿದವೊ ಎಂಬಂತಿದ್ದು ಮತ್ತು ಖೋಲಿ ತುಂಬ ಗಾಢಾಂಧಕಾರ ತುಂಬಿಹೋಗಿತ್ತು. ನಾನು ತೀರ ಘಾಬರಿಯಾಗಿ ಹೋದೆ. ಭಟ ಸಹಾ ಕಾಣಿಸುತ್ತಿದ್ದಿಲ್ಲ. ತತ್ಕಾಲವೇ ಅಲ್ಲಿ ಚಂದ್ರನಂತೆ ಪ್ರಕಾಶ ಕಾಣಿಸಿತು, ಮತ್ತು ಅದರೊಳಗೆ ಒಂದು ಉದ್ದ ವರ್ತುಲಾಕೃತಿಯ ಮುಖ ಕಾಣಿಸಿತು. ನಂತರ ಆ ಮುಖವು ಕಾಣದಂತಾಗಿ ಆ ಸ್ಥಳದಲ್ಲಿ ಕಣ್ಣು ಕುಕ್ಕುವಂಥ ಒಂದು ವೃದ್ಧಮೂರ್ತಿಯ ಆಕಾರ ಕಾಣಿಸಿತು. ನನಗೆ ಆಗ ಲೋಕೋತ್ತರವಾದ ಆನಂದದ ಆಸ್ವಾದವು ಶಿಕ್ಕಿತು. ಆ ನನ್ನ ವೃತ್ತಿಯು ಇಷ್ಟು ಆಶ್ಚರ್ಯಜನಕವಾಗಿತ್ತಲ್ಲ, ಅದು ನನ್ನಿಂದ ಶಬ್ದಗಳಿಂದ ವರ್ಣನ ಮಾಡಲಿಕ್ಕೆ ಆಗುತ್ತಿದ್ದಿಲ್ಲ.

ಅನಂತರ ಒಮ್ಮೆಲೇ ಎಲ್ಲ ಅದೃಶ್ಯವಾಯಿತು. ನಾನು ಈ ವಿಷಯದಲ್ಲಿ ಭಟ ಇವರಿಗೆ ಒಂದು ಪ್ರಶ್ನೆ ಕೇಳಬೇಕೆಂದಿದ್ದೆ, ಅಷ್ಟರಲ್ಲಿ ಅವರು ಸ್ವತಃ ನನಗಂದರು, “ಏನು ಅಂಬಾದಾಸರೇ, ನಿಮ್ಮ ಮುಖ ಸ್ತಬ್ಧವಾದಂತೆ ಕಾಣಿಸುತ್ತದೆ? ನಾನು ನಿಮಗೆ ಶ್ರೀಗಜಾನನ ಮಹಾರಾಜರ ವಿಷಯದಲ್ಲಿ ಕೆಲವು ಸಂಗತಿ

ಗಳನ್ನು ವರ್ಣಿಸುತ್ತಿದ್ದೆ ಮತ್ತು ನೀವು ಹುಚ್ಚರಂತೆ ಯಾವದೇ ಕಡೆಗೆ ಲಕ್ಷ ಕೊಟ್ಟದ್ದೀರಿ. ನೀವು ಯಾರ ಕಡೆ ಧ್ಯಾನ ಹಚ್ಚಿದ್ದಿರಿ ? ನಾನಂದೆ, "ನಾನು ಯಾರದೂ ಧ್ಯಾನ ಮಾಡುತ್ತಿದ್ದಿಲ್ಲ; ಆದರ ನೀವು ಏನು ನಿಮ್ಮ ಗುರುವಿನ ವಿಷಯದಲ್ಲಿ ಹೇಳುತ್ತಿದ್ದಿರಿ, ಆ ಮಹಾನುಭಾವ ಪುರುಷರ ವಿಷಯದಲ್ಲಿಯೇ ನನ್ನ ಮನಸ್ಸು ಮಗ್ನವಾಗಿತ್ತು." ಅನಂತರ ನನಗೆ ಕಾಣಿಸಿದ್ದನ್ನೆಲ್ಲ ನಾನು ಭಟ ಇವರಿಗೆ ವಿವರಿಸಿ ಹೇಳಿದೆ. ಅವರು ನನಗೆ ಶ್ರೀಗಜಾನನ ಮಹಾರಾಜರಿಗೆ ಭೆಟ್ಟಿಯಾಗಲಿಕ್ಕೆ ಹೇಳಿದರು, ಮತ್ತು ಅವರೇ ಈ ವಿಷಯದಲ್ಲಿ ಏನೆಂಬದು ಹೇಳುವದಕ್ಕೆ ಸಮರ್ಥರು ಎಂದು ಅಂದರು.

ಆದರೆ ಯಾವ ಕಾರಣ ನಾನು ಸ್ವತಃ ನಾಸ್ತಿಕ ಮತ್ತು ಸ್ಪಷ್ಟ ವಕ್ತಾ ಇದ್ದೆನೊ ಆ ಕಾರಣ ನಾನು ಪೂರ್ಣ ವಿಚಾರಣೆ ಮಾಡದೆ, ಮತ್ತು ನನ್ನ ಪೂರ್ಣ ನಿಶ್ಚಯ ಮಾಡಿಕೊಂಡ ವಿನಹಾ ಮಹಾರಾಜರ ಭೆಟ್ಟಿಗೆ ಹೋಗಬಾರದೆಂತ ನಾನು ನಿರ್ಣಯಿಸಿದೆ. ಆದರೂ ಆ ದಿನ ಶ್ರೀಗಜಾನನ ಮಹಾರಾಜರ ಮೂರ್ತಿಯು ನನ್ನ ಮುಂದೆ ನಿಂತಿದ್ದು ಇಲ್ಲದಂತಾಗಲಿಲ್ಲ. ಹಾಗೆಯೇ ನನ್ನ ಪೂರ್ವ ಆಯುಷ್ಯದಲ್ಲಿ ಎಂದೂ ಅನುಭವಿಸದಂಥ ಶಾಂತಿಯ ಅನುಭವವನ್ನು ನಾನು ತಕ್ಕೊಳ್ಳುತ್ತಿದ್ದೆ.

ಅನಂತರ ನಾನು ನನ್ನ ಇನ್ನೊಬ್ಬ ಮಿತ್ರರಾದ ಸಾಯಗಾಂವಕರ ಫೋಟೋಗ್ರಾಫರ ಇವರ ಕಡೆ ಹೋದೆ. ಅವರೂ ಶ್ರೀಗಜಾನನ ಮಹಾರಾಜರ ಕಡೆಯಿಂದ ಉಪದೇಶ ತಕ್ಕೊಂಡಿದ್ದರೆಂಬದು ನನಗೆ ಗೊತ್ತಿತ್ತು. ನಾನು ಅವರಿಗೆ ಅಂದೆ, "ಕಳೆದ ಹನ್ನೆರಡು ಹದಿಮೂರು ವರ್ಷಗಳಲ್ಲಿ ಶ್ರೀಗಜಾನನ ಮಹಾರಾಜರು ನಿಮ್ಮ ಸಮೀಪವೇ ಇದ್ದರು, ಮತ್ತು ಬಹಳ ಬ್ರಾಹ್ಮಣರು, ಕೆಲವು ವಯಸ್ಕ ಪೆನ್ಶನರ ಜನರು ಮತ್ತು ಅನೇಕ ಸುಶಿಕ್ಷಿತ ಜನರು ಅವರ ದರ್ಶನಕ್ಕೆ ಬರುತ್ತಿದ್ದಾರೆ, ಮತ್ತು ನಾಶಿಕದ ಬಹಳ ಜನರ ಕಡೆಯಿಂದ ಅವರು ಆತ್ಮ ಸಾಕ್ಷಾತ್ಕಾರಿ ಧ್ಯಾನಯೋಗಿಗಳಿದ್ದಾರೆಂದು ನಾನು ಕೇಳಿದ್ದೇನೆ. ಹಾಗಾದರೆ ಅವರ ಸಂಬಂಧ ನಿಮ್ಮ ಮತವೇನೆಂಬದು ತಿಳಿಯಬೇಕೆಂದು ನನ್ನ ಇಚ್ಛೆಯಿದೆ." ಸಾಯಗಾಂವಕರರು ನನ್ನ ಪ್ರಶ್ನೆಗೆ ಉತ್ತರ ಕೊಡುವ ಬದಲಿಗೆ, ನಾನು ಎಂದಾದರೂ ಮಹಾರಾಜರಿಗೆ ನೋಡಿದ್ದೇನೇನು ಎಂದು ನನಗೇ ಪ್ರಶ್ನೆ ಮಾಡಿದರು. ಆಗ ನಾನು ಅವರಿಗೆ ಅಂದೆನು "ಐದು ಆರು ವರ್ಷಗಳ ಹಿಂದೆ ಅವರ ಮನೆಯಲ್ಲಿ ಕೀರ್ತನೆ ಆಗುತ್ತಿರುವಾಗ, ಆ ನಿಮಿತ್ತದಿಂದ ನಾನು ಅಲ್ಲಿಗೆ ಹೋದಾಗ ಅವರನ್ನು ನೋಡಿದ್ದೆ."

ಸಾಯಗಾಂವಕರ:- ನೀವು ಅವರಿಗೆ ಭೆಟ್ಟಿಯಾಗಲಿಕ್ಕೆ ಬಹಳ ಉತ್ಸುಕರಾಗಿದ್ದೀರೆಂಬಂತೆ ಕಾಣಿಸುತ್ತದೆ. ಆದರೆ ಕಳೆದ ಸ್ವಲ್ಪ ದಿವಸಗಳಲ್ಲಿ ಅಂಥ ಯಾವ

ಸಂಗತಿ ಘಟಿಸಿತು ? ನಿಮಗೆ ಏನಾದರೂ ವಿಶಿಷ್ಟ ಅನುಭವವು ಬಂದದೇನು ? ಅವರ ಕಡೆ ಯಾರಿಗೂ ಯಾವಾಗಲೂ ಹೋಗಲಿಕ್ಕೆ ಅಡ್ಡಿಯಿರುವದಿಲ್ಲ.

ನಾನು ಇದಕ್ಕೆ ಏನೂ ಉತ್ತರಕೊಡಲಿಲ್ಲ, ಮತ್ತು ಅವರ ಕಡೆಯಿಂದ ಹೊರಟು ಬಂದೆ; ಮತ್ತು ನನ್ನಷ್ಟಕ್ಕೆ ವಿಚಾರ ಮಾಡಿದೆ, ಸಾಧುಕಡೆ ಹೋಗ ಬೇಕಾದರೆ ಎರಡನೆಯವರ ದಲಾಲಿ ಯಾತಕ್ಕೆಬೇಕು ? ನಾನು ಸ್ವತಃ ಹೋಗಿ ಅವರ ಭೆಟ್ಟಿ ತಕ್ಕೊಳ್ಳಲಿಕ್ಕೆ ಏನು ಹರಕತ್ತು ಅದೆ ? ಹೀಗೆ ವಿಚಾರ ಮಾಡಿ, ಮರುದಿನ ಬೆಳಿಗ್ಗೆ ಒಂಬತ್ತು ಹೊಡಿಯುವ ವೇಳೆಗೆ ನಾನು ಅವರ ಕಡೆ ಹೋದೆನು. ಆಗ್ಗೆ ಅವರು ಅಸ್ವಸ್ಥರಿದ್ದದರಿಂದ ಮಲಗಿಕೊಂಡಿದ್ದರು. ಅವರು ನನ್ನ ಕಡೆ ನೋಡಿ, "ನಿಮಗೆ ಯಾರು ಬೇಕು" ಅಂತ ಕೇಳಿದರು. ಆಗ "ನೀವೆ" ಅಂತ ನಾನು ಉತ್ತರ ಕೊಟ್ಟೆ.

ಮಹಾರಾಜ :— ನಿಮ್ಮ ಹೆಸರೇನು ? ನಿಮ್ಮ ವಿಷಯ ಏನಾದರೂ ಸಮಾಚಾರ ನನಗೆ ಹೇಳುವಿರೇನು ?

ನಾನು :— ನನ್ನ ಹೆಸರು ಅಂಬಾದಾಸ, ನನ್ನ ತಂದೆಯ ಹೆಸರು ಗೋಪಾಳ ಮತ್ತು ಅಡ್ಡ ಹೆಸರು ಪೈಠಣಕರ, ನನ್ನ ತಂದೆಯವರು ಒಳ್ಳೇ ಶಾಸ್ತ್ರ ಅಧ್ಯಯನ ಮಾಡಿದವರಿದ್ದು ಕೀರ್ತನೆ ಮಾಡುತ್ತಾರೆ. ನಾನು ಮ್ಯಾಟ್ರಿಕ್ ಪರ್ಯಂತ ಕಲಿತಿದ್ದೇನೆ. ನಿಮ್ಮ ಕಡೆ ಬರುವ ಭಟ ಮತ್ತು ನಾನು ಒಂದೇ ವರ್ಗದಲ್ಲಿ ಕಲಿಯುತ್ತಿದ್ದೆವು. ಅವರು ಮ್ಯಾಟ್ರಿಕ್ ಪರೀಕ್ಷೆ ಪಾಸ ಆದರು, ನಾನು ಆಗಲಿಲ್ಲ. ನಾನು ಅವರ ಕಡೆ ಆಗಾಗ್ಗೆ ಹೋಗುತ್ತಿರುತ್ತೇನೆ.

ಮಹಾರಾಜ :—ಯಾವನೊಬ್ಬ ಸಾಧುವಿನ ದರ್ಶನಕ್ಕೆ ನೀವು ಎಂದಾ ದರೂ ಹೋಗಿದ್ದಿರೇನು ?

ನಾನು :— ಹೌದು, ಸಾಕೋರಿಯ ಉಪಾಸನಿ ಮಹಾರಾಜ ಮತ್ತು ಕೇಡಗಾಂವದ ನಾರಾಯಣ ಮಹಾರಾಜ ಇವರ ದರ್ಶನಕ್ಕೆ ಹೋಗಿದ್ದೆ.

ಮಹಾರಾಜ :— ನೀವು ಯಾವದಾದರೊಂದು ವಿಶಿಷ್ಟ ದೇವತೆಯ ಪೂಜೆ ಅಥವಾ ಧ್ಯಾನ ಮಾಡುತ್ತೀರೇನು ?

ನಾನು :— ನಾನು ಯಾವದಾದರೂ ವಿಶಿಷ್ಟ ದೇವತೆಯ ಪೂಜೆಯನ್ನು ಮಾಡುವದಿಲ್ಲ, ಮತ್ತು ಧ್ಯಾನವನ್ನೂ ಮಾಡುವದಿಲ್ಲ. ನಾನು ಮೂರು ವರ್ಷ ಗಳ ವರೆಗೆ ಗಣಪತಿಯ ಪೂಜೆಯನ್ನು ಮಾಡಿದೆ, ಮತ್ತು ದೇವೀ ಪೂಜೆಯನ್ನು ಎರಡು ವರ್ಷ ಮಾಡಿದೆ. ಕೆಲವು ದಿನ ನಾನು ಒಂದು ಬಿಂದುವಿನ ಮೇಲೆ

ಧ್ಯಾನವಮಾಡಲಿಕ್ಕೆ ಪ್ರಯತ್ನಿಸಿದೆ. ಇದೆಲ್ಲ ಮಾಡುವದರಲ್ಲಿ ನನ್ನ ಇಚ್ಛೆ ಏನೂ ಇದ್ದಿಲ್ಲ, ಹಾಗಾಗಿ ನಾನು ಮುಂದೆ ಅವನ್ನು ಬಿಟ್ಟುಬಿಟ್ಟೆ.

ಮಹಾರಾಜ :— ನಿಮಗೆ ನಿಮ್ಮ ತಂದೆಯ ಉತ್ತಮ ಸಂಗತಿ ಶಿಕ್ಕಿರುತ್ತದೆ. ಮತ್ತು ಆ ಕಾರಣ ನಿಮಗೆ ಭಕ್ತಿಪರ ಪದಗಳು ಹಾಡಲಿಕ್ಕೆ ಬರುತ್ತವೆ ಹೀಗಾಗಿ ನಿಮ್ಮದು ಪರಮಾರ್ಥ ವಿಷಯದಲ್ಲಿ ಒಳ್ಳೇ ತಯಾರಿಯಾಗಿದೆ. ಹಾಗಾದರೆ ನೀವು ಒಮ್ಮೆ ಒಂದು ದೇವತೆಯ ಪೂಜಾ ಮಾಡುತ್ತೀರಿ, ಎರಡನೇ ಸರ್ತಿ ಬೇರೊಂದು, ಮೂರನೇ ಸಾರಿ ಮೂರನೇ ದೇವತೆಯದು ಹಿಗ್ಯಾಕೆ? ಅಂತ್ಯಕಾಲ ಪರ್ಯಂತ ನೀವು ಹೀಗೆಯೇ ಮಾಡುತ್ತಿರುವಿರೇನು? ಮತ್ತು ಮುಂದಿನ ಜನ್ಮದಲ್ಲಿಯೂ ಹೀಗೆಯೇ ಮಾಡುತ್ತಿರುವಿರೇನು?

ನಾನು :— ನನ್ನ ಲಕ್ಷ ಎಲ್ಲಿಯೂ ಸ್ಥಿರವಾಗುವದಿಲ್ಲ, ನನಗೆ ನನ್ನ ಕುಟುಂಬ ಮತ್ತು ಮಕ್ಕಳು ಇವುಗಳಕಡೆ ನೋಡಬೇಕಾಗುತ್ತದೆ, ಮತ್ತು ನನ್ನದು ಭಿಕ್ಷುಕೀ ವೃತ್ತಿಯೂ ಅದೆ. ಅಂತ ನನ್ನ ಲಕ್ಷವು ಯಾವದೊಂದು ಮಾರ್ಗದ ಕಡೆ ಅಥವಾ ದೇವರ ಕಡೆ ನಿಂತಿರುವದಿಲ್ಲ. ಆದ್ದರಿಂದಲೇ, ನಾನು ನಿಮ್ಮಂಥ ಸಂತರ ಕಡೆಗೆ ಬಂದಿರುತ್ತೇನೆ.

ಮಹಾರಾಜರೇ ನನ್ನದೀಗ ಪೂರ್ಣನಿಶ್ಚಯವಾಗಿದೇನಂದರೆ; ಶಾಸ್ತ್ರಗಳು ನಮಗೆ ನಿರರ್ಥಕ ವಾದ ಮಾಡಲಿಕ್ಕೆ ಕಲಿಸುತ್ತವೆ, ಮತ್ತು ಅನಂತ ಶಂಕೆಗಳನ್ನು ಉತ್ಪನ್ನಮಾಡುತ್ತವೆ. ಆತ್ಮಸಾಕ್ಷಾತ್ಕಾರವೇ ಖರೇ ಶಾಸ್ತ್ರವಿದ್ದು ಅದು ಗುರುಕೃಪೆಯ ಹೊರತು ಎಂದೂ ಪ್ರಾಪ್ತವಾಗಲಾರದು ಎಂದು ನನ್ನ ದೃಢ ವಿಶ್ವಾಸವಾಗಿದೆ. ಮಹಾರಾಜರೆ, ನನಗೆ ನೀವು ಈಶ್ವರ ದರ್ಶನ ಮಾಡಿಕೊಡುವಿರೇನು?

ಮಹಾರಾಜರು :— ಹೀಗೆ ವಿಚಾರಿಸಿರಿ, ನಿಮ್ಮ ಮನೆಯಲ್ಲಿ ಕಂದೀಲು ಹಚ್ಚಿದೆ ಎಂದು ಕಲ್ಪನೆ ಮಾಡೋಣ. ಅದರ ಪ್ರಕಾಶವನ್ನು ಇಲ್ಲಿ ತಂದು ನನಗೆ ತೋರಿಸಿರಿ ಎಂದು ನಾನು ನಿಮಗೆ ಹೇಳಿದರೆ, ಅದನ್ನು ನೀವು ಇಲ್ಲಿಗೆ ತಂದು ನನಗೆ ತೋರಿಸುವಿರೇನು?

ನಾನು :— ಇಲ್ಲ, ಪ್ರಕಾಶವು ಇಲ್ಲಿ ತರಲಿಕ್ಕೆ ಸಾಧ್ಯವಿಲ್ಲ.

ಮಹಾರಾಜ :— ಹಾಗಾದರೆ ನೀವು ನನಗೆ ಹೇಳುವಿರಲ್ಲ, "ಪ್ರಕಾಶ ಉತ್ಪನ್ನಮಾಡಲಿಕ್ಕೆ ಏನು ಸಾಧನಗಳು ಬೇಕು ಮತ್ತು ಯಾವ ಕೃತಿ ಮಾಡಬೇಕು, ಇಷ್ಟು ಮಾತ್ರ ನಾನು ಹೇಳಬಲ್ಲೆನು, ನೀವು ಕಂದೀಲು ಕೊಂಡುಕೊಳ್ಳಬೇಕು, ಬತ್ತಿಹಾಕಬೇಕು, ಕಲ್ಲೆಣ್ಣೆ ಒಳಗೆ ಹಾಕಬೇಕು, ಮತ್ತು ಕಡ್ಡಿಕೆರೆದು

ಹೆಚ್ಚಬೇಕು, ಆ ಮೇಲೆ ಪ್ರಕಾಶವಾಗುವದು. " ಆದರಂತೆ ಈಶ್ವರನನ್ನು ತೋರಿಸುವದು ಇದು ಸುಲಭ ಸಂಗತಿಯಲ್ಲ. ನೀವು ನಿಮ್ಮ ಆಯುಷ್ಯಕ್ರಮ ಹ್ಯಾಗೆ ನಡಿಸಬೇಕು ಇಷ್ಟೇ ನಾನು ನಿಮಗೆ ಹೇಳಬಲ್ಲೆನು. ಹಾಗೆಯೇ ನೀವು ಯಾವಾಗ ಸಾಧನಚತುಷ್ಟಯ ಸಂಪನ್ನರಾಗುವಿರಿ, ನಿಮ್ಮ ವಾಸನಾಕ್ಷಯ ಯಾವಾಗ ಆದೀತು, ನೀವು ಯಾವಾಗ ಪೂರ್ಣ ಈಶ್ವರಭಕ್ತರಾಗುವಿರಿ, ವೈರಾಗ್ಯಶೀಲರಾಗುವಿರಿ, ಆಧ್ಯಾತ್ಮಜ್ಞಾನ ನಿಮಗೆ ಪ್ರಾಪ್ತವಾದೀತು, ಆಗ ನೀವು ಈಶ್ವರನನ್ನು ತಿಳಿಯಲಿಕ್ಕೆ ಸಮರ್ಥರಾಗುವಿರಿ. ಈ ಸಂಗತಿಗಳನ್ನು ನಾನು ನಿಮಗೆ ಹೇಳಬಲ್ಲೆನು. ಅನಂತರ ನೀವು ಆತ್ಮಪ್ರಕಾಶವನ್ನು ನೋಡಲಿಕ್ಕೆ ಶಕ್ತರಾಗುವಿರಿ. ಮತ್ತು ಯಾವ ಸಚ್ಚಿದಾನಂದರೂಪ ಪರಮಾತ್ಮನಿದ್ದಾನೋ ಅವನಲ್ಲಿ ನೀವು ಏಕರೂಪರಾಗುವಿರಿ. ಈಶ್ವರನು ಬೊಟ್ಟಿನಿಂದ ತೋರಿಸಲಿಕ್ಕೆ ಆಗುವಂಥ ಬಾಹ್ಯಪದಾರ್ಥದಂತಿಲ್ಲ. ಮನುಷ್ಯನು ಗುರುಕೃಪೆಯನ್ನು ಸಂಪಾದಿಸಿ, ಗುರುವಿನ ಕಡೆಯಿಂದ ಅನುಗ್ರಹವನ್ನು ಹೊಂದಬೇಕು. ಆಮೇಲೆ ಅವನಿಗೆ ಯಾವಾಗ ಅಂತರ್ದೃಷ್ಟಿ ಪ್ರಾಪ್ತವಾದೀತು, ಆಗಲೇ ಸ್ಥೂಲದೃಷ್ಟಿಯಿಂದಲ್ಲ ಜ್ಞಾನಚಕ್ಷುವಿನಿಂದ ಅವನು ನೋಡಬಲ್ಲನು. ಅವನ ಅಹಂಕಾರವು ಗಲಿತವಾಗಬೇಕು, ವಾಸನೆಗಳ ಕ್ಷಯವಾಗಬೇಕು, ಅವನು ವೈರಾಗ್ಯಶಾಲಿಯಾಗಬೇಕು, ಈಶ್ವರನಲ್ಲಿ ತಾನು ಏಕರೂಪನಾಗಿದ್ದೇನೆಂದು ಅವನಿಗೆ ಗೊತ್ತಾಗಬೇಕು, ಅನಂತರ ಅವನಿಗೆ ಅಕ್ಷಯ ಸುಖ ಮತ್ತು ಶಾಂತಿ ಇವುಗಳು ಪ್ರಾಪ್ತಿಯಾಗುತ್ತವೆ. ಅವನ ಐಹಿಕ ಜೀವನವು ಬೇರೆ ಏನಾದರೂ ಇರದೆ ಕೇವಲ ಬ್ರಹ್ಮರೂಪವೆ ಇರುತ್ತದೆ. ಮತ್ತು ಅವನು ಸುಖದುಃಖಾತೀತನಾಗುವನು. ನಾನು ನಿಮಗೆ ದಿನಾಲು ಅನುಭವಕ್ಕೆ ಬರುವ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹೀಗೆ ತಿಳಿಯಿರಿ, ನಿಮಗೆ ಒಂದುದಿನ 'ಒಳ್ಳೇ ಗಾಢ ನಿದ್ದೆ ಹತ್ತಿತು' ಮರುದಿನ ಎದ್ದಕೂಡಲೆ ನೀವು ಮತ್ತೊಬ್ಬರಿಗೆ ಹೇಳುವಿರಿ, " ಒಂದು ತಿಂಗಳಾಯಿತು ನನಗೆ ಒಳ್ಳೇ ನಿದ್ದೆಯೇ ಇದ್ದಿಲ್ಲ; ಆದರೆ ನನಗೆ ಇಂಥಾ ಗಾಢ ನಿದ್ರೆಯಾಯಿತಲ್ಲ, ನನಗೆ ಅತ್ಯಾನಂದವಾಯಿತು. " ಈಗ ನೋಡಿರಿ, ನೀವು ಗಾಢನಿದ್ರೆಯೊಳಗಿದ್ದರೆ, ನನಗೆ ಗಾಢ ನಿದ್ರೆ ಹತ್ತಿತೆಂದು ಹ್ಯಾಗೆ ಹೇಳುವಿರಿ ? ಆಗ ಎಚ್ಚರ ಯಾವನಿದ್ದನು ? ಯಾವನು ಎಚ್ಚರ ಇದ್ದನು ಅವನನ್ನು ಆ ಸ್ಥಿತಿಯಲ್ಲಿ ನೀವು ನೋಡಿದಿರೇನು? ಈ ನಿದ್ರೆಯೊಳಗಿನ ಸುಖವನ್ನು ಯಾರು ಅನುಭವಿಸಿದ್ದು ? ಮತ್ತು ಆ ಸ್ಥಿತಿಯೊಳಗಿನ ಆ ಸುಖವನ್ನು ಯಾರು ವರ್ಣಿಸುತ್ತಾರೆ ? ಹೇಳಿರಿ ನೋಡೋಣ.

ನಾನು :— ನಾನೇ ಸ್ವತಃ.

ಮಹಾರಾಜ :— ಈ ' ನಾನು ' ಪ್ರತಿಒಂದು ಸಂಗತಿಯಲ್ಲಿ ಮತ್ತು ಧೂಳಿಯ ಅತ್ಯಂತ ಸಣ್ಣ ಪರಿಮಾಣುವಿನಲ್ಲಿ ಸಹಾ ಹಾಜರ ಇರುತ್ತಾನೆ. ಇವನೇ ನಿಮ್ಮ ಆತ್ಮನೆಂದು ತಿಳಿಯಿರಿ. ' ಸೋಹಂ ' ( ಅದು ನಾನು ) ಇದರ

ಸತತ ಧ್ಯಾನದಿಂದ ಅವನಲ್ಲಿ ಏಕರೂಪರಾಗಿರಿ. ಅವನೇ ಸ್ವತಃ ಪರಮಾತ್ಮ ನಿದ್ದಾನೆ. ಇದರ ಹೊರತು ನಿಮಗೆ ಮತ್ತೇನೂ ನಾನು ಹೇಳಲಾರೆನು. ಆ ಈಶ್ವರನು ನನ್ನ ಹೃದಯದಲ್ಲಿದ್ದಾನೆ, ಅವನು ನಿಮ್ಮ ಹೃದಯದಲ್ಲಿಯೂ ಇರು ತ್ತಾನೆ, ಗುರುಕೃಪೆಯಿಂದ ಮತ್ತು ' ಸೋಹಂ 'ದ ಜಪದಿಂದ ಯಾವಾಗ ನೀವು ಅಂತರ್ದೃಷ್ಟಿ ಪ್ರಾಪ್ತಮಾಡಿಕೊಳ್ಳುವಿರಿ, ಆಗ ಪ್ರತಿಒಂದು ಸಂಗತಿಯನ್ನು ತಿಳಿಯಲಿಕ್ಕೆ ನೀವು ಸಮರ್ಥರಾಗುವಿರಿ.

ಮಹಾರಾಜರು ಮಾತು ಮುಗಿಸಿದ ಮೇಲೆ, ಎರಡು ಮೂರು ದಿನಗಳ ಹಿಂದೆ ಭಟ ಇವರ ಮನೆಯಲ್ಲಿ ಯಾವ ನೋಟ ನಾನು ನೋಡಿದ್ದೆನೊ, ಅದನ್ನು ಅವರಿಗೆ ಹೇಳಿದೆ, ಮತ್ತಂದೆ “ ಮಹಾರಾಜರೆ, ಯಾವದನ್ನು ಹಿಂದೆ ಎಂದೂ ನಾನು ನೋಡಿದ್ದಿಲ್ಲ, ಅದನ್ನು ಇವತ್ತು ನಿಮ್ಮಲ್ಲಿ ನಾನು ನೋಡುತ್ತಿದ್ದೇನೆ. ”

ಮಹಾರಾಜ :— ನೀವು ಹೇಳುವದೆಲ್ಲ ನಿಜವಾದದ್ದು. ಭೀತಿಯ ಪರದೆ ಯನ್ನು ದೂರ ಸರಿಸಿ, ಎಲ್ಲ ಶಂಕೆ ಮತ್ತು ಅವಿಶ್ವಾಸವನ್ನು ಬಿಟ್ಟುಬಿಡಿರಿ. ವಿದ್ವಾನ್ ಮತ್ತು ಸುಶಿಕ್ಷಿತ ಇವರ ಸಂಗತಿ ಪ್ರತ್ಯೇಕವದೆ, ಅವರಲ್ಲಿ ಶಂಕೆ ಮತ್ತು ಕೋಟಿಕ್ರಮ ಇವುಗಳ ಜಗಳ ಸುರು ಇರುವದರಿಂದ ಶಿವನಲ್ಲಿ ಐಕ್ಯ ಹೊಂದಲಿಕ್ಕೆ ಅವರಿಗೆ ಬಹಳ ಕಾಲ ಬೇಕು. ಇದು ಸತ್ಯವೊ ಅದು ಸತ್ಯವೋ ಎಂಬ ವಿಷಯ ದಲ್ಲಿ ಅವರಿಗೆ ಸಂಶಯವಿರುತ್ತದೆ, ಅಂತ ಅವರ ಮನಸ್ಸು ಅಸ್ಥಿರವಾಗುತ್ತದೆ. ಆದರೆ ಎಲ್ಲ ಸಂಶಯಗಳನ್ನು ಬಿಟ್ಟುಕೊಟ್ಟು, ತನ್ನ ಗುರು ಹೇಳಿದ ಪ್ರಕಾರ ಅವನು ನೆಟ್ಟಗೆ ಅಭ್ಯಾಸ ಮಾಡಿದ್ದಾದರೆ, ಅವನು ಕಷ್ಟವಿಲ್ಲದೆ ಅಕ್ಷಯ ಸುಖ ವನ್ನು ಪ್ರಾಪ್ತಮಾಡಿಕೊಳ್ಳುವನು. ಈ ಅವಸ್ಥೆಯಲ್ಲಿ ಶಿಕ್ಷಿತ ಅಶಿಕ್ಷಿತ ಈ ಭೇದವು ಇರಲಾರದು. ಶಂಕೆ ಮತ್ತು ಕೋಟಿಕ್ರಮ ಎಲ್ಲಿಯ ತನಕ ಇರುವದೊ ಅಲ್ಲಿ ತನಕ ಈ ಎಲ್ಲ ಭೇದವಿರುವದು.

ನಾನು : – ನೀವು ನನ್ನ ಮೇಲೆ ಅನುಗ್ರಹ ಮಾಡಬೇಕು ಎಂದು ನನಗೆ ಉತ್ಕಟ ಇಚ್ಛೆಯಿದೆ. ನೀವು ನನ್ನ ಮೇಲೆ ಅನುಗ್ರಹ ಮಾಡಿ, ನನ್ನನ್ನು ತಮ್ಮ ಕೃಪಾಛತ್ರದೊಳಗೆ ತಕ್ಕೊಳ್ಳಿರಿ.

ಮಹಾರಾಜ :– ಸದ್ಗುರುಗಳ ಕೃಪೆಯಿಂದ ನನಗೆ “ ಸೋಹಂ ” ದ ಮಂತ್ರ ಶಿಕ್ಕಿದೆ, ನಾನು ಇನ್ನೂ ಸಾಧಕ ಸ್ಥಿತಿಯಲ್ಲಿದ್ದೇನೆ. ಆದರೆ ನನ್ನ ಗುರು ನನ್ನ ಮುಖದಿಂದ ಮಾತಾಡುತ್ತಾನೆ. ನಾನು ಯಾವ ಶಬ್ದಗಳನ್ನು ಉಚ್ಚರಿ ಸುವೆನೊ ಅವು ಸತ್ಯವಾಗಿ ನನ್ನವಲ್ಲ. ನನ್ನ ಗುರುವು ನನಗೆ ' ಸೋಹಂ' ಮಂತ್ರ ಜಪಿಸಲಿಕ್ಕೆ ಹೇಳಿದನು, ಮತ್ತು ' ಸೋಹಂ ' ದ ಕಲ್ಪನೆಯನ್ನು ಪರಮಾತ್ಮಸ್ವರೂಪದಲ್ಲಿ ಲೀನ ಮಾಡಿಕೊಳ್ಳಲಿಕ್ಕೆ ಹೇಳಿ ಶಾಸ್ವತ ಸುಖಶಾಂತಿ ಗಳನ್ನು ಅನುಭವಿಸುತ್ತಿರಬೇಕೆಂದು ಅವರು ಹೇಳಿದರು. ಯಾವನಾದರೂ ನನ್ನ

ಕಡೆ ಬಂದರೆ, ಅಂಥವನಿಗೆ ಪ್ರಕಟವಾಗಿ ಉಪದೇಶಿಸಲಿಕ್ಕೆ ನನ್ನ ಗುರು ನನಗೆ ಆಜ್ಞಾ ಕೊಟ್ಟಿರುತ್ತಾನೆ.

ನನಗೇನು ಗೊತ್ತಿರುವದೊ ಅದನ್ನು ನನ್ನನ್ನು ಕುರಿತು ಬರುವವರಿಗೆ ನಾನು ಹೇಳುತ್ತೇನೆ, ಮತ್ತು ಇದನ್ನು ನನ್ನ ಗುರುವಿನ ಆಜ್ಞಾ ಪ್ರಕಾರ ಮಾಡುತ್ತೇನೆ. ಸಾಧಕನು ಧ್ಯಾನಯೋಗದ ಅಭ್ಯಾಸವನ್ನು ನೆಟ್ಟಗೆ ಮಾಡಿದರೆ, ಅವನು 'ಸೋಹಂ' ಮಂತ್ರದ ಸಾಮರ್ಥ್ಯದಿಂದ ಈ ಜನ್ಮದಲ್ಲೇ ಪೂರ್ಣತ್ವಕ್ಕೆ ಮುಟ್ಟುವನು, ಎಂಬದು ನನಗೆ ನಿಶ್ಚಯುವದೆ.

ಅನಂತರ ಎರಡು ದಿನಗಳ ಮೇಲೆ ಮಹಾರಾಜರು ನನಗೆ 'ಸೋಹಂ' ಮಂತ್ರದ ಉಪದೇಶಮಾಡಿದರು. ಆ ದಿನ ಲಾಗಾಯತು ಬಹುಶಾ ಪ್ರತಿದಿವಸ ನಾನು ಮಹಾರಾಜರ ದರ್ಶನಕ್ಕೆ ಹೋಗುತ್ತಿದ್ದೇನೆ. ಅನೇಕ ಸಂಗತಿಗಳನ್ನು ತಿಳಿಯಬೇಕೆಂಬ ಇಚ್ಛೆಯಿಂದ ನಾನು ಮಹಾರಾಜರಿಗೆ ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿದೆ. ಅವುಗಳ ಸ್ಪಷ್ಟೀಕರಣವನ್ನು ಅವರು ಉತ್ತಮ ಸುಬೋಧ ಶಬ್ದಗಳಿಂದ ಮಾಡಿದರು. ಆ ಸಂಭಾಷಣದ ಪೈಕಿ ಕೆಲವು ಭಾಗ ಅತ್ಯಂತ ಬೋಧಪ್ರದವಾದ್ದರಿಂದ ಅದನ್ನು ನಾನು ಈ ಕೆಳಗೆ ಕೊಟ್ಟಿದ್ದೇನೆ.

ನಾನು :— ಜಗತ್ತಿನಲ್ಲಿ ಶಾಸ್ತ್ರೀಯ ಮತ್ತು ಧಾರ್ಮಿಕ ಪುಸ್ತಕಗಳು ಬಹಳ ಇರುತ್ತವೆ. ಅವುಗಳ ಪೈಕಿ ಯಾವದರ ವಾಚನವು ಪ್ರತಿಒಂದು ಕುಟುಂಬದಲ್ಲಿ ಲಾಭದಾಯಕವಾದೀತೊ ಇಂಥ ಕೆಲವು ಪುಸ್ತಕಗಳನ್ನು ನನಗೆ ಹೇಳುವಿರೋ ?

ಮಹಾರಾಜ :— ಮಹೇಂದ್ರಕೃತ 'ರಾಮಕೃಷ್ಣಾಚ್ಯಾ ಗೋಷ್ಟಿ' ಶ್ರೀಗುಲಾಬರಾವ ಮಹಾರಾಜರ, 'ಸಾಂಪ್ರದಾಯ ಸುರತರು' ನೋಹಿರೋಬಾ ಇವರ 'ಸಿದ್ಧಾಂತ ಸಂಹಿತಾ' ಡಾಕ್ಟರ ವೈದ್ಯ ಇಸ್ಲಾಮಪೂರ ಇವರ, 'ದೇವಯಾನ ಪಂಥ' 'ಷಟ್ಚಕ್ರಭೇದನ' ಮತ್ತು 'ಪ್ರಣವೋಪಾಸನಾ' ಈ ಮೂರು ಪುಸ್ತಕಗಳು, ಮತ್ತು ಬಾಬಾಗರ್ದೆಯವರ 'ಬ್ರಹ್ಮ ಸಿದ್ಧಾಂತ ಮಾಲಾ' ಈ ಪುಸ್ತಕಗಳನ್ನು ಓದಲಿಕ್ಕೆ ನಾನು ಶಿಫಾರಸ ಮಾಡುತ್ತೇನೆ. ನಿಮಗೆ ಈ ಪುಸ್ತಕಗಳನ್ನು ಓದಲಿಕ್ಕೆ ಹೇಳುವ ಕಾರಣವೇನಂದರೆ, ಶಾಸ್ತ್ರೀಯ ಗ್ರಂಥಗಳನ್ನು ನೀವು ನಿಮ್ಮ ತಂದೆಯವರ ಕೂಡ ಮೊದಲೇ ಓದಿರಬಹುದು, ಆದರೆ ಈ ಪುಸ್ತಕಗಳು ಅಜ್ಞಾನಿ, ಸಜ್ಞಾನಿ ವ ಸುಶಿಕ್ಷಿತ ಮತ್ತು ಪರಮಾರ್ಥ ಮಾರ್ಗದ ಅಧಿಕಾರಿ ವ ಭಕ್ತ ಇವರೆಲ್ಲರೂ ತಮ್ಮ ಆಧ್ಯಾತ್ಮಿಕ ಅಭ್ಯಾಸ ಸುಧಾರಣೆಗೆ ಓದತಕ್ಕದ್ದು.

ಈ ಪುಸ್ತಕಗಳನ್ನು ಓದಿ, ಅವುಗಳಲ್ಲಿ ಸೂಚಿಸಿದಂತೆ ಅಭ್ಯಾಸ ಮಾಡಿದ ಮೇಲೆ, ಯಾವನೊಬ್ಬ ಸಾಧುವಿನ ಕೀರ್ತಿಯನ್ನು ಇತರರ ಕಡೆಯಿಂದ ಕೇಳಿ

ಜನರು ಅವನ ಕಡೆಗೆ ಹೋದರೆ, ಅವನು ಖರೆ ಸಾಧು ಅಲ್ಲದಿದ್ದರೂ, ಅವನಿಂದ ಅವರು ಮೋಸ ಹೋಗಲಿಕ್ಕಿಲ್ಲ. ಯಾಕೆಂದರೆ ಇವರು ಸ್ವತಃದ ಅನುಭವದ ಪ್ರಕಾರ ನಡೆಯುವವರಾದ್ದರಿಂದ, ಆ ಸುಳ್ಳು ಸಾಧು ಅವರಿಗೆ ಏನು ಹೇಳುವನೋ, ಅದರೊಳಗಿನ ಸತ್ಯಾಸತ್ಯವನ್ನು ಅರಿಸಲಿಕ್ಕೆ ಅವರು ಸಮರ್ಥರಾದಾರು.

ನಾನು :— ನಾನು ಇತ್ತಲಾಗೆ, "ಪ್ರಣವೋಪಾಸನಾ" ಈ ಪುಸ್ತಕದ ಎರಡನೇ ಅವೃತ್ತಿಯನ್ನು ಓದಿದೆ. ಅದರಲ್ಲಿ ಧ್ಯಾನಯೋಗದ ಅಭ್ಯಾಸ ಮಾಡಲಿಕ್ಕೆ ಯಾವ ಸೂಚನೆಗಳನ್ನು ಕೊಟ್ಟಿದ್ದಾರೊ ಅವು ಬಹಳ ಉತ್ತಮ ಅವೆ. ಆದರೂ ಈ ವಿಷಯ ಸಂಬಂಧ ನನಗೆ ಒಂದು ಸಂಶಯವಿದೆ, ಮಹಾರಾಜರೆ, ಹೀಗೆ ತಿಳಿಯಿರಿ, ಒಬ್ಬಾನೊಬ್ಬ ಸುಳ್ಳುಸಾಧುವು ಈ 'ಪ್ರಣವೋಪಾಸನಾ' ಗ್ರಂಥ ಓದಿ ಅದರಲ್ಲಿ ಹೇಳಿದಂತೆ ಅಜ್ಞಾನಿ ಜನರಿಗೆ ಧ್ಯಾನದ ಅಭ್ಯಾಸ ಮಾಡಲಿಕ್ಕೆ ಹೇಳಿದನು, ಮತ್ತು ಜನರಿಗೆ ಸ್ವಲ್ಪ ಅನುಭವಗಳು ಬಂದವು. ಆಗ ಆ ಸುಳ್ಳು ಸಾಧುವು ತನ್ನ ಅನುಯಾಯಿಗಳಿಗೆ ಬಂದಿರುವ ಅನುಭವಗಳ ಪುರಾವೆ ಕೊಟ್ಟು, ಭಕ್ತ ಮತ್ತು ಶಿಕ್ಷಿತ ಸಾಮಾನ್ಯಜನರಿಗೆ ಮೋಸಗೊಳಿಸಲಿಕ್ಕೆ ಸಮರ್ಥನಾಗಲಿಕ್ಕಿಲ್ಲೇನು? ಅದೇ ಪ್ರಕಾರ ಒಬ್ಬ ಸುಳ್ಳು ಸಾಧುವು ವೇದಾಂತ ಲಕ್ಷ್ಯಪೂರ್ವಕ ಓದಿ, ಜನರಿಗೆ ಅದನ್ನು ಉತ್ತಮ ರೀತಿಯಿಂದ ಸ್ಪಷ್ಟಮಾಡಿ ಹೇಳಲಿಕ್ಕೆ ಸಮರ್ಥನಾದದ್ದಾದರೆ, ಅವನಿಗೆ ಸ್ವಾತ್ಮಾನುಭವ ಇಲ್ಲವೆಂತ ನಾವು ಹ್ಯಾಗೆ ತಿಳಿಯಬೇಕು? ಮತ್ತು ನಮ್ಮ ಮಿತ್ರರಿಗೆ ಅವನ ಜಾಲದೊಳಗೆ ಬೀಳದಂತೆ ಹ್ಯಾಗೆ ಎಚ್ಚರಿಸಬೇಕು?

ಮಹಾರಾಜ :— ಪ್ರೇರಣಕರ್ತ, ನೀವು ಈ ಉತ್ತಮ ಪ್ರಶ್ನೆಯನ್ನು ಕೇಳಿದಿರಿ. ಈ ಪ್ರಶ್ನೆಯ ಉತ್ತರವು ಯಾವನು ಸ್ವಾತ್ಮಸಾಕ್ಷಾತ್ಕಾರ ಪಡೆದಿರುವನೋ ಅವನೇ ಕೊಡಬಲ್ಲನು. ನಾನು ಸಾಧುಗಳ ಚರಿತ್ರಗಳನ್ನು ಓದಿದ್ದೇನೆ, ಮತ್ತು ಅವುಗಳ ಮೇಲಿಂದ 'ದೇವಯಾನ ಪಂಥ' ಮತ್ತು 'ಪ್ರಣವೋಪಾಸನಾ' ಈ ಪುಸ್ತಕಗಳನ್ನು ಓದಬೇಕೆಂದು ನಿಶ್ಚಯಪೂರ್ವಕ ಹೇಳುತ್ತೇನೆ. ಯಾಕೆಂದರೆ ಖರೆ ಸಾಧುಗಳಿಗೆ ಯಾವ ಅನುಭವಗಳು ಬರುತ್ತವೊ ಅವನ್ನು ಅವುಗಳಲ್ಲಿ ವರ್ಣಿಸಿರುತ್ತದೆ. ಯಾವನಾದರೊಬ್ಬ ಶಿಷ್ಯನು ಯಾವಾಗ ತನ್ನ ಸದ್ಗುರು ಕಡೆಯಿಂದ ಉಪದೇಶ ತಗೊಳ್ಳುತ್ತಾನೆ, ಮತ್ತು ಧ್ಯಾನದ ಅಭ್ಯಾಸ ಮಾಡುವನೊ, ಆಗ್ಗೆ ಅವನಿಗೆ ಯಾವ ನಾನಾವಿಧದ ನೋಟಗಳು ಕಾಣಿಸುತ್ತವೆ, ಅವು ಸ್ವಾತ್ಮಸಾಕ್ಷಾತ್ಕಾರದ ಮಾರ್ಗದ ಮೇಲಿನ ಗುರ್ತುಗಳನ್ನು ತೋರಿಸುವ ಪಾಟಿಗಳಂತೆ ಇವೆ. ಅವನು ಯಾವಾಗ ಮುಂದರಿಸುತ್ತಾನೆ, ಆಗ್ಗೆ ಈ ನೋಟಗಳ ಅತ್ತಕಡೆಗೆ ಹೋಗುವನು, ಮತ್ತು ಆಗ್ಗೆ ಅವನು ಈ ನೋಟಗಳ ಬುಡಕ್ಕಿರುವ (ಕಾರಣವಾಗಿರುವ) ಬ್ರಹ್ಮವನ್ನು ಅನುಭವಿಸುತ್ತಾನೆ. ಸುಳ್ಳು ಸಾಧುವು ಬರೇ ಈ ಪುಸ್ತಕಗಳನ್ನು ಓದಿ, ಎರಡನೇಯವರಿಗೆ ಧ್ಯಾನ ಮಾಡುವ

ರೀತಿ ತೋರಿಸುವನು. ಮತ್ತು ಸಾಧಕನು ಅದರ ಮೇಲಿನ ದೃಢವಿಶ್ವಾಸದಿಂದ ಯಾವದಾದರೂ ಅನುಭವಗಳನ್ನು ಹೊಂದುವನು; ಹೀಗಾದರೆ ಅವನು (ಸಾಧಕನು) ಈ ಪುಸ್ತಕಗಳನ್ನು ಓದಿ, ಅವುಗಳಲ್ಲಿ ಹೇಳಿದ ಅನುಭವಗಳಿಗೂ ತನ್ನ ಅನುಭವಗಳಿಗೂ ಹೋಲಿಕೆ ನೋಡುವದಕ್ಕೆ ಸಮರ್ಥನಾಗುವನು. ಯಾಕಂದರೆ ಆತ್ಮಾನುಭವ ಇದ್ದ ಅನೇಕ ಸಾಧುಸಂತರು ಇತರರಿಗೆ ಮಾರ್ಗ ದರ್ಶಕವಾಗಬೇಕೆಂದು ತಮ್ಮ ಅನುಭವಗಳನ್ನು ಬರೆದಿಟ್ಟಿರುತ್ತಾರೆ, ಮತ್ತು ಆ ಅನುಭವಗಳು ಈ ಪುಸ್ತಕಗಳಲ್ಲಿ ವರ್ಣನೆಮಾಡಿ ಹೇಳಿದ್ದಾರೆ.

ಯಾವನೊಬ್ಬ ಸಾಧು ಖರೆ ಇದ್ದಾನೊ ಸುಳ್ಳು ಇದ್ದಾನೊ ಎಂಬ ವಿಚಾರಿಸುವ ಅಡಚಣಿ ಬರಲಾರದು, ಹೀಗೆ ನನ್ನ ಅಭಿಪ್ರಾಯವದೆ. ಸಾಧಕರಿಗೆ ಬರುವ ಎಲ್ಲ ಅನುಭವಗಳು ಈ ಪುಸ್ತಕದಲ್ಲಿ ತಪಶೀಲವಾರ ಕೊಡಲಿಲ್ಲ. ಧ್ಯಾನದ ಅಭ್ಯಾಸ ಹ್ಯಾಗೆ ಮಾಡಬೇಕು ಎಂಬ ವಿಷಯದಲ್ಲಿ ಸರ್ವಸಾಧಾರಣ ಸೂಚನೆಯು ಕೊಟ್ಟಿರುತ್ತದೆ, ಮತ್ತು ಕೆಲವು ಮಹತ್ವದ ಅನುಭವಗಳು ಕೊಟ್ಟಿರುತ್ತವೆ. ಇದರ ಮೇಲಿಂದ ಸುಳ್ಳು ಸಾಧು, ಈ ಪುಸ್ತಕಗಳಲ್ಲಿ ಕೊಟ್ಟ ಯಾವ ಅನುಭಗಳಿರುತ್ತವೋ, ಮತ್ತು ಅದರ ಹೊರ್ತು ಸಾಧಕನಿಗೆ ಯಾವವು ಬರುತ್ತವೊ ಅವುಗಳ ಸ್ಪಷ್ಟೀಕರಣ ಮಾಡಲಿಕ್ಕೆ ಸಮರ್ಥನಾಗಲಿಕ್ಕಿಲ್ಲ; ಮತ್ತು ಅನುಭವಗಳ ವಿಷಯದ ಅವನ ಅಜ್ಞಾನವು ಆ ಸುಳ್ಳು ಸಾಧುವಿಗೆ ಬೈಲಿಗೆ ತರುವದು.

ಇದರ ಹೊರತು ಸುಳ್ಳು ಸಾಧುವಿನ ಮಠದೊಳಗಿನ ಸ್ತ್ರೀ-ಪುರುಷ ಭಕ್ತರ ಆಕ್ಷೇಪಾರ್ಹ ವರ್ತನವೂ ಕಾಣಬರುವಂತೆ ಇರುತ್ತದೆ. ಈ ಸುಳ್ಳು ಸಾಧುಗಳು ತಾವು ರಾಜಯೋಗಿ ಅನ್ನಿಸಿಕೊಂಡು ಬಹಳ ಆಸ್ತಿಗಳನ್ನು ಮಾಡುತ್ತಾರೆ, ಮತ್ತು ಆ ಸಂಬಂಧಿ ಒಮ್ಮೊಮ್ಮೆ ಕೋರ್ಟುಗಳಲ್ಲಿ ದಿವಾಣಿ ಫೌಜದಾರಿ ಖಟ್ಲೆಗಳೂ ಚಾಲೂ ಇರುತ್ತವೆ. ತುಕಾರಾಮ, ರಾಮದಾಸ, ಜ್ಞಾನೇಶ್ವರ ಇವರು ಎಂದಾದರೂ ಇಂಥ ಪ್ರಕಾರಗಳು ಮಾಡಿದ್ದರೇನು? ಇದರ ವಿರುದ್ಧ ಅವರು ದ್ರವ್ಯದಾರಾ ನರಕದ ಸಮಾನವೆಂತ ತಿಳಿಯುತ್ತಿದ್ದರು. ಇದರ ಮೇಲಿಂದ ಜನರು ಸಾಧುಗಳ ಚರಿತ್ರಗಳನ್ನು ಓದಬೇಕೆಂದು ನಾನು ಹೇಳುತ್ತೇನೆ. ಶಾಸ್ತ್ರಗಳಲ್ಲಿ ನಿಷ್ಣಾತರಾದ ಜನರಿಗೆ ಸಾಧುಚರಿತ್ರಗಳನ್ನು ಓದುವದರಿಂದ, ತಮಗೆ ನ್ಯೂನತೆ ಬರುವದು ಎಂತು ಒಂದುವೇಳೆ ತಿಳಿಯುಬಹುದು. ಆದರೆ ಒಬ್ಬ ವಯಸ್ಕ ಮನುಷ್ಯನು ಶಾಲೆಗೆ ಹೋಗುವ ಹುಡುಗನ ಪುಸ್ತಕವನ್ನು, ಅದರಲ್ಲಿ ಏನಾದರೂ ಹೊಸ ಸಂಗತಿ ಅಥವಾ ಹೊಸ ವಿಷಯ ಇದೆಯೋ ಅಂತ ನೋಡುವ ಇಚ್ಛೆಯಿಂದ ಅದನ್ನು ಕೈಯಲ್ಲಿ ತೆಕ್ಕೊಂಡರೆ ಅವನ ದೊಡ್ಡಿಸ್ತನಕ್ಕೆ ಅಥವಾ ಯೋಗ್ಯತೆಗೆ ನ್ಯೂನತೆ ಬಂದೀತೆಂದು ನನಗೆ ಅನಿಸುವದಿಲ್ಲ.

ನಾನು;— ನಾವು ಬಹಳಸಾರಿ ತಮಗೆ ರಾಜಯೋಗಿ ಅನ್ನಿಸಿಕೊಳ್ಳುವವರನ್ನು ನೋಡುತ್ತೇವೆ. ಈ ಸಂಬಂಧ ನನ್ನ ತಿಳುವಳಿಕೆ ಹೀಗೆ ಅದೆಲ್ಲ,

ರಾಜಯೋಗಿ ಅಂದರೆ ಅವನು ಅಂತರ್ನಿಷ್ಠನಿದ್ದು ಬಾಹ್ಯ ವ್ಯಾವಹಾರಿಕ ಕರ್ಮ ಮಾಡುತ್ತಿದ್ದರೆ ಅಥವಾ ಧ್ಯಾನಮಗ್ನ ಸ್ಥಿತಿಯಲ್ಲಿದ್ದರೆ, ಯಾವದಾದರೂ ಸ್ಥಿತಿಯಲ್ಲಿ ಅವನು ಆನಂದಮಯನಿರುವನು, ನಿಮ್ಮದು ಈ ಸಂಬಂಧ ಏನು ಮತವಿದೆ ಅದನ್ನು ಕೃಪೆಮಾಡಿ ಹೇಳಿರಿ.

ಮಹಾರಾಜ:–ನೀವು ಹೇಳಿದ್ದು ಪೂರ್ಣ ನಿಜವಾದ್ದು, ಆದರೆ ರಂಗನಾಥ ಸ್ವಾಮಿಯವರಂಥ ಕೆಲವು ಸಾಧುಗಳು ಬ್ರಹ್ಮನಿಷ್ಠರಿದ್ದರೂ, ಬಾಹ್ಯಾತ್ಕಾರದಲ್ಲಿ ಐಹಿಕ ವೈಭವದ ಉಪಭೋಗವನ್ನು ತಕ್ಕೊಳ್ಳುತ್ತಿದ್ದರೆಂಬಂತೆ ಕಾಣಿಸುತ್ತದೆ ಅವರು ರಾಜನಂತೆ ಇರುತ್ತಾರೆ. ಆದರೂ ಅವರ ಮನಸ್ಸು ಅಂತರದಲ್ಲಿ ಬ್ರಹ್ಮಾನಂದವನ್ನು ಭೋಗಿಸುತ್ತದೆ. ಪೂರ್ವಜನ್ಮದ ಕರ್ಮದ ಪರಿಪಾಕವೆಂತ ಅಥವಾ ಸುದೈವವೆಂತ, ಐಹಿಕ ವೈಭವವು ಅವರ ಇಚ್ಛೆ ಇಲ್ಲದೆಯೂ ಅವರ ಕಡೆ ಬರುತ್ತದೆ, ನಿಜವಾಗಿ ಆ ಸಂಬಂಧ ಅವರು ಉದಾಸೀನರಿರುತ್ತಾರೆ.

ನಾನು:— ಮಹಾರಾಜರೆ, ತಮ್ಮ ಸ್ಪಷ್ಟೀಕರಣದಿಂದ ನನಗೆ ಸಮಾಧಾನವಾಯಿತು, ಧ್ಯಾನಯೋಗದ ಅಭ್ಯಾಸದ ಸಂಬಂಧ ನನ್ನದೊಂದು ಪ್ರಶ್ನೆ ಇದೆ. ಯಾವ ಮನುಷ್ಯನು ತನ್ನ ಗುರುವಿನ ಅಥವಾ ದೇವತೆಯ ಮೂರ್ತಿಯನ್ನು ತನ್ನ ಮನಃಚಕ್ಷುವಿನ ಮುಂದೆ ತರುತ್ತಾನೊ, ಮತ್ತು ಅದರ ಮೇಲೆ ಏಕಾಗ್ರತೆಯನ್ನು ಮಾಡುವನೊ, ಅವನಿಗೆ ಯಾವಾಗಲೂ ಆ ಮೂರ್ತಿಯು ಕಣ್ಣು ಮುಚ್ಚಿದರೂ ಕಾಣಿಸೀತು; ಹಾಗೆಯೇ ನದಿಗಳು ಪರ್ವತಗಳು ಸಹಾ ಮನಃಚಕ್ಷುವಿನ ಮುಂದೆ ತರಬಹುದು, ಆದರೆ ಇಂಥ ಅಭ್ಯಾಸದಿಂದ ಯಾವ ಲಾಭ ಮಾಡಿಕೊಳ್ಳಲಿಕ್ಕೆ ಬಂದೀತು, ಇದನ್ನು ತಿಳಿಯುವದಕ್ಕೆ ನಾನು ಇಚ್ಛಿಸುತ್ತೇನೆ. ಧ್ಯಾನದ ಅಭ್ಯಾಸವನ್ನು ಹೇಳುವ ಪುಸ್ತಕದಲ್ಲಿ ಹೀಗೆ ಹೇಳಿದೆಯಲ್ಲ, ಅಭ್ಯಾಸ ಸಾಧಕನು ತನ್ನ ಮನಃಚಕ್ಷುವಿನ ಮುಂದೆ, ಶ್ರೀಕೃಷ್ಣನದು, ಓಂಕಾರದ್ದು ಅಥವಾ ಸಣ್ಣ ಬಿಂದುವಿನ ಆಕೃತಿ ತರಬೇಕು, ಮತ್ತು ಮನಸ್ಸಿನಿಂದ ಅದರ ಪೂಜೆಯನ್ನು ಮಾಡಬೇಕು, ಹೀಗಿದ್ದರೆ ಸದ್ಗುರುವಿನ ಅವಶ್ಯಕತೆ ಏನದೆ?

ಮಹಾರಾಜ:—ನೀವು ಹೇಳುವದು ಸತ್ಯವು. ಮಹಾನ್ ಸಾಧುಗಳು ಹೀಗೆ ಬರೆದಿಟ್ಟಿದ್ದಾರಲ್ಲ, ಆರಂಭದಲ್ಲಿ ಮನುಷ್ಯನು ದೇವತೆ, ಮೂರ್ತಿ ಮನ್ಹೈರೆ ಆಕೃತಿ ಮನಃಚಕ್ಷುವಿನ ಮುಂದೆ ತರುವ ಪ್ರಯತ್ನ ಮಾಡಬೇಕು, ಅಂದರೆ ತನ್ನ ಮುಂದೆ ಆ ಆಕೃತಿ ಇದೆ ಎಂದು ಕಲ್ಪಿಸಬೇಕು. ಆದರೆ ಈ ಸೂಚನೆಯು ಬರೆ ಹೊಸದಾಗಿ ಕಲಿಯುವವರಿಗಾಗಿ ಮಾತ್ರ ಅದೆ. ನಾನು ಇಲ್ಲಿತನಕ ನನ್ನ ಮಿತ್ರರಿಗೆ ಈ ವಿಷಯವನ್ನು ಸ್ಪಷ್ಟಮಾಡಿ ಹೇಳಿದ್ದೇನೆ. ಈ ಪ್ರಶ್ನೆಯ ಖರೆ ಉತ್ತರ ಹೀಗದೆಯಲ್ಲ, ಮನಃಕಲ್ಪಿತ ದೇವತಾ, ಮೂರ್ತಿ ನಾಶವಂತವಾಗಿವೆ. ಇದರೊಳಗೇನೂ ಸಂಶಯವಿಲ್ಲ. ಅವು ಕೆಲವು ಕಾಲದ ಮೇಲೆ ಇಲ್ಲದಂತಾಗುವವು.

ವವು. ಆದರೆ ಒಬ್ಬ ಮನುಷ್ಯನ ಅಂತರ್ದೃಷ್ಟಿಯು ಕೆಲವು ಕಾಲದ ಮೇಲೆ ತೆರೆದಿತ್ತೆಂದರೆ, ಅವನಿಗೆ ಅವೇ ಮೂರ್ತಿಗಳು ಪ್ರಕಾಶಮಯವಾಗಿ ಕಾಣುವವು. ಈ ಅಂತರ್ದೃಷ್ಟಿ ಪ್ರಾಪ್ತವಾಗಲಿಕ್ಕೆ ಸದ್ಗುರು ಬೇಕು. ಸದ್ಗುರುವು ಯಾವಾಗ್ಗೆ ತನ್ನ ಶಿಷ್ಯನ ಕಣ್ಣೊಳಗೆ ಗುರುಕೃಪಾಂಜನ ಹಚ್ಚುವನೊ ಆಗ್ಗೆ ಮಾತ್ರ ಅಂತರ್ದೃಷ್ಟಿ ಪ್ರಾಪ್ತಿಯಾಗುವದು. ಇವೆಲ್ಲ ನೋಟಗಳು ಅಂತರ್ದೃಷ್ಟಿಯಿಂದ ನೋಡಿದವಾದರೂ ಅವು ಕೇವಲ ಕಲ್ಪನೆಯ ಆಟವಾಗಿರುತ್ತದೆ. ಅವು ಯಾವಾಗ್ಗೆ ಕಾಣದಂತಾಗುವವು ಅವುಗಳ ಹಿಂದೆ ಬ್ರಹ್ಮದ ಪ್ರಕಾಶ ಉಳಿಯುತ್ತದೆ, ಮತ್ತು ಮುಮುಕ್ಷುವು ನಿರ್ವಿಕಲ್ಪ ಸಮಾಧಿಯಲ್ಲಿ ಪ್ರವೇಶ ಮಾಡುತ್ತಾನೆ. ಈ ಸ್ಥಿತಿಯಲ್ಲಿ ಎಲ್ಲ ಕಲ್ಪನೆಗಳು ಬಿಟ್ಟು ಹೋಗುವವು, ಮತ್ತು ಯಾವ ಸ್ಥಿತಿಯಲ್ಲಿ ಕಲ್ಪನೆಗಳು ಸಂಪೂರ್ಣ ಇಲ್ಲವಾಗುತ್ತವೊ ಆ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುವದೇ ಧ್ಯಾನಯೋಗದ ಮುಖ್ಯ ಉದ್ದೇಶವು. ಎಲ್ಲ ಕಲ್ಪನೆಗಳು ಯಾವಾಗ್ಗೆ ನಿಂತು ಹೋಗುತ್ತವೆ ಆಗ ಬ್ರಹ್ಮದ ಅನುಭವವು ಬರುತ್ತದೆ. ಅನಂತರ ಪ್ರಯತ್ನಗಳೇನೂ ಮಾಡುವದು ಅವಶ್ಯವಿಲ್ಲ, ಯಾಕಂದರೆ ಈ ಸ್ಥಿತಿಯು ತನ್ನಷ್ಟಕ್ಕೆ ತಾನೇ ಪ್ರಾಪ್ತಿಯಾಗುವದು.

ಮುಂದಿನ ಉದಾಹರಣೆಗಳ ಮೇಲಿಂದ ನಾನು ಏನು ಹೇಳುತ್ತೇನೆಂಬದರ ಸ್ಪಷ್ಟವಾದ ಅರ್ಥ ನಿಮಗೆ ತಿಳಿದೀತ. ಎಲ್ಲಿ ತನಕ ಕಸ್ತೂರಿ ಮೃಗಕ್ಕೆ ತನ್ನ ನಾಭಿಯಲ್ಲಿಯೇ ಕಸ್ತೂರಿಯದೆ ಅಂತ ತಿಳಿಯುವದಿಲ್ಲವೊ, ಅಲ್ಲಿ ತನಕ ಆ ವಾಸವನ್ನು ಹುಡುಕಲಿಕ್ಕೆ ಇತ್ತ ಅತ್ತ ಓಡುತ್ತಿರುತ್ತದೆ. ನಿನ್ನ ಸ್ವಂತ ನಾಭಿಕಮಲದಲ್ಲಿಯೇ ಆ ವಾಸದ ಉಗಮವವೆ, ಎಂದು ಹೇಳುವ ಗುರುವು ಆ ಮೃಗಕ್ಕೆ ಶಿಕ್ಕಿದ್ದಾದರೆ, ಆ ಮೃಗವು ಆಮೇಲೆ ಯಾಕೆ ಅತ್ತಿತ್ತ ಓಡಲಿಕ್ಕೆ ಹೋದೀತು? ಹೋಗಲಿಕ್ಕಿಲ್ಲ. ಆದೇ ಪ್ರಕಾರ ಸಾಧುವು ಮೊದಲು ಸಾಧಕನಿಗೆ ಈ ಸಂಗತಿಗಳ ಕಲ್ಪನೆ ಮಾಡಲಿಕ್ಕೆ ಹೇಳುತ್ತಾನೆ. ಆಮೇಲೆ ಅಂತರ್ದೃಷ್ಟಿ ಕೊಡುತ್ತಾನೆ, ಮತ್ತು ಯಾವಾಗ್ಗೆ ಆ ಅಂತರ್ದೃಷ್ಟಿಯ ನೋಟಗಳು ಇಲ್ಲದಂತಾಗುವವೊ ಆಗ ಸಾಧಕನಿಗೆ ನಾನು ಸ್ವತಃ ಬ್ರಹ್ಮನಿದ್ದೇನೆ ಈ ಅನುಭವವು ಬರುತ್ತದೆ, ಮತ್ತು ಸ್ವಾತ್ಮಸುಖದಲ್ಲಿ ತನ್ಮಯನಾಗಿ ಹೋಗುತ್ತಾನೆ. ಅಜ್ಞಾನಿ ಮಾನವಿ ಆತ್ಮನು (ಜೀವಾತ್ಮನು) ಜನ್ಮಕ್ಕೆ ಬರುತ್ತಾನೆ, ಮತ್ತು ತಾನು ಯಾರೆಂತ ಪ್ರಶ್ನೆ ಕೇಳುತ್ತಾನೆ. ಆದರೆ ಈ ಮಾನವಿ ಆತ್ಮನು ಮೂಲದಿಂದಲೆ ಪೂರ್ಣಜ್ಞಾನಿ ಇದ್ದು, ಪರಮಾತ್ಮನಿಗೆ ಏಕರೂಪನಾಗಿರುವನು. ಸದ್ಗುರುವು 'ನಾನು ಯಾರು ಇದ್ದೇನೆ' ಈ ಪ್ರಶ್ನೆ ಕೇಳುವ ಜೀವಾತ್ಮನಿಗೆ 'ಸೋಹಂ'ದ (ಅವನು ನೀನು ಇದ್ದಿ) ಮಂತ್ರವನ್ನು ಹೇಳುತ್ತಾನೆ, ಮತ್ತು ಹೀಗೆ ಹೇಳಿ ಉತ್ತರಕೊಡುತ್ತಾನೆ. ಮತ್ತು ಜೀವಾತ್ಮನಿಗೆ 'ಅವನೇ ನಾನಿದ್ದೇನೆ' (ಪರಮಾತ್ಮನೇ ನಾನಿದ್ದೇನೆ) ಎಂದು ನಿಶ್ಚಯಾತ್ಮಕ ಬುದ್ಧಿ ಮಾಡಿ ಕೊಟ್ಟ ಮೇಲೆ, ಸದ್ಗುರುವು ಆತನನ್ನು ಮೂಲ ಸಚ್ಚಿದಾನಂದ ರೂಪದಲ್ಲಿ ವೈದು ಕೂಡ್ರಿಸುತ್ತಾನೆ.

ಅಲ್ಲಿವರೆಗೆ ಈ ಬಾಹ್ಯದರ್ಶನದ ಉಪಯೋಗವಾಗದು. ಈ ಎಲ್ಲ ನೋಡತಕ್ಕಂಥವುಗಳು ಮೃಗಜಲದಂತೆ ಭ್ರಾಮಕ ಇರುತ್ತವೆ. ಸದ್ಗುರು ಕಡೆಯಿಂದ ಅನುಭವ ಶಿಕ್ಕಿದ ವಿನಹಾ ಈ ಎಲ್ಲ ನೋಟಗಳು ನಿರುಪಯೋಗಿ ಅವೆ. ಶ್ರೀ ಪಾಂಡುರಂಗ ಇವರು ನಾಮದೇವರ ಕೂಡ ಪ್ರತ್ಯಕ್ಷ ಮಾತಾಡುತ್ತಿದ್ದರು, ಮತ್ತು ಅವನ ಕೈಯಿಂದ ಕೊಟ್ಟಿದ್ದು ತಿನ್ನುತ್ತಿದ್ದರು. ಆದರೆ ವಿಸೋಬಾ ಖೇಚರನಿಂದ ಯಾವಾಗ ನಾಮದೇವರಿಗೆ ಅನುಗ್ರಹ ಶಿಕ್ಕಿತು, ಆಗಲೇ ಅವರಿಗೆ ನಿಜವಾದ ಆನಂದ ಪ್ರಾಪ್ತವಾಯಿತು. ಅಲ್ಲಿತನಕ ಪಾಂಡುರಂಗನ ಕೂಡ ಭಾಷಣ ಮಾಡಿದ್ದರ ಉಪಯೋಗವು ಬಹಳ ಕಡಿಮೆ. ಅದೇ ಪ್ರಕಾರ ಯಾರಿಗಾದರೂ ಶ್ರೀಕೃಷ್ಣ ಅಥವಾ ಮತ್ಯಾವದಾದರೂ ದೇವತೆಯ ಪ್ರತ್ಯಕ್ಷ ದರ್ಶನವಾದರೂ ಆ ದರ್ಶನದ್ದು ಬ್ರಹ್ಮಾನಂದ ಪ್ರಾಪ್ತಿಗೆ ವಿಶೇಷ ಉಪಯೋಗವಾಗಲಾರದು.

ನಾನು :— ಶಬ್ದ ಬ್ರಹ್ಮವೆಂದರೇನು ?

ಮಹಾರಾಜ :– ಶಬ್ದಕ್ಕೆ ಬ್ರಹ್ಮವೆನ್ನಲಿಕ್ಕೆ ಕಾರಣವೇನಂದರೆ ಶಬ್ದವು ಬ್ರಹ್ಮದ ಕಡೆಗೆ ಒಯ್ಯುತ್ತದೆ, ಅಂತ ಆ ಶಬ್ದಕ್ಕೆ ಬ್ರಹ್ಮವೆಂತ ತಿಳಿಯುವದು ಹಿತವಾದದ್ದು. ಇದು ಒಂದು ಪ್ರಕಾರದ ಭಾವನೆ ಅಥವಾ ಮನೋವೃತ್ತಿ ಇರುವದು. ಶ್ರೀ ವಿದ್ಯಾರಣ್ಯ ಸ್ವಾಮಿಗಳು ಸಹಾ ಹೀಗೆಯೇ ಅನ್ನುತ್ತಾರೆ. “ಓಂಕಾರದ ಸರ್ವವ್ಯಾಪಕತ್ವವನ್ನು ವರ್ಣನೆ ಮಾಡಿದೆ, ಅದು ಅದರ ಧ್ಯಾನಕ್ಕೆ ಉಪಯೋಗವಾಗಬೇಕೆಂದು ಮಾಡಿರುತ್ತದೆ. ಕೇವಲ ಅದು ನಿಜವಾದ್ದು ಎಂಬದರ ಸಲುವಾಗಿ ಅಲ್ಲ. ಆದರೆ ಬ್ರಹ್ಮದ್ದು ಸಹಾ ಸರ್ವವ್ಯಾಪಿಯೆಂಬದಾಗಿ ವರ್ಣನೆ ಮಾಡಿದೆ. ಅದರೆದು ಎರಡು ಕಾರಣಗಳಿವೆ. ಒಂದು, ಅದು ಹಾಗೆಯೇ ಸತ್ಯವಾಗಿ ಸರ್ವವ್ಯಾಪಿ ಇದೆ ಅಂತ, ಮತ್ತೊಂದು ಅದರಿಂದ ಧ್ಯಾನಕ್ಕೆ ಉಪಯೋಗವಾಗಬೇಕೆಂಬದು,” ಶ್ರೀ ಶಂಕರಾಚಾರ್ಯರು ಸಹಾ ತಮ್ಮ ಶಂಕರ ಭಾಷ್ಯದಲ್ಲಿ, ಈ ವಿಷಯದ ಸ್ಪಷ್ಟೀಕರಣ ಮಾಡಿದ್ದಾರೆ, ಉಚ್ಚರಿಸಿದ ಅಥವಾ ಓದಿದ ಅಕ್ಷರಗಳು ಆಗಲೇ ನಷ್ಟವಾಗುತ್ತವೆ, ಆದರೆ ಬುದ್ಧಿಯೊಳಗೆ ಇರುವ ಶಕ್ತಿಯು ಯಾವದು ಕೇವು ಮಟ್ಟಿಗೆ ಅಜ್ಞಾತವದೆ, ಅದಕ್ಕೆ ‘ಸ್ಫೋಟ’ ಎಂದು ಹೇಳುತ್ತಾರೆ. ಆ ಸ್ಫೋಟವು ಅಕ್ಷರಗಳನ್ನು ಏಕತ್ರಮಾಡಿ, ಆ ಏಕೀಕರಣದಿಂದ ಉತ್ಪನ್ನವಾದ ಅರ್ಥವನ್ನು ಬುದ್ಧಿ ಕಡೆಗೆ ಮುಟ್ಟಿಸುತ್ತದೆ. ಭೂಮಿತಿಯೊಳಗೆ ಬಿಂದು ಇದು ಹ್ಯಾಗೆ ಗೃಹಿತವಾದ ಸಂಗತಿ ಇರುತ್ತದೊ, ಹಾಗೆಯೇ ಇದು. ಈ ಸ್ಫೋಟವು ಪ್ರತ್ಯಕ್ಷ ಅಕ್ಷರಗಳನ್ನು ಸ್ಪಷ್ಟಮಾಡುತ್ತದೆ. ಮತ್ತು ಶಬ್ದದ ಕಡೆ ಅಕ್ಷರವು ಕಿವಿಯಲ್ಲಿ ಬಿದ್ದಕೂಡಲೆ ಆ ಶಬ್ದದ ಭಾವವನ್ನು ಪ್ರಕಾಶಿಸುತ್ತದೆ. ಈ ಸ್ಫೋಟದ್ದು ಅರ್ವಾಚೀನ ಶಾಸ್ತ್ರದೊಳಗಿನ ಧ್ವನಿಗೆ ಏನೂ ಸಂಬಂಧವಿಲ್ಲ, ಮತ್ತು ಅರ್ಥ ಹ್ಯಾಗೆ ತಿಳಿಯಲ್ಪಡುವದೆಂಬದು ಸ್ಪಷ್ಟೀಕರಣ ಮಾಡಲಿಕ್ಕೆ ಈ ಶಬ್ದವು ಮನ್ನಿಸಿರುತ್ತದೆ. ಪೈಠಣಕರ, ‘ಸೋಹಂ’ದ ಜಪ ನಡೆಯಲಿ, ಅದು ನಿಮಗೆ ಸಾಕಷ್ಟು ಅದೆ.

ನಾನು :— ಮಹಾರಾಜರೇ, ನಾನು ಸತ್, ಚಿತ್ ಮತ್ತು ಆನಂದ ಇದರ ಸಂಬಂಧಿ ಓದಿದ್ದೇನೆ; ಆದರೆ ಈ ಮೂರು ಶಬ್ದಗಳ ಸ್ಪಷ್ಟಾರ್ಥವನ್ನು ನಿಮ್ಮಂಥ ಸಾಧುಗಳ ಮುಖದಿಂದ ಶ್ರವಣ ಮಾಡಬೇಕೆಂದು ನನ್ನ ಪ್ರಬಲ ಇಚ್ಛೆಯಿದೆ.

ಮಹಾರಾಜ:—ಸತ್ ಅಂದರೆ, ಯಾವದು ಎಂದೂ ನಾಶ ಹೊಂದದು, ಮತ್ತು ಯಾವದರ ಅಸ್ತಿತ್ವ ನಿರಂತರವಿದೆ, ಅದು, ಮತ್ಯಾವದು ಅಲ್ಲದೆ ಬ್ರಹ್ಮವೇ. ಚಿತ್ ಅಂದರೆ ಯಾವದು ಜಾಗೃತ ಸ್ವಪ್ನ ವ ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಸ್ವತಃ ಸಿದ್ಧ ಪ್ರಕಾಶಿತವಾಗಿರುವದೋ ಅದು. ಮತ್ತು ಆನಂದವೆಂದರೆ ಸುಖ, ಯಾವದಾದರೊಂದು ವಸ್ತು ತನಗೆ ಪ್ರಿಯವಾಗಿರುವದೊ, ಅದು ( ಆ ಪ್ರೀತಿಯು) ಆ ವಸ್ತು ಸಲುವಾಗಿ ಇಲ್ಲದೆ ತನ್ನ ಆತ್ಮನಿಗೆ ಪ್ರಿಯವಾಗಿದೆ; ಮತ್ತು ಆ ಆತ್ಮನೇ ಎಲ್ಲವರ ಪ್ರೀತಿಗೆ ವಿಷಯನಾಗಿದ್ದಾನೆ. ಆದ್ದರಿಂದ ಆತನ ಅಸ್ತಿತ್ವವೆ ನಮಗೆ ಪ್ರಿಯವಾಗಿದೆ. ಇದರಿಂದ ಆತ್ಮನೇ ಆನಂದನಿದ್ದಾನೆ. ನೀನು ಆತ್ಮನಿದ್ದಿ ಮತ್ತು ಆತ್ಮನೇ ಬ್ರಹ್ಮವು. ಈ ತತ್ವವು ವೇದಗಳ ಆಧಾರದಿಂದ ವಾದ ವಿವಾದ ಮಾಡಿ ಮೊದಲು ಉತ್ತಮ ರೀತಿಯಿಂದ ತಿಳಿಸಿಕೊಳ್ಳಬೇಕು; ಆ ಮೇಲೆ ಆತ್ಮಾನುಭವದಿಂದ ನಿಶ್ಚಯಿಸಿಕೊಳ್ಳಬೇಕು.

ಕೆಲವು ವೇದಾಂತಿಗಳು ' ನಾನು ' ( ಆತ್ಮಾ ) ನಮ್ಮಲ್ಲಿ ಮನೋವೃತ್ತಿ ಉತ್ಪನ್ನವಾಗುತ್ತವೆ. ಆ ಕಾಲದಲ್ಲಿ ಮತ್ತು ಅವು ಇಲ್ಲದಾಗ್ಯೂ ಹಾಜರ ಇರುತ್ತಾನೆ ಅಂತ ಹೇಳುತ್ತಾರೆ. ಅಂದರೆ ' ನಾನು ' ಈ ಮೂಲತತ್ವವು ಮನೋವೃತ್ತಿಯಿಂದ ಪೂರಾ ಸ್ವತಂತ್ರವಾದ ಅಸ್ತಿತ್ವದಿಂದ ಇರುತ್ತದೆ. ಅದ್ದರಿಂದ ಈ ' ನಾನು ' ನಿಜವಾಗಿ ಬದ್ಧನಲ್ಲ, ಮುಕ್ತನಿದ್ದಾನೆ. ಜೈನರು ಮತ್ತು ಸಾಂಖ್ಯರು ಇವರು ಈಶ್ವರನ ಅಸ್ತಿತ್ವವನ್ನು ಮನ್ನಿಸುವದಿಲ್ಲ. ಆದರೂ ಅವರು ಈ ತತ್ವಕ್ಕೆ ಮಾನ್ಯಮಾಡುತ್ತಾರೆ. ಈ ಎರಡು ಪ್ರಕಾರದ ತತ್ವವೇತ್ತರಿಗೆ, ನನ್ನ ಅಂಬೋಣ ಹೀಗದಲ್ಲ ಅವರ ಈ ಮತವು ಅವರ ಸ್ವತದ್ದು ಅಂತ ಅನಿಸಿದರೆ, ಅದರ ಪ್ರಸಿದ್ಧಿವ ಪುರಸ್ಕಾರ ಅವರೇ ಮಾಡಬೇಕು. ಆದರೆ ಖರೇ ವೇದಾಂತದ ತತ್ವವು ಹೀಗದೆಯಲ್ಲ, ಎಲ್ಲ ಮಾನಸಿಕ ಕಲ್ಪನೆಗಳು ಮಂದ ಅಥವಾ ಗಾಢ ನಿದ್ರೆಯ ಕಾಲಕ್ಕೆ ಮಾತ್ರ ಆತ್ಮನಲ್ಲಿ ವಿಲೀನವಾಗುತ್ತವೆ. ಕಲ್ಪನೆಗಳು ವಿಲೀನವಾಗುವ ಈ ಪ್ರಕಾರವು ಕೇವಲ ಸ್ವತಃದ ನಿರೋಧದಿಂದ ಘಟಿಸಲ್ಪಟ್ಟದ್ದು ಅಲ್ಲ, ಮತ್ತು ಮನೋವೃತ್ತಿ ಚಾಲು ಇರುವಾಗ ಈ ' ನಾನು ' ಸ್ವತಂತ್ರನಲ್ಲ, ಸರ್ವ ವೃತ್ತಿಗಳ ಭಾವಕಾಲದಲ್ಲಿ ವ ಅಭಾವಕಾಲದಲ್ಲಿ ' ನಾನು ' ಸಾಮಾನ್ಯನಿದ್ದೇನೆ, ಇಷ್ಟರಿಂದ ವೃತ್ತಿಗೆ ಆತ್ಮರೇಷತಾ ಹ್ಯಾಗೆ ಬಂದೀತು? ಇದರ ವಿರುದ್ಧ ವಿವೇಕಕಾಲದಲ್ಲಿ ಇದ್ದಂತ ಭಾಸವೇ ದೃಢವಾದೀತು. ಆದರೆ ಜಾಗೃತಿ ಸ್ವಪ್ನ ವ ಸುಷುಪ್ತಿ ಇವುಗಳಲ್ಲಿ ವ ಇವುಗಳ ಅತ್ತಕಡೆ ಸಾಕ್ಷಿರೂಪದಿಂದಿರುವ ಈ ಸಚ್ಚಿದಾನಂದ

ಆತ್ಮಸ್ವರೂಪ ಅಥವಾ ಆತ್ಮ ತತ್ವ ಯೋಗಮಾರ್ಗದಿಂದ ಗ್ರಹಿಸಲಿಕ್ಕೆ ಬರು
ವಂತೆ ಅದೆ. ಶೇಷ ಮಾರ್ಗದ ಅಂದರೆ ಮಧ್ಯಸಂಧಿಯ ಮಾರ್ಗದ ಅಭ್ಯಾಸ
ಮಾಡುತ್ತಿರುವಾಗ ಸಾಧಕನು ಜಾಗೃತ, ಸ್ವಪ್ನ ವ ಸುಷುಪ್ತಿ ಈ ಮೂರೂ ಅವ
ಸ್ಥೆಗಳ ದೃಷ್ಟಾ ಆಗಬಲ್ಲನು. ಯಾಕಂದೆ ಜಾಗೃತವಸ್ಥೆಯಲ್ಲಿ ಎಲ್ಲ ವ್ಯಾಪಾರಗಳು
ಆತ್ಮಾ ದೃಷ್ಟಾ ಈ ರೂಪದಿಂದ ನೋಡುತ್ತಾನೆ. ಜಾಗೃತಿಯೊಳಗಣ ದಶಇಂದ್ರಿ
ಯಗಳ ವ್ಯಾಪಾರವು ನಿಂತುಹೋದಾಗ, ಮನೋರಾಜ್ಯವು ಶುರುವಾಗುತ್ತದೆ,
ಎಂಬದು ನಮಗೆ ತಿಳಿಯುತ್ತದೆ. ಈ ಜಾಗೃತಿಯೊಳಗಿನ ಸ್ವಪ್ನಾವಸ್ಥೆ ವ
ಮನೋರಾಜ್ಯ ನಿಂತಿರುವಾಗ ಯಾವ ಮನಸ್ಸಿನ ಸ್ಥಿತಿ ಇರುವದೋ, ಅದೇ
ಜಾಗೃತಿಯೊಳಗಿನ ಸುಷುಪ್ತಾವಸ್ಥೆಯು, ಆದ್ದರಿಂದ ಹ್ಯಾಗೆ ಜಾಗೃತಿಯೊಳಗೆ
ಮೂರು ಅವಸ್ಥೆಗಳ ಅನುಭವವು ಬರುವದೊ, ಹಾಗೆಯೇ ಅದರಲ್ಲಿ ಆತ್ಮಾನುಭವ
( ತುರ್ಯಾವಸ್ಥೆ ) ಬರಲಿಕ್ಕೆ ಯೋಗ ಮಾರ್ಗದ ಅಭ್ಯಾಸ ಮಾಡಬೇಕು,
ಅಂದರೆ ಆಗಲೇ ಆತ್ಮನನ್ನು ತಿಳಿಯಲಿಕ್ಕೆ ಬಂದೀತು. ಆಚಾರ್ಯರು ' ಲಘು
ವಾಕ್ಯವೃತ್ತಿ ' ಇದು ಒಂದು ಶೇಷ ಮಾರ್ಗದ್ದೇ ಶಾಸ್ತ್ರವನ್ನು ತಯಾರಿಸಿದ್ದಾರೆ,
ಅದರ ಅಭ್ಯಾಸದ ಮೂಲತತ್ತ್ವವೆಂದರೆ ಒಂದು ವಿಚಾರ ಮುಗಿದು ಮತ್ತೊಂದು
ವಿಚಾರ ( ಕಲ್ಪನೆ ) ಉತ್ಪನ್ನವಾಗುವ ಮಧ್ಯಸಂಧಿ ಯಾವದಿರುತ್ತದೊ ಅದನ್ನು
ಆಕಲನ ಮಾಡಿ ತದ್ರೂಪವಾಗುವದೆ ಇರುವದು. ಆದರೆ ಈ ಮಧ್ಯಸಂಧಿಯಲ್ಲಿ
' ನನಗೆ ಮಧ್ಯಸಂಧಿ ಸಿಕ್ಕಿತೆಂದು ' ತಿಳಿದರೆ ಉಪಯೋಗವಿಲ್ಲ. ಹಾಗೆ ಭಾವನಾ
ಉತ್ಪನ್ನವಾಯಿತೆಂದರೆ ದ್ವೈತ ಉತ್ಪನ್ನವಾಗುತ್ತದೆ. ವೇದಾಂತದ ತತ್ತ್ವವು
ಇಷ್ಟು ಸೂಕ್ಷ್ಮವಾದ್ದರಿಂದ, ಅದು ಹೇಳಿ ತೋರಿಸುವದು ಅಲ್ಲ. ಸದ್ಗುರು ಕೃಪೆ
ಯಿಂದ ಆತ್ಮಾನುಭವವಾಯಿತೆಂದರೆ ಮಾತ್ರ ಸಾಧಕನಿಗೆ ಅದು ಸ್ವಾತ್ಮಾನುಭವ
ದಿಂದ ದೃಢಮಾಡಿಕೊಳ್ಳಲಿಕ್ಕೆ ಬಂದೀತು.

ಈಗ ಇದರಲ್ಲಿ ತಿಳಿಯಲಾಗದಂಥ ಸೂಕ್ಷ್ಮತತ್ತ್ವವನ್ನು ಮಾತಾಡುವ
ಭಾಷೆಯಲ್ಲಿ ಹೇಳಿದೆಂದರೆ, ಮೇಲಿನ ವಾಕ್‌ಪಟುಗಳಾದ ವೇದಾಂತಿ ಮತ್ತು
ಜೈನ ಮೊದಲಾದವರು ಯಾವ ಈ ಮತದ ಪುರಸ್ಕರ್ತರಿದ್ದಾರೊ, ಅವರ ಮತವು
ಆಭಾಸಾತ್ಮಕ ಅಂದರೆ ಸುಳ್ಳು ಎಂಬದು ಹ್ಯಾಗೆಂತ ತಿಳಿದು ಬಂದೀತು.
" ನಾನು " ( ಆತ್ಮಾ ) ವೃತ್ತಿಗಳು ಮನಸ್ಸಿನಲ್ಲಿ ಉತ್ಪನ್ನವಾಗುವ ಕಾಲದಲ್ಲಿ
ಮತ್ತು ಇಲ್ಲದಿರುವ ಕಾಲದಲ್ಲಿ ಹಾಜರ ಇರುತ್ತಾನೆ; ಇದು ಖರೆಯಲ್ಲ. ಆ ಕಾಲ
ದಲ್ಲಿ ( ವೃತ್ತಿಗಳು ಮನಸ್ಸಿನಲ್ಲಿರದಿರುವಾಗ ) ಅವನು ಸತ್‌ರೂಪದಿಂದ ಮಾತ್ರ
ಇರುತ್ತಾನೆ, ' ನಾನು ' ಈ ರೂಪದಿಂದಿರುವದಿಲ್ಲ. ಸತ್‌ರೂಪದಿಂದ ಅವನು
ಇದ್ದರೆ ಅವನನ್ನು ತಿಳಿಯಲಿಕ್ಕೆ ಸಾಧ್ಯವಿಲ್ಲ. ಆದರೆ ಮೇಲೆ ಹೇಳಿದ ವೇದಾಂತಿ
ಗಳು ( ವಾಕ್‌ಪಟುಗಳು ) ಅವನು ಹಾಜರ ಇರುತ್ತಾನೆಂತ ತಿಳಿದು, ಅದೇ
ನಾನಿದ್ದೇನೆ ಎಂದು ಹೇಳುತ್ತಾರೆ, ಇಂದ್ರಿಯಗಳ ಕೆಲಸಗಳನ್ನು ಇಂದ್ರಿಯಗಳು

ಮಾಡುತ್ತವೆಂತಲೂ ತಾವು ಅವುಗಳ ಕಾರ್ಯಗಳಿಗೆ ಅಲಿಪ್ತರಿದ್ದೇವೆಂತಲೂ ಸಾಧು ಅನಿಸಿಕೊಂಡು ಮೆರೆಯುತ್ತಾರೆ. ಹಾಗೆಯೇ ಜೈನ ಮೊದಲಾದ ಆ ಮತದ ಪುರಸ್ಕರ್ತರು, ತಮ್ಮ ಎಲ್ಲ ವ್ಯಾಪಾರ ವ ವಿಚಾರಗಳನ್ನು ನಿಂದಿರಿಸಿ ಏನು ಅವಶಿಷ್ಟವಾಗಿರುವದೊ ಅದೇ ತಾನು ವ ಅದೇ ಮೋಕ್ಷ ಹೀಗಂದು ಸರ್ವ ಸ್ವದ ತ್ಯಾಗಮಾಡಿ ಶೂನ್ಯದೊಳಗೆ ಹೋಗಿ ಬೀಳುತ್ತಾರೆ. ಅವರಿಗೆ ಶ್ರೀಮತ್ ಶಂಕರಾಚಾರ್ಯರು ಹೀಗೆ ಉತ್ತರ ಕೊಡುತ್ತಾರಲ್ಲ, ಮುಂದೆ ಏನೂ ಇಲ್ಲವೆಂತ ಶೂನ್ಯದಲ್ಲಿ ಹೋಗಿ ಬೀಳಬೇಡ, ಆದರೆ ಮುಂದೆ ಏನೂ ಇಲ್ಲವೆಂತ ಯಾವನು ತಿಳಿಯುತ್ತಾನೋ ಅವನೇ ನೀನು ಇದ್ದಿ ಎಂದು ಮಾತಾಡುವ ಭಾಷೆಯಲ್ಲಿ ತಿಳಕೊ, ಮತ್ತು ಎಲ್ಲದರ ದೃಷ್ಟನು ನಾನಿದ್ದೇನೆ ಎಂದು ಗೊತ್ತುಮಾಡಿಕೊ, ಮತ್ತು ಗುರುಕೃಪೆಯಿಂದ ಇದರ ಅನುಭವವು ಶಿಕ್ಕಿತೆಂದರೆ, ಎಲ್ಲ ಮತ ಮತಾಂತರ ವ ವಾದವಿವಾದಗಳು ನಿಂತುಹೋಗುವವು.

ನಾನು :— ಭೂತಗಳು ಇದ್ದಾವೇನು? ಅವು ಮನುಷ್ಯರಿಗೆ ತ್ರಾಸ ಕೊಡುತ್ತಾವೇನು? ಅಥವಾ ಅವು ಮನುಷ್ಯರಿಗೆ ಮೈಯೊಳಗೆ ಬರುತ್ತವೇನು?

ಮಹಾರಾಜ :— ಭೂತಗಳು ಕೆಲವು ದೇವತೆಗಳ ಅನುಚರರಾಗಿರುತ್ತವೆ. ದೇವತೆಗಳು ಮನುಷ್ಯರಿಗೆ ಮೈಮೇಲೆ ಬರುವದಿಲ್ಲ, ಆದರೆ ಭೂತಗಳು ಮೈಮೇಲೆ ಬರುತ್ತವೆ. ಈ ಭೂತಗಳ ಹದಿನೆಂಟು ಪ್ರಕಾರಗಳಿವೆ. ಅವು ಯಾವ ದೇವತೆಗಳ ಅನುಚರರಿರುತ್ತವೊ ಅವರ ಹೆಸರಿನಿಂದ ಅವು ಪ್ರಸಿದ್ಧವಾಗಿರುತ್ತದೆ. ಅವುಗಳ ವ್ಯಾಪಾರವು ಹೆಚ್ಚಾಗಿ ರಾತ್ರಿಯಲ್ಲಿರುತ್ತದೆ. ಅವು ಭಯಂಕರವಿದ್ದು ಮಾಂಸ ತಿನ್ನುತ್ತವೆ ಮತ್ತು ರಕ್ತ ಕುಡಿಯುತ್ತವೆ. ಯಾವದಾದರೂ ಮಾನಸಿಕ ದೋಷ ಮತ್ತು ಪಾಪವು ಸಂಭವಿಸಿತೆಂದರೆ ಅವು ಮನುಷ್ಯನಿಗೆ ಮೈಮೇಲೆ ಬರುತ್ತವೆ. ಅವು ಭೀಷ್ಮನಂಥ ಶ್ರೇಷ್ಠ ಮನುಷ್ಯನ ಮೈಯೊಳಗೆ ಬಂದವೆಂದು ಮಹಾಭಾರತದಲ್ಲಿ ವರ್ಣಿಸಿದೆ, ಯಾಕಂದರೆ ದ್ರೌಪದಿ ವಸ್ತ್ರಹರಣದ ಕಾಲದಲ್ಲಿ ಅವರು ನೋಡಿದರು, ಆದರೆ ಅವರಲ್ಲಿ ನಿವಾರಣ ಮಾಡುವ ಶಕ್ತಿ ಇದ್ದಾಗ್ಯೂ ಪ್ರತಿಬಂಧ ಮಾಡಲಿಕ್ಕೆ ಅವರು ಹೋಗಲಿಲ್ಲ. ರೋಗಗ್ರಸ್ತನಿಗೆ ಭೂತಬಾಧೆಯಾಗುತ್ತದೆ. ಒಬ್ಬ ಮನುಷ್ಯನು ತನ್ನ ಪಾಪದ ದುಷ್ಪರಿಣಾಮವನ್ನು ಭೋಗಿಸುತ್ತಿರುವಾಗಲೆ ಅವನಲ್ಲಿ ಭೂತ ಸಂಚಾರವಾಗುತ್ತದೆಂಬದು ಸತ್ಯವಲ್ಲ. ಆದರೆ ಯಾವದೊಂದು ಅಪವಿತ್ರ ಕೆಲಸ ಮಾಡುವ ವೇಳೆಗೆ ಅವು ಅವನ ದೇಹದಲ್ಲಿ ಪ್ರವೇಶ ಮಾಡುತ್ತವೆ. ಈ ಭೂತಗಳು ಯಾವಾಗ ಮತ್ತು ಎಲ್ಲಿ ಮನುಷ್ಯನ ಮೈಯಲ್ಲಿ ಶೇರುತ್ತವೆಂಬ ವಿಷಯದಲ್ಲಿ ವಾಗ್ಭಟರು ಮುಂದೆ ಕೊಟ್ಟಂತೆ ಹೇಳಿದ್ದಾರೆ.

(೧) ಮನುಷ್ಯನು ಒಬ್ಬನೇ ಇರುವಾಗ, (೨) ಅವನು ಹಾಳುಬಿದ್ದ ಮನೆಯೊಳಗೆ ಇರುವಾಗ, (೩) ಎರಡು ರಸ್ತೆಗಳು ಕೂಡುವಲ್ಲಿ ಅವನು

ಹೋಗುತ್ತಿರುವಾಗ, (೪) ಸಂಜೆ ದೀಪ ಹಚ್ಚುವ ಹೊತ್ತಿಗೆ, (೫) ಮನುಷ್ಯನ ಶರೀರವು ಅಮಂಗಲ ಇರುವಾಗ, (೬) ಹುಣ್ಣಿವೆ, ಅಮಾವಾಸ್ಯೆ ಇತ್ಯಾದಿ ದಿವಸಗಳಲ್ಲಿ.

ಈಗ ನಾನು ಭೂತಗಳು ಮನುಷ್ಯ ಶರೀರಗಳಲ್ಲಿ ಹ್ಯಾಗೆ ಶೇರುತ್ತವೆಂಬದು ಹೇಳುತ್ತೇನೆ. ದೇವ ಅಥವಾ ಅಸುರ ಭೂತಗಳು ಮಾನವೀ ಶರೀರಗಳಲ್ಲಿ ಬರೆ ಅವನ್ನು ನೋಡಿದೆ ಮಾತ್ರದಿಂದ ಅಥವಾ ಮನುಷ್ಯರ ಮನಸ್ಸಿನಲ್ಲಿ ವಿಕಾರಗಳನ್ನು ಉಂಟು ಮಾಡಿ, ಆ ದ್ವಾರದಿಂದ ಒಳಗೆ ಪ್ರವೇಶಿಸುತ್ತವೆ. ಗಂಧರ್ವ ಭೂತವು ಮಾನವೀ ಶರೀರವನ್ನು ಸ್ಪರ್ಶಮಾಡಿ ಒಳಗೆ ಸೇರುತ್ತದೆ. ಯಕ್ಷ ಎಂಬ ಭೂತವು ಒಂದು ಪ್ರಕಾರದ ಸುವಾಸ ಉತ್ಪನ್ನ ಮಾಡುತ್ತದೆ. ಯಾವಾಗ ಆ ಸುವಾಸವನ್ನು ಮನುಷ್ಯನು ಶ್ವಾಸದ ಕೂಡ ಒಳಗೆ ತಕ್ಕೊಳ್ಳುತ್ತಾನೆ, ಆ ಸುವಾಸದ ಕೂಡ ಅದು ಒಳಗೆ ಸೇರುತ್ತದೆ. ರಾಕ್ಷಸ ಭೂತವು ಮನುಷ್ಯನ ಹೆಗಲ ಮೇಲೆ ಕೂಡ್ರುತ್ತದೆ. ಯಾವಾಗ್ಗೆ ಮನುಷ್ಯನಿಗೆ ಶರೀರದಲ್ಲಿ ಜಡತ್ವ ಕಾಣಿಸುವದೊ ಆಗ ಅದು ಶರೀರದಲ್ಲಿ ಪ್ರವೇಶಿಸುತ್ತದೆ. ಪಿಶಾಚವು ಮನುಷ್ಯನನ್ನು ಅಪ್ಪಿಕೊಳ್ಳುತ್ತದೆ, ಆಗ ಅವನು ನಿಶ್ಚೇಷ್ಟನಾಗುವನು, ಅದೇ ಸಮಯದಲ್ಲಿ ಅದು ಒಳಗೆ ಶೇರುವದು. ಬೇರೆ ಬೇರೆ ಭೂತಗಳು ಮನುಷ್ಯ ಶರೀರದಲ್ಲಿ ಹೊಕ್ಕಿದಾಗ್ಗೆ ಬೇರೆ ಬೇರೆ ವಿಕಾರಗಳನ್ನು ಉತ್ಪನ್ನಮಾಡುತ್ತವೆ. ದೇವಭೂತ ಹತ್ತಿದ ಮನುಷ್ಯನು ಸದ್ಗುಣದಿಂದ ನಡಿಯುತ್ತಾನೆ. ಅವನು ಒಮ್ಮೊಮ್ಮೆ ಸಂಸ್ಕೃತ ಮಾತನಾಡುವನು. ಗಂಧರ್ವಭೂತ ಪ್ರವೇಶವಾದ ಮನುಷ್ಯನು ಗಾಯನ ಪ್ರಿಯನಾಗುವನು, ಮತ್ತು ಪರಸ್ತ್ರೀಸಂಗದ ಇಚ್ಛೆಮಾಡುತ್ತಾನೆ. ಶ್ರೀಗುಲಾಬರಾವ ಮಹಾರಾಜರು ಈ ವಿಷಯದ ಮೇಲೆ ಬಹಳ ಬರೆದಿರುತ್ತಾರೆ. ನಾನು ನಿಮಗೆ ಈ ವಿಷಯದ ಸ್ವಲ್ಪ ಕಲ್ಪನೆಯನ್ನು ಕೊಟ್ಟಿರುತ್ತೇನೆ.

ನಾನು :— ಆಧ್ಯಾತ್ಮಿಕ ಪ್ರಗತಿಗೆ ಮಾನಸಿಕ ಏಕಾಗ್ರತೆಯು ಅತ್ಯಂತ ಜರೂರಿ ಅದೆ ಅಂತ ನನಗೆ ಗೊತ್ತದೆ. ಸಾಧಕನು ಏಕಾಗ್ರತೆಯನ್ನು ಸಾಧಿಸಲಿಕ್ಕೆ ಬೇಕಾದ ಪರಿಪಾಠವನ್ನು ಹ್ಯಾಗೆ ಮಾಡಿಕೊಳ್ಳಬೇಕೆಂದು ಕೃಪೆಮಾಡಿ ನನಗೆ ಹೇಳಿರಿ.

ಮಹಾರಾಜ :— ಧ್ಯಾನ ವಿಷಯದನ್ನು ಬಿಟ್ಟು ಬೇರೆ ವಿಷಯಗಳಕಡೆ ಓಡುವದು ಇದು ಮನಸ್ಸಿನ ಸ್ವಾಭಾವಿಕ ಧರ್ಮವಾಗಿದ್ದರೂ, ಅದನ್ನು ಹಿಂದಕ್ಕೆ ಎಳೆದು ಪುನಹಾ ಧ್ಯಾನ ವಿಷಯಕ್ಕೆ ತಂದು ಹಚ್ಚುವದು ಒಂದೇ ಉಪಾಯವಾಗಿದೆ. ಗಿಡದ ಟೊಂಗೆಯನ್ನು ನಾವು ಡೊಂಕು ಮಾಡಲಿಕ್ಕೆ ಬಗ್ಗಿಸಿದರೆ, ಕೈ ಬಿಟ್ಟಕೂಡಲೆ ಅದು ಮೊದಲು ಇದ್ದಂತೆ ನೆಟ್ಟಗಾಗುವದು, ಆದರೆ ನಾವು ಪುನಃ ಪುನಃ ಒಂದೇ ಸಮನೆ ಹಾಗೆ ಮಾಡುತ್ತಾ ಇದ್ದರೆ, ಮತ್ತು ಆ ಭಾಗವನ್ನು

ಹಗ್ಗದಿಂದ ಜಗ್ಗಿಸಿ ಕಟ್ಟಿದರೆ ಅದಕ್ಕೆ ಸ್ಥಿರವಾಗಿ ಬಗ್ಗಿಸಿಡುವ ಯತ್ನಗಳು ಸಿದ್ಧವಾಗುವವು. ಹಾಗೆಯೇ ಒಬ್ಬಾನೊಬ್ಬ ಮನುಷ್ಯನು ಜಪ ಮಾಡುತ್ತಿರುವಾಗ, ಅವನಿಗೆ ತನ್ನ ಮನಸ್ಸು ನ್ಯಾಯಕಚೇರಿಯ ಕೆಲಸದಲ್ಲಿ ಅಥವಾ ಎಲ್ಲ್ಯಾದರೂ ತಿರುಗಾಡುತ್ತಿದ್ದದ್ದು ಕಂಡು ಬಂದರೆ, ಅದನ್ನು ಬಲಾತ್ಕಾರದಿಂದ ಹಿಂದೆ ತಂದು ಜಪಕ್ಕೆ ಹಚ್ಚುವದು ಒಂದೇ ಉಪಾಯವು. ಕೆಲವು ದಿವಸಗಳತನಕ ಈ ಅಭ್ಯಾಸ ಮಾಡಬೇಕು. ಆದರೆ ಮನಸ್ಸನ್ನು ವಶಪಡಿಸುವದು ಬರೇ ಅಭ್ಯಾಸದಿಂದಲೆ ಸಾಧಿಸುವದಿಲ್ಲ. ಅದಕ್ಕೆ ವೈರಾಗ್ಯದ್ದೂ ಜೋಡಿ ಬೇಕು. ಯಾವ ವಿಷಯದಲ್ಲಿ ಮನಸ್ಸಿನ ಹೆಚ್ಚಿಗೆ ಪ್ರೀತಿ ಇರುವದೋ ಅದರ ಕಡೆ ಮನಸ್ಸು ಓಡುವದು ಅದಕ್ಕೆ ಸ್ವಾಭಾವಿಕವದೆ. ಅಭ್ಯಾಸದಿಂದ ಒಂದುವೇಳೆ ಮನಸ್ಸಿನ ಚಂಚಲತೆಯನ್ನು ಮುರಿಯಲಿಕ್ಕೆ ಬಂದೀತು; ಆದರೆ ಆದರ ವಿಷಯದ ಕಡೆಗೆ ಆಕರ್ಷಿಸಲ್ಪಡುವಂಥ ಗುಣವು ಅಭ್ಯಾಸದಿಂದಲೇ ಹೋಗಲಾಗದು. ಇದರ ಮೇಲಿಂದ ಅಮೇರಿಕೆಯಲ್ಲಿ 'ಮೆಸ್ಮೆರಿಝುಮ್' (ಮೋಹನಿ ವಿದ್ಯೆ) ದ ವಿಶಿಷ್ಟ ಪ್ರಕಾರದ ಪ್ರಯೋಗ ಮಾಡುವ ಜನರಿಗೆ ಶಿಕ್ಷೆಗೆ ಗುರಿ ಮಾಡುವಂಥ ಕಾಯಿದೆಯು ಮಾಡಬೇಕಾಯಿತು. ಮೆಸ್ಮೆರಿಝುಮ್ ಇದು ಮಾನಸಿಕ ಏಕಾಗ್ರತೆಯ ಮೇಲೆಯೆ ಆಧರಿಸಿದೆ. ಪ್ರಾಣಾಯಾಮವು ಏಕಾಗ್ರತೆಗೆ ಸಹಾಯವಾಗುತ್ತದೆ, ಆದರೆ ಅದಕ್ಕೆ ವಿಶೇಷ ಮಹತ್ವಕೊಡುವ ಕಾರಣವಿಲ್ಲ. ಪ್ರಾಣಾಯಾಮವಾದರೂ ಮನಸ್ಸಿನ ಚಂಚಲತೆಯನ್ನು ಹೋಗಲಾಡಿಸಕ್ಕೆ ಉಪಯೋಗವದೆ. ಆದು ಮನಸ್ಸಿನ ವಿಷಯದ ಕಡೆ ಆಕರ್ಷಣವನ್ನು ಕಡಿಮೆ ಮಾಡಲಾರದು. "ಎಷ್ಟರವರೆಗೆ ಶ್ವಾಸೋಶ್ವಾಸಗಳು ಚಾಲು ಅಥವಾ ಅಸ್ಥಿರ ಇರುತ್ತವೆ ಅಲ್ಲಿವರೆಗೆ ಮನವೂ ಅಸ್ಥಿರ ಇರುವದೇ" ಈ ವಚನವು ಪೂರಾ ಸತ್ಯವಲ್ಲ. ಇದರ ವಿರುದ್ಧ ಸ್ಥಿತಿಯು ಸತ್ಯವಾಗಿದೆ. ಯಾವಾಗ್ಗೆ ಮನವು ಅಸ್ಥಿರವಾಗುವದೋ ಆಗ್ಗೆ ಶ್ವಾಸವೂ ಅಸ್ಥಿರವಾಗುವದು. ದುಃಖ ಅಥವಾ ಕ್ರೋಧ ಬಂತೆಂದರೆ ಶ್ವಾಸೋಶ್ವಾಸಗಳು ಬೇಗ ಬೇಗ ನಡೆಯುತ್ತವೆ. ಅದ್ದರಿಂದ ಶ್ವಾಸವು ವಶಮಾಡಿಕೊಂಡರೆ ಮನಸ್ಸಿನ ನಿಗ್ರಹ ಮಾಡಲಿಕ್ಕೆ ಬಂದೀತು ಎಂದು ಅಪೇಕ್ಷೆ ಮಾಡುವದು ಯುಕ್ತವಲ್ಲ. ಮನೋಜಯ ಮತ್ತು ಪ್ರಾಣಜಯ ಒಟ್ಟಿಗೆ ನಡೆಯುತ್ತಿರಬೇಕು. ಭಗವಂತನು ಗೀತೆಯಲ್ಲಿ "ಚಂಚಲವ ಅಸ್ಥಿರವಾದ ಮನಸ್ಸು ಎತ್ತೆತ್ತ ಓಡ್ಯಾಡುತ್ತದೆ; ಅಲ್ಲಿಂದ ಅದನ್ನು ನಿಗ್ರಹ ಮಾಡಿ ಆತ್ಮವಶಮಾಡಬೇಕು," ಎಂದು ಹೇಳಿದ್ದಾನೆ (ಗೀತಾ ೬-೨೬)

ನಾನು:— ನಿಮ್ಮ ಕಡೆಗೆ ನಾನು ಬಂದದ್ದು ಕೇವಲ ಅಂಧವಿಶ್ವಾಸದಿಂದಲ್ಲ. ನಿಮ್ಮಲ್ಲಿ ಯಾವ ಗುಪ್ತವಾದ ಅದ್ಭುತ ಶಕ್ತಿಗಳಿವೆ, ಅವುಗಳ ಸಂಬಂಧ ನನಗೆ ಖಾತ್ರಿ ಆದ್ದರಿಂದ ನಾನು ಬಂದಿದ್ದೇನೆ. ಮಹಾರಾಜರೇ, ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಶಾಸ್ತ್ರದಲ್ಲಿ ಎಲ್ಲ ಜಾತಿಗಳಲ್ಲಿ ಬ್ರಾಹ್ಮಣ ಶ್ರೇಷ್ಠ ಎಂದು ಬರೆದದೆ. ಹಾಗಿದ್ದರೆ ಮನುಷ್ಯನ ಗುರು ಬ್ರಾಹ್ಮಣನೇ ಇರಬೇಕೇನು? ಈ ಸಂಬಂಧ ನಿಮ್ಮ ಮತವೇನು? ನೀವು ಆತ್ಮಸಾಕ್ಷಾತ್ಕಾರಿ ಸಾಧು ಇದ್ದೀರಿ.

ಆದ್ದರಿಂದ ನನ್ನಂಥ ಅಜ್ಞಾನಿ ಮನುಷ್ಯನ ಮನಸ್ಸಿನಲ್ಲಿ ಈ ವಿಷಯದಲ್ಲಿ ನಿಶ್ಚಯವಾಗುವಂತೆ ತಮ್ಮ ಅಧಿಕಾರಯುಕ್ತ ವಾಣಿಯಿಂದ ನೀವೇ ಹೇಳಬಲ್ಲಿರಿ.

ಮಹಾರಾಜ:— ನನ್ನಂಥ ಅಶಿಕ್ಷಿತ ಮನುಷ್ಯ ಈ ವಿಷಯದಲ್ಲಿ ಅಧಿಕಾರಯುಕ್ತ ವಾಣಿಯಿಂದ ಮತಕೊಡಲಿಕ್ಕೆ ಹ್ಯಾಗೆ ಬಲ್ಲಿದನಾಗುವನು ? ಇದು ನಿಃಸಂಶಯವಾಗಿ ಖರೆ ಅದೆಯಲ್ಲ, ಯಾವ ಶಬ್ದಗಳು ನನ್ನ ಮುಖದಿಂದ ಹೊರಬೀಳುತ್ತವೊ, ಅವು ಸತ್ಯವಾಗಿ ನನ್ನವಲ್ಲ, ನನ್ನ ಸದ್ಗುರುವೇ ತನ್ನ ಕಡೆಯಿಂದ ಮಾತಾಡುವವನಾಗಿ ಮಾಡುತ್ತಾನೆ. ಮತ್ತು ನನ್ನ ಮುಖದ್ವಾರಾ ಅವರೇ ಮಾತಾಡುತ್ತಾರೆ ಅಂತ ನನಗನಿಸುತ್ತದೆ.

ಈಗ ನಾನು ನಿಮ್ಮ ಪ್ರಶ್ನೆಯ ಉತ್ತರಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ರಾಮೇಶ್ವರ ಭಟಜಿಯವರು ಗುರು ಮಾಡಿಕೊಳ್ಳುವಾಗ್ಗೆ ಶ್ರೀ ರಾಮದಾಸರು ಅವರಿದ್ದಲ್ಲಿಂದ ದೂರ ಇದ್ದಿಲ್ಲ. ಹೀಗಿರುವಾಗ ಅವರು ತುಕಾರಾಮರಿಗೆ ಯಾಕೆ ಗುರು ಮಾಡಿಕೊಂಡರು ? ಅನೇಕ ಸನಾತನೀ ಬ್ರಾಹ್ಮಣರು ಆಚಾರಧರ್ಮದ ಅನುಯಾಯಿಗಳಿರುವಾಗ್ಗೆ ಅವರು ದಾದು ಪಿಂಜಾರಿ ಇವನನ್ನು ಯಾಕೆ ಗುರುಮಾಡಿಕೊಂಡರು ? ತೀರಾ ಇತ್ತಲಾಗಿನ ಉದಾಹರಣೆ ನೋಡಿದರೆ ಕಾಕಾ ಪುರಾಣಿಕರದು ಅದೆ. ಅವರು ಸಾತ್ವಿಕ ವೃತ್ತಿಯವರಿದ್ದರು. ಅವರು ಪೀರವಾಡಿ-ಸಾತಾರಾ ಇಲ್ಲಿ ಸಂಭಾಜಿ ಮಹಾರಾಜರೆಂತ ಮರಾಠಾ ಜಾತಿಯ ಒಬ್ಬ ಸಾಧು ಇದ್ದನು, ಅವನನ್ನು ಗುರುಮಾಡಿಕೊಂಡರು. ಹೀಗೆ ಅನೇಕ ಉದಾಹರಣೆಗಳನ್ನು ಕೊಡುವದರಲ್ಲಿ ಬಂದೀತು. ಒಮ್ಮೆ ಒಬ್ಬ ಮನುಷ್ಯನು ಆತ್ಮಸಾಕ್ಷಾತ್ಕಾರದ ಪರಾಕೋಟಿಗೆ ಹೋಗಿ ಮುಟ್ಟಿದನಂದರೆ, ಅವನು ಜಾತಿ ವಗೈರೆ ಎಲ್ಲ ಬಂಧನಗಳಿಂದ ಬಿಡುಗಡೆ ಹೊಂದುತ್ತಾನೆ, ಮತ್ತು ಸರ್ವ ಜಾತಿ ವ ಪಂಥ ಇವುಗಳ ಆಚೆಕಡೆ ಹೋಗುತ್ತಾನೆ. ನನ್ನ ಅಭಿಪ್ರಾಯವೇನಂದರೆ ಇಂಥವರಿಗೆ ಗುರುಮಾಡಿಕೊಳ್ಳಲಿಕ್ಕೆ ಏನೂ ಅಡ್ಡಿ ಇಲ್ಲ. ಇನ್ನು ನಾನು ನಿಮಗೆ ಹೀಗೆ ಹೇಳುವೆನಲ್ಲ, ಅಧ್ಯಾತ್ಮ ಮಾರ್ಗದಲ್ಲಿ ಅಧಿಕ ಸುಧಾರಣೆ ಆಗಬೇಕಾದರೆ, ಮುಂದೆ ಹೇಳುವ ಸಂಗತಿಗಳನ್ನು ವಿಷಸಮಾನವೆಂದು ತಿಳಿದು ವರ್ಜಮಾಡಬೇಕು.

(೧) ಆತ್ಮಸಾಕ್ಷಾತ್ಕಾರಿ ಸಾಧುಗಳ ನಿಂದೆ ಮಾಡುವದು.

(೨) ಸದ್ಗುರು ಶಿಕ್ಕಿದ ಮೇಲೆ ಸದ್ಗುರು ( ತನ್ನ ಆತ್ಮಾ ) ವಿನಹಾ ಇತರ ದೇವತೆಗಳನ್ನು ಅನ್ಯದೇವತೆಗಳೆಂದು ಭಕ್ತಿ ಮಾಡುವದು.

(೩) ತನ್ನ ಗುರುಗಳ ದೋಷ ನೋಡುವದು.

(೪) ವೇದ, ಕುರಾಣ ಅಥವಾ ಬಾಯಬಲ್ ಇಂಥ ಪವಿತ್ರ ಗ್ರಂಥ ಗಳಿಗೆ ದೋಷ ಕೊಡುವದು.

(೫) ನಾಮಜಪ ವ (ಈಶ್ವರ ಭಜನ) ಮಾಡುವಂಥಾದ್ದು ವ್ಯರ್ಥ ಅಥವಾ ಮೋಸದ್ದು ಎಂತ ತಿಳಿಯುವದು.

(೬) ಈಶ್ವರನ ಹೆಸರಿನ ಜಪ ಮಾಡುವದೆಂದರೆ ಆತನಿಗೆ ಹೊಗಳಿಸ ಲಿಕ್ಕೆಂಬಂತೆ ತಿಳಕೊಳ್ಳುವದು.

(೭) ಈಶ್ವರನ ಹೆಸರಿನಿಂದ ಎಲ್ಲ ಪಾಪಗಳು ತೊಳೆಯಲ್ಪಡುವವು ಎಂಬ ಈ ಆಧಾರದ ಮೇಲೆ ತನ್ನ ವಾಸನೆ ತೃಪ್ತವಾಡಲಿಕ್ಕೆ ಪಾಪ ಕರ್ಮಗಳನ್ನು ಮಾಡುವದು.

(೮) ಐಹಿಕ ವಿಷಯಗಳ ಲಾಭವಾಗಬೇಕೆಂತ ಇಚ್ಛೆ ಇದ್ದು ಈಶ್ವರ ಭಜನ ಮಾಡುವದು.

(೯) ಒಬ್ಬ ಮನುಷ್ಯನು ಐಹಿಕ ವಿಷಯಗಳಲ್ಲಿ ಮಗ್ನನಾಗಿದ್ದಾನೆ, ಅಂಥವನಿಗೆ ಈಶ್ವರ ನಾಮ ತಕ್ಕೊಳ್ಳಲಿಕ್ಕೆ ಬಲತ್ಕಾರ ಮಾಡು ವದು.

(೧೦) ಈಶ್ವರನ ಹೆಸರು ತಕ್ಕೊಳ್ಳುವ ಮನುಷ್ಯನ ಪರಮಭಕ್ತಿ ಕಡೆಗೆ ದುರ್ಲಕ್ಷವಾಡಿ ಅವನನ್ನು ಹುಚ್ಚ ಅಥವಾ ಮೂರ್ಖ ನೆಂತ ತಿಳಿಯುವದು, ಮತ್ತು ತಾನು ಜಾಣನೆನಿಸುವದು.

ಇವೆಲ್ಲ ಮರ್ಯಾದೆಗಳನ್ನು ಯಾರಾದರೂ ಪಾಲಿಸಿದನಂದರೆ, ಅವರಿಗೆ ಆತ್ಮಾನಂದದ ಕಡೇ ಅನುಭವವು ನಿಶ್ಚಯವಾಗಿ ದೊರಕುವದು, ಮತ್ತು ಪರಮೇ ಶ್ವರನ ಕೃಪೆಯಿಂದ ಅವನು ಈ ಸಂಸಾರ ಸಾಗರವನ್ನು ದಾಟಿ ಹೋಗುವನು. ಈ ಶಬ್ದಗಳು ನನ್ನ ವ್ಯಕ್ತಿ ವಿಷಯಕ ಜೀವನವು ಅಲ್ಲ, ಅವು ನನ್ನ ಆತ್ಮನವು ಇದ್ದಾವೆ.

ನಾನು :— ಸಾಧು, ಪಂಡಿತ ವ ಶಾಸ್ತ್ರಪ್ರವೀಣ ಜನರು ಕನಕ ವ ಕಾಂತಾ ಇವು ಆಧ್ಯಾತ್ಮಿಕ ಪ್ರಗತಿಯ ಮಾರ್ಗದಲ್ಲಿ ದೊಡ್ಡ ಅಡ್ಡಿಗಳಾಗಿದ್ದು ಸಾಧಕನ ನಾಶಕ್ಕೆ ಕಾರಣೀಭೂತವಾಗುತ್ತವೆಂತ ಹೀಗೆ ಹೇಳುತ್ತಾರೆ. ನನ್ನ ದಾದಕೂ ಹೀಗೆಯೇ ಅಭಿಪ್ರಾಯವದೆ. ಆದರೂ ಈ ಸಂಬಂಧ ನಿಮ್ಮ ವಿಚಾ ರಗಳನ್ನು ಕೇಳುವದು ನನಗೆ ಬಹಳ ಇಚ್ಛೆ ಇದೆ.

ಮಹಾರಾಜ :— ಇಲ್ಲ. ಅವು ಅಡ್ಡಿಗಳಲ್ಲ. ಇದರ ಬದಲಿಗೆ ಅವು ಸಾಧಕನಿಗೆ ಸಹಾಯ ಮಾಡುವವು ಆಗಿರುತ್ತವೆ. ಆದರೂ ಈ ವಿಷಯಗಳ

ನೀವು ಹ್ಯಾಗೆ ಉಪಯೋಗ ಮಾಡುವಿರಿ, ಮತ್ತು ಅವುಗಳ ಕಡೆಗೆ ಯಾವ ದೃಷ್ಟಿಯಿಂದ ನೋಡುವಿರಿ ಎಂಬದರ ಮೇಲೆ ಈ ಸಂಗತಿಯು ಆಧರಿಸಿರುತ್ತದೆ. ಪ್ರತಿ ಒಬ್ಬ ಮನುಷ್ಯನಿಗೆ ವಿಚಾರ ವ ವಿಕಾರಗಳು ಇರುತ್ತವೆ. ಮನುಷ್ಯನಲ್ಲಿ ವಿಚಾರದ ಹೆಚ್ಚಿನ ಶಕ್ತಿಯಾದರೆ, ಈ ವಿಷಯುಗಳು (ಕನಕ ವ ಕಾಂತಾ) ಚಲೋ ಉಪಯೋಗ ಉಳ್ಳವುಗಳಾಗುವವು. ಒಂದುವೇಳೆ ವಿಕಾರದ್ದು ಅಂದರೆ ಅವಿಚಾರದ್ದು ಶಕ್ತಿಯಾದರೆ ಇವುಗಳು ಅಂಥ ಮನುಷ್ಯನ ನಾಶಕ್ಕೆ ಕಾರಣವಾಗುವವು. ಸಾಧುಗಳ ಮಾತಿನ ನಿಜವಾದ ಅರ್ಥವು, ಮನುಷ್ಯನು ಸಾಧು ಸ್ಥಿತಿಗೆ ಪ್ರಾಪ್ತನಾದ ವಿನಹಾ ಅಥವಾ ಸಾಧುಗಳೇ ಆ ಮಾತಿನ ಅರ್ಥವನ್ನು ಸ್ಪಷ್ಟವಾಡಿ ಹೇಳಿದ ವಿನಹಾ ತಿಳಿಯಲಾರದು. ನಿಜವಾದ ಅರ್ಥವು ನನಗೆ ತಿಳಿಯುವದೆಂತ ನನಗೆ ಅಭಿಮಾನವಿಲ್ಲದಿದ್ದರೂ, ನಾನು ಏನು ಹೇಳುವದದೆಯೋ ಅದನ್ನು ನನ್ನ ಅಂತರಾತ್ಮಾ ನನಗೆ ಹ್ಯಾಗೆ ಸೂಚಿಸ್ಯಾನು ಹಾಗೆ ನಾನು ಹೇಳುವೆನು; ಮತ್ತು ಸಾಧುಗಳ ಅಭಿಪ್ರಾಯವು ಹಾಗೆಯೇ ಇರಬಹುದು. ಸಾಧಕನು ತನ್ನ ಸ್ವಂತ ಪತ್ನಿ ವಿನಹಾ ಇತರ ಸ್ತ್ರೀಯರನ್ನು ತಾಯಿಯಂತೆ ತಿಳಿದು, ಧ್ಯಾನಯೋಗದ ಅಭ್ಯಾಸಮಾಡಿ ಅವನಿಗೆ ಅಂತರ್ದೃಷ್ಟಿ ಶಿಕ್ಕಿದ್ದಾದರೆ, ಅವನು ನಿಜವಾದ ಜ್ಞಾನ ದೃಷ್ಟಿಯನ್ನು ಹೊಂದುವನು ಎಂಬದು ನನಗೆ ನಿಶ್ಚಯ ಕಾಣಿಸುತ್ತದೆ. ಸರ್ವ ಸ್ತ್ರೀಯರು ಅವನ ಸ್ಥೂಲ ದೃಷ್ಟಿಗೆ ಸಹಾ, ದೇವತೆಗಳಿದ್ದಾರೊ ಎಂಬಂತೆ ಅವನು ನೋಡುವನು. ಆದರೂ ಈ ವೃತ್ತಿಯು ಧ್ಯಾನಯೋಗದ ದೃಢಾಭ್ಯಾಸದಿಂದ ಪ್ರಾಪ್ತವಾಗುವ ಆತ್ಮಸಾಕ್ಷಾತ್ಕಾರದಿಂದಲೆ ಹೊಂದುವದು ಶಕ್ಯವದೆ. ಯಾವ ಮನಸ್ಸಿಗೆ ಈ ಸ್ಥಿತಿಯು ಪ್ರಾಪ್ತವಾಗುವದೊ ಅದೇ ವಿಚಾರಿ ಮನಸ್ಸೆಂತ ತಿಳಿಯತಕ್ಕದ್ದು ಹಾಗೆಯೇ ಸಂಪತ್ತಿಯು ಇತರರ ಕಲ್ಯಾಣಕ್ಕೋಸ್ಕರ ಉಪಯೋಗ ಮಾಡಿದ್ದಾದರೆ ಸಾಧಕನಿಗೆ ನಿಶ್ಚಯವಾಗಿ ಹಿತಪ್ರದವಾದೀತು. ದುಃಖ ಮತ್ತು ಆಪತ್ತಿನಲ್ಲಿ ಬಿದ್ದ ಜನರ ದುಃಖ ಕಡಿಮೆ ಮಾಡುವ ಕೆಲಸಕ್ಕೆ ಸಂಪತ್ತಿಯನ್ನು ಪ್ರಯೋಗ ಮಾಡಿದ್ದಾದರೆ, ಆತ್ಮನಿಗೆ ನಿಜವಾಗಿ ಅದು ಆನಂದದಾಯಕವಾದೀತು. ಹೀಗೆ ವಿಚಾರ ಮಾಡಿರಿ. ಅಗ್ನಿಯ ಉಪಯೋಗ ಒಳ್ಳೇರೀತಿಯಿಂದ ಮಾಡಿದರೆ, ಅದು ಪಾಕಾದಿಕ್ರಿಯುಗಳನ್ನು ಮಾಡಲಿಕ್ಕೆ ಉತ್ತಮವಾಗುವದು; ಆದರ ಬದಲಿಗೆ ಆದೇ ಅಗ್ನಿಯನ್ನು ಇತರರ ಮನೆಯ ಮೇಲೆ ಇಟ್ಟಿದ್ದಾದರೆ, ಮನೆಸುಟ್ಟು ಹೋದೀತು. ಅದರ ಪರಿಣಾಮ ನಾಶ ವ ದುಃಖ, ಇದು ನಿಶ್ಚಯವಾದದ್ದ. ಇದರ ಮೇಲಿಂದ ಕನಕ ವ ಕಾಂತಾ ಇವು ಮೂಲತಃ ಕೆಟ್ಟವಲ್ಲ. ಆದರೆ ಅವುಗಳ ಉಪಯೋಗ ಹ್ಯಾಗೆ ಮಾಡಬೇಕೆಂಬದು ಮನುಷ್ಯನ ಸ್ವಭಾವ ವ ಕರ್ತೃತ್ವಶಕ್ತಿ ಇವುಗಳ ಮೇಲೆ ಅವಲಂಬಿಸಿರುತ್ತದೆ. ಬ್ರಹ್ಮಚರ್ಯ್ಯ ಪಾಲಿಸಲಿಕ್ಕೆ ತಾನು ಸಮರ್ಥನಲ್ಲವಾದರೆ ಸಾಧಕನು ಲಗ್ನಮಾಡಿಕೊಳ್ಳಬೇಕು, ಅಥವಾ ವೇಶ್ಯಾಸ್ತ್ರೀಯ ಕಡೆಗೆ ಹೋಗಿ ತನ್ನ ವಾಸನೆಯನ್ನು ಪೂರ್ಣಮಾಡಿಕೊಳ್ಳಬೇಕು ಹೀಗಾದರೂ ಹೇಳಬಹುದು. ಆದರೆ ಅವನು ಪರಸ್ತ್ರೀವಿಷಯದಲ್ಲಿ

ದುಷ್ಟವಾಸನೆಯನ್ನು ಎಂದೂ ಮನದಲ್ಲಿ ಬರಗೊಡಬಾರದು. ಅವರು ತನ್ನ ತಾಯಿ, ಅಕ್ಕಂದಿರು ಎಂಬ ಭಾವದಿಂದಲೇ ಅವರ ಕಡೆ ನೋಡಬೇಕು.

ಸಾನು :— ಪೂರ್ವಜನ್ಮದ ಫಲಭೋಕ್ತೃತ್ವದೆಶೆಯಿಂದ ಯಾವನಾದರೊ ಸಾಧಕನ ಕೈಯಿಂದ ಈ ಜನ್ಮದಲ್ಲಿ ಪಾಪಕರ್ಮ ಘಟಿಸಿತೆಂದರೆ, ಈ ಸ್ಥಿತಿಯಲ್ಲಿ ಅದರ ಪರಿಣಾಮವೇನಾದೀತು ?

ಮಹಾರಾಜ :— ಒಬ್ಬ ಸಾಧಕನ ಕಡೆಯಿಂದ ಒಂದು ಪಾಪಕರ್ಮವು ಸಂಭವಿಸಿತೆಂದರೆ, ಪೂರ್ವಜನ್ಮ ಕರ್ಮಭೋಕ್ತೃತ್ವ ಅಂದರೆ ಪ್ರಾರಬ್ಧ ಯಾ ಸಂಚಿತ ಇದ್ದೀತು ಅಂತ ಹೇಳಲಿಕ್ಕೆ ಬಂದೀತು. ಅವನು ಇಂಥಾದ್ದೆ ಪಾಪ ಕರ್ಮವನ್ನು ಪುನಃ ಪುನಃ ಮಾಡುತ್ತ ಇದ್ದನಂದರೆ ಮತ್ತು ಇದು ಪ್ರಾರಬ್ಧ ಭೋಗ ಅದೆ ಹೀಗಂದು ಅಥವಾ ಏನಾದರೂ ಕಾರಣ ಹೇಳಿ ಅದನ್ನು ಸಾರಿಸಿ, ಅದರಿಂದ ಪರಾವೃತ್ತನಾಗನು ಆದರೆ, ಅವನು ನೀಚ ಮನುಷ್ಯನೆಂದು ತಿಳಿಯತಕ್ಕದ್ದು. ಈ ಸಂಬಂಧ ನಾವು ಒಂದು ಮನೆತನದ ಉದಾಹರಣೆಯನ್ನು ತಕ್ಕೊಳ್ಳೋಣ. ಹೀಗೆ ತಿಳಿಯಿರಿ, ಒಂದು ಕೆಂಪಗೆ ಸುಡುವ ಕೆಂಡವು ಬಿದ್ದದೆ. ನಾವು ಅದನ್ನು ನೋಡುತ್ತೇವೆ, ಮತ್ತು ಅದರ ಮೇಲೆ ಕಾಲು ಕೊಡಬೇಡಂತ ನಮ್ಮ ಮಿತ್ರನೂ ಸಾರಿ ಹೇಳುತ್ತಿದ್ದಾನೆ. ಹೀಗಿರುತ್ತ ನಾವು ಗರ್ವದಿಂದ ಅದರ ಮೇಲೆ ಲೆಕ್ಕಿಸದೆ ಕಾಲು ಇಟ್ಟರೆ, ಅದರ ದುಃಖವನ್ನು ಭೋಗಿಸಲಿಕ್ಕೇಬೇಕು. ಆದರೆ ನಿಮ್ಮ ಮಿತ್ರನು ಪುನಹ ನಿಮಗೆ ಹೇಳಿದರೆ ನೀವು ಎಂದಾದರೂ ಉರಿಯುವ ಕೆಂಡದ ಮೇಲೆ ಕಾಲುಕೊಟ್ಟೀರೇನು ? ಇಲ್ಲವೇ ಇಲ್ಲ, ಇದರ ಅರ್ಥ ಇಷ್ಟೇ ಅಲ್ಲ ಮನುಷ್ಯನಿಗೆ ಯಾವಾಗ್ಗೆ ಪೂರ್ಣ ಪಶ್ಚಾತ್ತಾಪವಾಗುತ್ತದೆ, ಆಮೇಲೆ ಅವನು ಎಂದೂ ಪಾಪಕರ್ಮವನ್ನು ಮಾಡಲಿಕ್ಕಿಲ್ಲ; ಮತ್ತು ಪಾಪದ ಜವಾಬದಾರಿಯನ್ನು ಸಂಚಿತ ಮತ್ತು ಪ್ರಾರಬ್ಧ ಇವುಗಳಿಗೆ ಕೊಟ್ಟು ಅದರ ಸಮರ್ಥನ ಮಾಡುವದಕ್ಕಾಗಿ ಶಾಸ್ತ್ರಾಧಾರವನ್ನು ಕೊಡುತ್ತ ಕೂಡ್ರುವದಿಲ್ಲ.

ಅದ್ದರಿಂದ ಸಾಧಕನು ಕರ್ಮಗಳನ್ನು ಮಾಡುವಾಗ ತರ್ಕಶಕ್ತಿ ವ ವಿವೇಕಶಕ್ತಿ ಪ್ರಯೋಗಿಸಬೇಕು. ಅವನು ಧ್ಯಾನಾಭ್ಯಾಸದಲ್ಲಿ ತನ್ನ ಸುಧಾರಣೆಕೆ ಮಾಡಿಕೋಡದ್ದಾದರೆ, ಕ್ರಮುಕ್ರಮದಿಂದ ಅವನ ಸರ್ವ ಬಂಧನಗಳು ಶಿಥಿಲವಾಗುವವು. ಈ ಸಂಬಂಧ ಗುಲಾಬರಾವ ಮಹಾರಾಜರು ಏನು ಅನ್ನುತ್ತಾರೆಂಬದನ್ನು ನಾನು ನಿಮಗೆ ಹೇಳುವೆನು.

"ನಮ್ಮ ಅರ್ವಾಚೀನ ಸಾಧುಗಳ ಕಡೆ ನೋಡಿರಿ! ತಮ್ಮ ಚರಿತಾರ್ಥದ ಸಲುವಾಗಿ ಏನೂ ಮಾಡದಿರುವದೇ ಅವರ ಜೀವನ್ಮುಕ್ತಿಯು. ಅದ್ದರಿಂದ ಅವರ ಚರಿತಾರ್ಥ ನಡಿಸಲಿಕ್ಕೆ ಅವರು ಯುಕ್ತಿಗಳನ್ನು ಮಾಡಬೇಕಾಗುತ್ತದೆ.

ಶ್ರಮಪಟ್ಟು ಹೊಟ್ಟೆ ತುಂಬಿಸಿಕೊಳ್ಳುವ ಜನರ ಮನಸ್ಸಿನಲ್ಲಿ ಸ್ವಪ್ನದಲ್ಲಿ ಸಹಾ ಯಾವ ಕರ್ಮಗಳನ್ನು ಮಾಡಲೆಳಸರು ಅಂಥ ಅತಿ ನಿಂದ್ಯ ವ ನೀಚ ಕರ್ಮಗಳನ್ನು ಮಾಡಿ ಇವರು ಜನರನ್ನು ಮೋಸಗೊಳಿಸುವ ಉದ್ಯೋಗದಲ್ಲಿರುತ್ತಾರೆ. ಇಂಥ ಸಾಧುಗಳು ಸರ್ವ ಸಾಮಾಜಿಕ ಬಂಧನಗಳನ್ನು ಬಿಟ್ಟಿರುತ್ತಾರೆ. ಉದಾಹರಣಾರ್ಥ ಒಬ್ಬ ಸಾಧುವು ಬಹಳ ಜನರಿಗೆ ಮಾನ್ಯವಾಗಿ ಅನೇಕ ಶಿಷ್ಯರು ಇದ್ದರ್ದ್ದಾದರೆ, ನಾನು ನನ್ನ ವ ಅವರ ಶಿಷ್ಯರೊಳಗೆ ಅಂಥವನ ವಿಷಯ ಲಜ್ಜಾಸ್ಪದ ವ ನಿಂದ್ಯ ಸಂಗತಿಗಳನ್ನು ಅವಶ್ಯವಾಗಿ ಪ್ರಕಟಿಸುವೆನು. ಈ ಸಾಧುಗಳಿಗೆ ಏನೂ ತಿಳಿಯದಿದ್ದರೆ, ಅಕ್ಷಯ ಶಾಂತಿಸುಖದಲ್ಲಿ ಮಗ್ನವಾಗಿರುವ ನಾವು ಚರ್ಚೆಯ ಯುಕ್ತಿವಾದದ ಅತ್ತಕಡೆ ಇರುವೆವು ಎಂಬಂಥ ಮನೋವೃತ್ತಿಗಳ ಪರದೆಯಿಂದ ತಮ್ಮ ಅಜ್ಞಾನವನ್ನು ಅವರು ಮುಚ್ಚುತ್ತಾರೆ. ಅದ್ದರಿಂದ ನನ್ನ ಸಮಜೂತಿ ಪ್ರಕಾರ ನಾನು ಹೀಗೆ ಹೇಳುತ್ತೇನಲ್ಲ, ಇಂಥ ಸಾಧುಗಳಿಗಿಂತ ಅಧಿಕ ವಿಕೃತ ಸ್ವರೂಪದ ಶಠರು ಈ ಜಗತ್ತಿನಲ್ಲಿ ಇದ್ದಾರೆಂತ ನನಗೆ ಅನಿಸುವದಿಲ್ಲ ಯಾಕಂದರೆ ಈ ಸಾಧುಗಳು ತಮ್ಮ ಅನುಯಾಯಿಗಳಿಗೆ ಮೋಸಗೊಳಿಸಿ ತಮ್ಮ ಫಾಯಿದೆ ಮಾಡಿಕೊಳ್ಳುತ್ತಾರೆ. ಇಂಥ ಸಾಧುಗಳು ಯಾವದಾದರೊಂದು ಪಾಪ ಕರ್ಮ ಮಾಡುವಾಗ್ಗೆ ಶಿಕ್ಕರಿಂದರೆ ಆ ಕರ್ಮದ ಸಂಬಂಧವನ್ನು ಅವರು ದೈವದ ಕಡೆಗೆ ಒಪ್ಪಿಸಿ ತಾವು ಕಡೆಗೆ ಆಗುತ್ತಾರೆ. ಈ ಪ್ರಾರಬ್ಧವು ಬಹಳ ಸರ್ತಿ ಅವರ ಉತ್ತಮ ಉಪಯೋಗಕ್ಕೆ ಬೀಳುತ್ತದೆ. ಯಾಕಂದರೆ ಅವರಿಗೆ ತಮ್ಮ ಪ್ರಾಯಶ್ಚಿತ್ತವು ಈ ಜಗತ್ತಿನಲ್ಲಿಯೇ ಸಿಗುವದೆಂತ ಹೇಳಲಾಗದು. ಅಂದರೆ ಈ ಜನ್ಮಾಂತ್ಯದಲ್ಲಿ ಅವರಿಗೆ ಈಶ್ವರನ ಕಡೆಯಿಂದ ಯಾವ ಶಿಕ್ಷೆ ಸಿಕ್ಕೀತೋ ಅದು ಈ ಜಗತ್ತಿನ ಜನರಿಗೆ ತಿಳಿಯಲಾರದು. ಪ್ರಾರಬ್ಧದ ಈ ಕೋಟಕ್ರಮವು ವೇದಾಂತದ ಎಂದೂ ಮುಗಿಯದ ರೀತಿಯೊಳಗಿಂದ ಹೊರಬಿದ್ದದ್ದಿರುತ್ತದೆ. ಸಾಧುಗಳು ಪುಣ್ಯ ಪಾಪಗಳಿಂದ ಅಲಿಪ್ತರಿರುತ್ತಾರೆ. ಈ ತತ್ವದ ಆಧಾರವನ್ನು ತಕ್ಕೊಂಡು ನಾವು ಸಾಮಾನ್ಯ ಜನರಿಗೆ ಹೇಳಿದಂಥ ನೀತಿ ತತ್ವದ ಅತ್ತಕಡೆ ಇರುತ್ತೇವೆ ಎಂದು ಹೀಗೆ ತಿಳಿದು ಚಾರ್ವಾಕನ ಅನುಯಾಯಿಗಳು ಮಾಡತಕ್ಕಂಥ ಕ್ರಿಯೆಗಳನ್ನು ಅವರು ನಿರ್ಭಯವಾಗಿ ಮಾಡಬಲ್ಲರು. ಆಶ್ಚರ್ಯದ ಸಂಗತಿ ಇಷ್ಟೇ ಅಲ್ಲ, ಈ ಸಾಧುಗಳು ಅದ್ವೈತ ಸಿದ್ಧಿಯಂಥ ವೇದಾಂತ ಗ್ರಂಥಗಳನ್ನು ಓದಿ ಅವರು ಅವುಗಳೊಳಗಿಂದ ನಿಜವಾದ ಬೋಧವನ್ನು ತಗೊಂಡಿಲ್ಲ. ಇದರ ಮೇಲಿಂದ ವೇದಾಂತಕ್ಕೆ ದೋಷ ಕೊಡುವದು ನನ್ನ ಉದ್ದೇಶವೆಂದು ಹೀಗೆ ತಿಳಿಯಬಾರದು. ಕೆಲವು ಸಮಾಜಸುಧಾರಕರು ತಮ್ಮ ಸಮಾಜದ ಕೆಲವು ದುಃಖದಾಯಕ ರೂಢಿಗಳ ಸಂಬಂಧವನ್ನು ವೇದಾಂತದ ಅಪಕಾರಕ ತತ್ವಕ್ಕೆ ಜೋಡಿಸಿ ವೇದಾಂತದ ಮೇಲೆ ಹ್ಯಾಗೆ ದೂಷಣೆ ಕೊಟ್ಟರೊ, ಅಂಥಾದ್ದರೊಳಗಿನ ಈ ಪ್ರಕಾರವಿದೆಯೆಂದು ತಿಳಿದು ಸಮಾಜಸುಧಾರಕ ವರ್ಗದವರ ಪೈಕಿಯ ನಾನೊಬ್ಬನು ಎಂಬದಾಗಿ ಮಾತ್ರ ಯಾರೂ ತಿಳಿಯಬಾರದು.

“ ನನಗೆ ಏನು ಹೇಳತಕ್ಕದ್ದದೆ ಅದು ಇಷ್ಟೇ ಅಲ್ಲ. ವರ್ಣಾಶ್ರಮ ಧರ್ಮಭಕ್ತಿ ಮತ್ತು ಸಾಧನ ಸಂಪನ್ನತೆ ಇವುಗಳ ಆಚರಣೆ ಮಾಡಿದ ವಿನಹಾ ಒಬ್ಬಾನೊಬ್ಬ ಮನುಷ್ಯನು ಸಾಲೆಯ ಹುಡುಗನಂತೆ ವೇದಾಂತದ ಅಭ್ಯಾಸ ಮಾಡಿದನು ಮತ್ತು ವೇದಾಂತದ ತತ್ವಗಳನ್ನು ಬಡಬಡ ಉಚ್ಚಾರ ಮಾಡಿದನೆಂದರೆ ಅದು ಕೇವಲ ಗಿಳಿಯ ಮಾತಿನಂತಾಗುವದು, ಇದರ ಉಪಯೋಗವೇನು? ನಾನು ಒಂದು ವೇಳೆ ತಪ್ಪಿರಬಹುದು. ಒಬ್ಬ ಸಾಧಕನು ಸಾಧನಚತುಷ್ಟಯ ಸಂಪಾದನ ಮಾಡಿಕೊಂಡು ವೇದಾಂತದ ವಿಚಾರ ಮಾಡಲಿಕ್ಕೆ ಸುರು ಮಾಡಿದನೆಂದರೆ ಅದರೊಳಗಿನ ಒಂದೆರಡು ವಾಕ್ಯಗಳಾದರೂ ಅವನ ಮನಸ್ಸಿನೊಳಗೆ ಜ್ಞಾನಪ್ರಕಾಶ ಉಂಟುಮಾಡಿ ಅವನಿಗೆ ಮೋಕ್ಷಪ್ರಾಪ್ತಿ ಮಾಡಿಕೊಡಲಿಕ್ಕೆ ಸಾಕಾಗುವವು. ಹಾಗಾದರೆ ಇಷ್ಟು ದೊಡ್ಡ ಗ್ರಂಥದ ಉಪಯೋಗವೇನಾಗಬಹುದು? ಯಾರು ಈ ಗ್ರಂಥಗಳನ್ನು ಓದ್ಯಾರು ಮತ್ತು ನೆನಪಿನಲ್ಲಿಟ್ಟುಕೊಂಡಾರು? ಅಂದರೆ ಯಾರೂ ಅವಕ್ಕೆ ಕೇಳಲಾರರು. ಆದ್ದರಿಂದ ಯಾರು ಈ ಗ್ರಂಥಗಳನ್ನೆಲ್ಲ ಓದಿರುವರು ಮತ್ತು ಧ್ಯಾನದಲ್ಲಿಟ್ಟುಕೊಳ್ಳುವರು ಅವರಿಗೆ ಶ್ರೇಯ ಕೊಡಲಿಕ್ಕೆಬೇಕು. ಹಾಗು ವೇದಾಂತ ಗ್ರಂಥದಲ್ಲಿ ಸ್ಪಷ್ಟಮಾಡಿ ಹೇಳಿದ ತತ್ವಗಳನ್ನು ಅವರು ಅರ್ಧದಷ್ಟೇ ಧ್ಯಾನದಲ್ಲಿಟ್ಟುಕೊಳ್ಳುತ್ತಾರೆ. ಅದೇ ಪ್ರಕಾರ ಪ್ರಸ್ತುತದ ಬಹಳೇ ಸಾಧುಗಳು ವೇದಾಂತ ತತ್ವಗಳನ್ನು ಅಂಶತಃ ಆಚರಣೆಯಲ್ಲಿ ತರುತ್ತಾರೆ.

“ ಈಗ ನಾವು ಸಮತೆಯ ತತ್ವದ ಕಡೆ ನೋಡೋಣ. ಧೂಳಿಯಲ್ಲಿ ಹೊರಳ್ಯಾಡಿ ಸಮತೆ ತೋರಿಸುವದೆಂದು ಒಂದು ಕತ್ತೆಗೆ ಸಹ ದೊಡ್ಡಿಸ್ತನ ಕೊಡಲಿಕ್ಕೆ ಬಂದೀತು; ತಾಯಿ ಮತ್ತು ಸಹೋದರರಿಗೆ ಕೂಡ ಸಹ ವ್ಯವಹಾರ ಮಾಡುತ್ತದಂತ ಒಂದು ನಾಯಿಗೆ ಸಹ ಸಮತೆಗಾಗಿ ಪ್ರತಿಷ್ಠೆ ಕೊಡಬಹುದು. ಸಮತೆಯ ತತ್ವದ ಪ್ರಕಾರ ಶೆಗಣಿ ಮತ್ತು ಅನ್ನ ತಿಂದು ಸಮಾನವಾಗಿ ಆನಂದದಿಂದ ಇರುವದಕ್ಕೆ ಒಂದು ನೊಣದ್ದಾದರೂ ಧನ್ಯವಾದ ಮಾಡಬಹುದು. ಈ ಪ್ರಾಣಿಗಳು ಸಹ ವೇಂದಾಂತ ತತ್ವದ ಅರ್ಧಮರ್ಧ ಪಾಲನ ಮಾಡುತ್ತವೆ. ತಾನು ಸಾಧು ಅನ್ನಿಸಿಕೊಳ್ಳುವ ಪ್ರಸ್ತುತದ ಸಾಧುಗಳಲ್ಲಿ ಜೀವನ್ಮುಕ್ತರ ಕೆಲವು ಬಾಹ್ಯ ಲಕ್ಷಣಗಳು ಇರುತ್ತವೆ. ಆದ್ದರಿಂದ ಅವರು ಮೇಲೆ ಹೇಳಿದ ಒಂದಿಲ್ಲೊಂದು ಪ್ರಾಣಿಯ ಪಂಕ್ತಿಗೆ ಸೇರುವರು. ರಾಜನ ಮಗಳನ್ನು ಬೇಡಿದ ಒಬ್ಬ ಋಷಿಯ ಸುದ್ದಿಯು ಛಾಂದೋಗ್ಯ ಉಪನಿಷದದಲ್ಲಿ ಹೇಳಿರುತ್ತದೆ. ಹಾಗೂ ಇಬ್ಬರು ಹೆಂಡಂದಿರಿದ್ದ ಒಬ್ಬ ಋಷಿಯ ವಿಷಯದಲ್ಲಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಿದೆ. ಈ ಸಂಗತಿಗಳ ಮೇಲಿಂದ ವೇದಾಂತ ಮತ್ತು ಋಷಿಗಳು ಸಹ ಪ್ರಾರಬ್ಧದಿಂದ ಬದ್ಧರಾಗಿರುವರು ಎಂಬಂತೆ ತೋರುತ್ತದೆ; ಆದರೆ ತಾವು ವಿಷಯ ವಾಸನೆಗೆ ಬಲಿ ಬಿದ್ದೆವೆಂತ ಈ ಋಷಿಗಳು ಸ್ಪಷ್ಟವಾಗಿ ಒಪ್ಪುತ್ತಾರೆ. ಈ ಕಬೂ

ಲಿಗೆ ಲಕ್ಷ್ಯ ಕೊಡದೆ ಬಹಳ ಜನರು ಋಷಿಗಳ ಮೇಲೆ ವಿಶ್ವಾಸವಿಡುತ್ತಾರೆ. ಇದು ಪ್ರತ್ಯಕ್ಷ ಸಂಗತಿಯಾಗಿರುವದು. ಆದರೆ ಈಗಿನ ಸಾಧುಗಳು ತಮ್ಮ ಕಾಮವಾಸನೆಯನ್ನು ಅಡಗಿಸಿಟ್ಟು ಅವಿವಾಹಿತರಾಗಿರುತ್ತಾರೆ. ಆದರೆ ತಮ್ಮ ಶಿಷ್ಯರ ಹೆಂಡಂದಿರು ಮತ್ತು ಸಹೋದರಿಯರ ಸಂಬಂಧದಿಂದ ಅವರ ಕಾಮವಾಸನೆಯು ಪ್ರಸಿದ್ಧಿಗೆ ಬಂತೆಂದರೆ, ಅವರು ಆ ಸಂಬಂಧ ಏನಾದರೂ ಹೇಳಿ ತಮ್ಮ ಕಾರ್ಯಕ್ಕೆ ಪ್ರಾರಬ್ಧದ ನೆವ ಕೊಟ್ಟು ಅದು ತಮ್ಮ ಸದ್ಗುಣವೆಂತ ತೋರಿಸುತ್ತಾರೆ. ಆದರೂ ವೇದಾಂತದ ಖರೇ ಅನುಯಾಯಿಗಳು ಇವರ ಕಡೆಯಿಂದ ಪ್ರಾರಬ್ಧವಶಾತ್ ಎಂದಾದರೂ ಒಂದು ಪಾಪಕರ್ಮವು ಸಂಭವಿಸಿತೆಂದರೆ ಅವರು ಆ ಕಾರಣ ಬಹಳ ವ್ಯಸನಪಡುತ್ತಾರೆ ಮತ್ತು ತನ್ನ ಅಪರಾಧವನ್ನು ಒಪ್ಪಿಕೊಳ್ಳಲಿಕ್ಕೆ ಅವರು ಯಾವಾಗಲೂ ಸಿದ್ಧರಿರುತ್ತಾರೆ. ಮತ್ತು ಪ್ರಾರಬ್ಧದಿಂದ ಯಾವದೊಂದು ಕೆಟ್ಟ ಕರ್ಮವು ನಮ್ಮ ಕೈಯಿಂದ ಆಗುವ ಮೊದಲೆ ನಮ್ಮನ್ನು ಕಾಪಾಡಿ ಆ ಮನೋವಿಕಾರದಿಂದ ರಕ್ಷಿಸು ಎಂದು ಪರಮೇಶ್ವರನಿಗೆ ಅವರು ಪ್ರಾರ್ಥಿಸುತ್ತಾರೆ. ಮನೋವಿಕಾರದ ಸ್ವಾಧೀನರಾದ ಜನರ ದೋಷವನ್ನು ಅವರು ಎಂದೂ ಉಚ್ಚರಿಸಲಾರರು. ಹಾಗೂ ಅವರು ಒಂದು ವೇಳೆ ಇತರರಿಗೆ ದೋಷ ಕೊಟ್ಟರೆ ಅವರು ತಮಗೂ ದೋಷ ಕೊಡುತ್ತಾರೆ. ಸಾಧು ಯಾರಿಗೆ ಅನ್ನಬೇಕೆಂಬದನ್ನು ಶಬ್ದದಿಂದ ವಿವರಿಸುವದು ಅತಿ ಕಠಿಣವದೆ. ಆದರೆ ಅದನ್ನು ಸಹಜವಾಗಿ ಈ ಪ್ರಕಾರ ತಿಳಿಯಬೇಕಲ್ಲ. ಯಾವಾತನು ತಾನು ಗುರು ಅಂತ ಮುಂದೆ ಬರುವನೋ, ಅವನು ಕನಿಷ್ಟಪಕ್ಷಕ್ಕೆ ಸಾಮಾನ್ಯ ನೀತಿ ನಿಬಂಧನೆಗಳನ್ನಾದರೂ ಪಾಲಿಸುವಂಥವನಾಗಬೇಕು.

" ಸಾಧುಗಳು ಬೇರೆ ಬೇರೆ ಪ್ರಕಾರದವರಿದ್ದರೆ, ಮತ್ತು ಅವರ ಬಾಹ್ಯ ಕೃತಿಗಳು ಸಹ ನಾನಾ ವಿಧವಾಗಿದ್ದರೆ, ಜನರು ಆ ಬೇರೆ ಬೇರೆ ಸಾಧುಗಳ ಕೂಡ ಬೇರೆ ಬೇರೆ ರೀತಿಯಿಂದ ನಡೆಯಬೇಕು ಎಂಬದು ಸಹಜವಾಗಿದೆ ಯಾವನೊಬ್ಬ ಸಾಧುವಿನ ಬಾಹ್ಯ ಆಚರಣೆಯು ನೀತಿದೃಷ್ಟಿಯಿಂದ ಕೆಟ್ಟದ್ದಿದ್ದರೆ ಮತ್ತು ಜನರು ಅವನಿಗೆ ದೋಷ ಕೊಡುತ್ತಿದ್ದರೆ ಅಥವಾ ಅವನ ಅಪಮಾನ ಮಾಡುತ್ತಿದ್ದರೆ, ಆ ವಿಷಯದಲ್ಲಿ ಕೆಟ್ಟ ಅನಿಸುವದು ಅಥವಾ ದುಃಖಪಡುವದು ಕಾರಣವಿಲ್ಲ. ಪ್ರಸ್ತುತದ ಸಾಧುಗಳು ಎಲ್ಲಿಯತನಕ ತಮ್ಮ ಮನೋವಿಕಾರಗಳು ಪ್ರಕಟವಾಗಲಿಲ್ಲ, ಅಲ್ಲಿಯ ವರೆಗೆ ತಾವು ಶುಕಾಚಾರ್ಯರಂತಿದ್ದೇವಂತ ಹೇಳುತ್ತಾರೆ; ಆದರೆ ಯಾವಾಗ ಅವರ ಕಾಮುಕ ಮನೋವಿಕಾರಗಳು ಪ್ರಗಟವಾಗುವವೋ ಆಗ ತಾವು ಶ್ರೀಕೃಷ್ಣನಂತೆ ಸರ್ವ ನೀತಿಬಂಧನದ ಆಚೆ ಕಡೆ ಹೋದವರು ಮತ್ತು ಸರ್ವ ಭೋಗಗಳಿಂದ ಅಲಿಪ್ತರಾದವರೆಂತ ತೋರಿಸುತ್ತಾರೆ." ಈ ಪ್ರಕಾರ ಈ ವಿಷಯ ಸಂಬಂಧ ಶ್ರೀಗುಲಾಬರಾವ ಮಹಾರಾಜರ ಅಂಬೋಣವೇನಿದೆ ಎಂದು ಅವರ ಪ್ರೇರಣೆಯಿಂದಲೇ ನಾನು ಹೇಳಿದ್ದೇನೆ.

ನಾನು:— ಮಹಾರಾಜರೇ, ನಾನು ಯಾವ ಪ್ರಕಾಶವನ್ನು ನೋಡು ತ್ತೇನೊ ಅದರ ಸಂಬಂಧ ನಾನು ನಿಮಗೆ ಕೇಳುವೆನು. ಸದ್ಯದಲ್ಲಿ ನಾನು ನನ್ನ ಮುಂದೆ ಒಂದು ಮಹಾನ್ ತೇಜೋವಲಯವನ್ನು ನೋಡುತ್ತಿದ್ದೇನೆ. ನಾನು ಅದನ್ನು ಮೊದಲು ಶ್ರೀ ಭಟ ಇವರ ಮನೆಯಲ್ಲಿ ನೋಡಿದ್ದೆನು. ಅಲ್ಲಿ ನಿಮ್ಮ ಆಕೃತಿಯು ತೇಜೋವಲಯದಿಂದ ಮುಚ್ಚಿದ್ದನ್ನು ನೋಡಿದೆ. ಹಾಗಾದರೆ ಈ ಪ್ರಕಾಶವೇನಿರುವದು? ಯಾವಾತನಿಗೆ ಗುರುಕೃಪೆಯಾಗಲಿಲ್ಲ ಅವನಿಗೆ ಈ ಪ್ರಕಾಶ ಕಾಣಲಾದೀತೋ?

ಮಹಾರಾಜ:— ಪ್ರತಿಒಬ್ಬ ಮನುಷ್ಯನು ಹುಟ್ಟಿದಂದಿನಿಂದ ಅವನ ಶರೀರದ ಸುತ್ತಲೂ ಒಂದು ಪ್ರಕಾಶ ವರ್ತುಲವಿರುತ್ತದೆ. ಅದಕ್ಕೆ 'ಒರಾ' ಎಂದೆನ್ನುತ್ತಾರೆ. ಅದರ ಬಣ್ಣವು ಸ್ವಲ್ಪ ನೀಲವಾಗಿರುತ್ತದೆ, ಮತ್ತು ಆಕೃತಿಯಿಂದ ಅದು ಕಾಲಿನ ಕಡೆಗಿಂತ ತಲೆಯ ಕಡೆಗೆ ಸ್ವಲ್ಪ ಅಗಲವಾಗಿರುವದು. ಯಾವಾಗ ಮನುಷ್ಯನ ಪ್ರಕೃತಿ ಆರೋಗ್ಯಯುಕ್ತವಾಗಿಯೂ ಬುದ್ಧಿಶಕ್ತಿ ತೀಕ್ಷ್ಣವಾಗಿಯೂ ಇರುವದೊ ಆಗ ಈ ವರ್ತುಲವು ಸ್ಪಷ್ಟವಾಗಿಯೂ ಹೆಚ್ಚಿನ ನೀಲ ವರ್ಣವಾಗಿಯೂ ಕಾಣುವದು. ಮಿಂಚು ಅಥವಾ ಲೋಹಚುಂಬಕವು ಅದರ ಮೇಲೆ ಏನೂ ಪರಿಣಾಮವನ್ನು ಮಾಡಲಾರವು. ಇದರ ಮೇಲಿಂದ ಅದು ಜಡ ಪದಾರ್ಥದ್ದು ಎಂತ ಹೇಳಲಾಗದು. ಆ ಪ್ರಕಾಶದ ಬಣ್ಣ ಮತ್ತು ಸತೇಜತೆಯು ಬೇರೆ ಬೇರೆ ವ್ಯಕ್ತಿಗಳ ಆಧ್ಯಾತ್ಮಿಕ, ನೈತಿಕ, ವ ಬೌದ್ಧಿಕ ವೃದ್ಧಿಯ ಪ್ರಕಾರ ಬದಲಾಗುತ್ತದೆ. ಒಂದೇ ವ್ಯಕ್ತಿಯಲ್ಲಿ ಸಹ ಈ ತೇಜೋವಲಯದ ಬಣ್ಣವು ಆಗಾಗ್ಗೆ ಬದಲಾಗುತ್ತಿರುತ್ತದೆ.

ಡಾ. ಕಿಲನೇರನ ಶಿಷ್ಯ ಬಾಗನಾಲ ಇವರಿಗೆ ಈ ಪ್ರಕಾಶವಲಯ ಅಥವಾ 'ಒರಾ' ಇದರ ಅಸ್ತಿತ್ವದ ಪ್ರಥಮ ಶಂಕೆ ಇತ್ತು; ಆದರೆ ಅನೇಕ ಪ್ರಯೋಗಗಳನ್ನು ಮಾಡಿದ ಮೇಲೆ ಅದರ ಅಸ್ತಿತ್ವದ್ದು ಅವರಿಗೆ ನಿಶ್ಚಯವಾಯಿತು. ಅವರು ಹೀಗೆ ನಿಷ್ಕರ್ಷೆ ಮಾಡಿಕೊಂಡರಲ್ಲ, ಮಾನವೀ ಶರೀರದ ಸುತ್ತಲೂ ಇರುವ ಈ ಪ್ರಕಾಶವಲಯಗಳು ಭಾಸಾತ್ಮಕವಲ್ಲ ಅಥವಾ ಫಾಸ್ಫರಸ್ ದ್ರವ್ಯದ್ದು ಎಂಬದಾಗಿ ಹೇಳಲಾಗದು. ಅವರು ಈ ಪ್ರಕಾಶವಲಯಗಳು ಸ್ವಾಭಾವಿಕವಾದವುಗಳು ಮತ್ತು ಅವುಗಳ ಸಂಬಂಧ ಏನೂ ಗೂಢ ಅಥವಾ ಆಧ್ಯಾತ್ಮಿಕತ್ವವು ಇರುವದಿಲ್ಲವೆಂತ ತಿಳಿದರು. ಅವು ಕಣ್ಣಿಗೆ ಕಾಣಿಸಲಾರದಕ್ಕೆ ಕಾರಣವೇನೆಂದರೆ, ಅವು ಅಲ್ಟ್ರಾ-ವ್ಹಾಯೊಲೆಟ ಕಿರಣಗಳಿಂದ ಸಿದ್ಧವಾದವುಗಳು ಎಂಬದಾಗಿ ಅವರು ವಿವರಿಸಿದರು. ಅವರು ಹೀಗೆ ಹೇಳಿದರಲ್ಲ, ನೇತ್ರದೊಳಗಿನ ಕೆಲವು ಜ್ಞಾನತಂತುಗಳ ವ್ಯಾಪಾರ ನಿಲ್ಲಿಸಿ, ಬೇರೆ ಕೆಲವುಗಳ ವ್ಯಾಪಾರವನ್ನು ವೃದ್ಧಿಗೊಳಿಸಿದರೆ ಈ ತೇಜೋವಲಯಗಳು ಕಾಣುವವು, ಮತ್ತು ಹಾಗೆ ಮಾಡುವ ಪದ್ಧತಿಯನ್ನು ಸಹ ಹೇಳಿಟ್ಟಿದ್ದಾರೆ. ಈ ಎಲ್ಲ ಪ್ರಯೋಗಗಳ ಕೂಡ ಕಡೆಕಡೆಗೆ

ಇಷ್ಟು ನಿಶ್ಚಯವಾಯಿತಲ್ಲ, ತಮ್ಮ ಗುರು ಕೆಲನೇರ ಇವರಿಗೆ ದಿವ್ಯದೃಷ್ಟಿ ಇದ್ದು ಅವರು ಯಾವ ಜ್ಞಾನತಂತುಗಳ ವ್ಯಾಪಾರವನ್ನು ನಿಲ್ಲಿಸದೆ ಅಥವಾ ಕೆಲವದರ ವೃದ್ಧಿಗೊಳಿಸದೆ, ಈ ಪ್ರಕಾಶವಲಯಗಳನ್ನು ಕಾಣಲಿಕ್ಕೆ ಶಕ್ತರಾಗಿದ್ದರು. ಈ ಪ್ರಕಾಶವಲಯಗಳು ಸ್ವಾಭಾವಿಕವಿದ್ದರೂ, ಅವು ಮಿಂಚಿನಂಥ ಜಡ ದ್ರವ್ಯದ್ದೂ ಅಲ್ಲ. ಯಾವ ಮಹಾನ್ ಸತ್ಪುರುಷ ಮಹಾತ್ಮನಲ್ಲಿ ಈ ಅಲೌಕಿಕ ತೇಜವು ಬಹಳ ಇರುತ್ತದೋ ಅವರಿಗೆ ಅದರಷ್ಟೆಕಿ ಕೆಲವನ್ನು ಕವಿಸ್ಕೆ ಇದ್ದವರಿಗೆ ಕೊಡ ಲಿಕ್ಕೆ ಬರುತ್ತದೆ, ಮತ್ತು ಆ ಮೂಲಕ ಅಂಥವರ ಶಾರೀರಿಕ ವ ಮಾನಸಿಕ ವ್ಯಥೆಯನ್ನು ದೂರ ಮಾಡಲಿಕ್ಕೂ ಬರುವದು

ಇದರ ಮೇಲಿಂದ ಹೀಗೆ ಅನಿಸುತ್ತದಲ್ಲ, ನಿಮ್ಮ ದಿವ್ಯದೃಷ್ಟಿ ತೆರೆದದೆ ಅಂತಲೆ ಪ್ರಕಾಶವಲಯವನ್ನು ನೀವು ನೋಡಬಲ್ಲಿರಿ. ಆದರೂ ಈ ಪ್ರಕಾಶದ್ದು ಬೇರೆ ಒಂದು ಪ್ರಕಾರವಿರುತ್ತದೆ, ಈ ಪ್ರಕಾಶವು ಧ್ಯಾನಯೋಗದ ಅಭ್ಯಾಸದಿಂದ ಸಾಧಕನು ಪ್ರತ್ಯಕ್ಷ ಕಾಣುವನು. ಅದನ್ನು ಅವನು ತನ್ನಲ್ಲಿಯೇ ಅಂತರ್ದೃಷ್ಟಿ ಯಿಂದ ನೋಡುವನು, ಅದು ಆತ್ಮಪ್ರಕಾಶವಿರುತ್ತದೆ. ಸಾಧಕನಿಗೆ ಅತನ ಸದ್ಗುರುವು ಅಂತರ್ದೃಷ್ಟಿ ಕೊಟ್ಟ ವಿನಹಾ ಅವನು ಇದನ್ನು ನೋಡಲಾರನು.

ನಾನು:— ಮನುಷ್ಯನು ಯಾವಾಗ ಶರೀರದಿಂದ ಅಪವಿತ್ರನಿರುನೋ ಆಗ ಗುರುಮಂತ್ರ ಜಪಿಸಬಾರದು ಎಂದು ಜನರದು ಸರ್ವಸಾಧಾರಣ ತಿಳುವ ಳಿಕೆ ಇರುತ್ತದೆ. ಅವರನ್ನು ಕತ್ತಾರೆ ಸ್ತ್ರೀಯು ಅಸ್ಪೃಶ್ಯ ವಿರುವಾಗ ಆಕೆಯು ಮಂತ್ರವನ್ನು ಜಪಿಸಬಾರದು. ಈ ತಿಳುವಳಿಕೆಯು ಸತ್ಯವಾದದ್ದೇನು ?

ಮಹಾರಾಜ: – ಯಾವ ಸ್ಥಿತಿಯಲ್ಲ್ಯಾಗಲಿ, ಯಾವದೇ ಸ್ಥಳದಲ್ಲಿ ಯಾಗಲಿ ಈಶ್ವರನಾಮ ಉಚ್ಚರಿಸಲಿಕ್ಕೆ ಅಡ್ಡಿ ಇಲ್ಲ, ಸಾಧಕನಿಗೆ ಸದ್ಗುರುಕಡೆ ಯಿಂದ ಯಾವಾಗ ಮಂತ್ರವು ಸಿಗುವದೋ ಆಗ ಅದು ಕೆಲವು ಕಾಲ ಜಪಿಸಿದ ಮೇಲೆ, ಹೀಗೆ ತಿಳಿಯಬರುತ್ತದಲ್ಲ, ಸಾಧಕನ ಮನಸ್ಸು ಆದರ ಮೇಲಿರಲಿ ಇಲ್ಲದಿರಲಿ ಆ ಮಂತ್ರವು ತನ್ನಷ್ಟಕ್ಕೆ ಜಪಿಸಲ್ಪಡುವದು, ಮತ್ತು ಅದನ್ನು ನಿಂದರಿಸುವದು ಇವನ ಕೈಲಾಗದ ಮಾತು. ಹಾಗಾದರೆ ನೀವು ಹೇಳಿದ ನಿರ್ಬಂಧ ವನ್ನು ಹ್ಯಾಗೆ ಪಾಲಿಸಲಿಕ್ಕೆ ಬಂದೀತು? ಮನುಷ್ಯನು ಯಾವಾಗ ಶರೀರದಿಂದ ಅಪವಿತ್ರನಿರುವನೋ ಆಗ ಅವನು ಬೇಕಂತ ಮಂತ್ರೋಚ್ಚಾರ ಮಾಡುವನೆಂತ ತಿಳಿಯುವದು ಸಾಧ್ಯವಿಲ್ಲ. ಯಾವನೊಬ್ಬ ಈಶ್ವರಭಕ್ತನೂ ಹಾಗೆ ಮಾಡಲಾ ರನು, ಆದರೆ ನಾನು ಇದನ್ನು ಸ್ಪಷ್ಟವಾಗಿ ಹೇಳುವೆನಲ್ಲ, ಈಶ್ವರನಾಮವನ್ನು ತಕ್ಕೊಳ್ಳಲಿಕ್ಕೆ ಸ್ಥಲ, ಕಾಲಗಳ ವ ಇತರ ಯಾವದರದ್ದಾದರೂ ಅಡ್ಡಿ ಇಲ್ಲ.

— ೪ —

( ಟೀಪ :— ಶ್ರೀಗಜಾನನ ಮಹಾರಾಜರಿಗೆ ಅನೇಕ ಜನರು ಯಾವಾಗಲೂ ಹೀಗೆ ಪ್ರಶ್ನೆಗಳನ್ನು ಕೇಳುತ್ತಾರೆ— ೧ ಗುರುಕೃಪೆ ಅಂದರೇನು?

೨ ಶಿಷ್ಯನು ತನ್ನ ಸುಧಾರಣೆಕೆ ಆಗಿದೆಯೊ ಎಂದು ಯಾವಾಗ ತಿಳಿಯಬೇಕು ?
೩ ದೃಶ್ಯಗಳು ಕಾಣಿಸುವದು ಇದು ಸುಧಾರಿಸುವ ಚಿನ್ಹ ಅದೆಯೋ ಹ್ಯಾಗೆ? ಈ ಪ್ರಶ್ನೆಗಳಿಗೆ ಮಹಾರಾಜರು ಒಮ್ಮೆ ಸವಿಸ್ತರ ಉತ್ತರಗಳನ್ನು ಕೊಟ್ಟರು. ಅವರು ಹೇಳಿದ್ದರ ಸಾರಾಂಶವನ್ನು ಆವಷ್ಟುಮಟ್ಟಿಗೆ ಅವರ ಶಬ್ದಗಳಿಂದಲೆ ಕೆಳಗೆ ಕೊಟ್ಟಿರುತ್ತದೆ. )

ನನ್ನ ಪ್ರಿಯ ಬಂಧು-ಭಗಿನಿಯರೇ,

ಯಾವಾಗಲೂ ಹೀಗೆ ತಿಳಿದುಬರುವದು, ಗುರುವಿಗೆ ಅವರ ಭಕ್ತ ವ ಇತರ ಶಿಷ್ಯಮಂಡಳಿಯವರು ವಿನಂತಿ ಮಾಡುತ್ತಾರಲ್ಲ. ಸದ್ಗುರುವರ್ಯ, ನನ್ನ ಮೇಲೆ ನಿಮ್ಮ ಕೃಪೆಯಾಗಬೇಕು, ಅಂದರೆ ನನ್ನ ಸರ್ವಕಾರ್ಯಗಳು ತನ್ನಷ್ಟಕ್ಕೆ ಕೈಗೂಡುವವು. ಆದರೆ ಗುರುಕೃಪೆ ಅಂದರೇನು ವ ಈಶಕೃಪೆ ಅಥವಾ ಆತ್ಮಕೃಪೆ ಅಥವಾ ಆತ್ಮಪ್ರತೀತಿ ಅಂದರೇನು, ಇವುಗಳೊಳಗಿನ ಭೇದವು ಅವರ ಪೈಕಿ ಬಹಳೆ ಕಡಿಮೆ ಮಂದಿಗೆ ತಿಳಿಯುವದು. ಬಹುತೇಕ ಮಂದಿ ವಿಚಾರ ಮಾಡದೆ, ಏನಾದರೂ ಅರ್ಥ ಮಾಡುತ್ತಾರೆ, ಎಂಬದು ನನ್ನ ಪ್ರತ್ಯಕ್ಷ ಅನುಭವಕ್ಕೆ ಬಂದಿರುತ್ತದೆ.

ನನ್ನ ಸ್ವಾನುಭವದ ಮೇಲಿಂದ ನಾನು ಹೇಳುತ್ತೇನಲ್ಲ. ಗುರುಕೃಪೆ ಅಂದರೆ, ಯಾವ ಕಾಲಕ್ಕೆ ಸಾಕ್ಷಾತ್ಕಾರಿ ಗುರುವು ಮುಮುಕ್ಷುವಿನ ಮೇಲೆ ಅನುಗ್ರಹ ಮಾಡುವನೊ ಅದೇ ಕಾಲಕ್ಕೆ ಆತನ ಕೃಪೆಯಾಗುವದು. ಮುಂದೆ ಸ್ವಾನುಭವಿ ಗುರುವು ಕೊಟ್ಟಂಥ ಮಂತ್ರದ ಸಂಕಲ್ಪ ವಿಕಲ್ಪರಹಿತನಾಗಿ ದೀರ್ಘ ಕಾಲದವರೆಗೆ ಅಭ್ಯಾಸ ಮಾಡುತ್ತಾ ಹೋದರೆ, ಸಂಸಾರವನ್ನು ನೆಟ್ಟಗೆ ನಡಿಸುತ್ತಿರುವಾಗ್ಗೆ ಸಹ ಮೆಲ್ಲಮೆಲ್ಲಗೆ ಮನಃಶಾಂತಿಯು ಬೆಳೆಯುತ್ತ ಹೋಗುತ್ತದೆ. ಗುರುಕೃಪೆ ಆಯಿತೆಂದರೆ ಏನು ಉಳಿಯಿತು ಅಂದರೆ ಆತ್ಮಸಾಕ್ಷಾತ್ಕಾರ-ಅಭ್ಯಾಸ ದೃಢವಾಯಿತು, ವ ಶಾಂತಿಸುಖ ಸಿಗಲಾರಂಭಿಸಿತು, ಚಿತ್ತದ ಸಮಾಧಾನತೆಯು ವೃದ್ಧಿಯಾಯಿತು, "ವಸುಧೈವ ಕುಟುಂಬಕಮ್" ಈ ವೃತ್ತಿಯು ದೃಢವಾಗುತ್ತಾ ಬಂತು ಅಂದರೆ ಆತ್ಮಕೃಪೆ ಆಯಿತು ಎಂದು ತಿಳಿಯಬೇಕು. ಗುರುಕೃಪೆಯ ನಂತರ ಈಶ-ಆತ್ಮಪ್ರತೀತಿ ಪೂರ್ಣ ಬಂತೆಂದರೆ ಮುಮುಕ್ಷುವಿಗೆ ಶಾಂತಿಲಾಭವಾಗುವದು. ಈ ಆತ್ಮಕೃಪೆಯು ತಾರಿಸುವಂಥಾದ್ದದೆ. ಆತ್ಮಸಾಕ್ಷಾತ್ಕಾರವಾದವನು ಸಿದ್ಧನೆ ಇದ್ದಾನೆ. ಇಂಥ ಸಿದ್ಧಪುರುಷನು ಸಂಕಲ್ಪವಿಕಲ್ಪರಹಿತ, ಕರ್ಮಾಕರ್ಮಗಳನ್ನು ದಾಟಿ ಆತ್ತಕಡೆಗೆ ಹೋದವನಾಗಿ, ಅಖಂಡ ಶಾಂತಿಸುಖವನ್ನು ಭೋಗಿಸುತ್ತಿರುವನು. ಅವನ ಕಡೆಯಿಂದ ಕ್ರಿಯೆಗಳು ಸಹಜವಾಗಿ ಆಗುತ್ತವೆ. ಅನಂತರ ಅವನು ಸಂಸಾರವನ್ನು ಮಾಡಿದರೇನು ಮಾಡದಿದ್ದರೇನು; ಅವನು ಅದರಿಂದ ಅಲಿಪ್ತನಾಗಿರುವನು

ಹೀಗೆಯೇ ಸಂಸಾರದೊಳಗಿದ್ದು ಯಾಕು ಪರಮಶಾಂತಿಯನ್ನು ಹೊಂದಿದರೊ, ಅಂಥವರ ಮಾರ್ಗದರ್ಶಕ ಉದಾಹರಣೆಗಳು ಭಕ್ತಿವಿಜಯದಲ್ಲಿರುತ್ತವೆ. ಶ್ರೀಏಕನಾಥ ನಾಮದೇವಾದಿ ಸಂತಮಂಡಳಿ, ಶ್ರೀಮಚ್ಛೇಂದ್ರನಾಥ ಮತ್ತು ಇತ್ತಲಾಗಿನ ಶ್ರೀಗುಲಾಬರಾವ ಮಹಾರಾಜರು ಹೀಗೆ ಹೆಚ್ಚುಕಡಿಮೆ ಸಂತರು ಸಂಸಾರಿಗಳಂತೆ ಕಾಣಿಸಿಕೊಂಡು ಆತ್ಮಾನಂದದಲ್ಲಿ ಲೀನವಾಗಿದ್ದರು. ಯಾರು ಸಂಸಾರ ಮಾಡಲಿಲ್ಲ, ಇಂಥ ವರ್ಗದಲ್ಲಿ ಸೇರಿದ ರಾಮದಾಸರು ಸಹ ನಮಗೆ ಮಾರ್ಗದರ್ಶಕವಾದೀತು ಎಂಬಂತೆ ಉತ್ಕೃಷ್ಟ ವಾಙ್ಮಯವನ್ನು ತಯಾರಿಸಿ ಇಟ್ಟಿದ್ದಾರೆ. ಇದರ ಮೇಲೆ ಯಾರಾದರೂ ಹೀಗೆ ಶಂಕೆ ತಕ್ಕೊಂಡಾರಲ್ಲ, ರಾಮದಾಸ ಸ್ವಾಮಿಯವರು ಸಂಸಾರ ಮಾಡಿದ ವಿನಹಾ ಇಂಥ ವಾಙ್ಮಯವನ್ನು ಹ್ಯಾಗೆ ಬರೆದಾರು? ಇದಕ್ಕೆ ಅನೇಕರು ಅನೇಕ ಪ್ರಕಾರದ ಉತ್ತರಗಳನ್ನು ಕೊಡುತ್ತಾರೆ. ಒಬ್ಬರು ಹೇಳುವರು, ಅವರು ಪೂರ್ವಜನ್ಮದಲ್ಲಿ ಯಾವಾಗಲಾದರೂ ಸಂಸಾರ ಮಾಡಿರಬೇಕು. ಯಾರಾದರೂ ಭಾವಿಕ ಶ್ರದ್ಧಾವಂತರು ಹೀಗೆ ಅಂದಾರು ಅವರು ಸಾಕ್ಷಾತ್ಕಾರಿ ವ ಅಂತರ್ದೃಷ್ಟಿಯ ಮಹಾತ್ಮರಿದ್ದರು, ಆ ಮೂಲಕ ಅವರು ಇಂಥ ಅಂತಃಸ್ಫೂರ್ತಿಯ ಗ್ರಂಥಗಳನ್ನು ಬರೆದರು. ಅವನ್ನು ಬರೆಯಲಿಕ್ಕೆ ಹಿಂದಿನ ಜನ್ಮದ ಜರೂರಿ ಏನು? ಆದರೆ ನಮ್ಮಂಥವರು ಸಹಜ ಸ್ಫೂರ್ತಿಯಿಂದ ಹೇಳುವರು, ರಾಮದಾಸರು ಯಾವದಾದರೊಂದು ಜನ್ಮದಲ್ಲಿ ಸದ್ಗುರುಗಳ ಆಶೀರ್ವಾದದಿಂದ ಸಂಸಾರ ವ ಪರಮಾರ್ಥವನ್ನು ಉತ್ತಮರೀತಿಯಿಂದ ಮಾಡಿರಬೇಕು, ಮತ್ತು ಆ ಜನ್ಮದ್ದು ಅವರಿಗೆ ಸ್ಮೃತಿ ಇರಬೇಕು. ಆದ್ದರಿಂದ ಅನುಭವದ್ದೆ ಮಾತುಗಳಿರುವದರಿಂದ ಆ ಗ್ರಂಥಗಳು ಇಷ್ಟು ಉತ್ಕೃಷ್ಟವಾದವು. ಸಂತ ತುಕಾರಾಮ ಮಹಾರಾಜರ ಶಿಷ್ಯಳು ಕವಿ ಬಹಿಣಾಬಾಯಿ ಇವಳಿಗೆ ತಮ್ಮ ಹದಿಮೂರು ಜನ್ಮಗಳ ನೆನಪು ಇತ್ತೋ ಇಲ್ಲವೋ? ಆಕೆಯು ಆ ಸಮಾಚಾರವನ್ನು ತನ್ನ ಸುಂದರ ಅಭಂಗಗಳಲ್ಲಿ ಕಾಣಿಸಿದ್ದಾಳೆ. ಆದ್ದರಿಂದ ಕೆಲವು ಸಂತರಿಗೆ ಹೀಗೆ ನೆನಪಿರಬೇಕೆಂದು ನನ್ನ ನಿಶ್ಚಯವದೆ. ನನಗೂ ಒಮ್ಮೊಮ್ಮೆ ಸಹಜವಾಗಿ ಕುಳಿತಿರುವಾಗ ಆತ್ಮರಾಮರೂಪಿ 'ಸೋಹಂ' ದ ತಂದ್ರಿ ಹತ್ತುತ್ತದೆ; ಸ್ವಲ್ಪ ಎಚ್ಚರವೂ ಇರುತ್ತದೆ ಮತ್ತು ಮೂರು ನಾಲ್ಕು ಜನ್ಮಗಳ ನೆನಪು ಆಗುವಂತೆ ಅನಿಸುವದು. ಸ್ವಯಂ ಸ್ಫೂರ್ತಿಯಿಂದ ನಾನು ಇದನ್ನು ಹೇಳುತ್ತೇನೆ. ಅದನ್ನು ಜನಿಜನಾರ್ದನನು ತಿಳಕೊಳ್ಳತಕ್ಕದ್ದು. ಆದರೆ ಈ ಪ್ರಶ್ನೆಯು ವೈಯಕ್ತಿಕ ( ವ್ಯಕ್ತಿಭೇದ ) ವಾಗಿರುವದು. ಎಲ್ಲರಿಗೂ ಹಾಗೆ ಕಾಣಿಸೀತು ಅಂತ ಹೇಳಲಾಗದು.

ಪೂರ್ವ ವಿಷಯದ ಕಡೆಗೆ ತಿರಿಗಿದ್ದಲ್ಲಿ ನನಗೆ ಹೀಗೆ ಹೇಳುವದದೆ: ಪ್ರಥಮ ಗುರುಕೃಪಾ— ಸ್ವಾನುಭವಿಗುರುವು ಮಂತ್ರಕೊಟ್ಟು ಅನುಗ್ರಹ ಮಾಡುವದು. ಅನಂತರ ಆತ್ಮಕೃಪಾ— ದೃಢ ಅಭ್ಯಾಸದಿಂದ ಇದನ್ನು ಸಂಪಾದಿಸುವದು

ಇದರ ನಂತರವೆ ಆತ್ಮಾನಂದದ ಲಾಭವಾಗುತ್ತದೆ. ಇದೆಲ್ಲ ಯಾತರಿಂದ ಶಿಕ್ಕು ತ್ತದಂದರೆ, ಸಾಕ್ಷಾತ್ಕಾರಿ ಗುರುವಿನ ಮೇಲೆ ನಿಷ್ಠೆ ಇಟ್ಟದ್ರಿಂದ, ಭಾವನಾ ಶಕ್ತಿ ಯಿಂದ ಶ್ರದ್ಧಾ ಸಿದ್ಧವಾಗುತ್ತದೆ. ಶ್ರದ್ಧೆಯು ಪೂರ್ಣ ಸಂಕಲ್ಪವಿಕಲ್ಪರಹಿ ತವಿತ್ತೆಂದರೆ ನಿಷ್ಠೆಯು ಉತ್ಪನ್ನವಾಗುತ್ತದೆ ಮತ್ತು ಅದು ಸ್ಥಿರವಾಗಿರುತ್ತದೆ, ನಿಷ್ಠೆಯಿಂದ ಆತ್ಮಕೃಪೆಯಾಗುವದು ಮತ್ತು ಅದು ಅಖಂಡವಿರುವದು.

ಆದ್ದರಿಂದ ಇದರಿಂದ ಹೀಗೆ ಕಂಡು ಬರುವದಲ್ಲ, ನಿಷ್ಠೆಯ ಮಹಾತ್ಮ್ಯೆ ಅಧಿಕವಾದದ್ದು. ಯಾಕಂದರೆ ನಿಷ್ಠೆಯು ಮೂಲಕವೆ ಆತ್ಮಕೃಪಾ ಅಂದರೆ ಆತ್ಮ ಪ್ರತೀತಿ ಆಗುತ್ತದೆ. ಆತ್ಮಕೃಪೆಯಾಗುವ ಅವಧಿಯು ಬಹಳವೆಂದರೆ ಅವರವರ ಪೂರ್ವಪುಣ್ಯ ಅಥವಾ ಪೂರ್ವ ಸಂಚಿತದ ಪ್ರಕಾರ ಹೆಚ್ಚುಕಡಿಮೆ ಆದೀತು, ನಿಷ್ಠೆಯ ಫಲವು ಅಧಿಕವಾದದ್ದೆಂತ ನಾನು ಯಾಕೆ ಹೇಳುತ್ತೇನಂದರೆ, ವಾಲ್ಯಾ ಕೋಳಿಗೆ ನಾರದನು 'ರಾಮರಾಮ' ಮಂತ್ರವನ್ನು ಕೊಟ್ಟನು. ಆ ಮಂತ್ರದ ಮೇಲೆ ನಿಷ್ಠೆ ಇಟ್ಟದ್ದರಿಂದ ಅವನ ಮೇಲೆ ಆತ್ಮಕೃಪೆಯಾಯಿತು. ಅಂದರೆ ಅವ ನಿಗೆ ಆತ್ಮಪ್ರತೀತಿ ಬಂತು ಮತ್ತು ಆ ಆನಂದದ ಭರದಲ್ಲಿ ತಾನು ಏನು ಹೇಳುತ್ತೇ ನೆಂಬದರ ಭಾನ ಅವನಿಗೆ ಉಳಿಯದೆ ಅವನು 'ಮರಾ ಮರಾ' (ಸಾಯಿರಿ ಸಾಯಿರಿ) ಎಂದನ್ನುತ್ತಿದ್ದನು, ಆದರೂ ಈ ನಿಷ್ಠೆಯಿಂದಲೆ ಅವನು ವಾಲ್ಮೀಕ ಋಷಿಯಾದನು. ಹಾಗೆಯೇ ನೀವು ತೀವ್ರ ಅಭ್ಯಾಸದಿಂದ ಶಾಂತಿಬ್ರಹ್ಮವನು ಹೊಂದುವಿರಿ, ಅಂದರೆ ನಿಮಗೆ ಸಂಸಾರದಲ್ಲಿದ್ದರೂ ಸುಖದುಃಖಗಳ ತ್ರಾಸವಾಗ ಲಾರದು. 'ಅವಘಾಚಿ ಸಂಸಾರ ಸುಖಾಚಾ ಕರೀನ,' (ಸಂಸಾರವೆಲ್ಲ ಸುಖದ್ದು ಮಾಡುವೆನು), 'ಸುಖಮಯ ಝಾಲಾ ಹಾ ಸಂಸಾರೀ' (ಸಂಸಾರದಲೆಲ್ಲ ಸುಖಮಯವಾಯಿತು) ಹೀಗೆಯೆ ನನ್ನ ಬಂಧು ಭಗಿನಿಯರಿಗೆ ಅನಿಸೀತು ಅಲ್ಲ ಅನಿಸಲಿಕ್ಕೇಬೇಕು. ಆಮೇಲೆ 'ಸರ್ವ ವಿಶ್ವಚಿ ಮಾಝೆಂ ಘರ। ಐಸಿ ಮತಿ ಜಯಾಚೆ ಥೋರ' (ವಿಶ್ವವೆಲ್ಲ ನನ್ನ ಮನೆ ಎಂಬದಾಗಿ ಯಾವನ ಬುದ್ಧಿ ಆಗುವದೊ), ಹೀಗೆ ಜ್ಞಾನೇಶ್ವರರ ಉಕ್ತಿ ಪ್ರಕಾರ ಅನುಭವ ಬಂದೀತು.

ಇದನ್ನು ಲಕ್ಷದಲ್ಲಿಡಿರಿ, ಪ್ರಯತ್ನವು ಇದು ಶ್ರೇಷ್ಠವಾದ ರಾಮಬಾಣ ಉಪಾಯವಾಗಿದೆ. ನಿಷ್ಠೆಯು ತನ್ನಲ್ಲಿ ಹುಟ್ಟಲಿಕ್ಕೆ ಪ್ರಯತ್ನವೇ ಕಾರಣೀಭೂತ ವಿರುವದು. ನಿರಂತರ ಪ್ರಯತ್ನ ಮಾಡುತ್ತಾ ಇರುವದು, ಯಶಾಪಯಶದ ಕಡೆಗೆ ಲಕ್ಷಕೊಡದಿರುವದು ಇದೇ ನಮ್ಮ ಕರ್ತವ್ಯವು. ಅಭ್ಯಾಸವು ಇಷ್ಟು ದೃಢ ವಾಗಬೇಕಲ್ಲ, ತಾನು ಸ್ವಪ್ನದಲ್ಲಿ ಮತ್ತು ಗಾಢ ನಿದ್ರೆಯಲ್ಲಿ ಸಹಾ ಪ್ರಯತ್ನ ಮಾಡುತ್ತ ಇರುತ್ತಿದ್ದೇನೆ ಅಂತ ತಿಳಿಯುತ್ತಿರಬೇಕು. ಹ್ಯಾಗೆ ಮನೋಮಯ ಜಪ ಮಾಡಬಹುದೊ ಹಾಗೆಯೇ ಮನೋಮಯ ಪ್ರಯತ್ನವೂ ಆದರೆ ನಿಮ್ಮ ಕಾರ್ಯಭಾಗ ಆಗೇ ಆಯಿತು. ನೋಡಿರಿ, ಯಾವದಾದರೊಂದು ವಿಷಯದ ತೀವ್ರ ಭಾವನೆಯಾಯಿತೆಂದರೆ, ಅದು ಸ್ವಪ್ನದೊಳಗೆ ಬಂದು ಪೂರ್ಣವಾಗು

ವದು, ಮತ್ತು ಅದರದೇ ಸಾಕ್ಷಾತ್ಕಾರವು ಮರುದಿನ ಪ್ರಗಟ ಸ್ವರೂಪದಿಂದ ಆಗುತ್ತದೆ.

ಭಾವನೆಯ ಮಹತ್ವ ಎಷ್ಟದೆ ಎಂಬದು ನಾನು ನನ್ನ ಸ್ವಾನುಭವದ ಮೇಲಿಂದಲೇ ಹೇಳುವೆನು.

ಹಿಂದೆ ಒಮ್ಮೆ ನಾನು ನನ್ನ ಒಬ್ಬ ಸ್ನೇಹಿತನಿಗೆ ಕೇಳಿದೆ, “ಯಾಕೊ ನಿನಗೆ ಇಂಥ ಕೆಟ್ಟಕೆಟ್ಟ ರೋಗಗಳು ಯಾಕಾಗುತ್ತಿವೆ?” ಅವನು ಉತ್ತರ ಕೊಟ್ಟನು, “ನನ್ನ ಕಡೆಯಿಂದ ಮೂರ್ಖತ್ವದಿಂದ, ಕೆಲವು ಮಿತ್ರರ ಬೆನ್ನುಹತ್ತಿ ಇಂಥ ರೋಗಗಳಾದವು. ನನಗೆ ಈಗ ಈ ದೆಶಿಯಿಂದ ಬಹಳ ಪಶ್ಚಾತ್ತಾಪವಾಗುತ್ತದೆ. ಇದರ ಮೇಲೆ ನಾನು ವನೌಷಧಿಗಳನ್ನು ಹಿಂದೆ ಬಹಳ ತಕ್ಕೊಂಡೆನು. ಒಬ್ಬನು ಒಂದು ಔಷಧವನ್ನು ಚಿಲಮಿಯೊಳಗಿಂದ ಸೇದಲಿಕ್ಕೆ ಕೊಟ್ಟನು, ಮತ್ತು ಅದರಿಂದ ಸ್ವಲ್ಪ ಒಳ್ಳೇದಾಯಿತು. ಅನಂತರ ಈಗ ಏಳೆಂಟು ವರ್ಷಗಳಾದವು, ಆ ರೋಗಗಳು ಪುನಹಾ ಬಂದಿರುತ್ತವೆ. ನೀವು ಇವನ್ನು ತಕ್ಕೊಂಡರೆ ಚಲೋದಾಡೀತು, ನಿನ್ನ ಉಪಕಾರವನ್ನು ನಾನು ಜನ್ಮಜನ್ಮಕ್ಕೆ ಮರಿಯಲಿಕ್ಕಿಲ್ಲ. ನೀನು ತಕ್ಕೊಂಡಿ ಅಂದರೆ ನಿನ್ನ ಪೂರ್ವದ ಚಮತ್ಕಾರಗಳೆಲ್ಲ ನಿಜವಾದ್ದಂತೆ ನಾನು ತಿಳಕೊಂಡೇನು. ನಿನ್ನ ಕೈಯಿಂದ ನನ್ನ ದೇಹದ ಸಾರ್ಥಕವಾಗಬೇಕು.” ಹೀಗೆ ಅವನು ನನಗಂದನು, “ಆದರೆ ನಿನ್ನನ್ನು ಕಂಡು ಜನರು ನಕ್ಕಾರು ಮತ್ತು ನಿನ್ನ ನಿಂದೆ ಮಾಡಿ ನಿನಗೆ ದೋಷ ಕೊಡುವರು. ಇದರ ವಿಚಾರ ಮಾತ್ರ ಮಾಡು” ಎಂದು ಹೀಗೂ ಹೇಳಿದನು. ಆ ಕಾಲದಲ್ಲಿ ನನಗೆ ಸ್ವಲ್ಪ ಅಂತಃಸ್ಫೂರ್ತಿ ಬಂದು ನಾನಂದೆ, “ಜನರು ಬೇಕಾದ್ದು ಅನ್ನಲಿ, ನಾನು ಅಂತಃಕರಣದಲ್ಲಿ ಶುದ್ಧನಿದ್ದರೆ ನನಗೆ ಜಗದ ಏನು ಗೊಡವೆ? ನನ್ನ ಅಂತಃಕರಣದಲ್ಲಿ ನಾನು ಪವಿತ್ರನಿದ್ದೇನೊ ಇಲ್ಲ? ಅಜ್ಞಾನ ಹುಡುಗನ ಕೈಲಿಂದ ಅಪರಾಧವಾಯಿತೆಂದರೆ ಸರಕಾರದವರು ಅದು ಅವನ ಮೊದಲನೇ ತಪ್ಪು ಎಂದು ಅವನನ್ನು ಬಿಟ್ಟು ಬಿಡುತ್ತಾರೆ. ಸರಕಾರವೇ ಇಷ್ಟು ದಯಾಪರವಿದ್ದಾಗ್ಗೆ, ನನ್ನ ಸದ್ಗುರು ಸರಕಾರವು ನೂರು ಅಪರಾಧಗಳಾದರೂ ಅಜ್ಞಾನ ಮೂಲಕ ಆದರೆ ನನ್ನ ಮೇಲೆ ದಯೆ ತೋರಿಸಿ ನನ್ನನ್ನು ಸನ್ಮಾರ್ಗಕ್ಕೆ ಯಾಕೆ ಹಚ್ಚಲಿಕ್ಕಿಲ್ಲ. ತಾಯಿಯು ತನ್ನ ಮಗುವಿನ ಅಪರಾಧಗಳನ್ನು ಕ್ಷಮಿಸುತ್ತಾಳೆ, ಹೀಗಿದ್ದು ಪರಮಾರ್ಥದೊಳಗಿನ ಗುರುತಾಯಿ ನನ್ನನ್ನು ಕ್ಷಮಿಸುವಳು ಎಂಬದು ನನಗೆ ಪೂರ್ಣ ವಿಶ್ವಾಸವದೆ.” ಆ ಮೇಲೆ ಆ ರೋಗವನ್ನು ನಾನು ನನ್ನ ಮೇಲೆ ಎಳಕೊಂಡೆನು. ಹೊಟ್ಟೆಯ ಕೆಳಗೆ ಭಯಂಕರ ಗಜ್ಜಿ ಆದಂತೆ ಭಾಸವಾಯಿತು, ಮತ್ತು ಉರಿಯಲಿಕ್ಕೆ ಹತ್ತಿತು. ಆ ಮೇಲೆ ಒಬ್ಬನು ನನಗೆ ರಸಾಯನವನ್ನು ಕುಡಿಸಿದನು, ಹೆಚ್ಚಿಗೆ ರೋಗಗ್ರಸ್ತನಾದೆನು. ಆದರೆ ಯಾರಿಗೂ ಹೇಳಲಿಲ್ಲ. ಆ ಮೂಲಕ, ಅಂದರೆ ಕೇವಲ ಭಾವನೆಯಿಂದ ರೋಗಗಳು ಹ್ಯಾಗೆ ಬರುತ್ತವೆ, ವೇದನೆಗಳು ಹ್ಯಾಗಾಗು

ತ್ತವೆ, ಯಾತರಿಂದ ಆಗುತ್ತವೆ, ಸಂಸರ್ಗದಿಂದ ರೋಗಗಳು ಹ್ಯಾಗಾಗುತ್ತವೆ, ಇವುಗಳ ಕಷ್ಟದಿಂದ ನನಗೆ ಅನುಭವ ಬರಲಿಕ್ಕೆ ಹತ್ತಿತು. ಒಬ್ಬರೆಂದರು ಮೂತ್ರದಲ್ಲಿ ಕಲ್ಲು ಬಂದದೆ. ಒಬ್ಬರೊಂದು ಒಬ್ಬರೊಂದು ಹೀಗೆ ಮೂರು ನಾಲ್ಕು ರೋಗಗಳ ಹೆಸರು ಹೇಳಿದರು. ಈ ಪ್ರಕಾರ ರೋಗವಾಯಿತೆಂದು ನನಗೆ ಅತಿಶಯ ಪಶ್ಚಾತ್ತಾಪವಾಯಿತು. ಒಮ್ಮೆ ರಾತ್ರಿಯಲ್ಲಿ ಸ್ವಪ್ನ ಕೂತು ಕೊಂಡೆನು. "ಗುರುವೇ ಓಡಿ ಬಾ" ಎಂದು ಪ್ರಲಾಪಿಸಿದೆ. ಅನಂತರ ಸದ್ಗುರು ತಾಯಿಯು ಕೃಪೆ ಮಾಡಿದಳು, ಮತ್ತು ಆಶೀರ್ವಾದ ಕೊಟ್ಟು ಹೇಳಿದ್ದೇನಂದರೆ "ಹದಿನೈದು ದಿನಗಳಲ್ಲಿ ರೋಗ ಪೂರ್ಣ ನಾಶವಾಗುವದು." ಆ ಮೇಲೆ ನಾನು ಪೂರಾ ನೆಟ್ಟಗಾದೆ. ಶರೀರಕ್ಕೆ ಹಾಯಿಕೆ ಮಾತ್ರ ವಿಶೇಷವಾಗಿ ಉಳಿಯಿತು. ನನ್ನ ಅನುಭವದಿಂದ ನಾನು ಹೇಳುತ್ತೇನೆ ಒಬ್ಬರ ರೋಗ ತಕ್ಕೊಳ್ಳುವದು ಸಹಾ ಬುದ್ಧಿಕರ್ಮದ ಪ್ರಕಾರ ಆಗುವದು. ಆ ಮಿತ್ರನಿಗೆ ನಂತರ 'ಸೋಹಂ'ದ ಅನುಗ್ರಹ ಗುರುಮುಖದಿಂದ ಕೊಟ್ಟಿತು. ಆಮೇಲೆ ನಾಲ್ಕಾರು ವರ್ಷಗಳಲ್ಲಿ ಅವನು ಸ್ವರ್ಗವಾಸಿಯಾದನು. ಸಾಯುವಾಗ್ಗೆ ಸಂಸಾರದೊಳಗಿನ ಯಾವನೊಬ್ಬ ಮನುಷ್ಯನಿಗೂ ಅವನು ತನ್ನ ಹತ್ತರ ಕರಸಿಕೊಳ್ಳಲಿಲ್ಲ. 'ಮಹಾರಾಜರೆ, ನಾನು ಹೋಗುತ್ತೇನೆ, ಕೃಪೆ ಇರಬೇಕು' 'ಸೋಹಂ ಸೋಹಂ ಸೋಹಂ' ಹೀಗೆ ಮೂರು ವೇಳೆ ಅಂದು ಪಲಂಗದ ಕೆಳಗಿಳಿದು ಪ್ರಾಣವನ್ನು ಬಿಟ್ಟನು. ಈ ಸಂಗತಿಯಾಗಿ ಸುಮಾರು ಇಪ್ಪತ್ತು ವರ್ಷಗಳಾದವು.

ಈಶ್ವರಪ್ರಾಪ್ತಿಗಾಗಿ ಪರಮಾರ್ಥದಲ್ಲಿ ಜನಲಜ್ಜೆಯನ್ನು ಬಿಟ್ಟುಬಿಡಬೇಕು. ಯಾರೊ ಒಬ್ಬರು ಅನ್ನುತ್ತಾರೆ, "ಮಹಾರಾಜರೆ, ಜನರ ರೋಗವನ್ನು ನೀವು ತಕ್ಕೊಳ್ಳುತ್ತೀರನ್ನುತ್ತೀರಿ, ಹ್ಯಾಗಾದರೆ ನಿಮ್ಮ ರೋಗ ಯಾಕೆ ಕಳಕೊಳ್ಳಲಾರಿರಿ?" ಅವರಿಗೆ ನಾನು ಹೀಗೆ ಉತ್ತರ ಕೊಡುತ್ತೇನಲ್ಲ, ಅಪ್ಪಾ, ಸಂತ ಜನರು ರೋಗವನ್ನು ತಕ್ಕೊಳ್ಳುವದು ಪರರ ಮೇಲಿನ ದಯೆಯ ದೆಶೆಯಿಂದ, ಆದರೆ ಸ್ವತಃದ್ದು ಕರ್ಮಾನುಸಾರ ಆಗುವ ರೋಗಗಳನ್ನು ಅವರು ನೆಟ್ಟಗೆ ಮಾಡುವದಿಲ್ಲ, ಕಾರಣ ಇಷ್ಟರ ಸಲುವಾಗಿ (ಆ ಉಳಿದ ಕರ್ಮಭೋಗವನ್ನು ಭೋಗಿಸುವದಕ್ಕಾಗಿ) ಪುನಹಾ ಜನ್ಮಕ್ಕೆ ಬರಬೇಕಾಗುವದು, ಈ ಜನ್ಮದಲ್ಲಿಯೇ ಅವರು ದೇಹಪ್ರಾರಬ್ಧವನ್ನು ಭೋಗಿಸಿ ಅಲಿಪ್ತರಾಗಿರುತ್ತಾರೆ. ಯಾವ ರೋಗಗಳು ಮೊದಲು ಬಂದು ಹೋಗುವವೊ ಅವುಗಳಿಂದಲೆ ಕಡೆಗೆ ಸಾಯುತ್ತಾರೆ, ಜ್ಞಾನಿ ಇರಲಿ ಅಜ್ಞಾನಿ ಇರಲಿ ಸರ್ವರ ದೇಹಸ್ಥಿತಿಯು ಒಂದೇ. ಯಾಕೆಂದರೆ ರೋಗಗಳು ಹೋದರೂ ಅವು ಅತಿ ಸೂಕ್ಷ್ಮರೂಪದಿಂದ ಇರುವವು. ಹೀಗೆ ಕೆಲವರು ಅನ್ನುತ್ತಾರೆ. ನಾನು ಸಂತನಲ್ಲ ಎಂದು ನನಗೋಸ್ಕರ ಸಹಜವಾಗಿ ಗುರುಮಹಾರಾಜರು ಗುಣ ಮಾಡಿದರು. ನಾನು ಕೇವಲ ನಿಮಿತ್ತ ಮಾತ್ರ ಇದ್ದೇನೆ. ಎಲ್ಲಾ ಸಾಮರ್ಥ್ಯವು ಅವನದೇ ಇರುತ್ತದೆ ಗುರುಕೃಪೆಯಿಂದಲೆ ಇದರ ಮುಕ್ತಾಯವಾಯಿತು.

ಆದ್ದರಿಂದ ನಾನು ಹೇಳುತ್ತೇನಲ್ಲ, ನಿಮ್ಮ ಗುರುವಿನ ಮೇಲೆ ನಿಮ್ಮ ನಿಷ್ಠೆ ಇದ್ದರೆ, ನರನು ನಾರಾಯಣ ಯಾಕಾಗಲಾರನು? ಏಕನಾಥಿ ಭಾಗವತದಲ್ಲಿಯೂ ಹೀಗೆ ಹೇಳಿದೆ. ಒಬ್ಬನು ತನಗೆ ಹಾವು ಕಡಿಯಿತೆಂದು ಭಾವನೆಯನ್ನು ಮಾಡಿದನು; ಅವನು ಆ ಭಾವನೆ ಮೇಲಿಂದಲೆ ಹಾವು ಕಡಿಯದಿದ್ದರೂ ಮರಣ ಹೊಂದಿದನು. ಈ ಪ್ರಕಾರದ ಅನುಭವಗಳು ಐಹಿಕ ಸಂಗತಿಗಳಲ್ಲಿ ಬರುವದಾದ ಮೇಲೆ ಪರಮೇಶ್ವರಪ್ರಾಪ್ತಿ ವ ಮನಃಶಾಂತಿ ಉತ್ಕಟ ಭಾವನೆಯಿಂದ ಯಾಕೆ ಶಿಗಲಾರವು? ಶಿಗಲಿಕ್ಕೇ ಬೇಕು.

ಹಾಗಾದರೆ ಬಂಧು ಭಗಿನಿಯರೇ, ಯಾವಾಗಲೂ ಪರಮ ತೀವ್ರ ಭಾವನೆ ಮತ್ತು ಶ್ರದ್ಧೆ ಇವುಗಳನ್ನು 'ಸೋಹಂ'ದ ಅನುಸಂಧಾನದ ಮೇಲೆ ಇಟ್ಟಿದ್ದಾದರೆ ನಿಮ್ಮ ಕಾರ್ಯಭಾಗ ಆಗಲಿಕ್ಕೇ ಬೇಕು.

ಕೆಲವು ಸಾಧಕರು ತಮ್ಮ ಸುಧಾರಣೆ ಸಂಬಂಧ ನನಗೆ ಕೇಳುತ್ತಾರಲ್ಲ, "ಮಹಾರಾಜರೇ, ನನ್ನ ಸುಧಾರಣೆಕೆ ಆಗುತ್ತದೊ ಇಲ್ಲ ಎಂಬದು ತಿಳಿಯುವದಿಲ್ಲ. ಇತರರಿಗೆ ದೃಶ್ಯಗಳು ಕಾಣಿಸುತ್ತವೆ ನನಗೂ ಕಾಣಿಸುತ್ತಿದ್ದವು; ಆದರೆ ಈಗ ಏನೂ ಕಾಣಿಸುವದಿಲ್ಲ. ಹಾಗಾದರೆ ನಾನು ಮುಂದರಿಸುತ್ತ ನಡದೇನೆಂಬದು ಹ್ಯಾಗೆ ತಿಳಿಯಬೇಕು?

ಈ ಶಂಕೆಯ ಉತ್ತರವು ಇದೇ, ಕೆಲವು ಸ್ತ್ರೀಪುರುಷರಿಗೆ ಗುರುವು ಶ್ವಾಸೋಚ್ಛ್ವಾಸದಲ್ಲಿ ಕೂಡ್ರಿಸಿದ ಮಂತ್ರದ ಉಪದೇಶ ಕೊಟ್ಟಿದ್ದರಿಂದ, ಅವರು ಭಾವಿಕತ್ವದಿಂದ ಮಾಡಿದ ಪ್ರಾಣಾಯಾಮಾದಿ ಅಭ್ಯಾಸದಿಂದ ಮೇಲೆ ಹೇಳಿದ ಅನುಭವಗಳು ಬರುತ್ತವೆ.

ಇಂಥಾ ಸ್ತ್ರೀ ಅಥವಾ ಪುರುಷರು ನನ್ನ ಕಡೆ ತೀರಾ ಅಲ್ಪಪ್ರಮಾಣದಲ್ಲಿ ಬಂದಿರುತ್ತಾರೆ. ಬೇರೆ ಗುರುಗಳ ಕಡೆಯಿಂದ ಉಪದೇಶ ತಕ್ಕೊಂಡವರು ಬರೆ ಮೂರು ನಾಲ್ಕೇ ಮಂದಿ ಈ ಐವತ್ತೆರಡು ವರ್ಷಗಳಲ್ಲಿ ನನ್ನ ಕಡೆ ಬಂದಿದ್ದಾರೆ. ಮತ್ತು ಯಾರಿಗೆ ನಾನು ಗುರುಮುಖದಿಂದ 'ಸೋಹಂ' ಮಂತ್ರ ಹೇಳಿದ್ದೆ ಇಂಥಾ ಸಹೋದರಿಯರು ನಾಲ್ಕು ಐದು ಮಂದಿ ಮಾತ್ರ ಇದ್ದಾರೆ. ಇದರ ಮೇಲೆ ಇವತ್ತಿನ ತನಕ ಯಾರೂ ಬಂದಿಲ್ಲ. ಯಾವ ಎರಡು-ನಾಲ್ಕು ಸ್ತ್ರೀಯರು ನನ್ನ ಕಡೆ ಬಂದಿದ್ದರು, ಅವರಿಗೆ ಅವರ ಗುರುಗಳು ಜಪವನ್ನು ಶ್ವಾಸದಲ್ಲಿ ಕೂಡ್ರಿಸಿ ಪ್ರಾಣಾಯಾಮವನ್ನು ಮಾಡಲಿಕ್ಕೆ ಹೇಳಿರಬೇಕು. ಇಂಥಾ ಈ ಸ್ತ್ರೀಯರಿಗೆ ನಾನು ಬರೇ ಸ್ಥಳ ಮಾತ್ರ ತೋರಿಸಿ, ಅಲ್ಲಿ ಕೂತು ಅವರ ಗುರುಗಳು ಹೇಳಿದ ಜಪ ಮಾಡಲಿಕ್ಕೆ ಹೇಳಿದೆನು. ಪೂರ್ವದ ಧ್ಯಾನದ ಅಭ್ಯಾಸವಿದ್ದದರಿಂದ, ಹಾಗೆ ಮಾಡುತ್ತಲೆ, ಅವರಿಗೆ ಮೊದಲು ಯಾವ ನೋಟಗಳು ಕಾಣಸುತ್ತಿದ್ದದ್ದು ನಿಂತು ಹೋಗಿತ್ತೊ ಅವು ಈಗ ಮತ್ತೆ ಕಾಣಿಸಹತ್ತಿದವು. ಬೇರೆ ಜನರ ಎದುರಿಗೆ ಧ್ಯಾನಕ್ಕೆ ಕೂತಾಗ ಸಹ ಅವರಿಗೆ ಮೇಲೆ ಹೇಳಿದಂತೆ ಅನುಭವಗಳು ಬರುತ್ತವೆ.

ಒಬ್ಬರಿಬ್ಬರ ಅಗ್ರಶಿದ ಮೇಲೆ ಅವರ ಗಂಡಂದಿರ ಎದುರಿಗೆ ಧ್ಯಾನಕ್ಕೆ ಕೂಡ್ರಿಸಿದೆ. " 'ಸೋಽಹಂ' ಮಂತ್ರದ ಜಪವನ್ನು ಇಂಥಾ ಸ್ಥಾನದ ಮೇಲೆ ಲಕ್ಷವಿಟ್ಟು ಮಾಡಿರಿ " ಎಂದು ಹೇಳಿದೆ. ಹಾಗೆ ಅವರು ಮಾಡುತ್ತಲೆ ಬಹಳ ನಾದಗಳು ಕೇಳಬಂದವು ಮತ್ತು ಅವರಿಗೆ ನಾನಾ ನೋಟಗಳೂ ಕಾಣಹತ್ತಿದವು. ಇರಲಿ.

ತಮ್ಮ ಪ್ರಗತಿ ಎಷ್ಟಾಗಿಯದೆ ಅದಕ್ಕೂ ಹೆಚ್ಚಿಗೆ ಆಗಬೇಕು, ಅದ್ಯಾಕೆ ಆಗವಲ್ಲದು ವಗೈರೆ ಸಂಶಯಗಳನ್ನು ತಕ್ಕೊಂಡು, ಯಾರು 'ಸೋಽಹಂ' ಮಂತ್ರ ತಕ್ಕೊಂಡಿದ್ದಾರೆ ಇಂಥಾ ಹೊಸ ವ ಹಳೆ ಮಂದಿ ಬರುತ್ತಾರೆ, ಅವರೆಲ್ಲರಿಗೆ ನಾನು ಪ್ರಗತಿ ಎಂದು ಯಾವದಕ್ಕೆ ಹೇಳುತ್ತೇನೆ ಇದನ್ನು ಹೇಳುವೆನು.

ಕಾಮ ಕ್ರೋಧ ಲೋಭ ವಗೈರೆ ವಾಸನೆಗಳು, ಅವು ಐಹಿಕ ಸುಖದ್ದು ಇರಲಿ ಅಥವಾ ಯಾತರದೂ ಇರಲಿ ಅವು ಮೂಲದಲ್ಲೇ ಇರುತ್ತವೆ. ಅವೆಲ್ಲವುಗಳ ಮೇಲೆ ದೀರ್ಘಕಾಲದ ಮಂತ್ರಾಭ್ಯಾಸದಿಂದ ಜಯಹೊಂದಬೇಕು ಮತ್ತು ಸರ್ವಭೂತಾತ್ಮವೃತ್ತಿ ಉತ್ಪನ್ನವಾಗಿ ಅವುಗಳು ತಮ್ಮಷ್ಟಕ್ಕೆ ಕಡಿಮೆ ಕಡಿಮೆಯಾಗಿ ಕಡೆಗೆ ಸಮೂಲ ನಾಶವಾಗಬೇಕು, ಅಂದರೆ ನಿಜವಾಗಿ ಪ್ರಗತಿ ಆಯಿತೆಂದು ಹೇಳಬಹುದು. ಇದನ್ನು ತಿಳಿಯಲಿಕ್ಕೆ ಗುರುವಿಗೆ ಕೇಳುವದು ಅವಶ್ಯವಿಲ್ಲ. ಅದು ತನಗೆ ಸ್ವತಃ ತಿಳಿಯುತ್ತದೆ. ಇದಕ್ಕೆ ಪ್ರಗತಿ ಅನ್ನುತ್ತಾರೆಂದು ನಾನು ತಿಳಿಯುತ್ತೇನೆ.

ಈಗ ಬೇರೆ ಬೇರೆ ಪ್ರಕಾರದ ನೋಟಗಳು ಕಾಣಿಸುತ್ತವೆ ಆದರೆ ಆ ನೋಟಗಳಿಗೆ ಮಹತ್ವವನ್ನು ಕೊಡಬಾರದು. ಯಾವ ಸಂತರೂ ಅವಕ್ಕೆ ಮಹತ್ವವನ್ನು ಕೊಡಲಿಲ್ಲ; ನಾನಾದರೂ ಒಬ್ಬ ಅಭ್ಯಾಸಿ ಇರುವದರಿಂದ ಅವಕ್ಕೆ ಮಹತ್ವವನ್ನು ಕೊಡುವದಿಲ್ಲ. ನನ್ನ ಅಭ್ಯಾಸವೆಂದರೆ 'ಗುರು ಹಮಾರಾ ಜಪ ಕರೆ ಹಮ ಬೈಠೆ ಆರಾಮ' (ನನ್ನ ಗುರುವು ಜಪ ಮಾಡುತ್ತಾನೆ, ನಾನು ಆರಾಮ ಕೂಡ್ರುತ್ತೇನೆ). ನಾನು ಯೋಗಾಭ್ಯಾಸವನ್ನಾದರೂ ಎಂದೂ ಮಾಡಲಿಲ್ಲ, ಮತ್ತು ಯಾವ ಪ್ರಕಾರದ ಶಾಸ್ತ್ರವಾದರೂ ನಾನು ತಿಳಿಯೆನು. ಯಾಕೆಂದರೆ ನನ್ನ ಶಿಕ್ಷಣವು ಮರಾಠಿ ಮೂರನೇ ಇಯತ್ತೆಯ ವರೆಗೆ ಆಗಿಯದೆ, ನಾನು ಏನು ಹೇಳಬಲ್ಲೆನು? ಅದರೊಳಗೂ ಕಿಡಿಗೇಡಿತನದಿಂದ ಕಾಲಹರಣ ಮಾಡಿದೆ. ನನ್ನ ಅದೃಷ್ಟ ದೊಡ್ಡದೆಂತ ಗುರುವು ನನಗೆ ಸ್ವೀಕಾರ ಮಾಡಿದನು. ಗುರುವಿನ ಮಂತ್ರವನ್ನು ಹುಚ್ಚನಂತೆ ಯಾರು ಬರುವರೊ ಅವರಿಗೆ ಹೇಳುತ್ತ ಇರುತ್ತೇನೆ. ಇಷ್ಟೇ ನನ್ನ ಬೆಲೆ. ಯಾರಾದರೂ ತನ್ನ ಅನುಭವಗಳನ್ನು ಹೇಳಲಿಕ್ಕೆ ಬಂದರೆ ಅವರನ್ನು ನನ್ನ ಗುರುಕಡೆಗೆ ಹವಾಲಿ ಮಾಡುತ್ತೇನೆ. ಈಗ ಸ್ವಲ್ಪದರಲ್ಲಿ ಹೇಳುವದೇನೆಂದರೆ, 'ಸೋಽಹಂ'ದ ಜಪ ಯಾರಾದರೂ ಮಾಡಿದ್ದಾದರೆ ಕೆಲವರಿಗೆ ನೋಟಗಳು ಎಂದೂ ಕಾಣಿಸದೆ ಇದ್ದರೂ, ಪ್ರಪಂಚದಲ್ಲಿ

ಅವರು ಎಂದೂ ಅನುಭವಿಸದಂಥ ಸಮಾಧಾನ ವ ಆನಂದವು ಅವರಿಗೆ ಪ್ರಾಪ್ತ ವಾಗುವದು. ಅವರಿಗೆ ನಾದ ಕೇಳಬರಲಿ, ಬರದೆ ಇರಲಿ; ನೋಟಗಳು ಕಾಣಿಸಲಿ ಅಥವಾ ಕಾಣಿಸದೆ ಇರಲಿ ಆನಂದ ವೃದ್ಧಿಯಾಗುತ್ತಾ ಅದು ಯಾವಾಗಲೂ ವೃದ್ಧಿಯಾಗುತ್ತಿದ್ದರೆ ಪ್ರಗತಿ ನೆಟ್ಟಗಾಯಿತು, ಅಥವಾ ಆಗುತ್ತಾ ಇದೆ ಎಂದು ತಿಳಿಯತಕ್ಕದ್ದು, ಮತ್ತು ಸಂಶಯರಹಿತ ಸರಳವಾಗಿ ಪ್ರಪಂಚವನ್ನು ಮಾಡತಕ್ಕದ್ದು. ಮುಂದೆ ಎಂದಾದರೂ ನಾದ ಕೇಳಿಸಿದರೆ ಅಥವಾ ನೋಟಗಳು ಕಾಣಿಸಿದರೆ, ಅವುಗಳ ಕಡೆ ಲಕ್ಷ ಕೊಡದೆ ಬ್ರಹ್ಮವು ಮುಂದೆ ಅದೆ ಎಂದು ತಿಳಿದು ಮೇಲಿನ ಸಂಗತಿಗಳನ್ನು ದೂರ ಮಾಡುತ್ತಿರಬೇಕು.

ಮತ್ತೊಂದು ಏನಂದರೆ, ತಿಳಿಯಿರಿ, ಎರಡನೇಯವರಂತೆ ದೃಶ್ಯಗಳು ಕಾಣದಿದ್ದರೆ ಅಥವಾ ನಾದಗಳು ತನಗೆ ಕೇಳಿಸದಿದ್ದರೆ, ಗುರು ತೋರಿಸಿದ ಮಾರ್ಗವು ತಪ್ಪಲ್ಲ ಎಂದು ವಿಶ್ವಾಸವಿಟ್ಟು ಸಂಶಯರಹಿತ ಮನಸ್ಸಿನಿಂದ ದೀರ್ಘ ಕಾಲ ಅಭ್ಯಾಸ ಮಾಡಬೇಕು, ಎಂದು ಈ ಪ್ರಕಾರ ಆಬಾಲವೃದ್ಧರಿಗೆ ನನ್ನ ಹೇಳೋಣವದೆ. ಮೇಲಿನ ಎಲ್ಲಾ ಸಂಗತಿಗಳನ್ನು ಪೂರ್ಣವಾಗಿ ಲಕ್ಷದಲ್ಲಿಟ್ಟು ಕೊಂಡು ನೀವು ನಡದರೆ ನಿಮ್ಮ ಉದ್ದೇಶವು ಸಫಲವಾಯಿತು ಮತ್ತು ನೀವು ಕೃತಾರ್ಥರಾದಿರಿ ಎಂದು ನಿಶ್ಚಯವಾಗಿ ತಿಳಿಯಿರಿ.

ಸುಮ್ಮನೆ ಪ್ರಗತಿ ಇಲ್ಲ, ದೃಶ್ಯಗಳು ಕಾಣಿಸುವದಿಲ್ಲ, ಎಂದು ಸಂಶಯ ತಕ್ಕೊಂಡು ಒಣಗಿ ಹೋಗಬೇಡಿರಿ. ದೃಶ್ಯಗಳು ಕಾಣಿಸಿದರೂ, ಐಹಿಕ ಸುಖೇಚ್ಛೆ ವ ವಾಸನೆಯು ಹಾಗೆಯೇ ಉಳಿದಿದ್ದರೆ ನೀವು ಏನು ಮಾಡಿದಂತಾಯಿತು? ದೃಶ್ಯಗಳಿಂದ ವಾಸನಾಕ್ಷಯಕ್ಕೆ ಅಧಿಕ ಬೆಲೆ ಇರುವದು. ನರಜನ್ಮವು ಪುನಃ ಪುನಃ ಬರುತ್ತಿರುವದಿಲ್ಲವೆಂತ ಸಾಧುಸಂತರು ಹೇಳುತ್ತಾ ಬಂದಿದ್ದಾರೆ. ಅದನ್ನೇ ನಾನಾದರೂ ನಿಮಗೆ ಹೇಳುತ್ತೇನೆ. ಇದು ನನ್ನ ಅಧಿಕಾರವಲ್ಲ, ಇವು ಆತ್ಮನ ಮಾತುಗಳವೆ.

ಮನುಷ್ಯನು ಮೂಲತಃ ಜ್ಞಾನಿ ಇದ್ದಾನೆ. ಆದರೆ ಅಜ್ಞಾನದಿಂದ ಭ್ರಮೆಹೊಂದಿದ್ದಾನೆ. ಆ ಅಜ್ಞಾನವನ್ನು ನಿರ್ಮೂಲ ಮಾಡುವ ಉದ್ದಿಶ್ಯ, ಜ್ಞಾನೇಶ್ವರ, ತುಕಾರಾಮ, ಏಕನಾಥ ಇವರಂಥಾ ಸಂತರು ಪೂರ್ವದಲ್ಲಿ ಆಗಿ ಹೋದರು ಮತ್ತು ಈಗಿನ ಕಾಲದಲ್ಲಿ ಸಾಯಿ ಮಹಾರಾಜ (ಶಿರಡಿ), ಗುಲಾಬರಾವ ಮಹಾರಾಜ, ರಾಮಕೃಷ್ಣ ಪರಮಹಂಸ, ಶ್ರೀನಾರಾಯಣ ಸರಸ್ವತಿ (ಅಂತ್ರಿ) ವಗೈರೆ ಸಂತ ಜನರು ಜಗದುದ್ಧಾರ ಮಾಡುವ ಸಲುವಾಗಿ ಬಂದಿದ್ದರು ಮತ್ತು ಮುಂದೆಯೂ ಬರುವರು, ಈಗಲೂ ಇದ್ದಾರೆ.

ಬಂಧು ಭಗಿನಿಯರೆ ಜಾಗೃತೆ ಹೊಂದಿರಿ.

ಒಬ್ಬೊಬ್ಬರು ಎಂದಾದರೂ ನನ್ನ ಪ್ರಗತಿಯ ಸಂಬಂಧ ಕೇಳುತ್ತಾರೆ ಅವರಿಗೆ ನನ್ನದು ಈ ಕೆಳಗಿನಂತೆ ಉತ್ತರವಿದೆ.

ಯಾವ ಸಂತರು ನನಗೆ ಚಿಕ್ಕಂದಿನಲ್ಲಿ ಭೆಟ್ಟಿಯಾಗಿದ್ದರು, ಅವರದು ನನ್ನ ಮೇಲೆ ಬಹಳ ಪ್ರೇಮವಿತ್ತು. (೧) ಶ್ರೀಗಜಾನನ ಮಹಾರಾಜ ಶೇಗಾಂವ (೨) ಶ್ರೀನಾರಾಯಣ ಸರಸ್ವತಿ ಮಹಾರಾಜ (ಅಂತ್ರಿ), (೩) ಶ್ರೀಗುಲಾಬರಾವ ಮಹಾರಾಜ, (೪) ನಂಗೆ ಮಹಾರಾಜ ವಾಶಿಮ, (೫) ಶ್ರೀಸಾಯಿಬಾಬಾ ಇವರದು ನನ್ನ ಮೇಲೆ ನಿಷ್ಕಾಮ ಪ್ರೇಮವಿತ್ತು, (೬) ಶ್ರೀರಾಮಮಾರುತಿ ಮಹಾರಾಜ, ಇವರೂ ನನ್ನ ಮೇಲೆ ಬಹಳ ಪ್ರೇಮ ಮಾಡುತ್ತಿದ್ದರು. ಕಲ್ಯಾಣದಲ್ಲಿ ನಾನು ಅವರಿಗೆ ಭೆಟ್ಟಿಯಾಗಲಿಕ್ಕೆ ಹೋದಾಗ ಅವರು ಅವರ ಚಿಕ್ಕ ವಯಸ್ಸಿನ ಸ್ಥಿತಿಯನ್ನು ಪಾಟಿಯ ಮೇಲೆ ಬರೆದು ತೋರಿಸಿದರು. (೭) ಶ್ರೀಹರಿಹರ ಮಹಾರಾಜರು ನಾನು ವಾಶಿಮದ ಶಾಲೆಯಲ್ಲಿ ಕಲಿಯುವಾಗ ಇವರು ಕರುಣೇಶ್ವರ ದೇವಾಲಯದಲ್ಲಿ ಇಳಿದಿದ್ದರು. ಅವರು ಮೌನಿಗಳಾಗಿದ್ದರು. ನಾಲ್ಕೈದು ಜನರು ಮಾತ್ರ ಅವರ ಕೂಡ ಇದ್ದರು. ಅವರ ಮುಕ್ಕಾಮ ಅಲ್ಲಿ ಸುಮಾರು ಏಳೆಂಟು ದಿನತನಕವಿತ್ತು. ಅವರೂ ಪಾಟಿಯ ಮೇಲೆ ಬರೆದು ತೋರಿಸುತ್ತಿದ್ದರು. ಅವರು ವರ್ಣದಿಂದ ಕಪ್ಪು ಇದ್ದರೂ ಅವರ ಕಾಂತಿಯು ಸತೇಜವಾಗಿತ್ತು. ಚಿತ್ರದೊಳಗಿನ ರಾಮದಾಸನಂತೆ ಅವರ ಮೈಕಟ್ಟು ಇತ್ತು. ಅವರು ಲಂಗೋಟಿ ಉಟ್ಟಿದ್ದರು, ಆಗ್ಗೆ ಅವರು ನನಗೆ ಪಾಟಿಯ ಮೇಲೆ ಬರೆದು ತೋರಿಸಿದ್ದೇನಂದರೆ "ಎಲ್ಲಿತನಕ ನಂಗೆ ಮಹಾರಾಜರು ವಾಶಿಮದಲ್ಲಿರುತ್ತಾರೆ, ಅಲ್ಲಿತನಕ ವಾಶಿಮದಲ್ಲಿ ಪ್ಲೇಗ ಬರಲಿಕ್ಕೆ ಶಕ್ಯವಿಲ್ಲ. ಮತ್ತು ನಿನ್ನ ಮೇಲೆ ಮೂರೂ ಕೃಪೆ ಪೂರ್ಣವಾಗಿ ಇದೆ. ನಿನ್ನ ದೆಶೆಯಿಂದ ಮುಮುಕ್ಷು ವ ಭಾವಿಕ ಜನರು ಸಂಸಾರವನ್ನು ದಾಟುವರು." ಆಗ್ಗೆ ನಾನು ಚಿಕ್ಕವ ಅಂದರೆ ೧೫–೧೬ ವರ್ಷಗಳ ವಳಗೆ ಇದ್ದದರಿಂದ ನನಗೆ ಅದರ ಅರ್ಥ ತಿಳಿಯಲಿಲ್ಲ ಮತ್ತು ಈಗಲೂ ತಿಳಿಯದು. ಗುರುವಿನ ಮೇಲೆ ವ ಆತ್ಮನ ಮೇಲೆ ಪೂರ್ಣ ನಿಷ್ಠೆಯು ಸ್ಥಿರವಾಗಿದೆ, ಮತ್ತು ನನ್ನ ಅಭ್ಯಾಸವು ನಾನು ಮಾಡದಿದ್ದರೂ ಆಗುತ್ತ ಇದೆ, ಇಷ್ಟುಮಾತ್ರ ನನಗೆ ತಿಳಿಯುತ್ತದೆ.

ಒಮ್ಮೆ ಮಧ್ಯಾಹ್ನದ ಮೇಲೆ ಮೂರು–ನಾಲ್ಕು ಹೊಡಿಯುವ ವೇಳೆ, ಜಾಗೃತಿಯಲ್ಲಿಯೇ ಜಪವು ನಡದದೆ, ಅಜಪದ–ಅನುಸಂಧಾನ ಇದೆ, ಇಂಥ ವೇಳೆಗೆ 'ಸಾಧಕನ ದಶೆಯಿಂದ ನೀನು ಸಿದ್ಧ ಆಗಿದ್ದಿ, ಮಾಡುವದು ಮಾಡದಿರುವದು ಸಮಾನವದೆ,' ಹೀಗೆ ಆತ್ಮಸಾಕ್ಷಾತ್ಕಾರವಾಯಿತು. ನಾನು ಎದ್ದು ಕೂತುಕೊಂಡೆನು. ಆದರೂ ಇಲ್ಲಿತನಕ ನಾನು ಸಿದ್ಧನಾದೆನೆಂದು ನನಗೆ ಅನಿಸುವದಿಲ್ಲ. ಸಿದ್ಧನ ಮನೆಗೆ ಮುಟ್ಟಿದೆನು. ನಾನು ಯಾರು ಎಂಬದನ್ನು ಸ್ವಲ್ಪಸ್ವಲ್ಪ ಶೋಧಿಸುತ್ತಾ ಇದ್ದೇನೆ. ನಾನು ನೀರಿನ ದಂಡೆಗೆ ಮುಟ್ಟಿದ್ದೇನಾದರೂ ಒಳಗೆ ಹಾರಲಿಲ್ಲ. ನಾನು ಇನ್ನೂ ಅಭ್ಯಾಸಿ ಇದ್ದೇನೆ ಎಂಬಂತೆ ಅನಿಸುವದು. 'ದಿಲ್ಲಿಪರ ಪಹುಂಚೆ ಪರ ದಿಲ್ಲಿ ತೊ ಬಹೋತ ದೂರಹೈ' ಹೀಗೆ ನನ್ನ ಅನುಭವಕ್ಕೆ ಬರುತ್ತದೆ. ಇರಲಿ. ಆದ್ದರಿಂದ 'ರಾಮ ಹಮಾರಾ ಜಪ ಕರೆ, ಹಮ ಬೈಠೆ ಆರಾಮ

ಇಷ್ಟೆ ನನಗೆ ಗೊತ್ತಾಗುತ್ತದೆ. ' ಸರ್ವ ವಿಶ್ವವೇ ನನ್ನ ಮನೆ ' ಇಷ್ಟು ಅನುಭವ ಬರಲಿಕ್ಕೆ ಜನ್ಮಗಳೆಷ್ಟು ಬರಬೇಕಾಗುತ್ತವೆ ಯಾರಿಗೆ ಗೊತ್ತು. ಆದರೆ ನಿಷ್ಠೆ ಮಾತ್ರ ಹೀಗೆ ಇರಬೇಕಲ್ಲ, ಇದೇ ಜನ್ಮದಲ್ಲಿ ಇಂಥ ಅನುಭವವು ಬರಬೇಕು. ಯಾರೂ ಹೇಳ್ಯಾರು, ನಾನು ಆ ಅನುಭವವನ್ನು ಈಗಲೂ ತಕ್ಕೊಳ್ಳುತ್ತೀರ ಬಹುದು. ನಾನು ಅಜ್ಞಾನಿ ಇರುವದರಿಂದ ತಿಳಿಯುವದಿಲ್ಲ. ನನಗೆ ಯಾವ ಪ್ರಕಾರದ್ದೂ ಜ್ಞಾನವಿಲ್ಲ. ಒಳ್ಳೇವು ಮತ್ತು ಸತ್ಯಮಾತುಗಳು ಗುರುಗಳದೆ ಅವೆ, ಮತ್ತು ಹುಚ್ಚು ಮಾತುಗಳು ಅರ್ಥವಿಲ್ಲದ್ದು ಅವೆಲ್ಲ ನನ್ನವೆಂದು ತಿಳಿದು ಜನರೊಳಗಿನ ಜನಾರ್ಧನನು ನನ್ನನ್ನು ಕ್ಷಮಿಸಬೇಕು.

ನನ್ನ ಕಡೇ ಹೇಳುವಿಕೆ ಇಷ್ಟೇಅಲ್ಲ, ನಿಷ್ಠಾವಂತ ಸಾಧಕನು ಸಾಕ್ಷಾತ್ಕಾರಿ ಅನುಭವಿ ಗುರುವಿಗೆ ಶರಣುಹೋಗಬೇಕು ಅಂದರೆ ಆ ಗುರುವು ಅವನ ಮೇಲೆ ಅನುಗ್ರಹ ಮಾಡುತ್ತಾನೆ ಮತ್ತು ವಿಷಯಾಸಕ್ತಿಯೊಳಗಿಂದ ಅವನನ್ನು ಪರಾವೃತ್ತಮಾಡುತ್ತಾನೆ. ಗುರುಗಳ ಲಕ್ಷಣಗಳು ದಾಸಬೋಧದಲ್ಲಿ ಬಹಳ ಹೇಳಲ್ಪಟ್ಟವೆ. ನನ್ನ ಮತದಿಂದ ಗುರುಗಳು ಎರಡು ಪ್ರಕಾರದವರಿರುತ್ತಾರೆ. ಒಬ್ಬ ಮುಂಜಿ ಮಾಡುವವನು ಮತ್ತೊಬ್ಬ ಲಗ್ನ ಮಾಡಿಸುವವನು, ಮುಂಜಿ ಮಾಡುವವನೆಂದರೆ ಬರಿ ಕರ್ಮಮಾತ್ರ ಆಚರಿಸಲಿಕ್ಕೆ ಹೇಳುವವನು, ದೂರದಿಂದಲೇ ಮಾರ್ಗದರ್ಶನ ಮಾಡುವವನು. ಲಗ್ನ ಮಾಡಿಸುವವನೆಂದರೆ ಸಾಧಕನಿಗೆ ಜೀವಶಿವರ ಐಕ್ಯದ ಅನುಭವವನ್ನು ಮಾಡಿಸಿ ಕೊಡುವ ಸ್ವಾನುಭವಿ ಗುರು. ವಿಷಯಾಸಕ್ತಿಯಿಂದ ಮುಕ್ತಮಾಡಲಿಕ್ಕೆ ಸ್ವಾನುಭವಿ ಗುರು ಬೇಕು ಶ್ರೀರಾಮಕೃಷ್ಣ ಪರಮಹಂಸರು ಇದೇ ವಿಷಯದಲ್ಲಿ ಮೂರುಮಂದಿ ವೈದ್ಯ ಸಂಗತಿಯನ್ನು ಹೇಳಿದ್ದಾರೆ. ವೈದ್ಯರು ಮೂರು ಪ್ರಕಾರದವರಿದ್ದಾರೆ. ಒಬ್ಬನ ವೈದ್ಯನ ವೇಷ ಧರಿಸಿ ದೂರದಿಂದಲೇ ರೋಗಿಯನ್ನು ಕೇಳಿಕೊಂಡು ತಪಾಸ ಮಾಡುವವನು; ಮತ್ತೊಬ್ಬನು ರೋಗಿಯ ನಾಡಿಯನ್ನು ಪರೀಕ್ಷಿಸಿ ಔಷ ಗಳನ್ನು ಹೀಗೆ ತಕ್ಕೊ ಹಾಗೆ ತಕ್ಕೊ ಎಂದು ಮೇಲೆ ಮೇಲೆ ಹೇಳುವವನು ಮತ್ತು ಮೂರನೇಯವನು ರೋಗಿಯನ್ನು ಪೂರ್ಣ ತಪಾಸ ಮಾಡಿ ಔಷ ವನ್ನು ಅವನ ಬಾಯೊಳಗೆ ಸುರಿಯುವವನು, ಹೀಗೆ ಆ ಮೂರು ಪ್ರಕಾರ ವೈದ್ಯರಿರುವರು. ಸ್ವಾನುಭಾವಿ ಗುರು ಇವನು ಮೂರನೇ ಪ್ರಕಾರದವನ ಮಾರ್ಗವನ್ನು ತೋರಿಸಿ, ಅಲ್ಲಲ್ಲಿ ಅನುಭವದ ಮಜಲುಗಳನ್ನು ತೋರಿಸು ಜೀವಶಿವರ ಐಕ್ಯದ ಅನುಭವವನ್ನು ಮಾಡಿಸಿ ಕೊಡುವವನೇ ಸದ್ಗುರು. ಇಂ ಸದ್ಗುರುವಿಗೆ ಶರಣುಹೋಗಿ, ಅವನ ಮೇಲೆ ಪೂರ್ಣ ನಿಷ್ಠೆಇಟ್ಟು ಪ್ರಯ ಮಾಡುತ್ತ ಇದ್ದರೆ, ಆತ್ಮಪ್ರತೀತಿ ಬಂದ ವಿನಹಾ ಇರಲಾರದು.

# ಐದನೇ ಪ್ರಕರಣ.

## ಶಿಷ್ಯರ ಪರಮಾರ್ಥದೊಳಗಿನ ಅನುಭವಗಳು.

—— o ——

### ಶ್ರೀ. ಎಸ್. ಎಮ್. ಗಡಕರಿ, ಕಾರಕೂನ, ಜ. ಪೊ. ಆ. ಮುಂಬಯಿ.

### ಸದ್ಗುರುಭೇಟಿ, ಅನುಗ್ರಹ ಮತ್ತು ಅನುಭವ.

ಕೆಲವು ವರ್ಷಗಳ ಹಿಂದೆ ಅತಿ ಬಿಕ್ಕಟ್ಟಿನ ಸ್ಥಿತಿ ಪ್ರಾಪ್ತವಾದ್ದರಿಂದ ನಾನು ತೀರಾ ಉದಾಸನಾಗಿ ಹೋಗಿದ್ದೆ. ಏನು ಮಾಡಬೇಕೆಂದು ಸೂಚಿಸುವದಿಲ್ಲ. ನಾನು ದತ್ತಭಕ್ತನಾದ್ದರಿಂದ ಶ್ರೀಕ್ಷೇತ್ರ ಗಾಣಗಾಪುರ, ನರಸೋಬನವಾಡಿ ಮತ್ತು ಔದುಂಬರ ಈ ಮೂರು ದತ್ತಸ್ಥಾನಗಳಲ್ಲಿ ದರ್ಶನಕ್ಕೆ ಹೋಗಿರುವಾಗ್ಗೆ, ನನ್ನ ಮುಂದಿನ ಆಯುಷ್ಯವನ್ನೆಲ್ಲ ಪರಮಾರ್ಥಕ್ಕೆ ಹಾಕಬೇಕು ಎಂಬದಾಗಿ ಪ್ರತಿ ಒಂದು ಸ್ಥಾನದಲ್ಲಿ ನನಗೆ ಒಳಗಿಂದ ಪ್ರೇರಣೆಯಾಯಿತು. ಅಲ್ಲಿಂದ ಮನೆಗೆ ಬಂದ ಮೇಲೆ ಪರಮಾರ್ಥ ಮಾಡುವದಾದರೆ, ಯಾರಾದರೂ ಗುರು ಇರಬೇಕು ಎಂಬ ವಿಚಾರಗಳು ಮನಸ್ಸಿನಲ್ಲಿ ಚಡಪಡಿಸಹತ್ತಿದವು. ಆದಕ್ಕಾಗಿ ನಾನು ಸಾಕೋರಿಯಲ್ಲಿರುವ ಉಪಾಸನಿ ಮಹಾರಾಜರ ದರ್ಶನಕ್ಕೆ ಹೋದೆನು. ಮಹಾರಾಜರ ದರ್ಶನ ತಕ್ಕೊಂಡ ಮೇಲೆ ಅವರು ಬಹಳ ಪ್ರೇಮದಿಂದ ನನ್ನ ಎಲ್ಲ ಸ್ಥಿತಿಗತಿ ಕೇಳಿಕೊಂಡರು. ಅಲ್ಲಿಯ ಎಲ್ಲಾ ಪರಿಸ್ಥಿತಿಯಿಂದ ನನ್ನ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ಮನಸ್ಸು ಅಲ್ಲಿ ರಮಿಸಹತ್ತಿತು. ನನ್ನ ರಜೆಯು ತೀರುವತನಕ ಅಲ್ಲೆ ಇದ್ದು ಅನಂತರ ನಾನು ಮನೆಗೆ ಬಂದೆನು. ಅಂದಿನಿಂದ ನಡನಡುವೆ ಸಾಕೋರಿಗೆ ನನ್ನ ಹೋಗೋದು ಬರೋದು ಆಗುತ್ತಿತ್ತು. ಅಲ್ಲಿಯ ಉಪಾಸನಾಕ್ರಮ ಮತ್ತು ಇತರ ಕೆಲವು ನಿಯಮಗಳನ್ನು ನಾನು ಮುಂದೆ ಎಷ್ಟೋ ವರ್ಷಗಳವರೆಗೆ ಅವ್ಯಾಹತವಾಗಿ ನಡಿಸಿದೆ. ಆದರೂ ಮನಸ್ಸು ಎಲ್ಲಿಯೂ ತೊಡಕಬಾರದೆಂದು, ನಾನು ಎಲ್ಲಾ ಕಡೆಯಿಂದ ಬಿಡುಗಡೆಯಾಗಿ ಕೂತೆನು. ನಮ್ಮ ತಂದೆಯವರ ಕಾಲದಿಂದ ನಮ್ಮಲ್ಲಿ ಶ್ರೀದತ್ತನ ಒಂದು ಫೋಟೊ ಇತ್ತು. ನನ್ನ ಅಣ್ಣನ ಕಡೆಯಿಂದ ಅದರ ಬಹಳ ಸೇವೆಯಾಗಿತ್ತು. ಆ ಕಾರಣ ಆ ಫೋಟೋ ಬಹಳ ತೇಜಃಪುಂಜ ಕಾಣಿಸುತ್ತಿತ್ತು. ಕೆಲಕೆಲವು ವೇಳೆ ಫೋಟೋ ಎದುರಿಗೆ ಕೂತಿರುವಾಗ್ಗೆ ಹೀಗನಿಸುತ್ತಿತ್ತಲ್ಲ; ಇಷ್ಟು ದೇಹ ಕಷ್ಟ ಪಡಿಸಿದರೂ ಮುಂದಿನ ಮಾರ್ಗ ತಿಳಿಯದಿದ್ದರೆ, ನನ್ನ ಪೂರ್ವಕರ್ಮವು ಬಹಳ ಕಠಿಣವಾಗಿರಬೇಕು, ಹೀಗೆ ಅನಿಸಿ ಬಹಳ ಪಶ್ಚಾತ್ತಾಪವಾಗುತ್ತಿತ್ತು. ಆದರೆ ಇಂಥಾ ಪ್ರತಿಯೊಂದು ಪ್ರಸಂಗದಲ್ಲಿ ಫೋಟೊದೊಳಗಿಂದ ಒಂದು ತೇಜಃಪುಂಜ ಕೈ ಮೇಲೆ ಬಂದು "ನಿಲ್ಲು, ನಿಲ್ಲು" ಎಂದು ಸೂಚನೆ ಮಾಡುತ್ತಿತ್ತು.

ಆ ಮೂಲಕ ನಾನು ಪೂರ್ವಕವಾಗಿ ಮಾಡಿದ ಈಶ್ವರ ಸೇವೆಯು ಈಶ್ವರನ ಮನೆಯಲ್ಲಿ ರುಜು ಆಗುತ್ತಿರಬೇಕು ಎಂದು ತಿಳಿದು ನನ್ನ ಮನಸ್ಸಿಗೆ ಬಹಳ ಉಲ್ಹಾಸವಾಗುತ್ತಿತ್ತು. ಈ ರೀತಿಯಿಂದ ನನ್ನ ಕಾರ್ಯಭಾಗವು ಇವತ್ತು ಅಲ್ಲ ನಾಳೆಯಾದರೂ ಸಫಲವಾದೀತು ಈ ಆಶೆಯಿಂದ ಇದ್ದು ಬಹಳ ವರ್ಷಗಳಾದವು. ಆದರೆ ಮುಂದಿನ ಮಾರ್ಗವು ಏನು ಕಾಣಿಸಲಾರದು. ಇಂಥಾ ಪರಿಸ್ಥಿತಿಯಲ್ಲಿ ಒಮ್ಮೆ ಇಂಥಾ ಜೋರಿನ ವೃತ್ತಿ ಎದ್ದಿತಲ್ಲ, ನೌಕರಿ ಬಿಟ್ಟು ಮನೆಮಾರು ಬಿಟ್ಟುಕೊಟ್ಟು ಸರ್ವಸಂಗ ಪರಿತ್ಯಾಗ ಮಾಡಿ ಹಿಮಾಲಯಕ್ಕೆ ಹೊರಟು ಹೋಗಬೇಕು ಮತ್ತು ತಿರಿಗಿ ಮನೆಕಡೆಗೆ ತಿರುಗಬಾರದು. ಇಂಥಾ ನಿಶ್ಚಯ ಸ್ಥಿರವಾಯಿತೆಂದರೆ, ಸಾಕೋರಿಗೆ ಹೋಗಿ ಉಪಾಸನಿ ಮಹಾರಾಜರ ದರ್ಶನ ತಕ್ಕೊಳ್ಳಬೇಕು. ಆ ಮೇಲೆ ಅಲ್ಲಿಂದ ನಡೆಯುತ್ತ ಹೋಗಬೇಕು. ಈ ನನ್ನ ವಿಚಾರವು ನನ್ನ ಕುಟುಂಬದೊಳಗಿನ ಜನರಿಗೆ ತಿಳಿದಾಕ್ಷಣ, ನನ್ನ ಸಹೋದರಿ ಮತ್ತು ಹಿರೆ ಇಬ್ಬರು ಅಣ್ಣಂದಿರು ನನಗೆ ಹೇಳಿದರು, "ನಾವು ನಿನ್ನ ಕೂಡ ಸಾಕೋರಿ ತನಕ ಬರುವೆವು, ಮತ್ತು ಅಲ್ಲಿಂದ ನಾವು ತಿರಿಗಿ ಬರುತ್ತೇವೆ ಅಲ್ಲಿಂದ ನಿಮಗೆ ದೇವರು ಹ್ಯಾಗೆ ಬುದ್ಧಿ ಕೊಡುವನೊ ಹಾಗೆ ನೀವು ಮಾಡಿರಿ." ಆ ಪ್ರಕಾರ ಅವರು ನನ್ನ ಕೂಡ ಹೊರಟರು. ನಾವು ಸಾಕೋರಿಗೆ ಬಂದ ಮೇಲೆ ನನ್ನ ವಿಚಾರವನ್ನು ನನ್ನ ಅಣ್ಣಂದಿರು ಮಹಾರಾಜರ ಕಿವಿಯ ಮೇಲೆ ಹಾಕಿದರು. ಆ ಸಮಯದಲ್ಲಿ ಅವರು ಸಿಟ್ಟಿಗೆದ್ದು ನನಗೆ ಅಂದರು "ನನ್ನ ಮಾತು ಕೇಳುವ ಹಾಗೆ ಇತ್ತು ಅಂದರೆ, ಈ ನಿಮ್ಮ ವಿಚಾರವನ್ನು ಕೂಡಲೆ ರಹಿತ ಮಾಡಿರಿ. ಮತ್ತು ನೌಕರಿಯ ಮೇಲೆ ಹೋಗಿರಿ." ಇಷ್ಟಾದಮೇಲೆ ಅವರ ಆಜ್ಞೆಗೆ ಮಾನ ಕೊಡುವದು ಅವಶ್ಯವಾಯಿತು. ಅನಂತರ ಕೆಲವು ದಿನ ಅಲ್ಲಿ ಇದ್ದು ನಾನು ಮುಂಬಯಿಗೆ ತಿರಿಗಿ ಬಂದು ನೌಕರಿ ಮೇಲೆ ಹಾಜರಾದೆ. ನನ್ನ ಈ ವಿಚಾರವು ಕಡಕೋಡು ಬಿದ್ದದರಿಂದ ಮನಸ್ಸಿಗೆ ಬಹಳ ಕೆಟ್ಟ ಅನಿಸಿತು, ಮತ್ತು ನನ್ನ ಮಾರ್ಗದಲ್ಲಿ ಹೀಗೆ ಅಡಚಣಿಗಳು ಯಾಕೆ ಬರಬೇಕು ಇದು ತಿಳಿಯದರಿಂದ ನಾನು ದೊಡ್ಡ ಬಿಕ್ಕಟ್ಟಿನಲ್ಲಿ ಬಿದ್ದೆನು. ನನ್ನ ಬಂಧುಗಳು ಮಾತ್ರ ನನಗೆ ಹೀಗೆ ಹೇಳುತ್ತಿದ್ದರು "ಈ ಪ್ರಕಾರ ನಡೆಯುವಲ್ಲಿ ಏನೂ ಅರ್ಥವಿಲ್ಲ. ಈ ಮೂಲಕ ಆಯುಷ್ಯ, ದ್ರವ್ಯ, ಕಾಲ ವ ಪ್ರಕೃತಿ ಇವುಗಳ ನಿಷ್ಕಾರಣವಾಗಿ ಹಾನಿಯಾಗುತ್ತದೆ." ಇವರ ಕೂಡ ಅವರು ಯಾವ ಸತ್ಪುರುಷನ ಅನುಗ್ರಹವನ್ನು ತಕ್ಕೊಂಡಿದ್ದರೋ ಮತ್ತು ಅವನ ಕೃಪೆಯಿಂದ ಅವರ ಮನಸ್ಸಿಗೆ ಶಾಂತಿ ಮತ್ತು ಸುಖವು ಸಿಕ್ಕಿತ್ತು, ಆತನ ವರ್ಣನೆಯನ್ನು ಅವರು ಮಾಡುತ್ತಿದ್ದರು. ಆದರೆ ಅವರ ಹೇಳಿಕೆ ಮೇಲೆ ನನಗೆ ಎಷ್ಟೊಂದು ವಿಶ್ವಾಸವೂ ಕೂಡ್ರುತ್ತಿದ್ದಿಲ್ಲ. ಹಾಗೂ ಅಧಿಕ ವಿಚಾರ ಮಾಡಿದ ಮೇಲೆ ಹೀಗನಿಸುತ್ತಿತ್ತು, ಅವರು ಸಂಸಾರದಲ್ಲಿ ಇಷ್ಟು ಮುಳುಗಿದ್ದರೂ, ಅವರಲ್ಲಿ ಇಷ್ಟು ಅವರ್ಣನೀಯ ಶಾಂತಿಯು ವಸ್ತಿ ಮಾಡಿದೆ,

ಅಂದಮೇಲೆ, ಸದ್ಗುರು ಕೃಪೆಯಿಂದ ಅವರಿಗೆ ನಿಜವಾಗಿ ಅಢಳ ಶಾಂತಿಸುಖದ ಮಾರ್ಗವು ಶಿಕ್ಕಿರಬೇಕು.

ಒಂದು ದಿನ ಈ ಸತ್ಪುರುಷರಾದ ಗಜಾನನ ಮಹಾರಾಜರು ನಾಶಿಕ ದಿಂದ ದಾದರಕ್ಕೆ ಬಂದಿರುವಾಗ್ಗೆ, ನನ್ನ ಅಣ್ಣಂದಿರು ಬಹಳ ಆಗ್ರಹ ಮಾಡಿ ನನ್ನನ್ನು ಅವರ ದರ್ಶನಕ್ಕೆ ಕರಕೊಂಡು ಹೋದರು. ಮಹಾರಾಜರು ಯಾವ ಗೃಹಸ್ಥನಲ್ಲಿ ಇಳಿದಿದ್ದರು, ಅವರು ನನ್ನ ಮಿತ್ರರಿದ್ದರು. ಅವರ ಮನೆಗೆ ಹೋದಾಗ್ಗೆ, ಒಬ್ಬ ಗುರ್ತ ಇಲ್ಲದ ಗೃಹಸ್ಥನು, ಒಬ್ಬ ಸಾಮಾನ್ಯ ಮನುಷ್ಯನಂತೆ ಉಟ್ಟವ ನಿದ್ದು ಕೂತು ಕೊಂಡಿದ್ದನು. ಆ ಗೃಹಸ್ಥನ ಪಾದದ ಮೇಲೆ ನನ್ನ ಬಂಧುಗಳು ಮಸ್ತಕವನ್ನಿಟ್ಟದ್ದರ ಮೇಲಿಂದ, ಇವರೇ ಮಹಾರಾಜರಿರಬೇಕು ಎಂದು ತಿಳಿದು ನಾನು ಅವರ ಪಾದದಲ್ಲಿ ಮಸ್ತಕವನ್ನಿಟ್ಟು ಒಂದು ಕಡೆಗೆ ಕೂತುಕೊಂಡೆನು. ನನ್ನ ಬಂಧುಗಳು ಮಹಾರಾಜರಿಗೆ, “ ಇವರು ನಮ್ಮ ತಮ್ಮ, ನಿಮ್ಮ ದರ್ಶನಕ್ಕೆ ಬಂದಿರುತ್ತಾರೆ ” ಎಂದು ಹೇಳಿದರು. ಆ ಮೇಲೆ ನಾನು ಅಲ್ಲಿ ಸ್ವಲ್ಪಹೊತ್ತು ಕೂತು, ನಂತರ ಮನೆಗೆ ತಿರುಗಿ ಬಂದೆನು.

ಇದಾದ ಮೇಲೆ ಮೂರುವರ್ಷಗಳಾಗುತ್ತ ಬಂದವು. ನನ್ನ ಬಂಧುಗಳು ಮಾತ್ರ ತಮ್ಮ ಪರಮಾರ್ಥ ಮಾರ್ಗದ ಮೇಲಿನ ಅನುಭವಗಳನ್ನು ನಡುನಡುವೆ ಹೇಳುತ್ತಿದ್ದರು.

ಒಂದು ದಿನ ಶ್ರೀಗಜಾನನ ಮಹಾರಾಜರ ಚಾಫೇಕರ ಎಂಬ ಹೆಸರಿನ ಒಬ್ಬ ಶಿಷ್ಯರು ಮುಂಬಯಿಗೆ ಬಂದಿರುವಾಗ್ಗೆ, ದಾದರದಲ್ಲಿರುವ ನಮ್ಮ ಮನೆಯಲ್ಲಿ ನನ್ನ ಬಂಧುಗಳನ್ನು ಕೇಳುತ್ತ ಬಂದರು. ಆ ಸಮಯದಲ್ಲಿ ನನ್ನ ಬಂಧುಗಳು ನನಗೆ ಅವರ ಪರಿಚಯ ಮಾಡಿಸಿಕೊಟ್ಟರು. ಶ್ರೀ. ಚಾಫೇಕರ ನನಗೆ ಅಂದರು, “ ನಿಮಗೆ ಪರಮೇಶ್ವರ ಪ್ರಾಪ್ತಿಯ ತಳಮಳ ಹತ್ತಿದೆ, ಅಂತ ನಿಮಗೆ ಹೇಳ ಬೇಕೆಂತ ನನಗನಿಸುತ್ತದೆ, ಅದನ್ನು ಕೇಳಿರಿ, ನಿಮ್ಮ ಜಾತಿಯಲ್ಲಿ ಒಂದು ರತ್ನವು ಜನ್ಮಕ್ಕೆ ಬಂದದಿದ್ದು, ನೀವು ಸುಮ್ಮನೆ ಅತ್ತ ಇತ್ತ ವ್ಯರ್ಥ ಯಾತಕ್ಕೆ ಕಷ್ಟಪಡುತ್ತೀರಿ ? ನಾವು ಸ್ವತಃ ಆನಂದದ ಲಾಭ ಮಾಡಿಕೊಂಡಿರುತ್ತೇವೆ, ಎಂದು ನಿಮಗೆ ಹೇಳುತ್ತೇನೆ. ನಾನು ಬಹಳ ಸಾಧುಗಳ ದರ್ಶನವನ್ನು ತಕ್ಕೊಂಡಿದ್ದೆ, ಅವರ ಪೈಕಿ ಕೆಲವು ಸಾಧುಗಳು ಆತ್ಮಾನಂದದಲ್ಲಿ ಮಗ್ನರಾಗಿದ್ದನ್ನು ನೋಡಿದೆ. ನಾವು ಯಾವ ಸತ್ಪುರುಷನ ಅನುಗ್ರಹ ಪಡಕೊಂಡು ಆತ್ಮಾನಂದವನ್ನು ಉಪಭೋಗಿಸುತ್ತಿದ್ದೇವೊ, ಆ ವಿಭೂತಿ ನಾಶಿಕದಲ್ಲಿದೆ, ಮತ್ತು ಇಲ್ಲಿ ಪರಳದಲ್ಲಿರಲಿಕ್ಕೆ ಆಗಾಗ್ಗೆ ಬರುತ್ತಿರುತ್ತಾರೆ. ಹಾಗಾದರೆ ವ್ಯರ್ಥವಾಗಿ ಹೊತ್ತು ಕಳೆಯದೆ ಅವರು ಇಲ್ಲಿಗೆ ಬಂದಾಗ್ಗೆ ಅವರಿಗೆ ಅನನ್ಯಭಾವದಿಂದ ಶರಣು ಹೋಗಬೇಕು, ಅಂದರೆ ಮುಂದೆ ತಾನು ಯಾರು ಎಂಬದು ನಿಮ್ಮದು ನಿಮಗೇ ತಿಳಿದೀತು. ”

ಅನಂತರ ನಾನು ವಿಚಾರ ಮಾಡಿದೆನಲ್ಲ, ಈ ಗೃಹಸ್ಥರು ಇಷ್ಟು ಕಾಳುಲತೆಪಟ್ಟು ನನಗೆ ಹೇಳುತ್ತಾರೆ ಅಂದಮೇಲೆ, ಅದರಲ್ಲಿ ಏನಾದರೂ ಸತ್ಯ ವಿರಬೇಕು, ನಂತರ ಒಂದುದಿನ ಶ್ರೀಗಜಾನನ ಮಹಾರಾಜರು ಪರಳಕ್ಕೆ ಬಂದಿರುವಾಗ್ಗೆ ಬಂಧುಗಳ ಕೂಡ ನಾನು ಅವರ ದರ್ಶನಕ್ಕೆ ಹೋದೆ. ನನ್ನ ಬಂಧುಗಳು ನನ್ನ ಮನೋದಯುವನ್ನು ಶ್ರೀಗಜಾನನ ಮಹಾರಾಜರಿಗೆ ವ್ಯಕ್ತಮಾಡಿದ ಮೇಲೆ, ಮಹಾರಾಜರು ನನ್ನ ಸಮಾಚಾರನನ್ನೆಲ್ಲ ಕೇಳಿಕೊಂಡು, "ಗುರುವಾರ ಬೆಳಿಗ್ಗೆ ಬನ್ನಿ ಅಂದರೆ ನೋಡೋಣ" ಅಂತ ಹೇಳಿದರು. ಆ ಪ್ರಕಾರ ಶ್ರಾವಣ ವದ್ಯ ೩ (ಸಂಕಷ್ಟಿ ಚತುರ್ಥಿ) ತಾ. ೨೭-೮-೩೪ ದಿನ ಬೆಳಿಗ್ಗೆ ೯ ಘಂಟೆ ಸುಮಾರಕ್ಕೆ, ಹೂವಿನಮಾಲೆ, ಕರ್ಪೂರ, ಊದಿನಕಡ್ಡಿ, ಪೇಢೆ ಮತ್ತು ದಕ್ಷಣೆ ತಕ್ಕೊಂಡು ನಾನು ಶ್ರೀಗಜಾನನ ಮಹಾರಾಜರ ಕಡೆ ಹೋದೆನು. ಸಂಗತಿಯಲ್ಲಿ ನನ್ನ ಬಂಧುಗಳೂ ಇದ್ದರು: ಅಲ್ಲಿ ಹೋದ ಮೇಲೆ ಶ್ರೀಯವರ ಪೂಜೆಯನ್ನು ಮಾಡಿ, ಕೃಪೆ ಮಾಡುವ ಸಲುವಾಗಿ ಅವರಿಗೆ ನಾನು ಸವಿನಯ ಪ್ರಾರ್ಥನೆ ಮಾಡಿದೆನು. ಆಗ ಮಹಾರಾಜರು ನನಗೆ ಎರಡು ಮೂರು ಪ್ರಶ್ನೆ ಮಾಡಿದರು, ಮತ್ತು ಎದುರಿಗೆ ಕೂಡ್ರಲಿಕ್ಕೆ ಹೇಳಿ ಅನುಗ್ರಹ ಕೊಟ್ಟರು; ಮತ್ತು 'ಓಂ'ದ ಜಪಮಾಡಲಿಕ್ಕೆ ಹೇಳಿದರು. ಆಗ ಈ ಮಾರ್ಗ ಯಾವದು ಎಂದು ನಾನು ವಿಚಾರಿಸಿದೆನು; ಅದಕ್ಕವರು ಅದು ಸರ್ವತ್ರಿ ಮಾರ್ಗವೆಂದು ಹೇಳಿ, ಮತ್ತು ಕೆಲವು ಉಪದೇಶಪರ ವಿಷಯುಗಳನ್ನು ಹೇಳಿದರು, ಅವು ಹೀಗವೆ:—

ಅಂತಃಕರಣದಲ್ಲಿ ಯಾವಯಾವ ವೃತ್ತಿ ಏಳುವದೊ ಅದರ ಮೇಲೆ ಲಕ್ಷವಿಟ್ಟು ಸಾಕ್ಷಿರೂಪದಿಂದಿರುತ್ತಿರಿ: ಆ ವೃತ್ತಿಯ ಚಕ್ರದಲ್ಲಿ ಶಿಕ್ಕಿಬೀಳಬೇಡ. ಇಂದ್ರಿಯ ಜನ್ಯ ಸುಖದ ವಿಷಯುದಲ್ಲಿ ಅಸಕ್ಯ ಭಾವನೆ ಮತ್ತು ಸಂತ ಸಮಾಗಮ ವಗೈರೆ ಮಾಡುವದೇ ಪಥ್ಯ ಪಾಲಿಸಿದರೆ, ಈ ಸಂಸಾರ ಸಾಗರವನ್ನು ದಾಟಿಹೋಗಲಿಕ್ಕಾದೀತು. ಇದು ಸಾಧ್ಯವಾಗಲಿಕ್ಕೆ ಹಠಯೋಗದ್ದು ಸ್ವಲ್ಪ ಅವಶ್ಯಕತೆ ಇದೆ. ಆ ಯೋಗದಿಂದ ಜಗತ್ತಿನೊಳಗಿನ ಯಾವನಾದರೂ ಮುಮುಕ್ಷುವಿಗೆ ಸದ್ಗುರು ಕೃಪೆಯಿಂದ ಧ್ಯಾನಯೋಗದ ಪ್ರಾಪ್ತಿಮಾಡಿಕೊಳ್ಳಲಿಕ್ಕೆ ಬರುವದು, ಇಷ್ಟು ಸಾಧ್ಯವಾಯಿತೆಂದರೆ ಅದಕ್ಕೆ ಸದ್ಗುರು ಕೃಪೆಯಾಯಿತೆನ್ನುತ್ತಾರೆ. ರಾಜಯೋಗದಲ್ಲಿ ಹಠಯೋಗದ ಜರೂರಿ ಅದೆ, ಅದು ಮೇಲೆ ಹೇಳಿದ ಎರಡು ಮೂರು ಸಂಗತಿಗಳನ್ನು ಪಾಲಿಸುವದು ಮತ್ತು ಅದರ ಮೇಲೆ ನಿಮ್ಮ ಸ್ವಾಧೀನತೆಯನ್ನು ಇಡುವದು, ಇಷ್ಟರದೆಕೆಯಿಂದ ಅದೆ,

ಮೊದಲನೇ ದಿವಸವೇ 'ಓಂ'ಕಾರದ ದರ್ಶನವಾಯಿತು. ಕಿವಿಯೊಳಗೆ ಕೊಳವೆಯಿಂದ ಊದಿದಂತೆ ಅಗ್ನಿ, ಕಿವಿಯು ಮುಚ್ಚಳ ತೆರೆದಂತೆ ಆ ಜಪವು ಬಹಳ ನಿರ್ಬಂಧವಾಗಿ ಆಗ ಹತ್ತಿತು. ಕೊರಳಿನ ಶಿರಗಳು ಸಡಿಲಾದವ್ಷ

ಮತ್ತು ಅಲ್ಲಿಯ ನೋವು ನಿಂತಿತು, ಕಣ್ಣುರೆಪ್ಪೆಗಳು ಕೆಳಗೆ ಎಳೆದಂತಾಗಿ, ದೃಷ್ಟಿಯು ಸಹಜವಾಗಿ ನಾಸಿಕಾಗ್ರದಲ್ಲಿ ನಿಂತು ಅಲ್ಲಿ ಜಪವಾಗಹತ್ತಿತು. ನಾನಾಪ್ರಕಾರದ ಪ್ರಕಾಶಯುಕ್ತ ಮೋಡಗಳು ತೋರುತ್ತಿದ್ದವು, ಮತ್ತು ನನಗೆ ಶಾಂತತ್ವವು ಅನುಭವಕ್ಕೆ ಬಂತು. ಮುಂದೆ ಒಂದು ದಿನ ಗಣಪತಿ ದರ್ಶನವಾಯಿತು, ಮತ್ತು ಪತಾಕೆಗಳು ಕಾಣಿಸಿದವು, ಹಾಗೆಯೇ ಒಂದು ವೀಣೆಯನ್ನು ಕಂಡೆ, ಕ್ಷಿತಿಜದ ಮತ್ತು ಸೂರ್ಯನಾರಾಯಣನ ದರ್ಶನವಾಯಿತು. ಹಾಗೆಯೇ ದೇವಾಲಯದ ಕಲಶ, ನಂತರ ಗುಮಟ ಮತ್ತು ಒಳಗೆ ಮೂರ್ತಿಯನ್ನು ಕಂಡೆ. ಒಳಗಿನಿಂದ ಯಾರದೊ ಒಂದು ಕೈ ಮುಂದೆ ಬಂದು ನನಗೆ ಗಂಧ ಹಚ್ಚಿತು, ಪುನಹಾ ಇನ್ನೊಂದು ಕೈ ಬಂದು ನನಗೆ ಕುಂಕುಮ ಹಚ್ಚಿತು, ನನ್ನ ತಂದೆ ವ ತಾಯಿಯವರ ದರ್ಶನವಾಯಿತು, ಮತ್ತು ಅತಿಶಯ ಆನಂದವಾಯಿತು. ಇನ್ನೊಂದು ಪ್ರಸಂಗದಲ್ಲಿ ಯಾರೊ ಬಂದು ನನ್ನ ಕೊರಳಲ್ಲಿ ಬಿಳೇ ಹೂವಿನ ಹಾರವನ್ನು ಹಾಕಿದರು. ಛತ್ರಿ, ಆನೆ, ವಗೈರೆ ಇಂಥ ದೃಶ್ಯಗಳು ಕಂಡು ಬಂದವು. ಒಮ್ಮೆ ಒಂದು ದೊಡ್ಡ ಬಾಗಿಲು ಕಾಣಿಸಿತು, ಆ ಮೇಲೆ ಒಂದು ರಸ್ತೆಯು ತೋರಿತು, ಅದು ಇಷ್ಟು ತೇಜಃಪುಂಜವಿತ್ತಲ್ಲ, ಅದು ಬೆಳ್ಳಿ ಬಂಗಾರದ ರಸದ ಕಾಲುವೆಯೆ ಹರಿದದೆ ಏನೋ ಎಂಬಂತೆ ಕಾಣಿಸಿತು, ಅನೇಕ ಬಣ್ಣದ ಪ್ರಕಾಶಗಳನ್ನು ಕಂಡೆ, ಮತ್ತು ನೀಲಿ ಬಣ್ಣದಲ್ಲಿ ಬಿಳೇ ಚಕ್ರವನ್ನು ನೋಡಿದೆ. ಶ್ರೀವಿಷ್ಣುವಿನ ದರ್ಶನವೂ ಆಯಿತು.

ಮಹಾರಾಜರು ನನಗೆ ಮಾನಸಪೂಜೆಯನ್ನು ಹ್ಯಾಗೆ ಮಾಡಬೇಕೆಂದು ಹೇಳಿದರು, ಮಹಾರಾಜರ ಅತಿಶಯ ತೇಜಃಪುಂಜ ಸ್ಥಿತಿಯಲ್ಲಿ ದರ್ಶನವಾಯಿತು. ಎತ್ತ ನೋಡಿದರೂ ಸೋನೇರಿ ಪ್ರಕಾಶದ ಹೊಳವು ಕಂಡುಬಂತು. ಅನಂತರ ದೇವರ ದೊಡ್ಡ ಸಿಂಹಾಸನ, ಪಾಲಕಿ ಮತ್ತು ಅದರೊಳಗೆ ಯಾರೊ ಕೂತಂತೆ ಕಾಣಿಸಿತು. ಒಂದು ಪಾಲಕಿಯಲ್ಲಿ ರಾಮ-ಮಾರುತಿ ಇವರನ್ನು ಕಂಡೆ, ಮತ್ತು ಕಾಮಧೇನುವಿನ ದರ್ಶನವಾಯಿತು. ಹಾಗೆಯೇ ಸಮುದ್ರ, ಗಿಡದ ಮೇಲೆ ಮಂಗಗಳು, ಶಿವಲಿಂಗ ಹೀಗೆ ಅನೇಕ ದೃಶ್ಯಗಳು ಕಾಣಿಸಿದವು.

ಒಂದು ಪ್ರಸಂಗದಲ್ಲಿ ನಾನು ಜಪಕ್ಕೆ ಕೂತಿರುವಾಗ ಶರೀರದೊಳಗೆ ಏನೊ ಗಡಿಬಿಡಿ ಶುರು ಆಯಿತು. ಬೆನ್ನೆಲುಬಿಗೆ ಹೊಡತಗಳು ಬಿದ್ದಂತಾಯಿತು, ಮತ್ತು ಹಿಂದಿನಿಂದ ಮೂಲಾಧಾರ ಚಕ್ರದ ತನಕ ಮಾರ್ಗವೆಲ್ಲ ಸರಳವಾಗಿ ಅಲ್ಲಿ ಜಪವಾಗಲಿಕ್ಕೆ ಹತ್ತಿತು, ನಾಭಿಕಮಲದಲ್ಲಿ ಜಪವಾಗುತ್ತಿತ್ತು, ಮತ್ತು ಅಲ್ಲೆ ಕಮಲ ಉತ್ಪನ್ನವಾಗಿ ಅದರ ಮೇಲೆ ಶ್ರೀವಿಷ್ಣುವಿನ ಮೂರ್ತಿ ಕಾಣಿಸಿತು. ಮುಂದೆ ಆ ಮೂರ್ತಿ ಒಮ್ಮೆಲೆ ಇಲ್ಲದಂತಾಗಿ, ಆ ಸ್ಥಳದಲ್ಲಿ ಸದ್ಗುರುಗಳ ತೇಜಃಪುಂಜ ಮೂರ್ತಿಯು ಕಾಣಹತ್ತಿತು, ಒಬ್ಬ ಸ್ತ್ರೀಯು ಬಂದು ನನಗೆ ಮಾಲೆ

ಹಾಕಿದಳು. ಮಹಾರಾಜರು, ನಡನಡುವೆ 'ನಡಿಯಲಿ, ನಡಿಯಲಿ' ಎಂದು ಅನ್ನುತ್ತಿದ್ದರು.

ಮತ್ತೊಂದು ಪ್ರಸಂಗದಲ್ಲಿ ನಾಭಿಕಮಲದ ಸ್ಥಾನದಲ್ಲಿ ಕಾರಂಜಿಯಂತೆ ಪ್ರಕಾಶದ ತುಂತುರ ಹನಿಗಳು ಹಾರುತ್ತಿದ್ದವು. ಅನಂತರ ಮೂಲಾಧಾರ ಮತ್ತು ಬ್ರಹ್ಮರಂಧ್ರ ಇವುಗಳಲ್ಲಿ ಜಪವಾಗಹತ್ತಿತು. ಚಿತ್ತಕ್ಕೆ ಆನಂದವಾಗುವಂಥ ವಿವಿಧ ವರ್ಣಗಳ ಮತ್ತು ಕಣ್ಣು ಕುಕ್ಕುವಂಥ ತೇಜಃಪುಂಜ ಪ್ರಕಾಶಗಳು ಕಾಣಿಸುತ್ತಿದ್ದವು, ಒಮ್ಮೆ ದೊಡ್ಡ ಮಹಾರಾಜರ (ಶ್ರೀನಾರಾಯಣ ಸರಸ್ವತಿಯವರ) ದರ್ಶನವಾಯಿತು. ಕಣ್ಣು ಮುಚ್ಚಿದ ಕೂಡಲೆ ನೀಲ ಬಿಂದು ಯಾವಾಗಲೂ ಎದುರಿಗೆ ಕಾಣಿಸುವದು, ಗರುಡ ದರ್ಶನವಾಯಿತು, ಹಾಗೆಯೇ ಶ್ರೀವಿಠ್ಠಲ ಮೂರ್ತಿ ಕಾಣಿಸಿತು, ನಡಿಯುವಾಗ ಮಾತಾಡುವಾಗ ಮತ್ತು ಓದುವಾಗ ಸಹಾ ಮಂತ್ರಗಳ ಪಂಕ್ತಿಗಳು ಕಾಣಿಸುತ್ತವೆ.

ತಾರೀಖು -೩-೪ರ ಈ ದಿನ ಆಫೀಸಿನಿಂದ ಸಂಜೆ ಹೊತ್ತಿಗೆ ಮನೆಗೆ ಬಂದಮೇಲೆ, ಸ್ವಲ್ಪ ವೇಳೆಯಲ್ಲಿಯೇ ನಿತ್ಯದಂತೆ ಧ್ಯಾನಕ್ಕೆ ಕೂತಿದ್ದೆ, ಮತ್ತು ಈ ಕಾರ್ಯಕ್ರಮ ತೀರಿಸಿದ ಬಳಿಕ ಗಾದಿಗೆ ಒರಗಿ ಕೂತುಕೊಂಡಿದ್ದಾಗ, ಯಾವದೊಂದು ಶಕ್ತಿಯು ಗುದದ್ವಾರದಿಂದ ಒಳಗೆ ಸೇರಿತು, ಮತ್ತು ನನ್ನ ಶರೀರವು ಒಂದೇ ಸಮನೆ 'ಧಪ್‌ಧಪ್' ಹಾರಲಿಕ್ಕೆಹತ್ತಿತು. ಕೆಳಗೆ ಕಾಲಿನ ಎಲ್ಲ ನಾಡಿಗಳು ಹರಿದವೆಂಬಂತೆ ಅನಿಸಿತು, ನಾಲಿಗೆ ಒಳಗೆ ಎಳದಂತಾಗಿ ಮಾತಾಡಲಿಕ್ಕೆ ಬರದಂತಾಯಿತು; ಮತ್ತು ಇನ್ನು ಮೇಲೆ ಬದುಕುವದಿಲ್ಲವೆಂಬಂತೆ ಅನಿಸಿತು. ಈ ಸಮಯದಲ್ಲಿ ಕೋಣೆಯೊಳಗೆ ನಾನೊಬ್ಬನೇ ಇದ್ದೆ, ಸ್ವಲ್ಪ ವೇಳೆಯಲ್ಲಿ ನನ್ನ ಮೂರುಮಂದಿ ಅಣ್ಣನ ಮಕ್ಕಳು ಮನೆಯೊಳಗೆ ಬಂದಕೂಡಲೇ ನನ್ನ ಈ ಸ್ಥಿತಿ ನೋಡಿ ಘಾಬರಿಯಾದರು. ನಾನು ಅವರಿಗೆ ಹೇಳಿದೆ, "ನಾನು ಇನ್ನು ಹೆಚ್ಚು ಹೊತ್ತು ಬದುಕುವೆನೆಂದು ನನಗನಿಸುವದಿಲ್ಲ, ಆದ್ದರಿಂದ ನನ್ನ ಮಿತ್ರ ಸಂತುರಾಮ ಕರ್ಣಿಕ ಈತನನ್ನು ಕರೆಯಬೇಕು. ಆ ಪ್ರಕಾರ ಹೇಳಿದಾಕ್ಷಣ ಅವರು ಬಂದರು. ನನ್ನ ಸ್ಥಿತಿ ನೋಡಿ ಈಗ ನಾನು ಸ್ವಲ್ಪವೇ ಹೊತ್ತಿನ ಸಂಗಡಿಗನೆಂದು ಅವರು ತಿಳಕೊಂಡರು. ಯಾಕಂದರೆ ನಾನು ತೀರಾ ಪ್ರೇತವತ್ ಬಿದ್ದಿದ್ದೆನು; ಆದರೂ ಒಳಗೆ ನನಗೆ ಆನಂದವಾಗುತ್ತಿತ್ತು. ಹೊರಗಿನಿಂದಾದರೂ ನನ್ನ ಮುಖದಲ್ಲಿ ಮುಗುಳುನಗೆ ಹೊಳೆಯುತ್ತಿತ್ತು ಎಂದು ಹಿಂದಿನಿಂದ ನನ್ನ ಮಿತ್ರ ಮಂಡಳಿಯ ಹೇಳುವಿಕೆಯ ಮೇಲೆ ನನಗೆ ಗೊತ್ತಾಯಿತು. ಅನಂತರ ನಾನು ಪಾಟಣಕರ ವಕೀಲ ಇವರಿಗೆ ಕರೆಕಳುಹಿಸಿದೆ. ಅವರು ಎಲ್ಲ ಸಂಗತಿಗಳನ್ನು ಕೇಳಿಕೊಂಡು, ಅವರ ಕೂಡ ಅವರ ಅಣ್ಣನ ಮಗನಾದ ಡಾಕ್ಟರಸಿದ್ದವನನ್ನು ಕರಕೊಂಡು ರಾತ್ರಿ ಹನ್ನೆರಡು ಹೊಡೆಯುವ ವೇಳೆಗೆ ನಮ್ಮಲ್ಲಿ ಬಂದರು. ಡಾಕ್ಟರು ನನಗೆ ತಪಾಸಣಿ ಮಾಡಿ ನಿದ್ರೆ ಬೀಳುವ ಔಷಧವನ್ನು ಕೊಟ್ಟರು,

ಮತ್ತು ಸ್ವಸ್ಥ ಮಲಗಿಕೊಂಡಿರಲಿಕ್ಕೆ ಹೇಳಿದರು. ಪಾಟಣಕರ ಇವರು ಅಂಜುವ ಕಾರಣವಿಲ್ಲ ಎಂದು ಹೇಳಿದರು. ಸಂತರಾಮ ಕರ್ಣಿಕ ಇವರು ಮಹಾರಾಜರಿಗೆ ತಾರು ಮಾಡಲೇನು ಎಂದು ಕೇಳಿದ್ದಕ್ಕೆ, “ತಾರು ಕೊಡುವ ಕಾರಣವಿಲ್ಲ, ಮಹಾರಾಜರು ನನ್ನ ಹತ್ತಿರವೇ ಇದ್ದಾರೆ” ಅಂತ ನಾನು ಹೇಳಿದೆ. ಪಾಟಣಕರರು ಹೊರಟು ಹೋದ ಮೇಲೆ ಯಾರೊ ಒಬ್ಬ ತೇಜಃಪುಂಜ ಪುರುಷ, ರುಮಾಲು ಸುತ್ತಿದವನಿದ್ದು, ಕುದುರೆಯ ಮೇಲೆ ಕೂತು ನಾಗಾಲೋಟಾ ಓಡಿಸಿಕೊಂಡು ನನ್ನ ಕಡೆ ಬರುವವನನ್ನು ಕಂಡೆ. ಸಮೀಪ ಬಂದ ಕೂಡಲೆ ಅವರು ಮಹಾರಾಜರೇ ಎಂದು ತಿಳಿಯಿತು. ಅವರು ಕುದುರೆಯಿಂದ ಇಳಿದಾಗ ನಾನು ಅವರ ದರ್ಶನ ತಕ್ಕೊಂಡೆ. ಅನಂತರ ಒಳಗಿನ ಗಲಿಬಿಲಿಯು ಶಾಂತವಾಗುತ್ತ ಬಂತು, ಮತ್ತು ನನಗೆ ನಿದ್ದೆಹತ್ತಿತು. ಮರುದಿನ ನಾನು ಎದ್ದಾಗ ನನ್ನ ನಡುವಿನ ಕೆಳಭಾಗವು ತೀರಾ ಶಕ್ತಿ ಇಲ್ಲದೆ ಹೋಗಿ, ನನಗೆ ನಡಿಯಲಾಗದಂತೆ ಆಯಿತು. ಕೈಯ್ಯಲ್ಲಿ ಬಡಿಗೆ ಹಿಡಿದು ನಡಿಯಲಿಕ್ಕೆ ನೋಡಿದರೆ, ತಲೆ ತಿರುಗಿ ಬೀಳುವೆನೆಂಬಂತೆ ಅನಿಸುತ್ತಿತ್ತು. ಸಂಜೆ ವೇಳೆಗೆ ಪುನಃ ಮಹಾರಾಜರು ಕಾಣಿಸಿದರು, ಮತ್ತು ನನ್ನ ಶರೀರದಲ್ಲಿ ಅವರು ಸ್ವಲ್ಪ ಊಷ್ಣತೆಯನ್ನು ಉತ್ಪನ್ನ ಮಾಡಿದರು. ಇಂಥ ಪರಿಸ್ಥಿತಿಯಲ್ಲಿ ಎರಡು ಮೂರು ದಿವಸಗಳು ಹೋದವು. ಆದರೆ ವಿಶೇಷವೇನೂ ಸುಧಾರಿಸಲಿಲ್ಲ. ಆಗ ಮಹಾರಾಜರ ದರ್ಶನಕ್ಕೆ ಪ್ರತ್ಯಕ್ಷ ಹೋದ ವಿನಹಾ ಈ ಸ್ಥಿತಿಯಲ್ಲಿ ಬದಲಾಗಲಿಕ್ಕಿಲ್ಲವೆಂತ ನಾನು ತಿಳಿದೆನು. ಆದರೂ ಪಾಟಣಕರರು ಮಹಾರಾಜರಿಗೆ ಪತ್ರ ಬರೆದಿದ್ದರು; ಅದರ ಉತ್ತರದ ಎರಡು ಮೂರುದಿನ ದಾರಿನೋಡಿ, ಒಂದುದಿನ ನಾಶಿಕಕ್ಕೆಹೋಗಿ ಮಹಾರಾಜರ ದರ್ಶನ ತಕ್ಕೊಂಡೆ, ಮತ್ತು ನಡೆದ ಸಂಗತಿಯನ್ನೆಲ್ಲ ಅವರಿಗೆ ನಿವೇದಿಸಿದೆ. ಅದಕ್ಕೆ ಮಹಾರಾಜರಂದರು, “ಇಷ್ಟುದಿನ ತಡಮಾಡುವ ಕಾರಣವಿದ್ದಿಲ್ಲ, ಕೂಡಲೆ ಇಲ್ಲಿಗೆ ಬರಬೇಕಿತ್ತು.” ಅನಂತರ ಅಲ್ಲಿ ನಾಶಿಕದಲ್ಲಿಯೆ ಮಹಾರಾಜರ ಸಾನ್ನಿಧ್ಯದಲ್ಲಿ ಸುಮಾರು ಒಂದೂವರೆ ತಿಂಗಳು ಅಂದರೆ ರಜೆಯು ತೀರುವ ತನಕ ಇದ್ದೆನು; ಮತ್ತು ಅಷ್ಟರಲ್ಲಿ ನನ್ನ ಶರೀರದ ಅಸ್ವಾಸ್ಥ್ಯತೆ ಪೂರಾ ಹೋಗಿ ಪೂರ್ವದಂತೆ ನಾನು ಆರೋಗ್ಯ ಉಳ್ಳವನಾದೆನು.

ಅಲ್ಲಿ ಇರುವಾಗ್ಗೆ ಹಿಂದೆ ಮೊದಲಿನಿಂದ ಏನು ದೃಶ್ಯಗಳು ಕಾಣಿಸುತ್ತಿದ್ದವು ಅವೆಲ್ಲ ಕಾಣಿಸದಂತಾದವು. ಹಾಗೂ ‘ಓಂ’ಕಾರದ ಬದಲಿಗೆ ಒಂದೇ ಸಮನೆ ‘ಸೋಹಂ ಸೋಹಂ’ ಹೀಗೆ ಶಬ್ದವಾಗಹತ್ತಿತು, ಮತ್ತು ನಾನು ಒಂದು ಆಳವಾದ ಕಂದರದೊಳಗೆ ಹೋಗುತ್ತಿದ್ದೇನೆ ಎಂದು ನನಗೆ ತೋರಿತು; ಮತ್ತು ಆ ಪೊಳ್ಳು ಜಾಗೆಯಲ್ಲಿ ಧ್ವನಿಯು ಸುರುವಾಯಿತು. ಅಲ್ಲಿ ಗಾಢಾಂಧಕಾರವಿತ್ತು. ಅಂತ ನನಗೆ ಬಹಳ ಭಯವಾಯಿತು, ಮತ್ತು ಸರ್ವಾಂಗವು ಕಂಪಿಸಲಿಕ್ಕೆ ಹತ್ತಿತು. ಅಷ್ಟರೊಳಗೆ ಎಲ್ಲ ಭೀತಿಯು ಪರದೆಯು ಇಲ್ಲದಂತಾಯಿತು. ಮತ್ತು

ಒಮ್ಮಿಂದೊಮ್ಮೆ ದೊಡ್ಡ ಪ್ರಕಾಶ ಬಿದ್ದು ಶರೀರದೊಳಗೆ ಎಲ್ಲೆಲ್ಲಿಯೂ ಪ್ರಕಾಶವೇ ಪ್ರಕಾಶವಾಯಿತು. ಆ ಸಮಯದಲ್ಲಿ ನನಗೇನು ಅವರ್ಣನೀಯ ಆನಂದವಾಯಿತು, ಅದರ ವರ್ಣನೆ ಮಾಡಲಾಗದು. ಕೂತರೂ, ಎದ್ದರೂ, ಮಲಗಿದರೂ ಜಪ ವ ಪ್ರಕಾಶ ಏಕವಾಗಿ ಪರಮಾನಂದವಾಯಿತು. ಸದ್ಯಕ್ಕೆ ನಾನು ಏನೂ ಮಾಡುವದಿಲ್ಲ, ಆದರೆ ಯಾವ ಯಾವ ಪ್ರಾಣಿ ಭೇಟಿಯಾಗುವದೊ ಅದರಲ್ಲಿ ಅಜಪಾಜಪ ಅಂದರೆ 'ಸೋಽಹಂ' ದ ಜಪ ನಡಿಯುತ್ತಾ ಇರುವದು. ಆ ನಾದವು ಕಿವಿಗೆ ಕೇಳಿಸುವದು, ಮತ್ತು ಯಾವಾಗಲಾದರೂ ಸ್ವಸ್ಥ ಕೂತಿದ್ದರೆ, ಹೊರಗಿನ 'ಸೋಽಹಂ' ದ ಜಪ ಕೇಳುತ್ತ ಕೇಳುತ್ತ ಧ್ಯಾನಹತ್ತಿ ಒಳಗಾದರೂ ಆ ನಾದವು ಕೇಳಿಸುವದು, ಮತ್ತು ದೇಹದಲ್ಲಿ ಒಮ್ಮಿಂದೊಮ್ಮೆ ಪ್ರಕಾಶವಾಗುತ್ತದೆ, ವ ಆ ಪ್ರಕಾಶದಲ್ಲಿ ಘಳಿಗೆ ಘಳಿಗೆಗೆ ಸ್ವಾನಂದ ಲಾಭ ಸಿಗುತ್ತ ಇರುತ್ತದೆ. ಮತ್ತು ಸರ್ವ ಜಗ ಪ್ರಕಾಶಮಯ ಇದೆ ಎಂಬ ಭಾವನೆಯಾಗುತ್ತದೆ.

ಮೊದಲು ಎಲ್ಲ್ಯಾದರೂ ಹಿಮಾಲಯಕ್ಕೆ ಹೋದರೆ ಏಕಾಂತ ಸಿಕ್ಕೀತು ಎಂದು ತಿಳಿದಿದ್ದೆ, ಆದರೆ ಸದ್ಗುರುಕೃಪೆಯಿಂದ ವ ಅನುಭವದಿಂದ ಆ ತಿಳುವಳಿಕೆ ನಷ್ಟವಾಯಿತು, ಮತ್ತು ಆತ್ಮಜ್ಞಾನ ಸಂಪಾದಿಸಲಿಕ್ಕೆ ಎಲ್ಲಿಯೂ ಹೋಗಬೇಕಾಗದೆ, ವ್ಯವಹಾರದಲ್ಲಿ ಇದ್ದರೂ ಅದು ಗುರುಕೃಪೆಯಿಂದ ಪ್ರಾಪ್ತವಾಗಿ ಆನಂದ ಉಪಭೋಗ ಮಾಡಲಿಕ್ಕೆ ಬರುತ್ತದೆ ಎಂದು ಸ್ವಾನುಭವ ಬಂದದ್ದರಿಂದ, ಸಂತರು 'ನಜಾಯೆ ಗಯೇಸಿ, ನಜಾಯೆ ತಪಾಸಿ,' ಎಂದು ಬರೆದಿರುತ್ತಾರೆ, ಅದೇ ಸತ್ಯವೆಂಬದು ನಿಶ್ಚಯವಾಯಿತು. ಮುಮುಕ್ಷುವು ಮೂರು ನಾಲ್ಕು ಸಂಗತಿಗಳನ್ನು ತನ್ನ ಮನಸ್ಸಿನ ಮೇಲೆ ತಗೋಬೇಕು, ಅವು ಹೀಗವೆ. ಅವನದು ಸದ್ಗುರುವಿನ ಮೇಲೆ ವಿವೇಕಯುಕ್ತ ವಿಶ್ವಾಸವಿರಬೇಕು ಅಂದರೆ ಅಂಧವಿಶ್ವಾಸವಿರಬಾರದು. ಹಾಗೆಯೇ ಅವನಿಗೆ ಐಹಿಕ ವಿಷಯಗಳ ಅಸಹ್ಯತೆ ಅನಿಸಿದ್ದಾದರೆ, ಅವನು ಸತತ ಅಭ್ಯಾಸ ಮಾಡುತ್ತ ಇದ್ದರೆ, ಮತ್ತು ಅವನಿಗೆ ಯಾರೊಬ್ಬ ಸಾಧುವಿನ ಕೃಪೆ ಸಂಪಾದನ ಮಾಡಲಿಕ್ಕೆ ಸಾಧ್ಯವಾದರೆ, ಅವನು ನಿಶ್ಚಯವಾಗಿ ಕೃತಾರ್ಥನಾಗುವನು ಇದರಲ್ಲಿ ಸಂಶಯವಿಲ್ಲ.

ತಾ. ೧೭-೮-೩೮ (ಸಹಿ) ಎಸ್. ಎಮ್. ಗಡಕರ

— ೨ —

### ಶ್ರೀ ಸದಾಶಿವ ಖಂಡೆರಾವ ಗರುಡೆ, ಪರೆಳ ಮುಂಬಯಿ:-

ಶ್ರೀಗಜಾನನ ಮಹಾರಾಜ ಇವರದು ನಮ್ಮ ಕೂಡ ಪ್ರಥಮ ಪರಿಚಯ ಹ್ಯಾಗಾಯಿತು ಇದರ ಸ್ಮರಣ.

ನಮ್ಮ ಆತ್ಮೀಯ ಮಗ ಕೈ. ಮೋರೇಶ್ವರ ರಾಮಚಂದ್ರ ಮಧುರೆ ಮತ್ತು ನಾವು ಕೆಳಗಿನ ಪರೆಳ ಇಲ್ಲಿ ವಾರ್ಡನ ವಕೀಲರ ಚಾಲಿನಲ್ಲಿ ವಾಸಿಸುತ್ತಿದ್ದೆವು. ಮಹಾರಾಜರು ಸ್ವಂತದ ರೊಕ್ಕ ಖರ್ಚುಮಾಡಿ ಮೋಟಾರ ಮೇಲೆ ರಾ॥ ಮಧುರೆ ಇವರಿಗೆ ಭೆಟ್ಟಿಯಾಗಲಿಕ್ಕೆ ಬರುತ್ತಿದ್ದರು. ಆ ಸಮಯದಲ್ಲಿ ಅವರದು ನಮ್ಮದು ಪರಿಚಯವಾಯಿತು. ಅವರ ಮೇಲ್ತರದ ಉಡಿಗೆಯ ಮೇಲಿಂದ ಅವರು ಮಹಾರಾಜರಿದ್ದಾರೆಂತ ತಿಳಿಯಲಿಕ್ಕೆ ಶಕ್ಯವಿದ್ದಿಲ್ಲ, ಆದರೆ ಅವರು ಮಹಾರಾಜರಿದ್ದದ್ದು ಹಿಂದಿನಿಂದ ತಿಳಿಯಿತು. ಅವರು ನನ್ನ ಹೆಂಡತಿಯ ಹತ್ತರ ಮದ್ಯರೂಪ ಪ್ರಸಾದವನ್ನು ಕೇಳಿದರು, ಇದು ಸಂಜೆಹೊತ್ತಿಗೆ ಆಫೀಸಿನಿಂದ ನಾನು ಬಂದ ಮೇಲೆ ನನಗೆ ತಿಳಿಯಿತು. ಮದ್ಯದ ಮೂಲಕ ನನ್ನದು ಅವರ ಮೇಲಿನ ಆದರ ಭಾವವು ನಷ್ಟವಾಯಿತು. ಆ ಸಮಯದಲ್ಲಿ ನನ್ನ ಹತ್ತರ ರೊಕ್ಕವಿತ್ತು ಆದರೆ ಅಂಗಡಿಯಿಂದ ಮದ್ಯವನ್ನು ತರಲಿಕ್ಕೆ ಯಾರೂ ಸಿಗಲಿಲ್ಲ; ಯಾಕೆಂದರೆ ನಾನು ಎಂದೂ ಅಂಥ ಅಂಗಡಿಗೆ ಹೋಗುತ್ತಿದ್ದಿಲ್ಲ. ನನ್ನ ಹೆಂಡತಿಯು ಮಗಳ ಹೊಟ್ಟೆ ಶೂಲೆಯ ನೆವನಮಾಡಿ ನೆರೆಯವರಿಂದ ಸ್ವಲ್ಪ ಬ್ರೆಂಡಿ ತರಿಸಿದಳು. ಅದು ಬಾಟಲಿಯಲ್ಲಿ ಹಾಕಿ ದೇವರ ಹತ್ತರ ಒಯ್ದು ಇಟ್ಟಿತ್ತು. ಮದ್ಯಪಾನ ಮಾಡುವ ಗೃಹಸ್ಥ ( ಮಹಾರಾಜರು ) ನಮಗೆ ಏನು ಸನ್ಮಾರ್ಗವನ್ನು ತೋರಿಸ್ಯಾರು ಹೀಗೆ ನನ್ನ ವಿಚಾರ ನಡೆಯಿತು. ಆ ರಾತ್ರಿ ನನಗೆ ನಿದ್ದೆ ಹತ್ತಲಿಲ್ಲ. ನಿತ್ಯದಂತೆ ಮುಂಜಾನೆ ನಮ್ಮ ನೆರೆಯ ಮಧುರೆಯವರ ಖೋಲಿಗೆ ಸಹ ಅವರ ದರ್ಶನಕ್ಕೆ ನಾನು ಹೋಗಲಿಲ್ಲ. ಆದರೆ ಬೆಳಿಗ್ಗೆ ಒಂಭತ್ತುವರೆ ಘಂಟೆಗೆ, ಅವರು, ' ಎಚ್ಚರಿಕೆಯಿಂದಿರಬೇಕು, ಮನಸ್ಸಿನ ಮೇಲೆ ಯಾವಾಗಲೂ ಲಕ್ಷವಿಡಬೇಕು' ಹೀಗನ್ನುತ್ತಾ ಬಡಿಗೆ ಊರುತ್ತ ನನ್ನನ್ನು ಕೇಳುತ್ತ ಬಂದರು. ಆ ಹೊತ್ತಿಗೆ ನನ್ನ ದೇವಪೂಜೆ ಆಗಿ ಊಟದ ತಾಟು ಬಡಿಸಿತ್ತು. ಅವರು ಬಂದು ತಾಟನೊಳಗಿನ ಹಪ್ಪಳ ತಿನ್ನಲಿಕ್ಕೆ ಸುರುಮಾಡಿದರು ನನ್ನ ಹೆಂಡತಿಯು ಮಹಾರಾಜರಿಗೆ ಮದ್ಯರೂಪ ಪ್ರಸಾದ ಕೊಡಲಿಕ್ಕೆ ಹೇಳಿದಳು, ಆದರೆ ಮಹಾರಾಜರು ಆ ಪ್ರಸಾದವನ್ನು ನನಗೆ ಕೊಡಲಿಕ್ಕೆ ಬಂದರು. ಆಫೀಸಿಗೆ ಹೋಗುವಾಗ ಈ ಪ್ರಸಾದ! ' ತಕ್ಕೊಳ್ಳಲಿಕ್ಕೇಬೇಕು ' ಹೀಗೆ ಹೇಳಿ ಅವರು ಆ ಮದ್ಯವನ್ನು ನಾವಿಬ್ಬರೂ ನೋಡುತ್ತಿರುವಾಗ ಒಂದು ಬಟ್ಟಲಿನಲ್ಲಿ ಸುರುವಿದರು. ಮತ್ತು ಅದರ ಮೇಲೆ ಕೈ ಇಟ್ಟು ನಮ್ಮಿಬ್ಬರಿಗೂ ಅದು ಪ್ರಸಾದವೆಂತ ಕುಡಿಯಲಿಕ್ಕೆ ಹೇಳಿದರು. ಆದರೆ ಆಶ್ಚರ್ಯ ಇದಲ್ಲ, ಬಟ್ಟಲದೊಳಗಿನ ಆ ಪ್ರಸಾದವು ಹಾಲು ಆಗಿತ್ತು. ಆ ಪ್ರಸಾದವನ್ನು ನಾವಿಬ್ಬರೂ ತಕ್ಕೊಂಡೆವು, ಮತ್ತು ಅಂದಿನಿಂದ ಮದ್ಯದ ಸಂಬಂಧ ನಾವು ಅವರ ವಿಷಯ ಮಾತಾಡುವದನ್ನು ಬಿಟ್ಟುಬಿಟ್ಟೆವು.

ಶ್ರೀನಾರಾಯಣರಾವ ಸಮರ್ಥ ಇವರು ಪರೆಳ ಗವ್ಹರ್ನಮೆಂಟ ಗೇಟಿನ ಸಮೀಪ ಇರುತ್ತಿರುವಾಗ, ಒಮ್ಮೆ ಮಹಾಶಿವರಾತ್ರಿ ದಿವಸ ನನ್ನ

ಅಣ್ಣನಾದ ಶ್ರೀರಾಮಚಂದ್ರ ಖಂಡೇರಾವ ಗರುಡೆ, ಚಿರಂಜೀವ ಮಗ ಮತ್ತು ನಾನು ಮ ಚಾಲೀಸೊಳಗಿನ ಇತರು ಜನರು ಅವರ ಬಿಡಾರಕ್ಕೆ ಮಹಾರಾಜರ ದರ್ಶನಕ್ಕಾಗಿ ಹೋಗಿದ್ದೆವು. ಸಾಯಂಕಾಲವಾದ್ದರಿಂದ ದೀಪಗಳು ಹಚ್ಚಿದ್ದವು. ಮಹಾರಾಜರು ನನಗೆ ಸಮೀಪ ಇದ್ದ ದೀಪದ ಕಡೆಗೆ ನೋಡಲಿಕ್ಕೆ ಹೇಳಿದರು. ಆ ಸಮಯದಲ್ಲಿ ಪ್ರತಿಒಬ್ಬ ಮನುಷ್ಯನು ಮ ಇತರ ಸರ್ವ ವಸ್ತುಗಳು ಅಂದರೆ ಒಂದು ಸೂರ್ಯನಂಥ ಗೋಲಾಕೃತಿಯಾಗಿ ಕಾಣಿಸಿದವು. ಈ ಪ್ರಕಾರ ಸುಮಾರು ಅರ್ಧತಾಸು ಆದಮೇಲೆ, ಮಹಾರಾಜರು ನನ್ನ ತಲೆಯ ಮೇಲೆ ಕೈ ಇಟ್ಟ ಕೂಡಲೆ, ಹಾಗೆ ಕಾಣುವದು ನಿಂತಿತು ಮತ್ತು ಎಲ್ಲ ನನಗೆ ಪೂರ್ವವತ ಕಾಣಹತ್ತಿತು. ಕೆಲವು ಹೊತ್ತಿನ ಮೇಲೆ ನಾವು ಮನೆಗೆ ಬಂದೆವು.

ನಮ್ಮ ಅಣ್ಣ ರಾ. ಗರುಡೆ (ರಾಮಚಂದ್ರ) ಇವರು ಪರಳಿಯಲ್ಲಿರುವಾಗ ಅಲ್ಲಿ ಒಮ್ಮೆ ಮಹಾರಾಜರು ಬಂದಿದ್ದರು. ಆಗ ಅವರು ವಿನೋದಕ್ಕಾಗಿ ತಮ್ಮನ್ನು ಎತ್ತಿಕೊಳ್ಳಬೇಕೆಂತ ನಮ್ಮ ತಾಯಿಯವರಿಗೆ ಹೇಳಿದರು. ಅವರ ಶರೀರವು ಬಹಳ ಕ್ಷೀಣವಾದ್ದರಿಂದ ನಮ್ಮ ತಾಯಿಯವರು ಅವರನ್ನು ಸಹಜ ಎತ್ತಿದರು; ಆದರೆ ಅವರು ಪುನಹಾ ಹಾಗೆ ಮಾಡಲಿಕ್ಕೆ ಹೇಳಿದಾಗ, ಅವರಿಗೆ ಮೊದಲಿನಂತೆ ಎತ್ತಲಿಕ್ಕೆ ಬರಲಿಲ್ಲ, ಇಷ್ಟು ಅವರು ಭಾರವಾದದ್ದು ಕಂಡು ಬಂತು. ಹೀಗೆ ಚಮತ್ಕಾರಗಳು ಅವರ ಮನಸ್ಸಿಗೆ ಬಂದಾಗ್ಗೆ ಅವರು ಮಾಡುತ್ತಾರೆ, ಆದರೆ ಹಾಗೆ ಮಾಡಲಿಕ್ಕೆ ಹೇಳಿದರೆ ಮಾತ್ರ ಅವರು ಬಹಳ ಸಿಟ್ಟಿಗೇಳುತ್ತಾರೆ.

ನಾವು ಧುಳೆಗೆ ನಮ್ಮ ಬೀಗತಿಯ ಲಗ್ನಕ್ಕೆ ಹೋಗಿದ್ದೆವು. ಊಟಕ್ಕೆ ಸ್ವಲ್ಪ ಜನರಿದ್ದರು; ಆದರೆ ಎಲೆಗಳ ಹತ್ತರ ಊದಿನಕಡ್ಡಿಗಳನ್ನು ಹಚ್ಚಿಡಲಿಕ್ಕೆ ಮರೆತರು. ಅಷ್ಟರೊಳಗೆ ಮಹಾರಾಜರು ಸಿಗರೇಟ ಹಚ್ಚಿದರು; ಕೂಡಲೆ ಊದಿನಕಡ್ಡಿಯಂಥ ಸುಗಂಧವು ಪಸರಿಸಿತು. ಅವರಿಗೆ ಲಹರಿ ಬಂತೆಂದರೆ ಅವರು ಯಾವಾಗಲೂ ಹೀಗೆ ಮಾಡುತ್ತಿರುತ್ತಾರೆ.

ನಮ್ಮ ಸ್ನೇಹಿತರಾದ ಕೈ. ಬಾಳಕೃಷ್ಣ ಗಣೇಶ ದಿಕ್ಷೀತ ಇವರು ಮತ್ತು ನಾನು ಮಹಾರಾಜರ ಕೂಡ ಮೋಟಾರಿನಲ್ಲಿ ಕೂತು ಪ್ರಯಾಣ ಮಾಡುತ್ತಿರುವಾಗ, ಮಹಾರಾಜರು ಬಹಳ ಬ್ರೆಂಡಿ ತಗೊಂಡಿದ್ದರು. "ಮಹಾರಾಜರೇ ನೀವು ಬಹಳ ತಗೊಂಡಿರಿ, ಇಷ್ಟು ನಿಮಗೆ ಹ್ಯಾಗೆ ದಕ್ಕೀತು?" ಎಂದು ನಾವು ಅಂದಾಗ ಮಹಾರಾಜರು ಎಲ್ಲ ಮದ್ಯದ ಹಾಲು ಮಾಡಿದರು; ಆಗ ನಾವು ಸುಮ್ಮನಾದೆವು. ಈ ಪ್ರಕಾರ ಅವರು ಒಂದೆರಡಲ್ಲ ಅನೇಕ ಚಮತ್ಕಾರಗಳನ್ನು ಮಾಡಿದ್ದರು.

ಮಹಾರಾಜರ ಸನ್ನಿಧಿಯಲ್ಲಿ ನೀವು ಬಹಳ ಹೊತ್ತು ಇದ್ದರೂ ನಿಮಗೆ ಬೇಸರ ಬರುವದು ಶಕ್ಯವಿಲ್ಲ. ಯಾವನಾದರೂ ಯಾವದಾದರೂ ಪರಿಸ್ಥಿತಿಯಲ್ಲಿ ಇರುವಾಗ ಮಹಾರಾಜರ ಸನ್ನಿಧಿಯಲ್ಲಿ ಬಂದನೆಂದರೆ ಅವನು ಆನಂದದಿಂದಿರುತ್ತಾನೆ. ಆಗ ವೇಳೆ ಹ್ಯಾಗೆ ಹೋಗುತ್ತದೆಂಬದು ತಿಳಿಯುವದೇ ಇಲ್ಲ.

ನಾನು ಮತ್ತು ನನ್ನ ಮಿತ್ರ ರಾ. ಬಾಳಕೃಷ್ಣ ಗಣೇಶ ದೀಕ್ಷಿತ ಹೀಗೆ ಇಬ್ಬರು ಮಹಾರಾಜರನ್ನು ಮದ್ಯಪಾನ ಮಾಡಿರುವಾಗ ಮೂರು ನಾಲ್ಕು ಸಂತರ ಕಡೆ ಗಾಡಿಮೇಲೆ ಕರಕೊಂಡು ಹೋಗಿದ್ದಾಗ, ಅವರಿಗೆ ಯಾವದೂ ಶಂಕೆ ಬಾರದೆ, ಅವರು ಮಹಾರಾಜರ ಆದರ ಸತ್ಕಾರ ಮಾಡಿದರು. ಮಹಾರಾಜರು ಮದ್ಯಪಾನ ಮಾಡಿದ್ದಾರೆಂತ ಅವರಿಗೆ ಎಷ್ಟುಮಾತ್ರವೂ ಗೊತ್ತಾಗಲಿಲ್ಲ.

ದೀಕ್ಷಿತರಲ್ಲಿ ಮತ್ತು ನಮ್ಮಲ್ಲಿ ಮಹಾರಾಜರು ಇರುತ್ತಿರುವಾಗ, ಚಹಾ ಮತ್ತು ಎಂದಾದರೂ ತಯಾರಿ ಅವಲಕ್ಕಿ ಹೊರತು ಏನೇನೂ ತಿನ್ನುತ್ತಿದ್ದಿಲ್ಲ. ಇದರ ಮೇಲಿಂದ ಅವರು ಉಣ್ಣುವದಿಲ್ಲ ಎಂತ ನಮ್ಮ ತಿಳುವಳಿಕೆ ಅದೆ.

ಈ ಪ್ರಕಾರ ನನಗೆ ಬಂದ ಅನುಭವಗಳನ್ನು ನಾನು ಮಹಾರಾಜರ ಮುಂದೆ ನಿವೇದಿಸುತ್ತೇನೆ.

( ಸಹಿ ) ಸದಾಶಿವ ಖಂಡೇರಾವ ಗರುಡೆ

---

— ೩ —

ಶ್ರೀ. ವಿನಾಯಕ ಕಾಶೀನಾಥ ಖಳೆ, ದಾದರೆ, ಮುಂಬಯಿ

ಇವರ ಪತ್ರದೊಳಗಿನಿಂದ ಆರಿಸಿದ ಕೆಲವು ಸಂಗತಿಗಳು.

ಶ್ರೀಸದ್ಗುರು. ಮಹಾರಾಜರ ಚರಣಗಳಲ್ಲಿ ಸಹಸ್ರ ಸಾ. ನ. ವಿ. ವಿ,

ನಾನು ಒಬ್ಬ ಪಾಪಿ ಜೀವನಿದ್ದೇನೆ. ಆದರೆ ಹಿರಿಯರ ಪುಣ್ಯಪ್ರತಾಪದಿಂದ ಮಹಾರಾಜರ ಭೆಟ್ಟಿಯಾಯಿತು, ಮತ್ತು ಮಹಾರಾಜರ ಕೃಪೆಯಿಂದ ನನಗೆ ಯಾವ ಅವರ ಕೃಪಾಪ್ರಸಾದ ಶಿಕ್ಕಿದೆ, ಅದರ ವರ್ಣನೆಯನ್ನು ನಾನು ಶಬ್ದಗಳಿಂದ ಮಾಡಲಿಕ್ಕೆ ಅಸಮರ್ಥನಿದ್ದೇನೆ.

ಮಹಾರಾಜರ ಆಜ್ಞೆ ಪ್ರಕಾರ ಜಪ ಚಾಲು ಅದೆ; ನಿತ್ಯದಲ್ಲಿ ಬಹಳ ಕಡಿಮೆ ಅಂದರೆ ಹತ್ತು ಹನ್ನೆರಡು ತಾಸು ಜಪ ನಡಿಯುತ್ತದೆ. ಮಹಾರಾಜರು ನಾಶಿಕಕ್ಕೆ ಹೋದನಂತರ ಮೂರನೇ ದಿವಸ ನಸಿಕಿಗೆ ನಾನು ಜಪ ಮಾಡುತ್ತಿರುವಾಗ ತಲೆಯೊಳಗೆ ಒಂದ ಶಬ್ದವಾದ್ದು ಕೇಳಿಸಿತು. ಆ ಶಬ್ದವಾದ ಕೂಡಲೆ

ಒಂದು ಶುಭ್ರ ವರ್ಣದ ಜ್ಯೋತಿ ಕಾಣಿಸಿತು, ವ ನಂತರ ಅದರ ಕೆಂಪು ಚೆಂಡು ಆದ್ದು ತೋರಿತು. ಆ ಸಮಯದಲ್ಲಿ ಏಕಾಗ್ರತೆಯು ಚಳನವಾಗಲಿಲ್ಲ, ಮತ್ತು ಮನಸ್ಸಿಗೆ ಒಂದು ಪ್ರಕಾರದ ಆತ್ಮಾನಂದವಾಯಿತು. ಅನಂತರ ಕೆಲವು ದಿವಸ ಗಳ ಮೇಲೆ ನೀಲ ಮತ್ತು ಕೆಂಪು ವರ್ಣದ ಚೌಕಗಳು ಕಾಣಿಸಿದವು; ಅವು ಇನ್ನೂ ಆಗಾಗ್ಗೆ ಕಾಣಿಸುತ್ತವೆ. ಒಂದುದಿನ ಹಾಸಿಗೆ ಮೇಲೆ ಕೂತು ಜಪ ಮಾಡುತ್ತಿರುವಾಗ ಶ್ರೀಗಜಾನನ ಮಹಾರಾಜರ ಮೂರ್ತಿ ಕಾಣಿಸಿತು. ಮೂರ್ತಿಯು ಕಂಭದೊಳಗಿಂದ ಬಂದದ್ದು ಕಾಣಿಸಿತು. ಆಗ ಕಣ್ಣು ಮುಚ್ಚಿದ್ದವು ಜಪಮಾಡುತ್ತಿರುವಾಗ ನಾನು ಹೆಚ್ಚಾಗಿ ಕಣ್ಣು ಮುಚ್ಚಿಕೊಂಡು ಜಪ ಮಾಡು ತ್ತೇನೆ, ಮತ್ತು ಮೇಲಿನ ದೃಶ್ಯಗಳು ಕಣ್ಣುಮುಚ್ಚಿರುವಾಗ್ಗೆ ಅಂತಃಚಕ್ಷು ಮುಂದೆ ಬರುತ್ತವೆ. ಯಾವಾಗಲು ಕಣ್ಣುಮುಚ್ಚಿ ಜಪ ಮಾಡುತ್ತೇನಂತಲ್ಲ; ಆದರೆ ಜಪ ಸುರು ಆಯಿತೆಂದರೆ ಸದ್ಗುರು ಕೃಪೆಯಿಂದ ಮನಸ್ಸಿನ ಏಕಾಗ್ರತೆ ಆಗುವದು.

ಇತ್ತೀಚ್ತಲಾಗಿ ನನಗೆ ತೇಜಃಪುಂಜವಾದ ಒಂದು ರೂಪ ಕಾಣಿ ಸುತ್ತದೆ. ರೂಪವು ಸ್ಪಷ್ಟ ಕಾಣುವದಿಲ್ಲ, ಆದರೆ ಕಣ್ಣುಗಳು ಮಾತ್ರ ಅತಿಶಯ ತೇಜಸ್ವಿಯಾಗಿ ಕಾಣಿಸುವದು, ತೇಜವು ಮಿಂಚಿನ ಪ್ರಕಾಶದಂತೆ ತೋರುತ್ತದೆ ಒಮ್ಮೊಮ್ಮೆ ಆ ತೇಜವು ಸಹನವಾಗುವದಿಲ್ಲ, ಆಗ ನಾನು ಕಣ್ಣುಗಳನ್ನು ತೆರೆಯುತ್ತೇನೆ, ಜಪಮಾಡುತ್ತಿರುವಾಗ ತಲೆಯು ಭಾರವಾದಂತೆ ತೋರುವದು ಮತ್ತು ಒಮ್ಮೊಮ್ಮೆ ಶೀನುಗಳೂ ಬರುವವು.

ಸದ್ಗುರುಕೃಪೆಯ ಮೂಲಕ ಯಾವ ಮೇಲಿನ ಅನುಭವಗಳು ನನಗೆ ಬಂದಿರುತ್ತವೋ ಅವನ್ನು ಗುರುತಾಯಿ ಮುಂದೆ ನನ್ನ ಅಲ್ಪ ಬುದ್ಧಿ ಪ್ರಕಾರ ಇಟ್ಟಿರುವೆನು. ನಾನು ಅಜ್ಞನಿದ್ದೇನೆ ಇದರ ಅರ್ಥಜ್ಞಾನವು ನನಗೆ ಆಗುವದಿಲ್ಲ. ನನಗೆ ಬರಿಯಲಿಕ್ಕೂ ಬರುವದಿಲ್ಲ, ಸದ್ಗುರು ಸರ್ವತ್ರ ವ ನನ್ನ ಅಂತರ್ಯಾಮಿ ಯಾಗಿದ್ದಾರೆ, ಎಂಬದು ಸ್ವಲ್ಪಸ್ವಲ್ಪ ನನಗೆ ತಿಳಿಯಬರುತ್ತಿದೆ ನನ್ನ ಉದ್ವಿಗ್ನ ವಾದ ಚಿತ್ತವು ಈಗ ಶಾಂತವಾಗಿದೆ, ಇದು ನನ್ನಮೇಲೆ ಸದ್ಗುರುಗಳ ಕೃಪೆ ಯಾಗಿರುತ್ತದೆ, ಮಹಾರಾಜರ ಕೃಪಾಪತ್ರದ ದಾರಿ ನೋಡುತ್ತ ಇದ್ದೇನೆ. ಇಲ್ಲಿ ಎಲ್ಲರು ಕ್ಷೇಮದಲ್ಲಿದ್ದಾರೆ.

ಮಹಾರಾಜರ ನಮ್ರ ಸೇವಕ
( ಸಹಿ ) ವಿನಾಯಕ ಕಾಶಿನಾಥ ಖಳೆ

— ೪ —

ವ್ಹಿ. ಟಿ. ಪಾಟಣಕರ ಬಿ. ಎ., ಎಲ್. ಎಲ್. ಬಿ. ವಕೀಲ, ದಾ. ಮುಂಬಯಿ.

ಇವರ ಪರಮಾರ್ಥಿಕ ಅನುಭವಗಳು, ಕೆಲವು ಅವರು ಸ್ವತಃ ಸ್ವತಂತ್ರವಾಗಿ ಬರೆದದ್ದು ಮತ್ತು ಕೆಲವು ಶ್ರೀಗಜಾನನ ಮಹಾರಾಜರಿಗೆ ಬರೆದ ಪತ್ರರೂಪಗಳಲ್ಲಿ ಇರುತ್ತವೆ. ತಾ|| ೧—೧೧—೩೧

ನಾಲ್ವತ್ತೆನ ಕ್ಷಿತ್ತವಂದು ವರ್ಷಗಳವರೆಗೆ ನಾನು ನನ್ನ ಆಯುಷ್ಯವನ್ನು ಹ್ಯಾಗಾದರೂ ಅಲ್ಲಿ ಇತ್ತ ನಿಶ್ಚಿತ ರೀತಿಯಿಂದ ಕಳೆದೆ, ಮತ್ತು ಈಶ್ವರನ ಅಸ್ತಿತ್ವದ್ದೇ ನನಗೆ ಸಂಶಯ ಉತ್ಪನ್ನವಾಯಿತು. ನನ್ನ ಪತ್ನಿಯು ಅತಿಶಯ ಅಸ್ವಸ್ಥದಲ್ಲಿ ಬಿದ್ದಳು, ಮತ್ತು ಈ ಅಸ್ವಸ್ಥತೆ ಸತತ ಎರಡು ವರ್ಷಗಳ ನಡಿಯಿತು. ಸಮಯದಲ್ಲಿ ನನ್ನ ಮನಸ್ಸು ಚಿಂತೆಯಿಂದ ಬಹಳ ಉದ್ವಿಗ್ನವಾಗಿತ್ತು. ಕಾದಂಬರಿ ಇತ್ಯಾದಿ ವಾಙ್ಮಯ ಓದಿ ನನ್ನ ಮನಸ್ಸು ರಂಜನೆಯಾಗದು ಎಂದು ನಾನು ಧಾರ್ಮಿಕ ಪುಸ್ತಕಗಳನ್ನು ಓದಲಿಕ್ಕೆ ಆರಂಭ ಮಾಡಿದೆ. ರಾಮಕೃಷ್ಣ ಪರಮಹಂಸರ ಚರಿತ್ರವನ್ನು ಓದಿ ನನ್ನ ಮನಸ್ಸಿಗೆ ಹೊಸದಾರಿ ತೋರಿತು. ಮತ್ತು ನನಗೆ ಆಧ್ಯಾತ್ಮಿಕ ವಿಷಯಗಳು ಪ್ರೀತಿಕರವಾದವು. ಅನಂತರ ನಾನು ಭಗವದ್ಗೀತೆಯನ್ನು ಓದಿದೆ, ಅದರಿಂದ ನನ್ನ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ಈ ವೇಳೆಗೆ ನನ್ನ ಹೆಂಡತಿಯ ರೋಗವು ಅಧಿಕವಾಯಿತು. ಏನೂ ಗ್ರಹಪೀಡಾ ಇದ್ದೀತಾದರೆ, ವಿನೋದಕ್ಕಾಗಿ ನನ್ನ ಮಿತ್ರರು ಧಾರ್ಮಿಕ ವಿಧಿ ಏನಾದರೂ ಮಾಡಲಿಕ್ಕೆ ಪ್ರೇರಿಸಿದರು. ಆದರೆ ಈಶ್ವರ ಕೃಪೆವಿನಹಾ ನನ್ನ ಪತ್ನಿಯು ನೆಟ್ಟಗಾಗಲಿಕ್ಕಿಲ್ಲ ಎಂದೂ ನನ್ನ ನಿಶ್ಚಯವಾಯಿತು.

ನನ್ನ ಒಬ್ಬ ಮಿತ್ರನ ಪ್ರೇರಣೆಯಿಂದ ನಾನು ಭಗವದ್ಗೀತೆಯ ಹನ್ನೊಂದನೇ ಅಧ್ಯಾಯವನ್ನು ದಿನಾಲೂ ಓದಲಾರಂಭಿಸಿದೆನು. ಒಂದು ತಿಂಗಳ ತನಕ ಹೀಗೆ ಮಾಡಿದ ಮೇಲೆ, ಧ್ಯಾನದಲ್ಲಿ ಏನೂ ಸುಧಾರಣೆ ಆಗದಿದ್ದರೂ ನನ್ನ ಮನಸ್ಸು ಸ್ವಲ್ಪ ಶಾಂತವಾಗಿ ಚಿಂತೆಯು ಮೆಲ್ಲಮೆಲ್ಲನೆ ಕಡಿಮೆಯಾಗುತ್ತ ಬಂತು. ಶ್ರೀಕೃಷ್ಣ ಮೂರ್ತಿಯು ಪೂರಾ ಸ್ಪಷ್ಟವಾಗದಿದ್ದರೂ, ಅಸ್ಪಷ್ಟವಾಗಿಯೇ ಅದನ್ನು ನಾನು ಮನಸ್ಸಿನಲ್ಲಿ ನೋಡಹತ್ತಿದೆ, ಸದ್ಗುರು ಕೃಪಾಪ್ರಸಾದ ಪಡಿಯಲಿಕ್ಕೆ ಇದು ಪೂರ್ವ ಸಿದ್ಧತೆಯೇ ಎಂಬಂತೆ ಆಯಿತು. ಸನ್ ೧೯೩೧ನೇ ಇಸವಿಯ ಅಕ್ಟೋಬರ ತಿಂಗಳಲ್ಲಿ ಶ್ರೀಗಡಕರಿ ವಕೀಲ ಇವರ ಕೂಡ ನಾನು ಶ್ರೀಗಜಾನನ ಮಹಾರಾಜರ ದರ್ಶನಕ್ಕೆ ಹೋದೆನು ಮತ್ತು ಏನೇನು ಮಾಡುತ್ತಿದ್ದೆ ಎಂಬದು ನಾನು ಅವರಿಗೆ ನಿವೇದಿಸಿದೆ. ಆಗ ಅವರಿಗೆ ನನ್ನಮೇಲೆ ದಯೆ ಹುಟ್ಟಿತು ಮತ್ತು ಅವರು ನನಗೆ ಧ್ಯಾನಕ್ಕೆ ಕೂಡ್ರಲಿಕ್ಕೆ ಹೇಳಿದರು. ನಾನು ಧ್ಯಾನಮಾಡಲಿಕ್ಕೆ ಹತ್ತಿದೆ. ಒಂದೆರಡು ದಿವಸಗಳಲ್ಲಿಯೇ ಶ್ರೀಕೃಷ್ಣಮೂರ್ತಿ ಸ್ಪಷ್ಟವಾಗಿ ಕಾಣಹತ್ತಿತು, ಮತ್ತು ಮಹಾರಾಜರು ನನ್ನ ಮುಂದೆಯೇ ಕೂತಿದ್ದಾರೆ ಎಂಬಂತೆ ನನಗೆ ಭಾಸವಾಗುತ್ತಿತ್ತು.

ಮಹಾರಾಜರು ನಂತರ ನನಗೆ ಶ್ರೀಕೃಷ್ಣನ ಪೂಜೆ ಮಾಡಲಿಕ್ಕೆ ಹೇಳಿದರು. ಅದರ ಪರಿಣಾಮವು ಹೀಗೆ ಆಯಿತು, ನಾನು ಧ್ಯಾನಕ್ಕೆ ಸುರು ಮಾಡಿದಾಕ್ಷಣ ಶ್ರೀಕೃಷ್ಣನ ಮೂರ್ತಿಯು ನನ್ನ ಮುಂದೆ ಕಾಣಹತ್ತಿತು. ಶ್ರೀಕೃಷ್ಣನು ನನ್ನ ಪೂಜೆಯನ್ನು ಗ್ರಹಣ ಮಾಡಿ ನನಗೆ ತನ್ನ ಪದಕಮಲದ ತೀರ್ಥವನ್ನು ಕೊಟ್ಟನು. ಮತ್ತು ನಾನು ಆ ಶ್ರೀಕೃಷ್ಣಮೂರ್ತಿ ಮುಂದೆ ಕೂತು ‘ ಓಂ ರಾಧಾಕೃಷ್ಣ ’ ಹೀಗೆ ಜಪ ಸುರು ಮಾಡಿದೆ. ನಂತರ ನಾನು ಆತನ ಪೂಜೆಯನ್ನು ಪತ್ನಿ ಸಹಿತ ಮಾಡಿದೆ. ( ನನ್ನ ಪತ್ನಿಯನ್ನು ನಾನು ಧ್ಯಾನದೊಳಗೆ ನೋಡಿದೆ ) ಆಕೆಯನ್ನು ಒಳ್ಳೇ ಧಷ್ಟಪುಷ್ಟವಾಗಿ ಸುಂದರಿಯಾಗಿ ಕಂಡೆ.

ಯಾವ ಜಪವನ್ನು ನಾನು ಮನಸ್ಸಿನಲ್ಲಿ ಜಪಿಸುತ್ತಿದ್ದೆನೋ, ಅದೇ ಜಪವು ಮುಂದೆ ನನಗೆ ಕಿವಿಯೊಳಗೆ ಕೇಳಹತ್ತಿತು. ಗೀತೆಯ ಹನ್ನೊಂದನೇ ಅಧ್ಯಾಯ ಸಂಬಂಧ ಹೀಗೆಯೇ ಸಂಭವಿಸಿತು. ಮಹಾರಾಜರ ಆಜ್ಞೆಯ ಮೇಲಿಂದ ನಾಶಿಕ ವ ಬೇರೆ ಕಡೆಗಳಲ್ಲಿ ಸೂಕ್ಷ್ಮ ಶರೀರದಿಂದ ನಾನು ಸ್ನಾನಕ್ಕೆ ಹೋಗಹತ್ತಿದೆ. ಇದೇ ಪ್ರಕಾರ ನನ್ನ ಪತ್ನಿಯು ಈ ವೇಳೆಗೆ ಎಲ್ಲಿ ಇರುತ್ತಿರುವಳೊ ಅಲ್ಲಿಗೆ ಹೋಗಲಾರಂಭಿಸಿದೆ ಈ ಸುಧಾರಣೆಕೆಯು ಬಹಳ ಶೀಘ್ರ ಆಯಿತು ಮತ್ತು ಪ್ರತೀದಿನ ಮಹಾರಾಜರ ಕಡೆ ಹೋಗಿ ಅವರ ಪಾದಕ್ಕೆ ಬೀಳಬೇಕೆಂದು ನನಗನಿಸಿತು.

ನನ್ನ ಮಾನಸಿಕ ಪೂಜೆಯಲ್ಲಿ ಶ್ರೀಕೃಷ್ಣನನ್ನು ಪಲಂಗದ ಮೇಲೆ ಮಲಗಿಸುತ್ತಿದ್ದೆ, ಮತ್ತು ಆತನಿಗೆ ಶಾಲಜೋಡಿಯನ್ನು ಹೊದಿಸುತ್ತಿದ್ದೆ. ಒಂದುದಿನ ಶಾಲು ತೆಗೆದಿರುತ್ತಿರುವಾಗ ಶ್ರೀಕೃಷ್ಣನ ಬದಲಿಗೆ ಮಹಾರಾಜರು ಮಲಗಿಕೊಂಡಿದ್ದಾರೆ ಎಂಬುದಾಗಿ ನಾನು ಕಂಡೆ ನಂತರ ಮಹಾರಾಜರ ಸ್ಥಳದಲ್ಲಿ ಸ್ವತಃ ನಾನು ಮತ್ತು ನನ್ನ ಸ್ಥಳದಲ್ಲಿ ನನ್ನ ಪತ್ನಿಯೂ ಇದ್ದಂತೆ ತೋರಿತು. ನಂತರ ‘ ಸರ್ವಂ ಖಲ್ವಿದಂ ಬ್ರಹ್ಮ ’ ( ಇದೆಲ್ಲ ಬ್ರಹ್ಮವೇ ) ಈ ಶಬ್ದಗಳೊಳಗಿನ ಖರೇ ತತ್ವವು ನನಗೆ ತಿಳಿದು ಬಂತು.

ಈ ದಿವಸಗಳಲ್ಲಿ ಬಹಳ ಸಾರೆ ನನಗೆ, ಊದಿನಕಡ್ಡಿ, ಅತ್ತರ, ಕೇದಗಿ ಮುಂತಾದ್ದರ ಸುವಾಸ ಬರುತ್ತಿತ್ತು. ಒಮ್ಮೊಮ್ಮೆ ಶ್ರೀವಿಷ್ಣು, ರಾಮದಾಸ, ಶಿವಾಜಿ ಮತ್ತು ತುಕಾರಾಮ ಇವರೂ ನನಗೆ ಧ್ಯಾನದಲ್ಲಿ ಕಾಣಿಸುತ್ತಿದ್ದರು. ನಂತರ ಎರಡು ಮೂರು ದಿನಗಳಲ್ಲಿ ನನ್ನ ಎದೆಯೊಳಗಿಂದ ಒಂದು ಜ್ಯೋತಿ ಹೊರಟು ಅದು ಕಂಠದ ಕಡೆ ಹೋಗುವಂತೆ ತೋರಿತು. ಒಂದು ದಿನ ಮಹಾರಾಜರು ಗಡಕರಿಯವರಲ್ಲಿ ಬಂದಿದ್ದರು. ಆಗ ಮಧ್ಯರಾತ್ರಿ ವೇಳೆಗೆ ಅವರು ನನಗೆ ‘ ಓಂ ’ ದ ಧ್ಯಾನಮಾಡಲಿಕ್ಕೆ ಹೇಳಿದರು, ಮತ್ತು ಹೊಳೆಯುವ ತೇಜದ ಸಂಪೂರ್ಣ ‘ ಓಂ ’ಕಾರವನ್ನು ನಾನು ನೋಡಿದೆನು.

ಅನಂತರ ಶ್ರೀಕೃಷ್ಣನ ಸ್ಥಾನದಲ್ಲಿ ಶಂಕರರು ಕಾಣಿಸಲಾರಂಭಿಸಿದರು. ಆವರದು ನನಗೆ ಸ್ವಲ್ಪ ಭಯವಾಯಿತು, ಶಂಕರರು ಗುಪ್ತರಾಗಿ ಆ ಸ್ಥಾನದಲ್ಲಿ ಖಡ್ಗ ಧಾರಣೆ ಮಾಡಿದ ಒಬ್ಬ ರಾಕ್ಷಸನು ಕಾಣಿಸಿದನು. ನಾನು ಒಂದು ಮಿನಿಟು ತನಕ ಗಡಬಡಿಸಿದೆ; ಆದರೆ ಅನಂತರ ನನ್ನ ತಲೆ ಕಡಿಯಲಿಕ್ಕೆ ನಾನು ಅವನಿಗೆ ಕರೆದೆ ಅವನು ನನ್ನ ಶಿರವನ್ನು ಕತ್ತರಿಸಿದನು. ಅದು ಹತ್ತು-ಹನ್ನೆರಡು ಮೊಳ ದೂರ ಬಿತ್ತು. ನನ್ನ ಮತ್ತು ರಾಕ್ಷಸನ ನಡುವೆ ಒಂದು ಚೌಕೋನಿ ಅಗ್ನಿ ಕುಂಡವಿತ್ತು ಆದರಲ್ಲಿ ನನ್ನ ಶಿರಸ್ಸು ಹೋಗಿ ಬಿತ್ತು, ಮತ್ತು ಉಳಿದ ಶರೀರದ ಭಾಗವಾದರೂ ನಾನು ಅದರಲ್ಲಿ ಹಾಕಿದೆ. ಈ ದೃಷ್ಯದ ನಾನು ಹೀಗೆ ಅರ್ಥ ಮಾಡಿದೆನು, ನನ್ನ ಅವಿದ್ಯಾ ( ಅಜ್ಞಾನ ) ನಷ್ಟವಾಯಿತು ಮತ್ತು ನಾನು ವಿದ್ಯಾ ( ಜ್ಞಾನ ) ಗ್ರಹಣಕ್ಕೆ ಅಧಿಕಾರಿಯಾದೆ.

ಚಂದ್ರಗ್ರಹಣದ ದಿವಸ ನಾನು ಧ್ಯಾನ ಮಾಡುತ್ತಿರುವಾಗ ಶ್ರೀಶಂಕರವ ಅವರ ಮುಂದೆ ನನ್ನ ಪತ್ನಿ ಕುಳಿತಿರುವದು ನಾನು ಕಂಡೆನು, ಕೋಣದ ಮೇಲೆ ಕೂತಿಪ್ಪ ಯಮನೂ ಇಲ್ಲಿದ್ದನು. ಅವನು ನನ್ನ ಪತ್ನಿಯು ಕೊರಳಿಗೆ ಪಾಶವನ್ನು ಹಾಕಿದ್ದನು, ಎಂಬಂತೆ ತೋರಿತು, ಶಂಕರನು ಅದನ್ನು ಹಿಂದಕ್ಕೆ ತಕ್ಕೊಳ್ಳಲಿಕ್ಕೆ ಆಜ್ಞೆಮಾಡಿದನು, ಆಗ ಯಮನು ಆ ಪಾಶವನ್ನು ತಕ್ಕೊಂಡು ಹೊರಟು ಹೋದನು, ಈ ದೃಶ್ಯವನ್ನು ಕಂಡ ಎರಡು ಮೂರು ದಿನಗಳಲ್ಲಿ, ಕರ್ನಾಡದಲ್ಲಿ ಇರಲಿಕ್ಕೆ ಹೋದ ನನ್ನ ಪತ್ನಿಯು ಪತ್ರ ಬಂತು ಏನೆಂದರೆ, ಗ್ರಹಣದ ದಿವಸ ಪ್ರಕೃತಿ ಬಹಳ ಕಠಿಣವಾಗಿತ್ತು.

ಶ್ರೀಗಣಪತಿಯು ನನ್ನ ಪತ್ನಿಯ ಮೈಮೇಲಿನಿಂದ ತನ್ನ ಸೊಂಡಿಯನ್ನು ಎಳೆಯುತ್ತಿದ್ದಾನೆ, ಹೀಗೂ ಒಮ್ಮೊಮ್ಮೆ ಕಾಣಿಸುತ್ತಿತ್ತು. ಆದರ ಮೇಲಿಂದ ಶ್ರೀಕೃಷ್ಣನು ನನ್ನ ಎಲ್ಲ ಜವಾಬದಾರಿಯನ್ನು ತನ್ನ ಮೈಮೇಲೆ ತಕ್ಕೊಂಡಿದ್ದಾನೆ. ಆದ್ದರಿಂದ ನಾನು ಈಗ ಏನೂ ಭಯಪಟ್ಟಿರಲಿಕ್ಕೆ ಕಾರಣವಿಲ್ಲ ಹೀಗೆ ನನ್ನ ಮನಸ್ಸಿಗೆ ನಿಶ್ಚಯವಾಯಿತು.

ಗಣೇಶ ಚತುರ್ಥಿ ದಿನ ಮಹಾರಾಜರು ನನಗೆ ಮೂಲಾಧಾರ ಚಕ್ರದ ಕಡೆಗೆ ಲಕ್ಷಕೊಡಲಿಕ್ಕೆ ಹೇಳಿದರು. ಅಲ್ಲಿ ನಾನು ಗಣಪತಿಯನ್ನು ನೋಡಿದೆನು.

ಆಶ್ವಿನ ತಿಂಗಳ ಆರಂಭದಲ್ಲಿ ನಾನು ಧ್ಯಾನ ಮಾಡಲಿಕ್ಕೆ ಕೂತಿರುವಾಗ ನನಗೆ ಮೈಯೊಳಗೆ ಹೊಡತಗಳು ಬಿದ್ದಂತೆ ಆಯಿತು, ನನ್ನ ಮೈ ಎಲ್ಲ ಕಂಪಾಯಮಾನವಾಯಿತು, ಮತ್ತು ಧ್ಯಾನಕ್ಕೆ ಲಕ್ಷ ಹತ್ತದಂತಾಯಿತು. ನನ್ನ ಸರ್ವ ಶರೀರ ಇಷ್ಟು ಜೋರಿನಂತೆ ಅಲ್ಲಾಡ ಹತ್ತಿತಲ್ಲ, ನನಗೆ ಯಾವದಾದರೂ ಭೂತವು ಮೈಮೇಲೆ ಬಂತೋ ಎಂಬಂತೆ ತೋರಿತು. ನನ್ನ ಕುಂಡಲಿನಿ ಜಾಗ್ರತ

ವಾಯಿತೇನೋ ಎಂದು ನನಗೆ ಸಂಶಯವಾಯಿತು. ಈ ಸವಿಸ್ತರ ಸಮಾಚಾರವನ್ನು ನಾನು ಮಹಾರಾಜರಿಗೆ ಪತ್ರದ್ವಾರ ತಿಳಿಸಿದೆ: ಅಂಜುವ ಕಾರಣವಿಲ್ಲ, ಅಭ್ಯಾಸ ನಡೆಯಲಿ ಎಂದು ಅವರ ಉತ್ತರ ಬಂತು.

ಕೆಲವು ದಿವಸಗಳ ನಂತರ ಮಹಾರಾಜರು ಮುಂಬಯಿಗೆ ಬಂದರು, ಮತ್ತು ಅವರು ನನ್ನನ್ನು ತಮ್ಮ ಮುಂದೆ ಧ್ಯಾನಕ್ಕೆ ಕೂಡ್ರಿಸಿಕೊಂಡರು. ನಂತರ ನಾನು ಕುಂಡಲಿನಿ ಅಂದರೆ ಕುಡಿಮುಖ, ಕರೀ ಹೆಣ್ಣು ಹಾವು ನನ್ನ ಬೆನ್ನೆಲುವಿನೊಳಗಿಂದ ಮೇಲೆ ಕೊರಳಿನ ಪರ್ಯಂತ ಹತ್ತುತ್ತಿದ್ದನ್ನು ನಾನು ನೋಡಿದೆ. ಅಲ್ಲಿ ಅದು ಗುಪ್ತವಾಯಿತು ಮತ್ತು ಪುನಹಾ ಕಾಣಿಸಿತು, ಅಲ್ಲಿಂದ ಅದು ಮಸ್ತಕದಲ್ಲಿ ಹೋಯಿತು, ಮತ್ತು ಅಲ್ಲಿಂದ ಅದು ದ್ವಿದಲ ಚಕ್ರದ ಮೇಲೆ ಅಂದರೆ ಭ್ರೂಮಧ್ಯಕ್ಕೆ ಬಂದು ಅಲ್ಲಿ ಕೆಲವು ಹೊತ್ತು ಹೆಡೆ ಮೇಲೆ ಮಾಡಿ ಸುರಳಿಹಾಕಿ ಕೂತಿತು. ಮತ್ತು ಪುನಹಾ ಅದೃಶ್ಯವಾಯಿತು. ಮಹಾರಾಜರ ಆಜ್ಞೆಯಿಂದ ನಾನು ಪುನಹಾ ಒಳಕ್ಕೆ ಕಂಡೆ. ಪ್ರಥಮದಲ್ಲಿ ಅದು ಬೆಳಗುವದ ಪಾಡಿದ್ದಂತೆ ತೋರಿತು, ಆ ಮೇಲೆ ಭಂಗಾರದಂತೆ ಕಾಣಿಸಿತು, ಅದು ಗುಹ್ಯದ್ವಾರದಿಂದ ಎದೆ ಪರ್ಯಂತ ಬಂತು, ಅನಂತರ ಅವರು ನನಗೆ ಅದರ ಕಣ್ಣಿನ ಕಡೆಗೆ ನೋಡಲಿಕ್ಕೆ ಹೇಳಿದರು; ಅಲ್ಲಿ ನಾನು ಶ್ರೀಕೃಷ್ಣನ ಸುಂದರ ಮೂರ್ತಿಯನ್ನು ನೋಡಿದೆ: ಆ ಮೇಲೆ ಮಹಾರಾಜರು ನನಗೆ ತಾನು ಇಲ್ಲದಾಗಲ್ಲಿ ಅಭ್ಯಾಸ ಮಾಡಲಿಕ್ಕೆ ಹೇಳಿದರು, ಮತ್ತು "ಸ್ಥೂಲ ಶರೀರದಿಂದ ನಾನು ಎಷ್ಟು ದೂರ ವಿದ್ದರೂ ನಿರಂತರ ನಾನು ನಿನ್ನ ಹತ್ತಿರವೆ ಇರುತ್ತೇನೆ," ಎಂದು ಹೇಳಿದರು.

ನನಗೆ ಪುನಹಾ ಮೂಲಾಧಾರ ಚಕ್ರದ ಕಡೆಗೆ ಲಕ್ಷ್ಯಕೊಡಲಿಕ್ಕೆ ಹೇಳಿದರು. ನಾನು ಹಾಗೆ ಮಾಡಿದಾಗ, ನನಗೆ ಅಲ್ಲಿ ಅಪ್ರತಿಮ ಸುಂದರಿಯಾದ ಸ್ತ್ರೀ ಕಾಣಿಸಿದಳು. ಆಕೆಯು ನನಗೆ ಸ್ವಲ್ಪ ಅಂತರದ ಮೇಲೆ ಕಣ್ಣು ಕುಕ್ಕುವಂಥ ಒಂದು ಜ್ಯೋತಿಯನ್ನು ತೋರಿಸಿದಳು.

ಮಹಾರಾಜರು ಒಂದು ದಿನ ನನಗೆ ಮೂಲಾಧಾರ ಚಕ್ರದ ಕಡೆ ಲಕ್ಷ್ಯ ಕೊಡಲಿಕ್ಕೆ ಹೇಳಿದರು. ಹಾಗೆ ಮಾಡಿದ ಕೂಡಲೆ ಅಲ್ಲಿ ಒಂದು ಅಗ್ನಿಕುಂಡ ಕಾಣಿಸಿತು, ಅಲ್ಲಿಂದ ಜ್ವಾಲೆಗಳು ಹೊರಡುತ್ತಿದ್ದು, ಅವು ನನ್ನ ಎದೆಗೆ ತಾಗುತ್ತಿದ್ದವು. ಅವುಗಳ ನಡುವೆ ನನಗೆ ಒಬ್ಬಾಕೆ ಸುಂದರ ಸ್ತ್ರೀ ಕಾಣಿಸಿದಳು. ಮಹಾರಾಜರು ನನಗೆ ಕುಂಡಲಿನಿಯ ವಿಶ್ವರೂಪ ನೋಡಲಿಕ್ಕೆ ಹೇಳಿದರು. ಪುನಹಾ ನನಗೆ ಅಗ್ನಿಕುಂಡ ಕಾಣಿಸಿ, ಅದರೊಳಗಿಂದ ಹೊರಡುವ ಜ್ವಾಲೆಗಳೊಳಗೆ ಒಬ್ಬ ಸುಂದರ ಸ್ತ್ರೀ ಕಾಣಿಸಿದಳು. ಆಕೆಯು ಸರ್ಪರೂಪ ಧರಿಸಿದ್ದಳು. ಆಕೆಗೆ ಅನಂತ ಮುಖಗಳಿದ್ದು ಅನಂತ ನಾಲಿಗೆಗಳು ಹೊರಬೀಳುತ್ತಿದ್ದವು. ನನ್ನ ಸರ್ವ ಶರೀರ ಕಂಪಾಯಮಾನವಾಯಿತು, ಆದರೂ ನಾನು ಒಳ್ಳೇ ಎಚ್ಚರ ಇದ್ದೆ.

ನನ್ನ ಮುಖದಲ್ಲಿ ಹಾಸ್ಯ ಮುದ್ರೆ ಇತ್ತು, ಮತ್ತು ಮನಸ್ಸಿನಲ್ಲಿ ಸ್ವಲ್ಪವೂ ಭಯ ವಿದ್ದಿಲ್ಲ.

ಒಮ್ಮೆ ನಾನು ಧ್ಯಾನಕ್ಕೆ ಕೂತಿರುವಾಗ ಗೌತಮ ಬುದ್ಧನ ಮೂರ್ತಿಯು ಕಾಣಿಸಿತು. ಮಹಾರಾಜರು ನನಗೆ ಒಮ್ಮೆ ರಾಸಕ್ರೀಡೆಯ ಧ್ಯಾನ ಮಾಡಲಿಕ್ಕೆ ಹೇಳಿದರು. ಹಾಗೆ ಮಾಡುತ್ತಲೇ ನಾವಿರಾರು ಗೋಪಿಸ್ತ್ರೀಯರು ಶ್ರೀಕೃಷ್ಣನ ಸಂಗಡ ಆಡುತ್ತಿರುವದನ್ನು ಕಂಡೆನು.

ಒಂದು ದಿನ ಮಹಾರಾಜರು ನನಗೆ ಆತ್ಮಜ್ಯೋತಿಯ ಧ್ಯಾನ ಮಾಡಲಿಕ್ಕೆ ಹೇಳಿದರು. ಅದನ್ನು ನಾನು ನನ್ನ ಹೃದಯದಲ್ಲಿ ನೋಡಿದೆ, ಮತ್ತು ಅದು ನನಗೆ ಎಲ್ಲ ಕಡೆಯಲ್ಲಿಯೂ ಕಾಣಿಸಿತು; ಅದು ನೀಲವರ್ಣದ್ದಿತ್ತು.

ಒಮ್ಮೆ ನನಗೆ ಶ್ರೀಕೃಷ್ಣನ ವೇಣುನಾದವನ್ನು ಕೇಳುವ ಇಚ್ಛೆ ಹುಟ್ಟಿತು. ಊದಲಿಕ್ಕೆ ಕೈಯಲ್ಲಿ ಕೊಳಲನ್ನು ಹಿಡಕೊಂಡ ಶ್ರೀಕೃಷ್ಣನ ಮೂರ್ತಿಯನ್ನು ನಾನು ಯಾವಾಗಲೂ ನೋಡುತ್ತಿದ್ದೆ. ನನ್ನ ವಿನಂತಿ ಮಾನ್ಯ ಮಾಡಬೇಕೆಂದು ಸಣ್ಣ ಮಕ್ಕಳಂತೆ ಹಟಹಿಡಿದು ಕೂತೆ ಮತ್ತು ಅಳಲಿಕ್ಕೆ ಸುರು ಮಾಡಿದೆ. ಶ್ರೀಕೃಷ್ಣನು ಅನಂತರ ನನ್ನ ತಲೆಯ ಮೇಲೆ ಕೈಯಿಟ್ಟನು, ಮತ್ತು ಆ ನಾದವನ್ನು ಕೇಳಲಿಕ್ಕೆ ನೀನು ಸಮರ್ಥನಾಗುವಿ ಎಂದು ಅಂದನು. ಈ ಸಂಗತಿಯನ್ನು ನಾನು ಮಹಾರಾಜರಿಗೆ ತಿಳಿಸಿದೆ, ಆಗ ಅವರು ನನಗೆ ಧ್ಯಾನ ಮಾಡಲಿಕ್ಕೆ ಹೇಳಿದರು. ಆಮೇಲೆ ಶ್ರೀಕೃಷ್ಣನು ವೇಣು ಬಾರಿಸುತ್ತಾನೆಂತ ನನಗೆ ತೋರಿತು ಮತ್ತು ಅದರ ಧ್ವನಿಯು ನಾನು ಕೇಳುತ್ತೇನೆಂಬದಾಗಿ ಭಾಸ ಮಾನವಾಯಿತು.

ತಾ ೧—೧೧—೩೧ ಸಹಿ ವಿಶ್ವನಾಥ

---

ದಾದರದಿಂದ ತಾ. ೨೭-೧೧,೩೧ ತಾರೀಖಿಗೆ ಬರೆದ ಪತ್ರದ ಮಜಕೂರು.

ತಮ್ಮ ಆಜ್ಞೆ ತೆಕ್ಕೊಂಡು ಬಂದಮೇಲೆ ನಾನು ಕರ್ನಾಡಕ್ಕೆ ಹೋದೆ. ಅಲ್ಲಿ ನನ್ನ ಪತ್ನಿಯ ಜ್ವರವು ೧೦೩° ಪರ್ಯಂತ ಏರುತ್ತಿತ್ತು, ಆದರೆ ಬೆಳಿಗ್ಗೆ ೯೮° ಡಿಗ್ರಿತನಕ ಇಳಿಯುತ್ತಿತ್ತು. ತಾವು ಹೇಳಿದಂತೆ ನಾನು ನನ್ನ ಕೈಯನ್ನು ಆಕೆಯ ಮಸ್ತಕದ ಮೇಲಿಟ್ಟು ಬೆಳಿಗ್ಗೆ ಆಕೆಯನ್ನು ಧ್ಯಾನ ಮಾಡಲಿಕ್ಕೆ ಕೂಡ್ರಿಸುತ್ತೇನೆ. ಮತ್ತು ಅದೇ ಸಮಯದಲ್ಲಿ ನಾನೂ ಧ್ಯಾನ ಮಾಡುತ್ತಿರುವೆನು. ನನ್ನ ಸ್ಥಳದಲ್ಲಿ ನೀವೇ ಕೂತಿರುವಿರಿ ಎಂಬಂತೆ ನನಗೆ ತೋರುತ್ತಿತ್ತು. ನಾನು

ಅಲ್ಲಿ ಇದ್ದಾಗ್ಯಾದರೂ ಜ್ವರವು ಮೊದಲಿನಂತೆಯೇ ಏರುತ್ತಿತ್ತು. ಆದರೂ ನನ್ನ ಪತ್ನಿಗೆ ಕಡೆಗೆ ತಾನು ನೆಟ್ಟಗಾಗುವೆನೆಂದು ಅನಿಸಹತ್ತಿತು.

ನಾನು ಕಂಪ್ಲಾಡದಲ್ಲಿರುವಾಗ ಧ್ಯಾನದಲ್ಲಿ ನನಗೆ ಶ್ರೀವಿಷ್ಣುವಿನ ದರ್ಶನವಾಯಿತು. ಮತ್ತು ನಾನು ಆತನ ಪ್ರಾರ್ಥನೆ ಮಾಡಿ ಅಂದೆ, 'ನನ್ನ ಗೃಹಸ್ಥಾಶ್ರಮ ನಡಿಯಬೇಕು ಎಂದು ನಿಮ್ಮ ಇಚ್ಛೆ ಇದ್ದರೆ, ಆಕೆಯನ್ನು ಇಲ್ಲಿ ಇಡಿರಿ, ಇಲ್ಲದಿದ್ದರೆ ತಕ್ಕೊಂಡು ಹೋಗಿರಿ. ನಿಮ್ಮ ಇಚ್ಛೆ ಇದ್ದಂತೆ ಮಾಡಿರಿ; ಆದರೆ ನನಗೆ ಮಾತ್ರ ಭಕ್ತಿ, ಜ್ಞಾನ ಮತ್ತು ವೈರಾಗ್ಯವನ್ನು ಕೊಡಿರಿ.' ಇದಕ್ಕೆ ಶ್ರೀವಿಷ್ಣುದೇವರು ಮೊದಲು, "ಅಂಜಬೇಡಾ" ಅಂದು ಆಮೇಲೆ 'ತಥಾಸ್ತು' ಅಂದರು.

ನಾನು ಧ್ಯಾನ ಮಾಡುತ್ತಿರುವಾಗ ಬಹಳ ಸಾರಿ ನೀವು ಮತ್ತು ಶ್ರೀಕೃಷ್ಣ ಇಬ್ಬರೂ ನನ್ನ ಪತ್ನಿಯ ಮಸ್ತಕದ ಮೇಲೆ ಹಸ್ತ ಇಟ್ಟಿದ್ದೀರಿ ಮತ್ತು ಸುದರ್ಶನ ಚಕ್ರವು ವರ್ತುಲಾಕಾರವಾಗಿ ತಿರುಗುವದು ಎಂದು ನಾನು ನೋಡುತ್ತಿರುತ್ತೇನೆ. ಒಮ್ಮೆ ಧ್ಯಾನದಲ್ಲಿ ಎಲ್ಲಿ ಶ್ರೀವಿಷ್ಣುವು ಶೇಷನ ಮೇಲೆ ಶಯನ ಮಾಡಿದ್ದಾರೋ ಮತ್ತು ಶ್ರೀಲಕ್ಷ್ಮೀ ಅವರ ಪಾದ ಸಂವಾಹನ ಮಾಡುತ್ತಿರುತ್ತಾಳೆ, ಅಂಥಾ ಕ್ಷೀರಸಮುದ್ರದಲ್ಲಿ, ನಾನು ನನ್ನ ಪತ್ನಿ ಸಹವರ್ತಮಾನ ಹೋಗುತ್ತಿದ್ದೇನೆ ಎಂಬದು ನೋಡಿದೆ. ನನಗೆ ಏನು ಬೇಕಾಗಿದೆ ಎಂಬಂತೆ ಶ್ರೀಲಕ್ಷ್ಮಿಯು ನನ್ನ ಕಡೆ ಬಿರಿಗಣ್ಣು ಬಿಟ್ಟು ನೋಡುತ್ತಿದ್ದಳು. ನಾವಿಬ್ಬರೂ ಶ್ರೀವಿಷ್ಣುವಿಗೆ ನಮಸ್ಕಾರ ಮಾಡಿದೆವು, ಮತ್ತು ವಿಷ್ಣುವಿಗೆ ನಾನು ಭಕ್ತಿ, ಜ್ಞಾನ, ವೈರಾಗ್ಯವನ್ನು ಬೇಡಿದೆನು. ನಂತರ ಅವರು ನಮ್ಮಿಬ್ಬರ ತಲೆಯ ಮೇಲೆ ಹಸ್ತವನ್ನಿಟ್ಟರು.

---

ದಾದರದಿಂದ ತಾ. ೧೫ ಮಾರ್ಚ ಸನ್ನ ೧೯೩೬ ಈದಿನ ಬರೆದ ಪತ್ರದ ಮಜಕೂರು.

ತಾವು ಹೇಳಿದ ಪ್ರಕಾರ ನಾನು ಧ್ಯಾನದ ಅಭ್ಯಾಸವನ್ನು ಮಾಡುತ್ತಾ ಇದ್ದೇನೆ. ಮಾತೆಯು (ಕುಂಡಲಿನಿಯು) ಜೋರಿನಿಂದ ಹೃದಯದಲ್ಲಿರುವ ಅನಾಹತ ಚಕ್ರದಪರ್ಯಂತ ಬಂದಳು, ಮತ್ತು ಹೆಡೆಯ ಸ್ಥಳದಲ್ಲಿ ಒಂದು ಸುಂದರ ಸ್ತ್ರೀಯ ರೂಪವನ್ನು ಧರಿಸಿ ಅಮೃತವನ್ನು ಕುಡಿಯಲಾರಂಭಿಸಿದಳು, ಎರಡು ನೂರು ಧಾರೆಗಳಿಂದ ಅಮೃತವು ಹೊರಬಿದ್ದು ಅದು ಸರಿಯಾಗಿ ಕುಂಡಲಿನಿಯ ಬಾಯಿಯಲ್ಲಿಯೇ ಬೀಳುತ್ತಿತ್ತು. ಒಮ್ಮೆ ನಾನು ಸ್ವತಃ ಅಮೃತವನ್ನು ಕುಡಿಯಬೇಕೆಂದು ನನ್ನ ಮನಸ್ಸಿನಲ್ಲಿ ವಿಚಾರ ಹುಟ್ಟಿತು. ಮತ್ತು ನಾನು ನನ್ನ

ನಾಲಿಗೆಯನ್ನು ಹಿಂದೆ ತಿರುಗಿಸಿ ಅದರ ತುದಿಯಿಂದ ತಾಲುಸ್ಥಾನಕ್ಕೆ ಸ್ಪರ್ಶ ಮಾಡಿದೆ. ಆದರೆ ಆ ಅಮೃತದ ಒಂದು ಬಿಂದು ಸಹಾ ನನಗೆ ಸಿಗಲಿಲ್ಲ. ಅದು ತಮ್ಮ ಇಚ್ಛೆವಿರುದ್ಧವಾಗುವದೆಂದು ಆ ಪ್ರಯತ್ನಗಳನ್ನು ನಾನು ಬಿಟ್ಟುಕೊಟ್ಟೆ.

ಶಿವರಾತ್ರಿಯ ದಿನ ಕುಂಡಲಿನಿಯು ಒಮ್ಮಿಂದೊಮ್ಮೆ ದಶಮದ್ವಾರ ಅಂದರೆ ಭ್ರೂಮಧ್ಯ ಪರ್ಯಂತ ಏರಿದಳು, ಮತ್ತು ಅದರೊಳಗಿಂದ ಸಹಸ್ರದಲದ ತನಕ ಹೋಗಿ ಸುರಳಿ ಸುತ್ತಿ ಕೂತಳು. ನನಗೆ ಅತ್ಯಾನಂದವಾಯಿತು, ಮತ್ತು ಶಿವಪಾರ್ವತಿಯ ದರ್ಶನವಾಗಬೇಕೆಂದು ಇಚ್ಛೆಯಾಯಿತು; ಅಂತ ನಾನು ಹೃದಯಸ್ಥಾನದಲ್ಲಿರುವ ಅನಾಹತ ಚಕ್ರದ ಕಡೆಗೆ ಲಕ್ಷ ಹಚ್ಚಿದೆ. ಅಲ್ಲಿ ಶಿವ-ಪಾರ್ವತಿಯವರದರ್ಶನ ತಕ್ಕೊಂಡೆ, ಮತ್ತು ಶಂಕರನ ಜಡೆಯೊಳಗಿಂದ ಹೊರ ಬೀಳುವ ಗಂಗೆಯಲ್ಲಿ ನಾನು ಸ್ನಾನ ಮಾಡಿದೆ.

ನಾನು ಬಹಳಸಾರಿ ನೀಲಿಛಾಯೆಯ ವರ್ಣವನ್ನು ಕಾಣುತ್ತಿರುತ್ತೇನೆ.

---

ದಾದರದಿಂದ ತಾ. ೮ ಮೇ ೧೯೩೭ ದಿನ ಬರೆದ ಪತ್ರದೊಳಗಿನ ಮಜಕೂರು.

ನನಗೆ ಮುಂಡಿಸ ಕಡೆಯಿಂದ ಕುಂಡಲಿನಿಯನ್ನು ಏರಿಸಲಿಕ್ಕೆ ಕಲಿಸಿದರು. ಹಾಗೆ ಮಾಡುತ್ತಿರುವಾಗ ನನಗೆ ಬಂದ ಅನುಭಗಳನ್ನು ವರ್ಣಿಸುತ್ತೇನೆ.

ನಾನು ಪದ್ಮಾಸನವನ್ನು ಹಾಕಿ ಕೂಡುತ್ತೇನೆ ಜನನೇಂದ್ರಿಯದೊಳಗಿನಿಂದ ವಾಯುವನ್ನು ಮೇಲೆ ತಕ್ಕೊಂಡನಂತರ ಕುಂಡಲಿನಿಯು ಸ್ವಾಧಿಷ್ಠಾನ ಚಕ್ರದಪರ್ಯಂತ ಮೇಲಕ್ಕೆ ಏರುವಳು, ಮತ್ತು ಅಲ್ಲಿ ಆರು ಎಸಳಿನ ಕೆಂಪು ವರ್ಣದ ಕಮಲವು ಕಾಣಿಸುವದು. ಅಲ್ಲಿ ಬ್ರಹ್ಮದೇವರು ಕೂತಿರುವದು ತೋರುತ್ತದೆ ಅವನು ತನ್ನ ಮಸ್ತಕದ ಮೇಲೆ ಕೈಯಿಟ್ಟು ನನಗೆ ಒಂದು ಕಮಲವನ್ನು ಕೊಡುತ್ತಾನೆ. ಈ ಕಮಲವನ್ನು ನಾನು ಕೈಯಲ್ಲಿ ಹಿಡಕೊಂಡು ಮೂಲಾಧಾರ ಚಕ್ರದ ಸ್ಥಾನಕ್ಕೆ ಹೋಗುತ್ತೇನೆ. ಅಲ್ಲಿ ಬೇರೆ ವರ್ಣದ ನಾಲ್ಕು ಎಸಳುಗಳುಳ್ಳ ಕಮಲವು ಕಾಣಿಸುವದು. ಆ ನಾಲ್ಕು ಎಸಳುಗಳ ಮೇಲೆ ಯಂ, ರಂ, ಲಂ, ವಂ ಹೀಗೆ ಅಕ್ಷರಗಳು ಕಾಣಿಸುತ್ತವೆ. ಅಲ್ಲಿಂದ ನಾನು ಮೇಲಕ್ಕೆ ಮಣಿಪೂರ ಚಕ್ರದ ಪರ್ಯಂತ ಹೋಗುತ್ತೇನೆ. ಅಲ್ಲಿ ನನಗೆ ಹತ್ತು ಎಸಳುಳ್ಳ ಕಮಲವು ಕಾಣಿಸುವದು. ಅಲ್ಲಿ ಶ್ರೀವಿಷ್ಣು ಮತ್ತು ಅವನ ಪಾದ ಸಂವಾಹನ ಮಾಡುವ ಲಕ್ಷ್ಮಿ ಇವರಿಬ್ಬರ ದರ್ಶನವನ್ನು ನಾನು ತಗೊಳ್ಳುತ್ತೇನೆ. ಶ್ರೀವಿಷ್ಣು ನನಗೆ ಆಶೀರ್ವಾದವನ್ನು ಕೊಡುತ್ತಾರೆ. ಮತ್ತು ತನ್ನ 'ಸುದರ್ಶನ ಚಕ್ರವನ್ನು ನನ್ನ ಕೈಯಲ್ಲಿ ಕೊಟ್ಟು ಮೇಲಿನ ಅನಾಹತ ಚಕ್ರದ ಕಡೆಗೆ ಹೋಗಲಿಕ್ಕೆ ಹೇಳು

ತ್ತಾರೆ. ನಾನು ಹಾಗೆಯೇ ಮಾಡುತ್ತೇನೆ. ಪಾರ್ವತಿಯು ನನಗೆ ಬಿಳೀ ಕಮಲವನ್ನು ಕೊಡುತ್ತಾಳೆ. ಅದನ್ನು ತಕ್ಕೊಂಡು ಸುಷುಮ್ನಾ ನಾಡಿದ್ವಾರದಿಂದ ಭ್ರಮರ ಗುಂಫೆಯದ್ವಾರದ ಪರ್ಯಂತ ಹೋಗುತ್ತೇನೆ. ವಿಶುದ್ಧ ಮತ್ತು ಆಜ್ಞಾಚಕ್ರಗಳು ನನ್ನ ಬಾಯಿಯಲ್ಲಿರುತ್ತಾ ಆ ಚಕ್ರಗಳ ಕಡೆಗೆ ಸದ್ಯಕ್ಕೆ ನಾನು ಹೋಗುವದಿಲ್ಲ. ಅಲ್ಲಿ ನನಗೆ ಕುಂಡಲಿನಿಯು ಅಗ್ನಿಕುಂಡದೊಳಗಿನ ಜ್ವಾಲೆಗಳೊಳಗಿಂದ ಹೊರಗೆ ಬರುತ್ತಿರುವ ಅತಿ ಸುಂದರ ಸ್ತ್ರೀ ರೂಪದಿಂದ ಕಾಣಿಸುತ್ತಾಳೆ.

ನಂತರ ನಾನು ಕರೇ ವರ್ಣದ ಕಾಮಧೇನುವನ್ನು ನೋಡುತ್ತೇನೆ; ಕಮಂಡಲುದೊಳಗೆ ಆಕೆಯ ಹಾಲು ತಕ್ಕೊಂಡು ನಾನು ಕುಡಿಯುತ್ತೇನೆ. ಆ ಮೇಲೆ ಆಕೆಯು ಅಂಬರಿಸಿ, ನನ್ನ ಮೈಯನ್ನೆಲ್ಲ ನೆಕ್ಕುತ್ತಾಳೆ. ನಂತರ ನಾನು ಆ ಆಕಳನ್ನು ಬಹಳ ಪ್ರೇಮದಿಂದ ಅಪ್ಪಿಕೊಳ್ಳುತ್ತೇನೆ, ಮತ್ತು ನನಗೆ ಅತ್ಯಾ-ನಂದವಾಗುವದು. ಹಾಗೆಯೇ ನಾನು ಮೂರು ಶಿರಗಳು ಮತ್ತು ಆರು ಕೈಗಳುಳ್ಳ ದತ್ತನನ್ನು ನೋಡುತ್ತೇನೆ. ನಾನು ಆತನಿಗೆ ನಮಸ್ಕಾರ ಮಾಡುತ್ತೇನೆ. ಮತ್ತು ಆತನು ಒಮ್ಮೆ 'ಸೋಹಂ' ಮತ್ತೊಮ್ಮೆ 'ಓಂ ತತ್ಸತ್' ಈ ಶಬ್ದಗಳನ್ನು ನನ್ನ ಕಿವಿಯಲ್ಲಿ ಉಸುರುತ್ತಾನೆ. ನಂತರ ನಾನು ಅಲ್ಲಿ (ಭ್ರಮರ ಗುಂಫೆಯಲ್ಲಿ) 'ಸೋಹಂ'ದ ಅಥವಾ, 'ಓಂ ತತ್ಸತ್' ಇವರ ಜಪ ಮಾಡುತ್ತಾ ಕೂತಿರುತ್ತೇನೆ.

ದಾದರ ಮುಂಬಯಿ ತಾರೀಖು ೪-೭-೩೨ ಬಂದ ಪತ್ರದ ಮಜಕೂರು

ಈ ಸಮಯದಲ್ಲಿ ಕುಂಡಲಿನಿಯು ಸುಂದರ ಸ್ತ್ರೀ ರೂಪದಿಂದ ಕಾಣಿಸುತ್ತಾಳೆ. ಮತ್ತು ತನ್ನ ಕರಕಮಲವನ್ನು ನನ್ನ ಮಸ್ತಕದ ಮೇಲಿಟ್ಟು, 'ನಾನು ನಿನಗೆ ಆತ್ಮಜ್ಞಾನ ಸಂಪಾದಿಸಿ ಕೊಡಲಿಕ್ಕೆ ಸಹಾಯ ಮಾಡುವೆನು' ಹೀಗೆ ಅಭಿವಚನ ಕೊಡುತ್ತಾಳೆ. ನನಗೆ ಆತ್ಮಸಾಕ್ಷಾತ್ಕಾರ ಮಾರ್ಗದ ಮೇಲೆ ಅನುಕೂಲವಾಗುವದೆಶೆಯಿಂದ ಆಕೆಯು ಶುದ್ಧಸತ್ವಗುಣಿ ರೂಪವನ್ನು ಧರಿಸುವಳು.

ಸ್ವಲ್ಪ ದಿನಗಳ ಹಿಂದೆ ಶ್ರೀದತ್ತರು ಬಂದರು, ಮತ್ತು ಅವರು ತಮ್ಮ ತ್ರಿಶೂಲದಿಂದ ನನ್ನ ತಲೆಯಮೇಲೆ ಒಡೆದರು. ಅದರಿಂದ ಜಖಮು ಆಯಿತು ಮತ್ತು ಅದರೊಳಗಿಂದ ರಕ್ತದ ಧಾರೆ ಹರಿದವು. ಅವರು ಆ ಜಖಮಿನಮೇಲೆ ತನ್ನ ಕಮಂಡಲುದೊಳಗಿನ ನೀರನ್ನು ಸಿಂಪಡಿಸಿದರು. ಆ ಕಾರಣ ನನಗೆ ಅಂಜಿಕೆ ಆಗಲಿಲ್ಲ. ನಂತರ ಅವರು ತಮ್ಮ ಕೈಯನ್ನು ನನ್ನ ಮಸ್ತಕದಮೇಲಿಟ್ಟು 'ಓಂ ತತ್ಸತ್' ಈ ಮಂತ್ರವನ್ನು ನನ್ನ ಕಿವಿಯಲ್ಲಿ ಹೇಳಿದರು ಮತ್ತು ಬಹಳ ಪ್ರೀತಿಯಿಂದ ನನಗೆ ಮುದ್ದಿಟ್ಟರು.

ದಾದರ-ಮುಂಬಯಿಯಿಂದ ತಾರೀಖು ೮ನೇ ನವ್ಹಂಬರ ೧೯೩೨ ನೇ ದಿನ
ಬರೆದ ಪತ್ರದೊಳಗಿನ ಮಜಕೂರು

ಇತ್ತೀಚೆಗಲಾಗೆ ಬಹಳ ಸಾರಿ ಹೀಗೆ ಆಗುವದಲ್ಲ, ನಾನು ಮಾನಸ-ಪೂಜೆಯನ್ನು ಮಾಡುತ್ತಿರುವಾಗ ಭ್ರಮರಗುಂಫೆಯೊಳಗೆ ಒಮ್ಮೆಲೇ ನೀಲ ವರ್ಣವು ತೋರುತ್ತದೆ. ಮನಸ್ಸು ಒಮ್ಮೆಲೆ ಆಕರ್ಷಿತವಾಗಿ ತತ್‌ಕ್ಷಣವೇ ಅದರಲ್ಲಿ ಕೂಡಿಹೋಗಿ ಸ್ವಲ್ಪ ಹೊತ್ತಿನೊಳಗೆ ನಿರ್ಮನಸ್ಕ ಸ್ಥಿತಿ ಅನುಭವಕ್ಕೆ ಬರುತ್ತದೆ. ಈ ಸ್ಥಿತಿಯು ಬಹಳಹೊತ್ತು ಸ್ಥಿರವಾಗಿರಬೇಕೆಂದು ನನ್ನ ಇಚ್ಛೆ ಬಹಳ ಅದೆ.

---

ದಾದರ-ಮುಂಬಯಿಯಿಂದ ತಾರೀಖು ೨೪-೨-೩೪ ರ ಪತ್ರ:—

ಮನಸ್ಸು ನಾಸಿಕಾಗ್ರಹದಲ್ಲಿಟ್ಟು ಭ್ರೂಮಧ್ಯದಲ್ಲಿ ನೋಡಿದರೆ, ಅಲ್ಲಿ ನಾನು ದಿವ್ಯ ಚಕ್ಷುವನ್ನು ಕಂಡೆನು, ಮತ್ತು ಅಲ್ಲಿ ನೀವು ಶೇಷದ ಮೇಲೆ ಮಲಗಿದ್ದು ಶಕ್ತಿಯು ನಿಮ್ಮ ಚರಣ ಸೇವೆಯನ್ನು ಮಾಡುತ್ತಿರುವದನ್ನು ಕಂಡೆನು. ಅನಂತರ ಸ್ವಲ್ಪ ದಿನಗಳಲ್ಲಿ ನೀವು ಪರಮಾತ್ಮ ಸ್ವರೂಪ ವಿಷ್ಣು ಮತ್ತು ನಾನು ಸ್ವತಃ ಅದೇ ಸ್ಥಿತಿಯಲ್ಲಿದ್ದದ್ದು ನೋಡಿದೆ. ಈಗ ನಾನು ಈ ದೃಶ್ಯವನ್ನು ಪ್ರತಿದಿನ ನೋಡುತ್ತೇನೆ. ತಮ್ಮ ಆಜ್ಞೆಯಿಂದ ಯಾವಾಗ ನಾನು ಈ ಭ್ರೂಮಧ್ಯದಲ್ಲಿದ್ದ ಕಣ್ಣಿನಿಂದ ಮೇಲೆ ನೋಡಲಿಕ್ಕೆ ಸುರುಮಾಡಿದೆನೊ ಆಗ ನನ್ನ ಮೆದುಳು ಪೂರ್ಣ ಕಿವಡು ಆದಂತೆ ತೋರಿತು, ಮತ್ತು ಮೆದುಳಿನ ಮಧ್ಯಭಾಗದಲ್ಲಿ ಅತ್ಯಂತ ಕಣ್ಣು ಕುಕ್ಕುವಂಥ ಒಂದು ಪ್ರಕಾಶನನ್ನು ಕಂಡೆನು. ಈಗ ಪ್ರತಿದಿವಸ ಈ ಕಣ್ಣಿನಿಂದ ನಾನು ಯಾವಾಗ ಮೇಲೆ ನೋಡುವೆನೊ ಆಗ ಜಪವು ತನ್ನಷ್ಟಕ್ಕೆ ನಿಲ್ಲುವದು, ಮತ್ತು ನಾನು ನಿರ್ಮನಸ್ಕನಾಗುತ್ತೇನೆ. ಆದರೆ ಈ ಸ್ಥಿತಿಯು ಬಹಳಹೊತ್ತು ಇರುವದಿಲ್ಲ, ಕೂಡಲೆ ಮನಸ್ಸು ಆಡ್ಡಾಡಲಿಕ್ಕೆ ಸುರು ಮಾಡುತ್ತದೆ. ನಂತರ ನಾನು ಮನಸ್ಸಿನ ನಿರ್ಭರ್ತ್ಸನೆಯನ್ನು ಮಾಡುತ್ತೇನೆ. ಆದರೆ ಈ ಚಂಚಲ ಮನಸ್ಸು ನನಗೆ ಕೇಳುವದಿಲ್ಲ ಆಮೇಲೆ ನಾನು ತಮ್ಮ ಸ್ಮರಣೆ ಮಾಡುತ್ತೇನೆ, ಮತ್ತು ತಾವು ನನ್ನ ಸಮೀಪ ಇದ್ದದ್ದರ ನಿಜವಾದ ಉಪಯೋಗವು ನನಗೆ ತಿಳಿಯುತ್ತದೆ, ಮತ್ತು ತಾವು ನಿರಂತರ ನನ್ನ ಸಮೀಪವಿರಬೇಕು ಎಂಬ ಇಚ್ಛೆಯಾಗುತ್ತದೆ.

---

ದಾದರ-ಮುಂಬಯಿಯಿಂದ ತಾರೀಖು ೫ನೇ ಅಕ್ಟೋಬರ ೧೯೩೪ ರಲ್ಲಿ
ಬರೆದ ಪತ್ರ:—

ಶ್ರೀಗಜಾನನ ಮಹಾರಾಜರ ಚರಣಗಳಿಗೆ ಶಿರಸಾಷ್ಟಾಂಗ ನಮಸ್ಕಾರ-

ನನ್ನ ಪರಿಚಯದ ಮಂದಿ ಬಂದು ನನ್ನ ದಾರಿ ನೋಡುತ್ತಿರುವದನ್ನು ಅವರು ನನಗೆ ಭೇಟಿಯಾಗುವಾಗ ನಾನು ಧ್ಯಾನದಲ್ಲಿ ಕಾಣುತ್ತೇನೆ. ನಾನು ಶೀಘ್ರ ಅಪಾತ್ರನಿರುವಾಗ ನಾನು ಇಂಥಾ ದೃಶ್ಯಗಳನ್ನು ಯಾಕೆ ನೋಡಬೇಕು, ಇದೇ ನನಗೆ ತಿಳಿಯದು.

ನಾನು ಆಸನವನ್ನು ಬಿಟ್ಟು ಮಲಗಿಕೊಂಡು ಧ್ಯಾನ ಮಾಡ ನೋಡಿದರೆ, ಮನಸ್ಸು ಸ್ವಾಧೀನದಲ್ಲಿರುವದಿಲ್ಲ, ಮತ್ತು ವಿಚಾರಗಳು ಹರಿಯಹತ್ತುತ್ತವೆ; ಆದ್ದರಿಂದ ಮನಸ್ಸು ಏಕಾಗ್ರವಾಗಲಿಕ್ಕೆ ಬರುವದಿಲ್ಲ. ಮುಂದಿನ ಸುಧಾರಣೆಕೆ ನಿಂತಿತು ಎಂಬದಾಗಿ ತೋರುವದು.

ಹೋದ ಎರಡುಮೂರು ದಿನ ಸರ್ಚಲಾಯಿಟಿನಂಥಾ ಪ್ರಕಾಶವು ನನ್ನ ಭ್ರೂಮಧ್ಯದೊಳಗಿನಿಂದ ಹೊರಡುವದೆಂಬದಾಗಿ ತೋರುವದು, ಮತ್ತು ಆ ಪ್ರಕಾಶದೊಳಗೆ ನನ್ನ ಮಾನಸ ಪೂಜೆಯು ನಡಿಯುತ್ತಿರುತ್ತದೆ. ನಾನು ಒಂದು ಸಾಗರವನ್ನು ನೋಡುತ್ತೇನೆ, ಮತ್ತು ಅಲ್ಲಿ ಕೆಲವು ಕಾಲ ಆಸನ ಹಾಕಿ ಕೂತಿರುವಾಗ, ಪೂರ್ಣಚಂದ್ರನು ನನ್ನ ತಲೆಯಮೇಲೆ ಪ್ರಕಾಶಿಸುತ್ತಾನೆ ಎಂಬಂತೆ ತೋರುತ್ತಿತ್ತು. ಒಮ್ಮೊಮ್ಮೆ ಈ ಚಂದ್ರನು ತನ್ನ ಪ್ರಕಾಶ, ಕಿರಣ ಅಥವಾ ಯಾತರಿಂದ ಆದಾಗಿದೂ ಅಂಥಾ ಬರ್ಫದಂಥಾ ಪದಾರ್ಥ, ನನ್ನ ಮೈಮೇಲೆ ಬಿದ್ದು ನನ್ನ ಮೈಯೆಲ್ಲಾ ಮುಚ್ಚಿ ಹೋಗುವದು. ಅನಂತರ ನಾನು ಏನೂ ನೋಡಲಾರೆ, ಮತ್ತು ಯಾವಾಗ್ಗೆ ಆ ಪದಾರ್ಥವನ್ನು ದೂರ ಸರಿಸಿ ನಾನು ನೋಡಬೇಕೆಂತ ಯತ್ನಮಾಡುತ್ತೇನೊ ಆಗ ನನ್ನದೇಹದ ಸ್ಥಳದಲ್ಲಿ ಶ್ರೀವಿಷ್ಣು ಅಥವಾ ಶ್ರೀಕೃಷ್ಣನು ನನಗೆ ಕಾಣಿಸುತ್ತಾನೆ.

ಈ ಪ್ರಕಾರ ನಾನು ನನ್ನ ಅನುಭವಗಳನ್ನು ತಪಶೀಲವಾರ ಬರೆದು ತಿಳಿಸಿರುವೆನು.

ತಮ್ಮ ಚರಣಾಶ್ರಿತ

( ಸಹಿ ) ವಿಶ್ವನಾಥ

---

— ೫ —

ಕಲಕತ್ತೆಯ ರಹಿವಾಸಿ ಭವಾನಿಚರಣ ಸಿದ್ಧಾಂತ ಇವರ ಅನುಭವಗಳು:—

ನಾನು ಬಂಗಾಲದೊಳಗಿನ ಕಲಕತ್ತಾ ಶಹರಿನ ರಹಿವಾಸಿ ಇದ್ದೇನೆ. ಅಲ್ಲಿ ನ್ಯಾಯ ಖಾತೆಯಲ್ಲಿ ನನಗೆ ೧೪೦ ರೂಪಾಯಿ ಪಗಾರದ ನೌಕರಿ ಇತ್ತು. ನನಗೆ ಹೆಂಡತಿ ಮತ್ತು ಮೂರು ಮಂದಿ ಮಕ್ಕಳಿದ್ದಾರೆ. ನಾನು ಕಾಲಿದೇವಿಯ

ಭಕ್ತನಿದ್ದೇನೆ. ಧ್ಯಾನಕ್ಕೆ ಪ ಜಪಕ್ಕೆ ನಾನು ಆ ದೇವಿಯ ನಾಮವನ್ನು ಉಪಯೋಗಿಸುತ್ತೇನೆ. ಕಲಕತ್ತೆಯಲ್ಲಿ ಕಾಲಿಯ ಭಕ್ತರು ಅಥವಾ ಮಹಾನ್ ಯೋಗಿಗಳು ಸ್ಥಾಪಿಸಿದ ಮತ್ತು ಅವರವರ ಹೆಸರುಗಳಲ್ಲಿ ನಡೆಯುವ ಬಹಳ ಪಂಥಗಳು ಅಥವಾ ಸಾಂಪ್ರದಾಯಿ ಮಂಡಳಗಳು ಇರುತ್ತವೆ. ಆ ಎಲ್ಲ ಮಂಡಳಗಳ ಅಧಿಕಾರಿಗಳು ಹೆಚ್ಚಾಗಿ ಸನ್ಯಾಸಿಗಳೇ ಇರುತ್ತಾರೆ ಆದರೆ ಅವರು ಒಳ್ಳೇ ನೀತಿತತ್ವಗಳನ್ನು ಪಾಲಿಸುವದಿಲ್ಲ, ಎಂದು ನನಗೆ ತಿಳಿದು ಬಂದದೆ. ಆತ್ಮಸಾಕ್ಷಾತ್ಕಾರದ ಮಾರ್ಗ ಶಿಕ್ಕಿ ಪರಮಾತ್ಮನ ಜ್ಞಾನವಾಗಬೇಕು ಎಂದು ಈ ಸಾಂಪ್ರದಾಯದ ಮುಖ್ಯ ಅಧಿಕಾರಿಯ ದರ್ಶನ ತಕ್ಕೊಂಡೆ; ಆದರೆ ನನ್ನ ನಿರಾಶೆಯಾಯಿತು ಎಂದು ಬಹಳ ದುಃಖದಿಂದ ನಾನು ಹೇಳಬೇಕಾಗುತ್ತದೆ. ಇಷ್ಟೇ ಅಲ್ಲ, ಅವರು ಸಾದಾ ಗೃಹಸ್ಥಾಶ್ರಮಿ ಪುರುಷನಿಕಿಂತ ಹೆಚ್ಚಿನ ಯೋಗ್ಯತೆಯವರಲ್ಲ ಎಂದು ನನಗೆ ತಿಳಿದು ಬಂತು.

ಹೋದ ಐದು ವರ್ಷಗಳಲ್ಲಿ ಆತ್ಮಸಾಕ್ಷಾತ್ಕಾರವಾಗುವದೆಶೆಯಿಂದ ಗುರುಪದೇಶ ತಕ್ಕೊಳ್ಳಬೇಕೆಂದು ನನಗೆ ಅತ್ಯುತ್ಕಟ ಇಚ್ಛೆ ಆಗಿತ್ತು. ಒಂದುದಿನ ಅರ್ಧಜಾಗೃತಿ ಇದ್ದು ಹಾಸಿಗೆ ಮೇಲೆ ಬಿದ್ದಿರುವಾಗ್ಗೆ ಭ್ರೂಮಧ್ಯದಲ್ಲಿ ಒಂದು ಪ್ರಕಾಶಕಿರಣ ಕಂಡೆನು. ಅದು ಹತ್ತು ಮಿನಿಟುತನಕ ಇತ್ತು, ಆಮೇಲೆ ಇಲ್ಲದಂತಾಯಿತು. ಈ ಪ್ರಕಾಶಕಿರಣ ಕಾಣಿಸಿದದರಿಂದ ಮನೆಮಾರು ಬಿಟ್ಟು ನೌಕರಿಗೆ ರಾಜಿನಾಮೆಕೊಟ್ಟು ಈಶ್ವರನನ್ನು ಶೋಧಿಸಲಿಕ್ಕೆ ಹೋಗಬೇಕೆಂದು ನನಗೆ ಉಮೇದ ಬಂತು.

ಮೊದಲು ನಾನು ಕಮಲಾಕ್ಷಿಗೆ ಹೋದೆ. ಅಲ್ಲಿ ಒಂದು ಪರ್ವತದ ಗುಹೆಯೊಳಗೆ ನಾನು ಒಬ್ಬ ಯೋಗಿಯನ್ನು ಕಂಡೆನು. ಅವನ ಮಸ್ತಕದ ಮೇಲೆ ಉದ್ದ ಜಡೆ ಇದ್ದು ಅವನು ಮೂರು ಅಹೋರಾತ್ರಿ ಆಸನ ಹಾಕಿ ಧ್ಯಾನಸ್ಥ ಕೂತಿದ್ದನು. ಈ ಯೋಗಿಯು ಈಶ್ವರನ ಕಡೆ ಹೋಗುವ ಮಾರ್ಗವನ್ನು ನನಗ ತೋರಿಸುವನು ಎಂಬ ಆಶೆಯಿಂದ ಅನ್ನ ತಕ್ಕೊಳ್ಳದೆ ಅವನು ದೇಹದ ಮೇಲೆ ಬರುವ ದಾರಿಯನ್ನು ನೋಡುತ್ತ ಕೂತೆನು. ಅವನು ದೇಹದ ಮೇಲೆ ಬಂದ ಮೇಲೆ ನೀವು ಯಾರು ನೀವು ಅಲ್ಲಿ ಬರುವ ಪ್ರಯೋಜನವೇನು ಎಂದು ಅವರು ನನಗೆ ಕೇಳಿದರು. ನಾನು ಬಂದಿರುವ ಉದ್ದೇಶವನ್ನು ನಾನು ಸ್ಪಷ್ಟವಾಗಿ ಹೇಳಿದೆನು. ಆಗ, 'ನಿಮಗೆ ಏನು ಬೇಕೊ ಅದು ನನ್ನ ಹತ್ತರ ಇಲ್ಲ' ಎಂದು ಅವರು ನನಗೆ ಹೇಳಿದರು. ಅವರ ಮುಂದ ಧುನಿ ಇತ್ತು, ಅದರೊಳಗಿಂದ ಅವರು ನನಗೆ ಭಸ್ಮವನ್ನು ಕೊಟ್ಟರು, ಮತ್ತು "ಇದರೊಳಗಿಂದ ನಿಮಗೆ ನಿತ್ಯದ ಚರಿತಾರ್ಥಕ್ಕಾಗಿ ಸುವರ್ಣ ಸಿಕ್ಕೀತು" ಎಂದು ಹೇಳಿದರು. ನಾನು ಆ ಭಸ್ಮ ತಕ್ಕೊಳ್ಳಲಿಕ್ಕೆ ಒಪ್ಪಲಿಲ್ಲ. ಅವರು ಅದೇ ಸ್ಥಳದಲ್ಲಿ ಚಮತ್ಕಾರದಿಂದ ಉತ್ಪನ್ನ

ಮಾಡಿದ ಮಿಷ್ಟಾನ್ನ ಭೋಜನವನ್ನು ನನಗೆ ಕೊಟ್ಟರು, ಮತ್ತು ಅಮೃತದಂಥ ಸವಿಯಾದ ಫಲಗಳನ್ನು ನನಗೆ ತಿನ್ನಲಿಕ್ಕೆ ಕೊಟ್ಟರು. ಅಲ್ಲಿಂದ ನಾನು ಕಲಕತ್ತೆಗೆ ತಿರಿಗಿ ಬಂದೆ. ಆಮೇಲೆ ನಾನು ವೈಜನಾಥಕ್ಕೆ ಹೋದೆನು. ಬಂಗಾಲದೊಳಗಿನ ಇದು ತೀರ್ಥಸ್ಥಾನವಿರುತ್ತದೆ. ನಾನು ಅಲ್ಲಿ ಕಾಲಿಯನಾಮದ ಜಪ ಮಾಡುತ್ತ ಮತ್ತು ಧ್ಯಾನದ ಅಭ್ಯಾಸ ಮಾಡುತ್ತ ಆರುತಿಂಗಳು ಕಳದೆ, ನಾನು ವೇಳೆ ಎಲ್ಲ ಜಪ ಮಾಡುವದರಲ್ಲಿ ಹಾಕುತ್ತಿದ್ದೆ. ಒಂದು ದಿನ ಧ್ಯಾನ ಮಾಡುತ್ತಿರುವಾಗ ' ವೃಂದಾವನಕ್ಕೆ ಹೋಗು' ಎಂಬ ಒಂದು ದೊಡ್ಡ ಧ್ವನಿ ಕೇಳಿಸಿತು. ನಾನು ಆ ಆಜ್ಞೆಯನ್ನು ಮಾನ್ಯಮಾಡಿ ಅಲ್ಲಿಗೆ ಹೋದೆ, ನಾನು ಅಲ್ಲಿ ಒಂಬತ್ತು ತಿಂಗಳು ಇದ್ದೆನು, ಆದರೆ ನನಗೆ ಉಪದೇಶ ಕೊಡಲಿಕ್ಕೆ ಯೋಗ್ಯನಾದ ಒಬ್ಬನೂ ಭೆಟ್ಟಿಯಾಗಲಿಲ್ಲ ಒಮ್ಮೊಮ್ಮೆ ಯಾವನಾದರೊಬ್ಬನ ಉಪದೇಶ ತಕ್ಕೊಳ್ಳಬೇಕೆಂದು ಮನಸ್ಸಿನಲ್ಲಿ ಬಂದರೆ ಮನಸ್ಸು ಆ ವಿಚಾರವನ್ನು ಬಿಸಾಡಿ ಬಿಡುತ್ತಿತ್ತು. ಆದರೂ ನನಗೆ ಶ್ರೀಕೃಷ್ಣ ಮತ್ತು ಶಿವ ಇವರ ದರ್ಶನಗಳು ಸ್ವಪ್ನದಲ್ಲಾದವು, ಮತ್ತು ಪ್ರತಿಒಬ್ಬರೂ ತಮ್ಮ ಹೆಸರು ತಕ್ಕೊಳ್ಳಬೇಕೆಂತ ಉಪದೇಶ ಮಾಡುವರು. ಎಚ್ಚರವಾದ ಮೇಲೆ ನಾನು ಸ್ವಪ್ನದ ವಿಚಾರಮಾಡಿ ಕಾಲಿಯ ಬದಲಿಗೆ ' ಹರಿ ಹರಿ ' ಅನ್ನಬೇಕೆಂತ ನಿಶ್ಚಯ ಮಾಡಿದೆನು, ನಾನು ಕಲಕತ್ತೆಗೆ ತಿರುಗಿ ಹೋದೆ, ಮತ್ತು ಧ್ಯಾನ ಮಾಡುತ್ತ ಕೂತಿರುವಾಗ ಪುನಹ " ವೃಂದಾವನಕ್ಕೆ ಹೋಗು " ಎಂಬದಾಗಿ ದೊಡ್ಡ ಧ್ವನಿ ಕೇಳಿಸಿತು.

ಆಜ್ಞೆ ಪ್ರಕಾರ ನಾನು ಪುನಹಾ ವೃಂದಾವನಕ್ಕೆ ಹೋದೆನು. ಮತ್ತು ' ಹರಿ ಹರಿ ' ಎಂದನ್ನುವ ಅಭ್ಯಾಸ ಸುರು ಮಾಡಿದೆ. ಆದರೆ ನನಗೆ ಮಾರ್ಗದರ್ಶಕ ಗುರು ಸಿಗಲಿಲ್ಲ. ಆರುತಿಂಗಳನಂತರ ಅಲ್ಲಿಂದ ನಾಶಿಕಕ್ಕೆ ಹೋಗಬೇಕೆಂದು ನಾನು ಧ್ವನಿಯನ್ನು ಕೇಳಿದೆ, ಇಷ್ಟರೊಳಗೆ ನನ್ನ ಎಲ್ಲ ದ್ರವ್ಯವು ಖರ್ಚಾಗಿ ಹೋದ್ದರಿಂದ ನನ್ನ ಹತ್ತಿರ ಒಂದು ದುಡ್ಡು ಸಹ ಇದ್ದಿಲ್ಲ, ಆದ್ದರಿಂದ ವೃಂದಾವನದಿಂದ ನಾಶಿಕದತನಕ ನಾನು ನಡಕೊಂಡೆ ಬಂದೆ. ಮತ್ತು ಅಲ್ಲಿ ಚತುಃಸಾಂಪ್ರದಾಯ ಆಖಾಡದ ಮಹಂತನಲ್ಲಿ ಇಳಿದೆನು. ನಾಶಿಕದಲ್ಲಿ ಯಾರಾದರೂ ಯೋಗಿ ಇದ್ದಾನೇನು ಎಂದು ಆ ಮಹಂತನ ಹತ್ತಿರ ನಾನು ವಿಚಾರಿಸಿದೆ. ಅವರ ಒಬ್ಬ ಶಿಷ್ಯನಿಗೆ ಗಜಾನನ ಮಹಾರಾಜರ ಗೊತ್ತಿತ್ತು. ಅವನು ನನ್ನನ್ನು ಅವರ ಕಡೆಗೆ ಕರಕೊಂಡು ಹೋದನು. ನಾನು ಅವರ ಕಡೆ ಹೋದ ಕೂಡಲೆ ಪ್ರಥಮದಲ್ಲಿಯೇ ನಾನು ರಾಮಕೃಷ್ಣ ಪರಮಹಂಸರ ಸನ್ನಿಧಿಯಲ್ಲಿ ಕೂತುಕೊಂಡಂತೆ ನನಗೆ ಅನಿಸಿತು. ಮತ್ತು ಗುರುಪ್ರಾಪ್ತಿಗೆ ಇದೇ ಸ್ಥಾನವೆಂದು ನನಗೆ ತೋರಿತು.

ತಾರೀಖು ೧೫ ಅಕ್ಟೋಬರ ೧೯೩೮ ನೇ ದಿವಸ ಶನಿವಾರವಿತ್ತು. ಆ ದಿನ ಒಂಭತ್ತು ಹೊಡಿಯುವಾಗ ನಾನು ಗಜಾನನ ಮಹಾರಾಜರಕಡೆಗೆ ಹೋದೆ. ಅವರು ನನ್ನ ಮೇಲೆ ದಯೆ ಮಾಡಿದರು, ಮತ್ತು ' ಸೋಹಂ ' ಮಂತ್ರವನ್ನು

ಕೊಟ್ಟು ತಮ್ಮ ಹಸ್ತವನ್ನು ನನ್ನ ಮಸ್ತಕದ ಮೇಲೆ ಇಟ್ಟರು. ಅವರು ಹಾಗೆ ಮಾಡುವಷ್ಟರಲ್ಲಿ 'ಸೋಹಂ'ದ ದೊಡ್ಡ ಧ್ವನಿಯಾಯಿತು, ಮತ್ತು ನನ್ನ ಮನಸ್ಸು ಏಕಾಗ್ರವಾಯಿತು; ಮತ್ತು ನಿರ್ಮನಸ್ಕನಾಗಿ, ನನ್ನ ಅಂತಃಕರಣ ದಲ್ಲಿ ಒಂದು ಅಲೌಕಿಕ ಆನಂದದ ಲಹರಿ ಉತ್ಪನ್ನವಾಯಿತು. ಈ ಆನಂದ ವೃತ್ತಿಯು ಮುಂದಿನ ದಿನ ಆದಿತ್ಯವಾರತನಕ ಇತ್ತು. ಆ ದಿನ ಒಂಭತ್ತು ಘಂಟೆಗೆ ನಾನು ಪುನಃ ಮಹಾರಾಜರಕಡೆಗೆ ಹೋದೆ, ಮತ್ತು ಅವರ ಮುಂದೆ ಧ್ಯಾನಕ್ಕೆ ಕೂತುಕೊಂಡೆನು. ಆಗ ದೊಡ್ಡದಾಗಿದ್ದ 'ಸೋಹಂ'ದ ಧ್ವನಿಯು ಸೂಕ್ಷ್ಮವಾಗುತ್ತ ಬಂತು, ಮತ್ತು ಅಲ್ಪ ಪ್ರಕಾಶಮಯವಾಗಿ ನನಗೆ ಸಹಸ್ರದಲದ ದರ್ಶನವಾಯಿತು.

ಆ ದಿನ ಸಾಯಂಕಾಲಕ್ಕೆ ಮನೆಗೆ ಹೋಗಲಿಕ್ಕೆ ಅವರ ಆಜ್ಞಾ ತಕ್ಕೊಳ್ಳಬೇಕೆಂದು ನಾನು ಪುನಹಾ ಮಹಾರಾಜರಕಡೆಗೆ ಹೋದೆ. ಅವರು ನನಗೆ ಪುನಹಾ ಗೃಹಸ್ಥಾಶ್ರಮ ಸುರುಮಾಡಲಿಕ್ಕೆ ಹೇಳಿದರು, ಮತ್ತು ಸರ್ವ ಐಹಿಕ ವ್ಯವಹಾರಗಳನ್ನು ನಡಿಸುತ್ತಿರುವಾಗಲೂ, ನನಗೆ ಖರೇ ಆನಂದದ ಅನುಭವ ಶಿಕ್ಕೀತು ಎಂದು ಹೇಳಿದರು. ಆ ರಾತ್ರಿ ನಾನು ಇಳಿದಿದ್ದ ಸ್ಥಾನದಲ್ಲಿ ಧ್ಯಾನಮಾಡಲಿಕ್ಕೆ ಕೂತಿರುವಾಗ, ಪರಮಾನಂದದ ದೊಡ್ಡ ಪ್ರವಾಹ ಬಂದಂತೆ ನನಗೆ ಅನಿಸಿತು ಮತ್ತು ನನ್ನ ಸದ್ಗುರು ಗಜಾನನ ಮಹಾರಾಜ ಇವರ ಮೂರ್ತಿ ಯನ್ನು ನಾನು ನನ್ನ ಮುಂದೆ ನೋಡಿದೆನು.

ಸೋಮವಾರ ತಾರೀಖು ೧೭ ಅಕ್ಟೋಬರ ೧೯೩೮ ನೇ ದಿನ ಬೆಳಗ್ಗೆ ಹತ್ತು ಘಂಟೆಗೆ ನಾನು ಅವರ ದರ್ಶನಕ್ಕೆ ಹೋದೆ ಮತ್ತು ಅವರ ಅಪ್ಪಣೆ ತಕ್ಕೊಂಡು ನಾಶಿಕವನ್ನು ಬಿಟ್ಟೆನು.

( ಸಹಿ ) ಭವಾನಿ ಚರಣ ಸಿದ್ಧಾಂತ

---

— ೬ —

ಶ್ರೀ ಗಣೇಶ ರಾಮಚಂದ್ರ ಭಿಡೆ ಖೋತಿಗಲ್ಲಿ, ಧುಳೆ, ಇವರು ಶ್ರೀಗಜಾನನ ಮಹಾರಾಜ, ಪರೆಳ ಮುಂಬಯಿ ಇವರಿಗೆ ಬರೆದ ಪತ್ರದೊಳಗಿನ ಮಜಕೂರು. ಧುಳೆ ತಾರೀಖು ಇಲ್ಲ.

( ೧ )

ಶ್ರೀಸದ್ಗುರು ಗಜಾನನ ಮಹಾರಾಜ ಇವರಿಗೆ ನನ್ನ ಅನಂತ ಸಾ ನ. ತಮ್ಮ ತಾ. ೧೯-೧೨-೨೭ರ ಕೃಪಾಪತ್ರ ನನಗೆ ಇವತ್ತು ಮುಟ್ಟಿತು. ಬಂದು

ದರ್ಶನವು ನನಗೆ ದುರ್ಲಭವಾಗಿದ್ದರೂ ನಾಲ್ಕೈದು ದಿನಗಳ ಹಿಂದೆ ಮುಂಜಾನೆ ಅರುಹೊಡೆಯುವಾಗ್ಗೆ ನಾನು ಅರ್ಧಮಾತ್ರ ಎಚ್ಚರವಿರುವಾಗ ತಮ್ಮ ಪ್ರತ್ಯಕ್ಷ ದರ್ಶನವಾಯಿತು, ಮತ್ತು ನನ್ನ ಪೂರಾ ದಿವಸವು ಬಹಳ ಆನಂದದಲ್ಲಿ ಹೋಯಿತು.

ಪೂರ್ವಜನ್ಮದ ಸುಕೃತವು ಈ ಜನ್ಮದಲ್ಲಿ ಏನಾದರೂ ಫಲವನ್ನು ಕೊಡುತ್ತಿರಬೇಕು, ಎಂದು ನನಗೆ ನಿಶ್ಚಯವಾಗಿ ತೋರುತ್ತದೆ. ಇಲ್ಲದಿದ್ದರೆ ತಮ್ಮ ದರ್ಶನವು ನನಗಾಗುವ ಸುದೈವವು ನನಗೆ ಲಭಿಸುತ್ತಿದ್ದಿಲ್ಲ. ನನಗೆ ಮಾರ್ಗದರ್ಶಕನು ಸಿಗಬೇಕೆಂದು ನಾನು ಪಂಢರಪುರದತನಕ ವ್ಯರ್ಥ ಚಡಪಡಿಸಿದೆ; ಅದರದೇನೂ ಉಪಯೋಗವಾಗಲಿಲ್ಲ. ಆದರೆ ತಮ್ಮ ಸಂಪರ್ಕವು ನನಗೆ ನಮ್ಮ ಊರಲ್ಲಿಯೆ ಆಯಿತು.

(ಸಹಿ) ತಮ್ಮ ನಮ್ರ ಶಿಷ್ಯ
ಗಣೇಶ ಭಿಡೆ.

ಪತ್ರ ( ೨ )

ಪೋಸ್ಟ ಕಾರ್ಡ — ತಾರೀಖು ೨೯-೪-೬೭

ಶ್ರೀಗಜಾನನ ಉರ್ಫ ಸಹಜಾನಂದ ಮಹಾರಾಜ ಇವರಿಗೆ, ನನ್ನ ನಮ್ರತಾಪೂರ್ವಕ ಅನೇಕ ಸಾ. ನ. ವಿ. ವಿ. ಅಧ್ಯಾತ್ಮ ವಿಷಯದ ಸರ್ವ ಸಿದ್ಧಾಂತಗಳನ್ನು ನಾನು ತಿಳಿಯುತ್ತೇನೆ, ಆದರೆ ಅವು ಬರೆ ಶಾಬ್ದಿಕ ಅವೆ. ಈ ಜಗತ್ತಿನಲ್ಲಿ ನಾನು ಸರ್ವವನ್ನು ಪರಮೇಶ್ವರನ ಅವತಾರವೆಂದು ನೋಡುತ್ತೇನೆ ಎಂದು ನಾನು ಸ್ವಮುಖದಿಂದ ಹೇಳುತ್ತೇನೆ, ಆದರೆ ಯಾವ ಮಾರ್ಗವು ಧ್ಯಾನದಿಂದ ಅದ್ವೈತ ಸ್ಥಿತಿ ಪ್ರಾಪ್ತಮಾಡಿಕೊಟ್ಟೀತೊ ಅದರಲ್ಲಿ ಬರೇ ಶಾಬ್ದಿಕ ಜ್ಞಾನವು ಹ್ಯಾಗೆ ಸೇರೀತು, ಇದು ನನಗೆ ತಿಳಿಯುವದಿಲ್ಲ. ಇದೇ ನನ್ನ ಖರೇ ಅಡಚಣಿ ಅದೆ.

ಧ್ಯಾನದ ಅಭ್ಯಾಸವನ್ನು ತಪ್ಪದೆ ತೀವ್ರತೆಯಿಂದ ನಾನು ಮಾಡುತ್ತಿದ್ದೇನೆ. ತಮ್ಮ ದೈವಿಶಕ್ತಿ ನನ್ನಲ್ಲಿ ಪ್ರವೇಶವಾಗಬೇಕೆಂದು ನಾನು ಬಹಳ ಆತುರತೆಯಿಂದ ದಾರಿ ನೋಡುತ್ತಿದ್ದೇನೆ. ಅದರ ವಿನಹಾ ನನ್ನ ಅಭ್ಯಾಸವು ವ್ಯರ್ಥವು. ತಮ್ಮ ಸಹಾಯದ ವಿನಹಾ ಅದರ ಕಿಮ್ಮತು ನಿರರ್ಥಕವದೆ. ನನ್ನ ಎಲ್ಲ ಭಾರವು ನಿಮ್ಮ ಮೇಲೆ ಅದೆ.

ತಮ್ಮ ಅತಿ ನಮ್ರ ಶಿಷ್ಯ
( ಸಹಿ ) ಗಣೇಶ ಭಿಡೆ.

( ೬ )

ತಾರೀಖು ೮-೭-೩೭

ಶ್ರೀಸದ್ಗುರು ಗಜಾನನ ಮಹಾರಾಜ ಇವರಿಗೆ ಶಿರಸಾಷ್ಟಾಂಗ ನಮಸ್ಕಾರ. ನನಗೆ ತಮ್ಮ ತಾರೀಖು ೨೧-೨-೩೭ ನೆಯ ಪತ್ರ ಮುಟ್ಟಿತು ಅದು ಬಹಳ ಸವಿ ಇದೆ. ತಮಗೆ ಸ್ವತಃ ಏನೂ ತಿಳಿಯುವದಿಲ್ಲವೆಂತ ನೀವು ಹೇಳುತ್ತಿದ್ದರೂ ಸಾಧಕನಿಗೆ ಉಪಯೋಗ ಬೀಳುವಂಥ ಅನೇಕ ಸಂಗತಿಗಳನ್ನು ಅದರಲ್ಲಿ ಸವಿಸ್ತಾರವಾಗಿ ಬಿಡಿಸಿ ಹೇಳಿದ್ದೀರಿ. ನಾನು ತಮ್ಮ ಸಹವಾಸದಲ್ಲಿ ಅತ್ಯಲ್ಪಕಾಲ ಇದ್ದರೂ, ಈ ಎಲ್ಲ ಸಂಗತಿಗಳನ್ನು ನೀವು ಬಹಳ ಪ್ರೀತಿಯಿಂದ ವಿಶದವಾಗಿ ಹೇಳಿದಿರಿ. ನಾನು ಇಷ್ಟೇ ಇಚ್ಛೆ ಮಾಡುವೆನಲ್ಲ, ತಮ್ಮ ಪರೀಕ್ಷೆಯಲ್ಲಿ ಸ್ಥಿರವಾಗಿರಲಿಕ್ಕೆ ನಾನು ಸಮರ್ಥನಾಗಬೇಕು. 'ಓಂ' ಇದು ಸದಾಶಿವನ (ಪರಮಾತ್ಮನ) ಪ್ರತಿಮೆ ಆಗಿದೆ, ಆತನ ತಲೆಯ ಮೇಲೆ ಇರುವ ಬಿಂದುವಿನ ನಿಶ್ಚಯಾತ್ಮಕ ಮತ್ತು ಪೂರ್ಣವಾಗಿ ಗೊತ್ತು ಮಾಡಿಕೊಳ್ಳುವ ವಿಷಯದಲ್ಲಿ ತಾವು ನನಗೆ ಆಜ್ಞಾ ಕೊಟ್ಟಿರುತ್ತೀರಿ. ಆದರೆ ತಾವು ಹೋಗುವ ಮೊದಲು ಎರಡು ದಿನಗಳ ವರೆಗೆ ಯಾವ ಬಿಂದುವನ್ನು ನಾನು ಬಹಳಸಾರಿ ಕಾಣುತ್ತಿದ್ದೆ, ಅದನ್ನು ನಾನು ಈಗ ಕಾಣಲಾರೆ. ಈಗ ನಾನು ಅದನ್ನು ಎಂದಾದರೂ ನೋಡುತ್ತೇನೆ. ಕಣ್ಣಿನ ಆಕಾರದ ಒಂದು ನೀಲ ಬಿಂದು ಸುಮಾರು ಹದಿನೈದು ದಿನಗಳ ಹಿಂದೆ ನಾನು ನೋಡಿದೆನು. ನನ್ನ ಅಭ್ಯಾಸವು ನಡೆದಿರುತ್ತದೆ.

ತಮ್ಮ ನಮ್ರ ಸೇವಕ<br>(ಸಹಿ) ಗಣೇಶ ಭಿಡೆ,

( ೭ )

ಶ್ರೀ ಮಾಧವರಾವ ವೈದ್ಯ ಧುಳೆ ಇವರ ಕಡೆಯಿಂದ, ತಾ. ೨೨-೧೧-೩೬ ದಿನ ಶ್ರೀಗಜಾನನ ಮಹಾರಾಜರಿಗೆ ಬಂದ ಪತ್ರದೊಳಗಿನ ಕೆಲವು ಪಾರಮಾರ್ಥಿಕ ಅನುಭವಗಳು :—

ಧುಳೆ, ತಾ. ೨೨-೧೧-೩೬

ಮಹಾರಾಜರ ಚರಣಗಳಲ್ಲಿ ಸಾ. ನ. ವಿ. ವಿ. ತಮ್ಮ ಆಶೀರ್ವಾದ ಯುಕ್ತ ಪತ್ರವು ಬಂತು, ಬಹಳ ಆನಂದವಾಯಿತು, ತಮಗೆ ಮೊದಲಿನ ಪತ್ರ ಬರೆದಿತ್ತು ಅದರ ಮರುದಿನ ರಾತ್ರಿ ಯಾವದೊಂದು ವಿಶಿಷ್ಟ ಅನುಭವಬಂತು. ಅದನ್ನು ತಿಳಿಸುವ ಸಲುವಾಗಿಯೇ ಈ ಪತ್ರವನ್ನು ಬರಿಯುತ್ತೇನೆ.

ಸದ್ಯದಲ್ಲಿ ಅಂತರ್ದೃಷ್ಟಿ ಉತ್ತಮವುವದೆ. ತಾವು ಅಂತರಾಕಾಶದಲ್ಲಿ ಕಾಣಿಸುತ್ತ ಇದ್ದೀರಿ; ಇದು ಸ್ಪಷ್ಟವಾಗಿ ಒಮ್ಮೊಮ್ಮೆ ಗೊತ್ತಾಗುತ್ತದೆ. ಮೊನ್ನೆ ಶನಿವಾರ ರಾತ್ರಿ ತಾವು ಕಾಣಿಸಿ ಕೊಂಡಿರಿ, ಮತ್ತು ತಾವು ಹೊರಟು ಹೋಗುವಾಗ ನಾನು ನಿಮ್ಮನ್ನು ನೋಡಲು ಶಕ್ಯವಾಯಿತು.

ತಾವು ಇಲ್ಲಿ ನನ್ನ ಸಮೀಪ ಇದ್ದರೇನು, ಅಥವಾ ಪರೇಳದಲ್ಲಿದ್ದರೇನು, ಅದರಲ್ಲಿ ಬಹಳವೇನು ಭೇದವಿಲ್ಲ. ಭೇದವು ಹೊರಗಿನಿಂದ ಮಾತ್ರ. ತಮ್ಮ ಹಾಸ್ಯವು ಅಥವಾ ಮಾತಾಡುವದು ನನಗೆ ರಾತ್ರಿಕಾಲದಲ್ಲಿ ಇಲ್ಲಿ ಕೇಳಿಸುತ್ತದೆ.

ಹೋದ ಶನಿವಾರ ಮಧ್ಯಾಹ್ನದಮೇಲೆ ನಾನು ಪ್ರಧಾನ ಇವರ ಮನೆಯಲ್ಲಿ ಕೂತಿದ್ದೆನು. ಈ ಮನೆಯೆಂದರೆ ನಾನು ಹಿಂದೆ ಪೋಷ್ಟ ಮಾಸ್ತರ ರಾಜೆ ಇವರಿಗೆ ಭೇಟಿಯಾಗಲಿಕ್ಕೆ ಬಂದಿದ್ದೆ ಅದೇ ಮನೆಯು. ಇಲ್ಲೆ ನಾನು ನಿಮ್ಮನ್ನು ಮೊದಲು ಕಂಡಿದ್ದೆ. ಆ ಮೊದಲನೇ ದಿನದ್ದು ನನಗೆ ಸ್ಮರಣೆಯಾಯಿತು; ಮತ್ತು ನಾನು ನಿತ್ಯದಂತೆ ಕಣ್ಣು ಮುಚ್ಚಿ ಮಲಗಿರುವಾಗ ಅಂತರದಲ್ಲಿ ನನಗೆ ಒಮ್ಮಿಂದೊಮ್ಮೆ ಒಂದು ಮೂರ್ತಿಯ ದರ್ಶನವಾಯಿತು. ಬರಿ ಮಸ್ತಕದ ಭಾಗವಷ್ಟೇ ಕಾಣಿಸಿತು. ತಲೆಯ ಮೇಲೆ ಕೂದಲು ಹೇಳಲಿನಂತೆ ಹಿಂದೆ ಕಟ್ಟಿದ್ದವು. ಮಧ್ಯದಲ್ಲಿ ಬೋತಲವು ಕಾಣಿಸುತ್ತಿದ್ದು, ಎಡಗಡೆ ಕಿವಿಯಲ್ಲಿ ಓಲೆಯಂಥಾದೊಂದು ಭಂಗಾರದ ಆಭರಣವು ಇತ್ತು. ರೂಪ ಕಾಣಲಿಲ್ಲ, ಯಾಕಂದರೆ ತಲೆ ಕೆಳಗೆ ಮಾಡಿತ್ತು. ಮಸ್ತಕವು ತಮ್ಮದಷ್ಟೆ ದೊಡ್ಡದಿತ್ತು. ಇವರು ಗುಲಾಬರಾವ ಮಹಾರಾಜರೆಂತ ನಾನು ಮನಸ್ಸಿನಿಂದ ಒಮ್ಮಿಂದೊಮ್ಮೆ ಕಂಡುಕೊಂಡೆ. ಮಹಾರಾಜರ ದರ್ಶನವಾಯಿತು ಬಹಳ ಆನಂದದಲ್ಲಿದ್ದೆ. ಇಷ್ಟರಲ್ಲಿ ದಾದಾ ರಾಜೆ ಇವರು ಮೂರು ವೇಳೆ ಕರೆದರು, ಆದರೆ 'ಓ' ಅನ್ನಲಿಕ್ಕೆ ಬರುವದಿಲ್ಲ. ಅನಂತರ ಚಿ. ಬಾಪು ಇವರು ಎರಡುಸಾರಿ ಕರೆದದ್ದು ಕೇಳಿ ಯಾರಾದರೂ ಬಂದಿದ್ದಾರೆಂದು ಕರೆದಿರಬಹುದೆಂತ ತಿಳಿದು ನಾನು ಎದ್ದು ಕೆಳಗೆ ಹೋದೆನು. ರಾವಸಾಹೇಬ ಗುಪ್ತೆ ಇವರು ಬಂದಿದ್ದರು. ನಂತರ ನಾವೆಲ್ಲರೂ ರಾ. ಸಾಸವಡಕರ ಇವರಲ್ಲಿ ಹೋದೆವು, ಮತ್ತು ಒಂದು ಘಳಿಗೆ ಕೂತು ತಿರಿಗಿ ಬಂದೆವು. ಒಮ್ಮೊಮ್ಮೆ ರಾತ್ರಿಯಲ್ಲಿ ಉಗ್ರಸ್ವರೂಪಗಳು ಕಾಣಿಸುತ್ತವೆ ಆದರೆ ನಿನ್ನೆ ರಾತ್ರಿ ಯಾರೊ ಇಬ್ಬರು ಮಹಾತ್ಮರ ದರ್ಶನವಾಯಿತು. ಈಗ ಒಂದೆರಡು ದಿವಸಗಳಿಂದ ಅಂತಃಕರಣದೊಳಗೆ ಸ್ವಲ್ಪ ಸ್ಪಷ್ಟವಾಗಿ ಕಾಣಹತ್ತಿದೆ. ಸರ್ವತ್ರ ಆನಂದವಿದೆ, ಇದು ತಮ್ಮ ಕೃಪೆಯ ಫಲವೇ ಆದೆ. ಇತರ ಕಿರಕೂಳ ಸಂಗತಿಗಳು ಭೆಟ್ಟಿಯಾದಾಗ್ಗೆ ನಿವೇದಿಸುವೆನು.

ತಮ್ಮ ನಮ್ರ ಶಿಷ್ಯ
(ಸಹಿ) ಮಾಧವ.

ಮಾಧವರಾವ ವೈದ್ಯ ಇವರ ಕೆಲವು ವಿಶಿಷ್ಟ ಅನುಭವಗಳು ' ಗುರುಶಿಷ್ಯ ವಿಜ್ಞಾನ ದೀಪಿಕಾ ' ಎಂಬ ಗ್ರಂಥದಲ್ಲಿ ವರ್ಣಿಸಿರುತ್ತವೆ. ಅವುಗಳ ಸಾರಾಂಶವನ್ನು ಇಲ್ಲಿ ಕೆಳಗೆ ಕೊಟ್ಟಿರುತ್ತೇನೆ.

ಶ್ರೀಗಜಾನನ ಮಹಾರಾಜರು ಯಾವಾಗ್ಗೆ ಧುಳೆಯಲ್ಲಿ ರಾಜೆ ಪೋಸ್ಟ ಮಾಸ್ತರರಲ್ಲಿ ಇರುತ್ತಿದ್ದರು, ಆಗ ಧುಳೆಯಲ್ಲಿರುತ್ತಿದ್ದ ರಾ. ಮಾಧವ ಆತ್ಮಾರಾಮ ವೈದ್ಯ ಇವರಿಗೆ ಯಾವನಾದರೊಬ್ಬ ಗುರುವಿನ ಕೃಪಾಸಂಪಾದನ ಮಾಡಿಕೊಳ್ಳುವ ಬಹಳ ಇಚ್ಛೆ ಇತ್ತು. ಏಳು ತಿಂಗಳುಪರ್ಯಂತ ಕಹಿಬೇವಿನ ಸಪ್ಪು ತಿಂದು ಅವರು ನಿತ್ಯದ ನಿಯಮಿತ ಧರ್ಮಕೃತ್ಯಗಳನ್ನು ಮಾಡುತ್ತಿದ್ದರು. ಆದರೆ ಸದ್ಗುರುಕೃಪೆಯಾಗಬೇಕೆಂದು ಅವರ ಉತ್ಕಟ ಇಚ್ಛೆ ಇದ್ದು, ತನಗೆ ಅಂಥ ಗುರು ಶಿಕ್ಕಬೇಕೆಂದು ಅವರು ಯಾವಾಗಲೂ ಈಶ್ವರ ಪ್ರಾರ್ಥನೆಯನ್ನು ಮಾಡುತ್ತಿದ್ದರು. ಪುಣೆಯ ಅಣ್ಣಾಸಾಹೇಬ ಪಟವರ್ಧನ ಇವರು ಧುಳೆಗೆ ಸಹಜವಾಗಿ ಬಂದಿರುವಾಗ ಅವರು ( ವೈದ್ಯ ) ಅವರಿಗೆ ಭೆಟ್ಟಿಯಾದರು, ಮತ್ತು ತನಗೆ ಉಪದೇಶ ಮಾಡಬೇಕಾಗಿ ಅವರಿಗೆ ಪ್ರಾರ್ಥಿಸಿದರು. ಅವರು ಇವರಿಗೆ ಆಶೀರ್ವಾದ ಕೊಟ್ಟು ನಿಮಗೆ ಯೋಗ್ಯ ಗುರು ನಿಶ್ಚಯವಾಗಿ ಭೆಟ್ಟಿಯಾಗುವನೆಂದು ಹೇಳಿದರು. ಈ ಆಶೀರ್ವಾದವು ಬೇಗನೆ ಫಲಿಸಿತು, ಮತ್ತು ರಾ. ವೈದ್ಯರಿಗೆ ಶ್ರೀಗಜಾನನ ಮಹಾರಾಜರ ದರ್ಶನವಾಯಿತು. ವೈದ್ಯರು ಅವರ ಮೇಲೆ ದೃಢ ವಿಶ್ವಾಸವಿಟ್ಟು ಮಹಾರಾಜರ ಪೂಜೆಯನ್ನು ಮಾಡಿದರು.

ಶ್ರೀಗಜಾನನ ಮಹಾರಾಜರು ಅವರಿಗೆ ಧ್ಯಾನದ ಅಭ್ಯಾಸ ಹ್ಯಾಗೆ ಮಾಡಬೇಕೆಂತ ಹೇಳಿದರು. ಅವರು ಬಹಳ ಶ್ರದ್ಧೆಯಿಂದ ಅಭ್ಯಾಸ ಮಾಡಿದರು, ಮತ್ತು ಬಹಳ ಅನುಭವಗಳನ್ನು ಸಹಜ ಪಡಕೊಂಡರು. ಮೂಲಾಧಾರದ ಚಕ್ರದ ತೆಗ್ಗಿನಲ್ಲಿ ಅವರು ನೆಟ್ಟಗೆ ನಿಂತ ಒಂದು ಸ್ತಂಭವನ್ನು ಕಂಡರು, ಮತ್ತು ಸರ್ಪಾಕಾರವಾದ ಕುಂಡಲಿನಿಯು ಅದರಮೇಲೆ ತಿರುಗುವದನ್ನು ಅವರು ನೋಡಿದರು. ಆ ಮಾರ್ಗದಿಂದ ಅವರು ಭ್ರೂಮಧ್ಯದಲ್ಲಿರುವ ಮಧ್ಯಬಿಂದು ಇದ್ದಲ್ಲಿ ಹೋದರು, ಮತ್ತು ಅಲ್ಲಿ ಅವರು ಅವಿನಾಶಿ ಅಮೃತವನ್ನು ಪ್ರಾಶನ ಮಾಡಿದರು.

ಈ ಅನುಭವಗಳು ಅವರಿಗೆ ನಿತ್ಯವೂ ಬರುತ್ತವೆ.

---

ಡಿ. ಡಿ. ಭಾವೆ, ನಾಶಿಕ ಇವರ ಆಧ್ಯಾತ್ಮಿಕ ಅನುಭವಗಳು :-

(೧) ತಾ. ೧೦-೧೨-೩೭ ನೇ ದಿನ ಅಂದರೆ ಮಾರ್ಗಶೀರ್ಷ ವದ್ಯ ೪ ಶಕೆ ೧೮೫೯ ಈ ದಿವಸ ಶ್ರೀಗಜಾನನ ಮಹಾರಾಜ ಇವರು 'ಸೋಹಂ' ಮಂತ್ರದ

ಗುರೂಪದೇಶ ಕೊಟ್ಟರು. ಆಸನಸ್ಥನಾಗಿ ಕೂತು ಮುಂಜಾನೆ ಅರ್ಧ ತಾಸು ಸಂಜೆಕ್ಕೆ ಅರ್ಧ ತಾಸು ಜಪಮಾಡಲಿಕ್ಕೆ ಹೇಳಿದರು. ಜಪಮಾಡಲಿಕ್ಕೆ ಕೂತಾಗ್ಗೆ ನನ್ನ ಮನಸ್ಸು ಏಕಾಗ್ರವಾಗುತ್ತದೆ ಎಂದು ನನಗೆ ಗೊತ್ತಾಯಿತು; ಆದರೆ ಒಮ್ಮೊಮ್ಮೆ ವಿಚಾರ ಪ್ರವಾಹವು ಆರಂಭವಾಗಿ ನಡನಡುವೆ ಅಡ್ಡಿಗಳಾಗುತ್ತಿದ್ದವು. ಆದ್ದರಿಂದ ಮುಖದಿಂದ ಮಂತ್ರ ಉಚ್ಚರಿಸುತ್ತಿದ್ದರೂ ಏಕಾಗ್ರತೆಯಲ್ಲಿ ಖಂಡ ಬೀಳುತ್ತಿತ್ತು.

(೨) ಈ ಪ್ರಕಾರ ನಾಲ್ಕು ದಿನಗಳು ಹೋದವು. ನಂತರ ಅವರು ನನ್ನನ್ನು ತಮ್ಮ ಮುಂದೆ ಕೂಡ್ರಿಸಿಕೊಂಡು ನನ್ನ ಮಸ್ತಕದ ಮೇಲೆ ತಮ್ಮ ಹಸ್ತವಿಟ್ಟು, ನನ್ನ ಸರ್ವ ವಿಚಾರಗಳ ಓಘವನ್ನು ಹೀಗೆ ನಿಂದಿರಿಸಿ ಬಿಟ್ಟರಲ್ಲ, ಫೋಟೋದೊಳಗಿನ ಯಾವ ಮೂರ್ತಿಯನ್ನು ನಾನು ಮನಃಚಕ್ಷುಮುಂದೆ ತರುತ್ತಿದ್ದೆನೋ, ಅದು ಸಹಾ ಬರುವದು ನಿಂತುಹೋಯಿತು. ಸಂಕ್ಷೇಪದಲ್ಲಿ ಹೇಳುವದೆಂದರೆ ನಾನು ನಿರ್ಮನಸ್ಕನಾದೆ. ಈ ಸಂಬಂಧ ಯಾವಾಗ ನಾನು ಅವರಿಗೆ ಕೇಳಿದೆ ಆಗ ಅವರಂದರು, 'ನಿಮ್ಮ ಅಭ್ಯಾಸವೆಂದರೆ ನಾನು ಇತರರಿಗೆ ಹೇಳುವ ಅಭ್ಯಾಸಕ್ಕಿಂತ ಬೇರೆ ಇದೆ.' ಆದ್ದರಿಂದ ನಿಮ್ಮ ವಿಚಾರಗಳ ಪ್ರವಾಹವನ್ನು ಈ ಪ್ರಕಾರ ನಿಂದಿರಿಸುವದು ನನಗೆ ಅವಶ್ಯವಾಯಿತು. ನೀವು ಈಗ ಬರೇ 'ಸೋಹಂ' ಮಂತ್ರವನ್ನು ಜಪಿಸುತ್ತಿರಬೇಕು, ಬಾಕಿ ಎಲ್ಲದನ್ನು ನಾನು ನೋಡಿಕೊಳ್ಳುವೆನು.

(೩) ಆದರ ನಂತರ ಕೆಲವು ಪ್ರಾಪಂಚಿಕ ಅಡಚಣೆಗಳದೆಸೆಯಿಂದ ಮತ್ತು ಅಸ್ವಸ್ಥತೆಯಿಂದ ಮೊದಲಿನಿಂದ ನಾನು ಸಾಕೋರಿಯ ಉಪಾಸನಿ ಮಹಾರಾಜರಕಡೆಗೆ ಹೋಗುತ್ತಿದ್ದೆ. ಮತ್ತು ಈ ಸಾರಿಯೂ ಬಹಳ ದಿವಸ ಉಪಾಸನಿ ಮಹಾರಾಜರಕಡೆ ಹೋಗಿದ್ದರಿಂದ ನಾಲ್ಕೈದು ತಿಂಗಳುತನಕ ಎಷ್ಟೆಂದೂ ಸುಧಾರಣೆ ಆಗಲಿಲ್ಲ, ನಾನು ಬರೆ 'ಸೋಹಂ'ದ ಜಪಮಾಡುತ್ತಿದ್ದೆನು, ಮುಂದೆ ಸಾಕೋರಿಯಿಂದ ತಿರಿಗಿ ಬಂದಮೇಲೆ ೧೯೩೮ ರ ಮೇ ತಿಂಗಳಲ್ಲಿ ಶ್ರೀಗಜಾನನ ಮಹಾರಾಜರು ನನಗೆ ಅವರ ಗುರುಗಳ ಅಂದರೆ ನಾರಾಯಣ ಸರಸ್ವತಿ ಇವರ ಮಾನಸ ಪೂಜೆಯನ್ನು ಮಾಡಲಿಕ್ಕೆ ಹೇಳಿದರು. ನಾನು ಮೊದಲಿನಿಂದ ಉಪಾಸನಿ ಮಹಾರಾಜರ ಮಾನಸಪೂಜೆಯನ್ನು ಮಾಡುತ್ತಿದ್ದದರಿಂದ ಮತ್ತು ಆ ಅಭ್ಯಾಸದ ಮೇಲಿಂದ ಸರ್ವರಾಜೋಪಚಾರಸಹಿತವಾಗಿ ಶ್ರೀನಾರಾಯಣ ಸರಸ್ವತಿ ಮಹಾರಾಜರ ಯೋಗ್ಯರೀತಿಯಿಂದ ಮಾನಸಪೂಜೆಯನ್ನು ನಾನು ಮಾಡಿದೆನು. ಅದರಲ್ಲಿ ವಿಶೇಷವಾಗಿ, ಪೂಜಾ ನೈವೇದ್ಯ ಆರತಿ ವಗೈರೆ ಆದಮೇಲೆ, ಅವರನ್ನು ಪಲಂಗದ ಮೇಲೆ ಮಲಗಿಸಿ ಅವರ ಪಾದ ಸಂವಾಹನ ಮಾಡಿ, ಅವರಿಗೆ ನಿದ್ದೆಬಿತ್ತು ಎಂಬದನ್ನು ಕಂಡು ನಂತರ ಪೂಜೆಯನ್ನು ಸಮಾಪ್ತಿಮಾಡಬೇಕು, ಈ ಪ್ರಕಾರ ಮಹಾರಾಜರ ಆಜ್ಞೆಯಾಯಿತು. ಆ

ಪ್ರಕಾರ ಪೂಜೆ ಮಾಡುತ್ತಿರುವಾಗ ಮೊದಲನೇ ದಿವಸವೇ ಸರ್ವಪೂಜೆ ಮುಗಿದ ಬಳಿಕ ಮಹಾರಾಜರಿಗೆ ನಿದ್ರೆಹತ್ತಿತೊ ಇಲ್ಲವೋ ಅಂತ ನೋಡುತ್ತಿರುವಾಗ ಅಂದರೆ ಅವರ ಮುಖದ ಮೇಲಿನ ಹೊದಿಕೆಯನ್ನು ತೆಗೆದು ನೋಡುತ್ತಿರುವಾಗ, ಶ್ರೀನಾರಾಯಣ ಸರಸ್ವತಿಯವರ ಸ್ಥಾನದಲ್ಲಿ ಶ್ರೀಗಜಾನನ ಮಹಾರಾಜರು ಮಲಗಿರುವಂತೆ ಕಾಣಿಸಿತು. ಆಗ ಅವರನ್ನು ಎಬ್ಬಿಸಿ ಅವರದೂ ನಾನು ಪೂಜೆ ಮಾಡಿದೆನು. ಈಗ ನಿತ್ಯದಲ್ಲೂ ಹೀಗೆಯೇ ಪೂಜೆ ನಡಿಯುತ್ತದೆ. ಒಮ್ಮೊಮ್ಮೆ ಅವರ ಕೂಡ ಭಾಷಣವೂ ನಡಿಯುತ್ತಿರುತ್ತದೆ. ಈ ಕಾಲದಲ್ಲಿ ಎರಡೇ ಅನುಭವಗಳು ನಮೂದಿಸತಕ್ಕವವೆ. (ಅ) ವೃತ್ತಿಶೂನ್ಯತ್ವ (ಬ) ದೊಡ್ಡಮಹಾರಾಜರ ಸ್ಥಾನದಲ್ಲಿ ಶ್ರೀಗಜಾನನ ಮಹಾರಾಜರು ಮಲಗಿದ್ದು ಕಾಣಿಸುವಂಥಾದ್ದು.

(೪) ಮುಂದೆ ಒಂದುದಿನ ಮಹಾರಾಜರು ಯೋಗಿಯು ಎರಡು ಮಾರ್ಗಗಳಿರುತ್ತವೆ ಎಂದು ಹೇಳಿದರು. ಒಂದು ಪ್ರಕಾಶ ಮಾರ್ಗ ಮತ್ತು ಎರಡನೇದು ಕತ್ತಲು ಮಾರ್ಗ. ಧ್ಯೇಯಹೊಂದುವ ದೃಷ್ಟಿಯಿಂದ ಎರಡರದು ಸ್ಥಾನ ಒಂದೆ ಎಂದು ಹೇಳಿದರು. ಮರುದಿನ ಲಾಗಾಯತು ನಾನು ಅಂಧಕಾರದಲ್ಲಿರುವಂತೆ ತೋರಿತು ಮತ್ತು ನಾಭಿಕಮಲದಲ್ಲಿ ಜಪವಾಗುವದೆಂದು ನನಗೆ ಭಾಸವಾಯಿತು.

(೫) ಇದರ ಮುಂದೆ ಅಭ್ಯಾಸ ಬೆಳೆದು ಮುಂದೆ ಅದು ಎರಡು ಮೂರು ತಾಸಿನತನಕ ನಡೆಯುತ್ತಿತ್ತು. ಆದರೆ ಇತರ ಅನುಗ್ರಹ ಹೊಂದಿದ ಶಿಷ್ಯರಿಗೆ ಕಾಣಿಸಿದಂತೆ ನನಗೆ ಯಾವ ದೃಶ್ಯವೂ ಕಾಣಿಸಲಿಲ್ಲ. ಒರೆ ಗಾಢಾಂಧಕಾರವು ಕಾಣಿಸುತ್ತಿತ್ತು ಈ ಸಂಬಂಧ ಮಹಾರಾಜರಕೂಡ ಪ್ರೇಮಭಾವದಿಂದ ಬಹಳ ವಾದ ಮಾಡಿದೆ; ಆದರೆ ಮಹಾರಾಜರು ಆಶ್ವಾಸನ ಕೊಡುತ್ತಿದ್ದರು ಇಲ್ಲವೆ ನಗುತ್ತಿದ್ದರು.

(೬) ಈ ಸುಮಾರಕ್ಕೆ ನಾನು ಇಸ್ಲಾಂಪುರಕರ ವೈದ್ಯ ಇವರ 'ಷಟ್‌ಚಕ್ರದರ್ಶನ ವ ಭೇದನ' ಈ ಪುಸ್ತಕ ಓದಿದೆ, ಮತ್ತು ಅದೇ ಗ್ರಂಥಕಾರನ 'ದೇವಯಾನ ಪಂಥ' ಈ ಗ್ರಂಥವನ್ನೂ ಓದಿದೆ. ಇವುಗಳನ್ನು ಓದಿದ್ದರಿಂದ ನನ್ನ ಹೀಗೆ ತಿಳುವಳಿಕೆ ಆಯಿತು, ಯೋಗದಲ್ಲಿ ಸುಧಾರಣೆಯಾಗಬೇಕಾದರೆ ಪ್ರಕಾಶ ಮಾರ್ಗದಿಂದಲೆ ಹೋಗಬೇಕು, ಎಂಬದ್ರಿಂದ ನಾನು ಮಹಾರಾಜರ ಕೂಡ ವಾದ ಮಾಡುತ್ತಿದ್ದೆ. ಆದರೆ ಬರೇ ಆಶ್ವಾಸನದಹೊರತು ಅವರು ಮತ್ತೇನೂ ಹೆಚ್ಚಿಗೆ ಹೇಳಲಿಲ್ಲ.

(೭) ಮುಂದೆ ಮಹಾರಾಜರು ನನಗೆ ಪಂಚತತ್ವಗಳ ಕೆಳಗಿನಿಂದ ಮೇಲೆ ಮತ್ತು ಮೇಲಿನಿಂದ ಕೆಳಗೆ ಹೀಗೆ ಅಭ್ಯಾಸ ಮಾಡಲಿಕ್ಕೆ ಹೇಳಿದರು.

ಪೃಥ್ವಿತತ್ವವೆಂದರೆ ಗುದದ್ವಾರದಲ್ಲಿರುವಂಥಾದ್ದು, ಮೂಲಾಧಾರ ಚಕ್ರದಲ್ಲಿ ಆಪ ಅಂದರೆ ನೀರು, ಹೊಟ್ಟೆಯ ಸ್ಥಾನದಲ್ಲಿ ತೇಜ, ಹೊಕ್ಕಳಿನಲ್ಲಿ ವಾಯು, ವ ಆಕಾಶವು ಮಸ್ತಕ ವ ಬ್ರಹ್ಮರಂಧ್ರ ಇಲ್ಲ, ಈ ಪ್ರಕಾರ ಕೆಳಗಿನಿಂದ ಮೇಲೆ, ಅನಂತರ ಹೀಗೆಯೇ ಮೇಲಿನಿಂದ ಕೆಳಗೆ ಈ ಪ್ರಕಾರ ಅಭ್ಯಾಸ ಮಾಡುತ್ತಿರುವಾಗ, ಪೃಥ್ವಿತತ್ವದ ಸ್ಥಾನದಲ್ಲಿರುವಾಗ ಜಡತ್ವ ಉತ್ಪನ್ನವಾಗುತ್ತದೆ. ಆಪ ಸ್ಥಾನದಲ್ಲಿರುವಾಗ್ಗೆ ಸಮುದ್ರ ವ ನದಿ ಸ್ನಾನವು ಆದಂತೆ ತೋರುವದು. ತೇಜದ ಸ್ಥಾನದಲ್ಲಿರುವಾಗ, ಪಂಚಾಗ್ನಿಸಾಧನ ಅಂದರೆ ನಾನು ಮಧ್ಯದಲ್ಲಿದ್ದು ಸುತ್ತಲೂ ಐದು ಸ್ಥಳಗಳಲ್ಲಿ ಅಗ್ನಿಯು ಪ್ರಜ್ವಲಿಸುತ್ತಿತ್ತು, ಮತ್ತು ನನ್ನ ಮೈಗೆ ಸುಟ್ಟಂತಾಗುತ್ತಿತ್ತು. ನಾನು ವಾಯುಸ್ಥಾನದಲ್ಲಿದ್ದಾಗ ನನ್ನ ದೇಹವು ಆಕುಂಚನ ಪ್ರಸರಣವಾಗಿ, ನಾನು ಅತಿಶಯ ಹಗುರ ಆದೆ ಎಂಬಂತೆ ತೋರಿತು ಆಕಾಶ ತತ್ವದಲ್ಲಿದ್ದಾಗ ಹವೆಯೊಳಗೆ ಹಾರಿದಂತಾಗಿ ಶಬ್ದಗಳು ಕೇಳುತ್ತವೆ, ಈ ಪ್ರಕಾರದ ಅನುಭವಗಳು ಬರಲಿಕ್ಕೆಹತ್ತಿದವು. ಆದರೂ ದೃಶ್ಯಗಳನ್ನುಕೂಡ ಕಾಣುವ ಇಚ್ಛೆಯು ಕಡಿಮೆಯಾಗಲಿಲ್ಲ, ಅಂತ ಆ ಸಂಬಂಧ ಮಹಾರಾಜರ ವಾದವಿವಾದಗಳು ನಡೆಯುತ್ತ ಇದ್ದವು.

(೮) ಮುಂದೆ ಮಹಾರಾಜರು ಶ್ರೀವೆಂಕಟೇಶ ಸ್ತೋತ್ರದ ಪಾಠ, ಮಾಡಲಿಕ್ಕೆ ಹೇಳಿದರು. ಆ ಪ್ರಕಾರ ಪ್ರತಿದಿನ ರಾತ್ರಿ ಹನ್ನೆರಡು ಹೊಡೆದ ಲಾಗಾಯತು ವೆಂಕಟೇಶ ಸ್ತೋತ್ರದ ಐದು ಪಾಠಗಳನ್ನು ಮಾಡುತ್ತಿದ್ದೆ.

(೯) ಈ ಪಾಠ ಸುರು ಆದಂದಿನಿಂದ ದೃಶ್ಯಗಳನ್ನು ನೋಡುವ ಕಾಂಕ್ಷೆಯು ಮೆಲ್ಲಮೆಲ್ಲಗೆ ಕಡಿಮೆ ಆಗುತ್ತ ಬಂತು, ಕಾರಣ ಅಂದಿನಿಂದ ನಿಜವಾದ ಅನುಭವದ ಮೆಟ್ಟಲಿನಮೇಲೆ ಬರಲಿಕ್ಕೆ ಸುರು ಆಗಿರಬೇಕು. ಅದರ ವರ್ಣನೆಯು ಕೆಳಗೆ ಬರೆದಂತೆ ಇರುತ್ತದೆ.

(೧೦) ಸುವಾಸ— ಯಾವದೊಂದೂ ಸುವಾಸಿಕ ವಸ್ತು ಸಮೀಪ ಇಲ್ಲದೆ, ಧೂಪ, ಊದಿನಕಡ್ಡಿ, ಕರ್ಪೂರ, ಬುಕ್ಕಾ, ಗುಲಾಬಿ ಅತ್ತರ, ಹೀನಾ, ಕೇವಡಾ ವಗೈರೆ ಅನೇಕ ಪ್ರಕಾರದ ಸುವಾಸಗಳು ಯಾವದಾದರೂ ವೇಳ್ಯಕ್ಕೆ ಅಕಸ್ಮಾತ್ತಾಗಿ ಬರುತ್ತವೆ. ಒಮ್ಮೊಮ್ಮೆ ನನಗೊಬ್ಬನಿಗೆ ಅಲ್ಲದೆ ಮನೆಮಂದಿಗೆಲ್ಲ ಹುಡುಗರು ಕೂಸುಗಳಿಗೆ ಸಹಾ ಬರುತ್ತವೆ, ಈ ಸಂಬಂಧ ಒಂದು ಉದಾಹರಣೆಯನ್ನು ಕೆಳಗೆ ಕೊಡುತ್ತೇನೆ,

ನನ್ನ ಚಿಕ್ಕ ಹುಡುಗ ಲಕ್ಷ್ಮಣನೆಂಬವನು ಬಿ ಕಾಮ್‌ದ ಪರೀಕ್ಷೆಗೆ ಹೋಗುವದಕ್ಕೆ ನಾಗಪೂರದಿಂದ ಬಂದನು. ಅವನು ಹಿಂದಿನ ವರ್ಷ ನಾಪಾಸ ಆಗಿದ್ದನು, ಮತ್ತು ನಾಗಪೂರಕ್ಕೆ ತನ್ನ ಅಣ್ಣನಕಡೆಗೆ ಹೋಗಿದ್ದನು. ಅವನ ಮಹಾರಾಜರಕಡೆ ಹೋಗವ ತನ್ನ ಇಚ್ಛೆಯನ್ನು ತೋರಿದನು, ಮಹಾರಾಜ

ಸಂಬಂಧ ಸಂಕ್ಷಿಪ್ತ ತಿಳುವಳಿಕೆಯನ್ನು ಅವನಿಗೆ ನಮ್ಮ ಮಿತ್ರರಾದ ಘಾಣೇಕರ ಇವರು ಕೊಟ್ಟಿದ್ದರು, ಮತ್ತು ಅದರಲ್ಲಿ ಒಂದು ಸಂಗತಿಯನ್ನು ಹೇಳಿದ್ದು ಏನಂದರೆ– ಮಹಾರಾಜರು ಸಿಗರೇಟು ಸೇದುವಾಗ ಸುವಾಸ ಹೊರಡುತ್ತದೆ. ಅದರ ಸತ್ಯತೆಯನ್ನು ಪ್ರತ್ಯಕ್ಷ ಕಾಣಬೇಕೆಂತ ಅವನು ನನ್ನ ಕೂಡ ಬಂದನು. ಆದರೆ ತನ್ನ ಅಂತಸ್ಥ ಹೇತು ಅವನು ನನಗೆ ಹೇಳಿದ್ದಿಲ್ಲ. ಆ ಹೊತ್ತು ಸುವಾಸ ವಗೈರೆ ಏನೂ ಬಂದಿಲ್ಲ, ಮ ನನಗೂ ಬಂದಿಲ್ಲ. ನಾವು ಸ್ವಲ್ಪ ಹೊತ್ತು ಅಲ್ಲಿ ಕೂತು ಮನೆಗೆ ತಿರುಗಿ ಬಂದೆವು. ಮರುದಿನ ಅವನು ನನಗೆ ಪ್ರಶ್ನೆ ಮಾಡಿದ್ದೇನಂದರೆ, "ಮಹಾರಾಜರ ದರಬಾರದಲ್ಲಿ ಸುಗಂಧ ಬರುತ್ತದೆ ಅಂತ ಜನ್ನ ಹೇಳುತ್ತಾರೆ, ಆದರೆ ನನಗೆ ಸುಗಂಧ ವಗೈರೆ ಏನೂ ಬರಲಿಲ್ಲ." "ಬಂದಿರಲಿಕ್ಕಿಲ್ಲ' ಎಂದು ನಾನು ಅವನಿಗೆ ಉತ್ತರ ಕೊಟ್ಟೆ. ಆದರೆ ನವೀನ ತಲಾಂತರದ ಮಂದಿಗೆ ಯೋಗ ಮಾರ್ಗದೊಳಗಿನ ಸಾಮರ್ಥ್ಯದ ಪ್ರತ್ಯಕ್ಷ ಅನುಭವ ಬಾರದಿದ್ದರೆ 'ಸಬ್ ಝೂಟ ಹೈ' ಹೀಗನ್ನುವರು. ಹೀಗೆ ವಿಚಾರ ಮನಸ್ಸಿನಲ್ಲಿ ಬಂದು ನಾನು ಸ್ವಲ್ಪ ಹೊತ್ತು, ಏಕಾಗ್ರತೆಯನ್ನು ಮಾಡಿ, ಮಹಾರಾಜರು ತಮ್ಮ ಪಲ್ಲಂಗದ ಮೇಲೆ ಸಿಗರೇಟ ಸೇದುತ್ತ ಕೂತಿರಬಹುದು ಎಂದು ಕಲ್ಪನೆ ಮಾಡಿ, ಆ ಕಲ್ಪನೆಯೊಳಗೆ ನಿಮಗ್ನ ಇರುವಾಗ ನಮ್ಮ ಮನೆಯೊಳಗಿನ ಎಲ್ಲ ಆರು ಖೋಲಿಗಳಲ್ಲಿ ಊದಿನಕಡ್ಡಿಗಳ ಸುವಾಸ ಪಸರಿಸಿತು. ಆಗ ಅದೇ ಹುಡುಗನು ಮನೆ ಎಲ್ಲ ಸುತ್ತಾಡಿ, ಸುವಾಸ ಎಲ್ಲಿಂದ ಬರುವದೆಂದು ನೋಡುತ್ತಿದ್ದನು, ಮತ್ತು ನನ್ನ ಕಡೆ ಬಂದು ಕೇಳಿದನು. ಆಗ 'ಮಹಾರಾಜರೆ, ಈ ಪ್ರಚೀತಿ ನಿನಗೆ ತೋರಿಸಿದ್ದಾರೆ' ಎಂದು ನಾನು ಅವನಿಗೆ ಹೇಳಿದೆನು ಐದು ಮಿನಿಟಿನ ತನಕ ಆ ಸುವಾಸ ಬರಹತ್ತಿ ಆ ಮೇಲೆ ಅದು ಇಲ್ಲದಂತಾಯಿತು.

ಮತ್ತೊಂದು ಪ್ರಸಂಗದಲ್ಲಿ ನಾನು ಮಾನಸಪೂಜೆಯನ್ನು ಮಾಡುತ್ತಿರುವಾಗ ನನ್ನ ಹೆಂಡತಿಯು ನನ್ನ ಹತ್ತರ ಬಂದು 'ತಾವು ಗುಲಾಬಿ ಅತ್ತರ ಹಚ್ಚಿಕೊಂಡಿದ್ದಿರೇನು' ಎಂದು ಕೇಳಿದಳು, ಮತ್ತು 'ಅತ್ತರದ್ದು ಮನೆತುಂಬ ಸುವಾಸ ಬರುತ್ತದಂತ' ಆಕೆಯೆಂದಳು. "ಆದರೆ ನನಗೆ ವಾಸ ಬರುವದಿಲ್ಲ ಎಂತ ನಾನು ಹೇಳುತ್ತಿರುವಾಗ ಆಕೆಯು ನನ್ನ ಶಾಲನ್ನು ಮೂಸಿ ನೋಡಿದಳು. ಆದರೆ ಶಾಲಿಗೆ ವಾಸ ಇದ್ದಿಲ್ಲ, ಮನೆತುಂಬ ಮಾತ್ರ ವಾಸಬರುತ್ತಿತ್ತು."

(೧೧) ಶರೀರಕ್ಕೆ ಲಘುತ್ವ ಬಂದದ್ದರಿಂದ ಯಾವನಾದರೂ ಆಸನ ಹಾಕಿದರೆ, ನಾನು ಮೇಲೆ ಹೋಗುತ್ತೇನೆ ಎಂಬದಾಗಿ ನನಗೆ ಭಾಸವಾಗುತ್ತಿತ್ತು ಒಂದು ಮಗ್ಗಲಿಗೆ ಮಲಗಿರುವಾಗ ನೆಲಕ್ಕೆ ಹತ್ತಿರುವ ಟೊಂಕದ ಒಂದೇ ಎಲುಬಿನ ಆಧಾರವಿದ್ದು ಕಾಲುಕಡೆ ಮತ್ತು ತಲೆಕಡೆಯ ಭಾಗವೆಲ್ಲ ಮೇಲೆ ಏಳುವದು. ಈ ಸಮಯದಲ್ಲಿ ಅವಯವಗಳ ಅಂದರೆ ಕೈಕಾಲುಗಳ ಆಕುಂಚನವಾಗುತ್ತದೆ.

ಕೂತಿರುವಾಗಸಹ ಒಳೆ ಟೊಂಕದ ಭಾಗ ಜಮೀನಿಗೆ ಹತ್ತಿ ಅಂಕವು ಮೇಲೆಯೇ ಇರುತ್ತದೆ, ಹಾಗೆಯೇ ಹಾರಿಹಾರಿ ನಡೆದಂತೆ ತೋರುವದು.

(೧೨) ಹೃದಯ ಮಧ್ಯದಲ್ಲಿ ಸದ್ಗುರು ಮೂರ್ತಿಯು ಪ್ರಗಟವಾಯಿತೆಂದರೆ ಸರ್ವಶರೀರವು ಪ್ರಸರಣವನ್ನು ಹೊಂದುತ್ತದೆ.

(೧೩) ಸರ್ವಶರೀರದ ರೋಮರೋಮದಲ್ಲಿ 'ಸೋಹಂ'ದ ಸ್ಪಂದನವಾಗುತ್ತದೆ.

(೧೪) ದಿನವೆಲ್ಲ ಮತ್ತು ರಾತ್ರಿಯಲ್ಲಿಯೂ 'ಸೋಹಂ' ದ ಗುಂಗಿ ಇರುತ್ತದೆ. ಆದ್ದರಿಂದ ನಿದ್ರೆಯು ಒಂದೆರಡು ತಾಸಿನಕಿಂತ ಹೆಚ್ಚು ಹೊತ್ತು ಬರುವದಿಲ್ಲ.

(೧೫) ಮಾನಸ ಪೂಜೆಯ ವೇಳೆಗೆ ಸದ್ಗುರುಗಳಿಗೆ ಅರ್ಪಿಸಿದ ನೈವೇದ್ಯವು ನನ್ನ ಹೊಟ್ಟೆಯಲ್ಲಿಯೇ ಹೋಗುವದೆಂಬಂತೆ ನನಗನಿಸುತ್ತದೆ ಯಾಕಂದರೆ, ಸದ್ಗುರುಗಳು ನನ್ನ ಸಮ್ಮುಖದಲ್ಲಿರದೆ, ನನ್ನ ಹೃದಯದ ಅಂತ-ರ್ಭಾಗದಲ್ಲಿರುತ್ತಾರೆ, ಅಂತೆ ಆ ನೈವೇದ್ಯದೊಳಗಿನ ಪದಾರ್ಥಗಳ ಸವಿಗೆ ತಿಳಿಗು ಬರುತ್ತದೆ. ಮತ್ತು, ನನ್ನ ಹೊಟ್ಟೆಯೂ ತುಂಬಿದಂತೆ ಆಗಿ ನಿತ್ಯದ ಊಟವು ಒಂದು ಮುತ್ತು ಉಂಡಕೂಡಲೇ ನನ್ನ ಹೊಟ್ಟೆ ತುಂಬುತ್ತದೆ. ಊಟವನ್ನು ನಾನು ಒಮ್ಮೆಯೇ ಮಾಡುತ್ತೇನೆ, ಮತ್ತು ರಾತ್ರಿಯಲ್ಲಿ ಒಂದು ಬಟ್ಟಲು ಹಾಲು ಕುಡಿಯುತ್ತೇನೆ, ಊಟ ಮಾಡದಿದ್ದರೂ ಶಕ್ತಿ ಎಷ್ಟಕ್ಕೂ ಕಡಿಮೆ ಆದಂತೆ ಕಾಣಿಸುವದಿಲ್ಲ

(೧೬) ಕುಂಡಲಿನಿಯು ಭ್ರೂಮಧ್ಯದಲ್ಲಿ ಸುರಳಿಸುತ್ತಿ ಕೂತಂತೆ ಕಾಣಿಸುತ್ತದೆ.

(೧೭) ಸ್ತ್ರೀ-ಭಾವಗಳು ಅನುಭವಕ್ಕೆ ಬರುತ್ತವೆ, ಮತ್ತು ಶ್ರೀಕೃಷ್ಣನ ಕೂಡ ಆಡುತ್ತೇನೆ ಎಂಬಂತೆ ತೋರುತ್ತದೆ.

( ಈ ಮುಂದಿನ ಅನುಭವಗಳು ಅಂದರೆ ೧೮ ರಿಂದ ೨೨ತನಕ ಸದ್ಗುರು ಗಜಾನನ ಮಹಾರಾಜರ ತೊಡೆಯಮೇಲೆ ಕೂತು ಅಂತರಿಕ್ಷದಲ್ಲಿ ಹೋಗಿ ನೋಡಿದ್ದಿರುತ್ತವೆ.)

(೧೮) ಸಂಧ್ಯಾವಂದನ ಮಾಡುವಾಗ ಸೂರ್ಯ-ನಾರಾಯಣನಿಗೆ ಅರ್ಘ್ಯ ಕೊಡುವಂಥಾದ್ದು, ಶ್ರೀ ಗಜಾನನ ಮಹಾರಾಜರ ತೊಡೆಯಮೇಲೆ ಕೂತು, ಸೂರ್ಯ ಮಂಡಳದಪರ್ಯಂತ ಹೋಗಿ ಅಲ್ಲಿ ಅರ್ಘ್ಯ ಕೊಟ್ಟು ಮತ್ತು

ಗಾಯತ್ರಿ ಜಪವನ್ನು ಮಾಡಿ ಅದೇ ಸ್ಥಿತಿಯಲ್ಲಿ ತಿರಿಗಿ ಬಂದೆನು; ಮತ್ತು ಅಂದಿನಿಂದ ಇದೇ ನಿತ್ಯಕ್ರಮವು ನಡೆದಿರುತ್ತದೆ.

ಆ ಸ್ಥಾನದಲ್ಲಿ ಚೌರಸಾಕೃತಿಯ ಸುವರ್ಣರತ್ನಾದಿಗಳಿಂದ ಕೆತ್ತಲ್ಪಟ್ಟ ಒಂದು ಮನೆಯಿದ್ದು, ಆ ಮನೆಯ ಪ್ರಕಾಶವೇ ಎಲ್ಲ ಬ್ರಹ್ಮಾಂಡತುಂಬ ಪಸ-ರಿಸಿರುತ್ತದೆ. ಒಳಗಿನ ಸೂರ್ಯನಾರಾಯಣನೂ ಬಹಳ ದೈದೀಪ್ಯಮಾನನಿರು ವನು. ಆದರೆ ಅವನ ಸನ್ನಿಧಿಯಲ್ಲಿ ಹೋದರೂ ಉಷ್ಣತೆಯು ಏನೂ ತೋಂದರೆ ಯಾಗಲಿಲ್ಲ. ಆದರೆ ಆ ಮನೆಯಲ್ಲಿ ಒಳಗೆ ಹೋಗುವಾಗ ಮತ್ತು ಹೊರಗೆ ಬರು ವಾಗ ಪ್ರಖರ ಉಷ್ಣತೆಯು ದೇಹಕ್ಕೆ ತಾಗುತ್ತದೆ. ಮೇಲೆ ಹೋಗುವಾಗ ಅಥವಾ ಕೆಳಗೆ ಬರುವಾಗ, ಸೂರ್ಯಮಂಡಲದಿಂದ ಸ್ವಲ್ಪ ದೂರತನಕ ಉಷ್ಣ ತೆಯು ಭಾಸಿಸುವದು.

(೧೯) ಇದೇ ಪ್ರಕಾರ ನಾನು ಒಮ್ಮೆ ಚಂದ್ರಮಂಡಲಕ್ಕೆ ಹೋದೆನು. ಅಲ್ಲಿ ಎಲ್ಲ ಮನೆಗಳು, ದ್ವಾರಗಳು, ರಸ್ತೆಗಳು, ತೋಟಗಳು ಮತ್ತು ವನಸ್ಪತಿ ಇವುಗಳ ಕಾಡುಗಳು ವಗೈರೆ ನಮ್ಮ ಪೃಥ್ವಿಮೇಲಿನ ರಚನೆಯಂತೆಯೇ ಇರು ವವು. ಅಲ್ಲಿ ಚಂದ್ರನಿಗಾಗಿ ಮಾತ್ರ ಒಂದು ರಾಜವಾಡೆ ಇದ್ದು ಅಲ್ಲ ಅಲೌಕಿಕ ಸುಂದರ ಸ್ತ್ರೀಯರಿಗೋಸ್ಕರ ೧೭ ಮಹಾಲಂಗಳವೆ. ಅವೆಲ್ಲ ರೋಹಿಣಿ ಮುಂತಾದ ಚಂದ್ರನ ರಾಣಿಗಳಿಗೋಸ್ಕರ ಕಟ್ಟಿಸಿವೆ; ಹೀಗೆ ಅಲ್ಲಿಯ ಒಬ್ಬ ಬೆತ್ತಹಿಡಿದ ವನು ನಮಗೆ ಹೇಳಿದನು. ಬಾಕಿ ಎಲ್ಲ ಮನೆಗಳು ಬಿಳಿ ವರ್ಣದ ಮಾಳಿಗೆ ಮನೆಗಳಿದ್ದವು; ಹಂಚಿನವಲ್ಲ. ಅಲ್ಲಿ ಇಪ್ಪತ್ತನಾಲ್ಕು ತಾಸೂ ಅಂದರೆ ಅಖಂಡ ಚಂದ್ರಪ್ರಕಾಶವಿರುವದು. ರಾತ್ರಿ ಮತ್ತು ದಿವಸ ಎಂದು ಅಲ್ಲಿ ಪ್ರಕಾಶಗಳಿಲ್ಲ. ಹಾಗೂ ದೀಪದ ಜರೂರಿಯು ಇಲ್ಲ. ವನಸ್ಪತಿಗಳು ವಗೈರೆ ಸೂರ್ಯಪ್ರಕಾಶದ ವಿನಹಾ ಹ್ಯಾಗೆ ಬೆಳೆಯುತ್ತವೆ ಎಂದು ನಾನು ಕೇಳಿದ್ದಕ್ಕೆ ಅದರ ಉತ್ತರ ಹೀಗೆ ಬಂತಲ್ಲ, 'ಚಂದ್ರನಲ್ಲಿ ಯಾವ ಪ್ರಭೆ ಇರುವದೊ ಅದು ಸೂರ್ಯನಿಂದಲೆ ಇರುತ್ತದೆ, ಮತ್ತು ಅದು ವನಸ್ಪತಿಗಳಿಗೆ ಸಾಕಾಗುವದು. ಅಲ್ಲಿಯ ಜನರು ಜನಾವರಗಳು ವಗೈರೆ ದಷ್ಟಪುಷ್ಟ, ತೇಜಸ್ವಿ ವ ಬಲವಾನ್ ಇರುತ್ತವೆ. ಸರೋ ವರಗಳೂ ಮತ್ತು ಅವುಗಳಲ್ಲಿ ಅರಳಿದ ಕಮಲಗಳೂ ಅಲ್ಲಲ್ಲಿ ಕಾಣಿಸುತ್ತಿದ್ದವು. ಕಮಲಗಳೂ ಅಖಂಡ ಅರಳಿದ್ದು ಎಂಬಂತೆ ತೋರುತ್ತಿತ್ತು. ಅವುಗಳ ಸುಗಂಧವು ಒಂದೇ ಸಮನೆ ಬರುತ್ತಿತ್ತು.

(೨೦) ನಾವು ಒಮ್ಮೆ ಮೇಲೆ ಅಂತರಿಕ್ಷದಲ್ಲಿ ಹೋದೆವು. ಅಲ್ಲಿ ನಮ್ಮ ಸುತ್ತಲು ಕೆಲವು ಪುರುಷರು, ಸ್ತ್ರೀಯರು ವ ಮಕ್ಕಳು ಅಳುತ್ತಿದ್ದದ್ದನ್ನು ಕಂಡೆವು. ಆಗ 'ಇವರು ಹೀಗೆ ಯಾಕೆ ಅಳುತ್ತಾರೆಂ'ತ ನಾನು ಮಹಾರಾಜರಿಗೆ ಕೇಳಿದಾಗ, ಅವರಂದರು, "ಇವರೆಲ್ಲರೂ ಅತೃಪ್ತವಾಸನೆಯುಳ್ಳ ಜೀವಗಳಿದ್ದಾರೆ. ಅವರು

ಪೂರ್ವದಲ್ಲಿ ಮನುಷ್ಯ ಜನ್ಮದಲ್ಲಿರುವಾಗ ಅನಂತ ಪಾಪಗಳನ್ನು ಮಾಡಿದ್ದರು. ಅವುಗಳ ನೆನಪಾಗಿ ಅವರು ಅಳುತ್ತಾ ಇದ್ದಾರೆ" ಆಗ ನಾನು ಪುನಹಾ ಕೇಳಿದೆ, "ಹೀಗಿದ್ದರೆ, ಅವರನ್ನು ಪುನಹಾ ಜನ್ಮಕ್ಕೆ ಹಾಕಿ, ಅವರ ಉದ್ಧಾರ ಯಾಕೆ ಮಾಡುವದಿಲ್ಲ ?" ಅದಕ್ಕವರೆಂದರು, "ಅವರನ್ನು ಜನ್ಮಕ್ಕೆ ಹಾಕುವದು ನಮ್ಮ ಕೈಯಲಿಲ್ಲ ಆ ಕೆಲಸಕ್ಕಾಗಿ ಜಗದೀಶ್ವರನು ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಿರುತ್ತಾನೆ. ಅವನು ಯಾವ ಇವರನ್ನು ಪೃಥ್ವಿಯಮೇಲೆ ಜನ್ಮಕ್ಕೆ ಹಾಕುವನು, ಆಗ ನೀನು ನಿನ್ನ ಇನ್ನೊಂದು ಜನ್ಮದಲ್ಲಿ ಅವರನ್ನು ಉದ್ಧಾರ ಮಾಡು."

(೨೮) ಒಮ್ಮೆ ಶ್ರೀಗಜಾನನ ಮಹಾರಾಜರ ತೊಡೆಯಮೇಲೆ ಕೂತುಕೊಂಡು ನಾನು ವೃಂದಾವನದಲ್ಲಿ ಹೋದೆನು. ಸಾಧಾರಣ ಮಧ್ಯರಾತ್ರಿಯಾಗಲಿಕ್ಕೆ ಬಂದಿದ್ದೀತು. ತಿಂಗಳ ಬೆಳಕು ಸ್ವಚ್ಛವಾಗಿ ಬೀಳುತ್ತಿತ್ತು. ಶ್ರೀಕೃಷ್ಣನು ಒಂದು ಕಲ್ಲಿನಮೇಲೆ ನಿಂತು ತನ್ನ ಕೊಳಲನ್ನು ಊದಿದನು, ಮತ್ತು "ಈ ಕೊಳಲಿನ ಧ್ವನಿಯಿಂದ ನಾನು ಸರ್ವರಿಗೂ ಆಮಂತ್ರಣ ಕೊಡುತ್ತಿದ್ದೇನೆ" ಎಂದು ಹೇಳಿದನು. ಮತ್ತು ನಮ್ಮಿಬ್ಬರಿಗೂ ಹೇಳಿದ್ದೇನಂದರೆ, 'ನೀವು ಸುಂದರ ಸ್ತ್ರೀಯರಾಗಿ ಬನ್ನಿ' ನಾನು ಕೇಳಿದೆ 'ತಯಾರಾಗುವದು ಹ್ಯಾಗೆ ?' ಅದಕ್ಕವರಂದರು, 'ಆ ಅತ್ತಕಡೆ ಲತಾಗೃಹದೊಳಗೆ ಎಲ್ಲಾ ತಯಾರ ಇದೆ,' ಅಲ್ಲಿ ನಾವಿಬ್ಬರೂ ಹೋದೆವು (ಆ ಸಮಯದಲ್ಲಿ ಗಜಾನನ ಮಹಾರಾಜರು ಕುಂಟುತ್ತಿದ್ದಿಲ್ಲ) ನಾವು ಇಬ್ಬರು ಬೇರೆ ಬೇರೆ ಲತಾಗೃಹದೊಳಗೆ ಹೋದೆವು. ನನ್ನ ಕುಂಜದಲ್ಲಿ ಒಂದು ಚೌಕು ಕಲ್ಲಿನಮೇಲೆ ಒಂದು ವಿದ್ಯುತ್ ದೀಪವು ಇಟ್ಟಿತ್ತು. ಒಂದು ದೊಡ್ಡ ಕನ್ನಡಿ ಇತ್ತು. ಹಗ್ಗದ ಮೇಲೆ ನಾನಾತರದ ಸುಂದರವಾದ ಶೀರೆಗಳು ಮತ್ತು ಕುಪ್ಪಸಗಳೂ ಇದ್ದವು. ಒಳಗೆ ಹೋದಮೇಲೆ ನಾನು ಮೈಮೇಲಿನ ಎಲ್ಲ ವಸ್ತ್ರಗಳನ್ನು ತೆಗೆದಿಟ್ಟೆ, ಮತ್ತು ಕನ್ನಡಿ ಮುಂದೆ ನಿಂತು ನೋಡಿದರೆ, ನನ್ನ ಉರೋಭಾಗವು ಸ್ತ್ರೀಯರಂತೆ ಉಬ್ಬಿದ್ದು ಸ್ತ್ರೀಸ್ತನಗಳಂತೆ ಕಾಣಿಸಿತು. ನನ್ನದು ನನಗೆ ಚಮತ್ಕಾರಿಕ ಕಂಡು ಬೇಗನೆ ಒಂದು ಕುಪ್ಪಸವನ್ನು ತಕ್ಕೊಂಡು ಅದನ್ನು ತೊಟ್ಟುಕೊಂಡೆ; ಅದು ನನ್ನ ಅಂಗಕ್ಕೆ ಸರಿಯಾಗಿ ಇತ್ತು. ನಂತರ ಅಲ್ಲಿಯ ಒಂದು ಜರಿಯ ಶೀರೆಯನ್ನು ತಕ್ಕೊಂಡು ನಾನು ಉಡುತ್ತಿದ್ದೆ ಅಷ್ಟರಲ್ಲಿ ಲಿಂಗಸ್ಥಾನದಲ್ಲಿ ಸ್ತ್ರೀಅವಯವ ಪ್ರಾಪ್ತವಾಗಿದೆ ಎಂಬದಾಗಿ ತೋರಿತು, ಮತ್ತು ಅದೇ ರೀತಿಯಿಂದ ಸರ್ವಶರೀರದ ಘಟನೆಯಾಯಿತು. ನನಗೆ ಸ್ತ್ರೀಯರಂತೆ ಉತ್ತಮ ಶೀರೆಯನ್ನು ಉಡಲಿಕ್ಕೆ ಬಂತು, ಹಾಗೂ ಅಲ್ಲೆ ಪೆಟ್ಟಿಗೆಯೊಳಗಿದ್ದ ಆಭರಣಗಳನ್ನು ತಕ್ಕೊಂಡು ಮೈಮೇಲೆ ಹಾಕಿಕೊಂಡೆನು. ಮತ್ತು ಕನ್ನಡಿಯೊಳಗೆ ನೋಡಿದರೆ ನನ್ನ ವಯಾತೀತ ಶರೀರದ ಸ್ಥಾನದಲ್ಲಿ ಒಬ್ಬ ಇಪ್ಪತ್ತು ವರ್ಷವಯಸ್ಸಿನ ತರುಣಿಯಂತೆ ನನ್ನ ಶರೀರ ಆದದ್ದು ನನ್ನ ಅನುಭವಕ್ಕೆ ಬಂತು. ನಾನು ಆ ಲತಾಮಂಟಪದ ಹೊರಗೆ ಬರುತ್ತೇನಷ್ಟೆ. ಅಷ್ಟರಲ್ಲಿ

ಮತ್ತೊಂದು ಮಂಟಪದಿಂದ ಮಹಾರಾಜರು ಒಬ್ಬ ಹಿರೇ ಸ್ತ್ರೀಯಂತೆ ರೂಪುಳ್ಳವರಾಗಿ ಹೊರಗೆ ಬಂದರು. ನಾವಿಬ್ಬರೂ ಹೋಗಿ, ಶ್ರೀಕೃಷ್ಣಭಗವಂತನ ಚರಣದ ಮೇಲೆ ಮಸ್ತಕವನ್ನು ಇಟ್ಟೆವು, ಕೂಡಲೇ ಎಲ್ಲ ಕಡೆಗಳಿಂದ ಸುಂದರ ಸ್ತ್ರೀಯರ ಗುಂಪು ಕೂಡ ಹತ್ತಿತು. ಸಾವಿರಾರು ಆಕಳುಗಳೂ ಓಡಿ ಬರುತ್ತಿದ್ದವು. ಕೆಲವು ಸ್ತ್ರೀಯರು ವೃಕ್ಷಗಳ ಮೇಲೆ ಕೂತಿದ್ದರು. ಶ್ರೀಕೃಷ್ಣಭಗವಂತನು ಆ ಕಲ್ಲಿನ ಮೇಲಿನಿಂದ ಕೆಳಗಿಳಿದು, ರಾಸಮಂಡಳ ರಚನೆ ಮಾಡಿದನು, ಮತ್ತು ' ಗೋಪಾಲಕೃಷ್ಣ, ರಾಧಾಕೃಷ್ಣ ' ಈ ನಾದದ ಮೇಲೆ, ಕೋಲಾಟ ಆಡಿದರು ಮತ್ತು ಕುಣಿಯುತ್ತಲಿದ್ದರು. ನಾನಾಪ್ರಕಾರದ ತಿರುಗಾಟಗಳನ್ನಾಡಿದರು. ಈ ಕ್ರಮವು ಎರಡು ಮೂರು ತಾಸುಗಳ ತನಕ ನಡೆದ ಮೇಲೆ, ಶ್ರೀಕೃಷ್ಣ ವ ಗೋಪಿಯರು ವಿಶ್ರಾಂತಿ ಸಲುವಾಗಿ ಬೇರೆ ಬೇರೆ ಸ್ಥಳಗಳಿಗೆ ಹೋದರು. ನಾನು ವ ಶ್ರೀಕೃಷ್ಣರು ಒಂದು ಶಿಲಾಸ್ಥಾನದಲ್ಲಿ ಕೂತ ಮೇಲೆ, ನನ್ನ ಮೈಮೇಲೆ ಬಂದ ಬೆವರನ್ನು ತಮ್ಮ ಕೈಯಿಂದ ಅವರು ಒರಿಸಿದರು. ಮತ್ತು ನನಗೆ ಅಪ್ಪಿ-ಕೊಂಡರು ಮತ್ತು ಆಗ ಹೇಳಿದರು, " ನಿನ್ನ ವಾಸನೆಗಳು ನಡನಡುವೆ ಜಾಗೃತವಾಗುತ್ತಿರುತ್ತವೆ, ಅವು ನನ್ನ ಈ ಆಲಿಂಗನದಿಂದ ಸರ್ವವೂ ಇಲ್ಲದಂತಾಗುವವು." ಹೀಗಂದು ಅಲ್ಲಿದ್ದ ಹಾಲಿನ ಪಾತ್ರೆಯೊಳಗಿನಿಂದ ನನಗೆ ಕುಡಿಯಲಿಕ್ಕೆ ಹಾಲು ಕೊಟ್ಟು ನನ್ನನ್ನು ತನ್ನ ಕಡೆಗೆ ಎಳಕೊಂಡರು. ಅನಂತರ ನಾವಿಬ್ಬರು ಲತಾಗೃಹದ ಹೊರಬಿದ್ದೆವು. ಆ ಕಡೆಯಿಂದ ಮಹಾರಾಜರೂ ಶ್ರೀಕೃಷ್ಣರೂ ಬಂದರು, ಅನಂತರ ನಾವು ಅಂದರೆ ನಾನು ಮತ್ತು ಮಹಾರಾಜರು ನಮ್ಮ ಪೂರ್ವ ರೂಪವನ್ನು ಹೊಂದಿ ನಾಶಿಕಕ್ಕೆ ಬಂದೆವು.

(೨೨) ನಾನು ಒಮ್ಮೆ ಸಂಧ್ಯಾವಂದನೆ ಮಾಡುತ್ತಿರುವಾಗ್ಗೆ ಹೀಗೆ ವೃತ್ತಿ ಹೊರಟಿತಲ್ಲ, ಸರ್ವ ಯೋಗಮಾರ್ಗದ ಜ್ಞಾನ ಆಗುವ ದೆಶೆಯಿಂದ ನಾನು ಶ್ರೀಗಜಾನನ ಮಹ ರಾಜರ ಸೂಕ್ಷ್ಮ ಶರೀರದಲ್ಲಿ ಪ್ರವೇಶ ಮಾಡಬೇಕು. ಅದೇ ಪ್ರಕಾರ ಧ್ಯಾನಕಾಲದಲ್ಲಿ ನಾನು ಮಹಾರಾಜರ ಬಿಡಾರಕ್ಕೆ ನಾನು ಲಿಂಗ ದೇಹದಿಂದ ಹೋದೆನು, ಮತ್ತು ಅಲ್ಲಿ ನೋಡುವಾಗ್ಗೆ ಮಹಾರಾಜರ ಸಮೀಪ ಒಬ್ಬ ಮನುಷ್ಯನು ಕೂತಿದ್ದನು. ಆದರೂ ನಾನು ಮಹಾರಾಜರ ಕಡೆಗೆ ಹೋಗುತ್ತಿರುವಾಗ ಅವರಂದರು, " ನಾನು ರೋಗಪೀಡಿತನಿದ್ದೇನೆ, ಇಂಥ ಸ್ಥಿತಿಯಲ್ಲಿ ನೀನು ಪ್ರವೇಶ ಮಾಡಬೇಡ." ಹೀಗಂದು ಮತ್ತು ದುರುತ್ತರಗಳನ್ನು ಆಡಿ ಅವರು ನನ್ನನ್ನು ಹೊಡದೋಡಿಸಿದರು ನಾನು ಅಲ್ಲಿಂದ ಹೊರಟು ದೂರ ಎಲ್ಲಿಗೊ ಹೋದೆ, ಆ ಸ್ಥಾನವು ನಾಥಪಂಥದವರು ಒಟ್ಟುಕೂಡಿ ಕೂಡ್ರುವ ಜಾಗೆ ಇರಬೇಕು, ಅಲ್ಲಿ ಒಂದು ಉನ್ನತವಾದ ಕಲ್ಲಿನ ಮೇಲೆ ಆದಿನಾಥರು ( ಶಂಕರರು ) ಕೂತಿದ್ದರು. ಅವರ ಕೆಳಗಿನ ಭಾಗಕ್ಕೆ ಎರಡೂ ಕಡೆಗೆ ಅಂದರೆ ಎಡಗಡೆಗೂ ಬಲಗಡೆಗೂ ನವನಾಥರು ( ಗೋರಕ್ಷ ಜಲಂದರಾದಿ ) ಕಲ್ಲಿನ

ಮೇಲೆ ಕೂತಿದ್ದರು. ನಡುವೆ ಜಾಗೆ ಬಿಟ್ಟು ಸ್ವಲ್ಪ ಅಂತರದ ಮೇಲೆ ಭೈರವ ದಿಘೋಳಿವಾಲೆ ಗೋಸಾವಿ ಇವರ ಸಮೂಹವಿತ್ತು. ಅವರ ಪೈಕಿ ಒಬ್ಬನಿಗೆ ನಾನು ಕೇಳಿದೆ, " ಈ ಮಂದಿ ಯಾರು ? " ಅವನಂದನು, " ಅತ್ತಲಾಗಿ ಕೂತವರು ಎಲ್ಲ ನಾಥಪಂಥದ ಅಧಿಕಾರಿ ಪುರುಷರಿದ್ದಾರೆ. " ಅನಂತರ ನಾನು ಶ್ರೀಗಜಾನನ ಮಹಾರಾಜರ ಹಿಂದೆ ಹೋಗಿ ನಿಂತೆನು. ಆ ಸಮಯದಲ್ಲಿ ಆ ಸಭೆಯವರದು ನಾಥಪಂಥದ ಮೇಲೆ ವಿವರಣ ನಡೆದಿತ್ತು. ಅದು ಇಷ್ಟು ಅವಸರದಿಂದ ನಡೆದಿತ್ತು, ಅವರ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವದು ನನಗೆ ಅಶಕ್ಯವಾಯಿತು. ಆದರೆ ಆ ಎಲ್ಲ ಭಾಷಣದ ನಿಷ್ಕರ್ಷೆ ಇಷ್ಟೆ ಇತ್ತಲ್ಲ, ' ಸೋಹಂ ' ಮಂತ್ರದ ಮೇಲೆ ದೃಢವಿಶ್ವಾಸ ಬೇಕು, ಅಂದರೆ ಇದೇ ಜನ್ಮದಲ್ಲಿ ಸರ್ವ ಯೋಗ ಮಾರ್ಗದ ಅನುಭವ ಬಂದು ಜೀವನು ಶಿವನಾಗುವನು. ಪರಕಾಯಾಪ್ರವೇಶದ ಜರೂರಿ ಇಲ್ಲ. ಈ ಕಡೇ ವಾಕ್ಯವು ನನ್ನನ್ನು ಉದ್ದೇಶಿಸಿರಬಹುದೆಂತ ನನಗೆ ತೋರುತ್ತದೆ. ಯಾಕಂದರೆ ನಾನು ಮಹಾರಾಜರ ಶರೀರದೊಳಗೆ ಪ್ರವೇಶ ಮಾಡಲಿಕ್ಕೆ ಹೊರಟಿದ್ದೆ.

(೨೩) ಒಂದು ದಿನ ಮಹಾರಾಜರು ನಿತ್ಯದ ಸಂಜೆ ಹೊತ್ತಿನ ಭೆಟ್ಟಿ ಕಾಲದಲ್ಲಿ ಅಂದರು, ' ಶಕ್ತಿಯ ಉಪಾಸನೆಯನ್ನು ಮಾಡಬೇಕು, ಅಂದರೆ ಎಲ್ಲ ಯೋಗಸಿದ್ಧಿಗಳು ಪ್ರಾಪ್ತವಾಗುತ್ತವೆ. ಆದರೆ ಸ್ವಂತಕ್ಕಾಗಿ ಅವುಗಳ ಉಪಯೋಗ ಮಾಡಬಾರದು. ಮತ್ತು ಯೋಗಮಾರ್ಗದಲ್ಲಿ ಯಾವದೊಂದು ಸಂಗತಿಯಾದರೂ ಗೊತ್ತಿಲ್ಲವೆಂತ ಇರಬಾರದು.' ಅನಂತರ ಮರುದಿನ ನಸುಕಿನ ಹೊತ್ತಿಗೆ ಅಭ್ಯಾಸಕ್ಕೆ ಕೂತಿರುವಾಗ, ಮೊದಲು ಒಮ್ಮೆ ನೋಡಿದ ಷಟ್‌ಭುಜಗಳುಳ್ಳ ದೇವಿಯು ಎದುರಿಗೆ ನಿಂತು, " ನಮೋ ದೇವ್ಯೈ ಮಹಾದೇವ್ಯೈ ಶಿವಾಯ ಸತತಂ ನಮಃ । ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಃ ಸ್ಮತಾಮ್ ॥ " ಈ ಮಂತ್ರವನ್ನು ನನಗೆ ಜಪಿಸಲಿಕ್ಕೆ ಹೇಳಿದಳು. " ಈ ಮಂತ್ರದ ಯೋಗದಿಂದ ವಿಶ್ವದ ಶಕ್ತಿಯು ನಿನ್ನ ಶರೀರದಲ್ಲಿ ಬಂದೀತು " ಎಂದು ಹೇಳಿ ದೇವಿಯು ಅದೃಶ್ಯಳಾದಳು. ಮುಂದೆ ಆ ಮಂತ್ರವನ್ನು ನಾನು ಹತ್ತು ಹದಿನೈದು ದಿನಗಳ ತನಕ ಜಪಿಸಿದ ಮೇಲೆ, ಪುನಹಾ ಆ ದೇವಿಯು ಪ್ರಗಟಳಾಗಿ ಅಂದಳು, " ನನಗೆ ಷಟ್‌ಭುಜಗಳಿಲ್ಲ, ನಾನು ದ್ವಿಭುಜಾ ಇದ್ದೇನೆ ಆದರೆ ಷಟ್‌ಭುಜಗಳು ನಿನಗೆ ತೋರಿಸುವ ಕಾರಣವೇನಂದರೆ, ನಿನ್ನ ಷಡ್ರಿಪುಗಳನ್ನು ದಮನ ಮಾಡುವದಿತ್ತು, ಎಂದು ನಾನು ಆರು ಭುಜಗಳನ್ನು ತೂಟ್ಟಿದ್ದೆ. ಆದರೆ ನನಗೆ ಈಗ ನಿನ್ನ ಷಡ್ರಿಪು ದಮನಮಾಡುವ ಜರೂರಿ ಇಲ್ಲ. ಅವುಗಳು ತಮ್ಮಷ್ಟಕ್ಕೆ ' ಸೋಹಂ' ಮಂತ್ರದ ಜಪದಿಂದ ದಮನವಾಗಿದ್ದಾವೆ. ನಾನು ಮೂಲದಿಂದ ದ್ವಿ-ಭುಜಾ ಇದ್ದೇನೆ. ಅದೇ ಪ್ರಕಾರ ನೀನು ನನ್ನ ಧ್ಯಾನವನ್ನು ಮಾಡು. ಯಾಕಂದರೆ ದ್ವಿ-ಭುಜಾ ಇದು ದ್ವೈತವದೆ, ಆದರೊಳಗಿಂದ ನಿನಗೆ ಅದ್ವೈತದೊಳಗೆ ಹೋಗುವದದೆ."

ಈಗ ಇದೇ ಅನುಭವದ ಸರಪಣಿಯಲ್ಲಿ ಒಂದು ಪ್ರತ್ಯಕ್ಷ ಸಂಗತಿಯು ಸ್ಥೂಲ ಸೃಷ್ಟಿಯಲ್ಲಿ ಸಂಭವಿಸಿತು ಅದು ಹೀಗದೆ, ನಮ್ಮ ಒಬ್ಬ ಮಿತ್ರನ ಪತ್ನಿಯ ದೇಹದಲ್ಲಿ ದೇವಿಯು ಬೇರೆ ಬೇರೆ ಸ್ಥಾನಮಹಾತ್ಮ್ಯಕ್ಕೆ ಸರಿಯಾಗಿ, ದೇವಿಯ ಸಂಚಾರವಾಗುತ್ತಿತ್ತು. ಒಂದು ಶುಕ್ರವಾರ ನಾನು ಆ ಜಗದಂಬೆ ಕಡೆ ಅಂದರೆ ಯಾವ ನನ್ನ ಮಿತ್ರನ ಕುಟುಂಬದ ವ್ಯಕ್ತಿಯಲ್ಲಿ ಸಂಚಾರಮಾಡುವ ದೇವಿ ಇದ್ದಳೋ ಆ ದೇವಿಯ ಕಡೆಗೆ ಹೋಗಿರುವಾಗ್ಗೆ, ನಮ್ಮ ಹುಡುಗನ ಪರೀಕ್ಷೆಯ ಫಲವೇನಾದೀತೆಂತ ಕೇಳಿದೆ, ಅದಕ್ಕೆ ಯಶಸಿಕ್ಕೀತೆಂಬ ಉತ್ತರ ಬಂತು. ಆ ಪ್ರಕಾರ ಅವನು ಪಾಸಾದನು. ಆದರೆ ಅಷ್ಟರೊಳಗೆ ಆಕೆಯು ಆಸನ ಬದಲಿಸಿ, ತನ್ನ ಕೊರಳಿನ ಹೂವಿನಹಾರ ತೆಗೆದು ನನ್ನ ಕೊರಳಿಗೆ ಹಾಕಿ, ಹೇಳಿದಳು, ' ನೀನು ಯಾವಾಗ್ಗೆ ದೇವಿಯ ಧ್ಯಾನಮಾಡುವಿ, ಆ ಸಮಯದಲ್ಲಿ ಈ ಪ್ರಸಾದವನ್ನು ಒಂದು ಡಬ್ಬಿಯಲ್ಲಿ ಹಾಕಿ ನಿನ್ನ ಸಮೀಪ ಇಟ್ಟುಕೊ, ಅಂದರೆ ನಿನಗೆ ಜಗದಂಬೆಯ ಸಂದೇಶಗಳು ಕೇಳಲಿಕ್ಕೆ ಸಿಕ್ಕಾವು." ಅನಂತರ ನಾನು ನಮಸ್ಕಾರ ಮಾಡಿ ನನ್ನ ಸ್ಥಳದಲ್ಲಿ ಹೋಗಿ ಕೂತೆನು. ಆಮೇಲೆ ನನ್ನ ಮಿತ್ರರು ದೇವಿಗೆ ಕೇಳಿದರು, " ನಿತ್ಯದ ಪದ್ಧತಿಯು ಎರಡೆ ಸಾರೆ ಆಸನ ಬದಲಿಸಿ, ಎರಡೇ ಸ್ಥಾನಗಳ ಸಂಚಾರವಾಗುತ್ತಿತ್ತು, ಆದರೆ ಇವತ್ತು ಮೂರನೇ ಸಾರಿ ಆಸನ ಯಾಕೆ ಬದಲಾಯಿಸಿತ್ತು? ಇದಕ್ಕೆ ದೇವಿಯು ಅಂದಳು, " ಆ ಭಕ್ತನು ನನ್ನ ಕಡೆ ಬಂದಿದ್ದನು, ಆತನಿಗೆ ಪ್ರಸಾದ ಕೊಡುವದಕ್ಕಾಗಿ ಹಾಗೆ ಮಾಡಬೇಕಾಯಿತು. ಅವನು ಶಕ್ತಿಯ ಧ್ಯಾನ ಮಾಡುತ್ತಿದ್ದಾನೆ." ಮರುದಿನ ಈ ಸಮಾಚಾರವನ್ನು ಶ್ರೀಗಜಾನನ ಮಹಾರಾಜರಿಗೆ ಹೇಳಿದಾಗ ಅವರಂದರು, " ನಿನ್ನ ಶರೀರದಲ್ಲಿ ನನ್ನ ಸದ್ಗುರು ಕೃಪೆಯಿಂದ ಇಷ್ಟು ಶಕ್ತಿ ಬಂದದೆಯಲ್ಲ, ದೇವಿಯು ನಿನಗೆ ತಾನಾಗಿ ಆಕೆಗೆ ಬೇಡದೆ, ಪ್ರಸಾದವನ್ನು ಕೊಟ್ಟಳು. ಆದ್ದರಿಂದ ಯಾವ ಈ ಯೋಗಶಕ್ತಿಯ ಮೆಟ್ಟಲುಗಳವೆ, ಅವುಗಳಲ್ಲಿ ' ಸೋಹಂ ' ಶಕ್ತಿ ಶ್ರೇಷ್ಠವಾಗಿದೆ.

ಈ ಶಕ್ತಿಗಳು ದೇವಿಯ ಧ್ಯಾನವನ್ನು ಮಾಡುತ್ತಿರುವಾಗ, ಅಂದರೆ ಒಮ್ಮೆ ದೇವಿಯ ಮೂರ್ತಿಯನ್ನು ಮನಸ್ಸಿನಲ್ಲಿ ತಂದು ಅನಂತರ ' ಸೋಹಂ'ದ ಜಪವು ನಡಿಸಿದರೆ, ದೇವಿಯ ಅಂತರ್ಭಾಗದಲ್ಲಿ ಶ್ರೀಕೃಷ್ಣಮೂರ್ತಿ ಅತಿ ಉಚ್ಚಾಸನದ ಮೇಲೆ, ಎರಡನೇ ಆಸನದ ಮೇಲೆ ಶ್ರೀ ನಾರಾಯಣ ಸರಸ್ವತಿ ಮಹಾರಾಜರು ವ ಅವರ ಪಾದದ ಹತ್ತಿರ ಮೂರನೇ ಆಸನದ ಮೇಲೆ ಶ್ರೀಗಜಾನನ ಮಹಾರಾಜರು ಇವರು ಎಲ್ಲ ಪ್ರಕಾಶಗಳಲ್ಲಿ ಕಾಣಿಸುತ್ತಾರೆ.

(೨೪) ನನಗೆ ಯಾವ ಪ್ರಕಾಶವು ಕಾಣಿಸುವದು ಅದು, ಕೆಂಪು, ಬಿಳಿ ಮತ್ತು ಹಳದಿ ಈ ಮೂರೂ ಬಣ್ಣಗಳ ಮಿಶ್ರಣವು.

(೨೫) ನಾನು ಒಮ್ಮೆ ಗಜಾನನ ಮಹಾರಾಜರಿಗೆ ಸಹಜವಾಗಿ ಅಂದೆ, "ನಾನು ಸಾಕೋರಿಯಲ್ಲಿ ಉಪಾಸನಿ ಮಹಾರಾಜರ ಕಡೆ ಇರುವಾಗ, ಧ್ಯಾನದಲ್ಲಿ ಅವರ ಮೂರ್ತಿಯನ್ನು ನೋಡುತ್ತಿರುವಾಗ, ಅವರ ಬದಲಿಗೆ ಶ್ರೀ ಸಾಯಿಮಹಾರಾಜರ ಮೂರ್ತಿ ಕಾಣಿಸುತ್ತಿತ್ತು. ಅದೇ ಪ್ರಕಾರ ಇಲ್ಲಿಯೂ, ಶ್ರೀಗಜಾನನ ಮಹಾರಾಜರ ಸ್ಥಾನದಲ್ಲಿ ಶ್ರೀನಾರಾಯಣ ಸರಸ್ವತಿಯವರು ಅಂತಃಕರಣದಲ್ಲಿ ತೋರುತ್ತಾರೆ." ಇದರ ಮೇಲೆ ಅವರಂದರು, "ನಾಳಿನಿಂದ ಇನ್ನು ಏನೇನು ಕಾಣಿಸುತ್ತದೆ, ಅದನ್ನು ನೋಡಿರಿ." ಅಂದಿನಿಂದ ಸರ್ವತ್ರ ಗಜಾನನ ಮಹಾರಾಜರು ಕಾಣಿಸಹತ್ತಿದರು ಮತ್ತು ಆ ಮೂಲಕ ತನ್ಮಯಾವಸ್ಥೆಯು ಬಹಳ ವೃದ್ಧಿಯಾಯಿತು.

ನಾನು ಯಾವದಾದರೂ ಅನುಭವವನ್ನು ಮಹಾರಾಜರಿಗೆ ಹೇಳಿದಾಗ, ಅವರು ಮೊದಲೇ ನನ್ನ ಸೂಕ್ಷ್ಮದೊಳಗೆ ಸೇರಿ ನೋಡುತ್ತಿರುವದರಿಂದ ಅವರು ಸುಮ್ಮನಿರುತ್ತಾರೆ ಮತ್ತು ಏನೊಂದೂ ಮಾತನಾಡದೆ, ಒಂದು ಬೈದು ಕೆಲಸ ತೀರಿಸಿಕೊಳ್ಳುವರು. ಆದರೆ ನಾನು ಶರೀರದ ಯಾವ ಮಾರ್ಗದಿಂದ ಹೋದೆ ಎಂದು ಹೇಳಿರುವಾಗ್ಗೆ ನನಗೆ ಅದರ ವರ್ಣನವನ್ನು ಚನ್ನಾಗಿ ಮಾಡಲಿಕ್ಕೆ ಬರಬೇಕೆಂತ, ಅವೇ ಅವೇ ಸಂಗತಿಗಳನ್ನು ನನಗೆ ಪುನಃ ಪುನಹಾ ಸ್ಪಷ್ಟ ಮಾಡಿ ಹೇಳುತ್ತಾರೆ.

ಮೇಲೆ ನಾನು ಇಷ್ಟು ಸಂಗತಿಗಳನ್ನು ವರ್ಣಿಸಿ ಹೇಳಿದರೂ, ನಾನು ಯಾವದೊಂದು ಶಕ್ತಿಯನ್ನು ಸ್ವತಃ ಪ್ರಾಪ್ತಿಮಾಡಿಕೊಂಡಿದ್ದೇನೆ ಎಂದು ನನಗ ಸಿಸುವದಿಲ್ಲ. ಅಂತ ಶ್ರೀಗುರುಚರಣದಲ್ಲಿ ನನ್ನದು ಹೀಗೆ ಪ್ರಾರ್ಥನೆ ಅದೆ, ತಾವಾಗಿ ತಿಳಿದು ತಿಳಿದು ಏನೂ ಮಾಡದೆ ನನ್ನ ಕಡೆಯಿಂದ ಇತರ ಜೀವರ ಉದ್ಧಾರವಾಗುವ ಶಕ್ತಿಯನ್ನು ನನಗೆ ಕೊಡಬೇಕು.

(ಸಹಿ) ಡಿ. ಡಿ. ಭಾವೆ

ಡಿ. ಡಿ. ಭಾವೆ ನಾಶಿಕ ಇವರ ಇನ್ನು ಕೆಲವು ಅನುಭವಗಳು—

ಸನ್ ೧೯೩೯ ನೇ ಮೇ ತಿಂಗಳ ಒಂದನೇ ಅಥವಾ ಎರಡನೇ ತಾರೀಖಿನಿಂದ ಮಹಾರಾಜರು ಇನಫ್ಲುಯಂಜಾದಿಂದ ರೋಗಪೀಡಿತರಾದರು ಅದರಲ್ಲಿಯೆ 'ಬ್ರಾಂಕೊ ನ್ಯುಮೋನಿಯಾ' ಅಂದರೆ ಕಫದ ಕೂಡ ಜ್ವರ ಉತ್ಪನ್ನವಾಯಿತು. ಈ ರೋಗವು ಬಹಳ ಕಠಿಣವಾಗುವದು. ಅದೇ ತಿಂಗಳ ೮ ನೇ ತಾರೀಖಿಗೆ ನಾನು ನನ್ನ ಮಿತ್ರ ಭಾಗವತ ಇವರ ಕೂಡ ಮಹಾರಾಜರ ದರ್ಶನಕ್ಕೆ ಹೋದೆವು. ಆ ಸಮಯದಲ್ಲಿ ನಾನಾಸಾಹೇಬ ಗಡಕರಿ ಮಹಾರಾಜರ ಕೂಡ ಇರುತ್ತಿದ್ದರು. ಅವರು ಬಾಗಲಿನ ಸಮೀಪ ಬಂದು ಹೇಳಿದರು, 'ಮಹಾರಾಜರ

ಸ್ಥಿತಿಯು ಚಿಂತೆಗೆ ಆಸ್ಪದವಾಗಿರುತ್ತದೆ. ಆದ್ದರಿಂದ ನೀವು ಬಾಗಿಲಿನಿಂದಲೆ ದರ್ಶನ ತಕ್ಕೊಂಡು ಹೋಗಬೇಕು " ಅದಕ್ಕೆ ನಾನು ಅಂದೆ, " ನಾವು ಬರೆ ಅವರ ಚರಣಗಳಲ್ಲಿ ಮಸ್ತಕವನ್ನಿಟ್ಟು ಏನೂ ಮಾತಾಡದೆ ಹೊರಗೆ ಬರುವೆವು." ನಂತರ ನಾವು ಒಳಗೆ ಹೋಗಿ ಅವರ ಪಾದದಲ್ಲಿ ಮಸ್ತಕವನ್ನಿಟ್ಟೆವು. ಆಗ ಆ ಕೋಣೆಯಲ್ಲಿ ಒಂದೇ ಸಣ್ಣ ವಿದ್ಯುತ್ ದೀಪವಿತ್ತು, ಆದರೂ ಆ ಸಮಯದಲ್ಲಿ ಕೋಣೆತುಂಬ ಕಣ್ಣು ಕುಕ್ಕುವಂಥಾ ಭಯಂಕರ ಪ್ರಕಾಶವು ( ತೇಜ ) ನನಗೆ ಕಾಣಿಸಿತು, ಮತ್ತು ಶ್ರೀರಾಮ ಲಕ್ಷ್ಮಣ ವ ಸೀತಾ ಇವರು ಒಂದು ಮೂಲೆ ಯಲ್ಲಿ ನಿಂತಿದ್ದು, ನಾಲ್ಕೂ ಕಡೆಗೆ ಆ ಪ್ರಕಾಶದ ಕಿರಣ ತುಂತುರುಗಳನ್ನು ಹಾರಿ ಸುತ್ತಿದ್ದದು ನನಗೆ ತೋರಿತು. ನನಗೇನೂ ಸೂಚಿಸಲಿಲ್ಲ ಮತ್ತು ಕಣ್ಣುಗಳು ಆ ಪ್ರಕಾಶದಿಂದ ಕುಕ್ಕಲ್ಪಟ್ಟಿದ್ದರಿಂದ ನಾನು ಹಾಗೆಯೇ ಮನೆಗೆ ಬಂದೆನು. ಆ ದೃಶ್ಯದ ಪರಿಣಾಮವು ನನ್ನ ಮೇಲೆ ಮರುದಿನತನಕ ಇತ್ತು.

ತಾರೀಖು ೨೫-೩-೩೯ ರಷ್ಟಕ್ಕೆ ನಾನು ಒಬ್ಬ ಸ್ತ್ರೀಯಳ ಪ್ರೇತಯಾತ್ರೆ ಕೂಡ ಸ್ಮಶಾನ ಭೂಮಿಗೆ ಹೋಗಿದ್ದೆ. ಮಂಡಳಿಯು ಚಿತೆಯನ್ನು ರಚಿಸುತ್ತಿದ್ದರು ಮತ್ತೇನೊ ಮಾಡುತ್ತಿದ್ದರು. ಅದೆ ಸಮಯದಲ್ಲಿ ನನಗೆ ಸ್ವಲ್ಪ ಹೊತ್ತು ನಿಶ್ಚೇಷ್ಟಿತನಾಗಿ, ಮಾನವಿ ಶರೀರ ಪಂಚತತ್ತ್ವಗಳಿಂದ ಹ್ಯಾಗೆ ಉತ್ಪನ್ನವಾಗುವದು, ಈ ವಿಷಯದಲ್ಲಿ ಒಂದು ದೃಶ್ಯ ಸಿನೆಮಾ ಫಿಲ್ಮ ಪ್ರಕಾರ ಸ್ವಲ್ಪ ವೇಳೆಯೊಳಗೆ ಕಾಣಿಸಿತು. ಅದನ್ನು ಮುಂದೆ ಕೊಡುತ್ತೇನೆ:— ಪುರುಷ ವ ಸ್ತ್ರೀ ಇವರ ಸಂಭೋಗದಿಂದ ತಯಾರ ಆದ ಬಿಂದುವಿನ ಪ್ರಸರಣವಾಗಿ ಅದರ ತ್ವಚಾ ಅಂದರೆ ಶರೀರವು ಆಯಿತು, ಇದು ಅನ್ನಮಯ ಕೋಶವು. ಅದರ ಕೂಡ ಶರೀರದಲ್ಲಿ ಅಸ್ತಿ ಮತ್ತು ಮಾಂಸವು ತಯಾರಾಯಿತು. ನಂತರ ಅದರಲ್ಲಿ ಸರ್ವ ಪ್ರಕಾರದ ನಲಿಕಾ ( ಶಿರಗಳು ಮತ್ತು ನರಗಳು ) ತಯಾರಾದವು. ಇದು ಪ್ರಾಣ ಮಯ ಕೋಶವು.

ವಾಸನಾ, ಇಚ್ಛಾ ಅಥವಾ ಮನಸ್ಸು ಯಾವ ಇವುಗಳಿಂದ ಜನ್ಮಕ್ಕೆ ಬರಬೇಕಾಗುವದೊ ಅವುಗಳ ಪ್ರವೇಶವು ಈ ಶರೀರದಲ್ಲಿ ಆಯಿತು. ಈ ಕ್ರಿಯೆ ಗಳು ಆಗುತ್ತಿರುವಾಗ, ಆ ಸ್ತ್ರೀಯು ಎದ್ದು ಏನೊ ತಿಂದಂತೆ ಕಾಣಿಸಿತು. ಇದ ರಿಂದ ನಾನು ಹೀಗೆ ಅನುಮಾನ ಮಾಡಿದೆನು, ತಿನ್ನುವ ಇಚ್ಛೆಯು ಸಾಯುವ ಕಾಲದಲ್ಲಿದ್ದದರಿಂದ ಆ ಸ್ತ್ರೀಗೆ ಕೂಡಲೇ ಎರಡನೇ ಜನ್ಮ ಶಿಕ್ಕಿರಬೇಕು. ಇದರ ಹೊರ್ತು ನಂತರ ನನಗೆ ಹೀಗೆ ತಿಳಿಯಿತು, ಮರಣದ ಮೊದಲು ಎರಡು ಮೂರು ಘಂಟೆ ಹಿಂದೆ, ಆ ಸ್ತ್ರೀಯು ಝುಣಕ ಮತ್ತು ಅನ್ನವನ್ನು ಬೇಡುತ್ತಿದ್ದಳು.

ಕಡೆಗೆ ಸಚ್ಚಿದಾನಂದನು ಆ ದೇಹದಲ್ಲಿ ಪ್ರವೇಶಿಸಿ, ಆ ದೇಹದಲ್ಲಿ ಚೈತನ್ಯ ಉತ್ಪನ್ನವಾಗಿ ಅತನಿಗೆ ಮಾನವರೂಪ ಪ್ರಾಪ್ತವಾಯಿತು.

ಇದರ ನಂತರ ದೃಶ್ಯದೊಳಗಿನ ಕ್ರಿಯೆಗಳು ವಿರುದ್ಧರೀತಿಯಿಂದ ಸಾಗು ಆದವು. ಆನಂದಮಯ ಕೋಶದ ದ್ವಾರವು ಮುಚ್ಚಲ್ಪಟ್ಟು ನಾನು ವಾಸನಾ ದೇಹಕ್ಕೆ ತಿರುಗಿಬಂದೆನು. ಯಾವಾಕೆಯ ಪ್ರೇತಯಾತ್ರೆಗೆ ನಾನು ಬಂದಿದ್ದೆನೋ, ಆ ವೃದ್ಧಸ್ತ್ರೀಯು ಪುನಹಾ ತಿನ್ನುತ್ತಿರುವದನ್ನು ನಾನು ಕಂಡೆ. ಅನಂತರ ಆ ದ್ವಾರವು ಮುಚ್ಚಲ್ಪಟ್ಟು ವ ಪ್ರಾಣಮಯ ಕೋಶದಲ್ಲಿ ಪ್ರವೇಶವಾಗಿ, ಎಲ್ಲ ಎಲುವು, ನಾಡಿಗಳು ವ ನರಗಳು ಕಾಣಹತ್ತಿದವು, ಕಡೆಗೆ ಸ್ಥೂಲಶರೀರದ ಚರ್ಮಕಾಣಿಸಲಿಕ್ಕೆ ಹತ್ತಿತು. ಅಂದರೆ ಮೊದಲನೇ ಪಾರ್ಥಿವ (ಪೃಥ್ವಿ ಸಂಬಂಧದ) ಶರೀರದಿಂದ ಅಂದರೆ ಅನ್ನಮಯ ವಗೈರೆ ಕೋಶಗಳಿಂದ ಆನಂದ ಮಯಕೋಶದತನಕ ಹೋಗಿ ತಿರುಗಿ ಅನ್ನಮಯ ಕೋಶದೊಳಗೆ ಬಂದೆನು.

(ಸಹಿ) ಡಿ. ಡಿ. ಭಾವೆ

(೯)

ಶ್ರೀ ವಿಷ್ಣು ಸಂತ ಚಾಫೇಕರ, ಸೇವಾನಿವೃತ್ತ ಪೋಲಿಸ, ನಾಶಿಕ ಕೋರ್ಟ, ಇವರ ಅನುಭವ:—

ನಾನು ವೈದಿಕ ಪರಂಪರೆಯ ಕರ್ಮ-ನಿಷ್ಠ ಬ್ರಾಹ್ಮಣನಿದ್ದೇನೆ. ಇತರೆ ವ್ಯವಹಾರಿ ಜನರಂತೆ ನಾನು ಕೀರ್ತನ, ಪುರಾಣ, ವೇದಾಂತಶ್ರವಣ ಮಾಡುತ್ತಿದ್ದೆ. ಆದರೆ ಮನಸ್ಸಿಗೆ ಶಾಂತಿ ಇದ್ದಿಲ್ಲ. ಗಾಯತ್ರಿಮಂತ್ರದ ಜಪ ವ ದ್ವಾದಶಾಕ್ಷರಿ ವಾಸುದೇವ ಮಂತ್ರದ ಜಪ ಇಪ್ಪತ್ತೈದು ವರ್ಷಗಳಿಂದ ಚಾಲು ಇದ್ದರೂ ಮನಸ್ಸಿಗೆ ಸಮಾಧಾನವಿಲ್ಲ; ಆದರೆ ಮನಸ್ಸಿಗೆ ಅನ್ನಿಸುತ್ತಿತ್ತಲ್ಲ. ಯಾರಾದರೂ ಖರೆ ಸಂತರು ಭೆಟ್ಟಿಯಾದರೆ ಮನಸ್ಸು ಶಾಂತವಾಗಿ ನರದೇಹದ ಸಾರ್ಥಕವಾದೀತು. ಮುಂದೆ ನಾನು ಸಿನ್ನರ ಎಂಬಲ್ಲಿರುವಾಗ ಕೋಪರಗಾಂವದ ಅಮೃತನಾಥ ಉರ್ಫ ಬಾಬಾಮಹಾರಾಜರ ನನಗೆ ಭೆಟ್ಟಿಯಾಯಿತು. ಅವರು ನನಗೆ ಪರಮಾರ್ಥದ ಉಪದೇಶವನ್ನು ಮಾಡಿ, ನನ್ನ ನಿತ್ಯಕರ್ಮವನ್ನು ನಡಿಸುತ್ತಿರಲಿಕ್ಕೆ ಪ್ರೋತ್ಸಾಹಿಸಿದರು. ಆದರೆ ಹನ್ನೆರಡು ವರ್ಷಗಳಾದರೂ ಮನಸ್ಸಿನ ತಳಮಳ ನಿಂತು ಮನಸ್ಸು ಶಾಂತವಾಗಲಾರದು, ಮತ್ತು ಅನುಭವವೂ ಬರಲಿಲ್ಲ, ಎಂದು ನಾನು ಅವರ ಕಡೆ ಆಗಾಗ್ಗೆ ಹೋಗುತ್ತಿದ್ದೆ. ಒಂದುದಿನ ನಾನು ಅವರಿಗೆ ವಿನಂತಿ ಮಾಡಿದೆನು. "ಇಷ್ಟು ವರ್ಷತನಕ ನಾನು ನಿಮ್ಮ ಹೇಳಿಕೆ ಮೇರೆಗೆ ನಡೆಯುತ್ತಿದ್ದರೂ ಇಲ್ಲಿತನಕ ಏನೂ ಅನುಭವ ಸಿಗಲಿಲ್ಲ. ಆದ್ದರಿಂದ ನೀವು ನನ್ನಮೇಲೆ ಕೃಪಾದೃಷ್ಟಿ ಇಡಿರಿ." ಅವರು ಶಾಂತರೀತಿಯಿಂದ ಕೇಳಿಕೊಂಡು, ನನಗೆ ಹೇಳಿದರು. ನಿನ್ನ ಭೂಮಿಕೆಯು ತಯಾರಾಗಿದೆ, ನಿನಗೆ ಬೇಗನೆ ಅನುಭವಿ ಸಂತನು ಭೆಟ್ಟಿಯಾಗಿ ನಿನ್ನ ದೇಹದ ಸಾರ್ಥಕವಾ

ದೀಕ್ಷು. ಇದರ ಹೊರ್ತು ನನ್ನ ಗಡಿಗೆಯಲ್ಲಿ ನಿನ್ನದೇನೂ ಇಲ್ಲ, ಅಂದರೆ ನಾನು ನಿನ್ನ ಸಾಲವೇನೂ ಕೊಡುವದು ಬಾಕಿ ಇಲ್ಲ. ನಿನಗೆ ಯಾವ ಸದ್ಗುರು ಶಿಕ್ಷಿಸುವನು ಅವನು ಸ್ವಾನುಭವಿ ಮತ್ತು ಸಾಕ್ಷಾತ್ಕಾರಿ ಸಿಗುವನು. ಆತನ ಬಾಹ್ಯವರ್ತನದ ವಿಚಾರ ಮಾಡಿ, ನೀನು ನಿನ್ನ ಲುಕಸಾನ ಮಾಡಿಕೊಳ್ಳಬೇಡ ವ ಅವನ ಉಪದೇಶವನ್ನು ತಕ್ಕೊಂಡದ್ದಕ್ಕೆ ಜನರು ನಿಂದಿಸಿದರೂ ಅದರ ಸಲುವಾಗಿ ಚಿಂತೆ ಮಾಡಬೇಡ, ಆ ಉಪದೇಶವು ನನ್ನದೇ ಎಂದು ತಿಳಿದು ವರ್ತಿಸು !

ಅವರು ಈ ಪ್ರಕಾರ ಹೇಳಿದ ಮೇಲೆ, ಆ ಗುರು ಯಾವಾಗ್ಗೆ ಭೆಟ್ಟಿಯಾದಾನು ಎಂಬ ಮಾರ್ಗ ಪ್ರತೀಕ್ಷ ಮಾಡುತ್ತಿದ್ದೆ. ನನ್ನ ನಿತ್ಯಕ್ರಮವನ್ನು ನಾನು ಚಾಲು ಇಟ್ಟಿದ್ದೆ. ಈ ಸಂಗತಿ ನಡೆದು ೪-೫ ವರ್ಷಗಳಾದವು ಇದರ ನಂತರ ನಾನು ನಾಶಿಕಕ್ಕೆ ಬದಲಿಯಾಗಿ ಬಂದೆನು. ಅಲ್ಲಿ ಬಂದಮೇಲೆ ನನಗೆ ತಿಳಿಯಿತು, ಶ್ರೀಗಜಾನನ ಮಹಾರಾಜ ಗುಪ್ತೆ ಈ ಹೆಸರಿನ ಒಬ್ಬ ಧ್ಯಾನಯೋಗಿಗಳು ನಾಶಿಕಕ್ಕೆ ಬಂದಿರುತ್ತಾರೆ. ಅವರ ದರ್ಶನ ತಕ್ಕೊಳ್ಳಲಿಕ್ಕೆ ನಾನು ನಾಲ್ಕೈದುಸಾರಿ ಪ್ರಯತ್ನ ಮಾಡಿದೆನು. ಆದರೆ ಅವರು ನನಗೆ ಬೈದು ಕಳುಹಿಸಿ ಬಿಟ್ಟರು. ಅವರ ಮುದ್ರೆಯ ಮೇಲಿಂದ ಅವರು ಉನ್ಮಾದ ಸ್ಥಿತಿಯಲ್ಲಿ ಇರುತ್ತಾರೆಂತ ನಾನು ತಿಳಕೊಂಡೆ. ಮುಂದೆ ೧೯೩೩ ಸಾಲಿನ ಮಾರ್ಗಶಿರ್ಷ ಮಾಸದಲ್ಲಿ ದತ್ತಜಯಂತಿ ದಿವಸ ನಾನು ಹೋಗಿ ಒಮ್ಮಿಂದೊಮ್ಮೆ ಅವರ ಪಾದಗಳನ್ನು ಹಿಡಕೊಂಡೆ, ಮತ್ತು ವಿನಂತಿ ಮಾಡಿದೆನಲ್ಲ, " ನಾನು ನನ್ನ ಆಯುಷ್ಯದ ಅಸ್ತಕಾಲದಲ್ಲಿದ್ದೇನೆ, ಅಂತ ಈ ಮನುಷ್ಯ ಜನ್ಮದ ಸಾರ್ಥಕವಾಗಬೇಕೆಂದು ಪ್ರಬಲ ಇಚ್ಛೆಯನ್ನು ಹಿಡಿದು ನಾನು ತಮ್ಮ ಕಡೆಗೆ ಬಂದಿರುವೆನು. ಹಾಗಾದರೆ ತಾವು ನನಗೆ 'ಉದ್ಧರಿಸಿರಿ ಅಥವಾ ನಾಶಿಸಿರಿ' ಹೀಗೆಂದಮೇಲೆ ಅವರು ಪ್ರೇಮದಿಂದ ಎಬ್ಬಿಸಿ ನನ್ನ ಸಮಾಧಾನ ಮಾಡಿದರು, ನಂತರ ನಾನು ಅವರ ಕಡೆ ನಿತ್ಯಹೋಗಿ ತಾಸು ಎರಡು ತಾಸು ಅವರ ಉಪದೇಶವನ್ನು ಕೇಳುತ್ತಿದ್ದೆ. ಮುಂದೆ ಹದಿನೈದು ದಿನಗಳ ಮೇಲೆ ಅವರು ನನಗೆ ಹೇಳಿದರು, 'ರಾತ್ರಿಕಾಲದಲ್ಲಿ ಕತ್ತಲೆಯಲ್ಲಿ ಕೂತು ಮನಸ್ಸು ಶಾಂತಮಾಡುವ ಯತ್ನಮಾಡು' ಹೀಗೆ ನಾಲ್ಕೈದು ದಿನ ಮಾಡಿದ ನಂತರ ಅವರ ಕೃಪೆಯಿಂದ ಮನಸ್ಸು ಶಾಂತವಾಯಿತು. ಮುಂದೆ ಏಳೆಂಟು ದಿನಗಳ ಮೇಲೆ ಒಂದುದಿನ ಬೆಳಗ್ಗೆ ನಾನು ಅವರ ಕಡೆ ಹೋಗಿರುವಾಗ ಅವರು ನನಗೆ ಸಮೀಪ ಕೂಡ್ರಿಸಿಕೊಂಡು ನನ್ನ ಕಿವಿಯಲ್ಲಿ 'ಸೋಹಂ' ದ ಮಂತ್ರ ಹೇಳಿದರು, ಮತ್ತು ನನ್ನ ತಲೆಯ ಟೊಪ್ಪಿಗೆ ತೆಗೆದು ... ತಲೆಯಮೇಲೆ ಹಸ್ತ ಇಟ್ಟರು. ಅವರು ನನ್ನನ್ನು ತಮ್ಮ ಎದುರಿಗೆ ಒಂದು
ಹೊರ್ತು ನಂತರ ಕೂಡ್ರಿಸಿಕೊಂಡು, ಮುಖದಿಂದ ಶಬ್ದ ಉಚ್ಚರಿಸದೆ ಒಳಗಿಂದೊಳಗೆ
ಘಂಟೆ ಹಿಂದೆ, ಆ ...ನನ್ನು ಅವರು ನನ್ನ ಕಡೆಯಿಂದ ಮಾಡಿಸಿಕೊಂಡರು. ನಾನು
ಶ್ರೀಯುಕ್ತವಾಗ್ಗೆ ನನ್ನ ಕಣ್ಣುಗಳು ತಮ್ಮಷ್ಟಕ್ಕೆ ಮುಚ್ಚಿದವು,
ಕಡೆಗೆ ಸಚ್ಚಿದಾನಂದ
ಚೈತನ್ಯ ಉತ್ಪನ್ನವಾಗಿ

ಮತ್ತು ನನ್ನ ಅಂತರ್ದೃಷ್ಟಿಯ ಮುಂದೆ ನನಗೆ ದೊಡ್ಡ ಪ್ರಕಾಶವು ಕಾಣಿಸಿತು. ಮುಂದೆ ನಾನು ದೇಹಭಾನಕ್ಕೆ ಬಂದಮೇಲೆ ಇದನ್ನು ನಾನು ಮಹಾರಾಜರಿಗೆ ಹೇಳಿದೆ. ಅದಕ್ಕವರೆಂದರು, ' ನಿತ್ಯದ ನಿನ್ನ ಬ್ರಹ್ಮಕರ್ಮವು ಹ್ಯಾಗೆ ನಡೆದಿತ್ತೊ ಹಾಗೆಯೇ ನಡಿಯಲಿ ಬಿಡಬೇಡ. ನಿನ್ನ ಗುರು ಕೋಪರಗಾಂವಕರ ಇವರದು ನನಗೆ ಗುರ್ತ ಅದೆ. ಅವರು ನಿನಗೆ ಮಂತ್ರಕೊಟ್ಟಿದ್ದಾರೆ. ಅದನ್ನು ಬಿಟ್ಟುಬಿಡಬೇಡ. ಎಲ್ಲ ಕರ್ಮಗಳು ತೀರಿದ ಮೇಲೆ ' ಸೋಹಂ ' ದ ಜಪ ಅಖಂಡವಾಗಿ ಅಂತರಂಗದಲ್ಲಿಯೇ ಮಾಡು ” ಹೀಗೆ ಹೇಳಿದ್ದು ಕೇಳಿದ ಮೇಲೆ ನಾನು ಅವರ ಪಾದಕ್ಕೆ ತಲೆ ಸ್ಪರ್ಶಿಸಿ ಹೋಗಲಿಕ್ಕೆ ಹೊರಟೆನು. ಆದರೆ ಮಹಾರಾಜರು ಪುನಹಾ ಕೂಡ್ರಲಿಕ್ಕೆ ಹೇಳಿದರು. ಕೂತಕೂಡಲೆ ಏಕಾಗ್ರತೆ ಆಯಿತು, ಮತ್ತು ಒಂದು ದೊಡ್ಡ ಚಂಡುವಿನಂಥ ಗೋಲವಸ್ತು ಕಾಣಿಸಿತು, ಮತ್ತು ಅದು ಒಡೆದು ಅದರೊಳಗಿಂದು ಹನ್ನೆರಡುಸಲ ತೋಫಿನ ಶಬ್ದದಂತೆ ಒಂದರ ಹಿಂದೆ ಒಂದು ಗುಡುಗಿನಂತೆ ಕೇಳಿಸಿತು, ಮತ್ತು ಅದರೊಳಗಿಂದ ದೇದೀಪ್ಯಮಾನ ಪ್ರಕಾಶ ಕಾಣಿಸಲಾರಂಭವಾಯಿತು. “ ನೀನು ಅಂಜಬೇಡ ” ಎಂದು ಯಾರೊ ಒಳಗಿನಿಂದ ಹೇಳಿದಂತೆ ಅನಿಸಿತು. ಸ್ವಲ್ಪ ಹೊತ್ತಿನ ಮೇಲೆ ನಾನು ದೇಹಭಾನಕ್ಕೆ ಬಂದಮೇಲೆ ನನಗೆ ಅತ್ಯಾನಂದವಾಯಿತು. ಎಲ್ಲ ತಳಮಳವು ಇಲ್ಲದಂತಾಯಿತು. ಮಹಾರಾಜರ ಅನುಗ್ರಹವಾದಮೇಲೆ 'ಸೋಹಂ' ಜಪವು ಅಂತರ್ಯಾದಲ್ಲಿ ತನ್ನಷ್ಟಕ್ಕೆ ತಾನೆ ಆಗಲಾರಂಭಿಸಿತು.

ಒಂದು ತಿಂಗಳಾದಮೇಲೆ ದೃಶ್ಯಗಳು ಕಾಣಿಸಲಿಕ್ಕೆ ಆರಂಭವಾಯಿತು. ತೇಜೋವಲಯದೊಳಗೆ ಸರ್ವದೇವತೆಗಳು ಕಾಣಿಸುತ್ತಿದ್ದವು ನದಿಗಳು ಸಮುದ್ರ ಶ್ವಾಪದಗಳು, ನಾನಾ ಪ್ರಕಾರದ ದೇವಾಲಯಗಳು, ತೋಟಗಳು, ವನೋಪವನಗಳು, ಋಷಿಮುನಿಗಳು ಇವೆಲ್ಲ ಸಿನೆಮಾ ಫಿಲ್ಮದಂತೆ ಕಣ್ಣು ಮುಂದೆ ತೇಜೋವಲಯದಲ್ಲಿ ತೋರಿ ಅಡಗುವವು. ನನ್ನಮೇಲೆ ಮಹಾರಾಜರ ಅನುಗ್ರಹ ಆದಮೇಲೆ, ಒಂದು ವರ್ಷದಲ್ಲಿ ಕೋಪರಗಾಂವ ಮಹಾರಾಜರು ನನ್ನ ಕಡೆಗೆ ಬಂದರು, ಅವರನ್ನು ನೋಡಿದ ಕೂಡಲೆ ನನಗೆ ಆನಂದದ ಏರಿಕೆ ಬಂತು ಮತ್ತು ನಾನು ಅವರ ಪಾದದ ಮೇಲೆ ಮಸ್ತಕವನ್ನಿಟ್ಟೆನು. ಅವರ ಕೃಪೆಯಿಂದಲೆ ನನಗೆ ನನ್ನ ಮನಸ್ಸಿನ ತಕ್ಕ ಸದ್ಗುರು ಭೆಟ್ಟಿಯಾದರು. ಆದರ ಸಾದ್ಯಂತ ವರ್ಣನೆಯನ್ನು ನಾನು ಅವರ ಮುಂದೆ ಮಾಡಿದೆನು. ಅದನ್ನು ಕೇಳಿ ಅವರಿಗೂ ಬಹಳ ಆನಂದವಾಯಿತು: “ ನನ್ನನ್ನು ಆ ಮಹಾರಾಜರಕಡೆ ಕರಕೊಂಡು ಹೋಗು ” ಎಂದು ಅವರು ಹೇಳಿದರು. ಅವರನ್ನು ಶ್ರೀಗಜಾನನ ಮಹಾರಾಜರಕಡೆ ಕರಕೊಂಡು ಹೋದೆನು.

ಇಬ್ಬರು ಮಹಾರಾಜರು ಅತ್ಯಂತ ಪ್ರೇಮದಿಂದ ಒಬ್ಬರಿಗೊಬ್ಬರು ಭೆಟ್ಟಿಯಾದರು ಕೋಪರಗಾಂವಕರ ಮಹಾರಾಜರು, ಗಜಾನನ ಮಹಾರಾಜರಿಗೆ

ಹೇಳಿದರು, "ಈ ಹುಡುಗನಿಗೆ ನಿಮ್ಮ ಪದರಿನಲ್ಲಿ ಹಾಕಿರುತ್ತದೆ." ಆಗ ಗಜಾನನ ಮಹಾರಾಜರೆಂದರು, "ತಾವು ನನಗೆ ಸಾಮರ್ಥ್ಯ ಕೊಟ್ಟಮೇಲೆ ನಾನು ಏನು ಮಾಡಲಶಕ್ಯವಾದೀತು? ತಮ್ಮ ಕೃಪೆಯಾಗಬೇಕು ನಾನು ತಮ್ಮ ಪಾದದ ದಾಸನಿದ್ದೇನೆ."

ಒಂದುದಿನ ಸಂಜೆ ಹೊತ್ತಿಗೆ ನಾನು ಗಂಗೆಯಲ್ಲಿ ಸಂಧ್ಯಾವಂದನಕ್ಕೆ ಹೋಗದೆ ಮಹಾರಾಜರ ಕಡೆಗೆ ಹೋದೆನು. ಆಗ ಅವರು ನನಗೆ ಕೇಳಿದರು "ಸಂಧ್ಯಾವಂದನೆ ಮಾಡಿ ಸೂರ್ಯನಿಗೆ ಅರ್ಘ್ಯಕೊಡುವದನ್ನು ಬಿಟ್ಟು ಇಲ್ಲಿ ಯಾಕೆ ಬಂದಿರಿ?" ನಾನಂದೆ, "ತಮ್ಮ ಪ್ರೇರಣೆಯಿಂದ." ಅವರು ನನಗಂದರು, "ಏನೂ ಮನಸ್ಸಿನಲ್ಲಿ ತರಬೇಡ, ಮನೆಗೆ ಹೋಗಿ ಸ್ವಸ್ಥ ಸಂಧ್ಯಾ ಮಾಡಿರಿ." ಆ ಪ್ರಕಾರ ಮನೆಗೆ ಹೋಗಿ ಸಂಧ್ಯಾ ವ ಫಳಾರ ಆದಮೇಲೆ ನಿತ್ಯದ ಧ್ಯಾನದ ಅಭ್ಯಾಸಕ್ಕೆ ಕೂತುಕೊಂಡಿರುವಾಗ ಧ್ಯಾನದಲ್ಲಿ ದಿವಸದಂತೆ ರಾತ್ರಿ ಅಂಧಕಾರದಲ್ಲಿ ಸೂರ್ಯದರ್ಶನವಾಯಿತು. ಮರುದಿನ ಮಹಾರಾಜರಿಗೆ ಈ ವರ್ತಮಾನವನ್ನು ಹೇಳಿದಾಗ ಅವರಂದರು, "ಜ್ಞಾನಸೂರ್ಯನ ಉದಯವಾದ್ದರಿಂದ, ಸೂರ್ಯ ಚಂದ್ರ, ನಕ್ಷತ್ರಗಳು ನಿನಗೆ ಯಾವಾಗಲಾದರೂ ಕಾಣಿಸುವವು;" ಆ ಪ್ರಕಾರ ನಾನು ಅನುಭವ ತಕ್ಕೊಳ್ಳುತ್ತಿದ್ದೇನೆ.

ಮತ್ತೊಂದು ಪ್ರಸಂಗದಲ್ಲಿ ನನಗೆ ಅಂದರು, 'ಸೋಹಂ'ದ ಉಚ್ಚಾರ ತೀರಾ ಮೆಲ್ಲಗೆ ಮಾಡಿ, ಅದನ್ನೆ ಅತಿಶಯ ದೊಡ್ಡಧ್ವನಿಯಿಂದ ಪುನಹಾ ಮಾಡು. ಹಾಗೆ ಮಾಡುತ್ತಿರುವಾಗ ನನ್ನ ಬರೋಬರಿಯಿಂದ ಮತ್ಯಾರೊ ಹಾಗೆ ಮಾಡುತ್ತಾರೊ ಎಂಬಂತೆ ತಿಳಿದು, ಅದೇ ನಾದದಲ್ಲಿ ಮಗ್ನನಾಗಿ, ಆನಂದದಲ್ಲಿದ್ದೆ. ಆ ಸಮಯದಲ್ಲಿ ಗಂಗೆಯ ಮೇಲೆ ಕೂತಿರುವಾಗ, ನೀರು ಏರುತ್ತ ಬಂದು ನನ್ನ ಧೋತ್ರ ಒದ್ದೆಯಾಯಿತು. ನನ್ನ ಅತ್ತಿತ್ತ ಕೂತ ಜನರು ಒದರಾಡಲಿಕ್ಕೆ ಹತ್ತಿದರು. ಆಗ ನಾನು ದೇಹಭಾನಕ್ಕೆ ಬಂದೆ. ನಾನು ಧ್ಯಾನದಲ್ಲಿ ಸದ್ಗುರು ಮಹಾರಾಜರ ಮೈಮೇಲಿನ ಉಡಿಗೆ ವ ಆನಂದದಾಯಕ ಅವರ ರೂಪು ನೋಡು ವದರಲ್ಲಿ ಮತ್ತು ಪೂಜೆ ಮಾಡುವದರಲ್ಲಿ ಮಗ್ನನಾಗಿದ್ದೆ. ಅಲ್ಲಿಂದ ಎದ್ದಮೇಲೆ ಅವಸರದಿಂದ ಮಹಾರಾಜರ ಕಡೆ ಹೋದೆ, ಮತ್ತು ಅವರಿಗೆ ಸರ್ವಪ್ರಕಾರವನ್ನು ನಿವೇದನ ಮಾಡಿದೆ. ನೋಡಿದರೆ ಯಾವ ಉಡಿಗೆಯನ್ನು ನಾನು ಮಹಾರಾಜರ ಮೈಮೇಲೆ ಕಂಡಿದ್ದನೋ ಅದನ್ನೆ ನಾನು ಅಲ್ಲಿ ಗೂಟದಮೇಲೆ ಕಂಡೆ. "ಇದು ಹ್ಯಾಗಾಯಿತು?" ಎಂದು ನಾನು ಮಹಾರಾಜರಿಗೆ ಕೇಳಿದಾಗ್ಗೆ "ನಿನ್ನ ಪರೀಕ್ಷೆ ನೋಡಿದೆ" ಎಂದು ಹೇಳಿದರು.

ಇದೇ ಪ್ರಕಾರ ಸತತ ಬೇರೆ ಬೇರೆ ದೃಶ್ಯಗಳು ಕಾಣಿಸುತ್ತಿರುವವು, ನಾದವೂ ಕೇಳಿಸುತ್ತದೆ, ಮತ್ತು ಆ ಆನಂದದೊಳಗೆ ತಾಸು ತಾಸುಗಳೆ ಹೋಗು

ತ್ತಿದ್ದವು. ಅದರ ಪರಿಣಾಮವೆಂದರೆ ಮನೆಯೊಳಗಿನ ಚಿಂತೆ ಕೊಂದರೆ ವಗೈರೆ ವ್ಯವಹಾರಿಕ ಸಂಗತಿಗಳ ಕಡೆಗೆ ಲಕ್ಷ್ಯ ಕಡಿಮೆಯಾಗಿ ಮನಸ್ಸಿಗೆ ಸರ್ವದಾ ಪ್ರಸನ್ನತೆ ಇರುವದು. ಯಾವದು ಬೇಕಾಗಿತ್ತೊ ಅದೆ ಇದು.

ಆತ್ಯಂತಿಕ ಸುಖದುಃಖನಿವೃತ್ತಿಯು ಇದು ಗುರು-ಉಪದೇಶದ ವಿನಹಾ ಸಿಗುವದು ಅಶಕ್ಯವು.

( ಸಹಿ ) ವಿಷ್ಣುಪಂತ ಚಾಫೇಕರ

( ೧೦ )

ಶ್ರೀ. ಮಧುಕರ ದಾಮೋದರ ಚಿಟಣಿಸ, ಸೆಂಟ ಜೊರ್ಜ ಸ್ಕೂಲ, ನಾಶಿಕ, ಇಲ್ಲಿಯ ಒಬ್ಬ ವಿದ್ಯಾರ್ಥಿ, ಇವರ ಅನುಭವಗಳು :—

ನನ್ನ ಜನ್ಮವು ನಾಶಿಕದಲ್ಲಿ ಆಯಿತು. ನನ್ನ ತಂದೆಯವರ ಮತ್ತು ರಾ. ಭಿಸೆ ಇವರ ಪೂರ್ವದಿಂದ ಪರಿಚಯವು. ಆವರಲ್ಲಿಯೆ ಗಜಾನನ ಮಹಾರಾಜರು ನಾಶಿಕದಲ್ಲಿರುತ್ತಾರೆ. ಯಾವಕಾಲದ ಸಮಾಚಾರವನ್ನು ನಾನು ಬರಿಯುತ್ತೇನೊ ಆಗ್ಗೆ ನಾನು ಆರು ಅಥವಾ ಏಳು ವರ್ಷದವನಿದ್ದೆ. ನನ್ನ ತಂದೆಯವರು ಶ್ರೀಗಜಾನನ ಮಹಾರಾಜರ ಕಡೆ ಭಿಸೆಯವರ ಮನೆಗೆ ನಡನಡುವೆ ಹೋಗುತ್ತಿದ್ದರು. ಆದರೆ ಈ ಮಹಾರಾಜರು ಯೋಗಿ ಇದ್ದಾರೆಂಬದು ಅವರು ವಿಶ್ವಸಪಡುತ್ತಿದ್ದಿಲ್ಲ. ಯಾಕೆಂದರೆ ಅವರ ವರ್ತನದಲ್ಲಿ ಸಾಧುತ್ವದ ಲಕ್ಷಣಗಳು ಕಾಣಸುತ್ತಿದ್ದಿಲ್ಲ.

ಒಬ್ಬ ಸಾಮಾನ್ಯ ಮನುಷ್ಯನಂತೆ ಉಡಿಗೆ, ಮಾತು, ನಡಿಗೆ ತೀರಾ ಸಾಮಾನ್ಯ ಚೇಷ್ಟೆ ವಿನೋದಗಳನ್ನು ಮಾಡುವದು, ಈ ಪ್ರಕಾರ ಅವರ ವರ್ತನವಿತ್ತು. ಒಮ್ಮೊಮ್ಮೆ ಚಿತ್ತಕ್ಕೆ ಬಂತೆಂದರೆ ಬೈಗಳು ಬರುತ್ತಿದ್ದವು. ಇದಲ್ಲದೆ ಅವರಾದರೂ ಯಾರಿಗೂ ತನ್ನ ಸಮೀಪ ಕೂಡ್ರಗೊಡುತ್ತಿದ್ದಿಲ್ಲ.

ಮುಂದೆ ಕೆಲವು ದಿನಗಳ ಮೇಲೆ ನಸುಕಿನವೇಳೆಗೆ ನನ್ನ ತಂದೆಯವರಿಗೆ ಹೀಗೆ ಒಂದು ದೃಷ್ಟಾಂತವಾಯಿತು, " ಅಪ್ಪಾ, ಅವನು ಸತ್ಪುರುಷನಿದ್ದಾನೆ. ಅವನ ಅನುಗ್ರಹವನ್ನು ತೆಗೆದುಕೊ, ಮತ್ತು ಕೃತಾರ್ಥನಾಗು, ಈ ಸಂಧಿಯನ್ನು ಬಿಡಬೇಡ. " ಹೀಗೆ ಸ್ಪಷ್ಟ ಧ್ವನಿಯಿಂದ ದೃಷ್ಟಾಂತವಾದದ್ದು ಕೇಳಿ, ನನ್ನ ತಂದೆಯವರಿಗೆ ಬಹಳ ಆನಂದವಾಯಿತು. ಅವರು ಸ್ನಾನಮಾಡಿ ನಮ್ಮೆಲ್ಲರನ್ನೂ ಸಂಗಡ ಕರೆಕೊಂಡು ಗಜಾನನ ಮಹಾರಾಜರಕಡೆ ಹೋದರು. ಅಲ್ಲಿ ಹೋಗಿ ನೋಡಿದರೆ, ಅವರು ಒಂದು ಮಂಚದಮೇಲೆ ಮಲಗಿದ್ದರು. ನಾವೆಲ್ಲರೂ ಅವರಿಗೆ

ನಮಸ್ಕಾರ ಮಾಡಿದೆವು. ಆದಕ್ಕೆ ಅವರು ಒದರಿ ಹೇಳಿದರು, “ ನಾನು ಮಹಾರಾಜನಲ್ಲ, ನಾನು ಸಾಧು ಅಲ್ಲ, ಭೋಂದುವೂ ಅಲ್ಲ. ನಿಮ್ಮಂಥ ಒಬ್ಬ ಸಾಮಾನ್ಯ ಮನುಷ್ಯನಿದ್ದೇನೆ. ಇಂಥ ನಿಮ್ಮ ಹುಚ್ಚು ರೀತಿಗಳು ನನಗೆ ಸೇರು ವದಿಲ್ಲ.” ಹೀಗೆ ಅವರೆಂದರು ಮತ್ತು ನಮಗೆ ಹೋಗಲಿಕ್ಕೆ ಅಜ್ಞೆಕೊಟ್ಟರು. ಆದರೆ ನಮ್ಮ ತಂದೆಯುವರು ಪುನಹಾ ಅವರ ಕಡೆಗೆ ಹೋಗಿ, ಅವರ ಮನಸ್ಸಿಗೆ ಸಮಾಧಾನ ಮಾಡಿದರು. ಆ ಮೇಲೆ ಒಂದು ಗುರುವಾರ ದಿವಸ ನಾವು ಬರ ಬೇಕೆಂದು ನಿರ್ಣಯವಾಯಿತು. “ ನನಗೆ ನನ್ನ ಸದ್ಗುರು ಹ್ಯಾಗೆ ಬುದ್ಧಿಕೊ ಡುವರೊ ಹಾಗೆ ಮಾಡುವೆನು, ” ಎಂದು ಅಂದರು. ಆ ಪ್ರಕಾರ ನಾನು ಮತ್ತು ತಂದೆಯುವರು ಎರಡನೇ ಗುರುವಾರವೇ ಹಾರ, ಕಾಯಿ, ಒಂದುರೂಪಾಯಿ ದಕ್ಷಿಣೆ ತೆಕ್ಕೊಂಡು ಗಜಾನನ ಮಹಾರಾಜರ ಕಡೆ ಹೋದೆವು. ತಂದೆಯುವರು ಮಹಾ-ರಾಜರ ಕಡೆಯಿಂದ ಉಪದೇಶವನ್ನು ತಕ್ಕೊಂಡರು. ಮತ್ತು ಪೂಜೆ ಸಾಮಾನು ರೂಪಾಯಿ ಕೂಡ ಅವರು ನನ್ನ ತಂದೆಯುವರಿಗೆ ತಿರಿಗಿಕೊಟ್ಟರು, ಮತ್ತು “ನಿಮ್ಮ ಮನೆ ದೇವರಿಗೆ ಅರ್ಪಿಸಿರಿ ” ಎಂದು ಹೇಳಿದರು; ಮತ್ತು ಅಂದರು, “ ಇನ್ನು ಪೂಜಾಅರ್ಚಾ ತಕ್ಕೊಳ್ಳುವದಕ್ಕೆ ನಾನು ಅಧಿಕಾರಿಯಾಗಲಿಲ್ಲ. ನಾನು ಸತ್ಪು ರುಷ ಅಥವಾ ಮಹಾರಾಜನಲ್ಲ. ಆದರೆ ನಿಮ್ಮದು ನಮ್ಮದು ಏನೋ ಋಣಾ ನುಬಂಧವದೆ, ಅಂತ ನನ್ನ ಗುರುವು ಯಾವ ‘ಸೋಹಂ’ ಮಂತ್ರ ಕೊಟ್ಟಿದ್ದರೋ, ಅದನ್ನೇ ನಾನು ನಿಮಗೆ ನನ್ನ ಕರ್ತವ್ಯವೆಂದು ಹೇಳುತ್ತೇನೆ: ಯಾಕಂದರೆ ಸತ್ಪುರುಷರ ಮುಖದಿಂದ ಸಿದ್ಧವಾದ ಮಂತ್ರವದೆ, ಮತ್ತು ಅವರು ಸಾಕ್ಷಾತ್ಕಾರಿ ಸಂತರಿದ್ದದರಿಂದ ಅವರ ಮಂತ್ರದ ಸಾಮರ್ಥ್ಯದಿಂದ ಮನುಷ್ಯನು ಕೃತಾರ್ಥನಾ ಗಲಿಕ್ಕೇಬೇಕು.” ಮತ್ತು ಹೇಳಿದರು, “ ಶ್ರೀಕೃಷ್ಣನ ಧ್ಯಾನಮಾಡುತ್ತಿರು. ಬಾಹ್ಯಾತ್ಕಾರದಿಂದ ನನ್ನ ಪೂಜೆಯನ್ನು ಮಾಡದೆ, ಮಾನಸ ಪೂಜೆಯನ್ನು ಮಾಡು, ಅಂದರೆ ನನಗೆ ಮುಟ್ಟಿತು. ಇದರ ನಿಶ್ಚಯವಿರಲಿ.” ಹೀಗೆ ಹೇಳಿ ನಮಗೆ ಅಪ್ಪಣೆಕೊಟ್ಟರು. ಮಹಾರಾಜರು ತಿರಿಗಿಕೊಟ್ಟ ಪೂಜಾಸಹಿತ್ಯವನ್ನು ತೆಗೆದುಕೊಂಡು ನಾವು ಮನೆಗೆ ತಿರಿಗಿ ಬಂದೆವು. ಅನಂತರ ನಮ್ಮ ತಂದೆಯುವ ರಿಗೆ ಯೋಗಮಾರ್ಗದಲ್ಲಿ ಬಹಳ ಅನುಭವಗಳು ಬಂದವು. ಅವುಗಳ ಪೈಕಿ ಕೆಲ ವನ್ನು ಈ ಕೆಳಗೆ ಕೊಡುತ್ತೇನೆ,

ಎರಡೇ ತಿಂಗಳೊಳಗೆ ಅವರಿಗೆ ಭ್ರೂಮಧ್ಯದಲ್ಲಿ ಪ್ರಕಾಶ ಕಾಣಹತ್ತಿತು, ಆ ಪ್ರಕಾಶದೊಳಗೆ ಶ್ರೀಗಜಾನನ ಮಹಾರಾಜರು ಕೂತಿದ್ದರು, ಮತ್ತು ನನ್ನ ತಂದೆಯವರು ಅವರ ಪೂಜಾ ಮಾಡುತ್ತಿದ್ದರು, ಮತ್ತು ಅವರು ಪರಸ್ಪರ ಸಂಭಾ ಷಣ ಮಾಡುತ್ತಿದ್ದರು, ಎಂದು ಈ ಪ್ರಕಾರದ ದೃಶ್ಯವು ಅವರಿಗೆ ಧ್ಯಾನದಲ್ಲಿ ತೋರಿತು. ಮುಂದೆ ಶ್ರೀಗಜಾನನ ಮಹಾರಾಜರ ಸ್ಥಾನದಲ್ಲಿ ಅವರಿಗೆ ಎಲ್ಲ ದೇವತೆಗಳ ದರ್ಶನವಾಯಿತು. ಆದರೆ ಸಂಭಾಷಣ ಮಾತ್ರ ಶ್ರೀಗಜಾನನ

ಮಹಾರಾಜರ ಕೂಡ ಮಾತ್ರ ಆಗುತ್ತಿತ್ತು. ಅವರು ಧ್ಯಾನಕ್ಕೆ ಕೂತಿರುವಾಗ ಮನೆ ತುಂಬ ಸುಗಂಧ ಪಸರಿಸಿರುತ್ತದೆ.

ಮುಂದೆ ನಾನು ಹದಿನಾರು ಹದಿನೇಳು ವರ್ಷವಯಸ್ಸಿನವನಾದಮೇಲೆ, ತಂದೆಯವರ ಮುಖದಿಂದ ಅನುಭವ ಸಂಗತಿಗಳನ್ನು ಕೇಳಿ ನನಗೆ ಆಶ್ಚರ್ಯ ವಾಗುತ್ತಿತ್ತು. ಆದರೆ ನನಗೆ ಅವುಗಳ ಮೇಲೆ ಎಷ್ಟುಮಾತ್ರಕ್ಕೂ ವಿಶ್ವಾಸ ಕೂಡ್ರುತ್ತಿದ್ದಿಲ್ಲ. ಇಂಥ ಗುರುಗಳನ್ನು ಬಹಳ ನೋಡಿದ್ದೇನೆಂದು, ತಂದೆಯವರ ಅನುಭವಗಳ ಪರಿಹಾಸ್ಯ ಮಾಡುತ್ತಿದ್ದೆ, ಮತ್ತು ಮಹಾರಾಜರಿಗೆ ಬಹಳ ನಿಂದೆ ಮಾಡುತ್ತಿದ್ದೆ. ಆದರ ನಂತರ ನಮ್ಮ ತಂದೆಯವರ ಬದಲಿ ಬಹಳ ಕಡೆ ಆಯಿತು. ಆದರೆ ನನ್ನ ಶಿಕ್ಷಣವು ನಾಶಿಕದಲ್ಲಿಯೇ ನಡಿಯುತ್ತಿತ್ತು. ಆದರೂ ನಾನು ಮಹಾರಾಜರ ಕಡೆ ಎಂದೂ ಹೋಗಿದ್ದಿಲ್ಲ. ಅಷ್ಟೆ ಅಲ್ಲ, ಎಲ್ಲೆಲ್ಲಿ ಅವರ ಹೆಸರು ಹೊರಡುತ್ತಿತ್ತೋ ಅಲ್ಲಲ್ಲಿ ಅವರ ನಿಂದೆಯೇ ಮಾಡುತ್ತಿದ್ದೆ.

ಸನ್ ೧೯೩೨ ನೇ ಸಾಲಿನಲ್ಲಿ ನಾನು ಪೇಠಕ್ಕೆ ಹೋಗಿದ್ದೆ ಅಲ್ಲಿ ನನ್ನ ತಂದೆಯವರು ನೌಕರಿ ಮಾಡುತ್ತಿದ್ದರು. ಅಲ್ಲಿರುವಾಗ ಒಂದುದಿನ ನಾನು ಅರ್ಧ ಎಚ್ಚರವಿರುವಾಗ ಒಂದು ಪ್ರಕಾಶಮಯ ಗೋಲಕವು ದೂರದಿಂದ ನನ್ನ ಕಡೆಗೆ ಬರುವದನ್ನು ನೋಡಿದೆ, ಆ ಗೋಲಕದೊಳಗೆ ನಾನು ಸೇರಿದೆ, ಮತ್ತು ಅಲ್ಲಿ ಪ್ರಕಾಶವೇ ಪ್ರಕಾಶ ಕಾಣಹತ್ತಿತು. ನನ್ನ ಕಣ್ಣುಗಳು ತೆರೆದಿದ್ದು ನೆಟ್ಟಗೆ ಆ ಪ್ರಕಾಶದ ಕಡೆಗೆ ನೋಡುತ್ತ ಇದ್ದವು, ಮತ್ತು ಕಣ್ಣು ಮುಚ್ಚಿದರೂ ಸರ್ವತ್ರಪ್ರಕಾಶವೇ ಕಾಣಿಸುತ್ತಿತ್ತು. ಹೀಗೆ ನಿತ್ಯದಲ್ಲಿ ವರ್ಷಾನುವರ್ಷ ನನಗೆ ಕಾಣುತ್ತಿತ್ತು. ಆ ಮೂಲಕ ಕಪಾಲಶೂಲಿ ಸುರುವಾಯಿತು. ಮುಂದೆ ಕೆಲವು ಕಾಲ ನಿಂತುಹೋಯಿತು, ಮತ್ತು ಪುನಹಾ ೧೯೩೪ ರಲ್ಲಿ ಸುರುವಾಯಿತು, ಅದು ಅದ್ಯಾಪಿ ಚಾಲು ಇರುವದು. ಪ್ರಕಾಶದ ತೀಕ್ಷ್ಣತೆ ದಿನೇ ದಿನೇ ಹೆಚ್ಚಾಗುತ್ತ, ಅದರದು ನನಗೆ ಅತಿಶಯ ಬೇನೆಯಾಗಲಿಕ್ಕೆ ಹತ್ತಿತು, ಎಂದು ನೀರೊಳಗೆ ತಲೆಯನ್ನು ಮುಳುಗಿಸಿ ತಾಸುಗಟ್ಲೆ ನಾನು ಕೂಡ್ರುತ್ತಿದ್ದೆ. ಆ ತೊಂದರೆ ಇಷ್ಟಾಯಿತಲ್ಲ, ಒಮ್ಮೆ ನಾನು ತಲೆಯನ್ನು ಗೋಡೆಯ ಮೇಲೆ ಅಪ್ಪಳಿಸಿದೆ. ಆದರೆ ಪ್ರಕಾಶ ಇಲ್ಲದಂತಾದ ಕೂಡಲೆ ನನಗೆ ಖಿನ್ನತೆ ಆಗುತ್ತಿತ್ತು. ಇಂಥ ಮನಸ್ಸಿನ ಸ್ಥಿತಿಯಲ್ಲಿ ಎರಡು ವರ್ಷ ನಾನು ಬಹಳ ಕಷ್ಟದಿಂದ ಕಳದೆ. ನಾನು ಈಗ ೨೮–೨೯ ವರ್ಷದವನಿದ್ದೇನೆ. ಈ ತೊಂದರೆ ದೆಶೆಯಿಂದ ನನ್ನ ಲಕ್ಷವು ವಿದ್ಯಾಭ್ಯಾಸದ ಕಡೆ ಹೋಗವಲ್ಲದು. ಇನ್ನೂ ನಾನು ಇಂಗ್ರಜಿ ಐದನೇ ಇಯತ್ತೆಯಲ್ಲಿ ಇದ್ದೇನೆ. ಮುಂದೆ ಹೋಗಲಿಲ್ಲ.

೧೯೩೬ ನೇ ಇಸವಿ ವರ್ಷದಲ್ಲಿ ನನಗೆ ಸ್ವಯಂ ಸ್ಫೂರ್ತಿಯಾಯಿತಲ್ಲ, ಪದ್ಮಾಸನವನ್ನು ಹಾಕಿ ಪ್ರಾಣಾಯಾಮವನ್ನು ಸುರುಮಾಡಬೇಕು, ಆ ಪ್ರಕಾರ

ಮೋರೇಶ್ವರ ಸಾಸವಡಕರ ಸಬ್‌ರಜಿಸ್ಟರ ಧುಳೆ ಇವರು, ಅವರ ಸಂಬಂಧ ವರ್ತಮಾನವನ್ನೆಲ್ಲ ಗೊತ್ತುಮಾಡಿಕೊಂಡು ಅವರ ಯೋಗಮಾರ್ಗದೊಳಗಿನ ಅಭ್ಯಾಸವ ಅಧಿಕಾರ ಇವುಗಳ ವಿಷಯ ನನಗೆ ತಿಳಿಸಿದರು. ನನಗೆ ಹೀಗೆ ತಿಳಿದಲಾಗಾಯಿತು ಅವರ ಮೇಲೆ ಆಸ್ತಿಕ್ಯಭಾವವಿತ್ತು. ಆಯುಷ್ಯದೊಳಗಿನ ಅನೇಕ ಪ್ರಸಂಗಗಳಿಂದ ಮತ್ತು ಅನುಭವಗಳಿಂದ ಅದು ವೃದ್ಧಿಯಾಯಿತು.

ಸೇವಾ ನಿವೃತ್ತನಾದ ಮೇಲೆ ಉಳಿದ ಆಯುಷ್ಯದಲ್ಲಿ ಮನಸ್ಸಿನ ಸ್ವಾಸ್ಥ್ಯ ಹೊಂದುವ ದೆಶೆಯಿಂದ ನಿತ್ಯ ಸಂಜೆಹೊತ್ತಿಗೆ ನನ್ನ ಮಿತ್ರ ಸಾಸವಡಕರ ಇವರ ಕೂಡ ಅಡ್ಡಾಡಲಿಕ್ಕೆ ಹೋದಾಗ ವಿಚಾರವಿನಿಮಯ ಮಾಡಿ ಮತ್ತು ಶ್ರೀಮಹಾರಾಜರ ಇತರೆ ಮಂದಿಕೂಡ ಯೋಗ ಸಂಬಂಧಿ ಆದ ಭಾಷಣಗಳನ್ನು ಕೇಳಿ ಮತ್ತು ಅವರ ಸಹಜ ಚಮತ್ಕಾರಗಳನ್ನು ನೋಡಿ ನಾನು ಅವರ ಅನುಗ್ರಹವನ್ನು ಪಡೆಯಬೇಕೆಂದು ಠರಾಯಿಸಿದೆ.

ಆ ವರ್ಷದ ಮೊದಲನೇ ಶ್ರಾವಣ ಸೋಮವಾರ ದಿವಸ ಶ್ರೀಮಹಾರಾಜರನ್ನು ನಮ್ಮ ಮನೆಗೆ ಕರೆಸಿಕೊಂಡು, ಅವರಿಗೆ ಯಥೋಚಿತ ಸತ್ಕಾರ ಮಾಡಿ ಅವರ ಚರಣದಲ್ಲಿ ಮಸ್ತಕವನ್ನು ಇಟ್ಟೆನು; ಮತ್ತು ಅತಿ ನಮ್ರತ್ವದಿಂದ ಈಶ್ವರ ಮಾರ್ಗದ ಕಡೆ ನನ್ನನ್ನು ಹಚ್ಚಲಿಕ್ಕೆ ಪ್ರಾರ್ಥಿಸಿದೆನು. ಅವರು ನನಗೆ ಯಾವ ನಾಮದ ಪ್ರೀತಿ ಇದೆ ಎಂದು ಕೇಳಿದರು. "ಶ್ರೀರಾಮ" ಎಂದು ನಾನು ಹೇಳಿದೆ. ಮಹಾರಾಜರು ನನಗೆ ಅದೇ ನಾಮದ ಜಪವನ್ನು ಮುಂಜಾನೆ ಸಂಜೆಗೆ ಮಾಡುವ ಅಜ್ಞೆಯನ್ನು ಕೊಟ್ಟರು. ನಾನು ಆ ಪ್ರಕಾರ ಕೆಲವುಕಾಲ ಮಾಡಿದ ಮೇಲೆ, ಅವರು ನನಗೆ ಶ್ರೀವಿಷ್ಣುವಿನ ಚಿತ್ರ ಮುಂದಿಟ್ಟುಕೊಂಡು, ಅದರ ಮೇಲೆ ಲಕ್ಷ್ಯ ಇಡಲಿಕ್ಕೆ ಹೇಳಿದರು. ಈ ಪ್ರಕಾರ ನಾನು ಸುರುಮಾಡಿದಾಗ್ಗೆ ಚಿತ್ರದೊಳಗೆ ಮೂರ್ತಿಯಂತೆ ಕಾಣಿಸಿತು. ಮತ್ತು ಮೂರ್ತಿಯ ಕೈಗಳ ಚಲನವೂ ಕಾಣಿಸಿತು. ಜಪವು ಬಹಳ ಗಂಭೀರವಾಗಿ ಒಳಗೆ ನಡದದೆ ಎಂಬಂತೆ ತೋರಿತು

ಜಪದ ಅಭ್ಯಾಸವು ಬೆಳೆದ ಮೇಲೆ ನನ್ನ ಕಲ್ಪನೆಗಳು ಮೆಲ್ಲಮೆಲ್ಲಗೆ ಶುದ್ಧವಾಗಿ ಮನಸ್ಸಿಗೆ ಸ್ವಸ್ಥತೆ ಮತ್ತು ಶಾಂತತೆಯು ಪ್ರಾಪ್ತವಾಯಿತು. ಜಪವು ಒಳಗಿಂದ ಸುರು ಆದಮೇಲೆ, ಈಗ ವಿಷ್ಣುವಿನ ಚಿತ್ರದ ಕಡೆಗೆ ನೋಡುವದು ಕಾರಣವಿಲ್ಲ ಎಂದು ಮಹಾರಾಜರು ಹೇಳಿದರು ಮತ್ತು ರಾಮಜಪದ ಬದಲಿಗೆ 'ಸೋಹಂ' ಜಪವನ್ನು ಮಾಡಲಿಕ್ಕೆ ಆಜ್ಞಾ ಕೊಟ್ಟರು. ಆ ಪ್ರಕಾರ ಜಪವನ್ನು ಮಾಡುತ್ತಿದ್ದೇನೆ. ಈಗ ಅಜಪಾಜಪ ಹ್ಯಾಗಾಗುತ್ತದೆ, ಎಂಬದರ ಅನುಭವವು ಆಗಿ ಅದರೊಳಗೆ ಮನಸ್ಸಿನದೂ ಲಯವಾಗಲಿಕ್ಕೆ ಹತ್ತಿದೆ. ಶ್ರೀಸದ್ಗುರು ಕೃಪೆಯಿಂದ ಒಮ್ಮೊಮ್ಮೆ ಬಿಂದು ದರ್ಶನವೂ ಆಗುತ್ತದೆ, ನನ್ನ ಗುರುಬಂಧುವಿಗೆ

ಬಿಂದು ದರ್ಶನವು ಸತತ ಆಗುತ್ತಿರುವದನ್ನೂ, ಇತರ ತೇಜೋಮಯ ದೃಶ್ಯಗಳ ಮತ್ತು ದೇವತೆಗಳ ದರ್ಶನವು ಸತತ ಆಗುತ್ತಿರುವದನ್ನು ಅವರ ಅನುಭವದ ಟಿಪ್ಪಣಿಗಳ ಮೇಲಿಂದ ತಿಳಿಯಬಂತು. ಆ ವಿಷಯ ಮಹಾರಾಜರ ಕೂಡ ಪ್ರಶ್ನೆ ತೆಗೆದಾಗ್ಗೆ, ಅವರಂದರು, “ಈ ಅನುಭವಗಳು ಸಾಧಕನಿಗೆ ಮುಂದೆ ಆತ್ಮಾನಂದದ ಕಡೆ ಹೋಗುವದಕ್ಕೆ ಮಾರ್ಗದರ್ಶಕವಿರುತ್ತವೆ. ದೃಶ್ಯಗಳು ಕಾಣಿಸುವದು ಆತ್ಮಾನಂದವಲ್ಲ. ಸಾಧಕರ ಈ ದೃಶ್ಯಗಳು ಇಲ್ಲದಂತಾಗಿ ಆತ್ಮಾನಂದ ಅನುಭವವನ್ನು ತಗೊಳ್ಳುವಂಥಾದ್ದು ಇದೇ ಮಾನವೀ ಜೀವನದ ಅಂತಿಮ ಧ್ಯೇಯವು.” ಈ ಪ್ರಕಾರ ಅವರು ನನಗೆ ತಿಳಿಸಿ ಹೇಳಿದರು.

ಈ ಅನುಭವವನ್ನು ನಾನು ಮಹಾರಾಜರ ಕೃಪೆಯಿಂದ ತೆಕ್ಕೊಳ್ಳುತ್ತಿದ್ದೇನೆ. ಮತ್ತು ಇದೇ ಅವಸ್ಥೆಯು ಅವರ ಕೃಪೆಯಿಂದ ದೃಢವಾಗಬೇಕು ಎಂದು ಅವರ ಚರಣಗಳಲ್ಲಿ ನನ್ನ ಪ್ರಾರ್ಥನೆ ಇದೆ. ನನ್ನ ಪತ್ನಿಗೂ ಅವರ ಅನುಗ್ರಹವಾಗಿದ್ದು ಆಕೆಗೆ ಚಂದ್ರ ಸೂರ್ಯ ವ ಶ್ರೀಕೃಷ್ಣನು ಇವರ ದರ್ಶನವು ಪ್ರತಿದಿನವಾಗುತ್ತದೆ. ಮತ್ತು ಆಕೆಯು ಇಷ್ಟು ವೃದ್ಧಾವಸ್ಥೆಯಲ್ಲಿ ಅಂದರೆ ಅರವತ್ತೆಂಟನೇ ವರ್ಷದಲ್ಲಿ ಸಹ ಈ ದೃಶ್ಯಾನಂದದ ಅನುಭವವನ್ನು ತಕ್ಕೊಂಡು ಆಕೆಯು ಒಮ್ಮೆಗೆ ಎರಡೆರಡು ತಾಸುಗಳ ತನಕ ಕೂತಿರುತ್ತಾಳೆ.

ಶ್ರೀಮಹಾರಾಜರ ಸಹಜ ಚಮತ್ಕಾರಗಳನ್ನು ನೋಡಿದ್ದು ಮೇಲೆ ಬರೆದದೆ ಅದರ ವಿವರ ಹೀಗದೆ ಅಲ್ಲ, ಏನೊಂದೂ ಸಾಧನವ ಹೊರತು ಸುವಾಸವನ್ನು ಅವರಿಗೆ ಬೇರೆ ಕಡೆ ಸಹಾ ಕಳುಹಿಸಲಿಕ್ಕೆ ಬರುತ್ತದೆ. ಧುಳೆಯಲ್ಲಿ ನಾವಿರುವ ಮನೆಯಲ್ಲಿ ಮತ್ತು ನಾಶಿಕದಲ್ಲಿಯೂ ಈ ಅನುಭವವು ನನಗೂ ನಮ್ಮ ಮನೆಯವರಿಗೂ ಅನೇಕಸಾರಿ ಬಂದಿರುವದು. ಧುಳೆಯಲ್ಲಿ ಶ್ರೀಪ್ರಧಾನ ಇವರ ಮಾಳಿಗೆಮೇಲೆ, ಶ್ರೀಮಹಾರಾಜ ವ ಅವರ ಸಮೀಪ ಪ್ರಧಾನ ಸಾಸವಡಕರ ವ ರಾಜೆ ಇವರು ಕೂತಿರುವಾಗ ಬುಕ್ಕಾದ ವರ್ಷಾವ ಕೆಲವು ಮಿನಿಟುಗಳ ತನಕ ಆಯಿತು. ಆ ಬುಕ್ಕಾ ಪುಡಿಯನ್ನು ಬಹಳ ವರ್ಷ ತನಕ ಜೋಕೆಯಿಂದ ಇಟ್ಟಿದ್ದೆ. ಧುಳೆಯಲ್ಲಿ ಬ್ರ್ಯಾಂಡಿದು ಹಾಲು ಮಾಡಿದ್ದು ನಾನು ಪ್ರತ್ಯಕ್ಷ ನೋಡಿದ್ದೇನೆ.

ಒಮ್ಮೆ ಅವರು ಧುಳೆಯಲ್ಲಿ ಜ್ವರದಿಂದ ಪೀಡಿತರಾಗಿದ್ದಾಗ ಅವರ ಶಕ್ತಿ ಸ್ಥಿರವಾಗಿರಬೇಕೆಂದು ಒಂದು ಕೋಳಿತತ್ತಿಯನ್ನು ಅರ್ಧಕುದಿಸಿ ಕೊಡಬೇಕೆಂದು ನಾವು ನಿರ್ಣಯಿಸಿದೆವು. ಆ ಮೇರೆಗೆ ಅದನ್ನು ತಯಾರಿಸಿ, ಒಡಿಯುವಾಗ್ಗೆ ಕುದಿಸಿದ ಬಟಾಟೆಯಂತೆ ಒಳಗಿನ ಭಾಗವಾಗಿದೆ ಮತ್ತು ವಾಸವೂ ರುಚಿಯೂ ಹಾಗೆಯೇ ಇತ್ತು.

ನನ್ನ ಪ್ರಕೃತಿ ಮೇಲೆಯೂ ಶ್ರೀ ಮಹಾರಾಜರ ಅನುಗ್ರಹದ ಒಳ್ಳೇ ಇಷ್ಟು ಪರಿಣಾಮವಾಗಿರುತ್ತದೆ. ನಾನು ಧುಳೆಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಇಂಜಿನಿಯರ ಇರುವಾಗ್ಗೆ ಬಲ ಕಡೆಗೆ ಹರ್ನಿಯಾ ಆಯಿತು. ಡಾಕ್ಟರರ ಸೂಚನೆ ಪ್ರಕಾರ ಅದರ ಮೇಲೆ ಪಟ್ಟಿಯನ್ನು ಬಿಗಿದು ಕಟ್ಟುತ್ತಿದ್ದೆ. ಮತ್ತು ಶ್ರೀಮಹಾ-ರಾಜರ ಹೇಳಿಕೆ ಪ್ರಕಾರ ಧ್ಯಾನಯೋಗದ ಅಭ್ಯಾಸವನ್ನು ಮಾಡುತ್ತಿರುವಾಗ ನನ್ನ ಹರ್ನಿಯಾದ ಬಾಧೆ ದಿನದಿನಕ್ಕೆ ಕಡಿಮೆಯಾಗುತ್ತ ಬಂತು ಮತ್ತು ಸುಮಾರು ಎರಡು ವರ್ಷಗಳಲ್ಲಿ ಆ ಭಾಗ ಪೂರ್ವದಂತೆ ಆಯಿತು. ಕಳೆದ ಮೂರು ವರ್ಷದಿಂದ ನಾನು ಪಟ್ಟಿಯನ್ನು ಬಿಟ್ಟುಬಿಟ್ಟೆನು. ಇದು ಸದ್ಗುರು ಕೃಪೆಯ ಮಹಿಮೆ ಅದೆ ಎಂದು ನಾನು ತಿಳಿಯುತ್ತೇನೆ.

ಸನ್ ೧೯೩೭ ನೇ ಇಸವಿಯ ನವೆಂಬರ ತಿಂಗಳಲ್ಲಿ ನಾನು ನಾಶಿಕಕ್ಕೆ ಬಂದೆನು. ಅನಂತರ ಎರಡು ವರ್ಷಗಳಲ್ಲಿ ನನ್ನ ಪತ್ನಿ ಬಲಭಾಗಕ್ಕೆ ಅರ್ಧಾಂಗ ವಾಯು ಆಯಿತು. ಔಷಧೋಪಚಾರ ನಡೆಯುತ್ತಿತ್ತು. ಒಂದುದಿನ ಸಂಜೆ ಹೊತ್ತಿಗೆ ಮಹಾರಾಜರು ನಮ್ಮ ಮನೆಗೆ ಬಂದರು. ಮತ್ತು ಆಕೆಯನ್ನು ಎದು ರಿಗೆ ನಿಂದಿರಿಸಿ ಹಿಂದಿನ ಬಾಗಿಲುತನಕ ಹೋಗಿಬರಲಿಕ್ಕೆ ಆಜ್ಞೆಯನ್ನುಕೊಟ್ಟರು, ಆಜ್ಞೆ ಪ್ರಕಾರ ಆಧಾರಕ್ಕೇನೂ ತಕ್ಕೊಳ್ಳದೆ ಆಕೆಯು ನಡಕೊಂಡು ಬಂದಳು, ಹೀಗೆ ನಾಲ್ಕೈದು ಸಾರಿ ನಡೆದ ಮೇಲೆ ಮಹಾರಾಜರು, “ ಇನ್ನು ನಿನಗೆ ಚಲೋದಾಗುವದು ’ ಎಂದು ಆಶೀರ್ವಾದ ಕೊಟ್ಟರು. ಈ ಸಂಗತಿ ನಡೆದು ಈಗ ಐದುವರ್ಷಗಳಾದವು. ಈಗ ಪಕ್ಷಘಾತದ ಪರಿಣಾಮವೇನೂ ಆಕೆಯ ಮೇಲೆ ತೋರುವದಿಲ್ಲ. ಆಕೆಯಾದರು ಶ್ರೀಮಹಾರಾಜರ ಅನುಗ್ರಹದ ಈ ಸುಪರಿಣಾ ಮವನ್ನು ಭೋಗಿಸುತ್ತಿದ್ದಾಳೆ. ಇದರ ಮೇಲಿಂದ ಮಹಾರಾಜರ ರೋಗ ಪರಿ ಹಾರಕ ಶಕ್ತಿಯೂ ಕಂಡುಬರುವದು.

ನಾಶಿಕ ತಾ. ೨೧ ಅಗಸ್ಟ ೧೯೩೮

(ಸಹಿ) ಶಂಕರ ಸೀತಾರಾಮ ಗುಪ್ತೆ

—೧೩—

ಶ್ರೀ. ಪಿ. ಎಲ್. ಇನಾಮದಾರ, ನಾಶಿಕ, ಇವರ ಅನುಭವಃ—

ಅಧ್ಯಾತ್ಮ ವಿಷಯ ಸಂಬಂಧ ವಿಚಾರ ಮತ್ತು ಅದರ ಮನನ ಇವು ನಾನು ಶಾಲೆಗೆ ಹೋಗುತ್ತಿರುವಾಗ ನನ್ನ ವಿದ್ಯಾರ್ಥಿದಶೆಯಲ್ಲಿಯೇ ಸುರುವಾ ಯಿತು.

ರಸ್ತೆಯಿಂದ ಹೋಗುತ್ತಿರುವಾಗ ಕಂಡ ಪ್ರೇತಗಳು, ವೃದ್ಧಮನುಷ್ಯ ನಿಗೆ ಆಗುತ್ತಿರುವ ತೊಂದರೆಗಳು, ಕುರುಡ ಕುಂಟ ಇತ್ಯಾದಿ ವ್ಯಾಧಿಗ್ರಸ್ತ ಜನರ

ಸ್ಥಿತಿ ಮತ್ತು ಭಿನ್ನ ಭಿನ್ನ ವ್ಯಕ್ತಿಗಳ ಭಿನ್ನ ಭಿನ್ನ ಸ್ವಭಾವಗಳು ಮ ಉಚ್ಚನೀಚ ಸ್ಥಿತಿ ಈ ವಿಷಯಗಳ ವಿಚಾರಗಳು ಮನಸ್ಸಿನಲ್ಲಿ ತಿರುತಿರುಗುತ್ತಾ ಅಸ್ವಸ್ಥತೆ ಉತ್ಪನ್ನವಾಯಿತು. ಶಾಲೆಯ ಅಭ್ಯಾಸದ ಹೊರತು ಬಾಕಿ ಎಲ್ಲ ಹೊತ್ತು ಈ ವಿಚಾರಗಳಲ್ಲಿಯೇ ಹೋಗುತ್ತಿದ್ದು, ಮತ್ತೇನೂ ನನ್ನ ಕಡೆಯಿಂದ ಮನಸ್ಸಿನಂತೆ ಆಗದಂತಾಯಿತು. ಅಧ್ಯಾತ್ಮದ ವಿನಹಾ ಇತರ ಓದುವದರ ಪೂರ್ಣ ಬೇಸರ ವಾಯಿತು.

ಮೇಲೆ ಹೇಳಿದ ಸಂಗತಿಗಳಿಂದ ಭೀತಿ ಉತ್ಪನ್ನವಾಗಿ ನನಗೆ ನಿರ್ಭಯ ಸ್ಥಿತಿಯು ಪ್ರಾಪ್ತಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುವದು ಇದೇ ನನ್ನ ಮುಖ್ಯ ಕರ್ತವ್ಯವೆಂದು ಅನಿಸುತ್ತಿತ್ತು. ಈ ವಿಚಾರಗಳಲ್ಲಿ ಏಳೆಂಟು ವರ್ಷಗಳು ಹೋದವು. ದೇಹವು ನಾನಲ್ಲ, ದೇಹಕ್ಕೆ ಬೇರೆಯಾಗಿ ನಾನ್ಯಾರೊ ದೇಹರಹಿತನೊಬ್ಬನಿದ್ದೇನೆ, ಹೀಗೆ ಕಲ್ಪನೆಗಳು ಬಂದು ಅವನ್ನು ನಿಶ್ಚಯಿಸಿಕೊಳ್ಳಲಿಕ್ಕೆ ನನ್ನ ತಲೆಗೆ ನಾನು ಬಹಳ ತೊಂದರೆ ಕೊಡುತ್ತಿದ್ದೆ. ಮತ್ತು ಈ ಪ್ರಕಾರ ವಿಚಾರಗಳು ಯಾವ ದಿವಸ ನಿಶ್ಚಯವಾದವೊ ಅಂದಿನಿಂದ ಶಾಬ್ದಿಕ ಜ್ಞಾನವನ್ನು ಸಂಪಾದಿಸುವ ವಿಚಾರಗಳು ನಿಂತುಹೋಗಿ ಅನುಭವಜನ್ಯ ಜ್ಞಾನದ ಸಲುವಾಗಿ, ಮನಸ್ಸಿಗೆ ತಳಮಳವಾಗಹತ್ತಿತು, ಮತ್ತು ನಾನು ಯಾರು ಇದ್ದೇನೆ ಇದರ ಅನುಭವ-ಜನ್ಯ ಜ್ಞಾನವನ್ನು ಸಂಪಾದಿಸಲಿಕ್ಕೆ ಯೋಗ್ಯವಾದ ಮಾರ್ಗವನ್ನು ತೋರಿಸುವವನೊಬ್ಬ ಈಶ್ವರನಿದ್ದು ಅವನು ಸದ್ಗುರು ರೂಪದಿಂದ ನನಗೆ ಭೆಟ್ಟಿಯಾಗಿ ನನಗೆ ಆತನ ಅನುಗ್ರಹ ಆದ ವಿನಹಾ ಬೇರೆ ತರಣೋಪಾಯವಿಲ್ಲ ಎಂತ ನನಗೆ ತೋರಿತು.

ಇದರ ನಂತರ ಅಂದರೆ ಮಾರ್ಚ ಸನ್ ೧೯೩೯ ರಲ್ಲಿ ಇಲ್ಲಿಯ ಬಾಬಾ ಸಾತಪೂರಕರ ಈ ಹೆಸರಿನ ಸದ್ಗೃಹಸ್ಥರ ಕಡೆಯಿಂದ ಶ್ರೀಗಜಾನನ ಮಹಾ-ರಾಜರ ಹೆಸರು, ಸಮಾಚಾರ ತಿಳಿದಕೂಡಲೆ ನಾನು ಅವರ ದರ್ಶನ ತಕ್ಕೊಂಡೆ, ಮತ್ತು ಅವರಿಗೆ ಮೇಲೆ ಹೇಳಿದಂತೆ ನನ್ನ ವಿಚಾರ ಸಂಬಂಧ ಎಲ್ಲ ಸಂಗತಿಯನ್ನು ತಿಳಿಸಿದ ಮೇಲೆ ಅವರಂದರು " ನಮ್ಮ ಸದ್ಗುರುಗಳ ಕೃಪೆಯಾದರೆ ನೋಡೋಣ; " ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅವರು "ಚಿಂತೆ ಮಾಡಬೇಡ, ನಿನ್ನ ಕಾರ್ಯವಾಗುವದು " ಎಂದು ಹೇಳಿದರು. ಅನಂತರ ಅವರು ಮುಂಬಯಿಗೆ ಹೋದರು.

ಅಲ್ಲಿಂದ ಅವರು ಪುನಹಾ ನಾಶಿಕಕ್ಕೆ ಬಂದಮೇಲೆ ತಾ. ೬-೪-೩೯ ನೇ ದಿವಸ ಮಧ್ಯಾಹ್ನವೇಳೆಗೆ ಅವರು ನನಗೆ ' ಸೋಹಂ ' ಮಂತ್ರವನ್ನು ಕೊಟ್ಟು ಅನುಗ್ರಹೀತ ಮಾಡಿದರು. ಆ ದಿವಸದಿಂದ ನಿತ್ಯ ಗುರುಮಂತ್ರದ ಜಪ ಮಾಡು

ತ್ತಿರುವಾಗ ನನಗೆ ಬಂದ ಅನುಭವಗಳನ್ನು ಶ್ರೀಸದ್ಗುರುಗಳ ಆಜ್ಞೆ ಪ್ರಕಾರ ಕೆಳಗೆ ಕೊಟ್ಟಿದ್ದೇನೆ.

ತಾ|| ೬-೪-೩೯ ನೇ ದಿನ ಮಹಾರಾಜರಲ್ಲಿಂದ ಮನೆಗೆ ಬಂದಮೇಲೆ ಸಂಜೆವೇಳ್ಯಕ್ಕೆ ನಾನು ಕೂಡ್ರುವ ಕೋಣೆಯಲ್ಲಿ ಅತ್ತರದ ಸುವಾಸವು ಬರ ಹತ್ತಿತು. ಅದೇ ದಿನ ರಾತ್ರಿ ಹೊತ್ತಿಗೆ ಜಪ ಮಾಡುತ್ತಿರುವಾಗ, ಸ್ವಲ್ಪ ಹೊತ್ತಿನಲ್ಲಿ ನನ್ನ ಸರ್ವಶರೀರವು ತಲೆಯಿಂದ ಕಾಲುಗಳತನಕ ಸ್ಪರ್ಶರಹಿತವಾಯಿತು. ಮರುದಿನ ಮಧ್ಯಾಹ್ನ ಹೊತ್ತಿಗೆ ಜಪ ಮಾಡುತ್ತ ಕೂತಿರುವಾಗ ಮೊದಲು ಶರೀರವು ಸ್ಪರ್ಶರಹಿತವಾಗಿ, ಆಮೇಲೆ ಹೂವಿನಂತೆ ಹಗುರವಾಯಿತು.

ತಾ|| ೧೪-೪-೩೯ ನೇ ದಿನ ಮುಂಜಾನೆ ನಿದ್ದೆಯೊಳಗಿಂದ ಎಚ್ಚರವಾಗುವ ವೇಳ್ಯಕ್ಕೆ ನಾನು ಅರ್ಧ ಎಚ್ಚರವಿರುವಾಗ, ನನ್ನ ಎದುರಿಗೆ ನನ್ನ ಮೂರ್ತಿಯೇ ಸುಂದರವಾದ ಚೌಕಟ್ಟಿನೊಳಗೆ ಕಣ್ಣು ತೆರೆದು ಧ್ಯಾನಕ್ಕೆ ಕೂತಂತೆ ಕಾಣಿಸಿತು. ಆ ಮೂರ್ತಿಯು ಕಪ್ಪು-ಬಿಳಿತರದ ಅತ್ಯಂತ ನುಣುಪಾದ ಪಾಷಾಣದ್ದಿದ್ದು ಬಹಳ ತೇಜಸ್ವಿ ಇತ್ತು. ನಾನು ಎಚ್ಚರ ಇದ್ದೇನೊ ಸ್ವಪ್ನದಲ್ಲಿದ್ದೇನೊ ಹೀಗೆ ಶಂಕೆ ಬಂದು ಕಣ್ಣು ತೆರೆದು ನೋಡುತ್ತಿರುವಾಗಲೂ ಆ ಮೂರ್ತಿಯು ಕಾಣುತ್ತಿತ್ತು. ನಂತರ ಕಣ್ಣು ಮುಚ್ಚಿದ ಸ್ಥಿತಿಯಲ್ಲಿಯೇ 'ಸೋಹಂ' ಮಂತ್ರದ ಜಪವು ಸುರುವಾಯಿತು, ಮತ್ತು ಅದೇ ಮೂರ್ತಿಯನ್ನು ನಾನು ನನ್ನ ಕಣ್ಣಮುಂದೆ ಕಂಡೆನು. ಕಡೆಗೆ ಪುನಹಾ ನಾನು ಕಣ್ಣು ತೆರೆದು ಮೂರನೇ ಸರ್ತಿ ಆ ಸತೇಜ ಮೂರ್ತಿಯ ದರ್ಶನವನ್ನು ತಕ್ಕೊಂಡ ಮೇಲೆ ಅದು ಅದೃಶ್ಯವಾಯಿತು. ಮಹಾರಾಜರಿಗೆ ನಾನು ಈ ಸಂಗತಿಯನ್ನು ಹೇಳಿದೆ, ಮತ್ತು ಯಾವದರ ಶೋಧವನ್ನು ನಾವು ಮಾಡುತ್ತಿದ್ದೆವೊ ಅದು ನಾವೇ ಇದ್ದೇವೆ ಎಂಬದರ ಸತ್ಯತೆಯು ಈ ದೃಷ್ಟಾಂತದ ಮೇಲಿಂದ ಪೂರ್ಣವಾಗಿ ತಿಳಿಯಿತು.

ಜಪ ಮಾಡಲಿಕ್ಕೆ ಸುರುಮಾಡಿದ ದಿವಸದಿಂದ ಧ್ಯಾನಸ್ಥನಿರುವಾಗ ಯಾವದೊಂದು ದೃಶ್ಯವು ಕಣ್ಣಮುಂದೆ ಅದ್ಯಾಪಿ ಕಾಣಿಸುವದಿಲ್ಲ. ಕತ್ತಲು ಮತ್ತು ಅಲ್ಪವಾದ ಪ್ರಕಾಶ ಮಾತ್ರ ತೋರುವದು. ಧ್ಯಾನದ ವೇಳ್ಯ ಮನಸ್ಸು ಏಕಾಗ್ರವಾಗಿ ಮಂತ್ರ ಅನ್ನುವವ, ಕೇಳುವವ ಮತ್ತು ನೋಡುವ ಸಾಕ್ಷಿ ಇವರ ಐಕ್ಯವಾಗಿ ಶರೀರವು ನಿಶ್ಚೇಷ್ಟವಾಗಿ ನಾನು ಆನಂದದಲ್ಲಿರುತ್ತೇನೆ. ಶರೀರದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಅಂದರೆ ಮಸ್ತಕದಲ್ಲಿ, ಹೃದಯದಲ್ಲಿ ಮತ್ತು ಎರಡೂ ಕಣ್ಣುಗಳ ಕನೀನಿಕೆಗಳಲ್ಲಿ ಇತ್ಯಾದಿ ಸ್ಥಾನಗಳಲ್ಲಿ 'ಸೋಹಂ' ಮಂತ್ರದ ಜಪವು ನಡಿಯುತ್ತಿರುತ್ತದೆ.

ಎಂದಾದರೂ ಒಮ್ಮೆ ವಿಶೇಷ ಪ್ರಕಾರದ ಸ್ಫೂರ್ತಿ ಬಂದು ಅಭ್ಯಾಸವು ಬಹಳ ಒಳ್ಳೇದಾಗಿ ಸಾಧಿಸುತ್ತದೆ, ಮತ್ತು ಮನಸ್ಸಿನ ಏಕಾಗ್ರತೆ ಹೆಚ್ಚಿನ

ಪ್ರಮಾಣದಿಂದ ಆಗುತ್ತದೆ. ಇಂಥಕಾಲದಲ್ಲಿ ಕೆಲವು ಹೊತ್ತು ಶರೀರದ ಮರವು ಆಗುತ್ತದೆ. ಆನಂದದ ಮತ್ತು ಅಭ್ಯಾಸದ ಪರಿಣಾಮವು ಈಗ ಇಡೀ ದಿನದತನಕ ಮನಸ್ಸಿನ ಮೇಲೆ ಆಗಿರುತ್ತದೆ. ಸಾರಾಂಶಂನೆದರೆ, ಧ್ಯಾನಕಾಲ ದಲ್ಲಿ ಯಾವದೊಂದು ದೃಶ್ಯವೂ ಕಾಣಿಸದೆ ಮನಸ್ಸು ಏಕಾಗ್ರವಾಗಿ ನನ್ನ ಸದ್ಗುರು ಕೃಪೆಯಿಂದ ನಾನು ಆನಂದದ ಮತ್ತು ಶಾಂತಿಸುಖದ ಅನುಭವವನ್ನು ಸತತ ತಕ್ಕೊಂಡಿರುತ್ತೇನೆ.

ತಾ|| ೨೬—೫—೩೯ ನೇ ದಿವಸ ಸಂಜೆ ಏಳುವರೆ ಸುಮಾರಕ್ಕೆ ಜಪ ಮಾಡುತ್ತ ಕೂತಿರುವಾಗ್ಗೆ ಕೆಲವು ಹೊತ್ತಿನ ಮೇಲೆ, ಶರೀರವು ಹಗುರಾಗಿ ನನ್ನ ಸುತ್ತಲೂ ಆಕಾಶದಂಥ ವಾತಾವರಣ ನಿರ್ಮಾಣವಾಯಿತು ಅದರ ವರ್ಣ ಮಾತ್ರ ಹೇಳಲಿಕ್ಕೆ ಬರುವದಿಲ್ಲ. ಅದರೊಳಗೆಯೇ ನಾನಿದ್ದು ಅನಿರ್ವಾಚ್ಯ ಆನಂದದ ಅನುಭವವನ್ನು ಸುಮಾರು ಇಪ್ಪತ್ತು ಮಿನಿಟುಗಳತನಕ ತಕ್ಕೊಂಡೆ. ಇತ್ತೀತನಕದ ಅಭ್ಯಾಸದ ಪೈಕಿ, ಈ ದಿವಸದ ಅನುಭವವು ತುಲನಾತ್ಮಕ ದೃಷ್ಟಿ ಯಿಂದ ಬಹಳ ಉಚ್ಚಸ್ಥಿತಿದಾಗಿತ್ತು.

ಧ್ಯಾನದ ಅಭ್ಯಾಸವನ್ನು ಮಾಡಲಿಕ್ಕೆ ಹತ್ತಿದಲಾಗಾಯಿತು ಸ್ವಲ್ಪ ತಿಂಗಳಲ್ಲಿಯೇ ಶ್ರೀಸದ್ಗುರು ಕೃಪೆಯಿಂದ ಧ್ಯಾನಕ್ಕೆ ಕೂತನಂತರ ಸ್ವಲ್ಪ ವೇಳೆ ಯೊಳಗೆ ಅಲ್ಪ ಪ್ರಯಾಸದಿಂದ ಮನಸ್ಸು ಸಂಕಲ್ಪ ವಿಕಲ್ಪ ರಹಿತವಾಗಿ ಏಕಾ ಗ್ರತೆ ಉತ್ತಮವಾಗಿ ಸಾಧಿಸುತ್ತದೆ. ಪ್ರಥಮದಲ್ಲಿ ಕತ್ತಲು ಕಾಣಿಸುವದು, ಅನಂತರ ಸೌಮ್ಯವಾದ ತೇಜವು ಕಾಣಿಸುತ್ತ, ಅದು ಮೆಲ್ಲಮೆಲ್ಲಗೆ ಅಧಿಕ ತೇಜ ಸ್ವಿಯಾಗಿ ಕಾಣಹತ್ತುವದು ಆಮೇಲೆ ಅಲ್ಲಿಂದ ಲಕ್ಷವು ತೆಗೆದು ಅದು 'ಸೋಹಂ' ಮಂತ್ರದ ಜಪದಕಡೆಗೆ ಹೋಗುವದು. ಈ ಮಂತ್ರವು ಎಲ್ಲಿಂದ ಆಗುತ್ತದೊ ಅಲ್ಲಿಗೆ ಹುಡುಕುತ್ತ ಹೋಗಬೇಕೆನಿಸುತ್ತದೆ. ಮಂತ್ರಜಪವು ಬಹು ಆಳವಾದ ಸ್ಥಳಗಳಲ್ಲಿ ಆಗುವದು. ಮತ್ತು ಕೆಲವು ಹೊತ್ತಿನ ಮೇಲೆ 'ಸೋಹಂ'ದ ಧ್ವನಿ ಕೇಳುವಂಥಾದ್ದು ನಡೆಯುತ್ತಿರುವಾಗ ಆ ಧ್ವನಿಯು ಗಂಭೀರ ಶಬ್ದದಿಂದ ಕೇಳ ಬರುತ್ತ ಕಡೆಗೆ ಅದು ಕೇಳಿಸುವದು ನಿಂತು ಹೋಗುವದು. ಈ ಸ್ಥಿತಿ ಮಾತ್ರ ಬಹಳ ಅಲ್ಪವೇಳೆ ಉಳಿಯುತ್ತದೆ, ಮತ್ತು ಅಲ್ಲಿ ಆನಂದವು ಬಹಳವಾಗಿದ್ದು ಅದೇ ನನ್ನ ಸ್ವರೂಪವೆಂದು ಕಾಣಿಸುತ್ತದೆ.

ತಾ|| ೧೬—೬—೩೯ ನೇ ದಿವಸ ಅಭ್ಯಾಸದ ನಂತರ ರಾತ್ರಿ ಎಂಟು ಎಂಟುವರೆ ಸುಮಾರಕ್ಕೆ ನಾನು ಗೆಲರಿಯಲ್ಲಿ ನಿಂತಿದ್ದೆ ಮತ್ತು ನನ್ನ ಲಕ್ಷ ಸಹಜ ರೀತಿಯಿಂದ ಆಕಾಶದ ಕಡೆಗೆ ಹೋಯಿತು. ಆ ಸಮಯದಲ್ಲಿ ಆಕಾಶವು ನಿರಭ್ರ ವಾಗಿತ್ತು. ಎರಡು ಮೂರು ಮಿನಿಟುತನಕ ನೋಡಿದ ಮೇಲೆ ಬಿಳೇ ಪ್ರಕಾ ಶದ ಒಂದು ಉದ್ದವಾದ ಪಟ್ಟೆಯು ತೆರೆದ ಕಣ್ಣಿನಿಂದಲೇ ನನಗೆ ಕಾಣಿಸಿತು.

ಈ ಕಾರಣದಿಂದ ನನಗೆ ಆಕಾಶದ ಕಡೆ ಸಹಜವಾಗಿ ನೋಡುವ ಚಟ ಆಗಿದ್ದು ಕತ್ತಲುರಾತ್ರಿಯಲ್ಲಿ ಆಕಾಶದ ಕಡೆ ಒಂದೇ ಸಮನೆ ಲಕ್ಷವಿಟ್ಟು ಮೇಲೆ ಮಿಂಚಿನಂಥ ಪ್ರಕಾಶದ ಹೊಳಪು ಕಾಣಿಸುತ್ತಿತ್ತು. ಆ ಕಾಲದಲ್ಲಿ 'ಸೋಹಂ'ದ ಜಪ ಮಾತ್ರ ನಡೆಯುತ್ತಿರುವದು.

ಒಂದು ದಿನ ಮಲಗಲಿಕ್ಕೆ ಹಾಸಿಗೆ ಮೇಲೆ ಬಿದ್ದಕೂಡಲೇ ಜಪವು ತನ್ನಷ್ಟಕ್ಕೆ ಸುರುವಾಯಿತು. ನನ್ನ ಲಕ್ಷವು ಜಪದ ಕಡೆಗೆ ಬಲತ್ಕಾರದಿಂದ ಎಳೆಯಲ್ಪಟ್ಟಿತು ಮತ್ತು ನಿದ್ರೆಯು ಸ್ಮೃತಿಯೇ ಹೋಗಿ ಮೂರುನಾಲ್ಕು ತಾಸು ಅದೇ ಸ್ಥಿತಿಯಲ್ಲಿ ಹೋದವು. ಈ ಅವಕಾಶದಲ್ಲಿ ಮೂರು ವೇಳೆ ನನಗೆ ಇಷ್ಟು ಆನಂದವಾಯಿತಲ್ಲ, ಅದು ನನಗೆ ಶಬ್ದಗಳಿಂದ ವರ್ಣಿಸಲಿಕ್ಕೆ ಬರುವದಿಲ್ಲ.

ಈ ಅತ್ಯಾನಂದದ ಮೂಲಕ ನನಗೆ ನಿದ್ರೆ ಹತ್ತಲೇ ಇಲ್ಲ, ಮತ್ತು ಹಾಸಿಗೆಯ ಮೇಲೆ ಯಾರೊ ಚಕಲಗುಲಿ ಮಾಡುತ್ತಾರೆಂಬ ಎಂಬಂತೆ ನಗುತ್ತಾ ಬಿದ್ದುಕೊಂಡೆ ಮತ್ತು ಸದ್ಗುರು ವಿಷಯದಲ್ಲಿ ಶುದ್ಧ, ಸಾತ್ವಿಕ, ಪ್ರೇಮ ಭಾವನೆಯಿಂದ ಮನಸ್ಸು ಉಕ್ಕುತ್ತಿತ್ತು. ತಾಯಿಯು ತನ್ನ ಕೂಸಿನ ಸದೋದಿತ ಚಿಂತೆ ಮಾಡುತ್ತಾಳೆ, ಎಂದು ಕೂಸು ಚಿಂತಾರಹಿತವಾಗಿರುವದೊ ಆ ಪ್ರಕಾರ ಸದ್ಗುರುವು ನನ್ನ ಸಮೀಪ ಇದ್ದಾನೆ ಮತ್ತು ಅತನು ನನಗೆ ಮಾರ್ಗ ತೋರಿಸುತ್ತಾ ರಕ್ಷಿಸುತ್ತಾ ಇರುತ್ತಾನೆ ಎಂದು ನನಗೆ ತೋರಿತು. ಸದ್ಗುರು ವಿಷಯದ ಈ ಪ್ರೇಮವು ನಿರ್ಭಯತೆಯನ್ನು ಉತ್ಪನ್ನಮಾಡಿತು. ಆ ರಾತ್ರಿ ನನಗೆ ಯಾವ ಪರಮಾನಂದವಾಯಿತೊ ಅದರ ವ್ಯವಹಾರದೊಳಗಿನ ಒಂದು ಸಣ್ಣ ಉದಾಹರಣೆಯನ್ನು ಕೊಟ್ಟು ನಾನು ನನ್ನ ಮನೋಭಾವನೆಯನ್ನು ವ್ಯಕ್ತಮಾಡುವ ಪ್ರಯತ್ನ ಮಾಡಿದ್ದೇನೆ. ಆದರೆ ನನಗ ನಿಜವಾಗಿ ಯಾವ ಪರಮಾನಂದ ಸಿಕ್ಕಿತು ಅದು ಇದಕ್ಕೂ ನೂರುಪಟ್ಟು ಅಧಿಕವಾಗಿದೆ.

ಮುಂದೆ ಒಂದೆರಡು ತಿಂಗಳಲ್ಲಿ ಒಂದೇದಿನ ರಾತ್ರಿ ಮಲಗುವ ಮೊದಲು ನಾನು ಹಾಸಿಗೆ ಮೇಲೆ ಸ್ವಸ್ಥ ಬಿದ್ದಿದ್ದೆ. ಇಷ್ಟರಲ್ಲಿ ನಾನು ನನ್ನ ತೆರೆದ ಕಣ್ಣುಗಳಿಂದ ಚಂದ್ರ ಪ್ರಕಾಶದಂಥಾ ತೇಜದ ಬಿಳಿ ಚಿಕ್ಕೆಗಳು, ಅಲ್ಲಿಯು ಕತ್ತಲೊಳಗೆ ಅತ್ತಿತ್ತ ತಿರುಗುತ್ತಿರುವದನ್ನು ಕಂಡೆನು. ಇದಕ್ಕೂ ಮೊದಲು ಅಂಧಕಾರದಲ್ಲಿ ಇಂಥ ತೇಜವು ಎಂದೂ ನೋಡಿದ್ದಿಲ್ಲ. ಅಂದಿನಿಂದ ನಾನು ಕತ್ತಲೊಳಗೆ ನನ್ನ ದೃಷ್ಟಿಯನ್ನು ಯಾವದೊಂದು ಕಡೆಗೆ ಯಾವಾಗ್ಗೆ ಸ್ಥಿರ ಮಾಡುವೆನೊ, ಆಗ್ಗೆ ಒಂದು ನಿಂಬೇಹಣ್ಣಿನಕ್ಕಿಂತ ದೊಡ್ಡ ಮತ್ತು ಚಂದ್ರಪ್ರಕಾಶದಂಥ ಬಿಳಿ ಪ್ರಕಾಶದ ಒಂದು ಗೋಲಕವು ಕಾಣಿಸುವದು; ಮತ್ತು ಎಷ್ಟರವರೆಗೆ ನನ್ನ ದೃಷ್ಟಿಯು ಸ್ಥಿರವಾಗಿರುವದೊ, ಅಷ್ಟರ ತನಕ ಅದೂ ಸ್ಥಿರವಾಗಿರುವದು.

ಕಳೆದ ಎಂಟುಹತ್ತು ದಿನಗಳಲ್ಲಿ ನಾನು ಧ್ಯಾನಕ್ಕೆ ಕೂಡ್ರುತ್ತಲೆ ಅಲ್ಪ ಪ್ರಕಾಶ ಕಾಣಬರುವದು ಮತ್ತು ಕೂಡಲೆ ಸ್ವಚ್ಛ ಬಿಳೇದು ಕಾಣಿಸುವದು.

ಮತ್ತು ಏನೂ ಪ್ರಯತ್ನ ಮಾಡದೆ ಜಪವು ತಾನೇ ಸುರುವಾಗುವದು ಮತ್ತು ಆ ಪ್ರಕಾಶದಲ್ಲಿ ನಾನು ಮಗ್ನನಾಗುತ್ತೇನೆ.

ಎರಡು ಮೂರು ದಿನ ಹಿಂದೆ ನಿತ್ಯದಂತೆ ಧ್ಯಾನದ ಅಭ್ಯಾಸ ಮತ್ತು ಜಪವು ಮುಗಿದ ಮೇಲೆ ನಾನು ಹೊರಗೆ ಮಾಳಿಗೆ ಮೇಲೆ ಬಂದೆ. ಆಗ್ಗೆ ಮಧ್ಯಾಹ್ನ ಕಾಲವಿತ್ತು. ಅಲ್ಲಿ ಸ್ವಚ್ಛ ಸೂರ್ಯಪ್ರಕಾಶವಿತ್ತು ಮತ್ತು ಆಕಾಶವು ನಿರಭ್ರವಿತ್ತು. ಸ್ವಲ್ಪ ತಣ್ಣಗಿತ್ತೆಂತ ನಾನು ಆಕಾಶದ ಕಡೆಗೆ ಕಣ್ಣು ಇಟ್ಟು ಮಾಳಿಗೆ ಮೇಲೆ ಬಿದ್ದುಕೊಂಡಿದ್ದೆ. ಒಂದೇ ಸಮನೆ ನಾನು ಒಂದು ಮಿನಿಟು ತನಕ ಹೀಗ ನೋಡಿರಬಹುದು, ಆಗ ಆಕಾಶವು ನೀಲವರ್ಣದ್ದು ಕಾಣಿಸುವ ಬದಲಿಗೆ ಬಿಳೀದಾಗಿ ಕಾಣಿಸಿತು. ನಾನು ಹಾಗೆಯೇ ಕಣ್ಣು ಕಿಸಿದು ನೋಡುತ್ತಿದ್ದೆ. ಆಗ ಒಂದು ಮಿನಿಟಿನಲ್ಲಿ ನೀರೊಳಗೆ ಮೀನುಗಳು ಹ್ಯಾಗೆ ತಿರುಗಾಡುತ್ತವೊ ಹಾಗೆ ನೂರಾರು ನಕ್ಷತ್ರಗಳು ಆಕಾಶದಲ್ಲಿ ತಿರುಗಾಡುವದನ್ನು ಕಂಡೆನು.

ತಾರೀಖು ೧೬-೧೨-೩೯

(ಸಹಿ) ಪ್ರಭಾಕರ ಲಕ್ಷ್ಮಣ ಇನಾಮದಾರ

—೧೪—

ರಾ. ರಾ. ವಾಮನ ಕೇಶವ ಮಾಹೆಗಾಂವಕರ, ಪೆನ್‌ಶನರ ಮಾಸ್ತರ ನಾಶಿಕ ಇವರ ಅನುಭವಗಳು, ಸದ್ಗುರುಗಳ ಭೆಟ್ಟಿ, ಅವರ ಅನುಗ್ರಹ ವ ಅನುಭವಗಳು :—

ನಾನು ದುಃಖಮಯವಾದ ಪ್ರಪಂಚದಲ್ಲಿ ತ್ರಸ್ತನಾಗಿ, ಅದರ ಬೇಸರ ಬಂದು ಪೂರ್ಣ ಪಶ್ಚಾತ್ತಾಪವನ್ನು ಹೊಂದಿದೆನು. ಈ ಮನುಷ್ಯ ಜನ್ಮಕ್ಕೆ ಬಂದದ್ದಕ್ಕೆ ಏನೂ ಸಾರ್ಥಕವಾಗಲಿಲ್ಲ, ಎಂದು ಹೀಗೆ ಅನಿಸಿ, ಪ್ರಪಂಚವೂ ಅಲ್ಲ ಪರಮಾರ್ಥವೂ ಅಲ್ಲ ಎಂಬ ಸ್ಥಿತಿ ಆಯಿತು. ಈಗ ಉಳಿದ ಆಯುಷ್ಯದಲ್ಲಾದರೂ ಸಾಧಿಸಿದಷ್ಟು ಪರಮಾರ್ಥವನ್ನು ಮಾಡಬೇಕೆಂದು, ನನಗೆ ಪರಮಾರ್ಥದ ಬಹಳ ತಳಮಳವಾಯಿತು ಮತ್ತು ಮಾರ್ಗವನ್ನು ಹುಡುಕುತ್ತಿದ್ದೆ. ಆಗ ಕರ್ಮಧರ್ಮಸಂಯೋಗದಿಂದ ಪೂರ್ವ ಸಂಚಿತರೂಪ ಪ್ರಯತ್ನದಿಂದ ನನಗೆ ನನ್ನ ಸನ್ಮಿತ್ರರಾದ ವಿಶ್ವನಾಥ ಗೋಪಾಳ ವೈದ್ಯ ಪೆನ್‌ಶನರ, ಫಡಣಿಸ ಇವರ ಸಹಾಯದಿಂದ ಶ್ರೀಗಜಾನನ ಮಹಾರಾಜರ ಭೆಟ್ಟಿಯಾಯಿತು.

ಅವರ ದರ್ಶನ ತಕ್ಕೊಂಡ ವೇಳೆ ನಾನು ಅವರಿಗೆ ನನ್ನ ಪೂರ್ಣ ಸಮಾಚಾರವನ್ನು ತಿಳಿಸಿದೆ ಮತ್ತು ಪರಮಾರ್ಥಪ್ರಾಪ್ತಿ ವಿಷಯದಲ್ಲಿ ಅವರ ಪ್ರಾರ್ಥನೆಯನ್ನು ಮಾಡಿದೆ. ನನ್ನ ತಳಮಳಿಸುವ ಸ್ಥಿತಿಯನ್ನು ನೋಡಿ

ಮತ್ತು ನನ್ನ ಅಂತರಂಗವನ್ನು ತಿಳಕೊಂಡು ಅವರು ನನಗೆ ಆಶ್ವಾಸನವನ್ನು ಕೊಟ್ಟರು. ಮತ್ತು ಹಿಂದೆ ಯಾರದಾದರೂ ಅನುಗ್ರಹವನ್ನು ತಕ್ಕೊಂಡಿದ್ದಿರೇನು ಎಂದು ಕೇಳಿದರು. ಹೀಗೆ ಕೇಳಿದ್ದಕ್ಕೆ ಶ್ರೀನಾರಾಯಣ ಮಹಾರಾಜ ಕೇಡಗಾಂವಕರ ಇವರ ಅನುಗ್ರಹ ತಕ್ಕೊಂಡು ಇಪ್ಪತ್ತೈದು ವರ್ಷಗಳಾದವು ಮತ್ತು ಅವರು ಕೊಟ್ಟ ಮಂತ್ರವನ್ನು ನಾನು ಜಪ ಮಾಡುತ್ತೇನೆ ಮುಂತಾದ್ದನ್ನೆಲ್ಲ ಹೇಳಿದೆನು ಆದರೂ ಶ್ರೀಗಜಾನನ ಮಹಾರಾಜರು ನನಗೆ ಯಾವರೀತಿಯಿಂದಲಾದರೂ ಭ್ರಮೆಹಾಕಲಿಲ್ಲ. ಅವರೆಂದರು, " ನಾನು ಸತ್ಪುರುಷನೂ ಅಲ್ಲ ಮಹಾರಾಜನೂ ಅಲ್ಲ, ನನ್ನ ಗುರು ಯಾವ ಶ್ರೀನಾರಾಯಣ ಸರಸ್ವತಿ, ಅವರ ಅಜ್ಞೆಯಿಂದಲೆ. ಅವರು ನನಗೆ ಕೊಟ್ಟ 'ಸೋಹಂ' ಮಂತ್ರವನ್ನು ನನ್ನ ಕಡೆ ಬರುವವರಿಗೆ ನಾನು ಮಿತ್ರಭಾವದಿಂದ ಹೇಳುತ್ತಿರುತ್ತೇನೆ. ನನ್ನ ಸದ್ಗುರುವು ನನಗೆ ಈ ಕರ್ತೃತ್ವವನ್ನು ಕೊಟ್ಟಿದ್ದಾರೆ. ಅದನ್ನು ನಾನು ಅವರ ಶಕ್ತಿಯಿಂದಲೇ ಯಾರು ನನ್ನ ಕಡೆ ಆ ಬುದ್ಧಿಯಿಂದ ಬಂದಾರು ಅಂಥವರಿಗೆ ಹೇಳುತ್ತಿರುತ್ತೇನೆ. "

ನಂತರ ಅವರು ನನಗೆ 'ಸೋಹಂ' ಮಂತ್ರವನ್ನು ಕೊಟ್ಟು ತನ್ನ ಅನುಗ್ರಹೀತನಾಗಿ ಮಾಡಿದರು ಮತ್ತು ಏಕನಿಷ್ಠೆಯಿಂದ ಜಪ ಮಾಡಲಿಕ್ಕೆ ಹೇಳಿದರು; ಇಷ್ಟೆ ಅಲ್ಲ, ಎರಡುವರೆ ಮೂರು ತಿಂಗಳ ತನಕ ನನಗೆ ಸಂಗಡ ಕೂಡ್ರಿಸಿಕೊಂಡು ಧ್ಯಾನಯೋಗದ ಅಭ್ಯಾಸ ಮಾಡಿಸಿಕೊಂಡರು. ನನಗೆ ಬರೆಯಲಿಕ್ಕೆ ಸಂತೋಷವಾಗುತ್ತದಲ್ಲ, ಅವರ ಅನುಗ್ರಹದಿಂದ ನನ್ನ ಜೀವನಕ್ರಮವೆಲ್ಲ ಬದಲಾಯಿತು.

ಹೋದ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಶ್ರೀನಾರಾಯಣ ಮಹಾರಾಜ ಕೇಡಗಾಂವಕರ ಇವರ ಚಿತ್ರದ ಪೂಜಾ ಅರ್ಚಾ ಮಾಡಿ ಧ್ಯಾನ ಮಾಡುತ್ತಿದ್ದೆ. ಆದರೆ ನನಗೆ ಎಂದೂ ಪ್ರಕಾಶ ತೋರಲಿಲ್ಲ ಅದು ಒರೇ ಮಾನಸಿಕ ಭಾವನೆಯಷ್ಟೇ ಇತ್ತು. ಅನ್ಯದೇವತೆಗಳೂ ಎಂದೂ ಕಾಣುತ್ತಿದ್ದಿಲ್ಲ ಮತ್ತು ನನ್ನ ವೃತ್ತಿಯಲ್ಲಿಯೂ ಎಷ್ಟೊಂದೂ ಒದಲಾಗಿದ್ದಿಲ್ಲ. ಆದರೆ ಶ್ರೀಗಜಾನನ ಮಹಾರಾಜರ ಅನುಗ್ರಹ ತಕ್ಕೊಂಡಲಾಗಾಯಿತು ಮತ್ತು ಅವರ ಶಿಷ್ಯರ ಸತತ ಪರಿಚಯ ಆಗುತ್ತಿದ್ದದರಿಂದ ಶ್ರೀಸದ್ಗುರು ಮಹಾರಾಜರ ವೈಶಿಷ್ಟ್ಯವು ಹೀಗೆ ನನ್ನ ಅಂತಃಕರಣದ ಮೇಲೆ ಬಿಂಬಿಸಿರುತ್ತದೆ. ಅದು ಈ ಜನ್ಮದಲ್ಲಿಯಾದರೂ ನನ್ನ ಹೃತ್‌ಪಟಲದ ಮೇಲಿಂದ ಎಂದೂ ಇಲ್ಲದಂತಾಗಲಾರದು.

ಅಂದಿನಿಂದ ಧ್ಯಾನದಲ್ಲಿ ನಾನು ನಾನಾ ಪ್ರಕಾರದ ದೃಶ್ಯಗಳನ್ನು ನೋಡಹತ್ತಿದೆ. ನನ್ನ ಪ್ರೀತಿಯ ದೇವತೆ ಶ್ರೀದತ್ತ, ನನ್ನ ಮೊದಲಿನ ಗುರು ಶ್ರೀನಾರಾಯಣ ಮಹಾರಾಜರು ಮತ್ತು ಶ್ರೀಗಜಾನನ ಮಹಾರಾಜರು, ಈ

ಮೂಗೂ ಮುಂದಿ ಧ್ಯಾನದಲ್ಲಿ ನನ್ನ ಎದುರಿಗೆ ಬರುತ್ತಿರುವರು ಮತ್ತು ನಾನು ಯಥಾಶಕ್ತಿ ಇವರ ಮಾನಸಪೂಜೆಯನ್ನು ಮಾಡುತ್ತಿದ್ದೇನೆ. ಒಮ್ಮೆ ಶ್ರೀದತ್ತ ಮಹಾರಾಜರು ತೇಜೋಮಯ ಪ್ರಕಾಶದೊಳಗೆ ಸಿಂಹಾಸನದ ಮೇಲೆ ಕೂತಿರುವದು ಕಂಡೆನು, ಅವರು ನನ್ನ ಸರ್ವ ಸಂಶಯಗಳನ್ನು ದೂರ ಮಾಡಿ, "ಸರ್ವ ಭೂತಗಳಲ್ಲಿ ಒಬ್ಬನೇ ಪರಮಾತ್ಮನು ವಾಸಿಸುತ್ತಿದ್ದಾನೆ, ಆದ್ದರಿಂದ ನೀನು ಎಲ್ಲ ದ್ವೈತಭಾವವನ್ನು ಬಿಟ್ಟು ಯಾರು ನಿನಗೆ 'ಸೋಹಂ' ಮಂತ್ರದ ಉಪದೇಶ ಮಾಡಿರುತ್ತಾರೊ ಅವರನ್ನೆ ನೀನು ಸದ್ಗುರು ಅಂತ ಅವರ ಮಾನಸಪೂಜಾ ವ ಸೇವಾ ಮಾಡುತ್ತಿರು, ಹೀಗಾದರೆ ನಿನ್ನ ಉತ್ತರೋತ್ತರ ಪ್ರಗತಿ ಆಗುತ್ತ ಖರೆ ಸುಖ ಮತ್ತು ಶಾಂತಿ ನಿನಗೆ ಪ್ರಾಪ್ತವಾಗುವವು ಮತ್ತು ಕ್ರಮಶ್ರವ ದಿಂದ ಜ್ಞಾನ ಪ್ರಾಪ್ತಿಯ ಮಾರ್ಗವು ಶಿಕ್ಕೀತು" ಎಂದು ಹೇಳಿದರು.

ಮುಂದೆ ನಾನು ಧ್ಯಾನಯೋಗದ ಅಭ್ಯಾಸವನ್ನು ಮಾಡುತ್ತಿರುವಾಗ, ಧ್ಯಾನದಲ್ಲಿ ಸಮುದ್ರ, ಗುಡ್ಡ, ನಾನಾಪ್ರಕಾರದ ಬಣ್ಣಗಳು, ಸಾಗರದಲ್ಲಿ ಶೇಷಶಾಯಿ ಭಗವಂತನು, ಮಹಾಲಕ್ಷ್ಮಿ, ಸಾಧುಸಂತರು, ಸತ್ಯ, ವ್ಯಾಘ್ರ ಒಮ್ಮೊಮ್ಮೆ ಗಾಢಾಂಧಃಕಾರ ಮತ್ತು ಅಲ್ಲಿ ಮಿಂಚಿನ ಹೊಳಪು, ಒಮ್ಮೆ ನೀಲ ರಂಗ ಮತ್ತು ಅದರಲ್ಲಿ ದೈದೀಪ್ಯಮಾನ ಜ್ಯೋತಿ ವಗೈರೆ ದೃಶ್ಯಗಳು ಕಾಣಿಸುವವು. ಆ ಮೂಲಕ ಚಿತ್ತದ ಏಕಾಗ್ರತೆಯು ಆಗಲಿಕ್ಕೆ ಸುರುವಾಯಿತು, ಆನಂದವನ್ನು ಅನುಭವಿಸುತ್ತಿದ್ದೆ, ಮತ್ತು ವೃತ್ತಿಯ ಸ್ವಲ್ಪ ಲಯವೂ ಆಗಲಿಕ್ಕೆ ಹತ್ತಿತು.

ಮುಂದೆ ಕೆಲವು ದಿವಸಗಳಲ್ಲಿ ಶ್ರೀ ಗಜಾನನ ಮಹಾರಾಜರು, ನನಗೆ 'ಸೋಹಂ'ದ ಜಪವನ್ನು ಶ್ವಾಸೋಚ್ಛ್ವಾಸದಲ್ಲಿ ಮಾಡಗಲಿಕ್ಕೆ ಕಲಿಸಿದರು, ಮತ್ತು ನೀವು ಧ್ಯಾನದಲ್ಲಿ ಯಾವ ಗುರುಮೂರ್ತಿಯನ್ನು ದೃಷ್ಟಿಮುಂದೆ ತರುತ್ತೀರಿ, ಅದನ್ನು ಈಗ ಹೃದಯದಲ್ಲಿ ಕೂಡ್ರಿಸಿ, ಅನಂತರ ಅದರ ಮಾನಸಪೂಜಾ ವಗೈರೆಯನ್ನು ಮಾಡುತ್ತಿರಿ ಎಂದು ಹೇಳಿದರು. ಆ ಪ್ರಕಾರ ನಾನು ಮಾಡುತ್ತಿರುವಾಗ ಅದೇ ಧ್ಯಾನಸಮಯದಲ್ಲಿ ಶ್ರೀಗುರು ಮಹಾರಾಜರಿಗೆ ನನ್ನ ಶಂಕೆಗಳನ್ನು ದೂರ ಮಾಡುವ ಸಲುವಾಗಿ ಪ್ರಶ್ನೆಗಳನ್ನು ಕೇಳಿದೆ,

ಪ್ರಶ್ನೆ ೧ — ಮಹಾರಾಜರೆ, ನನಗೆ ಯಾವ ಯಾವ ದೃಶ್ಯ ಕಾಣಿಸಿದವು ಅವು ಮುಂದೆ ಇಲ್ಲದಂತಾದವು ಅವುಗಳ ಉಪಯೋಗವೇನು?

ಉತ್ತರಃ— ಅಭ್ಯಾಸ ಮಾಡುವ ಮುಮುಕ್ಷುವಿಗೆ ಯಾವ ದೃಶ್ಯಗಳು ಕಾಣಿಸುತ್ತವೊ ಅದು ಗುರು ಕೃಪಾ ಎಂದು ತಿಳಿಯತಕ್ಕದ್ದು. ಮುಂದೆ ಆ ದೃಶ್ಯಗಳು ಇಲ್ಲದಂತಾಗಿ ವೃತ್ತಿಯು ಸ್ವರೂಪದಲ್ಲಿ ತದಾಕಾರ ಅಥವಾ ಲೀನವಾಗಲಿಕ್ಕೆ ಹತ್ತಿ, ಮುಮುಕ್ಷುವಿಗೆ ಸಂಸಾರವಿದ್ದರೂ, ಏನತ್ತು ಮಾಡುತ್ತಿದ್ದರೂ ಅದರೊಳಗಿಂದ ಅಲಿಪ್ತನಾಗಲಿಕ್ಕೆ ಸಾಧ್ಯವಾಗುವದು, ಅಂದರೆ ಪೂರ್ವ ಸಂಚಿತಾನುಸಾರ

ಯಾವ ಸುಖದುಃಖಗಳು ಯಾವ್ಯಾವ ವೇಳೆಗೆ ಸಂಭವಿಸಬೇಕೋ ಅವು ಅವು ಆಯಾ ವೇಳೆಗೆ ಸಂಭವಿಸುತ್ತವೆ. ಆದರೆ ಅವುಗಳಿಂದ ಅವನ ಮನಸ್ಸಿನ ಮೇಲೆ ಎಷ್ಟು ಮಾತ್ರಕ್ಕೂ ಪರಿಣಾಮ ಆಗಲಾರದು ಮತ್ತು ಮನಸ್ಸು ಶಾಂತ ಮತ್ತು ಸ್ಥಿರವಾಗಿರುತ್ತದೆ.

ಪ್ರ. ೩:— ಮಹಾರಾಜರೇ, ಒಬ್ಬ ಶಿಷ್ಯನಿಗೆ ಈ ಧ್ಯಾನಯೋಗವು ಸಾಧಿಸುವದಿಲ್ಲ ಅಥವಾ ಅವನ ಮನಸ್ಸಿನ ಏಕಾಗ್ರತೆಯಾಗುವದಿಲ್ಲ, ಅಂತ ಅವನಿಗೆ ದೃಶ್ಯಗಳು ವಗೈರೆ ಏನೂ ಕಾಣಿಸುವದಿಲ್ಲ; ಆದರೆ ಅವನು ತನ್ನ ಗುರುವಿನ ಅಖಂಡ ಸೇವೆಯನ್ನು ಮಾಡುತ್ತ ಯಾವಾಗಲೂ ಗುರು ಸನ್ನಿಧಿಯಲ್ಲಿ ಇರುವನಾದರೆ ಅವನಿಗೆ ಏನಾದರೂ ಲಾಭವಾಗುವದೋ ಇಲ್ಲ ?

ಉತ್ತರ:— ಯಾವಾತನು ಗುರು ಸನ್ನಿಧಿಯಲ್ಲಿದ್ದು ಗುರು ಸೇವೆಯಲ್ಲಿ ತತ್ಪರನಿರುತ್ತಾನೆ, ಸತ್ಯತ್ವದಿಂದ ವ ಸದಾಚಾರದಿಂದ ನಡಿಯುತ್ತಾನೆ, ಅವನ ವಾಸನೆಗಳ ಕ್ಷಯವಾಗುತ್ತ ಅವನ ವೃತ್ತಿಯಲ್ಲಿ ಉತ್ತರೋತ್ತರ ಬದಲಾಗುತ್ತ ಇರುವದು. ಅವನಿಗೆ ಸಹನಶೀಲತ್ವವು ಪ್ರಾಪ್ತವಾಗಿ, ಸುಖದುಃಖಾದಿ ವಿಕಾರಗಳಿಂದ ಉಪದ್ರ ಆಗದೆ ಅವನು ಸದಾ ಆನಂದದಲ್ಲಿ ಇರುತ್ತಾನೆ. ಅವನಿಗೂ ಶಾಂತಿಸುಖದ ಲಾಭವು ಶಿಗುತ್ತದೆ. ದೃಶ್ಯಗಳು ಕಾಣಿಸದಿದ್ದರೂ ಬರೇ 'ಸೋಹಂ' ದ ಜಪದಿಂದಲೆ ಅವನ ವೃತ್ತಿ ತದಾಕಾರವಾಗುವದು. ಆದರೆ ಆತನ ಪೂರ್ವ ಸಂಚಿತಾನುರೂಪ ಅವನಿಗೆ ಸದ್ಗುರುವು ಒಳ್ಳೆಯವನು ಮತ್ತು ಸಾಕ್ಷಾತ್ಕಾರಿ ಶಿಗಬೇಕು. ಇವೆಲ್ಲ ಯೋಗ ಘಟಿಸುವದು, ಇದು ಪೂರ್ವ ಸಂಚಿತ ವಿನಹಾ ಆಗುವದಿಲ್ಲ. ಪೂರ್ವಸಂಚಿತ ಒಳ್ಳೇದು ಇದ್ದರೆ, ಇಂಥ ಯೋಗವು ಸಹಜವಾಗಿ ಸಂಭವಿಸುವದು.

ಪ್ರ. ೪:— ಯಾವಾತನ ಪೂರ್ವಸಂಚಿತ ಉತ್ತಮವದೆ, ಇಂಥ ಮುಮುಕ್ಷು ಅಥವಾ ಗುರುಪುತ್ರನನ್ನು ಗೊತ್ತುಮಾಡಿಕೊಳ್ಳುವದು ಹ್ಯಾಗೆ ?

ಉತ್ತರ:— ಯಾವಾತನಿಗೆ ತನ್ನ ಕೆಟ್ಟ ಆಚರಣೆಯು ಪಶ್ಚಾತ್ತಾಪವಾಗಿ, ಗುರು ಚರಣಗಳಲ್ಲಿ ಆತನು ಲೀನವಾಗುವನೋ, ಮತ್ತು ಯಾವಾತನಿಗೆ ಪರಮಾರ್ಥದ ವಿಶೇಷ ತಳಮಳ ಹತ್ತಿರುವದೋ, ಇಂಥ ಮುಮುಕ್ಷುವಿನ ಮೇಲೆ ಸದ್ಗುರು ಕೃಪೆಯು ಬೇಗನೆ ಆಗುತ್ತದೆ. ಅವನು ಸದ್ಗುರುವು ಹೇಳಿದ ಅಭ್ಯಾಸ ಮಾಡುತ್ತ ಇದ್ದು ಅವನ ವೃತ್ತಿಯಲ್ಲಿ ತೀವ್ರವಾಗಿ ಬದಲಾಗುತ್ತ ನಡಿಯುತ್ತದೆ. ಅವನ ವಿಷಯದಲ್ಲಿ ಅವನ ಆಪ್ತಸ್ವಕೀಯರಿಗೆ ಸಮಾಜಕ್ಕೆ ಇಷ್ಟಮಿತ್ರರಿಗೆ ಶತ್ರುಗಳಿಗೆ ಸಹಾ ಆನಂದವಾಗುತ್ತದೆ ಅವನು ಮುಂದೆ ಅಂತರ್ಮುಖನಾಗಿ ಧ್ಯಾನದಲ್ಲಿ ನಿಮಗ್ನನಾಗುವನು. ಅವನಿಗೆ ದೃಶ್ಯಗಳು ಕಾಣಲಿ ಕಾಣದಿರಲಿ, ಅವನು ಅಖಂಡ ಆನಂದದಲ್ಲಿರುವನು ಮತ್ತು ಅವನಿಗೆ ಶಾಂತಿಸುಖವು ಶಿಕ್ಕೇತು.

ಪ್ರಶ್ನೆ ೪:— ದೃಶ್ಯಗಳು ಕಾಣಿಸಿದವೆಂದರೆ ಆತ್ಮಜ್ಞಾನವಾಯಿ ತೆಂದು ತಿಳಿಯಬೇಕೇನು ?

ಉತ್ತರ:— ಇಲ್ಲ. ದೃಶ್ಯಗಳನ್ನು ನೋಡುವದು ಇದು ಆತ್ಮಜ್ಞಾನ ವಲ್ಲ. ಆದರೆ ಜ್ಞಾನಮಾರ್ಗದಿಂದ ಪರಮೇಶ್ವರನ ಕಡೆ ಹೋಗುವ ಮಾರ್ಗ ದಲ್ಲಿ ಅವು ಮಜಲು ಅಥವಾ ಗುರ್ತಗಳು ಇರುತ್ತವೆ. ಈ ದೃಶ್ಯಗಳ ಗುರ್ತ ಗಳು ನೋಡುತ, ನೋಡುತ್ತ, ಇದಲ್ಲ, ಅದಲ್ಲ, ಎಂದು ತಿಳಿತಿಳಿಯುತ್ತ ಸರ್ವ ದೃಶ್ಯಗಳು ಇಲ್ಲದಂತಾಗಿ, ಅಂದರೆ ಅವು ಮಾಯಾವಿ ಸುಳ್ಳು ಎಂತ ತಿಳಿದು, ಕಡೆಗೆ ' ಸರ್ವಂ ಖಲ್ವಿದಂ ಬ್ರಹ್ಮ ' ಎಂಬದು ತಿಳಕೊಂಡು ಪರಮಾತ್ಮನಲ್ಲಿ ಏಕ ರೂಪವಾಗಿರುವದು, ಇದೇ ಸತ್ಯವಾದ ಆನಂದವು ಅದೇ ಶಾಂತಿ ಅವನೇ ಪರ ಮಾತ್ಮ ಎಂದು ತಿಳಿಯತಕ್ಕದ್ದು. ಸತ್ಪುರುಷರು ಅನ್ನುತ್ತಾರೆ " ತುಝ ಆಹೆ ತುಜಪಾಶಿಂ। ಪರಿ ತುಂ ಜಾಗಾ ಚುಕಲಾಶಿ ॥ " ( ಅರ್ಥ-ನಿನ್ನದು ನಿನ್ನ ಹತ್ತ ರವೇ ಅದೆ, ಆದರೆ ನೀನು ಅದರ ಸ್ಥಳವನ್ನು ತಪ್ಪಿದ್ದಿ ) ಅದೇ ಈ ಜಾಗೆ ಅಂತ ತಿಳಿಯಬೇಕು.

ಪ್ರಶ್ನೆ. ೫:— ಇನ್ನು ಒಂದು ಶಂಕೆಯು ಹೀಗದಲ್ಲ, ತಾವು ಧ್ಯಾನ ಸಮಯದಲ್ಲಿ ಪ್ರಶ್ನೋತ್ತರ ರೂಪದಿಂದ ಏನು ಜ್ಞಾನವನ್ನು ಹೇಳುತ್ತೀರಿ. ಅದನ್ನು ಪ್ರತ್ಯಕ್ಷ ಭೆಟ್ಟಿಯ ವೇಳೆಗೆ ಆ ಸ್ಥಾನದಲ್ಲಿ ಬಹಳ ಮಂದಿಯು ಬಹಳ ವಿಚಾರಗಳು ನಡೆದಿರುವಾಗ ಅಲ್ಲಿ ಯಾಕೆ ಹೇಳುವದಿಲ್ಲ ?

ಉತ್ತರ :— ಧ್ಯಾನ ಸಮಯದಲ್ಲಿ ನಿನ್ನ ಮತ್ತು ನನ್ನ ಲಿಂಗದೇ ಹದ್ದು ಏಕೀಕರಣವಾಗಿರುತ್ತದೆ. ಮತ್ತು ಅಲ್ಲಿ ಇತರ ಬಾಹ್ಯ ಉಪಾಧಿಗಳು ಎಷ್ಟುಮಾತ್ರಕ್ಕೂ ಇರುವದಿಲ್ಲ. ಮನಸ್ಸಿನ ಸ್ಥಿರತೆಯು ಇರುತ್ತದೆ. ಆದ್ದರಿಂದ ಅಲ್ಲಿ ಬೋಧ ಮಾಡುವದು ಸುಲಭವಾಗಿರುತ್ತದೆ. ಆ ಸಮಯದ ಬೋಧದಿಂದ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವಾಗುತ್ತದೆ ಮತ್ತು ಅದು ತೀವ್ರವಾಗಿ ತಿಳಿ ಯುವದು. ಹಾಗೆ ಪ್ರತ್ಯಕ್ಷ ಭೆಟ್ಟಿಯಾದಾಗ್ಗೆ ಉಭಯತರ ಏಕೀಕರಣವಾಗುವ ದಿಲ್ಲ, ವ ಇತರ ಉಪಾಧಿಗಳು ಬಹಳ ಇರುತ್ತವೆ. ಇದಲ್ಲದೆ ಪ್ರತ್ಯಕ್ಷ ಭೆಟ್ಟಿ ಯೊಳಗಿನ ಭಾಷೆಯು ಗೂಢ ವ ಅಲಂಕಾರಿಕ ಇರುತ್ತದೆ, ಅಂತ ಅದು ತಿಳಿಯು ವದಿಲ್ಲ, ಮತ್ತು ತಿಳಿಸಿಕೊಡಲಿಕ್ಕೆ ಬರುವದಿಲ್ಲ.

ಪ್ರಶ್ನೆ. ೬ :— ಮಹಾರಾಜರೇ, ಅಂತರ್ಮುಖವಾಗುವದೆಂತ ಏನು ತಾವು ಹೇಳಿದಿರಿ ? ಆದರೆ ಬಾಹ್ಯದೃಷ್ಟಿ ಮತ್ತು ಅಂತರ್ದೃಷ್ಟಿ ಇದರೊಳಗೆ ಭೇದವೇನು ?

ಉತ್ತರ :— ನೀವು ಯಾವ ಯಾವ ದೃಶ್ಯಗಳನ್ನು ಧ್ಯಾನಕಾಲದಲ್ಲಿ ನಿಮ್ಮ ದೃಷ್ಟಿಯು ಎದುರಿನ ಬಾಹ್ಯ ಆಕಾಶದಲ್ಲಿ ನೋಡುವಿರೊ, ಅವನ್ನು ಹಾಗೆ

ಕಾಣದೆ, ಹೊರಗಿನ ಸೃಷ್ಟಿಯಲ್ಲಿಯ ದೃಶ್ಯಗಳನೆಲ್ಲ ಇಲ್ಲದಂತೆ ಮಾಡಿ ಬರೆ ಗುರು ಮೂರ್ತಿಯನ್ನು ನೀವು ನಿಮ್ಮ ಹೃದಯಾಕಾಶದಲ್ಲಿ ಸ್ಥಿರಮಾಡಿ, ಅಲ್ಲಿ ಅದರ ಮಾನಸಪೂಜೆಯನ್ನು ಮಾಡಬೇಕು, ಆ ಮೂಲಕ ಅಲ್ಲಿ ಹ್ಯಾಗೆ ಮನಸ್ಸಿನ ಸ್ಥಿರತೆಯಾಗುವದೊ, ಹಾಗೆ ಬಾಹ್ಯ ಆಕಾಶದಲ್ಲಿ ಆಗಲಾರದು. ಇದಕ್ಕೆ ಅಂತರ್ದೃಷ್ಟಿ ಅಥವಾ ಅಂತರ್ಮುಖವಾಗುವದೆಂತ ಹೇಳುತ್ತಾರೆ. ಈ ಪ್ರಕಾರ ಶ್ರೀಕೃಷ್ಣನು ಉದ್ಧವನಿಗೆ ಅಂತರ್ಮುಖವಾಗುವ ವಿಷಯದಲ್ಲಿ ತಿಳಿಸಿ ಹೇಳಿದನು, ಈ ಪ್ರಕಾರ ಪರಮಾತ್ಮ ಅಂದರೆ ಸದ್ಗುರು, ಆ ಸದ್ಗುರುವನ್ನು ತನ್ನ ಹೃದಯಕಮಲದಲ್ಲಿ ತೇಜೋಮಯ ಜ್ಯೋತಿಯಲ್ಲಿ ನೋಡಬೇಕು ವ ಅಲ್ಲೇ ಮನಸ್ಸನ್ನು ಸ್ಥಿರಮಾಡಿ ಧ್ಯಾನ ಮಾಡಬೇಕು.

ಈ ಪ್ರಕಾರ ನನ್ನ ಧ್ಯಾನಯೋಗದ ಅನುಭವದ ಸಾರವನ್ನು ಯಥಾ ಮತಿ ಬರೆದಿರುತ್ತೇನೆ, ಇದು ಗುರು-ಕೃಪಾ ಸ್ಫೂರ್ತಿಯೆ ಇರುವದು.

ತಾರೀಖು ೧೮-೮-೩೮

(ಸಹಿ) ವಾಮನ ಕೇಶವ ಮಾಹೆಗಾಂವಕರ
ಪೆನ್‌ಶನರ, ಶಿಕ್ಷಕ, ನಾಶಿಕ.

---

ರಾ. ರಾ. ವಸಂತ ನಾರಾಯಣ ನಿರೋಖೆಕರ, ಪೋಲಿಸ ಟ್ರೇನಿಂಗ ಸ್ಕೂಲ, ನಾಶಿಕ ಇವರ ಅನುಭವಗಳು:—

ನನ್ನ ಚಿಗಪ್ಪ ರಾ. ದ ಲ. ನಿರೋಖೆಕರ ಇವರು ಸನ್ ೧೯೩೮ನೇ ವರ್ಷದ ದಿವಾಳಿಯಿಂದ ಶ್ರೀಗಜಾನನ ಮಹಾರಾಜರ ಕಡೆ ಹೋಗುತ್ತಿದ್ದರು. ಸನ್ ೧೯೩೯ ತಾ|| ೧೫ ನೇ ಮಾರ್ಚ ಈ ದಿನ ನಾನು ಅವರ ಕೂಡ ಮಹಾರಾಜರ ಕಡೆ ಹೋದೆನು, ಮತ್ತು ನನ್ನ ಪ್ರಥಮ ದರ್ಶನವನ್ನು ತಕ್ಕೊಂಡೆ. ಮಹಾರಾಜರು ಕೃಪೆಮಾಡಿ ನನ್ನಮೇಲೆ ಅನುಗ್ರಹ ಮಾಡಬೇಕಂತ ನನ್ನ ಇಚ್ಛೆ ಇತ್ತು. ನನ್ನ ಚಿಗಪ್ಪನವರು ಮಹಾರಾಜರಿಗೆ ನನ್ನ ಪರಿಚಯ ಮಾಡಿಕೊಟ್ಟರು; ಆದರೆ ಅವರು ಆ ದಿನ ನನ್ನ ಕೂಡ ಏನೂ ಮಾತಾಡಲಿಲ್ಲ. ಅದ್ದರಿಂದ ಎರಡನೇ ದಿನ ನಾನು ಮಧ್ಯಾಹ್ನ ಹೊತ್ತಿಗೆ ಅವರ ಕಡೆಗೆ ಒಬ್ಬನೇ ಹೋದೆನು, ಅವರು ನನಗೆ 'ಶ್ರೀರಾಮ ಜಯರಾಮ ಜಯ ಜಯ ರಾಮ' ಈ ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು, ಮತ್ತು "ಏನಾಗುವದೆಂತ ನೋಡಿರಿ" ಎಂದು ಹೇಳಿದರು, ಅದೇ ದಿನ ರಾತ್ರಿ ಶ್ರೀಪಾಂಡುರಂಗನ ತೇಜೋಮಯ ಮೂರ್ತಿ ಕಾಣಿಸಿತು; ಮನಸ್ಸಿಗೆ ಬಹಳ ಆನಂದವಾಯಿತು.

ತಾರೀಖು ೧೩ನೇ ಎಪ್ರೀಲ ೧೯೩೯ ನೇ ದಿನ ಮಹಾರಾಜರು ನನಗೆ 'ಸೋಽಹಂ' ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು, ಮತ್ತು ಅಂದರು, "ಇದರ ಅಭ್ಯಾಸದಿಂದ ನಾಲ್ಕಾರು ತಿಂಗಳೊಳಗೆ ನಿನಗೆ ಸುಖ, ಶಾಂತಿ ಮತ್ತು ಆನಂದ ಇವು ಪ್ರಾಪ್ತವಾಗುವವು. ಆರಂಭದಿಂದ ನಾನು ಸುಮಾರು ಎರಡು ತಾಸು ಅಭ್ಯಾಸವನ್ನು ಮಾಡುತ್ತಿದ್ದೇನೆ. ಗುರುವಾರ ತಾ|| ೧೧-೫-೩೯ ದಿವಸದಿಂದ ಏಕಾಗ್ರತೆ ಬಹಳವಾಗುತ್ತ ಬಂದು ಜಪವು ಬಹಳ ಅಂತರದಲ್ಲಿ ಆಗುತ್ತದೆಂದು ಅನುಭವವಾಯಿತು.

ಶುಕ್ರವಾರ ತಾ|| ೧೨-೫-೩೯ ನೇ ದಿನ ನಾನು ಗಾದಿಯ ಮೇಲೆ ಮಲಗಿಕೊಂಡು ಜಪಮಾಡುತ್ತಿರುವಾಗ ಒಮ್ಮೆಂದೊಮ್ಮೆ ನನ್ನ ಟೊಂಕದಸುತ್ತ ಏನೊ ಕಟ್ಟಿದ್ದು ಬಿಡಿಸಿದಂತೆ ಅನಿಸಿತು, ಮತ್ತು ನನ್ನ ಕಣ್ಣೆದುರಿಗೆ ಒಂದು ತೇಜಸ್ವಿ ಬಿಂದು ಕಾಣಲಾರಂಭಿಸಿತು; ಅದರಿಂದ ನನಗೆ ಬಹಳ ಆನಂದ ವಾಯಿತು.

ತಾ|| ೨೫ನೇ ಮೇ ೧೯೩೯ ದಿನ ನಾನು ಮಹಾರಾಜರ ದರ್ಶನಕ್ಕೆ ಹೋಗಿದ್ದೆ. ತಿರುಗಿ ಮನೆಗೆ ಬಂದಮೇಲೆ ನಾನು ಕಣ್ಣು ಮುಚ್ಚಿ ಜಪ ಮಾಡುತ್ತಿರುವಾಗ, ಶ್ರೀಸದ್ಗುರು ಕೃಪೆಯಿಂದ ನನ್ನ ಹೊಕ್ಕಳಿನಿಂದ 'ಸೂಂ ಸೂಂ' ಹೀಗೆ ಧ್ವನಿಯಾಗಿ, ಆ ಧ್ವನಿಯು ಮಸ್ತಕದ ಪರ್ಯಂತ ಹೋಯಿತು, ಮತ್ತು ನನಗೆ ಸುಮಾರು ಒಂದೆರಡು ಸೆಕೆಂಡು ಕುಂಡಲಿನಿಯು ಕಾಣಿಸಿತು. ಆಗ ಬಹಳ ಸುಖವೆನಿಸಿತು.

ಶ್ರೀಸದ್ಗುರು ಕೃಪೆಯಿಂದ ಒಟ್ಟು ಒಂದುವರೆ ತಿಂಗಳಲ್ಲಿ ನನಗೆ ಮೇಲಿನ ಅನುಭವಗಳು ಬಂದವು. ಹೀಗೆಯೇ ಉತ್ತರೋತ್ತರ ಶ್ರೀಗುರು ಕೃಪೆಯಿಂದ ಈ ಮಾರ್ಗದಲ್ಲಿ ನನ್ನ ಸುಧಾರಣೆಯಾಗಿ ಆನಂದವಾಗಬೇಕೆಂದು ಶ್ರೀಗುರು ಚರಣಗಳಲ್ಲಿ ಪ್ರಾರ್ಥನೆಯದೆ.

ಕಳೆದ ಒಂದು ತಿಂಗಳಲಾಗಾಯತು ಘಂಟೆಯ ಮತ್ತು ದಬದಬಿಯ ನಾದವು ನನ್ನ ಕಿವಿಯಲ್ಲಿ ಒಂದೇ ಸಮನೆ ಕೇಳಬರುತ್ತವೆ; ಅದರಿಂದ ನನಗೆ ಆನಂದವಾಗುತ್ತದೆ ಮತ್ತು ಅದರಲ್ಲಿ ಮಗ್ನವಾಗಿ ಹೋಗುತ್ತೇನೆ.

ಪೋಲೀಸ ಟ್ರೆನಿಂಗ ಸ್ಕೂಲ

ನಾಶಿಕ ತಾ. ೫-೮-೩೯ (ಸಹಿ) ವಸಂತ ನಾ. ನಿರೋಖೆಕರ

—೧೬—

ರಾ. ರಾ. ಗೋವಿಂದ ಏಕನಾಥ ಏಕಬೋಟೆ, ಫಾರೆಸ್ಟ ರೇಂಜರ, ಇವರ ಅಧ್ಯಾತ್ಮಿಕ ಅನುಭವಗಳು. ಅವರ ಮಿತ್ರ ವ ಮಾರ್ಗದರ್ಶಕ ರಾ. ತಳವಳಕರ ಇವರು ಹೇಳಿದ್ದರ ಮೇಲಿಂದ ನಮೂದಿಸಿದೆ: —

ಶ್ರೀ. ಏಕಬೋಟೆ ಇವರು ನನ್ನ ಮಿತ್ರರಿದ್ದಾರೆ. ಅವರು ಜಂಗಲ ಖಾತೆಯೊಳಗೆ ರೇಂಜರ ಇದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ, ಸಾಂಸಾರಿಕ ಅಡಚಣಿ ಪೆಶಿಯಿಂದ ಅವರ ಮನಸ್ಸಿಗೆ ಬಹಳ ತೊಂದರೆಯಾಯಿತು, ಮತ್ತು ಅವರು ಅಧ್ಯಾತ್ಮ ಮಾರ್ಗದ ಕಡೆಗೆ ತಿರುಗಿದರು, ಮತ್ತು ಆ ಕಡೆ ವೃತ್ತಿ ಪೆಶಿಯಿಂದ ಅವರ ಜಪ, ಸ್ತೋತ್ರಪಾಠ, ಉಪವಾಸ ವಗೈರೆ ಪ್ರಯತ್ನಗಳು ಸುರುವಾದವು. ಈ ಸಂಗತಿಯನ್ನು ನಾನು ರಾ. ಭಾವುಸಾಹೇಬ ವಾಲಾವಲಕರ ಇವರಿಗೆ ತಿಳಿಸಿದ್ದು, ಅವರು ಏಕಬೋಟೆ ಇವರಿಗೆ ಶ್ರೀಗಜಾನನ ಮಹಾರಾಜರ ಕಡೆ ಹೋಗಲಿಕ್ಕೆ ಅನುಮೋದನ ಕೊಟ್ಟರು. ಆ ಸಂಗತಿ ನನಗೂ ತಿಳಿಯಿತು, ಮತ್ತು ನಾನು ಸ್ವತಃ ಮಹಾರಾಜರ ಕಡೆಗೆ ಹಿಂದೆ ಒಂದೆರಡು ಸಾರೆ ಹೋಗಿರುವದರಿಂದ ಏಕಬೋಟೆ ಇವರಿಗೆ ನಾನು ಸ್ವತಃ ಅವರ ಕಡೆಗೆ ಕರಕೊಂಡು ಹೋದೆನು. ಅಲ್ಲಿ ಮಹಾರಾಜರು ಪರಮಾರ್ಥ ಸಂಬಂಧ ಏಕಬೋಟೆ ಇವರ ಯಾವ ಯಾವ ಪ್ರಯತ್ನಗಳು ಚಾಲು ಇವೆ ಅವುಗಳನ್ನು ಗೊತ್ತುಮಾಡಿಕೊಂಡರು. ಮತ್ತು ತಮ್ಮ 'ಸೋಹಂ' ಮಂತ್ರದ ಮತ್ತು ಯೋಗದ ಸಂಕ್ಷೇಪ ವರ್ಣನೆಯನ್ನು ಮಾಡಿದರು. ಮತ್ತು ಏಕಬೋಟೆ ಇವರ ಪ್ರಯತ್ನಗಳು ಬರೇ ಚಿತ್ತಶುದ್ಧಿ ಮಾಡುವವಕ್ಕಾಗಿರುತ್ತಾನೆ, ಬಹಳ ಕಾಲ ಒಡದೀತು, ಮತ್ತು ಸದ್ಗುರು ಮಾರ್ಗದರ್ಶ ಇದ್ದದರಿಂದ ಅವುಗಳ ಹೆಚ್ಚಿನ ಮಹತ್ವವೂ ಇಲ್ಲ, ಹೀಗೆ ಹೇಳಿ, ಸದ್ಗುರು ಕಡೆಯಿಂದ ಅನುಗ್ರಹ ಪ್ರಾಪ್ತಿಯಾದರೆ ಯೋಗ ಮಾರ್ಗವನ್ನು ಒಮ್ಮೆಲೆ ಅವಲಂಬಿಸಲಿಕ್ಕೆ ಅಡ್ಡಿಯಿಲ್ಲ ಎಂದು ಅಂದರು. ಈ ವಿಚಾರವು ನಮಗೆ ಚಲೋದನಸಲಿಲ್ಲವೆಂತ ನಾವು ನಿರಾಶರಾಗಿ ತಿರುಗಿ ಬಂದೆವು. ಆಮೇಲೆ ಏಕಬೋಟೆ ಇವರಿಗೆ ನಾನು ಶ್ರೀರಾಮತೀರ್ಥರ ಗ್ರಂಥದ ನಾಲ್ಕು ಭಾಗಗಳನ್ನು ಓದಲಿಕ್ಕೆ ಕೊಟ್ಟೆ, ವ ಈಶ್ವರನ ಮೇಲೆ ಪೂರ್ಣ ಭರವಸೆ ಇಟ್ಟು ತನ್ನ ಸ್ವಬುದ್ಧಿ ಪ್ರಕಾರ ಪ್ರಯತ್ನ ಚಾಲು ಇಡುವ ವಿಷಯದಲ್ಲಿ ಅವರಿಗೆ ನಾನು ಉತ್ತೇಜನ ಕೊಟ್ಟೆ. ಆ ಪ್ರಕಾರ ಅವರು ಮಾಡಿದರು ಮತ್ತು ಅವರ ಪ್ರಯತ್ನಗಳು ಹಾಗೆಯೇ ಇನ್ನೂ ನಡೆಯುತ್ತಿದ್ದಾವೆ. ಆದರೂ ಶ್ರೀಗಜಾನನ ಮಹಾರಾಜರ ಭೆಟ್ಟಿಯಾದಲಾಗಾಯತು ಅವರ ಸುಧಾರಣಿಕೆ ಬಹಳ ತೀವ್ರವಾಗಿ ಆಗುತ್ತಿತ್ತು. ಯಾವ ಯಾವ ಕಾಲದಲ್ಲಿ ತನ್ನ ಸುಧಾರಣಿಕೆಯಾಗುವದೆಂದು ಅವರಿಗೆ ತಿಳಿಯುವದೊ, ಅಥವಾ ಯಾವದೊಂದು ಸಂಶಯವು ಮನಸ್ಸಿಗೆ ಬಂದು ಆ ಸಂಬಂಧ ಪ್ರಶ್ನೆಯು ಎದ್ದಿತು ಅಂದರೆ ಅವರು ನನಗೆ ಪತ್ರದಿಂದ ತಿಳಿಸುತ್ತಿದ್ದರು; ಮತ್ತು ಅವಕ್ಕೆ ಯಥಾಮತಿ ಉತ್ತರವನ್ನು

ಬರೆದು ಅವರಿಗೆ ಉತ್ತೇಜನವನ್ನು ಕೊಡುತ್ತಿದೆ. ನಾನು ಸ್ವತಃ ದೊಡ್ಡ ವಿದ್ವಾನನೂ ಅಲ್ಲ ಅಥವಾ ಯೋಗಿಯೂ ಅಲ್ಲ. ಆದರೆ ಆಗಾಗ್ಗೆ ನನ್ನ ಪತ್ರಗಳಿಂದ ಏಕಬೋಟೆ ಇವರಿಗೆ ಸಮಾಧಾನವಾಗುತ್ತಿತ್ತು. ಇತ್ತಿತ್ತಲಾಗೆ ಅವರ ಸುಧಾರಣೆಕೆ ಇಷ್ಟು ಆಗಿಯದೆ ಅಲ್ಲ ಅವರಿಗೆ ನಿರ್ಗುಣ ಪರಬ್ರಹ್ಮದ ಧ್ಯಾನವು ಸಹಜವಾಗಿ ಪ್ರಾಪ್ತವಾಗಿದೆ. ಆ ಸ್ಥಿತಿಯಲ್ಲಿ ಅವರು ಪೂರ್ಣ ತಲ್ಲೀನವಾಗಿ ಹೋಗುತ್ತಾರೆ. ಮತ್ತು ಆ ಸ್ಥಿತಿಯೋಗಣ ಅವರ ಆನಂದಿ ಮುದ್ರೆಯನ್ನು ಯಾವನು ನೋಡುವನೊ ಅವನಿಗೆ ಆ ಸ್ಥಿತಿಯು ನಿಶ್ಚಯವಾಗದೆ ಇರಲಾರದು. ಕಳೆದ ಎರಡು ತಿಂಗಳ ಹಿಂದೆ ಯಾವ ಅವರ ನನ್ನ ಭೆಟ್ಟಿಯಾಯಿತು ಆ ಹೊತ್ತಿನ ಅವರ ಸ್ಥಿತಿ ಮತ್ತು ಅದಕ್ಕೂ ಮೊದಲು ಅವರು ಬರೆದ ಪತ್ರದೊಳಗಿನ ಅನುಭವಗಳು ಇವು ನನ್ನ ಗ್ರಹಣಶಕ್ತಿಗೆ ಮೀರಿದಾಗಿದ್ದವು. ಇದು ಹ್ಯಾಗೆ ಆಯಿತು ಈ ಸಂಬಂಧ ನನಗೆ ದೊಡ್ಡ ಆಶ್ಚರ್ಯವಾಯಿತು. ಈ ಸಂಗತಿಯನ್ನು ನಾನು ವಾಲಾವಲಕರ ಇವರಿಗೆ ತಿಳಿಸಿದೆ; ಆಗ, ರಾ. ಏಕಬೋಟೆ ಇವರ ಶ್ರೀಗಜಾನನ ಮಹಾರಾಜರ ಪ್ರಥಮ ಭೆಟ್ಟಿಯೊಳಗಿನ ಅನುಗ್ರಹದ ಪರಿಣಾಮವಿರಬೇಕೆಂದ ಅವರು ಸೂಚಿಸಿದರು."

"ನನ್ನ ತಿಳುವಳಿಕೆ ಮೇರೆಗೆ ನಾನು ಸ್ವತಃ ಏಕಬೋಟೆಯವರಿಗೆ ಪತ್ರವನ್ನು ಬರೆಯುತ್ತಿದ್ದೆ, ಅಂತ ಅವರ ಮೇಲೆ ಯಾವ ಪರಿಣಾಮ ಆಗಿತ್ತೊ, ಅವಷ್ಟು ಅಥವಾ ಅದಕ್ಕೂ ಹೆಚ್ಚಿಗೆ ನನ್ನಿಂದಾಯಿತೆಂದು ತಿಳಿಯಬೇಕಾಗಿತ್ತು; ಆದರೆ ನಾನು ಎಲ್ಲಿದ್ದೆನೊ ಅಲ್ಲೇ ಇದ್ದೇನೆ. ಈಗ ಇದು ಸತ್ಯವು ಏನಂದರೆ ಅವರು ಅತಿ ಉತ್ಕಟ ಭಾವನೆಯ ಮತ್ತು ನಿಸ್ಸೀಮ ಭಕ್ತಿಯುವರಿದ್ದ ಮೂಲಕ ಯೋಗಮಾರ್ಗದೊಳಗಿನ ಅವರ ಸುಧಾರಣೆಕೆಯ ಸರ್ವಶ್ರೇಯವನ್ನು ಅವರು ನನಗೆ ಕೊಡುತ್ತಾರೆ. ಆದರೆ ನಾನು ಆ ವಿಷಯದಲ್ಲಿ ಏನೂ ಅರಿಯದವನಿದ್ದೇನೆ; ಇದು ನನಗೆ ಬಹಳ ವಿಸ್ಮಯವಾಯಿತು. ಆದ್ದರಿಂದ ವಾಲಾವಲಕರ ಇವರು ಸೂಚಿಸಿದ ಸಂಗತಿಯ ನಾನು ವಿಚಾರವನ್ನು ಮಾಡಿದೆ. ಆ ಸಂಬಂಧ ಶ್ರೀಗಜಾನನ ಮಹಾರಾಜರಿಗೆ ಕೇಳಿದೆ, ಆಗ ಅವರು, ಅತಿ ಉತ್ಕಟ ಭಾವನೆಯ ಮತ್ತು ದೀರ್ಘಪ್ರಯತ್ನ ಮಾಡುವ ಮನುಷ್ಯನ ಸ್ವಭಾವ ಪರೀಕ್ಷಣ ಮಾಡಿದ ಮೇಲೆ ಆತನ ಯೋಗ್ಯವಾದ ಭಾವನೆಯನ್ನು ವೃದ್ಧಿಗೊಳಿಸುವ ಕಾರ್ಯವನ್ನು ಸದ್ಗುರುವು ಅವನಿಗೆ ಯಾರ ಮೇಲೆ ಶ್ರದ್ಧೆ ಇರುವದೊ ಆತನ ಮುಖಾಂತರ ಮಾಡಿಕೊಂಡಾನು; ಮತ್ತು ಅದರ ತಿಳುವಳಿಕೆ ಅವನಿಗೆ ಇರಲಿಕ್ಕೇಬೇಕೆಂತಿಲ್ಲ; ಹೀಗೆ ಅವರಾದರೂ ಹೇಳಿದರು. ಸ್ವಲ್ಪ ವಿಚಾರ ಮಾಡಿದ ಮೇಲೆ ಹಾಗೆಯೇ ಇರಬಹುದು ಎಂದು ನನಗೂ ಅನಿಸಿತು. ಹೀಗಲ್ಲದಿದ್ದರೆ ಗುರು ಅಜ್ಞಾನಿ ಇದ್ದು ಶಿಷ್ಯನು ಜ್ಞಾನಿಯಾಗುವ ಸಂಭವ ಎಲ್ಲಿ? ಶ್ರೀಗಜಾನನ ಮಹಾರಾಜರೇ ಏಕಬೋಟೆ ಇವರಿಗೆ ತಿಳಿಯದಂತೆ ಅವರ ಪ್ರಥಮ ಭೆಟ್ಟಿಯಲ್ಲಿ ಅವರ ಮೇಲೆ

ಗಾಯತ್ರಿ ಜಪವನ್ನು ಮಾಡಿ ಅದೇ ಸ್ಥಿತಿಯಲ್ಲಿ ತಿರುಗಿ ಬಂದೆನು; ಮತ್ತು ಅಂದಿನಿಂದ ಇದೇ ನಿತ್ಯಕ್ರಮವು ನಡೆದಿರುತ್ತದೆ.

ಆ ಸ್ಥಾನದಲ್ಲಿ ಚೌರಸಾಕೃತಿಯ ಸುವರ್ಣರತ್ನಾದಿಗಳಿಂದ ಕೆತ್ತಲ್ಪಟ್ಟ ಒಂದು ಮನೆಯಿದ್ದು, ಆ ಮನೆಯ ಪ್ರಕಾಶವೇ ಎಲ್ಲ ಬ್ರಹ್ಮಾಂಡತುಂಬ ಪಸರಿಸಿರುತ್ತದೆ. ಒಳಗಿನ ಸೂರ್ಯನಾರಾಯಣನೂ ಬಹಳ ದೈದೀಪ್ಯಮಾನನಿದ್ದನು. ಆದರೆ ಅವನ ಸನ್ನಿಧಿಯಲ್ಲಿ ಹೋದರೂ ಉಷ್ಣತೆಯು ಏನೂ ತೋರುವದಿಲ್ಲ. ಆದರೆ ಆ ಮನೆಯಲ್ಲಿ ಒಳಗೆ ಹೋಗುವಾಗ ಮತ್ತು ಹೊರಗೆ ಬರುವಾಗ ಪ್ರಖರ ಉಷ್ಣತೆಯು ದೇಹಕ್ಕೆ ತಾಗುತ್ತದೆ. ಮೇಲೆ ಹೋಗುವಾಗ ಅಥವಾ ಕೆಳಗೆ ಬರುವಾಗ, ಸೂರ್ಯಮಂಡಲದಿಂದ ಸ್ವಲ್ಪ ದೂರತನಕ ಉಷ್ಣತೆಯು ಭಾಸಿಸುವದು.

(೧೯) ಇದೇ ಪ್ರಕಾರ ನಾನು ಒಮ್ಮೆ ಚಂದ್ರಮಂಡಲಕ್ಕೆ ಹೋದೆನು. ಅಲ್ಲಿ ಎಲ್ಲ ಮನೆಗಳು, ದ್ವಾರಗಳು, ರಸ್ತೆಗಳು, ತೋಟಗಳು ಮತ್ತು ವನಸ್ಪತಿ ಇವುಗಳ ಕಾಡುಗಳು ವಗೈರೆ ನಮ್ಮ ಪೃಥ್ವಿಮೇಲಿನ ರಚನೆಯಂತೆಯೇ ಇರುವದು. ಅಲ್ಲಿ ಚಂದ್ರನಿಗಾಗಿ ಮಾತ್ರ ಒಂದು ರಾಜವಾಡೆ ಇದ್ದು ಅಲ್ಲಿ ಅಲೌಕಿಕ ಸುಂದರ ಸ್ತ್ರೀಯರಿಗೋಸ್ಕರ ಮಹಾಲಯಗಳವೆ. ಇವೆಲ್ಲ ರೋಹಿಣಿ ಮುಂತಾದ ಚಂದ್ರನ ರಾಣಿಗಳಿಗೋಸ್ಕರ ಕಟ್ಟಿಸಿವೆ; ಹೀಗೆ ಅಲ್ಲಿಯ ಒಬ್ಬ ಬೆತ್ತಹಿಡಿದವನು ನಮಗೆ ಹೇಳಿದನು. ಬಾಕಿ ಎಲ್ಲ ಮನೆಗಳು ಬಿಳಿ ವರ್ಣದ ಮಾಳಿಗೆ ಮನೆಗಳಿದ್ದವು; ಹಂಚಿನವಲ್ಲ. ಅಲ್ಲಿ ಇಪ್ಪತ್ತನಾಲ್ಕುತಾಸೂ ಅಂದರೆ ಅಖಂಡ ಚಂದ್ರಪ್ರಕಾಶವಿರುವದು. ರಾತ್ರಿ ಮತ್ತು ದಿವಸ ಎಂದು ಅಲ್ಲಿ ಪ್ರಕಾರಗಳಿಲ್ಲ. ಹಾಗೂ ದೀಪದ ಜರೂರಿಯು ಇಲ್ಲ. ವನಸ್ಪತಿಗಳು ವಗೈರೆ ಸೂರ್ಯಪ್ರಕಾಶದ ವಿನಹಾ ಹ್ಯಾಗೆ ಬೆಳೆಯುತ್ತವೆ ಎಂದು ನಾನು ಕೇಳಿದ್ದಕ್ಕೆ ಅದರ ಉತ್ತರ ಹೀಗೆ ಬಂತಲ್ಲ, 'ಚಂದ್ರನಲ್ಲಿ ಯಾವ ಪ್ರಭೆ ಇರುವದೊ ಅದು ಸೂರ್ಯನಿಂದಲೆ ಇರುತ್ತದೆ, ಮತ್ತು ಅದು ವನಸ್ಪತಿಗಳಿಗೆ ಸಾಕಾಗುವದು. ಅಲ್ಲಿಯ ಜನರು ಜನಾವರಗಳು ವಗೈರೆ ದಷ್ಟಪುಷ್ಟ, ತೇಜಸ್ವಿ ವ ಬಲವಾನ್ ಇರುತ್ತವೆ. ಸರೋವರಗಳೂ ಮತ್ತು ಅವುಗಳಲ್ಲಿ ಅರಳಿದ ಕಮಲಗಳೂ ಅಲ್ಲಲ್ಲಿ ಕಾಣಿಸುತ್ತಿದ್ದವು, ಕಮಲಗಳೂ ಅಖಂಡ ಅರಳಿದ್ದು ಎಂಬಂತೆ ತೋರುತ್ತಿತ್ತು. ಅವುಗಳ ಸುಗಂಧವು ಒಂದೇ ಸಮನೆ ಬರುತ್ತಿತ್ತು.

(೨೦) ನಾವು ಒಮ್ಮೆ ಮೇಲೆ ಅಂತರಿಕ್ಷದಲ್ಲಿ ಹೋದೆವು. ಅಲ್ಲಿ ನಮ್ಮ ಸುತ್ತಲು ಕೆಲವು ಪುರುಷರು, ಸ್ತ್ರೀಯರು ವ ಮಕ್ಕಳು ಅಳುತ್ತಿದ್ದದ್ದನ್ನು ಕಂಡೆವು. ಆಗ 'ಇವರು ಹೀಗೆ ಯಾಕೆ ಅಳುತ್ತಾರೆಂ'ತ ನಾನು ಮಹಾರಾಜರಿಗೆ ಕೇಳಿದಾಗ, ಅವರಂದರು, "ಇವರೆಲ್ಲರೂ ಅತೃಪ್ತವಾಸನೆಯುಳ್ಳ ಜೀವಗಳಿದ್ದಾರೆ. ಅವರು

ಭವದ ಕಾರಣದ ಸಂಬಂಧ ಯಾವ ಪೂಜ್ಯಭಾವನೆಯಾಗಿತ್ತೊ ಅದನ್ನು ನಿರಾಕರಿಸಲಿಕ್ಕೆ ಮಹಾರಾಜರು ತಯಾರಿದ್ದಿಲ್ಲ, ಮತ್ತು ಏಕಬೋಟೆ ಆವರೂ ಎಷ್ಟಕ್ಕೂ ತಯಾರಾಗಲಿಕ್ಕಿಲ್ಲ. ಆ ಮೂಲಕ ಮಹಾರಾಜ ಮತ್ತು ಏಕಬೋಟೆ ಇವರಿಬ್ಬರ ನಡುವೆ ನಾನೊಬ್ಬ ಅಧ್ಯಾತ್ಮ ಕಲಿಸುವಂತ ಮಾಧ್ಯಮನಾಗಿದ್ದೆನು, ಇಷ್ಟೇ.

—೧೭—

ರಾ. ರಾ. ಭಾರ್ಗವ ವಾಮನ ಪರಚುರೆ, ಪೆನ್ಶನರ ಪೋಲೀಸ ಹೆಡ್ ಕಾನಸ್ಟೇಬಲ ನಾಶಿಕ ಇವರ ಅನುಭವ:—

ನನ್ನ ಮೂಲಸ್ಥಾನವು ಮುರುಡ, ತಾಲುಕ ದಾಪೋಲಿ ಜಿಲ್ಹೆ ರತ್ನಾಗಿರಿ ನನ್ನ ತಂದೆಯವರು ನನ್ನ ಚಿಕ್ಕಂದಿನಲ್ಲಿಯೇ ಶಿವಾಧೀನರಾಗಿದ್ದರು, ಆ ಮೂಲಕ ನನ್ನ ಮರಾಠಿ ಶಿಕ್ಷಣವು ಅಕ್ಷರಪೂರ್ತಿಯಾಯಿತು. ಮುಂದೆ ನಾನು ನಾಶಿಕಕ್ಕೆ ಬಂದು ಪೋಲೀಸ ಖಾತೆಯೊಳಗೆ ೩೧ ವರ್ಷ ನೌಕರಿ ಮಾಡಿ ಸನ್ ೧೯೩೪ ಸಾಲಿನಲ್ಲಿ ನಾನು ಪೆನ್ಶನ ತಕ್ಕೊಂಡೆನು.

ಪೆನ್ಶನ ತಕ್ಕೊಳ್ಳುವ ಮೊದಲು ಕೆಲವು ತಿಂಗಳು ಯಾವದೊ ಪೋಲಿಸ ಕೇಸಿನ ತಪಾಸ ಮಾಡುವದಕ್ಕಾಗಿ ನಾನು ನಾವಷ್ಟಾರದ ಬಳಿಯಲ್ಲಿ ಪೂರಕರ ಇವರ ಮಹಲಿಗೆ ಹೋಗಿದ್ದಾಗ, ಗಜಾನನ ಮಹಾರಾಜ ಹೆಸರಿನ ಒಬ್ಬ ಗೃಹಸ್ಥರು ಅಲ್ಲಿ ಇರುತ್ತಾರೆ ಎಂತ ಆಗ ನನಗೆ ತಿಳಿಯಿತು. ಆದರೆ ಆ ಗೃಹಸ್ಥರಿಗೆ ನೋಡಿದಾಗ ಇವರು ಮಹಾರಾಜರು ಇದ್ದಾರು ಎಂಬುದಾಗಿ ನನ್ನ ಮನೋದೇವತಾ ನನಗೆ ಹೇಳುತ್ತಿದ್ದಿಲ್ಲ. ಮುಂದೆ ಪೆನ್ಶನ್ ತಕ್ಕೊಂಡ ಮೇಲೆ ನಾನು ಯಾವ ಮನೆಯಲ್ಲಿ ಇರುತ್ತಿದ್ದೆನೊ ಅದರ ನೆರೆಯಲ್ಲಿ ಅಣ್ಣಾಸಾಹೇಬ ವಾಲಾವಲಕರ ಈ ಹೆಸರಿನ ಜಂಗಲಖಾತೆಯೊಳಗಿನ ಒಬ್ಬ ಗೃಹಸ್ಥರು ಇರುತ್ತಿದ್ದರು. ಅವರು ಯಾವಾಗಲೂ ಗಜಾನನ ಮಹಾರಾಜರ ಸಂಬಂಧ ಮಾತಾಡುತ್ತಿದ್ದರು. ಆಗ ನಾನು ನನ್ನನ್ನು ಅವರ ಕಡೆ ಕರಕೊಂಡು ಹೋಗಿರಿ ಎಂದು ಅವರಿಗೆ ವಿನಂತಿ ಮಾಡಿದೆ. ಆ ಪ್ರಕಾರ ಅವರು ನನ್ನನ್ನು ಶ್ರೀಗಜಾನನ ಮಹಾರಾಜರ ಕಡೆಗೆ ಕರಕೊಂಡು ಹೋದರು; ವ ಅವರದು ನನ್ನದು ಪರಿಚಯವನ್ನು ಅವರು ಮಾಡಿಸಿ ಕೊಟ್ಟರು. ಅಂದಿನಿಂದ ನಾನು ಪ್ರತಿ ದಿವಸ ಮುಂಜಾನೆ ಸಂಜೆಗೆ ಅವರ ಕಡೆ ಹೋಗಲಿಕ್ಕೆ ಆರಂಭಮಾಡಿದೆ.

ಏಳೆಂಟುದಿನಗಳಾದ ಮೇಲೆ ಒಂದು ದಿನ ಗುರುವಾರ ಸಂಜೆ ಹೊತ್ತಿಗೆ ನನಗೆ ' ಸೋಹಂ ' ದ ಮಂತ್ರವನ್ನು ಕೊಟ್ಟು ಅವರು ನನ್ನ ಮೇಲೆ ಅನುಗ್ರಹ ವನ್ನು ಮಾಡಿದರು. ಈ ಮಂತ್ರದ ಐದುಸಾವಿರ ಜಪವನ್ನು ಮುಂಜಾನೆ ಒಂದು

ಗ್ರಾಫದ ಕೆಲಸದ ನಿಮಿತ್ತ, ಶ್ರೀ ಗಜಾನನ ಮಹಾರಾಜರ ಕಡೆಯಿಂದ ಒಂದು ಮುದ್ರಿಗೆಯ ಮುಖಾಂತರ ನನಗೆ ಕರೆ ಬಂತು. ನಾನು ಅವರ ಕಡೆಗೆ ಹೋಗಿ ಅವರಿಗೆ ನಮಸ್ಕಾರ ಮಾಡಿ ಅವರ ಹತ್ತಿರ ಕೂತುಕೊಂಡೆ. ನಂತರ ಅವರು ಒಂದು ಫೋಟೋದ ನೆಗೆಟಿವ್ ನನ್ನ ಕೈಯಲ್ಲಿ ಕೊಟ್ಟರು, ಮತ್ತು ಅದರ ಕೆಲವು ಪ್ರತಿಗಳನ್ನು ತೆಗೆದುಕೊಡಲಿಕ್ಕೆ ಹೇಳಿದರು, ಮತ್ತು ಅವರ ವಿನೋದಿ ಸ್ವಭಾವಕ್ಕನುಸರಿಸಿ ನಗೆಚೇಷ್ಟೆ ಮಾತುಗಳು ಆರಂಭಿಸಿದರು. ನಾನು ಸ್ವಲ್ಪ ವಿನೋದ ಮಾಡಿ ನನ್ನ ಭಾಷಣದ ಪ್ರವಾಹವು ನನಗೆ ಬೇಕಾಗಿದ್ದ ಅಧ್ಯಾತ್ಮ ವಿಷಯದ ಕಡೆಗೆ ತಿರುಗಿಸಿದೆ. ಯಾಕೆಂದರೆ, ಇದಕ್ಕೂ ಮೊದಲು ಒಂದು ವರ್ಷದಿಂದ ನನಗೆ ಆ ವಿಷಯದ ಅತ್ಯಂತ ಪ್ರೀತಿಯು ಉತ್ಪನ್ನವಾದ್ದರಿಂದ ಪುಸ್ತಕಗಳನ್ನು ಓದಿ ಮತ್ತು ಆ ಜ್ಞಾನವನ್ನು ಶಕ್ಯವಾದ ಮಟ್ಟಿಗೆ ತಿಳಿಸಿಕೊಂಡು ಅದನ್ನು ಕೃತಿಯಲ್ಲಿ ಬರುವಂತೆ ಮಾಡುವ ಪ್ರಯತ್ನಗಳನ್ನು ನಡೆಸುತ್ತಿದ್ದೆ. ಆದರೆ ಆ ಪ್ರಯತ್ನ ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದರ ಏನೂ ಅನುಭವ ಇಲ್ಲದ್ದರಿಂದ ಆಗಾಗ್ಗೆ ಚಿತ್ತವು ಸಾಶಂಕವಾಗುತ್ತಿತ್ತು, ಮತ್ತು ಕಷ್ಟ ಅನಿಸುತ್ತಿತ್ತು. ಮತ್ತು ಈ ಪುಸ್ತಕಿ ಜ್ಞಾನದ ಮೇಲಿಂದ ನಾನು ನನ್ನದಲ್ಲಿ ಯಾವ ಮಟ್ಟಿಲದ ಮೇಲೆ ಇದ್ದೇನೆ, ಎಂಬುದು ತಿಳಿಯುತ್ತಿದ್ದಿಲ್ಲ.

ಒಮ್ಮೆ ಧ್ಯಾನಕಾಲದಲ್ಲಿ ಹೀಗೆ ಶಬ್ದಗಳು ಕಿವಿಯ ಮೇಲೆ ಬಂದವು, ಯಾವನೋ ಬಂಗಾಲಿ ಸಾಧು ಬೇಗನೆ ನನಗೆ ಮನೆಗೆ ಕರೆದು ನನಗೆ ಭೆಟ್ಟಿ ಕೊಟ್ಟಾನು. ಈ ಸಂಗತಿಯಾಗಿ ಹತ್ತು ಹನ್ನೆರಡು ದಿನಗಳಾದ ಮೇಲೆ ಅಕಸ್ಮಾತ್ತಾಗಿ ಮಹಾರಾಜರ ಕಡೆಯಿಂದ ಈ ಪ್ರಕಾರ ಕರೆಬಂದಿತ್ತು. ಮತ್ತು ಮಾತಿನ ಪ್ರವಾಹವು ಅಧ್ಯಾತ್ಮ ವಿಷಯದ ಕಡೆಗೆ ಕರಕೊಂಡು ಹೋಗುವಾಗ, ಮಹಾರಾಜರು ಯಾವುದೋ ಕಾಗದವನ್ನು ಓದಲಿಕ್ಕೆ ನನಗೆ ಹೇಳಿದರು ಅದರಲ್ಲಿ ಒಬ್ಬ ಬಂಗಾಲಿ ಮನುಷ್ಯನ ಆಧ್ಯಾತ್ಮಿಕ ಅನುಭವಗಳು, ಮತ್ತು ಮಹಾರಾಜರ ಸಾನ್ನಿಧ್ಯದಲ್ಲಿ ತನಗೆ ಪ್ರಾಪ್ತಿಯಾದ ಶಾಂತಿಸುಖದ ತಂದರ ನಿರ್ವಿಕಲ್ಪ ಸಮಾಧಿಸುಖದ ಸ್ವಾನುಭವವು ವರ್ಣಿಸಿದ್ದೇ ಇತ್ತು. ಧ್ಯಾನದಲ್ಲಿ ಕೊಟ್ಟ ಸಂದೇಶ ದ ಪ್ರತ್ಯಕ್ಷದಲ್ಲಿ ಕರ ಕಳುಹಿಸಿಕೊಟ್ಟ ದರ್ಶನ ಇದರ ಮೇಲಿಂದ ನಾವು ತಿಳಕೊಳ್ಳುವದಕ್ಕಿಂತ ಈ ವ್ಯಕ್ತಿಯಲ್ಲಿ ಏನಾದರೂ ಅಲೌಕಿಕವಾದೆ ಎಂದು ಗೊತ್ತಾಗಿ, ಆ ವಿಷಯದ ಕೇವಲ ಮುಮುಕ್ಷು ಎಂದು, ಅನುಭವವನ್ನು ಪಡೆಯಬೇಕು ಮತ್ತು ನಮ್ಮ ಆಯುಷ್ಯದ ಸಾರ್ಥಕ ಮಾಡಿಕೊಳ್ಳಬೇಕು, ಹೀಗೆ ನಿರ್ಣಯಿಸಿ, ಮಹಾರಾಜರ ಚರಣಗಳಲ್ಲಿ ನಮ್ರಭಾವದಿಂದ ವಿನಂತಿ ಮಾಡಿದೆ; ಮತ್ತು ಅವರಾದರೂ ಅಂತಃಕರಣದ ತೀವ್ರತೆಯನ್ನು ತಿಳಿದು, ಅನುಗ್ರಹ ಮಾಡುವೆನೆಂದು ಆಶ್ವಾಸನವನ್ನು ಕೊಟ್ಟರು. ಮತ್ತು ನನಗೆ ಪ್ರಸಹಾ ಬರಲಿಕ್ಕೆ ಹೇಳಿದರು. ನಡುವೆ ಮಹಾರಾಜರು ಮುಂಬಯಿಗೆ ಹೋದ ಕಾರಣ ಒಪ್ಪ

ಗಳ ತೇಜಸ್ವಿ ನಾಗಗಳನ್ನು ಕಂಡೆ, ಹಾಗೆ ಜಪಮಾಡುತ್ತಿರುವಾಗ ನಾನಾ ದೇವತೆಗಳ ದರ್ಶನವೂ ಆಯಿತು.

ಒಂದು ಪ್ರಸಂಗದಲ್ಲಿ ಜಪಮಾಡುತ್ತಿರುವಾಗ ಆ ತಂದ್ರಿಯೊಳಗೆ ನಾಭಿಕಮಲದ ಹತ್ತರ ಕೆಲವು ಬಾಗಿಲುಗಳು ತೆರೆಯುತ್ತಿದ್ದಂತೆ ತೋರಿತು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ಒಂದು ತೇಜಸ್ವಿ ಹಳದಿ ವರ್ಣದ ಸುದರ್ಶನ ಚಕ್ರವು ತಿರುಗುತ್ತಿರುವದು ಕಾಣಬಂತು. ನಂತರ ಅದೇ ಚಕ್ರದೊಳಗಿನಿಂದ ನಾಲ್ಕು ದೈದೀಪ್ಯಮಾನ ಚಕ್ರಗಳು ಉತ್ಪನ್ನವಾಗಿ ಅವೂ ತಿರುಗುತ್ತಿರುವದನ್ನು ಕಂಡೆನು. ಇಷ್ಟರಲ್ಲಿ ಶ್ರೀಕೃಷ್ಣನ ಚತುರ್ಭುಜ ಮೂರ್ತಿಯು ಅಲ್ಲಿ ಕಾಣಿಸಿತು. ಮತ್ತು ಸ್ವಲ್ಪ ಹೊತ್ತಿನಲ್ಲಿ ಇದೆಲ್ಲ ದೃಶ್ಯಗಳು ನಿಂತುಹೋಗಿ, ಅಲ್ಲಿ ನಾಲ್ಕು ಸುಂದರ ಸ್ತ್ರೀಯರು ಕಾಣಿಸಿದರು. ಅವರು ನನಗೆ ಅಂದರು, 'ನಮ್ಮಕೂಡ ನೀನು ಲಗ್ನವಾಗು' ಆಗ ನಾನು ಅವರಿಗೆ ಹೇಳಿದೆ, 'ನನ್ನ ಲಗ್ನ ಆಗಿರುತ್ತದೆ, ಮತ್ತು ನೀವು ನನ್ನ ಜಪಕ್ಕೆ ತೊಂದರೆ ಮಾಡಿದರೆ ನಾನು ನನ್ನ ಗುರುಗಳ ಹತ್ತರ ಹೇಳುವೆನು.' ಹೀಗಂದ ಮೇಲೆ ಅವರು ಅದೃಶ್ಯರಾದರು, ಮತ್ತು ನಾನು ಜಪಮಾಡುತ್ತಿರುವಾಗಲೆ ಒಮ್ಮೆಲೆ ನಾಭಿಕಮಲದಿಂದ ಶಬ್ದ ಕೇಳಲಿಕ್ಕೆ ಹತ್ತಿತು, 'ನಿನಗೆ ಏನು ಬೇಡುವದದೆ ಅದನ್ನು ಬೇಡಿಕೊ,' ಆಗ ನಾನು ಪ್ರಾರ್ಥನೆ ಮಾಡಿದೆನಲ್ಲ, 'ಜನ್ಮಜನ್ಮದಲ್ಲಿ ನನಗೆ ಶ್ರೀಗುರು ಗಜಾನನ ಮಹಾರಾಜರ ಸೇವೆ ಘಟಿಸಬೇಕು, ಮತ್ತು ಇದೇ ಸದ್ಗುರು ನನಗೆ ಲಭಿಸಬೇಕು. ನನಗೆ ಮತ್ತೇನೂ ಬೇಕಾಗಿಲ್ಲ; ಆದರೆ ಪ್ರಪಂಚದಲ್ಲಿದ್ದದರಿಂದ ಅನ್ನವಸ್ತ್ರ ಕೊಡು ಮತ್ತು ಪರಮೇಶ್ವರ ಚರಣಗಳ ಸೇವೆ ನನಗೆ ದೊರೆಯಲಿ. ಇದೆ ನನ್ನ ಬೇಡುವಿಕೆ." ಇಷ್ಟು ನಾನು ಅಂದಮೇಲೆ ತಥಾಸ್ತು ಎಂದು ಶಬ್ದ ಕೇಳಿದೆನು, ಮತ್ತು ನಾನು ದೇಹಭಾನಕ್ಕೆ ಬಂದೆನು. ನಂತರ ಗಜಾನನ ಮಹಾರಾಜರ ಕಡೆಗೆ ಹೋಗಿ ಅವರಿಗೆ ಈ ವೃತ್ತಾಂತವನ್ನು ತಿಳಿಸಿದೆ.

ಒಂದು ಪ್ರಸಂಗದಲ್ಲಿ ನಾನು ಜಪವನ್ನು ಮಾಡುತ್ತಿರುವಾಗ ವಿಸ್ಮೃತಿ ಬಂದು ಅದರೊಳಗೆ ನಾನು ಕ್ಷೀರಸಾಗರದಲ್ಲಿ ನಿಂತಿದ್ದೇನೆ ಎಂದು ಕಾಣಿಸಿತು. ಇಷ್ಟರಲ್ಲಿ ಕ್ಷೀರಸಾಗರದ ತಳದಿಂದ ಅದರ ಪೃಷ್ಠಭಾಗದ ಮೇಲೆ ಒಂದು ಕಮಲದ ದೇಟು, ಅದರ ಮೇಲೆ ಕಮಲದ ಎಲೆ ಇದ್ದದು ಕಂಡೆ. ಆ ಎಲೆಯ ಮೇಲೆ ಅಂಗುಷ್ಟಮಾತ್ರ ಮೇಘಶ್ಯಾಮ ತೇಜಃಪುಂಜವಾದ ಬಾಲಮೂರ್ತಿಯು ತೋರಿತು. ಆ ಮೂರ್ತಿಯು ನನ್ನ ಕಡೆಗೆ ನೋಡಿ ನಗುತ್ತಿತ್ತು, ಮತ್ತು ನಾನು ಆನಂದದಿಂದ ಅದರ ಕಡೆಗೆ ನೋಡಿ ಕೈಜೋಡಿಸಿ ನಿಂತಿದ್ದೆ. ಈ ದೃಶ್ಯ ನೋಡುತ್ತಿರುವಾಗ ನನ್ನ ಕಣ್ಣಿನಿಂದ ಒಂದೇ ಸಮನೆ ಆನಂದಾಶ್ರುಗಳು ನಡೆಯುತ್ತಿದ್ದವು. ಆ ಮೂಲಕ ಭಾನದ ಮೇಲೆ ಬಂದಾಗ್ಗೆ ನೋಡುತ್ತೇನೆ, ನನ್ನ ಹೊಟ್ಟೆಯ ಮೇಲಿನ ಅಂಗಿಯ ಭಾಗ ಮತ್ತು ಧೋತ್ರದ ಮುಂದಿನ ನಿರಿಗೆಗಳು ಒದ್ದೆಯಾಗಿದ್ದವು.

ಒಂದು ದಿನ ಮುಂಜಾನೆ ಎಂಟು ಒಂಭತ್ತು ಹೊಡೆಯುವಾಗ ಶ್ರೀಗಜಾನನ ಮಹಾರಾಜರ ದರ್ಶನ ತಕ್ಕೊಂಡು ತಿರುಗಿ ಬರುವಾಗ ದಾರಿಯಲ್ಲಿ ಒಂದು ದೊಡ್ಡ ಪ್ರಕಾಶ ಗೋಲಕವು ಕಾಣಿಸಿತು ಮತ್ತು ಅದೃಶ್ಯವಾಯಿತು. ಸದ್ಗುರುಗಳ ಅನುಗ್ರಹವಾದಲಾಗಾಯಿತು ಒಂದೆರಡು ತಿಂಗಳ ಒಳಗೆ ನನಗೆ ಆಗಾಗ್ಗೆ ತೇಜದ ಸಣ್ಣ ದೊಡ್ಡ ಗೋಲಕಗಳು ಕಾಣುತ್ತಿದ್ದವು, ಮತ್ತು ಆ ಕಾರಣ ಮನಸ್ಸಿಗೆ ಆನಂದವಾಗುತ್ತಿತ್ತು.

ಒಂದು ಪ್ರಸಂಗದಲ್ಲಿ ನಾನು ಜಪ ಮಾಡುತ್ತ ಕೂತಿರುವಾಗ ನನ್ನ ಮಸ್ತಕದಲ್ಲಿ ಒಮ್ಮಿಂದೊಮ್ಮೆ ಚಂದ್ರಜ್ಯೋತಿಯ ಪ್ರಕಾಶ ಕಾಣುತ್ತಿತು. ಆ ಮೇಲೆ ಒಂದು ದೊಡ್ಡ ಸರ್ಪ ಮತ್ತು ಅದರ ತಲೆಯು ಮೇಲೆ ಒಂದು ದೊಡ್ಡ ಗೋಲಕ, ಅದರ ಮೇಲೆ ಭೂಮಿ, ನದಿ, ಸಮುದ್ರ, ಪರ್ವತಗಳು, ಅರಣ್ಯ, ಶ್ಮಶಾನಗಳು, ದೊಡ್ಡ ದೊಡ್ಡ ಇಮಾರತಗಳು, ಸಮುದ್ರದಲ್ಲಿ ಹಡಗಗಳು, ಗಿರಣಿಗಳು, ರೈಲ ಗಾಡಿಗಳು, ದೇವಾಲಯಗಳು ಇತ್ಯಾದಿ ಹ್ಯಾಗೆ ಪೃಥ್ವಿಯ ಮೇಲೆ ಇಲ್ಲಲ್ಲಿ ಕಾಣುವವು ಹಾಗೆಯೇ ತೋರುತ್ತಿದ್ದವು. ಇದನ್ನೆಲ್ಲ ಮಹಾರಾಜರಿಗೆ ಹೇಳಿದಾಗ ಅವರೆಂದರು, " ಶಾಸ್ತ್ರದಲ್ಲಿ ಶೇಷದ ಮಸ್ತಕದ ಮೇಲೆ ಪೃಥ್ವಿಯು ಇರುತ್ತದೆ, ಎಂದು ಹೇಳುತ್ತಾರೆ. ಅದನ್ನು ಈ ದೃಶ್ಯವು ನಿಶ್ಚಯಮಾಡಿಕೊಟ್ಟಿತು." ಆ ಮೂಲಕ ಯಾವ ಆನಂದವಾಯಿತು ಅದು ಕೆಲವು ದಿನಗಳ ತನಕ ಇತ್ತು, ಮತ್ತು ನೋಡಿದ ದೃಶ್ಯವು ಮನಸ್ಸಿನೊಳಗೆ ಬಂದು ಆನಂದವು ಉಕ್ಕೇರಿ ಬರುತ್ತಿತ್ತು.

ಮತ್ತೊಂದು ಪ್ರಸಂಗದಲ್ಲಿ ಕಿಟಕಿಯ ಬಾಗಿಲುಗಳು ತೆರೆದಿರುವಾಗ ಹ್ಯಾಗೆ ಸೂರ್ಯಪ್ರಕಾಶವು ಕೋಣೆಯೊಳಗೆ ಬೀಳುವದೂ ಹಾಗೆ ಭ್ರೂಮಧ್ಯದ ದ್ವಾರವು ತೆರೆದು ದಿವ್ಯ ಪ್ರಕಾಶವು ಕಾಣಿಸಿತು, ಮತ್ತು ಆ ಪ್ರಕಾಶದಲ್ಲಿ ಕಮಲದ ಮೇಲೆ ನಿಂತಿದ್ದ ಲಕ್ಷ್ಮಿಯು ಕಾಣಿಸಿದಳು. ಅನಂತರ ಆ ದೃಶ್ಯವು ಇಲ್ಲದಂತಾಗಿ ಕೂಡಲೆ ಎರಡೂ ಹುಬ್ಬುಗಳ ನಡುವೆ ಒಂದು ತೇಜದ ಗೋಲವು ಕಾಣಿಸಿತು, ಮತ್ತು ಅಲ್ಲಿ ಒಂದು ತೇಜಸ್ವಿ ಕಣ್ಣು ನಿತ್ಯದ ನಮ್ಮ ಕಣ್ಣಿಗಿಂತ ಬೇರೆಯಾಗಿ ತೋರಿತು. ಮಹಾರಾಜರಂದರು, " ಅದು ಜ್ಞಾನಚಕ್ಷು ಇರುತ್ತದೆ, " ಈ ಕಣ್ಣಿನಿಂದ ಬಹಳ ದಿನಗಳ ವರೆಗೆ ನಾನು ಜಪಕ್ಕೆ ಕೂತಾಗ ದೃಶ್ಯಗಳನ್ನು ನೋಡುತ್ತಿದ್ದು, ಆನಂದವನ್ನು ಅನುಭವಿಸುತ್ತಿದ್ದೆ.

ನನಗೆ ಅನುಗ್ರಹವಾದ ಮೇಲೆ ಸ್ವಲ್ಪ ದಿನಗಳಲ್ಲಿ ನನ್ನ ಹೊಕ್ಕಳಿನಿಂದ ವಿವಿಧ ಹೂವುಗಳ ಸುಗಂಧವು ಹೊರಬೀಳುತ್ತಿತ್ತು, ಆ ಕಾರಣ ನನಗೆ ಸದಾ ಕಾಲದಲ್ಲಿ ಉಲ್ಲಾಸವಾಗುತ್ತಿತ್ತು. ಹಾಗೆಯೇ ಶ್ರೀಗಜಾನನ ಮಹಾರಾಜರು ನಾಶಿಕದಲ್ಲಿರಲಿ ಮತ್ತೆಲ್ಲಾದರೂ ಇರಲಿ, ಅವರ ಸ್ಮರಣ ಮಾಡಿದ ಕೂಡಲೆ,

ಊರಿನ ಕಷ್ಟಗಳು, ಊರಿನ ಅಥವಾ ಘೋರದ ವಸ್ತೈರಿ ಸಮಾನ ಬಂದು. ಆ ದಿವಸ ದಿಂದ ನನಗೆ ಅವರ ದರ್ಶನವಾಗುತ್ತಿತ್ತು. ಎಂಬಂತೆ ತೋರುತ್ತಿತ್ತು.

ಒಂದು ಪ್ರಸಂಗದಲ್ಲಿ ನಾನು ಜಪಕ್ಕೆ ಕೂತಿರುವಾಗ ಏನೊ ತಪ್ಪಾಯಿತು. ಅದ್ದರಿಂದ ಮಹಾರಾಜರು ಕಾಣಿಸಿಕೊಂಡು, ಅವರು ನನ್ನ ಕೊಡೆಯ ಮೇಲೆ ಜೋರಿನಿಂದ ಹೊಡೆದು ನನಗೆ ಎಚ್ಚರಿಕೆ ಕೊಟ್ಟರು. ಆ ಹೊಡೆತವು ನಾನು ಧ್ಯಾನದ ವೇಳೆ ಬಂದಾಗ್ಗೆ ನನ್ನ ನೆನಪು ಮಾಡುತ್ತಿತ್ತು. ಇದು ವಿಚಿತ್ರ ನಡೆಯುತ್ತಿರುವಾಗ ನನಗೆ ಹೀಗೆ ಅನಿಸುತ್ತಿತ್ತು, ಜಪ ಮಾಡುವಲ್ಲಿನ ನಮ್ಮ ತಪ್ಪುಗಳು ನಮ್ಮ ಗುರು ತಮ್ಮ ಪಾದದ ಜಪಮಾಲೆಯನ್ನು ನೂಗಿಸಿಕೊಳ್ಳುತ್ತಾರೆ.

ಒಮ್ಮೆ ನಾನು ನಾಗಪೂರ ಮೇಲಿನಿಂದ ನಾಸಿಕಕ್ಕೆ ಬರುತ್ತಿರುವಾಗ ಗಾಡಿಯ ಸಪ್ಪಳ 'ಫಟಫಟ' ಎಂದು ಕೇಳಿಸುತ್ತಿದ್ದಾಗಲ್ಲ ನನಗೆ 'ಗಣಿಕಿಣಿ' ಹೀಗೆ ಶಬ್ದವು ಸುರುವಾಯಿತು. ಈಗ ಒಂದು ವರ್ಷದ ನಾದಗಳು ಹಗಲು ರಾತ್ರಿ ಕೇಳಿಸುತ್ತವೆ. ಮತ್ತು ಬರಬರುತ್ತ ಅವುಗಳೊಳಗ ನಾದ, ನೃತ್ಯ, ಮೊದಲಾದವು. ಸಂಸಾರದೊಳಗಿನ ಆಪತ್ತುಗಳಿಂದ ಅನಾಯಾಸವಾಗಿ ಪಾರಾಗಿ ತೋರದೆ ನಾವು ಕರ್ತವ್ಯಗಳನ್ನು ಸಾಗಿಸಿಕೊಂಡು ಹೋಗಲು ಅನುಕೂಲವಾಗುತ್ತದೆ, ಹೀಗಾಗಿ ಶಾಂತಿ ಸುಖವು ಉಂಟಾಗುವದು.

(ಸಹಿ) ಭಾರ್ಗವ ದಾಸ ನ ಮಂಜು

— ೧೪ —

ರಾ. ರಾ. ದತ್ತಾತ್ರೇಯ ವೆಂಕಟ ಸಾವಂತ, ಸಾಂದೇಗಾಂವ ಜಿಲ್ಲಾ ನಾಶಿಕ, ಇವರ ಅನುಭವಗಳು: -

ಸನ್ ೧೯೨೮ ನೇ ವರ್ಷ ಸಾಂದೇಗಾಂವದಲ್ಲಿ ಮಹಾರಾಜರ ಪ್ರಥಮ ಭೆಟ್ಟಿಯಾಯಿತು. ಮೊದಲಿನ ಭೆಟ್ಟಿನಂತರ ಅವರು ಒಂದೆರಡು ಸಾರಿ ಅಲ್ಲಿಗೆ ಬಂದಿರಬಹುದು. ಆ ಭೆಟ್ಟಿಯಲ್ಲಿ ಏನೂ ಮಾತುಕಥೆ ಆಗಲಿಲ್ಲ. ಬರೇ ಪ್ರೇಕ್ಷಕ ಈ ಭಾವದಿಂದ ನಾನು ಹೋಗಿ ಕೂತಿರುತ್ತಿದ್ದೆ.

ಯಾವ ದಯ್ಯವು ನನ್ನ ಗೊತ್ತು ಮಾಡ್ಯಾನು ಮತ್ತು ಇಲ್ಲಿತನಕ ನಾನು ಆಕ್ರಮಿಸಿದ ನನ್ನ ಮಾರ್ಗವನ್ನು ಹೇಳುವನು ಅವನಿಗೇ ಗುರು ಅನ್ನ ಬೇಕು ಎಂದು ನನ್ನ ಮನಸ್ಸಿನಲ್ಲಿ ನಾನು ನಿರ್ಣಯಿಸಿಕೊಂಡಿದ್ದೆನು. ಆ ವೇಳೆ ಮೂರನೇ ಅಥವಾ ನಾಲ್ಕನೆ ಬೈಠಕಿಯಲ್ಲಿ ಮಹಾರಾಜರು ಮತ್ತು ನಾನೊಬ್ಬನೆ ಇದ್ದಾಗ ಮಾತು ನಡೆದವು. ಮತ್ತು ಅದೇ ನಮಯ ನಾನು ಯಾವ ಮಾರ್ಗ

ದಲ್ಲಿದ್ದೇನೆ ಮತ್ತು ಏನೇನು ಅಭ್ಯಾಸ ಮಾಡಿದ್ದೇನೆಂಬದು ಹೇಳಿದನು; ನಂತರ ಒಂದೆರಡು ದಿವಸಗಳಲ್ಲಿ ಅಲ್ಲಿ ಸಾಸವಡಕರ ವ ಒಬ್ಬಿಬ್ಬರು ಗೃಹಸ್ಥರು ಕೂತಿರುವಾಗ ಆ ಮಂದಿಗೆ ನನ್ನ ಪರಿಚಯು ಮಾಡಿಕೊಟ್ಟರು. ಮತ್ತು ನನ್ನ ಪ್ರಗತಿ ಎಷ್ಟು ಆಗಿದೆ ಎಂಬದು ಅವರಿಗೆ ತೋರಿಸುವ ಪ್ರಯತ್ನ ಮಾಡಿದನು. ಅವರು ಒಂದು ಸಿಗಾರೇಟಗಳ ಚೀಲು ತರಿಸಿ, ಅದನ್ನು ಒಡೆದು ಪ್ರತಿಒಬ್ಬರಿಗೆ ಒಂದೊಂದು ಸಿಗಾರೇಟ ಕೊಡಲಿಕ್ಕೆ ಹೇಳಿದನು, ಮತ್ತು ನನಗೂ ಒಂದು ಸಿಗಾರೇಟ ಕೊಟ್ಟು ಅದನ್ನು ಹಚ್ಚಿ ನಮ್ಮ ರೀತಿಯಂತೆ ಧ್ಯಾನ ಆರಂಭಿಸಿ ಅದನ್ನು ಸೇದಲಿಕ್ಕೆ ಹೇಳಿದನು. ಆಗ ಅನೇಕ ಪ್ರಕಾರದ ಸುವಾಸಗಳು ಆ ಮನೆತುಂಬ ಹಬ್ಬಿ ಎಲ್ಲಾ ಕಡೆಯಿಂದಲೂ ಜನರು ಕೂಡಿದರು. ಈ ಅನುಭವವನ್ನು ನನ್ನ ಕೈಯಿಂದ ತೋರಿಸಿದರು. ನಂತರ ಅವರು ನನ್ನನ್ನು ತನ್ನ ಮುಂದೆ ಕೂಡ್ರಿಸಿಕೊಂಡು ಗಣಪತಿ ದರ್ಶನದ ಮಾರ್ಗವನ್ನು ತೋರಿಸಿದನು, ಮತ್ತು ತಮ್ಮ ಹಸ್ತವನ್ನು ನನ್ನ ಮಸ್ತಕದ ಮೇಲಿಟ್ಟರು. ಆದರೆ ಏನೋ ಕಾರಣದಿಂದ ನನ್ನಿಂದ ಆ ಮಾರ್ಗದಿಂದ ಮುಂದರಿಸಲಿಕ್ಕೆ ಆಗಲಿಲ್ಲ.

ಒಂದು ದಿನ ಮಹಾರಾಜರು ಸ್ವಸ್ಥ ಕೂತಿರುವಾಗ, ಏನೂ ಮಾತಾಡುತ್ತಿದ್ದಿಲ್ಲ. ಅವರಿಗೆ ಅತಿಶಯ ಬೆವರು ಬರುತ್ತಾಯಿತು, ಮತ್ತು ವಸ್ತ್ರಗಳು ಒದ್ದೆಯಾದವು. ಅನಂತರ ಒಂದೆರಡು ದಿನಗಳಲ್ಲಿ ಒಂದು ಕಡೆಯಿಂದ ಒಂದು ಪತ್ರ ಬಂತು. ಅದರಲ್ಲಿ ಒಬ್ಬ ಮನಷ್ಯನು ಸಮುದ್ರದಲ್ಲಿ ಮುಳುಗುತ್ತಿರುವಾಗ ಮಹಾರಾಜರ ಧ್ಯಾನಮಾಡಿ ಬದುಕಿದನು. ಪತ್ರವು ಯಾರದು ಮತ್ತು ಎಲ್ಲಿಂದ ಬಂದದ್ದೆಂಬದು ನನಗೆ ಈಗ ನೆನಪಾಗದು.

ತಾರೀಖು ೨೮-೧-೩೭

(ಸಹಿ) ದತ್ತಾತ್ರಯು ಶಂಕರ ಸಾಕ್ರಿಕರ

--೧೯--

ರಾ. ರಾ. ಭಾವೂಸಾಹೇಬ ರಾಜೆ, ರೋಹೆ ಜಿಲ್ಹಾ ಕುಲಾಬಾ ಇವರು ಶ್ರೀಗಜಾನನ ಮಹಾರಾಜ, ಪರೇಲ, ಮುಂಬಯಿ ಇವರಿಗೆ ಬರೆದ ಪತ್ರದೊಳಗಿನ ಮಜಕೂರು:—

(೧)

ತಮ್ಮ ಚರಣಗಳಲ್ಲಿ ಮಸ್ತಕವಿಟ್ಟು ಭಕ್ತಿಪೂರ್ವಕ ಮತ್ತು ನಮ್ರಭಾವದಿಂದ ನಾನು ನಿಮಗೆ ಒಂದು ವಿನಂತಿ ಮಾಡಬೇಕೆಂದು ನಿರ್ಣಯಿಸಿರುತ್ತೇನೆ. ಅದಕ್ಕಾಗಿ ತಾವು ಸಿಟ್ಟಿಗೇಳಲಿಕ್ಕಿಲ್ಲವೆಂತ ನಾನು ಆಶಿಸುತ್ತೇನೆ.

ಉರಣ ಎಂಬಲ್ಲಿಯ ಫಕೀರಸಾಹೇಬರಿಗೆ ನಾನು ನನ್ನ ಆಧ್ಯಾತ್ಮಿಕ ಸ್ಥಿತಿ ವಿಷಯ ಹೇಳಿದೆನು. ಅವರು ಕೇಳುತ್ತಿರುವಾಗ ಅವರಿಗೆ ಬಹಳ ಆನಂದವಾದಂತೆ ತೋರಿತು. ಈ ಗೂಢ ಜ್ಞಾನದ್ದು ನಿಮಗೆ ಯಾರು ಉಪದೇಶ ಮಾಡಿದರು, ಎಂದು ಅವರು ಕೇಳಿದಾಗ ನನ್ನ ಸಂಬಂಧ ನಾನು ಅವರಿಗೆ ತಿಳಿಸಿದೆ. ಅವರು ಇಂಗ್ಲೀಷ ಭಾಷೆಯಲ್ಲಿ ಶುದ್ಧವಾಗಿ ಮಾತಾಡುತ್ತಿದ್ದರು, ಮತ್ತು ನನ್ನ ಹಿರೇ ಮಗನು ಅದರ ಮರಾಠಿ ಮಾಡಿ ಹೇಳುತ್ತಿದ್ದನು. ಇನ್ನು ಮುಂದೆ ನಾನು ಸ್ವಲ್ಪವೇ ಕಾಲ ಅಭ್ಯಾಸ ಮಾಡಬೇಕೆಂದು ಅವರು ಹೇಳಿದ್ದರು, ಮತ್ತು ತಾನು ನನಗೆ ಅಕಲ್ಪಿತ ರೀತಿಯಿಂದ ಮುಂದಿನ ಡಿಶೆಂಬರ ತಿಂಗಳಲ್ಲಿ ಭೆಟ್ಟಿಯಾದೇನು ಎಂದು ತಿಳಿಸಿದನು. ಯಾರಿಗೆ ಗೊತ್ತಿರುವದು ಅಂಥ ಮನುಷ್ಯನ ದೇಖರೇಖಿ ಇಲ್ಲದೆ ಮತ್ತು ಸಹಾಯದ ವಿನಹಾ ನಾನು ಮುಂದೆ ಹೀಗೆ ಅಭ್ಯಾಸ ಚಾಲು ಇಟ್ಟರೆ, ನಾನು ಸತ್ತೇನು ಅಥವಾ ಹುಚ್ಚು ಹಿಡಿದವನಾದೇನು ಎಂದು ಹೇಳಿದರು.

ಫಕೀರಸಾಹೇಬ ಇವರ ವಯಸ್ಸು ಮೂವತ್ತು ವರ್ಷಗಳಾದಾವು; ಅವರ ಅಂಗಕಾಂತಿಯು ನೋಡತಕ್ಕದ್ದದೆ. ಆದರೆ ಅವರ ಸಂಬಂಧಿ ಲಕ್ಷದಲ್ಲಿಟ್ಟುಕೊಳ್ಳತಕ್ಕ ಸಂಗತಿ ಅಂದರೆ, ಅವರ ಭಾಷಣ ಶಾಂತವಾದದ್ದು, ಸವಿ, ಪ್ರೇಮಳ ಮತ್ತು ವಿನಯಶೀಲ ಇದ್ದು, ಅದರಲ್ಲಿ ವಿಶೇಷ ಆಕರ್ಷಕ ಶಕ್ತಿ ಇರುವದು. ಅವರ ಕಣ್ಣುಗಳು ಸತೇಜವಾಗಿದ್ದು ಅವರ ದೃಷ್ಟಿಯಲ್ಲಿ ಒಂದು ಪ್ರಕಾರದ ಮೋಹಕತ್ವವಿತ್ತು. ಅವರ ಗರಜುಗಳು ಬಹಳೇ ಕಡಿಮೆ. ಅವರಿಗೆ ದರ ಹದಿನೈದು ಮಿನಿಟುಗಳಿಗೆ ಅರ್ಧಕಪ್ ಚಹಾ ಮತ್ತು ಒಂದೇ ಸಮನೆ ಸಿಗಾರೇಟ ಇವುಗಳ ವಿನಹಾ ಮತ್ತ್ಯಾವದು ಅವರಿಗೆ ಬೇಕಾಗಿರುವದಿಲ್ಲ. ಮತ್ತೇನಾದರೂ ಯಾರಾದರೂ ಕೊಟ್ಟರೆ ಅವರು ಚಲ್ಲಿ ಬಿಡುತ್ತಾರೆ. ಅವರು ತಾವಾಗಿ ಏನಾದರೂ ಜಿನಸು ತರಲಿಕ್ಕೆ ಹೇಳಿದರೆ, ಆಗ ಮಾತ್ರ ಅದನ್ನು ಅವರು ತಗೊಳ್ಳುತ್ತಾರೆ. ಅವರಿಗೆ ವಸ್ತ್ರಗಳ ಗರಜಿರುವದಿಲ್ಲ. ಅವರು ಬಹುತೇಕ ಪೀರವಾಡಿಯ ಆಚೆಯ ಸಮುದ್ರ ದಂಡೆಯ ಮೇಲಿನ ದರಗಾದಲ್ಲಿರುತ್ತಾರೆ, ಹೋದವರ್ಷ ಈ ಫಕೀರರು ಮೈಸುತ್ತ ಒಂದು ಬ್ಲಾಂಕೆಟ ಹೊದ್ದುಕೊಂಡು ನಗ್ನರಾಗಿ ಶೌಚಕೂಪದಲ್ಲಿ ಅಡಗಿಕೊಂಡಿರುತ್ತಿದ್ದರು. ಸದ್ಯದಲ್ಲಿ ಅವರು ಮಾನವ ರೀತಿಯೊಳಗೆ ಬಂದಾರೆಂಬಂತೆ ಕಾಣಿಸುತ್ತದೆ.

ಈಗ ನನ್ನ ದಿನದ ಕಾರ್ಯಕ್ರಮವು ಮುಂದಿನ ಪ್ರಕಾರ ಇದೆ. ಪ್ರಾತಃಕಾಲದಲ್ಲಿ ಎದ್ದಮೇಲೆ ಶೌಚ ಮುಖಮಾರ್ಜನ ಮಾಡಿ ಕಾಕಡಾರತಿ ಮಾಡುತ್ತೇನೆ, ಮತ್ತು ಮನೆಯೊಳಗಿನ ದೇವರಧ್ಯಾನವನ್ನು ಮಾಡುತ್ತೇನೆ. ಸ್ವಲ್ಪ ಹೊತ್ತಿನಲ್ಲಿ ದೇವರ ಕೋಣೆ ಕಾಣದಂತಾಗುವದ. ನಂತರ ಭೀತಿದೆಶೆಯಿಂದ ಮುಂದರಿಸದೆ ಧ್ಯಾನವನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ. ಆಮೇಲೆ ನಾನು ಪ್ರಾಣಾಯಾಮದ ಅಭ್ಯಾಸ ಮಾಡುತ್ತೇನೆ. ಉರಣದಿಂದ ತಿರುಗಿ ಬಂದಮೇಲೆ ನಾನು ಈ ಅಭ್ಯಾಸ

ವನ್ನು ಕಡಿಮೆ ಮಾಡಿದ್ದೇನೆ. ಫಕೀರಸಾಹೇಬರು ಅದನ್ನು ಪೂರಾ ಬಿಡಲಿಕ್ಕೆ ಹೇಳದೆ ಸ್ವಲ್ಪ ಸ್ವಲ್ಪ ನಡಿಯುತ್ತಿರಲಿ ಎಂದು ಹೇಳಿದ್ದರು. ಇಡಿ ದಿನ ಮತ್ತು ರಾತ್ರಿ ಮಲಗುವತನಕ ನಾನು ತೇಲುತ್ತೇನೆ ಎಂಬಂತೆ ತೋರುತ್ತದೆ. ಯಾರಾದರೂ ಈ ವಿಷಯವನ್ನು ಬಲ್ಲಂಥ ಮನುಷ್ಯನು ನನ್ನ ಸಂಗಡ ಇದ್ದ ವಿನಹಾ ಮತ್ತು ಆತನು ಸಹಾಯ ಮಾಡುತ್ತಿದ್ದ ವಿನಹಾ ಅಭ್ಯಾಸ ಮುಂದರಿಸಬಾರದೆಂದು ನಾನು ನಿರ್ಣಯಿಸಿದ್ದೇನೆ. ದಿವಸದಲ್ಲಿ ನಾನು ಧ್ಯಾನಕ್ಕೆ ಮೂರು ಸಾರಿ ಕೂಡ್ರುತ್ತೇನೆ. ರಾತ್ರಿಯಲ್ಲಿ ಜ್ಞಾನೇಶ್ವರಿ ಓದುತ್ತೇನೆ ಮತ್ತು ಜಪವನ್ನು ಮಾಡುತ್ತೇನೆ.

(೧) ನನ್ನ ದೇಹವು ಒಳಗಿನಿಂದ ಮೇಲೆ ಕೆಳಗೆ ಚಲಿಸುತ್ತದೆ. ನಾನು ತೇಲುತ್ತ ಇದ್ದೇನೊ ಎಂಬಂತೆ ತೋರುವದು.

(೨) ಕಣ್ಣುಮುಂದೆ ನೀಲಪ್ರಕಾಶವು ಒಮ್ಮೊಮ್ಮೆ ಅರೆಗೆಂಪು, ಹಳದಿ ಬಣ್ಣಗಳ ಕೂಡ ಮಿಶ್ರಣವಾದಂತೆ ತೋರುವದು.

(೩) ಶರೀರವು ಕಂಭದಂತೆ ಘಟ್ಟಿಯಾಗುತ್ತದೆ. ನಂತರ ಅತಿ ಹಗುರಾಗುವದು.

(೪) ನಾನು ಸ್ವಸ್ಥ ಮಲಗಿದ್ದರೆ ನನ್ನ ಭ್ರೂಮಧ್ಯದಲ್ಲಿ ಕಾಜಿನಂಥ ತೆಪ್ಪನ ತಗಡು ಕಾಣಿಸುತ್ತದೆ. ನಂತರ ಅದು ಇಲ್ಲದಂತಾಗುವದು. ಕೂಡಲೆ ನನ್ನಂಥ ಆಕೃತಿಯು ಕ್ಷಣದಲ್ಲಿ ಕಾಣಿಸುತ್ತದೆ ಮತ್ತು ಕೂಡಲೆ ಇಲ್ಲದಂತಾಗುವದು.

(೫) ಒಮ್ಮೆ ಮಧ್ಯಾನ್ಹದಲ್ಲಿ ಉಂಡಬಳಿಕ ನಾನು ಬಿಡಿ ಸೇದುತ್ತಿರುವಾಗ ನನ್ನ ಮುಂದೆ ಆರೇಳು ಮೊಳದ ಮೇಲೆ ತಂಬಿಗೆ ಆಕೃತಿಯ ತೇಜೋಮಯವಾದ ಒಂದು ಗೋಲಕ ತೋರಿತು.

ತಮ್ಮ ನಮ್ರ ಸೇವಕ
(ಸಹಿ) ಭಾವೂ ರಾಜೆ.

—೨೦—

ರಾ. ರಾ. ಶಂಕರ ಮಲ್ಹಾರ ಸಂತ ಪಿಟಿಶನ್ ರಾಯಟರ, ನಾಶಿಕ ಇವರ ಅನುಭವಗಳು:—

ಪ್ರಪಂಚಮೊಳಗೆ ಅತಿ ತ್ರಾಸವಾಗುತ್ತಿದ್ದದರಿಂದ ನನ್ನ ಮನಸ್ಸು ತೀರಾ ಅಸ್ವಸ್ಥವಾಯಿತು. ನಂತರ ನಾನು ಸಂತಮಹಂತರ ಬಹಳ ದರ್ಶನ ತೆಗೆದು-

ಅವರ ಆಶೀರ್ವಾದಗಳನ್ನು ಪಡಕೊಂಡೆನು. ಅದರ ಪರಿಣಾಮವು ಹೀಗಾಯಿತಲ್ಲ, ಪಾರಮಾರ್ಥಿಕ ಜ್ಞಾನದ ಸಲುವಾಗಿ ಶ್ರದ್ಧೆ ಮತ್ತು ಆಕಾಂಕ್ಷೆ ಉತ್ಪನ್ನವಾಗಿ, ಅದು ಸಾಧ್ಯವಾಗುವ ಪರ್ಯಂತ ಅಂತಃಕರಣದಲ್ಲಿ ಒಂದೇ ಸಮನೆ ತಳಮಳ ಹುಟ್ಟಿತು. ಇಂಥ ಸ್ಥಿತಿಯಲ್ಲಿರುವಾಗ ಯಾರೋ ಹೇಳಿದರು, 'ಸದ್ಗುರು ಗಜಾನನ ಮಹಾರಾಜರು ಇನ್ನು ಎರಡು ದಿನಗಳಲ್ಲಿ ನಾಶಿಕಕ್ಕೆ ಬರುವವರು ಇದ್ದಾರೆ. ಅವರ ದರ್ಶನ ತಕ್ಕೊಂಡು ಅನುಗ್ರಹ ತಕ್ಕೊಳ್ಳಿರಿ.' ಇದನ್ನು ಕೇಳಿ ಮನಸ್ಸಿಗೆ ಬಹಳ ಆನಂದವಾಯಿತು, ವ ನಾನು ಅವರು ಬರುವ ದಾರಿಯನ್ನು ನೋಡುತ್ತ ಇದ್ದೆ. ಎರಡು ದಿನಗಳಲ್ಲಿ ಮಹಾರಾಜರು ನಾಶಿಕಕ್ಕೆ ಬಂದಮೇಲೆ ನಾನು ಅವರ ದರ್ಶನವನ್ನು ತಕ್ಕೊಂಡೆ. ಅದೇ ವೇಳೆಗೆ ಅವರ ಅನುಗ್ರಹವನ್ನು ತಕ್ಕೊಳ್ಳಲಿಕ್ಕೆ ನನ್ನ ಮನಸ್ಸು ಧೈರ್ಯಪಡಲಿಲ್ಲ. ಅವರು ಬಹಳ ಪ್ರಶ್ನೆಗಳನ್ನು ಕೇಳಿ, ನನ್ನ ಕೂಡ ಬಹಳಹೊತ್ತು ಸಂಭಾಷಣ ಮಾಡಿದರು.

ಆಹೊತ್ತಿಗೆ, ಶ್ರೀ. ಭಾವೆ, ವೈದ್ಯ, ಮಾಹೆಗಾಂವಕರ ವಗೈರೆ ಮಂದಿ ಮಹಾರಾಜರ ಸನ್ನಿಧಿಯಲ್ಲಿ ಕೂತಿದ್ದರು, ಮತ್ತು ಏನೊ ವೇದಾಂತ ಚರ್ಚೆ ಮಾಡುತ್ತಿದ್ದರು.

ನಾನು:— ನನ್ನಮೇಲೆ ಅನುಗ್ರಹ ಮಾಡಿ ನನಗೆ ಆಶೀರ್ವಾದ ಕೊಡಿರಿ.

ಮಹಾರಾಜರು:— ನಾನು ಮಹಾರಾಜನಿದ್ದೇನೆಂದು ನಿಮಗೆ ಯಾರು ಹೇಳಿದರು ?

ನಾನು:—ತಮ್ಮ ಸಂಬಂಧ ನನಗೆ ಏಳೆಂಟು ದಿನಗಳ ಹಿಂದೆ ತಿಳಿಯಿತು. ನನ್ನ ಮನಸ್ಸಿಗೆ ಆತುರತೆ ಉತ್ಪನ್ನವಾಯಿತು ಎಂದು ನಾನು ಬಂದಿರುತ್ತೇನೆ. ತಮ್ಮ ವಿಷಯ ಬರೆದ 'ಗುರುಶಿಷ್ಯ ವಿಜ್ಞಾನ ದೀಪಿಕಾ' ಪುಸ್ತಕವನ್ನು ಓದಿ ನೋಡಿ ನನಗೆ ಅತ್ಯಾನಂದವಾಯಿತು.

ಮಹಾರಾಜರು:- ನೀವು ಯಾರದಾದರೂ ಅನುಗ್ರಹ ತಕ್ಕೊಂಡಿರೇನು ?

ನಾನು:—ಯಶವಂತರಾವ ಮಹಾರಾಜ ಉರ್ಫ ದೇವಮಾಮಲೇದಾರ ಇವರ ಕಡೆಯಿಂದ ೩೦—೩೫ ವರ್ಷಗಳ ಹಿಂದೆ ಅನುಗ್ರಹ ತಕ್ಕೊಂಡಿದ್ದೆ. ಆದರೂ ನನಗೆ ಇನ್ನೂ ಮಾನಸಿಕ ಶಾಂತಿ ಸಿಗಲಿಲ್ಲ. ನಾನು ಈಗ ೮೦—೮೧ ವರ್ಷ ವಯಸ್ಸಿನವನಿದ್ದೇನೆ. ನನಗೆ ಈಗ ಸಂಸಾರದಲ್ಲಿ ಯಾವದೊಂದು ಆಕಾಂಕ್ಷೆ ಉಳಿಯಲಿಲ್ಲ. ಆದರೂ ನನ್ನ ವ ನನ್ನ ಕುಟುಂಬದ ಪೋಷಣದ ಸಲುವಾಗಿ ನಾನು ಕೋರ್ಟಿಗೆ ಹೋಗಿ ಅರ್ಜಿಗಳನ್ನು ಬರಿಯುತ್ತಿರುತ್ತೇನೆ.

ಮಹಾರಾಜರು: — ಅಪ್ಪಾ, ನಾನು ನಿಮ್ಮ ಮಗನಂತೆ ಇದ್ದೇನೆ. ನಿಮಗೆ ಉಪದೇಶ ಮಾಡುವದು ನನ್ನ ಯೋಗ್ಯತೆಯಲ್ಲ. ಭ್ರಮೆಯನ್ನು ಹೊಂದಿಕೊಳ್ಳಬೇಡ. ನಾನು ಸ್ವತಃ ಅಭ್ಯಾಸಿ ಇದ್ದೇನೆ ಪೂರ್ಣನಲ್ಲ.

ನಾನು: - ದೇವ ಮಾಮಲೇದಾರ ಇವರ ಸ್ಫೂರ್ತಿಯಿಂದಲೇ ನಾನು ತಮ್ಮ ಕಡೆಗೆ ಬಂದಿರುವೆನು. ಅಂತ ತಮ್ಮ ಮೇಲೆ ನನ್ನ ಪೂರ್ಣವಿಶ್ವಾಸವಿದೆ. ಇವರ ಹೊರತು ನಾನು ತಮ್ಮ ಪಾದಗಳನ್ನು ಹಿಡಿದ ಕೂಡಲೆ ನನಗೆ ಸಮಾಧಾನವಾಯಿತು, ಪರಿಚಯವೂ ಆಯಿತು. ಇದರಿಂದ ನನ್ನ ಕಲ್ಯಾಣವಾದೀತೆಂದು ನನ್ನ ಪೂರ್ಣ ವಿಶ್ವಾಸವದೆ.

ಮಹಾರಾಜರು: — ನಾನು ಬ್ರಹ್ಮನಿಷ್ಠನಲ್ಲ. ಜಪ ಮತ್ತು ಧ್ಯಾನ ಇವುಗಳ ಅಭ್ಯಾಸದಿಂದ ನನಗೆ ಸ್ವಲ್ಪ ಅನುಭವವಾಗಿದೆ. ಸದ್ಗುರು ಕೃಪೆಯಿಂದ ನಾನು ನಿಮಗೆ ಸ್ವಲ್ಪ ಮಾಹಿತಿ ಕೊಟ್ಟೇನು, ಆ ಪ್ರಕಾರ ಮಾಡಿ ಏನಾಗುತ್ತದೊ ನೋಡೋಣ ನಿಮಗೆ ಲಾಭದಾಯಕವೆಂತ ಕಂಡರೆ ಹಾಗೆಯೇ ನಡೆಸಿರಿ ಇಲ್ಲದಿದ್ದರೆ ಬಿಟ್ಟುಬಿಡಿರಿ.

ಅನಂತರ ಮಹಾರಾಜರು ನನಗೆ ಗುರುವಾರ ದಿನ ಬರಲಿಕ್ಕೆ ಹೇಳಿದರು. ಆ ಪ್ರಕಾರ ನಾನು ಬಂದು ಮಹಾರಾಜರ ಗುರುಗಳ ಚಿತ್ರಕ್ಕೆ ಮಾಲೆಯನ್ನು ಹಾಕಿದೆ, ಮತ್ತು ಪ್ರಸಾದವೆಂತ ಪೇಢೆ ಹಂಚಿದೆ. ನಂತರ ಮಹಾರಾಜರು ನನ್ನನ್ನು ತಮ್ಮ ಮುಂದೆ ಕೂಡ್ರಿಸಿಕೊಂಡು ತಲೆಯಮೇಲೆ ಕೈಯಿಟ್ಟು 'ಸೋಹಂ' ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು. ನನಗೆ ತತ್ಕಾಲ ದೇಹಭಾನ ತಪ್ಪಿತು ಮತ್ತು ಅದೇ ಸ್ಥಿತಿಯಲ್ಲಿ 'ಸೋಹಂ' ದ ಜಪವು ನಡೆಯಿತು. ನಾಲ್ವತ್ತುಮಿನಿಟು ತನಕ ನಾನು ದೇಹದಮೇಲೆ ಬಂದಿಲ್ಲ, ಮತ್ತು ನನಗೆ ಬಹಳ ಆನಂದವಾಯಿತು.

ನನ್ನ ಅನುಭವಗಳು ಸ್ವಲ್ಪದರಲ್ಲಿ ನಾನು ಕೆಳಗೆ ಕೊಡುತ್ತೇನೆ: —

ಮಂತ್ರದ ಅಕ್ಷರಗಳು ಪಶ್ಯಂತಿಯಲ್ಲಿ ಸ್ಪಷ್ಟವಾಗಿ ಕಾಣುತ್ತವೆ, ಪುನಹಾ ಭ್ರೂಮಧ್ಯದಲ್ಲಿ ಕಪಾಲದ ಮೇಲೆ ಸ್ಪಷ್ಟವಾಗಿ ತೋರುವವು. ತಿಳಿಯತಕ್ಕ ವಿಷಯವು ತಿಳಿಯುವವನಲ್ಲಿ ಲೀನವಾಗುತ್ತವೆ ನಂತರ ತಿಳಿಯುವವನು ಇಲ್ಲದಂತಾಗುವನು. ಎಲ್ಲಿ ತಿಳಿಯುವವನು ಮತ್ತು ತಿಳಿಯತಕ್ಕ ವಸ್ತು ಎರಡೂ ಇರುವದಿಲ್ಲ, ಅಲ್ಲಿ ಗುರು ಕೊಟ್ಟ ಮಂತ್ರದ ಅಧಿಷ್ಠಾನ ಇರುತ್ತದೆ. ಈ ಸಂಗತಿಯು ನನಗೆ ನಿಶ್ಚಿತವಾಗಿ ತಿಳಿಯು ಬಂತು.

ಈ ಎಲ್ಲ ಅನುಭವಗಳು ನನಗೆ ಒಂದು ತಿಂಗಳು ಮತ್ತು ಎರಡು ದಿವಸಗಳಲ್ಲಿ ಸಿಕ್ಕವು. ಇವನ್ನು ಬರೆದು ಸದ್ಗುರು ಚರಣಗಳಲ್ಲಿ ಅರ್ಪಿಸಿರುವೆನು.

ತಾ. ೨೪-೮-೩೪ ಬುಧವಾರ

ಶ್ರಾವಣ ವದ್ಯ ೧೪ ಶಕೆ ೧೮೫೬ (ಸಹಿ) ಶಂಕರ ಮಲ್ಹಾರ ಸಂತೆ

ಶ್ರೀ ಗಜಾನನ ಮಹಾರಾಜರ ಉಪದೇಶವು ಶಿಕ್ಕಮೇಲೆ ನನಗೂ ಅವರಿಗೂ ಧ್ಯಾನದಲ್ಲಿ ಸಂಭಾಷಣೆಯಾಯಿತು. ಅದರಲ್ಲಿ ನಾನು ಶಿಷ್ಯನೆಂಬ ಭಾವನೆಯಿಂದ ಪ್ರಶ್ನೆಗಳನ್ನು ಕೇಳಿದೆ ಮತ್ತು ಅವರು ಗುರುಭಾವದಿಂದ ಉತ್ತರ ಗಳನ್ನು ಕೊಟ್ಟರು. ಅವರ ಉತ್ತರ ಮಹತ್ವಪ್ಪೆಂತ ಕಂಡದ್ದರಿಂದ ಕೆಳಗೆ ಕೊಟ್ಟಿರುತ್ತದೆ.

ಶಿಷ್ಯ:— ನಾನು ಆನಂದ ಸ್ಥಿತಿಯಲ್ಲಿದ್ದೆ. ಈ ಜಾಗ್ರತಿಯೊಳಗೆ ನನಗೆ ಸುಖವೆನಿಸುವದಿಲ್ಲ. ನಾನು ನಿತ್ಯ ಸುಷುಪ್ತಿಯೊಳಗಿಂದ ಜಾಗೃತಿಗೆ ಬರುತ್ತೇನೆ. ಆದರೆ ಇವತ್ತಿನ ಅನುಭವವು ತೀರಾ ಭಿನ್ನವಾಗಿದೆ. ಸಮಾಧಿಸ್ಥಿತಿಯು ಇದು ನಿದ್ರೆಗಿಂತ ಬೇರೆ ಇದೆ ಏನು? ಅಥವಾ ನಿದ್ರೆ ಮತ್ತು ಸಮಾಧಿಯು ಒಂದೇ?

ಗುರು:— ನಿದ್ರೆ ಮತ್ತು ಸಮಾಧಿ ಇವೆರಡು ಸ್ಥಿತಿಗಳು ಸಾಧಾರಣ ಸಮಾನ ಇವೆ. ಆದರೆ ನಿದ್ರೆಯಲ್ಲಿ ಅಹಂಕಾರವು ಗುಪ್ತವಿದ್ದು, ದೇಹದ ಭ್ರಮೆ ಇರುತ್ತದೆ, ಮತ್ತು ಸಮಾಧಿಯಲ್ಲಿ ಅಹಂಕಾರವು ಪೂರ್ಣ ಇಲ್ಲದಂತಾಗಿ ಅಲ್ಲಿ ಸ್ವಾತ್ಮಾನುಭವವು ಇರುವದು. ನಿದ್ರೆ ಮತ್ತು ಸಮಾಧಿ ಇವು ಒಂದೇ ಸ್ಥಾನ ದಿಂದ ಉತ್ಪನ್ನವಾಗುತ್ತವೆ.

— ೨೧ —

ರಾ. ರಾ. ಶಂಕರ ತ್ರಿಂಬಕ ನಾಯಗಾಂವಕರ ಫೋಟೋಗ್ರಾಫರ ನಾಶಿಕ ಇವರ ಅನುಭವಗಳು:—

ಶ್ರೀ ಗಜಾನನ ಮಹಾರಾಜರು ಈ ಸತ್ಪುರುಷರು ಎಲ್ಲಿ ಇರುತ್ತಾರೊ ಅವರ ಎದುರಿನವೇ ನಾನು ಇರುವ ಸ್ಥಳವಾಗಿದೆ. ನಾನು ಅವರನ್ನು ಈಗ ಎಷ್ಟೋ ವರ್ಷಗಳಿಂದ ನೋಡುತ್ತೇನೆ; ಆದರೆ ಅವರ ವ್ಯಕ್ತಿವೈಶಿಷ್ಟ್ಯ ಏನವೆ ಎಂಬದು ನನಗೆ ಇಲ್ಲಿ ತನಕ ತಿಳಿಯಲಿಲ್ಲ, ಮತ್ತು ಅವನ್ನು ಗೊತ್ತುಮಾಡಿಕೊಳ್ಳುವ ದಕ್ಕೆ ಪ್ರಯತ್ನಗಳನ್ನೂ ಮಾಡಲಿಲ್ಲ. ಮನುಷ್ಯನು ತನ್ನ ಬುದ್ಧಿಯ ಮೇಲೆ ವಿಶ್ವಾಸವಿಟ್ಟು ಮತ್ತೊಬ್ಬ ವ್ಯಕ್ತಿವಿಷಯದಲ್ಲಿ ತನ್ನ ಭಾವನೆಗಳನ್ನು ಠರಾಯಿ ಸುತ್ತಾನೆ. ಆದರೆ ನಮ್ಮ ಬುದ್ಧಿಯು ತೀರಾ ಪರಿಮಿತವಾಗಿರುತ್ತದೆ, ಮತ್ತು ನಮ್ಮ ಸತ್ಯಶೋಧನದ ಕಾರ್ಯದಲ್ಲಿ ಬುದ್ಧಿಯ ಮೇಲಿನ ಅಜ್ಞಾನಾಂಧಕಾರದ ಮೋಡವು ಇಲ್ಲದಂತಾದ ವಿನಹಾ ನಿಜವಾದ ಸತ್ಯದ ಪ್ರಕಾಶವು ಮುಂದೆ ಬೀಳುವದಿಲ್ಲ. ಸ್ವಲ್ಪವೇ ದಿನಗಳ ಹಿಂದೆ ನಾನು ಯಾವಗ ಈ ಶ್ರೇಷ್ಠ ವಿಭೂತಿಯ ಸಹವಾಸದಲ್ಲಿ ಬಂದೆ, ಆಗಲೆ ಈ ಮೇಲೆ ಹೇಳಿದ ತತ್ವದ ಜ್ಞಾನವಾಯಿತು.

ಸುಮಾರು ಒಂದೂವರೆ ತಿಂಗಳ ಹಿಂದೆ ಸಾಂಸಾರಿಕ ದುಃಖಗಳ ದೆಶೆಯಿಂದ ನನ್ನ ಮನಸ್ಸು ಉದ್ವಿಗ್ನವಾಗಿರುತ್ತಿದ್ದಾಗ ಯಾವದೊ ಫೋಟೋ-

ಗ್ರಾಫದ ಕೆಲಸದ ನಿಮಿತ್ತ, ಶ್ರೀ ಗಜಾನನ ಮಹಾರಾಜರ ಕಡೆಯಿಂದ ಒಂದು ಹುಡುಗಿಯ ಮುಖಾಂತರ ನನಗೆ ಕರೆ ಬಂತು. ನಾನು ಅವರ ಕಡೆಗೆ ಹೋಗಿ ಅವರಿಗೆ ನಮಸ್ಕಾರ ಮಾಡಿ ಅವರ ಹತ್ತಿರ ಕೂತುಕೊಂಡೆ. ನಂತರ ಅವರು ಒಂದು ಫೋಟೋದ ನೆಗೆಟಿವ್ ನನ್ನ ಕೈಯಲ್ಲಿ ಕೊಟ್ಟರು, ಮತ್ತು ಅದರ ಕೆಲವು ಪ್ರತಿಗಳನ್ನು ತೆಗೆದುಕೊಡಲಿಕ್ಕೆ ಹೇಳಿದರು, ಮತ್ತು ಅವರ ವಿನೋದಿ ಸ್ವಭಾವಕ್ಕನುಸರಿಸಿ ನಗೆಚೇಷ್ಟೆ ಮಾತುಗಳು ಆರಂಭಿಸಿದರು. ನಾನು ಸ್ವಲ್ಪ ವಿನೋದ ಮಾಡಿ ನನ್ನ ಭಾಷಣದ ಪ್ರವಾಹವು ನನಗೆ ಬೇಕಾಗಿದ್ದ ಅಧ್ಯಾತ್ಮ ವಿಷಯದ ಕಡೆಗೆ ತಿರುಗಿಸಿದೆ. ಯಾಕೆಂದರೆ, ಇದಕ್ಕೂ ಮೊದಲು ಒಂದು ವರ್ಷದಿಂದ ನನಗೆ ಆ ವಿಷಯದ ಅತ್ಯಂತ ಪ್ರೀತಿಯು ಉತ್ಪನ್ನವಾದ್ದರಿಂದ ಪುಸ್ತಕಗಳನ್ನು ಓದಿ ಮತ್ತು ಆ ಜ್ಞಾನವನ್ನು ಶಕ್ಯವಾದ ಮಟ್ಟಿಗೆ ತಿಳಿಸಿಕೊಂಡು ಅದನ್ನು ಕೃತಿಯಲ್ಲಿ ಬರುವಂತೆ ಮಾಡುವ ಪ್ರಯತ್ನಗಳನ್ನು ನಡಿಸುತ್ತಿದ್ದೆ. ಆದರೆ ಆ ಪ್ರಯತ್ನ ಎಷ್ಟರಮಟ್ಟಿಗೆ ಸರಿಯಾಗಿದೆ ಎಂಬುದರ ಏನೂ ಅನುಭವ ವಿಲ್ಲದ್ದರಿಂದ ಆಗಾಗ್ಗೆ ಚಿತ್ತವು ಸಾಶಂಕವಾಗುತ್ತಿತ್ತು, ಮತ್ತು ಕೆಟ್ಟ ಅನಿಸುತ್ತಿತ್ತು. ಮತ್ತು ಈ ಪುಸ್ತಕಿ ಜ್ಞಾನದ ಮೇಲಿಂದ ನಾನು ಸದ್ಯದಲ್ಲಿ ಯಾವ ಮೆಟ್ಟಲಿನ ಮೇಲೆ ಇದ್ದೇನೆ, ಎಂಬುದು ತಿಳಿಯುತ್ತಿದ್ದಿಲ್ಲ.

ಒಮ್ಮೆ ಧ್ಯಾನಕಾಲದಲ್ಲಿ ಹೀಗೆ ಶಬ್ದಗಳು ಕಿವಿಯ ಮೇಲೆ ಬಂದವು, ಯಾವನೋ ಬಂಗಾಲಿ ಸಾಧು ಬೇಗನೆ ನಿನಗೆ ಮನೆಗೆ ಕರೆಸಿ ನಿನಗೆ ಭೆಟ್ಟಿ ಕೊಟ್ಟಾರು. ಈ ಸಂಗತಿಯಾಗಿ ಹತ್ತು ಹನ್ನೆರಡು ದಿನಗಳಾದ ಮೇಲೆ ಅಕಸ್ಮಾತ್ತಾಗಿ ಮಹಾರಾಜರ ಕಡೆಯಿಂದ ಈ ಪ್ರಕಾರ ಕರೆಸಲ್ಪಟ್ಟೆನು. ಮತ್ತು ಮಾತಿನ ಪ್ರವಾಹವು ಅಧ್ಯಾತ್ಮ ವಿಷಯದ ಕಡೆಗೆ ಕರಕೊಂಡು ಹೋಗುವಾಗ, ಮಹಾರಾಜರು ಯಾವದೋ ಕಾಗದವನ್ನು ಓದಲಿಕ್ಕೆ ನನಗೆ ಹೇಳಿದರು. ಅದರಲ್ಲಿ ಒಬ್ಬ ಬಂಗಾಲಿ ಮನುಷ್ಯನ ಆಧ್ಯಾತ್ಮಿಕ ಅನುಭವಗಳು, ಮತ್ತು ಮಹಾರಾಜರ ಸಾನ್ನಿಧ್ಯದಲ್ಲಿ ಅವನಿಗೆ ಪ್ರಾಪ್ತಿಯಾದ ಶಾಂತಿಸುಖದ ಅಂದರೆ ನಿರ್ವಿಕಲ್ಪ ಸಮಾಧಿಸುಖದ ಸ್ವಾನುಭವವು ವರ್ಣಿಸಿದ್ದೇ ಇತ್ತು. ಧ್ಯಾನದಲ್ಲಿ ಕೊಟ್ಟ ಸಂದೇಶ ವ ಪ್ರತ್ಯಕ್ಷದಲ್ಲಿ ಕರೆ ಕಳುಹಿಸಿಕೊಟ್ಟ ದರ್ಶನ ಇದರ ಮೇಲಿಂದ ನಾವು ತಿಳುಕೊಳ್ಳುವದಕ್ಕಿಂತ ಈ ವ್ಯಕ್ತಿಯಲ್ಲಿ ಏನಾದರೂ ಅಲೌಕಿಕವದೆ ಎಂದು ಗೊತ್ತಾಗಿ, ಆ ವಿಷಯದ ಕೇವಲ ಮುಮುಕ್ಷು ಎಂದು, ಅನುಭವವನ್ನು ಪಡೆಯಬೇಕು ಮತ್ತು ನಮ್ಮ ಆಯುಷ್ಯದ ಸಾರ್ಥಕ ಮಾಡಿಕೊಳ್ಳಬೇಕು, ಹೀಗೆ ನಿರ್ಣಯಿಸಿ, ಮಹಾರಾಜರ ಚರಣಗಳಲ್ಲಿ ನಮ್ರಭಾವದಿಂದ ವಿಂನಂತಿ ಮಾಡಿದೆ; ಮತ್ತು ಅವರಾದರೂ ಅಂತಃಕರಣದ ತೀವ್ರತೆಯನ್ನು ತಿಳಿದು, ಅನುಗ್ರಹ ಮಾಡುವೆನೆಂದು ಆಶ್ವಾಸನವನ್ನು ಕೊಟ್ಟರು. ಮತ್ತು ನನಗೆ ಪುನಹಾ ಬರಲಿಕ್ಕೆ ಹೇಳಿದರು. ನಡುವೆ ಮಹಾರಾಜರು ಮುಂಬಯಿಗೆ ಹೋದ ಕಾರಣ ಬಹಳ

ದಿನ ನಾನು ಹೋಗಲಿಲ್ಲ. ಎಂಟು ಹತ್ತು ದಿನಗಳ ಹಿಂದೆ ಫೋಟೋ ಸಲು ವಾಗಿ ನಾನು ಕರೆಯಲ್ಪಟ್ಟೆನು, ಮತ್ತು ನಾನಾದರೂ ಪುನಹಾ ಅದೇ ವಿನಂತಿಯನ್ನು ಮಾಡಿದೆ. ಮುಂದೆ ಎರಡು ಮೂರು ದಿನ ನಾನು ಹದಿನೈದು ಇಪ್ಪತ್ತು ಮಿನಿಟು ತನಕ ಭೆಟ್ಟಿಗೆ ಹೋಗುತ್ತಿದ್ದೆ. ಆಗ ಅವರು ಜ್ವರದಿಂದ ಪೀಡಿತರಾಗಿ, ಹಾಸಿಗೆಯ ಮೇಲೆಯೆ ಮಲಗಿಕೊಂಡಿರುತ್ತಿದ್ದರು. ಮತ್ತು ನಾವಿಬ್ಬರು ಸ್ವಲ್ಪ ಹೊತ್ತು ಆನಂದದಿಂದ ಆತ್ಮಜ್ಞಾನ ಸಂಬಂಧ ಮಾತಾಡುತ್ತಿದ್ದೆವು. ನಂತರ ನಾನು ಅವರ ಪ್ರಕೃತಿ ವಿಷಯ ಕೇಳಿಕೊಳ್ಳುವ ನೆವದಿಂದ ನಿತ್ಯ ಅವರ ಕಡೆಗೆ ಹೋಗಲಾರಂಭಿಸಿದೆನು. ಅವರು ಪ್ರಕೃತಿ ನೆಟ್ಟಗಾದಮೇಲೆ ಅನುಗ್ರಹ ಮಾಡುವೆನೆಂದು ಹೇಳಿದರು. ನಾನು ಪ್ರತಿದಿನ ಅವರಕಡೆ ಹೋಗಿ, ಸ್ವಲ್ಪ ಹೊತ್ತು ವಿನೋದ ಮಾಡುತ್ತಿದ್ದೆ, ಕೆಲವು ಹೊತ್ತು ಅಧ್ಯಾತ್ಮ ಚರ್ಚೆಯನ್ನು ಮಾಡುತ್ತಿದ್ದೆ, ಮತ್ತು ಒಮ್ಮೊಮ್ಮೆ ವರ್ತಮಾನಪತ್ರದಲ್ಲಿ ಈ ವಿಷಯದಲ್ಲಿ ಯಾವದಾದರೂ ಮಜಕೂರ ಇದ್ದರೆ ಅದನ್ನು ಅವರಿಗೆ ಓದಿ ಹೇಳುತ್ತಿದ್ದೆ, ಹೀಗೆ ಸರ್ವ ಪ್ರಕಾರಗಳನ್ನು ಅತ್ಯಂತ ಸೂಕ್ಷ್ಮರೀತಿಯಿಂದ ನಿರೀಕ್ಷಣ ಮಾಡಲಾರಂಭಿಸಿದೆನು. ಮತ್ತು ಆಗಾಗ್ಗೆ ಯಾವದಾದರೂ ದಿವ್ಯಶಕ್ತಿ, ನನ್ನ ಅಂತಃಕರಣಕ್ಕೆ ಕೂಡಿ ಬರುವ ವಿಚಾರ, ಶಬ್ದ ವ ಕೃತಿ ಪುನಃಪುನಃ ನನ್ನ ಮುಂದೆ ತರುತ್ತಾರೆಂತ ನನಗೆ ಕಂಡುಬಂತು.

ಮುಂದೆ ಕೆಲವು ದಿನಗಳಲ್ಲಿ ನಾನು ನಿತ್ಯ ಓದುತ್ತಿದ್ದ ಸ್ವಾಮಿ ವಿವೇಕಾನಂದ ಇವರ ಕರ್ಮಯೋಗ ಪುಸ್ತಕದೊಳಗಿಂದ ಕೆಲವು ಭಾಗ ಅವರು ತನ್ನ ಸ್ವಂತ ಕೈಯಿಂದ ತೆಗೆದು ನನ್ನ ಕಡೆ ಕೊಟ್ಟು ಅದನ್ನು ಓದಲಿಕ್ಕೆ ಹೇಳಿದರು. ಮತ್ತು ಆಶ್ಚರ್ಯದ ಸಂಗತಿ ಇದಲ್ಲಾ, ಹಿಂದಿನ ರಾತ್ರಿಯಲ್ಲಿ ನಾನು ಮಲಗುವಾಗ ಅದೇ ಭಾಗ ಓದಿ ನಾನು ಮಲಗಿದ್ದೆ.

ಮುಂದೆ ಮುಂದೆ ಸಂಭಾಷಣದಲ್ಲಿ ಅವರು ನನ್ನ ನಿತ್ಯದ ಆಚರಣೆಯನ್ನು ಹ್ಯಾಗೆ ಅದೆಯೊ ಹಾಗೆಯೇ ಹೇಳುತ್ತಾರೆಂಬಂತೆ ಕಂಡುಬಂತು. ದಿನೇ ದಿನೆ ಶ್ರದ್ಧೆಯು ವೃದ್ಧಿಯಾಗುತ್ತ ನಡೆಯಿತು. ಮತ್ತು ಮುಂದಿನ ಅನುಭವಗಳು ಬಹಳ ಭಿನ್ನವಾಗಿದ್ದು ಅವುಗಳಲ್ಲಿ ಒಂದು ಪ್ರಸಂಗದಿಂದ ನನ್ನ ಶ್ರದ್ಧೆಯು ವಿಶೇಷ ಬೆಳೆಯಿತು. ಒಂದು ದಿನ ಸಾಯಂಕಾಲಕ್ಕೆ ನಾವು ಇಬ್ಬರೇ ಕೂತಿರುವಾಗ, ಮಹಾರಾಜರು ಮತ್ತು ನಾನು ಚಹಾ ಕುಡಿದೆವು, ವ ಮಹಾರಾಜರು ಸಿಗಾರೇಟಿನ ಪಬ್ಬಿಯೊಳಗಿಂದ ಸಿಗಾರೇಟ ತೆಗೆದು ಸೇದುತ್ತಿರುವಾಗ, ಅಲ್ಲಿಯ ವಾತಾವರಣವು ಒಂದು ಮನೋಹರ ಸುವಾಸದಿಂದ ತುಂಬಿದ್ದು, ಯಾರಾದರೂ ಪೂಜೆ ಮಾಡುತ್ತಿರುವಾಗ ಸುಗಂಧ ಹೊರಬಿದ್ದಂತೆ ಈಗ ಸುವಾಸನೆಯು ಹಬ್ಬಿದಂತೆ ತೋರಿತು. ಆ ಸಂಬಂಧ ನಾನು ಪ್ರಶ್ನೆ ಮಾಡುತ್ತಿದ್ದೆ, ಆದರೆ ಯಾರಾದರೂ ಮನೆಯೊಳಗೆ ಪೂಜೆ ಮಾಡುತ್ತಿರಬಹುದು ಎಂದು ತೋರಿದ್ದರಿಂದ ನಾನು

ಆ ವಿಚಾರವನ್ನು ಬಿಟ್ಟುಬಿಟ್ಟೆ. ಈ ವಿಚಾರಗಳು ನನ್ನ ಮನಸ್ಸಿನಲ್ಲಿ ನಡೆಯುತ್ತಿರುವಾಗ, ಮಹಾರಾಜರು ಏಕಾಗ್ರ ಚಿತ್ತದಿಂದ ಏನೋ ಲಕ್ಷ್ಯಕೊಟ್ಟು ನೋಡುತ್ತಾರೆಂಬಂತೆ ನನಗನಿಸಿತು. ಮರುದಿನ ಒಂದು ಪುಷ್ಪಮಾಲೆಯನ್ನು ತರಲಿಕ್ಕೆ ಹೇಳಿ, ಗುರುಮಹಾರಾಜರ ಆಜ್ಞೆ ಪ್ರಕಾರ ನಾನು ನಿಮಗೆ ಏನಾದರೂ ಹೆಚ್ಚಿಗೆ ಹೇಳುವೆನು ಎಂದು ಅವರಂದರು.

ಮರುದಿನ ಮಾರ್ಗಶೀರ್ಷ ಶುದ್ಧ ೧ ಇತ್ತು. ಅಂದಿನ ಮುಂಜಾನೆ ಸ್ನಾನ ಮಾಡಿ ಹೂವುಗಳ ಒಂದು ಉತ್ತಮ ಹಾರವನ್ನು ತಕ್ಕೊಂಡು ಮಹಾರಾಜರ ದರ್ಶನಕ್ಕೆ ಹೋದೆನು. ಮಹಾರಾಜರ ಆಜ್ಞೆಯ ಮೇಲಿಂದ ನಾನು ಆ ಮಾಲೆಯನ್ನು ಶ್ರೀನಾರಾಯಣಸರಸ್ವತಿಯವರ ಚಿತ್ರಕ್ಕೆ ಹಾಕಿದೆನು. ಮತ್ತು ಮಹಾರಾಜರ ಎದುರಿಗೆ ಅವರು ಹೇಳಿದಂತೆ ಕೂತುಕೊಂಡೆ. ಅವರು ನನ್ನ ಎದುರಿಗೆ ಕೂತಿದ್ದು ಒಂದರ ಹಿಂದೊಂದು ಒಂದೇಸಮನೆ ಸಿಗಾರೇಟ ಸೇದುತ್ತಿದ್ದರು. ಮತ್ತು ತಮ್ಮ ಪೂರ್ವದ ತಿಸ್ಕಾರ ಅನುಭವಗಳನ್ನು ವರ್ಣಿಸಿ ಹೇಳುತ್ತಿರುವಾಗ, ಒಮ್ಮಿಂದೊಮ್ಮೆ ಅದೇ ಮೊದಲಿನಂತೆ ಸುವಾಸ ಹೊರಟು, ಆ ಕೋಣೆಯು ಅತ್ಯಂತ ಪ್ರಸನ್ನ ಎಂಬಂಥಾ ವಾತಾವರಣದಿಂದ ತುಂಬಿತು ಮತ್ತು ನನಗೆ ವಿಸ್ಮೃತಿ ಬರುತ್ತದೆಂಬಂತೆ ಅನಿಸಿತು. ಮಹಾರಾಜರು ಮಾತಾಡುತ್ತ ಇದ್ದರು. ನಾನು ಕೇಳುವ ಲಕ್ಷ್ಯವು ಸಾಧಾರಣ ಕಡಿಮೆಯಾಯಿತು ಎಂದು ನೋಡಿ, ಅವರು ನನಗೆ 'ಸೋಹಂ'ದ ಮಂತ್ರವನ್ನು ೧೦೮ ಸಾರೆ ಮೆಲ್ಲಮೆಲ್ಲನೆ ಮನಸ್ಸಿನೊಳಗೆ ಅನ್ನಲಿಕ್ಕೆ ಹೇಳಿದರು, ಮತ್ತು ನನ್ನ ದೃಷ್ಟಿಗೆ ತಮ್ಮ ದೃಷ್ಟಿಯನ್ನು ಸ್ಥಿರ ಮಾಡಿದರು. ನನ್ನ ಮನಸ್ಸು ಸ್ಥಿರ ಆಗುತ್ತ ಆಗುತ್ತ ನನಗೆ ಹೀಗ ಅನಿಸುತ್ತಿತ್ತಲ್ಲ, ಆನಂದದ ತೆರೆಗಳ ಬುಡಕ್ಕೆ ನಾನು ಅಡಗಿ ಹೋಗುತ್ತೇನೋ ಎಂಬಂತಾಯಿತು. ನಾನು ಎಲ್ಲೋ ಬಹಳ ಆಳವಾದಲ್ಲಿ ಹೋಗುತ್ತೇನೆ, ಮತ್ತು ಬಾಹ್ಯ ಜಗತ್ತಿನ ಪೂರ್ಣ ವಿಸ್ಮೃತಿಯಾಗಹತ್ತಿದೆ ಮತ್ತು ಅಲ್ಲಲ್ಲಿ ಎಲ್ಲ ಅಂಧಕಾರವೇ ಆಗಿ ಹೃದಯದ ಸ್ಪಂದನವು ಬಹಳ ಜೋರಿನಿಂದ ನಡೆದಿತ್ತು ಎಂಬಂತೆ ತೋರಿತು. ಈ ಪ್ರಕಾರದ ಸ್ಥಿತಿಯಲ್ಲಿ ಬೆನ್ನಿನ ಎಲುಬಿನೊಳಗಿಂದ ಒಂದು ಶಕ್ತಿಯು ಮೆಲ್ಲಮೆಲ್ಲಗೆ ಮೆದುಳಿನ ಕಡೆಗೆ ಹೋಗುತ್ತಿದೆ ಎಂದೆನಿಸಿತು. ಯಾತರದೊ ತೀಕ್ಷ್ಣ ಸ್ಪರ್ಶವು ಭ್ರೂಮಧ್ಯದಲ್ಲಿ ಒಳಗಿಂದ ಆಗುತ್ತದೆ ಎಂಬಂತೆ ಅನುಭವ ಬಂತು ಮತ್ತು ಮೆದುಳಿನ ಕೇಂದ್ರಸ್ಥಾನದಿಂದ ಏನೂ ಹೃದಯದಲ್ಲಿ ನೆಟ್ಟಗೆ ಬೀಳುತ್ತದ ಎಂದು ತೋರಿತು; ಮತ್ತು ಮೊದಲಿನ ಅಂಧಕಾರವು ಇಲ್ಲದಂತಾಗಿ, ಅಲ್ಪ ಅಲ್ಪ ಪ್ರಕಾಶವು ಕಾಣಹತ್ತಿತು. ಮತ್ತು ಹೃದಯಸ್ಥ ದೇವತೆಯ ದರ್ಶನವಾಯಿತು. ಮೆಲ್ಲಮೆಲ್ಲಗೆ ಆ ದೇವತೆಯ ಮುಖಮಂಡಲವು ಬದಲಾಗುತ್ತ ಹೋಗಿ, ಅದಕ್ಕೆ ನನ್ನ ಎದುರಿಗೆ ಕೂತಿದ್ದ ಸದ್ಗುರು ಮೂರ್ತಿಯ ಆಕಾರ ಬರಹತ್ತಿತು. ಆ ಕೂಡಲೆ ಮನಸ್ಸಿನಲ್ಲಿ ನಿಶ್ಚಯವಾಯಿತು, ಮತ್ತು ಎಲ್ಲ ಶಂಕೆ ನಿರಸನವಾಗಿ ಅಂತಃಕರಣವು

ಪೂರ್ಣ ಆನಂದದಿಂದ ತುಂಬಿಹೋಯಿತು,ಮತ್ತು ಪುಸ್ತಕವನ್ನು ಗುರುಮಾವುಲಿಯ
ಚರಣದ ಮೇಲೆ ಇಡಲಿಕ್ಕೆ ಮುಂದರಿಸುವಾಗ, ಆಗಲೆ ಸದ್ಗುರುಗಳು ಪುಸ್ತಕಕ್ಕೆ
ಮೆಲ್ಲನೆ ಸ್ಪರ್ಶಮಾಡಿ ನನಗೆ ಮೂಲ ಸ್ಥಿತಿಯಲ್ಲಿ ಬರಲಿಕ್ಕೆ ಹೇಳಿದರು. ಕಣ್ಣು
ಬಿಟ್ಟು ನೋಡಹತ್ತಿದರೆ, ನಿಜವಾಗಿ ಮಹಾರಾಜರು ನನ್ನ ಕಡೆ ಏಕಾಗ್ರಚಿತ್ತ
ದಿಂದ ನೋಡುತ್ತಿದ್ದಾರೆ ವ ಅವರ ರೂಪವು ಬದಲಾಗುತ್ತ ಹೋಗಿ, ಅವರ ಮೂಲ
ರೂಪದಂತೆ ನನಗೆ ಕಾಣಿಸುತ್ತಾರೊ ಎಂಬಂತೆ ತೋರಿತು. ಈ ಪ್ರಕಾರದ ಅನು
ಭವವು ಆಯುಷ್ಯದಲ್ಲಿ ಹೊಸದಾಗಿರುವದರಿಂದ ಅದು ಅತಿಶಯ ಆನಂದದಾಯಕ
ವೆನಿಸಿತು. ಈ ಸ್ಥಿತಿಯಲ್ಲಿ ನಾನು ಎಷ್ಟು ಹೊತ್ತು ಇದ್ದೆನೊ ಎಂಬದು ನನಗೆ ತಿಳಿ
ಯಲಿಲ್ಲ. ಎದುರಿಗೆ ಶ್ರೀಗಜಾನನ ಮಹಾರಾಜರು ಕೆಲವು ಸತ್‌ಶಿಷ್ಯರ ಅನುಭ
ವದ ವಿಷಯ ಹೇಳುತ್ತಿದ್ದಾರೆ ಎಂಬಂತೆ ನನಗೆ ಅಸ್ಪಷ್ಟವಾಗಿ ತಿಳಿಯುತ್ತಿತ್ತು.
ಸರ್ವತ್ರ ಸುಗಂಧವು ಹಬ್ಬಿಕೊಂಡಿದ್ದು ನನ್ನ ಕಣ್ಣೆದುರಿನಿಂದ ಕೆಲವು ಅಸ್ಪಷ್ಟ
ದೇವತಾಮೂರ್ತಿಗಳು ಹೋಗುತ್ತಿದ್ದಂತೆ ತೋರಿತು. ಅವರಲ್ಲಿ ಭಗವಾನ ರಾಮ
ಕೃಷ್ಣ, ಭವಾನಿ ವ ಶಂಕರ ಮತ್ತು ಗಣಪತಿ ವ ಓಂ ಈ ಆಕೃತಿಗಳು ಸ್ಪಷ್ಟ ಕಾಣಿ
ಸುತ್ತಿದ್ದು ಗುರ್ತವೂ ಹತ್ತಿತು.

ನಂತರ ನಾನು ಪೂರ್ವಸ್ಥಿತಿಗೆ ಬಂದಮೇಲೆ, ಶ್ರೀಮಹಾರಾಜರು ಕೇಸರಿ
ವರ್ತಮಾನಪತ್ರದೊಳಗಿನ ‘ ಗುರು-ಶಿಷ್ಯ ವಿಜ್ಞಾನ ದೀಪಿಕೆ ’ಯ ಮೇಲಿನ ಅಭಿ
ಪ್ರಾಯದ ಕಟಿಂಗ (ಕತ್ತರಿಸಿದ ಮಜಕೂರು) ಓದಿ ನೋಡಲಿಕ್ಕೆ ನನಗೆ ಕೊಟ್ಟರು.
ಅದರೊಳಗಿನ ಭಗವಾನ ರಾಮಕೃಷ್ಣ ಪರಮಹಂಸ ವ ಸ್ವಾಮಿ ವಿವೇಕಾನಂದ
ವಗೈರೆಯವರ ಉಲ್ಲೇಖವಿದ್ದ ಮಜಕೂರು ಓದಿ ನೋಡಿದಾಕ್ಷಣ ಇದೇ ಈಗ ಧ್ಯಾನ
ದಲ್ಲಿ ಘಟಿಸಿದ ದರ್ಶನದ ಮತ್ತು ಪ್ರತ್ಯಕ್ಷದ ಸಾಕ್ಷವೇ ಸದ್ಗುರುಗಳು ನನಗೆ ನಿಶ್ಚ
ಯಮಾಡಿ ಕೊಡುತ್ತಿರಬೇಕು ಎಂಬಂತೆ ತೋರಿತು. ಆ ಪ್ರಕಾರ ನಾನು ಅವರಿಗೆ
ಹೇಳುತ್ತಲೆ, “ ನಿನ್ನ ದೃಷ್ಟಿಯು ಪಾವನವಾಯಿತು” ಎಂದು ಸದ್ಗುರುಗಳು ನನಗೆ
ಆಶೀರ್ವಾದವನ್ನು ಕೊಟ್ಟರು. ಗುರುಗಳ ಆಜ್ಞೆ ಪ್ರಕಾರ ನಿತ್ಯ ‘ಸೋಹಂ’ದ ಜಪ
ಮಾಡುತ್ತಿರುವಾಗ, ವೃತ್ತಿಯು ಪುನಹಾ ಹಾಗೆಯೆ ತನ್ಮಯವಾಗಲಾರಂಭಿಸಿತು,
ಮತ್ತು ಅಂತಃಕರಣದ ನಿಶ್ಚಯವಾಯಿತಲ್ಲ, ಯಾವ ಸದ್ವಸ್ತುವಿನ ಶೋಧವನ್ನು
ನಾನು ಇಷ್ಟು ದಿವಸ ಮಾಡುತ್ತಿದ್ದೆ, ಅದು ನನ್ನ ಇಷ್ಟು ಸಮೀಪವಿದ್ದೂ, ನಾನು
ಇಷ್ಟು ದಿವಸ ಅಜ್ಞಾನಾಂಧಕಾರದೊಳಗೆ ದುಃಖಪಡುತ್ತಿದ್ದೆ. ಸದ್ಗುರು
ಕೃಪೆಯಿಂದ ಇಂಥ ಜ್ಞಾನದ ಪ್ರಕಾಶವು ಬಿದ್ದಮೇಲೆ ಎಷ್ಟೊ ಗೂಢ ರಹಸ್ಯಗಳು
ಪೂರ್ಣವಾಗಿ ಬಿಡಿಸಲ್ಪಟ್ಟವು. ಅದರೊಳಗಿನ ಒಂದು ಅನುಭವವು ಕೆಳಗಿನ
ಪ್ರಕಾರ ಇದೆ.

ನಿತ್ಯ ನಿಯಮದ ಪ್ರಕಾರ ಬೆಳಿಗ್ಗೆ ‘ಸೋಹಂ’ದ ಜಪ ಮಾಡುತ್ತ
ಮಾಡುತ್ತ ವೃತ್ತಿ ತದಾಕಾರವಾಯಿತು, ವ ನಾನು ನನ್ನ ಆಯುಷ್ಯದಲ್ಲಿ ಹಿಂದೆ

ನೋಡಿದಂಥ ಒಂದು ಸ್ಥಳದಲ್ಲಿ ಬಹಳ ದೂರ ಹೋಗುತ್ತೇನೆ ಎಂಬಂತೆ ಕಾಣಿಸಿತು. ಆ ಸ್ಥಳವನ್ನು ನಾನು ಇಪ್ಪತ್ತು ವರ್ಷಗಳ ಹಿಂದೆ ನೋಡಿದ್ದೆ. ಆಗ ನಾನು ಜಬಲಪೂರದಲ್ಲಿ ಸಾಲೆ ಕಲಿಯುತ್ತಿದ್ದೆ. ಅಲ್ಲಿಂದ ಸಮೀಪ ಎರಡು ಮೈಲಿನ ಮೇಲೆ ಗುಪ್ತೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಶಂಕರನ ಒಂದು ಅತ್ಯಂತ ರಮಣೀಯ ಸ್ಥಾನವದೆ. ಅಲ್ಲಿಗೆ ನಾವು ಮಿತ್ರರ ಕೂಡ ಯಾವಾಗಲೂ ದರ್ಶನಕ್ಕೆ ಹೋಗುತ್ತಿದ್ದೆವು. ಅಂದಿನಿಂದ ಆ ಸ್ಥಳದ ವಿಷಯದ ಆದರ ಹುಟ್ಟಿ ಶಿವ ಉಪಾಸನೆಯ ಪ್ರೇಮವು ಅಂತಃಕರಣದಲ್ಲಿ ಉತ್ಪನ್ನವಾಯಿತು. ಆದರೆ ಮುಂದೆ ಪರಿಸ್ಥಿತಿ ಮೂಲಕ ಕರ್ತವ್ಯವೆಂದು ಆ ಸ್ಥಳದ ತ್ಯಾಗ ಮಾಡಬೇಕಾಯಿತು. ಆದರೆ ಆ ಸ್ಥಳದ ಮೇಲಿನ ಪ್ರೇಮವು ಮತ್ತು ಶಿವದರ್ಶನದ ತೀವ್ರ ಆಕಾಂಕ್ಷೆಯು ಮನಸ್ಸಿನಲ್ಲಿ ನಿಂತು ಅದು ದಿನೇದಿನೆ ಅಧಿಕ ವೃದ್ಧಿಯಾಗುತ್ತಿತ್ತು. ಸನ್ ೧೯೩೪ ನೇ ವರ್ಷದಲ್ಲಿ ನಾನು ನಾಶಿಕಕ್ಕೆ ಬಂದೆ. ಮುಂದೆ ಆಧ್ಯಾತ್ಮ ವಿಷಯದ ಅಭ್ಯಾಸ ಮಾಡುತ್ತಿದ್ದರೆ ಅಂತಃಕರಣದೊಳಗಿನ ಪರಮೇಶ್ವರ ದರ್ಶನದ ಆಕಾಂಕ್ಷೆಯು ತೃಪ್ತವಾಗುವದು ಎಂದು ಭಗವಾನ್ ರಾಮಕೃಷ್ಣ ಪರಮಹಂಸ ವ ಸ್ವಾಮಿ ವಿವೇಕಾನಂದ ಇವರ ಅಮೃತತುಲ್ಯ ಗ್ರಂಥ ( ವಾಕ್ಸುಧಾ ವ ವ್ಯಾಖ್ಯಾನಗಳು ) ಓದಿ ಬುದ್ಧಿಯು ನಿಶ್ಚಯಾತ್ಮಕ ತಿಳುವಳಿಕೆಯಾಯಿತು. ಮತ್ತು ಅದೇ ಪ್ರಕಾರ ನನ್ನದೂ ಅಂತಃಕರಣದೊಳಗಿನ ಪರಮೇಶ್ವರ ದರ್ಶನದ ತೀವ್ರ ಇಚ್ಛೆಯು ತೃಪ್ತವಾಗಬೇಕೆಂದು ಏಕಾಗ್ರತೆಯಿಂದ ಚಿಂತನ ವ ಧ್ಯಾನ ಮಾಡಲಾರಂಭಿಸಿದೆ. ಆದರೆ ದಿವಸದಿವಸಕ್ಕೆ ಮನಸ್ಸಿನ ತಳಮಳ ಮಾತ್ರ ಹೆಚ್ಚಾಗುತ್ತ ನಡೆಯಿತು, ಏನೂ ಸೂಚಿಸಲಾರದಂತಾಯಿತು, ಮತ್ತು ಮನಸ್ಸಿಗೆ ನಿರಾಶ ಸ್ಥಿತಿಯು ಹತ್ತಿ, ಕಡೆಗೆ ಆ ಮಾರ್ಗವೆ ಬಿಡಬೇಕೆಂದೆನಿಸಿತು. ಆದರೂ ಒಂದು ಕಡೆಯಿಂದ ಮನಸ್ಸು ನಿಶ್ಚಯವಾಗಿ ಹೇಳುತ್ತದಲ್ಲ, ಜಗತ್ತಿನಲ್ಲಿ ಪರಮೇಶ್ವರನಿದ್ದರೆ, ಅವನು ಸಪ್ತಪಾತಾಳದಲ್ಲಿ ಅಡಗಿಕೊಂಡಿದ್ದರೂ ಅವನನ್ನು ಅಲ್ಲಿಂದ ಹುಡುಕಿ ತೆಗೆಯುವೆನು. ಈ ಆತ್ಮವಿಶ್ವಾಸದ ಮೇಲಿಂದ ನಾನು ಶಾಂತನಾಗಿದ್ದು ಧ್ಯಾನ ವ ಉಪಾಸನೆಯನ್ನು ಮಾಡಲಾರಂಭಿಸಿದೆನು. ಧ್ಯಾನದಲ್ಲಿ ಸಂದೇಶವು ಹ್ಯಾಗೆ ಬಂತು ಅದನ್ನು ನಾನು ಮೇಲೆ ಹೇಳಿದ್ದೇನೆ. ಅದೇ ಪ್ರಕಾರ ಸಂಸಾರ ತಾಪದಿಂದ ತಲೆ ತಿರುಗಿ ಎಲ್ಲ್ಯಾದರೂ ಶಾಂತಿ ಸುಖವನ್ನು ಹುಡುಕುತ್ತಿರುವಾಗ, ಈ ಸ್ಥಾನದ ಆವ್ಹಾಹನವು ಬಂದು ನನ್ನ ಮನೋನಿಶ್ಚಯವಾಯಿತು, ಮತ್ತು ನನ್ನ ಇಚ್ಛೆಪ್ರಕಾರ ನಿರ್ವಿಕಲ್ಪ ಸಮಾಧಿಯ ಅನುಭವವು, ಧ್ಯೇಯಮೂರ್ತಿ ವ ತ್ಯಾಗಮೂರ್ತಿಗಳ ಪೂರ್ವ ಪರಿಚಯದ ಸ್ಥಾನವು ಸದ್ಗುರು ಕೃಪೆಯ ಮೂಲಕವೇ ನನಗೆ ಇವತ್ತು ಕಾಣಿಸಿತು ಮತ್ತು ಶಂಕಾಕುಶಂಕಾ ನಾಶವಾದವು.

ನನ್ನ ತಾಯಿಯು ಹಿಂದೆ ೧೯೧೬ನೇ ವರ್ಷದಲ್ಲಿ ಶಿವಾಧೀನಳಾದ ನಂತರ ನನ್ನ ಅಜ್ಜಿಯು ಗಣಪತಿಯ ಉಪಾಸನೆಯನ್ನು ಅತ್ಯಂತ ಮನೋಭಾವದಿಂದ

ಮಾಡುತ್ತಿದ್ದಳು. ನಾಸ್ತಿಕತ್ವವೃತ್ತಿಯಿಂದ ನಾನು ಮೂರ್ತಿಯನ್ನು ಆಕೆಗೆ ಗೊತ್ತಿಲ್ಲದೆ ತೆಗೆದು ಒಂದು ತಗ್ಗಿನಲ್ಲಿ ಹುಗಿದು ಬಿಟ್ಟೆನು. ಮೂರ್ತಿಯು ಕಳೆದದ್ದಕ್ಕಾಗಿ ಆಕೆಗೆ ಬಹಳ ಕೆಟ್ಟ ಅನ್ನಿಸಿತು; ಆದರೆ ನನಗೆ ಮಾತ್ರ ಆಗ್ಗೆ ನನ್ನ ತುಂಟತನದ ಆನಂದವಾಯಿತು. ಗುಪ್ತವಾದ ಮೂರ್ತಿ ವಿಷಯದ ಆಕೆಯ ಅತ್ಯಂತ ತಳಮಳವು ಯಾವಪ್ರಕಾರದ್ದಿತ್ತು ಎಂಬುದು ನಾನು ಆ ಪೆಟ್ಟಿಲಿಗೆ ಹೋಗಿ ಮುಟ್ಟುವವರೆಗೂ ನನಗೆ ಅದರ ಕಲ್ಪನಾ ಆಗಲಿಕ್ಕೆ ಸಾಧ್ಯವಿದ್ದಿಲ್ಲ. ಆದರೆ ಆತ್ಮ ಸಾಕ್ಷಾತ್ಕಾರವಾದ ನಂತರ, ನನಗ ಆ ದುಷ್ಕೃತ್ಯದ ಪೂರ್ಣ ಪಶ್ಚಾತ್ತಾಪವಾಯಿತು, ವ ಅಧ್ಯಾತ್ಮಿಕ ಅಭ್ಯಾಸವನ್ನು ಮಾಡುತ್ತಾ ಮಾಡುತ್ತಾ ಇಷ್ಟು ವರ್ಷ ಗುಪ್ತವಾಗಿದ್ದ ಸದ್ಗುರು ಮೂರ್ತಿಯ ದರ್ಶನವಾಯಿತು, ಮತ್ತು ಸಂಶಯುಗಳೆಲ್ಲ ಹೋದವು. ರಾಜಾ ಗೋಪೀಚಂದ ಇವನು ಇದೇ ಪ್ರಕಾರ ತನ್ನ ತಾಯಿಯ ಗುರು ಶ್ರೀ ಜಲಂದರನಾಥ ಇವರರಿಗೆ ಸಮಾಧಿಸ್ಥಿತಿಯಲ್ಲಿರುವಾಗ್ಗೆ ಎತ್ತಿ ಹೈದು ಒಂದು ತಿಪ್ಪೆಯ ಒಳಗೆ ಇಟ್ಟು ಮುಚ್ಚಿಬಿಟ್ಟಿದ್ದನು. ಅವರ ಶಿಷ್ಯನಾದ ಕಾನಿಫನಾಥನಿಗೆ ಅದು ಅಂತರ್ದೃಷ್ಟಿಯಿಂದ ತಿಳಿಯಿತು. ಮತ್ತು ರಾಜಾ ಗೋಪಿಚಂದನ ಕಡೆಯಿಂದ ಅವರನ್ನು ಮೇಲೆ ತೆಗಿಸಿದನು, ಮತ್ತು ಎಲ್ಲರಿಗೂ ಅವರ ಯೋಗಸಾಮರ್ಥ್ಯದ ಅನುಭವವನ್ನು ಮಾಡಿಸಿಕೊಟ್ಟನು. ಮತ್ತು ತನ್ನ ಮೇಲೆ ಅಪಕಾರ ಮಾಡಿದವನಿದ್ದರೂ ಗೋಪಿಚಂದನ ಮೇಲೆ ದಯಾರ್ದ್ರ ಅಂತಃಕರಣದಿಂದ ಆ ಜಲಂದರನಾಥರು ಆತನನ್ನು ಪ್ರೇಮದೃಷ್ಟಿಯ ವರ್ಷಾವದಿಂದ ಕೃತಾರ್ಥನನ್ನಾಗಿ ಮಾಡಿದರು. ಈ ರಾಜಾ ಗೋಪಿಚಂದ ವ ಜಲಂದರನಾಥ ವಗೈರೆಯವರ ಸಂಬಂಧ ನೋಡಿದ ದೃಶ್ಯವು ಧ್ಯಾನದಲ್ಲಿ ತೋರಿಸಿದ್ದರ ಮೇಲಿಂದ ಎದುರಿಗೆ ಕೂತಿರುವ ಮೂರ್ತಿಯು ಶ್ರೀಗಜಾನನ ಮಹಾರಾಜ ಗುಪ್ತೆ (ಇಷ್ಟುದಿನ ಗುಪ್ತ ರೀತಿಯಿಂದ ಇದ್ದವರು) ಇವರೇ ಶಿವಸ್ವರೂಪ ಜಾಲಂದರನಾಥರಿದ್ದರು ಎಂಬುದು ನಿರ್ಣಯವಾಯಿತು ಮತ್ತು ಕಡೆಗ ಸತ್ಯವಸ್ತುವಿನ ಶೋಧವಾಯಿತು.

ಓಂ ಸೋಹಂ (ಸಹಿ) ಎಸ್. ಟಿ. ಸಾಯಗಾಂವಕರ

ಶ್ರೀಕೃಷ್ಣಚರಣದಲ್ಲಿ

## ಧ್ಯಾನದೊಳಗಿನ ಒಂದು ಅನುಭವವು.

'ಸೋಹಂ' ದ ಜಪವು ನಡೆಯುತ್ತಿರುವಾಗ ಒಂದು ದಿನ ಪ್ರಾತಃಕಾಲದಲ್ಲಿ ನಾನು ಈ ಮುಂದಿನ ದೃಶ್ಯವನ್ನು ಕಂಡೆನು. ಧ್ಯಾನಸ್ಥಿತಿಯಲ್ಲಿ ಹೊರಗಿನ ಜಗದ ವಿಸ್ಮೃತಿಯಾಗುತ್ತ ನಾನು ಕತ್ತಲಿನೊಳಗೆ ದಾರಿ ಹಿಡಿದು ನಡೆಯುತ್ತಿರುವಾಗ ಯಾವತರದೊ ತಣ್ಣಗೆ ಸ್ಪರ್ಶವು ನನ್ನ ಶರೀರಕ್ಕೆ ಆಯಿತು. ಅದನ್ನು ಕೈಯಿಂದ ನೋಡಿದರೆ ತ್ರಿಶೂಲವಿತ್ತು, ಆದರೆ ಅದು ಯಾರ ಕೈಯಲ್ಲಿ ಇತ್ತು ಎಂಬುದು ಕಾಣಿಸಲಿಲ್ಲ. ಮುಂದೆ ಆ ತ್ರಿಶೂಲಧಾರಿ ಮತ್ತು ನಾನು ಕತ್ತಲಿನೊಳಗೆ ಬಹಳ ದಾರಿ ನಡೆದು ಹೋದ ಮೇಲೆ ಅಲ್ಪವಾದ ಪ್ರಕಾಶ ಕಿರಣಗಳಿಂದ

ಆ ಮಾರ್ಗವು ಪ್ರಕಾಶಿತವಾಯಿತು. ಮತ್ತು ನನ್ನ ಮುಂದಿರುವ ತ್ರಿಶೂಲಧಾರಿ ರೂಪದಲ್ಲಿ ಸಾಕ್ಷಾತ್ ಶ್ರೀ ಗಜಾನನ ಮಹಾರಾಜರಿದ್ದರು; ಇವನ್ನು ನಾನು ತ್ವಾಗಿ ತಿಳಿಕೊಂಡೆ ಮತ್ತು ಪೂರ್ಣ ಪ್ರಕಾಶದಲ್ಲಿ ಬಂದಮೇಲೆ ಕೇಳಿದೆ, ' ಈ ಪ್ರಕಾಶವು ಯಾತರದಿದೆ ? ' ಆಗ ಮಹಾರಾಜರು ಸ್ವಹಸ್ತದ ಬೆರಳು ತೋರಿಸಿ, ಅಂದದ್ದು, ' ನೋಡಿರಿ ? ' ನೋಡುವಾಕ್ಷಣ ಮಹಾರಾಜರ ಬೆನ್ನ ಹಿಂದೆ ನಡೆಯು ...ಸದ ಶಂಖ-ಚಕ್ರಗದಾಪದ್ಮಧಾರಿ ಶ್ರೀಕೃಷ್ಣನ ಮೂರ್ತಿಮಂತ ದರ್ಶನವಾಯಿತು, ಮತ್ತು ಪಾದಸ್ಪರ್ಶಮಾಡಲಿಕ್ಕೆ ನಾನು ಬಗ್ಗಿದಾಗ ಒಂದು ಭಯಂಕರ ಸರ್ಪವು ಹೆಡೆ ಎತ್ತಿ ಶ್ವಾಸ ಬಿಡುತ್ತಾ ಬಂತು. ಆದರೆ ಸದ್ಗುರು ಮಹಾರಾಜರ ತ್ರಿಶೂಲವನ್ನು ನನ್ನ ಹಸ್ತದಲ್ಲಿ ನೋಡಿ, ಅದರ ಸ್ಪರ್ಶದಿಂದಲೂ ಸರಳ ಸುತ್ತಿತು, ಮತ್ತು ಅಂಜಬೇಡೆಂತ ಶ್ರೀಕೃಷ್ಣನೇ ನನಗೆ ಹೇಳುತ್ತಿದ್ದರಿಂದ ಭೀತಿಯು ಪೂರ್ಣವಾಗಿ ಹೋಯಿತು. ಮುಂದೆ ನಾವೆಲ್ಲರೂ ತಾಯಿಯ ದರಬಾರದಲ್ಲಿ ಹೋದೆವು; ಆ ದರಬಾರದ ನೋಟವು ಶಬ್ದಗಳಿಂದ ವರ್ಣಿಸುವುದು ಅಶಕ್ಯವಿದೆ. ತಾಯಿಯು ನಂ ಆಶೀರ್ವಾದ ಕೊಟ್ಟು ಹೋಗಲಿಕ್ಕೆ ಹೇಳಿದಳು.

ತಾ. ೨೬ ಮಾರ್ಚ ೧೯೩೯

(ಸಹಿ) ಎಸ್. ಟಿ. ನಾಯಗಾಂವಕರ

ಒಂದುದಿನ ಸದ್ಗುರುಗಳು ಹೇಳಿದ ಪ್ರಕಾರ ಧ್ಯಾನ ಮಾಡುತ್ತಿರುವಾಗ ಮುಂದಿನ ಅನುಭವವು ಆಯಿತು.

ಪೂರ್ಣ ಜಾಗೃತಿಯಿಂದ ಜಪ ನಡೆಯುತ್ತಿರುವಾಗ ನನ್ನ ಶರೀರದಲ್ಲಿ ಕುಂಡಲಿನೀ ಶಕ್ತಿಯು ಉದಯವಾಯಿತು. ಯೋಗದ ಪುಸ್ತಕದಲ್ಲಿ ನಾನು ಅದರ ವರ್ಣನೆಯನ್ನು ಓದಿದ್ದೆ, ಮತ್ತು ನನ್ನ ಸದ್ಗುರುಗಳು ಕೃಪೆಮಾಡಿ ಆ ವಿಷಯವನ್ನು ನನಗ ತಿಳಿಸಿ ಹೇಳಿದ್ದರು; ಆದರೆ ಇಲ್ಲಿತನಕ ನನಗೆ ಅದರ ಪ್ರತ್ಯಕ್ಷ ಅನುಭವವಾಗಿದ್ದಿಲ್ಲ. ಆ ದಿನ ಕುಂಡಲಿನಿಯು ಬೆನ್ನೆಲುಬಿನ ಮಧ್ಯದಿಂದ ಮೇಲೆ ಏರುತ್ತಿತು. ನಂತರ ಅದು ಹೃದಯದೊಳಗೆ ಸೇರಿತು. ಮತ್ತು ಅಲ್ಲಿಯ ಕಮಲವನ್ನು ಪ್ರಫುಲ್ಲಿತ ಮಾಡಿತು; ನಂತರ ಅದು ಕೊರಳಿನ ಕಡೆ ಹೋಯಿತು, ಮತ್ತು ಮಿದುಳಿನ ಮಧ್ಯಭಾಗದಲ್ಲಿ ಅದರ ಸ್ಪರ್ಶವು ಮುಟ್ಟಿತೆಂತ ನನಗೆ ತೋರಿತು. ಅದು ಅಲ್ಲಿ ನಿಂತಿತು ಮತ್ತು ಅಲ್ಲಿ ಏನೋ ಅಡ್ಡ ಬಂದಂತ ಕಾಣುತ್ತದೆ. ಅದರ ವೇಗದ ಅದು ಮುಂದೆ ಹೋಗಲಿಕ್ಕೆ ಆಗದಂತಾಯಿತು. ಯಾಕಂದರೆ ಬೆನ್ನೆಲುಬಿನ ನಡುವೆ ಇರುವ ಎರಡೂ ನಾಡಿಗಳಿಗೆ ಹೊಡೆಯಲಿಕ್ಕೆ ಅದು ಆರಂಭಿಸಿತು. ಮತ್ತು ಮೂಲಾಧಾರ ಚಕ್ರದ ಕಡೆಗೆ ತಿರುಗಿ ಹೋಯಿತು. ಆ ಅಡಚಣೆ ದೂರ ಮಾಡುವದ ಸಲುವಾಗಿ ನಾನು ಸುಮಾರು ಎರಡೂವರೆ ತಾಸು ತನಕ ಅತಿಶಯ ಪ್ರಯತ್ನಗಳನ್ನು ಮಾಡಿದೆ, ಆದರೆ ಸಾಧಿಸಲಿಲ್ಲ. ಈ ಅಡಚಣೆ ಯಾವ ಪ್ರಕಾರದ್ದಿದೆ

ಮತ್ತು ಅದರ ಕಾರಣವೇನು ಎಂಬದನ್ನು ಶೋಧಿಸಿ ತೆಗೆಯಲಿಕ್ಕೆ ನಾನು ಬಹಳ ವೇಳೆ ಖರ್ಚು ಮಾಡಿದೆ, ಆದರೆ ಏನೂ ಉಪಯೋಗವಾಗಲಿಲ್ಲ. ಆದರೆ ಕಡೆಗೆ ನನಗೆ ನನ್ನೊಳಗಿಂದಲೇ ಉತ್ತರವು ಶಿಕ್ಕಿತು.

'ನಿನಗೆ ಈ ಮಾರ್ಗದ ಮೇಲಿನ ಈ ಭಾಗದ ಜ್ಞಾನವು ಬೇಕಾಗಿತ್ತೆಂದರೆ, ಭ್ರೂಮಧ್ಯದಲ್ಲಿ ಧ್ಯಾನವನ್ನು ಸ್ಥಿರಮಾಡು' ನಂತರ ನಾನು ತೋರಿಸಿದ ಸ್ಥಳದಲ್ಲಿ ಏಕಾಗ್ರ ಮಾಡಿದೆ, ಮತ್ತು ನೀಲಪ್ರಕಾಶವನ್ನು ಕಂಡೆ, ಅದು ಕನ್ನಡಿಯಲ್ಲಿ ಪ್ರತಿಬಿಂಬಿಸಿದಂತೆ ತೋರಿತು. ಆ ಪ್ರಕಾಶದಲ್ಲಿ ಒಂದು ಅತ್ಯಂತ ತೇಜಸ್ವಿಯಾದ ಕಮಲವು ಕಾಣಿಸಿತು. ಆ ಕಮಲದ ಮೇಲೆ ಒಂದು ದಿವ್ಯ ವಿಭೂತಿಯು ಧ್ಯಾನಮಾಡುತ್ತಕೂತಿರುವದನ್ನು ಕಂಡೆನು. ಆ ಕಮಲದ ಕಡೆಗೆ ಹೋಗುವ ಒಂದು ಮಾರ್ಗವು ನನಗೆ ಕಾಣಿಸಿತು, ಮತ್ತು ಆ ಮಾರ್ಗದ ಮೇಲೆಯೇ ನಿಂತಿದ್ದೇನೆಂತ ಕಂಡೆನು. ಆ ದಿವ್ಯ ವಿಭೂತಿ ಕಡೆಗೆ ಹೋಗಿ ಅವರಕೂಡ ಮಾತಾಡುವ ಇಚ್ಛೆ ಇದ್ದದರಿಂದ, ಆ ದಿಕ್ಕಿಗೆ ಹೋಗಲಿಕ್ಕೆ ನಾನು ಆರಂಭಿಸಿದೆ. ಬಹಳ ಹೊತ್ತು ನಡೆದ ಮೇಲೆ ನನಗೆ ತೋರಿತು, ಕಾಜಿನಂಥ ಏನೋ ಮುಂದೆ ಇದೆ, ಅದರ ಎದುರಿಗೆ ನಾನು ನಿಂತಿರುವೆನು, ಮತ್ತು ಇದೇ ಆ ಕಾಜಿನೊಳಗೆ ಪ್ರತಿಬಿಂಬಿತ ನಾಗಿದೆ. ಆ ಕಾಜಿನ ಪಡದೆಮೂಲಕ ನನ್ನ ಮುಂದಿನ ಗತಿ ನಿಂತು ಹೋಯಿತು. ನಂತರ ನಾನು ಹಿಂದೆ ನೋಡಿದರೆ ಅದೇ ದೃಶ್ಯವು ಕಾಣಿಸಿತು. ನಂತರ ನಾನು ಯಾವ ಸ್ಥಳದಿಂದ ಹೊರಟಿದ್ದೆನೊ, ಮತ್ತು ಎಲ್ಲಿ ನನಗೆ ಈ ನೋಟವು ಕಾಣಿಸಿತು ಅಲ್ಲಿಗೆ ತಿರುಗಿ ಹೋದೆನು. ಮತ್ತು ಅಲ್ಲಿ ಪುನಹಾ ಕಾಜಿನ ಪರದೆಯಂಥಾ ಒಂದು ಅಡ್ಡಿ ಕಂಡುಬಂದು, ಅದರೊಳಗೂ ಆ ದೃಶ್ಯವು ಪ್ರತಿಬಿಂಬಿತವಾಗಿತ್ತು. ಈ ಪ್ರತಿಬಂಧದಿಂದ ಮುಂದೆ ಹೋಗುವ ದಾರಿಯು ತೋರಲಿಲ್ಲ ಎಂದು ಯಾವದಾದರೂ ಮಾರ್ಗವನ್ನು ಹುಡುಕಬೇಕೆಂದು ನಾನು ಅಲ್ಲೇ ನಿಂತೆನು. ಇಲ್ಲಿ ನಾನು ವಿವಿಧ ವರ್ಣಗಳ ಪ್ರಕಾಶಗಳನ್ನು ನೋಡಿದೆ ಎಂದು ಆ ಸ್ಥಾನದಿಂದ ನಾನು ಹಿಂದಕ್ಕೆಹೋಗುವ ವಿಚಾರ ಮಾಡಲಿಲ್ಲ ಮತ್ತು ಇದರೊಳಗಿಂದ ಮುಂದೆ ಹೋಗುವ ಮಾರ್ಗವು ಕಾಣಲಿಲ್ಲ. ಕಡೆಗೆ ನಾನು ಜಪವನ್ನು ಆರಂಭಿಸಿದೆ. ಮತ್ತು ಆ ಧ್ಯಾನಸ್ಥ ಕೂತಿರುವ ವಿಭೂತಿಯ ಸ್ತುತಿ ಸ್ತೋತ್ರಗಳನ್ನು ಅನ್ನಲಿಕ್ಕೆ ಸುರು ಮಾಡಿದೆ. ಆಶ್ಚರ್ಯದ ಮಾತು ಹೀಗದಲ್ಲ, ಆ ಕಾಜಿನ ಪರದೆ ದೂರವಾಗಿ ನನ್ನರಸ್ತೆ ತೆರೆಯಿತು ಎಂದು ನಾನು ನೋಡಿದೆ. ಆಮೇಲೆ ಮೆಲ್ಲಮೆಲ್ಲನೆ ನಾನು ಆ ದಿವ್ಯ ಮೂರ್ತಿಯ ಕಡೆಗೆ ಹೋದೆ; ನೋಡಿದರೆ ಅವರು ಮತ್ಯಾರೂ ಅಲ್ಲದೆ ಪ್ರತ್ಯಕ್ಷ ಪರಮೇಶ್ವರರೇ ಇದ್ದರು. ನಾನು ಸಮೀಪ ಬಂದಿದ್ದೇನೆಂತ ಕೇಳಿ ಆ ವಿಭೂತಿಯು (ಶಿವನು) ಧ್ಯಾನವನ್ನು ಬಿಟ್ಟು ನನ್ನ ಕಡೆ ಒಂದು ಪ್ರೇಮಮಯ ದೃಷ್ಟಿಯನ್ನು ಎಸೆದು, ನನ್ನನ್ನು ತನ್ನ ಸಮೀಪ ಕೂಡ್ರಿಸಿಕೊಂಡರು, ಮತ್ತು ನನ್ನ ಸರ್ವ ಶಂಕೆಗಳನ್ನು ಮತ್ತು ಅಡಚಣಿಗಳನ್ನು ದೂರ ಮಾಡಿದರು. ನನ್ನ

ಸದ್ಗುರುಗಳು ಎಲ್ಲಿದ್ದಾರೆಂತ ನಾನು ಅವರಿಗೆ ಕೇಳಿದಾಗ ಅವರು ನನಗೆ ಒಂದು ಜಾಗೆಯನ್ನು ತೋರಿಸಿದರು. ಅಲ್ಲಿ ನನಗೊಂದು ದೊಡ್ಡ ತೇಜದ ಗೋಲಕವು ಕಾಣಿಸಿತು. ಅದು ಸೂರ್ಯನಂತೆ ತೇಜಸ್ವಿತ್ತು. ಆ ವಿಭೂತಿಯ ತೇಜದೊಳಗಿಂದ ಅದು ಹೊರಟಿತ್ತು. ಮತ್ತು ಆ ವಿಭೂತಿಗೆ ಅನಂತ ಸೂರ್ಯರ ತೇಜಸ್ಸಿನ ಒಂದು ವರ್ತುಲವು ಸುತ್ತುಹಾಕಿತ್ತು. ಮತ್ತು ಆ ಪ್ರತ್ಯೇಕ ಸೂರ್ಯರಿಂದ ಒಂದೊಂದು ಬ್ರಹ್ಮಾಂಡವು ನಿರ್ಮಾಣವಾಗಿತ್ತು. ಮತ್ತು ಆ ಬ್ರಹ್ಮಾಂಡವನ್ನು ನಿರ್ಮಾಣ ಮಾಡುತ್ತಿಷ್ಟ, ಪಾಲನಮಾಡುವ ಮತ್ತು ನಾಶ ಮಾಡುವ ಒಂದು ಶಕ್ತಿಯು ಆ ಶಿವನೊಳಗಿಂದ ಹೊರಡುವದು ತೋರಿತು.

ಆ ವಿಭೂತಿ ಕಡೆಯಿಂದ ನನ್ನ ಸಂಶಯಗಳೆಲ್ಲಾ ನಿವೃತ್ತವಾಗಿ ಆದ ಮೇಲೆ ನಾನು ಆ ವಿಭೂತಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದೆ, ಮತ್ತು ಧ್ಯಾನವನ್ನು ಬಿಟ್ಟುಬಿಟ್ಟೆನು. ಓಂ ತತ್ಸತ್.

ತಾರೀಖು ೧೧ ಅಗಷ್ಟ ೧೯೫೪ (ಸಹಿ) ಎಸ್. ಟಿ. ಸಾಯಗಾಂವಕರ.

— ೨೨ —

ಶ್ರೀ ವಿಶ್ವನಾಥ ಗೋಪಾಲ ವೈದ್ಯ, ನಾಶಿಕ ಇವರ ಅನುಭವಗಳು.

ಶ್ರೀ ಗಜಾನನ ಮಹಾರಾಜರ ದರ್ಶನ, ಅನುಗ್ರಹ ವ ಅನುಭವಗಳು.

ನಾನು ವೈದಿಕ ಪರಂಪರೆಯಿಂದ ನಡೆಯುವ ಮನುಷ್ಯನಿದ್ದೇನೆ. ಸ್ನಾನ ಸಂಧ್ಯಾ ಗಾಯತ್ರಿ ಜಪ, ಗುರುಚರಿತ್ರ ಪಾರಾಯಣ, ಇವೇ ನನ್ನ ನಿತ್ಯ ನಿಯಮವು ಈಗ ಸುಮಾರು ನಾಲ್ವತ್ತು ವರ್ಷಗಳಿಂದ ನಡೆಯುತ್ತ ಬಂದಿದೆ. ಶ್ರೀ ಗುರುಚರಿತ್ರವನ್ನು ಸ್ವಹಸ್ತದಿಂದ ಬರೆದು, ಅದರ ಪಾಠ ಮಾಡಬೇಕು ಅಂದರೆ ಈಶ್ವರೀ ಸಾಕ್ಷಾತ್ಕಾರವಾಗುತ್ತದೆ, ಎಂದು ಆ ಗ್ರಂಥದಲ್ಲಿ ಹೇಳಿರುವದರಿಂದ ಗುರುವಾರ ತಾ. ೫ ಜಾನೇವರಿ ೧೯೩೧ ನೇ ದಿನ ಆ ಗ್ರಂಥವನ್ನು ಬರೆಯಲಿಕ್ಕೆ ಆರಂಭಿಸಿ, ಶುಕ್ರವಾರ ತಾ. ೫ ನವೆಂಬರ ೧೯೩೧ ನೇ ದಿನ ಪೂರಾ ಮಾಡಿದೆನು. ಅಂದರೆ ಅದು ಮುಗಿಸಲಿಕ್ಕೆ ನನಗೆ ಹತ್ತು ತಿಂಗಳು ಹತ್ತಿದವು. ಮತ್ತು ಅದನ್ನೆ ಪಾರಾಯಣ ಮಾಡಲಿಕ್ಕೆ ಆರಂಭಿಸಿದೆ. ಶ್ರೀಗುರುಚರಿತ್ರೆ ಬರೆಯುತ್ತಿರುವಾಗ, ನನಗೆ ಯಾವ ಸಾಕ್ಷಾತ್ಕಾರಗಳಾದವೊ ಅವನ್ನು ನಾನು ಶ್ರೀಗುರುಕೃಪಾಧ್ಯಾಯದಲ್ಲಿ ಸ್ಪಷ್ಟ ಮಾಡಿದ್ದೇನೆ ಈ ಗುರುಕೃಪಾಧ್ಯಾಯವೆಂದರೆ, ನನಗೆ ಶ್ರೀ ಗಜಾನನ ಮಹಾರಾಜರು ಅನುಗ್ರಹ ಕೊಟ್ಟರು ಆ ಸಂಬಂಧ ನಾನು ಬರೆದ ಅಧ್ಯಾಯವು ಇರುತ್ತದೆ, ನನ್ನ ಈ ನಾಲ್ವತ್ತು ವರ್ಷಗಳ ತಪಶ್ಚರ್ಯದ ನಿಜವಾದ ಫಲವೆಂದರೆ ನನಗೆ ಶ್ರೀಗುರು ಗಜಾನನ ಮಹಾರಾಜರ ದರ್ಶನವಾಗಿ ಅವರ ಅನುಗ್ರಹವಾದದ್ದೆ ಇರುವದು. ಅದರ ಸಂಕ್ಷಿಪ್ತ ವೃತ್ತಾಂತವನ್ನು ಈ ಕೆಳಗೆ ಕೊಡುತ್ತೇನೆ.

ಸನ್ ೧೯೨೯ನೇ ಡಿಶಂಬರ ತಿಂಗಳಲ್ಲಿ ನನಗೆ ಮುಂದೆ ಹೇಳಿದಂತೆ ಒಂದು ಸ್ವಪ್ನ ಬಿತ್ತು. ನಾನು ನನ್ನ ಕಿರಿ ಅಳಿಯ ನಾರಾಯಣ ಗಂಗಾಧರ ಸಹಸ್ರಬುದ್ಧೆ, ಅಸಿಸ್ಟೆಂಟ ವೆಟರಿನರಿ ಸರ್ಜನ ಇವರ ಮನೆಯಲ್ಲಿ ಶ್ರೀಗೊಂದಿ ಎಂಬಲ್ಲಿರುತ್ತೇನೆ. ಅವರ ಮನೆಯ ಪಡಸಾಲೆಯ ಮೇಲೆ ನಾನು ಕೂತಿರುವಾಗ ಒಬ್ಬ ಕುಂಟ ಗ್ರಹಸ್ಥನು ಒಬ್ಬ ಮನುಷ್ಯನ ಬೆನ್ನ ಮೇಲೆ ಕೂತು ಹತ್ತುಹನ್ನೆರಡು ಮಂದಿ ಕೂಡ ಅಲ್ಲಿಗೆ ಬಂದರು. ಪಡಸಾಲೆಯ ಮೇಲೆ ಅವನು ಇಳಿದು, ಮೊಳ ಕಾಲೂರಿ ಮನೆಯೊಳಗಿನ ಕೋಣೆಯಲ್ಲಿ ಹೋಗಿ ಅಲ್ಲಿ ಕೂತನು. ಬಾಕಿ ಎಲ್ಲಾ ಜನರು ಈತನಿಗೆ ನಮಸ್ಕಾರ ಮಾಡಿದರು. ಇದನ್ನು ನೋಡಿ ನಾನೂ ಹೋಗಿ ಅವನಿಗೆ ನಮಸ್ಕಾರ ಮಾಡಿದೆ. ಅವನು ಸಂತನಿರಬಹುದೆಂದು ನಾನು ತಿಳಕೊಂಡೆ. ನಾನು ಪಡಸಾಲೆಗೆ ತಿರುಗಿ ಬಂದೆನು. ಕೆಲವು ಹೊತ್ತಿನಮೇಲೆ ಆ ಕುಂಟ ಸಾಧು ಒಳಗಿನ ಕೋಣೆಯಿಂದ ಪಡಸಾಲೆಗೆ ಬಂದು, ನನಗೆ ಕೇಳಿದ, 'ನೀವು ನಾಶಿಕ ದಿಂದ ಯಾವಾಗ್ಗೆ ಬಂದಿರಿ?' ನಿನ್ನೆ ದಿವಸ ಬಂದೆನೆಂದು ನಾನು ಉತ್ತರ ಕೊಟ್ಟೆನು. ಆಗ ಅವರು ಹೇಳಿದರು, "ನಮ್ಮ ಮನೆಗೆ ಬನ್ನಿ, ಅಲ್ಲಿ ನಾವು ಮಾತಾಡುವಾ." ನಂತರ ಅವರು ಒಬ್ಬ ಗೃಹಸ್ಥನ ಬೆನ್ನು ಮೇಲೆ ಕೂತುಕೊಂಡು ಕೆಲವು ಜನರ ಕೂಡ ಹೋದರು; ಮತ್ತು ಕೆಲವರು ನನ್ನ ಕೂಡ ಬರಲಿಕ್ಕೆ ನಿಂತರು. ಅವರ ಕೂಡ ನಾನು ಆ ಸಂತರ ಮನೆಗೆ ಹೋದೆನು. ಅವರ ಮನೆಯು ಸರಸ್ವತಿ ನದಿಯ ಆಚೆಕಡೆ ಒಂದು ಗುಡ್ಡದ ಮೇಲೆ ಇತ್ತು. ಅಲ್ಲಿ ಹೋಗಿ ನಾನು ಒಂದು ಕೋಣೆಯಲ್ಲಿ ಕೂತೆನು. ಅಲ್ಲಿಯೂ ಆ ಕುಂಟ ಸಂತರು ಬಂದರು. ಅವರು ನಾಶಿಕದ ಸಮಾಚಾರವನ್ನು ಕೇಳಿದರು. ಅದಕ್ಕೆ "ನಾಶಿಕದಲ್ಲಿ ಒಂದು ದೊಡ್ಡ ಯಜ್ಞವು ನಡೆದಿದ್ದು ಅಲ್ಲಿ ಬಹಳ ಶಾಸ್ತ್ರಿ ಜನರು ಕೂಡಿರುತ್ತಾರೆ" ಎಂದು ನಾನು ಅವರಿಗೆ ಹೇಳಿದೆನು. ನಂತರ ಅವರು ಒಂದು ಕಾಗದ ತಕ್ಕೊಂಡು, ಅದರ ಮೇಲೆ ಏಳು ರೂಪಾಯಿ ಎಂದು ಅಂಕೆ ಬರೆದು ಆ ಕಾಗದವನ್ನು ನನ್ನ ಹತ್ತರ ಕೊಟ್ಟರು. ಅದನ್ನು ನೋಡಿ, ನನ್ನ ಕಿಸೆಯೊಳಗೆ ಕೈಹಾಕಿ ನೋಡಿದರೆ ಅದರಲ್ಲಿ ರೂಪಾಯಿ ಗಳಿದ್ದಿಲ್ಲ. ಅದಕ್ಕೆ ಸಂತರು ಅಂದರು "ಏನೂ ಅಡ್ಡಿ ಇಲ್ಲ, ಆದರೆ ಮೇಲೆ ಬಂದಾಗ ಕೊಡಲಿಕ್ಕೆ ಮರೆಯಬೇಡಿರಿ, ಅಂದರೆ ಆಯಿತು." ನಂತರ ನಾನು ಅವರಿಗೆ ನಮಸ್ಕಾರ ಮಾಡಿ ಹೊರಟೆನು, ಮತ್ತು ಸ್ವಪ್ನವೂ ಮುಗಿಯಿತು. ಇದನ್ನೆಲ್ಲ ನಾನು ನನ್ನ ಡಾಯರಿಯೊಳಗೆ ಬರೆದಿಟ್ಟೆ. ಈ ಸ್ವಪ್ನದ ಅನುಭವವು ಮುಂದೆ ನಾಲ್ಕು ವರ್ಷಗಳಲ್ಲಿ ಬಂತು. ಅದರ ವೃತ್ತಾಂತವು ಮುಂದೆ ಯೋಗ್ಯ ಸ್ಥಳದಲ್ಲಿ ಬಂದೀತು.

ಸನ್ ೧೯೩೩ ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ರಾ. ರಾ. ನಾನಸಾಹೇಬ ಕರ ಸಿನ್ನಾರ, ಇಲ್ಲಿ ನಬರಿಬಿನಸ್ತಾರ ಇರುವಾಗ ಒಂದು ದಿನ ಅವರು ನಾಶಿಕ ಮೇಲಿಂದ ಪುಣೆಗೆ ಹೋಗುತ್ತಿದ್ದರು. ಅವರದು ಮತ್ತು ರಾ. ಜಯರಾಮಪಂತ

ಕರಮರಕರ ಇವರು ಸಜ್ಜನಗಡಕ್ಕೆ ಹೋಗುತ್ತಿರುವಾಗ ಹೊಗೆಬಂಡಿಯಲ್ಲಿ ಸಹಜವಾಗಿ ಇವರಿಗೆ ಭೆಟ್ಟಿಯಾಯಿತು. ಮಾತುಕತೆ ನಡೆಯುತ್ತಿರುವಾಗ, ಸಾಸವಡಕರ ಸಹಜವಾಗಿ ಅಂದರು ನಿಮ್ಮ ನಾಶಿಕದಲ್ಲಿ ಈಗ ಎಂಟು ಹತ್ತು ವರ್ಷಗಳಿಂದ ಒಬ್ಬ ವಿಭೂತಿ ಇದ್ದಾರೆ, ಆದರೆ ಇದು ನಾಶಿಕದ ಜನರಿಗೆ ಮಾಹಿತಿ ಇಲ್ಲ, ಇದು ದೊಡ್ಡ ಆಶ್ಚರ್ಯವು. ಕರಮರಕರ ಇವರು ಅವರ ಹೆಸರು, ಊರು ಮತ್ತು ವಿಳಾಸವನ್ನು ಕೇಳಿದರು. ಸಾಸವಡಕರರು ಅದೆಲ್ಲಾ ಹೇಳದೆ ಪಂಪೆ ತಿಳಿದೀತೆಂತ ಇಷ್ಟೇ ಅಂದರು. ಕರಮರಕರರು ನಂತರ ಇಲ್ಲಿಗೆ ಬಂದ ಮೇಲೆ ಈ ಸಮಾಚಾರವನ್ನು ನನಗೆ ಹೇಳಿದರು. ಅದನ್ನು ಕೇಳಿ ನಾಶಿಕದಲ್ಲಿ ನಾನು ಬಹಳ ತಪಾಸ ಮಾಡಿದೆ ಆದರೆ ಪತ್ತೆ ಹತ್ತಲಿಲ್ಲ, ಅಂತ ಸಾಸವಡಕರ ಇದ್ದಲ್ಲಿ ಸಿಕಾಡಕ್ಕೆ ಹೋಗಬೇಕೆಂತ ನಿರ್ಣಯವಾಯಿತು; ಆದರೆ ಯಾವದೆ ಅನಪೇಕ್ಷಿತ ಕಾರಣದಿಂದ ನನ್ನ ಹೋಗೋಣವು ಮೇ ತಿಂಗಳ ತನಕ ನಿಂತುಹೋಯಿತು. ಮೇ ತಿಂಗಳಲ್ಲಿ ಸಿಕಾಡಕ್ಕೆ ಹೋಗಿ ಸಾಸವಡಕರ ಪರಿಚಯ ಮಾಡಿಕೊಂಡೆನು. ಮತ್ತು ನಾಶಿಕದ ವಿಭೂತಿ ವಿಷಯ ಕೇಳಿದಾಗ ಅವರು ಅದನ್ನೆಲ್ಲ ಬಹಳ ಆನಂದದಿಂದ ಹೇಳಿದರು. ಇಷ್ಟೇ ಅಲ್ಲ ಆ ನಂತರ ಶಿಷ್ಯ ರಾ. ಪಾಟಣಕರ, ಎಡ್ವೋಕೇಟ ಮುಂಬಯಿ, ಇತರ ಅನುಗ್ರಹೀತ ಮಂದಿ ಇವರು ತಮಗೆ ಬಂದ ಅನುಭವಗಳ ವಿಷಯ ಶ್ರೀಗಜಾನನ ಮಹಾರಾಜರಿಗೆ ಬಂದ ಪತ್ರಗಳನ್ನು ಅವರು ನನಗೆ ತೋರಿಸಿದರು. ಅವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸಿಕಾಡದಿಂದ ತಿರಿಗಿ ಬಂದು ತಾರೀಖು ೭ ಮೇ ದಿವಸ ಶ್ರೀಗಜಾನನ ಮಹಾರಾಜರ ಕಡೆ ಹೋದೆನು, ಮತ್ತು ಅವರಿಗೆ ನಾನು ಯಾರು ಏನು ಎಂಬದನ್ನು ತಿಳಿಸಿ, ಕೆಲವು ಹೊತ್ತು ಅವರ ಕೂಡ ನಿರ್ಭಿಡೆಯಿಂದ ಸಂಭಾಷಣ ಮಾಡಿ ತಿರುಗಿ ಬಂದೆನು. ಈ ಸ್ವಲ್ಪ ಸಹವಾಸದಲ್ಲಿಯೇ ಅವರ ಬಾಲವೃತ್ತಿ ನಿರಹಂಕಾರಿ ಸ್ವಭಾವ, ಮಾನಸಿಕ ಸಮತಾ ಮತ್ತು ಜೀವಿಗಳ ಉದ್ಧಾರಕ್ಕಾಗಿ ಚಿಂತೆ ಇವೆಲ್ಲ ಅವರಲ್ಲಿ ಮೂರ್ತಿಮಂತವಾಗಿ ಕಂಡು ಬಂದವು. ನಾನು ಯಾರು ಇದ್ದೇನೆ ಎಂಬ ಈ ವೃತ್ತಿಯೇ ಅವರಿಗೆ ಸ್ಪರ್ಶ ಮಾಡುತ್ತಿದ್ದಿಲ್ಲ. ಇದನ್ನು ನೋಡಿ ನನಗೆ ಬಹಳ ಆನಂದವಾಯಿತು.

ಇದರ ನಂತರ ನಾನು ಪ್ರತಿದಿನ ಅವರ ದರ್ಶನಕ್ಕೆ ಹೋಗುತ್ತಿದ್ದೆ. ಆಶೀವ ವಿನಗಜಾನನ ಮೌಜಿ ಅಂದರೆ ಬುಧವಾರ ತಾ. ೧೦ನೇ ಮೇ ದಿವಸ ನಾನು ಅವರ ದರ್ಶನಕ್ಕೆ ಹೋದಾಗ ಅವರು ಸಿಗಾರೇಟ ಹಚ್ಚಿ ಸೇದಲಿಕ್ಕೆ ಹತ್ತಿದರು ಆಶ್ಚರ್ಯ ಇದಲ್ಲ, ಅದರೊಳಗಿಂದ ಒಂದೇಸಮನೆ ಅತ್ತರದ ಸುಗಂಧವು ಬರುತ್ತಿತ್ತು. ಮಹಾರಾಜರಂದರು " ಹೀಗೆಯೆ ಅಖಂಡ ಆತ್ಮಜ್ಯೋತಿಯನ್ನು ನಾನು ನಿಮಗೆ ತೋರಿಸುವೆನು. ನೀವು ನಾಳೆ ಮುಂಜಾನೆ ಬನ್ನಿರಿ." ಆ ನಂತರ ಮರುದಿನ ಅಂದರೆ ಗುರುವಾರ ತಾ. ೧೧ ೫ ೩೩ ನೇ ದಿನ ಮಹಾರಾಜರ ಕಡೆ ಹೋದೆನು. ಅವರು ನನಗೆ 'ಸೋಹಂ' ದ ಮಂತ್ರವನ್ನು ಹೇಳಿ, ಅದರ

ಜಪವನ್ನು ಮಾಡಲಿಕ್ಕೆ ಹೇಳಿದರು. ಪ್ರಕಾರ ಉತ್ಪನ್ನವಾಗುವ ಅಭ್ಯಾಸವನ್ನು ಹ್ಯಾಗೆ ಮಾಡಬೇಕೆಂಬುದನ್ನೂ ಹೇಳಿದರು. ಆ ಪ್ರಕಾರ ನಾನು ಮುಂಜಾನೆ ಸಂಜೆಗೆ ಅರ್ಧ ತಾಸು ಅಭ್ಯಾಸವನ್ನು ಮಾಡಲಾರಂಭಿಸಿದೆನು. ಮುಂದೆ ಎರಡು ದಿನಗಳಲ್ಲಿ ಅಭ್ಯಾಸ ತಪ್ಪುತ್ತದೆ ಎಂದು ಹೇಳಿ, ಮತ್ತು ತಪ್ಪು ಎಲ್ಲಿ ಆಗುವದೆಂತಲೂ ತಿಳಿಸಿ, ಮಹಾರಾಜರು ನನಗೆ ನೆಟ್ಟನೆ ರಸ್ತೆಗೆ ಹಚ್ಚಿದರು. ನಂತರ ಒಂದೇ ವಾರದೊಳಗೆ ಈ ಕೆಳಗೆ ಬರೆದಂತೆ ಅನುಭವ ಬಂತು.

ಧ್ಯಾನದಲ್ಲಿ ನನಗೆ ಒಂದು ಜ್ಯೋತಿ ಕಾಣಿಸಿತು. ಮತ್ತು ಅದು ಪ್ರಸರಣ ಹೊಂದಿ ಅದರಲ್ಲಿ ದೈದೀಪ್ಯಮಾನವಾದ ಶ್ರೀಕೃಷ್ಣ ಮೂರ್ತಿಯು ಕಾಣಬರುತ್ತಿತ್ತು. ಇದು ಮಹಾರಾಜರಿಗೆ ಹೇಳಿದಾಗ ಅವರಿಗೆ ಆನಂದವಾಯಿತು. ಮತ್ತು ಅವರು ಅಭ್ಯಾಸ ಚಾಲೂ ಮಾಡಲಿಕ್ಕೆ ಹೇಳಿದರು. ಮುಂದೆ ನಿತ್ಯ ಅಭ್ಯಾಸ ಕಾಲದಲ್ಲಿ ನಾನಾ ದೇವತೆಗಳ ದೈದೀಪ್ಯಮಾನ ಮೂರ್ತಿಗಳು ನನಗೆ ಆ ಜ್ಯೋತಿಯಲ್ಲಿ ಕಾಣಿಸಿದವು. ಮುಂದೆ ಒಂದು ದಿನ, ಈ ದೃಶ್ಯಗಳು ಕಣ್ಣು ಮುಚ್ಚಿದರೆ ಕಾಣಿಸುತ್ತವೋ ಇಲ್ಲ, ಎಂದು ಮಹಾರಾಜರು ಕೇಳಿದ್ದಾಗ, ನಾನು ಇಲ್ಲವೆಂತ ಹೇಳಿದ ಮೇಲೆ, ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಕಣ್ಣು ಮುಚ್ಚಲಿಕ್ಕೆ ಹೇಳಿದರು. ಆಗ ದೃಶ್ಯಗಳು ಕಾಣಲಾರಂಭವಾಯಿತು. ಅವರು "ಅಂಜಬೇಡಿರಿ ಅವು ನಿಮ್ಮ ಶರೀರಕ್ಕೆ ಸ್ಪರ್ಶ ಮಾಡುವದಿಲ್ಲ ಅಂತ ಹೇಳಿದರು." ಕೆಲವು ಹೊತ್ತಿನ ಮೇಲೆ, ಗುಡ್ಡ, ಆಳವಾದ ಕಂದರ ದೊಡ್ಡ ದೊಡ್ಡ ನದಿಗಳು, ಅರಣ್ಯಗಳು, ವ್ಯಾಘ್ರ, ಸರ್ಪ, ವನಗಳು, ಉಪವನಗಳು ಮತ್ತು ಕಾಣಬಂದವು. ಮತ್ತು ನಿತ್ಯ ಅಭ್ಯಾಸ ಕಾಲದಲ್ಲಿ ಸಂತ ಮಹಂತ ಮತ್ತು ಚೈತನ್ಯಯುಕ್ತ ದೇವತೆಗಳು ಕಾಣಹತ್ತಿದವು. ಸ್ವಲ್ಪದರಲ್ಲಿ ಅಂದರೆ ಇಡೀ ವಿಶ್ವವೇ ಆ ಜ್ಯೋತಿಯಲ್ಲಿ ನನಗೆ ತೋರಿತು. ಈ ದೃಶ್ಯಗಳು ಸಿನೇಮಾದೊಳಗಿನ ಫಿಲ್ಮಿನಂತೆ ಒಂದರ ಹಿಂದೆ ಒಂದು ಕೆಲವು ಸ್ವಲ್ಪಹೊತ್ತು ಸ್ಥಿರವಾಗಿ ಬಂದು ಹೋಗುತ್ತಿದ್ದವು. ಹೀಗೆ ಅಭ್ಯಾಸವನ್ನು ಕೆಲವು ದಿನ ಮಾಡಿದ ಮೇಲೆ ಮಹಾರಾಜರು ಅದನ್ನು ನಿಲ್ಲಿಸಿಬಿಟ್ಟರು. ಮುಂದೆ ಕೆಲವು ದಿವಸಗಳ ಮೇಲೆ ಮಹಾರಾಜರು ನಿಘಾಡಕ್ಕೆ ನಾನಾಸಡಕರರಲ್ಲಿ ಹೋಗಿದ್ದಾಗ, ಅವರ ಹಿಂದಿನಿಂದ ಎರಡು ಮೂರು ದಿನಗಳ ಮೇಲೆ ನಾನೂ ಹೋದೆನು. ಅಲ್ಲಿ ಒಂದು ದಿನ ಅಂದರೆ ಗುರುವಾರ ತಾ. ೨೫ ಜೂನ ೧೯೩೬ನೇ ದಿವಸ ಎಲ್ಲರೂ ಮಲಗಿದ ಮೇಲೆ, ಮಹಾರಾಜರು ನನಗಂದರು, "ನಾನು ನಿನಗೆ ಈಗ ನಿರ್ಗುಣದಲ್ಲಿ ಒಯ್ಯುತ್ತೇನೆ." ಹೀಗಂದು ನನ್ನ ತಲೆಯ ಮೇಲೆ ಹಸ್ತವನ್ನಿಟ್ಟಕೂಡಲೇ 'ಸೋಹಂ ಸೋಹಂ' ಹೀಗೆ ಧ್ವನಿಯು ನನ್ನ ಕಿವಿಯಲ್ಲಿ ವಿಶೇಷವಾಗಿ ಕೇಳಿಸಿತು. ಆಗ ಮಹಾರಾಜರಂದರು, 'ಈಗ ಮಲಗಿಕೊಂಡೇ ಜಪ ಮಾಡಿರಿ.' ಹಾಗೆ ಮಾತಾಡುವಾಗ ಅರ್ಧ ಎಚ್ಚರ ಅರ್ಧ ನಿದ್ರೆಯಲ್ಲಿ ಈ ಪ್ರಕಾರದ ಸ್ಥಿತಿ

ಯಲ್ಲಿ ದೊಡ್ಡದೊಡ್ಡದಾಗಿ 'ಸೋಹಂ' ಧ್ವನಿಯು ವ ಮಂಜುಳವಾಗಿ ಘಂಟಾ ನಾದವು ಕೇಳಬಂತು. ಈ ವೃತ್ತಾಂತವನ್ನು ನಾನು ಮಹಾರಾಜರಿಗೆ ಮುಂಜಾನೆ ಹೇಳಿದೆ, ಮತ್ತು ಆ ಘಂಟಾನಾದ ಯಾವುದೆಂದು ಕೇಳಿದೆನು.

ಅವರು ವ್ಯವಹಾರದೊಳಗಿನ ಒಂದು ಉದಾಹರಣೆಯನ್ನು ತಕ್ಕೊಂಡು ಹೇಳಿದರು, ನಾವು ದೇವಾಲಯದಲ್ಲಿ ಹೋದಮೇಲೆ ಮೊದಲು ಘಂಟೆ ಬಾರಿಸಿ, ಆ ಮೇಲೆ ದೇವದರ್ಶನವನ್ನು ತಕ್ಕೊಳ್ಳುವೆವು. ಆ ಪ್ರಕಾರ ಘಂಟೆಯ ಮಂಜುಳ ನಾದವು ಕಿವಿಯಲ್ಲಿ ಹೋಗುವದು, ಇದು ಬ್ರಹ್ಮನಾದವದೆ ಹಾಗೆಯೆ ದಶನಾದಗಳಿವೆ, ಅವು ನಿನಗೆ ಅನುಭವಕ್ಕೆ ಬಂದಾವು. ಅವು ಆದಮೇಲೆ, ಪುಸ್ತಕದೊಳಗಿನ ಬ್ರಹ್ಮರಂಧ್ರದಲ್ಲಿ ಹೋಗಿ ಪರಬ್ರಹ್ಮದ ದರ್ಶನ ತಕ್ಕೊಳ್ಳುವದು. ಇನ್ನು ನನಗೆ ಅವರು ಹೀಗೆ ಆಶೀರ್ವಾದ ಕೊಟ್ಟರು, ನಿನಗೆ ಈ ಬ್ರಹ್ಮ ನಾದಗಳು ಅಖಂಡವಾಗಿ ಕೊಡಲ್ಪಟ್ಟಿವೆ. ಆ ಪ್ರಕಾರ ನಾನು ಪ್ರಕಾಶದೊಳಗಿನ ದೃಶ್ಯಗಳ ಅನುಭವವನ್ನು ತಕ್ಕೊಳ್ಳುತ್ತಿರುವಾಗ, ಈ ಬ್ರಹ್ಮನಾದವು ಚಾಲೂ ಇರುತ್ತದೆ. ಒಮ್ಮೆ ಶಂಖನಾದ, ಒಮ್ಮೆ ದುಂದುಭಿನಾದ, ಒಮ್ಮೊಮ್ಮೆ ವೀಣೆಯ ಸ್ವರ, ಒಮ್ಮೆ ಮೃದಂಗನಾದ, ಒಮ್ಮೆ ಮುರಲಿನಾದ, ಸಾರಂಗನಾದ ಹೀಗೆ ನಾದಗಳು ಕೇಳಬರುತ್ತವೆ.

ಮಹಾರಾಜರು ನಿರ್ಯಾಣಕ್ಕೆ ಹೋಗುವ ಮೊದಲು ಕೆಲವು ದಿವಸ ಹಿಂದೆ ಅವರು ನನ್ನ ಹತ್ತಿರ ರೊಕ್ಕ ಬೇಡಿದರು, ನನ್ನ ಹತ್ತಿರ ಆಗ ಐದು ರೂಪಾಯಿಗಳ ನೋಟು ಇತ್ತು. ಅದನ್ನು ನಾನು ಅವರಿಗೆ ಕೊಟ್ಟೆ. ಅದಕ್ಕೆ ಮಹಾರಾಜರೆಂದರು ಈಗ ಎರಡು ರೂಪಾಯಿ ಉಳಿದವು ನನಗೆ ಆ ಕಾಲಕ್ಕೆ ಅದರ ಏನೂ ಅರ್ಥ ತಿಳಿಯಲಿಲ್ಲ. ಮುಂದೆ ಗುರುಪೌರ್ಣಿಮೆಯ ದಿನ ಮಹಾರಾಜರು ನಾಶಿಕದಲ್ಲಿ ಇಲ್ಲದಿದ್ದರೂ, ನಾನು ಅವರಲ್ಲಿ ಹೋಗಿ ಅವರ ಚಿತ್ರಕ್ಕೆ ಮಾಲೆ ಹಾಕಿದೆನು. ಮತ್ತು ಎರಡು ರೂಪಾಯಿ ದಕ್ಷಿಣೆಯನ್ನು ಆ ಫೋಟೋದ ಮುಂದಿಟ್ಟೆ. ಮುಂದೆ ಸ್ವಲ್ಪ ದಿವಸಗಳಲ್ಲಿ ನಾನು ಖುರ್ಚಿಯ ಮೇಲೆ ಕಣ್ಣು ಮುಚ್ಚಿ ಕೂತಿರುವಾಗ ನನಗೆ ನನ್ನ ೧೯೨೯ ರ ನವೆಂಬರ ತಿಂಗಳಲ್ಲಿ ಆದ ವೃತ್ತಾಂತದ ನೆನಪು ಬಂತು. ಆಲ್ಲಿ ಭೆಟ್ಟಿಯಾದ ಮೂರ್ತಿಯೂ ಕುಂಟಿ, ಮಹಾರಾಜರು ಕುಂಟರು. ಕಾಗದದ ಮೇಲೆ ಏಳು ರೂಪಾಯಿಗಳನ್ನು ಬರೆದು ಕೊಟ್ಟು ಆಗ ಬೇಡಿದ್ದು, ಮತ್ತು ಐದು ರೂಪಾಯಿ ಕೊಟ್ಟ ಮೇಲೆ ಎರಡು ರೂಪಾಯಿಗಳು ಉಳಿದವು ಎಂದು ಹೇಳಿದ್ದು, ಮತ್ತು ಗುರುಪೌರ್ಣಿಮೆ ದಿನ ನಾನು ಎರಡು ರೂಪಾಯಿ ದಕ್ಷಿಣೆ ಇಟ್ಟಿದ್ದು, ಇವೆಲ್ಲಾ ಸಂಗತಿಗಳನ್ನು ಜೋಡಿಸುತ್ತಿರುವಾಗ, ನಾಲ್ಕು ವರ್ಷಗಳ ಹಿಂದೆಯೆ ಈ ಗಜಾನನ ಮಹಾರಾಜರು ನನಗೆ ಭೆಟ್ಟಿಯಾದಾರು, ಎಂಬ ದೃಶ್ಯವು ಶ್ರೀದತ್ತಾತ್ರೇಯರು ನನಗೆ ತೋರಿಸಿದ್ದು ಇವೆಲ್ಲಾ ಮನಸ್ಸಿನೊಳಗೆ ಬಂದು ಮನಸ್ಸಿಗೆ ಬಹಳ ಆನಂದವಾಯಿತು, ಮತ್ತು ಪರಮೇಶ್ವರ ಘಟನೆಯದು ದೊಡ್ಡ ಕೌತುಕವೆನಿಸಿತು.

ಈ ದೃಷ್ಟಾಂತವು ನನಗೆ ನಾಲ್ಕು ವರ್ಷ ಪೂರ್ವದಲ್ಲಿ ಆದ ಮೇಲೆ, ಪ್ರತ್ಯಕ್ಷ ಸ್ಥಿತಿ ಏನದೆ ಎಂದು ನೋಡಲಿಕ್ಕೆ ನಾನು ಗೊಂದಿಗೆ ಹೋದೆನು. ಅಲ್ಲಿ ಪ್ರಲ್ಹಾದ ಮಹಾರಾಜರ ಸಮಾಧಿ ಇದ್ದು ಅದರ ಮುಂದೆ ಸಭಾಮಂಟಪ ಇದೆ. ಪ್ರತಿವರ್ಷ ಇಲ್ಲಿ ಉತ್ಸವವಾಗುತ್ತದೆ. 'ನೂತನ ಸಂತ ಮಹಾತ್ಮ್ಯ' ಈ ಹೆಸರಿನ ಒಂದು ಓದಿಬದ್ಧ ಗ್ರಂಥವದೆ. ಅದರಲ್ಲಿ ಪ್ರಲ್ಹಾದ ಮಹಾರಾಜರ ಚರಿತ್ರ ಇರುತ್ತದೆ. ಅದರಲ್ಲಿ ಪ್ರಲ್ಹಾದ ಮಹಾರಾಜರ ಗುರುಗಳ ಹೆಸರು ನಾರಾಯಣ ಸರಸ್ವತಿ ಎಂತ ಕೊಟ್ಟಿರುತ್ತದೆ. ಗಜಾನನಮಹಾರಾಜರ ಗುರುಗಳ ಹೆಸರೂ ಇದೇ. ಇದು ನೋಡಿ ನನಗೆ ಆಶ್ಚರ್ಯವಾಯಿತು. ಮತ್ತು ದೃಷ್ಟಾಂತ ಶ್ರೀಗೊಂದೆಯಲ್ಲಿ ಯಾಕೆ ಆಯಿತು, ಮತ್ತು ಅಲ್ಲಿ ಕುಂಟ ಮಹಾರಾಜರು ಯಾಕೆ ಕಾಣಿಸಿದರು, ಇದರ ಸಂಗತಿಯೂ ಕೂಡಿ ಬಂತು. ಮಧ್ಯಾಹ್ನಕ್ಕೆ ಮಹಾರಾಜರ ಕಡೆ ಹೋದಾಗ, ಈ ಸ್ವಪ್ನದ ಸಂಗತಿ, ಏಳು ರೂಪಾಯಿಗಳ ಜೋಡಿಕೆ, ಮತ್ತು ಶ್ರೀಗೊಂದೆಯಲ್ಲಿಯೇ ಯಾಕೆ ಕಾಣಿಸಿದರು. ಇವೆಲ್ಲ ಸಂಗತಿಗಳ ಜೋಡಣೆ ನಾನು ಮಹಾರಾಜರಿಗೆ ಹೇಳಿದೆ. ಅವರು ಬರೇ ನಕ್ಕರು.

ಇದರ ಮುಂದೆ ಮಹಾರಾಜರು ನನಗೆ ಪ್ರತ್ಯೇಕವೇ ಅಭ್ಯಾಸವನ್ನು ಕೊಟ್ಟರು. ಅದನ್ನು ನಾನು ಮಾಡಲಿಕ್ಕೆ ಪ್ರಾರಂಭಿಸಿದೆ. ಸ್ವಲ್ಪ ದಿನಗಳಾದ ಮೇಲೆ ಒಬ್ಬ ಗುರ್ತ ಇಲ್ಲದ ಸತ್ಪುರುಷನು ತೇಜದೊಳಗೆ ಆಸನವನ್ನು ಹಾಕಿ ಕೂತಿದ್ದು ಮತ್ತು ಆಗಾಗ್ಗೆ ಸುತ್ತಲೂ ತೇಜೋವಲಯವುಳ್ಳ ಮುಖಕಮಲ ಮಾತ್ರ, ಹೀಗೆ ದೃಶ್ಯವು ಕಾಣಿಸಿತು. ಬಹಳ ದಿನ ಇದೇ ನೋಡಿದ ಮೇಲೆ ನಾನು ಮಹಾರಾಜರಿಗೆ ಅದನ್ನು ಹೇಳಿದೆನು. ಅದನ್ನು ಕೇಳಿ ಅವರಂದದ್ದು "ನೀವು ರಾವಸಾಹೇಬ ಗುಪ್ತೆಯವರ ಕಡೆಗೆ ಹೋಗಿ, ನಮ್ಮ ಮಹಾರಾಜರ ಫೋಟೊ ಅವರ ಕಡೆ ಇದೆ, ಅದರ ಮೇಲಿಂದ ಮತ್ತೊಂದು ಫೋಟೊ ತೆಗೆದುಕೊಂಡು ಅದನ್ನು ಪೂಜೆಗೆ ಇಡಿರಿ." ಈ ಪ್ರಕಾರ ನಾನು ರಾವಸಾಹೇಬ ಗುಪ್ತೆಯವರ ಕಡೆ ಹೋಗಿ ಫೋಟೊ ಬೇಡಿದ. ಅದನ್ನು ಅವರು ಕೊಟ್ಟ ಮೇಲೆ ನೋಡುತ್ತೇನೆ, ಅವರು ಮತ್ತಾರೂ ಅಲ್ಲದ ಮಹಾರಾಜರ ಗುರು ಅದರೆ ದೊಡ್ಡ ಮಹಾರಾಜರು ನಾರಾಯಣ ಸರಸ್ವತಿಯವರಿದ್ದರು; ಇದನ್ನು ನೋಡಿ ನನಗೆ ದೊಡ್ಡ ಆಶ್ಚರ್ಯವಾಯಿತು. ಮಹಾರಾಜರಿಗೆ ಈ ವೃತ್ತಾಂತ ಹೇಳಿದ ಕೂಡಲೆ ಅವರಂದದ್ದು, ಫೋಟೋ ತರಲಿಕ್ಕೆ ಹೇಳಿ ಅದನ್ನು ನಿಮಗೆ ನಿಶ್ಚಯ ಮಾಡಿಸಿದೆ. ಈಗ ಅವರದೇ ಧ್ಯಾನವನ್ನು ನೀವು ಮಾಡುತ್ತ ಹೋಗಿರಿ.

ಒಂದು ದಿವಸ ಅಂದರೆ ತಾ. ೧೪ ಆಗಸ್ಟ ಸನ ೧೯೩೪ನೇ ದಿವಸ ಮಹಾರಾಜರಕಡೆ ಹೋಗಿದ್ದಾಗ, ಮುಂಬಯಿಯಲ್ಲಿ ಭಾರಿ ಗಡಬಡಿ ಆಗಿದೆ, ಎಂದು ಅವರಂದರು; ವ ಹೀಗೆ ಅವರು ನಿನ್ನೆ ರಾತ್ರಿಯಿಂದ ಹೇಳುತ್ತಿದ್ದಾರೆ, ಎಂದು ಮನೆಯೊಳಗಿನ ಜನರು ಹೇಳಿದರು. ಏನಾದರೂ ಪತ್ರ ವಗೈರೆ ಬಂದಿರುತ್ತದೆಯೊ

ಕ್ಯಾಗೆ ಎಂದು ನಾನು ಮಹಾರಾಜರಿಗೆ ಕೇಳಿದಾಗ, ಪತ್ರ ಯಾತಕ್ಕೆ ಬೇಕು ನಿಮ ಗೇನು ಅದು ಕಾಣಿಸುವದಿಲ್ಲ? ಹೀಗೆ ಅನ್ನುತ್ತಾರೆ, ಅದೇ ಮುಂಬಯಿಯಿಂದ ನಾನಾ ಸಮರ್ಥ ಇವರ ಕಡೆಯಿಂದ ತಂತಿವರ್ತಮಾನ ಬಂತು. ಅದರಲ್ಲಿ ಶಂಕರನು ಅತ್ಯವಸ್ಥೆಯಲ್ಲಿದ್ದಾನೆ ಕೂಡಲೆ ಹೊರಟು ಬನ್ನಿ, ಎಂದು ವಿನಂತಿ ಇತ್ತು. ಆ ಪ್ರಕಾರ ಮಹಾರಾಜರು ಕೂಡಲೆ ಹೊರಟು ಹೋದರು. ಆಗ ನಾನಾ ಸಮರ್ಥ ಇವರ ತಮ್ಮನ ಮಗ ಮೆಸಿನಜಾಯಟಿಸದ ರೋಗದಿಂದ ಅತ್ಯವಸ್ಥವಾಗಿ ಸರ್ವಡಾಕ್ಟರರು ಆತನ ಆಶಾ ಬಿಟ್ಟಿರುವರೆಂತ ಅವರಿಗೆ ತಿಳಿಯಿತು. ಮುಂದೆ ಬೇಗನೆ ಅವನು ಮಹಾರಾಜರ ಕೃಪೆಯಿಂದ ನೆಟ್ಟಗಾದನು; ಹೀಗಾಗಿ ಅಲ್ಲಿ ಏನು ನಡದದೆ ಎಂಬದು ಯೋಗಿ ಜನರಿಗೆ ಕಾಣಿಸುತ್ತದೆ. ಈ ಸಂಗತಿಯಿಂದ ಬಹಳ ಆಶ್ಚರ್ಯವಾಯಿತು.

ಮಹಾರಾಜರ ಆಜ್ಞೆ ಪ್ರಕಾರ ಮುಂಜಾನೆ ಸಂಜೆಗೆ ಅರ್ಧ ಅರ್ಧ ತಾಸು ಕೂತು ಹೀಗೆ ಅಭ್ಯಾಸವನ್ನು ಎರಡು ವರ್ಷತನಕ ಮಾಡಿದೆ. ಅದರಿಂದ ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ ಕಣ್ಣು ಮುಚ್ಚಿದ ಕೂಡಲೆ ಪ್ರಕಾಶವು ಕಾಣಿಸುತ್ತದೆ. ಹಾಗೆಯೇ ಇತರ ದೃಶ್ಯಗಳು ಕಾಣುತ್ತಿದ್ದು ಮನಸ್ಸಿನ ಇಷ್ಟು ಏಕಾಗ್ರತೆ ಯಾಗುತ್ತದಲ್ಲ, ಸುತ್ತಲಿನ ಪರಿಸ್ಥಿಯ ಅರಿವೇ ಆಗುತ್ತಿದ್ದಿಲ್ಲ. ದೃಶ್ಯಗಳು ಕಾಣುತ್ತವೆ, ಆದರೆ ಅವು ಅಂತರ್ಮುಖದೃಷ್ಟಿಯಿಂದ ಕಾಣುವದಾದರೆ, ಅವು ಪ್ರತ್ಯಕ್ಷ ಚರ್ಮ ಚಕ್ಷುವಿನಿಂದ ನೋಡಿದಂತೆಯೇ ತೋರುವವು. ಈ ದೃಶ್ಯಗಳು ಈಗ ಮಾತ್ರ ಮೊದಲು ಕಣ್ಣು ಮುಂದೆ ಪ್ರಕಾಶ ಕಾಣುತ್ತಿದ್ದು ನಂತರ ಆ ಪ್ರಕಾಶದಲ್ಲಿ ಅವು ಕಾಣಿಸುತ್ತವೆ. ಒಂದೇ ಪ್ರಕಾರದ ದೃಶ್ಯವು ಸದೋದಿತ ಕಾಣಿಸುತ್ತಿರದೆ, ಬೇರೆ ಬೇರೆ ಕಾಲದಲ್ಲಿ ತೋರುತ್ತವೆ. ಮತ್ತೆ ಕೆಲವು ದಿನ ಅವು ಕಾಣಿಸದೆ, ನೋಡ ದಂಥ ಇತರ ದೃಶ್ಯಗಳು ತೋರುತ್ತವೆ. ಅಂದರೆ ಈ ಅನಂತದೊಳಗೆ ತುಂಬಿರುವ ಅಗಮ್ಯತ್ವವು ಮಹಾರಾಜರ ಕೃಪೆಯಿಂದ ದೃಗ್ಗೋಚರವಾಗಿ ಮನಸ್ಸು ರಮಿ ಸುತ್ತದೆ. ಮತ್ತು ಜಗತ್ತಿನೊಳಗೆ ವಿಷಯಗಳ ವಿಸ್ಮೃತಿಯಾಗುವದು. ಮತ್ತು ಇದರಲ್ಲಿ ಮನುಷ್ಯನ ಸ್ಥೂಲ ಶರೀರವು ಬಿದ್ದರೆ ಮುಂದಿನ ಜನ್ಮಕ್ಕೆ ಯೋಗಿ ಆಗು ತ್ತಾನೆಂತ ಗೀತಾ ಹೇಳುತ್ತದೆ.

ನಾನು ಧ್ಯಾನ ಸ್ಥಿತಿಯಲ್ಲಿರುವಾಗ ಕೆಲವು ದೃಶ್ಯಗಳನ್ನು ನೋಡಿದ್ದೆ ಅವು ಗಳು ಈ ದೃಶ್ಯಸೃಷ್ಟಿಯಲ್ಲಿ ಖರೆ ಆದವು. ಅವನ್ನು ಕೆಳಗ ಕೊಡುವೆನು.

ಒಂದು ಪ್ರಸಂಗದಲ್ಲಿ ನಾನು ಕಣ್ಣುಮುಚ್ಚಿ ಧ್ಯಾನಸ್ಥನಾಗಿರುವಾಗ ನಾನು ನನ್ನ ಮಿತ್ರನಾದ ರಾಮಭಾವೂ ಜೋಶಿ ಇವರ ಮನೆಗೆ ಹೋದೆನು. ಅವರ ಮನೆಯಲ್ಲಿ ಒಂದು ಕತ್ತಲು ಕೋಣೆಯಲ್ಲಿ ಒಂದು ಕರೇ ಪೆಟ್ಟಿಗೆ ಇತ್ತು, ಅದನ್ನು ನಾನು ತೆರೆದೆನು. ಅದರಲ್ಲಿ ಕೆಲವು ಒಡಕು ಪಾತ್ರೆಗಳು ಮತ್ತು ಹರಕು

ಆರಿವೆ ವಗೈರೆ ಕೆಲಸಕ್ಕೆ ಬಾರದ ಸಾಮಾನು ಇತ್ತು. ಅವನ್ನು ಹೊರಗೆ ತೆಗೆದೆ; ಕಡೆಗೆ ಎರಡು ಗ್ರಂಥಗಳು ಹೊರಟವು; ಅವು ಯೋಗವಾಸಿಷ್ಠ ಭಾಗ ೨ ಮತ್ತು ೩ ಹೀಗಿತ್ತು. ಅವನ್ನು ನಾನು ತೆರೆದು ನೋಡಿ, ಮತ್ತು ಪುನಹಾ ಹಾಗೆಯೇ ಇಟ್ಟು ಎಲ್ಲ ಕೆಲಸಕ್ಕೆ ಬಾರದ ಜಿನಸು ಹಾಗೆಯೇ ಪೆಟ್ಟಿಗೆಯೊಳಗೆ ಇಟ್ಟೆ. ಆ ದೃಶ್ಯ ಇಲ್ಲದಂತಾದ ಮೇಲೆ ಮತ್ತು ನನ್ನ ಧ್ಯಾನವು ವಿಸರ್ಜನ ಆದ ಮೇಲೆ, ನಾನು ರಾಮುಭಾವು ಮನೆಗೆ ಹೋಗಿ, “ ನಿಮ್ಮ ಮನೆಯ ಒಂದು ಕತ್ತಲೆ ಕೋಣೆ ಯಲ್ಲಿ ಒಂದು ಕರಿ ಪೆಟ್ಟಿಗೆ ಅದೆ ಏನು ” ಎಂದು ಕೇಳಿದ್ದಕ್ಕೆ, ಅವರಂದರು ಅಂಥ ದೊಂದು ಪೆಟ್ಟಿಗೆ ಅದೆ ಎಂದು ಒಪ್ಪಿದರು. ಆಮೇಲೆ ಅದರೊಳಗೆ ಗ್ರಂಥಗಳಿದ್ದಾ ವೇನು ಎಂದು ಕೇಳಿದ್ದಾಗ ಅದರಲ್ಲಿ ನಿರುಪಯೋಗದ ಸಾಮಾನು ಮಾತ್ರ ಇದೆ, ಗ್ರಂಥಗಳಿಲ್ಲ ಅಂದರು. ಹಾಗಾದರೆ ಇನ್ನೊಮ್ಮೆ ನೋಡಿರಿ ಎಂದು ನಾನು ಕೇಳಿ ದಾಗ ಅವರಿಗೆ ಚೇಷ್ಟೆ ಅನಿಸಿತು. ಆದರೆ ಪುನಃ ಪುನಃ ಚನ್ನಾಗಿ ನೋಡಿರಿ ಎಂದು ನಾನು ಹೇಳಿದಾಗ ಅವರು ಕಂದೀಲು ಹಚ್ಚಿ ತಕ್ಕೊಂಡು ಹೋಗಿ ಆ ಪೆಟ್ಟಿಗೆ ಯನ್ನು ತೆರೆದು ನೋಡಿದರು. ಅದರಲ್ಲಿ ಆ ನಿರುಪಯೋಗಿ ಸಾಮಾನು ಇತ್ತು. ಮತ್ತು ಅದರ ಕೆಳಗೆ ಯೋಗವಾಸಿಷ್ಠದ ಎರಡು ಭಾಗಗಳೂ ಇದ್ದವು. ಅವುಗಳ ಮೇಲೆ ರಾಮುಭಾವುನ ಪ್ರಪಿತಾಮಹ ಬೀಗನ ಇಂಗ್ಲಿಷದಲ್ಲಿ ಬರೆದ ಹೆಸರು ಇತ್ತು. ಇದನ್ನು ನೋಡಿ ನಾನು ನನ್ನ ಧ್ಯಾನದೊಳಗಿನ ವೃತ್ತಾಂತವನ್ನು ಹೇಳಿದೆನು ಅದನ್ನು ಕೇಳಿ ಸರ್ವರಿಗೂ ಅತಿಶಯ ಆಶ್ಚರ್ಯವಾಯಿತು. ಅವರು ಆ ಎರಡೂ ಭಾಗಗಳನ್ನು ನನಗೆ ತಂದು ಕೊಟ್ಟರು. ನಾನು ಏನು ದೃಶ್ಯವನ್ನು ಧ್ಯಾನಾವಸ್ಥೆ ಯೊಳಗೆ ನೋಡಿದ್ದೆನೋ ಅದರ ಅನುಭವವು ಹೀಗೆ ಪ್ರತ್ಯಕ್ಷವಾಯಿತು. ಆ ಕಾರಣ ಆನಂದವಾಗಿ ಮಹಾರಾಜರು ಯೋಗಮಾರ್ಗದಲ್ಲಿ ನನ್ನ ಪ್ರಗತಿಯನ್ನು ಮಾಡು ತ್ತಿದ್ದಾರೆಂದು ನನಗೆ ಧನ್ಯಭಾವವಾಯಿತು.

ಮತ್ತೊಂದು ಪ್ರಸಂಗದಲ್ಲಿ ಅಂದರೆ ತಾರೀಖು ೮ನೇ ಜನವರಿ ೧೯೩೯ನೇ ದಿವಸ ಒಂದು ಜಿನುಗನ ತಾದು ಕಂಡೆ; ಅದು ಹಾವಿನಂತೆ ಡೊಂಕುಡೊಂಕಾ ಗುತ್ತ ಅದರದೊಂದು ದೊಡ್ಡ ಚಕ್ರವಾಯಿತು; ಮತ್ತು ಅದರೊಳಗಿಂದ ಡೊಂಕು ಡೊಂಕಾದ ನಾನಾವಿಧದ ಪ್ರಕಾಶಗಳು ಹೊರಟು, ಅವುಗಳು ಒಂದರೊಳಗೊಂದು ಕೂಡಿ, ಆ ಚಕ್ರವು ಗರಗರನೇ ತಿರುಗಲಿಕ್ಕೆ ಹತ್ತಿತು.

ಮತ್ತೊಂದು ಪ್ರಸಂಗದಲ್ಲಿ ಒಂದು ದೊಡ್ಡ ಗುಡ್ಡವು ಕಾಣಿಸಿತು. ಅದರ ಮೇಲೆ ನೂರು ನೂರೈವತ್ತು ಹುಡುಗರು ಚಿತ್ರವಿಚಿತ್ರ ಉಡಿಗೆ ತೊಟ್ಟು ಕೂತಿರುವರು; ಆ ಗುಡ್ಡದ ಕೆಳಗೆ ಭಗವಾನ ಶ್ರೀಕೃಷ್ಣ ಪರಮಾತ್ಮ ಇವರು ನಿಂತಿದ್ದರು. ಅವರ ಸುತ್ತಲೂ ಗೋಪಿ ಸ್ತ್ರೀಯರು ಕೋಲುಕೋಲೆ ಆಡುತ್ತಿ ದ್ದರು; ಮತ್ತು ನಾನು ಇದನ್ನೆಲ್ಲ ನೋಡುತ್ತಿರುವಾಗ ಶ್ರೀಕೃಷ್ಣ ಪರಮಾತ್ಮರು

ನನಗಂದರು, ' ನೋಡುತ್ತಿ ಏನು, ಕೋಲಾಟ ಆಡಲಿಕ್ಕೆ ಬಾ." ತತ್ಕಾಲ ನಾನು ಕೋಲುಗಳನ್ನು ತಕ್ಕೊಂಡು ಅವರ ಕೂಡ ಆಡಿದೆ. ಆ ಮೇಲೆ ಇದೆಲ್ಲ ದೃಶ್ಯ ಇಲ್ಲದಂತಾಯಿತು.

ಒಂದು ಪ್ರಸಂಗದಲ್ಲಿ ತಾರೀಖು ೧೨ ಜಾನೆವರಿ ೧೯೩೭ ನೇ ದಿವಸ ನಾನು ಧ್ಯಾನ ಮಾಡುತ್ತಿರುವಾಗ, ಒಂದು ಹೂದೋಟದಲ್ಲಿ ತಿರುಗಾಡಿದಂತೆ ತೋರಿತು. ಇಷ್ಟರಲ್ಲಿ ಒಂದು ಬಕುಲದ ಹೂವಿನ ಮಾಲೆಯು ತನ್ನಷ್ಟಕ್ಕೆ ಮೇಲಿಂದ ಬಂದು ನನ್ನ ಕೊರಳಿಗೆ ಬಿತ್ತು. ಅದನ್ನು ನಾನು ಕೈಯಲ್ಲಿ ತಕ್ಕೊಂಡು ಮುಂದರಿಸಿದೆ. ಅಷ್ಟರಲ್ಲಿ ಯಾವನೊ ಒಬ್ಬನು ಅತ್ತಕಡೆ ಹೋಗ ಬೇಡ ಇತ್ತಲಾಗೆ ಬಾ ಅಂದನು. ಅದನ್ನು ಕೇಳಿ ನಾನು ಚಕಿತನಾದೆನು. ಮತ್ತೊಂದು ಕಡೆ ನೋಡುತ್ತಿರುವಾಗ ಒಂದು ಶುಭ್ರ ವಸ್ತ್ರವನ್ನು ಪರಿಧಾನ ಮಾಡಿದ ಸ್ತ್ರೀಯು ತನ್ನ ಕೈ ತಲೆ ಬುಡಕ್ಕೆ ತಕ್ಕೊಂಡು ಮಲಗಿದ್ದಂತೆ ಕಾಣಿಸಿತು. ಅನಂತರ ನಾನು ಆಕೆಯ ಕಡೆಗೆ ಹೋಗಿ ನನ್ನ ಕೈಯೊಳಗಿನ ಮಾಲೆಯನ್ನು ಆಕೆಯ ಕೊರಳಿಗೆ ಹಾಕಿದೆ, ಮತ್ತು ಆಕೆಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ಆಗ ದೃಶ್ಯವು ಅದೃಶ್ಯವಾಯಿತು.

ಒಂದು ಪ್ರಸಂಗದಲ್ಲಿ ನಾನು ಧ್ಯಾನಸ್ಥನಾಗಿರುವಾಗ ನಾನು ಒಂದು ಭಯಂಕರ ಅರಣ್ಯದೊಳಗಿಂದ ಹೋಗುತ್ತಿರುವಾಗ ಮುಂದೆ ರಸ್ತೆಗೆ ಪ್ರತಿಬಂಧ ವಾದ್ದು ಕಂಡೆನು. ಕಲ್ಲುಗಳು ಒಂದರ ಮೇಲೊಂದು ರಚಿಸಿ ನಾಲ್ಕು ಕಡೆಗೆ ಗೋಡೆ ಏರಿಸಿತ್ತು. ಆಗ ನಾನು ರಸ್ತೆ ಇಲ್ಲವೆಂತ ತಿಳಿದು ಹಾರಿ ಮುಂದೆ ಹೋದೆ. ಆದರೆ ಅಲ್ಲಿ ಒಂದು ಆಳವಾದ ಕಂದರವಿತ್ತು. ಮತ್ತು ಅದರಲ್ಲಿ ವ್ಯಾಘ್ರ, ಸಿಂಹ, ನರಿ, ಮತ್ತು ದೊಡ್ಡ ದೊಡ್ಡ ಸರ್ಪಗಳು ನಾನು ಮೇಲಿಂದ ಹಾರಿ ಹೋಗುವದನ್ನು ನೋಡಿ ದೀರ್ಘ ಸ್ವರದಿಂದ ಕೂಗಲಿಕ್ಕೆ ಹತ್ತಿದವು. ಮತ್ತು ನನ್ನ ಮೇಲೆ ಜಿಗಿದು ಬೀಳಲಿಕ್ಕೆ ನೋಡುತ್ತಿದ್ದವು. ಆದರೆ ನಾನು ವಾಯುವಿನಲ್ಲಿ ಹಾರುತ್ತಿರುವದರಿಂದ ಅವುಗಳಿಗೆ ನನ್ನ ಮೇಲೆ ಬೀಳಲಿಕ್ಕೆ ಸಾಧಿಸಲಿಲ್ಲ. ಇದನ್ನು ನೋಡಿ ನನಗೆ ದೊಡ್ಡ ನಗೆ ಬಂತು. ಸ್ವಲ್ಪ ಹೊತ್ತಿನಲ್ಲಿ ಈ ದೃಶ್ಯವು ಇಲ್ಲದಂತಾಯಿತು.

ಒಂದು ಪ್ರಸಂಗದಲ್ಲಿ ನಾನು ಒಂದು ಮಾರುತಿಯ ಗುಡಿಯ ಮೇಲೆ ಕೂತಿದ್ದೇನೆ, ಮತ್ತು ಒಂದು ಗುಡಿಯ ಮೇಲಿಂದ ಮತ್ತೊಂದಕ್ಕೆ ಹಾರಿ, ಈ ಪ್ರಕಾರ ನಾಶಿಕದ ಪಂಚವಟಿಯ ಎಲ್ಲಾ ಮಾರುತಿಗಳ ದರ್ಶನವನ್ನು ತಕ್ಕೊಂಡೆನು, ಎಂಬಂತೆ ತೋರಿತು.

ಈ ಪ್ರಕಾರ ಅನೇಕ ನಿತ್ಯ ಹೊಸ ದೃಶ್ಯಗಳು ಕಾಣುತ್ತವೆ. ಮತ್ತು ಮನಸ್ಸು ಅವುಗಳಲ್ಲಿ ರಮಿಸಿ ಆನಂದವು ಪ್ರಾಪ್ತವಾಗುವದು.

(ಸಹಿ) ವಿಶ್ವನಾಥ ಗೋಪಾಳ ಷೆಣ್ವಿ.

ರಾ. ರಾ. ಪಾಂಡುರಂಗ ಲಕ್ಷ್ಮಣ ಭಾಗವತ, ೯೯೧, ಸದಾಶಿವ ಪೇಠ ಪುಣೆ ೨ ಇವರ ಅನುಭವಗಳು:—

ಗುರುವಾರ ತಾರೀಖು ೧೨ ಮೇ ೧೯೩೮ ನೇ ದಿನ ಮಹಾರಾಜರು ನನಗೆ 'ಸೋಹಂ' ಮಂತ್ರದ ಉಪದೇಶ ಮಾಡಿದರು. ಆದಿನ ನೃಸಿಂಹ ಜಯಂತಿ ಅಂದರೆ ವೈಶಾಖ ಶು. ೧೩ ಸಹ ಚತುರ್ದಶಿ ಇತ್ತು. ಅನಂತರ ೪-೫ ದಿವಸಗಳಲ್ಲಿ ನನಗೆ ಅಸ್ಪಷ್ಟವಾಗಿ ಕೆಲವು ರೂಪಗಳು ಕಾಣಿಸಿದವು. ಮಹಾರಾಜರು ತಮ್ಮ ಮುಂದೆ ಕೂಡ್ರಿಸಿಕೊಂಡು ಧ್ಯಾನಮಾಡಲಿಕ್ಕೆ ಹೇಳುತ್ತಿದ್ದರು. ಆಗ ನನಗೆ ನಾನಾಬಣ್ಣದ ತೆರೆಗಳು ನನ್ನಿಂದ ಹೋಗುತ್ತಿವೆ. ಮತ್ತು ನನ್ನ ಕಡೆ ಬರುತ್ತಿವೆ ಎಂಬಂತೆ ತೋರಿತು. ಹಾಗೂ ನಾನು ಮನೆಯಲ್ಲಿ ಧ್ಯಾನಕ್ಕೆ ಕೂತಿರುವಾಗ ಅವು ಕಾಣಿಸುತ್ತಿದ್ದಿಲ್ಲ. ಆದರೆ ಪ್ರಕಾಶದ ಒಂದು ಬಿಂದು ಕಾಣಿಸುತ್ತಿತ್ತು, ಅನಂತರ ಕೆಲವು ದಿನಗಳಲ್ಲಿ ಮಹಾರಾಜರು ಭವಿಷ್ಯ ಹೇಳಿದಂತೆ ಆ ಬಿಂದುವೂ ಕಾಣದಂತಾಯಿತು. ಸ್ವಲ್ಪ ದಿವಸಗಳ ಮೇಲೆ ಒಂದುದಿನ ರಾತ್ರೆ ನಾನು ಹಾಸಿಗೆ ಮೇಲೆ ಮಲಗಿರುವಾಗ ಆ ಕೋಣೆಯ ಒಂದು ಮೂಲೆಯಲ್ಲಿ 'ಸೋಹಂ'ದ ದೊಡ್ಡ ಅಕ್ಷರಗಳು ದಿವ್ಯಪ್ರಕಾಶದಲ್ಲಿ ಕಾಣಹತ್ತಿದವು. ಅವು ಸುಮಾರು ಐದು ಸೆಕೆಂಡ ಇದ್ದು ಮುಂದೆ ಇಲ್ಲದಂತಾದವು.

ಅನಂತರ ಮಹಾರಾಜರ ಅಪ್ಪಣೆ ತಕ್ಕೊಂಡು ನಾನು ನಾಶಿಕದಿಂದ ಪುಣೆಗೆ ಬಂದೆನು, ಮತ್ತು ಅಲ್ಲೆ ಧ್ಯಾನದ ಅಭ್ಯಾಸವನ್ನು ನಡಿಸಿದೆ. ಆದರೆ ಅಸ್ವಸ್ಥತೆ ದೆಶೆಯಿಂದ ಸುಮಾರು ಎರಡು ತಿಂಗಳ ತನಕ ಸಮಾಧಾನಕಾರಕ ಅಭ್ಯಾಸವಾಗ ಲಿಲ್ಲ. ಆದರೂ ನಾನಾ ಪ್ರಕಾರದ ಪ್ರಕಾಶದ ಲಹರಿಗಳು ನನ್ನಿಂದ ಹೊರಡುತ್ತವೆ ಮತ್ತು ನನ್ನಕಡೆ ಬರುತ್ತವೆ, ಇದು ತೋರುತ್ತಿತ್ತು.

ಈ ತಿಂಗಳಲ್ಲಿ ನನ್ನ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎಂಬದು ನೋಡುವ ಸಲುವಾಗಿ, ಮಹಾರಾಜರು ಕೆಲವು ಪ್ರಶ್ನೆಗಳನ್ನು ಕೇಳಿದರು, ಆದರೆ ನನ್ನ ಉತ್ತರಗಳು ಅವರಿಗೆ ಬಹಳವಾಗಿ ಸಮಾಧಾನವಾಗಲಿಲ್ಲ ಎಂಬಂತನಿಸಿತು. ಆದ್ದ ರಿಂದ ಅವರು ನನಗೆ ಜಪಮಾಲೆಯನ್ನು ಹಿಡಿದು ಪ್ರತಿ ದಿನ ೬೦೦೦ ಜಪ ಮಾಡ ಲಿಕ್ಕೆ ಹೇಳಿದರು. ಈ ಜಪ ಮಾಡುತ್ತಿರುವಾಗ, ನಾನು ಪೂಜಾಕಾಲದಲ್ಲಿ ದೀಪದ ಕಡೆಗೆ ನೋಡಿದ್ದಾಗ ಜ್ಯೋತಿಯೊಳಗ ಅನೇಕ ಪ್ರಕಾರದ ಕಮಲಗಳು ಕಾಣಿಸು ತ್ತಿದ್ದವು. ಒಮ್ಮೊಮ್ಮೆ ಇಂಥಾ ಕಮಲಗಳು ಷಟ್ಚಕ್ರಗಳಲ್ಲಿ ಕಾಣಿಸುತ್ತಿದ್ದವು. ಹೋದ ಎರಡು ಮೂರು ತಿಂಗಳಲ್ಲಿ ನಾನಾ ಪ್ರಕಾರದ ದೃಶ್ಯಗಳು ಕಾಣುತ್ತವೆ.

ಒಮ್ಮೆ ಸ್ವಚ್ಛ ಪ್ರಕಾಶದಲ್ಲಿ ಶ್ರೀ ಗಣಪತಿಯ ಸ್ವರೂಪವು ತೋರಿತು. ಅನಂತರ ಕೆಲವು ದಿನಗಳ ಮೇಲೆ ಅಗ್ನಿ ಜ್ವಾಲೆಯೊಳಗಿಂದ ಹೊರಬಿದ್ದ ಒಬ್ಬ ದೇವಿಯು ತೋರಿದಳು. ಆ ದೇವಿಯು ಅಂತರ್ಧಾನಳಾದ ಮೇಲೆ ಸುಮಾರು

ಎರಡು ನಿಮಿಷದ ತನಕ ಇಷ್ಟು ಶಾಂತ ಸ್ಥಿತಿಯಿರುತ್ತಿತ್ತು, ಅಂಥಾ ಸ್ಥಿತಿಯನ್ನು ಮೊದಲು ಎಂದೂ ಅನುಭವಿಸಿದ್ದಿಲ್ಲ. ನಾನು ಸತ್ಯದ ಪೂಜೆಯನ್ನು ಮಾಡುತ್ತಿರುವಾಗ ಒಂದು ದಿನ ನಾನು ದೊಡ್ಡ ಮಹಾರಾಜರು ಅಂದರೆ ನಾರಾಯಣ ಸದ್ಗುರು ಮಹಾರಾಜರು ಮಣೆಯ ಮೇಲೆ ಬಂದು ಕುಳಿತದ್ದು ಕಂಡೆನು. ಒಂದು ದಿನ ರಾತ್ರಿ ನಾನು ಹಾಸಿಗೆ ಮೇಲೆ ಮಲಗಿಕೊಂಡಿರುವಾಗ ಒಂದು ಜಟಾಧಾರಿ ಮೂರ್ತಿ ಕಾಣಿಸಿತು. ಮುಂದೆ ಕೆಲವು ದಿವಸಗಳಲ್ಲಿ ಒಂದರಹಿಂದೆ ಒಂದು ದಿನ ಹೀಗೆ ಎರಡು ದಿನ ಗುರುಗಳು, ಪೂಜಾಸಾಹಿತ್ಯ, ಧಾರ್ಮಿಕ ಪುಸ್ತಕಗಳು, ಬಿತ್ತಿ ಸದು ವಸ್ತ್ರದ ಸಾಮಾನು ಕಾಣಿಸುತ್ತಿದ್ದವು. ಹಾಗೆಯೇ ಮತ್ತೊಂದು ಪ್ರಸಂಗದ ಕೆಲವು ಸ್ತ್ರೀಯರು ಫಳಾರದ ತಾಟುಗಳನ್ನು ತಕ್ಕೊಂಡು ಹೋಗುತ್ತಿದ್ದರು. ಒಂದು ದೊಡ್ಡ ದೇವರ ಕೋಣೆ ಇದ್ದು ಅದರ ಮಧ್ಯಭಾಗದಲ್ಲಿ ಒಂದು ದೊಡ್ಡ ವಿದ್ಯುತ್ ದೀಪವು ಹತ್ತಿದ್ದು ಇತ್ತು. ಮತ್ತು ಸುವಾಸಿನಿ ಸ್ತ್ರೀಯರು ಎರಡೂ ಕಡೆಗೆ ದೇವ ಕುಂಕುಮ ದಬ್ಬಿ ಕೈಲಿಕ್ಕೆ ಕೂತಿದ್ದರು ಎಂಬಂತೆ ಕಾಣಿಸಿತು.

ಧ್ಯಾನಕ್ಕೆ ಕೂತಿರುವಾಗ್ಗೆ ಒಮ್ಮೊಮ್ಮೆ ಏನೂ ಪ್ರಯತ್ನದ ವಿನಹಾ, ಒಮ್ಮೊಂದೊಮ್ಮೆ ಆಜ್ಞಾ ಚಕ್ರದಲ್ಲಿ (ಭ್ರೂಮಧ್ಯದಲ್ಲಿ) ಹೋಗುತ್ತೇನೆ ಮತ್ತು ಅಲ್ಲಿ ಧ್ಯಾನದಲ್ಲಿ ಮಗ್ನನಾಗಿ ಪ್ರಾಂತದಲ್ಲಿ ಸೇರುತ್ತೇನೆ. ಧ್ಯಾನಮಗ್ನ ಸ್ಥಿತಿಯಲ್ಲಿ ಇದ್ದರೂ ಶರೀರದ ಮೇಲೆ ಆಗುವ ಸರ್ವ ಪ್ರಕಾರದ ಆಘಾತಗಳ ಅರಿವು ನನಗೆ ಇರುತ್ತದೆ. ಧ್ಯಾನದಲ್ಲಿರುವಾಗ ಇತರ ವೃತ್ತಿಗಳೂ ಏಳುತ್ತವೆ. ಅವನ್ನು ದೂರ ಮಾಡುವ ಪ್ರಯತ್ನ ಮಾಡಬೇಕಾಗುತ್ತದೆ. ನಿರ್ವಿಕಲ್ಪ ಸ್ಥಿತಿಯ ಅನುಭವವು ನನಗೆ ಈ ವರೆಗೆ ಸಿಕ್ಕಿಲ್ಲ.

(ಸಹಿ) ಪಾಂಡುರಂಗ ಲಕ್ಷ್ಮಣ ಭಾಗವತ

— ೨೪ —

ಶ್ರೀ ಬಿ. ವ್ಹಿ. ದೇಶಮುಖ ಬಿ. ಎ. ಎಲ್ ಎಲ್ ಬಿ. ಎಡ್ವೋಕೇಟ, ಪುಣೆ, ಇವರ ಕಡೆಯಿಂದ ಶ್ರೀ ಗಜಾನನ ಮಹಾರಾಜ ಇವರಿಗೆ ತಾರೀಖು ೭ ಜುಲೈ ದಿನ ಬಂದ ಪತ್ರದ ಮಜಕೂರು. ಮುಕ್ಕಾಂ ನಾರಾಯಣಪೇಠ, ಪುಣೆ ಶಹರ.

ತಮ್ಮ ಪತ್ರ ಮುಟ್ಟಿತು ಆನಂದವಾಯಿತು. ತಮ್ಮ ನೆನಪಾದ ವಿನಹಾ ಒಂದೂ ದಿನ ಹೋಗದು. ಒಂಭತ್ತುವರೆ ಹತ್ತರಷ್ಟಕ್ಕೆ ಮಲಗಿಕೊಳ್ಳಲಿಕ್ಕೆ ಹೋಗುವ ಹೊತ್ತು ನನಗೆ ತಮ್ಮ ಸ್ಮರಣ ಅವಶ್ಯವಾಗಿ ಆಗುವದು. ಒಮ್ಮೆ ನನಗೆ ಮುಂದಿನ ದೃಶ್ಯವು ಕಾಣಿಸಿತು.

ಶುಭ್ರ ಪ್ರಕಾಶದಲ್ಲಿ ಅತ್ಯಂತ ದೈದೀಪ್ಯಮಾನವ ಸೌಂದರ್ಯದ ಕೇವಲ ಮೂರ್ತಿಯೋ ಎಂಬಂತೆ ಒಂದು ಅರ್ಧ ಪುತ್ಥಳಿಯು (ಟೊಂಕದಿಂದ ಮೇಲಿನ

ಭಾಗ) ನನಗೆ ತೋರಿತು. ಆತನ ಮೈಮೇಲೆ ನಾರಂಗಿ ಬಣ್ಣದ ಒಂದು ಕಫನಿ ಇತ್ತು. ಆತನ ಕಡೆ ನೋಡಿ ನನಗೆ ಅತ್ಯಾನಂದವಾಯಿತು, ಮತ್ತು ನಿತ್ಯದಲ್ಲೂ ಇಂಥಾದ್ದೇ ದೃಶ್ಯ ಕಾಣಿಸಬೇಕೆಂತ ನನಗೆ ಅನಿಸಿತು.

(ಸಹಿ) ಬಿ. ವಿ. ದೇಶಮುಖ ಉರ್ಫ ಬಾಬಾಸಾಹೇಬ.

ಶ್ರೀ. ಬಾಳಕೃಷ್ಣ ಮಹಾದೇವ ಗಡಕರಿ ನಾರಾಯಣ ಪೇಠ ಮನೆ ನಂಬರ ೧೧೦ ಪುಣೆ ಶಹರ, ಇವರ ಅನುಭವಗಳು:--

ಸನ್ ೧೯೨೯ ನೇ ಮೇ ತಿಂಗಳಲ್ಲಿ ನನಗೆ ಶ್ರೀಗಜಾನನ ಮಹಾರಾಜರ ಪ್ರಥಮ ದರ್ಶನವಾಯಿತು. ಸುದೈವದಿಂದ ನಾಲ್ಕು ಐದು ದಿವಸಗಳ ಸಹವಾಸವಾದ ಮೇಲೆ ಅವರು ನನ್ನನ್ನು ತಮ್ಮೆದುರಿಗೆ ಕೂಡ್ರಿಸಿಕೊಂಡರು, ಮತ್ತು ತಮ್ಮ ಹಸ್ತವನ್ನು ನನ್ನ ಮಸ್ತಕದ ಮೇಲೆ ಇಟ್ಟರು. ಅವರು ನನಗೆ ಕಣ್ಣು ಮುಚ್ಚಲಿಕ್ಕೆ ಹೇಳಿ, ನನ್ನ ಮನಸ್ಸನ್ನು ಒಳಗಿನ ಶ್ವಾಸದ ಮೇಲೆ ಇಡಲಿಕ್ಕೆ ಹೇಳಿದರು, ವ ಮನಸ್ಸಿನಿಂದ ಕೆಳಗೆ ಹೋಗಲಿಕ್ಕೆ ಹೇಳಿದರು. ಈ ಪ್ರಕಾರ ನಾನು ಯಾನಾಗ ಮೂಲಾಧಾರ ಚಕ್ರದ ಕಡೆ ಹೋದೆನು, ಆಗ ಅಲ್ಲೇ 'ಸೋಹಂ'ದ ಜಪ ಆಗುತ್ತ ಇದೆ ಎಂತ ನನಗೆ ತೋರಿತು. ಸ್ವಲ್ಪ ಹೊತ್ತಿನ ಮೇಲೆ ಅವರು ನನಗೆ ನಾಭಿ ಸ್ಥಾನದ ಕಡೆಗೆ ಬರಲಿಕ್ಕೆ ಹೇಳಿದರು. ಮತ್ತು ಅಲ್ಲಿ ಧ್ಯಾನವಾಗ್ಗೆ ನಾನು 'ಸೋಹಂ'ದ ಜಪವನ್ನು ಐದು ಮಿನಿಟು ಮಾಡಿದೆ ಆಗ ಅವರ ಕೃಪೆಯಿಂದ ಅಲ್ಲಿ ನನಗೆ ವಿದ್ಯುತ್ ಪ್ರಕಾಶದಂಥ ಅತ್ಯಂತ ತೇಜಸ್ವಿ ಪ್ರಕಾಶ ಕಾಣಿಸಿತು. ಆಗ ಇದು ನಿನ್ನ ಆತ್ಮಪ್ರಕಾಶವದೆ, ಮತ್ತು 'ಸೋಹಂ'ದ ಜಪದಿಂದ ಇದು ನಿನಗ ನಿರಂತರ ಕಾಣಿಸೀತು ಎಂದು ಅವರಂದರು. ನಾಭಿ ಪ್ರದೇಶದಲ್ಲಿ ಈ ಜಪವು ನಡೆಯುವಾಗ ಕೆಲವು ದಿನಗಳ ನಂತರ ನನಗೆ ಮೂಲಾಧಾರ ಚಕ್ರದ ಕಡೆ ಹೋಗಲಿಕ್ಕೆ ಹೇಳಿದರು, ಮತ್ತು ಅಲ್ಲಿ ಜಪ ಸುರುವಾದ ಮೇಲೆ ತೆರೆಗಳು ಉತ್ಪನ್ನವಾಗುತ್ತವೆ ಎಂಬಂತೆ ತೋರಿತು, ಮತ್ತು ಆ ತೆರೆಗಳ ಪೆಟ್ಟು ಮೊದಲು ಕಿವಿಗಳಲ್ಲಿ ಆರಂಭವಾಯಿತು. ಅಲ್ಲಿಂದ ಮುಂದೆ ಆ ಲಹರಿಗಳು ಕಣ್ಣುಗಳ ಕಡೆಗೆ ಹಬ್ಬಿದವು, ಹೀಗಾಗುತ್ತಲೆ ಅವರು ನನಗೆ ಭ್ರೂಮಧ್ಯದಲ್ಲಿ ಲಕ್ಷವಿಟ್ಟು ಜಪಮಾಡಲಿಕ್ಕೆ ಹೇಳಿದರು. ಭ್ರೂಮಧ್ಯದಲ್ಲಿ ಲಹರಿಗಳ ಭಾಸ ಉತ್ಪನ್ನ ಮಾಡುವಂಥ ಈ ಜಪವು ಎರಡು ವರ್ಷಗಳ ತನಕ ಜಾರಿ ಇತ್ತು, ಆ ಮೂಲಕ ಮುಂದಿನ ಅನುಭವಗಳು ಬಂದವು.

ರಾತ್ರಿಯಲ್ಲಿ ಎಲ್ಲ ಶಬ್ದಗಳು ಶಾಂತವಾದ ಮೇಲೆ ನಿಶ್ಶಬ್ದವಾದಂತೆ ಮಧುರವಾದ ಶಬ್ದ ಕಿವಿಯಲ್ಲಿ ಆರಂಭವಾಗಿ ಆ ಕಾರಣ ಆನಂದವಾಗಹತ್ತಿತು.

ಕೆಲವು ದಿನಗಳ ನಂತರ ನೀರಿನ ದಬದಬೆಯಂಥ ಧ್ವನಿಯು ಕೇಳಲಾರಂಭಿಸಿತು. ಅದರ ಹಿಂದಿನಿಂದ ಘಂಟಾನಾದ ಸುರುವಾಯಿತು. ಎರಡೂ ಕಿವಿಗಳಲ್ಲಿ ಘಂಟೆ ಬಾರಿಸಿದಂತೆ ಧ್ವನಿಯು ಕೇಳಿಸುತ್ತಿತ್ತು. ಒಂದುದಿನ ಪ್ರಾತಃಕಾಲದಲ್ಲಿ ಎಚ್ಚರ ವಾದ ಮೇಲೆ ಈ ಘಂಟಾನಾದವು ಬಹಳ ದೊಡ್ಡದಾಗಿ ಕೇಳ ಬಂತು. ಎಲ್ಲೆಲ್ಲಿ ನನ್ನ ದೃಷ್ಟಿ ಹೋಗುವದೊ, ಮತ್ತು ಮನಸ್ಸು ಹೋಗುವದೊ ಅಲ್ಲಲ್ಲಿ ಈ ಘಂಟಾ ನಾದವು ಭಾಸಿಸುತ್ತಿತ್ತು. ಈ ನಾದಲಹರಿಯು ಪೆಟ್ಟುಗಳು ನನಗೆ ಸಹನವಾಗ ದಂತಾಯಿತು. ಮತ್ತು ಈ ನಾದವು ಹೀಗೆಯೇ ಇತ್ತೆಂದರೆ ನಾನು ಹುಚ್ಚನಾ-ದೇನು, ಅಥವಾ ಶರೀರದೊಳಗಿನ ಯಾವದಾದರೂ ಭಾಗದಲ್ಲಿ ತೂತಾಗಿ ಅವು ಹೊರಬಿದ್ದಾವು ಎಂದು ನನಗೆ ಅಂಜಿಕೆಯಾಗಲಿಕ್ಕೆ ಹತ್ತಿತು. ಈ ಸ್ಥಿತಿಯಲ್ಲಿಯೇ ನಾನು ನನ್ನ ಗುರುಗಳಾದ ಶ್ರೀಗಜಾನನ ಮಹಾರಾಜರ ಪ್ರಾರ್ಥನೆಯನ್ನು ಮಾಡಿದೆ. ಆಗ ಭ್ರೂಮಧ್ಯದಲ್ಲಿ ನನಗೆ ಇಬ್ಬರು ಮಹಾನ್ ಯೋಗಿಗಳ ದರ್ಶನ ವಾಯಿತು. ಅವರಿಗೆ ಜೆಸ್ಸಿಗೆ ಗಡ್ಡಗಳಿದ್ದು ಸುನ್ನತದ ಮೇಲೆ ಜಡೆಗಳಿದ್ದವು ಆ ನಂತರ ನನಗೆ ದೊಡ್ಡ ಮಹಾರಾಜರು (ಅಂದರೆ ಶ್ರೀನಾರಾಯಣ ಸರಸ್ವತಿ ಮಹಾರಾಜರ) ಮತ್ತು ತತ್‌ಕ್ಷಣದ ಶ್ರೀ ಗಜಾನನ ಮಹಾರಾಜರೂ ಇವರ ದರ್ಶನವಾಯಿತು. ವ ಕೂಡಲೆ ನನಗೆ ನಿದ್ರೆ ಹತ್ತಿತು. ಬಹಳ ಹೊತ್ತಿನಮೇಲೆ ನಾನು ಎಚ್ಚರ ಆದೆ. ಆಗ ಈ ಘಂಟಾನಾದವು ಬಹಳ ಮಧುರವಾಗಿದೆ ಎಂದು ತಿಳಿಯಬಂತು. ನಂತರ ನನಗೆ ಮುಂದಿನ ಅನುಭವಗಳು ಬಂದವು.

(೧) 'ಸೋಽಹಂ' ಜಪದ ಲಹರಿಯ ಅನುಭವ ಅಂದರೆ ಭ್ರೂಮಧ್ಯ ದಲ್ಲಿ ನಾನು ಒಂದು ಕಣ್ಣು ನೋಡಿದೆ. ಅದರೊಳಗಿನ ಗೊಂಬೆ ರತ್ನಜಡಿತವಾಗಿದ್ದು, ಮತ್ತು ಅದರೊಳಗಿಂದ ನೀಲಪ್ರಕಾಶವು ಹೊರಬೀಳುತ್ತಿದ್ದು, ಆ ಪ್ರಕಾಶದೊಳಗೆ ಶ್ರೀಗಜಾನನ ಮಹಾರಾಜರು ಕಾಣಿಸಿದರು, ಮತ್ತು ಮುಂದೆ ಎಷ್ಟೋ ದಿವಸ ಗಳ ತನಕ ನನಗೆ ನನ್ನ ಗುರುಗಳ ಸತತ ದರ್ಶನವಾಗುತ್ತಿತ್ತು. ಈಗ ಮಾತ್ರ ಎಂದಾದರೊಮ್ಮೆ ಆಗುತ್ತದೆ.

(೨) ಆಕಾಶದಲ್ಲಿ ನನಗೆ ಚಾಂಕಾಯಿಯಷ್ಟು ಉತ್ತಮ ಮುತ್ತುಗಳು ಕಾಣಿಸುವವು. ಹಾಗು ಪ್ರಕಾಶಿಸುವ ನಕ್ಷತ್ರಗಳು ಮತ್ತು ಹೂವುಗಳು, ಸರ್ಪಾ ಕೃತಿಯ ಮುತ್ತಿನ ಮಾಲೆಗಳು, ಮುತ್ತಿನ ವರ್ತುಲಗಳು,ಮುತ್ತಿನ ವರ್ತುಲಗಳಿಂದ ತಯಾರಿಸಿದ ಹೆಡೆ ಎತ್ತಿದ ನಾಗ ಸರ್ಪ, ಮತ್ತು ಅದರ ಸಮೀಪ ಹೆಡೆ ಎತ್ತಿದ ಒಂದು ನಾಗ ಹೀಗೆ ಕಾಣಿಸುವವು. ಎಲ್ಲಿ ನನ್ನ ದೃಷ್ಟಿಯು ಹೋಗುವದೋ ಅಲ್ಲೆಲ್ಲಾ ಈ ಆಕಾರಗಳು ಕಾಣಿಸುವವು.

(೩) ನಿರಂಜನದ ಜ್ಯೋತಿ ನಡುವೆ ನವಿಲಗರಿಗಳಂಥಾ ಕಿರಣಗಳ ಜಾಳಿ ಗೆಯು ತೋರುವದು. ಜೇಗ ಜೇಗನೆ ಒಂದರ ಹಿಂದೆ ಒಂದು ಮುತ್ತು ಹೊರ-

ಬಿಪ್ಪಂತೆ ಕಾಣಿಸುತ್ತವೆ. ಆ ಜಾಳಿಗೆಯೊಳಗೆ ನಾನು ಒಂದು ಕಣ್ಣು ಕಾಣುತ್ತಿದ್ದೇನೆ. ಅದರಲ್ಲಿ ಒಂದೇ ಕೆಂಪ್ರವುಳ್ಳ ನಾಲ್ಕು ವರ್ತುಲಗಳು ಕಾಣಿಸುತ್ತಿದ್ದು ಅವು ಬಹಳ ತೇಜಸ್ವಿ ಇರುತ್ತವೆ.

(೪) ಕಾಮಧೇನು ದರ್ಶನ:— ಕಾಮಧೇನು ಅಂದರೆ ಸರ್ವ ಇಚ್ಛೆಗಳನ್ನು ಪೂರ್ಣ ಮಾಡುವ ಧ ದೇವತೆಗಳ ಆಕಳು—ಹೃದಯದ ಒಳಗಿನ ಭಾಗದಲ್ಲಿ ಸ್ಫಟಿಕದಂತೆ ಬಿಳಿವರ್ಣದ ಒಂದು ಆಕಳು ಕಂಡೆನು. ಅದು ನಾಲಿಗೆಯಿಂದ ನನ್ನ ಸರ್ವಾಂಗವನ್ನು ನೆಕ್ಕುತ್ತಿತ್ತು, ಮತ್ತು ಪ್ರೇಮದಿಂದ ಕೆಚ್ಚಲಸಿಂದ ಹಾಲಿನ ವರ್ಷಾವ ಮಾಡುತ್ತಿತ್ತು. ಆ ಹಾಲಿನ ಅಲ್ಲಿ ಒಂದು ದೊಡ್ಡ ಕೆರೆಯೆ ಆಗಿತ್ತು, ಅದರಲ್ಲಿ ನಾನು ಈಸಲಿಕ್ಕೆ ಆರಂಭಿಸಿದೆ. ಇದೇ ದರ್ಶನವು ನಾಲ್ಕೈದು ಸಾರಿ ಆಯಿತು, ಆಗ್ಗೆ ನನಗೆ ಯಾವ ಆನಂದವಾಯಿತು ಅದು ವರ್ಣನೆ ಮಾಡಲಿಕ್ಕೆ ಶಕ್ಯವಿಲ್ಲ.

ಮೇಲೆ ವರ್ಣಿಸಿದಂಥ ಮತ್ತು ಬಹಳ ದೃಶ್ಯಗಳನ್ನು ನಾನು ನೋಡಿದ್ದೇನೆ. ಅವೆಲ್ಲ ಸದ್ಗುರು ಕೃಪೆಯಿಂದಲೆ ಇರುತ್ತವೆ.

" ಓಂ ತತ್ಸತ್ "

ಸದ್ಗುರುಗಳ ಚರಣಾಶ್ರಿತ

ತಾ. ೧೮ ಮಾರ್ಚ ೧೯೩೯ (ಸಹಿ) ಬಾಳಕೃಷ್ಣ ಮಹಾದೇವ ಗಡಕರಿ

—೨೬—

ಶ್ರೀ. ಕೆ. ಕೆ. ಪ್ರಧಾನ ಇವರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಮೊದಲನೇ ಭೆಟ್ಟಿಯ ವೃತ್ತಾಂತವು:—

ಕಳೆದ ಸುಮಾರು ಐದು ವರ್ಷಗಳಿಂದ ನಾನು ನಾಶಿಕದಲ್ಲಿರುತ್ತೇನೆ. ಆದರೂ ಸನ್ ೧೯೩೭ ಫೆಬ್ರುವರಿ ಕಡೆತನಕ ' ನಾವ ದರವಾಜಾ, ನಾಶಿಕ ' ಇಲ್ಲಿ ವಾಸಿಸಿರುವ ಶ್ರೀಗಜಾನನ ಮುರಲೀಧರ ಗುಪ್ತೆ ಉರ್ಫ ಗಜಾನನ ಮಹಾರಾಜ ಇವರ ಸಂಬಂಧಿ ನನಗೆ ಏನೂ ಸಮಾಚಾರ ಗೊತ್ತಿದ್ದಿಲ್ಲ. ಆ ಸಮಾಚಾರವು ನನ್ನ ಕಡೆ ಭೆಟ್ಟಿಗೆ ಬಂದ ಒಬ್ಬ ಗೃಹಸ್ಥನ ಕಡೆಯಿಂದ ನನಗೆ ಸಹಜ ಮಾತಾಡುತ್ತ ಮಾತಾಡುತ್ತ ತಿಳಿಯಬಂತು. ಮಾತಾಡುವ ಪ್ರವಾಹದಲ್ಲಿ ಕೆಲವು ಅಧ್ಯಾತ್ಮ ವಿಷಯ ಹೊರಟಿತು, ಮತ್ತು ಆ ಸಮಯದಲ್ಲಿ ಅವರ ಹೆಸರು ಹೊರಬಿತ್ತು. ಪಾರಮಾರ್ಥಿಕ ಅಂತರ್ದೃಷ್ಟಿ ಸಂಪಾದಿಸುವದು ನನಗೆ ಪ್ರೀತಿಯದೆ ಎಂದು ತಿಳಿದು ಆ ಗೃಹಸ್ಥನು ಈ ಸಂಬಂಧದಿಂದ ಮೇಲಿನ ವ್ಯಕ್ತಿಯ ಉಲ್ಲೇಖ ಮಾಡಿದನು;

ಮತ್ತು ತಾಂತ್ರಿಸಿದಾ ಯಾವ ಪಕ್ಷದಿಂದಲೂ ಚರ್ಚಿಸಿದರೂ ನಾಶವೆ ಮಾಡುವ ಪ್ರಮಾಣದಲ್ಲಿ ಸಹಜ ಹೇಳಿದಂತೆ ಬಂದನು. ಆ ವಾದಗಳು ಯಾವಾಗಲೂ ಮನಸ್ಸಿನಲ್ಲಿ ಜಿಜ್ಞಾಸೆ ಉತ್ಪನ್ನ ಮಾಡುತ್ತಿದ್ದವು. ಮತ್ತು ಆ ಗ್ರಂಥವನ್ನು ಇನ್ನೊಮ್ಮೆ ನನ್ನ ಕಡೆ ಬಂದು, ನನ್ನನ್ನು ಆ ಪರಮಾರ್ಥದ ಕಡೆ ಕರೆದೊಯ್ಯು ಹೋಗುವವರ ಮತ್ತು ದೇವರ ಸಾಕ್ಷಾತ್ಕರಿಸಿದ್ದವು. ನನ್ನ ಮಿತ್ರರು ಹೊರಟು ಹೋದಮೇಲೆ ನನ್ನ ಮನಸ್ಸಿನಲ್ಲಿ ವಿಚಾರ ಮತ್ತು ಕಲ್ಪನೆಗಳು ಉಕ್ಕಿದವು. ನಾನು ನನ್ನಲ್ಲಿಯೇ ವಿಚಾರ ಮಾಡಿದೆ, "ಇವರು ನಿಜವಾಗಿ ಸಾಧುಗಳಿದ್ದರೆ, ನಾನು ಈಗ ಇದೇ ಪ್ರಾರ್ಥನೆಯ ಸಾಂಕಲ್ಪದಲ್ಲಿದ್ದು ನನಗೆ ಹ್ಯಾಗೆ ಅವರ ವಿಷಯ ಏನೇನೂ ಗೊತ್ತಾಗಲಿಲ್ಲ? ನನ್ನ ಕಾಯಕ್ಕೆ ಪ್ರಥಮಾಂಜಲಿಯು ಕಾಲ್ಪನಿಕ ರಾಮ ನಾರಾಯಣ ಇವರ ಹೊರತು ಮತ್ತಾವ ಸಾಧು ಇರುವರು ನನ್ನ ಕಣ್ಣಿಗ ಬಂದಿದ್ದಿಲ್ಲ. ಇಂಥವರು ಮಾತ್ರ ಕೀರ್ತಿಯ ಬಗ್ಗೆ ಎಲ್ಲಾ ಕಡೆಗೂ ಹಬ್ಬಿರುವರು. ಕಲ್ಯಾಣದಲ್ಲಿ ಅವರ ಸಮಾಧಿ ಇದೆ ಅವರ ಮಿತ್ರ ಮತ್ತು ಶಿಷ್ಯರು ಅವರ ಚರಿತ್ರೆಯನ್ನು ಪ್ರಸಿದ್ಧ ಮಾಡಿದ್ದಾರೆ; ಆದರೆ ಇವರ ಸಂಬಂಧ ಏನಾದರೂ ಬರೆದದ್ದು ಎಲ್ಲಿಯೂ ನನ್ನ ದೃಷ್ಟಿಗೆ ಬಿದ್ದಿಲ್ಲ, ಇದು ಹ್ಯಾಗೆ? ಹಾಗಾದರೆ ಇವರ ಗ್ರಂಥಜ್ಞಾನವು ಅತಿರಮಣೀಯ ಆಗಲಿಕ್ಕಿಲ್ಲವೆಂಬುದು ಯಾತರ ಮೇಲಿಂದ!" ಹೀಗೆ ಕಲ್ಪನೆಗಳು ಉತ್ಪನ್ನವಾದವು.

ಆದರೂ ನಿರ್ಣಯಿಸದೆ ಹೋಗಿ ಆ ಸಾಧು ದರ್ಶನ ತಕ್ಷಣದ ಇಚ್ಛೆ ಮಾತ್ರ ಉಕ್ಕೇರಿ ಬಂದಿತ್ತು. ಆದರೆ ಇಲ್ಲಿ ಹೇಳಬೇಕಾದ್ದೇನಂದರೆ, ಈಶ್ವರ ಸತ್ತ್ವ ಮೇಲೆ ನನ್ನ ವಿಶ್ವಾಸವು ಚಿಕ್ಕಂದಿನಿಂದ ಇತ್ತು. ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಸ್ವಾಮಿ ರಾಮತೀರ್ಥ, ಮೊದಲಾದ ಆಧ್ಯಾತ್ಮಿಕ ವಿಭೂತಿಗಳ ಗ್ರಂಥಗಳನ್ನು ನಾನು ಚಿಕ್ಕಂದಿನಲ್ಲಿಯೇ ಓದಿದ್ದೆ. ಆದ್ದರಿಂದ ಆಧ್ಯಾತ್ಮಿಕ ಅನುಭವಗಳನ್ನು ಸಂಪಾದಿಸಬೇಕೆಂಬ ನನ್ನ ಭಾವನೆಯು ಅಧಿಕವಾಯಿತು. ಕಾಲೇಜದಲ್ಲಿ ಮೊದಲಿನ ವರ್ಷದಲ್ಲಿಯೇ ಧ್ಯಾನದ ಕಾಲೇಜದ ಗುಡ್ಡದಮೇಲೆ ಹೋಗಿ 'ಓಂ' ಮಂತ್ರವನ್ನು ಜಪಿಸುವ ಅಭ್ಯಾಸವನ್ನು ನಾನು ಮಾಡುತ್ತಿದ್ದೆನು. 'ಓಂ' ಕಾರವನ್ನು ಆದಷ್ಟು ಉಚ್ಚಸ್ವರದಿಂದ ಜಪಿಸುತ್ತಿರುವಾಗ, ಒಂದುದಿನ ಹೀಗಾಯಿತಲ್ಲ, ನನ್ನ ಜನ್ಮದಲ್ಲಿ ಒಮ್ಮೆಲೆ ಉತ್ಕಂಠೆಯು ಉತ್ಪನ್ನವಾಯಿತು, ಮತ್ತು ಅದ್ಭುತ ಆನಂದದ ಸರ್ವವ್ಯಾಪಿ ಮತ್ತು ನನ್ನನ್ನು ವ್ಯಾಪಿಸಿರುವ ಒಂದು ವಿದ್ಯುತ್ ಲಹರಿಯು ನನ್ನ ಅಂತಃಕರಣದೊಳಗಿನಿಂದ ಹೊರಟು ಹೋಯಿತು ಎಂದು ನನಗನಿಸಿತು. ಹಾಗೆಂದರೆ ಈ ಆನಂದವು ಈ ದೇಹರೂಪಿ ಭಾಂಡದೊಳಗೆ ಹಿಡಿಸಲಾರದೆ ಅದು ಒಡೆಯುವತನಕ ಉಬ್ಬಿ, ಕಡೆಗೆ ದೇಹವನ್ನು ಒಡೆದು ಹೊರಗೆ ಹೋದೀತೆಂತ ನನಗೆ ತೋರಿತು. ಕೆಲವು ದಿನಗಳ ನಂತರ ಹಾಗೆಯೇ ಆನಂದವಾಯಿತು. ಆದರ ಅದು ಇಷ್ಟು ಗೋಚರಿಸತಕ್ಕದ್ದಿದ್ದಿಲ್ಲ, ಮತ್ತು ಪ್ರಸ-

ಪ್ರಸ: ಕಡಿಮೆ ಕಡಿಮೆಯಾಗಿ ಕಡೆಗೆ ಅದು ನನ್ನ ಬಿಡಬೇಕಾದರೆ. ವಿಲೀನ ಸಾಯುತ್ತಾ ಎಂಬಂತೆ ತೋರಿತು. ಆದರೂ ಈ ಅನುಭವದ ಮೇಲಿಂದ ನಾನು ಅಂತರ್ಯಾಮಿಯ ( ಪ್ರತ್ಯಗಾತ್ಮ ) ಜಗತ್ತಿನ ದಂಡೆಯ ಮೇಲೆ ನಿಂತು ಇದ್ದೆ. ಈ ಪ್ರಸಿದ್ಧ ವಿಚಾರವನ್ನು ಪಶ್ಚಿಮದವರು ಹೇಳಾಹೇಳಿ ಮಾಡದೆ ಗತ್ಯಂತರವಿಲ್ಲ ಎಂದು ನನಗನಿಸಿತು. ಆದರೆ ಅದು ನನ್ನಿಂದ ಸಾಧ್ಯವಾಗಲಿಲ್ಲ; ಮತ್ತು ನಿತ್ಯದ ವ್ಯವಹಾರಗಳನ್ನೂ ಹ್ಯಾಗೆ ಬೇಕು ಹಾಗೆಯೇ ಮಾಡಲಿಕ್ಕೆ ನಾನು ಅಸಮರ್ಥನಿದ್ದೇನೆಂತ ಕಂಡು ಬಂತು. ಈ ಕಾರಣದಿಂದ ಧ್ಯಾನದ ಕಡೆಗೂ ನನ್ನ ಲಕ್ಷ್ಯ ಹತ್ತಲಾರದು. ನನ್ನ ಈ ಅರ್ಧಮರ್ಧ ಸ್ಥಿತಿಯನ್ನೋಡಿ ನನ್ನ ಮಿತ್ರರಿಗೂ ನನಗೆ ಹೇಳಿಡಲಿಕ್ಕೆ ಸಾಧ್ಯವಿತ್ತು, ಮತ್ತು ನನ್ನ ಆಯುಷ್ಯಕ್ರಮವು ಕಟ್ಟಿ ಹೋಗುವ ಕಾಲಬಂತೆಂದು ತಿಳಿದೆ. ಈ ಅಧ್ಯಾತ್ಮಜ್ಞಾನದ ಉಪಯೋಗವನ್ನು ನಾನು ತನಕ್ಕೆ ಬಿಟ್ಟುಕೊಟ್ಟೆನು, ಮತ್ತು ನನ್ನ ಈ ಅಂತರ್ಮುಖ ಭಾವನೆಗಳ ಮೇಲೆ ಬಲಾತ್ಕಾರದಿಂದ ಹಿಡಿದು ಬಿಟ್ಟೆನು; ಮತ್ತು ಭಾವನಾಶಕ್ತಿಯನ್ನು ಬಿಟ್ಟು ಕೇವಲ ಸಾಧಾರಣ ವ್ಯವಹಾರಿ ಮನುಷ್ಯನಾದೆನು.

ಈ ಸಾಧುಗಳ ದರ್ಶನಕ್ಕೆ ಹೋಗುವ ದಿವಸ ಮತ್ತು ವೇಳೆ ನನಗೆ ಒಳ್ಳೇ ನೆನಪದೆ. ನಾಸಿಕ ನಗರದ ಬೀದಿಗಳೊಳಗಿಂದ ದಾರಿ ತೆಗೆದ ನಾನು ಕಡೆಗೆ ಶ್ರೀಯುತ ರಾಮದೇವರಗುಡಿಯ ಸಮೀಪದ ಮೂಲೆಗೆ ಇದ್ದ ಒಂದು ಮನೆಗೆ ಬಂದೆನು. ಆ ಮನೆಯು ಸಣ್ಣದಾಗಿ ಒಂಟಿಗುಡಿಸಲಿನಂತಿತ್ತು. ಒಳಗೆ ಹೋದ ಕೂಡಲೆ ಒಂದು ಸಣ್ಣ ಚೌಕವಿತ್ತು ಮತ್ತು ಅದರ ಮಧ್ಯದಲ್ಲಿ ಹಳೆ ಪ್ರಕಾರದ ಒಂದು ಬಾವಿಯೂ ಇತ್ತು. ಮತ್ತು ಈ ನಂತರ ಕೋಣೆಯು ತೀರಾ ಹಾಗೆ ಇದ್ದು ಅತ್ತ ಕಡೆಗೆ ಹೋಗುವ ದಾರಿಯೂ ಇಕ್ಕಟ್ಟಾಗಿತ್ತು. ಒಳಗೆ ಹೋದ ಮೇಲೆ ನಾನು ಸ್ವಲ್ಪ ಗಾಬರಿಯಾದೆ ಮತ್ತು ಅಂಜಿದೆ. ಆದರೂ ಪಾದತ್ರಾಣವನ್ನು ಹೊರಗೆ ತೆಗೆದಿಟ್ಟು ನಾನು ಒಳಗೆ ಹೋದೆ. ಅಲ್ಲಿ ತೆಳ್ಳನ ಮೈಕಟ್ಟು ಇದ್ದು, ಗಲ್ಲಗಳು ಒಳಸೇರಿದ್ದ, ಒಬ್ಬ ಮನುಷ್ಯನನ್ನು ನಾನು ಕಂಡೆನು. ಅವನ ರೂಪ ಸಾತ್ವಿಕ, ಸತೇಜವಾಗಿತ್ತು. ಆತನು ಕೈಜೋಡಿಸಿ ಆಕರ್ಷಕವಾದ ಹಾಸ್ಯಮುಖದಿಂದ ‘ ಬನ್ನಿರಿ, ಕೂತುಕೊಳ್ಳಿರಿ ’ ಎಂದು ನಮ್ಮ ಸ್ವಾಗತ ಮಾಡಿದನು. ಆವರು ವೃದ್ಧರಿರಬೇಕೆಂದು ನನ್ನ ತಿಳುವಳಿಕೆಯಾಗಿತ್ತು. ಆದರೆ ನಿರೀಕ್ಷಿಸಿ ನೋಡಿದಾಗ ಅವರು ಮಧ್ಯಮ ವಯಸ್ಸಿನವರು ಎಂತ ಕಂಡು ಬಂತು. ಅವರು ತಮ್ಮ ವಿನೋದಪರ ಭಾಷಣವನ್ನು ಆರಂಭಮಾಡಿದರು. ಅವರಿದ್ದ ಕೋಣೆಯು ದೊಡ್ಡದಿದ್ದು ಅದರ ಒಂದು ಮೂಲೆಗೆ ಒಂದು ಪಲಂಗವಿತ್ತು. ಅದರ ಮೇಲೆ ಗಾದಿಯನ್ನು ಹಾಸಿ ಇಟ್ಟಿತ್ತು, ಮತ್ತು ಅದರ ಮೇಲೆ ಕೆಂಪು ಅಂಚಿನ ಒಂದು ಮಚ್ಛರದಾನಿಯು ಕಟ್ಟಿತ್ತು. ಸುಣ್ಣ ಸಾರಿಸಿದ ಗೋಡೆಯ ಮೇಲೆ ನನಗೆ ಗುರ್ತವಿಲ್ಲದ ಸಾಧುಗಳ ಚಿತ್ರಗಳು ತೂಗಹಾಕಿದ್ದವು. ಮತ್ತೊಂದು ಮೂಲೆಯಲ್ಲಿ ಒಂದು ಕಟ್ಟಿಗೆಯ

ನನಗೆ ಈ ಶೋಧವು ಯಾಕೆ ಸಿಗಲಿಲ್ಲ? ಇಂಥಾ ಈ ಶ್ರೇಷ್ಠನು ಯಾರು ಇದ್ದಾನೆ? ಮತ್ತು ಸಂಜೆ ಹೊತ್ತಿಗೆ ಈ ಆನಂದವನ್ನು ನನ್ನೊಳಗೆ ಯಾರು ಉತ್ಪನ್ನ ಮಾಡುವರು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳೇನಿರಬೇಕು?

ಆ ದಿವಸದಿಂದ ನಾನು ನನ್ನ ಡೋಣಿಯನ್ನು ಶಾಂತ ನೀರಿನಲ್ಲಿ ಬಿಟ್ಟಿರುವೆನು, ಮತ್ತು ಅಧ್ಯಾತ್ಮ ಮಾರ್ಗದಲ್ಲಿ ನಾನು ಸಾಧಕನಾದರೂ ನಿಶ್ಚಯವಾಗಿ ಮುಂದೆ ಹಾರುತ್ತಿದ್ದು ಸದ್ಗುರು ನನ್ನ ಆಧ್ಯಾತ್ಮಿಕ ಗತಿಯ ಮಾರ್ಗದರ್ಶಕ ಆಗಿದ್ದಾರೆ ಎಂದು ನನಗನಿಸಿತು. ಅನಂತರ ಯಾವಾಗ್ಗೆ ನನಗೆ ವೇಳೆ ಸಿಗುವದೋ ಆಗಾಗ್ಗೆ ನಾನು ನನ್ನ ಗುರುವಿನ ಸಾನ್ನಿಧ್ಯದಲ್ಲಿ ಹೋಗಿ, ಈಶ್ವರೀ ಸ್ಮರಣದ ಲಾಭ ತಕ್ಕೊಂಡು ಮನೆಗೆ ತಿರುಗಿ ಬರುತ್ತಿದ್ದ. ಶ್ರೀ ಗಜಾನನ ಮಹಾರಾಜರ ಶ್ರೇಷ್ಠತ್ವವು ನನಗೆ ಈಗ ತಿಳುವಳಿಕೆಯಾಗಿದೆ. ಒಳಗಿನ ಆಧ್ಯಾತ್ಮದ ಸೌಂದರ್ಯವು ತನ್ನ ಬಾಹ್ಯ ಸತ್‌ಕೃತ್ಯಗಳಲ್ಲಿ ಮತ್ತು ಸಭ್ಯ ಆಚರಣೆಯಲ್ಲಿ ಕಾಣಬರಬೇಕು ಎಂದು ಅವರು ತಿಳಿಯುತ್ತಾರೆ. ಎಷ್ಟೋ ಸಲ ಅವರು ಅನ್ನುತ್ತಿದ್ದರು, ' ನಾವು ಹರಿದಾಸರು ಸೌಂದರ್ಯ ಸತ್ಯ ವ ಆನಂದ ಈ ಮೂರು ನದಿಗಳ ಸಂಗಮದ ಮೇಲೆ ನಿಂತಿರುವೆವು ನನಗೂ ಒಳಗೆ ಹಾಗೆಯೆ ಅನಿಸುವದು. ಇಷ್ಟೇ ಅಲ್ಲ, ಆ ಸರ್ವವ್ಯಾಪಿ ಪರಮಾತ್ಮನ ಈ ಮೂರು ಸ್ವರೂಪಗಳ ಮೂಲವನ್ನು ನಾನು ಹಿಡಿದು ತದ್ರೂಪ ಆಗಿದ್ದೇನೆ".

ಈ ಬಡವಾಗಿ ಕಾಣಿಸುವ ಮೂರ್ತಿಯು ತಾನು ಇನ್ನೂ ಸಾಧಕನೆಂದು ತಿಳಿದಿದ್ದರೂ ಸಹಾ, ತಮ್ಮ ದರ್ಶನಕ್ಕೆ ಬರುವ ಜನರ ಮೇಲೆ ತಮ್ಮ ಅಂತಸ್ಥ ಆಧ್ಯಾತ್ಮಿಕ ಶಕ್ತಿಯ ಪರಿಣಾಮವನ್ನು ಎಷ್ಟು ಶೀಘ್ರವೇಗದಿಂದ ಉತ್ಪನ್ನ ಮಾಡುತ್ತಿದ್ದರೋ ಅಷ್ಟು ತಾವು ಸಿದ್ಧರೆನಿಸಿಕೊಳ್ಳುವ ಜನರಿಗೆ ಮಾಡಲಿಕ್ಕೆ ಸಾಧ್ಯವಾಗದು. ಈ ಎಲ್ಲಾ ಸಂಗತಿಗಳ ಮೇಲಿಂದ ನಾಶಿಕದ ಪರಮಶ್ರೇಷ್ಠ ಯೋಗಿ ಶ್ರೀಗಜಾನನ ಮಹಾರಾಜರು ಇವರು ಪರಮೇಶ್ವರನು ಭೂತಲಕ್ಕೆ ಕಳುಹಿಸಿದ ತನ್ನ ಸತ್ಯ ಪ್ರತಿನಿಧಿ ಇದ್ದಾರೆ ಎಂತ ಹೇಳಲಿಕ್ಕೆ ಅಡ್ಡಿ ಇಲ್ಲ.

ತಾ. ೭ ಅಕ್ಟೋಬರ ೧೯೩೮ (ಸಹಿ) ಕೆ. ಕೆ. ಪ್ರಧಾನ

ಇನ್ಸ್ಪೆಕ್ಟರ ಇನ್ಸಪೆಕ್ಟರ ನಾಶಿಕ ಜಿಲ್ಹಾ.

— ೨೭ —

ಶ್ರೀ ಕಾಶಿನಾಥ ರಾಮಚಂದ್ರ ಗಾಂಡೇಕರ, ಇವರ ಅನುಭವಗಳು: —

ನಾನು ಧುಳೆಯಲ್ಲಿರುವಾಗ ರಾ. ಡಿ. ಎಸ್. ರಾಜೆ ಇವರು ಅಲ್ಲಿ ಪ್ರೋಫೆಸರ ಮಾಸ್ತರರಿದ್ದರು. ಜ್ಯೋತಿಷ ಶಾಸ್ತ್ರದಲ್ಲಿ ಪ್ರವೀಣರೆಂದು ಅವರು ಅಲ್ಲಿ

ಪ್ರಸಿದ್ಧರಾಗಿದ್ದರು. ಜ್ಯೋತಿಷದ ಮೇಲೆ ಅವರು ಎರಡು ಮೂರು ಪುಸ್ತಕಗಳನ್ನು ಬರೆದಿರುತ್ತಾರೆ. ನನಗೂ ಜ್ಯೋತಿಷದಲ್ಲಿ ಮನಸ್ಸು ಒಲಿದಿರುವದರಿಂದ ಅವರಕಡೆ ಬರಹೋಗುವದಾಗಿದ್ದು, ನನ್ನದು ಅವರದು ಅಧಿಕ ಪರಿಚಯವಾಯಿತು, ಮತ್ತು ನಾವು ಒಂದೆ ಮನೆಯವರಂತೆ ನಡಕೊಳ್ಳುತ್ತಿದ್ದೆವು.

ಒಂದಾನೊಂದು ದಿನ ನಾನು ರಾ. ರಾಜೆ ಇವರ ಮನೆಗೆ ಹೋದೆನು. ಅಲ್ಲಿ ಖುರ್ಚಿಯ ಮೇಲೆ ಒಬ್ಬ ಕುಂಟ ಪುರುಷರು ಕೂತಿದ್ದರು. ನಾವು ಅಲ್ಲಿ ಹೋಗಿ ಕೂತ ಮೇಲೆ ಆ ಕುಂಟ ಪುರುಷರು ಸಿಗಾರೆಟ ತೆಗೆದು ಹಚ್ಚಿ ಸೇದಲಿಕ್ಕೆ ಸುರು ಮಾಡಿದರು. ಆ ಸಮಯದಲ್ಲಿ ಅಲ್ಲಿ ರಾ. ನಾಸವಡಕರ ಸಬರಜಿಸ್ಟ್ರಾರ ಮತ್ತು ರಾ. ಗುಪ್ತೆ ಇಂಜನಿಯರ್ ಇವರು ಅವರ ಕೂಡ ಮಾತಾಡುತ್ತಾ ಇದ್ದರು. ಅಷ್ಟರಲ್ಲಿ ಒಮ್ಮೆಲೆ ಬಹಳ ಉತ್ತಮತರದ ಸುವಾಸವು ಹೊರಟಿತು. ಆ ಸುವಾಸ ಬಂದ ಮೇಲೆ "ಇಷ್ಟು ಸುವಾಸಿಕ ಊದಿನ ಕಡ್ಡಿಗಳನ್ನು ನೀವು ಎಲ್ಲಿಂದ ತರಿಸಿದಿರಿ?" ಎಂದು ನಾನು ರಾಜೆಯವರಿಗೆ ಕೇಳಿದೆ. ಆಗ ನನಗೆ ಹೀಗನಿಸಿತು, ಮನೆಯಲ್ಲಿ ಯಾರೋ ದೇವಪೂಜೆಯನ್ನು ಮಾಡುತ್ತಿರುವಾಗ ಈ ಊದಿನ ಕಡ್ಡಿ ಹಚ್ಚಿರಬಹುದು ಮತ್ತು ಅದರ ಸುವಾಸನೆ ಬರುವದು, ಈ ತಿಳುವಳಿಕೆ ಮೇಲೆ ನಾನು ರಾಜೆಯವರಿಗೆ ಹೀಗೆ ಪ್ರಶ್ನೆ ಮಾಡಿದೆ.

ರಾಜೆ ಅಂದರು, "ನಡಿರಿ, ನಾವು ಹೊರಗೆ ಹೋಗಿ ಅಡ್ಡಾಡಿಕೊಂಡು ಬರೋಣ" ಅದಕ್ಕೆ ನಾನಂದೆ, "ಊದಿನಕಡ್ಡಿ ಎಲ್ಲಿಂದ ತರಿಸಿದಿರಿ, ಇದಕ್ಕೆ ಏನೊಂದೂ ಹೇಳಲಿಲ್ಲ" ರಾಜೆ ಅಂದರು, "ಹೊರಗೆ ಹೋಗೋಣ ಅಂದರೆ ಮತ್ತೆ ಹೇಳುವೆನು." ಹೀಗಂದು ನಾವಿಬ್ಬರೂ ಹೊರಬಿದ್ದೆವು. ಮುಂದೆ ನಡೆಯುವಾಗ್ಗೆ ಅವರಂದರು, "ನಿಮಗೆ ಯಾವ ಸುವಾಸ ಬಂತು ಅದು ಊದಿನ ಕಡ್ಡಿಗಳದಲ್ಲ. ಖುರ್ಚಿಯ ಮೇಲೆ ಯಾವ ಕುಂಟ ಸಾಧುಗಳು ಕೂತಿರುವರು ಅವರು ಸಿಗಾರೆಟಿನ ಹೊಗೆ ಬಿಟ್ಟರಂದರೆ ಇಂಥ ಸುವಾಸ ಯಾವಾಗಲೂ ಬರುತ್ತದೆ. ಅವರು ಸತ್ಪುರುಷರು ಇದ್ದಾರೆ. ನಮ್ಮ ಜಾತಿಯವರೇ ಇದ್ದಾರೆ. ನಮ್ಮ ತಾಯಿಯವರಿಗೆ ಅವರ ಮೇಲೆ ಬಹಳ ಶ್ರದ್ಧೆ ಇದೆ. ಅವರ ಹೇಳುವಿಕೆದು ಅವರಿಗೆ ನಾಲ್ಕು ಐದು ಸಾರಿ ಪ್ರಚೀತಿಗೆ ಬಂದದೆ; ಆದ್ದರಿಂದ ಮತ್ತು ನಮ್ಮ ತಾಯಿ ಬಹಳ ವೃದ್ಧರಿದ್ದು ಭಾವಿಕರಿದ್ದದರಿಂದ ಅವರ ಮೇಲೆ ಸತ್ಪುರುಷರೆಂತ ಬಹಳ ವಿಶ್ವಾಸವದೆ. ನನ್ನ ತಾಯಿಯವರ ವಯಸ್ಸು ೮೦–೮೫ ವರ್ಷ ಆಗಿದೆ ನನಗೆ ಸ್ವತಃ ಅಷ್ಟೊಂದು ಭರವಸೆ ಅವರ ಮೇಲೆ ಇಲ್ಲ. ನಮ್ಮ ತಾಯಿಯವರ ಆಮಂತ್ರಣದಿಂದ ಅವರು ಇಲ್ಲಿಗೆ ಬಂದಿರುವರು. ಅವರು ಇಲ್ಲಿಗೆ ಬಂದು ಏಳೆಂಟು ದಿನಗಳಾದವು. ಬಹಳ ಮಂದಿ ಹೆಚ್ಚಾಗಿ ನಮ್ಮ ಜಾತಿಯವರು ಸಂಜೆ ಹೊತ್ತಿಗೆ ನಿತ್ಯ ಅವರ ದರ್ಶನಕ್ಕೆ ಬರುತ್ತಾರೆ. ರಾತ್ರಿಯಲ್ಲಿ ಅವರು ಎಲ್ಲಿ ಕೂತಿರುವರೊ ಅಲ್ಲಿ

ಹೀಗೆಯೇ ಸುವಾಸವು ಹೊರಡುವದು. ಎರಡೆರಡು ನಾಲ್ಕು ನಾಲ್ಕು ದಿನಗಳ ತನಕ ಉಣ್ಣುವದು ತಿನ್ನುವದಿಲ್ಲ. ಚಹಾ ಮಾತ್ರ ನಿತ್ಯ ನಾಲ್ಕೈದು ಸಾರಿ ತಕ್ಕೊಳ್ಳುತ್ತಾರೆ. ಅವರ ಒಂದು ಕಾಲು ಮೊಣಕಾಲಿನ ಕೆಳಗೆ ಒಣಗಿರುತ್ತದೆ. ನಡಿಯುವದಕ್ಕೆ ದೊಡ್ಡ ಒಡಿಗೆ ತಕ್ಕೊಂಡು ಅದರ ಆಧಾರದಿಂದ ನಡಿಯುತ್ತಾರೆ. ಅವರು ಉಣ್ಣುವದಾದರೆ ಗೋದಿ ರೊಟ್ಟಿಯ ಒಂದು ನಾಲ್ಕನೆ ಭಾಗಕ್ಕಿಂತ ಹೆಚ್ಚಿಗೆ ಉಣ್ಣುವದಿಲ್ಲ. ನನಗೆ ದೇವಧರ್ಮದ ಮೇಲೆ ಎಷ್ಟಕ್ಕೂ ವಿಶ್ವಾಸವಿಲ್ಲದ್ದರಿಂದ ಅವರ ಮೇಲೆ ನನ್ನದು ವಿಶೇಷ ಭಕ್ತಿ ಇಲ್ಲ; ಆದರೆ ಅವರ ಚಮತ್ಕಾರಗಳನ್ನು ನೋಡಿ ದೊಡ್ಡ ಆಶ್ಚರ್ಯವಾಗುತ್ತದೆ, ಇದು ಮಾತ್ರ ನಿಜವಾದದ್ದು. ಕೆಲವರು ರಾತ್ರಿ ಹೊತ್ತಿಗೆ ಅವರ ಕಡೆಗೆ ಬಂದು ಯೋಗಸಾಧನದ ಅಭ್ಯಾಸವನ್ನು ಮಾಡುತ್ತಾರೆ. "

ನಂತರ ನಾನು ಅವರ ಕಡೆಗೆ ಹೋಗಹತ್ತಿದೆ, ಆ ಸಮಯದಲ್ಲಿಯೂ ಕೆಲವು ಚಿಲ್ಲರೆ ಚಮತ್ಕಾರಗಳನ್ನು ನಾನು ನೋಡಿದೆ. "ಮಹಾರಾಜರೇ, ತಾವು ಈಶ್ವರ ಪ್ರಾಪ್ತಿಯ ಸಾಧನವನ್ನು ನನಗೆ ಹೇಳಲಿಕ್ಕೇಬೇಕು ಅವರ ವಿನಹಾ ನಡಿಯಲಾರದು. ನನಗೆ ಒಬ್ಬ ಸತ್ಪುರುಷರು ಇಂಥ ವರ್ಷದಲ್ಲಿ ಒಬ್ಬರು ನಿನಗೆ ಮಾರ್ಗ ತೋರಿಸ್ಯಾರು ಅಂತ ಹೇಳಿದ್ದರು; ಆ ವರ್ಷ ಇದೇ ಇರುವದು." ಎಂದು ನಾನು ಹೇಳಿದ್ದಕ್ಕೆ, "ಅದು ನಿಮಗೆ ಯಾರು ಹೇಳಿದರು ಅದನ್ನು ಮೊದಲು ಸವಿಸ್ತಾರವಾಗಿ ಹೇಳಿರಿ." ಎಂದು ಅವರು ಅಂದದ್ದಕ್ಕೆ ಆ ವೃತ್ತಾಂತವನ್ನು ಹೇಳಲಾರಂಭಿಸಿದೆ: —

ನಾನು ಕೆಲವು ಮಿತ್ರರ ಕೂಡ ಪಾಂಡುರಂಗನ ದರ್ಶನಕ್ಕೆ ಹೊಗಿದ್ದೆನು. ಅಲ್ಲಿ ಇಪ್ಪತ್ತೈದು ದಿವಸ ತನಕ ನಾವು ಇದ್ದೆವು. ಪಂಢರಪುರದಲ್ಲಿ ತಪಕೀರಿ ಬುವಾ ಅಂತ ಪ್ರಸಿದ್ಧ ಸತ್ಪುರುಷರಿದ್ದಾರೆ ಎಂತ ನಾವು ಕೇಳಿದ್ದೆವು. ಆದರೆ ಅಲ್ಲಿ ಜನರು ಹೇಳಿದರು, ಯಾರಿಗೆ ಯೋಗಾಯೋಗವಿರುವದೊ ಅಂಥವರಿಗೆ ಅವರ ದರ್ಶನ ಶಿಕ್ಕುವದು. ಆ ದಿವಸದಿಂದ ಅವರ ದರ್ಶನವಾಗಬೇಕೆಂದು ಬಹಳ ಆಕಾಂಕ್ಷೆ ಹುಟ್ಟಿತ್ತು ಮುಂದೆ ಎಂಟು ದಿನ ತನಕ ನಮಗೆ ದರ್ಶನವಾಗಲಿಲ್ಲ. ಒಂಭತ್ತನೆ ದಿವಸ ನಾವು ಚಂದ್ರಭಾಗೆಯ ಮೇಲೆ ಸ್ನಾನಕ್ಕೆ ಹೋದಾಗ ಅಲ್ಲಿ ನೀರು ತಕ್ಕೊಳ್ಳುವ ಸಲುವಾಗಿ ಅಕಸ್ಮಾತ್ತಾಗಿ ಬಂದರು. ಆಗ ಅಲ್ಲಿದ್ದ ಮಂದಿ ಇವರೇ ತಪಕೀರಿಬುವಾ ಎಂದು ಹೇಳಿದರು. ಅದು ಕೇಳಿದ ಕೂಡಲೆ ಅವರ ದರ್ಶನ ತಕ್ಕೊಳ್ಳಲಿಕ್ಕೆ ನಾವು ಹೊರಟೆವು. ಕೂಡಲೆ ಅವರು ಓಡುತ್ತಹೋದರು; ನಾವೂ ಅವರ ಹಿಂದೆ ಬಹಳ ದೂರತನಕ ಓಡಿಹೋದೆವು. ಆದರೆ ಗಂಟುಬೀಳಲಿಲ್ಲ. ಆಮೇಲೆ ನಾವು ಚಂದ್ರಭಾಗೆಯ ಮೇಲೆ ಬಂದು ಸ್ನಾನ ಮಾಡಿದೆವು. ಅಷ್ಟರಲ್ಲಿ ತಪಕೀರಿಬುವಾ ಪುನಃ ಚಂದ್ರಭಾಗೆಯ ಮೇಲೆ ಬಂದು, ಸೂಚನೆ

ಮಾಡಿದರು. ನಾವು ಅವರ ದರ್ಶನಕ್ಕೆ ಹೋದಾಗ್ಗೆ ಪಾದದಮೇಲೆ ತಲೆ ಇಡಿರಿ, ಅಂದರು. ಅವರ ಕಾಲಿನಮೇಲೆ ತಲೆಯಿಟ್ಟು ನಾವು ಸಾಷ್ಟಾಂಗ ನಮಸ್ಕಾರ ಮಾಡಿದೆವು. ಆಗ ಅವರು " ಈ ತೀರ್ಥ ತಕ್ಕೊಳ್ಳಿರಿ " ಅಂದರು; ಅವರ ಪಾತ್ರ ದಲ್ಲಿ ನೀರು ಸ್ವಲ್ಪವೇ ಇದ್ದವು. ಅದು ಒಂದು ಆಚಮನಕ್ಕೆ ಸಾಲುವಷ್ಟು ಇದ್ದು ನನ್ನ ಕೈಮೇಲೆ ಹಾಕಿ ಅಂದರು, " ನೋಡಿರಿ, ಇದು ನನ್ನ ಶೌಚದ ನೀರು. ತೀರ್ಥವೆಂದು ತಕ್ಕೊಳ್ಳುವದಾದರೆ ತಕ್ಕೊಳ್ಳಿರಿ " ಎಂದು ಹೇಳಿ ನಮ್ಮ ಕಡೆಗೆ ನೋಡುತ್ತಿದ್ದರು. ನಾವು ಆ ತೀರ್ಥ ತಕ್ಕೊಂಡ ಮೇಲೆ ಅವರು ತಾವು ಹೋಗುತ್ತೇವೆ ಅಂದರು. ಆಗ ನಾವು ವಿನಂತಿ ಮಾಡಿದೆವಲ್ಲ, ತಮ್ಮಂಥ ಸತ್ಪುರುಷರ ದರ್ಶನವು ಮೇಲಿಂದಮೇಲೆ ಆಗಿ ಈಶ್ವರಪ್ರಾಪ್ತಿ ಆಗಬೇಕು ಎಂದು ನಮ್ಮ ಮನಃಪೂರ್ವಕ ಇಚ್ಛೆಯದೆ. ಆಮೇಲೆ ಅವರಂದರು, ಇಂಥ ವರ್ಷದ ನಂತರ ನನ್ನದು ನಿನ್ನದು ಭೆಟ್ಟಿಯಾಗಿ ನಾನು ನಿನಗೆ ಯಾವದಾದರೂ ಸಾಧನವನ್ನು ಕಲಿಸುವೆನು; ಆದರೆ ನೀನು ನನ್ನ ಗುರ್ತು ಹಿಡಿಯಲಾರಿ. ಅದರ ಅಭ್ಯಾಸವನ್ನು ದೃಢಭಕ್ತಿಯಿಂದ ಮತ್ತು ಶ್ರದ್ಧೆಯಿಂದ ಮಾಡಿದರೆ ನಿತ್ಯ ನಿನಗೆ ಈಶ್ವರನು ಭೆಟ್ಟಿ ಕೊಟ್ಟಾನು, ಹೀಗೆ ಹೇಳಿ ಅವರು ಓಡುತ್ತಾ ಹೋದರು. ಈ ಲಾಭವು ಆ ವೇಳೆಕ್ಕೆ ಇಬ್ಬರಿಗೆ ಅಷ್ಟೇ ಆಯಿತು. ಆ ವರ್ಷ ಇದೇ ಇರುವದು ಆದ್ದರಿಂದ ತಾವು ನನಗೆ ಹೇಳಲಿಕ್ಕೇಬೇಕು. ಹೀಗೆ ಆಗ್ರಹ ಹಿಡಿದು ಕೂತ ಮೇಲೆ ಶ್ರೀಗಜಾನನ ಮಹಾರಾಜರಂದರು, " ಈ ಪಂಢರಪುರದ ವೃತ್ತಾಂತವು ನಿಜವೇ, ಮತ್ತು ಆ ಪ್ರಕಾರ ನನಗೆ ಏನು ಬರುವದೊ ಅದನ್ನು ನಾನು ನಿಮಗೆ ಕಲಿಸುವೆನು; ಆದರೆ ನಾನು ತಪಕೀರಿಬುವಾ ಅಲ್ಲ, ಇದು ನಿಶ್ಚಯವು." ಹಾಗಾದರೆ ಎಂದಿನಿಂದ ಆರಂಭಮಾಡುವದು ಎಂದು ನಾನು ಅಂದದ್ದಕ್ಕೆ, ಅವರಂದರು, "ನಾಳಿನಿಂದ. ನೀವು ನಾಳೆ ಮುಂಜಾನೆ ಏಳಕ್ಕೆ ಬನ್ನಿರಿ. "

ಮರುದಿನ ಬೆಳಿಗ್ಗೆ ಸ್ನಾನಮಾಡಿ ಎಂಟು ಹೊಡೆಯುವ ವೇಳೆಗೆ ನಾನು ಅವರ ಕಡೆಗೆ ಹೋದೆ. ಗಜಾನನ ಮಹಾರಾಜರು ಅಲ್ಲಿ ಕೂತಿದ್ದರು, ಅವರಂದರು " ಇವತ್ತಿನಿಂದ ಆರಂಭಮಾಡುವದು. ಆದರೆ ನೀವು ಯಾರದಾದರೂ ಗುರೂಪದೇಶವನ್ನು ತಕ್ಕೊಂಡಿದ್ದಿರೇನು? ತಕ್ಕೊಂಡಿಲ್ಲವಾದರೆ ಗುರು ಮಾಡಿಕೊಳ್ಳಬೇಕು". " ನಾನು ಗುರೂಪದೇಶವನ್ನು ತಕ್ಕೊಂಡಿದ್ದೆ, ಅದಾಗಿ ಬಹಳ ವರ್ಷಗಳಾದವು." ಹೀಗೆ ಅಂದದ್ದಕ್ಕೆ ಅವರಂದರು, " ಯಾವ ಮಂತ್ರವನ್ನು ನಿಮ್ಮ ಗುರುವು ನಿಮಗೆ ಹೇಳಿರುವರೊ, ಅದನ್ನು ನೀವು ನಿತ್ಯನಿಯಮದಿಂದ ಜಪಿಸುತ್ತೀರೇನು ? " ಅವರಿಗೆ ನಾನು ಹೇಳಿದೆ, ನಿತ್ಯ ಸ್ನಾನವಾದ ಮೇಲೆ ಪೂಜೆಯ ಮೊದಲು ಒಂದು ಸಾವಿರ ಜಪ ಮಾಡುತ್ತೇನೆ. " ಆಮೇಲೆ ಅವರಂದರು, " ಇದನ್ನು ನೀವು ಚಲೋ ಮಾಡುತ್ತೀರಿ. ಈಗ ನಾನು ಏನು ಹೇಳುವೆನೊ ಅದನ್ನು ನೀವು ವ್ಯವಸ್ಥಿತರೀತಿಯಿಂದ ಲಕ್ಷಕೊಟ್ಟು ಮಾಡುತ್ತ ಇದ್ದರೆ ಸಾಧ್ಯವಾದೀತು. ಮೊದಲು

ಪದ್ಮಾಸನ ಹಾಕಿ ನಿತ್ಯ ಎಷ್ಟು ಜಪವಾದೀತು ಅಷ್ಟು ಜಪ ಮಾಡುತ್ತ ಹೋಗಿರಿ. ಕಾಲು ನೋಯಿಸುತ್ತಿದ್ದರೆ, ನಡುವೆ ವಿಶ್ರಾಂತಿ ತಗೊಳ್ಳಬೇಕು ಮತ್ತು ಪುನಹಾ ಜಪಕ್ಕೆ ಆರಂಭಿಸಬೇಕು. ಹೀಗೆ ಎಂಟು ದಿನಗಳಾದ ಮೇಲೆ, ಪದ್ಮಾಸನ ಹಾಕುವ ಅಭ್ಯಾಸವಾಗುವದು." ಆ ಪ್ರಕಾರ ಪದ್ಮಾಸನ ಹಾಕಿ ಎಂಟುದಿನ ಅಭ್ಯಾಸ ಮಾಡಿದ ಮೇಲೆ ಅದು ಒಳ್ಳೆ ಸಾಧಿಸಿತು. "ಈಗ ನೀವು ಯಾವ ರೀತಿಯಿಂದ ಇದ್ದಾಗ್ಯಾದರೂ ಜಪವನ್ನು ಮಾಡಿರಿ. ನಿದ್ರೆ ಹತ್ತುವತನಕ ಮಾಡುತ್ತಿರ ಬೇಕು. ಆದರೆ ಅದನ್ನು ಬಾಯಿ ಒಳಗೆಯೆ ನಾಲಗೆ ಅಲ್ಲಾಡಿಸದೆ ಮಾಡಬೇಕು". ಹೀಗೆ ಎಂಟುದಿನ ಜಪ ಮಾಡಿದಮೇಲೆ ಜಪಮಾಡುವ ಅಭ್ಯಾಸಬಿತ್ತು. ಆ ಮೇಲೆ ಅವರಂದ್ರು, "ಈಗ ಯೋಗಾಭ್ಯಾಸ ಮಾಡಲಿಕ್ಕೆ ಏನೂ ಅಡ್ಡಿಯಿಲ್ಲ. ಆದರೆ ಜಪ ಮಾತ್ರ ಮನಸ್ಸಿನೊಳಗೆಯೇ ನಾಲಿಗೆ ತುಟಿಗಳು ಅಲ್ಲಾಡಿಸದೆ ಸಮೋದಿತ ನಡೆ ಯಲಿ. ನಾಳಿನಿಂದ ಮುಂದಿನ ಅಭ್ಯಾಸವನ್ನು ಸುರು ಮಾಡುವೆವು." ಮರುದಿನ ನಾನು ಅವರ ಕಡೆಗೆ ಹೋದಾಗ, ಅವರಂದರು, "ನೀವು ನನ್ನೆದುರಿಗೆ ಪದ್ಮಾ ಸನ ಹಾಕಿ ನೆಟ್ಟಗೆ ಒಂದು ಸರಳ ರೇಷೆಯಲ್ಲಿ ಶರೀರವಿರುವಂತೆ ಕೂತಿರ್ರಿ. ಕೈಗಳನ್ನು ಮೊಣಕಾಲುಗಳ ಮೇಲಿಟ್ಟು, ಕಣ್ಣುಮುಚ್ಚಿ ದೃಷ್ಟಿಯನ್ನು ನಾಸಿಕಾ ಗ್ರದಮೇಲೆ ಇಡಿರಿ, ಮತ್ತು ಮನಸ್ಸಿನೊಳಗೆಯ ಜಪಮಾಡುತ್ತ ಇರ್ರಿ." ಈ ಪ್ರಕಾರ ನಿತ್ಯ ಎರಡೂ ಹೊತ್ತು ಮುಂಜಾನೆ ಸಂಜೆಗೆ ತಮ್ಮ ಎದುರಿಗೆ ಕೂಡ್ರಿಸಿ ಕೊಂಡು ನನ್ನ ಕಡೆಯಿಂದ ಜಪಮಾಡಿಸಿಕೊಳ್ಳುತ್ತಿದ್ದರು.

ಎಂಟುದಿನಗಳ ಮೇಲೆ ಅವರಂದರು, "ನಾಳೆ ನಿಮಗೆ ಅಂತರ್ದೃಷ್ಟಿ ಪ್ರಾಪ್ತವಾದೀತು, ಆದರೆ ಅಂಜಬೇಡರಿ. ಭಯವಾಗುವಂಥ ಅನೇಕ ಅಕ್ರಾಳ ವಿಕ್ರಾಳ ನಾನಾತರದ ಪದಾರ್ಥ ವ ಭೂತಗಳು ಪಸ್ಯೆರೆ ತೋರುವವು, ಆದರೆ ನಿಮ್ಮ ಶರೀರಕ್ಕೆ ಯಾರೂ ಸ್ಪರ್ಶಮಾಡಲಾರರು." ಮರುದಿನ ಅವರು ನನ್ನನ್ನು ತಮ್ಮ ಎದುರಿಗೆ ಕೊಡ್ರಿಸಿಕೊಂಡು ವ ಮಸ್ತಕದಮೇಲೆ ಕೈಯಿಟ್ಟು ನಿತ್ಯ ದಂತೆ ಅಭ್ಯಾಸ ಮಾಡಲಿಕ್ಕೆ ಕೂಡ್ರಿಸಿದರು. ಸ್ವಲ್ಪವೇಳೆಯಲ್ಲಿ ನನ್ನ ಕಣ್ಣಮುಂದೆ ಒಂದು ದೊಡ್ಡ ತೆಗ್ಗು ಇರುವದು ಎಂಬಂತೆ ಭಾಸವಾಯಿತು. ಸುತ್ತಲೂ ಕತ್ತಲು ಇತ್ತು. ಆ ತೆಗ್ಗಿನಲ್ಲಿ ನಾನು ಶೇರಿದೆನೆಂಬಂತೆ ಆಯಿತು. ಇಷ್ಟರಲ್ಲಿ ಮಹಾರಾಜರು ಮೇಲೆಬನ್ನಿರಿ ಮತ್ತು ಕಣ್ಣು ತೆರೆಯಿರಿ ಎಂದು ಹೇಳಿ, ಕೈಯಿಂದ ನನಗೆ ಒಂದೆರಡು ಸ್ಥಾನಗಳಲ್ಲಿ ಸ್ಪರ್ಶ ಮಾಡಿದರು. ಆ ಕೂಡಲೆ ನಾನು ಕಣ್ಣು ತೆರೆದೆನು. ಆಗ ಅವರು ನೋಡಿದ್ದೇನು ಎಂದು ಕೇಳಿದರು ಅದಕ್ಕೆ ಮೇಲೆ ಬರೆದ ವೃತ್ತಾಂತವನ್ನು ಹೇಳಿದೆನು. ಮುಂದೆ ಸಾಯಂಕಾಲಕ್ಕೂ ಅದೇ ಪ್ರಕಾರ ಕೂಡ್ರಿಸಿದರು. ಆಗ ನಾನು ಆ ತೆಗ್ಗಿನಲ್ಲಿ ಇಳಿದೆನು; ಆ ತೆಗ್ಗು ಸುರಂಗ ಮಾರ್ಗ ದಂತೆ ಬಹಳ ಉದ್ದವದೆ ಮತ್ತು ಅದರೊಳಗೆ ಅತಿಶಯ ಅಂಧಃಕಾರವಿದೆ ಎಂದು ತೋರಿತು. ನಡನಡುವೆ ಸ್ವಲ್ಪ ಪ್ರಕಾಶವು ಕಾಣಿಸುವದು ಆದರೆ ಕೂಡಲೆ ಪ್ರಕಾಶ

ಹೋಗಿ ಕತ್ತಲಾಗುವದು. ಆ ಪ್ರಕಾಶದಲ್ಲಿ ದೊಡ್ಡ ದೊಡ್ಡ ಹಾವುಗಳು, ತಲೆಗಳಿಲ್ಲದ ಕೆಲವು ಮನುಷ್ಯರು ಅಕ್ರಾಳ ವಿಕ್ರಾಳ ಬಾಯಿ ತೆರೆದು ನುಂಗಲಿಕ್ಕೆ ಬರುತ್ತಾವೋ ಎಂಬಂತೆ ಭಾಸವಾಗಿ ಅಂಜಿಕೆಯಾಗುತ್ತಿತ್ತು ಮತ್ತು ನನ್ನ ಮೈ ಬೆವರು ಬಿಟ್ಟಿತು. ಈ ಪ್ರಕಾರವು ಐದು-ಏಳು ದಿನ ತನಕ ನಡೆಯಿತು. ಆ ಸುರಂಗ ಮಾರ್ಗದಲ್ಲಿ ಅತಿಶಯ ಭಯಂಕರ ಭೀತಿ ಆಗತಕ್ಕಂಥಾ ಪ್ರಕಾರಗಳು ನಡನಡುವೆ ಬರುತ್ತಿದ್ದವು ಮತ್ತು ನನಗೆ ಭಯವೂ ಆಗುತ್ತಿತ್ತು. ಅಂಜಿಕೆಯಾಗುವ ಸಮಯ ಬಂತೆಂದರೆ ಮಹಾರಾಜರು ಸ್ಪರ್ಶಮಾಡಿ ಕಣ್ಣು ತೆರೆಯಲಿಕ್ಕೆ ಹೇಳುತ್ತಿದ್ದರು, ಮತ್ತು ಸ್ವಲ್ಪ ವೇಳೆಯೊಳಗೆ ಶಾಂತವಾದ ಮೇಲೆ "ಅದಕ್ಕೇನೂ ಭಯಪಡಬೇಡಿರಿ, ಅವು ನಿಮ್ಮ ಶರೀರಕ್ಕೆ ಸ್ಪರ್ಶ ಮಾಡಲಾರವು. ಸ್ವಲ್ಪ ದಿವಸಗಳಲ್ಲೇ ನೀವು ಇವುಗಳೊಳಗಿಂದ ಹೊರಬೀಳುವಿರಿ," ಎಂದು ಹೇಳುವರು. ಹೀಗೆ ಅನ್ನುತ್ತಾ ಆ ಸುರಂಗ ಮಾರ್ಗವನ್ನೇ ದಾಟಲಿಕ್ಕೆ ಎಂಟು ದಿನಗಳು ಹಿಡಿದವು. ಆ ಮೇಲೆ ಅವರಂದರು, "ಇನ್ನು ಮೇಲೆ ನಿಮಗ ಆ ಸುರಂಗ ಮಾರ್ಗವು ಎಂದೂ ಕಾಣಿಸದು.' ಮುಂದೆ ಪ್ರಕಾಶಯುಕ್ತ ಸ್ಥಳದಲ್ಲಿ ಎಲ್ಲಿಯೋ ಒಳ್ಳೆ ಸ್ಥಾನಕ್ಕೆ ಬಂದಿದ್ದೇನೆಂತ ಅನಿಸಿತು. ನಂತರ ಮಹಾರಾಜರಂದರು, "ಇನ್ನು ಮುಂದೆ ನಿಮಗೆ ಪ್ರಕಾಶವು ಹೆಚ್ಚು ಹೆಚ್ಚು ದಿನ ಕಾಣಿಸೀತು. ಒಮ್ಮೊಮ್ಮೆ ಬರೇ ಕತ್ತಲೂ ತೋರೀತು. ನೀವು ಇನ್ನು ಮೇಲೆ ಪ್ರತಿದಿವಸ ಮೂರು ವೇಳೆ ಅಭ್ಯಾಸ ಮಾಡಲಿಕ್ಕೆ ಬೇಕು. ಈಗ ಪ್ರತಿದಿವಸ ಏನು ಕಾಣಿಸುವದು ಅದನ್ನು ನಿತ್ಯ ಬರೆದಿಡಿರಿ" ಮುಂದೆ ಎರಡು ಮೂರು ದಿನ ಕತ್ತಲು ಹೊರತು ಮತ್ತೇನೂ ಕಾಣಿಸಲಿಲ್ಲ. ನಂತರ ಒಮ್ಮೆಲೆ ಪ್ರಕಾಶವು ಕಾಣಬಂತು. ಅದು ದಿನೇ ದಿನೇ ಹೆಚ್ಚುತ್ತಾ ಹೋಗಿ, ಸೂರ್ಯ ಪ್ರಕಾಶದಂತೆ ತೋರಿತು, ಮತ್ತು ಅದರ ಶೆಖೆಯೂ ಆಗುತ್ತಿತ್ತು. ದಾರಿಯಲ್ಲಿ ಕೆಲವು ಗಿಡಗಳು, ವನಗಳು, ಮತ್ತು ಕೆಲವು ದೇವಾಲಯಗಳು ಕಾಣಿಸುತ್ತಿದ್ದವು. ದೇವಾಲಯಗಳು ಮಾತ್ರ ಶಂಕರನವೇ ಬಹಳ ಕಾಣುತ್ತಿದ್ದವು. ಕೆಲವು ದಿನ ಏನೂ ತೋರುತ್ತಿದ್ದಿಲ್ಲ; ಆದರೂ ನಿತ್ಯ ಅಭ್ಯಾಸ ನಡೆಯುತ್ತಿತ್ತು. ಮುಂದೆ ಯಾವ ಪ್ರಕಾಶ ಕಾಣಿಸುತ್ತಿತ್ತು ಅದು ಬದಲಾಯಿತು. ಈಗಿನ ಪ್ರಕಾಶವು ಬೆಳದಿಂಗಳಿನಂತೆ ಶಾಂತವಾಗಿ ತೋರುವದು, ಅದರಲ್ಲಿ ಒಂದು ಪ್ರಕಾರದ ಆನಂದ ಮತ್ತು ಸಮಾಧಾನವು ಕಾಣಿಸುವದು. ಮುಂದೆ ಕೆಲವು ದಿನಗಳ ನಂತರ ಹೃದಯಸ್ಥಾನದಲ್ಲಿ ಕರೆಕಲ್ಲು ಕಾಣಿಸುತ್ತಿತ್ತು. ಅದರೊಳಗಿಂದ ಅಗ್ನಿ ಜ್ವಾಲೆಗಳು ಹೊರಡುವದು ತೋರಿತು. ಕೆಲವು ದಿನಗಳ ಮೇಲೆ ಆ ಜ್ವಾಲೆಗಳೊಳಗಿಂದ ಒಂದು ದಂಟು ಮೇಲೆ ಬಂತು. ಅದರೊಳಗಿಂದ ಬಾಳೆ ಹೂವಿನಂಥ ಮುಖ ಕೆಳಗೆ ಮಾಡಿದ ಅದೇ ಆಕಾರದ ಏನೊ ಕಾಣಬಂತು. ನಂತರ ಕೆಲವು ದಿನಗಳಲ್ಲಿ ಕೆಳಗೆ ತಿರುಗಿದ ಮುಖ ಮೇಲಕ್ಕೆ ಎತ್ತಿದಂತೆ ತೋರಿತು. ಆ ವೇಳೆ ಮಹಾರಾಜರಂದರು, "ಇದು ಹೃದಯದೊಳಗಣ ಕಮಲವು. ಅದು ಕೆಲವು ದಿನಗಳಲ್ಲಿ ಸ್ಪಷ್ಟ ಕಾಣಿಸಹತ್ತೀತು, ಮತ್ತು ಅದರ ಎಸಳುಗಳು ಅರಳುವವು." ಆ ಮೇಲೆ

ಅಗ್ನಿ ಜ್ವಾಲೆಗಳು ಬರುವದು ನಿಂತುಹೋಗಿ, ಆ ದಂಟಿನ ಕೆಳಗೆ ನೀರು ಇದ್ದಂತೆ ತೋರಿತು. ಆ ಎಸಳುಗಳು ಈಗ ಒಂದರ ಹಿಂದೆ ಒಂದು ಅರಳಿದವು ಮತ್ತು ದೇವಿಯ ಚಿತ್ರದಲ್ಲಿದ್ದ ಕೆಂಪು ಕಮಲದಂತೆ ಕಮಲವು ಕಾಣಬಂತು. ಮುಂದೆ ನೋಡುತ್ತಾ ನೋಡುತ್ತಾ ಕೆಲವು ದಿನಗಳ ಮೇಲೆ ಎಸಳುಗಳ ಮೇಲೆ ಕರೆ ಚಿಕ್ಕೆಗಳು ಕಾಣಿಸುತ್ತಿದ್ದವು. ಆ ಚಿಕ್ಕೆಗಳಲ್ಲಿ ಕೆಲವು ದಿನಗಳಲ್ಲಿ ಅಕ್ಷರಗಳೆಂಬಂತೆ ತೋರಿದವು. “ ಆ ಚಿಕ್ಕೆಗಳಲ್ಲಿ ನಿಜವಾಗಿ ಅಕ್ಷರಗಳೆ ಇವೆ ಏನು ?” ಎಂದು ನಾನು ಮಹಾರಾಜರಿಗೆ ಕೇಳಿದೆನು, ಅದಕ್ಕವರಂದರು, “ ಅವು ಆ ಕಮಲದ ಬೀಜಗಳಿವೆ, ” ಮತ್ತು ಅಂದರು, “ ನಾವು ಈಗ ನಾಭಿಕಮಲದ ಕಡೆಗೆ ಹೋಗೋಣ.” ನಂತರ ನಾನು ಇಷ್ಟು ದಿನ ನಡೆದಂತೆ ಅಭ್ಯಾಸವನ್ನು ನಡಿಸಿದೆ. ಮುಂದೆ ನಾನಾ ಪ್ರಕಾರದ ದೇವತೆಗಳ ದರ್ಶನಗಳಾದವು. ಕೆಲವು ಸಿಂಹದ ಮೇಲೆ, ಬೇರೆ ಕೆಲವು ವ್ಯಾಘ್ರದ ಮೇಲೆ, ಮತ್ತು ಕೆಲವು ಕಾಣಲಿಕ್ಕೆ ಭಯಂಕರವಾಗಿದ್ದವು ನಂತರ ಮನುಷ್ಯರಂಥ ಪಿಶಾಚಿಗಳು ಕಾಣಿಸಿದವು. ಕೆಲವು ನಮ್ಮಂತೆ ಮನುಷ್ಯರೂ ಕಾಣಿಸಿದರು. ಇದು ಹೀಗೆ ಯಾಕೆ ಆಗುವದೆಂತ ಮಹಾರಾಜರಿಗೆ ಕೇಳಿದಾಗ ಅವರಂದರು, ‘ ಇವೆಲ್ಲಾ ದೇವಿಯ ರೂಪಗಳೆ ಇದ್ದಾವೆ. ’ ಮುಂದೆ ಪಿಶಾಚ್ಚ ಲೋಕವಿತ್ತು. ಅದರ ಮುಂದೆ ಪಿತೃಲೋಕವಿತ್ತು. ಇನ್ನು ಮುಂದೆ ನಿಮಗೆ ಗಂಧರ್ವ ಲೋಕವು ಕಾಣಿಸುವದು, ಆ ನಂತರ ನಾವು ನಾಭಿಕಮಲದ ಕಡೆಗೆ ಹೋಗುವಾ.

ಮುಂದೆ ನಾನು ನಿತ್ಯ ದಿನಕ್ಕೆ ಮೂರು ಹೊತ್ತು ಅಭ್ಯಾಸ ಮಾಡುತ್ತಿದ್ದೆ. ಕೆಲವು ದಿನಗಳಲ್ಲಿ ನದಿಯ ಒಂದು ಸುಂದರ ಪಾತ್ರವು ಕಾಣಿಸಿತು. ಆ ನದಿಗೆ ಎರಡೂ ದಂಡೆಗಳಿಗೆ ಸಂಗಮರವರಿ ಕಲ್ಲಿನ ಘಾಟ ಕಟ್ಟಿದ್ದವು. ಅಲ್ಲಿ ನಾನಾತರದ ಪುಷ್ಪಲತಿಕೆಗಳು ಕಾಣುತ್ತಿದ್ದವು. ಆ ನದಿಯ ಮೇಲೆ ವರ್ಣಿಸಲಾಗದಂಥಾ ಸುಂದರ ಸ್ತ್ರೀಯರು ಸುಂದರ ಭರಜರಿಯ ಸೀರೆಗಳನ್ನುಟ್ಟು ಸ್ನಾನಕ್ಕೆ ಬಂದಿದ್ದರು. ಹಾಗೆಯೇ ದೈದೀಪ್ಯಮಾನ ಪುರುಷರೂ ಸ್ನಾನಕ್ಕೆ ಬಂದಿದ್ದರು. ನದೀತೀರದಲ್ಲಿ ಕೆಲವು ಊರುಗಳು ಇದ್ದವು. ಅವು ಅತ್ಯಂತ ಸುಶೋಭಿತ ವ ರಮಣೀಯವಾಗಿದ್ದವು. ಕೆಲವು ಗೋಪುರಗಳು ಕಾಣುತ್ತಿದ್ದು, ಅವುಗಳ ಮೇಲೆ ಭಂಗಾರದ ಕಲಶಗಳಿದ್ದವು. ಈ ರಚನೆಯು ಬಹಳ ಮೋಹಕದಿದ್ದು ಮನಸ್ಸಿಗೆ ಬಹಳ ಆನಂದವಾಗುತ್ತಿತ್ತು; ಅದನ್ನು ವರ್ಣಿಸಲಿಕ್ಕೆ ಶಕ್ಯವಿಲ್ಲ. ಪ್ರತ್ಯಕ್ಷ ನೋಡಿದ ಹೊರತು ಕಲ್ಪಿಸಲಿಕ್ಕೆ ಸಾಧ್ಯವಿಲ್ಲ. ಇದು ಏನದೆ ಅಂತ ಕೇಳಿದಾಗ ಮಹಾರಾಜರಂದರು, ‘ ಇದು ಗಂಧರ್ವ ಲೋಕವು. ಸ್ತ್ರೀಯರು ಅಪ್ಸರೆಯರು ಮತ್ತು ಪುರುಷರು ಗಂಧರ್ವರು. ’

ಮುಂದೆ ನಾನು ನಾಭಿಕಮಲದ ಕಡೆಗೆ ಹೋದೆ. ಅಲ್ಲಿ ಮೊದಲು ಅಗ್ನಿಯ ಭಯಂಕರ ಜ್ವಾಲೆಗಳು ಕಾಣಿಸುತ್ತಿದ್ದವು. ಮತ್ತೆ ಕೆಲವು ದಿನಗಳ ಮೇಲೆ

ನಾಲಿಗೆಯನ್ನು ಹಿಂದೆ ತಿರುಗಿಸಿ ಅದರ ತುದಿಯಿಂದ ತಾಲುಸ್ಥಾನಕ್ಕೆ ಸ್ಪರ್ಶ ಮಾಡಿದೆ. ಆದರೆ ಆ ಅಮೃತದ ಒಂದು ಬಿಂದು ಸಹಾ ನನಗೆ ಸಿಗಲಿಲ್ಲ. ಅದು ತಮ್ಮ ಇಚ್ಛೆವಿರುದ್ಧವಾಗುವದೆಂದು ಆ ಪ್ರಯತ್ನಗಳನ್ನು ನಾನು ಬಿಟ್ಟುಕೊಟ್ಟೆ.

ಶಿವರಾತ್ರಿಯ ದಿನ ಕುಂಡಲಿನಿಯು ಒಮ್ಮಿಂದೊಮ್ಮೆ ದಶಮದ್ವಾರ ಅಂದರೆ ಭ್ರೂಮಧ್ಯ ಪರ್ಯಂತ ಏರಿದಳು, ಮತ್ತು ಅದರೊಳಗಿಂದ ಸಹಸ್ರದಲದ ತನಕ ಹೋಗಿ ಸುರುಳಿ ಸುತ್ತಿ ಕೂತಳು. ನನಗೆ ಅತ್ಯಾನಂದವಾಯಿತು, ಮತ್ತು ಶಿವಪಾರ್ವತಿಯ ದರ್ಶನವಾಗಬೇಕೆಂದು ಇಚ್ಛೆಯಾಯಿತು; ಅಂತ ನಾನು ಹೃದಯಸ್ಥಾನದಲ್ಲಿರುವ ಅನಾಹತ ಚಕ್ರದ ಕಡೆಗೆ ಲಕ್ಷ ಹಚ್ಚಿದೆ. ಅಲ್ಲಿ ಶಿವ-ಪಾರ್ವತಿಯವರದರ್ಶನ ತಕ್ಕೊಂಡೆ, ಮತ್ತು ಶಂಕರನ ಜಡೆಯೊಳಗಿಂದ ಹೊರ ಬೀಳುವ ಗಂಗೆಯಲ್ಲಿ ನಾನು ಸ್ನಾನ ಮಾಡಿದೆ.

ನಾನು ಬಹಳಸಾರಿ ನೀಲಿಛಾಯೆಯ ವರ್ಣವನ್ನು ಕಾಣುತ್ತಿರುತ್ತೇನೆ.

---

ದಾದರದಿಂದ ತಾ. ೮ ಮೇ ೧೯೩೨ ದಿನ ಬರೆದ ಪತ್ರದೊಳಗಿನ ಮಜಕೂರು.

ನನಗೆ ಪಂಡಿತರ ಕಡೆಯಿಂದ ಕುಂಡಲಿನಿಯನ್ನು ಏರಿಸಲಿಕ್ಕೆ ಕಲಿಸಿದರು. ಹಾಗೆ ಮಾಡುತ್ತಿರುವಾಗ ನನಗೆ ಬಂದ ಅನುಭವಗಳನ್ನು ವರ್ಣಿಸುತ್ತೇನೆ.

ನಾನು ಪದ್ಮಾಸನವನ್ನು ಹಾಕಿ ಕೂಡುತ್ತೇನೆ ಜನನೇಂದ್ರಿಯದೊಳಗಿನಿಂದ ವಾಯುವನ್ನು ಮೇಲೆ ತಕ್ಕೊಂಡನಂತರ ಕುಂಡಲಿನಿಯು ಸ್ವಾಧಿಷ್ಠಾನ ಚಕ್ರದಪರ್ಯಂತ ಮೇಲಕ್ಕೆ ಏರುವಳು, ಮತ್ತು ಅಲ್ಲಿ ಆರು ಎಸಳಿನ ಕೆಂಪು ವರ್ಣದ ಕಮಲವು ಕಾಣಿಸುವದು. ಅಲ್ಲಿ ಬ್ರಹ್ಮದೇವರು ಕೂತಿರುವದು ತೋರುತ್ತದೆ ಅವನು ತನ್ನ ಮಸ್ತಕದ ಮೇಲೆ ಕೈಯಿಟ್ಟು ನನಗೆ ಒಂದು ಕಮಲವನ್ನು ಕೊಡುತ್ತಾನೆ. ಆ ಕಮಲವನ್ನು ನಾನು ಕೈಯಲ್ಲಿ ಹಿಡಕೊಂಡು ಮೂಲಾಧಾರ ಚಕ್ರದ ಸ್ಥಾನಕ್ಕೆ ಹೋಗುತ್ತೇನೆ. ಅಲ್ಲಿ ಬೇರೆ ವರ್ಣದ ನಾಲ್ಕು ಎಸಳುಗಳುಳ್ಳ ಕಮಲವು ಕಾಣಿಸುವದು. ಆ ನಾಲ್ಕು ಎಸಳುಗಳ ಮೇಲೆ ಯಂ, ರಂ, ಲಂ, ವಂ ಹೀಗೆ ಅಕ್ಷರಗಳು ಕಾಣಿಸುತ್ತವೆ. ಅಲ್ಲಿಂದ ನಾನು ಮೇಲಕ್ಕೆ ಮಣಿಪೂರ ಚಕ್ರದ ಪರ್ಯಂತ ಹೋಗುತ್ತೇನೆ. ಅಲ್ಲಿ ನನಗೆ ಹತ್ತು ಎಸಳುಳ್ಳ ಕಮಲವು ಕಾಣಿಸುವದು. ಅಲ್ಲಿ ಶ್ರೀವಿಷ್ಣು ಮತ್ತು ಅವನ ಪಾದ ಸಂವಾಹನ ಮಾಡುವ ಲಕ್ಷ್ಮಿ ಇವರಿಬ್ಬರ ದರ್ಶನವನ್ನು ನಾನು ತಗೊಳ್ಳುತ್ತೇನೆ, ಶ್ರೀವಿಷ್ಣು ನನಗೆ ಆಶೀರ್ವಾದವನ್ನು ಕೊಡುತ್ತಾರೆ. ಮತ್ತು ತನ್ನ 'ಸುದರ್ಶನ ಚಕ್ರವನ್ನು ನನ್ನ ಕೈಯಲ್ಲಿ ಕೊಟ್ಟು ಮೇಲಿನ ಅನಾಹತ ಚಕ್ರದ ಕಡೆಗೆ ಹೋಗಲಿಕ್ಕೆ ಹೇಳು

ಆದರೆ ಮನೆಯಲ್ಲಿ ಮಾತ್ರ ಪ್ರಕಾಶ ಒಮ್ಮೊಮ್ಮೆ ಅಂಧಕಾರ ಇದಕ್ಕೂ ಹೆಚ್ಚಿಗೆ ಏನೂ ಕಾಣಿಸುತ್ತಿದ್ದಿಲ್ಲ. ಮುಂದೆ ಮಹಾರಾಜರು ಒಂದು ದಿನ ಹೇಳಿದರು, "ಇವತ್ತು ನಿಮಗೆ ಕುಂಡಲಿನೀ ತೋರಿಸುತ್ತೇನೆ. ಯೋಗ ಸಾಧನದಲ್ಲಿ ಕುಂಡಲಿನಿಯು ಎಲ್ಲಕ್ಕೂ ಹೆಚ್ಚಿನ ಮಹತ್ವದ ಸ್ಥಾನವು. ನೀವು ಅಭ್ಯಾಸಕ್ಕೆ ಕೂಡ್ರು ಗಣಪತಿಯ ಕೆಳಗೆ ಹೋಗಿರಿ."

ಅಭ್ಯಾಸಕ್ಕೆ ಕೂತವೇಳೆ ಬಹಳ ವೇಳೆಗೆ ಗಣಪತಿಯ ಕೆಳಗೆ ಟೊಂಕದ ಎಲುಬಿನ ಹತ್ತರ, ಒಂದು ತ್ರಿಕೋನದ ತೆಗ್ಗು ಕಾಣಿಸಿತು. ಅದರೊಳಗಿಂದ ಪ್ರಖರವಾದ ಅಗ್ನಿಜ್ವಾಲೆಗಳು ಹೊರಡುತ್ತಿದ್ದವು. ಮೈಗೆ ಸುಟ್ಟಿಟ್ಟಂತೆ ಉರಿಯುತ್ತಿತ್ತು. ಸರ್ವಾಂಗಕ್ಕೆ ಬೆವರು ಬಿಟ್ಟಿತು. ಹಿಂದೆ ಎರಡು ಮೂರು ಸರ್ತಿ ಹೀಗೆಯೇ ಅಗ್ನಿಜ್ವಾಲೆಗಳನ್ನು ಕಂಡಿದ್ದೆ. ಆದರೆ ಅವು ಇಷ್ಟು ಪ್ರಖರವಿದ್ದಿಲ್ಲ. ಈ ಪ್ರಕಾರ ನಿತ್ಯ ಅಗ್ನಿಜ್ವಾಲೆಗಳನ್ನು ನೋಡುತ್ತಾ ನೋಡುತ್ತಾ, ಮುಂದೆ ಕೆಲವು ದಿನಗಳಲ್ಲಿ ಅಗ್ನಿಯು ಕಾಣದಂತಾಯಿತು. ಆ ಮೇಲೆ ಅದು ಕುಂಡವಿದ್ದಿತೆಂದು ತಿಳಿಯಿತು ಆ ಕುಂಡದೊಳಗಿಂದ ಎರಡು ಜಿನುಗಸ ನಳಗಳು ಒಂದಕ್ಕೆ ಹತ್ತಿ ಒಂದು, ಹೀಗೆ ಜೋಡಿಯಾಗಿ ಮೇಲೆ ಹೋದದ್ದು ಕಾಣಿಸಿದವು. ನಳಗಳ ನಡುವಿನಲ್ಲಿ ನಳದಷ್ಟು ಅಗಲದ ಪೊಳ್ಳು ಇತ್ತು. ನಳದ ಕೆಳಗೆ ಕರೇ ವರ್ಣದ ಒಂದು ಹಾವು ಆ ನಳಕ್ಕೆ ಸುತ್ತಿಕೊಂಡು ಇದ್ದದ್ದು ತೋರುತ್ತಿತ್ತು. ಅದರ ಮುಖವು ಕೆಳಗಿನ ಕಡೆಗೆ ಇತ್ತು. ಅದನ್ನು ನೋಡಿದ ಮೇಲೆ, ಇದು ಕಾಣಿಸುವದು ಏನು ಎಂದು ಮಹಾರಾಜರಿಗೆ ಕೇಳಿದಾಗ, ಮಹಾರಾಜರಂದರು, "ಯಾವ ಎರಡು ಜಿನುಗಸ ನಳ ಕಾಣಿಸಿದವೋ ಅವು ಇಡಾಪಿಂಗಳ ಈ ನಾಡಿಗಳು ಇದ್ದು ಮಧ್ಯದ ಪೊಳ್ಳಿನದು ಸುಷುಮ್ನಾ ನಾಡಿ ಇರುತ್ತದೆ. ಈ ಮೂರು ನಾಡಿಗಳೇ ಮುಖ್ಯವಾಗಿರುತ್ತವೆ. ನಮ್ಮ ಮೂಗಿನಿಂದ ಯಾವ ಶ್ವಾಸೋಚ್ಛ್ವಾಸ ನಡಿಯುತ್ತದೆ, ಅವು ಇವೇ ನಾಡಿಗಳು. ಕೆಳಗೆ ಯಾವ ಸರ್ಪ ಕಂಡಿದಿ ಅದು ಸರ್ಪವಲ್ಲ ಕುಂಡಲಿನಿ ಅನ್ನುವಂಥಾದ್ದು ಇದೇ. ಇದು ನಮ್ಮ ಶರೀರದಲ್ಲಿ ನಿದ್ರಿಸ್ತ ಇರುತ್ತದೆ. ಅದರ ಮುಖವು ಗುದದ್ವಾರದ ಹತ್ತರ ಇರುವದು. ಅದು ನಿತ್ಯ ಅಮೃತ ಶೋಷಣ ಮಾಡುತ್ತಿರುವದು. ಅದು ಜಾಗೃತವಾಯಿತೆಂದರೆ ಮನುಷ್ಯನು ಯೋಗಿಯಾಗುತ್ತಾನೆ. ಅದನ್ನು ಜಾಗೃತ ಮಾಡಲಿಕ್ಕೆ ಅತಿಶಯ ಜಾಗೃತೆಯಿಂದ ಮತ್ತು ಯೋಗಮಾರ್ಗದ ಪಥ್ಯದಿಂದ ಆಚರಣೆಮಾಡಬೇಕು. ಅದನ್ನು ಜಾಗೃತ ಮಾಡಿ ಅದು ಮೇಲ್ಕಡೆಗೆ ಮುಖ ತಿರಿಗಿಸದಿದ್ದರೆ, ಮನುಷ್ಯನು ಜೀವಂತನಿರಲಾರನು. ಆದ್ದರಿಂದ ಅದನ್ನು ಜಾಗೃತ ಮಾಡುವವನ ಮೈಯಲ್ಲಿ ಬಹಳ ಸಾಮರ್ಥ್ಯವು ಇರಬೇಕಾಗುವದು. ಈ ಕುಂಡಲಿನಿಯು ಸುಷುಮ್ನಾ ನಾಡಿಯೊಳಗಿಂದ ಹ್ಯಾಗೆ ಹ್ಯಾಗೆ ಮೇಲೆ ಏರುತ್ತದೆ, ಹಾಗೆ ಹಾಗೆ ಮನುಷ್ಯನ ಮೈಯಲ್ಲಿ ಸಾಮರ್ಥ್ಯವು ಬೆಳೆಯುತ್ತ ಹೋಗುವದು. ಈ ಸಂಬಂಧ ಸವಿಸ್ತರ ನಿಮಗೆ ಮುಂದೆ ಹೇಳುವೆನು. ಈಗ ನಾವು ದ್ವಿದಲ

ಚಿತ್ರದಕಡೆ ಹೋಗೋಣ." ನಂತರ ಅಭ್ಯಾಸಕ್ಕೆ ಕೂಡ್ರುವ ವೇಳೆಗೆ ಮಹಾರಾಜರು ಅಂದರು, "ಈಗ ನೀವು ನಿಮ್ಮ ದೃಷ್ಟಿಯನ್ನು ಮೇಲಕ್ಕೆ ಒಯ್ಯಬೇಕು ಅಂದರೆ ನಾಸಿಕಾಗ್ರ ಮತ್ತು ಭ್ರೂಮಧ್ಯ ಇವುಗಳ ನಡುವೆ ನೋಡತಕ್ಕದ್ದು." ಆ ದಿನದಿಂದ ಈ ಅಭ್ಯಾಸವು ನಡೆಯಿತು.

ಮಧ್ಯದಲ್ಲಿ ಆಷಾಢಿ ಏಕಾದಶೀ ಬಂತು. ಆ ಹೊತ್ತು ಮಹಾರಾಜರು ಕೂತಿರುವಾಗ ಸಂಜೆ ಐದು ಹೊಡೆಯುತ್ತಿರುವಾಗ, ಮಹಾರಾಜರ ಮೈಮೇಲೆ ಬುಕ್ಕಾದ ವರ್ಷಾವ ಆಗಲಿಕ್ಕೆ ಹತ್ತಿತು. ಆದರೆ ಬುಕ್ಕಾ ಎಲ್ಲಿಂದ ಬೀಳುತ್ತದೆ ಎಂಬುದು ಮಾತ್ರ ತಿಳಿಯುತ್ತಿದ್ದಿಲ್ಲ. ಆ ವೇಳೆ ನಾವು ಮೂರು ನಾಲ್ಕು ಮಂದಿ ಅಲ್ಲಿದ್ದೆವು, ಬುಕ್ಕಾ ಮೈಮೇಲೆ ಬಹಳ ಕೂಡಿದ ಬಳಿಕ, ನಾವು ಮಹಾರಾಜರಿಗೆ ಅಂದೆವು "ಇವತ್ತು ಏಕಾದಶಿ ಇದೆ, ಅಂತ ಈ ಬುಕ್ಕಾ ನಿಮ್ಮ ಮೇಲೆ ಬೀಳುತ್ತಿರುವದು. ಹಾಗಾದರೆ ನಮಗೆ ವಿಠೋಬನ ದರ್ಶನ ಮಾಡಿಸಿರಿ." ಆಗ್ಗೆ ಮಹಾರಾಜರಂದರು, "ಜಾಗೆಯವರಿಗೆ ಏನೂ ದರ್ಶನ ಸಿಗಲಾರದು. ಆದರೆ ನೀವು ಅಭ್ಯಾಸ ಮಾಡುತ್ತಿರುವಾಗ, ಕೂತು ಅಂತರ್ದೃಷ್ಟಿ ಮಾಡಿದರೆ ವಿಠೋಬನ ದರ್ಶನವಾಗುವದು." ಆ ಪ್ರಕಾರ ನಾನು ತತ್ಕಾಲ ಆಸನ ಹಾಕಿ ಕೂತೆನು. ಸ್ವಲ್ಪ ಹೊತ್ತಿನ ಮೇಲೆ ನನಗೆ ಪಂಢರಪುರದ ದೇವರ ಗುಡಿ ಕಾಣಿಸಿತು. ಮುಂದೆ ಗುಡಿಯಲ್ಲಿ ಪ್ರವೇಶಿಸಿದ ಮೇಲೆ ಅಲ್ಲಿ ಅತಿಶಯ ಗರ್ದಿ ಆದದ್ದೇ ಕಂಡೆನು. ನಾನು ಆ ಗರ್ದಿಯೊಳಗೆ ಕೂತು ಮುಂದೆ ಸರಿಯುತ್ತ ಹೋದೆ. ಆಗ ನನಗೆ ಪಾಂಡುರಂಗನ ಮೂರ್ತಿಯು ಕಾಣಿಸಿತು. ಧ್ಯಾನದಲ್ಲಿ ಕಂಡ ಈ ಎಲ್ಲಾ ವೃತ್ತಾಂತವನ್ನು ನಾನು ಎದ್ದ ಮೇಲೆ ಮಹಾರಾಜರಿಗೆ ವರ್ಣಿಸಿ ಹೇಳಿದೆ. ಆಗ ಅವರಂದರು, "ನೀವು ವಿಠೋಬನ ಪಾದದಲ್ಲಿ ತಲೆ ಇಟ್ಟದ್ದಕ್ಕೆ ನಿಮ್ಮ ಕಪಾಲಕ್ಕೆ ಬುಕ್ಕಾ ಹತ್ತಿರುವದು. ಅಲ್ಲಿರುವವರೆಲ್ಲರೂ ನನ್ನ ಹಣೆಗೆ ಹತ್ತಿರುವ ಬುಕ್ಕಾ ನೋಡಿದರು. ಮತ್ತು ಕನ್ನಡಿಯಲ್ಲಿ ನೋಡಿ ನನಗೂ ನಿಶ್ಚಯವಾಯಿತು." ಆ ಮೇಲೆ ಮಹಾರಾಜರು ಮತ್ತೆ ಹೇಳಿದರು, "ನೀವು ಇಷ್ಟು ದಿವಸ ಅಭ್ಯಾಸ ಮಾಡಿದ್ದರ ಫಲವು ಇವತ್ತು ನಿಮಗೆ ಸಿಕ್ಕಿತು." ಈ ಪ್ರಕಾರ ನಡನಡುವೆ ಹೀಗೆ ಯಾವದಾದರೂ ಚಮತ್ಕಾರ ಮಾಡಿ ಅವರು ತೋರಿಸುವರು.

ಮೇಲೆ ಹೇಳಿದ ಪ್ರಕಾರ ಕೆಲವು ದಿನ ಅಭ್ಯಾಸ ಮಾಡಿದ ಮೇಲೆ ಮುಂದೆ ದ್ವಿದಲ ಚಕ್ರ ಕಾಣಹತ್ತಿತು. ಅದು ಹ್ಯಾಗೆ ಕಾಣಿಸಿತು ಎಂದು ಮಹಾರಾಜರು ಕೇಳಿದ್ದಕ್ಕೆ ನಾನು ಅಂದೆ, "ಎರಡು ಕಡೆಗೆ ಎರಡು ಎಸಳುಗಳು ಮಾತ್ರ ಕಾಣಿಸುತ್ತವೆ." ಆ ಮೇಲೆ ಅವರಂದರು, "ಇದು ದ್ವಿದಲ ಚಕ್ರ, ಇಲ್ಲಿ ಗುರುಸ್ಥಾನವದೆ. ನಿಮಗೆ ಯಾವಾಗ ಗುರುದರ್ಶನ ಮಾಡಿಕೊಳ್ಳುವ ಇಚ್ಛೆಯಾಗುವದೋ, ಆಗ ಅಲ್ಲಿ ಮನಸ್ಸನ್ನು ಹಚ್ಚಬೇಕು. ಅಂದರೆ ಗುರುವಿನ ದರ್ಶನವಾಗುವದು." ಆದರೆ

ಈಗ ನಾವು ಮುಂದಕ್ಕೆ ಹೋಗೋಣ. ಮುಂದೆ ಅಭ್ಯಾಸವನ್ನು ಮಾಡುತ್ತಾ ಒಂದು ಕಣ್ಣು ಕಾಣಿಸಿತು. ಅದು ಹಣೆಯ ಮೇಲೆ ಇರಬೇಕು ಎಂದೆನಿಸಿತು. ಆ ಕಣ್ಣು ಯಾರದು ಅಂತ ಮಹಾರಾಜರಿಗೆ ಕೇಳಿದಾಗ, "ಇದು ಶ್ರೀ ಶಂಕರರ ತೃತೀಯ ನೇತ್ರ" ಹೀಗಂದು, ಮಹಾರಾಜರು ಮತ್ತೆ ಅಂದರು, ಈಗ ನಾವು ಇದರ ಮುಂದೆ ಹೋಗೋಣ. ಇವೆಲ್ಲಾ ಸ್ಥಾನಗಳನ್ನು ನಿಮಗೆ ತೋರಿಸಿಡುತ್ತೇನೆ. ನೀವು ಅವುಗಳ ಮೇಲೆ ಲಕ್ಷವಿಟ್ಟು ಒಂದೊಂದು ಸ್ಥಾನವನ್ನು ಹಸ್ತಗತ ಮಾಡಿಕೊಳ್ಳಬೇಕು. ಅದರ ವಿನಹಾ ಆ ಜ್ಞಾನದ ಶಕ್ತಿಯು ನಿಮಗೆ ಪ್ರಾಪ್ತವಾಗಲಾರದು. ಇವೆಲ್ಲವನ್ನು ನಿಮಗೆ ತೋರಿಸುವದಕ್ಕೆ ಕಾರಣ ಇಷ್ಟೇ ಅಲ್ಲ, ನಾನು ಇಲ್ಲದಾಗ್ಗೆ ನೀವು ನಿಮ್ಮ ಅಭ್ಯಾಸ ಹೆಚ್ಚಿಸಿದಿರೆಂದರೆ ಮತ್ತು ನಿಮ್ಮ ಲಿಂಗದೇಹ ತಪ್ಪಿ ಎಲ್ಲ್ಯಾದರೂ ಹೋದರೂ, ಅದಕ್ಕೆ ಕೂಡಲೇ ಈ ಸಂಗತಿಗಳ ಸ್ಮೃತಿಯಾಗಿ, ಪುನಹಾ ಅದು ಸ್ವಸ್ಥಾನಕ್ಕೆ ಬರಬೇಕು; ಇಷ್ಟರ ಸಲುವಾಗಿ ನಿಮಗೆ ಇವೆಲ್ಲಾ ಬೇರೆ ಬೇರೆ ರಸ್ತೆಗಳನ್ನು ತೋರಿಸಿ ಕೊಟ್ಟಿದ್ದೇನೆ. ಈಗ ನನ್ನ ಗರಜಿಲ್ಲಾ, ನೀವೇ ಅಭ್ಯಾಸ ಮಾಡಿ ನಿಮ್ಮ ದೇಹದ ಸಾರ್ಥಕ ಮಾಡಿಕೊಳ್ಳಬೇಕು. ನಿಮಗೆ ಯಾವ ಪ್ರಕಾರದ್ದು ಹಾನಿ ಆಗಲಾರದು. ಈಗ ಮುಖ್ಯವಾದ ಒಂದೇ ಸ್ಥಾನವನ್ನು ತೋರಿಸುವದು ಉಳಿದದೆ. ಅದು ಸಹಸ್ರದಲ ಚಕ್ರವು. ನಾವು ನಾಳಿನಿಂದ ಆ ಮಾರ್ಗಕ್ಕೆ ಹೋಗುವಾ.

ಮರುದಿನದಿಂದ ಅಭ್ಯಾಸ ಸುರು ಆಯಿತು. ಒಂದೆರಡು ಸ್ಥಾನಗಳು ಕಾಣಿಸಿದವು. ಆದರೆ ಅವು ಸ್ಪಷ್ಟ ಕಂಡಿಲ್ಲಾದ್ದರಿಂದ ಅವುಗಳ ಸ್ಪಷ್ಟೀಕರಣ ಮಾಡಲಿಕ್ಕೆ ಬರುವಂತಿಲ್ಲ. ಆದರೂ ಅದರಲ್ಲಿ ಓಂಕಾರ ಈ ಸ್ಥಾನವಿತ್ತು. ಓಂಕಾರಕ್ಕೂ ಮುಂದೆ ಹೋದಮೇಲೆ, ಅಲ್ಲಿಂದ ಬಹಳ ದೂರದಮೇಲೆ, ಒಂದು ಭವ್ಯವಾದ ದೇವಾಲಯವು ಕಾಣಿಸುತ್ತಿತ್ತು. ಅದರಲ್ಲಿ ಸಹಸ್ರದಲಕಮಲ ಇರಬಹುದೆಂತ ಕಾಣಿಸುತ್ತದೆ ಕಾರಣ ಅದಕ್ಕೆ ಎಣಿಸಲಾರದಷ್ಟು ಎಸಳುಗಳಿದ್ದವು. ಅದರಮೇಲಿಂದ ಅದು ಇದೇ ಅಂತ ಅನಿಸಿತು. ಅದು ಇಷ್ಟು ಪ್ರಕಾಶಮಯವಿತ್ತು, ಅಂತರ್ದೃಷ್ಟಿಯಿಂದ ಸಹಾ ಅದು ನೋಡಲಿಕ್ಕೆ ಆಗುತ್ತಿದ್ದಿಲ್ಲ. ಹೀಗಿದ್ದು ಅದರ ಹತ್ತರ ಹೋಗುವದು ನನ್ನಂಥಾ ಹೊಸ ಅಭ್ಯಾಸಿ ಮನುಷ್ಯನಿಗೆ ಬಹಳ ಕಠಿಣ ಕಾರ್ಯವಾಗಿತ್ತು. ಆದರೆ ಮಹಾರಾಜರ ಕೃಪೆಯಿಂದ ದೂರದಿಂದಾದರೂ ಆ ಸ್ಥಾನದ ದರ್ಶನದ ಯೋಗವು ಬಂತು. ಅಲ್ಲಿಯ ತೇಜವು ನೀಲವರ್ಣದ್ದಿದ್ದು ಬಹಳೇ ಪ್ರಕಾಶಮಯವಾಗಿ ಭಾಸಿಸುತ್ತಿತ್ತು. ಆ ಸ್ಥಾನವನ್ನು ನೋಡಲಿಕ್ಕೆ ಸ್ವಲ್ಪ ಕಡಿಮೆಯಾಗಿ ಎರಡುವರೆ ತಿಂಗಳು ಹಿಡಿದವು. ಆಮೇಲೆ ಮಹಾರಾಜರಂದರು, "ಈಗ ನಿಮಗೆ ಎಲ್ಲಾ ಸ್ಥಾನಗಳನ್ನು ತೋರಿಸಿ ಆಯಿತು. ಈಗ ಯಾವ ಪ್ರಕಾರದ್ದು ಭೀತಿ ಮನಸ್ಸಿನಲ್ಲಿ ಇರಗೊಡದೆ ನಿತ್ಯ ಚಲೋದಾಗಿ ಅಭ್ಯಾಸ ಮಾಡುತ್ತ ಹೋಗಿರಿ. ಈಗ ಒಂದೇ ಸ್ಥಾನವು ನಿಮಗೆ ತೋರಿಸುವದು ಉಳದದೆ.

ಅದು ವಿರುಷ್ಟ ಚಕ್ರ. ಕಂಠದಲ್ಲಿರುವಂಥಾದ್ದು. ಅದು ಬೇಕಂತ ತೋರಿಸಲಿಲ್ಲ. ಅದನ್ನು ಮುಂದೆ ಎಂದಾದರೂ ತೋರಿಸುವೆನು. ಈಗ ನಿತ್ಯ ನೀವು ಅಭ್ಯಾಸಕ್ಕೆ ಕೂತಿರುವಾಗ ಹೃದಯದಿಂದ ಆರಂಭ ಮಾಡಿರಿ. ಅಲ್ಲಿ ನೀವು ನಾನಾ ಪ್ರಕಾಶ ಗಳನ್ನು ಕಾಣುವಿರಿ. ಮೊದಲು ಸೂರ್ಯ ಪ್ರಕಾಶ ಕಾಣುವದು. ಆ ಪ್ರಕಾಶ ದಲ್ಲಿ ನಿಮಗೆ ತ್ರಾಸ ಅನಿಸೀತು; ಆದರೆ ಅದನ್ನು ಬಿಟ್ಟು ಮುಂದೆ ನಿಮಗೆ ಚಂದ್ರ ಪ್ರಕಾಶವು ತೋರೀತು. ಆ ಸಮಯದಲ್ಲಿ ಶಾಂತ ವ ಆನಂದ ವೃತ್ತಿಯಾದೀತು, ಮತ್ತು ಎಂದಾದರೂ ಎಷ್ಟು ಹೊತ್ತು ಬಿಸಲಿನಲ್ಲಿ ಇದ್ದರೂ ನಿಮಗೆ ಅದರಿಂದ ತೊಂದರೆಯಾಗಲಾರದು. ಮುಂದೆ ನೀಲವರ್ಣದ ಪ್ರಭೆಯು ಕಾಣಿಸುವದು. ಆ ಪ್ರಭೆಯು ಮುಂದೆ ಮುಂದೆ ಸತೇಜವಾಗಿ ಕಾಣುವದು. ಅನಂತರ ಶ್ರೀಕೃಷ್ಣ ಪರಮಾತ್ಮನ ದರ್ಶನವಾಗುವದು. ಆ ಮೂರ್ತಿಯನ್ನು ನೋಡುವ ಅಭ್ಯಾಸ ವನ್ನು ಮಾಡಿಕೊಂಡರೆ, ಸರ್ವಯೋಗವು ಸಾಧ್ಯವಾಗುವದು.

ಅವರು ಹೇಳಿದಂತೆ ಮುಂದೆ ಕೆಲವು ದಿವಸ ಅಭ್ಯಾಸವನ್ನು ಮಾಡಿದೆನು. ಆಗ ಒಮ್ಮೆ ಸೂರ್ಯ ಪ್ರಕಾಶ, ಒಮ್ಮೆ ಚಂದ್ರಪ್ರಕಾಶ, ಒಮ್ಮೊಮ್ಮೆ ನೀಲವರ್ಣದ ಪ್ರಭೆಯು ತೋರುತ್ತಿತ್ತು. ಈ ಪ್ರಕಾರ ಅಭ್ಯಾಸವಾಗಿತ್ತು. ಆದರೆ ಮುಂದೆ ನನ್ನ ದುರ್ದೈವದಿಂದ ಅಥವಾ ಪ್ರಪಂಚದ ಲಾಲನೆಯಿಂದ ಆ ಅಭ್ಯಾಸವೆಲ್ಲವೂ ಬಿಟ್ಟುಹೋಯಿತು, ಅಂದರೆ ನಾನು ಕೂಡ್ರುವದನ್ನೇ ಬಿಟ್ಟುಬಿಟ್ಟೆನು. ಇಂಥಾ ಸ್ಥಿತಿಯಲ್ಲಿ ಐದಾರು ವರ್ಷ ಏನೇನೂ ಅಭ್ಯಾಸ ಮಾಡಲಿಲ್ಲ, ಮತ್ತು ನನ್ನದು ಮಹಾರಾಜರದು ಆರು ವರ್ಷಗಳ ತನಕ ಭೆಟ್ಟಿ ಆಗಲಿಲ್ಲ. ಈಗ ಎರಡು ತಿಂಗಳ ಹಿಂದೆ ನನ್ನದು ಮತ್ತು ಗುಪ್ತೆ ಮಹಾರಾಜರದು ಭೆಟ್ಟಿಯಾಯಿತು. ಆ ಕಾಲ ದಲ್ಲಿ ಇದೆಲ್ಲಾ ವೃತ್ತಾಂತವನ್ನು ಅವರಿಗೆ ನಿವೇದಿಸಿದೆ. ಆಗ ಅವರಂದದ್ದು, "ನೀವು ಏನು ಹಿಂದೆ ಅಭ್ಯಾಸ ಮಾಡಿದ್ದಿರಿ ಅದು ವ್ಯರ್ಥವಾಗಲಾರದು. ನೀವು ಪುನಃ ಅಭ್ಯಾಸ ಸುರು ಮಾಡಿದರೆ ಮತ್ತು ಹಾಗೆಯೇ ಚಾಲು ಇಟ್ಟರೆ, ನೀವು ಪುನಃ ಆ ಪೂರ್ವ ಸ್ಥಿತಿಗೆ ಬೇಗನೆ ಹೋಗುವಿರಿ." ಒಟ್ಟಾರೆ ಮೇಲೆ ಗುಪ್ತೆ ಮಹಾರಾಜರ ಹತ್ತರ ಸುಮಾರು ಮೂರು ವರ್ಷ ತನಕ ಅಭ್ಯಾಸ ಮಾಡಬೇಕಾಯಿತು. ಗುಪ್ತೆ ಮಹಾರಾಜರು ನನಗೆ ಏನು ಇಲ್ಲಿ ತನಕ ಕಲಿಸಿದರು, ಅದು ಯಾವ ಪ್ರಕಾರದ್ದು ಬಿಗಿಯಾದ ನಿರ್ಬಂಧಗಳು ಹಾಕದೆ, ಪ್ರಪಂಚದಲ್ಲಿ ಏನೂ ತೊಂದರೆಯಾಗದೆ, ಅಥವಾ ಸಂಸಾರವನ್ನು ಬಿಡಲಿಕ್ಕೆ ಹಚ್ಚದೆ, ದೊಡ್ಡ ರಾಜಮಾರ್ಗದಿಂದ ಕಲಿಸಿ ದರು, ಅಂದರೆ ಅಭ್ಯಾಸ ಮಾಡಿಸಿಕೊಂಡರು. ಅವರ ಈ ಕೃಪೆಯು ಅವರ್ಣ ನೀಯವಾಗಿದೆ.

ಈ ನನ್ನ ವೃತ್ತಾಂತವನ್ನು ನಾನು ಸ್ವಲ್ಪದರಲ್ಲಿ ಕೊಟ್ಟಿದ್ದೇನೆ. ಮೂರು ವರ್ಷಗಳ ಪೂರಾ ವೃತ್ತಾಂತವನ್ನು ಕೊಟ್ಟಿದ್ದಾದರೆ, ಅದು ಒಂದು ದೊಡ್ಡ ಗ್ರಂಥವೇ ಆಗುತ್ತಿತ್ತು. ಆದ್ದರಿಂದ ಅದರೊಳಗಿನ ಸಾರವನ್ನು ಮಾತ್ರ

ಕೊಟ್ಟಿರುತ್ತೇನೆ. ಶ್ರೀಗಜಾನನ ಮಹಾರಾಜರಿಗೆ ಅನನ್ಯ ಭಾವದಿಂದ ಶರಣು ಹೋಗಿ, ಮತ್ತು ಅವರು ಕೊಟ್ಟ ವಿದ್ಯೆಯ ಉಪಯೋಗವನ್ನು ನಾನು ಮುಂದೆ ಮಾಡಲಿಲ್ಲ. ಈ ಕಾರಣ ಅವರ ಕ್ಷಮೆಯನ್ನು ಬೇಡಿಕೊಂಡು ಈ ಲೇಖವನ್ನು ಪೂರ್ಣ ಮಾಡುವೆನು.

ಆದರೆ ಅದನ್ನು ಮುಗಿಸುವದೊದಲು, ಹಿಂದಿನ ಸ್ವಲ್ಪ ವೃತ್ತಾಂತವನ್ನು ನಿವೇದಿಸಬೇಕೆಂತ ಅನಿಸುವದು, ಅದು ಹೀಗಿದೆ:— ನಾನು ಬೇಲಾಪೂರದ ಮಹಾರಾಜರಾದ ಶ್ರೀವಿದ್ಯಾನಂದಸ್ವಾಮಿ ಪರಮಹಂಸ ಇವರ ಹತ್ತಿರ ಉಪದೇಶ ವನ್ನು ತಕ್ಕೊಂಡಿದ್ದೆ. ಮುಂದೆ ಅವರು ಸಮಾಧಿಸ್ತರಾಗುವ ಸುಮಾರಕ್ಕೆ, ಅವರು ಹೇಳಿದರು, "ನನ್ನ ಅವತಾರವು ಶ್ರೀನಾರಾಯಣ ಮಹಾರಾಜರೆಂತ ಆಗುವದದೆ, ಅವರು ನಿನಗೆ ಭೆಟ್ಟಿಯಾದಾರು." ಆ ಪ್ರಕಾರ ಶ್ರೀನಾರಾಯಣ ಮಹಾರಾಜ ಕೇಡಗಾಂವಕರ ಇವರು ನನಗೆ ಆರ್ವಿಯಲ್ಲಿ ಭೆಟ್ಟಿಯಾಗಿ ಅವರು ವಿದ್ಯಾನಂದ ಮಹಾರಾಜರ ಸ್ವರೂಪದಿಂದ ದರ್ಶನ ಕೊಟ್ಟರು, ಮತ್ತು ಅವರೇ ನಾನಿದ್ದೇನೆ ಎಂದು ನಿಶ್ಚಯಮಾಡಿಕೊಟ್ಟರು. ಶ್ರೀಸದ್ಗುರು ನಾರಾಯಣ ಮಹಾರಾಜರು ಮೊದಲು ನನ್ನಿಂದ ಧ್ಯಾನಯೋಗವನ್ನು ಮಾಡಿಸಿಕೊಂಡರು. ಮುಂದೆ ಪಂಢರ ಪೂರದ ತಪಕೀರಿಬುವಾ ಇವರ ದರ್ಶನವಾಯಿತು. ಆದರ ನಂತರ ಶ್ರೀಗಜಾನನ ಮಹಾರಾಜ ಇವರಿಗೆ ಭೆಟ್ಟಿಯಾಗಿ, ಮೇಲೆ ಹೇಳಿದಂತೆ ನನ್ನ ಕಡೆಯಿಂದ ಅವರು ಅಭ್ಯಾಸ ಮಾಡಿಸಿಕೊಂಡರು. ಇದೆಲ್ಲ ಶ್ರೀವಿದ್ಯಾನಂದ ಮಹಾರಾಜರ ಕೃಪೆ ಯಿಂದ ಆಯಿತು ಎಂದು ನಾನು ತಿಳಕೊಳ್ಳುತ್ತೇನೆ. ಮತ್ತು ಬಹಳ ನಂತರ ವರ್ಣನಗಳೂ ಅವರ ಕೃಪೆಯಿಂದಲೇ ಆದವು.

ತಾ. ೧೭-೭-೧೯೩೭.

(ಸಹಿ) ಕಾಶೀನಾಥ ರಾಮಚಂದ್ರ ಗಾಂಡೆಕರ

— ೨೮ —

ಸೌ. ಜಾನಕಿಬಾಯಿ ಸದಾಶಿವ ಪ್ರಧಾನ, ಇವರ ಆಧ್ಯಾತ್ಮಿಕ ಅನುಭವ ಗಳು:—

ಮೋಕ್ಷಪ್ರಾಪ್ತಿಗೆ ಸದ್ಗುರು ಕೃಪೆ ವಿನಹಾ ಅನ್ಯಮಾರ್ಗವಿಲ್ಲ ಎಂತ ಪುರಾಣ ವ ಧಾರ್ಮಿಕ ಪ್ರವಚನಗಳಲ್ಲಿ ಕೇಳಿದಲಾಗಾಯತು ಸದ್ಗುರು ಉಪದೇಶ ಸಂಪಾದಿಸಬೇಕು ಎಂಬ ತೀವ್ರ ಇಚ್ಛೆಯು ಮನಸ್ಸಿನಲ್ಲಿ ಹುಟ್ಟಿ ಮನಸ್ಸು ಬಹಳ ಉದ್ವಿಗ್ನವಾಯಿತು ಎಂದು ರಾಮನಾಮದ ಜಪವನ್ನು ಆರಂಭಿಸಿದೆ. ನಂತರ ಒಂದುದಿನ ಒಬ್ಬ ಬ್ರಾಹ್ಮಣನು ಸ್ವಪ್ನದಲ್ಲಿ ಬಂದು, ನನಗೆ ಬೇಗನೇ ಗುರುವು ಭೆಟ್ಟಿ ಆಗುವನು ಎಂತ ಹೇಳಿದನು.

ಇವರ ನಂತರ ಬೇಗನೇ ಧುಳೆಯ ಪ್ರೋಸ್ಟಮಾಸ್ತರ ಇವರ ಮನೆಯಲ್ಲಿ ಶ್ರೀಗಜಾನನ ಮಹಾರಾಜರು ಇಪ್ಪಾರೆಂತ ಕೇಳಿದೆನು. ನನ್ನ ಮಗನು ಅವರ ಮನೆಯಲ್ಲಿಯೇ ಇರುವದರಿಂದ, ನಾನು ಕೂಡಲೆ ಧುಳೆಗೆ ಹೋದೆ, ಮತ್ತು ಏಳೆಂಟು ದಿನಗಳಲ್ಲಿ ನನಗೆ ಅವರ ಗುರೂಪದೇಶ ಶಿಕ್ಕಿತು.

ನಾನು ಧ್ಯಾನದ ಅಭ್ಯಾಸವನ್ನು ಸುರು ಮಾಡಿದೆ. ಮೊದಲು ನನಗೆ ಪ್ರತಿಒಂದು ಸ್ಥಳದಲ್ಲಿ ಪ್ರಕಾಶವು ಕಾಣಬಂತು. ನಂತರ ತಾಮ್ರವರ್ಣವು ತೋರಿತು, ಮತ್ತು ಅದರಲ್ಲಿ ಒಂದು ಕಮಾನವಿದ್ದು, ಅದರಲ್ಲಿ ದೊಡ್ಡ ದೊಡ್ಡ ಅಕ್ಷರಗಳಿದ್ದವು. ಆದರೆ ಅವು ನನಗೆ ಓದರಿಕ್ಕೆ ಬರುತ್ತಿದ್ದಿಲ್ಲ. ಆ ಕಮಾನದಲ್ಲಿ ನನಗೊಂದು ತುಳಸಿಗಿಡ ಕಾಣಿಸಿತು, ಮತ್ತು ಅಲ್ಲಿ ಪ್ರಕಾಶ ಕಾಣಿಸುತ್ತಿದ್ದು ಅದ ರಲ್ಲಿ ಸದ್ಗುರು ಮೂರ್ತಿಯು ತೋರಿತು.

ನಾನು ಯಾವಾಗ್ಗೆ ನಾಭಿಕಮಲದಲ್ಲಿ ಧ್ಯಾನಮಾಡಲಿಕ್ಕೆ ಆರಂಭಿಸಿದೆ, ಅಲ್ಲಿ ನನಗೆ ಒಂದು ಅಗ್ನಿಕುಂಡ ಮತ್ತು ಒಂದು ವಿಭೂತಿಯು ಕಂಡುಬಂತು. ಅಲ್ಲಿ ತೇಜಃಪುಂಜವಾದ ಪ್ರಕಾಶ ಕಾಣಿಸುತ್ತಿದ್ದು, ಅದರಲ್ಲಿ ನನ್ನ ಗುರು ಮತ್ತು ಶ್ರೀಶಂಕರ ಇವರ ಮೂರ್ತಿಗಳನ್ನು ಕಂಡೆನು. ಅಲ್ಲಿ ಒಂದು ತೇಜೋರೂಪಿ ಕಮಲವೂ ತೋರಿತು. ಶ್ರೀಶಂಕರರು ಧ್ಯಾನಸ್ಥ ಸ್ಥಿತಿಯಲ್ಲಿದ್ದರು. ಅವರ ಕೊರ ಳಿಗೆ ನರಮುಂಡಗಳ ಒಂದು ಮಾಲೆ ಇತ್ತು. ಅನಂತರ ನನಗೆ ಹೃತ್ಕಮಲದಲ್ಲಿ ನೀಲ ಪ್ರಕಾಶ ಕಾಣಿಸಿತು. ಅಲ್ಲಿ ಆ ಪ್ರಕಾಶದಲ್ಲಿ ನೀಲವರ್ಣದ ಒಂದು ಮೂರ್ತಿ ಇತ್ತು. ಅದರ ಮಸ್ತಕದಲ್ಲಿ ಮುಕುಟ ಮತ್ತು ಕರ್ಣಗಳಲ್ಲಿ ಕುಂಡಲಗಳಿದ್ದು ಕೊರಳಲ್ಲಿ ಹೂವಿನ ಹಾರಗಳಿದ್ದವು. ಆ ಮೂರ್ತಿಯು ವೇಣು ಬಾರಿಸುತ್ತಿದ್ದು ಅದರ ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅನಂತರ ಆ ದೃಶ್ಯವು ಇಲ್ಲದಂತಾ ಯಿತು; ಮತ್ತು ಕೂಡಲೆ ಒಂದು ಹೂವಿನ ತೋಟ ಕಾಣಿಸಿತು. ಆ ತೋಟದಲ್ಲಿ ಶ್ರೀಕೃಷ್ಣನಿದ್ದು ಅವನು ನನ್ನ ಕಡೆಗೆ ನೋಡುತ್ತ ನೋಡುತ್ತ ಒಂದು ವೃಕ್ಷದ ಹಿಂದಿನಿಂದ ಮತ್ತೊಂದರ ಹಿಂದೆ ಹೀಗೆ ಅಡಗಿ ಆಡುವ ಆಟವಾಡುತ್ತಿದ್ದನು. ನಂತರ ಈ ದೃಶ್ಯವೂ ಅದೃಶ್ಯವಾಗಿ, ಅಲ್ಲಿ ನೀಲಬಣ್ಣದ ಒಂದು ನದಿಯನ್ನು ಕಂಡೆನು, ಮತ್ತು ಅದರಲ್ಲಿ ಶ್ರೀಕೃಷ್ಣನು ಪುನಹಾ ಕಾಣಿಸಿಕೊಂಡನು. ಎರಡೂ ಕಡೆಗೆ ಗಿಡಗಳಿದ್ದ ಒಂದು ರಸ್ತೆಯನ್ನು ಕಂಡೆನು. ಈ ರಸ್ತೆಯ ದಂಡೆಗಳಲ್ಲಿ ಸಣ್ಣ ಕಂಟಿಗಳೂ ತೋರುತ್ತಿದ್ದವು

ನಾಭಿಕಮಲದ ಸಮೀಪವಿದ್ದ ಅಗ್ನಿಕುಂಡವು ಬಹಳ ಆಳವಾಗಿತ್ತು. ಮತ್ತು ಅದರ ಜ್ವಾಲೆಗಳು ಹೃದಯದ ತನಕ ಮುಟ್ಟುತ್ತಿದ್ದವು. ಶ್ರೀಕೃಷ್ಣನ ಅದೇ ಮೂರ್ತಿಯು ಪುನಹಾ ತೋರಿತು; ಆದರೆ ವರ್ಣವು ಬೇರೆಯಾಗಿತ್ತು.

ಶ್ರೀಕೃಷ್ಣರು ನನಗೆ ಯಾವಾಗ್ಗೆ ಯಾವಾಗ್ಗೆ ಹೃದಯದಲ್ಲಿ ಕಾಣಿಸುತ್ತಿದ್ದರೊ ಆವಾಗ್ಗೆ ಅವರು ನನ್ನ ಸದ್ಗುರು ರೂಪವನ್ನು ಧಾರಣ ಮಾಡುತ್ತಿದ್ದರು. ಈ

ನನ್ನ ಗುರುಗಳು ಸಹಾ ನಾನಾ ವಿಧದ ರೂಪವ ಉಡಿಗೆಯಿಂದ ಕಾಣಿಸುತ್ತಿದ್ದರು. ಒಮ್ಮೊಮ್ಮೆ ಅವರಿಗೆ ಗಡ್ಡವಿರುತ್ತಿತ್ತು, ಒಮ್ಮೆ ಬರೆ ಕಮೀಜು ಇರುತ್ತಿತ್ತು. ಈ ದೃಶ್ಯವು ಪುನಹಾ ಕಾಣಿಸದಂತಾಯಿತು. ಆ ಸ್ಥಳದಲ್ಲಿ ಒಂದು ಹೂವಿನ ಕಮಾನ ಕಾಣಿಸಿ ಅದರಲ್ಲಿ ಒಂದು ಕಮಲ ಮತ್ತು ಕಮಲದಲ್ಲಿ ಶ್ರೀಕೃಷ್ಣರು ಕಾಣುತ್ತಿದ್ದು, ಅವರು ತಮ್ಮ ಕೈ ಮತ್ತು ತುಟಿಗಳನ್ನು ಅಲ್ಲಾಡಿಸುತ್ತಿದ್ದಂತೆ ತೋರಿತು.

ನನಗೆ ಸನ್ ೧೯೨೬ ನೇ ವರ್ಷದಲ್ಲಿ ಗುರೂಪದೇಶವಾಯಿತು. ಈಗ ನನ್ನ ವಯಸ್ಸು ೬೫ ವರ್ಷ.

ತಾ. ೯-೬-೧೯೩೯.

(ಸಹಿ) ಜಾನಕಬಾಯಿ ಸದಾಶಿವ ಪ್ರಧಾನ

—೨೯—

ಶ್ರೀ. ಶಂಕರ ಕೇಶವ ಫಣಸಳಕರ ಇವರ ಅಧ್ಯಾತ್ಮಿಕ ಅನುಭವಗಳು:-

ಸನ್ ೧೯೨೫ ನೇ ಇಸವಿಯಲ್ಲಿ ನಾನು ಶೇಗಾಂವದಲ್ಲಿರುವಾಗ ಶ್ರೀಗುರು ಕುಲಕರ್ಣಿ ಮಹಾರಾಜ ಇವರು ನನಗೆ ಉಪದೇಶವನ್ನು ಮಾಡಿದರು; ಮತ್ತು ನಾಸಿಕಾಗ್ರದ ಮೇಲೆ ದೃಷ್ಟಿಇಟ್ಟು ಶ್ವಾಸೋಚ್ಛ್ವಾಸಗಳ ಮೇಲೆ ಲಕ್ಷ್ಯ ಇಡಬೇಕೆಂತ ಹೇಳಿ, ಮಂತ್ರ ಜಪಿಸಲಿಕ್ಕೆ ಆಜ್ಞೆಯನ್ನು ಕೊಟ್ಟರು. ಸನ್ ೧೯೨೫

---

ಟಿಪ್ಪಣಿ:— ಸೌ. ಜಾನಕಿಬಾಯಿ ಇವರು ತಮ್ಮ ನಶ್ವರ ದೇಹವನ್ನು ತಮ್ಮ ಬಂಧು ನಾಶಿಕರೋಡ ಎಂಬಲ್ಲಿರುವ ಡಾ ಖಾರಕರ ಇವರ ಮನೆಯಲ್ಲಿ ೧೯೩೯ ನೊವೆಂಬರ ತಿಂಗಳಲ್ಲಿ ಬಿಟ್ಟರು. ಅವರ ಶಕ್ತಿಯು ಕ್ಷೀಣವಾಗುತ್ತ ಅವರು ಒಂದು ತಿಂಗಳ ತನಕ ಅಸ್ವಸ್ಥವಿದ್ದರು. ಮರಣದ ಮೂರು ದಿನ ಮೊದಲು ತಮ್ಮ ೧೭ ವರ್ಷದ ಎಲ್ಲಕ್ಕೂ ಚಿಕ್ಕವಳಾದ ಮಗಳಿಗೆ ಕರೆದು ಆಕೆಯ ಕೈಯಲ್ಲಿ ಐದು ರೂಪಾಯಿಗಳನ್ನು ಕೊಟ್ಟು ಬ್ರಾಹ್ಮಣ ಭೋಜನ ಮಾಡಿಸುವ ಸಲುವಾಗಿ ಶ್ರೀಗಜಾನನ ಮಹಾರಾಜರಿಗೆ ಕೊಡಲಿಕ್ಕೆ ಹೇಳಿದಳು.

ದೇಹ ಬಿಡುವಾಗ ಅವರು ಶ್ರೀಗಜಾನನ ಮಹಾರಾಜರ ಹೆಸರಿನ ವ 'ಸೋಹಂ' ಮಂತ್ರದ ಜಪವನ್ನು ಮಾಡುತ್ತಿದ್ದರು, ಮತ್ತು ಬಾಳೆ ಎಲೆಗಳ ವ್ಯವಸ್ಥೆಮಾಡಿ ಐದುಮಂದಿ ಬ್ರಾಹ್ಮಣರಿಗೆ ಊಟಕ್ಕೆ ಹಾಕಬೇಕೆಂತ ಹೇಳುತ್ತಿದ್ದರು. 'ಸೋಹಂ' ಮಂತ್ರವನ್ನು ಜಪಿಸುತ್ತಿರುವಾಗ ದೇಹವನ್ನು ಬಿಟ್ಟರು. ಅವರು ದೇಹವಿಟ್ಟ ಸ್ಥಳದ ಹತ್ತರ ಜನರಿಗೆ ಅತ್ತರ, ತುಲಸಿ ಮತ್ತು ಶ್ರೀಗಂಧದಂಥಾ ಪಕ್ವಾನ್ನದ ಸುವಾಸವು ಮುಂದೆ ಮೂರು ದಿವಸ ತನಕ ಬರುತ್ತಿತ್ತು.

ರಿಂದ ೩೨ ರ ವರೆಗೆ ನಾನು ಜಳಗಾಂವದಲ್ಲಿಯೇ ಇರುತ್ತಿದ್ದೆ; ಮತ್ತು ಪ್ರತಿ ವರ್ಷವೂ ಶ್ರೀಕುಲಕರ್ಣಿ ಮಹಾರಾಜರು ಜಳಗಾಂವಿಗೆ ಬರುತ್ತಿದ್ದರು, ಆಗ್ಗೆ ನಾನು ಅವರ ದರ್ಶನವನ್ನು ತಕ್ಕೊಳ್ಳುತ್ತಿದ್ದೆ. ೧೯೩೩ನೇ ವರ್ಷದಲ್ಲಿ ನಾನು ಪುಣೆಗೆ ಹೋದೆ. ನಂತರ ೧೯೩೪ ರಲ್ಲಿ ನಾಶಿಕಕ್ಕೆ ಬಂದೆ. ೧೯೩೨ ರಿಂದ ೩೪ ರ ವರೆಗೆ ಹೇಳತಕ್ಕಂಥಾದ್ದೇನು ಘಟಿಸಲಿಲ್ಲ. ನಾಶಿಕಕ್ಕೆ ಬಂದಮೇಲೆ ಜಪ ಮಾಡುವಾಗ್ಗೆ ದೇಹಕ್ಕೆ ಬಹಳ ತ್ರಾಸವಾಗುತ್ತಿತ್ತು ಆದರೂ ಅದರ ಕಡೆ ಲಕ್ಷ್ಯಕೊಡದೆ ನಾನು ಅಭ್ಯಾಸವನ್ನು ಸುರು ಮಾಡಿದೆನು. ನಂತರ ನಮ್ಮ ನೆರೆಯಲ್ಲಿರುತ್ತಿದ್ದ ಡೆಪ್ಯುಟಿ ಅಕೌಂಟಂಟ ರಾ. ವಿಷ್ಣು ಪಂತ ಕುಲಕರ್ಣಿ ಇವರಿಗೆ ನನ್ನ ಅನುಭವಗಳನ್ನು ಹೇಳಿದೆನು; ಮತ್ತು ನನ್ನ ಧ್ಯಾನಗೊಳ್ಳುತ್ತಿರುವ ಅವಸ್ಥೆಯನ್ನು ಇಲ್ಲದಂತೆ ಮಾಡಿ ಅಧ್ಯಾತ್ಮ ಮಾರ್ಗವನ್ನು ನನಗೆ ಮುಂದೆ ತೋರಿಸತಕ್ಕ ಸಾಧು ಯಾರಾದರೂ ನಿಮಗೆ ಗೊತ್ತಿದೆ ಏನು ಎಂದು ಕೇಳಿದೆ. ಆಗ ನಾಶಿಕದಲ್ಲಿ ಒಬ್ಬ ಮಹಾರಾಜರಿದ್ದು ಅವರ ಶಿಷ್ಯರು ಅಣ್ಣಾಸಾಹೇಬ ವೈದ್ಯ ಇವರು ನಮ್ಮ ಮಿತ್ರರಿದ್ದಾರೆ. ಅವರು ನನ್ನನ್ನು ಆ ಮಹಾರಾಜರ ಕಡೆ ಕರಕೊಂಡು ಹೋದಾರು ಎಂದು ನನಗವರು ಹೇಳಿದರು. ಆ ಪ್ರಕಾರ ನಾನು ವೈದ್ಯರಿಗೆ ಭೆಟ್ಟಿಯಾದೆನು, ಮತ್ತು ಅವರ ಕೂಡ ಶ್ರೀಗಜಾನನ ಮಹಾರಾಜರ ಕಡೆಗೆ ಹೋದೆನು. ಅವರು ನನ್ನ ಸಂಗತಿ ಎಲ್ಲ ಕೇಳಿಕೊಂಡರು; ಮತ್ತು ಕುಲಕರ್ಣಿ ಮಹಾರಾಜರು ಕೊಟ್ಟ ಜಪವನ್ನು ಮಾಡಲಿಕ್ಕೆ ಹೇಳಿದರು. ಎಂಟು ಮೂರು ದಿವಸ ಅವರು ನನ್ನ ಎದುರಿಗೆ ಅಭ್ಯಾಸಕ್ಕೆ ಕೂಡ್ರಿಸಿಕೊಂಡರು. ಮೊದಲನೇ ದಿವಸವೆ ಧ್ಯಾನದಲ್ಲಿನ ಭೀತಿ ಹೋಯಿತು, ಮತ್ತು ನನ್ನ ಮನಸ್ಸು ಅಂತರ್ಮುಖವಾಯಿತು. ಅನಂತರ ದೃಶ್ಯಗಳು ಕಾಣಿಸಿದವು. ಈಗ ನಾನು ಭಾರಿ ಆನಂದಮಯನಾಗಿದ್ದೇನೆ.

ನಾನು ಮೊದಲು ಬೇರೆ ಬೇರೆ ಮನುಷ್ಯಾಕೃತಿ, ಅಕ್ಷರಗಳು, ನಾನಾ ಪ್ರಕಾರದ ಬಣ್ಣಗಳು, ನಕ್ಷತ್ರಗಳು ಮತ್ತು ಮಿಂಚು ಹೊಳೆಯುವದು ನೋಡಿದೆ. ಇದು ಸರಾಸರಿ ಆರು ತಿಂಗಳು ನಡೆಯಿತು. ನಂತರ ನಾನು ಸಮುದ್ರ, ನದಿಗಳು, ಗುಡ್ಡಗಳು ವ ಗುಡಿಗಳು ಇವನ್ನೆಲ್ಲ ನೋಡಿದೆ. ಅನಂತರ ಒಬ್ಬಗಳ ವ್ಯಕ್ತಿ ಯದ ನಾದದೊಂದು ದೃಶ್ಯವು ಕಾಣಿಸುತ್ತಿತ್ತು, ಅದು ಕೆಲವು ಹೊತ್ತು ಇದ್ದು ಪುನಃ ಇಲ್ಲದಂತಾಗುತ್ತಿತ್ತು. ಹೀಗಾಗುತ್ತ ನಂತರ ಯೋಗಿಗಳ ಸಭೆಗಳು ಕಾಣಹತ್ತಿದವು. ಅಲ್ಲಿ ಕೆಲವರು ಕೂತಿದ್ದರು ಕೆಲವರು ನಿಂತಿದ್ದರು ಕೆಲವರು ಅತ್ತಿತ್ತ ಅಡ್ಡಾಡುತ್ತಿದ್ದರು ವ ಕೆಲವರು ಯೋಗಾಭ್ಯಾಸವನ್ನು ಮಾಡುತ್ತಿದ್ದರು. ಮನಸ್ಸಿನ ಚಂಚಲತ್ವ ಇಲ್ಲದಂತಾಗಿ ಶಾಂತತೆಯು ಪ್ರಾಪ್ತಿಯಾಯಿತು. ಅನಂತರ ನಾನಾ ಪ್ರಕಾರದ ದೃಶ್ಯಗಳು ನಿಂತುಹೋದವು. ಕತ್ತಲು ಕಾಣಹತ್ತಿತು. ಆಮೇಲೆ ಕರಿ ನೀಲವರ್ಣದ ಪ್ರಕಾಶ ಕಾಣಿಸುತ್ತಿದ್ದು, ಆ ಪ್ರಕಾಶದಲ್ಲಿ ಮೇಲೆ ಹೇಳಿದ ಸಾಧುಗಳು ಒಬ್ಬರ ಹಿಂದೆ ಒಬ್ಬರು ಕಾಣಹತ್ತಿದರು ಆ ಪ್ರಕಾಶದಲ್ಲಿ ಮನಸ್ಸಿಗೆ ಆನಂದವಾಗುತ್ತಿತ್ತು, ಮತ್ತು ಎಷ್ಟು ಹೆಚ್ಚು ಹೊತ್ತು ಧ್ಯಾನಕ್ಕೆ ಕೂಡ್ರಲಿಕ್ಕೆ ಆದೀತೋ

ಇಷ್ಟು ಹೊತ್ತು ಕೂಡ್ರಬೇಕು ಎಂಬ ಇಚ್ಛೆ ಹುಟ್ಟಿತು. ಇದಕ್ಕೂ ಮೊದಲು ನನಗೆ ಇಂಥ ಆನಂದವು ಎಂದೂ ಅನುಭವಕ್ಕೆ ಬಂದಿದ್ದಿಲ್ಲ. ನಾನು ಒಮ್ಮೊಮ್ಮೆ ದೊಡ್ಡ ಘಂಟೆಗಳನ್ನು ಬಾರಿಸುವ ಶಬ್ದವನ್ನು ಕೇಳುತ್ತೇನೆ. ಈಗ ಬೇರೆ ಎಲ್ಲ ದೃಶ್ಯಗಳು ಇಲ್ಲದಂತಾದವು ಮತ್ತು ಬರೇ ಅಂಗುಷ್ಟಮಾತ್ರ ಜ್ವಾಲೆಯನ್ನು ನೋಡುತ್ತಿದ್ದೇನೆ. ಅದನ್ನು ನೋಡುತ್ತಿರುವಾಗ ನನಗೆ ದೇಹದ ವಿಸ್ಮೃತಿಯಾಗುವದು. ಇವೆಲ್ಲ ಅನುಭವಗಳು ತಾ. ೨೧ ಜುಲೈ ಸನ್ ೧೯೩೪ ರಿಂದ ೨೯ ನವಂಬರ ೧೯೩೬ ನೇ ವರ್ಷದ ಪರ್ಯಂತ ಬಂದವು ಇರುತ್ತವೆ.

(ಸಹಿ) ಎನ್. ಜಿ. ಫಣಸಳಕರ

-- ೩೦ --

ಶ್ರೀ. ದತ್ತಾತ್ರೇಯ ಕೇಶವ ಭಟ್, ನ್ಯೂ ಇಂಗ್ಲಿಷ ಸ್ಕೂಲ ನಾಶಿಕ, ಇಲ್ಲಿಯ ಮಾಸ್ತರ, ಇವರ ಅನುಭವಗಳು: –

ಸನ್ ೧೯೩೨ ವರ್ಷದ ನೊವೆಂಬರ ತಿಂಗಳು ಇತ್ತು. ಆ ಸಮಯದಲ್ಲಿ ನಾನು 'ಗ್ರೇಟ ಡಿಝಾಯರ್' ಎಂಬ ಪುಸ್ತಕವನ್ನು ಓದಿದೆ; ಅದಕ್ಕೂ ಮೊದಲು ನಾನು ಜ್ಞಾನೇಶ್ವರಿ, ವಿವೇಕಾನಂದರ ಗ್ರಂಥಗಳು ವ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯದ ಮೇಲಿನ ಇತರ ಪುಸ್ತಕಗಳನ್ನು ಓದಿದ್ದೆ. ಈಶ್ವರನ ಪ್ರತ್ಯಕ್ಷ ಅನುಭವವು ಬರಬೇಕು, ಎಂದು ನನ್ನ ಅಂತಃಕರಣದಲ್ಲಿ ಬಲವತ್ತರ ಇಚ್ಛೆಯು ಉತ್ಪನ್ನವಾಯಿತು. ಆಗ ಕೆಲವು ಚಮತ್ಕಾರಿಕ ಸಂಗತಿಗಳು ಸಂಭವಿಸಿದ್ದವು. ನನ್ನ ಜಿವಲಗ ಮಿತ್ರರ ಕೂಡ ಈ ವಿಷಯದಲ್ಲಿ ಮಾತಾಡುತ್ತಿರುವಾಗ ಯಾವ ಯಾವ ಕಾಲಕ್ಕೆ ನಾನು ಆ ವಿಷಯದಲ್ಲಿ ಮಗ್ನನಾಗುವೆನೊ ಆಯಾ ಕಾಲಕ್ಕೆ ನನ್ನ ಮುಖವು ಪುಂಜಿನಂಥಾ ಮಂದ ಪ್ರಕಾಶ ವರ್ತುಲದಿಂದ ಸುತ್ತ್ಪಟ್ಟಂತೆ ನನ್ನ ಮಿತ್ರರಿಗೆ ಕಾಣಿಸುತ್ತಿತ್ತು. ನನ್ನ ಮಿತ್ರ ವಾಮನರಾವ ದೇಶಪಾಂಡೆ ಇವರು ನನಗೆ ಒಂದೆರಡು ಸಾರೆ ಈ ವಿಷಯದಲ್ಲಿ ಹೇಳಿದರು. ಆದರು ಆಗ ಅಲ್ಲಿ ಕೂತಿರುವ ಬೇರೆಯವರ ಮುಖಗಳ ಕಡೆಗೆ ನೋಡಿದರು, ಆದರೆ ಅವರ ಮುಖದ ಸುತ್ತಲೂ ಹಾಗೇನೂ ಕಾಣಿಸಲಿಲ್ಲ.

ನಾನು ಒಂದು ದಿನ ಈ ವಿಚಾರದಲ್ಲಿ ತೀರಾ ಮಗ್ನನಾಗಿದ್ದಾಗ, ನನ್ನ ವಿದ್ಯಾರ್ಥಿಗಳ ಪೈಕಿ ಗೋಪಾಳಸಿಂಗನೆಂಬವನು ರಾತ್ರಿಯಲ್ಲಿ ನನಗೆ ಭೆಟ್ಟಿಯಾಗಲಿಕ್ಕೆ ಬಂದಿದ್ದನು. ಆಗ ಬಹಳ ತಣ್ಣನ ಗಾಳಿ ಬಿಟ್ಟಿದ್ದರಿಂದ ನನ್ನ ಕೋಣೆಯ ಎಲ್ಲ ಕಿಟಕಿಗಳು ಮುಚ್ಚಿದ್ದವು. ನಾನು ಅವರ ಕೂಡ ಮಾತಾಡುತ್ತಿರುವಾಗ ಎಲ್ಲ

ಕಡೆಯಿಂದ ಮಂದ ಪ್ರಕಾಶದ ಮೋಡ ಮಾತ್ರ ನನಗೆ ಕಾಣಿಸುತ್ತಿತ್ತು. ಅವನಂದನು, “ ಸರ, ಈಗಸಹ ಎಷ್ಟು ಸುಂದರವಾದ ಚಂದ್ರಪ್ರಕಾಶವು ಬಿದ್ದಿರುವದು! ”

ಕೆಲವು ದಿನಗಳಮೇಲೆ ಅಂದರೆ ಕೋಜಾಗಿರಿ ಪೂರ್ಣಿಮೆಯ ಒಂದೆರಡು ದಿವಸ ಮೊದಲು ನಾನು ಪೂರ್ಣ ಏಕಾಂತದಲ್ಲಿ ಕೂತಿರುವಾಗ ನಾನು ನನ್ನ ದೃಷ್ಟಿಯನ್ನು ಅಂತರ್ನಿಕ್ಷ್ಯ ಮಾಡುವ ಪ್ರಯತ್ನ ನಡಿಸುತ್ತಿದ್ದು ನನ್ನ ಅರಿವನ್ನು (ಜ್ಞಾನ) ನಾನು ಮೇಲೆ ಒಯ್ಯುತ್ತಿದ್ದೆನು. ಇದಕ್ಕೆ ನೀವು ಭ್ರಮೆ ಅಥವಾ ಮತ್ತೇನಾದರೂ ಒಂದು ಹೆಸರು ಇಟ್ಟೀರಿ. ಆದರೆ ಯಾವಾಗ ನಾನು ನನ್ನ ದೃಷ್ಟಿ ವ ಅರಿವು ಉಚ್ಚ ಬಿಂದುವಿನ ಮೇಲೆ ಸ್ಥಿರ ಮಾಡುತ್ತಿದ್ದೆನೊ ಆಗ ನಾನು ನನ್ನ ಮಸ್ತಕದಲ್ಲಿ ಅತ್ಯಂತ ತೇಜಸ್ವಿ ಪ್ರಕಾಶವನ್ನು ನೋಡುತ್ತಿದ್ದೆನು. ಅದು ಇಷ್ಟು ತೇಜಃಪುಂಜ ಇತ್ತಲ್ಲ, ಅದನ್ನು ಶಬ್ದದಿಂದ ನನ್ನಿಂದ ವರ್ಣಿಸಲು ಶಕ್ಯವಿದ್ದಿಲ್ಲ.

ಕೋಜಾಗಿರಿ ಪೂರ್ಣಿಮೆ ದಿನ ನಾನು ಪುನಃ ಅದೇ ಪ್ರಯತ್ನವನ್ನು ಮಾಡಿದೆ; ಆಗ ಎಲ್ಲಾ ರಕ್ತನಾಹಿನಿಗಳೊಳಗಿಂದ ಮೇಲೆ ತಲೆ ಕಡೆ ಮತ್ತು ಕೆಳಗೆ ಕಾಲುಕಡೆಗೂ ರಕ್ತ ಬಹಳ ತೀವ್ರವಾಗಿ ಹರಿಯಲಿಕ್ಕೆ ಹತ್ತಿದೆ ಅಂತ ಕಂಡು ಬಂತು. ನಡನಡುವೆ ನರಗಳು ಉಬ್ಬಿದ್ದವು. ನನಗೆ ಅತ್ಯಂತ ಭೀತಿಯಾಯಿತು ಮತ್ತು ನಾನು ಮೂರ್ಖನಂತೆ ವ್ಯರ್ಥಪ್ರಯತ್ನಗಳಿಂದ ನನ್ನ ಆಯುಷ್ಯದ ನಾಶ ಮಾಡಿದೆ ಎಂತ ನನಗೆ ಅನಿಸಿತು. ಎರಡು ಮೂರು ದಿನಗಳನ್ನು ಅತ್ಯಂತ ಭಯಂಕರ ಸ್ಥಿತಿಯಲ್ಲಿ ಕಳೆದೆ. ನನಗೆ ಬಹಳ ದಣುವಾದಂತೆ ಆಯಿತು. ನನ್ನ ಮನಸ್ಸು ಮಾತ್ರ ತೀರಾ ನಿರಾಶವಾಗಿದ್ದಿಲ್ಲ, “ ನಮೆ ಭಕ್ತಃ ಪ್ರಣಶ್ಯತಿ ” ಈ ಗೀತಾವಾಕ್ಯವು ( ನನ್ನ ಭಕ್ತನು ಎಂದೂ ನಾಶವಾಗಲಾರನು ) ಮಾತ್ರ ನನಗೆ ಆಗಾಗ್ಗೆ ನೆನಪಿಗೆ ಬರುತ್ತಿತ್ತು; ಮತ್ತು ಅದೇ ನನ್ನ ಮನಸ್ಸಿಗೆ ದೊಡ್ಡ ಆಧಾರವಾಗಿತ್ತು.

ಈ ದುಃಖಸ್ಥಿತಿಯು ಬೇಗನೆ ಕರಗಿತು. ನಾನು ನನ್ನ ನಿತ್ಯದ ವ್ಯವಹಾರಗಳನ್ನು ನಿತ್ಯದಂತೆ ಮಾಡಹತ್ತಿದೆ. ಭಾವುಬೀಜದ ದಿನ ಯಾರಿಗೆ ನಾನು ಸಹೋದರಿ ಎಂದು ತಿಳಿದಿದ್ದೆನೊ, ಆ ಹೆಂಗಸಿನ ಕಡೆ ಹೋದೆ, ಮತ್ತು ಅಲ್ಲಿ ಜೋಕಾಲೆ ಮೇಲೆ ಕೂತಿದ್ದೆ; ನಾನು ಮಂದಿಕೂಡ ಮಾತಾಡುತ್ತ ಇದ್ದರೂ ಒಳಗೆ ಬೇರೆ ಒಂದು ವಿಚಾರದಲ್ಲಿ ಮಗ್ನನಾಗಿದ್ದೆ, ಈಶ್ವರನು ಪ್ರತಿಒಂದು ಸ್ಥಾನದಲ್ಲಿ ಇದ್ದಾನೆ ಎಂಬ ಈ ವಿಧಾನದ ಸತ್ಯತ್ವದ ವಿಷಯ ವಿಚಾರ ಮಾಡುತ್ತಿದ್ದೆ. ನನ್ನ ಶರೀರ ಮಾತ್ರ ನನ್ನಿಂದ ಬೇರೆಯಾಗಿ ದೂರ ಬಿದ್ದಿರುತ್ತದೆ ಎಂದು ನನಗೆ ಅನಿಸಿತು. ನನ್ನ ಮನಸ್ಸು ಮಾತ್ರ ಆ ವೇಳೆಗೆ ಮಸ್ತಕದೊಳಗಿನ ಪೋಕಳಿಯ ಮಧ್ಯಬಿಂದುವಿನಲ್ಲಿ ತೊಡಕಿದೆ, ಇದರದು ಮಾತ್ರ ನನಗೆ ಅರಿವು ಇತ್ತು.

ಯಾವಾಗ್ಗೆ ನಾನು ಮಾತಾಡುತ್ತಿದ್ದೆನೋ ಅಥವಾ ನನ್ನ ಮನಸ್ಸಿನಲ್ಲಿ ಮತ್ತೇನಾದರೂ ನಡೆದಿತ್ತು, ಆಗ್ಗೆ ಒಂದು ಕೆಲಸ ಪೂರ್ಣವಾದ ಮೇಲೆ ಎರಡನೇದಕ್ಕೆ ಸುರುವಾಗುತ್ತದೆ ಎಂಬಂತೆ ನನಗನಿಸುತ್ತಿತ್ತು. ಮಾತುಗಳ ಅಥವಾ ಅಲ್ಲಿ ಚಾಲೂ ಇದ್ದ ಗ್ರಾಮೊಫೋನಿನ ಇವುಗಳ ಹೊರಗಿನ ಧ್ವನಿ ನನ್ನ ಕಿವಿಗೆ ಬೀಳುತ್ತಿತ್ತು ಮತ್ತು ಅದರ ಲಹರಿಗಳು ನನ್ನ ಶರೀರದ ಯಾವದಾದರೊಂದು ಭಾಗದಲ್ಲಿ ಉತ್ಪನ್ನವಾಗುತ್ತಿದ್ದವು. ನಂತರ ನನ್ನ ಮನಸ್ಸು ಒಳಗೆ ಬೇಗನೆ ಮಗ್ನವಾಗಿ ಹೋಗಹತ್ತಿತು ಮತ್ತು ನನಗೊಂದು ಚಮತ್ಕಾರಿಕ ಅನುಭವವು ಶಿಕ್ಕಿತು.

ಆ ಸಮಯದಲ್ಲಿ ಮಳೆ ಬೀಳಹತ್ತಿತು. ಬಾಹ್ಯ ಜಗತ್ತಿನಲ್ಲಿ ಮಿಂಚುಗಳು ಹೊಳೆಯುತ್ತಿದ್ದವು. ಆದರೆ ಒಳಗಿನಿಂದ ನನ್ನ ಹಿಂದುಗಡೆ ಭಗವಾನ ಶ್ರೀಕೃಷ್ಣನ ಮೂರ್ತಿಯನ್ನು ನಾನು ಪ್ರತ್ಯಕ್ಷವಾಗಿ ನೋಡುತ್ತಿದ್ದೆ. ನಾನು ಒಂದು ಅಪಾರವಾದ ಸಾಗರವನ್ನು ಕಂಡೆನು; ಮತ್ತು ಶ್ರೀಕೃಷ್ಣನ ಹಿಂದುಗಡೆ ಆತನ ಮೇಲೆ ಹೆಡೆ ತೆಗೆದು ಶೇಷನು ನಿಂತಿದ್ದನು. ಈ ಒಳಗಿನ ದೃಶ್ಯವು ಬಾಹ್ಯದಲ್ಲಿ ಸಹಾ ಕಾಣಬಂತು. ಎಲ್ಲೆಲ್ಲಿ ನನ್ನ ದೃಷ್ಟಿ ಹೋಗುವದೋ ಅಲ್ಲಲ್ಲಿ ನನ್ನ ಮನಸ್ಸಿನಲ್ಲಿ ಏನು ನಡದದೆ ಅದು ಪ್ರತ್ಯಕ್ಷ ಕಾಣುತ್ತಿತ್ತು. ಯಾವಾಗ್ಗೆ ನನ್ನ ಮನಸ್ಸಿನಲ್ಲಿ ಯಾವದಾದರೂ ಸಾಧುವಿನ ಅಥವಾ ದೇವತೆಯ ವಿಚಾರವು ಬರುವದೋ ಆಗಾಗ್ಗೆ ಆ ಸಾಧು ಅಥವಾ ಆ ದೇವತೆಯು ಪ್ರತ್ಯಕ್ಷ ನನ್ನ ಎದುರಿಗೆ ಕಾಣುವದು. ಅದೇ ಪ್ರಕಾರ ಗ್ರಾಮೋಫೋನದೊಳಗಿನ ಗೀತ ಮತ್ತು ಅದರಲ್ಲಿ ಸಮಾವಿಷ್ಟವಾದ ಭಾವನೆ ಮತ್ತು ನಾನು ನನ್ನ ಕಣ್ಣಿನಿಂದ ಪ್ರತ್ಯಕ್ಷ ನೋಡುತ್ತಿದ್ದ ನೋಟ ಇವೆಲ್ಲ ವುಗಳಲ್ಲಿ ಅಲೌಕಿಕ ಸಾಮ್ಯವಿತ್ತು. ಮತ್ತು ಬಾಹ್ಯಧ್ವನಿ, ಪ್ರಕಾಶಯುಕ್ತ ದೃಶ್ಯಗಳು, ಮನೋಮಯ ವಿಚಾರಗಳು ಮತ್ತು ಅವುಗಳ ದೃಷ್ಟಿಗೆ ಕಾಣುತ್ತಿರುವ ಪ್ರತ್ಯಕ್ಷ ಉದಾಹರಣೆಗಳು, ಇವುಗಳ ಕೂಡುವಿಕೆಯೊಳಗಣ ಸ್ಫುರಣದಿಂದ ನನಗೆ ದೇಹದೊಳಗೆ ಉಪಮಾರಹಿತ ಆನಂದವನ್ನು ಪಡೆದೆನು. ಆ ದಿವಸವೆಲ್ಲ ನಾನು ಆನಂದದಲ್ಲಿ ಮುಳುಗಿದ್ದೆನು.

ಆದರೆ ಮರುದಿನದಿಂದ ಎಲ್ಲವೂ ಪೂರ್ಣ ಬದಲಾಯಿತು. ನನ್ನ ಮನಸ್ಸಿನಲ್ಲಿ ಕೆಟ್ಟ ವಿಚಾರಗಳು ಉತ್ಪನ್ನವಾದವು, ಮನಸ್ಸಿನಲ್ಲಿ ಗಡಿಬಿಡಿಯಾಯಿತು, ಮತ್ತು ತಲೆಯು ಬೇರೆಯವರಿಂದ ಪ್ರತಿಷ್ಠವಾದಂತೆ ಚಡಪಡಿಸಹತ್ತಿತು. ಆಗ ಯಾರೊ ಅಘೋರಿ ಮಾಂತ್ರಿಕ ಶಕ್ತಿಯನ್ನು ನನ್ನಮೇಲೆ ಬಿಟ್ಟಿರುವರೊ ಎಂಬಂತೆ ನನಗೆ ತೋರಿತು. ಯಾಕಂದರೆ ಯಾವಾಗ್ಗೆ ನನ್ನ ಮನೆಯೊಳಗಿನ ಅಥವಾ ಮಾರ್ಗದಿಂದ ಹೋಗುವ ಮನುಷ್ಯನ ಕಡೆಗೆ ನಾನು ನೋಡುವೆನೊ ಆಗ ಆ ಮನುಷ್ಯನು ತೀರಾ ಗಡಿಬಿಡಿಹೊಂದಿದ್ದಾನೆ ಎಂಬಂತೆ ನನಗನಿಸಿತು. ಆಗ ಇದು ಏನಾಯಿತು ಎಂದು ನಾನು ಪೂರ್ಣ ಲಕ್ಷಪೂರ್ವಕ ನೋಡುತ್ತಿದ್ದೆ. ಇದರ ಮೇಲಿಂದ ನಾನು ನನ್ನಕೃತಿಯಿಂದರೆ ಈ ಸಂಕಟವನ್ನು ನನ್ನ ಮೇಲೆ ಎಳಕೊಂಡಿ

ರುತ್ತೇನೆಂತ ನನಗೆ ತಿಳಿಯಿತು. ಅಘೋರಿ ಮಾಂತ್ರಿಕ ಕರ್ಮ ಮಾಡುವಂಥಾ ಒಬ್ಬ ಮನುಷ್ಯನ ಕಾರ್ಯದಲ್ಲಿ ನಾನು ತಿಳಿಯದೆ ಅಡಚಣಿ ಮಾಡಿರಬೇಕು; ಆದ್ದರಿಂದ ಅವನು ಈ ರೀತಿಯಿಂದ ಸೇಡು ತಕ್ಕೊಳ್ಳುತ್ತಿದ್ದಾನೆ, ಮತ್ತು ಅವನು ತನ್ನ ಘಾತುಕ ಶಕ್ತಿಯನ್ನು ನನ್ನ ಮೇಲೆ ಹಾಕುತ್ತಿದ್ದು, ನನ್ನ ಮಾನಸಿಕ ಶಕ್ತಿಯ ಕ್ಷೀಣತೆಯನ್ನು ಮಾಡುತ್ತಾನೆ, ಎಂದು ತೋರಿತು.

ಇದರ ಮೇಲಿಂದ ನನಗೀಗ ಮಾನವೀ ಸಹಾಯವಿಲ್ಲವೆಂತ ತಿಳಿದು ನಾನು ಈಶ್ವರನ ಪ್ರಾರ್ಥನೆಯನ್ನು ಒಂದೇಸಮನೆ ಆರಂಭ ಮಾಡಿದೆ. ಈ ಸಮಯದಲ್ಲಿ ಶ್ರೀಗಜಾನನ ಮಹಾರಾಜರ ಸಂಬಂಧಿ ಕೆಲವು ಟಾಯಿಪ ಮಾಡಿದ ಕಾಗದಗಳು ನನಗೆ ಓದಲಿಕ್ಕೆ ಶಿಕ್ಕಿದವು. ಅನಂತರ ನಾನು ಅವರ ಕಡೆ ಹೋಗುವ ಮತ್ತು ಅವರಿಗೆ ಭೆಟ್ಟಿಯಾಗುವ ಪ್ರಯತ್ನವನ್ನು ಮಾಡಿದೆನಾದರೆ ಏನಾದರೂ ಉಪಯೋಗವಾದೀತೊ ಇಲ್ಲ, ಎಂಬ ವಿಚಾರವನ್ನು ಮಾಡಿದೆ. ನಾನು ಗಜಾನನ ಮಹಾರಾಜರ ಕಡೆ ಹೋದಾಗ್ಗೆ ನನ್ನ ಕೂಡ ನನ್ನ ಮಿತ್ರರಾದ ವಾಮನರಾವ ದೇಶಪಾಂಡೆ ಇವರು ಇದ್ದರು. ಆದರೂ ಪ್ರಥಮದಲ್ಲಿಯೇ ಮಹಾರಾಜರ ವಿಷಯ ನನ್ನ ಮನಸ್ಸು ಒಲಿಯಲಿಲ್ಲ. ಶ್ರೀ ದೇಶಪಾಂಡೆ ಇವರ ಮತವೂ ಹಾಗೆಯೇ ಆಯಿತು. ಆದರೂ ನಾನು ಅವರ ಕಡೆ ಹೋಗುತ್ತಾ ಇದ್ದೆ. ಮಹಾರಾಜರು ಬಹಳ ಸಾರಿ ವ್ಯವಹಾರಿಕ ದೃಷ್ಟಿಯಿಂದ ನನಗೆ ಸಮಾಧಾನ ಮಾಡುವ ಯತ್ನ ಮಾಡಿದರು. ಅನಂತರ ನಾನು ಮಹಾರಾಜರ ಶಿಷ್ಯರ ಕೆಲವು ಆಧ್ಯಾತ್ಮಿಕ ಅನುಭವಗಳನ್ನು ಓದಿದೆನು. ಅದರಿಂದ ನನ್ನ ತಿಳಿಯುವ ಇಚ್ಛೆಯು ಬೆಳೆಯಿತು. ನನಗೆ ಅನುಗ್ರಹ ಕೊಡಬೇಕಾಗಿ ನಾನು ಮಹಾರಾಜರಿಗೆ ವಿನಂತಿ ಮಾಡಿದೆನು. ನಂತರ ಅವರು ನನಗೆ ‘ ಸೋಹಂ ’ ಮಂತ್ರವನ್ನು ಕೊಟ್ಟರು. ‘ ಸೋಹಂ ’ದ ಜಪ ಮಾಡುತ್ತಿರುವಾಗ ನನ್ನ ಮನಸ್ಸು ಸ್ಥಿರವಾಗಹತ್ತಿತು. ಮತ್ತು ಭಯದ ಭಾವನೆಗಳೆಲ್ಲ ನಷ್ಟವಾದವು.

ಈಗ ನಾನು ಪ್ರತಿದಿವಸ ಮಹಾರಾಜರ ದರ್ಶನಕ್ಕೆ ಹೋಗುತ್ತೇನೆ. ಸಂಸಾರದಲ್ಲಿ ಸಂಕಟ ಮತ್ತು ಅಡಚಣಿಗಳು ಬಂದಾಗ್ಯೂ ಅವುಗಳಿಂದ ನನ್ನ ಮನಸ್ಸು ಅಲಿಪ್ತವಾಗಿರುವದು. ಸರ್ವಕಾಲದಲ್ಲಿಯೂ ನಾನು ‘ ಸೋಹಂ ’ದ ಜಪವನ್ನು ನಡಿಸುತ್ತಿರುತ್ತೇನೆ. ಶ್ರೀಗಜಾನನ ಮಹಾರಾಜರು ನನ್ನ ಮೇಲೆ ವಿಶೇಷ ಪ್ರಕಾರ ಕೃಪೆಮಾಡಿ ನನ್ನನ್ನು ತಮ್ಮ ಆಶ್ರಯದಲ್ಲಿ ತಕ್ಕೊಂಡಿದ್ದಾರೆ. ಮತ್ತು ನಾಥಪಂಥದ ಅನುಯಾಯಿ ಮಾಡಿ ಅನಾಥನಾದ ನನ್ನನ್ನು ಸನಾಥನಾಗಿ ಮಾಡಿದ್ದಾರೆ. ಯಾವ ನಾನು ಹಿಂದೆ ದುಃಖದಾಯಕ ಕಷ್ಟಕಾರಕ ಸ್ಥಿತಿಯಲ್ಲಿದ್ದೆನೊ, ಅಂಥಾ ನಾನು ಈಗ ಇಷ್ಟು ಆನಂದಮಯ ಸ್ಥಿತಿಯಲ್ಲಿದ್ದೇನಲ್ಲ, ಅದನ್ನು ನನ್ನಿಂದ ವಾಚೆಯಿಂದ ಅಥವಾ ಬರಹದಿಂದ ವರ್ಣನ ಮಾಡಲಾಗದು.

(ಸಹಿ) ದತ್ತಾತ್ರೇಯ ಕೇಶವ ಭಟ (ಕವಿ-ಅಕೊಂಕ)

— ೩೧ —

ರಾ. ಕಾಶೀನಾಥ ಭೀಮಾಜಿ ಸೂರ್ಯವಂಶಿ, ನಾಶಿಕ ಇವರ ಅಧ್ಯಾತ್ಮಿಕ ಅನುಭವಗಳು: —

ಡಿಶೆಂಬರ ೧೯೩೮ನೇ ಇಸವಿಯಲ್ಲಿ ನಾನು ಒಂದು ದಿನ ಇನ್ಕಮಟೆಕ್ಸ ಖಾತೆಯೊಳಗಿನ ರಾವಸಾಹೇಬ ಪ್ರಧಾನ ಇವರ ಕೂದಲು ಕತ್ತರಿಸುವ ಸಲುವಾಗಿ ಹೋಗಿದ್ದೆ. ಅವರ ಕೂದಲು ಕತ್ತರಿಸುತ್ತಿರುವಾಗ ಅವರು ಸಮಾಧಿಯಂಥಾ ತನ್ಮಯ ಅವಸ್ಥೆಯಲ್ಲಿ ಹೋದದ್ದನ್ನು ಕಂಡೆನು. ನಾನು ಕೂದಲು ಕತ್ತರಿಸುವ ಕೆಲಸ ಸುರು ಮಾಡಿ ಆ ಸ್ಥಿತಿಯಲ್ಲೇ ಪೂರ್ಣ ಮಾಡಿದೆನು. ಹಾಗು ಅವರ ಗಡ್ಡ ಬೋಳಿಸುವದಿತ್ತು. ಅವರಿಗೆ ತೊಂದರೆಯಾದೀತು ಎಂಬ ಭೀತಿಯಿಂದ ನಾನು ಅರ್ಧ ತಾಸು ನಿಂತೆನು. ಯಾವಾಗ್ಗೆ ಅವರು ಭಾನದಮೇಲೆ ಬಂದರು, ' ನನ್ನ ಕೂಲು ಯಾವಾಗ್ಗೆ ಕತ್ತರಿಸಿ ಆದವು, ನನ್ನ ಗಡ್ಡ ಯಾಕೆ ಆಗಲಿಲ್ಲ, ' ಎಂದು ಅವರು ನನಗೆ ಕೇಳಿದರು. ಆಗ್ಗೆ ನಾನಂದೆ, " ಪ್ರೇಮ ಸಮಾಧಿಯಲ್ಲಿ ತಾವು ಮಗ್ನರಾಗಿದ್ದಿರಿ. ಅದರಲ್ಲಿ ವಿಘ್ನ ತರುವ ಪಾಪ ಮಾಡುವಂಥಾದ್ದು ನನಗೆ ಬೇಕಾಗಿಲ್ಲ. " ಆಮೇಲೆ ಪ್ರೇಮವೆಂದರೇನು ಎಂದು ಅವರು ಕೇಳಿದಾಗ, ನಾನು ಶ್ರೀಏಕನಾಥ ಮಹಾರಾಜರ ಪ್ರಸಿದ್ಧ ಅಭಂಗದೊಳಗಿನ ಮುಂದಿನ ಪದವನ್ನು ಅಂದು ತೋರಿಸಿದೆ, ಮತ್ತು ಹೇಳಿದೆ ತಾವು ಆ ಈಶ್ವರ ಪ್ರೀತಿಯಲ್ಲಿ ಪೂರಾ ನಿಮಗ್ನರಾಗಿದ್ದಿರೆಂತ ನಾನು ನೋಡಿದ; ' ಮುದ್ರಾತಿ ಪಾಂಚವಿ ಲಾವೂನಿಯಾಂ ಲಕ್ಷ | ತೊ ಆತ್ಮಾ ಪ್ರತ್ಯಕ್ಷ ಹರಿ ದಿಸೆ. ' ( ಅರ್ಥ — ಐದನೆ ಮುದ್ರೆಯಲ್ಲಿ ಲಕ್ಷ ಹಚ್ಚಿದರೆ, ಆತ್ಮನಾದ ಆ ಹರಿಯು ಪ್ರತ್ಯಕ್ಷ ಕಾಣಿಸುವನು. )

ನಂತರ ಅವರಂದರು, ನಾನು ನಿನಗೆ ಶ್ರೀಗಜಾನನ ಮಹಾರಾಜರ ಕಡೆಗೆ ಕರಕೊಂಡು ಹೋಗುವೆನು. ಸ್ವಲ್ಪ ದಿವಸಗಳಲ್ಲಿಯೇ ಬೆಳಿಗ್ಗೆ ಒಂಭತು ಹತ್ತು ಘಂಟೆಗೆ ನಾನು ಅವರ ಕಡೆ ಪುನಃ ಹೋದೆನು. ಆಗ ಅವರಂದರು ' ಇವತ್ತು ಸಂಜೆ ೫, ೫||ಯ ಸುಮಾರಕ್ಕೆ ನಾವು ಶ್ರೀಗಜಾನನ ಮಹಾರಾಜರ ದರ್ಶನಕ್ಕೆ ಹೋಗೋಣ, ' ಅಂದರು. ನಾನು ಪುನಹಾ ಸಂಜೆ ಐದು ಹೊಡೆಯುವಾಗ ಅವರ ಕಡೆ ಹೋದೆ, ಆದರೆ ಅವರು ಮನೆಯಲ್ಲಿ ಇದ್ದಿಲ್ಲ. ಅವರ ಪತ್ನಿಯವರು ಒಂದು ಕಾಗದ ನನ್ನ ಕೈಯಲ್ಲಿ ಕೊಟ್ಟು ಒಂದು ಮನೆಯ ಸರಿಯಾದ ಪತ್ತೆಯನ್ನು ನನಗೆ ಹೇಳಿದರು, ಮತ್ತು ಈ ಕಾಗದವನ್ನು ರಾವಸಾಹೇಬರು ವೈಯಲಿಕ್ಕೆ ಮರೆತಿದ್ದರು, ಅದನ್ನು ವೈದು ಅಲ್ಲಿ ಕೊಡಲಿಕ್ಕೆ ಹೇಳಿದರು. ನಾನು ಅಲ್ಲಿಗೆ ಹೋದರೆ, ಶ್ರೀಗಜಾನನ ಮಹಾರಾಜರು ಅಲ್ಲೇ ಇರುತ್ತಿದ್ದರು. ಆ ಪತ್ರವನ್ನು ಅವರ ಮುಂದಿಟ್ಟೆನು. ' ಇದು ಯಾರ ಪತ್ರ ' ಎಂದು ಅವರು ಕೇಳಿದರು. ' ಈ ಪತ್ರವು ರಾವಸಾಹೇಬ ಪ್ರಧಾನ ಇವರದಿದ್ದು ನನಗೆ ಅವರು ಭೆಟ್ಟಿಯಾಗಲಿಲ್ಲ ಎಂದು ಅದನ್ನು ಇಲ್ಲಿಗೆ ತಂದಿದ್ದೇನೆ, ' ಎಂದು ಅಂದೆನು. ಅನಂತರ ಕೂಡಲೆ

ರಾವಸಾಹೇಬ ಪ್ರಧಾನರು ಅಲ್ಲಿಗೆ ಬಂದರು, ಮತ್ತು ಮಹಾರಾಜರಿಗೆ ಅಂದರು, ‘ ಇವನು ನಮ್ಮ ಕ್ಲಾರ್ಕನಿದ್ದಾನೆ, ಇವನಿಗೆ ಧಾರ್ಮಿಕ ಪುಸ್ತಕಗಳನ್ನು ಓದುವದು ಮತ್ತು ಭಜನೆಯ ಬಹಳ ಪ್ರೀತಿ ಇದೆ, ಎಂದು ಇವನು ತಮ್ಮ ದರ್ಶನಕ್ಕೆ ಬಂದಿದ್ದಾನೆ. ’

ಆನಕ್ಕೆ ಮಹಾರಾಜರು ಏನೂ ಮಾತಾಡದೆ ಸ್ವಸ್ಥ ಕೂತರು. ನಾನು ಅಲ್ಲಿ ಕೂತಿರುವಾಗ್ಗೆ ಸ್ವಲ್ಪ ಕಾಲದಲ್ಲಿ ನನ್ನ ಸಮಾಧಿಯಂಥಾ ತನ್ಮಯಾವಸ್ಥಾ ಆಗಲಿಕ್ಕೆ ಸುರುವಾಯಿತು. ಅನಂತರ ಕೆಲವು ಹೊತ್ತಿನ ಮೇಲೆ ನಾನು ವ ರಾವ ಸಾಹೇಬರು ಮನೆಗೆ ಹೋಗಲಿಕ್ಕೆ ಹೊರಟೆವು. ದಾರಿಯಲ್ಲಿ, “ ನಾನು ಅಲ್ಲಿರುವಾಗ ನನಗೆ ಸಮಾಧಿಯಂಥಾ ತನ್ಮಯಾವಸ್ಥೆ ಯಾಕಾಯಿತು, ” ಎಂದು ಕೇಳಿದ್ದಕ್ಕೆ ಅವರಂದರು, ‘ ನೀನು ದೊಡ್ಡ ದೈವವಾನನು. ’ ನಂತರ ನಾನು ಮನೆಗೆ ಹೋದೆ. ಓದಲಿಕ್ಕೆಂತ ನಾನು ದಾಸಬೋಧವನ್ನು ತೆರೆದೆ, ಆದರೆ ನನಗೆ ಓದಲಾಗಲಿಲ್ಲ, ಮತ್ತು ನಾನು ಸಮಾಧಿ ಅವಸ್ಥೆಯಲ್ಲಿ ಪೂರಾ ತನ್ಮಯನಾಗಿ ಹೋದೆ. ನಾನು ಎಲ್ಲಿದ್ದೇನೆಂದು ನನಗೆ ಧ್ಯಾನಕ್ಕೆ ಬಂದಿಲ್ಲ.

ಮರುದಿನ ನಾನು ರಾವಸಾಹೇಬ ಪ್ರಧಾನರ ಕಡೆಗೆ ಹೋದೆ. ನಡೆದ ವೃತ್ತಾಂತವನ್ನು ಅವರಿಗೆ ಹೇಳಿದಾಗ, ಅವರು ಅದೇ ದಿನ ನನಗೆ ಮಹಾರಾಜರ ಕಡೆಗೆ ಹೋಗು ಎಂದು ಹೇಳಿದರು ಮಹಾರಾಜರೇ ಈ ಸಂಗತಿಯ ಕಾರಣವನ್ನು ನಿನಗೆ ಸರಿಯಾಗಿ ಹೇಳುವರು ಎಂದು ಅಂದರು. ಆ ಪ್ರಕಾರ ನಾನು ಮಹಾರಾಜರ ಕಡೆ ಹೋಗಿರುವಾಗ ಅವರು ನನಗೆ ಮರುದಿನ ಮುಂಜಾನೆ ೧೦-೧೧ರ ಸುಮಾರಕ್ಕೆ ತಮ್ಮ ಕಡೆ ಬರಲಿಕ್ಕೆ ಹೇಳಿದರು. ಮನೆಗೆ ಹೋಗುತ್ತಿರುವಾಗ ನನಗೆ ಪುನಃ ಮೊದಲಿನಂತೆ ತನ್ಮಯಾವಸ್ಥೆ ಬಂತು. ನಾನು ಮರುದಿನ ಹನ್ನೊಂದು ಗಂಟೆಯುಷಾಗ ಮಹಾರಾಜರ ಕಡೆಗೆ ಹೋಗಿರುವಾಗ ‘ ಏನು ಬೇಕು ’ ಅಂತ ಮಹಾರಾಜರು ಕೇಳಿದರು. ಆಗ, ‘ ನನಗೆ ದರ್ಶನ ಬೇಕು ’ ಎಂದು ಅಂದಾಗ ಅವರಂದರು, ‘ ನಿನಗೆ ದರ್ಶನವಾಯಿತು. ಈಗ ನೀನು ಹೋಗು. ’ ಆಗ, ‘ ನನಗೆ ತಾವು ಇವತ್ತು ಯಾಕೆ ಕರೆಸಿದ್ದು ಎಂದು ಕೇಳಿದಾಗ , ‘ ನಿನಗೇನು ಬೇಕು ಎಂತ ಕೇಳುವದಕ್ಕೆ ನಿನಗೆ ಕರೆಸಿದ್ದು, ’ ಅಂತ ಅವರಂದರು. ನಂತರ ನಾನು ಅವರಿಗೆ ‘ ನನಗೆ ಆತ್ಮಜ್ಞಾನ ಬೇಕು ’ ಎಂದು ಕೇಳಿದ್ದಕ್ಕೆ ‘ ಅದು ನಿನಗೆ ಸಿಕ್ಕೀತು’ ಎಂದು ಅಂದರು. ಆ ದಿನದವಲಾಗಾಯತು ನಾನು ಒಂದೇ ಸಮನೆ ಸಮಾಧಿ ಸ್ಥಿತಿಯಲ್ಲಿ ಹೋಗಹತ್ತಿ ಪೂಜೆ, ಭಜನೆ ಇವನ್ನು ಮಾಡಲಾಗದಂತಾಯಿತು.

ಅನಂತರ ನನಗೆ ಅಂತರ್ದೃಷ್ಟಿ ಪ್ರಾಪ್ತವಾಯಿತು. ನಾನು ಹೃದಯದಲ್ಲಿ ಶ್ರೀವಿಷ್ಣುವಿನ ಸಂಪೂರ್ಣ ಮೂರ್ತಿಯನ್ನು ನೋಡಹತ್ತಿದೆನು. ನನಗೆ

ನನ್ನ ದೇಹವ ಪೂರ್ಣ ವಿಸ್ಮೃತಿಯಾಗುತ್ತಿತ್ತು. ಹೀಗೆ ಸುಮಾರು ಮೂರು ನಾಲ್ಕು ದಿನ ನಡಿಯಿತು. ನಾನು ದಿನಾಲು ಶ್ರೀಮಹಾರಾಜರ ದರ್ಶನಕ್ಕೆ ಹೋಗುತ್ತಿದ್ದೆ. ಏಳೆಂಟುದಿನಗಳ ಮೇಲೆ ಮಹಾರಾಜರು ನನಗೆ ಉಪದೇಶವನ್ನು ಕೊಟ್ಟರು. ಕೆಲವು ದಿನಗಳ ಮೇಲೆ ಮುಂದೆ ಹೇಳಿದ ಅನುಭವಗಳು ಬಂದವು.

ಮಧ್ಯಾನ್ಹದ ಮೇಲೆ ನಾನು ಗುರುಶಿಷ್ಯ ವಿಜ್ಞಾನದೀಪಿಕೆಯನ್ನು ಓದುತ್ತಿರುವಾಗ ಸಮಾಧಿಯಂಥ ಸ್ಥಿತಿಯಾಯಿತು. ಆಮೇಲೆ ನಾನು ದೇವರಕೋಣೆಗೆ ಹೋಗಿ ಕೂತುಕೊಂಡೆ. ನಾನು ಸಮಾಧಿಯಂಥ ತನ್ಮಯಾವಸ್ಥೆಯಲ್ಲಿರುವಾಗ ನನಗೆ ಈ ಮುಂದೆ ಹೇಳುವ ದೃಶ್ಯವು ತೋರಿತು. ಮಹಾರಾಜರು ನನಗೆ ಒಂದು ಆಳವಾದ ಕಂದುರದಲ್ಲಿ ಕರಕೊಂಡು ಹೋದರು. ಅಲ್ಲಿ ನಾನು ಒಂದು ದೊಡ್ಡ ಶಿವಲಿಂಗವನ್ನು ಕಂಡೆನು. ಕೆಲವು ಹೊತ್ತು ನಾನು ಅಲ್ಲೆ ಸುಮ್ಮನೆ ಕೂತಿರುವಾಗ ಆ ಲಿಂಗದ ಸಮೀಪ ಒಂದು ದೊಡ್ಡ ಪರ್ವತ ಕಾಣಿಸಿತು. ಅದರೊಳಗಿಂದ ನೀರಿನ ಒಂದು ದೊಡ್ಡ ಬುಗ್ಗೆಯು ಹರಿಯುವದನ್ನು ಕಂಡೆ. ಆ ಬುಗ್ಗೆಯು ಆಕಾಶದೊಳಗಿಂದ ಕೆಳಗೆ ಬಂದು ಭೂಮಿಯ ಮೇಲೆ ಬಿತ್ತು, ಅಲ್ಲಿಂದ ಕಾರಂಜಿಯಂತೆ ಅದು ಮೇಲೆ ಪುಟಿಯುತ್ತಿದ್ದದ್ದನ್ನು ನೋಡಿದೆ. ನಂತರ ಮಹಾರಾಜರು ನನಗೆ ಬೇರೆ ರಸ್ತೆಯಿಂದ ಕರಕೊಂಡು ಹೋದರು. ಅಲ್ಲಿ ನಾನೊಂದು ದೊಡ್ಡ ಗವಿಯನ್ನು ನೋಡಿದೆ. ನಾನು ಅದರೊಳಗೆ ಹೋದೆ ಮತ್ತು ಅಲ್ಲಿ ಒಂದು ಸಮಾಧಿಯ ಹತ್ತರ ಒಬ್ಬ ಯೋಗಿಯು ಕೂತಿದ್ದು ಕಂಡೆ. ನಾನು ಆ ಯೋಗಿಯ ವ ಸಮಾಧಿಯ ದರ್ಶನ ತಕ್ಕೊಂಡೆ. ನಂತರ ಸಮಾಧಿ ಸ್ಥಿತಿಯು ಇಳಿದುತಾಯಿತು. ಮತ್ತು ದೇಹಭಾನಕ್ಕೆ ಬಂದು ನೋಡುತ್ತೇನೆ, ನಾನು ಹೊಟ್ಟೆ ಕೆಳಗಾಗಿ ಮಲಗಿಕೊಂಡಿದ್ದೇನೆ ಎಂದು ಗೊತ್ತಾಯಿತು.

ಕೆಲವು ದಿನಗಳ ಮೇಲೆ ಮುಂದೆ ಒಂದು ಗುರುವಾರ ನನಗೊಂದು ಮುಂದಿನಂತೆ ವಿಶಿಷ್ಟ ಅನುಭವ ಬಂತು. ಮಧ್ಯಾಹ್ನದ ಮೇಲೆ ನಾನು ಮೈತುಂಬ ಚಾದರ ಹೊದ್ದುಕೊಂಡು ಮಲಗಿದ್ದೆ. ಇಷ್ಟರಲ್ಲಿ ಒಬ್ಬ ಸಾಧುವು ನನ್ನ ಹತ್ತರ ಬಂದು ನನ್ನ ಕೈಕಾಲು ಮತ್ತು ಸರ್ವಾಂಗವನ್ನು ಒತ್ತುತ್ತಿದ್ದನು. ನಾನು ಮುಖದ ಮೇಲಿನ ಚಾದರವನ್ನು ತೆಗೆಯುತ್ತಿರುವಾಗ, ಅವನು ನನಗೆ ಹಾಗೆ ಮಾಡಗೊಡಲಿಲ್ಲ, ಮತ್ತು ಅಂದನು “ ನೀನು ಬಹಳ ಪರಿಶ್ರಮಾಡಿ ದಣಿದಿ ಎಂದು ಬರೆ, ‘ಜಯಗುರು ಮಾವುಲಿ ’ ಹೀಗೆ ಅನ್ನುತ್ತ ಮಲಗಿಕೊಂಡಿರು. ಇದೆಲ್ಲ ನಾನು ಪೂರಾ ಎಚ್ಚರ ಇರುವಾಗ್ಗೆ ಮತ್ತು ಸರ್ವಜಗತ್ತಿನ ದಿನದಂತೆ ಅರಿವು ಇರುತ್ತಿರುವಾಗ ಘಟಿಸಿತು. ಆಗ ನಾನು ನಿದ್ರೆಯಲ್ಲಿ ಅಥವಾ ಸಮಾಧಿಯೊಳಗೆ ಇದ್ದಿಲ್ಲ. ಆಮೇಲೆ ನಾನು ಹೊದ್ದುಕೊಂಡದ್ದನ್ನು ತೆರೆದು ನೋಡಿದೆ, ಅಲ್ಲಿ ನನ್ನ ಸಮೀಪ ಯಾರೂ ಇದ್ದಿಲ್ಲ. ನನಗೆ ಆದಿನ ನಾಶಿಕದ ಹೊರಗೆ ಹೋಗುವದಿತ್ತು, ಎಂದು ನಾನು ಪ್ರಯಾಣದ ಜೀನಸು ತಕ್ಕೊಂಡು, ಮಹಾರಾಜರ ಕಡೆ ಹೋಗಿ ನಡೆದ

ಸಂಗತಿಯನ್ನು ಹೇಳಿದೆ. ಆಗ ಅವರಂದರು, 'ಆತನು ನಾನಲ್ಲವೆಂತ ನಿಶ್ಚಯು ವಿದೆಯೋ ?' ನಾನು ಉತ್ತರ ಕೊಟ್ಟೆ, 'ನನಗೆ ಏನೂ ಹೇಳಲಿಕ್ಕೆ ಬರುವದಿಲ್ಲ. ಆತನು ಸಾಧು ಇದ್ದನು, ಇಷ್ಟು ಮಾತ್ರ ನನಗೆ ನಿಶ್ಚಯುವದೆ. ಮತ್ತು ಮೊಣ ಕಾಲ ಕೆಳಗಿನ ಕಾಲು ಕಂಡೆ, ರೂಪ ಮಾತ್ರ ಕಾಣಲಿಲ್ಲ.' ನಂತರ 'ಪೂರ್ವಜನ್ಮ ದಲ್ಲಿ ನೀನು ಯೋಗಾಭ್ಯಾಸವನ್ನು ಮಾಡುತ್ತಿದ್ದೀ' ಹೀಗೆ ನನಗೆ ಅವರಂದರು.

ನಂತರ ನಾನು ನಾಶಿಕದಿಂದ ಹೊರಟು ದಿಡೋರಿ ತಾಲೂಕಿನ ಕಾರಂಜಿ ಊರಲ್ಲಿ ಬಂದು ಅಲ್ಲಿ ಸುಮಾರು ಹದಿನೈದು ದಿನ ಇದ್ದೆ, ಅಲ್ಲಿ ಸಹಾ ನನ್ನ ಅಭ್ಯಾ ಸವನ್ನು ಚಾಲು ಇಟ್ಟಿದ್ದೆ. ಕೆಲವು ದಿವಸಗಳ ಮೇಲೆ ನಾಶಿಕಕ್ಕೆ ತಿರಿಗಿ ಬಂದ ನಂತರ ನಾನು ಧ್ಯಾನಕ್ಕೆ ಕೂತಿರುವಾಗ ಜೀವ ಹೋಗುವದೊ ಎಂಬಂತೆ ಆಗಿ ಶರೀರವು ಒಮ್ಮೆಲೆ ಸರಿದಾಡಹತ್ತಿತು. ಅದು ಒಮ್ಮೆ ಬಲಬದಿಗೆ, ಒಮ್ಮೆ ಬೋರ್ಲ, ಒಮ್ಮೆ ಅಂಗಾತ, ಮತ್ತೊಮ್ಮೆ ಎಡಬದಿಗೆ ಬೀಳಹತ್ತಿತು. ಆದರೂ ನಾನು ಅಭ್ಯಾಸವನ್ನು ನಡಿಸುತ್ತಿದ್ದೆ. ನಂತರ ಕೆಲವು ದಿವಸಗಳಲ್ಲಿ ನನಗೊಂದು ದೊಡ್ಡ ವರ್ತುಳ ಕಾಣಿಸಿತು.

ಒಂದು ದಿವಸ ನನ್ನ ನಾಭಿಪ್ರದೇಶವು ಎತ್ತಲಾಗೊ ಸೆಳೆದಂತಾಗಿ ಅಲ್ಲಿ ನೋಯಿಸಲಿಕ್ಕೆ ಹತ್ತಿತು. ಕೆಲವು ದಿನಗಳ ನಂತರ ನಾನು ಧ್ಯಾನಕ್ಕೆ ಕೂತಿರು ವಾಗ ನಾನು ಒಂದು ದೊಡ್ಡ ನಳ ಕಂಡೆ. ಮತ್ತು ಶ್ರೀಗಜಾನನ ಮತ್ತು ಶ್ರೀ ಉಮಾಮಹೇಶ ಇವರ ದರ್ಶನವಾಯಿತು ನಾಭಿಕಮಲದ ಸಮೀಪ ಬ್ರಹ್ಮ ದೇವರ ಮತ್ತು ಹೃತ್ಕಮಲದ ಹತ್ತರ ಶ್ರೀಶೇಷಶಾಯಿಯ ದರ್ಶನವಾಯಿತು. ಲಕ್ಷ್ಮಿಯು ವಿಷ್ಣುವಿನ ಪಾದ ಸಂವಾಹನೆ ಮಾಡುತ್ತಿದ್ದು ಶೇಷನು ಅವರ ಮೇಲೆ ತನ್ನ ಹೆಡೆ ಬಿಚ್ಚಿ ಹಿಡಿದಿದ್ದನು. ಶೇಷನ ಮಸ್ತಕದ ಮೇಲೆ ಒಂದು ದೊಡ್ಡ ಪರ್ವತವಿತ್ತು. ವಿಷ್ಣುವಿನ ನಾಭಿಕಮಲದೊಳಗಿಂದ ಒಂದು ಉದ್ದ ದೇಟಿನ ಕಮಲವು ಮೇಲೆ ಬಂದಿದ್ದು, ಆ ಕಮಲದ ಮೇಲೆ ಬ್ರಹ್ಮದೇವರು ಕೂತಿದ್ದರು. ಅವರ ಪಾದದ ಹತ್ತರ ಒಂದು ದೊಡ್ಡ ಸಮುದ್ರವಿತ್ತು.

ಇದರ ನಂತರ ಕೆಲವು ದಿನಗಳ ಮೇಲೆ ನನಗೆ ಶ್ರೀಮಾರುತಿ, ಶ್ರೀರಾಮ ಚಂದ್ರ, ಧ್ರುವ, ಶ್ರೀಶಂಕರ ಮತ್ತು ರಾಮದಾಸ ಇವರ ದರ್ಶನಗಳಾದವು. ಸುಷುಮ್ನಾದ್ವಾರವು ತೆರೆಯಿತು ಮತ್ತು ಬೆನ್ನು ಮತ್ತು ಟೊಂಕ ಇವು ನೋಯು ಸಲಿಕ್ಕೆ ಹತ್ತಿದವು, ಎಂಬಂತೆ ತೋರಿತು. ಧ್ಯಾನ ಮಾಡುತ್ತ ಇರುವಾಗ ನಾನು ಒಂದು ಕಮಲದಲ್ಲಿ ಸಿಕ್ಕಿಬಿದ್ದು ಮಾರ್ಗ ಕಾಣಿಸುತ್ತಿದ್ದಿಲ್ಲ; ಆಗ ನಾನು ಮಹಾರಾಜರ ಧ್ಯಾನ ಮಾಡಿದ ಮೇಲೆ ನನಗೆ ಮಾರ್ಗವು ತೋರಿತು. ನಾನಾಬಣ್ಣದ ಮತ್ತು ಭಂಗಾರದ ವಗೈರೆ ಬಹಳ ಚಕ್ರಗಳನ್ನು ಗೋಲಕಗಳನ್ನು ನಾನು ನೋಡಿದೆ.

ಒಂದು ಗೋಲಕದಲ್ಲಿ ತ್ರಿಕೋಣಾಕಾರದ ಒಂದು ಪ್ರದೇಶವನ್ನು ನೋಡಿದೆ, ಮತ್ತು ಅಲ್ಲಿ ಒಂದು ದೊಡ್ಡ ರಸ್ತೆ ಕಾಣಿಸಿತು. ಮೂರುನಾಲ್ಕುದಿನ ಈ ದೃಶ್ಯವು ಚಾಲು ಇತ್ತು. ನಂತರ ನನ್ನ ಸರ್ವಶರೀರದಲ್ಲಿ ಕಂಪವಾಗುತ್ತದೆಂಬಂತೆ ತೋರಿತು. ಆದರೂ ನಾನು ಯಾವಾಗ ಮಹಾರಾಜರ ಧ್ಯಾನ ಮಾಡಹತ್ತಿದೆ, ಆಗ ಈ ಎಲ್ಲ ಭಾವನೆಯು ಇಲ್ಲದಂತಾಯಿತು. ಈ ಸ್ಥಿತಿ ಸುಮಾರು ಹದಿನೈದು ದಿನಗಳತನಕ ಇತ್ತು.

ಆಮೇಲೆ ನಾನು ಎಲ್ಲ ಕಡೆಯಲ್ಲಿ ಅಪಾರ ನೀರು ತುಂಬಿದ್ದು ಕಂಡೆನು. ತಲೆಯ ಹಿಂದಿನ ಭಾಗವು ಸ್ವಲ್ಪ ನೋಯುತ್ತಿತ್ತು, ಅಲ್ಲಿ ಬಹಳ ಕಮಲಗಳನ್ನು ಕಂಡೆನು. ಅವುಗಳಲ್ಲಿ ಕೆಲವು ಆರಿಗೆಂಪು ಕೆಲವು ಹಳದಿ ವರ್ಣದವು ಇದ್ದವು. ಒಮ್ಮೊಮ್ಮೆ ವಿಶಾಲವಾದ ಉದ್ಯಾನಗಳು ಮತ್ತು ಒಮ್ಮೊಮ್ಮೆ ಹಳದಿವರ್ಣದ ಪರ್ವತಗಳು ಕಾಣಿಸುತ್ತಿದ್ದವು. ಅನಂತರ ಸೋನೇರಿ ವರ್ಣದ ಪ್ರಕಾಶವು ತೋರಿತು; ನಂತರ ತಲೆಯ ಮಧ್ಯದಲ್ಲಿ ಕಾಣಹತ್ತಿತು ಮತ್ತು 'ಸೋಹಂ' ದ ಧ್ವನಿ ಒಮ್ಮೆ ಕಿವಿಯಲ್ಲಿ ಒಮ್ಮೆ ಹೃದಯದಲ್ಲಿ ಕೇಳಿಸುತ್ತಿತ್ತು. ಭ್ರೂಮಧ್ಯದಲ್ಲಿ ಸಣ್ಣ ಆಕಾರದ ಓಂಕಾರವನ್ನು ಕಂಡೆನು.

ನಂತರ ನಾನು ರೋಗಪೀಡಿತನಾದಾಗ ಮಹಾರಾಜರು ನನ್ನ ರಕ್ಷಣೆ ಮಾಡುತ್ತ ಇದ್ದಾರೆ ಅಂತ ತೋರಿತು. ಈ ರೋಗ ಕಾಲದಲ್ಲಿ ನಾನು ದೊಡ್ಡದೊಂದು ನದಿಯನ್ನು ನೋಡಿದೆನು. ಮಹಾರಾಜರು ನನ್ನನ್ನು ಆ ನದಿಯೊಳಗಿಂದ ಸುರಕ್ಷಿತವಾಗಿ ಅತ್ತಕಡೆ ದಡಿಗೆ ಮುಟ್ಟಿಸಿದರು. ನದಿಯ ಅತ್ತಕಡೆಗೆ ಒಂದು ಭಯಂಕರ ಅರಣ್ಯ ವ ಉನ್ನತವಾದ ಬಂಡೆಕಲ್ಲುಗಳಿದ್ದವು. ಈ ಬಂಡೆಗಳ ನಡುವೆ ಪೊಳ್ಳು ಇತ್ತು. ಮಹಾರಾಜರು ನನ್ನನ್ನು ಆ ಪೊಳ್ಳಿನ ಕಡೆಯಿಂದ ಮೇಲೆ ತಕ್ಕೊಂಡರು, ಮತ್ತು ಶಿಖರದ ಮೇಲೆ ಸುರಕ್ಷಿತವಾಗಿ ತಂದರು.

ನನ್ನ ರೋಗದಿಂದ ನಾನು ನೆಟ್ಟಗಾದಮೇಲೆ ನಾನು ಜಾಂಬೋರಿಗೆ ಹೋದೆನು. ಅಲ್ಲಿ ನಾನು ಧ್ಯಾನದ ಅಭ್ಯಾಸವನ್ನು ಪ್ರತಿದಿನ ಮಾಡುತ್ತಿದ್ದಿಲ್ಲ, ಎಂದಾದರೂ ಧ್ಯಾನ ಮಾಡುತ್ತಿದ್ದೆ. ನನ್ನ ಪ್ರಕೃತಿಯು ಸುಧಾರಿಸಿದಮೇಲೆ ನಾನು ನಾಶಿಕಕ್ಕೆ ಬಂದೆನು, ಮತ್ತು ಮಹಾರಾಜರ ದರ್ಶನಕ್ಕೆ ಹೋದೆನು. ಪ್ರಸ್ತುತದಲ್ಲಿ ನಾನು ಆಕಾಶದ ವರ್ಣದಂಥ ವರ್ಣವನ್ನು ಸ್ಪಷ್ಟವಾಗಿ ನೋಡುತ್ತೇನೆ, ಮತ್ತು ಬಹಳಸಾರಿ ಅದರಲ್ಲಿ ನಿಮಗ್ನನಾಗಿರುತ್ತಿದ್ದೆ. ಭ್ರೂಮಧ್ಯಸ್ಥಾನದಲ್ಲಿ ಶುಭ್ರವರ್ಣದ ಒಂದು ಸಣ್ಣ ಚಕ್ರವನ್ನು ನೋಡಿದೆ. ನನ್ನ ಸರ್ವ ಶರೀರವು ತಲೆಯಕಡೆಗೆ ಎಳೆಕೊಂಡಂತೆ ತೋರುವದು. ಸದ್ಗುರು ನನ್ನ ಮಾರ್ಗದರ್ಶಕರಾಗಿದ್ದು, ನಾನು ಸರ್ವಸ್ವಿ ಅವರ ಆಶ್ರಯದ ಕೆಳಗೆ ಇದ್ದೇನೆಂದು ನನಗನಿಸುವದು. ಸದ್ಗುರು ತಾಯಿಯು ತನ್ನ ಕೂಸಿನ ಹಿತವು ಯಾವದರಲ್ಲಿ ಇದೆ ಎಂದು ತಿಳಿದು ಆಕೆಯು

ಪ್ರೀತಿಯು ಪೂರ್ಣ ಸ್ವಾರ್ಥರಹಿತವಾಗಿರುತ್ತದೆ. ನಾನು ಸದ್ಗುರುವಿನ ಸ್ವಾಧೀನ ಇದ್ದೇನೆ. ಅವರೇ ನನ್ನ ವಿಶ್ರಾಂತಿಸ್ಥಾನರಾಗಿದ್ದು, ಅವರದೆ ನನಗೆ ಆಧಾರವು. ಅವರ ಮೇಲೆ ನನ್ನದೆಲ್ಲ ಅವಲಂಬಿಸಿರುವದು.

ತಾ. ೨೧-೨-೧೯೪೦.

(ಸಹಿ) ಕಾಶೀನಾಥ ಭೀಮಾಜಿ ಸೂರ್ಯವಂಶಿ

— ೩೨ —

ಶ್ರೀ. ದಗಡು ಧಾಕು ಸೋನಾರ, ದುಸಾಣೆ, ಧುಳೆ ಇವರ ಅನುಭವಗಳು.

ನನ್ನ ಸುದೈವದಿಂದ ನನಗೆ ಮಹಾನ್‌ಯೋಗಿ ಶ್ರೀಗಜಾನನ ಮಹಾರಾಜ ಇವರ ಭೆಟ್ಟಿಯಾಯಿತು. ಬೇಗನೆ ಅವರು ನನಗೆ ರಾಜಯೋಗದ ದೀಕ್ಷೆಯನ್ನು ಕೊಟ್ಟರು. ನಾನು ಈಗ ೬೩ ವರ್ಷ ವಯಸ್ಸಿನ ವೃದ್ಧನಿರುವದರಿಂದ ನನ್ನ ಅನುಭವಗಳನ್ನು ಯೋಗ್ಯ ಪ್ರಕಾರ ವರ್ಣಿಸುವದು ಕಠಿಣವದೆ. ನಾನು ನಾಶಿಕದಲ್ಲಿ ಮಹಾರಾಜರ ದರ್ಶನಕ್ಕಾಗಿ ತಾ. ೨೩ನೇ ಜೂನ ೧೯೩೯ ನೇ ಇಸವಿಯಲ್ಲಿ ಹೋಗಿದ್ದೆ. ಅವರು ನನ್ನ ಅನುಭವಗಳನ್ನು ಬರೆದಿಡಲಿಕ್ಕೆ ಹೇಳಿದ್ದರಿಂದ ನಾನು ಹಾಗೆ ಪ್ರಯತ್ನ ಮಾಡುತ್ತಿದ್ದೇನೆ.

ಕಣ್ಣು ಮುಚ್ಚಿಕೊಂಡು 'ಸೋಹಂ' ಜಪಮಾಡಲಿಕ್ಕೆ ನಾನು ಆರಂಭಿಸಿದೆ. ಸ್ವಲ್ಪ ಮಿನಿಟುಗಳಲ್ಲಿ ಅಂಧಃಕಾರವು ಇಲ್ಲದಂತಾಯಿತು, ಮತ್ತು ಸ್ವಚ್ಛ ಪ್ರಕಾಶದಲ್ಲಿ ನನಗೆ ಶಂಕರನ ದರ್ಶನವಾಯಿತು. ನಾನು ರಾತ್ರಿ ಮಲಗಿಕೊಂಡಿದ್ದಾಗ ಒಮ್ಮಿಂದೊಮ್ಮೆ ತೋಫಿನ ಶಬ್ದವು ಕೇಳಿದೆ. ಅದು ಇಷ್ಟು ದೊಡ್ಡದಿತ್ತು, ನನ್ನ ಕಿವಿಗಳು ಕಿವುಡಾದಂತಾಯಿತು. ಕೆಲವು ದಿನ ಜಪಮಾಡಿದ ನಂತರ ಕಿವಿಯ ಪರದೆಗಳು ದೂರವಾದವೆಂಬಂತೆ ಅನಿಸಿತು. ಮತ್ತು ಮನೆಯ ಬಾಗಲು ತೆರದಂತೆ ಕಿವಿಯ ಪರದೆಗಳು ತೆರೆದವು. ಕೆಲವು ದಿನಗಳ ಮೇಲೆ ಮಹಾರಾಜರು ನನಗೆ ಅಂತರ್ದೃಷ್ಟಿ ಸಂಬಂಧಹೇಳಿ, ದೃಷ್ಟಿ, ಶ್ವಾಸ, ವ ಮೌನ ಇವುಗಳ ಸಹಾಯದಿಂದ ಅಭ್ಯಾಸ ಮಾಡಲಿಕ್ಕೆ ಹೇಳಿದರು. ಈ ಅಭ್ಯಾಸವನ್ನು ಮಾಡಹತ್ತಿದಮೇಲೆ, ಕಣ್ಣು ಮುಚ್ಚಿರುವಾಗ ಮೊದಲು ಕತ್ತಲು ಇತ್ತು. ನಂತರ ಕೆಳಗಡೆ ನೋಡಿವಾಗ ನನಗೆ ಗುಹೆಯಂಥಾ ಅಥವಾ ಭೂಮಿಯೊಳಗಿನ ಹಗೆಯಂಥಾ ಒಂದು ದೊಡ್ಡ ನಳ ಕಾಣಿಸಿತು. ಕೆಲವು ದಿನ ನಾನು ಆ ನಳ ಅಥವಾ ಗುಹೆಯಲ್ಲಿ ಇಳಿಯುತ್ತಿದ್ದೇನೆಂಬಂತೆ ಭಾಸವಾಯಿತು. ಆ ಗುಹೆಯಲ್ಲಿ ತಿರುಗಾಡುತ್ತಿರುವಾಗ, ನಾನು ನಾನಾವಿಧದ ವೃಕ್ಷ, ವನ, ಪರ್ವತದ ದಾರಿಗಳು, ನದಿ ಮೊದಲಾದವುಗಳ್ನು ನೋಡಿದೆನು. ಒಂದು ದೊಡ್ಡ ಕೆರೆಯನ್ನು ಕಂಡೆನು. ಅದನ್ನು ನಾನು ಬಹಳ ಕಷ್ಟದಿಂದ ದಾಟಿದೆ, ಮತ್ತು ಕಡೆಗೆ ಪರತೀರಕ್ಕೆ ಮುಟ್ಟಿದೆನು. ಅಲ್ಲಿ ನಾನು ಒಂದು ತ್ರಿಕೋ

ಣಾಕಾರದ ಛಾವಿಯನ್ನು ನೋಡಿದೆನು ಮತ್ತು ಗಣಪತಿಯ ದರ್ಶನವೂ ಆಯಿತು. ತಿರಿಗಿ ಬರುವಾಗ ನನಗೆ ಮೂರು ನದಿಗಳು ತೋರಿದವು, ಅವು ಗಳ ಪೈಕಿ ಎರಡರೊಳಗಿಂದ ಜ್ವಾಲೆಗಳು ಹೊರಗೆ ಏಳುತ್ತಿದ್ದವು. ಮತ್ತು ಯಾವ ದರೊಳಗಿಂದ ಜ್ವಾಲೆಗಳು ಹೊರಡುತ್ತಿದ್ದಿಲ್ಲ, ಅದು ಸುಷುಮ್ನಾ ನಾಡಿ ಎಂದು ಪ್ರಸಿದ್ಧವಾಗಿದೆ, ಎಂಬದು ನನಗೆ ಅನಂತರ ತಿಳಿದು ಬಂತು.

ಈ ಪ್ರಕಾರ ಕೆಲವು ದಿನಗಳು ಹೋದ ಬಳಿಕ ನನ್ನ ಮನಸ್ಸಿನ ಸಾವಧಾನತೆಯು ಹೋಯಿತೆಂಬಂತೆ ನನಗನಿಸಿತು. ಆದರೂ ಸದ್ಗುರುಗಳ ಕೃಪೆಯ ಮೇಲೆ ಭರವಸೆ ಇಟ್ಟು, ನಾನು ಮುಂದೆ ಅಭ್ಯಾಸವನ್ನು ನಡಿಸಿದೆನು. ಕೆಳಗೆ ಹೋಗುತ್ತಿರುವಾಗ ನಾನು ಅಂತರ್ದೃಷ್ಟಿಯ ಲಕ್ಷವನ್ನು ನಾಭಿಸ್ಥಾನದಕಡೆಗೆ ಹಚ್ಚಿದೆ. ಅಲ್ಲಿ ಶ್ರೀವಿಷ್ಣು ಶೇಷನಮೇಲೆ ಮಲಗಿಕೊಂಡಿದ್ದು, ಲಕ್ಷ್ಮಿಯು ಪಾದಸಂವಾಹನ ಮಾಡುತ್ತಾಳೆ ಎಂತ ತೋರಿತು. ಸ್ವಲ್ಪವೆ ಹೊತ್ತಿನಲ್ಲಿ ಶ್ರೀವಿಷ್ಣುವಿನ ನಾಭಿ ಪ್ರದೇಶದೊಳಗಿಂದ ಒಂದು ಪಂಚಮುಖ ಪುತ್ಥಳಿಯು ಹೊರಬತ್ತು. ಅವನು ಬ್ರಹ್ಮದೇವನು. ಕೆಲವು ಹೆಚ್ಚಿಗೆ ದಿನ ಅಭ್ಯಾಸ ಮಾಡಿದಮೇಲೆ, ಹೃದಯದಲ್ಲಿ ಕೆಂಪುಬಣ್ಣದ ಕಮಲವು ಕಾಣಿಸಿತು ಮತ್ತು ಅದರಲ್ಲಿ ಶ್ರೀವಿಷ್ಣು ಅಥವಾ ಶ್ರೀಲಕ್ಷ್ಮಿ ಕಾಣಿಸುತ್ತಿದ್ದರು. ಸ್ವಲ್ಪ ಹೆಚ್ಚಿಗೆ ಅಭ್ಯಾಸವಾದಮೇಲೆ ನಾನು ಆ ಕಮಲದೊಳಗೆ ಶೇರಿದೆ. ಆಗ ಇಂದ್ರಭುವನವು ನೋಡಲು ಶಕ್ಯವಾಯಿತು. ಆ ಇಂದ್ರನ ದರಬಾರಿನಲ್ಲಿ ಸ್ವತಃ ಇಂದ್ರ, ಚಂದ್ರ ವ ನೃತ್ಯ ಮಾಡುವ ಗಂಧರ್ವರು ಕಾಣಿಸಿದರು. ಮತ್ತು ಆ ಸರ್ವ ದರಬಾರವು ನಾನಾ ದೇವತೆಗಳಿಂದ ತುಂಬಿ ಹೋದಂತೆ ತೋರಿತು. ಮುಂದೆ ನಾನು ಚಿತ್ರಗುಪ್ತಯಮ, ಅನೇಕ ಋಷಿಗಳು, ಕುಬೇರ, ಪಿತೃಗಳು, ಬ್ರಹ್ಮದೇವ, ವಿಷ್ಣು ಮತ್ತು ಶಿವ ಇವರನ್ನೆಲ್ಲ ನೋಡಿದೆ. ಅನಂತರ ನೀಲಪ್ರಕಾಶ ವ ನೀಲಚಕ್ರವು ಕಾಣಿಸಿದವು, ಮುಂದೆ ನೀಲವರ್ಣದ ಹೊರತು ಬೇರೆ ಯಾವದೂ ಕಾಣಿಸಲಿಲ್ಲ.

ಇನ್ನೂ ಕೆಲವು ದಿವಸಗಳಮೇಲೆ ನಾನು ಶ್ರೀವಿಷ್ಣುವಿನ ಹತ್ತು ಅವತಾರ ಗಳನ್ನು ಕಂಡೆನು. ಶ್ರೀಕೃಷ್ಣನು ತನ್ನ ಪೆಂದ್ಯಾ, ಸುದಾಮ ವ ಇತರ ಬಾಲ ಗೆಳೆಯರಕೂಡ ಬಹಳಮಂದಿ ಗೋಪಿಕಾ ಸ್ತ್ರೀಯರಕೂಡ ಆಡುತ್ತಿರುವಾಗ ನಾನು ನೋಡಿದೆನು, ಬಲರಾಮನನ್ನೂ ಕಂಡೆನು. ಎಲ್ಲಕಡೆಯಲ್ಲಿ ಮಳೆಯು ಕಾಣುತ್ತಿತ್ತು. ಮತ್ತು ಶ್ರೀಕೃಷ್ಣನು ಯಮುನಾ ನದಿಯಲ್ಲಿ ಹಾರಿ ಕಾಳಿಯಮರ್ದನ ಆದಮೇಲೆ ಆತನು ಹೊರಗೆ ಬಂದನು, ಮತ್ತು ತನ್ನ ಮಿತ್ರರನ್ನು ಸಂತೋಷ-ಗೊಳಿಸುತ್ತಾನೆಂಬಂತೆ ಕಾಣಿಸಿತು. ನಂತರ ಹೃತ್ಕಮಲದಲ್ಲಿ ಪುನಹಾ ಶ್ರೀವಿಷ್ಣು ಕಾಣಿಸಿದನು. ಮತ್ತು ನನ್ನ ದೇಹಭಾನ ತಪ್ಪಿತು. ಕೊರಳ ಸಮೀಪದ ವಿಶುದ್ಧ ಚಕ್ರದಲ್ಲಿ ಶ್ರೀಗುರು ದತ್ತ ಕಾಣಿಸಿದರು. ನನ್ನ ಮನಸ್ಸು ಈಗ ಏಕಾಗ್ರವಾಯಿತು. ಇನ್ನು ಹೆಚ್ಚಿಗೆ ಆಳ ಹೋದಮೇಲೆ, ಶ್ರೀಗಜಾನನ ಮಹಾರಾಜರು ಮತ್ತು

ಅವರ ಮುಂದೆ ಶ್ರೀದತ್ತ ಇವರು ಕಾಣಿಸಿದರು. ಒಳಗೆ 'ಸೋಹಂ'ದ ಜಪವು ನಡಿಯುತ್ತಿತ್ತು.

ಶ್ರೀಗಜಾನನ ಮಹಾರಾಜರು ನನಗೆ ಅಂದರು, "ಅಂತರದಲ್ಲಿ ಲಕ್ಷವನ್ನು ಜಪದಮೇಲೆ ಇಟ್ಟದ್ದಾದರೆ ಜಗತ್ತಿನೊಳಗೆ ವ್ಯವಹಾರ ಮಾಡಲಿಕ್ಕೆ ಏನೂ ಅಡಚಣಿ ಇಲ್ಲ. ನಂತರ ನಾನು ಪದ್ಮಾಸನವನ್ನು ಹಾಕಿ ಧ್ಯಾನ ಮಾಡಲಿಕ್ಕೆ ಆರಂಭಿಸಿದೆ; ನನ್ನ ಲಕ್ಷವನ್ನು ನಾನು ನಾಸಿಕಾಗ್ರದ ಮೇಲೆ ಇಟ್ಟಿರುತ್ತೇನೆ. ಅಲ್ಲಿ ಗಾಢ ಅಂಧಃಕಾರವು ಕಾಣಿಸುವದು; ಆದರೆ ಯಾವಾಗ್ಗೆ ನಾನು ಆಳ ಹೋದೆ ಆಗ್ಗೆ ಪ್ರಾತಃಕಾಲದ ಪ್ರಕಾಶವು ತೋರಿತು. ನಂತರ ಚಂದ್ರನು ಕಾಣಿಸಿದನು ಮತ್ತು ಸುವರ್ಣದಂಥ ಹಳದೀ ಪ್ರಕಾಶದಲ್ಲಿ ಓಂ ಅಕ್ಷರವು ಕಂಡುಬಂತು. ನಾನು ಇನ್ನೂ ಆಳ ಹೋಗುವ ಪ್ರಯತ್ನ ಮಾಡುತ್ತಿರುವಾಗ ಅಂಧಃಕಾರವು ಮಧ್ಯದಲ್ಲಿ ಬಂತು ಮತ್ತು ನನ್ನ ಅರಿವು ಇಲ್ಲದಂತಾಯಿತು.

ಅನಂತರ ನಾನು ಸಹಸ್ರದಲ ಕಮಲವನ್ನು ಕಂಡೆ. ಅದರ ಎಲ್ಲಕಡೆಗೂ ನವಿಲಗರಿಗಳಿದ್ದವು. ಒಂದು ಬೇರೆ ವರ್ಣದ ಕಣ್ಣು ತೋರಿತು. ನಂತರ ವಿಚಾರ ಪ್ರವಾಹವು ನಿಂತು ನಾನು ನನ್ನನ್ನು ಮರತೆ.

ತಾರೀಖು ೨೨ ಜೂನ ೧೯೩೯ ಈ ದಿನ ನಾಸಿಕದಲ್ಲಿ ಬರೆದದ್ದು.

(ಸಹಿ) ದಾದೂ ಠಾಕೂ ಸೋನಾರ, ದುಸಾನೆ.

— ೨೨ —

ಶ್ರೀ ಚಾಕಕರ, ಬಡೋದೆ, ಇವರು ಶ್ರೀಗಜಾನನ ಮಹಾರಾಜರಿಗೆ ಕಳುಹಿಸಿದ ಪತ್ರದೊಳಗಿನ ಕೆಲವು ಮಜಕೂರು.

ಶ್ರೀಗಜಾನನ ಮಹಾರಾಜರ ಚರಣಗಳಲ್ಲಿ ಅನೇಕ ನಮಸ್ಕಾರಗಳು,

ತಾವು ಆಜ್ಞೆ ಮಾಡಿದಂತೆ ನಾನು ಜಪ ಸುರು ಮಾಡಿದ್ದೇನೆ. ಆದರೂ ಅಧಿಕ ಸುಧಾರಿಕೆಯು ನಿಂತಂತೆ ತೋರುವದು. ತಮಗೆಯೇ ಅದರ ಕಾರಣವು ತಿಳಿದಿರುವದು. ಬಹಳ ಚಮತ್ಕಾರಗಳಾದವು. ನಾನು ತಮ್ಮನ್ನು ಸ್ಥೂಲ ಶರೀರದಲ್ಲಿಯೇ ನೋಡುತ್ತೇನೊ ಎಂಬಂತೆ ಪ್ರತ್ಯಕ್ಷ ದರ್ಶನವಾಯಿತು. ಹೀಗೆಯೇ ಸದೋದಿತ ದರ್ಶನವಿರಬೇಕು ಎಂದು ನಾನು ಇಚ್ಛಿಸುತ್ತೇನೆ. ಅದನ್ನು ಪೂರ್ಣ ಮಾಡುವದು ತಮ್ಮ ಕೈಯ್ಯಲ್ಲಿರುತ್ತದೆ.

ಹೋದ ಪೌರ್ಣಿಮೆಯ ದಿನ ನನಗೆ ನಿದ್ರೆ ಬೀಳಲಿಲ್ಲ, ಎಂದು ನಾನು ಜಪ ಮಾಡುತ್ತ ಮಲಗಿದ್ದೆ. ಆ ವೇಳೆಗೆ ಈ ಸ್ಥಳದಲ್ಲಿ ಸುಗಂಧ ಬರುವ ಕಾರಣವು

(೨೫) ನಾನು ಒಮ್ಮೆ ಗಜಾನನ ಮಹಾರಾಜರಿಗೆ ಸಹಜವಾಗಿ ಅಂದೆ, “ ನಾನು ಸಾಕೋರಿಯಲ್ಲಿ ಉಪಾಸನಿ ಮಹಾರಾಜರ ಕಡೆ ಇರುವಾಗ, ಧ್ಯಾನದಲ್ಲಿ ಅವರ ಮೂರ್ತಿಯನ್ನು ನೋಡುತ್ತಿರುವಾಗ, ಅವರ ಬದಲಿಗೆ ಶ್ರೀ ಸಾಯೀಮಹಾರಾಜರ ಮೂರ್ತಿ ಕಾಣಿಸುತ್ತಿತ್ತು. ಅದೇ ಪ್ರಕಾರ ಇಲ್ಲಿಯೂ, ಶ್ರೀಗಜಾನನ ಮಹಾರಾಜರ ಸ್ಥಾನದಲ್ಲಿ ಶ್ರೀನಾರಾಯಣ ಸರಸ್ವತಿಯವರು ಅಂತಃಕರಣದಲ್ಲಿ ತೋರುತ್ತಾರೆ. ” ಇದರ ಮೇಲೆ ಅವರಂದರು, “ ನಾಳೆನಿಂದ ಇನ್ನು ಏನೇನು ಕಾಣಿಸುತ್ತದೆ, ಅದನ್ನು ನೋಡಿರಿ. ” ಅಂದಿನಿಂದ ಸರ್ವತ್ರ ಗಜಾನನ ಮಹಾರಾಜರು ಕಾಣಿಸಹತ್ತಿದರು ಮತ್ತು ಆ ಮೂಲಕ ತನ್ಮಯಾವಸ್ಥೆಯು ಬಹಳ ವೃದ್ಧಿಯಾಯಿತು.

ನಾನು ಯಾವದಾದರೂ ಅನುಭವವನ್ನು ಮಹಾರಾಜರಿಗೆ ಹೇಳಿದಾಗ, ಅವರು ಮೊದಲೇ ನನ್ನ ಸೂಕ್ಷ್ಮದೊಳಗೆ ಸೇರಿ ನೋಡುತ್ತಿರುವದರಿಂದ ಅವರು ಸುಮ್ಮನಿರುತ್ತಾರೆ ಮತ್ತು ಏನೊಂದೂ ಮಾತನಾಡದೆ, ಒಂದು ಬೈದು ಕೆಲಸ ತೀರಿಸಿಕೊಳ್ಳುವರು. ಆದರೆ ನಾನು ಶರೀರದ ಯಾವ ಮಾರ್ಗದಿಂದ ಹೋದೆ ಎಂದು ಹೇಳಿರುವಾಗ್ಗೆ ನನಗೆ ಅದರ ವರ್ಣನವನ್ನು ಚನ್ನಾಗಿ ಮಾಡಲಿಕ್ಕೆ ಬರಬೇಕೆಂತ, ಅವೇ ಅವೇ ಸಂಗತಿಗಳನ್ನು ನನಗೆ ಪುನಃ ಪುನಹಾ ಸ್ಪಷ್ಟ ಮಾಡಿ ಹೇಳುತ್ತಾರೆ.

ಮೇಲೆ ನಾನು ಇಷ್ಟು ಸಂಗತಿಗಳನ್ನು ವರ್ಣಿಸಿ ಹೇಳಿದರೂ, ನಾನು ಯಾವದೊಂದು ಶಕ್ತಿಯನ್ನು ಸ್ವತಃ ಪ್ರಾಪ್ತಿಮಾಡಿಕೊಂಡಿದ್ದೇನೆ ಎಂದು ನನಗನಿಸುವದಿಲ್ಲ. ಅಂತ ಶ್ರೀಗುರುಚರಣದಲ್ಲಿ ನನ್ನದು ಹೀಗೆ ಪ್ರಾರ್ಥನೆ ಅದೆ, ತಾವಾಗಿ ತಿಳಿದು ತಿಳಿದು ಏನೂ ಮಾಡದೆ ನನ್ನ ಕಡೆಯಿಂದ ಇತರ ಜೀವರ ಉದ್ಧಾರವಾಗುವ ಶಕ್ತಿಯನ್ನು ನನಗೆ ಕೊಡಬೇಕು.

(ಸಹಿ) ಡಿ. ಡಿ. ಭಾವೆ

ಡಿ. ಡಿ. ಭಾವೆ ನಾಶಿಕ ಇವರ ಇನ್ನು ಕೆಲವು ಅನುಭವಗಳು—

ಸನ್ ೧೯೩೯ ನೇ ಮೇ ತಿಂಗಳ ಒಂದನೇ ಅಥವಾ ಎರಡನೇ ತಾರೀಖಿನಿಂದ ಮಹಾರಾಜರು ಇನಫ್ಲುಯಂಜಾದಿಂದ ರೋಗಪೀಡಿತರಾದರು ಅದರಲ್ಲಿಯೆ ‘ಬ್ರಾಂಕೊ ನ್ಯುಮೋನಿಯಾ’ ಅಂದರೆ ಕಫದ ಕೂಡ ಜ್ವರ ಉತ್ಪನ್ನವಾಯಿತು. ಈ ರೋಗವು ಬಹಳ ಕಠಿಣವಾಗುವದು. ಅದೇ ತಿಂಗಳ ೮ ನೇ ತಾರೀಖಿಗೆ ನಾನು ನನ್ನ ಮಿತ್ರ ಭಾಗವತ ಇವರ ಕೂಡ ಮಹಾರಾಜರ ದರ್ಶನಕ್ಕೆ ಹೋದೆವು. ಆ ಸಮಯದಲ್ಲಿ ನಾನಾಸಾಹೇಬ ಗಡಕರಿ ಮಹಾರಾಜರ ಕೂಡ ಇರುತ್ತಿದ್ದರು. ಅವರು ಬಾಗಲಿನ ಸಮೀಪ ಬಂದು ಹೇಳಿದರು, ‘ ಮಹಾರಾಜರ

ಸಮೀಪವಿರುವ ಮಾರುತಿಯ ಗುಡಿಯು ನನ್ನ ಮುಂದೆ ಕಾಣಿಸಿತು. ಆದರೆ ಅಲ್ಲಿ ಮಾರುತಿಯ ಮೂರ್ತಿಯ ಬದಲಿಗೆ ನಮ್ಮ ಪಂಗು ಮೂರ್ತಿಯೇ ಕಾಣುತ್ತಿತ್ತು. ನಾನು ಪೂಜೆ ಮಾಡಿ ಮೂರ್ತಿಯ ಸುತ್ತಲು ಪ್ರದಕ್ಷಿಣೆ ಹಾಕಲಾರಂಭಿಸಿದೆ. ಪ್ರದಕ್ಷಿಣೆಯನ್ನು ಹಾಕುತ್ತಿರುವಾಗ ಒಮ್ಮೆ ತಮ್ಮ ಮೂರ್ತಿ ಕಾಣಿಸಬೇಕು, ಕೂಡಲೆ ಮಾರುತಿದು ಕಾಣಿಸಬೇಕು. ಆದರೂ ನನ್ನ ಪ್ರದಕ್ಷಿಣೆಗಳು ನಡಿಯುತ್ತಾ ಇದ್ದವು. ಅಷ್ಟರೊಳಗೆ ಶ್ರೀಗಜಾನನರಾವ ಖರ್ಶೀಕರ ಇವರು ಅಲ್ಲಿಗೆ ಬಂದರು. ಅವರ ಸಂಗಡ ಅವರ ಮಗಳೂ ಎಲ್ಲಾ ಪೂಜಾಸಾಹಿತ್ಯ ತಕ್ಕೊಂಡು ಅಲ್ಲಿಗೆ ಬಂದಿದ್ದಳು. ಅವರು ಸಹಾ ತಮ್ಮ ಪೂಜೆಯನ್ನು ಮಾಡಿದರು. ಈ ಸಮಯದಲ್ಲಿ ನಾನು ಪ್ರದಕ್ಷಿಣೆಗಳನ್ನೇ ಹಾಕುತ್ತಿದ್ದೆ. ಅವರ ಪೂಜೆಯು ಮುಗಿದ ಬಳಿಕ ಅವರು ಸ್ವಲ್ಪ ದೂರ ನಿಂತಿದ್ದರು. ಆಮೇಲೆ ಅವರ ಮಗಳು ನನ್ನ ಹಿಂದಿನಿಂದ ಪ್ರದಕ್ಷಿಣೆ ಹಾಕಲಿಕ್ಕೆ ಹತ್ತಿದಳು. ಸ್ವಲ್ಪ ಹೊತ್ತಿನಲ್ಲಿ ಆ ಮೂರ್ತಿಯ ಸಮೀಪ ಒಂದು ಸಣ್ಣ ಮಂಗವು ಕಾಣಿಸಿತು ಮತ್ತು ತಾವು ಖರ್ಶೀಕರರ ಹತ್ತರ ಹೋಗಿ ನಿಂತಿರಿ. ಆ ಮಂಗವು ಗುಡಿಯ ಹೊರಗೆ ಬಂದು ಆ ಹುಡುಗಿಯ ಮೈಮೇಲೆ ಹಾರಿತು. ನಂತರ ಅದು ಖರ್ಶೀಕರರ ಮೈಮೇಲೆ ಹಾರಿತು. ಮತ್ತು ಹೀಗೆಯೇ ಹಾರುತ್ತಾ ಇತ್ತು. ಆಗ ತಾವು ಅಲ್ಲಿ ನಗುತ್ತಾ ನಿಂತಿದ್ದಿರಿ. ಖರ್ಶೀಕರರು ಸಹಾ ನಗುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಈ ದೃಶ್ಯವು ಮಾಯವಾಯಿತು. ನಾನು ದೇಹಭಾನಕ್ಕೆ ಬಂದು ನೋಡಿದರೆ ಜೋಕಾಲಿಯ ಮೇಲೆ ಕೂತಿದ್ದೇನೆ.

ಹೀಗೆ ಆಶ್ಚರ್ಯಕಾರಕ ನೋಟಗಳಿರುತ್ತವೆ. ಆದರೆ ನನಗೆ ಅವುಗಳ ಅರ್ಥವು ತಿಳಿಯಲಾರದು. ಮುಂದಿನ ಪ್ರಗತಿಯು ನಿಂತು ಹೋದಂತೆ ತೋರುತ್ತದೆ. ದಿವಸಗಳು ಹೋಗುತ್ತಿದ್ದಾವೆ. ಈಗ ನಾನು ಏನು ಮಾಡಬೇಕು? ಇನ್ನು ನನಗೆ ಧೈರ್ಯವಾಗುವದಿಲ್ಲ. ಮಹಾರಾಜರೇ, ಈಗ ಈ ಬಡಪ್ರಾಣಿಯ ಪರೀಕ್ಷೆಯನ್ನು ಎಷ್ಟು ದಿವಸ ತನಕ ಮಾಡುವಿರಿ?

ಮತ್ತ್ಯಾರಿಗಾದರೂ ಈ ದೃಶ್ಯಗಳನ್ನು ನಾನು ವರ್ಣಿಸಿ ಹೇಳಿದರೆ, ಆತನು ನಾನು ಹುಚ್ಚನೆಂದು ತಿಳಿದಾನು. ತಾವಾದರೂ ಒಂದು ವೇಳೆ ಇದು ಮೂರ್ಖತ್ವವೆಂದು ತಿಳಿದೀರಿ, ಆದರೆ ಇದರ ಅರ್ಥವೇನೆಂದು ನನಗೆ ವಿಶದವಾಗಿ ಹೇಳುವ ಕೃಪೆಯನ್ನು ಮಾಡಿರಿ. ತಾವು ಆದಷ್ಟು ಬೇಗ ಉತ್ತರವನ್ನು ಕಳುಹಿಸಿರಿ, ಎಂದು ವಿನಂತಿ ಮಾಡುತ್ತೇನೆ.

(ಸಹಿ) ತಮ್ಮ ಚಾಕರ.

— ೩೪ —

ಶ್ರೀ. ಜಿ. ಡಿ. ಮಾಂಡವಗಣೆ ಮತ್ತು ಅವರ ಪತ್ನಿ ಸೌ. ಗೋದಾವರಿ ಬಾಯಿ ಇವರ ಅಧ್ಯಾತ್ಮಿಕ ಅನುಭವಗಳು:—

ಸುಮಾರು ಒಂದು ತಿಂಗಳ ಹಿಂದೆ, ತುಪ್ಪದ ವ್ಯಾಪಾರಿಯಾದ ಪಿ. ಎಲ್. ಇನಾಮದಾರ ಇವರಕೂಡ ಸಹಜ ಮಾತಾಡುತ್ತಾ ಇರುವಾಗ್ಗೆ, ಇನಾಮದಾರರು ನನಗೆ ಹೇಳಿದರು, 'ಶ್ರೀಗಜಾನನ ಮಹಾರಾಜರು ಸಾಧುಗಳಿದ್ದು ಗುರು ಮಾಡಿ ಕೊಳ್ಳಲಿಕ್ಕೆ ಯೋಗ್ಯರಿದ್ದಾರೆ. ಅವರ ಅನುಗ್ರಹ ತಕ್ಕೊಂಡ ಮೇಲೆ ಬೇಗನೇ ಅಧ್ಯಾತ್ಮಿಕ ಅನುಭವಗಳು ಬಂದು ಮನಸ್ಸಿಗೆ ನಿಜವಾದ ಶಾಂತಿಯು ದೊರೆಯುತ್ತವೆ. ಮತ್ತು ಆ ಮೂಲಕ ಸಹಜವಾಗಿ ದೃಢವಿಶ್ವಾಸವು ಕೂಡುವವು.'' ಇದನ್ನು ಕೇಳಿ ನನಗೂ ನನ್ನ ಪತ್ನಿಗೂ ಮನಸ್ಸಿನಲ್ಲಿ ಅವರಿಗೆ ಹೋಗಿ ಭೆಟ್ಟಿಯಾಗ ಬೇಕೆಂತ ಜಿಜ್ಞಾಸಾ ಉತ್ಪನ್ನವಾಯಿತು. ಆದ್ದರಿಂದ ನಾವಿಬ್ಬರೂ ಮಹಾರಾಜರ ದರ್ಶನಕ್ಕೆ ಹೋಗಲಾರಂಭಿಸಿದೆವು.

ಎಂಟು ಹತ್ತು ದಿನಗಳಾದ ಮೇಲೆ ತಾ. ೨೩ ಜುಲೈ ಸನ್ ೧೯೪೦ ನೇ ದಿವಸ ನಾವಿಬ್ಬರೂ ಮಹಾರಾಜರ ಅನುಗ್ರಹವನ್ನು ತಕ್ಕೊಳ್ಳಬೇಕೆಂದು ನಿರ್ಣಯಿಸಿ, ನಮ್ಮ ನಮ್ರ ವಿನಂತಿಯನ್ನು ಅವರಿಗೆ ನಿವೇದಿಸಿದೆವು. ಮಹಾರಾಜರು ನಮಗೆ ತಾ. ೨೫ ಜುಲೈ ಸನ್ ೧೯೪೦ ಈ ದಿನ ಗುರುವಾರವಿದ್ದು ಆ ದಿವಸ ಅನುಗ್ರಹ ಕೊಡುತ್ತೇನೆ ಅಂದರು. ಆ ಪ್ರಕಾರ ಆ ದಿವಸ ಮುಂಜಾನೆ ಎಂಟುವರೆ ಘಂಟೆಗೆ ನಾವು ಅವರ ಕಡೆ ಹೋದೆವು, ಮತ್ತು ಅವರು ನಮಗ ಅನುಗ್ರಹವನ್ನು ಕೊಟ್ಟರು. ಅಂದಿನಿಂದ ಸುಮಾರು ಹನ್ನೆರಡು ದಿವಸಗಳಾಗಿವೆ ಅವರು ಹೇಳಿದಂತೆ ನಾವಿಬ್ಬರೂ ಜಪವನ್ನು ಮಾಡುತ್ತೇವೆ. ಕಳೆದ ನಾಲ್ಕು ದಿವಸಗಳಲ್ಲಿ ನನ್ನ ಪತ್ನಿಗೆ ಯಾವದಾದರೂ ದೃಶ್ಯಗಳು ಕಾಣಿಸದೆ ಸಹಜ ಪ್ರಯತ್ನವಿಲ್ಲದೆ ಸಮಾಧಿ ಹತ್ತುತ್ತದೆ. ಈ ಸ್ಥಿತಿಯಲ್ಲಿ ಆಕೆಯು ಮೂವತ್ತು ನಾಲ್ವತ್ತು ಮಿನಿಟು ತನಕ ಇರುತ್ತಾಳೆ. ಕೂಸು ಮೊಲೆ ಕುಡಿಯುತ್ತಿದ್ದರೂ ಆಕೆಗ ಸರ್ವ ಬಾಹ್ಯ ಜಗತ್ತಿನದು ಪೂರ್ಣ ಮರವಾಗುತ್ತದೆ. ಮತ್ತು ಅಂತರ್ಯಾಮ ಆನಂದವು ತೀರಿದ ಬಳಿಕ ಆಕೆಯು ದೇಹಭಾನಕ್ಕೆ ಬರುತ್ತಾಳೆ. 'ಸೋಹಂ' ಜಪವನ್ನು ಜಪಿಸಬೇಕೆಂದು ಮನಸ್ಸಿನಲ್ಲಿ ಬಂತೆಂದರೆ ಆಕೆಗೆ ಈ ಸ್ಥಿತಿಯು ಪ್ರಾಪ್ತವಾಗುತ್ತದೆ.

ಆದರೂ ನಾನು ಯಾವಾಗ್ಗೆ ಧ್ಯಾನಕ್ಕೆ ಕೂಡುವೆನೋ, ಆಗ ನೀರಿನ ತೆರೆಗಳು, ಶುಭ್ರ ಮೋಡ, ಆಕಾಶ ಜ್ವಾಲಾ, ಸುದರ್ಶನ ಚಕ್ರ ವಗೈರೆ ದೃಶ್ಯಗಳು ತೋರುತ್ತವೆ. ಈ ಅನುಭವಗಳ ಮೇಲಿಂದ ಶ್ರೀಗಜಾನನ ಮಹಾರಾಜರಲ್ಲಿ ಯಾವದೊ ಆಶ್ಚರ್ಯಕಾರಕ ಶಕ್ತಿಗಳಿರುತ್ತವೆ ಎಂಬದು ನನಗೆ ಪೂರ್ಣವಾಗಿ ನಿಶ್ಚಯವಾಗಿದೆ. ಆದ್ದರಿಂದ ಅವರು ಹೇಳಿದಂತೆ ಜಪ ಮಾಡುವ ನಿಶ್ಚಯವನ್ನು ಮಾಡಿದ್ದೇವೆ.

ನಾನು ಪೆನ್ಶನರ ಪೋಲೀಸ ಸಬ್ಇನ್ಸಪೆಕ್ಟರ ಇದ್ದೇನೆ. ಆ ಖಾತೆಯಲ್ಲಿ

ನನ್ನದು ಬಹಳ ದಿನಗಳಾದ್ದರಿಂದ ಮತ್ತು ನೋಡುವ ದೃಷ್ಟಿಯು ಬೇರೆಯೇ ಆಗಿರುವದರಿಂದ ಸಾಧುಸಂತ ಮತ್ತು ಮಹಾರಾಜರು ಇಂಥವರ ಮೇಲೆ ಎಷ್ಟು ಮಾತ್ರವೂ ವಿಶ್ವಾಸವಿದ್ದಿಲ್ಲ. ಆದರೆ ಯಾವದಾದರೊಂದು ಕಾರಣದಿಂದಾಗಲಿ, ನಾನು ಮಹಾರಾಜರ ದರ್ಶನಕ್ಕೆ ಹೋದ ಮೊದಲಿನ ದಿವಸವೇ ನನ್ನ ಸಂತರಕಡೆ ನೋಡುವ ನಿತ್ಯದ ಸಂಶಯ ದೃಷ್ಟಿಯು ಪೂರಾ ಹೋಯಿತು. ನಂತರ ಪ್ರತ್ಯಕ್ಷ ಅನುಭವಗಳು ಸಿಕ್ಕವು, ಆ ಮೂಲಕ ನನ್ನ ಮನಸ್ಸಿನೊಳಗಿನ ಎಲ್ಲಾ ಸಂಶಯ ಗಳು ಇಲ್ಲದಂತಾದವು. ಮತ್ತು ಈಗ ಮಹಾರಾಜರು ಖರೆ ಸಾಧುಗಳಿದ್ದಾರೆ ಎಂಬದು ನನ್ನ ಮನಸ್ಸಿಗೆ ಪೂರ್ಣವಾಗಿ ನಿಶ್ಚಯವಾಯಿತು.

ತಾರೀಖು ೫, ಆಗಸ್ಟ್ ೧೯೪೦. (ಸಹಿ) ಜಿ. ಡಿ. ಮಾಂಡವಗಣೆ.
ಪೆನ್ಶನರ ಪೋಲಿಸ ಸಬ್ ಇನಸ್ಪೆಕ್ಟರ, ನಾಶಿಕ.

— ೨೫ —

ವೈದ್ಯ ಕುಡೂರ್ಕರ ಇವರ ವೃತ್ತಾಂತವು. —

[ಕುಡೂರ್ಕರ ವೈದ್ಯ ಇವರ ದವಾಖಾನೆಗಳು ನಾಶಿಕದಲ್ಲಿಯೂ ಸಂಗಮ ನೇರದಲ್ಲಿಯೂ ಇವೆ. ೧೯೪೦ರ ಎಪ್ರೀಲ ತಿಂಗಳಲ್ಲಿ ಅವರ ಮಹಾರಾಜರ ದರ್ಶ ನದ ಯೋಗವು ಬಂತು. ನಂತರ ಮಹಾರಾಜರಿಗೂ ಅವರಿಗೂ ಆದ ಸಂಭಾ ಷಣವಾಯಿತು ಮತ್ತು ಅವರಿಗೆ ಯಾವ ಆಧ್ಯಾತ್ಮಿಕ ಅನುಭವಗಳು ಸಿಕ್ಕವೆ, ಅವು ಗಳ ವೃತ್ತಾಂತವು ಅವರ ಶಬ್ದಗಳಲ್ಲಿಯೇ ಕೆಳಗ ಕೊಟ್ಟಿರುತ್ತದೆ.]

ನಾನು ಮಹಾರಾಜರ ದರ್ಶನಕ್ಕೆ ಹೋದಾಗ ಅವರ ಕೂಡ ಆದ ಸಂಭಾ ಷಣವು ಮುಂದೆ ಬರೆದಂತೆ ಇರುವದು

ಮಹಾರಾಜ:— ತಮ್ಮ ಹೆಸರೇನು ತಾವು ನನ್ನ ಕಡೆ ಯಾತಕ್ಕೆ ಬಂದಿದ್ದೀರಿ?

ನಾನು:— ನನ್ನ ಹೆಸರು ಕೃಷ್ಣರಾವ ಮತ್ತು ಅಡ್ಡ ಹೆಸರು ಕುಡೂರ್ಕರ. ನಾನು ವೈದ್ಯನಿದ್ದು ಕಳೆದ ಹದಿಂಟು ವರ್ಷ ಸ್ವಹಿತ ವ ಪರಹಿತ ಈ ದೃಷ್ಟಿ ಯಿಂದ ವೈದ್ಯಕಿಯ ಕೆಲಸ ಮಾಡುತ್ತಿದ್ದೇನೆ.

ಮಹಾರಾಜ:— ನಾನು ಮಹಾರಾಜನಿದ್ದೇನೆಂದು ನಿಮಗೆ ಯಾರು ಹೇಳಿದರು.

ನಾನು:— ಪಂಡಿತ, ಪೆನ್ಶನರ ಮಾಮಲೇದಾರ ಇವರು ತಮ್ಮ ವಿಷಯ ನನಗೆ ಪ್ರಥಮ ಸಮಾಚಾರವನ್ನು ಕೊಟ್ಟರು. ನಾನು ತಮ್ಮ ದರ್ಶನಕ್ಕೆ

ಬರುವವನಿದ್ದೆ; ಆದರೆ ಯಾವದೊ ಕಾರಣದಿಂದ ಇಲ್ಲಿ ತನಕ ಬರೋಣಾಗಲಿಲ್ಲ. ಅನಂತರ ನನಗೆ ಮಧುಕರ ಚಿಟಣೀಸರು ಭೆಟ್ಟಿಯಾದರು; ಅವರಾದರೂ ತಮ್ಮ ಸಂಬಂಧ ವೃತ್ತಾಂತವನ್ನು ನನಗೆ ಹೇಳಿದರು. ಮಧುಕರ ಚಿಟಣಿಸರು ಯೋಗಾಭ್ಯಾಸ ಮಾಡುತ್ತಾರೆ ಎಂಬದು ನನಗೆ ಗೊತ್ತಿತ್ತು, ಮತ್ತು ಅವರು ನನಗೆ ತಮ್ಮ ವಿಷಯ ಹೇಳಿದ್ದರಿಂದ ನನಗೆ ಅಧಿಕ ಆನಂದವಾಯಿತು. ನನ್ನ ಮೇಲಾದರೂ ತಮ್ಮ ಅನುಗ್ರಹವಾದೀತು ಎಂದು ನನಗೆ ಅನಿಸಿತು. ಮತ್ತು ಈ ಹೇತುವಿನಿಂದಲೆ ನಾನು ತಮ್ಮ ಕಡೆಗೆ ಬಂದಿರುವೆನು.

ಮಹಾರಾಜ:— ನಾನು ಗರೀಬ ಕುಂಟನಿದ್ದೇನೆ. ನೀವು ಬಹಳ ದಿವಸ ಯೋಗದ ಅಭ್ಯಾಸ ಮಾಡಿದವರಿದ್ದೀರಿ ಮತ್ತು ಉತ್ತಮ ಪ್ರಗತಿಯನ್ನು ಹೊಂದಿರುತ್ತೀರಿ. ನಿಮಗೆ ದೊಡ್ಡ ಸಾಧುಗಳ ಅನುಗ್ರಹವೂ ಆಗಿರುತ್ತದೆ. ಹಾಗೂ ತಮ್ಮ ದರ್ಶನ ಆದದ್ದಕ್ಕೆ ನಾನು ದೊಡ್ಡ ದೈವವಾನನಾದನೆಂದು ತಿಳಿಯು ತ್ತೇನೆ. ಒಳ್ಳೇದು ತಾವು ನಾಶಿಕದಲ್ಲಿ ಎಷ್ಟು ದಿನ ಇರುವಿರಿ?

ನಾನು:— ನಾನು ಇನ್ನೂ ಎರಡು ದಿನ ಇಲ್ಲಿರುವೆನು. ಅನಂತರ ನಾನು ಸಂಗಮನೇರಕ್ಕೆ ಹೋಗುವೆನು. ನನ್ನವು ನಾಶಿಕ ಮತ್ತು ಸಂಗಮನೇರದಲ್ಲಿ ಖಾಸಗಿ ದವಾಖಾನೆಗಳಿವೆ. ನಾನು ಹದಿನೈದು ದಿನಗಳಲ್ಲಿ ನಾಶಿಕಕ್ಕೆ ಬರುವೆನು. ನಾನು ತಮಗೆ ನನ್ನ ಚಿಕ್ಕಂದಿನಿಂದ ಆದ ವೃತ್ತಾಂತವನ್ನು ಬರೆದು ಕೊಡುವೆನು.

ಈ ಭಾಷಣ ಆಗುತ್ತಿರುವಾಗ ಮಹಾರಾಜರ ಸಮೀಪ ಐದಾರು ಜನರು ಕೂತಿದ್ದರು. ಅವರ ಪೈಕಿ ನಾಶಿಕ ಪೋಲಿಸ ಟ್ರೈನಿಂಗ ಸ್ಕೂಲದೊಳಗೆ ಕಾಯದೆ ಯನ್ನು ಕಲಿಸುವ ಶಿಕ್ಷಕ ಸರೋಟಕರ ಇವರೂ ಇದ್ದರು. ನಂತರ ಮಹಾರಾಜರು ನನಗೆ ನನ್ನ ಪೂರ್ವದ ಯೋಗಾಭ್ಯಾಸದ ಸಂಕ್ಷಿಪ್ತ ವೃತ್ತಾಂತವನ್ನು ಕೊಡಲಿಕ್ಕೆ ಹೇಳಿದರು. ಆಗ ನಾನು ಹಠಯೋಗದ ಅಭ್ಯಾಸವನ್ನು ಹ್ಯಾಗೆ ಮಾಡಿದೆನು; ಮೂರು ವರ್ಷಗಳ ವರೆಗೆ ಅಭ್ಯಾಸವಾದ ಮೇಲೆ ಭಯದ ಭಾವನೆಯು ಉತ್ಪನ್ನ ವಾದ ಮೂಲಕ ನಾನು ಅದನ್ನು ಹ್ಯಾಗೆ ಬಿಡಬೇಕಾಯಿತು; ಅನೇಕ ಸಾಧುಗಳ ಕಡೆಗೆ ಅವರು ನನಗೆ ಮಾರ್ಗ ತೋರಿಸ್ಯಾರು ಎಂಬ ಆಶೆಯಿಂದ ಹ್ಯಾಗೆ ನಾನು ಹೋದೆ; ಇದನ್ನೆಲ್ಲಾ ನಾನು ಅವರಿಗೆ ಹೇಳಿದೆನು. ಅನಂತರ ನಾನು ಮಹಾ ರಾಜರ ಪಾದದ ಮೇಲೆ ಮಸ್ತಕವನ್ನಿಟ್ಟು ಅವರ ಮನೆಯನ್ನು ಬಿಟ್ಟು ಹೋದೆನು.

ಅದರ ನಂತರ ಮೂರನೇ ದಿನ ಮಹಾರಾಜರಿರುವ ಓಣಿಯಲ್ಲಿರುವ ಕೆಲ ವರಿಗೆ ಭೆಟ್ಟಿಯಾಗಲಿಕ್ಕೆ ಹೋಗಿದ್ದೆ. ಭೆಟ್ಟಿಯಾದ ಮೇಲೆ ಮಹಾರಾಜರಿರುವ ಸ್ಥಳದ ವಿರುದ್ಧ ದಿಕ್ಕಿಗೆ ಬಹಳ ದೂರ ತನಕ ಹೋದೆನು. ಆಗ ಮಹಾರಾಜರ ದರ್ಶನಕ್ಕೆ ಹೋಗುವ ಅಥವಾ ಅವರಿಗೆ ಯೋಗ ಸಂಬಂಧ ಕೇಳುವ ಕಲ್ಪನೆ ಸಹಾ

ನನಗಿದ್ದಿಲ್ಲಾ. ಆದರೆ ನನ್ನ ಕಾಲುಗಳು ಒಂದಕ್ಕೆ ಎರಡುಸಾರೆ ಆಗಿ ಎರಡು ಮೂರು ಮಿನಿಟು ವರೆಗೆ ನಾನು ಹಿಂದೆ ಹೋದೆ. ಇಷ್ಟರಲ್ಲಿ ಮಹಾರಾಜರ ದರ್ಶನಕ್ಕೆ ಹೋಗಬೇಕು ಎಂತ ನನ್ನ ಮನಸ್ಸಿನಲ್ಲಿ ಬಂತು. ಆಗ ಬೆಳಿಗ್ಗೆ ೯|| ಹೊಡದಿದ್ದವು. ನಾನು ಹೋಗಿ ಅವರ ಪಾದಕ್ಕೆ ಬಿದ್ದೆ. ಮತ್ತು ಅವರು ಯಾತಕ್ಕೆ ಬಂದಿರಿ ಎಂದು ಕೇಳುತ್ತಿರುವಾಗ, ದರ್ಶನಕ್ಕೆ ಬಂದಿದ್ದೆ ಎಂದು ನಾನು ಹೇಳಿದೆ.

ಮಹಾರಾಜ:— ಹಾಗಾದರೆ ನೀವು ಬರುವದಕ್ಕೆ ಏನಾದರೂ ವಿಶೇಷ ಕಾರಣ ವಿಲ್ಲವಲ್ಲ?

ನಾನು:— ಹೌದು. ನಾನು ಬರುವದಕ್ಕೆ ವಿಶೇಷ ಕಾರಣವದೆ. ತಾವು ನನಗೆ ಇಲ್ಲ ಎಳದು ತಂದಿದ್ದೀರಿ; ಆ ಕಾರಣ ಏನಾದರೂ ವಿಶಿಷ್ಟ ಹೇತು ಇರಲಿಕ್ಕೆ ಬೇಕು. ಅದನ್ನು ತಾವು ಕೃಪೆಮಾಡಿ ಈಗ ಪೂರ್ಣ ಮಾಡಿರಿ.

ಮಹಾರಾಜ:— ನಾನು ಬುವಾನೂ ಅಲ್ಲ, ಹಠಯೋಗಿಯೂ ಅಲ್ಲ ನಿಮ್ಮ ಮನಸ್ಸಿನಲ್ಲಿ ಏನು ನಡದದೆ ಎಂಬದನ್ನು ತಿಳಿಯುವ ಶಕ್ತಿಯೂ ನನಗಿಲ್ಲ. ನಿಮ್ಮ ದರ್ಶನವಾದದ್ದೆ ನನ್ನ ಸುದೈವವೆಂದು ತಿಳಿಯುತ್ತೇನೆ. ಅದರಲ್ಲಿ ಏನಾದರೂ ಅತಿಶಯೋಕ್ತಿ ಇದೆ ಎಂದು ಎಷ್ಟು ಮಾತ್ರಕ್ಕೂ ತಿಳಿಯಬೇಡರಿ.

ನಾನು:— ನಾನು ಬಹಳ ಯತ್ನಗಳನ್ನು ಮಾಡಿದೆ, ಮತ್ತು ಈಗ ನಾನು ದಣಿದು ಹೋಗಿದ್ದೇನೆ ಆದರೂ ನನ್ನ ಮನಸ್ಸಿನ ಅಸ್ವಸ್ಥತೆಯೂ ಕಡಿಮೆಯಾಗಲಿಲ್ಲ. ಎಷ್ಟೋ ವರ್ಷಗಳಾದವು ನಾನು ಯೋಗಾಭ್ಯಾಸವನ್ನು ಬಿಟ್ಟಿರುವೆನು. ಈಗ ನನ್ನನ್ನು ಯೋಗ್ಯ ಮಾರ್ಗಕ್ಕೆ ಹಚ್ಚುವದು ತಮ್ಮ ಕೈಯಲ್ಲಿ ಅದೆ.

ಮಹಾರಾಜ:— ಒಳ್ಳೇದು ಹಾಗಾದರೆ ನಾನು ನನ್ನ ಗುರುಗಳ ಕೃಪೆಯಿಂದ ಹೇಳುವೆನು.

ಮಹಾರಾಜರು ನಂತರ ನನಗೆ ಒಂದು ವಿಶಿಷ್ಟ ಆಸನವನ್ನು ಹಾಕಿ ಕೂಡ್ರಲಿಕ್ಕೆ ಹೇಳಿದರು. ನಾನು ಸಿದ್ಧಪದ್ಮಾಸನವನ್ನು ಹಾಕಿ ಕೂತೆನು. ಅನಂತರ ಮಹಾರಾಜರು ನನಗೆ 'ಸೋಹಂ' ಮಂತ್ರವನ್ನು ಜಪಿಸಲಿಕ್ಕೆ ಹೇಳಿದರು. ಹಾಗೆ ಮಾಡುತ್ತಲೆ ನನ್ನ ಮನಸ್ಸು ಒಮ್ಮೆಲೇ ಅಂತರ್ಮುಖವಾಗಿ ಪೂರ್ಣ ಶಾಂತವಾಯಿತು. ಹಠಯೋಗದ ಪೂರ್ವ ಅಭ್ಯಾಸದ ದುಷ್ಪರಿಣಾಮಗಳೆಲ್ಲಾ ಹೋಗಿ ಬಿಟ್ಟವು. ಮೊದಲು ಸ್ವಾಸವು ಎತ್ತಲಾಗೊ ಹೋಗುತ್ತಿತು. ಅದು ಈಗ ಒಮ್ಮೆಲೆ ಸುಷುಮ್ನಾ ನಾಡಿಯಲ್ಲಿ ಸೇರಿತು, ಮತ್ತು ಬ್ರಹ್ಮರಂಧ್ರಕ್ಕೆ ಹೋಗಿ ಮುಟ್ಟಿತು. ಅಂದಿನಿಂದ ನನಗೆ ತೊಂದರೆ ಏನೂ ಆಗಲಿಲ್ಲ. ಬಹಳ ಆನಂ

ನನ್ನ ಪೂರ್ವದ ಆಯುಷ್ಯದ ಮತ್ತು ಯೋಗಾಭ್ಯಾಸದ ಸ್ವಲ್ಪ ಇತಿಹಾಸವನ್ನು ನಾನು ಈ ಕೆಳಗೆ ಕೊಡುತ್ತೇನೆ. ಅನಂತರ ಮಹಾರಾಜರ ಅನುಗ್ರಹ ಆದ ಮೇಲೆ ತಾರೀಖು ೨೬ನೇ ಮೇ ಸನ್ ೧೯೪೦ ತನಕ ನನ್ನ ಅಭ್ಯಾಸದ ಸುಧಾರಿಕೆಯು ಹ್ಯಾಗಾಯಿತು ಎಂಬದನ್ನು ಮುಂದೆ ಕೊಡುವೆನು.

ನನ್ನ ಜನ್ಮವು ಒಂದು ಸುಖವಾಗಿದ್ದ ಬ್ರಾಹ್ಮಣ ಕುಲದಲ್ಲಿ ಆಯಿತು. ನನ್ನ ಚಿಕ್ಕಂದಿನಿಂದ ನನಗೆ ಉಚ್ಚ ಶಿಕ್ಷಣ, ವ್ಯಾಯಾಮದ ಆಟಗಳು, ಲೇಖನ, ವಾಚನ ಮತ್ತು ಧಾರ್ಮಿಕ ಆಧ್ಯಾತ್ಮಿಕ ವಿಷಯ ಇವುಗಳ ಪ್ರೀತಿ ಇತ್ತು. ಲೋಕೋಪಯೋಗಿ ಕೆಲಸಗಳು, ರಾಷ್ಟ್ರೀಯ ಚಳವಳಿ, ವಾಚನಾಲಯಗಳು ಧಾರ್ಮಿಕ ಸಂಸ್ಥೆಗಳು, ಮತ್ತು ರಾಷ್ಟ್ರೀಯ ವ ಅವತಾರಿ ಪುರುಷ ಮತ್ತು ಸಾಧು ಸಂತ ಇವರ ಉತ್ಸವಗಳು ಇವುಗಳಲ್ಲಿ ನಾನು ಪ್ರಾಮುಖ್ಯವಾಗಿ ಸೇರುತ್ತಿದ್ದೆ ಅಭ್ಯಾಸ ಮತ್ತು ಹೊರಗಿನ ಆಟಗಳು ಇವುಗಳಲ್ಲಿ ಯಾವಾಗಲೂ ಮೊದಲನೆ ನಂಬರ ಇರಬೇಕೆಂಬದು ನನ್ನ ಮಹತ್ವಾಕಾಂಕ್ಷೆಯು ಇರುತ್ತಿತ್ತು. ಮತ್ತು ಬಹುಶಃ ಅದು ಪೂರ್ಣವಾಗುತ್ತಿತ್ತು. ಹದಿನೈದು ಹದಿನಾರು ವಯಸ್ಸಿನಲ್ಲಿಯೇ ಮಾನವಿ ಜೀವನದ ಹೇತು ವ ಉದ್ದೇಶವೇನಿರಬೇಕು; ಮತ್ತು ಲೋಕೋಪಯೋಗಿ ಕಾರ್ಯಗಳನ್ನು ಮಾಡುತ್ತಿರುವಾಗ ಅಡಚಣಿಗಳು ಬರುತ್ತವೆ ಅವು ಯಾಕೆ ಬರಬೇಕು; ಇದರ ವಿಚಾರ ಮಾಡಹತ್ತಿದೆ. ಮತ್ತು ಕಡೆಗೆ ನನ್ನದು ಈ ಪ್ರಕಾರ ನಿರ್ಣಯವಾಯಿತಲ್ಲ, ತಮ್ಮ ಬಾಂಧವರ ಉನ್ನತಿಗೋಸ್ಕರ ಯಾರಿಗಾದರೂ ದೇಶಕಾರ್ಯವನ್ನು ಕೈಕೊಳ್ಳುವದಿದ್ದರೆ, ಅವರು ತಮ್ಮ ಅಧ್ಯಾತ್ಮಿಕ ಉನ್ನತಿಯನ್ನು ಮೊದಲು ಮಾಡಿಕೊಳ್ಳತಕ್ಕದ್ದು. ಅನಂತರ ನಾನು ಈ ಅಧ್ಯಾತ್ಮಿಕ ಉನ್ನತಿಯನ್ನು ಸಂಪಾದಿಸತಕ್ಕ ಮಾರ್ಗವನ್ನು ಶೋಧಿಸಲಿಕ್ಕೆ ಆರಂಭಿಸಿದೆ.

ಆ ಸಮಯದ ಶ್ರೀಮಂತ ಕುಟುಂಬಿಕರೊಡನೆ ಅನುಸರಿಸಿ ನನ್ನ ತಂದೆ ತಾಯಿಯವರು ನನ್ನ ಹದಿಮೂರನೇ ವರ್ಷದಲ್ಲಿಯೇ ನನ್ನ ಲಗ್ನವನ್ನು ಮಾಡಿಸಿದ್ದರು. ಮತ್ತು ನಾನು ಹದಿನೇಳು ಹದಿನೆಂಟು ವರ್ಷದವನಿದ್ದಾಗ ಗೃಹಸ್ಥಾಶ್ರಮದ ಜವಾಬದಾರಿಯು ನನ್ನ ಮೇಲೆ ಬಿತ್ತು. ಮತ್ತು ಅಧ್ಯಾತ್ಮಿಕ ವಾಚನ, ಧಾರ್ಮಿಕ ಚರ್ಚೆಯ ಶ್ರವಣ, ಸಂತರ ಸಂಗತಿ, ಧಾರ್ಮಿಕ ವಿಧಿ–ವಿಧಾನ ಪಾಲನ ವ ಯೋಗಾಚರಣ ಇವೆಲ್ಲವುಗಳಿಂದ ನನ್ನ ಮನಸ್ಸು ತಲ್ಲೀನವಾಗಿತ್ತು. ಆದ್ದರಿಂದ ಲೋಕ ವ್ಯವಹಾರದ ವಿಷಯದಲ್ಲಿ ನಾನು ಭಯರಹಿತನಾದೆನು ಮತ್ತು ಅದರ ಬೇಸರ ಬಂತು. ಆ ಮೂಲಕ ಮನಸ್ಸು ಉದ್ವಿಗ್ನವಾಗಿ ಸಂತ ಅಥವಾ ಸದ್ಗುರುವಿಗೆ ಭೆಟ್ಟಿಯಾಗಬೇಕು ಮತ್ತು ಅವರು ನನಗೆ ಯೋಗ್ಯವಾದ ಮಾರ್ಗವನ್ನು ತೋರಿಸಬೇಕು ಎಂದು ನಾನು ರಾತ್ರಿ ಹಗಲು ಈಶ್ವರನಿಗೆ ಪ್ರಾರ್ಥನೆ ಮಾಡುತ್ತಿದ್ದೆನು. ಸಂತಪ್ತತೆ ಮತ್ತು ಉದ್ವಿಗ್ನತೆ ಇವು ವೃದ್ಧಿಯಾಗಿ ಆಪ್ತ ಇಷ್ಟ

ಸ್ನೇಹಿ, ವ ಸ್ತ್ರೀಯರನ್ನೆಲ್ಲ ಬಿಟ್ಟು ಸಾಧು–ಸಂತರ ದರ್ಶನವಾಗಬೇಕು ಎಂದು ತೀರ್ಥಾಟನೆ ಮಾಡಬೇಕೆಂಬ ಇಚ್ಛೆಯಿಂದ ನನ್ನ ಹದಿನೆಂಟನೇ ವಯಸ್ಸಿನಲ್ಲೇ ನಾನು ಮನೆಮಾರು ಬಿಟ್ಟುಕೊಟ್ಟೆ. ಅಂದರೆ ಜಗತ್ತಿನವರ ದೃಷ್ಟಿಯಲ್ಲಿ ಉಚ್ಚ ಶಿಕ್ಷಣದ ಮಾರ್ಗವು ನಿಂತುಹೋಯಿತು.

ತೀರ್ಥಾಟನೆ, ಜಪಜಾಪ್ಯ ವ ಯೋಗಾಭ್ಯಾಸ ಇವುಗಳಲ್ಲಿ ನನ್ನ ಏಳೆಂಟು ವರ್ಷಗಳು ಹೋದವು. ಮನೆ ಬಿಟ್ಟಮೇಲೆ ಹಠಯೋಗಿ ಕೇಶವ ವಾಮನ ಮೊಕಾಶಿ ಇವರಿಗೂ ನನಗೂ ಸಂಬಂಧವಾಯಿತು. ನಾನು ಅವರ ಶಿಷ್ಯನಾಗಿ ಅವರ ಹೇಳಿಕೆ ಪ್ರಕಾರ ಹಠಯೋಗಕ್ಕೆ ಆರಂಭ ಮಾಡಿದೆ. ಸನ್ ೧೯೧೨ ರಿಂದ ೧೫ ಅಂದರೆ ಮೂರು ವರ್ಷತನಕ ನಾನು ಪೂರ್ಣ ಹಠಯೋಗದ ಅಭ್ಯಾಸದಲ್ಲಿಯೇ ತೊಡಗಿದ್ದೆ. ಮೂರು ತಿಂಗಳ ಪರ್ಯಂತ ಆಹಾರ ಕಡಿಮೆ ಕಡಿಮೆ ಮಾಡುತ್ತ ದಿವಸವೆಲ್ಲ ಆಕಳ ಒಂದು ಶೇರು ಹಾಲಿನಮೇಲೆ ಇರಲಾರಂಭಿಸಿದೆ. ಹೀಗೆ ಆರು ತಿಂಗಳು ನಡಿಸಿದೆ. ಅನಂತರ ಹಾಲು ಬಿಟ್ಟು ಒಣದ್ರಾಕ್ಷೆಗಳ ಸರಬತ್ತು ತಕ್ಕೊಳ್ಳಲಿಕ್ಕೆ ಸುರು ಮಾಡಿದೆ. ಅದು ಮೂರು ತಿಂಗಳಿಗಿಂತ ಹೆಚ್ಚುಕಾಲ ನಡೆಯಿತು. ನಂತರ ೧೦೮ ದಿನಗಳತನಕ ಅರಿವೆ ಮೇಲೆ ಸೋಶಿದ ಒಂದು ಶೇರು ನೀರು ಮಾತ್ರ ಕುಡಿಯುತ್ತಿನೆ. ಆ ೧೦೮ ದಿನಗಳ ಕಡೆಗೆ ನನ್ನ ಭಾರವು ಬರೆ ೪೮ ಪೌಂಡು ಇತ್ತು. ನಾನು ಯಾವಾಗ ಆಹಾರವನ್ನು ಬಿಡಲಾರಂಭಿಸಿದೆ ಆಗ ನನ್ನ ಭಾರವು ೯೬ ಪೌಂಡು ಇತ್ತು. ನನ್ನ ಬರೆ ಅಸ್ಥಿಪಂಜರ ಮಾತ್ರ ಉಳಿದಿತ್ತು. ರಕ್ತದ ಅಭಾವದ್ದೆಶೆಯಿಂದ ನನ್ನ ಶರೀರವು ನಿರ್ವರ್ಣವಾಗಿತ್ತು. ಆದರೂ ರಕ್ತದೊಳಗಿನ ಅಶುದ್ಧತೆಯು ಹೋಗಿ ಅದು ಸತೇಜವಾಗಿತ್ತು. ಪುನಹಾ ಕೈ ಕೆಳಗೆ ಮಾಡಿದರೆ ಅಗೈ ಮತ್ತು ಬೆರಳುಗಳು ಇಷ್ಟು ಕೆಂಪು ಕಾಣಿಸುತ್ತಿದ್ದವು, ಅವುಗಳೊಳಗಿಂದ ರಕ್ತವೆ ಹೊರಡುತ್ತದೊ ಎಂಬಂತೆ ಕಾಣಿಸುತ್ತಿತ್ತು. ನಾನು ಆ ಕಾಲದಲ್ಲಿ ಇಂದೂರದಲ್ಲಿದ್ದೆ, ಮತ್ತು ಡಾಕ್ಟರ ಭಾಂಡಾರಕರ ಅಲ್ಲಿ ಸಿವ್ಹಿಲ್ ಸರ್ಜನರಾಗಿದ್ದರು. ಅವರ ಕಡೆಯಿಂದ ನಾನು ತಪಾಸು ಮಾಡಿಸಿಕೊಂಡೆನು. ಅವರಂದರು, “ ನಾಡಿಯ ಬಡತಗಳು ಮಿನಿಟಿಗೆ ೪೦–೪೨ ಇದ್ದರೂ ಅವು ಸಶಕ್ತ ಮತ್ತು ಸಮಾನ ಇದ್ದಾವೆ. ಶಕ್ತಿಯ ವಿಷಯದಲ್ಲಿ ಸೈನ್ಯದೊಳಗಿನ ಶಿಪಾಯಿಯಂತೆ ಅವೆ. ಹೃದಯ ಮತ್ತು ಫುಫ್ಫುಸಗಳ ಕಾರ್ಯವು ಸರಿಯಾಗಿ ನಡೆದದೆ. ” ನಾನು ಅನ್ನ ಬಿಟ್ಟಿದ್ದರೂ ಅದರ ಕೆಟ್ಟ ಪರಿಣಾಮಗಳು ಶರೀರದ ಮೇಲೆ ಆಗಲಿಲ್ಲ. ನಾನು ಸದಾ ಪೂರ್ಣ ಆನಂದಿತನಿದ್ದೆ; ಮತ್ತು ನನ್ನ ಶಕ್ತಿಗೆ ಸರಿಯಾಗಿ ನಾನು ಶ್ರಮಪಡುತ್ತಿದ್ದರೂ, ನನಗೆ ದಣುವಾದಂತೆ ಎಂದೂ ಅನಿಸುತ್ತಿದ್ದಿಲ್ಲ. ಯೋಗಾಭ್ಯಾಸದ ಇತಿಹಾಸದೊಳಗೆ ಇದು ಒಂದು ದುರ್ಲಭವಾದಂಥಾ ಉದಾಹರಣೆ ಇರುತ್ತದೆ.

ಸಿದ್ಧಾಸನ, ಪದ್ಮಾಸನ, ಮತ್ತು ಬದ್ಧಪದ್ಮಾಸನ ಇವುಗಳಪೈಕಿ ಯಾವದೊಂದು ಆಸನದ ಮೇಲೆ ಸತತ ಮೂರು ತಾಸುತನಕ ಕೂತಿರುತ್ತಿದ್ದೆ.

ಮತ್ತು ಹೀಗೆಯೇ ದಿನರಾತ್ರಿಯಲ್ಲಿ ಹದಿನೆಂಟು ತಾಸು ಕೂತು ಕಳೆಯುತ್ತಿದ್ದೆ. ನನಗೆ ವಿಶ್ರಾಂತಿಯ ಅವಶ್ಯಕತೆ ತೋರಲಿಲ್ಲ. ನನಗೆ ನಿದ್ರೆ ಎಂದೂ ಬೀಳುತ್ತಿರಲಿಲ್ಲ; ಹಾಗೂ ಎಂದೂ ರೋಗವೂ ಬಂದಿಲ್ಲ, ಮತ್ತು ಉಲ್ಹಾಸವೃತ್ತಿ ಯತ್ಕಿಂಚಿತ್ತಾದರೂ ಕಡಿಮೆ ಯಾಗಲಿಲ್ಲ. ನನ್ನ ಸ್ಥೂಲ ಶರೀರವು ತೀರಾ ಕೃಶವಾಗಿದ್ದರೂ ಮತ್ತು ರಕ್ತ ಮಾಂಸವು ಒಣಗಿದ್ದರೂ ನನ್ನ ಜ್ಞಾನೇಂದ್ರಿಯಗಳ ಸೂಕ್ಷ್ಮತೆಯು ವೃದ್ಧಿಯಾಗಿತ್ತು. ನನ್ನ ಕಣ್ಣಿನಲ್ಲಿ ಒಂದು ವಿಶಿಷ್ಟ ತೇಜವಿತ್ತು, ಮತ್ತು ಯಾವನಾದರೊಬ್ಬ ಉತ್ತಮ ದೃಷ್ಟಿ ಉಳ್ಳ ೧೦-೧೨ ವರ್ಷದ ಹುಡುಗನಿಗೆ ಎಷ್ಟು ದೂರತನಕ ಪದಾರ್ಥ ಸ್ಪಷ್ಟ ಕಾಣಿಸೀತೊ ಅದರ ಎರಡು ಪಟ್ಟು ದೂರದಿಂದ ಆ ಪದಾರ್ಥವು ನನಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ನನ್ನ ಶ್ರವಣೇಂದ್ರಿಯದ ಶಕ್ತಿ ಮೊದಲಿನಿಂದಲೂ ಕಡಿಮೆಯೇ ಇರುತ್ತಿದ್ದರೂ, ಅದು ಈಗ ಇಷ್ಟು ಸೂಕ್ಷ್ಮವಾಯಿತು, ರಾತ್ರಿಯಲ್ಲಿ ಬಾಗಲು ಎಲ್ಲ ಮುಚ್ಚಿದ ಕೋಣೆಯಲ್ಲಿ ನಾನು ಮೈತುಂಬ ಬ್ಲಾಂಕೇಟು ಹೊದ್ದುಕೊಂಡು ಮಲಗಿದ್ದರೂ, ನಿತ್ಯದ ಸಾಮಾನ್ಯ ಧ್ವನಿಯೊಳಗೆ ನಡೆದ ಮಾತುಕತೆ ನನಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ರಸನೇಂದ್ರಿಯಕ್ಕಾದರೂ ನೀರುಸಹಾ ಅತ್ಯಂತ ಮಧುರವಾಗಿ ತೋರುತ್ತಿತ್ತು. ನನ್ನ ಘ್ರಾಣೇಂದ್ರಿಯ ಶಕ್ತಿಯು ಇಷ್ಟು ತೀಕ್ಷ್ಣವಾಗಿತ್ತಲ್ಲ, ನನ್ನ ಮನೆಯಿಂದ ಮೂರನೆ ಮನೆಯಲ್ಲಿ ಏನಾದರೂ ಜೀನಸು ಬಿದ್ದದ್ದಿದ್ದರೆ, ಮತ್ತು ಅದರ ವಾಸನೆ ಇತರರಿಗೆ ಸ್ವಲ್ಪಾದರೂ ಗೊತ್ತಾಗುತ್ತಿದ್ದಿಲ್ಲಾದರೂ, ನನಗೆ ಅದರ ಸುವಾಸ ಅಥವಾ ದುರ್ಗಂಧವು ಆಗಲೇ ತಿಳಿಯುತ್ತಿತ್ತು. ಯಾವನಾದರೊಬ್ಬನು ನನ್ನ ಸಮೀಪ ಬಂದನೆಂದರೆ ಅವನ ಶರೀರದ ವಾಸನೆಯು ನನಗೆ ಸಹನವಾಗುತ್ತಿದ್ದಿಲ್ಲ. ಶರೀರದ ಅಂತರ್ಭಾಗವು ಇಷ್ಟು ಶುದ್ಧ ಮತ್ತು ಸ್ವಚ್ಛವಾಗಿತ್ತಲ್ಲ, ನನ್ನ ಕುಡಿಯುವ ನೀರಿನಲ್ಲಿ ಗುಲಾಬಿ ನೀರಿನ ಒಂದೇ ಹನಿ ಹಾಕಿದರೆ ನನ್ನ ಮೂತ್ರಕ್ಕೆಸಹಾ ಗುಲಾಬಿ ನೀರಿನ ವಾಸ ಬರುತ್ತಿತ್ತು. ತ್ವಚೆಯ ಪಾರದರ್ಶಕತ್ವವು ಅತ್ಯಧಿಕವಾಗಿತ್ತು. ನನ್ನ ತೊಡೆಯ ಮೇಲಿನ ತೊಗಲು ಯಾರಾದರೂ ಎಳೆದರೆ ಅದು ಒಂದು ಗೇಣುದ್ದ ಬರುತ್ತಿತ್ತು. ಹಾಗೂ ಆ ತ್ವಚೆಯೊಳಗಿಂದ ದೀಪ ಅಥವಾ ಕೈಬೆರಳುಗಳು ಸಹಾ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಯೋಗಶಾಸ್ತ್ರದಲ್ಲಿ ವರ್ಣಿಸಿದ ಇತರ ಅನುಭವಗಳೂ ನನಗೆ ದೊರಕಿದ್ದವು.

ಮೂರುವರೆ ತಿಂಗಳತನಕ ನಾನು ಯಾವಾಗ್ಗೆ ಬರೀ ನೀರಿನ ಮೇಲೆ ಇದ್ದೆ. ಆಗ ಎಂಟು ಹತ್ತು ದಿವಸಗಳತನಕ ನನಗೆ ಬಹಿರ್ದೆಶೆಯು ಇಚ್ಛೆಯಾಗುತ್ತಿದ್ದಿಲ್ಲ. ಮತ್ತು ಹೋಗುವದೆಂದರೆ ಬರೀ ವಾಯು ಹೋಗುತ್ತಿತ್ತು. ಲಘುಶಂಕೆ ಮಾತ್ರ ನಿಯಮಿತವಾಗಿತ್ತು. ಆತ್ಮಾನಂದ, ಶರೀರಬಲ ವ ನಾಡಿಶುದ್ಧಿ ಇವುಗಳ ಹಾಗೂ ನಕ್ಷತ್ರ, ಸೂರ್ಯ, ಚಂದ್ರ, ಮಿಂಚು ವಗೈರೆಯ ಬಣ್ಣದ ಪ್ರಕಾಶದ ವಿವಿಧ ದೃಶ್ಯಗಳು, ಇವುಗಳ ಆನಂದದಾಯಕ ಅನುಭವವು ಪ್ರತಿದಿನ ಬರುತ್ತಿತ್ತು.

ನನ್ನ ಶರೀರವು ಅತಿ ಹಗುರ ಮತ್ತು ನಾಜೂಕ ಆಗಿದ್ದದ್ದು ನನಗೆ ಅನುಭವಕ್ಕೆ ಬರುತ್ತಿತ್ತು. ನಾನು ಆಸನ ಹಾಕಿಕೊಂಡು ಧ್ಯಾನಕ್ಕೆ ಕೂತಿರುವಾಗ, ನನ್ನ ಸರ್ವ ಶರೀರವು ಆಸನದಿಂದ ಎಷ್ಟು ಮೊಳ, ಒಂದುವರೆ ಮೊಳತನಕ ಮೇಲೆ ಹೋಗುತ್ತಿತ್ತು. ಒಳಗಿನ ಶ್ವಾಸದ ನಿರೋಧನವಾದ್ದರಿಂದ ಒಮ್ಮೊಮ್ಮೆ ನನ್ನ ಶರೀರವು ಹಾರಿ ನಾಲ್ಕೈದು ಮೊಳ ದೂರ ಹೋಗಿ ಬೀಳುತ್ತಿತ್ತು. ಒಮ್ಮೊಮ್ಮೆ ಶರೀರವು ಚೆಂಡಿನಂತೆ ಐದಾರು ನಿಮಿಷತನಕ ಮೇಲೆ ಕೆಳಗೆ ಆಗುತ್ತಿತ್ತು. ಮತ್ತು ಯಾವಾಗ್ಗೆ ನಾನು ಲಂಗಾತ ಮಲಗುತ್ತಿದ್ದೆ, ನನ್ನ ಸರ್ವ ಶರೀರವು ತಲೆಯಿಂದ ಕಾಲುಬೆರಳುತನಕ ಆಗ್ಗೆ ಸಹಾ ಕೆಳಗೆ ಮೇಲೆ ಆಗುತ್ತಿತ್ತು.

ಆದರೆ ಪ್ರತಿಕೂಲ ಪರಿಸ್ಥಿತಿ ಮೂಲಕ ನಾನು ಮುಂದೆ ಅಭ್ಯಾಸವನ್ನು ಬಿಡಬೇಕಾಯಿತು. ಸಾಮಾನ್ಯ ವ್ಯವಹಾರಿ ಜೀವನದಕಡೆ ತಿರುಗಿ ಬರಬೇಕೆಂತ ಇಚ್ಛೆ ಆಯಿತು, ಮತ್ತು ನಾನು ಹಾಲು ಕುಡಿಯಲಿಕ್ಕೆ ಸುರುಮಾಡಿದೆ. ಹಾಲಿನ ಮೇಲೆ ಇದ್ದು ಒಂದು ವರ್ಷವಾದ ಮೇಲೆ ನಾನು ಅನ್ನ ಉಣ್ಣಲಿಕ್ಕೆ ಹತ್ತಿದೆ. ನಾನು ಅನ್ನ ಉಣ್ಣಲಿಕ್ಕೆ ಸುರುಮಾಡಿದ ದಿವಸ ನನ್ನ ಭಾರವು ೫೬ ಪೌಂಡ ( ಮೊದಲಿನಷ್ಟ ) ಇತ್ತು. ನನ್ನ ಗುರು ಮೋಕಾಶಿ ಇವರ ಆಜ್ಞೆಗೆ ಅನುಸರಿಸಿ ನಾನು ಆಯುರ್ವೇದದ ಅಭ್ಯಾಸವನ್ನು ಮಾಡಿದೆ, ಮತ್ತು ಸನ್ ೧೯೧೭ ರಿಂದ ವೈದ್ಯನೆನಿಸಿಕೊಂಡು ವೈದ್ಯಕಿ ಧಂದೆಯನ್ನು ಸುರು ಮಾಡಿದೆ. ಅದು ಮುಖ್ಯವಾಗಿ ನನ್ನ ಗುರುವಿಗೆ ಸಹಾಯವಾಗಿ ಅವರ ಸೇವಾ ಘಟಿಸಲಿ ಎಂದು ಆರಂಭಿಸಿದ್ದೆ, ಮತ್ತು ನನ್ನ ಸ್ವತದ ಚರಿತಾರ್ಥವೂ ನಡೆದು, ಗುರುಗಳ ಸೇವೆಯೂ ನಡೆಯಬೇಕೆಂತ ಇನ್ನಾದರೂ ಚಾಲು ಇಟ್ಟಿದ್ದೇನೆ. ಆದರೆ ಧಾರ್ಮಿಕ ದೊಡ್ಡಸ್ತಿಕೆಯನ್ನು ಸಂಪಾದಿಸುವ ಕಾಮನೆಯು ಉಳಿದು, ಅದು ನಿತ್ಯದಲ್ಲಿಯೂ ಬೆಳೆಯುತ್ತಿತ್ತು. ಯೋಗಿ ಮತ್ತು ಸಾಧು ಇವರ ಕೂಡ ಸಂಬಂಧ ಜೋಡಿಸಬೇಕೆಂದು ತೀರ್ಥಯಾತ್ರೆ ಮತ್ತು ಬಹಳ ಪ್ರಯಾಣ ಮಾಡಿದೆ; ಆದರೆ ದಾಂಭಿಕತ್ವ ಇಲ್ಲದೆ ಸರಳನಾದ ಮನುಷ್ಯ ಸಿಗುವದು ನನಗೆ ಬಹಳ ಅಪರೂಪ ಅನಿಸಿತು; ಉಚ್ಚ ದರ್ಜೆಯ ಮಹಾನ ಯೋಗಿಗಳು ಯಾರು ನನಗೆ ಭೆಟ್ಟಿಯಾಗಿರುವರೊ ಅವರನ್ನು ಕೈ ಬೆರಳುಗಳ ಮೇಲೆ ಎಣಿಸಬಹುದಾಗುವಷ್ಟು ಕಡಿಮೆ ಇದ್ದರು.

ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾಗಿದ್ದ ಸಾಧು ಶ್ರೀವಾಸುದೇವಾನಂದ ಸರಸ್ವತಿ ಇವರ ಸಹವಾಸ ನನಗೆ ಕೆಲವುಕಾಲತನಕ ಸುದೈವದಿಂದ ಲಭಿಸಿತು. ಅವರು ನನಗೆ ಬಹಳ ಸಹಾಯ ಮಾಡಿದರು ಮತ್ತು ಅವರು ಯೋಗ ಮಾರ್ಗದ ಮೇಲೆ ಮುಂದೆ ಮಾರ್ಗದರ್ಶಕರಾದರು. ಅವರು ತಮ್ಮ ನಾಶವಂತ ಜಡ ದೇಹವನ್ನು ಬಿಟ್ಟರೂ ಅವರು ನನ್ನ ಸ್ವಪ್ನದಲ್ಲಿ ಬಂದು ಮಾರ್ಗದರ್ಶಕರಾಗುತ್ತಾರೆ. ಇತ್ತಲಾಗಿನ ಉದಾಹರಣೆ ಹೀಗದೆ, ಶ್ರೀ ಗಜಾನನ ಮಹಾರಾಜರು

ಕೃಪೆ ಮಾಡಿ ನನಗೆ ಯಾವ ಧ್ಯಾನಯೋಗವನ್ನು ಹೇಳಿದ್ದಾರೆ, ಅದಕ್ಕೆ ಅವರು ತಮ್ಮ ಮೆಚ್ಚಿಕೆಯನ್ನು ತೋರಿಸಿದರು. ಬೇರೆ ಕೆಲವು ಖರೆ ಸಾಧುಗಳ ಕೂಡೆಯೂ ನನ್ನ ಸಂಬಂಧವಾಗಿತ್ತು. ಅವರು ನನಗೆ ಸಹಾಯ ಶಿಕ್ಕೀತೆಂಬ ಸೂಚನೆಯನ್ನು ಕೊಟ್ಟರು. ಆದರೆ ಇಷ್ಟು ಮಾಡಿಯೂ ಧ್ಯೇಯದಿಂದ ನಾನು ಅತಿ ದೂರ ಇದ್ದೇನೆ ಎಂದು ನನಗೆ ಅನಿಸುತ್ತಿದ್ದದರಿಂದ ಅಸಮಾಧಾನವು ಉಳಿಯಿತು. ಆ ಸಮಾಧಾನವು ಚೈತ್ರ ಶುದ್ಧ ಏಕಾದಶಿ ಗುರುವಾರ ದಿವಸ ಯಾವಾಗ ಶ್ರೀಗಜಾನನ ಮಹಾರಾಜರ ಕೂಡ ಸಂಬಂಧವಾಗಿ ಅವರು ನನ್ನ ಮೇಲೆ ಅನುಗ್ರಹ ಮಾಡಿದರು, ಆ ದಿನ ಪ್ರಾಪ್ತವಾಯಿತು. ಮತ್ತು ಅಂದಿನಿಂದ ಒಂದು ಪ್ರಕಾರದ ಶಾಂತಿ ಮತ್ತು ಸ್ಥಿರತೆಯು ನನಗೆ ಭಾಸಲಾರಂಭಿಸಿದವು.

ಈ ವರ್ಷ ರಾಮನವಮಿ ದಿವಸ ನನಗೆ ಶ್ರೀಗಜಾನನ ಮಹಾರಾಜರ ದರ್ಶನವಾಯಿತು. ಅವರು ನನ್ನ ಮೇಲೆ ಅನುಗ್ರಹ ಮಾಡಿ ನನಗೆ ದಾರಿ ತೋರಿಸಬೇಕು ಎಂದು ನನ್ನ ಮನಸ್ಸಿನಲ್ಲಿ ಇಚ್ಛೆ ಉತ್ಪನ್ನವಾದಮೇಲೆ ಎರಡು ದಿನಗಳಲ್ಲಿ ( ಚೈತ್ರ ಶುದ್ಧ ೧೧ ) ಈ ದಿವಸ ಬೆಳಿಗ್ಗೆ ಒಂಭತ್ತು ಹೊಡಿಯುವಾಗ ಶ್ರೀಗಜಾನನ ಮಹಾರಾಜರು ಧ್ಯಾನದ ಅಭ್ಯಾಸವನ್ನು ಹ್ಯಾಗೆ ಮಾಡಬೇಕೆಂದು ಸ್ಪಷ್ಟ ಮಾಡಿ ತಿಳಿಸಿದರು. ಆ ಸಮಯದಲ್ಲಿ ಹತ್ತು ಹನ್ನೆರಡು ಸೆಕೆಂಡು ತನಕ ಧೂಪದ ಸುವಾಸ ಕೋಣೆಯಲ್ಲೆಲ್ಲ ತುಂಬಿ ಹೋಗಿತ್ತು. ಮತ್ತು ಒಬ್ಬ ಪೂರ್ಣ ಸಾಧುವಿನ ಸಾನ್ನಿಧ್ಯವಿತ್ತೆಂಬಂತೆ ತೋರುತ್ತಿತ್ತು. ಶ್ರೀಗಜಾನನ ಮಹಾರಾಜ ರಾಮರೂ ನಂತರ ಈ ಸಂಗತಿಯು ಗುರ್ತು ತೋರಿಸಿ ಕೊಟ್ಟರು. ಅದೇ ದಿನ ರಾತ್ರಿ ಶ್ರೀವಾಸುದೇವಾನಂದ ಸರಸ್ವತಿಯವರು ನನ್ನ ಸ್ವಪ್ನದಲ್ಲಿ ಬಂದು ನನಗೆ ಕಡೆ, ಖರೇ ಮಾರ್ಗವನ್ನು ತೋರಿಸುವವರು ಶಿಕ್ಕರು ಎಂಬದಕ್ಕಾಗಿ ಅವರು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದರು.

ಮರುದಿನ ಸೂರ್ಯೋದಯಕ್ಕೆ ಮೊದಲು ನಾನು ಪೂರ್ಣ ಎಚ್ಚರ ಇರುವಾಗ್ಗೆ ನೀಲವರ್ಣದ ಶ್ರೀವಿಷ್ಣುವಿನ ಪೂರ್ಣ ಪ್ರಕಾಶಮಯ ಮೂರ್ತಿಯು ಕಾಣಿಸಿತು, ಮತ್ತು ನನ್ನ ಮನಸ್ಸು ಧ್ಯಾನದಲ್ಲಿ ಅಧಿಕಾಧಿಕವಾಗಿ ತಲ್ಲೀನವಾಯಿತು. ಅನಂತರ ನನಗೆ ಘಂಟಾನಾದಗಳು ಕೇಳಬಂದವು, ಮತ್ತು ನನ್ನ ಏಕಾಗ್ರತೆಯು ವೃದ್ಧಿಯಾಯಿತು. ಯಾವಾಗಲಾದರೂ ನನಗೆ ಚಂದ್ರಮಂಡಲ ಮತ್ತು ನಕ್ಷತ್ರಗಳು ಕಾಣಿಸುತ್ತವೆ. ಒಮ್ಮೊಮ್ಮೆ ಶುಕ್ರನಂಥಾ ನಕ್ಷತ್ರಗಳು ತೋರುವವು. ಸುಮಾರು ಎಂಟು ಹತ್ತು ದಿನಗಳ ಹಿಂದೆ ನನಗೆ ಬ್ರಹ್ಮರಂಧ್ರದಲ್ಲಿ ಚಂದ್ರಬಿಂಬವು ಪ್ರಕಾಶಿಸುವಂತೆ ಕಾಣಿಸಿತು. ಆ ಮೇಲೆ ನಾಲ್ಕೈದು ದಿವಸ ಜೋಳದ ಕಾಳಿನಷ್ಟು ಒಂದು ಸಣ್ಣ ನೀಲ ಬಿಂದು ಕಂಡೆ. ಅದು ಬಹಳ ಹೊತ್ತಿನವರೆಗೆ ಸ್ಥಿರವಾಗಿತ್ತು. ಪ್ರಸ್ತುತ ಕಾಲದಲ್ಲಿ ಒಮ್ಮೊಮ್ಮೆ ಸಿನೆಮಾದ ಫಿಲ್ಮದಂತೆ ನಾನಾ

ವರ್ಣದ ದೃಶ್ಯಗಳು ಮೇಲೆ ಚಲಿಸುತ್ತವೆಂಬದಾಗಿ ಕಾಣಿಸುವದು.

ತಾರೀಖು ೨೬ ನೇ ಮೆ ಸನ್ ೧೯೪೦ ಪರ್ಯಂತದ ಈ ನನ್ನ ಅನುಭವಗಳಿರುತ್ತವೆ.

(ಸಹಿ) ಕೃಷ್ಣಾಜಿ ಗೋವಿಂದ ಕುರ್ಡೂಕರ.
ಮೊದಲು ಇದ್ದದು ಜೋಗಾಯಿ ಚೆ. ಆಂಬೆ,
ಜಿಲ್ಲಾ ಹುಮಿನಾಬಾದ; ನಿಝಾಮುನರಾಜ್ಯದಲ್ಲಿ
ಈಗ ಏಳೆಂಟು ವರ್ಷಗಳಿಂದ ವಾಸ್ತವ್ಯ ನಾಶಿಕ ವ ಸಂಗಮನೇರ.

— ೨೬ —

ರಾ. ಹಣಮಂತ ಪಿ. ಉಮರ್ಜಿ, ವಾಸ್ತವ್ಯ ಪುಣೆ, ಇವರ ಆಧ್ಯಾತ್ಮಿಕ ಅನುಭವಗಳು : –

( ರಾ. ಬಿ. ಎಮ್. ಗಡಕರಿ, ಪುಣೆ, ಇವರ ತಾ. ೮-೧-೪೨ ರ ಪತ್ರದ ಮೇಲಿಂದ)

೧೧೦ ನಾರಾಯಣ ಪೇಠ ಪುಣೆ ೮-೧-೪೨.

ಶ್ರೀಯವರ ಚರಣಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳು.

ತಮ್ಮ ಕೃಪಾಪತ್ರವು ಮುಟ್ಟಿತು. ಸೌ. ಸುಂದರಾಬಾಯಿಯ ಪತ್ರ ವನ್ನು ಓದಿ ನನಗೆ ಪ್ರೇಮಾಧಿಕ್ಯವಾಯಿತು, ಮತ್ತು ಎರಡನೇ ಸಾರಿ ಓದಿದಾಗ ಆನಂದವು ಉಕ್ಕೇರಿ ಬಂತು. ಗುರುಪ್ರಸಾದವು ಆದಮೇಲೆ ಇಷ್ಟು ಸ್ವಲ್ಪ ಅವಧಿಯಲ್ಲಿ ( ನಾಲ್ಕೇ ದಿವಸಗಳಲ್ಲಿ ) ಈ ಪ್ರಕಾರದ ಉಚ್ಚ ದರ್ಜೆಯ ಅನುಭವ ಗಳು ಬಂದಂಥವರ ಮಹಾನ್ ಭಾಗ್ಯ ಮತ್ತು ಅನುಭವ ಕೊಟ್ಟಂಥವರ ನಿಜವಾದ ಯೋಗ್ಯತೆಯು ಕಂಡು ಬರುತ್ತದೆ.

ರಾ. ಹಣಮಂತರಾವ ಉಮರ್ಜಿ ಇವರು ಅಂದರು, ಯಾವ್ಯಾವಾಗ ಶ್ರೀಗಜಾನನ ಮಹಾರಾಜರ ಪತ್ರ ಬರುವದೊ ಆಗಾಗ್ಗೆ ಅದು ಕೈಯಲ್ಲಿ ಬಂದಾ ಕ್ಷಣ ಕುಂಡಲಿನಿಯು ಸ್ಫುರಣವು ಸುರುವಾಗುತ್ತವೆ. ಎರಡು ದಿನಗಳ ಹಿಂದೆ ಅವರಿಗೆ ಮುಂಜಾನೆ ದೊಡ್ಡ ಪ್ರಕಾಶ ಕಾಣಿಸಿ ಅದರೊಳಗೆ ಪ್ರಕಾಶಮಾನ ಓಂ ಕಾಣಿಸಿತು. ಈ ಸುದ್ದಿಯನ್ನು ತಮಗೆ ತಿಳಿಸಬೇಕೆಂದು ಅವರು ಹೇಳಿರುವರು.

ತಮ್ಮ
(ಸಹಿ) ಬಾಳಕೃಷ್ಣ.

— ೩೭ —

ಶ್ರೀ ಗಣೇಶ ರಂಗನಾಥ ಆಂಬೆಕರ, ಮು. ಬಾರಾಮತಿ ಇವರ ಅನುಭವಗಳು :—

( ಶ್ರೀ ಮಹಾರಾಜರಿಗೆ ಅವರ ಕಡೆಯಿಂದ ಬಂದ ತಾ. ೨೨-೧೧-೪೩ ರ ಪತ್ರದ ಮೇಲಿಂದ )

ಶ್ರೀ

ಮು. ಬಾರಾಮತಿ
ತಾ. ೨೦-೧೧-೪೩

ಸದ್ಗುರು ಚರಣಗಳಲ್ಲಿ ಶತಶಃ ಪ್ರಣಾಮಗಳು,

ತಮ್ಮ ಮಹಾಮಂತ್ರದ ಉಪದೇಶವು ತಾರೀಖು ೨೬ ಅಕ್ಟೋಬರ ಈ ಈ ದಿವಸವಾಯಿತು. ಅದರ ನಂತರ ಎರಡು ಮೂರು ದಿನಗಳಲ್ಲಿ ನಾಶಿಕದಲ್ಲಿ ರಾತ್ರಿ ಹೊತ್ತಿಗೆ ಕರ್ಣನಾದವು ಸಣ್ಣ ಘಂಟೆ ಬಾರಿಸಿದಂಥಾದ್ದು ಕೇಳಿಸುತ್ತಿತ್ತು. ಅದು ಮಧ್ಯದಲ್ಲಿ ನಿಂತು ಹೋಗಿ ಪುನಹಾ ಪುಣೆಗೆ ಬಂದ ಮೇಲೆ ಸುರುವಾಯಿತು ಘಂಟಾನಾದದ ಕೂಡ ನಡುವೆ ನೌಬತ್ತಿನಂಥಾ ಶಬ್ದವು ಬಲ ಕಿವಿಯಲ್ಲಿ ಕೇಳಿಸುತ್ತಿತು. ಅದು ಈಗ ನಿಂತದೆ. ರಾತ್ರಿ ಎದ್ದಾಗ ಅಥವಾ ಹಗಲು ಶಾಂತ ವಿರುವಾಗ ಏಕಾಗ್ರತೆಯಿಂದ ಕೇಳಿದಾಗ ಸೂಕ್ಷ್ಮವಾದ ಘಂಟಾನಾದವು ಈಗಲೂ ಕೇಳಿಸುವದು. ಪುಣೆಗೆ ಬಂದ ಮೇಲೆ ಮರುದಿನವೇ ಅಂದರೆ ತಾ. ೨೯ ಅಕ್ಟೋಬರ ಗುರುವಾರ ದಿನ ಧ್ಯಾನಕ್ಕೆ ಕೂತಿರುವಾಗ, ತಾವು ನನಗೆ ಅತಿಶಯ ಸುಲಭವಾದ ಕೆಲಸವನ್ನು ಹೇಳಿದಿರಿ. "ಪದ್ಮಾಸನ ಇತ್ಯಾದಿ ಏನೂ ಬೇಡಾ, ಮೂಲಾಧಾರ ಬೇಡ ಅನಾಹತವೂ ಬೇಡ; ಸ್ವಸ್ಥ ಕೂತುಕೊಂಡು ಸಹಸ್ರದಲದ ಮೇಲೆ ಧ್ಯಾನ ಮಾಡುವದು. ಪಥ್ಯವೇನೂ ಇಲ್ಲ."

ಇದು ನನ್ನಂಥಾ ಆಲಸಿಯ ಮೇಲೆ ಉದಾರತೆಯು ನೋಡಿ ನನ್ನ ಹೃದಯವು ಇಷ್ಟು ಪ್ರೇಮಾತಿಶಯದಿಂದ ತುಂಬಿತು; ನನ್ನ ಕಣ್ಣೊಳಗಿಂದ ಆನಂದಾಶ್ರುಗಳು ಹೊರಟದ್ದು ನನ ಶರ್ಟು ಒದ್ದೆಯಾಯಿತು. ನನ್ನ ಮನಸ್ಸಿನಲ್ಲಿ ಬಂತಲ್ಲ, ತಾವು ಕೊಡಲಾರಂಭಿಸಿದರೆ ಅನಂತ ಹಸ್ತದಿಂದ ಕೊಟ್ಟೇರಿ ಆದರೆ ನನ್ನಂಥಾ ಮಂಗವು ಎಷ್ಟು ತಕ್ಕೊಂಡೀತು ?

ಅನಂತರ ದಿವಾಳಿಗೆ ತಮ್ಮ ಪತ್ರ ಬಂತು. ನಾವು ಇಲ್ಲಿ ಬೇಕಾದ್ದು ತಿನ್ನುವೆವು, ಮತ್ತು ತಮ್ಮ ಹೊಟ್ಟೆಯಲ್ಲಿ ಚಹಾದ ನೀರಿನ ಹೊರ್ತು

ಮತ್ತೇನೂ ಇಲ್ಲ. ಅದರದು ಇಷ್ಟು ಕೆಟ್ಟಸಿಸಿತಲ್ಲ, ಆದಿನವೂ ಧ್ಯಾನದ ಹೊತ್ತಿಗೆ ಅಶ್ರುಗಳಿಂದ ಶರ್ಟು ತೋಯಿತು.

ಈ ಪ್ರಕಾರ ಅನುಭವಗಳು ಬಂದದ್ದು ಬರೆದೆ. ದರ್ಶನಾದಿಗಳು ಇನ್ನೂ ತನಕ ಇಲ್ಲ. ಆದರೆ ನನಗೆ ಅದರ ಗೊಡವೆ ಇಲ್ಲ. ಸದ್ಯದಲ್ಲಿ ಉಪಾಸನಿ ಮಹಾರಾಜರ ಚರಿತ್ರವನ್ನು ಓದುತ್ತೇನೆ. ಈ ಪ್ರೇರಣೆಯು ತಮ್ಮದೋ ಏನೊ ತಿಳಿಯದು. ಆದರಲ್ಲಿ ಸಾಯಿಬಾಬಾ ಇವರು ಉಪಾಸನಿ ಮಹಾರಾಜರಿಗೆ ಹೇಳಿದರು, " ಈಗ ನೀನು ಮತ್ತು ನಾನು ಒಂದೇ ಇದ್ದೇವೆ. ನಿನ್ನ ಉದ್ಧಾರವು ನನ್ನ ಜಬಾಬದಾರಿಯು. ನೀನು ಯಾವ ಗಡಬಡಿಯೂ ಮಾಡಬೇಡ. ನಿನ್ನ ಜಬಾಬದಾರಿ ಎಲ್ಲಾ ನನ್ನಮೇಲೆ. " ತಾವಾದರೂ ಇದನ್ನೆ ನನಗೆ ಹೇಳಿದ್ದೀರಿ. ಈ ಸಾಮ್ಯದ್ದು ನನಗೆ ಬಹಳ ವಿನೋದಕ್ಕೆ ಕಾರಣವಾಯಿತು. ತಮ್ಮ ಲೀಲೆಯು ಅಗಾಧವಾಗಿದೆ. ಸಾಯಿಬಾಬಾ ಅನ್ನುತ್ತಾರೆ, " ಯೋಗ ಯಾಗ ತಪಶ್ಚರ್ಯ ಯಾತಕ್ಕೆ ಅಪ್ಪಾ. ನನ್ನ ರೀತಿಯು ಪ್ರತ್ಯೇಕವದೆ," ಮತ್ತು ತಾವೂ ಹೇಳುತ್ತೀರಿ, " ನಾಥಪಂಥದ ದಾರಿ ಬೇರೆ " ಇದರಲ್ಲಿ ಎಷ್ಟು ಸಾಮ್ಯತೆ ಇದೆ !

ಇರಲಿ, ತಮ್ಮ ಚರಣಗಳಲ್ಲಿ ನನ್ನ ಭಕ್ತಿಯು ದಿನದಿನಕ್ಕೆ ವೃದ್ಧಿಯಾಗುತ್ತಿರಬೇಕು, ಇಷ್ಟೇ ನನ್ನ ಇಚ್ಛೆ ಅದೆ. ಅಂದರೆ ದೇವತಾದರ್ಶನ, ಬ್ರಹ್ಮಜ್ಞಾನ, ಮುಕ್ತಿ ವಗೈರೆ ಎಲ್ಲಾ ನನ್ನ ಪಾದದಲ್ಲಿ ಲೋಟಾಂಗಣ ಹಾಕುವವು, ಹೀಗೆ ನನ್ನ ಭರವಸೆ ಇದೆ. ಇತರ ದರ್ಶನಗಳಾಗದಿದ್ದರೂ ತಮ್ಮ ದರ್ಶನವು ಪ್ರತಿದಿನ ಆಗಬೇಕೆಂದು ಮನಸ್ಸಿನಲ್ಲಿ ಅನಿಸುತ್ತದೆ. ಆದರೆ ತಮಗೆ ಇದನ್ನು ಹೇಳಲಿಕ್ಕೆ ನಾನ್ಯಾರು? ತಮ್ಮ ಚಿತ್ತಕ್ಕೆ ಬಂದಂತೆ ಮಾಡಬೇಕು.

ತಮ್ಮ ಚರಣಾಂಕಿತ
(ಸಹಿ) ಗಣೇಶ ರಂಗನಾಥ ಆಂಬೇಕರ.

— ೩೮ —

ರಾ. ರಾ. ಕೃಷ್ಣರಾವ ರಾ. ಪಾತಾರೆ, ಸೊಲಿಸಿಟರ, ಮುಂಬಯಿ ವ ಅವರ ಕುಟುಂಬ ಸೌ. ರಾಧಾಬಾಯಿ ಇವರ ಅನುಭವಗಳು :—

( ಪತ್ರ ನಂ. ೧) ಶುಕ್ರವಾರ, ತಾ. ೨೮ ಮೆ ೧೯೪೩.

ಶ್ರೀಸದ್ಗುರು ಗಜಾನನ ಮಹಾರಾಜ ಇವರಿಗೆ ಕೃಷ್ಣರಾವ ರಾ. ಪಾತಾರೆ ಈತನ ಶಿರಸಾಷ್ಟಾಂಗ ನಮಸ್ಕಾರ. ವಿ. ವಿ. ತಮ್ಮ ಸಮಾಗಮದಿಂದ ಯಾವ

ಕೆಲವು ಆನಂದದ ದಿವಸಗಳು ಕಳೆದ ಅವುಗಳ ನೆನಪಾಗಿ ಪುನಃ ಪುನಃ ಆನಂದ ವಾಗುತ್ತದೆ. ಇರಲಿ.

ಹೇಳಲಿಕ್ಕೆ ಸಂತೋಷವಾಗುತ್ತದೆ, ಏನಂದರೆ ಕಳೆದ ಬುಧವಾರ ತಾರೀಖು ೨೬-೫-೪೩ ನೇ ದಿನ ಮಧ್ಯಾಹ್ನ ಸುಮಾರು ಒಂದುವರೆಗೆ ಪತ್ನಿಯು ನಾಸಿಕಾಗ್ರ-ದಲ್ಲಿ ಧ್ಯಾನ ಮಾಡುತ್ತಿರುವಾಗ ಆಕೆಗೆ ಶ್ರೀಗಣೇಶನ ದರ್ಶನವಾಯಿತು ಮತ್ತು ಕೆಂಪು ಪ್ರಕಾಶವು ಕಾಣಿಸಿತು. ಮರುದಿನ ಗುರುವಾರ ತಾ ೨೭-೫-೪೩ ನೇ ದಿನ ಮಧ್ಯಾಹ್ನಕ್ಕೆ ಪುನಹಾ ಕೆಂಪು ಪ್ರಕಾಶವು ಕಾಣಿಸಿತು, ಮತ್ತು ಬಲಕ್ಕೆ ಸೊಂಡಿ ಇರುವ ಗಣಪತಿಯು ದರ್ಶನವಾಯಿತು.

೦ ೦ ೦

ಆಕೆಗೆ ಚಕಚಕಿತ ಸೂರ್ಯನು ಕಾಣಿಸಿ ಆ ಪ್ರಕಾಶ-ಕಿರಣಗಳಲ್ಲಿ ಅನೇಕ ತರದ ಬಣ್ಣಗಳು-ರಕ್ತ,ನೀಲಿ, ಹಳದಿ, ಹಸ್ಸೆರೆ ಕಾಣುತ್ತಿದ್ದವು. ಅದೇ ಅನುಭವವು ರಾತ್ರಿ ವ ಇವತ್ತು ಮಧ್ಯಾಹ್ನಕ್ಕೆ ಆಕೆಗೆ ಬಂತು.

೦ ೦ ೦

ನನ್ನ ಸ್ವತಃ ವಿಷಯದಲ್ಲಿ ಬರೆಯುವದಾದರೆ, ನಾನು ಏಕಾಗ್ರ ಧ್ಯಾನ ಮಾಡುತ್ತಿರುವಾಗ ಅಂಧಕಾರ ಇಲ್ಲದಂತಾಗಿ ನಡನಡುವೆ ಬಿಳಿ ಪ್ರಕಾಶವು ತೋರುತ್ತದೆ. ಚಿ ರಮಾಕಾಂತನ ಧ್ಯಾನ ವ ಅನುಭವ ಪೂರ್ವದಂತೆ ನಡೆಯುತ್ತವೆ.

ತಮ್ಮ ನಮ್ರ
(ಸಹಿ) ಕೃಷ್ಣರಾವ ರಾ. ಪಾತಾರೆ.

೦ ೦ ೦ ೦

ಪತ್ರ ನಂ. ೨

ಶನಿವಾರ ತಾ ೫-೬-೧೯೪೩

ಶ್ರೀಗಜಾನನ ಮಹಾರಾಜ ಇವರಿಗೆ ಕೃಷ್ಣರಾವ ರಾಮಚಂದ್ರ ಪಾತಾರೆ ಇವರ ಶಿರಸಾಷ್ಟಾಂಗ ನಮಸ್ಕಾರ. ವಿ. ವಿ.

೦ ೦ ೦ ೦

ಕುಟುಂಬಕ್ಕೆ ಮತ್ತೊಂದು ಅನುಭವವು ಬರುತ್ತಿದೆ. ಕಳೆದ ಸೋಮವಾರ ವ ಮಂಗಳವಾರದಿನ ಏಕಾಗ್ರಚಿತ್ತವಿರುವಾಗ, ಒಂದು ಪ್ರಕಾಶಮಾನ ಬಲಗೈ ಕಾಣಿಸಿತು. ಆ ಕೈಯಲ್ಲಿ ಬಲಮುರಿ ಶಂಖವಿತ್ತು.

ಹಿಂದಿನ ಪತ್ರದಲ್ಲಿ ತಿಳಿಸಿದ ಪ್ರಕಾರ ಕುಟುಂಬಕ್ಕೆ ಸೂರ್ಯ ಪ್ರತಿ ಬಿಂಬ ಮತ್ತು ಅದರಲ್ಲಿ ನಾನಾತರದ ಪುನಃ ಪುನಃ ಬದಲಾಗುವ ಅನೇಕ ಪ್ರಕಾರದ ಬಣ್ಣಗಳು ಕಾಣಿಸಿದವು.

ತಮ್ಮ ನಮ್ರ
(ಸಹಿ) ಕೃಷ್ಣರಾವ ರಾ. ಪಾರಾನೆ

೦ ೦ ೦ ೦

( ಪತ್ರ ನಂ. ೨ )

ತಾವು ಹೇಳಿದ ಪ್ರಕಾರ ವ ತಮ್ಮ ಆಶೀರ್ವಾದದಿಂದ ಚಿ. ಮಧುಕರ ಇಂಟರ ಆರ್ಟ್ಸ ಪರೀಕ್ಷೆಯಲ್ಲಿ ಪಾಸಾದನು. ರಿಜಲ್ಟ ನಿನ್ನೆ ಆಯಿತು, ಮತ್ತು ಅದರ ಹಿಂದಿನ ದಿವಸ ಅಂದರೆ ಗುರುವಾರದಿನ ಬೆಳಿಗ್ಗೆ ಅವನ ತಾಯಿಗೆ ತಾವು ಸ್ವಪ್ನದಲ್ಲಿ ಒಂದು ಮಧುಕರನು ಪಾಸ ಆಗಿದ್ದಾನೇದ ದೃಷ್ಟಾಂತ ಕೊಟ್ಟಿದ್ದೀರಿ. ಇದನ್ನು ನೋಡಿ ಪ್ರೇಮವು ಉಕ್ಕಿಬರುತ್ತದೆ, ಮತ್ತು ತಮ್ಮ ಕೃಪಾಲೋಭವು ಕಾಣಬರುತ್ತದೆ.

(ಸಹಿ) ಕೃಷ್ಣರಾವ ರಾಮಚಂದ್ರ ಪಾರಾನೆ.

--- ೦೯ ---

ಶ್ರೀಮತಿ ಆನಂದಿಬಾಯಿ ಠಕಾರ ಮು|| ಕೊಲ್ಹಾಪುರ ಇವರ ಅನುಭವ ಗಳು. ( ಅವರ ಚಿರಂಜೀವ ಸ. ಬಾ. ಠಕಾರ ಇವರು ಬರದುಕೊಟ್ಟ ಮೇರೆಗೆ )

ಶ್ರೀಸದ್ಗುರು ಗಜಾನನ ಮಹಾರಾಜರು ಇವರ ಚರಣಗಳಲ್ಲಿ ಶಿರಸಾ-ಷ್ಟಾಂಗ ಪ್ರಣಿಪಾತ. ನನ್ನ ತಾಯಿಗೆ ಸದ್ಗುರುಗಳ ದರ್ಶನವಾಗಿ ಆಕೆಗೆ ಬಂದ ಅನುಭವಗಳನ್ನು ಆಕೆಯು ಹೇಳಿದ ಪ್ರಕಾರ ಬರೆಯುತ್ತೇನೆ.

ಸುಮಾರು ೬-೭ ವರ್ಷಗಳ ಮೊದಲಿನಿಂದ ತಾಯಿಯವರಿಗೆ ಸದ್ಗುರು ದರ್ಶನದ್ದು ತಳಮಳ ಹತ್ತಿತ್ತು. ನನಗೆ ಇಲ್ಲಿ ನೌಕರಿ ಆದ ಮೇಲೆ ಆಕೆಯು ನನ್ನ ಕೂಡ ಇಲ್ಲಿಗೆ ಬಂದಳು. ಇಲ್ಲಿ ಹದಿನೈದು ದಿನವಿದ್ದು ಆಕೆಯು ನನ್ನ ಅಣ್ಣನ ಕಡೆಗೆ ಹೋದಳು, ಅಲ್ಲಿ ಇರುವಾಗ 'ನೀವು ಆದಷ್ಟು ತ್ವರೆಯಿಂದ ನಾಶಿಕಕ್ಕೆ ಬರಬೇಕು' ಹೀಗೆ ತೀವ್ರ ಇಚ್ಛೆಯು ಆಕೆಯಲ್ಲಿ ಹುಟ್ಟಿತು. ಆ ಪ್ರಕಾರ ಎಪ್ರಿಲ ೨. ೪ ತಾರೀ ಖಿನಷ್ಟಕ್ಕೆ ಆಕೆಯು ನಾಶಿಕಕ್ಕೆ ಬಂದಳು. ಇಲ್ಲಿ ಬಂದಮೇಲೆ ನಾನು ಆಕೆಗೆ ಶ್ರೀಗಜಾನನ ಮಹಾರಾಜ ಇವರ ವಿಷಯ ಎಲ್ಲ ಹೇಳಿ, ನನಗೆ ಉಪದೇಶ ಮಾಡಿ ಅನುಗ್ರಹ ಕೊಟ್ಟಿದ್ದನ್ನು ಹೇಳಿದೆ. ಕೂಡಲೆ ಮರುದಿನವೇ ಆಕೆಯು ಇಚ್ಛಾನು

ನಾರ ನಾವು ಮಹಾರಾಜರ ದರ್ಶನಕ್ಕೆ ಬಂದೆವು. ಆಕೆಯು ತನ್ನ ಅಂತಃಕರಣದ ತಳಮಳವನ್ನು ವ್ಯಕ್ತಮಾಡಿ, ಮಹಾರಾಜರಿಗೆ ಅನುಗ್ರಹ ಕೊಡುವದಕ್ಕಾಗಿ ನಮ್ರ ವಿನಂತಿ ಮಾಡಿದಳು. ಕೂಡಲೆ ಮರುದಿನ (೮-೪-೪೩) ಸಾಯಂಕಾಲದಲ್ಲಿ ಮಹಾರಾಜರು ಆಕೆಗೆ 'ಸೋಹಂ' ಈ ಪವಿತ್ರ ಮಂತ್ರದ ಅನುಗ್ರಹ ಕೊಟ್ಟರು. ಶ್ರೀಗುರುಗಳ ದರ್ಶನದಿಂದ ಮೊದಲೆ ಆಕೆಗೆ ಅನನುಭೂತ ಶಾಂತಿಯು ಲಾಭವಾಗಿತ್ತು. ಮೇಲೆ ಈ ಪವಿತ್ರ ಮಂತ್ರದ ಧ್ಯಾನದಿಂದ ಮತ್ತು ಸದ್ಗುರುಗಳು ಆಕೆಗೆ, "ಈಗ ನಿನ್ನ ಜನ್ಮಜನ್ಮಗಳ ಕಲ್ಯಾಣವಾಯಿತು. ಇದೇ ಮಂತ್ರದ ಸತತ ಧ್ಯಾನ ಮಾಡು," ಹೀಗೆ ಹೇಳಿದ್ದರಿಂದ ಆಕೆಗೆ ಶಾಂತಿಯು ಆನಂದವು ಅತಿಶಯವಾಯಿತು. ಹೀಗೆ ಎರಡು ದಿನಗಳು ಹೋದಮೇಲೆ ಒಂದು ರಾತ್ರಿ (೧೦-೪ ೪೩) ಆಕೆಯು ಧ್ಯಾನ ಮಾಡುತ್ತ ನಿತ್ಯದಂತೆ ಹಾಸಿಗೆಯಮೇಲೆ ಕೂತರುವಾಗ ಅರ್ಧ ನಿದ್ರೆಯಲ್ಲಿ ವಿಸ್ಮೃತಿ ಆಯಿತು, ಮತ್ತು ಆಕೆಯ ಎದುರಿಗೆ ಕಣ್ಣು ಮುಂದೆ ಶ್ರೀಸದ್ಗುರು ದತ್ತಾತ್ರೇಯರ ತೇಜಸ್ವಿಯಾದ ಮೂರ್ತಿಯು ನಿಂತದ್ದು ತೋರಿತು. ಶ್ರೀದತ್ತರ ದರ್ಶನದಿಂದ ಆಕೆಯ ಮೈಮೇಲೆ ಆನಂದನಿರ್ಮಿತ ರೋಮಾಂಚವಾಯಿತು. ಇಂಥ ದಿವ್ಯಾನಂದದಲ್ಲಿ ಕೆಲವು ಕ್ಷಣಗಳು ಹೋಗುವಷ್ಟರಲ್ಲಿ ಆ ಮೂರ್ತಿಯು ರೂಪಾಂತರವಾಗಿ ಜಗದಂಬೆಯ ಮೂರ್ತಿಯಾಯಿತು ಮೆಲ್ಲಮೆಲ್ಲಗೆ ಆ ದೃಶ್ಯ ಇಲ್ಲದಂತಾಗಿ ಆಕೆಗೆ ನಿದ್ರೆ ಹತ್ತಿತು. ಇನ್ನಾದರೂ ಆ ದೃಶ್ಯದ ನೆನಪಿನಿಂದ ಮೈತುಂಬ ಆನಂದಯುಕ್ತ ರೋಮಾಂಚವಾಗುವದು. ಎಚ್ಚರ ಇದ್ದಾಗ್ಯೂ ಆಕೆಗೆ ಕಣ್ಣುಮುಂದೆ ತೇಜಸ್ಸು ಪ್ರಕಾಶಗಳು ಕಾಣುತ್ತವೆ ಮತ್ತು ಸುವರ್ಣ ತೇಜದಿಂದ ಪ್ರಕಾಶಮಾನ ಆಗುವ ನಾಗದ ದರ್ಶನವು ನಡನಡುವೆ ಆಗುತ್ತಿರುತ್ತದೆ.

ನಾಶಿಕ, ೪ ೭–೧೯೪೩.

ತಮ್ಮ ಚರಣಗಳಲ್ಲಿ ಸದಾ ನಮ್ರ
(ಸಹಿ) ಸ. ಬಾ. ಠಕಾರ.

— ೪೦ —

ಶ್ರೀ ಶಂಕರರಾವ ದಸ್ತುರದಾರ ಉರ್ಫ ಕಾಕಾ ವೈದ್ಯ ಮು. ಪೇಡ, ಜಿ. ಪುಣೆ ಇವರ ಅನುಭವಗಳು :—

(ಪತ್ರ ನಂ. ೧)

ಓಂ.

ಪೇಡ, ಜಿ. ಪುಣೆ.
೧೭–೩–೪೩.

ಶ್ರೀಸದ್ಗುರುಗಳ ಚರಣ ಸೇವೆಗೆ ಶಿರಸಾಷ್ಟಾಂಗ ನಮಸ್ಕಾರ ವಿ. ವಿ.

ದೇಖಿಲೆ ಪಾಯ। ಪಾಯ ಸದ್ಗುರೂಚೆ। ಸಾರ್ಥಕ ಝಾಲೆಂ ಜನ್ಮಾಚೆಂ ॥
( ಸದ್ಗುರು ಪಾದವ ನೋಡಿದ್ದೇ। ಸಾರ್ಥಕವಾಯಿತು ಜನ್ಮದ್ದೇ )

ಸದ್ಗುರುಗಳ ಆಜ್ಞೆಯ ಪ್ರಕಾರ ಮುಂಜಾನೆ ಸಂಜೆಗೆ ಸಂಧ್ಯಾವಂದನದ ನಂತರದ ಕಾರ್ಯಕ್ರಮವು ಸುರಳಿತವಾಗಿ ನಡದದೆ. ಸದ್ಗುರುಗಳು ಅನುಗ್ರಹ ಕೊಟ್ಟಮೇಲೆ ೧೦೮ ತಾಸುಗಳಲ್ಲಿ ( ರಾತ್ರಿ ೧೦॥ – ೧॥। ರ ಸುಮಾರಕ್ಕೆ ನಿದ್ರೆಯ ಸಲುವಾಗಿ ಹಾಸಿಗೆಯ ಮೇಲೆ ಮಲಗಿದ್ದಾಗ ) 'ಸೋಹಂ'ದ ಜಪವು ಹೃದಯದಲ್ಲಿ ತನ್ನಷ್ಟಕ್ಕೆ ಸುರುವಾಯಿತು. ಜಪವು ಸ್ಪಷ್ಟ ವ ಮಂಜುಳ ಧ್ವನಿಯಿಂದ ೫–೧೦ ಮಿನಿಟ ತನಕ ಕೇಳುತ್ತ ಕೇಳುತ್ತಾ ಪ್ರೇಮ ಸಮಾಧಿಯಲ್ಲಿ ಯಾವಾಗ್ಗೆ ಲೀನನಾದೆ ಅದು ಹೇಳಲಾರೆ. ಅದೇ ರಾತ್ರಿ ನಸುಕಿಗೆ ಸ್ವಪ್ನದಲ್ಲಿ ಸಿಂಹಾಸನದ ಮೇಲೆ ವಿಠ್ಠಲನ ಮೂರ್ತಿಯನ್ನು ನೋಡಿದೆ. ಅದು ಎಡಬದಿಯಿಂದ ಮಲಗಿತ್ತು ಆಗ, ಏನು ಮಾಡಬೇಕು ಎಂದು ನನಗೆ ವಿಚಾರ ಬಿತ್ತು; ಅಷ್ಟರಲ್ಲಿ ಒಂದು ಧ್ವನಿ ಕೇಳಿಸಿತು, 'ಮೂರ್ತಿಯನ್ನು ಚಲಿಸಿ ಕೂಡ್ರಿಸು.' ಆಗ ಆ ಮೂರ್ತಿ ಎರಡೂ ಹೆಗಲಮೇಲೆ ಕೈಗಳನ್ನು ಇಟ್ಟು, ಮೂರ್ತಿಯನ್ನು ಸ್ವಲ್ಪ ಚಲಿಸಿದ ಕೂಡಲೆ ಅದು ತನ್ನಷ್ಟಕ್ಕೆ ಇಷ್ಟು ಸುಂದರವಾಗಿ ಕೂತಿತಲ್ಲ, ಜನ್ಮಜನ್ಮಾಂತರಗಳಲ್ಲಿಯೂ ಚಲಿಸಲಾರದು. ಪ್ರಕಾಶವು ಯಥೇಷ್ಟವಾಗಿತ್ತು. ಇಂಥ ಸ್ಥಿತಿಯಲ್ಲಿ ಘಡಿಯಾರದ ಮೇಲೆ ಐದು ಹೊಡದವು; ಮತ್ತು ನಾನು ಎಚ್ಚರನಾದೆ. ಇವತ್ತು ವರ್ಷಪ್ರತಿಪದೆ. ಪ್ರಭಾತಕಾಲದಲ್ಲಿ ಸದ್ಗುರು ದರ್ಶನವಾಯಿತು. ಶ್ರೀಯವರ ಶಾಂತ ವ ಪ್ರೇಮಮಯ ಮೂರ್ತಿಯನ್ನು ನೋಡಿ ಆನಂದವಾಯಿತು, ಮತ್ತು ಅವರ ಪರವಾನಗಿ ತಕ್ಕೊಂಡು ಸಾಷ್ಟಾಂಗ ದಂಡವತ ಹಾಕಿದೆ. ಮತ್ತು ಹಾಗೇ ಸದ್ಗುರುಗಳ ಎರಡೂ ಪಾದಗಳನ್ನು ಮಸ್ತಕದ ಮೇಲೆ ಧರಿಸಿದೆ. ಇಷ್ಟರಲ್ಲಿ ಐದು ಬಾರಿಸಿದವು, ವ ನಾನು ಎಚ್ಚರನಾದೆನು. ಸದ್ಗುರುದರ್ಶನವಾದಲಾಗಾಯತು ೧೫–೨೦ ದಿವಸಗಳ ಅನುಭವವು ಹೀಗದೆ, ಮೊದಲು ಚಿತ್ತಸಮುದ್ರದಲ್ಲಿ ಭಾರಿ ತುಫಾನವು ಆಗುತ್ತಿತ್ತು. ಸಂಕಲ್ಪ ವಿಕಲ್ಪಗಳ ಆವರ್ತವು ಗರಗರ ತಿರುಗುತ್ತಿತ್ತು. ಈಗ ಚಿತ್ತವೃತ್ತಿಯು ಮೆಲ್ಲಮೆಲ್ಲನೆ ಶಾಂತವಾಗುತ್ತ ನಡೆದದೆ. ಸಂಕಲ್ಪ ವಿಕಲ್ಪಗಳ ಪ್ರಮಾಣವು ದಿನೇ ದಿನೇ ಕಡಿಮೆಯಾಗುತ್ತ ನಡದದೆ. ವಿಷಯವಾಸನೆಗಳು ಇನ್ನಾದರೂ ಹಾರ್ಯಾಡುತ್ತವೆ, ಆದರೆ ಅವು ಸಹಿಸಲಿಕ್ಕೆ ಬರುವಂಥವೆ; ಆತ್ಮನಿರೀಕ್ಷಣ ಮಾಡುತ್ತಿರುವಾಗ ಹೀಗನಿಸುವದಲ್ಲ, ವಿಷಯ ವೈರಾಗ್ಯಸಾಧನ ಚತುಷ್ಟಯ ಸಂಪನ್ನತೆ ಇವುಗಳದು ನನ್ನಲ್ಲಿ ಪೂರ್ಣ ಅಭಾವವಿರುವದು. ಹೀಗಿರುತ್ತ ಇಷ್ಟು ಅಲ್ಪಾವಧಿಯೊಳಗೆ, ಮನೋಜಯ, ಕಲ್ಪನಾನಾಶ ವ ಶಾಂತಿ ಇವುಗಳ ಪ್ರಚೀತಿ ಬರುವದು, ಈ ಸಾಮರ್ಥ್ಯವು ಸದ್ಗುರುಗಳ ಕೃಪೆಯ ಹೊರತು ಮತ್ಯಾವದರಲ್ಲಿ ನಾನು ಕಾಣಲಾರೆ. ಇಂಥ ಸ್ವಾನುಭವದದೆಶೆಯಿಂದ ಸದ್ಗುರು ಚರಣಗಳಲ್ಲಿ ದೃಢ ಶ್ರದ್ಧೆಯು ತನ್ನಷ್ಟಕ್ಕೆ ವೃದ್ಧಿಯಾಗುತ್ತದೆ. ನಿಜವಾಗಿಯೂ

ಸದ್ಗುರು ಕೃಪೆಯ ಮಹತ್ವವು ಏನೋ ತಿಳಿಯಲಾಗದು. ಇಂಥ ಅನುಭವಗಳನ್ನು ಪ್ರಕಟಮಾಡಬಾರದೆಂತ ಶಾಸ್ತ್ರಮರ್ಯಾದೆಯುಂಟು. ಆದರೆ ಸದ್ಗುರುಗಳ ಮುಂದೆ ಶಾಸ್ತ್ರಮರ್ಯಾದೆಯನ್ನು ಯಾರು ನೋಡ್ತಾರು?

ನಿನ್ನ ಸೇವೆ ಏನೂ ಮಾಡದೆ, ಶಾಂತಿಯನ್ನು ದಯಪಾಲಿಸಿದಿ.
ನಿನ್ನ ಉಪಕಾರ ಹ್ಯಾಗೆ ತೀರಿಸಲಿ, ನನ್ನ ಬುದ್ಧಿಗೆ ಅರಿಯದು.
ಧ್ಯಾನಮಾಡಿದರೆ ಸ್ಫುರಿತವಾಗುವದು, ಗುರುಮಾವುಲಿಯು ಅಸ್ಫುರಿತಳು

ಸರ್ವರ ಸೇವಕ
(ಸಹಿ) ಶಂಕರರಾವ ದಪ್ತರದಾರ ಉರ್ಫ ಕಾಕಾವೈದ್ಯ

ಪತ್ರ ನಂ. ೨ — ಪೇಡ, ಜಿ. ಪುಣೆ
ಓಂ — ತಾ. ೧೮-೫-೪೨

ಸೇವೆಗೆ ಶಿರಸಾಷ್ಟಾಂಗ ನಮಸ್ಕಾರ, ವಿಜ್ಞಾಪನಾ ವಿಶೇಷ.

ಗುರುತಾಯಿಯ ಪತ್ರ ತಾ. ೧೪-೫-೪೨ ರಂದು ಮುಟ್ಟಿತು. ಪತ್ರ ಓದಿ ಪ್ರತ್ಯಕ್ಷ ಗುರುತಾಯಿ ಭೆಟ್ಟಿಯಾದಂತೆ ಅತಿಶಯ ಸಮಾಧಾನವಾಯಿತು. ಹಿಂದೆ ಧ್ಯಾನಕಾಲದಲ್ಲಿ ಹೃದಯಸ್ಥಾನದಲ್ಲಿ ಲಕ್ಷ್ಯವು ವಿಶೇಷವಾಗಿ ಸ್ಥಿರವಾಗುತ್ತಿದ್ದಿಲ್ಲ. ಒಮ್ಮೊಮ್ಮೆ ಭ್ರೂಮಧ್ಯದಲ್ಲಿ ನಾಸಾಗ್ರದಲ್ಲಿ ಅಥವಾ ಏನಾದರೂ ಪ್ರಕಾಶ ಕಂಡರೆ ಅದರಕಡೆ, ಅಥವಾ ಶಂಖ, ಮೃದಂಗ, ಗಂಟೆ ತಾಳ ಇವುಗಳ ನಾದಗಳಕಡೆಗೆ ಹೋಗುತ್ತಿತ್ತು. ಈಗ ಮೆಲ್ಲಮೆಲ್ಲಗೆ ಸ್ಥಿರವಾಗುತ್ತಿದೆ. ಹಿಂದೆ ಐದಾರು ಪ್ರಕಾರದ ನಾದಗಳು ಬಹಳ ದೊಡ್ಡವಾಗಿ ಇಡೀ ದಿವಸ ವ ರಾತ್ರಿ ಕೇಳಿಸುತ್ತಿದ್ದವು. ಈಗ ಆ ನಾದಗಳು ಬಹಳ ಸೂಕ್ಷ್ಮವಾಗಿವೆ. ಒಂದುದಿನದ ಸಹವಾಸದಿಂದ ಹೃದಯದಲ್ಲಿ ಲಕ್ಷ್ಯ ಹ್ಯಾಗೆ ಸ್ಥಿರಮಾಡಬೇಕು ಮತ್ತು ಮಂತ್ರ ಜಪವನ್ನು ಹ್ಯಾಗೆ ಮಾಡಬೇಕು, ಇದರ ಉಪಾಯವು ನನಗೆ ತಿಳಿಯಲಿಲ್ಲ. ಆದ್ದರಿಂದ ಕಪಿಲ ಗೀತೆಯಲ್ಲಿ ಹೇಳಿದಂತೆ ಪೀತವರ್ಣ ಬಿಂದು ಶಿಖಾಯುಕ್ತ ಆ ಬಿಂದುವಿನ ಮಧ್ಯಭಾಗದಲ್ಲಿ ಶ್ರದ್ಧ, ಶ್ವೇತ, ಸುಲಕ್ಷಣ ಮತ್ತು ಸರ್ವದರ ಅಂತರ್ಯಾಮಿ ಇರುವಂಥ ಮುಖ 'ಸೋಹಂ' ಬೀಜ ವ 'ಸೋಹಂ' ಬೀಜದ ಮಧ್ಯಭಾಗದಲ್ಲಿ ಪರಮ ವ ಮಹಾನ್ ಆತ್ಮಾ 'ಶ್ರೀರಾಮ.' ಬರೇ ಶ್ರೀರಾಮ ಇದರ ಬದಲಿಗೆ 'ಸೋಹಂ' ಬೀಜದಲ್ಲಿ ನನ್ನ ಸದ್ಗುರುವಿನ (ಶ್ರೀಗಜಾನನರ) ಸಗುಣ ಸೂಕ್ಷ್ಮಧ್ಯಾನ ಮಾಡುತ್ತೇನೆ. ಧ್ಯಾನವು ಸ್ಪಷ್ಟವಾಗಿ ಸಾಧಿಸುವದಿಲ್ಲ, ಆದರೆ ಮನಃಚಕ್ಷು ಮುಂದೆ ತರುವ ಪ್ರಯತ್ನವನ್ನು ಮಾಡುತ್ತೇನೆ. ಧ್ಯಾನಕಾಲದಲ್ಲಿ ಜಪವು ಒಮ್ಮೆ ನಾದಕಾರ ಉಚ್ಚಸ್ವರದಿಂದ (ಮನಸ್ಸಿನೊಳಗೆಯೇ) ಒಮ್ಮೆ ಮೆಲ್ಲಮೆಲ್ಲಗೆ ಅಥವಾ ರೇಚಕ ಮಾಡುವಾಗ್ಗೆ ತೀವ್ರವಾಗಿ ಜಪಿಸುತ್ತೇನೆ. ಧ್ಯಾನದ ಹೊರತು ಇತರ ಸಮಯ

ದಲ್ಲಿ ಜಪವು ಬೇಗನೆ ಮಾಡಲಿಕ್ಕೆ ಮನಸ್ಸಿನ ಪ್ರವೃತ್ತಿ ಇರುವದು. ಗುರುತಾಯಿಯು ಮಾರ್ಗ ತೋರಿಸಲಿಕ್ಕೆ ಇರುವಾಗ್ಗೆ ಮನಸ್ಸಿಗೆ ಬಂದಂತೆ ನಡೆಯುವದು ಒಳ್ಳೇದಲ್ಲ ಎಂದು ಎಲ್ಲ ವೃತ್ತಾಂತವನ್ನು ಹೇಳುತ್ತೇನೆ. ಸದ್ಗುರು ಸೇವೆಯು ಅಖಂಡ ಸಿಗಬೇಕು ಹೀಗೆ ಆಶೀರ್ವಾದ ಆಗಬೇಕು. ಈ ವಿನಂತಿ.

ಸರ್ವರ ಸೇವಕ

(ಸಹಿ) ಕಾಕಾ ವೈದ್ಯ

— ೪೧ —

ಶ್ರೀ ಮಂಗೇಶ ಬುಲ್ಲಾಕ, ಮುಂಬಯಿ ಇವರ ಅಧ್ಯಾತ್ಮಿಕ ಅನುಭವಗಳು: —

ಆನಂದಾಶ್ರಮ, ಪ್ರೋಕ್ಟರ ರೋಡ, ಮುಂಬಯಿ ನಂ. ೭

೪ ಸಪ್ಟಂಬರ ೧೯೪೨

ಶ್ರೀಸದ್ಗುರು ಗಜಾನನ ಮಹಾರಾಜ ಇವರ ಚರಣಗಳಲ್ಲಿ ನಮ್ರಭಾವದಿಂದ ೨೩ ಅಕ್ಟೋಬರ ೧೯೪೧ ನೇ ದಿನ ಅನುಗ್ರಹ ಪಡಕೊಂಡಲಾಗಾಯತು ಯಾವ ಅನುಭವಗಳು ಬಂದಿದ್ದವೊ ಅವುಗಳನ್ನು ಈ ಕೆಳಗೆ ಕೊಟ್ಟಿರುವೆನು. : —

ಬಹುಪ್ರಕಾರದ ಸಂಕಟಗಳಿಂದ ಮತ್ತು ನನ್ನ ಮಗಳ ಆಕಸ್ಮಿಕ ಮರಣ ಮೂಲಕ ನನ್ನ ಮನಸ್ಸಿಗೆ ಐಹಿಕ ವ್ಯವಹಾರದ ಬೇಸರ ಬಂತು; ಮತ್ತು ಅದು ಥಟ್ಕನೆ ಪರಮೇಶ್ವರನ ಕಡೆ ತಿರುಗಿತು. ಈ ಕಾಲದಲ್ಲಿ ಶ್ರೀ. ಕಾಮತ ಇವರು ಬರೆದ ‘ ನಾಮಜಪಾಚೆಂ ಮಹತ್ವ ’ ಈ ಪುಸ್ತಕವು ನನ್ನ ದೃಷ್ಟಿಗೆ ಬಿತ್ತು. ಅದನ್ನು ನಾನು ಖರೀದಿ ಮಾಡಿ, ‘ ಶ್ರೀರಾಮ ಜಯರಾಮ ಜಯಜಯರಾಮ ’ ಈ ಜಪವನ್ನು ಆರಂಭಿಸಿದೆನು. ನಿತ್ಯದ ಜಪಸಂಖ್ಯೆಯನ್ನು ನಾನು ನೇಮದಿಂದ ಡೈರಿಯೊಳಗೆ ಹಚ್ಚುತ್ತಿದ್ದೆ. ೧೯೪೧ ಅಕ್ಟೋಬರ ತಿಂಗಳಲ್ಲಿ ಸುಮಾರು ಐವತ್ತು ಲಕ್ಷ ಜಪಸಂಖ್ಯೆ ಆಯಿತು. ಅದೇ ಸಮಯದಲ್ಲಿ ಸ್ವಾಮಿ ವಿವೇಕಾನಂದರ ಒಂದು ಪುಸ್ತಕದಲ್ಲಿ ನಾನು ಹೀಗೆ ಓದಿದೆ. “ಸದ್ಗುರು ಇಲ್ಲದಿದ್ದರೆ ಈ ಪ್ರಕಾರದ ಎಷ್ಟು ಜಪ ಮಾಡಿದರೂ ಅದರ ಉಪಯೋಗವಾಗಲಾರದು. ಈ ಮೂಲಕ ನನ್ನ ಮನಸ್ಸಿನಲ್ಲಿ ವಿಚಾರಗಳು ಉಕ್ಕಿದವು, ಮತ್ತು ಸದ್ಗುರುಗಳ ಶೋಧನೆಯ ವಿಚಾರವನ್ನು ಮಾಡಿದೆನು. ಇದೇ ಸಮಯದಲ್ಲಿ ದೀಪಾವಳಿಯ ಹಬ್ಬ ಬಂದಿರುವಾಗ ಮೂರು ದಿನಗಳ ರಜೆಯಲ್ಲಿ ನಾಶಿಕದಲ್ಲಿರುವ ನನ್ನ ಭಾವ ಶ್ರೀ. ಮಾಹಿಮಕರ್ ಇವರಕಡೆ ಬಂದೆನು. ಅಲ್ಲಿ, “**Light on the path of self-realisation**”ಎಂಬ ಹೆಸರಿನ ಒಂದು ಇಂಗ್ಲೀಷ ಪುಸ್ತಕವನ್ನು ನಾನು ನೋಡಿದೆ,

ಮತ್ತು ಎರಡೇ ದಿನಗಳಲ್ಲಿ ನಾನು ಅದನ್ನು ಓದಿದೆನು. ಅದೇ ದಿವಸ ಸಾಯಂಕಾಲಕ್ಕೆ ಈ ಸತ್ಪುರುಷರ ದರ್ಶನವನ್ನು ತಕ್ಕೊಳ್ಳಬೇಕೆಂದು ನನಗೆ ತೀವ್ರ ಆಕಾಂಕ್ಷೆಯಾಯಿತು; ಮತ್ತು ಅವರದು ನನ್ನದು ಗುರ್ತು ಮಾಡಿಸಿಕೊಡಲಿಕ್ಕೆ ನಾನು ಭಾವನಿಗೆ ವಿನಂತಿ ಮಾಡಿದೆನು. ನಾವು ಅಲ್ಲಿಗೆ ಹೋಗಿದ್ದಾಗ ಅನುಗ್ರಹ ಕೊಡುವ ದೆಶೆಯಿಂದ ನಾನು ಶ್ರೀಗಜಾನನ ಮಹಾರಾಜರಿಗೆ ವಿನಂತಿ ಮಾಡಿದೆನು. ಅದನ್ನು ಅವರು ಕೂಡಲೆ ಮನ್ನಿಸಿದರು, ಮತ್ತು ನನಗೆ ಮರುದಿನ ಮುಂಜಾನೆ ಬರಲಿಕ್ಕೆ ಹೇಳಿದರು. ಆ ಪ್ರಕಾರ ಗುರುವಾರ ತಾ. ೨೩ ಅಕ್ಟೋಬರ ೧೯೪೧ನೇ ದಿನ ನಿತ್ಯದಂತೆ ಪೂಜೆ ಆದ ವೇಳೆ ನನ್ನ ಮೇಲೆ ಅನುಗ್ರಹವನ್ನು ಮಾಡಿದರು. ಈ ಕಾಲದಲ್ಲಿ ನನ್ನ ಮನಸ್ಸು ಶಾಂತವಾಯಿತು; ಮತ್ತು ಸುಮಾರು ಅರ್ಧ ತಾಸಿನ ತನಕ ಮಧುರವ ಶಾಂತ ಭಾವನೆಗಳ ಆವರಣವು ನನ್ನ ಮೇಲೆ ಪಸರಿಸಿದಂತೆ ನನಗನಿಸಿತು. ಅದೇ ದಿವಸ ನಾನು ಮುಂಬಯಿಗೆ ಹೊರಟು ಬಂದೆ. ಅಕ್ಟೋಬರ ೨೪ರಿಂದ ಮುಂಜಾನೆ ಸಂಜೆಗೆ ನೇಮದಿಂದ ಅರ್ಧತಾಸು ಧ್ಯಾನ ಮಾಡುವದಕ್ಕೆ ನಾನು ಆರಂಭಿಸಿದೆ. ಸಾಧಾರಣ ಒಂದು ತಿಂಗಳ ಅವಧಿಯೊಳಗೆ ಜಪವು ತನ್ನಷ್ಟಕ್ಕೆ ಆಗಲಿಕ್ಕೆ ಹತ್ತಿತು. ಮತ್ತು ಒಮ್ಮೊಮ್ಮೆ ನಡಿಯುತ್ತಿರುವಾಗ ಅಥವಾ ಬಸ್ಸದೊಳಗೆ ಕೂತು ಹೋಗುವಾಗ 'ಸೋಹಂ'ದ ಜಪವು (ಅಂತಃಕರಣದಲ್ಲಿ ತನ್ನಷ್ಟಕ್ಕೆ ನಡಿಯುವದು) ನನಗೆ ಕೇಳಿಸುತ್ತಿತ್ತು. ಅದರ ನಂತರ ಅನೇಕ ಆಶ್ಚರ್ಯಕಾರಕ ಪ್ರಕಾಶಗಳು ಅನುಭವಕ್ಕೆ ಬರಲಾರಂಭಿಸಿದವು. ಅವುಗಳನ್ನು ನಾನು ನನ್ನ ಡೈರಿಯಲ್ಲಿ ಬರೆದಿಟ್ಟಿದ್ದೇನೆ, ಮತ್ತು ಅವುಗಳ ಪೈಕಿ ಕೆಲವನ್ನು ಮುಂದೆ ಕೊಡುವೆನು.

(೧) ಯಾವಾಗ ನಾನು ಭ್ರೂಮಧ್ಯದಲ್ಲಿ ಚಿತ್ತೈಕಾಗ್ರತೆಯನ್ನು ಮಾಡುವೆನೊ, ಆಗ ಒಂದು ಸತೇಜ ಜ್ಯೋತಿಯು ಕಾಣಿಸುವದು. ಒಮ್ಮೊಮ್ಮೆ ಈ ಜ್ಯೋತಿಯು ಸಣ್ಣ ವಿದ್ಯುತ್ ಪ್ರಕಾಶದಂತೆ ಭಾಸಿಸುವದು, ಮತ್ತು ಒಮ್ಮೆ ಮುತ್ತಿನಂತೆ ತೋರುವದು. ಒಂದೊಂದು ಸಾರಿ ಚಂದ್ರ ತಾರೆಗಳ ಸಹಿತವಾದ ಆಕಾಶವು ದೃಷ್ಟಿಗೋಚರವಾಗುವದು.

(೨) ಒಂದು ರಾತ್ರಿ ನಾನು ಒಬ್ಬ ಮಿತ್ರನ ಮನೆಯಲ್ಲಿ ಕೂತಿರುವಾಗ ಕೆಲವು ಕಾಲೇಜಿನ ವಿದ್ಯಾರ್ಥಿಗಳು ದುರ್ಬಿನಿಯೊಳಗಿಂದ ಗುರುಗ್ರಹವನ್ನು ನೋಡುತ್ತಿದ್ದರು. ನಾನೂ ಅವರ ಕೂಡ ದುರ್ಬಿನಿ ಸಹಾಯದಿಂದ ನಾಲ್ಕು ಚಂದ್ರಗಳ ಸಮೇತ ಇರುವ ಗುರು ಗ್ರಹವನ್ನು ನೋಡಿದೆ. ನಂತರ ನಾವು ಶನಿ ಗ್ರಹವನ್ನು ನೋಡುವ ಪ್ರಯತ್ನ ಮಾಡಿದೆವು. ಆದರೆ ಅದು ನೆಟ್ಟಗೆ ತಲೆಯ ಮೇಲೆ ಇದ್ದದರಿಂದ, ಮತ್ತು ದುರ್ಬಿಣ ಹಚ್ಚಲಿಕ್ಕೆ ಬಾರದ್ದರಿಂದ ನಾವು ಆ ವಿಚಾರವನ್ನು ಬಿಟ್ಟು ಬಿಟ್ಟೆವು. ಮರುದಿನ ನಾನು ಧ್ಯಾನಕ್ಕೆ ಕೂತಿರುವಾಗ ನನಗೆ

ಆತ್ಮದೃಶ್ಯಗಳಲ್ಲಿ ಬಸಿಯು ಕಾಣಿಸಿತು. ಅದರ ಆಕಾರ ಅಸ್ಪಷ್ಟವಾಗಿಯೇ ಇತ್ತು. ಮತ್ತು ಅದರ ಸುತ್ತ ತೇಜಸ್ವಿಯಾದ ಬೆಳಗಿದ್ದವು. ಸ್ವಲ್ಪ ಸೆಕೆಂದುಗಳಲ್ಲಿ ಅದು ಇಲ್ಲದಂತಾಯಿತು.

(೩) ತಾ॥ ೧೦-೧೨-೪೧ ರಿಂದ ಒಂದು ವಾರ ತನಕ, ನಿತ್ಯಧ್ಯಾನ ಮಾಡುತ್ತಿರುವಾಗ ಪ್ರತಿಸಾರಿ ಕೆಲವು ಕ್ಷಣಗಳವರೆಗೆ ಅತ್ಯಂತ ತೇಜಸ್ವಿಯಾದ ಓಂಕಾರವು ಕಾಣಿಸುತ್ತಿತ್ತು.

(೪) ಒಮ್ಮೆ ರಾತ್ರಿ ಹತ್ತು ಹೊಡೆಯುವಾಗ ನಾನು ಧ್ಯಾನಕ್ಕೆ ಕೂತಾಗ ಹಣೆಯ ಮೇಲೆ ಅತ್ಯಂತ ತೇಜಸ್ವಿಯಾದ ಪ್ರಕಾಶವು ಕೆಲವು ನಿಮಿಷ ಗಳ ತನಕ ತೋರುತ್ತಿತ್ತು. ಹೊರಗೆ ನಾನು ತಿಳಿಕೊಂಡೆ ಆ ಪ್ರಕಾಶವು ಎದು ರಿನ ಇಮಾರತಿಯೊಳಗಿಂದ ಬರುತ್ತಿದೆ(ಕೆ; ಆದರೆ ಹತ್ತು ಹೊಡೆದು ಐದು ಮಿನಿ ಟುಗಳಲ್ಲಿ A. R. P. ಯ ಪ್ರಯೋಗದ ಸಂಬಂಧ ಮುಂಬಯಿಯೊಳಗಣ ದೀಪಗಳು ದಿವಸ್ಯದು ಮಿನಿಟುಗಳವರೆಗೆ ಆರಿಸುತ್ತಿದ್ದರು. ಆ ಮೂಲಕ (ನನಗೆ ಕಾಣಿಸುತ್ತಿರುವ) ಪ್ರಕಾಶದ ಸತ್ಯತೆಯನ್ನು ನೋಡುವ ಸಂಧಿಯು ನನಗೆ ಸಿಕ್ಕಿತು. ತತ್ಕಾಲ ನಾನು ನನ್ನ ಕಣ್ಣುಗಳನ್ನು ದಪ್ಪನಾದ ಅರಿವೆಯಿಂದ ಕಟ್ಟಿ ಕೊಂಡೆನು, ಮತ್ತು ಧ್ಯಾನಕ್ಕೆ ಆರಂಭಿಸಿದೆನು. ನನ್ನ ಹಣೆಯ ಮೇಲಿನ ಪ್ರಕಾಶವು ಹಿಂದಿನ ಪ್ರಕಾಶದಂತೆ ಅಧಿಕಾಧಿಕ ತೇಜಸ್ವಿಯಾಗಿ ಅತ್ಯಂತ ಪ್ರಶಾಂತ ವಾದ ಕಿರಣಗಳು ಹೊರಬೀಳುತ್ತಿದ್ದವು. ಈ ಪ್ರಕಾಶವನ್ನು ನೋಡುವ ಆನಂದ ವನ್ನು ಹದಿನೈದು ಮಿನಿಟುಗಳವರೆಗೆ ಅನುಭವಿಸಿದೆ. ಸದ್ಗುರು ವಿಷಯದಲ್ಲಿ ನಾನು ಅಂತಃಕರಣಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ.

(೫) ತಾ॥ ೨೧-೧೨-೪೧ ಈ ದಿನ ನಾನು ಒಬ್ಬ ಮಿತ್ರನ ಮನೆಯಲ್ಲಿ ಧ್ಯಾನ ಮಾಡಲಿಕ್ಕೆ ಕೂತಿರುವಾಗ ನನಗೆ ಶ್ರೀಗಜಾನನ ಮೂರ್ತಿಯ ದರ್ಶನ ವಾಯಿತು. ಸೊಂಡಿಲು ಚಲನವಾಗುತ್ತಿತ್ತು. ಇನ್ನೊಂದು ಪ್ರಸಂಗದಲ್ಲಿ ವೀಣೆ ಯನ್ನು ಬಾರಿಸುತ್ತಿದ್ದ ಶ್ರೀಸರಸ್ವತಿ ದೇವಿಯ ದರ್ಶನವಾಯಿತು.

(೬) ಒಮ್ಮೆ ನಾನು ರೈಲುಗಾಡಿಯಲ್ಲಿ ಕೂತು ಬೆಳಗಾಂವಿಗೆ ಹೋಗು ತ್ತಿದ್ದೆನು. ಆಗ ಗಾಡಿಯಲ್ಲಿ ನಾನು ಧ್ಯಾನಸ್ಥನಾಗಿರುವಾಗ ನಾನು ಒಂದು ದೊಡ್ಡ ಘಡಿಯಾಳದ ಮುಸೋರೆಯನ್ನು ಕಂಡೆ. ಅದರ ಮೇಲಿನ ಘಡಿಯಾಳದಲ್ಲಿ ಹನ್ನೊಂದು ಹೊಡೆದು ಇಪ್ಪತ್ತು ಮಿನಿಟುಗಳಾಗಿದ್ದವು. ಕೂಡಲೇ ನಾನು ಕಿಸೆ ಯೊಳಗಿನ ಘಡಿಯಾಳ ತೆಗೆದು ನೋಡಿದೆ. ಬರೇ ಎರಡೇ ಮಿನಿಟುಗಳ ಭೇದ ವಿತ್ತು. ಬಹುಶಃ ನನ್ನ ಘಡಿಯಾಳವು ಮುಂದ ಹೋಗಿರಬೇಕು.

(೭) ತಾ. ೧೧-೧-೪೨ ನೇ ದಿವಸ ಮುಂಜಾನೆಯೇ ನಾನು ಧ್ಯಾನ ಹಚ್ಚಿರುವಾಗ ನನಗೆ ಆಗ್ರಾದ ತಾಜಮಹಾಲ ಮತ್ತು ಇಜಿಪ್ತದ ಸ್ಫಿಂಕ್ಸ

ಕಾಣಿಸಿದವು. ಮತ್ತೊಂದು ಪ್ರಸಂಗದಲ್ಲಿ ( ಧ್ಯಾನದಲ್ಲಿ ) ನನಗೆ ನದಿಗಳು, ಪರ್ವತಗಳು, ಬೋಟುಗಳು, ಜಲಾಂತರಗಾಮಿಗಳು, ಮಿಲಿಟರಿ ಪರೇಡ ವಗೈರೆ ಕಾಣಿಸಿದವು.

(೮) ಫೆಬ್ರವರಿಯಿಂದ ನನ್ನ ಬೆನ್ನುಭಾಗದಲ್ಲಿ ಕುಂಡಲಿನಿಯು ಜಾಗೃತವಾಗಿರುವ ಅರಿವು ಹುಟ್ಟಿತು. ಒಮ್ಮೊಮ್ಮೆ ಆತ್ಮದೃಷ್ಟಿಗೆ ತೇಜಃಪುಂಜ ಮುಖದ ಕೃಷ್ಣಸರ್ಪವು ತೋರುವದು. ತಾ. ೫-೨-೬೨ ನೇ ದಿವಸ ನಾನು ಧ್ಯಾನಸ್ಥನಾಗಿ ಕೂತಿರುವಾಗ, ಭ್ರೂಮಧ್ಯದಲ್ಲಿ ಗರಗರ ತಿರುಗುತ್ತಿರುವ ಸೂರ್ಯನು ಕಾಣಿಸಿದನು.

(೯) ಒಮ್ಮೊಮ್ಮೆ ಧ್ಯಾನದಲ್ಲಿ ಕನ್ನಡಿಯಲ್ಲಿ ಕಂಡಂತೆ ನನ್ನ ಮುಖವು ನನಗೆ ಕಾಣಿಸುವದು. ತಾ. ೧೧-೨-೬೨ ನೇ ದಿವಸ ನಾನು ಧ್ಯಾನಸ್ಥನಾಗಿ ಕೂತಿರುವಾಗ ಅರ್ಧತಾಸು ಶೀತಲ ಶಾಂತ ವ ಸುಖಕಾರಕ ಸಂವೇದನಗಳು ಆರಂಭವಾಗಿ ಆನಂದಲಹರಿಗಳು ಉತ್ಪನ್ನವಾದವು.

(೧೦) ತಾ. ೨೬ ಫೆಬ್ರವರಿ ದಿನ ( ಧ್ಯಾನಕ್ಕೆ ಕೂತಿರುವಾಗ ) ನನಗೆ ನಾಲ್ಕು ಎಸಳುಗಳುಳ್ಳ ಕಮಲವು ಕಾಣಿಸಿತು. ಆ ಎಸಳುಗಳ ಮೇಲೆ 'ಸೋಹಂ' ಈ ಅಕ್ಷರಗಳಿದ್ದವು. ಮತ್ತೊಂದು ಪ್ರಸಂಗದಲ್ಲಿ ಎಂಟು ಎಸಳುಗಳುಳ್ಳ ಮತ್ತು ಗರಗರ ತಿರುಗುವ ಕಮಲವು ತೋರಿತು. ಒಮ್ಮೆ ಗುಲಾಬಿ ವರ್ಣದ ಸಣ್ಣದೊಂದು ತ್ರಿಕೋಣವು ಕಾಣಿಸಿತು.

(೧೧) ಇತ್ತಲಾಗೆ ನನಗೆ ಎರಡು ಕಣ್ಣುಗಳು ಕಾಣಿಸುವವು. ಒಮ್ಮೊಮ್ಮೆ ಒಂದೇ ಕಾಣಿಸುವದು ಅದರೊಳಗಿಂದ ನೀಲ ಪ್ರಕಾಶ ಕಿರಣಗಳು ಹೊರಡುತ್ತವೆ. ಇದು ನನ್ನ ಸದ್ಗುರುವಿನ ಕೃಪಾದೃಷ್ಟಿ ಇರಬಹುದು.

(೧೨) ಗುರುಪೂರ್ಣಿಮೆ ದಿವಸ ನಾನು ನಾಶಿಕದಿಂದ ಮುಂಬಯಿಗೆ ತಿರುಗಿ ಬರುತ್ತಿದ್ದೆ. ನನ್ನ ಹತ್ತರ ಮೂರನೆ ವರ್ಗದ ತಿಕೀಟು ಇತ್ತು. ಆದರೆ ಪ್ರವಾಸಿಗಳ ದಟ್ಟಣೆ ಜೋರಿಯಿಂದ ನನಗೆ ಎರಡನೇ ವರ್ಗದಲ್ಲಿ ಕೂಡ್ರಬೇಕಾಯಿತು. ಪ್ರವಾಸವು ನಡೆಯುತ್ತಿರುವಾಗ ಒಬ್ಬ ತಿಕೀಟ ಇನಸ್ಪೆಕ್ಟರನು ನಮ್ಮ ಗಾಡಿಯೊಳಗೆ ಬಂದನು, ವ ಗಾರ್ಡನಿಗೆ ತಿಳಿಸದೆ ನಾವು ಎರಡನೇ ವರ್ಗದಲ್ಲಿ ಕೂತಿದ್ದಾದರೆ ನಮ್ಮ ಕಡೆಯಿಂದ ದಂಡ ವಸೂಲು ಮಾಡುವೆನೆಂತ ಬೆದರಿಸಿದನು. ನಾವು ಗಾರ್ಡನಿಗೆ ತಿಳಿಸಿದ್ದೆವು. ಆದರೂ ನಾನು ನಿರಾಶನಾದೆ. ಯಾಕಂದರೆ ನನ್ನ ಕಿಸೆಯೊಳಗೆ ಎರಡೇ ರೂಪಾಯಿಗಳಿದ್ದವು; ಅವು ದಂಡ ತುಂಬಲಿಕ್ಕೆ ಕಡಿಮೆ ಬೀಳುತ್ತಿದ್ದವು. ನಾನು ಮುಂಬಯಿ ಸ್ಟೇಶನಿಗೆ ಮುಟ್ಟಿದ ಮೇಲೆ ಆ ಇನಸ್ಪೆಕ್ಟರನು

ನನ್ನನ್ನು ಹಿಡಿದನು. ನಾನು ಸದ್ಗುರು ಸ್ಮರಣೆಯನ್ನು ಮಾಡಿ 'ಸೋಽಹಂ' ಮಂತ್ರವನ್ನು ಜಪಿಸಿದೆ: ಆಶ್ಚರ್ಯದ ಸಂಗತಿ ಏನಂದರೆ, ದಂಡ ವಗೈರೆ ಏನೂ ಕೊಡದೆ ಹೋಗಲಿಕ್ಕೆ ನನಗೆ ಅಪ್ಪಣೆಯಾಯಿತು

(೧೩) ಇತ್ತಲಾಗೆ ಮನು ಸುಭೇದಾರನು ಬರೆದ ಜ್ಞಾನೇಶ್ವರಿಯ ಇಂಗ್ಲೀಷ ಭಾಷಾಂತರವನ್ನು ಓದಲಿಕ್ಕೆ ನಾನು ಆರಂಭ ಮಾಡಿದ್ದೇನೆ. ಈ ಪುಸ್ತಕದ ಹದಿನೆಂಟನೇ ಅಧ್ಯಾಯವನ್ನು ಓದುತ್ತಿರುವಾಗ ತಾ. ೨೩ ನೊವೆಂಬರ ೧೯೪೬ನೇ ದಿನ ಮುಂಜಾನೆ ನಾನು ಧ್ಯಾನಕ್ಕೆ ಕೂತಿದ್ದೆ. ಆಗ ಪಂಢರಪುರದ ವಿಠೋಬನ ದರ್ಶನವಾಯಿತು.

(೧೪) ತಾ. ೪ ಫೆಬ್ರುವರಿ ೧೯೪೭ನೇ ದಿನ ಧ್ಯಾನ ನಡೆಯುತ್ತಿರುವಾಗ, ವಿಮಾನದಲ್ಲಿ ಕೂತು ಮೇಲೆ ಹೋದಂತೆ ನನಗನಿಸಿತು. ಹಸುರಾದ ಗುಡ್ಡಗಳು, ಪರ್ವತಗಳೂ ದೃಷ್ಟಿಯ ಮೇಲೆ ಕಾಣಿಸುತ್ತಿದ್ದವು. ವಿಮಾನದ ಕರ್ಕಶ ಶಬ್ದವು ಕೇಳಿಸುತ್ತಿತ್ತು.

(೧೫) ಈ ವರೆಗೆ ನನಗೆ ಯಾವ ಅನುಭವಗಳು ಬಂದಿದ್ದರೂ ಅವುಗಳಕ್ಕಿಂತ ಸರ್ವೋತ್ಕೃಷ್ಟ ಅನುಭವವು ತಾ. ೨೫ ಸಪ್ಟೆಂಬರ ೧೯೪೭ನೇ ದಿವಸ ಬಂತು. ಆ ದಿವಸ ಸಂಪೂರ್ಣ ಸಮಾಧಾನಯುಕ್ತವಾದ ಅವರ್ಣನೀಯ ಆನಂದವು ನನಗೆ ಲಭಿಸಿತು. ಇದೆಲ್ಲ ಸದ್ಗುರುಗಳ ಅಗಾಧ ಕೃಪೆಯು. ಈ ಕೃಪೆಗೋಸ್ಕರ ನಾನು ಸದ್ಗುರು ಗಜಾನನ ಮಹಾರಾಜರ ಆಮರಣ ಋಣಿಯಾಗಿದ್ದೇನೆ.

(ಸಹಿ) ಮಂಗೇಶ ಉಲ್ಲಾಳ.

(ಶ್ರೀ ಮಂಗೇಶ ಉಲ್ಲಾಳ, ಮುಂಬಯಿ, ಇವರ ಆಧ್ಯಾತ್ಮಿಕ ಅನುಭವಗಳು—೨ನೇ ಪತ್ರದೊಳಗಿನ ಉತಾರವು.)

ಆನಂದಾಶ್ರಮ, ಪ್ರಾಕ್ಟರ ರೋಡ, ಮುಂಬಯಿ.

ಧ್ಯಾನಸಂಬಂಧ ಬರೆಯುವದಾದರೆ ಅದನ್ನು ನಾನು ನಿತ್ಯನಿಯಮದಿಂದ ಮಾಡುತ್ತಿದ್ದೇನೆ. ಅದರ ಅನುಭವಗಳಾದರೂ ಉತ್ತಮವಾಗಿ ಬಂದಿರುವವು. ನನ್ನ ಮನಸ್ಸಿಗೆ ಪೂರ್ಣ ಶಾಂತಿಯು ಸಿಕ್ಕಿರುತ್ತದೆ. ಹಾಗೂ ನನ್ನ ವಾಸನೆಗಳು ನಷ್ಟವಾಗುತ್ತಾ ನಡೆದಿರುತ್ತವೆ. ಕೆಲವು ದಿವಸ ಕತ್ತಲು ಇರುವಾಗ್ಯೂ ಸಹ ನನ್ನ ಕಣ್ಣು ತೆರೆದಾಗ್ಯೂ ದೃಶ್ಯಗಳು ಕಾಣಿಸುತ್ತಿದ್ದವು. ಒಂದು ಚತುಷ್ಪಾದ ಪಶುವು, ಬಿಳಿ ಬಾಲವಿದ್ದು, ಒಮ್ಮೆ ನಾಯಿಯಂಥಾ ಮುಖವಿದ್ದದ್ದು, ಅದರ ಪ್ರಕಾಶಿತ ಮತ್ತು ತೇಜಸ್ವಿ ಕಣ್ಣುಗಳಷ್ಟು ಯಾವಾಗಲೂ ತೋರುವವು. ಭ್ರೂಮಧ್ಯದಲ್ಲಿ ದೃಷ್ಟಿ ಇಟ್ಟು ನಾನು ಧ್ಯಾನ ಮಾಡುತ್ತಿರುವಾಗ ಸರ್ವಾಂಗ ಅಕ್ಷರ ಕಣ್ಣಿಗೆ ಕಾಣಿಸು

ದೆನು. ನಾಗಮಂಡಲಿಯು ಎಡದ ಬೆನ್ನೆಲುಬಿನ ತುದಿಯಲ್ಲಿ ,ಅವತರ ಸುರುವಾಯಿತು; ಮತ್ತು ನನಗೆ ವಿಸ್ಮೃತಿಯಾಗುವಂತೆ ತೋರಿತು. ನಾನು ಸ್ವಲ್ಪ ಗಾಬರಿಯಾದ ಮತ್ತು ಕಣ್ಣು ತೆರೆದೆ ನಿನ್ನೆ ಸ್ವಪ್ನ ಹಾಗೆಯೇ ಆಯಿತು; ನಾನು ಗಾಬರಿಗೊಂಡೆನು. ಅರ್ಧ ತಾಸಿನ ಮೇಲೆ ನಾನು ಎದ್ದೆನು. ನನಗೆ ತಿಳಿದುಬಂತು, ನನ್ನ ಶರೀರವು ಥರಥರನೆ ನಡುಗುತ್ತದೆ, ಮತ್ತು ಸರ್ವಾಂಗದಲ್ಲಿ ಬೆವರು ಬಂದದೆ. ಒಂದು ವಾರ ಹಿಂದೆ **‘ The mysterions Kundalini ’** ( ಗೂಢವಾದ ಕುಂಡಲಿನಿಯು ) ಎಂಬ ಹೆಸರಿನ ಶ್ರೀ ರೇಳೆಯವರು ಬರೆದ ಪುಸ್ತಕವನ್ನು ನಾನು ಓದಿದ್ದೆ; ಮತ್ತು ಅಂದಿನಿಂದ ಷಟ್‌ಚಕ್ರಗಳನ್ನು ನೋಡುವ ನನ್ನ ಇಚ್ಛೆಯು ಅನಾವರವಾಗಿದೆ.

ಶ್ರೀಸದ್ಗುರು ಕೃಪೆಯಿಂದ ವ ಆಶೀರ್ವಾದದಿಂದ ಅದು ಪೂರ್ಣವಾದೀತೆಂದು ನನಗೆ ಭರವಸೆ ಇದೆ. ಮೊದಲು ನನಗೆ ಸಂತರ ವಿಷಯದ ಪುಸ್ತಕಗಳನ್ನು ಓದುವದು ಅಂದರೆ ಬಹಳ ಬೇಸರವಿತ್ತು. ಆದರೆ ಈಗ ಚರಿತ್ರೆ ಜ್ಞಾನೇಶ್ವರಿ, ಗಾಥಾ ಇತ್ಯಾದಿ ಓದುವಾಗ್ಗೆ ಬಹಳ ಆನಂದವೆನಿಸುವದು. ಯೋಗದ ಮೇಲಿನ ಓವಿಗಳ ಅರ್ಥವು ಈಗ ಸಹಜವಾಗಿ ತಿಳಿಯುತ್ತದೆ. ಭ್ರೂಮಧ್ಯದಲ್ಲಿ ಧ್ಯಾನ ಮಾಡುವಾಗ ಪ್ರಕಾಶದ ಅನುಭವವು ಬರುತ್ತದೆ. ಆಗ ಸೂರ್ಯಪ್ರಭೆಯಂಥ ತೇಜಃಪುಂಜ ಮತ್ತು ತೇಜಕಿರಣಗಳನ್ನು ಬಿಡುತ್ತಿರುವ ಚಕ್ರವು ತೀವ್ರವಾಗಿ ತಿರುಗುತ್ತಿರುವದು ಕಾಣಿಸುತ್ತದೆ. ಒಮ್ಮೊಮ್ಮೆ ನೀಲಪ್ರಕಾಶ ಮತ್ತು ಅದರಲ್ಲಿ ಹೊಳೆಯುವ ಚಂದ್ರಪ್ರಕಾಶ ಮತ್ತು ಅದರೊಳಗೆ ಸ್ಪಷ್ಟವಾಗಿ ನೀಲಿ ಪ್ರಕಾಶ ನೋಡಿ ನನ್ನ ಮನಸ್ಸು ಆನಂದಿತವಾಗುವದು. ಇತ್ತಲಾಗ [illegible] ಜನವಸ್ತಿಗೆ ಎಷ್ಟು, ಅದರಲ್ಲಿ ಗ್ರಾಮದ ಬಡ [illegible], ತಿರುಗಾಟದವರ ಕರ್ಕಶ ಕೂಗು; ಇಂಥ ಗೊಂದಲದೊಳಗೆ ಧ್ಯಾನಮಾಡುವದು ಎಷ್ಟು ಕಠಿಣವಾಗುವದು! ಇದಕ್ಕಿಂತ ಹೊರ ಊರುಗಳಲ್ಲಿ ಶಾಂತಸ್ಥಳದಲ್ಲಿ ಹೋಗಿದ್ದರೆ ಎಷ್ಟೋ ತೀವ್ರವಾಗಿ ಧ್ಯಾನವು ಸಾಧಿಸೀತು ಎಂದು ಅನಿಸುವದು. ಒಮ್ಮೊಮ್ಮೆ ತ್ರಿನೇತ್ರ ಶಂಭು ರೂಪವು ತೋರುತ್ತದೆ. ಅದರ ಸ್ಥಿತಿ ಒಂದು ನೇತ್ರವು ಹಣೆಯಮೇಲಿರುವದು ಆ ಆಕೃತಿಯು ನನ್ನ ಸಮೀಪ ಬರುತ್ತಿರುವದು. ಆ ಕಣ್ಣಿನಿಂದ ನೀಲಪ್ರಕಾಶದ ಕಿರಣಗಳು ಹೊರಬೀಳುತ್ತವೆ, ಮತ್ತು ನನ್ನ ಶರೀರದೊಳಗಿಂದ ನಾನಾ ಪ್ರಕಾರದ ಹೊಡತಗಳು ಕೊಡುತ್ತ ಅವು ಹೋಗುತ್ತವೆನಿಸುವದು. ಇದೆಲ್ಲ ಸದ್ಗುರು ಕೃಪೆ ಇರುವದು, ಮತ್ತು ಇದರಿಂದ ಅವರ ಮೇಲಿನ ನನ್ನ ಶ್ರದ್ಧೆಯು ದೃಢವಾಗುತ್ತಿದೆ. ಷಟ್‌ಚಕ್ರಗಳನ್ನು ನೋಡಬೇಕೆಂತ ನನಗೆ ಬಹಳ ಇಚ್ಛೆಯಾಗಿರುವದು. ಸದ್ಗುರುಗಳ ಮನಸ್ಸಿಗೆ ಬಂದರೆ ಅದು ಪೂರ್ಣವಾದೀತು ಎಂದು ನನ್ನ ಮನಸ್ಸಿನ ನಿಶ್ಚಯವಿದೆ.

(ಸಹಿ) ಮಂಗೇಶ.

—೪೨—

ರಾ. ಪಿ. ಎನ್. ನಾಬರ, ವಕೀಲ, ನಾಶಿಕ ಇವರಿಗೆ ಬಂದ ಅನುಭವಗಳು

( ಅವರು ಬರೆದುಕೊಟ್ಟ ಹೇಳಿಕೆ )

ಸಪ್ರೇಮ ನಮಸ್ಕಾರ ವಿ. ವಿ.

ಶ್ರೀಗಜಾನನ ಮಹಾರಾಜ ( ನಾಶಿಕ ) ಇವರ ಕೂಡ ನನ್ನ ಆಪ್ತ ಪರಿಚಯ ವ ಅನುಭವ ಈ ಸಂಬಂಧದಿಂದ ಹೇಳುವದೇನಂದರೆ : —

'Light on the path of self-realisation' ( ಆತ್ಮಸಾಕ್ಷಾತ್ಕಾರ ಮಾರ್ಗಪ್ರದೀಪ ) ಇದರಲ್ಲಿ ಶ್ರೀಗಜಾನನ ಮಹಾರಾಜರ ಸಂಕ್ಷಿಪ್ತ ಚರಿತ್ರವು ಬರೆದಿರುವದು; ಈ ಪುಸ್ತಕವನ್ನು ನಾನು ಓದಿ ನೋಡಿದೆ ಮತ್ತು ನನಗೆ ಶ್ರೀಗಜಾನನ ಮಹಾರಾಜರ ವಿಷಯ ಗೊತ್ತಾಯಿತು. ಅನಂತರ ಅವರ ಭೆಟ್ಟಿಯಾಗಬೇಕೆಂದು ನನ್ನ ಮನಸ್ಸಿನಲ್ಲಿ ಇಚ್ಛೆ ಉತ್ಪನ್ನವಾಯಿತು. ರವಿವಾರ ತಾರೀಖು ೨೨-೮-೧೯೪೮ನೇ ದಿವಸ ನಾನು ಅವರ ದರ್ಶನಕ್ಕಾಗಿ ಅವರಿರುವ ಮನೆಗೆ ಹೋದೆನು. ದರ್ಶನವಾದ ಮೇಲೆ, ನನ್ನ ಮನಸ್ಸಿಗೆ ಸಮಾಧಾನವಾಗಬೇಕು ಇದಕ್ಕಾಗಿ ಉಪಾಯ ಹೇಳಿ ಕೃಪೆ ಮಾಡಬೇಕಾಗಿ ನಾನು ವಿನಂತಿ ಮಾಡಿದೆನು. ಅನಂತರ ಸ್ವಲ್ಪ ಹೊತ್ತು ಅವರಿಗೂ ನನಗೂ ಪ್ರಶ್ನೋತ್ತರಗಳು ನಡೆದವು. ಮತ್ತು ಅವರು ನನಗೆ ಮುಂದಿನ ಗುರುವಾರ ಮುಂಜಾನೆ ಬರಲಿಕ್ಕೆ ಹೇಳಿದರು. ಇಷ್ಟರೊಳಗೆ ಹೀಗೆ ಚಮತ್ಕಾರವಾಯಿತಲ್ಲ, ಒಮ್ಮೆಲೆ ನನ್ನ ಮನಸ್ಸಿನ ಏಕಾಗ್ರತೆ ಆಯಿತು, ವ ಶ್ರೀಗಜಾನನ ಮಹಾರಾಜ ಇವರ ಪ್ರಕಾಶಮಾನ ವ ದಿವ್ಯ ಮುಖವು ಕಾಣಿಸಿತು. ಕೂಡಲೆ 'ಆಯೊ' ಅಂತ ಮಹಾರಾಜರು ನನಗೆ ಕರೆದ ಮೇಲೆ ನನಗೆ ಅರ್ಧ ದೇಹಭಾನವು ಬಂತು ಮತ್ತು ನಾನು 'ಶ್ರೀಸದ್ಗುರು ಮಹಾರಾಜಕಿ ಜಯ,' ಎಂದು ದೊಡ್ಡ ಧ್ವನಿಯಿಂದ ಅಂದೆ, ಮತ್ತು ಮಹಾರಾಜರಿಗೆ ನಮಸ್ಕಾರವನ್ನು ಮಾಡಿದೆನು. ಮಹಾರಾಜರು ಪುನಃ ನನಗೆ ಗುರುವಾರ ದಿನ ಮುಂಜಾನೆ ಬರಹೇಳಿದರು. ಸಮಾಧಿ ಹತ್ತಿ ದೇಹಭಾನವು ತಪ್ಪಿತು. ಆ ಹೊತ್ತಿನ ಆನಂದವು ಏನು ವರ್ಣಿಸಲಿ ? ಅನಂತರ ನಾನು ಹೊರಟು ಹೋದೆನು.

ಗುರುವಾರ ತಾರೀಖು ೨೬-೮-೧೯೪೮ನೇ ದಿನ ಶ್ರೀಗಜಾನನ ಮಹಾರಾಜರ ಕಡೆ ಹೋದೆನು. ಅವರು ಕೃಪಾದೃಷ್ಟಿಪೂರ್ವಕ ನನಗೆ 'ಸೋಽಹಂ' ಮಂತ್ರವನ್ನು ಕೊಟ್ಟರು. ಅಂದಿನಿಂದ ನನ್ನದು ಸ್ವಲ್ಪ ಸ್ವಲ್ಪ ಸಾಧನಕೆ ಆಗುತ್ತ ನಡೆದದೆ. ಮತ್ತು ಮನಸ್ಸಿನಲ್ಲಿ ಯಾವತರದ್ದೂ ವಿಕಲ್ಪವು ಬಾರದೆ ನನಗೆ ಆಪ್ತ

ನದಿಂದ ಮನಸ್ಸಿಗೆ ಪ್ರಾಪ್ತವಾಗುವ ಆನಂದವು ದಿನೇದಿನೇ ವೃದ್ಧಿಯಾಗುತ್ತ ನಡದದೆ.

ತಾ. ೨೩ ೯-೧೯೪೩

(ಸಹಿ) ಪಿ ಎನ್. ನಾಯರ, ನಾಶಿಕ

— ೪೩ .

ರಾ. ರಾ. ರಾಮಚಂದ್ರ ಶಿವರಾಮ ಸಹಸ್ರಬುದ್ಧೆ, ಕೇಸರಿ ಕಚೇರಿ ಪುಣೆ ಇವರ ಆಧ್ಯಾತ್ಮಿಕ ಅನುಭವ ಸಂಬಂಧ ಪತ್ರವೊಂದಿನ ಉತಾರಗಳು:—

( ಪತ್ರ ೧ನೇ )

॥ ಶ್ರೀಗುರು ಪ್ರಸನ್ನ ॥

ಮಂಗಳವಾರ ತಾ ೨೪ ೨-೪೨
ಕೇಸರಿ, ಕಚೇರಿ, ಪುಣೆ.

ಶ್ರೀಸದ್ಗುರು ಗಜಾನನ ಮಹಾರಾಜ, ಇವರ ಚರಣ ಸೇವೆಗೆ —

ಸನ್ ೧೯೪೧ ಡಿಸೆಂಬರ ತಾ. ೧೪ ರವಿವಾರ ದಿವಸ ನಾನು ತಮಗೆ ಭೆಟ್ಟಿಯಾದೆ. ರವಿವಾರ ಮತ್ತು ಸೋಮವಾರ ತಮ್ಮ ದರ್ಶನದ ಲಾಭವಾಯಿತು. ಆ ದಿವಸದಿಂದ ಇವತ್ತಿನ ವರೆಗೆ ನನಗೆ ಯಾವ್ಯಾವ ಅನುಭವಗಳು ಬಂದವು ಅವು ಗಳನ್ನು ದ. ಭ. ವ. ಹಣಮಂತರಾವ ಉಮರ್ಜಿಭಾಯಿ ವ ಪುಣೆಯ ಡಾ. ಲೆಲೆ ಇವರಿಂದ ತಮ್ಮ ಸಂದೇಶ ಬಂದದ್ದರಿಂದ ತಿಳಿಸಿರುತ್ತೇನೆ.

(೧) ತಾರೀಖು ೧೪ ೧೨ ೧೯೪೧ ನೇ ದಿನ ತಮಗೆ ಭೆಟ್ಟಿಯಾಗಿ ತಮ್ಮ ಹಸ್ತ ಸ್ಪರ್ಶವು ನನ್ನ ಬಲಭುಜಕ್ಕೆ ಆದಹಾಗಾಯಿತು ಎಷ್ಟೋ ಬದಲಾಯಿತು. ಸೋಮವಾರ ದಿವಸ ನಾನು ಧ್ಯಾನಕ್ಕೆ ಕೂತಾಗ್ಗ ಯಾವದೊಂದು ದೃಶ್ಯ ತೋರ ಲಿಲ್ಲ. ಆಮೇಲೆ ನಾನು ಕಣ್ಣುಗಳ ಮೇಲೆ ಹೊದಿಕೆ ಹಾಕಿ ಮಲಗಿಕೊಂಡೆನು ( ಇನ್ನೂ ರಾತ್ರಿ ಇತ್ತೆಂದು ), ಆಗ ಎರಡೂ ಕಣ್ಣುಗಳಿಂದ ಥಂಗಾರದ ತಗಡು ಉಪ್ಪುಮಾಡಿದರೆ ಅದು ಹ್ಯಾಗೆ ಹೊಳೆಯುತ್ತದೊ, ಹಾಗೆ ಎರಡು ಇಂಚು ಅಗಲದ ಪ್ರಕಾಶವು ಒಂದೇ ಸಮನೆ ಬರುವಂತೆ ಕಾಣಿಸಿತು. ಆ ಎರಡೂ ಪ್ರಕಾಶಗಳ ಸಂಯೋಗವು ಮುಂದೆ ಒಂದೇ ಕಡೆಯಲ್ಲಿ ಆಯಿತು. ಆಗ ಅದು ಥರ್ಮಾಸ ಬಾಟಲಿಯಂತೆ ತೋರಿತು.

(೨) ಮುಂದೆ ಮಧ್ಯಾಹ್ನಕ್ಕೆ ನೀಲಿ ಪ್ರಕಾಶವು ನನಗೆ ಹತ್ತಾರು ರೀತಿ ಯಿಂದ ಕಾಣಿಸಿತು.

(೩) ಒಂದು ದಿವಸ ಸ್ವಪ್ನದಲ್ಲಿ ತಾವು ನಿತ್ಯದಂತೆ ಭೂಮಿಯ ಮೇಲೆ ಪೂರ್ಣ ಉಡಿಗೆಇಲ್ಲದೆ ಮಲಗಿದ್ದಿರಿ. ಆಗ ತಮ್ಮ ಎದುರಿಗೆ ಒಬ್ಬ ಮುದುಕಿ ಇದ್ದಳು ತಮ್ಮನ್ನು ನೋಡಿದಾಕ್ಷಣ ನಾನು 'ಶ್ರೀಗಜಾನನ ಮಹಾರಾಜಕಿ ಜೈ' ಹೀಗೆ ಎರಡು ಸಾರಿ ಅಂದೆ ಆಗ ತಾವು, 'ಸಹಸ್ರಬುದ್ಧೆ, ರಾಮಭಾವೂ, ನಿಮ್ಮ ಮನೆಯಲ್ಲಿ ನಾನು ಚಹಾ ತಗೊಳ್ಳಬೇಕಾಗಿದೆ,' ಎಂದು ಹೇಳಿದಿರಿ. ಆಗ ನಾನು ತಮಗೆ ಹೇಳಿದೆ, 'ಮಹಾರಾಜರೆ, ತಮ್ಮ ಕೃಪೆಯಿಂದ ಏನೂ ಕಡಿಮೆ ಇಲ್ಲ, ಅವಶ್ಯ ಬರಬೇಕು.' ಆಗ ಸಮೀಪವಿದ್ದ ಮುದುಕಿಯಂದಳು "ಮಹಾರಾಜರೆ, ಊಟದ ಹೊತ್ತಾಯಿತು, ಈಗ ಚಹಾ ಯಾತಕ್ಕೆ?" ಅದಕ್ಕೆ ತಾವು ಉತ್ತರಕೊಟ್ಟಿರಿ, 'ನಾವು ಸಹಸ್ರಬುದ್ಧೆಯವರ ಚಹಾ ಮೊದಲು ತಗೊಳ್ಳಬೇಕು'

(೪) ಶ್ರೀಗಣರಾಜನ ದರ್ಶನವಾಯಿತು. ಶ್ರೀರಾಮತೀರ್ಥ ಇವರ ದರ್ಶನವಾಯಿತು. ಲೋಕಮಾನ್ಯ ಟಿಳಕರು 'ಭಾರತಾ ಭಾರತಾಮೆಂ' ಹೀಗೆ ಶಬ್ದಗಳನ್ನು ಉಚ್ಚರಿಸುವಾಗ್ಗೆ ಕಂಡೆನು.

(೫) ಒಂದು ಗುರುವಾರ ದಿವಸ ಕೋಣೆಯಲ್ಲಿ ನಾನು ಧ್ಯಾನಕ್ಕೆ ಕೂತಿದ್ದೆ, ಧ್ಯಾನವು ಬಿಟ್ಟಮೇಲೆ ಶ್ರೀನೃಸಿಂಹ ಸರಸ್ವತಿ ಇರಬಹುದು ಇಲ್ಲವೆ ಶ್ರೀ ಅಕ್ಕಲಕೋಟ ಸ್ವಾಮಿ ಮಹಾರಾಜರು ಇರಬಹುದು, ಒಬ್ಬ ಗೌರವರ್ಣದ ಸನ್ಯಾಸಿಯ ಮೂರ್ತಿಯು ಕಿಟಕಿಯೊಳಗಿಂದ ಒಳಗೆ ನೋಡುತ್ತಿತ್ತು. ಆಗ ನಾನು 'ಮಹಾರಾಜರೇ, ನಾನೇ ಇದ್ದೇನೆ' ಹೀಗೆ ನಾನು ಹೇಳಿದಾಗ ಸಸ್ಮಿತಪೂರ್ವಕ ತಲೆಹಾಕಿ ಆ ಮೂರ್ತಿಯು ಹೋಯಿತು.

(೬) ಶ್ರೀಗೋರಕ್ಷನಾಥ ವ ಶ್ರೀಮಚ್ಛೇಂದ್ರನಾಥ ಇವರಿಗೆ ಕಂಡೆನು ಒಬ್ಬರು ಅತ್ಯಂತ ಶಾಂತ ರೀತಿಯಿಂದ ಜಡೆಯನ್ನು ಕಟ್ಟಿಕೊಂಡು ಧ್ಯಾನಸ್ಥರಾಗಿ ಕೂತಿದ್ದರು. ಮತ್ತೊಬ್ಬರು ಅವರ ಸಮೀಪದಲ್ಲಿಯೇ ಧ್ಯಾನಸ್ಥರಾಗಿ ಆಸೀನರಾಗಿದ್ದರು. ಆದರೆ ಪೂರ್ಣ ಸುಹಾಸ್ಯವದನರಾಗಿದ್ದರು. ಆಗ ಅಲ್ಲಿದ್ದ ಒಬ್ಬ ಮನುಷ್ಯನು ನನಗೆ ಅವರ ಪರಿಚಯ ಮಾಡಿಕೊಟ್ಟನು. ನಂತರ ನಾನು ಎಚ್ಚರನಾದೆನು.

[೭] ನನ್ನ ಧ್ಯಾನವು ಮುಗಿದ ಬಳಿಕ ನಾನು ನಿತ್ಯದಂತೆ ತಲೆಯ ಮೇಲೆ ಹೊದ್ದುಕೊಂಡೆನು, ಆಗ ನಾನಂದೆ, 'ಶ್ರೀಜ್ಞಾನೇಶ್ವರ ಮಹಾರಾಜರು ಯೋಗದಿಂದ ತಮ್ಮ ತನುವನ್ನು ಕಾಯಿಸಿ, ಶ್ರೀಮುಕ್ತಾಬಾಯಿಗೆ ತನ್ನ ಬೆನ್ನ ಮೇಲೆ ಮಂಡಿಗೆ ಸುಟ್ಟುಕೊಟ್ಟರು. ಆ ಚೈತನ್ಯಘನ ಇಲ್ಲೇ ಇದೆ.' ಈ ಸಂಗತಿ ಅನ್ನುತ್ತಿರುವಾಗ್ಗೆ, ಪಂಢರಪುರದ ಒಂದು ಸಣ್ಣ ವಿಠ್ಠಲ ಮೂರ್ತಿಯು ಸಾತಾರೆ ಕಡೆಯ ಮರಾಠಾ ಜನರ ಉಡಿಗೆಯಂತೆ ಉಡಿಸಿದ್ದು ಕಾಣಿಸಿತು. ಮಸ್ತಕದ ಮೇಲೆ ಸಾತಾರೆ ರೀತಿಯ ಪಾಗೋಟೆ ಇತ್ತು. ನಾನಂದೆ, ಇವನೇ ಆ ಚೈತನ್ಯದ ಹೃದಯ. ಆ ಮೂರ್ತಿಯನ್ನು ಕಣ್ಣುತುಂಬ ನೋಡಿ ಕೂಡಲೆ ಎಚ್ಚರನಾದೆನು.

[೮] ಒಂದು ರವಿವಾರ ನಾನು ಧ್ಯಾನವನ್ನು ಮುಗಿಸಿ ಕೂತಿರುವಾಗ ಮುಂದಿನ ದೃಶ್ಯವು ತೋರಿತು. ನಾನು ಸ್ನಾನಮಾಡಿ ಕಂಕುಳಲ್ಲಿ ಮೂರು ನಾಲ್ಕು ವರ್ತಮಾನ ಪತ್ರಗಳನ್ನಿಟ್ಟುಕೊಂಡು ಆಫೀಸಿಗೆ ಹೋಗುತ್ತಿದ್ದೆ. ಹಣೆಗೆ ತ್ರಿಪುಂಡ್ರ ಹಚ್ಚಿದ್ದೆ. ತಲೆಯಮೇಲೆ ಸ್ವಲ್ಪ ವಾರೆಯಾಗಿ ಟೊಪ್ಪಿಗೆ ಇಟ್ಟಿದ್ದೆ; ಈ ಸ್ವರೂಪವನ್ನು ನಾನು ಸ್ಪಷ್ಟವಾಗಿ ಕನ್ನಡಿಯಲ್ಲಿ ನೋಡುತ್ತಿದ್ದೇನೆ, ಎಂಬಂತ ಉತ್ತಮರೀತಿಯಿಂದ ಕಾಣಿಸಿತು. ಆಗ್ಗೆ ನನ್ನ ಮುಖವು ಅತ್ಯಂತ ತೇಜಸ್ವಿಯಾಗಿತ್ತು. ಆ ದಿವಸದ ಲಾಗಾಯತು ನಾನು ಅಷ್ಟಗಂಧ ಹಚ್ಚಿಕೊಳ್ಳಲಾರಂಭಿಸಿದೆ.

[೯] ಮೂರು ನಾಲ್ಕು ದಿನಗಳ ಒಂದೆ [ಇತ್ತಲಾಗೆ] ಪುನಹಾ ಶ್ರೀಗಣಪತಿ ವ ಶ್ರೀವಿಷ್ಣು ಇವರ ದರ್ಶನವಾಯಿತು. ಶ್ರೀವಿಷ್ಣುವಿನ ಮೂರ್ತಿ ಶಂಖ ಚಕ್ರ ಗದಾ ಪದ್ಮಸಹಿತವಿತ್ತು.

(೧೦) ಒಮ್ಮೆ ರಾತ್ರಿ ಎರಡು ಹೊಡೆಯುವಾಗ್ಗೆ ಎದ್ದು 'ಸೋಹಂ' ಜಪವನ್ನು ಸುರು ಮಾಡಿದೆ. ಮೂರು ಆವರ್ತಿ ತಲೆಯ ಮೇಲೆ ಹೊದ್ದು ಕೊಂಡು ಮಲಗಿದೆ ಆಗ್ಗೆ ಸರ್ವಾಂಗವು ಬಹಳ ಜೋರಿನಿಂದ ಕಂಪಿಸಿತು ವಿಷಮಜ್ವರ ಬಂದದ್ದೂ ಎಂಬಂತೆ ಭಾಸಿಸಿತು. ಮೊದಲು ನಾಭಿಕಮಲದ ಭಾಗ ಆಮೇಲೆ ತಲೆಯುವಿನಹಾ ಬಾಕಿ ಎಲ್ಲಾ ಮೈಯ್ಯು ನಡುಗುತ್ತಿತ್ತು.

(೧೧) ತಾರೀಖು ೨೪ ೨ ೪೧ ನೇ ದಿವಸ ನಿತ್ಯದಂತೆ ಊಟಮಾಡಿ ಸ್ವಲ್ಪ ಅಡ್ಡ ಆದೆ ಎರಡುವರೆ **ಹೊಡೆಯುವ** ಸುಮಾರಕ್ಕೆ ಒಂದು ಅತ್ಯಂತ ಮನೋರಂಜಕ ಸ್ವಪ್ನವು ಬಿತ್ತು. ಅದು ಮುಂದಿನಂತೆ ಇರುವದು. ಸ್ವಪ್ನದಲ್ಲಿ ತಾವು ನೀಲವರ್ಣದ ಸೂಟ (suit) ಕೋಟು ಬಾಗೊಟಿ ನೆಕಟಾಯಿ (neck-tie) ಹಾಕಿಕೊಂಡು ನಿಂತಿರುವಿರಿ. ನಾನು ನಿಮ್ಮನ್ನು ನೋಡಿದಾಕ್ಷಣ ತಮ್ಮ ಚರಣಗಳಮೇಲೆ ಮಸ್ತಕವನ್ನಿಟ್ಟೆ. ಮಹಾರಾಜರು ಮೊದಲು ನನ್ನ ಬೆನ್ನಮೇಲೆ ಕಾಲು ಇಟ್ಟರು. ಮತ್ತು ಕೂಡಲೆ ಬೆನ್ನಮೇಲೆ ಕೈಆಡಿಸಿ ತಲೆಯಮೇಲೆ ಎರಡೂ ಹಸ್ತಗಳನ್ನಿಟ್ಟರು. ಈ ಸಂಗತಿ ನಡೆದಿರುವಾಗ, ತಾವು ಒಂದು ಊರಿನ ಬದಿಯ ನದಿಯ ತೀರದಮೇಲೆ ನಿಂತಿದ್ದೀರಿ ಎಂಬ ನೋಟವನ್ನು ಕಂಡೆ ಅಲ್ಲಿ ಮಲ್ಲು ಗಾವಲಿತ್ತು ಮತ್ತು ಅಲ್ಲಿ ಒಂದು ಕುದುರೆ ಮತ್ತು ಕಾಸ್ತಾರ ಕಾಣಿಸಿದವು. ಕೂಡಲೇ ಆ ಕುದುರೆಯಮೇಲೆ ನಾನು ಸವಾರನಾದೆ. ಆ ಊರು ನಾತಾರಾ ಕಡೆದು ಇರಬೇಕು. ಅಲ್ಲಿಯ ಗೌಡನು ನನ್ನ ಕುದುರೆ ಹಿಂದಿನಿಂದ ಅದರ ನನ್ನ ಕೂಡೆ ನಡೆಯುತ್ತಿದ್ದನು. ಅವನನ್ನು ನಾನು ಕುದುರೆಯಮೇಲೆ ಕೂಡ್ರಿಸಿಕೊಂಡು, ಗ್ರಾಮೋದ್ಧಾರದಿಂದ ಊರು ಊರ್ಜಿತಸ್ಥಿತಿಗೆ ಬಂದೀತು ಮತ್ತು ಜನರಿಗೆ ಅನ್ನವು ದಕ್ಕೀತು' ಎಂದು ಹೇಳುತ್ತಿದ್ದೆ. ಅದೇ ಹೊತ್ತಿಗೆ ಮನಸ್ಸಿನಲ್ಲಿ ವಿಚಾರ ಬಂತು. ನಾನು ಇನ್ಸಪೆಕ್ಟರ ಜನರಲ್ ಆಫ್ ಪೋಲೀಸ ಆದರೆ ಮಹಾರಾಜರಿಗೆ ದಯಮಾ

ರೂಪಾಯಿ ೨೦೦ ಕಳುಹಿಸುವೆನು. ಹೀಗೆ ವಿಚಾರ ಬರುವಾಗ್ಗೆ ಆಗಲೇ ಮನಸ್ಸಿಗೆ ಅಂದೆ, 'ಮಹಾರಾಜರು ನನ್ನ ಕುದುರೆಯ ಹಿಂದಿನಿಂದ ಆನಂದಯುಕ್ತರಾಗಿ ಬರುತ್ತಿರುವರು, ಆದರೆ ನಾನುಮಾತ್ರ ಕುದುರೆಯಮೇಲೆ ಕೂತಿರುವೆನು, ಇದು ಯೋಗ್ಯವಲ್ಲ ಎಂದು ಹೇಳಿ, ಹಿಂದಿನಿಂದ ಬರುವ ಕಾಸ್ತಾರನಿಗೆ ನಾನು ಕರೆದೆ. ಮತ್ತು ಕುದುರೆಯನ್ನು ನಿಲ್ಲಿಸಿದೆ, ಮತ್ತು ತಮ್ಮಮುಂದ ತಂದಿರಿಸಿದೆ. ತಾವು ನಕ್ಕರಿ ಮತ್ತು ನಾನು ಎಚ್ಚರನಾದೆ.

ಮೇಲೆ ಹೇಳಿದಂತೆ ಅನುಭವಗಳು ಬಂದವು. ನಾನು ನಿತ್ಯ ಒಂದೇ ತಾಸು ಕೂತಿರುತ್ತೇನೆ. ಮೇಲಿನ ಅನುಭವಗಳನ್ನು ನಾನು ತಾರೀಖುಪ್ರಕಾರ ಬರೆಯಲಿಲ್ಲ. ಈ ಕಾರಣ ತಾರೀಖುಗಳು ಕೊಡೋಣಾಗಲಿಲ್ಲ. ತಾವು ಒಂದೆ ಪತ್ರದಲ್ಲಿ ಬರೆದಂತೆ ನನಗೆ ವೃತ್ತಿದೆಆಚೆಗೆ ಹೋಗುವದು; ಆದ್ದರಿಂದ ವೃತ್ತಿದಮೇಲೆ ವಿಶೇಷ ಲಕ್ಷ್ಯ ಬೇಡ ಎಂದು ನಾನು ಬರೆದಿರುವ ತೊಂದರೆಯಲ್ಲಿ ಹೇಳಲಿಲ್ಲ. ತಾವು ಅನುಗ್ರಹ ಕೊಟ್ಟ ಮಾತ್ರದಿಂದ ನನ್ನ ಶುದ್ಧಿಯಾಯಿತು ಎಂದು ನಾನು ತಿಳಿಯುವೆನು. ನನ್ನಲ್ಲಿ ಮುಮುಕ್ಷುತ್ವವು ಬಂದಿದ್ದರೆ, ತಾವು ನನ್ನನ್ನು ಶಿಷ್ಯನನ್ನಾಗಿ ಮಾಡಬೇಕು ಅಂದರೆ ನಾನು ಪುನೀತನಾದೆನು; ಮತ್ತು ಯಾವ ವಸ್ತು ಲಾಭದ ಸಲುವಾಗಿ ಜನವು ತಳಮಳಿಸುವದೊ ಅದು ಗುರುಪ್ರಸಾದದಿಂದ ಸಿಕ್ಕೀತು ಎಂದು ನಿಶ್ಚಯವಾಗುತ್ತದೆ'.

ತಮ್ಮ ಕೃಪಾಕಾಂಕ್ಷಿ
[ಸಹಿ] ರಾಮಚಂದ್ರ ವಿನಾಯಕ ಸಹಸ್ರಬುದ್ಧೆ.

೦ ೦ ೦ ೦

[ಪತ್ರ ಸಂ. ೨]

॥ ಶ್ರೀಗುರು ಪ್ರಸನ್ನ ॥

ಪುಣೆ ೩೦ ೩ ೪೩

ಶ್ರೀಗಜಾನನ ಮಹಾರಾಜ ಇವರ ಸೇವೆಗೆ,

ತಮ್ಮ ಇಲ್ಲಿಯ ಜನರಿಗೆ ಬಂದ ಪತ್ರಗಳು ನೋಡಲಿಕ್ಕೆ ಸಿಕ್ಕಿದವು. ತಮ್ಮ ಪತ್ರ ಅಂದರೆ ಸದ್ಗುರುಗಳ ಆಶೀರ್ವಾದವೇ ಎಂದು ತಿಳಕೊಳ್ಳುವವರ ಪೈಕಿ ನಾನೊಬ್ಬನಿದ್ದೇನೆ.

ಈ ಹದಿನೈದು ದಿನಗಳಲ್ಲಾದರೂ ಅತ್ಯಾನಂದವು ಲೂಟಾಯಿಸಲಿಕ್ಕೆ ಸಿಕ್ಕಿತು. ಪೂರ್ಣ ಧ್ಯಾನಕಾಲಕ್ಕೆ ಪ್ರಕಾಶದ ಜ್ಯೋತಿಯೊಳಗೆ ಶ್ರೀಜ್ಞಾನೇಶ್ವರ

ಮಹಾರಾಜರು, ಶ್ರೀದತ್ತಾತ್ರೇಯ ಇವರದು ಸಂಪೂರ್ಣವಾಗಿ ದರ್ಶನವಾಯಿತು. ಎರಡು ದಿನಗಳ ಹಿಂದೆ ನಾನು ಧ್ಯಾನವನ್ನು ವಿಸರ್ಜನ ಮಾಡಿ ಅಡ್ಡ ಆದೆ. ಇಷ್ಟರಲ್ಲಿ ಒಂದು ನಾಗರಹಾವು ಬಂದು ನನ್ನಮುಂದೆ ನಿಂತಿತು ತನ್ನ ಹೆಡೆಯನ್ನು ನನ್ನ ಕಡೆಗೆ ಮಾಡಿ ಅದು ನೋಡುತ್ತಾ ಇತ್ತು. ನಾನೂ ಬಹಳ ಉತ್ಸುಕತೆಯಿಂದ ಅದರ ಕಡೆಗೆ ನೋಡುತ್ತಾ ಇದ್ದೆನು. ಆಗ ತಾವು ಹೇಳಿದ ಸಂಗತಿಯು ನೆನಪಿಗೆ ಬಂತು. ಹಠಯೋಗದಿಂದ ಕುಂಡಲಿನಿ ಜಾಗೃತವಾದರೆ ನಾಗರಹಾವಿನ ದರ್ಶನವು ಭಯೋತ್ಪಾದಕವಿರುವದು; ಆದರೆ ಧ್ಯಾನಯೋಗದಿಂದ ದರ್ಶನ ಪ್ರಾಪ್ತವಾದರೆ ಅದು ಅತ್ಯಂತ ಮನೋಹರವಿರುವದು. ಇದರದೇ ಪ್ರತ್ಯಯವು ತಮ್ಮ ಕೃಪೆಯಿಂದ ಬಂತು.

ನಿನ್ನೆ ತಾ. ೨೯-೩-೪೭ ನೇ ದಿನ ರಾತ್ರಿ ಹತ್ತರಿಂದ ಹತ್ತೂವರೆ ತನಕ ವಿನೋದಕರ ಅನುಭವವು ಬಂತು. ಮೊದಲು ದೇವರ ಹತ್ತಿರ ಧ್ಯಾನಕ್ಕೆ ಕೂತಿರುವಾಗ ಒಬ್ಬ ಬ್ರಹ್ಮಚಾರಿ ಬಿಳುಪು ರೇಶ್ಮೆವಸ್ತ್ರವನ್ನು ಉಟ್ಟು ಭಸ್ಮಾಂಕಿತ ಶರೀರನಾಗಿ ಕೊರಳೊಳಗೆ ಯಜ್ಞೋಪವೀತ ಉಳ್ಳವನಾಗಿ ನನ್ನಮುಂದೆ ಕೂತಿದ್ದು ಕಂಡೆನು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಶುಕ್ರನ ಪ್ರಕಾಶದಂತೆ ಅತ್ಯಂತ ತೇಜಸ್ವಿ ಪ್ರಕಾಶವು ನನ್ನ ಎಡಗೈಯಲ್ಲಿ ಬಂದಿದ್ದು ನಾನು ಮೂರು ನಾಲ್ಕು ಸೆಕೆಂಡ ಪರ್ಯಂತ ನೋಡಿದೆ. ಆ ವೇಳೆಗೆ ಮನಸ್ಸು ಪ್ರಸನ್ನವಾಗಿತ್ತು.

ತಮ್ಮ ಕೃಪೆಯಿಂದಲೇ ಈ ಎಲ್ಲಾ ಅನುಭವಗಳು ಬರುತ್ತಿರುತ್ತವೆ.

ತಮ್ಮ ನಮ್ರ ಸೇವಕ
(ಸಹಿ) ರಾಮಚಂದ್ರ ಶಿವರಾಮ ಸಹಸ್ರಬುದ್ಧ.

o o o o o

[ ಪತ್ರ ನಂ. ೨ ]

ಶ್ರೀ

ಕೇಸರಿ ಕಚೇರಿ, ಪುಣೆ ೨
ತಾ. ೯-೭-೧೯೪೭

ಶ್ರೀಯವರ ಚರಣಗಳಲ್ಲಿ ಶಿರಸಾಷ್ಟಾಂಗ ನಮಸ್ಕಾರ ವಿ. ವಿ.

o o o o

ತಮ್ಮ ಕೃಪೆಯಿಂದ ಈ ವರ್ಷದಲ್ಲಿ ಬಹಳ ಅನುಭವಗಳು ಬಂದವು. ಅವುಗಳ ಪೈಕಿ ನಾಲ್ಕೈದು ಮಹತ್ವದ್ದು ಇವೆ.

(೧) ಶ್ರೀಕಾಳಿಮೂರ್ತಿಯ ಪ್ರತ್ಯಕ್ಷ ದರ್ಶನ; ಆದರೆ ಇದು ಸ್ವಪ್ನ ಸ್ವರೂಪದಿಂದ ಆಯಿತು. ಹಸ್ತಮೇಲೆ ರೀತಿಯದು ಹಸಿರು ಸೀರೆ ಉಟ್ಟು, ಸರ್ವಾಲಂಕಾರಭೂಷಿತಳಾಗಿರುವ ಕಾಳಿಯ ಮೂರ್ತಿದರ್ಶನವು ಮಧ್ಯಾಹ್ನಕ್ಕೆ ಓದುತ್ತಾ ಇರುವಾಗ ಕಲಕತ್ತೆಯಲ್ಲಿ ನಾನು A. R. P ಶಿಕ್ಷಣ ತಕ್ಕೊಳ್ಳಲಿಕ್ಕೆ ಹೋದಾಗ ಆಗಸ್ಟ ೧೯೪೨ರಲ್ಲಿ ಆಯಿತು. ತಕ್ಷ ಶ್ರೀಗುರು ಮಚ್ಛೀಂದ್ರನಾಥ ಗೋರಕ್ಷನಾಥ ಇವರದೂ ದರ್ಶನವಾಯಿತು. ಆ ವೃತ್ತಾಂತವು ಮನೋರಂಜಕವಾಗಿರುವದರಿಂದ ಕೆಳಗೆ ಕೊಡುತ್ತೇನೆ. ರಾತ್ರಿಹೊತ್ತಿಗೆ ನಾನು ಅರ್ಧನಿದ್ರೆಯಲ್ಲಿರುತ್ತಿರುವಾಗ ಎರಡು ಮೂರು ಪ್ರಾಯಸ್ಥರು ನನ್ನ ಸಮೀಪದ ಇದ್ದದ್ದನ್ನು ಕಂಡೆ. ಅವರಲ್ಲಿ ಒಬ್ಬನು ಹಿರಿಯದರ್ಜೆಯವನು ಸ್ವಲ್ಪ ವ ಗಡುತರನಾಗಿದ್ದನು. ಮತ್ತೊಬ್ಬನು ಕಿರಿಯವನಿದ್ದನು. ನಾನು ಸ್ವಲ್ಪ ಗಾಬರಿಯಾದೆ ಆದರೆ ಶ್ರೀಗುರುವಿನ ಹೆಸರು ತಕ್ಕೊಂಡು, ಇವರಮೇಲೆ ಸಿಟ್ಟು ತೋರಿಸಿ 'ಚಲೇಜಾವ' ಎಂದು ಅಂದೆನು ಇದರಿಂದ ಆ ಗೃಹಸ್ಥನು ತನ್ನಿಂದ ಚಲಿಸಲಿ? ಆಗ ನಾನು ಪ್ರಸಾದ ತರೇ ಹೇಳಿದ ಮಂತ್ರಗಳನ್ನು ಉಚ್ಚರಿಸಿದ ಆಗ ಆ ಹಿರಿಯನ ಪೈಕಿ ಒಬ್ಬನು ನಕ್ಕನು. ಅವನಂದನು 'ನೀನು ಶ್ರೀಗುರುಗಳಿಗೆ ಕರೆಯುತ್ತಿರುವ ಮಿತ್ರನಿಗೆ ಕರೆ. ನಾವು ಇಲ್ಲಿಂದ ಹೋಗುವದಿಲ್ಲ.' ಇದನ್ನು ಕೇಳಿ ನಾನು ಸ್ವಲ್ಪ ಗೊಂದಲದೊಳಗೆ ಬಿದ್ದೆ. ಮತ್ತು ಈ ಮುಂದಿ ಪೇಚಿಪ್ರಕಾರವೇ ಎಂದ ನನ್ನ ಮನಸ್ಸಿಗೆ ನಿಶ್ಚಯವಾಗುವಷ್ಟರಲ್ಲಿ, ಅವರಪೈಕಿ ಒಬ್ಬನು ನಕ್ಕು ನನಗಂದನು, 'ಇವರು ಗೋರಕ್ಷನಾಥ (ಗಡುತರ ಹಿರಿಯವರು) ಇದ್ದಾರೆ; ಮತ್ತೊಬ್ಬರು ಮಚ್ಛೀಂದ್ರನಾಥರಿದ್ದಾರೆ ಇವರು ನಿನ್ನ ಹತ್ತಿರ ಕಾಯಮ ಇರುವವರಿದ್ದಾರೆ. ಅನಂತರ ನಾನು ಅವರಿಗೆ ನಮಸ್ಕಾರ ಮಾಡಿದೆನು; ಹಾಗೆಯೇ ಅವರು ಹೋದರು. ಈ ಸಂಗತಿ ತಾ. ೨೧-೮-೪೨ ನೇ ದಿನ ಆಯಿತು. ಇದರ ಮುಂದೆ ಎರಡೆ ದಿನಗಳಲ್ಲಿ ನನ್ನ ಘೋಗಾಂವಿಗೆ ನಾವು ಹೋಗುತ್ತೇವೆ, ಎಂದು ಹೇಳಿ ಅವರು ಹೋದರು. ಈ ಸಂಗತಿಯು ಆಶ್ಚರ್ಯಪಡುವ ರೀತಿಯಲ್ಲಿ ಆಯಿತು ಒಂದು ಸನ್ಯಾಸ ತಕ್ಕೊಂಡ ಭವ್ಯಮೂರ್ತಿಯು ನನ್ನ ಹತ್ತರ ನಿಂತು ನಾವು ಹೋಗುತ್ತೇವೆ ಎಂದು ಅಂದನು. ನಾನು ಅವರಿಗೆ ನಮಸ್ಕಾರ ಮಾಡಿ ಮಾರ್ಗವನ್ನು ತೋರಿಸಿದೆ.

(೨) ಅನೇಕ ದೇವತೆಗಳ ದರ್ಶನ ಕೆಲವು ಜಾಗೃತದಲ್ಲಿ ಕೆಲವು ಸ್ವಪ್ನಾವಸ್ಥೆಯಲ್ಲಿ ಆಯಿತು.

(೩) ಶ್ರೀಅಕ್ಕಲಕೋಟೆ ಮಹಾರಾಜರ ದರ್ಶನವು ಸ್ವಪ್ನಸ್ಥಿತಿಯಲ್ಲಿ ಆಯಿತು.

(೪) ಧ್ಯಾನದ ವೇಳೆಯಲ್ಲಿ ಬಾಲಸೂರ್ಯನು ಹುಟ್ಟುವದರ ದರ್ಶನವು ಹೋದ ನೋಡುವಾರ ಆಯಿತು.

(೫) ವಿಶೇಷ ಮಹತ್ವದ ದರ್ಶನವು ಕುಂಡಲಿನಿದು ಆಯಿತು. ಈ ಸಂಗತಿಯು ಧ್ಯಾನಕ್ಕೆ ಕೂತಿರುವಾಗ ಆಯಿತು. ಧ್ಯಾನ ಸುರುವಾದ ಸ್ವಲ್ಪ ಹೊತ್ತಿನಲ್ಲಿ ಮೂಲಾಧಾರದಿಂದ ನಾಭಿಕಮಲ ಈ ಭಾಗದಲ್ಲಿ ಶ್ರೀಬ್ರಹ್ಮದೇವರು ಸರ್ವ ಮುಖಗಳ ಸಹಿತ ಮತ್ತು ಕಮಲದಮೇಲೆ ಅಧಿಷ್ಠಿತರಾಗಿ ಉತ್ತಮವಾಗಿ ಕಾಣಿಸಿದರು.

ತಮ್ಮ ಕೃಪಾಭಿಲಾಷಿ,
(ಸಹಿ) ರಾ. ಶಿ. ಸಹಸ್ರಬುದ್ಧೆ.

— ೪೪ —

ಶ್ರೀ ಡಿ. ಎಸ್. ಪೋಹಿತೆ, ಬಿ. ಎ. ಬಿ. ಟಿ. ಶಿಕ್ಷಕ ನಾಶಿಕ ಇವರ ಅನುಭವಗಳು :—

ಶನಿವಾರ ತಾರೀಖು ७೧ ನೊವೆಂಬರ ೧೯೪೩ ನೇ ದಿನ ನಾನು ನಾಶಿಕ ನಗರ ವಾಚನಾಲಯುದೊಳಗಿಂದ ಸಹಜವಾಗಿ 'Light on the Path of Self-realisation' ಈ ಪುಸ್ತಕವನ್ನು ಓದಲಿಕ್ಕೆ ತಕ್ಕೊಂಡೆನು. ಇತರ ಧರ್ಮಗ್ರಂಥಗಳಂತೆ ಈ ಗ್ರಂಥವೂ ಧರ್ಮವಿಷಯಕ ವ್ಯಾಖ್ಯಾನಗಳ ದ್ವಾರದಿಂದ ಬೋಧಾಮೃತವನ್ನು ಕೊಟ್ಟೀತು, ಮತ್ತು ನಾಲ್ಕಾರು ಉಪದೇಶಗಳು ಹೀಗೆ ಮಾಡಿರಿ ಹಾಗೆ ಮಾಡಿರಿ, ಎಂದು ಕಲಿಸಿತು ಇಷ್ಟೇ ನನ್ನ ಅಪೇಕ್ಷೆ ಇತ್ತು. ಬಹುತೇಕ ಧರ್ಮಗ್ರಂಥಗಳಲ್ಲಿ ಪೂರ್ವಕಾಲದ ಸಂಗತಿಗಳು ಓದಲಿಕ್ಕೆ ಶಿಗುತ್ತವೆ ಮತ್ತು ಆಪ್ರಕಾರ ಆಚರಿಸಲಿಕ್ಕೆ ಮುಮುಕ್ಷುಗಳಿಗೆ ಬುದ್ಧಿ ಬರುತ್ತದೆ. ಆದರೆ ಆಚರಣೆಯಲ್ಲಿ ಅನೇಕ ಸಂಶಯುಗಳು ಮತ್ತು ಅಡಚಣೆಗಳು ಉತ್ಪನ್ನವಾಗುತ್ತವೆ; ಆದರೆ ಅವನ್ನು ನಿವಾರಣೆ ಮಾಡತಕ್ಕ ಸದ್ವ್ಯಕ್ತಿಗಳುಮಾತ್ರ ಜೀವಂತ ಇರುವದಿಲ್ಲ. ಆಮೂಲಕ ಮನಸ್ಸಿನಲ್ಲಿದ್ದರೂ ಸಂಶಯ ಮತ್ತು ಅಡ್ಡಿಗಳು ಉತ್ಪನ್ನವಾಗುತ್ತಲೇ ಮನಸ್ಸು ವ್ಯಗ್ರವಾಗುತ್ತದೆ, ಅಭ್ಯಾಸದಲ್ಲಿ ಚಂಚಲತೆ ಸುರುವಾಗುವದು. ನನ್ನ ದಾದರೂ ಹೀಗೆ ಸ್ಪಷ್ಟ ಅನುಭವವಿದೆ. ಮೇಲೆ ಹೇಳಿದ ಗ್ರಂಥವನ್ನು ಓದಿದಂದಿನಿಂದ ಮಾತ್ರ ಬೇರೆಯೇ ಅನುಭವ ಬಂತು. ಶ್ರೀಗಜಾನನ ಮಹಾರಾಜರಂಥಾ ಶ್ರೇಷ್ಠ ವ್ಯಕ್ತಿಯು ಈ ನಾಶಿಕದಲ್ಲಿಯೇ ವಾಸ ಮಾಡುತ್ತಿದೆ, ಮತ್ತು ಅನೇಕ ಜನರು ಅವರ ಶಿಷ್ಯತ್ವವನ್ನು ಅಂಗೀಕರಿಸಿ ಸಾಕ್ಷಾತ ಅನುಭವಗಳನ್ನು ತಕ್ಕೊಳ್ಳುತ್ತಿದ್ದಾರೆ, ಇದನ್ನು ಓದಿ ನನ್ನ ಮನಸ್ಸಿನಮೇಲೆ ಅತಿಶಯ ಪರಿಣಾಮವಾಯಿತು. ಇಷ್ಟಾಯಿತಲ್ಲ, ಎರಡೇ ದಿನಗಳಲ್ಲಿ ನಾನು ಪುಸ್ತಕದ ವಾಚನವನ್ನು ಮುಗಿಸಿದೆನು. ಹಾಗು ಮಹಾರಾಜರ ದರ್ಶನ ತಕ್ಕೊಳ್ಳಬೇಕೆಂಬ ನನ್ನ ತಳಮಳವು ವೃದ್ಧಿಯಾಗುತ್ತ ನಡೆಯಿತು ಮೂರನೆ ದಿನವೇ ನಾನು ಮಂದಿಗೆ ಕೇಳುತ್ತಾ ಕೇಳುತ್ತಾ

ಶ್ರೀಯವರ ಚರಣ: ಳಲ್ಲಿ ಪ್ರಾಪ್ತನಾದೆನು. ಪ್ರಥಮ ಭೆಟ್ಟಿಯಲ್ಲಿಯೇ ಅ~ರ ಪ್ರೇಮಳ ಸರಳ ವ ಸಾಮಾನ್ಯತರದ ನಡತೆಯಿಂದ ನನ್ನ ಅಂತಃಕರಣದ ಮೇಲೆ ಒಳ್ಳೇ ಪರಿಣಾಮವಾಯಿತು. ಮುಂಜಾನೆ ಸಂಜೆಗೆ ಅವರ ಭೆಟ್ಟಿ ತಕ್ಕೊಂಡ ವಿನಹಾ ಸಮಾಧಾನವಾಗಲಾರದು. ಮಹಾರಾಜರು ಆಜಾರಿ ಇದ್ದರೂ ಆಗಾಗ್ಗೆ ನಾನು ಅವರ ಹತ್ತರ ಕೂತುಕೊಂಡು ನನ್ನ ಮನಸ್ಸಿನ ಚಡಪಡಿಕೆಯನ್ನು ಅವರಿಗೆ ನಿವೇದಿಸಿದೆ. ಕಡೆಗೆ ಸೋಮವಾರ ತಾ. ೩೦-೧೧-೪೨ ನೇ ದಿವಸ ಅವರು ಕೃಪೆಮಾಡಿ ನನಗೆ ಅನುಗ್ರಹವನ್ನು ಕೊಟ್ಟರು. ಆಹೊತ್ತಿನ ನನ್ನ ಅನುಭವವು ನನಗೆ ಒಳ್ಳೆ ಚಮತ್ಕಾರಿಕವೆನಿಸಿತು.

ಮಹಾರಾಜರು ಯಾವಾಗಲೂ ಖಾಟ (ಮಂಚ) ದ ಮೇಲೆ ಕೂತಿರುತ್ತಾರೆ. ಅವರ ಸಮೀಪದ ಖುರ್ಚಿಯ ಮೇಲೆ ಅವರು ನನಗೆ ಕೂಡ್ರಲಿಕ್ಕೆ ಹೇಳಿದರು. "ನಾನು 'ಸೋಹಂ' 'ಸೋಹಂ' ಅನ್ನುತ್ತೇನೆ; ನೀನೂ ಮನಸ್ಸಿನಲ್ಲಿಯೇ 'ಸೋಹಂ' 'ಸೋಹಂ' ದ ಜಪವನ್ನು ಸುರುಮಾಡು" ಎಂದು ನನಗೆ ಅವರು ಹೇಳಿದರು. ಆ ಪ್ರಕಾರ ನಾನು ಜಪಕ್ಕೆ ಆರಂಭಿಸಿದೆ. ಮೂರು ನಾಲ್ಕು ಮಿನಿಟುಗಳಲ್ಲಿ ನನ್ನ ಕಣ್ಣುಗಳು ತಮ್ಮಷ್ಟಕ್ಕೆ ಮುಚ್ಚಿಹೋದವು. ಎಲ್ಲ ಕಡೆಯಲ್ಲಿಯೂ ಅಂಧಕಾರವಾಯಿತು. ನಾನು ಮೇಲೆ ಮೇಲಕ್ಕೆ ಹೋಗುತ್ತೇನೆ ಎಂಬಂತೆ ಅನಿಸಿತು. ನಾಲಿಗೆ ಭಾರವಾಯಿತು, ಮತ್ತು ಒಳಗೆ ಎಳೆಯಲ್ಪಟ್ಟಿತು. ಬೆನ್ನೆಲುಬಿನಲ್ಲಿ ಬೇರೆ ಬೇರೆ ಸ್ಥಾನಗಳಲ್ಲಿ ಮಿಂಚು ಬಡದಂತೆ ಹೊಡತಗಳು ಬೀಳಹತ್ತಿದವು ತಲೆಯೊಳಗೆ ಗಡಬಡಿಯಾಗಹತ್ತಿತು. ಈ ಸ್ಥಿತಿಯು ಎಷ್ಟು ಹೊತ್ತು ತನಕ ಇತ್ತೆಂಬದರ ಅರಿವೇ ನನಗಿದ್ದಿಲ್ಲ. ಆದರೆ ಸ್ವಲ್ಪವೇ ಹೊತ್ತಿನಲ್ಲಿ ಶ್ರೀಯವರು ನನಗೆ ಕರೆಯಲಿಕ್ಕೆ ಆರಂಭಿಸಿದರು. ನನಗೇನೂ ಕೇಳಿಸಲಿಲ್ಲ. ಕಡೆಗೆ ಅವರು ನನ್ನನ್ನು ಜೋರಿನಿಂದ ಅಲ್ಲಾಡಿಸಿದರು. ಅದರ ಕೂಡ ಶ್ರೀಸದ್ಗುರುಗಳ ತೇಜಸ್ವಿಯಾದ ರೂಪವು ನನಗೆ ಕಾಣಿಸಿತು. ಸ್ವಲ್ಪಹೊತ್ತಿನಲ್ಲಿ ನಾನು ಪೂರ್ಣ ಜಾಗೃತನಾದೆ. ಮನಸ್ಸಿಗೆ ಮಾತ್ರ ಒಂದು ಪ್ರಕಾರದ ಶಾಂತಿಯಾಯಿತು. ಆ ದಿವಸವು ಅತಿ ಆನಂದದಿಂದ ಕಳೆಯಿತು ಅಲ್ಪ ಶರೀರಯಷ್ಟಿ ಇರುವ ಶ್ರೀಯವರ ದೇಹದಲ್ಲಿ ಎಷ್ಟು ದೊಡ್ಡ ಶಕ್ತಿಯು ವಾಸಿಸುತ್ತದೆ ಎಂಬದರಂದು ನನಗೆ ನಿಶ್ಚಯವಾಯಿತು ಮತ್ತು ನನ್ನ ವಿಶ್ವಾಸವು ದೃಢವಾಯಿತು. ಪ್ರತಿದಿನ ಮುಂಜಾನೆ ಸಂಜೆಗೆ ಹತ್ತು ಹತ್ತು ಮಿನಿಟು ಜಪಮಾಡುವ ಆಜ್ಞೆಯಾಯಿತು.

ಅವರ ಮಾತಿನ ಮೇಲೆ ವಿಶ್ವಾಸವಿಟ್ಟು ನಾನು ಜಪಕ್ಕೆ ಆರಂಭಮಾಡಿದೆ. ಶ್ರೀಸದ್ಗುರುಗಳು ಉಪದೇಶ ಮಾಡಿದಲಾಗಾಯತು ಹದಿನೈದು ಹದಿನಾರು ದಿವಸಗಳಲ್ಲಿ ನನಗೆ ನಾನಾವಿಧದ ಅನುಭವಗಳು ಬಂದವು. ಆ ಕಾರಣ ಅವರಮೇಲೆ ನನ್ನ ಶ್ರದ್ಧೆಯು ದಿನೇ ದಿನೇ ಬೆಳೆಯುತ್ತ ಹೋಯಿತು. ಈ ಅನುಭವಗಳ ಯೋಗ್ಯವಾದ ಪರಿಣಾಮವು ನನ್ನ ವೃತ್ತಿಯಲ್ಲಿಯೂ ಕಾಣಬಂತು. ವಿಶೇಷ

ವೆಂದರೆ ನನ್ನ ಆಯುಷ್ಯವು ನನಗೆ ಶುಷ್ಕವಾಗಿ ತೋರುತ್ತಿತ್ತು. ಅನೇಕ ಸಂಕಟಗಳು ಬಂದು ನನ್ನ ಪರಿಸ್ಥಿತಿಯು ತೀರಾ ಕೆಟ್ಟದ್ದಾಗಿತ್ತು. ಉಚ್ಚಕುಲದಲ್ಲಿ ಮತ್ತು ಉತ್ತಮಸ್ಥಿತಿಯಲ್ಲಿ ಜನ್ಮಕ್ಕೆ ಬಂದಿದ್ದರೂ ನನ್ನ ವಯಸ್ಸಿನ ಇಪ್ಪತ್ತೈದನೇ ವರ್ಷದೊಳಗೆಯೇ ನಾನು ಒಬ್ಬನೇ ಆದೆ. ನನ್ನವರೆಂತ ನನ್ನ ಸಮೀಪದ ಸಂಬಂಧಿಕರು ಯಾರೂ ಉಳಿಯಲಿಲ್ಲ. ಆ ಮೂಲಕ ನನ್ನ ಆಯುಷ್ಯವೇ ನನಗೆ ಬೇಡೆನಿಸಿತು. ಆದರೆ ಈಗ ಅದೇ ಸ್ಥಿತಿಯು ಸಮಾಧಾನಕರವೆನಿಸುವದು. ಸಂಕಟಗಳು ಮನುಷ್ಯನನ್ನು ಉನ್ನತಸ್ಥಿತಿಕಡೆಗೆ ಒಯ್ಯುತ್ತವೆ, ಎಂಬದೆ ನಿಜವಾದದ್ದು. ನನ್ನ ಆಯುಷ್ಯಕ್ಕೆ ಒಂದು ಹೊಸ ಗುರಿಯು ಪ್ರಾಪ್ತವಾಯಿತು. ನಾನು ಒಬ್ಬನೇ ನಿರಾಧಾರಿ ಇದ್ದೇನೆ ಎಂಬ ಈ ಭಾವನೆಯು ನಷ್ಟವಾಗಿ, ನನ್ನ ಸಂಕಟ ನಾಶ ಮಾಡುವವನು ಈಗ ನನ್ನ ಸಮೀಪ ಯಾವಾಗಲೂ ಜಾಗೃತನಿದ್ದಾನೆ, ಎಂಬ ಭಾವನೆಯು ನಿರ್ಮಾಣವಾಗಿ ನಾನು ನಿರ್ಭಯ ವ ಸಮಾಧಾನ ವೃತ್ತಿಯವನಾಗುತ್ತ ಬಂದೆ. ಇದರ ಶ್ರೇಯವೆಲ್ಲ ಶ್ರೀಸದ್ಗುರು ಕೃಪೆಗೆ ಇರುವದು.

ಇದೇ ಸ್ಥಳದಲ್ಲಿ ಒಂದು ವಿಶೇಷ ಅನುಭವವನ್ನು ನಮೂದಿಸಬೇಕೆಂತ ಅನಿಸುವದು. ೧೭ನೇ ಅಗಸ್ಟ ೧೯೪೨ ನೇಯಸ್ಟಕ್ಕೆ ನಾನು ಮಿಲಿಟರಿ ಡಿಪಾರ್ಟಮೆಂಟಿಗೆ ಸಿನಿಯರ ಕ್ಲಾರ್ಕದ ಜಾಗೆಗೆ ಅರ್ಜಿ ಮಾಡಿದ್ದೆನು. ಪೂರ್ವದ ಸರಕಾರಿ ನೌಕರಿಯ ಅನುಭವವು ಮತ್ತು ಇತರ ಜಬಾಬದಾರ ಜಾಗೆಗಳ ಅನುಭವಗಳನ್ನು ಅದರಲ್ಲಿ ಬರೆದಿದ್ದೆನಾದ್ದರಿಂದ ನನಗೆ ಆ ಜಾಗೆಯು ಸಿಕ್ಕೀತೆಂಬ ಆಶೆಯಿತ್ತು. ಆದರೆ ಅದರ ಉತ್ತರವು ೨೬ ಅಕ್ಟೋಬರ ಪರ್ಯಂತ ಬಂದಿಲ್ಲ. ಇದರ ಮೇಲಿಂದ ನನ್ನ ನೇಮಣೂಕಿ ಆಗುವದಿಲ್ಲವೆಂತ ನಾನು ತಿಳಿದೆ. ಅನಂತರ ದಿವಾಳಿಯ ಸೂಟಿಯಲ್ಲಿ ನಾನು ಮುಂಬಯಿಗೆ ಹೋದೆನು. ಸೊವ್ಹೆಂಬರ ೧೯೪೨ ನೇ ಸುಮಾರಕ್ಕೆ ನಾಶಿಕ ಪತ್ತೆಯ ಮೇಲೆ ನನ್ನ ನೇಮಣೂಕಿಯ ಪತ್ರ ಬಂತು. ಆದರೆ ಮನೆ ಮಾಲಿಕನಿಗೆ ನನ್ನ ಮುಂಬಯಿ ಪತ್ತೆ ಗೊತ್ತಿಲ್ಲದ್ದರಿಂದ ಆ ಪಾಕೀಟ ಅಲ್ಲೇ ಉಳಿಯಿತು. ೧೬ ನೇ ನೊವ್ಹೆಂಬರ ೧೯೪೨ ನೇ ದಿನ ನಾನು ನಾಶಿಕಕ್ಕೆ ತಿರುಗಿ ಬಂದೆ. ಆದರೆ ೩ನೇ ಡಿಶೆಂಬರ ೧೯೪೨ ರ ತನಕ ಮನೆ ಮಾಲಕನಿಗೆ ಆ ಪತ್ರವನ್ನು ನನಗೆ ಕೊಡಬೇಕೆಂಬ ಬುದ್ಧಿ ಬರಲಿಲ್ಲ ಆದಿನ ಅವರು ತಮ್ಮ ಮೇಜಿನ ಖಣವನ್ನು ತೆರೆದಾಗ ಆ ಪತ್ರವನ್ನು ಕಂಡರು. ನಾನು ಅಲ್ಲೆ ಹಾಜರಿದ್ದೆ ಎಂದು ಆ ಪತ್ರವು ನನ್ನ ಕೈಗೆ ಸಿಕ್ಕಿತು. ಪತ್ರವನ್ನು ತೆರೆದು ನೋಡಿದರೆ ನನಗೆ ಮುಂಬೈಯಲ್ಲಿ ಸಿನಿಯರ ಕ್ಲಾರ್ಕನೆಂದು ೩೨೦ ರೂಪಾಯಿ ಪಗಾರಿನ ಮೇಲೆ ನೇಮಿಸಿರುವ ಹುಕುಮು ಮತ್ತು ಅದರಲ್ಲಿಯೇ ಅರ್ಜದಾರನು ಏಳು ದಿನಗಳಲ್ಲಿ ಹಾಜರಾಗಬೇಕೆಂತ ಇತ್ತು. ಆ ಪತ್ರ ನೋಡಿ ನಗಬೇಕೊ ಅಳಬೇಕೊ ಎಂಬದು ತಿಳಿಯದು. ಆದರೆ ಆ ನೌಕರಿಯು ಕೈಯಿಂದ ತಪ್ಪಿತೆಂತ ನನಗೆ ಸ್ವಲ್ಪವಾದರೂ ಕೆಟ್ಟದ್ದು ಅನಿಸಲಿಲ್ಲ. ಏನೂ ಆಗಲಿಲ್ಲವೆಂಬ ಶಾಂತ ಭಾವನೆಯಿಂದ ನಾನು ಆ ಪತ್ರವನ್ನು

ಹರಿದು ಚೂರುಮಾಡಿ ಬೀಸಾಡಿದೆನು. ಒಮ್ಮೆ ನನಗೆ ಆ ಕಾರಣದಿಂದ ಎಷ್ಟು ನಿರಾಶೆಯಾಗುತ್ತಿತ್ತು. ಇದೇ ಪತ್ರವು ಶ್ರೀಯವರ ಭೆಟ್ಟಿಯಾಗುವ ಮೊದಲು ನನ್ನ ಕೈಯೊಳಗೆ ಸಿಕ್ಕಿದ್ದಾದರೆ ನನ್ನ ಆಯುಷ್ಯಕ್ಕೆ ಬೇರೆಯೇ ಗತಿಯಾಗುತ್ತಿತ್ತು, ಮತ್ತು ಸುಖದುಃಖದ ಸುಳಿಯೊಳಗೆ ಬಿದ್ದು ಸಾಯಲಿಕ್ಕೆ ಆಗುತ್ತಿದ್ದೆ. ಆದರೆ ನನ್ನ ಸರ್ವ ಪುಣ್ಯವೆ ಬಲವತ್ತರ ಅನ್ನಬೇಕು ಯಾಕಂದರೆ ಆ ಪತ್ರವು ಪಾಲಕನ ಕಡೆ ಬಿದ್ದಿರಬೇಕು, ಅಷ್ಟರಲ್ಲಿ ನನಗೆ ಶ್ರೀಯವರ ದರ್ಶನವಾಗಬೇಕು; ಹೀಗೆ ಯೋಗಾಯೋಗವು ವಿಲಕ್ಷಣರೀತಿಯಿಂದ ಬರುವದೆಂಬ ಮಾತು ಸತ್ಯವು.

ಶ್ರೀಯವರ ಕೃಪಾಪ್ರಸಾದದಿಂದ ನನಗೆ ಸ್ವಲ್ಪವೇ ದಿವಸಗಳಲ್ಲಿ ಯಾವ ಅನುಭವಗಳು ಬಂದಿದ್ದವೊ ಅವನ್ನು ನಿವೇದಿಸುವೆನು.

ಬುಧವಾರ ತಾ. ೨–೨–೧೯೪೨ ನೇ ದಿವಸ ನಸುಕಿನ ಮೂರುವರೆ ಹೊಡಿಯುವಾಗ ನಾನು ಎಚ್ಚರನಾದೆನು. ಮುಖ ಹಸ್ತಪಾದಪ್ರಕ್ಷಾಳನೆಯನ್ನು ಮಾಡಿ, ಮಲಗಿದ್ದಲ್ಲೆ ನಾನು ಜಪವನ್ನು ಸುರುಮಾಡಿದೆನು. ಸ್ವಲ್ಪ ವೇಳೆಯಲ್ಲಿ ಜಪವನ್ನು ಯಾರೊ ಹೃದಯದಲ್ಲಿ ಅನ್ನುತ್ತಾರೆ ಎಂಬಂತೆ ಕೇಳಿಸಿತು. ನಾನು ಅದನ್ನು ಲಕ್ಷಪೂರ್ವಕ ಕೇಳಹತ್ತಿದೆ. ಹೃದಯದಲ್ಲಿ ಸಹಜವಾಗಿ ಆಗುವ ಜಪವನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಆನಂದವೂ ಆಯಿತು ಐದು ಮಿನಿಟುಗಳಲ್ಲಿ ಆ ಧ್ವನಿಯಾಗುವ ಸ್ಥಾನವು ಸರಿಯುತ್ತಾ ಹೋಗಿ ನಾಭಿಕಮಲದ ಪರ್ಯಂತ ಹೋಗಿ ನಿಂತಿತು, ಮತ್ತು ಅಲ್ಲಿಂದ ನಾದವು ಕೇಳಲಾಯಿತು. ನಾನು ಬರೇ ಸಾಕ್ಷಿಯಾಗಿ ಕೇಳುತ್ತಿದ್ದೆನು. ಆದಿನ ಶೀತವು ಬಹಳವಿತ್ತು, ಮತ್ತು ಒಂದೇ ಬದಿಯಮೇಲೆ ನಾನು ಬಹಳ ಹೊತ್ತು ಮಲಗಿದ್ದರಿಂದ ಮೈ ನೋಯಿಸಲಿಕ್ಕೆ ಹತ್ತಿತು, ಎಂದು ತಿರುಗಿದೆನು. ಕೂಡಲೆ ಆ ಧ್ವನಿಯು ನಿಂತುಹೋಯಿತು. ಆ ಕಾಲದಲ್ಲಿ ನನ್ನ ಮನಸ್ಸು ಅತ್ಯಂತ ಶಾಂತವಾಗಿತ್ತು; ಮತ್ತು 'ಸೋಹಂ'ದ ಹೊರ್ತು ಮತ್ಯಾವದರದೂ ನನಗೆ ಅರಿವು ಇರಲಿಲ್ಲ ಆ ದಿವಸ ಪುನಹಾ ನನಗೆ ನಿದ್ರೆ ಯಾವಾಗ್ಗೆ ಬಂತು ಎಂಬದು ಗೊತ್ತಾಗಲಿಲ್ಲ.

ಗುರುವಾರ ತಾ. ೧೦–೧೨–೧೯೪೨ ನೇ ದಿನ ನಸುಕಿಗೆ ಐದು ಹೊಡಿಯುವಾಗ ನಾನು ಎಚ್ಚರನಿದ್ದೆ. ಇಪ್ಪತ್ತು ಮಿನಿಟುಗಳಲ್ಲಿಯೇ ಕಣ್ಣುಗಳಮೇಲೆ ಮುಚ್ಚಿದಂತೆ ಆಯಿತು. ಕಣ್ಣುಗಳು ಅರ್ಧ ತೆರೆದಿದ್ದವು. ಇಷ್ಟರೊಳಗೆ ಕೋಣೆಯೊಳಗಿನ ಕತ್ತಲು ಕಡಿಮೆ ಕಡಿಮೆಯಾಗಿ ಎಲ್ಲವು ನೀಲವರ್ಣದ ಪ್ರಕಾಶಮಯವಾಯಿತು. ಮೇಲೆ ಆಕಾಶವು ಪಸರಿಸಿತ್ತು. ಅದು ಸ್ವಚ್ಛವ ನಿರಭ್ರವಿತ್ತು. ಕ್ಷಿತಿಜವೂ ಕಾಣಿಸುತ್ತಿತ್ತು, ಕೂಡಲೆ ಆ ಕ್ಷಿತಿಜದ ಮೇಲೆ ಕಿರಣಗಳು ಹಬ್ಬಿದವು, ಮತ್ತು ಪೂರ್ಣ ಪ್ರಕಾಶಮಯ ಸೂರ್ಯನು ಮೆಲ್ಲನೆ ತಲೆ ಎತ್ತಿದನು. ಆ ದೃಶ್ಯವು ಅತ್ಯಂತ ರಮ್ಯವಿತ್ತು. ಈ ನೋಟವು ಬಹಳವೆಂದರೆ ಎರಡು ಮಿನಿಟು

ತನಕವಿತ್ತು, ಆದರೆ ದೇಹವೊಳಗೆ ಆನಂದ ಲಹರಿಗಳು ಹುಟ್ಟಿದವು. ಪುನಹಾ ಆ ದೃಶ್ಯ ಕಾಣಬೇಕೆಂತ ನಾನು ಧ್ಯಾನಮಾಡುವ ಆದಷ್ಟು ಪ್ರಯತ್ನ ಮಾಡಿದೆನು. ಆದರೆ ಆ ದೃಶ್ಯವು ತಿರಿಗಿ ಕಾಣಿಸಲಿಲ್ಲ. ಶ್ರೀಸದ್ಗುರುಗಳಿಗೆ ಆಮೇಲೆ ನಾನು ಕೇಳಿದೆ. ಹೀಗೆ ದೃಶ್ಯಗಳು ತಮ್ಮಷ್ಟಕ್ಕೆ ಕಾಣಿಸುತ್ತವೆ. ಆ ದೃಶ್ಯಗಳ ಬೆನ್ನಹತ್ತಿ ನೀವು ವೇಳೆ ಕಳೆಯಬಾರದು, ಎಂದು ಅವರು ಅಂದರು.

ಶನಿವಾರ ತಾ. ೧೨ನೇ ಡಿಸೆಂಬರ ೧೯೪೨ನೇ ದಿನ ಬೆಳಿಗ್ಗೆ ಎಂಟು ಹೊಡೆಯುವಾಗ್ಗೆ ಶುಚಿರ್ಭೂತನಾಗಿ ನಾನು ಜಪವನ್ನು ಮಾಡಲಾರಂಭಿಸಿದೆನು. ಜಪವು ತೀವ್ರವಾಗಿ ನಡೆಯುತ್ತಿತ್ತು. ನನ್ನ ಲಕ್ಷವು ಭ್ರೂಮಧ್ಯದಲ್ಲಿತ್ತು. ಕಣ್ಣುಗಳು ಮುಚ್ಚಿದ್ದವು, ಜಪವೆ ಒಳಗ ಆಗುವ ಧ್ವನಿಯ ಮೇಲ ನನ್ನ ಲಕ್ಷವು ಸ್ಥಿರವಾಗಿತ್ತು. ಕೆಲವು ಹೊತ್ತಿನಲ್ಲಿ ಎದುರಿಗೆ ಒಂದು ಕರೇ ಹಾವು ಕಾಣಿಸಿತು. ಬಲದಿಂದ ಎಡಕ್ಕೆ ವ ಎಡದಿಂದ ಬಲಕ್ಕೆ ತಿರುಗುತ್ತಿತ್ತು. ಆ ಹಾವು ನಿಜವಾದದ್ದೇನೊ ಎಂಬುದು ಭಾನವಾಗಿ ಅದನ್ನು ಹಿಡಿಯುವದಕ್ಕಾಗಿ ನಾನು ಕೈ ಮುಂದಕ್ಕೆ ಚಾಚಿದೆನು, ಆದರೆ ನನ್ನ ಹುಚ್ಚತನ ನನಗೆ ಕಂಡುಬಂತು. ಎಂಟು ಮುಕ್ಕಾಲು ಘಂಟೆಗೆ ನಾನು ಎದ್ದೆ, ಪೋಷಾಕ ಹಾಕಿಕೊಂಡು ಸೋಪಾನದಿಂದಿಳಿದು ಹಾಸ್ಪಿಟಲ ಕಡೆಗೆ ಹೋಗಲಾರಂಭಿಸಿದೆ. ರಸ್ತೆಯಮೇಲಿಂದ ಹೋಗುತ್ತಿರುವಾಗ ಸರ್ಪವು ಸ್ಪಷ್ಟವಾಗಿ ಕಾಣಿಸುತ್ತಿತ್ತು. ದವಾಖಾನೆಯ ದ್ವಾರಕ್ಕೆ ಹೋದ ಕೂಡಲೆ ಅದು ಕಾಣದಂತಾಯಿತು ಅಂದರೆ ಈ ದೃಶ್ಯವು ಸತತ ಅರ್ಧ-ಮುಕ್ಕಾಲು ತಾಸು ತನಕ ಇತ್ತು. ಇದರಲ್ಲಿ ವಿಶೇಷ ಭೀತಿಯು ಯತ್ಕಿಂಚಿತ್ತಾದರೂ ಹೆಸರೇ ಇದ್ದಿಲ್ಲ. ವೃತ್ತಿಯು ನಿರ್ಭಯವಾಗಿತ್ತು. ಆ ದಿನದಿಂದ ನನ್ನ ವಿಷಯವಾಸನೆಯು ಮಾತ್ರ ಇಲ್ಲದಂತಾಯಿತು. ಆ ಸಂಬಂಧ ನನಗೆ ಎಷ್ಟು ಮಾತ್ರವು ತೊಂದರೆಯಾಗುತ್ತಿದ್ದಿಲ್ಲ, ಸ್ವಭಾವವು ಶಾಂತ ವ ನಿಗರ್ವಿ ಆಯಿತು. ಈ ಭೇದವಾದದ್ದನ್ನು ನೋಡಿ ನನ್ನದು ನನಗೇ ಅತ್ಯಂತ ಆಶ್ಚರ್ಯವೆನಿಸಿತು.

ಗುರುವಾರ ತಾ. ೨೪ ಡಿಸೆಂಬರ ೧೯೪೨ರಿಂದ ನನಗೊಂದು ಹೊಸ ವ್ಯಾಧಿ ಬಂತು. ಅದು ಯಾವದೆಂದರೆ ಮೂಲವ್ಯಾಧಿ. ಅತಿಶಯ ತೊಂದರೆ ಆಗಹತ್ತಿತು. ಒಂದೇ ಸಮನೆ ಬೇನೆ ಎದ್ದಿತು. ಧ್ಯಾನಕ್ಕೆ ಕೂಡ್ರಲಿಕ್ಕೆ ಬರವಲ್ಲದು ಮತ್ತು ಚಿತ್ತವು ಸ್ವಸ್ಥವಾಗಲಾರದು. ಮೂಲವ್ಯಾಧಿಯ ಮೊಳಿಕೆಯ ಮೇಲೆ ಶಸ್ತ್ರಕ್ರಿಯೆಯನ್ನು ಮಾಡುತ್ತಾರೆಂಬದು ನನಗೆ ಗೊತ್ತಿತ್ತು. ಮಾಡುವಂತೆ ಮಾಡಿಸಿಕೊಳ್ಳಬೇಕು ಎಂದು ನಿಶ್ಚಯಿಸಿದೆ. ಆದರೆ ಶಾಲೆಯಿಂದ ರಜೆ ಹ್ಯಾಗೆ ಸಿಕ್ಕೀತು ಎಂಬದರ ನನಗೆ ಸಂಶಯ ಉಳಿಯಿತು. ಆಗ ಇತರ ಔಷಧಗಳನ್ನು ತಕ್ಕೊಂಡು ಎರಡು ತಿಂಗಳು ಹ್ಯಾಗಾದರೂ ತೆಗಿಯಬೇಕು, ಮತ್ತು ಎಪ್ರಿಲ ತಿಂಗಳಲ್ಲಿ ಮುಂಬಯಿಗೆ ಹೋಗಿ ಆಪರೇಶನ್ ಮಾಡಿಸಿಕೊಳ್ಳಬೇಕೆಂದು ನಿರ್ಣಯಿಸಿದೆ. ಕೆಲವು ದಿನ ಒಳ್ಳೆದೆನಿಸಬೇಕು ಮತ್ತು ಕೆಲವು ದಿನ ಉಪದ್ರವ ಆಗುತ್ತ ನಡೆಯಿತು.

ಇದರ ನಂತರ ಬುಧವಾರ ತಾ. ೪-೧-೧೯೪೩ ನೇ ದಿನ ರಾತ್ರಿ ಎರಡು ವರೆ ಹೊಡಿಯುವಾಗ್ಗೆ, ನಾನು ಪೂರ್ಣ ನಿದ್ರೆಯಲ್ಲಿರುವಾಗ ಯಾರೊ ಒಂದು ಏಳುಏಳು ಎಂದು ನನಗೆ ಅಗಲಾಡಿಸಿದಂತೆ ಭಾಸವಾಯಿತು. ಒಮ್ಮೆಲೆ ಎದ್ದು ದೀಪ ಹಚ್ಚಿದೆ. ಎಲ್ಲಾ ಕಡೆಯಲ್ಲಿಯೂ ನೋಡಿದೆ. ಯಾರೂ ಕಾಣಿಸಲಿಲ್ಲ. ನನ್ನ ಮನಸ್ಸಿನದೇ ಆಟವದೆ ಎಂದು ತಿಳಿದು ಮೋರೆ ತೊಳಕೊಂಡು ಹಾಸಿಗೆಯ ಮೇಲೆ ಕೂತುಕೊಂಡೆ. ಹಾಗೂ ದೀಪ ಆರಿಸಿ ಜಪವನ್ನು ಆರಂಭಿಸಿದೆ. ಹತ್ತು ಮಿನಿಟುಗಳಲ್ಲಿ ಬಾಗಲು ತೆರೆಯಿತು ಮತ್ತು ಏನು ಆಶ್ಚರ್ಯ ! ಶ್ರೀದತ್ತಗುರುಗಳ ಸ್ವಾರಿಯು ಸಾಕ್ಷಾತ್ ಎದುರಿಗೆ ! ಬಾಗಲಿನಲ್ಲಿ ಮೂರ್ತಿ ನಿಂತದೆ. ಮೂರು ಶಿರಗಳು ಆರು ಹಸ್ತಗಳು ಇದ್ದ, ದೈದೀಪ್ಯಮಾನವಾದ ಆ ಹಾಸ್ಯಮುಖವುಳ್ಳ ಮೂರ್ತಿಯನ್ನು ಕಂಡು ನನಗೆ ಗದ್‌ಗದಕಂಠವಾಯಿತು. ಕಣ್ಣೊಳಗಿಂದ ಆನಂದಾಶ್ರುಗಳು ಹರಿದವು. ಮೂರ್ತಿಯು ಆಶೀರ್ವಾದಕ್ಕಾಗಿ ಒಂದು ಕೈ ಮೇಲೆ ಎತ್ತಿರುವಾಗ, ನನಗೆ ಆನಂದಾತಿಶಯದಿಂದ ಸ್ಮೃತಿ ತಪ್ಪಿತು. ದಿಙ್ಮೂಢ ನಾದೆನು. ಈ ಶ್ರೇಷ್ಠ ವಿಭೂತಿಯು ನಮ್ಮ ಮನೆಗೆ ಹ್ಯಾಗೆ ಬಂತು, ಎಂಬದೇನೂ ನನಗೆ ಸೂಚಿಸದಂತಾಯಿತು. ಸ್ವಲ್ಪಹೊತ್ತಿನಲ್ಲಿ ವಿಭೂತಿಯು ನನ್ನ ಪಲಂಗದ ಸಮೀಪ ಬಂತು. ಅ ಕೂಡಲೆ ಮೂರ್ತಿಯ ರೂಪವು ಬದಲಾಯಿತು. ಏಕ ಮುಖ ಅದರೆ ಎರಡು ಕೈಗಳಿದ್ದು, ಹಾಸ್ಯವದನ ಉಳ್ಳದ್ದಾಗಿ ನನಗೆ ಆಶೀರ್ವಾದ ಕೊಡುತ್ತಿತ್ತು. ಕೋಣೆ ತುಂಬ ಪ್ರಕಾಶವಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಮೂರ್ತಿ ಇಲ್ಲದಂತಾಗಿ, ಬಹಳ ಉನ್ನತವಾಗಿದ್ದ ಒಂದು ಪ್ರಕಾಶ ಜ್ಯೋತಿಯು ಉಳಿಯಿತು. ಕೆಲವು ಹೊತ್ತಿನಲ್ಲಿ ಅದೂ ಇಲ್ಲದಂತಾಗಿ ಕೋಣೆಯಲ್ಲೆಲ್ಲ ಕತ್ತಲಾಯಿತು. ಆದಿನ ಅತ್ಯಂತ ಆನಂದದಿಂದ ಕಳೆದೆ. ಪ್ರತಿಒಂದು ವಸ್ತುವಿನಲ್ಲಿ ಆನಂದವು ಓತಪ್ರೋತ ತುಂಬಿರುವದೆಂಬ ಭಾವನೆಯು ಆ ದಿವಸವೆಲ್ಲ ಇತ್ತು. ಆದಿನ ಶ್ರೀಯವರ ದರ್ಶನಕ್ಕೆ ಹೋಗಿದ್ದಾಗ, ಅವರ ಚರಣಗಳ ಮೇಲೆ ಮಸ್ತಕವನ್ನು ಇಟ್ಟಕೂಡಲೆ, ' ನಿನಗೆ ನನ್ನ ಮತ್ತು ಎಲ್ಲಾ ಸಂತರ ಆಶೀರ್ವಾದಗಳಿವೆ ' ಎಂಬ ಉದ್ಗಾರವು ಸಹಜವಾಗಿ ಅವರ ಮುಖದಿಂದ ಹೊರಟಿತು. ಪರಮೇಶ್ವರನೇ ಅನೇಕ ರೂಪಗಳಿಂದ ನಟಿಸುವನು ಎಂಬ ಭಾವನೆಯು ಹೆಜ್ಜೆಹೆಜ್ಜೆಗೆ ನನ್ನ ಅಂತಃಕರಣದಲ್ಲಿ ಜಾಗೃತವಾಗುವದು.

ಈ ಅನುಭವದ ನಂತರ ಎರಡೇ ದಿನಗಳಲ್ಲಿ ಮೂಲವ್ಯಾಧಿಯ ಮೊಳಕೆಯು ಬಿದ್ದುಹೋಗಿ ವ್ಯಾಧಿಯು ಸಂಪೂರ್ಣ ಗುಣವಾದದ್ದು ನನಗೆ ತಿಳಿದು ಬಂತು. ಅನಂತರ ಆ ವ್ಯಾಧಿಯಿಂದ ನನಗೆ ಎಷ್ಟುಮಾತ್ರಕ್ಕೂ ತೊಂದರೆಯಾಗಲಿಲ್ಲ.

ಶ್ರೀಸದ್ಗುರುತಾಯಿಯ ಆಶೀರ್ವಾದದಿಂದ ಎಲ್ಲ ತೊಂದರೆಗಳೂ ದೂರವಾಗುವವು, ಈ ನನ್ನ ಶ್ರದ್ಧೆಯು ದಿನೇ ದಿನೆ ದೃಢವಾಗುತ್ತ ನಡೆಯಿತು.

ಶುಕ್ರವಾರ ತಾ. ೮-೧ ೪೩ ನೇ ದಿನ ರಾತ್ರಿ ಹತ್ತು ಹೊಡಿಯುವ ಸುಮಾರಕ್ಕೆ ನಾನು ಶಿವಲೀಲಾಮೃತದ ಹನ್ನೊಂದನೇ ಅಧ್ಯಾಯವನ್ನು ಓದಿದೆ. ಸ್ವಲ್ಪ ಜಪ ಮಾಡಿ ಮಲಗಲಿಕ್ಕೆ ಹಾಸಿಗೆ ಮೇಲೆ ಬಿದ್ದುಕೊಂಡೆ. ಜಪ ಮಾಡುತ್ತ ನಿದ್ದೆ ಹೋಗಬೇಕೆಂದು ಬಲಬದಿಯಮೇಲೆ ಮಲಗಿ ಜಪಮಾಡುತ್ತಿದ್ದೆ. ಕಣ್ಣು ಮುಚ್ಚಿದೆ. ದೀಪ ಆರಿಸಿತ್ತು. ಕೆಲವು ಹೊತ್ತಿನ ಮೇಲೆ ತಲೆಕಡೆಗೆ ಯಾರೊ ಒಂದು ಕೂತಂತೆ ಭಾಸವಾಯಿತು, ಎಂದು ಯಾರಿದ್ದಾರೆಂತ ನೋಡಲಿಕ್ಕೆ ಮತ್ತೊಂದು ಬದಿಗೆ ತಿರುಗಿದೆ. ಯಾರೊ ಎದ್ದು ಹೊರಗೆ ಹೋದಂತೆ ತೋರಿತು. ಅಷ್ಟರಲ್ಲಿ ಎದುರಿನ ಗೋಡೆಯ ಮೇಲೆ ಒಂದು ಭಾಗದಲ್ಲಿ ಪೂರ್ಣಪ್ರಕಾಶದ ಜ್ಯೋತಿ ಬಿದ್ದಿತ್ತು. ಖೋಲಿಯಲ್ಲೆಲ್ಲ ಕತ್ತಲಾಗಿತ್ತು. ಖೋಲಿಯ ಹೊರಗೂ ಕತ್ತಲೆ, ಒಳಗೂ ಕತ್ತಲೆ, ಹೀಗಿರುತ್ತ ಪ್ರಕಾಶವೆಲ್ಲಿಂದ ಎಂದು ಆಶ್ಚರ್ಯವಾಯಿತು. ಆ ಪ್ರಕಾಶದ ಕಡೆ ದೃಷ್ಟಿ ಹತ್ತಿದಾಗ ನನ್ನ ಜಪವು ಬಹಳ ತೀವ್ರವಾಗಿ ನಡೆಯಿತು. ವೃತ್ತಿಗಳು ಲಯವಾಗಿ ನಾನು ಮತ್ತು ಆ ಪ್ರಕಾಶವು ಇವರ ವಿನಹಾ ಮತ್ತಾವುದರದು ಅರಿವು ಉಳಿಯಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಪ್ರಕಾಶದ ತೀವ್ರತೆಯು ಕಡಿಮೆ ಕಡಿಮೆಯಾಗಿ ಕಡೆಗೆ ಇಲ್ಲದಂತಾಯಿತು. ಮತ್ತು ಅಷ್ಟು ಹೊತ್ತಿಗೆ ನಾನು ನಿದ್ರಾವಶನಾದೆನು.

ಏನಾದರೂ ದೃಶ್ಯಗಳು ನನಗೆ ಕಾಣಿಸುತ್ತಿರಬೇಕೆಂಬ ನನ್ನ ಇಚ್ಛೆಯು ನಷ್ಟವಾಗುತ್ತ ನಡೆದದೆ. ಅಂತಃಕರಣದಲ್ಲಿ ಸಮಾಧಾನ ವೃತ್ತಿಯು ಸ್ಥಿರವಾಗಿದೆ. ಸಂಪತ್ತಿ ಸಂಚಯ ಮಾಡುವದು ವ ಸ್ತ್ರೀ ಅಭಿಲಾಷೆ ಈ ವಿಷಯಗಳಲ್ಲಿ ಪೂರ್ಣ ಹೇಯಬುದ್ಧಿ ಹುಟ್ಟಿದೆ. ಜಪವು ಸತತ ನಡೆಯುತ್ತಿರಬೇಕು, ಸ್ವಲ್ಪವಾದರೂ ಕಾಲವ್ಯಯವಾಗಬಾರದು ಎಂದು ಮನಸ್ಸಿಗೆ ಬಹಳವಾಗಿ ಹತ್ತಿರುವದು. ಆ ಪ್ರಕಾರ ಮನಸ್ಸು ಬಹಳ ಚಿಂತೆ ಪಡುತ್ತದೆ. ನಾನು ಸದ್ಗುರುಸಾನ್ನಿಧ್ಯದಲ್ಲಿ ಬರುವ ಮೊದಲಿನ ವೃತ್ತಿ ಮತ್ತು ಈಗಿನ ವೃತ್ತಿ ಇವುಗಳೊಳಗಿನ ಆಶ್ಚರ್ಯಕಾರಕ ಭೇದವನ್ನು ನೋಡಿ, ನನ್ನ ಅಂತಃಕರಣವು ಶ್ರೀಗುರುವಿನ ಉಪಕಾರ ಸ್ಮರಣೆಯಿಂದ ತುಂಬಿ ಉಕ್ಕಿಬರುವದು.

ಇತ್ತಿತ್ತಲಾಗಿ ಧ್ಯಾನಕ್ಕೆ ಕೂತಿರುವಾಗ ವೃತ್ತಿ ತದಾಕಾರವಾಗುತ್ತದೆ. ಮತ್ತು ದೇಹವು ಟೊಂಕದಿಂದ ಕೆಳಗೆ ಹರಿದುಹೋದಂತೆ ಅನಿಸುತ್ತದೆ. ಮೇಲಿನ ಭಾಗದ ಕೂಡ ನಾನು ಮೇಲೆ ಮೇಲೆ ತೇಲಿ ಹೋಗುತ್ತೇನೇನೊ ಎಂಬಂತೆ ತೋರುವದು.

ಈ ಪ್ರಕಾರ ಆನಂದೋರ್ಮಿಯಲ್ಲಿಯೇ ನನ್ನ ಆಯುಷ್ಯವು ನಡೆದದೆ. ದಿನೇದಿನೇ ಸಮಾಧಾನ ವೃತ್ತಿಯು ಬಲವಾಗುತ್ತಿದೆ.

ಶ್ರೀಸದ್ಗುರು ಚರಣಗಳಲ್ಲಿ ನನ್ನ ವಿನಯದ ಸಾಷ್ಟಾಂಗ ಪ್ರಣಿಪಾತಗಳು.

(ಸಹಿ) ದತ್ತಾತ್ರೇಯ ಶಿವರಾಮ ಮೋಹಿತೆ.

ನಾನು ನಿತ್ಯ ಮಹಾರಾಜರ ದರ್ಶನಕ್ಕೆ ಹೋಗುತ್ತಿರುತ್ತೇನೆ, ಮತ್ತು ಯಾವದೊಂದು ಶಂಕೆಯು ಬಂದರೆ ಅವರಿಗೆ ಕೇಳಿ ಅದರ ವಿವರ ಮಾಡಿಕೊಳ್ಳುತ್ತೇನೆ. ಕೆಲವು ದಿನ ಹಿಂದೆ ನಾನು ಒಂದು ಪ್ರಶ್ನೆಯನ್ನು ಶ್ರೀಯವರಿಗೆ ಕೇಳಿದೆ; ಅದಕ್ಕೆ ಅವರು ಕೊಟ್ಟ ಉತ್ತರವು ಬೋಧಪ್ರದವಾದ್ದರಿಂದ ಅದನ್ನು ಕೆಳಗೆ ಕೊಡುವೆನು.

ನಾನು -- ಮಹಾರಾಜರೇ, ಭಾವನಾ, ಶ್ರದ್ಧಾ ವ ನಿಷ್ಠಾ ಇವುಗಳ ಅರ್ಥಗಳ ಗೊಂದಲದೊಳಗೆ ನಾನು ಬಿದ್ದಿರುವೆನು. ಇವೆಲ್ಲ ಶಬ್ದಗಳು ಒಂದೇ ಅರ್ಥದವು ಇರುವವೋ ಏನು, ಎಂಬುದು ನನಗೆ ತಿಳಿಸಿ ಹೇಳಿರಿ.

ಮಹಾರಾಜರು: ನಿನ್ನ ಶಂಕೆಯು ಖಾಚಿತ್ರಯುದೆ. ಈ ಶಬ್ದಗಳ ಅರ್ಥದಲ್ಲಿ ಸಾಧಾರಣವಾಗಿ ಯಾವಾಗಲೂ ಗಲಿಬಿಲಿಯಾಗುವದು. ಶ್ರದ್ಧಾ ವ ನಿಷ್ಠಾ ಇವು ನಿಜವಾಗಿ ಭಾವನೆಯ ಸ್ವರೂಪವೇ ಇರುತ್ತವೆ. ಮೊದಲು ಭಾವನೆ ಎಂದರೇನು, ಇದನ್ನು ನಾವು ನೋಡೋಣ.

ಭಾವನೆಯ ವ್ಯಾಖ್ಯಾ ಮಾಡುವದು ಕಠಿಣವದೆ. ಭಾವನೆಯೆಂದರೇನು, ಇದರ ಸ್ಪಷ್ಟೀಕರಣವು ಬೇರೆ ಬೇರೆ ಉದಾಹರಣೆಗಳನ್ನು ತಕ್ಕೊಂಡು ತಿಳಿಸಿ ಹೇಳಲಿಕ್ಕೆ ಬರುವದು. ಭಾವನೆಯು ತನ್ನಷ್ಟಕ್ಕೆ ಹುಟ್ಟುತ್ತದೆ. ಅದನ್ನು ನಿರ್ಮಾಣ ಮಾಡಲಿಕ್ಕೆ ನೋಡಿದರೆ ಹಾಗೆ ಮಾಡಲಿಕ್ಕೆ ಬರಲಾರದು. ಒಂದೇ ಕುಟುಂಬದೊಳಗಿನ ನಾಲ್ಕುಮಂದಿ ಸಹೋದರರಿಗೆ ಒಬ್ಬರೊಬ್ಬರ ಮೇಲೆ ಸಮಾನ ಪ್ರೇಮ ಎಂದೂ ಇರುವದಿಲ್ಲ. ಅವರ ಪರಸ್ಪರ ಪ್ರೇಮದಲ್ಲಿ ಭಾವನೆ ದೆಸೆಯಿಂದ ಭೇದವಾಗುತ್ತದೆ. ನಮ್ಮ ಮತ್ತು ಇನ್ನೊಬ್ಬನ ಭೆಟ್ಟಿಯಾದಾಗ್ಗೆ, ಸಹಜವಾಗಿ ಏನೂ ಕಾರಣವಿಲ್ಲದೆ ಆ ಇನ್ನೊಬ್ಬನ ಸಂಬಂಧ ಚಲೋ ಅಥವಾ ಕೆಟ್ಟ ಭಾವನೆಯು ನಮ್ಮ ಮನಸ್ಸಿನಲ್ಲಿ ಹುಟ್ಟುವದು. ಇದೇ ಆ ಭಾವನೆಯ ಮೂಲಸ್ವರೂಪವು. ಒಮ್ಮೊಮ್ಮೆ ಎರಡನೇಯವರ ಹೇಳಿಕೆ ಮೇಲಿಂದ ಅಥವಾ ಬೇರೆ ಯಾವದಾದರೂ ಪ್ರಸಂಗದ ಮೇಲಿಂದ ಒಬ್ಬಾನೊಬ್ಬನ ಸಂಬಂಧ ನಮ್ಮ ಮನಸ್ಸಿನಲ್ಲಿ ಚಲೋ ಕಲ್ಪನೆಯು ಆಗುವದು. ಆದರೆ ಈ ಚಲೋ ಕಲ್ಪನೆಯು ಸ್ಥಿರವಾಗಿ ಇದ್ದೀತೆಂಬದು ನೇಮವಿಲ್ಲ. ಉದಾಹರಣಾರ್ಥ, ಇಂಥಾವನೊಬ್ಬ ಮನುಷ್ಯನು ಒಂದು ವಿಷಯದಲ್ಲಿ ಬಹಳ ನಿಷ್ಣಾತನಿದ್ದಾನೆಂದು ನಾವು ಕೇಳುತ್ತೇವೆ. ಮತ್ತು ಆ ಸಂಬಂಧ ಒಳ್ಳೆ ಕಲ್ಪನೆಯು ನಮ್ಮ ಮನಸ್ಸಿನಲ್ಲಿ ನಿರ್ಮಾಣವಾಗುತ್ತದೆ.

ಹುಟಿಂದ ಅವನ ಮತ್ತು ನಮ್ಮ ಸಂಬಂಧವಾಯಿತೆಂದರೆ, ನಾವು ಅವನಕಡೆ ಅದೇ ದೃಷ್ಟಿಯಿಂದ ನೋಡುತ್ತೇವೆ. ಅವನ ವಿವೃತ್ತಿ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ನಿಶ್ಚಯವಾಗದಿದ್ದರೆ ಅವನ ಸಂಬಂಧದ ಆ ಒಳ್ಳೆ ಕಲ್ಪನೆಯು ಸ್ಥಿರವಾಗಿರಲಾರದು. ಇದಕ್ಕೆ ಭಾವನೆಯೆನ್ನಲಿಕ್ಕೆ ಬರುವದಿಲ್ಲ. ಭಾವನೆಯು ಮೂಲದಿಂದ ಅಂತಃಕರಣದ ಸ್ವಭಾವಧರ್ಮವಿರುತ್ತದೆ.

ಭಾವನೆಯದೇ ಒಂದು ವಿಶೇಷ ಸ್ವರೂಪವು ನಿತ್ಯದ ವ್ಯವಹಾರದಲ್ಲಿ ಕಂಡು ಬರುವದು. ಒಬ್ಬರಮೇಲೆ ನಾವು ಪರಸ್ಪರವಾಗಿ ವಿಶ್ವಾಸವಿಡಬೇಕೇ ಆಗುತ್ತದೆ. ಅದರ ವಿನಹಾ ವ್ಯವಹಾರ ನಡೆಯುಕ್ಕೆ ಶಕ್ಯವಿಲ್ಲ. ಮನೆಯೊಳಗಿನ ಮಂದಿಮೇಲೆ ತನ್ನ ವಿಶ್ವಾಸವು ಇದೊಂದು ಅವರ ಸಂಬಂಧ ಭಾವನೆ ಇರುವದು. ಅವರ ಸಂಬಂಧದ ವಿಶ್ವಾಸದ ಭಾವನೆಯು ಎಷ್ಟು ಉತ್ಕಟವಿರುವದೋ ಅಷ್ಟು ಅದು ತನ್ನ ಸುಖಕ್ಕೆ ಕಾರಣೀಭೂತವಾಗುವದು. ಈ ಉತ್ಕಟ ಭಾವನೆಗೆ ಶ್ರದ್ಧೆಯನ್ನುತ್ತಾರ. ಆದರೆ ಈ ಶ್ರದ್ಧೆಯಾದರೂ ಕಾರಣಪರತ್ವದಿಂದ ಧಳಮಳಿಸುತ್ತದೆ. ಅನೇಕ ಪ್ರಸಂಗಗಳ ಹೊಡತದಿಂದ ಈ ಶ್ರದ್ಧೆಯು ಇಲ್ಲದಂತಾಗುವ ಸಂಭವವಿರುತ್ತದೆ.

ಭಕ್ತಿಯುಕ್ತ ಶ್ರದ್ಧೆಯು ಇದು ಭಾವನೆಯ ಇನ್ನೂ ದ ಶ್ರೇಷ್ಠ ಸ್ವರೂಪ ವಿದೆ. ಇದೇ ಶ್ರದ್ಧೆಯು ಸಂಕಲ್ಪ ವಿಕಲ್ಪರಹಿತ ಅಂದರೆ ನಿರ್ಹೇತುಕ ಮತ್ತು ನಿಷ್ಕಪಟ ಇತ್ತೆಂದರೆ ಅದಕ್ಕೆ ನಿಷ್ಠೆ ಅನ್ನುತ್ತಾರೆ. ಸಂಕಲ್ಪ–ವಿಕಲ್ಪರಹಿತ ಭಾವನೆಯ ಅತ್ಯಂತ ಉತ್ಕಟ ಸ್ವರೂಪವು ಅಂದರೆ ನಿಷ್ಠೆಯೇ. ಈ ನಿಷ್ಠೆಯ ಸ್ವರೂಪ ಮಾತ್ರ ಅಚಲಿತವಾಗಿರುವದು.

ಸಂಕಲ್ಪ ವಿಕಲ್ಪರಹಿತವಿದ್ದಮೂಲಕ ಯಾವದೊಂದು ಕಾರಣದಿಂದಲೂ ಈ ನಿಷ್ಠೆಯು ಕಡಿಮೆಯಾಗಲಿಕ್ಕೆ ಶಕ್ಯವಿಲ್ಲ. ಅದು ಹ್ಯಾಗೆ ಅಂದರೆ ಕಡಿಮೆ ಆಯಿತೆಂದರೆ ಅದಕ್ಕೆ ನಿಷ್ಠೆಯನ್ನಲಾಗದು. ಸಂತ ರಾಮದಾಸರು ಶಿವಾಜಿಗೆ ಹೆಣ್ಣು ಹುಲಿಯ ಹಾಲು ತರಲಿಕ್ಕೆ ಹೇಳಿದ್ದರು; ಆ ಪ್ರಸಂಗದಲ್ಲಿ ಶಿವಾಜಿಯ ಮನಸ್ಸಿನಲ್ಲಿ ಇದು ತನ್ನ ಪರೀಕ್ಷಾರ್ಥವೆಂದಲಿಲ್ಲ, ಈ ಹೆಣ್ಣು ಹುಲಿ ಎಲ್ಲಿ ಸಿಗಬೇಕು, ಅದರ ಹಾಲು ಹಿಂಡುವದು ಎಷ್ಟು ಕಠಿಣವಾದ ಕೆಲಸ ವಗೈರೆ ವಿಚಾರಗಳು ಬರಲಿಲ್ಲ. ಈ ಎಲ್ಲ ಸಂಕಲ್ಪ ವಿಕಲ್ಪಗಳ ಆಚೆಗೆ ಅವನ ಶ್ರದ್ಧೆ ಇದ್ದದರಿಂದ ಹೆಣ್ಣು ಹುಲಿಯ ಹಾಲುಹಿಂಡಲಿಕ್ಕೆ ಅವನಿಗೆ ಏನೂ ಅನಿಸಲಿಲ್ಲ. ಇದರಲ್ಲಿ ರಾಮದಾಸರ ಮೇಲೆ ಇದ್ದ ಅವನ ನಿಷ್ಠೆಯು ವ್ಯಕ್ತವಾಗುತ್ತದೆ. ಕವಿಶ್ರೇಷ್ಠ ಕಾಳಿದಾಸನು ತನ್ನ ನಾಲಿಗೆಯನ್ನು ಕಾಳೀದೇವಿಗೆ ಅರ್ಪಿಸಲಿಕ್ಕೆ ಸಿದ್ಧನಾದನು. ಇದರಲ್ಲಿ ಆತನ ದೇವಿಯ ಮೇಲಿನ ಅಢಳ ನಿಷ್ಠೆಯು ತೋರಿಬರುತ್ತದೆ. ನಿಷ್ಠೆಯ ಫಲವು ತತ್ಕಾಲದೇ ದೊರಕುವದು ಶಿವಾಜಿಯು ವಿಶಾಲಗಡಕ್ಕೆ ಮುಟ್ಟುವ ತನಕ ಬಾಜಿ ಪ್ರಭು ದೇಶಪಾಂಡೆಯು ಪಾವನ ಖಿಂಡಿಯಲ್ಲಿ ಶತ್ರುಗಳ ಕೂಡ ಕಾದಾಡುತ್ತ

ನಿಂತು ಬಿಟ್ಟನು; ಇದು ಒಂದು ಶಿಷ್ಯನ ಸಾಮರ್ಥ್ಯದ ಮೇಲೆ. ಈ ಶಿಷ್ಯನ ಸಾಮರ್ಥ್ಯವು ಇಷ್ಟು ಬಲವತ್ತರವಿರುವದಲ್ಲ. ಆದರೆ ಜೋಡಿಸಿದ ದೃಷ್ಟಿಕ್ಷೇಪ ಮಾತ್ರದಿಂದ ಕಣ್ಣು ಎರಡು ತುಂಬಿಬಂದಿತು. ಮೂಲ ಭಾವನೆಯು; ಆದರ ಘೃತ ಸ್ವರೂಪವೆಂದರೆ ಶ್ರದ್ಧೆಯು. ಈ ಎರಡರಕ್ಕಿಂತ ಭಾವನೆಯು ಅತ್ಯಂತ ಉತ್ಕಟ ಸ್ವರೂಪವು ನಿಷ್ಠೆಯು; ಇದರದೇ ಮಹತ್ವವು ಅಧಿಕವಾಗಿದ್ದು.

ಈ ಪ್ರಕಾರದ ಸಂಕಲ್ಪ ವಿಕಲ್ಪರಹಿತ ನಿಷ್ಠೆಯು ತನ್ನ ಆತ್ಮಾನುಭವಿ ಗುರುವಿನ ಮೇಲೆ ಇದ್ದರೆ, ಆತ್ಮಾನುಭವದ ಪ್ರಾಪ್ತಿಗೆ ಅವಕಾಶ ಏನು? ತನ್ನ ಅಂತಃಕರಣದಲ್ಲಿ ಗುರುವಿನ ವಿಷಯ ಇರುವ ಭಾವನೆಗೆ ಇಷ್ಟು ಉತ್ಕಟ ಸ್ವರೂಪವನ್ನು ಕೊಡುವ ಪ್ರಯತ್ನಗಳನ್ನು ಮಾಡುವಂಥಾದ್ದೇ ತನ್ನ ಕರ್ತವ್ಯವು. ಇಂಥ ಅರ್ಥದ ನಿಷ್ಠೆಯು ಜಾಗೃತಿಯು ಆದಾಗಿನ ಫಲವು ಇದ್ದೇ ಇದೆ. ಸ್ವಾನುಭವಿ ಗುರುವು ತೋರಿಸಿ ಕೊಟ್ಟ, ಮಾರ್ಗದ ಅನುಸಂಧಾನದ ಮೇಲೆ ಇಂಥ ನಿಷ್ಠೆ ಇತ್ತೆಂದರೆ ಸ್ವಾನಂದಸಾಮ್ರಾಜ್ಯವು ದೊರಕಲಿಕ್ಕೇ ಬೇಕು.

( ಸಹಿ ) ದ ತಿ. ಪುರೋಹಿತ.

ಸೌ. ಸುಂದರಾಬಾಯಿ ಭಾಸ್ಕರ ಅಮ್ಮಂಬಿ. ಮುಂಬಯಿ, ಇವರ ಅನುಭವಗಳು ( ಶ್ರೀ ಗಜಾನನ ಮಹಾರಾಜರಿಗೆ ಅವರ ಕಡೆಯಿಂದ ಬಂದ ಇಂಗ್ಲೀಷ ಪತ್ರಗಳ ಅನುವಾದ )

[ ಪತ್ರ ನಂ ೧ ]

ದಾದರ, ಡಿಸೆಂಬರ ೧೯೪೧.

ಶ್ರೀ ಸದ್ಗುರು ಗಜಾನನ ಮಹಾರಾಜರ ಸೇವೆಗೆ, ಪ್ರಣಿಪಾತಗಳು.

ಎರಡು ಮೂರು ದಿವಸಗಳ ಹಿಂದೆ ಅಜ್ಞಾನಿಯಾದ ನನ್ನ ಮೇಲೆ ಕರುಣೆ ಮಾಡಿ ನೀವು ನನಗೆ ಉಪದೇಶವನ್ನು ಮಾಡಿದಿರಿ. ತಮ್ಮ ಆಶೀರ್ವಾದದಿಂದ ನನಗೆ ಕೆಳಗೆ ಬರೆದಂತೆ ಅನುಭವಗಳು ಬರುತ್ತಿವೆ.

ಪ್ರತಿಭಾವನೆಯನ್ನು ಬಿಟ್ಟು, ತಾವು ನನಗೆ ಧ್ಯಾನವನ್ನು ಹ್ಯಾಗೆ ಮಾಡಬೇಕೆಂಬುದರ ಅನುಭವವನ್ನು ಕೊಟ್ಟಿರಿ. ಧ್ಯಾನ ಮಾಡುವಾಗ್ಗೆ ಬಾಹ್ಯ ರೂಪದ ಮೇಲೆ ದೃಷ್ಟಿ ಇಡದೆ ಮೂರ್ತಿಯ ಅಂತ ಶಕ್ತಿಯ ಮೇಲೆ ಧ್ಯಾನ ಮಾಡಬೇಕು. ಈ ಪ್ರಕಾರ ನಾನು ತಮ್ಮದೇ ಧ್ಯಾನವನ್ನು ಮಾಡುತ್ತಿದ್ದೇನೆ. ಆಶ್ಚರ್ಯ ಇದೇ, ತತ್ಕಾಲದೇ ನಿಮ್ಮಲ್ಲಿ ಮತ್ತು ನನ್ನಲ್ಲಿ ವಾಸಿಸುವ ಶಕ್ತಿಯು ಒಂದೇ ಆಗಿರುತ್ತದೆಂದು

ನನಗೆ ಅನುಭವಕ್ಕೆ ಬಂತು. ಈ ಪ್ರಕಾರ 'ಸೋಽಹಂ' ಅಂದರೆ [ನಾನು ಪರಮೇಶ್ವರನಿದ್ದೇನೆ] ಇದರ ನಿಜವಾದ ಅರ್ಥವು ನನಗೆ ತಿಳಿಯಿತು. ನೀವು ದೂರವಿಲ್ಲದೆ ನನ್ನ ಹೃದಯದೊಳಗಿಂದ ನನಗೆ ಸತ್ಯ ಮಾರ್ಗವನ್ನು ತೋರಿಸುತ್ತೀರಿ, ಎಂಬುದೆಂದು ನನಗೆ ಪ್ರತೀತಿಯಾಯಿತು. ಈ ನನ್ನ ಅನುಭವವು ಶಬ್ದಗಳಿಂದ ನನಗೆ ವರ್ಣಿಸಲಿಕ್ಕೆ ಬರಲಾರದು. ತಮ್ಮ ಮೇಲೆ ಹಾಗೆಯೇ 'ಸೋಽಹಂ' ಮಂತ್ರದ ಮೇಲೆ ಪೂರ್ಣ ಶ್ರದ್ಧೆಯು ಕುಳಿತಿರುವದು. ತಾವು ಉಪದೇಶ ಮಾಡಿದಂತೆ ನಾನು ಮಂತ್ರದ ಜಪವನ್ನು ಸತತ ಮಾಡುತ್ತಿದ್ದೇನೆ. ವಾಸ್ತವಿಕವಾಗಿ ನಾನು ಯಾವದೊ ಒಂದು ವ್ಯಕ್ತಿಯು! ಇದರೂ ನನ್ನ ಗರ್ವ ಅಭಿಮಾನಗಳು ಇರುತ್ತವೆ. ಮೇಲಿನ ಅನುಭವದಿಂದ ಮಾತ್ರ ಆತ್ಮಪ್ರತೀತಿಯು ಬಂತು. ನನ್ನ ವೃತ್ತಿಯು ಮೊದಲು ಬದಲಿಸಿಲ್ಲವು. ಇದೂ ನಾನು ವ ಇತರ ಜನರು ಇವರ ನಡುವೆ ಒಬ್ಬನೇ ಪರಮಾತ್ಮನು ವಾಸ ಮಾಡುತ್ತಾನೆಂಬ ಭಾವನೆಯು ಧೃಢವಾದನಂತರ ನನ್ನ ಬೇರೆತನದ ಸ್ವಭಾವವು ಬಿಟ್ಟು ಹೋಯಿತು. ಶುದ್ಧ ಆನಂದದಿಂದ ನನ್ನ ಮುಖದ ಮೇಲೆ ಮಂದಹಾಸ್ಯ ಹೊಳೆಯುತ್ತಿತ್ತು. ನಾನು ಎಷ್ಟು ಅಪರಾಧಿಯಾದರೂ ಸದ್ಗುರುವು ನನಗೆ ಯೋಗ್ಯ ಮಾರ್ಗವನ್ನು ಖಚಿತವಾಗಿ ತೋರಿಸುವರೆಂದು ನಿಶ್ಚಯವಾಯಿತು. ಆದರೆ ಮಹಾರಾಜರೇ, ಈ ಆನಂದವು ಬಹಳ ಕಡಿಮೆ ಕಾಲದವರೆಗೆನೇ ಇತ್ತು. ಧ್ಯಾನ ಧಾರಣೆಯ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಆ ಹಿಂದಿನ ಸ್ಥಿತಿಯು ನನ್ನ ಅಂತಃಕರಣದಲ್ಲಿ ಪುನಃ ಸ್ಫುರಿಸುವದಿಲ್ಲ. ಆದರೆ 'ಸೋಽಹಂ' ಮಂತ್ರದ ಜಪವು ನಾನು ಅಂದಿನಿಂದ ಚಾಲು ಇಟ್ಟಿರುತ್ತೇನೆ. ತಾವೇ ನನ್ನ ಸಂರಕ್ಷಣೆಯನ್ನು ಮಾಡಿ, ನನ್ನೊಳಗಿನ ಅಹಂಕಾರ ವ ಅಜ್ಞಾನ ಇವುಗಳ ಸಮೂಲ ನಾಶ ಮಾಡಲಿಕ್ಕೆ ನನಗೆ ಸಹಾಯ ಮಾಡಬೇಕು; ಮತ್ತು ನನಗೆ ಭಕ್ತಿ ಜ್ಞಾನ ಸತ್ತ್ವ ವಿರಕ್ತಿ ಇವುಗಳನ್ನು ಕಲಿಸಬೇಕು.

ಇತ್ತೀಚಿಗೆ ಮಂತ್ರೋಚ್ಚಾರ ಮಾಡುತ್ತಿರುವಾಗ ನನ್ನ ಕಣ್ಣುಮುಂದೆ ಒಂದು ತೇಜಸ್ವಿ ನೀಲಿ ಸ್ಫುಲಿಂಗವು ಕಾಣುತ್ತದೆ. ಈ ಸಮಯದಲ್ಲಿ ನನ್ನ ಕಣ್ಣು ತೆರೆದಿರುತ್ತವೆ, ಮತ್ತು ನಾನು ನಡೆಯುತ್ತ ಮಾತಾಡುತ್ತ ಇರುತ್ತೇನೆ. ಆದರೆ ತಾವು ಕೊಟ್ಟ ಅಂತಃಸಾಕ್ಷಾತ್ಕಾರದಿಂದ ನನಗೆ ಹ್ಯಾಗೆ ಸಮಾಧಾನವಾಗಿತ್ತೋ ಹಾಗೆ ಮಾತ್ರ ಇದರಿಂದ ಆಗುವದಿಲ್ಲ. ಸದ್ಗುರುವೇ, ನನ್ನ ಮೇಲೆ ಕೃಪೆ ಮಾಡಿ ಚಿರಶಾಂತಿಯು ಸ್ವಲ್ಪವಾದರೂ ನಿತ್ಯ ನನಗೆ ಸಿಗುವಂತೆ ಮಾಡಿರಿ.

ನನ್ನ ಪತಿಗಳಿಗೆ ಹೀಗನಿಸುವದಿಲ್ಲ, ಅವರದು ಏನೂ ಸುಧಾರಿಕೆ ಆಗುವದಿಲ್ಲ. ಯಾಕಂದರೆ ಅವರಿಗೆ ಈಗ ಏನೂ ಅನುಭವ ಬರುವದಿಲ್ಲ. ಅನುಭವ ಬಂದಿಲ್ಲವೆಂದರೆ ಸುಧಾರಿಕೆ ನಿಂತು ಹೋಗಿದೆಯೆಂದು ತಿಳಿಯಲಾಗದು; ಇದು ಅವರಿಗೆ ಗೊತ್ತಿದೆ. ಆದರೂ ತನ್ನ ಸುಧಾರಿಕೆ ನಡೆದದೆಂಬುದರ ಬಗ್ಗೆ ಏನಾದರೂ ಪ್ರತೀತಿ ಅವರಿಗೆ

ಬೇಕಾಗಿದೆ. ಕೃಪೆ ಮಾಡಿ ತಾವು ಅವರಿಗೆ ದರ್ಶನ ಕೊಟ್ಟು ಪ್ರೋತ್ಸಾಹನ ಮಾಡಬೇಕು. ನನ್ನಕಿಂತ ಸಹಸ್ರಪಟ್ಟು ಶ್ರೇಷ್ಠರಾಗಿರುವ ಅವರಿಗೆ ನನ್ನಂಥಾಕ ಏನು ಹೇಳಬೇಕು.

ತಮ್ಮ ನಮ್ರ ಸೇವಿಕಾ
[ ಸಹಿ ] [illegible]

[ ಪತ್ರ ನಂ. ೨ ]

[illegible]

ಶ್ರೀ ಸದ್ಗುರು ಚರಣಗಳಲ್ಲಿ ಶಿರಸಾಷ್ಟಾಂಗ ನಮಸ್ಕಾರಗಳು.

[illegible] ನನಗೆ [illegible] ಉತ್ತರವು [illegible] ನನಗೆ [illegible] ಆ ಉತ್ತರವನ್ನು [illegible] ನನಗೆ ಒಂದು [illegible]

ತಾವು ಕೃಪೆಮಾಡಿ ನನಗೆ [illegible] ದರ್ಶನ ಕೊಟ್ಟಿರಿ. ಅಂದಿನಿಂದ ನಾನು ತಮ್ಮ ದರ್ಶನದ ಪ್ರತೀಕ್ಷೆಯನ್ನು ಮಾಡುತ್ತಿದ್ದೇನೆ. ಆದರೆ ತಾವು ಪ್ರಸನ್ನ ದರ್ಶನ ಕೊಡಲಿಲ್ಲ. ಸದ್ಗುರುವೆ, ನನ್ನಂಥಾ ಪಾಪಿಗೆ ತಾವು [illegible] ಭಕ್ತಿಯು [illegible]

ಕಳೆದ ಎರಡು ದಿನಗಳಿಂದ ಮಧ್ಯರಾತ್ರಿಗೆ ಎದ್ದು ಧ್ಯಾನಕ್ಕೆ ಕೂಡ್ರಬೇಕೆಂದು ಪ್ರಬಲ ಇಚ್ಛೆಯು ಮೂಡುತ್ತಿದೆ. ಆದರೆ ನನ್ನ ಮನಸು [illegible] ದಿಂದ ಅದು ಸಾಧ್ಯವಾಗಲಿಲ್ಲ.

ಧ್ಯಾನದಲ್ಲಿ ಕುಳಿತುಕೊಂಡಾಗ ನನ್ನ ಶರೀರದ ಸೂಕ್ಷ್ಮವಾದ ಕಂಪನವು ಅನುಭವಕ್ಕೆ ಬರುವುದು. ಇನ್ನೇನೂ ನನಗೆ ಯಾವುದೂ ಅನುಭವಗಳು ಬರುವುದಿಲ್ಲ. ನಾನು ನನ್ನನ್ನು ನಿಮ್ಮ ಚರಣದಲ್ಲಿ ಅರ್ಪಣೆ ಮಾಡುತ್ತೇನೆ. ಮತ್ತು ಅಹಂಕಾರದ ಬೇರನ್ನು ಬುಡಸಹಿತ ಕಿತ್ತೊಗೆದು ನನ್ನನ್ನು ರಕ್ಷಿಸಿ, ವಿರಕ್ತಿ ಜ್ಞಾನ ಮತ್ತು ಭಕ್ತಿ ಇವುಗಳ ದಾನವನ್ನು ನನಗೆ ಮಾಡಬೇಕು, ಎಂದು ಪ್ರಾರ್ಥಿಸುತ್ತೇನೆ. ನನಗೆ ಬೀಳುವ ಸ್ವಪ್ನಗಳು ಆಶ್ಚರ್ಯಕರವಾಗಿರುತ್ತವೆ. ಮತ್ತು ಮೇಲೆ ವರ್ಣಿಸಿದ ಸ್ವಪ್ನದ ಮೇಲಿಂದ ನನಗೆ ಆನಾಧಾನ ಮಹಿಮೆಯನ್ನು ತಮ್ಮ ಕಡೆಯಿಂದ ನನಗೆ ಅರ್ಥವಾಗಿರುವುದಿಲ್ಲವಾದ್ದರಿಂದ, ತಾವು ನನ್ನ ಮೇಲೆ ದಯೆ ಮಾಡಬೇಕು ಮತ್ತು ತಮ್ಮ ಧ್ಯಾನ ಮಾಡಲಿಕ್ಕೆ ನನಗೆ ಸಹಾಯ ಮಾಡಬೇಕು.

(ಸಹಿ) ಎ. ಸುಂದರರಾಜು

( ಪತ್ರ ನಂ ೨ )

ತಮ್ಮ ಚರಣಗಳಿಗೆ ಶಿರಸಾಷ್ಟಾಂಗ ನಮಸ್ಕಾರ.

ನನ್ನ ಮಗನು ಈಗ ನಿಮ್ಮ ಗಾನವನ್ನು ಆಲಿಸುತ್ತಾನೆ. ಸ್ವಪ್ನದಲ್ಲಿ ತನಗೆ ಶ್ರೀಕೃಷ್ಣ ಪರಮಾತ್ಮನ ದರ್ಶನವಾಯಿತು, ಮತ್ತು ಪರಮಾತ್ಮನು ತನ್ನ ಪ್ರೀತಿಯಿಂದ ಸ್ವರೂಪ ಬದಲಾಯಿಸಿದನು. ಅನಂತರ ಮೆಹೆರ ರೂಪವಾದರು. ಇಷ್ಟರಲ್ಲಿ ಬೇರೆ ಸ್ವಪ್ನವು ಶ್ರೀಕೃಷ್ಣನ ಸುದರ್ಶನ ಸಹಿತ ಬಂದಿತು. ಪರಮೇಶ್ವರ ಕೈಯಿಂದ ಬಂದಿತು. ಸ್ವಪ್ನದಲ್ಲಿ ಬೇರೆ ಕಾಣಿಸುತ್ತಾರೆಂದು ಆತನು ನಿತ್ಯ ಮುಂಜಾನೆ ಬಹಳ ಆನಂದದಿಂದ ಎಚ್ಚರವಾಗುತ್ತಾನೆ.

ತಾವು ಕಳಿಸಿದ ಪತ್ರವನ್ನು ನಾನು ಒಮ್ಮೆ ಓದಿ ಜಪಿಸಲು ಆ ರಾತ್ರಿ ನನಗೆ ಅದ್ಭುತ ಪ್ರಭೆಗಳು ಕಾಣಿಸಿದವು. ತಮ್ಮ ಕೃಪೆಯಿಂದ ಇನ್ನು ಬಹಳ ಕಾಣಿಸುವವು. ನನಗೆ ಒಂದು ಸಂದೇಹವಿದೆ. ನಾನು ಧ್ಯಾನ ಮಾಡುವಾಗ ನನಗೆ ಪ್ರಕಾಶಗಳು ಕಾಣಿಸುವದಿಲ್ಲ. ನಾನು ಯಾವಾಗ ನಿದ್ರೆಯಲ್ಲಿರುವೆನೋ ಆಗ ಮಾತ್ರ ಅವು ಕಾಣುತ್ತವೆ ಏಕೆ? ಅವು ಅದ್ಭುತಗಳೋ ಸ್ವಪ್ನಗಳೋ? ಯಾವಾಗ ನಾನು ನಿಮ್ಮ ಧ್ಯಾನ ಮಾಡುತ್ತೇನೋ ಆಗ ನನ್ನ ಹೃದಯವು ಬಹಳ ಸುಂದರ ತೋರುತ್ತದೆ. ನಾನು ನನ್ನ ನಿತ್ಯ ಕರ್ಮಗಳನ್ನು ಮಾಡುತ್ತಿರುವಾಗ ಮತ್ತು ನನ್ನ ಕಣ್ಣುಗಳು ತೆರೆದಿರುವಾಗ ಸಹ ಸ್ಪಷ್ಟ ಸೂರ್ಯಪ್ರಕಾಶದಲ್ಲಿ ನನಗೆ ಒಂದು ನೀಲಿ ವರ್ಣದ ನಕ್ಷತ್ರವು ಕಾಣಿಸುವದು.

ಮಹಾರಾಜರೇ, ತಮ್ಮ ದರ್ಶನವಾದರೆ ಎಷ್ಟು ಚೆನ್ನಾಗಿರಬೇಕು! ತಮ್ಮ ಪುಸ್ತಕವನ್ನು ನಾನು ದಿನಾಲು ಓದುತ್ತೇನೆ. ನಮ್ಮ ಮನಸ್ಸಿನಲ್ಲಿ

ಉದ್ಭವಿಸುವ ಪ್ರತಿ ಒಂದು ಕಲ್ಪನೆಯನ್ನು ನಾನೇ ನಿರೀಕ್ಷಕನ ದೃಷ್ಟಿಯಿಂದ ನಿರೀಕ್ಷಿಸಬೇಕು ಎಂದು ತಾವು ಹೇಳಿದ್ದೀರಿ ಇದರ ಅರ್ಥವೇನು? ಸ್ವಪ್ನದಲ್ಲಿ ದರ್ಶನ ಕೊಟ್ಟು ನನ್ನ ಬಹಳ ಪ್ರಶ್ನೆಗಳನ್ನು ತಾವು ಬಿಡಿಸಿದಿರಿ. ಕೃಪೆಮಾಡಿ ಈ ಪ್ರಶ್ನೆಯನ್ನೂ ಬಿಡಿಸಿರಿ.

(ಸಹಿ) ಸೌ. ಸುಂದರಾಬಾಯಿ

[ ಪತ್ರ ನಂ. ೪ ]

ಧಾರವಾಡ, ತಾ ೭ ೮ ೪೦

ಶ್ರೀ ಗಜಾನನ ಮಹಾರಾಜರ ಸೇವೆಗೆ ಪ್ರಣಿಪಾತಗಳು.

ತಮ್ಮ ಕೃಪೆಯಿಂದ ನನ್ನ ಪತಿಯು ಸುಧಾರಿಸಿಯು ಉತ್ತಮನಾಗಿ ನಡೆದು ಬರುತ್ತಿದ್ದಾರೆ, ಅವರಿಗೆ ಒಂದು ದಿವಸ ತೇಜೋಗೋಲ ಕಾಣಿಸಿತು. ಆ ಗೋಲದಲ್ಲಿ ಒಂದು ತೇಜಸ್ವಿ ನೇತ್ರವು ತೋರಿತು. ಆ ತೇಜವು ಕಣ್ಣಿನ ಕಕ್ಷೆಯಲ್ಲಿ ನಿಂತಿತ್ತು ಆ ಸಮಯದಿಂದ ಅವರಿಗೆ ಪರಮೇಶ್ವರನು ತನ್ನ ಸಾನ್ನಿಧ್ಯದಲ್ಲಿದ್ದಾನೆಂತ ಅವರಿಗೆ ಭಾಸವಾಗುತ್ತದೆ ಹಾಗೂ ಅವರಿಗೆ ಸಮಾಧಾನವಾಗುತ್ತದೆ. ಕೆಲ ಶಿಷ್ಯರೆಲ್ಲ ಅವರು 'ಕೋಡಂ' ಜಪವನ್ನು ಮಾಡುತ್ತಿರುತ್ತಾರೆ ಆ ಕಾರಣ ಆ ಜಪವು ತನ್ನಷ್ಟಕ್ಕೆ ಆಗುತ್ತದೆ. ಧ್ಯಾನ ಮಧ್ಯದಲ್ಲಾಗ ತಮ್ಮ ದರ್ಶನವಾಗಬೇಕು, ಮತ್ತು ಅವು ನಾದ ತೋರಿಸಬೇಕು ಎಂದು ಅವರ ಇಚ್ಛೆ ಇದೆ. ಧ್ಯಾನ ಸ್ಥಾನದಲ್ಲಿ ಮನಸ್ಸು ಏಕಾಗ್ರವಾಗಬೇಕು ಎಂದು ತಾವು ತಿಳಿಸಬೇಕು ಎಂದು ಅವರು ಇಚ್ಛಿಸುತ್ತಾರೆ. ಯಾವಾಗ ಅವರು ಧ್ಯಾನಕ್ಕೆ ಕೂಡುತ್ತಾರೆ, ಆಗ ಅವರ ನೆತ್ತಿಯಿಂದ ಕಾಲಿನವರೆಗೆ ಜುಮ್ಮೆನ್ನುತ್ತದೆ ಹಾಗೂ ಧ್ಯಾನ ಮಗ್ನರಾಗುತ್ತಾರೆ. ಕಾಶಿ, ರಾಮೇಶ್ವರ ವೃಂದಾವನ ಮೊದಲಾದ ತೀರ್ಥಕ್ಷೇತ್ರಗಳಿಗೆ ಹೋಗುವ ಯೋಗ ಬರುತ್ತದೆ. ಇಂಥ ಕೂಡ ಅಂಥಾ ಸ್ಥಳಗಳಿಗೆ ಹೋಗುವ ಯೋಗವು ನನಗೆ ಬರಲಿಲ್ಲವೆಂತ ವ್ಯಥೆಯಲ್ಲಿ ನನಗೆ ಕೆಟ್ಟ ಅನಿಸಿತು. ಆದರೆ ತಮ್ಮ ಕೃಪೆಯಿಂದ ತಮ್ಮ ಒಬ್ಬ ಶಿಷ್ಯನು ಧ್ಯಾನ ಮಗ್ನ ಅವಸ್ಥೆಯಲ್ಲಿ ಆ ಸ್ಥಾನಗಳಿಗೆ ಹೋಗಬಲ್ಲನು ಎಂದು ತಿಳಿದು ಬಂದು ಮನಸ್ಸಿಗೆ ಸಮಾಧಾನವಾಯಿತು.

ಸಾಧಾರಣ ಒಂದು ತಿಂಗಳ ಹಿಂದೆ ಧ್ಯಾನಮಗ್ನಳಾಗಿರುವಾಗ ತಮ್ಮ ದರ್ಶನವಾಯಿತು. ವಿದ್ಯುತ್ಪ್ರಕಾಶದಂತಿರುವ ತೇಜೋವಲಯದಲ್ಲಿ ತಮ್ಮ ಮೂರ್ತಿಯು ವಿರಾಜಿಸುತ್ತಿತ್ತು. ನಾನು ತಮ್ಮ ಚರಣಗಳಲ್ಲಿ ಲೋಟಾಂಗಣವನ್ನು ಹಾಕಿದೆ; ಮತ್ತು ವಿರಕ್ತಿ ಭಕ್ತಿ, ವ ಕೃಪಾ ಇವುಗಳ ಲಾಭ ನನಗೆ ಮಾಡಿ

ಬೇಕಾಗಿ ಪ್ರಾರ್ಥನೆಯನ್ನು ಮಾಡುವೆನು. ತಾವು ಸಮ್ಮತಿಯನ್ನು ತೋರಿಸಿದಿರಿ ಆ ವೇಳೆ ಆ ದೃಶ್ಯವು ಇಲ್ಲದಂತಾಯಿತು. ಈ ದೃಶ್ಯಗಳ ವೈಶಿಷ್ಟ್ಯವು ಇಷ್ಟೇ, ಧ್ಯಾನಮಾಡುತ್ತಿರುವಾಗ ಅವು ತೋರುವದಿಲ್ಲ; ನಿದ್ರೆಯಿಂದ ಎಚ್ಚರವಾಗುವಾಗ ನಸುಕಿನ ವೇಳೆಗೆ ಅವು ಕಾಣುವವು. ಮೇಲಿನ ದೃಶ್ಯದ ನಂತರ ನನಗೆ ಮೊದಲ ಸಂಘರ್ಷ ನಿಂತುಬಿಟ್ಟ ಪ್ರಕಾರ ತೋರಿತು. ಆದರೆ ಸುತ್ತಲೂ ಕತ್ತಲು ಇತ್ತು. ಆವರಿಸಿದ ಹಾಗೆ ತೋರುತ್ತಿರುವಾಗ ಸಹ ನನಗೆ ಘಂಟಾನಾದ, ಶಂಖನಾದ ಕೇಳ-ಬರುತ್ತವೆ. ಈ ಪ್ರಕಾರದ ದೃಶ್ಯಗಳಿಗೆ ನಾನು ವಿಶೇಷ ಮಹತ್ವ ಕೊಡುವದಿಲ್ಲ; ಯಾಕಂದರೆ, ಅವು ನಿಂತ ಮೇಲೆಯೇ ನಿಜವಾದ ಸಾಧನೆಗೆ ಪ್ರಾರಂಭವಾಗುವದು. ಎಂದು ತಾವು ಹೇಳಿದಿರಿ. ಆದರೆ ಕೆಲವು ದಿನಗಳ ಹಿಂದೆ ನನಗೊಂದು ಚಮತ್ಕಾರಿಕ ಅನುಭವವು ಬಂತು. ನನ್ನ ಶರೀರದಲ್ಲಿ ಮಿಂಚಿನ ಭ್ರಮಣ ಚಟ್ಟದಾಘಾತವು ಕಾಣಿಸಹತ್ತಿತು. ನಾನು ಬಹಳ ಆಳವಾದ ಕತ್ತಲೆಯೊಳಗೆ ಹೋಗುತ್ತೇನೇನೋ ಎಂಬಂತೆ ನನಗನಿಸಿತು. ನನಗೆ ಬಹಳ ಭಯವಾಯಿತು ಹೃದಯವು ಜೋರಿನಿಂದ ಬಡಿಯಹತ್ತಿತು. ಆಗಾದ ಕೂಡಲೆ ಆ ದೃಶ್ಯವು ಇಲ್ಲದಂತಾಗಿ ನಾನು ಎಚ್ಚರಾದೆ. ಎರಡು ಮೂರು ದಿನಗಳ ನಂತರ ಪುನಃ ಹಾಗೆಯೇ ಆಯಿತು. ಅಲ್ಲದೆ ಒಂದು ಧ್ವನಿಯು ಬಂತು 'ಮೇಲೆ ಹೋಗು.' ಕೂಡಲೆ ಪುನಃ ಮೊದಲಿನ ಸ್ವಪ್ನವಾಯಿತು. ನನಗೆ ಸ್ವಲ್ಪ ಅಂಜಿಕೆ ಆಯಿತು. ಆದರೆ ಈ ಸಮಯದಲ್ಲಿ ನನ್ನ ಎಡಗಡೆಗೆ ಮಂದ ಪ್ರಕಾಶವು ಕಾಣುತ್ತಿತ್ತು. ಆ ಪ್ರಕಾಶದಲ್ಲಿ ಧೂಪದ ಹೊಗೆ ತೇಲುವಂಥ ಒಂದು ಭವ್ಯ ಜನಾರ್ದನು ಕಾಣಿಸುತ್ತಿತ್ತು. ಅಂದಿನಿಂದ ಘಂಟಾನಾದ ವ ಶಂಖನಾದ ಎಡಗಡೆಯಿಂದಲೇ ಕೇಳಬರುತ್ತವೆ. ಇದರ ಅರ್ಥವು ನನಗೆ ತಿಳಿಯುವದಿಲ್ಲ. ಭೀತಿಯು ಹೋಗುವಂತೆ ಏನು ಮಾಡಬೇಕು ಇದನ್ನು ಕೃಪೆಯಿಂದ ಹೇಳಬೇಕು. ಯಾವ ವೇಳೆಗೆ ಅಜ್ಞಾನದ ಪರದೆಯು ಮೇಲೆ ಏಳುತ್ತದೆಯೋ, ಅದೇ ವೇಳೆಗೆ ಈ ಭೀತಿಯು ನನ್ನ ಸಾಧನೆಗೆ ಅಡ್ಡಗಾಲಾಗದು. ಆದಕಾರಣ, ತಾವು ನನ್ನ ಮನಸ್ಸನ್ನು ತಮ್ಮ ತಾಬೆಗೆ ತಗೊಳ್ಳಿರಿ. ಮತ್ತು ನನಗೆ ಸಹಾಯ ಮಾಡಿರಿ. ತಮ್ಮ ದರ್ಶನವಾಗಬೇಕು ಎಂಬುದರ ಸಲುವಾಗಿ ನಾನು ಮಧ್ಯರಾತ್ರಿಯಲ್ಲಿ ಎದ್ದು ಧ್ಯಾನಕ್ಕೆ ಕೂಡುತ್ತೇನೆ. ಆದರೆ ತಾವು ಮಾತ್ರ ದರ್ಶನ ಕೊಡುವದಿಲ್ಲ. ನಾನೇನು ಮಾಡಲಿ?

(ಸಹಿ) ಸೌ. ಸುಂದರಾಬಾಯಿ

[ ಪತ್ರ ೫೯೬ ]

ಧಾರವಾಡ, ೨-೧೧-೪೨

ಶ್ರೀ ಸದ್ಗುರುಗಳ ಸೇವೆಗೆ ಸಾಷ್ಟಾಂಗ ಪ್ರಣಿಪಾತಗಳು.

ನನ್ನ ಪತಿಗಳ ಸಾಧನೆ ಚಲೋರೀತಿಯಿಂದ ನಡೆದದೆ. ತಮ್ಮ ಕೃಪೆಯ ಸಲುವಾಗಿ ನಾವು ಎಷ್ಟೋ ತಮ್ಮ ಉಪಕಾರ ಸ್ಮರಿಸತಕ್ಕದ್ದು. ನನ್ನ

ಪತಿಗಳು ಯಾವಾಗ್ಗೆ ಧ್ಯಾನಕ್ಕೆ ಕೂಡ್ರುವರೊ ಆ ವೇಳೆಗೆ ಅವರ ಶರೀರದಲ್ಲಿ ಆನಂದ ಲಹರಿಗಳು ಏಳುತ್ತವೆ. ಪರಮೇಶ್ವರನ ಮೇಲೆ ಅವರ ಪೂರ್ಣ ಶ್ರದ್ಧೆಯು ಕೂತಿದ್ದು ಅವರ ಮನಸ್ಸು ಶಾಂತವಾಗಿದೆ. ತಾವು ಅವರ ಮೇಲೆ ತಮ್ಮ ಕೃಪೆಯ ಮಳೆಯನ್ನು ಹೀಗೆಯೇ ಸುರಿಸಬೇಕು; ಹೀಗೆ ತಮ್ಮ ಚರಣಗಳಲ್ಲಿ ನನ್ನ ಪ್ರಾರ್ಥನೆಯದೆ.

ನನ್ನ ವಿಷಯದಲ್ಲಿ ಕೇಳುವದಾದರೆ ನನ್ನ ಪ್ರಗತಿ ಆಗಿದೆಯೊ ಇಲ್ಲವೋ ಎಂಬುದು ನನಗೆ ತಿಳಿಯದು. ಆದರೆ ನನ್ನ ಮನಸ್ಸಿಗೆ ಅಧಿಕ ಶಾಂತತೆಯ ಲಾಭ ಮಾತ್ರ ಆಗುವದಿಲ್ಲ. ತಮ್ಮ ಧ್ಯಾನವನ್ನು ಮಾಡುತ್ತಾ ನಾನು ನಿದ್ರೆಹೋಗುತ್ತೇನೆ ಮತ್ತು ಸಾಧಾರಣ ರಾತ್ರಿ ಮೂರರ ಸುಮಾರಿಕ್ಕೆ ಒಮ್ಮಿಂದೊಮ್ಮೆ ಕಿವಿಗಳ ಬಳಿ ಹೊಡೆದಂತೆ ಆಗಿ ನನಗೆ ಅಂಜಿಕೆಯಾಗುತ್ತದೆ. ಕೂಡಲೆ ಆ ಭಾಸವು ನಿಲ್ಲುವದು. ಒಂದು ದಿನ ನಾನು ತಮ್ಮ ಸಹಾಯ ತಕ್ಕೊಳ್ಳುವ ಪ್ರಯತ್ನವನ್ನು ಮಾಡಿದೆ, ಮತ್ತು ಭೀತಿಯಾಗುತ್ತಿರುವಾಗ ಧ್ಯಾನವನ್ನು ಚಾಲೂ ಇಟ್ಟೆನು ಆ ಕಾಲಕ್ಕೆ ಒಳಗಿನಿಂದ ಅಥವಾ ಅಂಥಾ ಬಾಲವಿದ್ದಂಥಾ ಒಂದು ತೇಜೋಗೋಲವು ಕಾಣಿಸಿತು. ಅತ್ಯಂತ ಶುಭ್ರ ನೀಲಪ್ರಕಾಶವು ಅದರೊಳಗಿಂದ ಹೊರ ಬೀಳುತ್ತಿತ್ತು. ಆದರೆ ಕೂಡಲೆ ಆ ದೃಶ್ಯವು ನಿಂತಿತು. ಅದು ಒಂಟಿ ಇತ್ತೋ ಕುಂಡಲಿನಿ ಇತ್ತೊ ಅದು ಮಾತ್ರ ನನಗೆ ತಿಳಿಯಲಿಲ್ಲ. ಅದು ಏನಾದರೂ ಇರಲಿ, ಅದನ್ನು ತಿಳಿಯುವದು ನನಗೇನೂ ಜರೂರಿ ಇಲ್ಲ. ಮಾತ್ರ ಧ್ಯಾನಕ್ಕೆ ಕೂತಿದ್ದಾಗ ತಾವು ಪ್ರಕಟವಾಗಿ ಮಾರ್ಗದರ್ಶನವನ್ನು ಮಾಡಬೇಕು. ಘಂಟಾನಾದವು ನನಗೆ ಇಪ್ಪತ್ತನಾಲ್ಕು ತಾಸೂ ಕೇಳಿಸುತ್ತದೆ. ನನಗೆ ಈ ಘಂಟಾನಾದದ ಪ್ರಕಾಶದ ಗೊಡವೆ ಇಲ್ಲ. ಮುಂಬಯಿಯಲ್ಲಿ ಮಾತ್ರ ನಾನು ಧ್ಯಾನಕ್ಕೆ ಕೂತಿರುವಾಗ ತಾವು ಯಾವ ಆತ್ಮಶಾಂತಿಯ ಅನುಭವವನ್ನು ನನಗೆ ಕೊಟ್ಟಿರಿ ಅದು ನನಗೆ ಪುನಃ ಸಿಗಬೇಕೆಂಬ ಅಪೇಕ್ಷೆ ಇರುತ್ತದೆ. ತಮ್ಮ ವಿಷಯದಲ್ಲಿ ನನಗೆ ಇಷ್ಟು ತೀವ್ರ ಭಕ್ತಿ ಏಕಿರುವದೋ, ತಾವು ನನಗೆ ಸುಖಸಾಗರದಲ್ಲಿ ಮುಳಿಸಬೇಕೆಂದು. ಬೇಡುವದೂ ನಾನು ಬಿಡುವೆನು, ಯಾಕಂದರೆ ತಾವು ನಮ್ಮೆಲ್ಲರ ಮೇಲೆ ಪ್ರೇಮ ಮಾಡುತ್ತೀರಿ.

ನಿನ್ನೆ ರಾತ್ರಿ ನಾನು ತಮ್ಮ ಧ್ಯಾನವನ್ನು ಮಾಡುತ್ತಿರುವಾಗ ನನ್ನ ಮೊದಲಿನ ಸದ್ಗುರುಗಳು ಪ್ರಕಟರಾದರು. ಆಗ ಅವರು ಕೆಮ್ಮು ಮತ್ತು ಜ್ವರದಿಂದ ಅಸ್ವಸ್ಥರಾಗಿರಬೇಕೆಂತ ತೋರಿತು. ತಾವು ಮತ್ತು ಅವರು ಒಬ್ಬರೇ ಎಂದು ತೋರಿಸುವ ಹೇತು ಇತ್ತೆಂದು ತಿಳಿಯದು. ಆದರೆ ಅವರ ಸಾನ್ನಿಧ್ಯವು ನನಗೆ ಒಳ್ಳೇ ಭಾಸವಾಯಿತು. ಆತ್ಯಂತಿಕ ಭಕ್ತಿ ಮಾಡಬೇಕು ಮತ್ತು ಅದರಲ್ಲಿ ತನ್ನನ್ನು ತಾನೇ ಮರೆಯಬೇಕು ಎಂಬಂತೆ ತೋರುವದು. ಆದರೆ ನನ್ನೊಳಗಿನ

ಅಹಂಕಾರವು ಇಲ್ಲದಂತಾಗಲಿಕ್ಕೆ; ಮತ್ತು ಪರಮಭಕ್ತಿಯಿಂದಲೆ ಅದರ ಹೊಡೆತ ದಿಂದ ನಾನು ತಪ್ಪಿಸಿಕೊಂಡೇನು. ನನಗೆ ಧ್ಯಾನವು ಬೇಕಾಗಿಲ್ಲ. ಪರಮೋಕ್ಷದ ವ ನನ್ನ ಸದ್ಗುರು ಇವರ ವಿಷಯದಲ್ಲಿ ಅನಿಸುತ್ತಿರುವ ಪವಿತ್ರವಾದ ಪ್ರೇಮವು ನನ್ನಲ್ಲಿ ಇರತಕ್ಕದ್ದು. ಕೃಪೆಮಾಡಿ ನನ್ನ ಧ್ಯಾನಮಗ್ನ ಸ್ಥಿತಿಯಲ್ಲಿ ನನಗೆ ದರ್ಶನ ಕೊಡಿರಿ, ಮತ್ತು ನನಗೆ ಸಹಾಯ ಮಾಡಿರಿ.

(ಸಹಿ) ಸೌ. ಸುಂದರಾಬಾಯಿ

— ೪೬ —

ರಾ. ಶಿವಶಂಕರ ದಾಮೋದರ ಪಾರಾಶೆ. ಮುಕ್ಕಾಮು ಮುಂಬಯಿ ಇವರ ಅನುಭವಗಳು — (ಅವರ ತಾರೀಖು ೨೨-೫-೪೩ ರ ಪತ್ರದ ಮೇಲಿಂದ,

ಗಿರಗಾಂವ ಮುಂಬಯಿ. ತಾ ೨೨ ೫ ೪೩

ತಮ್ಮ ಕೃಪಾದೃಷ್ಟಿಯಾಗಿ ಹಾಗೂ ದಿವಸ ಅನುಗ್ರಹ ಕೊಟ್ಟಿದ್ದಿರಿ. ಅಂದಿ ನಿಂದ ಎಂಟು ದಿವಸ ಪ್ರಕೃತಿ ವ ಮನಃಸ್ವಾಸ್ಥ್ಯವು ಒಳ್ಳೇ ಪ್ರಕಾರದಿತ್ತು. ಎಡಗಡೆ ಕಿವಿಯೊಳಗೆ ನಾದವು ಕೇಳಿಸುತ್ತಿತ್ತು. ಹೃದಯದಲ್ಲಿ 'ಸೋಹಂ' ಈ ಅತ್ಯಂತ ಪವಿತ್ರ ವ ಅಮೋಲಿಕ ಶಬ್ದಗಳು ಕೇಳಿಸುತ್ತಿದ್ದವು. ಆದರೆ ನನ್ನ ತಪ್ಪು ನನ್ನ ಮೇಲೆ ತಿರುಗಿತು ಹೃದಯದೊಳಗಿಂದ ನಾಭಿಕಮಲಸ್ಥಾನದ 'ಸೋಹಂ' ದ ಅಮೋಲಿಕ ಶಬ್ದದ ಉಚ್ಚಾರವಾಗುತ್ತದೆ ಎಂಬ ಭಾವನೆ ಮಾಡಿದ ಕೂಡಲೆ ಎಲ್ಲವೂ ವ್ಯರ್ಥವಾಯಿತು ನಾದವು ಪೂರ್ಣ ನಿಂತುಹೋಯಿತು ಇಲ್ಲದಿದ್ದರೆ ಇದಕ್ಕೂ ಮೊದಲು ಅದು ಎರಡೂ ಕಿವಿಗಳಿಂದ ಕೇಳಿಸುತ್ತಿತ್ತು. ನಿದ್ರೆ ಯಿಂದ ಅದು ಪುನಃ ಎಡಗಿವಿಯೊಳಗೆ ಕೇಳಿಸುವದು. ಹಾಗೂ ಎರಡೂ ಕಣ್ಣುಗಳ ಮಧ್ಯಭಾಗದಲ್ಲಿ ದೀಪದ ಜ್ಯೋತಿಯಂತೆ ವ ಅದೇ ವರ್ಣದ ಜ್ಯೋತಿ ತೋರುತ್ತದೆ ಮತ್ತು ಅದು ಮೆಲ್ಲಮೆಲ್ಲನೆ ಅರ್ಧಚಂದ್ರಾಕೃತಿಯಾಗಿ ಮತ್ತು ಒಮ್ಮೆ ಪೂರ್ಣ ವರ್ತುಳಾಕಾರ ಮತ್ತು ಸಂಜೆ ಹೊತ್ತಿನ ಸೂರ್ಯನಂತೆ ಕೆಂಪು ಆಗಿ, ಅದರೊಳಗೆ ಪೂರ್ಣ ಪ್ರೋಕ್ಷ ಇದ್ದು ಆ ಪ್ರೋಕ್ಷದ ನೀಲಿ-ಕೆಂಪು ವರ್ಣವು ಇರುವದು.

(ಸಹಿ) ಶಿವಶಂಕರ ದಾಮೋದರ ಪಾರಾಶೆ

— ೪೭ —

ರಾ. ರಾ ವಿ ಎಸ್ ವೈದ್ಯ, ಡೆಂಟಿಸ್ಟ ನಾಶಿಕ ಇವರು ತಮ್ಮ ಅನುಭವಗಳನ್ನು ಬರೆದುಕೊಟ್ಟದ್ದರ ಮೇಲಿಂದ—

ನಾನು ಪೋಸ್ಟ ಖಾತೆಯ ವೃತ್ತಿಯೋಗದ ಸೇವಾನಿವೃತ್ತನು. ಸನ್ ೧೯೩೯ ರ ಮೇ ತಿಂಗಳಲ್ಲಿ ದಂತ ವೈದ್ಯಕೀ ಮಾಡುವ ಸಲುವಾಗಿ ನಾಶಿಕಕ್ಕೆ ಬಂದೆನು. ಚಿಕ್ಕಂದಿನಿಂದ ನನಗೆ ಈಶ್ವರನ ಮೇಲೆ ಭಕ್ತಿ ಇರುತ್ತಿದ್ದು ನನ್ನ ಸ್ವಭಾವವು ಶ್ರದ್ಧಾಯುಕ್ತವಾಗಿತ್ತು. ಮಹಾತ್ಮರ ಮತ್ತು ಸಾಧು ಸಂತರ ದರ್ಶನವನ್ನು ತಕ್ಕೊಳ್ಳುವದು ನನಗೆ ಮೊದಲಿನಿಂದ ಪ್ರೀತಿ ಇರುತ್ತದೆ. ನಾಶಿಕಕ್ಕೆ ಬಂದ ಮೇಲೆ ಎರಡು ಮೂರು ವರ್ಷಗಳಲ್ಲಿ ಹೀಗೆ ನನ್ನ ಕಿವಿಗೆ ಬಿತ್ತಲ್ಲ, ಇಲ್ಲಿ ಚಿತ್ರಘಂಟಿಗಲ್ಲಿಯೊಳಗೆ ಗಜಾನನ ಮಹಾರಾಜರೆಂತ ಯಾರೋ ಸತ್ಪುರುಷರಿದ್ದಾರೆ. ಬಹಳ ಮಂದಿ ಅವರ ದರ್ಶನಕ್ಕೆ ಹೋಗುತ್ತಾರೆ. ಸಹಜೀಕವಾಗಿ ಅವರ ದರ್ಶನವಾಗಬೇಕೆಂತ ನನಗನಿಸಿತು. ಮತ್ತು ಒಂದು ದಿನ ಒಬ್ಬ ಮಿತ್ರನಕೂಡ ನಾನು ಅವರ ಕಡೆಗೆ ಹೋದೆನು. ಅವರ ದರ್ಶನಯುಕ್ತಿ ಮೇಲಿಂದ ಮತ್ತು ವಿನೋದಿ ಸ್ವಭಾವದ ಮೇಲಿಂದ ಅವರು ಸತ್ಪುರುಷರು ಅಲ್ಲ, ಒಬ್ಬ ಸಾಮಾನ್ಯ ಗೃಹಸ್ಥರಿರ ಬೇಕೆಂದ ನನಗನಿಸಿತು. ಆದರೂ ಪ್ರಸಂಗ ಬಂದಾಗ ನಾನು ಅವರ ಕಡೆಗೆ ಹೋಗುತ್ತಿದ್ದೆನು. ಮತ್ತು ಈ ಪ್ರಕಾರ ಅವರ ಮತ್ತು ನನ್ನ ಪರಿಚಯ ವಾಯಿತು. ಒಂದು ದಿನ ಅವರ ಹಲ್ಲು ನೋಯಿಸಹತ್ತಿತು. ರಾ. ಸಾಹೇಬ ... ಗುಪ್ತೆ ಇವರ ಕೂಡ ಅವರು ಟಾಂಗಾದ ಮೇಲೆ ನನ್ನ ದವಾಖಾನೆಗೆ ಬಂದಿದ್ದರು. ನಂತರ ಪುನಃ ಮತ್ತೊಂದು ಹಲ್ಲು ನೋವಾಗಲಿಕ್ಕೆ ಹತ್ತಿತು. ಪ್ರಕೃತಿ ಅಶಕ್ತವಾದದರಿಂದ ಆ ಸಮಯ ದವಾಖಾನೆಗೆ ಬರಲಿಕ್ಕೆ ಆಗಲಿಲ್ಲ. ಅವರ ಇಚ್ಛೆಯಂತ ಕರೆದ ಮೇಲಿಂದ ನಾನೇ ಅವರ ಮನೆಗೆ ಹೋದೆ. ಈ ಪ್ರಕಾರ ಎರಡನ್ನೇ ಜರೂರಿ ಎನಿಸುತ್ತಿತ್ತು ಆಗಾಗ್ಗೆ ನಾನೇ ಅವರ ಕಡೆಗೆ ಹೋಗುತ್ತಿದ್ದೆ. ಈ ರೀತಿಯಿಂದ ಆರು ವರ್ಷಗಳು ಹೋದವು. ಆದರೆ ಪೂರ್ವಜನ್ಮದ ಪುಣ್ಯದಿಂದ ನನ್ನ ಮೇಲೆ ಅವರ ಕೃಪಾಪ್ರಸಾದವಾಗುವ ಕಾಲವು ಸಮೀಪ ಸಮೀಪ ಬರುತ್ತಿತ್ತು. ಒಂದು ದಿನ ಬೆಳಿಗ್ಗೆ ನಾನು ಅವರ ಕಡೆಗೆ ಹೋದಾಗ "Light on the Path of Self Realisation" ಈ ಪುಸ್ತಕವನ್ನು ಅವರು ನನಗೆ ಓದಲಿಕ್ಕೆ ಕೊಟ್ಟರು. ಅಲ್ಲಿಯೆ ಆ ಪುಸ್ತಕವನ್ನು ತರೆದು ಅವರ ಕೆಲವು ಶಿಷ್ಯರ ಅನುಭವಗಳು ಮತ್ತು ಮಹಾರಾಜರ ಕೈಯಿಂದ ಸಂಭವಿಸಿದ ಕೆಲವು ಚಮತ್ಕಾರಗಳನ್ನು ನಾನು ಓದಿದೆ. ಕೂಡಲೆ ನನ್ನ ಪೂರ್ವದ ಭಕ್ತಿ ಸ್ವಭಾವವು ಬದಲಾಯಿಸಿತು, ಮತ್ತು ಶ್ರೀ ಗಜಾನನ ಮಹಾರಾಜರು ನಿಜವಾಗಿ ಒಬ್ಬ ಸಾಮರ್ಥ್ಯವಾನ ಸತ್ಪುರುಷರಿರಬೇಕೆಂತ ನನ್ನ ಕಲ್ಪನೆಯಾಯಿತು. ಅನಂತರ ಅವರಿಂದ ಅನುಗ್ರಹವನ್ನು ಪಡಕೊಂಡು ಆತ್ಮಾನಂದದ ಅನುಭವವನ್ನು ಉಪಭೋಗಿಸಬೇಕೆಂದು ನನಗೆ ಅನಿಸಲಾಯಿತು. ಹಾಗೆಯೇ ನಾನು ಆ ಇಚ್ಛೆಯನ್ನು ಅವರಿಗೆ ಪ್ರದರ್ಶಿತ ಮಾಡಿದೆನು. ಆಗ ಅವರು ನನಗೆ ಕೇಳಿದರು, "ಅನುಗ್ರಹ ತಕ್ಕೊಳ್ಳುವದು ನಿನ್ನದು ಪೂರ್ಣ ನಿಶ್ಚಯವಿದೆ ಏನು?" ನಾನು 'ಹೌದು' ಎಂದು ಉತ್ತರ ಕೊಟ್ಟದ್ದಕ್ಕೆ, "ನೋಡೋಣ ಮುಂದೆ ಏನಾಗುವದೋ" ಎಂದ

ಆವರಂವರು ಹೀಗೆ ಒಂದು ವಾರ ಕಳೆಯಿತು. ನಾನು ನೇಮದಿಂದ ಹೋಗುತ್ತಾ ಇದ್ದೆ. ಪುನಃ ಒಮ್ಮೆ ನಾನು ಅವರಿಗೆ ಅನುಗ್ರಹದ ವಿನಂತಿಯನ್ನು ಮಾಡಿದೆ. ಅವರು ಕೂಡಲೆ ನನಗೆ ಗುರುವಾರ ದಿವಸ ಬರಲಿಕ್ಕೆ ಹೇಳಿದರು. ನಂತರ ಅವರು ನನಗೆ ಮುಂಜಾನೆ ಸಂಜೆಗೆ ಐದೈದು ಮಿನಿಟು 'ಸೋಹಂ' ಮಂತ್ರದ ಜಪ ಮಾಡಲಿಕ್ಕೆ ಹೇಳಿದರು. ಆ ಪ್ರಕಾರ ನಾನು ಜಪ ಮಾಡಲಾರಂಭಿಸಿದೆ. ಪುನಃ ಒಮ್ಮೆ ಅನುಗ್ರಹಕ್ಕಾಗಿ ನಾನು ಅವರಿಗೆ ವಿನಂತಿ ಮಾಡಿದಾಗ ಅವರು ಮುಂದಿನ ಗುರುವಾರ ಹೂವು, ಊದಿನಕಡ್ಡಿಗಳು ತಕ್ಕೊಂಡು ಬರಲಿಕ್ಕೆ ಹೇಳಿದರು. ಆ ಪ್ರಕಾರ ನಾನು ಸ್ನಾನ ಮಗ್ಗರಿ ತೀರಿಸಿಕೊಂಡು ಬಂದೆನು. ಅದು ೧೯೪೦ ನೇ ಸನ್ನಿನ ಗೋಕುಲಾಷ್ಟಮಿಯ ದಿವಸವಾಗಿತ್ತು. ಆ ದಿನ ಆ ಸದ್ಗುರುಗಳು ನನಗೆ ಅನುಗ್ರಹ ಕೊಟ್ಟು ಅವರ ಕೃಪೆಯ ಛಾಯೆಯನ್ನು ನನ್ನ ಮೇಲೆ ಇರಿಸಿದರು. ನಂತರ ಇನ್ನು ಮೂರು ನಾಲ್ಕು ದಿನ ಅವರು ನನಗೆ ಬರಲಿಕ್ಕೆ ಹೇಳಿದರು. ಪ್ರತಿ ದಿನ ತಮ್ಮ ಎದುರಿಗೆ ಕೂಡ್ರಿಸಿಕೊಂಡು ದೃಷ್ಟಿಯನ್ನು ಭ್ರೂಮಧ್ಯದ ಮೇಲೆ ಹಚ್ಚಲಿಕ್ಕೆ ಹೇಳಿ, ಅವರು ನನಗೆ 'ಸೋಹಂ' ಜಪವನ್ನು ಮಾಡಲಿಕ್ಕೆ ಹೇಳುತ್ತಿದ್ದರು. ಧ್ಯಾನ ಹಚ್ಚುವ ರೀತಿ ಇದೇ ಎಂದು ಅನಂತರ "ನಿತ್ಯ ಮುಂಜಾನೆ ಸಂಜೆಗೆ ಈ ಪ್ರಕಾರ ಜಪ ಮಾಡುತ್ತಾ ಇರು ಮತ್ತು ದಿನಾಲು ಇಲ್ಲಿ ಬರುವ ಜರೂರಿ ಇಲ್ಲ." ಎಂದು ಹೇಳಿದರು. ಅವರು ಹೇಳಿದ ಪ್ರಕಾರ ಉತ್ಸಾಹದಿಂದ ಜಪವನ್ನು ಮಾಡಲಾರಂಭಿಸಿದೆನು. ಮೂರು ನಾಲ್ಕು ತಿಂಗಳಲ್ಲಿ, ನಾನು ಜಪ ಮಾಡುತ್ತಿರುವಾಗ ನಾನಾ ವರ್ಣಗಳ ವರ್ತುಲಗಳು ನನಗೆ ಕಾಣಿಸುತ್ತಿದ್ದವು ಮೊದಲು ಒಂದು ಸತೇಜವಾಗಿ ಕೆಂಪುಬಣ್ಣದ್ದು ಘಟ್ಟಿಯಾಗಿದ್ದನ್ನು ವರ್ತುಲ ಕಾಣಿಸಿತು. ಅನಂತರ ಅದರ ಬಣ್ಣ ಕರಿ ಕೆಂಪು ಆಯಿತು. ನಂತರ ಅದರೊಳಗಿಂದ ಹಳದಿ ವರ್ಣದ ವರ್ತುಲಗಳು ಹೊರಟು ಇಲ್ಲದಂತಾಗುವವು. ಮೂಲರಂಗದ ವರ್ತುಲವು ಕಪ್ಪಾಗುತ್ತ ಹೋಗಿ, ಅದರ ಸುತ್ತಲೂ ಹಸಿರು ಬಣ್ಣದ ನಕ್ಷೆ ಕಾಣುತ್ತಿತ್ತು, ನಡುವಿನ ಬಣ್ಣವು ಅಚ್ಚ ನೀಲವರ್ಣದ್ದಾಗುವದು ಮತ್ತು ಅದು ಮಧ್ಯದಲ್ಲಿ ಹಸಿರು ಎಲೆಗಳು ಕಾಣುತ್ತಿದ್ದವು ಕಟ್ಟಕಡೆಗೆ ನಾನಾತರದ ಬಣ್ಣಗಳು ಸುತ್ತಲೂ ಹಾರಾಡುತ್ತಿದ್ದವು ಆ ಮೇಲೆ ಆ ನೋಟವು ಇಲ್ಲದಂತಾಗುವದು. ಈ ಪ್ರಕಾರದ ಅನುಭವಗಳು ಬಂದದ್ದರಿಂದ ನನಗೆ ಬಹಳ ಆನಂದವಾಗುತ್ತಿತ್ತು; ಮತ್ತು ನಾನು ಮನಸ್ಸಿಗೆ ಬಂದಾಗೆಲ್ಲಾ ಜಪಕ್ಕೆ ಕೂಡ್ರಲಿಕ್ಕೆ ಹತ್ತಿದೆ. ಒಂದು ದಿನ ನನಗೆ ಮುಂದಿನಂತೆ ಅನುಭವವು ಬಂತು

ಮಧ್ಯಾಹ್ನ ಹೊತ್ತಿಗೆ ನಾನು ಶಾಲು ಹೊದ್ದುಕೊಂಡು ಮಲಗಿದ್ದೆ. ಮನಸ್ಸಿನೊಳಗೆಯೆ ಜಪವು ನಡೆಯುತ್ತಿತ್ತು. ಅದರೂ ದೃಷ್ಟಿಯು ಅರ್ಧೋನ್ಮೀಲಿತವಿತ್ತು. ಹೀಗಿರುವಾಗ ನನಗೆ ಕಣ್ಣೆದುರಿಗೆ ನೀಲ ವರ್ಣವು ಕಾಣಿಸಿತು. ಕೂಡಲೆ ನನಗೆ ಸುದರ್ಶನ ಚಕ್ರದ ನೆನಪಾಯಿತು. ಮತ್ತು ಆಶ್ಚರ್ಯದ ಸಂಗತಿ ಹೀಗಾ

ಗಿತ್ತಲ್ಲ, ಆ ನೀಲವರ್ಣದೊಳಗೆ ನನಗೆ ಸುದರ್ಶನ ಚಕ್ರವು ತೋರಿತು. ಜೋಡಿ ಚಕ್ರಗಳ ಗಾಲಿಯಂತೆ ಇದ್ದು ಅದರಲ್ಲಿ ಇಂದ್ರ ಧನುಸ್ಸಿನಂತೆ ಬಹಳ ವರ್ಣಗಳಿದ್ದವು. ಅದು ಗರಗರ ತಿರುಗುತ್ತಿತ್ತು. ಎಂಟು ಹತ್ತು ಸೆಕೆಂಡುಗಳ ನಂತರ ಆ ಚಕ್ರವು ಸ್ಪಷ್ಟವಾಗುತ್ತ ನಡೆಯಿತು. ಮತ್ತು ಆ ಸ್ಥಳದಲ್ಲಿ ಹಣೆಯ ಮೇಲೆ ಗಂಧದ ನಾಮವಿರುವ ಒಬ್ಬ ಗಡುತರ ಹುಡುಗನ ರೂಪವು ತೋರಿತು. ನಾಲ್ಕು ಐದು ಸೆಕೆಂಡುಗಳ ನಂತರ ಆ ರೂಪವು ಅದೃಶ್ಯವಾಗಿ ಪುನಃ ಚಕ್ರ ಕಾಣಿಸಿತು. ಸ್ವಲ್ಪ ಹೊತ್ತಿನಲ್ಲಿ ಆ ಚಕ್ರವು ಬಾಣದಂತೆ ಓಡಿ ನೋಟವೆಲ್ಲಾ ಅದೃಶ್ಯವಾಯಿತು.

ದಿನಹೋದಂತೆ ನಾನಾವಿಧ ಸಂಗತಿಗಳು ಕಾಣಬಂದವು. ಆಕಾಶ, ಬಿಳೀ ಮೋಡ, ನಕ್ಷತ್ರ. ನೀಲಿ ಬಿಳಿ ಚುಕ್ಕಿಗಳು, ಸುದರ್ಶನ ಚಕ್ರ. ಒಂದೇ ಚಕ್ರದಲ್ಲಿ ಕೂತ್ತಿರುವಾಗ ತಲೆಯಲ್ಲಿ ರಕ್ತಗಳು ಹಗ್ಗಿರೆ ...... ಸದ್ಗುರುಗಳ ಕೃಪೆಯಿಂದ ಈ ಪ್ರಕಾರದ ಅನುಭವಗಳು ಯಾವಾಗ ನನಗ ಬರುತ್ತಿದವು ಆಗ ಮನೆಯೊಳಗಿನ ದೇವರ ಕೋಣೆಯ ಎದುರಿಗೆ ಕೂತು ನಿತ್ಯ ನಾಲ್ಕು ಸಾವಿರ ಜಪವನ್ನು ಮಾಡುವ ನೇಮ ಹಿಡಿದೆನು. ಈ ಪ್ರಕಾರ ಒಂದು ಒಂದೂವರೆ ತಿಂಗಳು ಆಗಿಹೋಯಿತು ನಂತರ ಒಂದು ದಿನ ನಸುಕಿನ ವೇಳೆಗೆ ನಾನು ಜಪ ಮಾಡುತ್ತಾ ಕುಳಿತಿರುವಾಗ ಶ್ರೀಗಜಾನನ ಮಹಾರಾಜರು " ಸಮೆಯುಳ ಧ್ಯಾನ " ಎಂದು ನನ್ನ ಬಲಕಿವಿಯಲ್ಲಿ ಹೇಳುವವರನ್ನು ನಾನು ಸ್ಪಷ್ಟವಾಗಿ ಕೇಳಿದೆನು.

ಮರುದಿನ ರಾತ್ರಿ ನಾನು ಧ್ಯಾನಮಾಡುತ್ತಿರುವಾಗ ಒಬ್ಬ ಉದ್ದ ತೆಳ್ಳನ ಮನುಷ್ಯನು ನನ್ನ ಎದುರಿಗೆ ಬಂದು ನಿಂತನು ಗುಲಾಬಿ ಹೂವಿನಂತೆ ಅವನ ಅಂಗಕಾಂತಿ ಇದ್ದು, ಅವನ ಮುಖವು ಒಬ್ಬ ತಪಸ್ವಿಯಂತೆ ತೋರುತ್ತಿತ್ತು ಈ ಪುರುಷನು ನನಗೆ ಹೀಗೆ ಹೇಳಿದನು. " ಇನ್ನೂ ಎರಡು ತಿಂಗಳಲ್ಲಿ ನಿನಗೆ ಅಧಿಕ ಅನುಭವಗಳು ಬರುವವು " ನಾನು ಮರುದಿನ ಶ್ರೀಗಜಾನನ ಮಹಾರಾಜರ ಕಡೆಗೆ ಹೋಗಿ ಅವರಿಗೆ ನನ್ನ ಅನುಭವಗಳನ್ನು ಹೇಳಿದೆ. ನೋಡಿದ ಪುರುಷನ ವರ್ಣನೆಯನ್ನು ಕೇಳಿದ ಮೇಲೆ ಅವರಂದರು. " ನಿನಗೆ ಶ್ರೀ ನಾರಾಯಣಸರಸ್ವತಿಯವರದೇ ದರ್ಶನವಾಯಿತು " ಒಂದು ದಿನ ರಾತ್ರಿ ೧೧-೧೨ ರ ಸುಮಾರಕ್ಕೆ ಶ್ರೀನಾರಾಯಣಸರಸ್ವತಿ ಮಹಾರಾಜರು ನನ್ನ ಸಮೀಪಕ್ಕೆ ಬಂದು, ನನ್ನ ಕಣ್ಣುಗಳ ಕಡೆಗೆ ನಿರೀಕ್ಷಿಸಿ ನೋಡುತ್ತಾರೆಂಬಂತೆ ತೋರಿತು. ಅನಂತರ ಎರಡು ತಿಂಗಳಲ್ಲಿ ಶ್ರೀನಾರಾಯಣಸರಸ್ವತಿಯವರು ದರ್ಶನಕೊಟ್ಟು ಹೋದಂತೆ ಒಂದು ರಾತ್ರಿ ನನಗೆ ಪೂರ್ಣ ಚಂದ್ರನ ದರ್ಶನವಾಯಿತು. ನಾನು ಆ ಚಂದ್ರನ ಕಡೆ ನಿರೀಕ್ಷಿಸಿ ನೋಡುತ್ತಿದ್ದೆ; ಆಗ ಗುರುಕೃಪೆಯ ಮೂಲಕ ಕಾಣಬಂದ ಆತ್ಮಪ್ರಕಾಶವಾಗಿನದೇ ಆ ಚಂದ್ರನೆಂದು ತಿಳಿಯಿತು. ನಡನಡುವೆ ಕತ್ತಲೆ ಕವಿಯುತ್ತಲಿದ್ದರೂ ನನಗೆ ಪ್ರಕಾಶವು ಕಾಣುತ್ತಿತ್ತು ಒಮ್ಮೆ ಮುಂಜಾನೆಯ

ಸ್ವಚ್ಛ ಸೂರ್ಯ ಪ್ರಕಾಶವು ಕೋಣೆತುಂಬ ಬಿದ್ದಿದೆ. ನನಗೆ ಕಾಣಿಸಿತು. ಒಂದು ರಾತ್ರಿಯಲ್ಲಿ ನನಗೊಂದು ಚಮತ್ಕಾರಿಕ ಅನುಭವವು ಬಂತು. ಅದು ಹೀಗಿತ್ತು:—

ಎಡಗಡೆಗೆ ಹೊಂದಿಸಿ ಮಾಡಿ ನನ್ನ ಮನೆಗೆ ತಂದಿದ್ದ ಗಜಾನನ ಮೂರ್ತಿಯು ನನಗೆ ಕಾಣಿಸಿತು. ನಾನು ಅದಕ್ಕೆ ನಮಸ್ಕರಿಸಿದೆನು. ಮತ್ತು ನನ್ನ ಆಧ್ಯಾತ್ಮಿಕ ಪ್ರಗತಿ ಸಂಬಂಧ ವಿಚಾರ ಮಾಡುತ್ತಿದ್ದೆನು. ಅಷ್ಟರಲ್ಲಿ ಶ್ರೀಗಣಪತಿಯವರು ಎದ್ದು ನಿಂತು ಬಲಗೈ ಎತ್ತಿ ನನಗೆ ಆಶೀರ್ವಾದ ಕೊಟ್ಟರು.

ಇತ್ತಿತ್ತಲಾಗಿ ಮೇಲಿಂದ ಹೇಳಿದ ಪ್ರಕಾರ ನನಗೆ ಆಕಾಶ ವರ್ಣದ ವರ್ತುಲಗಳು ತೋರುತ್ತವೆ. ಹಾಗೂ ತೆರೆದ ಕಣ್ಣುಗಳಿಗೆ ಸ್ವಪ್ನದಂಥ ರೂಪಗಳು ನಡನಡುವೆ ತೋರುತ್ತವೆ. ಒಮ್ಮೆ ನನಗೊಂದು ಕಣ್ಣು ಕಾಣಿಸಿತು. ಅದರೊಳಗಿಂದ ಕಿರಣಗಳು ಹೊರಬೀಳುತ್ತಿದ್ದವು. ಈ ಸ್ಥಳದಲ್ಲಿ ನನ್ನ ಅನುಭವಗಳನ್ನು ನಾನು ಸ್ವಲ್ಪದರಲ್ಲಿ ಕೊಟ್ಟಿರುತ್ತೇನೆ

(ಸಹಿ) ವಿ. ಎಮ್. ...

- ೪೧ -

ರಾ. ಬಾ. ವಾ. ವೈದ್ಯ ನಾಶಿಕ, ಇವರ ಅನುಭವಗಳು.

ಶ್ರೀಗಜಾನನ ಮಹಾರಾಜರು ಇವರು ನನಗೆ ಅನುಗ್ರಹ ಕೊಡುವ ಮೊದಲು ನಾನು ಅತಿಶಯ ನಾಸ್ತಿಕನಿದ್ದೆ. ಮತ್ತು ಆತ್ಮ ಸಾಕ್ಷಾತ್ಕಾರದ ತಿರಸ್ಕಾರ ಮಾಡುತ್ತಿದ್ದೆನು. ಆಗ ದೇವರ ಸಾಧು ಎಂಬರ ನಿಂದೆ ಮಾಡುವುದು ಇದೇ ನನ್ನ ಮನರಂಜನೆಯ ಸಾಧನವಾಗಿತ್ತು.

೧೯೩೮ ನೇ ಸಾಲಿನಲ್ಲಿ ನಾನು ಶ್ರೀಗಜಾನನ ಮಹಾರಾಜ ಇವರ ಕಡೆ ಹೋಗಿದ್ದೆನು. ಆಗ ನನ್ನ ತಂದೆಯು ಸತ್ತು ಹತ್ತು ಹನ್ನೆರಡು ವರುಷಗಳಾಗಿರಬೇಕು. ಆಗ ನಾನು ಅವರಿಗೆ ನನಗೆ ಉಪದೇಶ ಮಾಡಲಿಕ್ಕೆ ವಿನಂತಿ ಮಾಡಿದೆನು. ಆವರ "ಮನೆಯೊಳಗಿನ ಜನಾಜಾನಾರ ಮನಸ್ಸಿನ ಅನುಮತಿಯನ್ನು ಪಡೆಕೊಂಡು ಬಾ" ಎಂದು ಮಹಾರಾಜರು ಆಗ ನನಗೆ ಹೇಳಿದರು.

ಇದಕ್ಕೂ ಮೊದಲಿನ ಒಂದು ವಿಲಕ್ಷಣ ಘಟನೆಯು ನನಗೆ ನೆನಪದೆ. ಆ ಕಾಲದಲ್ಲಿ ನನ್ನ ತಂದೆಯವರು ಜೀವಂತ ಇದ್ದರು. ಅದು ೧೯೩೬-೩೭ ನೇ ವರ್ಷ ಇರಬೇಕು. ಶ್ರೀ ರಾವಸಾಹೇಬ ಗುಪ್ತೆ (ಎಂ. ಸಿ.) ಇವರ ಚಿರಂಜೀವ ಶ್ರೀ ಅಣ್ಣಾಸಾಹೇಬ ಗುಪ್ತೆ ಇವರ ಕಡೆಯಿಂದ ನನ್ನ ತಂದೆಯವರು ಶ್ರೀಗಜಾನನ

ಮಹಾರಾಜರ ಸಂಬಂಧ ವಿಶೇಷ ಸಮಾಚಾರವನ್ನು ಕೇಳಿಕೊಂಡಿದ್ದರು. ಆಗ ಸಹಜೀಕವಾಗಿ ನಾನು ಶ್ರೀಗಜಾನನ ಮಹಾರಾಜರ ಕಡೆ ಹೋಗಿ ಅವರ ಅನುಗ್ರಹವನ್ನು ಪಡಿಯಬೇಕೆಂದು ನನ್ನ ತಂದೆಯವರ ಇಚ್ಛೆ ಇತ್ತು: ಎಂಬದಾಗಿ ಅವರ ನಿತ್ಯದ ಭಾಷಣದ ಮೇಲಿಂದ ನನಗೆ ತಿಳಿದು ಬಂತು.

ಯಾವ ದಿವಸ ಶ್ರೀಗಜಾನನ ಮಹಾರಾಜ ಐವರ ವೃತ್ತಾಂತವು ನನ್ನ ತಂದೆಯವರಿಗೆ ಗೊತ್ತಾಯಿತು, ಆಗ ಮಧ್ಯಾಹ್ನದ ನಾಲ್ಕುನಾಲ್ಕುವರೆ ಘಂಟೆ ಆಗಿತ್ತು. ನಂತರ ನನ್ನ ತಂದೆಯವರು ನನಗೆ ಶ್ರೀಗಜಾನನ ಮಹಾರಾಜರ ಕಡೆ ಹೋಗಲಿಕ್ಕೆ ಯಾವ ದಿವಸ ಹೇಳಿದ್ದರೊ, ಆಗ ಸಹಾ ಮಧ್ಯಾಹ್ನದ ಮೇಲೆ ನಾಲ್ಕುನಾಲ್ಕುವರೆ ಘಂಟೆ ಆಗಿತ್ತು. ಮುಂದೆ ಮಹಾರಾಜರ ಪ್ರಥಮ ಭೆಟ್ಟಿ ನಂತರ ಎರಡುಮೂರು ವರ್ಷಗಳಲ್ಲಿ, ಯಾವ ಕಾಲದಲ್ಲಿ ನಾನು ಮಹಾರಾಜರ ಕಡೆ ಹೋದೆನು, ಆಗ ಸಹಾ ಮಧ್ಯಾಹ್ನದ ಮೇಲೆ ನಾಲ್ಕುನಾಲ್ಕುವರೆ ಆಗಿತ್ತು. ಈ ಸಂಗತಿಯು ನನಗೆ ಚನ್ನಾಗಿ ನೆನಪದೆ.

ಎರಡನೇ ಸಾರಿ ನಾನು ಶ್ರೀಗಜಾನನ ಮಹಾರಾಜರ ಕಡೆ ಹೋಗಿದ್ದು ಸಹಾ ಒಂದು ವಿಲಕ್ಷಣ ಘಟನೆ ಮೂಲಕವೇ. ಆ ದಿನ ಸಂಜೆ ನಾಲ್ಕರಷ್ಟಕ್ಕೆ ನಾನು ಏನೊ ಒಂದು ಪತ್ರಿಕೆಯನ್ನು ಬರಿಯಲಿಕ್ಕೆ ಕೂತಿದ್ದಾಗ, ಒಮ್ಮಿಂದೊಮ್ಮೆ ಬ್ಯಾಟರಿಯಂತೆ ನನ್ನ ಶರೀರದಲ್ಲಿ ಶಕ್ತಿಉತ್ಪನ್ನವಾಯಿತು ಮತ್ತು ಶ್ರೀಗಜಾನನ ಮಹಾರಾಜರ ಕಡೆ ಹೋಗಬೇಕೆಂತ ಇಚ್ಛೆ ಆಯಿತು. ನಾನು ಹ್ಯಾಗೆ ಹ್ಯಾಗೆ ಆ ಶಕ್ತಿಗೆ ವಿರೋಧ ಮಾಡಬೇಕೆಂತ ಯತ್ನಿಸಿದೆ, ಹಾಗೆ ಹಾಗೆ ಮಹಾರಾಜರ ಕಡೆ ಹೋಗುವ ವಿಚಾರವೂ ಆ ಶಕ್ತಿಯೂ ವೃದ್ಧಿಯಾಗುತ್ತ ನಡೆದವು. ಕಡೆಗೆ ನನಗೆ ಶ್ರೀಗಜಾನನ ಮಹಾರಾಜರ ಕಡೆ ಹೋಗಲೇಬೇಕಾಯಿತು. ಮಹಾರಾಜರ ಕಡೆ ಹೋಗಿ ಅವರಿಗೆ ನಮಸ್ಕಾರ ಮಾಡಿದ ಕೂಡಲೆ ಮಹಾರಾಜರು ನಗುನಗುತ್ತ ನನಗೆ ಕೇಳಿದರು, "ಯಾವ ಸಂತನು ನಿನಗ ಇಲ್ಲಿಗೆ ಕರಕೊಂಡು ಬಂದನು?" ಆಗ ನಾನು ಅವರಿಗೆ ನಡೆದ ಸಂಗತಿಯನ್ನು ಹೇಳಿದೆ. ಮಹಾರಾಜರ ಸಂಬಂಧ ನನ್ನ ಮೊದಲಿನ ಅನುಭವವು ಮೇಲೆ ಹೇಳಿದ ಪ್ರಕಾರ ಇದೆ.

ಅದರ ನಂತರ ನಾನು ಆಗಾಗ್ಗೆ ಮಹಾರಾಜರ ಕಡೆಗೆ ಹೋಗುತ್ತಿದ್ದೆನು. ಆ ಸಮಯದಲ್ಲಿ ರಾಮಕೃಷ್ಣ ಪರಮಹಂಸರ ಹೆಸರು ನನಗೆ ಗೊತ್ತಿರಲಿಲ್ಲ. ಮಹಾರಾಜರ ಶಿಷ್ಯ ಸಾಯಗಾಂವಕರ (ಫೋಟೊ ಆರ್ಟಿಸ್ಟ) ಇವರ ಕಡೆಯಿಂದ ನನಗೆ ರಾಮಕೃಷ್ಣರ ಪುಸ್ತಕಗಳು ಓದಲಿಕ್ಕೆ ಸಿಕ್ಕಿದವು. ಮೊದಲಿನಿಂದಲೇ ವಿವೇಕಾನಂದರ ಮೇಲೆ ನನ್ನ ಭಕ್ತಿ ಇತ್ತು ಮತ್ತು ರಾಮಕೃಷ್ಣ ಪರಮಹಂಸರು ಇವರು ವಿವೇಕಾನಂದರ ಗುರುಗಳಿದ್ದರು ಇದು ತಿಳಿದ ಮೇಲೆ ರಾಮಕೃಷ್ಣರ ಕಡೆ ನನ್ನ

ಮನಸ್ಸು ಆಕರ್ಷಿಸಲ್ಪಟ್ಟಿತು. ಇದರ ಹೊರತಾಗಿ ಇವರಿಗೆ ' ಅವತಾರ ಪುರುಷ ' ಹೀಗೆ ಪದವಿ ಇದ್ದ ಮೂಲಕ ಮತ್ತು ಇತರ ಸಂತರಿಗೆ ಅದು ಇಲ್ಲವಾದ್ದರಿಂದ ರಾಮ-ಕೃಷ್ಣ ಪರಮಹಂಸ ಇವರು ' ಸಂತ ಸಮ್ರಾಟ' ಎಂದು ನಾನು ತಿಳಿದೆ. ಆ ಕಾರಣ ನಾನು ಅವರದೇ ಧ್ಯಾನವನ್ನು ಮಾಡುತ್ತಿದ್ದೆನು. ಈ ಸಂಗತಿಯನ್ನು ನಾನು ಗಜಾನನ ಮಹಾರಾಜರಿಗೆ ಹೇಳಲಿಲ್ಲ; ಯಾಕೆಂದರೆ ನಾನು ಗಜಾನನ ಮಹಾ-ರಾಜರು ರಾಮಕೃಷ್ಣ ಪರಮಹಂಸರಿಗಿಂತ ಕಡಿಮೆ ದರ್ಜೆಯವರೆಂತ ತಿಳಿದಿದ್ದೆ. ಶ್ರೀಗಜಾನನ ಮಹಾರಾಜರನ್ನು ಕಡಿಮೆಯವರೆಂತ ತಿಳಕೊಂಡು, ನಾನು ರಾಮ-ಕೃಷ್ಣಪರಮಹಂಸರ ಧ್ಯಾನವನ್ನು ಮಾಡುತ್ತಿದ್ದೆ. ಒಂದೆರಡು ತಿಂಗಳಲ್ಲಿ ಹೀಗೆ ಚಮತ್ಕಾರವಾಯಿತಲ್ಲ, ನನ್ನ ಧ್ಯಾನದಲ್ಲಿ ರಾಮಕೃಷ್ಣರ ರೂಪಾಂತರವಾಗಿ ಆ ಸ್ಥಳದಲ್ಲಿ ಶ್ರೀಗಜಾನನ ಮಹಾರಾಜರ ಮೂರ್ತಿಯು ಕಾಣುತ್ತಿತ್ತು. ರಾಮಕೃಷ್ಣ ಪರಮಹಂಸರು ಮತ್ತು ಶ್ರೀಗಜಾನನ ಮಹಾರಾಜರು ಇಬ್ಬರಲ್ಲಿ ಎಂಬುದು ಮೇಲೆ ನಂತೆ ಮಹಾರಾಜರು ನನಗೆ ಪ್ರತ್ಯಕ್ಷ ತೋರಿಸಿಕೊಟ್ಟರು. ಶ್ರೀಗಜಾನನ ಮಹಾರಾಜರನ್ನು ಕಡಿಮೆ ಎಂದು ತಿಳಿದದ್ದಕ್ಕೆ ನನಗೆ ನಾಚಿಕೆಯಾಯಿತು.

ಇದರ ನಂತರ ಒಂದು ದಿನ ಸಂಜೆ ಹೊತ್ತಿಗೆ ನಾನು ಅವರ ದರ್ಶನಕ್ಕೆ ಹೋಗಿರುವಾಗ್ಗೆ ನನಗೆ ಉಪದೇಶ ಕೊಡಬೇಕೆಂದು ನಾನು ವಿನಂತಿ ಮಾಡಿದೆ. ಆಗ ಅವರು ಮಾಲೆಯನ್ನು ತಕ್ಕೊಂಡು ಮರುದಿನ ಬರಲಿಕ್ಕೆ ನನಗೆ ಹೇಳಿದರು. ಮರುದಿನ ಏನೋ ಅಡಚಣಿ ದೆಸೆಯಿಂದ ಮಾಲೆಯನ್ನು ತಕ್ಕೊಳ್ಳದೆ ನಾನು ಮಹಾರಾಜರ ಕಡೆಗೆ ಹೋದೆನು. ನಾನು ಮಾಲೆ ತರಲಿಲ್ಲವೆಂಬುವನ್ನು ಅವರಿಗೆ ಹೇಳಿದ್ದಕ್ಕೆ ಅವರು ' ಮನಸ್ಸಿನ ಮಾಲೆ ಅದೆಯಲ್ಲ ನಿನ್ನ ಹತ್ತರ ? ' ಹೀಗೆಂದು ಮಹಾರಾಜರು ನನ್ನ ಮೇಲೆ ಅನುಗ್ರಹವನ್ನು ಮಾಡಿದರು.

ಅನುಗ್ರಹ [illegible] ತಿಂಗಳಲ್ಲಿ ನನಗೊಂದು ವಿಲ-ಕ್ಷಣ ಅನುಭವವು ಬಂತು.

ನಮ್ಮ ಮನೆಯಲ್ಲಿ ತಂದೆಯವರ ಕಾಲದಲಾಗಾಯಿತು, ಪ್ರದತ್ತಾವತಾರ ಪೂರ್ಣಾನಂದ ಸ್ವಾಮಿಯವರ ಪ್ರಾಸಾದಿಕ ಪಾದುಕೆಗಳವೆ ( ಪೂರ್ವಖಾನದೇಶ ದಲ್ಲಿ ನಗರ ದೇವಳದ ಹತ್ತರ ' ಸ್ವಾಮಿಚೆ ವಡಗಾಂವ ' ಎಂಬ ಹೆಸರಿನ ಒಂದು ಊರದೆ, ಅಲ್ಲಿ ಪೂರ್ಣಾನಂದ ಸ್ವಾಮಿಯವರ ಸಂಗಮರವರಿ ಪಾದುಕೆಗಳು ಅವೆ. ಆ ಸ್ಥಾನದಲ್ಲಿ ಭೂತಬಾಧೆ ವಗೈರೆ ಹೋಗುತ್ತವೆ. ಅಲ್ಲಿಯ ವ್ಯವಸ್ಥಾಪಕ-ಸ್ವಾಮಿಯವರ ಪ್ರಸಾದವೆಂದು ನನ್ನ ತಂದೆಯವರಿಗೆ ಬೆಳ್ಳಿಯ ಸಣ್ಣ ಪಾದುಕೆ-ಗಳನ್ನು ಕೊಟ್ಟಿದ್ದನು. ) ಒಮ್ಮೆ ದೇವಪೂಜೆಯನ್ನು ಮಾಡುತ್ತಿರುವಾಗ ಆ ಪಾದು-ಕೆಗಳನ್ನು ಅಭಿಷೇಕಕ್ಕೋಸ್ಕರ ತಾಟಿನಲ್ಲಿ ಇಟ್ಟು ಅದರ ಮೇಲೆ ಅಭಿಷೇಕ ...